ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವುಳ್ಳ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 2 ಕಾಸು

ಕಂಡೇಶೀಯ ದರ ಎಲ್ಲಾ ತರಹ ಚಿನ್ನ ಬೆಳ್ಳಿ ಒಡವೆಗಳಿಗೆ ಖ್ಯಾತಿಯಾದ ಅಂಗಡಿ ಎ. ಎಸ್. ಭಾಸ್ಕರ ಶೆಟ್ಟಿ ಅಂಡ್ ಸನ್ಸ್, ಸಯ್ಯಾಜಿ ರಾವ್ ರಸ್ತೆ, ಮೈಸೂರು

ಸಂಪುಟ : ೧೫] SADHVI : SATURDAY 1—6—1957 ಮೈಸೂರು : ಶನಿವಾರ ೧—೬—೧೯೫೭ : [ಸಂಚಿಕೆ ೧೪೭

ಟೀ-ಕಾಫಿ ಮೇಲೆ ಹೆಚ್ಚಿನ ಸುಂಕ ರದ್ದು; ಕವರಿಗೆ ಹೆಚ್ಚು ಬೆಲೆ

ಚೀಣದೊಡನೆ ಬ್ರಿಟನ್ನಿನ ವ್ಯಾಪಾರದ ನಿಷೇಧ ರದ್ದು

ಅಟ್ಲಾಂಟಿಕ್ ರಾಷ್ಟ್ರಕೂಟದ ನಿರ್ಧಾರದಿಂದ ವಾಪಸು

ಚೀಣದೊಡನೆ ವ್ಯಾಪಾರ ನಡೆಸಕೂಡದೆಂಬ ನಿಷೇಧವನ್ನು ಸಡಿಲಿಸಲು ಬ್ರಿಟನ್ನು ನಿರ್ಧರಿಸಿರುವುದಾಗಿ ವರದಿಯಾಗಿದೆ. ರಷ್ಯಾ ಮತ್ತು ಇತರ ಐರೋಪ್ಯ ರಾಷ್ಟ್ರಗಳೊಡನೆ ಇಟ್ಟುಕೊಂಡಿರುವ ವ್ಯಾಪಾರದಂತೆಯೇ ಚೀಣದೊಡನೆಯೂ ಬ್ರಿಟನ್ನು ವ್ಯಾಪಾರ ನಡೆಸಲಿದೆ. ಈ ನಿರ್ಧಾರದ ಬಗ್ಗೆ ಅಮೆರಿಕಕ್ಕೆ ತೀವ್ರ ನಿರಾಶೆಯಾಗಿದೆ. ಇದುವರೆಗೆ ನಡೆಸಲಾಗುತ್ತಿದ್ದ ವ್ಯಾಪಾರಕ್ಕೆ ದ್ವಿಗುಣವಾಗಿ, ಅಂದರೆ ೧ ಕೋಟಿ ಪೌಂಡಿನಷ್ಟು ವ್ಯಾಪಾರವು ಚೀಣದೊಡನೆ ಬ್ರಿಟನ್ನು ನಡೆಸುವುದೆಂದು ಅಂದಾಜು ಮಾಡಲಾಗಿದೆ. ಕೊರಿಯಾ ಯುದ್ಧ ನಡೆದಾಗಿನಿಂದ ಮಿಲಿಟರಿ ಮತ್ತು ಇತರ ಕೆಲ ಮುಖ್ಯ ವಸ್ತುಗಳನ್ನು ಚೀಣಕ್ಕೆ ಮಾರಕೂಡದೆಂದು ವಿಶ್ವಸಂಸ್ಥೆಯು ಸೂಚಿಸಿದ್ದಿತು. ಅಟ್ಲಾಂಟಿಕ್ ರಾಷ್ಟ್ರಗಳು ಜಪಾನು ಮತ್ತು ಅಮೆರಿಕವು ಚೀಣದೊಡನೆ ವ್ಯಾಪಾರದ ವ್ಯವಹಾರ ನಡೆಸಕೂಡದೆಂದು ನಿರ್ಧರಿಸಿದ್ದುವು. ಅದರಿಂದ ಬ್ರಿಟನ್ನು ಈಗ ವಿಮುಖವಾಗಿದೆ.

ಲೆಬನಾನಿನಲ್ಲಿ ಪೊಲೀಸರ ಗುಂಡಿನೇಟು: ಮಾಜಿ ಪ್ರಧಾನಿಗೆ ಪೆಟ್ಟು

ಲೆಬನಾನಿನ ರಾಜಧಾನಿ ಬೇರೂಟಿನಲ್ಲಿ ವಿರೋಧ ಪಕ್ಷದ ಪ್ರದರ್ಶನಕಾರರ ಮೇಲೆ ಪೊಲೀಸರು ನೊನ್ನೆ ಗುಂಡು ಹಾರಿಸಿದರೆಂದೂ, ಆದಾದನಂತರ ಸೈನ್ಯಗಳನ್ನು ನಗರದ ಕಾವಲಿಗಾಗಿ ಕರೆಸಲಾಯಿತೆಂದೂ ವರದಿಯಾಗಿದೆ. ಗುಂಡಿನೇಟಿನಿಂದ ಮಾಜಿ ಪ್ರಧಾನಿ ಸಾಯಿಬ್ ಸಲಾಂ ಮತ್ತು ಇತರರಿಗೆ ಗಾಯವಾಗಿದೆ. ಪ್ರದರ್ಶನಕಾರರು ಸರ್ಕಾರದ ರಾಜೀನಾಮೆಗೆ ಒತ್ತಾಯಪಡಿಸಿದ್ದರು. ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರ ಮಧ್ಯಪ್ರಾಚ್ಯ ಸಹಾಯ ಯೋಜನೆಯನ್ನು ಅಲ್ಲಿನ ವಿರೋಧ ಪಕ್ಷದವರು ಖಂಡಿಸುತ್ತಾರೆ.

ಆಹಾರ ಧಾನ್ಯದ ಬೆಲೆ ಏರಿಕೆಯನ್ನು ತಪ್ಪಿಸಲು ಶಾಸನ

ಆಹಾರಧಾನ್ಯಗಳನ್ನು ಬಚ್ಚಿಟ್ಟು ಬೆಲೆ ಏರಿಸುವುದನ್ನು ತಪ್ಪಿಸುವ ಸಂಬಂಧವಾಗಿ ಲೋಕಸಭೆಯಲ್ಲಿ ನೊನ್ನೆ ಕೇಂದ್ರ ಆಹಾರ ಮಂತ್ರಿ ಎ. ಪಿ. ಜೈನ್ ರವರು ಮಂಡಿಸಿದ ಮಸೂದೆಯು ನೆನ್ನೆ ಅಂಗೀಕೃತವಾಯಿತು. ಅದರಿಂದ ರೈತ ಮತ್ತು ಸಣ್ಣ ವ್ಯಾಪಾರಿಗೆ ತೊಂದರೆಯಾಗುವುದಿಲ್ಲವೆಂದು ನೆಹರೂರವರು ಭರವಸೆಯಿತ್ತರು. ಸರ್ಕಾರದ ವಿಜ್ಞಪ್ತಿ ಪ್ರಕಟನೆಯಾದ ದಿನಕ್ಕೆ ೩ ತಿಂಗಳ ಹಿಂದೆ ಇದ್ದ ಬೆಲೆಯನ್ನು ವ್ಯಾಪಾರಗಾರರು ಶಾಸು ಮಾರುವ ಪೂರ್ತಾ ಮೊತ್ತ ಅಥವಾ ಭಾಗದ ಧಾನ್ಯಕ್ಕಾಗಿ ಪಡೆಯಲು ಅವಕಾಶವಿದೆ.

ಗಾಯತ್ರಿ ಲಲಿತ ಕಲಾ ಸಂಘ

ಮೇಲ್ಕಂಡ ಸಂಘದ ಸರ್ವ ಸದಸ್ಯರುಗಳ ಸಭೆಯು ನಾಳೆ ಬೆಳಿಗ್ಗೆ ೧೧ ಗಂಟೆಗೆ ಸರಿಯಾಗಿ ಸಂಘದ ಕಛೇರಿಯಲ್ಲಿ ಶ್ರೀ ಹೆಚ್. ಎಸ್. ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಸದಸ್ಯರುಗಳೆಲ್ಲರೂ ಸಕಾಲಕ್ಕೆ ದಯಮಾಡಿಸಬೇಕಾಗಿ ವಿನಂತಿ ಮಾಡಲಾಗಿದೆ.

ಸಿರಿಯಾ ಮತ್ತು ಇಸ್ರೇಲಿ ಗಡಿ ಪಡೆಗಳ ಗುಂಡಿನೇಟು

ಉತ್ತರ ಇಸ್ರೇಲಿನ ಹರ್‌ಜಿಂದ್ ಎಂಬಲ್ಲಿ ಸಿರಿಯಾ ಮತ್ತು ಇಸ್ರೇಲ್ ಗಡಿ ಸೈನ್ಯ ಪಡೆಗಳು ನೊನ್ನೆ ಬಹಳ ಹೊತ್ತು ಗುಂಡು ಹಾರಿಸಿದುದಾಗಿ ವರದಿಯಾಗಿದೆ. ಸಿರಿಯಾದವರು ಇಸ್ರೇಲಿನೊಳಗೆ ಪ್ರವೇಶಿಸಿ ಪೈರು ಕಟಾವು ಮಾಡಲೆತ್ನಿಸಿದಾಗ ಗುಂಡಿನೇಟು ಆರಂಭವಾದುದಾಗಿ ಗೊತ್ತಾಗಿದೆ. ಇಸ್ರೇಲಿ ಗಸ್ತು ಪಡೆಯವರು ಆಗಂತುಕರನ್ನು ಪ್ರಶ್ನಿಸಲು ಹೋದಾಗ ಸಿರಿಯಾದವರು ಗುಂಡು ಹಾರಿಸಿದರೆಂದೂ ನಂತರ ಕಾಳಗವು ನಡೆಯಿತೆಂದೂ ಗೊತ್ತಾಗಿದೆ. ಇಸ್ರೇಲಿನವರ ಕಡೆ ಸಾವುನೋವುಗಳಾಗಿಲ್ಲ.

ಮದುವೆ ಗುಂಪಿನ ದುರಂತದಲ್ಲಿ ವಧು ಮತ್ತು ೮ ಜನರ ಮರಣ

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ರಾಗಿಮಸಲವಾಡ ಎಂಬ ಒಂದು ಹಳ್ಳಿಯ ಹತ್ತಿರ ಒಣಗಿದ್ದ ನದಿ ಪಾತ್ರದಲ್ಲಿ ಕಳೆದ ವಾರ ರಾತ್ರಿ ಹೊತ್ತು ವಿವಾಹ ನಡೆಸುವ ಉದ್ದೇಶದಿಂದ ಗಾಡಿಯಲ್ಲಿ ಹೋಗುತ್ತಿದ್ದ ೧೭ ಮಂದಿ ಪೈಕಿ ಹಠಾತ್ತನೆ ಪ್ರವಾಹ ಬಂದುದರ ಪರಿಣಾಮವಾಗಿ ೯ ಜನರು ಮೃತಪಟ್ಟರೆಂದು ವರದಿಯಾಗಿದೆ. ಹತ್ತಿರದ ಕೆರೆ ಒಡೆದು ನೀರು ನುಗ್ಗಿತೆಂದು ಹೇಳಲಾಗಿದೆ. ಪ್ರವಾಹದ ರಭಸಕ್ಕೆ ಗಾಡಿ ಮತ್ತು ಎತ್ತುಗಳು ಕೊಚ್ಚಿಹೋದುವು. ವಧುವೂ ಇತರ ೮ ಜನರೂ ಮಡಿದರು. ಉಳಿದವರು ಪಾರಾಗಿರುತ್ತಾರೆ.

ಬದರೀನಾಥಕ್ಕೆ ಹೆಚ್ಚು ಸಂಖ್ಯೆಯ ಯಾತ್ರಿಕರು

ಒ. ಸು. ಸಂ.] ಜೋಷಿಮಠ ೩೧

ಬದರೀನಾಥಕ್ಕೆ ಹೋಗುವ ಮಾರ್ಗವನ್ನು ಕೂಲಂಕಷವಾಗಿ ಸರಿಪಡಿಸಲ್ಪಟ್ಟಿದೆ. ಯಾತ್ರಿಕರು ಹೆಚ್ಚು ಸಂಖ್ಯೆಯಲ್ಲಿ ಬಂದಿರುತ್ತಾರೆ. ಮಳೆಯಾಗಲೀ, ಹಿಮಪಾತವಾಗಲೀ ಆಗದೆ ಇದೆ. ಹವಾಗುಣವು ಹಿತಕರವಾಗಿದೆ. ಮೈಸೂರಿನ ಎಲ್ಲಾ ಯಾತ್ರಿಕರೂ ಕ್ಷೇಮದಿಂದಿದ್ದಾರೆ. ಅವರು ರಾವಲ್‌ಜಿಯವರ ದರ್ಶನ ಮತ್ತು ಆಶೀರ್ವಾದ ಪಡೆದು ನೆನ್ನೆ ಮುಂದಕ್ಕೆ ಪ್ರಯಾಣ ಮಾಡಿದರು.

ಮುದ್ರಣ ಕಲಾಭಿವರ್ಧಿನೀ ಸಭಾ

ಮುದ್ರಣಾಲಯಗಳ ಮಾಲೀಕರು ಮತ್ತು ಮುದ್ರಣ ಕಲೆಯಲ್ಲಿ ಆಸಕ್ತಿ ಇರುವವರೆಲ್ಲರ ಸಭೆಯು ನಾಳೆ ಬೆಳಿಗ್ಗೆ ೯ ಗಂಟೆಗೆ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ರಾಷ್ಟ್ರೀಯ ಕನ್ಯಾ ವಿದ್ಯಾಲಯದಲ್ಲಿ ಸೇರಿ ಸಂಘವೊಂದನ್ನು ಸ್ಥಾಪಿಸಲಾಗುವುದು. ಸಂಬಂಧಪಟ್ಟವರೆಲ್ಲರೂ ಬರುವಂತೆ ಆಹ್ವಾನಿಸಲಾಗಿದೆ.

ಗೋಹತ್ಯೆಗಾಗಿ ೬ ತಿಂಗಳು ಕಠಿಣ ಸಜಾ; ಮಾಂಸ ಕೊಟ್ಟವನಿಗೆ ೧ ತಿಂಗಳು ಸಜಾ

ಅಶೋಕಪುರದ ಕಳಸ ಉರುಫ್ ಮೂಗ ಎಂಬುವನು ಗೋಹತ್ಯೆ ಮಾಡಿದನೆಂದು ಲಕ್ಷ್ಮೀಪುರಂ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರದ ಪ್ರಥಮ ನ್ಯಾಯಾಧೀಶರು ಆಪಾದಿತನಿಗೆ ೬ ತಿಂಗಳ ಕಠಿಣ ಸಜವನ್ನು ವಿಧಿಸಿ, ಮಾಂಸವನ್ನು ಕೊಂಡುಕೊಂಡವನಿಗೆ ೧ ತಿಂಗಳ ಕಠಿಣ ಸಜ ವಿಧಿಸಲಾಯಿತು.

ಟೀ ಮತ್ತು ಕಾಫಿ ಮೇಲೆ ಹೆಚ್ಚಿನ ಸುಂಕ ರದ್ದು

ಅಲ್ಪ ಪ್ರಮಾಣದ ರೈಲು ಪ್ರಯಾಣಕ್ಕೆ ತೆರಿಗೆಯಿಲ್ಲ, ಅಂಚೆ ಕವರಿಗೆ ಹೆಚ್ಚು ದರ

ಲೋಕ ಸಭೆಯಲ್ಲಿ ನೆನ್ನೆ ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ೭೮ ಕೋಟಿ ರೂಗಳ ಹೊಸ ತೆರಿಗೆಗಳ ಪೈಕಿ ೫ ೦೫ ಕೋಟಿಗಳಷ್ಟು ಪರಿಹಾರವನ್ನೀಯಲಾಗುವುದೆಂದು ತಿಳಿಸಿದರು. ಅಂಚೆ ಕಾರ್ಡು ಮತ್ತು ಲಕೋಟೆ ಮೇಲೆ ವಿಧಿಸಿದ್ದ ಹೆಚ್ಚು ದರವನ್ನು ತೆಗೆದು, ಅವರ ಬದಲು ಕವರುಗಳ ಬೆಲೆಯನ್ನು ೧೩ ನಯೆ ಪೈಸೆಯಿಂದ ೧೫ಕ್ಕೆ ಹೆಚ್ಚಿಸಲಾಗುವುದೆಂದು ಅವರು ಹೇಳಿದರು. ಕವರಿನ ತೂಕವನ್ನು ೧ ತೊಲದಿಂದ ½ ಗೆ ಇಳಿಸಲಾಗಿದೆ. ಮುಂದಿನ ತೂಕವನ್ನು ½ ತೊಲದಂತೆ ಹರಿಗಣಿಸಿ ಅದರ ಮೇಲೆ ದರ ವಿಧಿಸಲಾಗುವುದು. ಅದಕ್ಕೆ ೬ ನಯೆ ಪೈಸೆ ಬದಲು ೧೦ ನಯೆ ಪೈಸೆ ಕೊಡಬೇಕು.

ಟೀ ಮತ್ತು ಕಾಫಿ ಮೇಲೆ ವಿಧಿಸಲಾಗಿದ್ದ ಹೆಚ್ಚಿನ ಆಬ್ಕಾರಿ ಸುಂಕವನ್ನು ತೆಗೆದುಹಾಕಲಾಗುವುದೆಂದು ಅವರು ಸೂಚಿಸಿದರು. ಈ ಬಾಬಿನಿಂದ ೩½ ಕೋಟಿ ರೂ ವರಮಾನವನ್ನು ನಿರೀಕ್ಷಿಸಲಾಗಿತ್ತು.

ಪ್ರಥಮ ೧೫ ಮೈಲಿ ರೈಲು ಪ್ರಯಾಣಕ್ಕೆ ತೆರಿಗೆ ವಿನಾಯಿತಿಯನ್ನು ಕೊಡಲಾಗಿದೆಯೆಂದೂ, ಮುಂದಿನ ಮತ್ತು ೩೦ ಮೈಲಿ ಪ್ರಯಾಣದವರೆಗೆ ಶೇಕಡ ೫ ರಂತೆ ತೆರಿಗೆ ವಿಧಿಸಲಾಗುವುದೆಂದೂ ಅವರು ಸೂಚಿಸಿದರು. ಉಳಿದ ಪ್ರವಾಸಗಳಿಗೆ ಈಗಾಗಲೇ ಸೂಚಿಸಿರುವ ತೆರಿಗೆಯು ಇದ್ದೇ ಇರುವುದು.

ವರಮಾನ ತೆರಿಗೆಯಲ್ಲಿ ರಿಯಾಯಿತಿ

೩,೦೦೦ ರೂ ವರಮಾನ ಬರುವವರ ಮೇಲೂ ತೆರಿಗೆ ವಿಧಿಸಲಾಗುವುದೆಂದೂ, ಆದರೆ ಸಂಸಾರಿಗಳಿಗೆ ಪ್ರತಿ ಮಗುವಿಗಾಗಿ ೩೦೦ ರೂ ವರೆಗೆ ಮತ್ತು ೬೦೦ ರೂ ಗೆ ಮೀರದಂತೆ ವಿನಾಯಿತಿ ಕೊಡಲಾಗುವುದೆಂದೂ ಕೃಷ್ಣಮಾಚಾರಿಯವರು ತಿಳಿಸಿದರು. ೨೦ ಸಾವಿರ ರೂ. ಗಿಂತ ಹೆಚ್ಚು ವರಮಾನ ಬರುವವರಿಗೆ ಈ ವಿನಾಯಿತಿ ಸಲ್ಲುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಹೊಸದಾಗಿ ಪಡೆಯುತ್ತ ಕೈಗಾರಿಕೆಗಳಿಗೆ ಅವುಗಳ ಆಸ್ತಿ ಪ್ರಮಾಣದ ಮೇಲೆ ೫ ವರ್ಷ ಕಾಲ ಐಶ್ವರ್ಯದ ತೆರಿಗೆಯನ್ನು ವಿನಾಯಿತಿ ಮಾಡಲಾಗುವುದೆಂದೂ, ಹೆಚ್ಚುವರಿ ತೆರಿಗೆಯಲ್ಲಿ ಮುಂಚೆ ಹಲವು ಪರಿಹಾರಗಳನ್ನೀಯಲಾಗುವುದೆಂದೂ ಹೇಳಿದರು. ಸಣ್ಣ ಪ್ರಮಾಣದಲ್ಲಿ ಬೆಳೆಸಲ್ಪಟ್ಟಿರುವ ಕಾರ್ಖಾನೆ, ನಡೆಸುವ ಕೈಗಾರಿಕೋದ್ಯಮಿಗಳಿಗೆ ರಕ್ಷಣೆ ಕೊಡಲಾಗುವುದೆಂದೂ ಅವರು ಹೇಳಿದರು. ಹೊಗೆಸೊಪ್ಪಿನ ಮೇಲೆ ಸುಂಕದ ವಿಚಾರದಲ್ಲಿರುವ ನ್ಯಾಯವಾದ ತೊಂದರೆಗಳನ್ನು ನಿವಾರಿಸಲಾಗುವುದೆಂದು ಭರವಸೆಯಿತ್ತರು.

ನಿಮ್ನವರ್ಗ ಮತ್ತು ಹಿಂದುಳಿದ ಪಂಗಡದವರ ಅಭಿವೃದ್ಧಿ

ಸಂಸ್ಥಾನ ಸರ್ಕಾರದ ಯೋಜನೆಗಳಿಗೆ ಕೇಂದ್ರದವರ ಮಂಜೂರಾತಿ

ಸ್ವಂ. ಸು. ಸಂ.] ಬೆಂಗಳೂರು ೧

೫೭—೫೮ ನೇ ಸಾಲಿನಲ್ಲಿ ನಿಮ್ನವರ್ಗ ಮತ್ತು ಹಿಂದುಳಿದ ಪಂಗಡಗಳವರ ಯೋಗಕ್ಷೇಮಕ್ಕಾಗಿ ಸಂಸ್ಥಾನ ಸರ್ಕಾರದವರು ಸಿದ್ಧಗೊಳಿಸಿರುವ ೨೭,೫೫,೦೦೦ ರೂ ಮತ್ತು ೩.೮ ಲಕ್ಷ ರೂ ಯೋಜನೆಗಳನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿರುತ್ತಾರೆ. ಅದರಲ್ಲಿ ಕೇಂದ್ರ ಸರ್ಕಾರದವರು ಅರ್ಧ ಹಣವನ್ನು ಕೊಡುವರು. ಇದಲ್ಲದೆ ನಿಮ್ನವರ್ಗದ ಅಭಿವೃದ್ಧಿಗಾಗಿ ಕೇಂದ್ರದವರೇ ಸಿದ್ಧಗೊಳಿಸಿರುವ ಯೋಜನೆಗಾಗಿ ಸಂಸ್ಥಾನ ಸರ್ಕಾರದವರಿಗೆ ೧೮೧ ಲಕ್ಷ ರೂ ಗ್ರಾಂಟನ್ನು ಕೊಟ್ಟಿರುತ್ತಾರೆ.

ಅಪ್ಪಾಜಿಗೌಡರ ನಿವೃತ್ತಿ

ಒಂದು ವರ್ಷದ ಅವಧಿಯ ಪೂರೈಸಿದನಂತರ ಶ್ರೀ ಜೆ. ಅಪ್ಪಾಜಿಗೌಡರು ಸಂಸ್ಥಾನದ ಸ್ಟೋರ್ ಪರ್ಚೇಸ್ ಸಮಿತಿ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾದರು. ಶ್ರೀ ಪುಟ್ಟರಂಗಸ್ವಾಮಿಯವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ. ಅವರು ಹುದ್ದೆಗೆ ಬರುವವರೆಗೆ ವಾಣಿಜ್ಯ ಕಾರ್ಯದರ್ಶಿ ಶ್ರೀ ವಾಸುದೇವರಾಯರು ಅದನ್ನು ನಿರ್ವಹಿಸುವರು. ಬೆಂಗಳೂರು ಜಿಲ್ಲಾಧಿಕಾರಿಗಳಾದ ಶ್ರೀ ವೆಂಕಟಕೃಷ್ಣರಾಯರನ್ನು ಶ್ರೀ ಪುಟ್ಟರಂಗಸ್ವಾಮಿಯವರ ಸ್ಥಾನದಲ್ಲಿ ಯೋಜನಾ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಕಾನ್‌ಸ್ಟೇಬಲನಿಂದ ೫ ಮಕ್ಕಳು, ಡಿ. ಎಸ್. ಪಿ. ಮತ್ತು ಇನ್ಸ್‌ಪೆಕ್ಟರರ ಕೊಲೆ

ಮಧ್ಯ ಪ್ರದೇಶದ ನೇಪಾ ನಗರದಲ್ಲಿ ನೊನ್ನೆ ರಾತ್ರಿ ಹೆಡ್ ಕಾನ್‌ಸ್ಟೇಬಲನೊಬ್ಬನು ತನ್ನ ರವರ ಮಕ್ಕಳು, ಡಿ. ಎಸ್. ಪಿ. ಹಕೀಂಸಿಂಗ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಬಿ. ಆರ್. ಶರ್ಮ ರವರನ್ನು ಗುಂಡು ಹಾರಿಸಿ ಕೊಂದು ತಲೆ ತಪ್ಪಿಸಿಕೊಂಡಿರುವುದಾಗಿ ವರದಿಯಾಗಿದೆ. ತನ್ನ ಹೆಂಡತಿಯ ಮೇಲೂ ಗುಂಡು ಹೊಡೆದನೆಂದೂ, ಅವಳಿಗೆ ಸ್ವಲ್ಪ ಗಾಯವಾಯಿತೆಂದೂ, ಒಬ್ಬ ಸಬ್ ಇನ್ಸ್‌ಪೆಕ್ಟರು ಅವನ ಗುಂಡಿನಿಂದ ಪಾರಾದರೆಂದೂ ಹೇಳಲಾಗಿದೆ.

ಅದಕ್ಕೆ ಮುಂಚೆ ಡಿ. ಎಸ್. ಪಿ. ಯವರು ಅವನ ಮೇಲೆ ಬಂದ ಒಂದು ದೂರನ್ನು ತನಿಖೆ ಮಾಡಿ ಅಪ್ಪಣೆ ಮಾಡಿದ ಕೆಲವು ಮಾತುಗಳಿಗಾಗಿ ಅವನ ಮೇಲೆ ಕ್ರಮ ಜರುಗಿಸಬಹುದೆಂದು ತಿಳಿಸಿದ್ದರೆಂದು ಗೊತ್ತಾಗಿದೆ. ಅನಂತರ ಅವನು ಠಾಣೆಯಿಂದ ಒಂದು ರೈಫಲ್ ಮತ್ತು ಒಂದು ಪಿಸ್ತೂಲನ್ನು ಅಪಹರಿಸಿ ಮನೆಗೆ ಹೋಗಿ ಮಕ್ಕಳನ್ನು ಹೊಡೆದು ನಂತರ ಮಧ್ಯರಾತ್ರಿಯಲ್ಲಿ ಪ್ರವಾಸಿ ಮಂದಿರಕ್ಕೆ ತೆರಳಿ ಅಲ್ಲಿ ತಂಗಿದ್ದ ಡಿ. ಎಸ್. ಪಿ. ಯವರನ್ನು ಕೊಲೆ ಮಾಡಿದನೆಂದು ಹೇಳಲಾಗಿದೆ. ಸರ್ಕಲ್ ಇನ್ಸ್‌ಪೆಕ್ಟರ ಕೊಲೆ ಎಲ್ಲಿ ಆಯಿತೆಂಬುದು ಸ್ಪಷ್ಟವಾಗಿಲ್ಲ.

ನಗರದಲ್ಲಿ ಇನ್‌ಪ್ಲುಯೆಂಜಾ ಹರಡದಂತೆ ಎಚ್ಚರಿಕೆ ಕ್ರಮ

ಪೌರಸಭಾ ಭವನದಲ್ಲಿ ಸಮಾಲೋಚನೆ

ಮೈಸೂರು ೧

ನಗರದಲ್ಲಿ ಇನ್‌ಪ್ಲುಯೆಂಜಾ ಖಾಯಿಲೆ ಹರಡುವುದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಸಮಾಲೋಚನೆಗಾಗಿ ನಗರದ ವಿವಿಧ ಆಸ್ಪತ್ರೆಗಳ ಮತ್ತು ಖಾಸಗಿ ವೈದ್ಯರುಗಳು ಮತ್ತು ಇತರ ಪ್ರಮುಖರ ಸಭೆಯೊಂದು ನೆನ್ನೆ ಪುರಸಭಾ ಭವನದಲ್ಲಿ ನಡೆಯಿತು ಕಮಿಷನರ್ ಶ್ರೀ ಎ. ವಿಶ್ವನಾಥ್‌ರವರು ಸಭೆಯ ಉದ್ದೇಶವನ್ನು ವಿವರಿಸಿ, ಪ್ಲೇಗು, ಸಿಡುಬು, ಕಾಲರಾ ಮುಂತಾದ ರೋಗಗಳಿಗೆ ಇರುವಂತೆ ನಿರೋಧಕ ಔಷಧಿಯನ್ನು ಈ ರೋಗಕ್ಕೆ ಇದುವರೆಗೂ ಕಂಡು ಹಿಡಿದಿಲ್ಲವೆಂದೂ, ಆದ್ದರಿಂದ ಖಾಯಿಲೆಗೆ ಸೂಕ್ತ ಚಿಕಿತ್ಸೆ ಮತ್ತು ಖಾಯಿಲೆಯವರನ್ನು ಬೇರ್ಪಡಿಸುವುದೇ ತಕ್ಕ ಪರಿಹಾರ ಕ್ರಮವೆಂದೂ ಹೇಳಿದರು ಇದಕ್ಕಾಗಿ ಔಷಧವನ್ನು ಎಷ್ಟು ಬೇಕಾದರೂ ಒದಗಿಸಲು ಸಿದ್ಧವಾಗಿರುವುದಾಗಿ ಸಂಸ್ಥಾನದ ಆರೋಗ್ಯಾಧಿಕಾರಿಗಳು ಭರವಸೆಯಿತ್ತಿದ್ದಾರೆಂದೂ, ಪುರಸಭೆಯವರು ತಮ್ಮ ಕೈಲಾದುದನ್ನೆಲ್ಲಾ ಮಾಡಲು ತಯಾರಾಗಿದ್ದಾರೆಂದೂ ಅವರು ತಿಳಿಸಿದರು ಖಾಯಿಲೆಯ ಲಕ್ಷಣಗಳಾದ ಗಂಟಲು ಕೆರೆತ, ಕಣ್ಣು ಕೆಂಪಾಗುವುದು, ಕೀಲು ಮತ್ತು ಸಂದುಗಳಲ್ಲಿ ನೋವು, ಜ್ವರ ಮುಂತಾದುವು ಕಾಣಿಸಿಕೊಂಡಕೂಡಲೇ ವೈದ್ಯರು ಅಥವಾ ಆರೋಗ್ಯಾಧಿಕಾರಿಗಳ ಬಳಿಗೆ ಹೋಗಿ ತೋರಿಸುವಂತೆ ಜನರಿಗೆ ಪತ್ರಿಕಾಕರ್ತರು ತಿಳಿಸಬೇಕೆಂದು ಮನವಿ ಮಾಡಿಕೊಂಡರು.

ಆರೋಗ್ಯಾಧಿಕಾರಿ ಶ್ರೀ ಅನೇಕರವರು ಮಾತನಾಡಿ, ಇದುವರೆಗೆ ನಗರದಲ್ಲಿ ನಾಲ್ಕು ಜನರಿಗೆ ಈ ಖಾಯಿಲೆಯು ಬಂದಿದ್ದುದಾಗಿ ವರದಿಯಾಗಿದೆಯೆಂದೂ, ಅವರಲ್ಲಿ ಒಬ್ಬನು ಆಗಲೇ ಗುಣ ಮುಖನಾಗುತ್ತಿದ್ದಾನೆಂದೂ, ಉಳಿದವರ ಖಾಯಿಲೆಯು ಹರಡದಂತೆ ಕ್ರಮ ಕೈಗೊಂಡಿರುವುದಾಗಿಯೂ ತಿಳಿಸಿದರು.

ಈಗಿನ ಸಮಾಗಮದಿಂದ ಹಲವರಿಗೆ ಯಾವ ಸೋಂಕೂ ಇಲ್ಲದೆ ಖಾಯಿಲೆಯು ಬಂದಿರಬಹುದೆಂದೂ, ಇಂತಹ ಸಂದರ್ಭದಲ್ಲಿ ಇದು ಸಿಂಗಪುರದ ಖಾಯಿಲೆಯೇ ಅಥವಾ ಸ್ಥಳೀಯವಾದುದೇ ಎಂಬುದನ್ನು ಹೇಳುವುದಕ್ಕಾಗುವುದಿಲ್ಲವೆಂದೂ, ಆದರೆ ಖಾಯಿಲೆಯು ಗಾಳಿಯಿಂದ ಹರಡಬಹುದಾದುದರಿಂದ ಜನರು ಎಚ್ಚರದಿಂದ ವರ್ತಿಸುವುದು ಅಗತ್ಯವೆಂದೂ ಹೇಳಿದರು ವ್ಯಾಧಿಗ್ರಸ್ತರಿಗೆ ಚಿಕಿತ್ಸೆ ಮಾಡಲು ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ ಹೆಚ್ಚಿಗೆ ಪೆಟ್ಟುಗಳನ್ನು ಸಹ ಹಾಕಿಸುವುದಾಗಿ ಅವರು ಭರವಸೆಯಿತ್ತರು.

ನಗರಕ್ಕೆ ಹೊರಗಿನಿಂದ ಬರುವ ಪ್ರಯಾಣಿಕರೆಲ್ಲರನ್ನೂ ಬಸ್ ಸ್ಟ್ಯಾಂಡ್, ರೈಲ್ವೆ ನಿಲ್ದಾಣ ಮುಂತಾದ ಕಡೆಗಳಲ್ಲಿ ಪರೀಕ್ಷಿಸುವುದು ಅಗತ್ಯವೆಂದು ಡಾ॥ ಶ್ರೀನಿವಾಸಮೂರ್ತಿಯವರು ಸೂಚಿಸಿದರು. ರೋಗದ ಸ್ಥಿತಿಯು ನಗರದಲ್ಲಿ ಉಲ್ಬಣಗೊಂಡಾಗ ಚಲಿಸುವ ಆಸ್ಪತ್ರೆಯನ್ನು ಏರ್ಪಡಿಸಬೇಕೆಂದು ಡಾ॥ ಬಿ ಜಿ ದಾಸರು ತಿಳಿಸಿದರು

ನಿರೋಧಕ ಔಷಧಿಯನ್ನು ಪುರಸಭೆಯವರು ಸರ್ಕಾರದಿಂದ ಪಡೆದು ತಾವೇ ನೇರವಾಗಿ ಹಂಚಬೇಕೆಂದು ಡಾ॥ ಬಿ. ಎನ್. ವೆಂಕಟದಾಸಪ್ಪನವರು ಸಲಹೆ ಮಾಡಿದರು

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ರೋಗಿಗಳ ಪರೀಕ್ಷೆಮಾಡಿ ಸೂಕ್ತ ತಿಳುವಳಿಕೆ ನೀಡಲು ವ್ಯವಸ್ಥೆ ಮಾಡುವುದಾಗಿ ಡಾ॥ ಕೃಷ್ಣಮೂರ್ತಿಯವರು ಭರವಸೆಯಿತ್ತರು.

ಪೌರಸಭಾಧ್ಯಕ್ಷರಾದ ಶ್ರೀ ಎಸ್. ಸಂಜೀವಯ್ಯನವರು ಎಲ್ಲರಿಗೂ ಧನ್ಯವಾದವನ್ನು ಸಲ್ಲಿಸಿದರು.

ಶಿಶು ಸ್ನೇಹಿ

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ-
ನಿರೋಧಕ, ನಿವಾರಕ. ಸಲಹೆಗಳಿಗೆ :-
'ಲವರ್ ಹೌಸ್', ಚಾಮರಾಜಪುರಂ,
ಮೈಸೂರು (ಸುಕ್ಕೂರು ಹಾಸ್ಟಲ್ ಹತ್ತಿರ)

ಮಳೆಯಿಂದ ಬೆಳೆಗೆ ಅನುಕೂಲ

ಮುಖ್ಯಮಂತ್ರಿ ನಿಜಲಿಂಗಪ್ಪನವರ ಹೇಳಿಕೆ

ಬೆಂಗಳೂರು ೩೧

ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಮಳೆ ವಿಚಾರವನ್ನು ಕುರಿತು ಮಾತನಾಡಿ, ಪರಿಸ್ಥಿತಿಯು ಅನುಕೂಲವಾಗಿರುವುದರಿಂದ ಧಾನ್ಯದ ಬೆಲೆಯು ಇಳಿಯುವುದೆಂದು ತಿಳಿಸಿರುತ್ತಾರೆ ಆಹಾರದ ಬೆಳೆಗೆ ಈಗಿನ ಮಳೆಯಿಂದ ಒಳ್ಳೆಯದಾಗಿರುವುದೆಂದೂ, ಆದರೆ ಕಾಫಿ ಬೆಳೆಗೆ ತೊಂದರೆಯಾಗಿರುವುದೆಂದೂ ತಿಳಿಸಿರುವರು

ಸಂಸ್ಥಾನದಲ್ಲಿ ಪುನಃ ಅಭಿವೃದ್ಧಿ ಸಮಿತಿಗಳ ನೇಮಕ

ದ್ವಿತೀಯ ಪಂಚವಾರ್ಷಿಕ ಯೋಜನೆ ಅಂಗವಾಗಿ ನಡೆಸಲಾಗುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಲಹೆ ನೀಡಲು ಜಿಲ್ಲಾ ಮತ್ತು ತಾಲ್ಲೂಕು ಕಟ್ಟಗಳಲ್ಲಿ ಸಮಿತಿಗಳನ್ನು ಪುನಃ ನೇಮಿಸಲಾಗುವುದೆಂದೂ, ಅವುಗಳು ಬೊಂಬಾಯಿ ಸಂಸ್ಥಾನದಲ್ಲಿರುವ ಸಮಿತಿಗಳಂತೆ ಕೆಲಸ ಮಾಡುವುವೆಂದೂ ತಿಳಿದುಬಂದಿದೆ.

ಸಂಸ್ಥಾನಕ್ಕೆ ೭೯ ಹೊಸ ರಾಷ್ಟ್ರೀಯ ವಿಸ್ತರಣಾ ಕೇಂದ್ರಗಳು

ಈ ವರ್ಷ ಅಕ್ಟೋಬರ್ ೧ ರಿಂದ ಸರ್ಕಾರದವರು ಹೊಸದಾಗಿ ೭೯ ರಾಷ್ಟ್ರೀಯ ವಿಸ್ತರಣಾ ಕೇಂದ್ರಗಳನ್ನು ತೆರೆಯುವರು ಈಗಾಗಲೇ ೨೦ ಕೇಂದ್ರಗಳನ್ನು ಸ್ಥಳಗಳನ್ನು ನಿರ್ಧರಿಸಲಾಗಿದೆ ಪ್ರತಿ ಜಿಲ್ಲೆಯಲ್ಲೂ ಹಿಂದುಳಿದ ಪ್ರದೇಶಗಳಲ್ಲಿ ಈ ಕೇಂದ್ರಗಳನ್ನು ಏರ್ಪಡಿಸಲಾಗುತ್ತದೆ. ಸಂಸ್ಥಾನದಲ್ಲಿ ಹಲವು ಕಡೆ ಕೆಲಸವು ತೃಪ್ತಿಕರವಾಗಿ ನಡೆದಿಲ್ಲವೆಂದೂ, ಅದನ್ನು ಸರಿಪಡಿಸಲಾಗುವುದೆಂದೂ ಹೇಳಲಾಗಿದೆ.

ಅರ್ಧ ಎಕರೆಯಲ್ಲಿ ೯,೦೦೦ ತೆಂಗಿನಕಾಯಿ ಬೆಳೆ

ಕೇರಳದ ಚೆಂಗನ್ನೂರಿನ ಕೆ. ಪಿ ಅಯ್ಯಪ್ಪ ಕುಂಜು ಎಂಬ ರೈತನು ೧೯೫೫-೫೬ ರಲ್ಲಿ ನಡೆದ ತೆಂಗಿನ ಬೆಳೆ ಸ್ಪರ್ಧೆಯಲ್ಲಿ ಭಾಗವಹಿಸಿ ೫೦೦ ರೂ ಬಹುಮಾನ ಪಡೆದಿರುತ್ತಾನೆ ಅತನು ಅರ್ಧ ಎಕರೆ ಜಮೀನಿನಲ್ಲಿ ೯,೦೦೦ ತೆಂಗಿನಕಾಯಿಗಳನ್ನು ತೆಗೆದಿದ್ದನು

ಕೇರಳದ ಸಚಿವರುಗಳ ವಿವಾಹ

ಕೇರಳದ ಕಮ್ಯೂನಿಸ್ಟ್ ಸರ್ಕಾರದ ಕಾರ್ಮಿಕ ಮಂತ್ರಿ ಟಿ. ವಿ ಥಾಮಸ್‌ರವರು ರೆವಿನ್ಯೂ ಮಂತ್ರಿ ಕೆ ಆರ್ ಗೌರಿಯವರನ್ನು ಮೊನ್ನೆ ತಿರುವನಂತಪುರದಲ್ಲಿ ವಿವಾಹವಾದರು. ಈ ಬಗ್ಗೆ ಸರಳವಾದ ಸಮಾರಂಭವು ನಡೆಯಿತು. ವರನಿಗೆ ೪೫ ಮತ್ತು ವಧುವಿಗೆ ೩೫ ವರ್ಷ ವಯಸ್ಸು

ಭಾರತಕ್ಕೆ ರಷ್ಯಾ ಶಸ್ತ್ರಾಸ್ತ್ರವಿಲ್ಲ

ಪ್ರಧಾನಿ ನೆಹರೂರವರು ಮೊನ್ನೆ ಲೋಕಸಭೆಯಲ್ಲಿ ಮಾತನಾಡಿ, ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಲು ಸಿದ್ಧವಿರುವುದಾಗಿ ರಷ್ಯವು ತಿಳಿಸಿಲ್ಲವೆಂದೂ, ಈ ಬಗ್ಗೆ ಭಾರತವು ರಷ್ಯವನ್ನು ಕೇಳಿಲ್ಲವೆಂದೂ ನುಡಿದರು

COACHING SECTION

Dalvoy High School, Mysore
Very Moderate Fees
Morning Class

Excellent C o a c h i n g for S. S. L. C. Students appearing f o r September Examination (1957) Join I m m e d i a t e l y. Further particulars from.

(Sd) H. S Ananthachar.
Secretary

ಶ್ರೀ ಜಗದಂಬಾ ಶಿಶು ವಿಹಾರ

ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶುವಿಹಾರದ ತರಗತಿಗಳು ಜೂನ್ ೧೧ನೇ ತಾರೀಖಿನಿಂದ ಆರಂಭವಾಗಿವೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ.

ಅತಿವೃಷ್ಟಿಯಿಂದ ೩ ಸಾವಿರ ಎಕರೆಗೆ ನೀರಿಲ್ಲ

ನಂಜನಗೂಡು ೩೧

ಇತ್ತೀಚೆಗೆ ಆದ ಅತಿವೃಷ್ಟಿಯಿಂದಾಗಿ ಈ ತಾಲ್ಲೂಕಿನ ೧೬ ಕೆರೆಗಳು ಒಡೆದಿವೆ ನಂಜನಗೂಡು ಮತ್ತು ಹದಿನಾರು ಗ್ರಾಮದ ನಡುವೆ ಸುಮಾರು ೩ ಸಾವಿರ ಎಕರೆ ಭೂಮಿಗೆ ಸಾಗುವಳಿಗಾಗಿ ನೀರನ್ನು ಒದಗಿಸಲು ಸಾಧ್ಯವಿಲ್ಲವೆಂದೂ, ಕೆರೆಯ ರಿಪೇರಿಗಾಗಿ ೬೦ ಸಾವಿರ ರೂ. ವೆಚ್ಚ ಮಾಡಬೇಕಾಗುವುದೆಂದೂ ಗೊತ್ತಾಗಿದೆ. ಕನಿಷ್ಠ ಪಕ್ಷ ಹತ್ತು ಸಾವಿರ ರೂ. ವೆಚ್ಚದಿಂದಲಾದರೂ ಒಂದು ಪ್ರತ್ಯೇಕವಾದ ನಾಲೆಯನ್ನು ತೋಡಿ ನೀರನ್ನು ಒದಗಿಸಿಕೊಡಬೇಕೆಂದು ರೈತರು ಒತ್ತಾಯ ಮಾಡಿದ್ದಾರೆ.

ರೈಲು ರಸ್ತೆ ನಿರ್ಮಾಣದ ಬಗ್ಗೆ ಮುಖ್ಯ ಮಂತ್ರಿಗಳ ಸಮ್ಮೇಳನ

ಈ ತಿಂಗಳು ೫ ನೇ ತಾರೀಖು ದೆಹಲಿಯಲ್ಲಿ ಎಲ್ಲಾ ಸಂಸ್ಥಾನಗಳ ಮುಖ್ಯ ಮಂತ್ರಿಗಳ ಸಭೆಯೊಂದನ್ನು ರೈಲ್ವೆಮಂತ್ರಿ ಜಗಜೀವನರಾಂರವರು ಕರೆದಿರುತ್ತಾರೆ ಆಯಾ ಸಂಸ್ಥಾನಗಳಲ್ಲಿ ಹೊಸ ರೈಲು ರಸ್ತೆಯನ್ನು ಹಾಕುವುದು ಅಥವಾ ಈಗ ಇರುವ ರಸ್ತೆಗಳನ್ನು ಉತ್ತಮಗೊಳಿಸುವ ಬಗ್ಗೆ ಪರಿಶೀಲನೆ ನಡೆಸಲಾಗುವುದು.

ವಿವಾಹ ಮಹೋತ್ಸವ

ಪೊನ್ನಂಪೇಟೆ? ಹಂಪಾಪುರದ ಶ್ರೀ ಪಿ ಎಸ್. ಶಿವಸುಬ್ರಹ್ಮಣ್ಯಯ್ಯನವರು ತಮ್ಮ ಕುಮಾರ ಶ್ರೀ ಪಿ. ಎಸ್. ವಿಶ್ವನಾಥ್‌ರವರಿಗೆ ಕೃಷ್ಣರಾಜನಗರದ ಮರಾಮತ್ತು ಇಲಾಖಾ ಕಂಟ್ರಾಕ್ಟರ್ ಶ್ರೀ ಬಿ. ವಿ. ಚನ್ನಪ್ಪಯ್ಯನವರ ಕುಮಾರಿ ಸೌ॥ ಸುಶೀಲರವರನ್ನು ತಂದುಕೊಂಡು ನೆನ್ನೆ ವಿವಾಹವನ್ನು ಕೃಷ್ಣರಾಜನಗರದಲ್ಲಿ ನೆರವೇರಿಸಿದರು.

C.T.C., Old Agrahar, Mysore

- ★ Separate English medium class for the Supple Exam.
- ★ 5 periods of work daily
- ★ Separate class for school-going students from 6 to 8-30 p. m
- ★ Matriculation classes in full swing

—: Please visit once :—

B K. Satyabodhachar M.A , B T.,
Principal

ಬೊಂಬಾಯಿ ಬಳಿ ಟ್ರಾಂಬೆಯಲ್ಲಿ ಸ್ಥಾಪಿಸಲಾಗಿರುವ ವಿದ್ಯುಚ್ಛಕ್ತಿ ಯಂತ್ರಾಗಾರದ ವಿಸ್ತರಣೆಗಾಗಿ ವಿಶ್ವಬ್ಯಾಂಕಿನವರು ೯೮ ಲಕ್ಷ ಡಾಲರ್ ಹಣವನ್ನು ಸಾಲವಾಗಿ ಕೊಟ್ಟಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	[illegible]	
ರತ್ನಚೂಡಿ	[illegible]	[illegible]
ಸಣ್ಣ	[illegible]	
ಕಾರ್ ಸಣ್ಣ	[illegible]	
ರಾಗಿ	[illegible]	[illegible]
ಜೋಳ	[illegible]	
ಸಜ್ಜೆ	[illegible]	
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible]	[illegible]
ಹೊಂಗೆಬೀಜ	[illegible]	[illegible]
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಹಲಸಂದೆ	[illegible]	[illegible]
ಅವರೆ	[illegible]	[illegible]
ಧನಿಯ	[illegible]	[illegible]
ಉದ್ದು	[illegible]	
ಹರಳಿನ ಬೀಜ	[illegible]	[illegible]
ಹುಣಸೇಬೀಜ	[illegible]	[illegible]
ಸೀಗೆಕಾಯಿ	[illegible]	
ಹುಣಸೆಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

ಶ್ರೀ
ಕೃಷ್ಣ ಮಿಲ್ಕ್ ಡೈರಿ

ತಾ॥ 1-6-57ನೇ ಶನಿವಾರದಿಂದ
ಕೆರೆಯಲಾಗುವುದು
ಇಲ್ಲಿ ಅಪ್ಪಟವಾದ
ಹಸುವಿನ ಹಾಲು
ದೊರೆಯುತ್ತೆ
ಪೌಂಡು 1ಕ್ಕೆ 0-3-6
ಶ್ರೀ ಕೃಷ್ಣ ಮಿಲ್ಕ್ ಡೈರಿ,
94. ಕಲ್ಯಾಣ ಭವನ ಬಿಲ್ಡಿಂಗ್ಸ್,
ತ್ಯಾಗರಾಜ ರೋಡ್, ಮೈಸೂರು
ಮನೆಗಳಿಗೂ ಉಚಿತ ಸರಬರಾಜು ಉಂಟು

Edited, Printed and Published by A. R. Nagarajan at Sadhvi Press, 3-Subbiah Road, Mysore

THE NATIONAL INSTITUTE OF COMMERCE,

Old Mysore Bank Road, Mysore

NEW ADMISSIONS for TYPEWRITING, SHORTHAND, ACCOUNTANCY Etc., leading to Mysore Govt. Commercial Exams, are now being received during mornings and evenings. The Institute is situated in the heart of the city and is equipped with new typewriters and furniture etc. Individual attention and expert training are the special features of this Institution. Particulars in person.

THE CHAMPION METROPOLITAN COLLEGE OF COMMERCE

Co operators' Home, 100' Road, Mysore

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE, Diploma in Stenography, COST & WORKS ACCOUNTANCY, Banking, Shorthand, Typewriting etc.

Estd. 1917 — Fully qualified full-time staff — Educational atmosphere — Fine building and up-to-date equipment — Decent Library and Reading Room — Western Business education in the East — Good results — College's Own Diploma also.

M. S. PUTTANNA, *Vice-Principal,*
P. SUBBARAYA SASTRY, *Principal*

ಸ್ಟ್ಯಾಂಡರ್ಡ್ ಮಿಲ್ಕ್ ಡೈರಿ

ಕಾಲೇಜ್ ರಸ್ತೆ, (ತಾಜಿ) ನಾರಾಯಣಶಾಸ್ತ್ರಿ ರೋಡ್, ಮೈಸೂರು

1-6-57 ರಿಂದ 10-6-57 ರಲ್ಲಿ ಕಾರ್ಡ್ ಕೊಳ್ಳುವವರಿಗೆ ಪೌಂಡು ಒಂದಕ್ಕೆ 0-3-3 ನಂತೆ ಅಪ್ಪಟ ಹಸುವಿನ ಹಾಲನ್ನು (ಆಗತಾನೆ ಕರೆದ ಹಾಲು) ಕೊಡಲಾಗುತ್ತೆ. ಅನೇಕರು ಸುಳ್ಳು ಹೇಳಿ ಬಹಳ ಜಾಸ್ತಿ ಬೆಲೆಯನ್ನು ತೆಗೆದುಕೊಳ್ಳುತ್ತಿದ್ದಾರೆ.

ನಮ್ಮಲ್ಲಿ ಪ್ರತಿದಿನವೂ ವಿಚಾರಪಲ್ಲೂ ಪರೀಕ್ಷಿಸಿ ಹಸುಗಳನ್ನು ನೋಡಿ ಕಂಡ ಹಾಲು ಪಡೆಯಬಹುದು

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರ್ತಕರಿಗೆ ಸಹಕಾರಿ

ಸಾಧ್ವಿ

ಇಂದಿನ ಪತ್ರಿಕೆ 2 ನಯ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ ೧ ೨೨] SADHVI : SUNDAY 2—6—1957 ಮೈಸೂರು . ಭಾನುವಾರ ೨—೬—೧೯೫೭ : [ಸಂಚಿಕೆ : ೪೦೦

ಅಣು ಶಸ್ತ್ರ ಪರೀಕ್ಷೆ ನಿಲುಗಡೆಬಗ್ಗೆ ಅಮೆರಿಕದ ಸಲಹೆ

ಅಣು ಶಸ್ತ್ರ ಪರೀಕ್ಷಾ ಸಿಡಿತದ ನಿಲುಗಡೆಗೆ ಅಮೆರಿಕದ ಸಲಹೆ

ರಷ್ಯದೊಡನೆ ಅಣು ಬಾಂಬು ತಯಾರಿಕೆ ನಿಷೇಧಕ್ಕಾಗಿ ಒಪ್ಪಂದ ಅಗತ್ಯ

ಅಣು ಶಸ್ತ್ರಾಸ್ತ್ರ ತಯಾರಿಕೆಗೆ ನಿಷೇಧ ಹಾಕಬು ರಷ್ಯದೊಡನೆ ಒಡಂಬಡಿಕೆಯಾದರೆ ಅಣು ಶಸ್ತ್ರ ಪರೀಕ್ಷಾ ಸಿಡಿತಗಳನ್ನು ನಿಲ್ಲಿಸಬಹುದೆಂದು ಅಮೆರಿಕದ ಹೊಸ ಶಸ್ತ್ರ ಸನ್ಯಾಸ ಯೋಜನೆಯು ತಿಳಿಸಿರುತ್ತದೆ. ಅದನ್ನು ಮುಂದಿನ ಶಸ್ತ್ರ ಸನ್ಯಾಸ ಸಭೆಯಲ್ಲಿ, ರಷ್ಯದ ಮುಂದಿಡಲಾಗುತ್ತದೆ. ಈಗಾಗಲೇ ಅಮೆರಿಕವು ತನ್ನ ಮಿತ್ರರಾಷ್ಟ್ರಗಳೊಡನೆ ಈ ವಿಚಾರವಾಗಿ ಚರ್ಚಿಸಿದೆ. ಅಧ್ಯಕ್ಷ ಐಸೆನ್‌ಹೋವರರೂ ಅದಕ್ಕೆ ಸಮ್ಮತಿ ಸೂಚಿಸಿರುವರೆಂದು ಹೇಳಲಾಗಿದೆ

ಮದ್ರಾಸ್ ನಗರದ ಪೋಲೀಸರಿಗೆ ಇನ್‌ಫ್ಲುಯೆಂಜಾ ವ್ಯಾಧಿ

ಮದ್ರಾಸ್ ನಗರದಲ್ಲಿ ಒಟ್ಟು ಇರುವ ೬,೦೦೦ ಮಂದಿ ಪೋಲೀಸರ ಪೈಕಿ ಕಾಲು ಭಾಗದಷ್ಟು ಜನರು ಇನ್‌ಫ್ಲುಯೆಂಜಾ ತಗಲಿದುದರಿಂದ ನಿನ್ನೆ ಕೆಲಸಕ್ಕೆ ಬರಲಿಲ್ಲವೆಂದು ಹೇಳಲಾಗಿದೆ. ಅದರಿಂದ ಪರೇಡನ್ನು ನಿಲ್ಲಿಸಲಾಯಿತು. ಪೋಲೀಸು ಲೈನಿನಲ್ಲಿ ವ್ಯಾಧಿಯು ವಿಶೇಷವಾಗಿದೆ. ನಗರದಲ್ಲಿ ದಿನವೂ ಸಾವಿರ ಮಂದಿಗೆ ಚಿಕಿತ್ಸೆ ನಡೆಸಲಾಗುತ್ತಿದೆ. ಎಲ್ಲೆಲ್ಲೂ ವೈದ್ಯರುಗಳ ಅಂಗಡಿ ಮುಂದೆ ಔಷಧಿಗಾಗಿ ಜನರು ದೊಡ್ಡ ದೊಡ್ಡ ಕ್ಯೂ ನಿಲ್ಲುವ ದೃಶ್ಯವು ಕಾಣಬರುತ್ತಿದೆ. ಅನೇಕ ಅಂಗಡಿ, ಕಾರ್ಖಾನೆ ಮತ್ತು ಸಂಸ್ಥೆಗಳಲ್ಲಿ ಕೆಲಸಕ್ಕೆ ಹೆಚ್ಚು ಜನರು ಬರಲಿಲ್ಲ.

ಬೆಂಗಳೂರಿನಲ್ಲಿ ಇನ್‌ಫ್ಲುಯೆಂಜಾಕ್ಕಾಗಿ ಮ್ಯಾಟಿನಿ ಪ್ರದರ್ಶನ ಇಲ್ಲ

ಬೆಂಗಳೂರಿನಲ್ಲಿ ಇನ್‌ಫ್ಲುಯೆಂಜಾದಿಂದ ಈಗ ಜನರು ನರಳುತ್ತಿರುವರು. ಅಲ್ಲಿನ ಸಿನಿಮಾಗಳ ಮ್ಯಾಟಿನಿ ಪ್ರದರ್ಶನಗಳನ್ನು ನಿಷೇಧಿಸಲಾಗುವುದೆಂದು ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ. ಅವಶ್ಯವಿದ್ದರೆ ಮೂರು ಪ್ರದರ್ಶನಗಳನ್ನೂ ತಪ್ಪಿಸಲಾಗುವುದೆಂದೂ ಅವರು ಹೇಳಿರುವರು. ಶಾಲೆಗಳನ್ನು ಮುಚ್ಚಬೇಕಾಗಿಲ್ಲವೆಂದು ಅಭಿಪ್ರಾಯ ಪಟ್ಟಿರುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಿತಾರ್. ೭-೧೫ ಟಿ. ಆರ್. ಗೋಪಾಲ್.ಶೆಟ್ಟರ ಭಜನ. ೮-೧೫ ಸಂಗೀತ ಶಾಸ್ತ್ರ ಮಧ್ಯಾಹ್ನ ೧೨ ಟಿ. ಆರ್. ಗೋಪಾಲ್-ಸಂಗೀತ. ೧೨-೩೦ ಡಿ. ಸುಗುಣಮ್ಮ-ವೀಣೆ. ೧ ಹೇಮಲತಾ ಬಾಲೇಕರ್-ಭಜನೆ. ೧-೫೦ ಸಿತಾರ್ ಮತ್ತು ಸೆಲ್ಲೊ. ೨-೧೫ ಸ್ತ್ರೀಯರಿಗಾಗಿ. ಸಂಜೆ ೬-೧೦ ಎಸ್. ಎಸ್. ರಾಮಸ್ವಾಮಿ-ಜಾನಪದ ಗೀತೆ ೭-೩೦ ಹಿಂದಿ ಗೀತೆ. ವೃಂದ ಗಾನ. ೮-೧೫ ನಾಟಕ ಮತ್ತು ನೃತ್ಯ. ೮-೩೦ ಸಂಗೀತ. ೮-೪೫ ವಾದ್ಯ ವೃಂದ. ೯-೧೫ ವಿಜ್ಞಾನ ವಿಮರ್ಶೆ. ೯-೩೦ ಎದುರಾಚಾರ್ಯ-ಕಥಾ ಕಾಲಕ್ಷೇಪ. ೧೦-೩೦ ಡಿ. ಸುಗುಣಮ್ಮ - ವೀಣೆ.

೧೬ ಲಕ್ಷ ರೂ. ವೆಚ್ಚದಿಂದ ಕನ್ನಡ ವಿಶ್ವಕೋಶ

ಪೂರ್ವಭಾವಿ ಕೆಲಸದ ಮುಕ್ತಾಯ

ಬೆಂಗಳೂರು ೨

ಕನ್ನಡ ವಿಶ್ವಕೋಶದ ತಯಾರಿಕೆಯ ಪೂರ್ವಭಾವಿ ಕೆಲಸವು ಮುಕ್ತಾಯವಾಗಿ, ೧೦ ವರ್ಷಗಳಲ್ಲಿ ೧೬ ಲಕ್ಷ ರೂ. ವೆಚ್ಚದಿಂದ ಸಾಧಿಸಲ್ಪಡುವ ಈ ಸಮಗ್ರ ಯೋಜನೆಯು ಈಗ ಸರ್ಕಾರದ ಪರಿಶೀಲನೆಯಲ್ಲಿರುವುದೆಂದು ಅಧಿಕೃತ ಪ್ರಕಟನೆಯೊಂದು ತಿಳಿಸಿದೆ. ಅದು ಮುಗಿದರೆ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಗಣನೀಯವಾದ ಕಾಣಿಕೆಯನ್ನು ಸಲ್ಲಿಸಿದಂತಾಗುವುದೆಂದು ತಿಳಿಸಲಾಗಿದೆ ವಿಶ್ವಕೋಶವನ್ನು ಸಿದ್ಧಗೊಳಿಸಲು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಲಾಗಿತ್ತು. ಅಲ್ಲದೆ ೨೫ ಮಂದಿ ವಿದ್ವಾಂಸರು, ಬರಹಗಾರರು, ಪ್ರೊಫೆಸರುಗಳು ಮುಂತಾದವರುಳ್ಳ ಸಮಿತಿಯೂ ರಚಿತವಾಗಿದೆ.

ನೌಕರರು ಬಡ್ತಿ ಪಡೆಯಲು ಅವಕಾಶ

ಇಲಾಖಾ ಮತ್ತು ಭಾಷಾ ಪರೀಕ್ಷೆ(ಕನ್ನಡ ಬಿಟ್ಟು) ಗಳನ್ನು ನಡೆಸುವ ಬಗ್ಗೆ ನಿಬಂಧನೆಗಳನ್ನು ರಚಿಸುವವರೆಗೂ ಹೊಸ ಮೈಸೂರಿನ ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ನೌಕರರು ತಮ್ಮ ಬಡ್ತಿಗಳನ್ನು ಪಡೆಯಲು ಅವಕಾಶ ಕಲ್ಪಿಸಿ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಆರೋಗ್ಯ ಮಂತ್ರಿಗಳ ಪ್ರವಾಸ

ಆರೋಗ್ಯ ಮಂತ್ರಿಗಳಾದ ಶ್ರೀ ಆರ್ ಎಂ. ಪಾಟೀಲರು ನಾಳೆ ರಾತ್ರಿ ನಗರಕ್ಕೆ ಆಗಮಿಸಿ, ರಾತ್ರಿ ಇಲ್ಲಿ ತಂಗಿದ್ದು ಮಾರನೇ ಬೆಳಗ್ಗೆ ಮಡಿಕೇರಿಗೆ ಪ್ರಯಾಣ ಮಾಡುವರು.

ಅಗ್ಗದ ಬೆಲೆಯ ರೇಡಿಯೋ ತಯಾರಿಕೆ ಕಾರ್ಖಾನೆ

ಆಂಧ್ರ ಪ್ರದೇಶದ ಚೀಫ್ ನ್ಯಾಯಾಧೀಶರಾದ ಶ್ರೀ ಕೆ. ಸುಬ್ಬರಾಯರು ಮೊನ್ನೆ ಕೊಯಮತ್ತೂರಿನಲ್ಲಿ ಸುಪ್ರಸಿದ್ಧ ಕೈಗಾರಿಕೋದ್ಯಮಿ ಜಿ. ಡಿ. ನಾಯ್ಡುರವರ ರೇಡಿಯೋ ತಯಾರಿಕೆ ಕಾರ್ಖಾನೆಯನ್ನು ಆರಂಭಗೊಳಿಸಿದರು. ಅದರಲ್ಲಿ ೧೦೦ ರೂ. ಯ ಅಗ್ಗದ ರೇಡಿಯೋವನ್ನು ತಯಾರಿಸಲು ಆಲೋಚಿಸಲಾಗಿದೆ. ಈಗಾಗಲೇ ೫,೦೦೦ ರೇಡಿಯೋಗಳನ್ನು ತಯಾರಿಸಿ ಮಾರಾಟಕ್ಕೆ ಕೊಡಲು ಸಿದ್ಧಪಡಿಸಲಾಗಿದೆ.

ಪ್ರಜಾ ಸಮಾಜವಾದಿಗಳ ಸಭೆ

ಪ್ರಜಾ ಸಮಾಜವಾದಿ ಪಕ್ಷದ ನಗರ ಶಾಖಾ ಕಾರ್ಯ ಸಮಿತಿ ಸಭೆಯು ಮೊನ್ನೆ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು, ಕೇಂದ್ರ ಸರ್ಕಾರದವರು ವಿಧಿಸಿರುವ ಹೊಸ ತೆರಿಗೆಗಳನ್ನು ವಿರೋಧಿಸಲು ಬಹಿರಂಗ ಸಭೆಯನ್ನು ನಡೆಸಬೇಕೆಂದು ನಿರ್ಧರಿಸಲಾಯಿತು. ಮುಂಬರುವ ಪೌರಸಭಾ ಚುನಾವಣೆಗಳಲ್ಲಿ ಪಕ್ಷದವರು ಭಾಗವಹಿಸಲು ಪೂರ್ವಸಿದ್ಧತಾ ಕ್ರಮ ಜರುಗಿಸಿ ವರದಿಯೊಪ್ಪಿಸುವಂತೆ ಶ್ರೀಗಳಾದ ಎಂ. ಎಸ್. ತಿಮ್ಮಯ್ಯ, ಸಿ ಎಸ್. ನಾರಾಯಣರಾವ್. ಬಿ. ಕೆ ಪುಟ್ಟಯ್ಯ ಮತ್ತು ವೇದಾಂತ ಹೆಮ್ಮಿಗೆಯವರುಳ್ಳ ಸಮಿತಿಯನ್ನು ರಚಿಸಲಾಯಿತು. ಅಧಿಕ ಸಂಖ್ಯೆಯಲ್ಲಿ ಪಕ್ಷಕ್ಕೆ ಸದಸ್ಯರನ್ನು ಸೇರಿಸಲು ಕಾರ್ಯಕರ್ತರನ್ನು ಕೋರಲಾಯಿತು.

ದೆಹಲಿಯಲ್ಲಿ ಎ. ಐ. ಸಿ. ಸಿ. ಅಧಿವೇಶನಾರಂಭ

ಕಾಂಗ್ರೆಸ್ ಸಮಸ್ಯೆಗಳ ಬಗ್ಗೆ ಧೇಬರ್ ಮತ್ತು ನೆಹರೂ ಭಾಷಣ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಎರಡು ದಿನಗಳ ಅಧಿವೇಶನಕ್ಕಾಗಿ ನಿನ್ನೆ ದೆಹಲಿಯಲ್ಲಿ ಸೇರಿತು ಅಧಿವೇಶನವು ಅರ್ಧ ಗಂಟೆ ಕಾಲ ಸಾಮೂಹಿಕ ಚರಖಾ ನೂಲುವ ಕೆಲಸದೊಡನೆ ಆರಂಭವಾಯಿತು ನೌಕಾಷ್ಪಾ ಗ್ರಾಮದ ವಿಶೇಷ ತಂಡದವರು ಭಕ್ತಿಗೀತೆಯನ್ನು ಹಾಡಿದರು ವೇದಿಕೆಯ ಮೇಲೆ ಗಾಂಧೀಜಿಯವರ ಭಾರಿ ಚಿತ್ರವಲ್ಲದೆ, ೧೮೫೭ ರ ಸ್ವಾತಂತ್ರ್ಯ ಯೋಧರಾದ ಬಹದ್ದೂರ್ ಷಹಾ ಮತ್ತು ತಾಂತ್ಯಾಟೋಪಿಯವರ ಭಾವಚಿತ್ರಗಳೂ ಕಂಗೊಳಿಸುತ್ತಿದ್ದವು.

ಧೇಬರ್‌ರವರು ಅಧ್ಯಕ್ಷ ಭಾಷಣ ಮಾಡಿ ಈಗ ಸಂಸ್ಥೆ ಮತ್ತು ದೇಶದ ಮುಂದೆ ಆಹಾರ ಪರಿಸ್ಥಿತಿ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಗಾಗಿ ಸಾಧನಸಂಪತ್ತು ಸಂಗ್ರಹಣೆಗಳು ಮುಖ್ಯ ಸಮಸ್ಯೆಗಳಾಗಿರುವುವೆಂದು ತಿಳಿಸಿದರು ಆಹಾರದ ಅಭಾವ ಮತ್ತು ಬೆಲೆ ಏರುಪೇರುಗಳನ್ನು ವ್ಯವಸಾಯ ಭಾಗಕ್ಕೆ ಹೆಚ್ಚು ಗಮನ ಕೊಡುವುದರಿಂದ ಎದುರಿಸಬಹುದೆಂದು ಅವರು ಸೂಚಿಸಿದರು. ಹೊಸ ತೆರಿಗೆಗಳು ಜನರ ಮೇಲೆ ಬಿಟ್ಟಿನ ಹೊರೆಯನ್ನು ಹಾಕಿರುವುದಾಗಿಯೂ, ಈ ಹೊರೆಯನ್ನು ಲಘುಗೊಳಿಸುವ ಬಗ್ಗೆ ಸಂಸ್ಥೆಯು ಪರಿಶೀಲನೆ ನಡೆಸಬೇಕೆಂದೂ ಅವರು ಸೂಚಿಸಿದರು.

ಸಭೆಯು ೬ ಗಂಟೆ ಕಾಲ ಬಹಿರಂಗ ಮತ್ತು ೧½ ಗಂಟೆಯು ಅಂತರಂಗ ಅಧಿವೇಶನದಲ್ಲಿ ಬಿಸಿಬಿಸಿ ಚರ್ಚೆ ನಡೆಸಿ, ಕಾರ್ಯಕಾರಿ ಸಮಿತಿಯು ಸೂಚಿಸಿದ್ದಂತೆ ಕಾಂಗ್ರೆಸ್ ಅಂಗ ರಚನೆಗೆ ತಿದ್ದುಪಡಿ ವಿಚಾರದ ಪರಿಶೀಲನೆಗಾಗಿ ಉಪ ಸಮಿತಿಯೊಂದನ್ನು ನೇಮಿಸಲು ಒಪ್ಪಿದುದಾಗಿ ವರದಿಯಾಗಿದೆ. ತಿದ್ದುಪಡಿ ಪ್ರಕಾರ ಪ್ರದೇಶ ಮತ್ತು ಜಿಲ್ಲಾ ಕಾಂ|| ಸಮಿತಿಗಳಿಗೆ ಪರೋಕ್ಷ ಚುನಾವಣೆ ನಡೆಸಲಾಗುವುದು ಕ್ರಿಯಾ ಸದಸ್ಯನ ಬಗ್ಗೆ ಹೊಸ ವಿವರಣೆ ಕೊಡಲಾಗಿದೆ.

ನೆಹರೂರವರು ಅಂತರಂಗ ಸಭೆಯಲ್ಲಿ ಭಾಷಣ ಮಾಡಿ ಕಾಂಗ್ರೆಸ್ಸಿನ ಅಂಗರಚನೆ ಬದಲಾವಣೆಗೆ ಒತ್ತಾಯಪಡಿಸಿದರು. ಈಗಿನ ಸ್ಥಿತಿಗೆ ತಕ್ಕಂತೆ ಬದಲಾವಣೆ ಮಾಡದಿದ್ದರೆ ಕಾಂಗ್ರೆಸ್ಸಿನ ಭವಿಷ್ಯವು ಮುಕ್ತಾಯವಾದಂತೆಯೇ ಎಂದು ಅವರು ಹೇಳಿದರು

ಎನ್ ವಿ. ಗಾಡ್ಗಿಲ್ಲರು ಮಾತನಾಡಿ, ಪರೋಕ್ಷ ಚುನಾವಣೆಯಿಂದ ನೈತಿಕ ಸ್ಥಿತಿಯು ಉತ್ತಮವಾಗುವುದರ ಬದಲು ಇನ್ನೂ ಕೀಳುಮಟ್ಟಕ್ಕಿಳಿಯುವುದೆಂದು ಹೇಳಿದರು.

ಅಧಿವೇಶನದಲ್ಲಿ ಮಂಡಿಸಲು ಕಾರ್ಯಕಾರಿ ಸಮಿತಿಯವರು ೧೮ ಅಂಶಗಳುಳ್ಳ ಆಹಾರ ಸ್ಥಿತಿ ಸುಧಾರಣೆ ಕಾರ್ಯಕ್ರಮವನ್ನು ಸಿದ್ಧಗೊಳಿಸಿದ್ದಾರೆ. ಆಹಾರ ಬೆಳೆಗೆ ಗೊಬ್ಬರದ ಬೆಲೆ ತಗ್ಗಿಸುವುದು, ಗ್ರಾಮಾಂತರದಲ್ಲಿ ಸಹಕಾರ ವ್ಯವಸಾಯ ಪದ್ಧತಿಯನ್ನು ವಿಶೇಷವಾಗಿ ಜಾರಿಗೆತರುವುದು, ಭೂ ಸುಧಾರಣೆಗಳನ್ನು ಶೀಘ್ರಗೊಳಿಸುವುದು ಇವೇ ಮುಂತಾದುವು ಅದರಲ್ಲಿ ಅಡಕವಾಗಿವೆ.

ದ್ವಿತೀಯ ಯೋಜನೆಯ ಕಾರ್ಯಗಳು ಅತ್ಯಂತ ಶಿಥಿಲ ಗತಿಯಿಂದ ಕೂಡಿರುವುದಾಗಿಯೂ, ಅವನ್ನು ಅಗತ್ಯವಾಗಿ ನಡೆಸಬೇಕೆಂದೂ ಕಾರ್ಯಕಾರಿ ಸಮಿತಿಯು ಸೂಚಿಸಿ, ಸರ್ಕಾರ ಮತ್ತು ಪ್ರಜೆಗಳು ಹಣ, ಪದಾರ್ಥ ಮುಂತಾದುವು ವ್ಯರ್ಥವಾಗುವುದನ್ನು ಆದಷ್ಟು ಕಡಿಮೆ ಮಾಡಬೇಕೆಂದು ತಿಳಿಸಿದೆ. ಯೋಜನೆಯನ್ನು ಶಕ್ತಿಗುಂದದಂತೆ ಮಾಡಬೇಕೆಂದೂ, ಕಾಂಗ್ರೆಸ್ಸಿನವರು ಯೋಜನೆಯ ಸಾರ್ಥಕ್ಯಕ್ಕಾಗಿ ಹೃತ್ಪೂರ್ವಕವಾಗಿ ಕೆಲಸ ಮಾಡಬೇಕೆಂದೂ ತಿಳಿಸಲಾಗಿದೆ.

ಪಾಕಿಸ್ತಾನದಿಂದ ಚಿನ್ನದ ಅಕ್ರಮ ಸಾಗಾಣಿಕೆಗಾರರ ಗುಂಪು

ಮಂತ್ರಿಗಳೂ ಸೇರಿರುವರೆಂಬ ಸಂಶಯ

ಪಾಕಿಸ್ತಾನದಿಂದ ಭಾರತಕ್ಕೆ ಅಕ್ರಮವಾಗಿ ಚಿನ್ನದ ಸಾಗಾಣಿಕೆ ಬಗ್ಗೆ ಭಾರತದಲ್ಲಿ ಅತ್ಯಂತ ದೊಡ್ಡ ಕೂಟವು ಇರುವುದೆಂದು ವರದಿಯಾಗಿದೆ. ಅದರಲ್ಲಿ ಮಂತ್ರಿಗಳೂ, ಉನ್ನತ ಸರ್ಕಾರಿ ಅಧಿಕಾರಿಗಳೂ ಇರುವರೆಂದೂ, ಈ ಚಟುವಟಿಕೆಗಳನ್ನು ತಡೆಗಟ್ಟಲು ಕೇಂದ್ರ ಅಬ್ಕಾರಿ ಮತ್ತು ರೆವಿನ್ಯೂ ಇಲಾಖೆಯವರಿಗೆ ಸಾಧ್ಯವಾಗದೆ ಅವರು ನಿಸ್ಸಹಾಯಕರಾಗಿರುವರೆಂದೂ ವರದಿಯಾಗಿದೆ. ಸೌರಾಷ್ಟ್ರವೇ ಈ ಕೂಟದ ಕೇಂದ್ರ ಸ್ಥಳವಾಗಿರುವುದೆಂದು ಹೇಳಲಾಗಿದೆ. ಕಾಂಬಾತ ಎಂಬಲ್ಲಿನ ಲೈಟ್ ಹೌಸಿಗೆ ಮೋಟಾರು ದೋಣಿಯಲ್ಲಿ ಚಿನ್ನವನ್ನು ತರಲಾಗುತ್ತಿರುವುದೆಂದೂ ಒಂದೊಂದು ದೋಣಿಯಲ್ಲಿ ೧೦-೧೫ ಮಣ ಚಿನ್ನವನ್ನು ಕಳ್ಳತನದಲ್ಲಿ ಕಳುಹಿಸಲಾಗುತ್ತಿರುವುದೆಂದೂ ಹೇಳಲಾಗಿದೆ ಈ ಮೋಸವನ್ನು ಪತ್ತೆ ಹಚ್ಚುವ ಪ್ರಯತ್ನವು ಯಶಸ್ವಿಯಾಗಿ, ಈ ಕಳ್ಳ ಸಾಗಾಣಿಕೆಗಾರರು ಕಾಂಗ್ರೆಸ್ ಸದಸ್ಯರಾಗಿ, ಸಂಸ್ಥೆಯ ನಿಧಿಗೆ ಭಾರಿ ಮೊತ್ತದ ಸಹಾಯ ಮಾಡಲಾರಂಭಿಸಿದರೆಂದೂ ಹೇಳಲಾಗಿದೆ. ಕಚ್ ಕೊಲ್ಲಿಯಲ್ಲಿ ಅಬ್ಕಾರಿ ಇಲಾಖೆಯವರ ತನಿಖೆಗೆ ಅವಕಾಶವಿಲ್ಲದಿರುವುದರಿಂದ ವಿದೇಶೀ ದೋಣಿಗಳನ್ನು ತಡೆಯುವಂತಿಲ್ಲವೆಂದು ಹೇಳಲಾಗಿದೆ.

ಪ್ರತಿ ಅಣು ಶಸ್ತ್ರ ಸಿಡಿತದಿಂದ ೫೦,೦೦೦ ಮಾನವರ ಮರಣ

ಪ್ರತಿ ಅಣು ಬಾಂಬಿನ ಪರೀಕ್ಷಾ ಸಿಡಿತದಿಂದ ೫೦,೦೦೦ ಜನರು ಮೃತಪಡುವುದಾಗಿ ವಿಶ್ವ ಆರೋಗ್ಯ ಸಂಸ್ಥೆಯ ಮಾಜಿ ಮುಖ್ಯಾಧಿಕಾರಿ ಡಾ|| ಬ್ರಾಕ್ ಚಿಸ್ಹೋಂರವರು ತಿಳಿಸಿರುತ್ತಾರೆ ಸಿಡಿತಗಳಿಂದ ಪ್ರಸರಿಸುವ ಕಣಗಳು ಕೂಡಲೇ ವ್ಯಾಪಿಸುವುದಿಲ್ಲವೆಂದೂ, ಅವು ಲುಕೇಮಿಯಾ ರೋಗಕ್ಕೆ ಸಾಮಾನ್ಯವಾಗಿ ದಾರಿ ಮಾಡಿಕೊಡುವುವೆಂದೂ ಅವರು ಹೇಳಿರುವರು.

ಭಾರತಕ್ಕೆ ೨೦೦೦ ಆಸ್ಟ್ರೇಲಿಯದ ವ್ಯಾಗನ್ನುಗಳು

ಆಸ್ಟ್ರೇಲಿಯವು ಭಾರತಕ್ಕೆ ೨,೦೦೦ ರೈಲು ವ್ಯಾಗನ್ನುಗಳನ್ನು ಕೊಲಂಬೊ ಯೋಜನೆಯ ಅಂಗವಾಗಿ ಕಳುಹಿಸಲಿದೆ. ಜುಲೈ ತಿಂಗಳೊಳಗೆ ೩೦೦ ವ್ಯಾಗನ್ನುಗಳನ್ನು ಕಳುಹಿಸಲಾಗುವುದು

ವಾರ ಭವಿಷ್ಯ

ತಾ॥ ೨-೬-೫೭ ರಿಂದ ೯-೬-೫೭ ರ ವರೆಗೆ

ಮೇಷ:—ಯಶ ಮತ್ತು ಆರೋಗ್ಯ ವೃದ್ಧಿ, ವ್ಯಾಪಾರ ವ್ಯವಹಾರಗಳು ಲಾಭಕರ, ನೂತನ ಉದ್ಯಮಕ್ಕೆ ಸಕಾಲ, ನೌಕರರಿಗೆ ಪ್ರಶಂಸೆ, ಪ್ರವಾಸ ಜಯಪ್ರದ.

ವೃಷಭ:—ಆನಂದ, ಯಶ ಮತ್ತು ಭಾಗ್ಯಾಭಿವೃದ್ಧಿ, ಶತ್ರು ವರ್ಗದವರ ಸೋಲು, ಕೋರ್ಟು ವ್ಯವಹಾರದಲ್ಲಿ ಜಯ, ವ್ಯಾಪಾರವ್ಯವಹಾರಗಳಿಗೆ ಉತ್ತಮ, ಪ್ರವಾಸ ಯೋಗ

ಮಿಥುನ:—ಧೈರ್ಯ ಸಾಹಸದಿಂದ ಜಯ ಆರ್ಥಿಕ ಮುಗ್ಗಟ್ಟು ಇದ್ದರೂ ವ್ಯಯ ಕಡಿಮೆ, ಆರೋಗ್ಯ ನೆಟ್ಟಗೆ, ಮಾನಸಿಕ ಶಾಂತಿ, ಸಂಚಾರ ಬೇಡ, ವ್ಯಾಪಾರಿಗಳಿಗೆ ಎಚ್ಚರಿಕೆ

ಕಟಕ:—ಅನಾರೋಗ್ಯ, ಅತೃಪ್ತಿ, ಅಶಾಂತಿ ಅಧಿಕ ವ್ಯಯ, ಋಣಬಾಧೆ ಮಿತ್ರದ್ರೋಹ, ಶತ್ರು ಕಾಟ, ಉದ್ಯೋಗಿಗಳಿಗೆ ಜಿಗುಪ್ಸೆ.

ಸಿಂಹ ಮಾನಸಿಕ ಶಾಂತಿ, ಸಾಂಪತ್ತಿಕಾಭಿವೃದ್ಧಿ, ಉದ್ಯೋಗಿಗಳ ಪ್ರಗತಿ ಸಾಧನೆ, ಆರೋಗ್ಯ ನೆಟ್ಟಗೆ, ಪ್ರವಾಸದಲ್ಲಿ ಜಯ

ಕನ್ಯಾ:—ಕೆಲಸಕಾರ್ಯಗಳ ಸಿದ್ಧಿ ನೂತನ ಜನರ ಸಖ್ಯ ಉದ್ಯೋಗಿಗಳಿಗೆ ಸದವಕಾಶ, ಪ್ರವಾಸ ಸುಖಕರ.

ತುಲಾ:—ಕಾರ್ಯ ಪರಿಪೂರ್ಣ, ಆರ್ಥಿಕ, ಆರೋಗ್ಯ, ವ್ಯಾಪಾರ ಸ್ಥಿತಿ ಉತ್ತಮ, ಸಂಚಾರದಿಂದ ಲಾಭ, ನೌಕರರಿಗೆ ಪ್ರಶಂಸೆ, ಧನಾಗಮ, ಶುಭ ವಾರ್ತೆ.

ವೃಶ್ಚಿಕ:—ವ್ಯವಹಾರಗಳ ಬಗ್ಗೆ ಜಾಗರೂಕತೆ ಇರಲಿ, ಸ್ಥಾನಮಾನ ಲಭ್ಯ, ವ್ಯವಹಾರದಿಂದ ಲಾಭ, ಪ್ರವಾಸ ಯೋಗ, ಆರೋಗ್ಯ ನೆಟ್ಟಗೆ

ಧನು:—ಹಿಡಿದ ಕಾರ್ಯ ಜಯ, ಶತ್ರು ಪರಿಹಾರ, ವ್ಯಾಪಾರ ಮತ್ತು ಕೋರ್ಟು ಕಾರ್ಯ ಜಯ, ನೌಕರರಿಗೆ ಅನುಕೂಲ, ಪ್ರವಾಸ ಜಯಪ್ರದ

ಮಕರ.—ದೈವ ಬಲವಿಲ್ಲ, ವ್ಯಾಪಾರವ್ಯವಹಾರದಲ್ಲಿ ಲಾಭವಿಲ್ಲ. ವೃಥಾ ಅಲೆದಾಟ, ಮನೋ ಬಾಧೆ, ಹೊಸ ಉದ್ಯಮ ಬೇಡ, ಪ್ರವಾಸ ಕೈಗೊಳ್ಳಬೇಡಿ.

ಕುಂಭ - ಎಚ್ಚರಿಕೆಯಿಂದ ವ್ಯವಹರಿಸಿದರೆ ವ್ಯಾಪಾರ, ಸಂಚಾರ, ಮುಂತಾದುವಲ್ಲಿ ಪ್ರಗತಿ. ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತಿ, ನೌಕರರಿಗೆ ಬಡ್ತಿ.

ಮೀನ:—ಅನಿರೀಕ್ಷಿತ ಘಟನೆಗಳಿಂದ ಉತ್ತಮ ಭಾಗ್ಯ, ಸ್ಥಾನಮಾನ ಹೆಚ್ಚುವುದು, ಇತರರಿಂದ ನಿಮ್ಮ ಸಹಾಯದ ನಿರೀಕ್ಷಣೆ, ವ್ಯಾಪಾರಾಭಿವೃದ್ಧಿ, ಸಂತೋಷ.

ಇಂಡಿಯಾ ಕಾಫಿ ಹೌಸುಗಳ ವಿಸರ್ಜನೆ

ಭಾರತದ ಕಾಫಿ ಬೋರ್ಡಿನ ಆಶ್ರಯದಲ್ಲಿ ಏರ್ಪಾಡಾಗಿದ್ದ ಕಾಫಿ ಹೌಸುಗಳನ್ನು ಮುಚ್ಚಲಾಗುವುದೆಂದು ವರದಿಯಾಗಿದೆ ಅವುಗಳು ಈಗ ನೌಕರರಿಗೇ ಮಾರಲ್ಪಡುತ್ತವೆ ... ಸ್ಥಳಗಳಲ್ಲಿ ಕಾಫಿ ಪುಡಿಯನ್ನು ಮಾರಲಾಗುವುದು. ಚಲಿಸುವ ವಾಹನಗಳಲ್ಲಿ ಮನೆಗಳ ಮುಂದೆ ಪ್ರದರ್ಶನ ನಡೆಸಲು ಬೋರ್ಡಿನವರು ಆಲೋಚಿಸುತ್ತಾರೆ.

Globe Tutorial College

Sadvidya Patasala Buildings,
Offers Excellent Coaching for
S. S. L. C. and INTER Students

ಶ್ರೀ ಜಗದಂಬಾ ಶಿಶು ವಿಹಾರ

ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜ ಕಳೆದನಂತರ ಮೇಲ್ಕಂಡ ಶಿಶುವಿಹಾರದ ತರಗತಿಗಳು ಇದೇ ೧೦ನೇ ತಾರೀಕಿನಿಂದ ಆರಂಭವಾಗಿವೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ಎಂದಿನಂತೆ ಕಳುಹಿಸಿ ಪ್ರಯೋಜನ ಹೊಂದುವುದರ ಮೂಲಕ ಪ್ರೋತ್ಸಾಹ ನೀಡಬೇಕಾಗಿ ಕೋರಲಾಗಿದೆ

ಬಾಲಕಿಯರ ಹೊಸ ಪ್ರೌಢಶಾಲೆ

ನಗರದಲ್ಲಿ ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸಿಟಿ ಟ್ಯುಟೋರಿಯಲ್ ಕಾಲೇಜು ಸಂಸ್ಥೆಯ ಆಶ್ರಯದಲ್ಲಿ ಪ್ರತ್ಯೇಕವಾದ ಪ್ರೌಢಶಾಲೆಯೊಂದನ್ನು ತೆರೆಯಲಾಗಿದೆ. ಮಹಿಳಾ ಪದವೀಧರರೂ, ಇತರರೂ ಸೇವೆ ಸಲ್ಲಿಸಲು ಮುಂದೆ ಬಂದಿದ್ದಾರೆ ಮೊದಲನೆಯ ವರ್ಷದ ತರಗತಿಯನ್ನು ಜೂನ್ ೨ನೆಯ ವಾರದಲ್ಲಿ ಪ್ರಾರಂಭಿಸಲಾಗುವುದು. ಸಾಕಷ್ಟು ವಿದ್ಯಾರ್ಥಿನಿಯರು ಬಂದ ಪಕ್ಷದಲ್ಲಿ ಎರಡು ಮತ್ತು ಮೂರನೇ ತರಗತಿಗಳನ್ನೂ ಸಹ ತೆರೆಯಲಾಗುವುದು ಅಲ್ಲದೆ ಸಂಗೀತ, ಹೊಲಿಗೆ ಮುಂತಾದುವುಗಳನ್ನೂ ಹೇಳಿಕೊಡುವ ಏರ್ಪಾಡು ಮಾಡಿದೆ ತರಗತಿಗಳು ಸಧ್ಯದಲ್ಲಿ ವಾಣೀವಿಲಾಸ ಮಾರ್ಕೆಟ್ ಬಳಿ ಸಿ ಟಿ ಸಿಯ ಕಟ್ಟಡದಲ್ಲಿ ಮಧ್ಯಾಹ್ನ ೧೨ ರಿಂದ ಸಂಜೆ ೫ ರವರೆಗೆ ನಡೆಯುವುವು. ಪೋಷಕ ಮಹಾಶಯರು ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ಪ್ರಿನ್ಸಿಪಾಲ್ ಬಿ ಕೆ ಸತ್ಯಬೋಧಾಚಾರ್ ರವರು ತಿಳಿಸಿರುತ್ತಾರೆ.

ಜಪಾನಿನಲ್ಲಿ ಲಕ್ಷ ಮಕ್ಕಳಿಗೆ ಇನ್ ಫ್ಲುಯೆಂಜಾ

ಜಪಾನಿನಲ್ಲಿ ೧ ಲಕ್ಷ ಮಕ್ಕಳಿಗೆ ಇನ್ಫ್ಲುಯೆಂಜಾ ವ್ಯಾಧಿಯು ತಗಲಿ, ಅದು ಕಡಿಮೆಯಾಗುವ ಸೂಚನೆಗಳು ಕಾಣುಬಂದಿಲ್ಲವೆಂದು ವರದಿಯಾಗಿದೆ ವಿದ್ಯಾರ್ಥಿಗಳು ಪ್ರವಾಸ ಹೋಗದಂತೆ ನಿರ್ಬಂಧಿಸಲಾಗಿದೆ ಆದರೆ ಯಾರೂ ಮಡಿದಿಲ್ಲವೆಂದೂ ಹೇಳಲಾಗಿದೆ ಇಂಡೋನೇಷ್ಯದ ದಕ್ಷಿಣ ಸೆಲಿಬಿಸ್ ದ್ವೀಪದ ೨,೦೦೦ ಮಂದಿಗೆ ವ್ಯಾಧಿ ತಗುಲಿ ೬ ಜನರು ಮೃತಪಟ್ಟಿರುವರು

ಗಯೆಯಲ್ಲಿ ಬಿಸಿಲು ತಾಪದಿಂದ ೩ ಜನರ ಮರಣ

ಬಿಸಿಲು ತಾಪವನ್ನು ತಾಳಲಾರದೆ ಗಯೆಯಲ್ಲಿ ಮೂವರು ಮೃತಪಟ್ಟಿರುತ್ತಾರೆ ಅಲ್ಲಿ ೧೧೫ ಡಿಗ್ರಿ ಉಷ್ಣಾಂಶವಿದೆ ಇದುವರೆಗೆ ಆಗಿರುವ ಈ ಶಾಖೆಯ ಮರಣಗಳ ಸಂಖ್ಯೆ ೯

ವನಿತಾ ಸದನದಲ್ಲಿ ಶಾಂತಿ ಸಮ್ಮೇಳನದ ಪ್ರತಿನಿಧಿಯ ಭಾಷಣ

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಶಾಂತಿ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಬಂದಿದ್ದ ಶ್ರೀಮತಿ ಸೋಹೇಲ್ ರೈಖಿಯವರು ಕಳೆದ ಬುಧವಾರ ನಗರದ ವನಿತಾ ಸದನಕ್ಕೆ ಭೇಟಿ ಕೊಟ್ಟು ವಿಶ್ವಶಾಂತಿಯ ವಿಚಾರವಾಗಿ ಭಾಷಣ ಮಾಡಿದರು. ಪ್ರಾರ್ಥನೆ ಮತ್ತು ಸ್ವಾಗತಾನಂತರ ಶ್ರೀ ಸೋಮಸುಂದರ ಶರ್ಮರವರು ಭಾಷಣಕಾರ ಸೋಹೇಲ್ ರೈಖಿಯವರ ಪರಿಚಯ ಮಾಡಿಕೊಟ್ಟರು ಶ್ರೀಮತಿ ಸೋಹೇಲ್ ರೈಖಿಯವರು ಅಣು ಬಾಂಬುಗಳಿಂದ ಆಗುವ ಅನರ್ಥವನ್ನೂ, ಶಾಂತಿ ಚಳುವಳಿಯ ಧ್ಯೇಯವನ್ನೂ ವಿವರಿಸಿ, ವಿಶ್ವಶಾಂತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೆಂದೂ, ಮಾನವ ಕಲ್ಯಾಣಕ್ಕಾಗಿ ಎಲ್ಲರೂ ಸಹಕರಿಸಬೇಕೆಂದೂ ಹೇಳಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಗುಂಡ್ಲುಪೇಟೆ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷತೆ

ಕಳೆದ ೨೮ನೇ ತಾರೀಕಿನ ಸಾಧ್ವಿ ಪತ್ರಿಕೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷತೆ ಎಂಬ ಶಿರೋನಾಮೆಯಲ್ಲಿ ಪ್ರಕಟವಾದ ಸುದ್ದಿ ಬಗ್ಗೆ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಶ್ರೀ ಜಿ ವಿ ಕೃಷ್ಣಮೂರ್ತಿಯವರು ಪತ್ರ ಬರೆದು ಕಾಂಗ್ರೆಸ್ ವಿರುದ್ಧವಾಗಿ ತಾವು ಕೆಲಸ ಮಾಡಿದರೆಂಬ ಕಾರಣಕ್ಕಾಗಿ ಉಪಾಧ್ಯಕ್ಷರನ್ನು ಅಧ್ಯಕ್ಷರನ್ನಾಗಿ ಆರಿಸಿದೆ ಎಂದು ಬರೆದಿರುವುದಾಗಿಯೂ, ಈ ವಿಚಾರವನ್ನು ತಮಗೆ ತಿಳಿಸಿ ಸಮಜಾಯಿಷಿ ಪಡೆದಿಲ್ಲವೆಂದೂ, ಹಾಗೆ ಮಾಡಿದ ತೀರ್ಮಾನ ಕೊಡಲು ಸಮಿತಿಗೆ ಅಧಿಕಾರವಿಲ್ಲವೆಂದೂ ಹೇಳಿರುತ್ತಾರೆ ಸಮಿತಿಯವರು ಮಾಡಿರುವುದು ಸ್ವೇಚ್ಛಾಪ್ರವೃತ್ತಿಯ ಸರ್ವಾಧಿಕಾರದ ಕೆಲಸವಾಗಿರುವುದೆಂದೂ, ಹೈಕಮಾಂಡಿನಿಂದ ತಮಗೇನೂ ಈ ವಿಚಾರವಾಗಿ ಸೂಚನೆ ಬಂದಿಲ್ಲವೆಂದೂ ಅವರು ಹೇಳಿ, ಸಾರ್ವಜನಿಕರು ಸಮಿತಿಯವರ ನಡವಳಿಕೆಯನ್ನು ಗಮನಿಸಬಾರದೆಂದು ಕೋರಿ, ತಾವೇ ಅಧ್ಯಕ್ಷರಾಗಿ ಮುಂದುವರಿಯುತ್ತಿರುವುದಾಗಿಯೂ ತಿಳಿಸಿರುತ್ತಾರೆ

ಬೊಂಬಾಯಿಯಲ್ಲಿ ೨೦,೦೦೦ ಮಂದಿಗೆ ಶೀತಜ್ವರ

ಕಳೆದ ೨೧ನೇ ತಾರೀಕಿನಿಂದ ಬೊಂಬಾಯಿಯಲ್ಲಿ ೨೦,೦೦೦ ಮಂದಿ ಇನ್ಫ್ಲುಯೆಂಜಾದಿಂದ ನರಳುತ್ತಿರುವರೆಂದು ಗೊತ್ತಾಗಿದೆ

ಮಳೆಯಿಂದ ತೊಂದರೆಗೊಳಗಾದವರಿಗೆ ಸೂಚನೆ

ಮೈಸೂರು ಜಿಲ್ಲೆಯಲ್ಲಿ ಅನಿರೀಕ್ಷಿತವಾಗಿ ಬಂದ ಅಧಿಕ ಮಳೆಯಿಂದ ಕೆರೆಕಟ್ಟೆಗಳು ಒಡೆದು, ರಸ್ತೆಗಳು ಕೆಟ್ಟುಹೋಗಿರುವುದಲ್ಲದೆ ವಾಸದ ಮನೆಗಳು ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದಾಗಿ ವರದಿಗಳು ಬರುತ್ತಿವೆಯೆಂದೂ, ತೊಂದರೆಗೆ ಒಳಗಾಗಿರುವ ಗ್ರಾಮಸ್ಥರು ತಮ್ಮ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಆಗಬೇಕಾದ ಪರಿಹಾರ ಕಾರ್ಯವನ್ನು ಜಿಲ್ಲಾ ಕಾಂಗ್ರೆಸ್ ಸಮಿತಿಯವರಿಗೆ ತಿಳಿಯಪಡಿಸಿದರೆ, ಈ ಬಗ್ಗೆ ಸರಕಾರದಲ್ಲಿ ಒತ್ತಾಯ ಮಾಡಲು ಪ್ರಯತ್ನಿಸಲಾಗುವುದೆಂದೂ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಡಿ ಸೂರ್ಯನಾರಾಯಣರವರು ತಿಳಿಸಿರುತ್ತಾರೆ

ಉಪನಯನ

ನಗರದ ಡಾ॥ ಬಿ ಕೃಷ್ಣಪ್ಪನವರು ತಮ್ಮ ಕುಮಾರ ಚಿ॥ ಸ॥ ರಾಮಮೂರ್ತಿಗೆ ಮೊನ್ನೆ ಬ್ರಹ್ಮೋಪದೇಶವನ್ನು ನೆರವೇರಿಸಿದರು

GRAND ATTRACTION
GROUP & FLASH PHOTOGRAPHS
Role Films, Developing, Printing & Enlarging Undertaken
'SRI KANTH STUDIO'
Near Prabha Talkies
MYSORE
Your Children's Card size Photo Re One only

ಪೆಸಿಫಿಕ್ಕಿನಲ್ಲಿ ಮತ್ತೆ ಬ್ರಿಟನ್ನಿನ ಅಣು ಬಾಂಬು ಸಿಡಿತ

ಬ್ರಿಟನ್ನು ತನ್ನ ಎರಡನೇ ಜಲಜನಕ ಬಾಂಬನ್ನು ಪೆಸಿಫಿಕ್ ಪ್ರದೇಶದಲ್ಲಿ ಮೊನ್ನೆ ಸಿಡಿಸಿತೆಂದು ವರದಿಯಾಗಿದೆ. ಅದು ಹಿಂದೆ ನಡೆಸಲಾದ ಸಿಡಿತಕ್ಕಿಂತ ಭಾರಿಯಾಗಿತ್ತು.

ಬಿ ಇ ಸ್ ಪ ಂ ದ್ಯ

ಕಾಸ್ಮಾಪಾಲಿಟನ್ ಕ್ಲಬ್ಬಿನ ಮೋಸ್ ಓರಿಯೆಂಟ್ಸ್ ಪಂದ್ಯಗಳ ಪ್ರವೇಶವನ್ನು ನಾಳೆ ಸಂಜೆ ೫ ಗಂಟೆವರೆಗೆ ಸ್ವೀಕರಿಸಲಾಗುವುದು ೫ನೇ ತಾರೀಕು ಪಂದ್ಯವು ಆರಂಭವಾಗಲಿದೆ. ಮಹಿಳೆಯರ ಪಂದ್ಯಕ್ಕೆ ತಕ್ಕಷ್ಟು ಟೀಮುಗಳು ಬಾರದೆ ಅದನ್ನು ರದ್ದುಪಡಿಸಲಾಗಿದೆ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ಸಮೂನೆಗಳ ಗಡಿಯಾರಗಳು ಮತ್ತು ಕನ್ನಡಕಗಳು ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 1911)

COACHING SECTION
Dalvoy High School, Mysore

Very Moderate Fees
Morning Class
Excellent Coaching for S. S. L. C. Students appearing for September Examination (1957) Join Immediately. Further particulars from.

H. S. Ananthachar
Secretary

WANTED immediately a Lady Receptionist Must be very good in English Knowledge of Typing preferred Decent Salary. Apply to:—

Tourist Bureau
J. M Palace Road,
Mysore
Phone No. 574

Sri. B N. Narayanarao B Sc (Hons) F.R.H.S, Sr. Lecturer in Botany 4605. N R. Mohalla: Mysore writes..

I write to state that the simple and direct medicine which you had administered to me, has brought down my sufference from Bronchial Allergic Asthma to about 30 per cent I request you kindly to send another tin of the same medicine to be used for this month. Thanking you.

The following medicines are available:—

Asthma	(for one course)	Rs 5
Fits	,,	Rs. 5
Diabitis	,,	Rs. 3-

Postage, packing, etc. extra
Re 1 advance essential. Balance through V. P. P.

D K. Ramachandra Iyer,
905/113, Sixth Cross,
Fourth Main,
Vidyaranyapura, Mysore

ಬಾಲಕಿಯರಿಗಾಗಿ ಹೊಸ ಪ್ರೌಢಶಾಲೆ

C. T. C. ಹಳೇ ಅಗ್ರಹಾರ, ಮೈಸೂರು

★ 6-6-57 ನೇ ಗುರುವಾರದಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದು
★ ಜೂನ್ ಎರಡನೇ ವಾರದಲ್ಲಿ H S I Year ತರಗತಿ ಪ್ರಾರಂಭ.
★ ಉತ್ತಮ ವಾತಾವರಣ—ಅನುಭವಸ್ಥ ಉಪಾಧ್ಯಾಯರು
★ 12 ರಿಂದ 5 ರ ವರೆಗೆ ಕ್ರಮವಾದ ಪಾಠಗಳು.

ಬಿ ಕೆ. ಸತ್ಯಬೋಧಾಚಾರ್, ಎಂ ಎ, ಬಿ ಟಿ



ನವೀನ ಮಾದರಿ ಗಡಿಯಾರಗಳಿಗೆ

ಫೇವರ್ ಲ್ಯೂಬಾ, ವೆಸ್ಟೆಂಡ್, ಸೈಮಾ, ರೋಮರ್ ಇತ್ಯಾದಿ, ಇತ್ಯಾದಿ

ರಾಂ ಪತಂಗೆ ಕಂಪೆನಿ,
ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

Edited, Printed and Published by A. R. Nagarajan at Sadhvi Press D. Subbiah Road, Mysore

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ವಿವರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 2 ನಯೆ ಪೈಸೆ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಪುಟ : ೧೫] SADHVI : TUESDAY 4—6—1957 ಮೈಸೂರು ಮಂಗಳವಾರ ೪—೬—೧೯೫೭ [ಸಂಚಿಕೆ : ೩೦೬

ಬಾಗ್ದಾದ್ ಮಿಲಿಟರಿ ಒಪ್ಪಂದದ ಕೂಟಕ್ಕೆ ಅಮೆರಿಕಾ

ಬೆಂಗಳೂರಿನಲ್ಲಿ ೯೨ ಮಂದಿಗೆ ಇನ್‌ಫ್ಲುಯೆಂಜಾ

ಸಾಂಕ್ರಾಮಿಕ ಜಾಡ್ಯವೆಂದು ಸರ್ಕಾರದ ಘೋಷಣೆ

ಬೆಂಗಳೂರು ೪

ಈ ನಗರದಲ್ಲಿ ಇದುವರೆಗೆ ೯೨ ಮಂದಿಗೆ ಇನ್‌ಫ್ಲುಯೆಂಜಾ ವ್ಯಾಧಿಯು ತಗಲಿದೆ ೧೧ ಜನರನ್ನು ಅಂಟು ರೋಗದ ಆಸ್ಪತ್ರೆಗೆ ಸೇರಿಸಲಾಗಿದೆ

ಸರ್ಕಾರದವರು ಈ ರೋಗವನ್ನು ಸಾಂಕ್ರಾಮಿಕ ಜಾಡ್ಯವೆಂದು ಘೋಷಿಸಿರುತ್ತಾರೆ ಕೋಲಾರದಲ್ಲೂ ಸಹಾ ಈ ವ್ಯಾಧಿಯು ಹರಡಿರುವುದಾಗಿ ವರದಿಯಾಗಿದೆ.

೧೦,೦೦೦ ಸಹಕಾರ ವ್ಯವಸಾಯ ಕ್ಷೇತ್ರಗಳ ನಿರ್ಮಾಣಕ್ಕೆ ಕರೆ

ಭಾರತದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಸಹಕಾರ ವ್ಯವಸಾಯವನ್ನು ಜಾರಿಗೆ ತರುವುದು ಅಗತ್ಯವೆಂದು ಚೀಣಕ್ಕೆ ತೆರಳಿದ್ದ ಭಾರತದ ನಿಯೋಗದವರು ತಿಳಿಸಿರುತ್ತಾರೆ ಬರುವ ೪ ವರ್ಷಗಳಲ್ಲಿ ೫೦ ಹಳ್ಳಿಗಳಿಗೆ ಒಂದರಂತೆ ಒಟ್ಟು ೧೦,೦೦೦ ಸಹಕಾರ ವ್ಯವಸಾಯ ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ನಿಯೋಗದವರು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ

ಮತ್ತೆ ಪಡಿತರವನ್ನು ತರುವುದಿಲ್ಲ ಎಂದು ಕೇಂದ್ರ ಮಂತ್ರಿ ಹೇಳಿಕೆ

ಆಹಾರದ ಪಡಿತರ ಪದ್ಧತಿಯನ್ನು ಪುನಃ ಜಾರಿಗೆ ತರುವ ಯೋಚನೆಯೇ ಇಲ್ಲವೆಂದು ಕೇಂದ್ರ ಆಹಾರ ಮಂತ್ರಿ ಅಜಿತ ಪ್ರಸಾದ ಜೈನ್‌ರವರು ಲೋಕ ಸಭೆಯಲ್ಲಿ ತಿಳಿಸಿರುತ್ತಾರೆ. ತಾವು ಪಡಿತರವನ್ನು ಒಪ್ಪುವುದಿಲ್ಲವೆಂದೂ, ಅದನ್ನು ಪ್ರತಿಭಟಿಸುವುದಾಗಿಯೂ ಅವರು ಹೇಳಿರುವರು

ಬೀಡಿ ಕೆಲಸಗಾರರ ಉಪವಾಸ ಸತ್ಯಾಗ್ರಹ

ನಗರದ ಷೀರ್, ಯೂನಿಯನ್ ಮತ್ತು ಜಹಾಂಗೀರ್ ಬೀಡಿ ಕಾರ್ಖಾನೆಗಳ ಮಾಲೀಕರು ಕಳೆದ ವರ್ಷ ೪ ಹಬ್ಬದ ದಿನಗಳ ವೇತನವನ್ನು ಕಾರ್ಮಿಕರಿಗೆ ಕೊಡದಿರುವುದಕ್ಕಾಗಿ ಪ್ರತಿಭಟಿಸಲು ಕಾರ್ಖಾನೆಗಳ ಮುಂದೆ ಉಪವಾಸ ಸತ್ಯಾಗ್ರಹ ನಡೆಸಲು ಬೀಡಿ ಕೆಲಸಗಾರರ ಸಂಘದವರು ನಿರ್ಧರಿಸಿರುತ್ತಾರೆ

ನಗರದಲ್ಲಿ ಆರೋಗ್ಯ ಸಚಿವರುಗಳ ಸಮ್ಮೇಳನ

ಈ ತಿಂಗಳು ಕಡೆಯ ಭಾಗದಲ್ಲಿ ಸಂಸ್ಥಾನಗಳ ಆರೋಗ್ಯ ಸಚಿವರ ಸಮ್ಮೇಳನವು ನಗರದಲ್ಲಿ ಜರುಗುವುದು. ಕೇಂದ್ರ ಆರೋಗ್ಯ ಮಂತ್ರಿ ಶ್ರೀ ಡಿ. ಪಿ. ಕರಮರ್ಕರ್‌ರವರು ಅಧ್ಯಕ್ಷತೆ ವಹಿಸುವರು

ಬೆಟ್ಟದಲ್ಲಿ ಆತ್ಮಹತ್ಯೆ

ಚಾಮುಂಡಿ ಬೆಟ್ಟದ ಮೇಲೆ ೪೦೦ನೇ ಮೆಟ್ಟಿಲಿನ ಸಮೀಪದಲ್ಲಿ ಒಂದು ಮರಕ್ಕೆ ಅಪರಿಚಿತನೊಬ್ಬನು ನೇಣು ಬಿಗಿದುಕೊಂಡಿರುವುದು ಪತ್ತೆಯಾಗಿದೆ. ಇದು ಆತ್ಮಹತ್ಯೆ ಪ್ರಕರಣವೆಂದು ಭಾವಿಸಲಾಗಿದೆ

ಬಿ.ಎಸ್‌ಸಿ. ರ್‍ಯಾಂಕುಗಳು

ಮೈಸೂರು ೪

ವಿಶ್ವವಿದ್ಯಾಲಯದ ಬಿ.ಎಸ್‌ಸಿ. ಪರೀಕ್ಷೆಗಳಲ್ಲಿ ಕೆಳಗೆ ಕಂಡಂತೆ ರ್‍ಯಾಂಕುಗಳು ಬಂದಿವೆ:-

೧ನೇ ಭಾಗ ೧ ಮಹಾರಾಜಾ ಕಾಲೇಜಿನ ಶ್ರೀ ಹೆಚ್ ಎ ರಾಮಕೃಷ್ಣ, ೨ ಸೇಂಟ್ ಜೋಸೆಫ್‌ನ ಎ ಎಸ್ ಕೃಷ್ಣಮೂರ್ತಿ, ೩ ಸೆಂಟ್ರಲ್ ಕಾಲೇಜಿನ ಕೆ ಆರ್ ಬಿಷ್ಣೋಯ್ ಖಾನ್; ೪ ಯುವರಾಜಾ ಕಾಲೇಜಿನ ಎಸ್. ಆರ್ ಮಾಧವರ್ ಮತ್ತು ಮೌಂಟ್ ಕಾರ್ಮೆಲ್‌ನ ಶ್ರೀಮತಿ ನಳಿನಾ ಮುಜುಮ್ದಾರ್ ೬ ನ್ಯಾಷನಲ್ ಕಾಲೇಜಿನ ಬಿ ಶ್ರೀನಿವಾಸಮೂರ್ತಿ, ೭ ಸೇಂಟ್ ಜೋಸೆಫ್‌ನ ಬರ್ನಡೆಟ್ ದತ್ತಾತ್ರೇಯ ಮತ್ತು ನ್ಯಾಷನಲ್ ಕಾಲೇಜಿನ ಎಸ್ ಎಸ್ ಕುರುಪದ್, ೭ ಸೇಂಟ್ ಜೋಸೆಫ್‌ನ ಎಂ ಆನಂದರಾವ್, ೮ ತುಮಕೂರಿನ ಬಿ ಎಸ್ ಯೋಗಾನರಸಿಂಹ, ೯ ಶಿವಮೊಗ್ಗದ ಇಂಟರ್ ಕಾಲೇಜಿನ ಆರ್ ರಂಗನಾಥ್ ಮತ್ತು ಮಹಾರಾಜಾ ಕಾಲೇಜಿನ ಹೆಚ್ ಶ್ರೀಕಂಠ ಮತ್ತು ೧೦ ಸೆಂಟ್ರಲ್ ಕಾಲೇಜಿನ ಆರ್. ಚಂದ್ರಶೇಖರ್ ಮತ್ತು ಮಹಾರಾಜಾ ಕಾಲೇಜಿನ ಪಿ ರಂಗರಾಜನ್.

ವೀರಶೈವ ವಿದ್ಯಾರ್ಥಿನಿಲಯಕ್ಕೆ ಸೇರುವವರಿಗೆ ಸೂಚನೆ

ನಗರದ ವೀರಶೈವ ಸಜ್ಜನ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯವು ಬರುವ ತಿಂಗಳು ೧ನೇ ತಾರೀಕಿನಿಂದ ಆರಂಭವಾಗುವುದು ಬಡ ವೀರಶೈವ ವಿದ್ಯಾರ್ಥಿಗಳು ಈ ತಿಂಗಳು ೨೫ ರೊಳಗಾಗಿ ಸೇರಲು ಅರ್ಜಿಗಳನ್ನು ಸಂಘದ ಅಧ್ಯಕ್ಷ ಶ್ರೀ ಎಂ ಎಲ್ ನಾಗಣ್ಣನವರಿಗೆ ಸಲ್ಲಿಸಬಹುದು ೧೫ ನಯೆ ಅಂಚೆ ಸ್ಟ್ಯಾಂಪು ಕಳುಹಿಸಿ ಅರ್ಜಿ ಫಾರಂ ಅನ್ನು ತರಿಸಿಕೊಳ್ಳಬಹುದು.

ಜಿಲ್ಲಾಧಿಕಾರಿಗಳ ವರ್ಗಾವರ್ಗಿ

ಬೆಂಗಳೂರು ೩

ಮೈಸೂರು ಜಿಲ್ಲಾ ಬೋರ್ಡಿನ ಮುಖ್ಯಾಧಿಕಾರಿಗಳಾದ ಶ್ರೀ ಬಿ. ಎಸ್ ನಂಜುಂಡೇಗೌಡರನ್ನು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾಗಿ ವರ್ಗಾಯಿಸಲಾಗಿದೆ ಅಲ್ಲಿರುವ ಶ್ರೀ ಎಂ. ಡಿ ಶಿವನಂಜಪ್ಪನವರು ಉನ್ನತ ತರಬೇತಿಗಾಗಿ ಹೋಗುವರು.

ಬೆಳಗಾವಿಯ ಕಲೆಕ್ಟರ್ ಶ್ರೀ ಎಂ. ಡಬ್ಲ್ಯೂ ಶೇಷಾದ್ರಿರವರನ್ನು ಮೈಸೂರು ಗೃಹ ನಿರ್ಮಾಣ ಸಮಿತಿ ಅಧ್ಯಕ್ಷರೂ ಮತ್ತು ಮುಜರಾಯಿ ಮತ್ತು ಧಾರ್ಮಿಕ ಸಂಸ್ಥೆಗಳ ಕಮಿಷನರೂ ಆಗಿ ನೇಮಿಸಲಾಗಿದೆ.

ರಜದ ಮೇಲಿರುವ ಶ್ರೀ ಎಂ ಎಸ್. ಶಂಕರರಾಯರನ್ನು ರಾಯಚೂರು ಜಿಲ್ಲಾಧಿಕಾರಿಗಳಾಗಿ ವರ್ಗಾಯಿಸಿದೆ. ಅಲ್ಲಿರುವ ಶ್ರೀ ಕೆ. ಆರ್ ರಾಮಚಂದ್ರರವರು ಬೆಳಗಾವಿಯ ಕಲೆಕ್ಟರಾಗುವರು

ತುಮಕೂರು ಜಿಲ್ಲಾಧಿಕಾರಿಗಳಾದ ಶ್ರೀ ಕೆ ನರಸಿಂಹಯ್ಯಂಗಾರ್ಯರನ್ನು ಕಾರವಾರ ಜಿಲ್ಲೆಗೂ, ಬಿಜಾಪುರದ ಕಲೆಕ್ಟರ್ ಶ್ರೀ ಕೆ. ಎ ವಾಲ್ವೇಕರ್‌ರವರನ್ನು ತುಮಕೂರಿಗೂ ವರ್ಗಾಯಿಸಲಾಗಿದೆ

ಬಾಗ್ದಾದ್ ಮಿಲಿಟರಿ ಕೂಟಕ್ಕೆ ಅಮೆರಿಕದ ಪ್ರವೇಶ

ಪಾಕಿಸ್ತಾನದ ಪ್ರಧಾನಿಯಿಂದ ಐಸನ್ ಹೋವರ್ ನೆರವು ಯೋಜನೆಯ ಪ್ರಶಂಸೆ

೫ ದೇಶಗಳಿರುವ ಬಾಗ್ದಾದ್ ಒಪ್ಪಂದ ರಾಷ್ಟ್ರಗಳ ಕೂಟದ ಮಿಲಿಟರಿ ಸಮಿತಿಗೆ ಅಮೆರಿಕವು ಸದಸ್ಯ ರಾಷ್ಟ್ರವಾಗಿ ಸೇರಿರುತ್ತದೆ ಇದಕ್ಕಾಗಿ ಮಂತ್ರಿಗಳ ಸಮಿತಿಯ ಅಧ್ಯಕ್ಷರಾದ ಸುಹ್ರಾವರ್ದಿಯವರು ಅಮೆರಿಕವನ್ನು ಅಭಿನಂದಿಸಿದರು ಅಮೆರಿಕದ ಕಾರ್ಯನೀತಿಯನ್ನು ಸುಹ್ರಾವರ್ದಿಯವರು ಪ್ರಶಂಸಿಸಿದರು ಅವರು ಐಸನ್‌ಹೋವರರ ಮಧ್ಯ ಪ್ರಾಚ್ಯದ ಸಹಾಯ ಯೋಜನೆಯನ್ನು ಸ್ವಾಗತಿಸಿ, ಅದರಿಂದ ಆ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರ ಸ್ಥಿತಿಗೆ ಬಹಳ ಸಹಾಯವಾಗುವುದೆಂದು ನುಡಿದರು ಸಮಿತಿಯಲ್ಲಿ ಅಮೆರಿಕದ ಪ್ರತಿನಿಧಿ ಲಾಯ್ ಹೆಂಡರ್‌ಸನ್ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರಲ್ಲದೆ, ಪಾಕಿಸ್ತಾನ, ಇರಾಕ್ ಮತ್ತು ಇರಾನುಗಳ ಪ್ರಧಾನಿಗಳು ಭಾಗವಹಿಸಿರುವರು ಸಭೆಯು ೫ ದಿವಸ ನಡೆಯುತ್ತದೆ

ಮೈಸೂರಿಗೆ ಕೇಂದ್ರದಿಂದ ೧॥ ಕೋಟಿ ರೂ.

ಕೆಳ ದರ್ಜೆ ನೌಕರರ ವೇತನ ಹೆಚ್ಚಿಸುವ ಸಲುವಾಗಿ

ಮೈಸೂರಿನಲ್ಲಿ ಕೆಳ ದರ್ಜೆ ನೌಕರರ ವೇತನವನ್ನು ಹೆಚ್ಚಿಸಲು ಸರ್ಕಾರದವರು ೪ ಕೋಟಿ ರೂ. ಯೋಜನೆಯೊಂದನ್ನು ಸಿದ್ಧಗೊಳಿಸಿರುವರು ಅದರ ಪೈಕಿ ಕೇಂದ್ರ ಸರ್ಕಾರದವರು ೧॥ ಕೋಟಿ ರೂ ಅನ್ನು ಸಹಾಯಾರ್ಥವಾಗಿ ೩ ವರ್ಷ ಕಾಲ ಕೊಡುವರೆಂದು ಹೇಳಲಾಗಿದೆ. ಮುಂದೆ ಪ್ರಾಂತ ಸರ್ಕಾರವು ಈ ವೆಚ್ಚವನ್ನು ವಹಿಸಿಕೊಳ್ಳಬೇಕು ಈ ವಿಷಯವು ರಾಷ್ಟ್ರೀಯ ಅಭಿವೃದ್ಧಿ ಮಂಡಲದ ಪರಿಶೀಲನೆಗೆ ಬರಲಿದೆ

ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರ ಪ್ರಮಾಣ

ವಿಶ್ವವಿದ್ಯಾಲಯದ ನಾನಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆಯ ಪ್ರಮಾಣವು ಈ ರೀತಿ ಇವೆ:- ಕ್ರಮವಾಗಿ ೩ ಭಾಗಗಳು-ಇಂಟರ್ ಆರ್ಟ್ಸ್ : ಶೇಕಡ ೪೦-೨; ೭೫; ೪೬.೮. ಇಂಟರ್ ಸೈನ್ಸ್ : ಶೇಕಡ ೪೫-೫, ೭೯೯ ಮತ್ತು ೩೬-೫ ಬಿ. ಎ : ಶೇಕಡ ೨೫-೭; ೭೧.೨ ಮತ್ತು ೪೭-೧. ಬಿ ಎಸ್‌ಸಿ., ೫೬-೫; ೭೩.೩; ೨೭-೨ ಬಿ. ಕಾಂ ೬೨೮; ೫೯-೨; ೪೩.೯ ಬಿ ಕಾಂ. . ೪೫-೧ ೪೩-೭; ೬೫-೬.

ನಂಜನಗೂಡು ಗಿರಿಜಾ ಕಲ್ಯಾಣದಲ್ಲಿ ಸಂಗೀತ ಸೇವೆ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಾಲಯದಲ್ಲಿ ಜುಲೈ ೬ನೇ ತಾರೀಕಿನಿಂದ ನಡೆಯಲಿರುವ ಶ್ರೀ ಗಿರಿಜಾ ಕಲ್ಯಾಣದ ಕಾಲದ ಸಂಗೀತ ಸೇವೆ ನಡೆಸಲಿಚ್ಛಿಸುವ ಸ್ಥಳ ಪರಸ್ಥಳದ ವಿದ್ವಾಂಸರು ಈ ತಿಂಗಳು ೧೫ ರೊಳಗಾಗಿ ತಾಲ್ಲೂಕಿನ ಅಮಲ್ದಾರರಿಗೆ ಅರ್ಜಿ ಮೂಲಕ ತಿಳಿಸುವಂತೆ ಕೋರಲಾಗಿದೆ.

ಸಂಗೀತದ ಘಟಿಕೋತ್ಸವ

ರಾಜ್ಯಪಾಲರಿಂದ ಬಹುಮಾನ ವಿನಿಯೋಗ

ಬೆಂಗಳೂರು ೪

ನೆನ್ನೆ ಇಲ್ಲಿ ಸಂಗೀತ ಘಟಿಕೋತ್ಸವವು ಇದೇ ಮೊದಲಾಗಿ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮದ್ರಾಸಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ವಿ ರಾಜಮನ್ನಾರರು ಭಾಷಣ ಮಾಡಿದರು. ಅವರು ಮಾತನಾಡಿ ಶಾಸ್ತ್ರೀಯ ಸಂಗೀತವನ್ನು ಹೆಚ್ಚು ಜನಪ್ರಿಯ ಮಾಡುವ ಉದ್ದೇಶದಿಂದ ಅದರ ಮಟ್ಟವನ್ನು ಇಳಿಸಲು ಹೋಗಬಾರದೆಂದು ತಿಳಿಸಿದರು ಸಿನಿಮಾ ಮುಂತಾದುವುಗಳಿಗಾಗಿ ಬೇಕಾಗುವ ಲಘು ಸಂಗೀತಕ್ಕೆ ಶಾಸ್ತ್ರೀಯ ಸಂಗೀತದ ಜ್ಞಾನವು ಸ್ವಲ್ಪವಾದರೂ ಇರಬೇಕೆಂದೂ ಹೇಳಿದರು

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಂಗೀತವನ್ನು ವಿಜ್ಞಾನವೆಂದು ಭಾವಿಸದಿರುವ ಬಗ್ಗೆ ಅಸಮ್ಮತಿಯನ್ನು ಸೂಚಿಸಿದರು ಸಂಗೀತದ ಪ್ರತಿ ಅಂಶವನ್ನೂ ಅರಿಯಲು ಹಿಂದಿನ ಘನ ವಿದ್ವಾಂಸರುಗಳು ವರ್ಷಾವಧಿ ಶ್ರಮಪಟ್ಟಿರುವರೆಂದೂ, ಸರಸ್ವತಿಯ ಪ್ರಸಾದವು ದೊರೆಯಬೇಕಾದರೆ ಅಕೆಯ ಸೇವೆ ಮಾಡಬೇಕೆಂದೂ ತಿಳಿಸಿ, ಸಂಗೀತವು ಆತ್ಮೋದ್ಧಾರದ ಅನುಭವವನ್ನು ತಂದು ಕೊಡುವುದೆಂದು ತಿಳಿಸಿದರು.

ವಿದ್ಯಾ ಇಲಾಖಾ ಡೈರೆಕ್ಟರ್ ಶ್ರೀ ಬಿ ಎಂ ಕೃಷ್ಣರವರು ಸ್ವಾಗತ ಭಾಷಣ ಮಾಡಿ, ಪರೀಕ್ಷೆಗಳಿಗೆ ೯೮೦ ಮಂದಿ ಕುಳಿತಿದ್ದುದಾಗಿ ಹೇಳಿದರು. ಜೂನಿಯರ್, ಸೀನಿಯರ್ ಮತ್ತು ಪ್ರವೀಣ ಪರೀಕ್ಷೆಗಳಲ್ಲಿ ಕ್ರಮವಾಗಿ ೪೭೮, ೧೨೬ ಮತ್ತು ೧೭ ಜನರು ಉತ್ತೀರ್ಣರಾಗಿರುವರೆಂದು ಅವರು ತಿಳಿಸಿದರು

ಉತ್ತೀರ್ಣರಾದವರಿಗೆ ರಾಜ್ಯಪಾಲರು ಬಹುಮಾನಗಳನ್ನು ಹಂಚಿದರು

ದಸರಾ ಉತ್ಸವಕ್ಕಾಗಿ ಎರಡು ಸಮಿತಿಗಳ ರಚನೆ

ಬೆಂಗಳೂರು ೪

ಬರುವ ದಸರಾ ಉತ್ಸವಗಳನ್ನು ನಡೆಸಲು ಸರ್ಕಾರದವರು ಗೃಹ ಮಂತ್ರಿ ಶ್ರೀ ಸಿ. ಎಂ ಪೂಣಚ್ಚರವರ ಅಧ್ಯಕ್ಷತೆಯಲ್ಲಿ ಎರಡು ಸಮಿತಿಗಳನ್ನು ರಚಿಸಿರುತ್ತಾರೆ ಆ ಪೈಕಿ ಕೇಂದ್ರ ಸಮಿತಿಯು ಸಂಸ್ಥಾನಾದ್ಯಂತ ಉತ್ಸವಗಳನ್ನು ಏರ್ಪಡಿಸುವುದು. ನಾನಾ ಭಾಗಗಳಲ್ಲಿ ನಡೆಯುವ ಕ್ರೀಡೆಗಳಲ್ಲಿ ಜಯಶಾಲಿಗಳಾದವರು ಪಂದ್ಯಾವಳಿಯಲ್ಲಿ ಭಾಗವಹಿಸುವರು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಈ ಉತ್ಸವವನ್ನು ನಾಡ ಹಬ್ಬವಾಗಿ ಆಚರಿಸಲಾಗುವುದು

ಮೈಸೂರಿನಲ್ಲಿ ನಡೆಯುವ ಉತ್ಸವ ಮತ್ತು ವಸ್ತು ಪ್ರದರ್ಶನಗಳ ಮೇಲ್ವಿಚಾರಣೆಯನ್ನು ಕೇಂದ್ರ ಸಮಿತಿಯು ಕೈಗೊಳ್ಳುವುದು

ಕರಾಚಿಯಲ್ಲೂ ಇನ್‌ಫ್ಲುಯೆಂಜಾ ಹರಡಿರುವ ವಿಚಾರವು ವರದಿಯಾಗಿದೆ. ನಗರದಲ್ಲಿ ಬಂದ ಒಬ್ಬ ಹೆಂಗಸು ಮತ್ತು ಒಂದು ಮಗುವನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಪೂರ್ವ ಪಾಕಿಸ್ತಾನದಲ್ಲಿ ಇದು ಅಪಾಯಕರ ವ್ಯಾಧಿಯೆಂದು ತಿಳಿಸಲಾಗಿದೆ.

ವಿಶ್ವವಿದ್ಯಾನಿಲಯ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನಗಳು

ಮೈಸೂರು ೩

ಮಾರ್ಚಿ ೬ ರಲ್ಲಿ ನಡೆದ ವಿಶ್ವವಿದ್ಯಾನಿಲಯ ಪರೀಕ್ಷೆಗಳಲ್ಲಿ ಪ್ರಥಮ ೧೦ ಸ್ಥಾನಗಳು ಈ ರೀತಿ ಇವೆ

ಇಂಟರ್ ಸೈನ್ಸ್ — ೧ ಬಿ ಎ ನರಹರಿ ಆಚಾರ್ (ಹಾಸನ) ೨ ನಜೀರ್ ಅಹಮದ್ (ಶಿವಮೊಗ್ಗ) ೩ ಎಸ್ ಎನ್ನಸ್ವಾಮಿ (ಸೇಂಟ್ ಜೋಸೆಫ್ ಕಾಲೇಜು) ಮತ್ತು ಸೂರ್ಯನಾರಾಯಣರಾವ್ (ನ್ಯಾಷನಲ್ ಕಾಲೇಜು) ೪ ಆರ್ ಶಿವಶಂಕರ್ (ಸೇಂಟ್ ಜೋಸೆಫ್ ಕಾಲೇಜು) ೫ ಕೆ ಜಿ ರಂಗರಾಜು (ನ್ಯಾಷನಲ್ ಕಾಲೇಜು) ೬ ರಾಜಗೋಪಾಲಗುಪ್ತ (ಚಾಮರಾಜನಗರ) ೭ ಟಿ ಎಸ್ ಪ್ರಹ್ಲಾದ್ (ಯುವರಾಜಾ ಕಾಲೇಜು) ೮ ಕೆ ಎ ವಿಶ್ವನಾಥ (ಸೇಂಟ್ ಜೋಸೆಫ್ ಕಾಲೇಜು) ೯ ಸುಧೀಂದ್ರ (ಇಂಟರ್‌ಮೀಡಿಯೆಟ್ ಕಾಲೇಜು, ಬೆಂಗಳೂರು) ೧೦ ಆರ್ ಜಗನ್ನಾಥ್ (ಹಾಸನ)

ಇಂಟರ್ ಆರ್ಟ್ಸ್ — ೧ ಎಸ್ ವಿ ಕಮಾರ್ (ಸೇಂಟ್ ಜೋಸೆಫ್ ಕಾಲೇಜು) ೨ ಗೀತಾ ಕೃಷ್ಣಸ್ವಾಮಿ (ಮೌಂಟ್ ಕಾರ್ಮೆಲ್ ಕಾಲೇಜು) ೩ ಎಸ್ ನರಸಿಂಹನ್ (ಇಂಟರ್‌ಮೀಡಿಯೆಟ್ ಕಾಲೇಜು ಬೆಂಗಳೂರು) ೪ ಸೈಯದ್ ವಿಸ್ಲಿ ಉದ್ದೀನ್ (ಸೇಂಟ್ ಫಿಲೋಮಿನಾ) ೫ ಹೆಚ್ ನಾಗರಾಜಶೆಟ್ಟಿ (ಸೇಂಟ್ ಜೋಸೆಫ್) ೬ ವೆಂಕಟೇಶ ಬ್ರಹ್ಮ (ಮಹಾರಾಣಿ ಕಾಲೇಜು, ಮೈಸೂರು) ೭ ಸಿಂಗಮ್ಮಾಳ್ (ಮೌಂಟ್ ಕಾರ್ಮೆಲ್) ಮತ್ತು ವಿ ಎಸ್ ನಾಗರಾಜರಾವ್ (ಇಂಟರ್ಮೀಡಿಯೆಟ್ ಕಾಲೇಜು, ಬೆಂಗಳೂರು) ೮ ಎ ಎ ರಸೂಗೀ (ಮಹಾರಾಣಿ ಕಾಲೇಜು ಬೆಂಗಳೂರು) ೯ ಫಿಲೋಮಿನ ಮ್ಯಾಸ್ಕರೇನ್ಹಾಸ್ (ಮೌಂಟ್ ಕಾರ್ಮೆಲ್) ೧೦ ಎನ್ ಬಿಸಿಲಪ್ಪ (ಯುವರಾಜಾ ಕಾಲೇಜು)

ಬಿ ಎ ೧ನೇ ಭಾಗ —೧ ಕೆ ಎಸ್ ಪದ್ಮ (ಮೌಂಟ್ ಕಾರ್ಮೆಲ್) ೨ ಎ ನಳಿನಿ (ಮಹಾರಾಣಿ ಕಾಲೇಜ್ ಬೆಂಗಳೂರು) ಮತ್ತು ವಿಮಲಾ ನಾಯರ್ (ಮೌಂಟ್ ಕಾರ್ಮೆಲ್) ೩ ಫಿಲ್ಲಿಸ್ ಪ್ರೇಮ ಪರಂಜ್ಯೋತಿ (ಮೌಂಟ್ ಕಾರ್ಮೆಲ್) ೪ ಕೊರ್ನೇಲಿಯೋ ಸ್ಯಾಂಡರ್ಲಿಂಡರ್ (ಮೌಂಟ್ ಕಾರ್ಮೆಲ್) ಮತ್ತು ಕನಕರತ್ನಂ ಎ (ಸೇಂಟ್ ಫಿಲೋಮಿನಾ ಕಾಲೇಜು)

೨ನೇ ಭಾಗ —೧ ಫಿಲ್ಲಿಸ್ ಪ್ರೇಮ ಪರಂಜ್ಯೋತಿ (ಮೌಂಟ್ ಕಾರ್ಮೆಲ್) ೨ ಕೊರ್ನೇಲಿಯೋ ಸ್ಯಾಂಡರ್ಲಿಂಡರ್ (ಮೌಂಟ್ ಕಾರ್ಮೆಲ್) ೩ ಸೈಯದ್ ಅಮೀರ್ ಅಹಮದ್ (ಮಹಾರಾಜಾ ಕಾಲೇಜು) ಮತ್ತು ಪೌಲಿನ್ ಮೋದಾ (ಮೌಂಟ್ ಕಾರ್ಮೆಲ್) ೪ ಪಿ ಪರಮೇಶ್ವರನ್ (ಸೇಂಟ್ ಜೋಸೆಫ್) ೫ ಘೌಸ್ ಮೊಹಿಯುದ್ದೀನ್ (ತುಮಕೂರು) ೬ ಎಂ ಬಿ. ರಾಜಮಣಿ (ಮಹಾರಾಣಿ ಕಾಲೇಜ್ ಮೈಸೂರು) ಮತ್ತು ರಮಣಿ ಚೆರಿಯನ್ (ಮೌಂಟ್ ಕಾರ್ಮೆಲ್) ೭ ಜಿ ಎ ನಂಗರಾಜರಾವ್ ಮತ್ತು ಕೋಟೇಶ್ವರ ರಾಘವೇಂದ್ರ ಕೃಷ್ಣ (ಮಹಾರಾಜಾ ಕಾಲೇಜು) ೮ ಕನಕರತ್ನರಾಜ್ (ಸೇಂಟ್ ಫಿಲೋಮಿನಾ ಕಾಲೇಜು) ೯ ಎಂ ಚನ್ನಪ್ಪ (ಮಹಾರಾಜಾ ಕಾಲೇಜು) ೧೦ ಎಂ ಎಸ್ ಪ್ರೇಮ (ಮಹಾರಾಜಾ ಕಾಲೇಜು)

೩ನೇ ಭಾಗ —೧ ಎಂ ಬಿ ರಾಜಮಣಿ (ಮಹಾರಾಣಿ ಕಾಲೇಜು ಮೈಸೂರು) ೨ ವಿ ರತ್ನ (ಮೌಂಟ್ ಕಾರ್ಮೆಲ್) ೩ ಎಸ್ ಎ ಶಾಂತಕುಮಾರ್ (ಮಹಾರಾಜಾ ಕಾಲೇಜ್) ೪ ಎಂ ಸೀತಾ (ಮೌಂಟ್ ಕಾರ್ಮೆಲ್)

GLOBE TOTORIAL COLLEGE
Sadvidya Patasala Buildings,
MYSORE
Offers Excellent Coaching for
S. S. L. C. & INTER STUDENTS
JOIN AT ONCE

೧೪೪ ಗಂಟೆ ಸೈಕಲ್ ಸವಾರಿ

ಉತ್ತರ ಪ್ರದೇಶದ ನೈನಿಟಾಲಿನಲ್ಲಿ ಅಫ್ಸಲ್ ಖಾನ್ ಎಂಬ ತರುಣನು ೧೪೪ ಗಂಟೆ ಕಾಲ ಸತತ ಸೈಕಲ್ ಸವಾರಿ ಮಾಡಿ ವಿಶ್ವದ ರಿಕಾರ್ಡ್ ಸ್ಥಾಪಿಸಿರುತ್ತಾನೆ ಅಲ್ಲಿನ ವಿದ್ಯಾ ಮಂತ್ರಿ ಕಮಲಾ ತ್ರಿಪಾಠಿಯವರು ಅವನ ಸಾಹಸವನ್ನು ಪ್ರಶಂಸಿಸಿರುವರು.

ವಿ ವಾ ಹ ಮ ಹೋ ತ್ಸ ವ

ವಿದ್ಯುಚ್ಛಕ್ತಿ ಇಲಾಖೆಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಶ್ರೀ ಕೆ ಎಸ್ ವೆಂಕಟಸ್ವಾಮಿಯವರು ತಮ್ಮ ಕುಮಾರಿ ಸೌ॥ ಪಾರ್ವತಿಯನ್ನು ರಾಮಸಮುದ್ರದ ಉಪಾಧ್ಯಾಯರಾದ ಶ್ರೀ ಹೆಚ್ ರಾಮಸ್ವಾಮಯ್ಯನವರ ಮಕ್ಕಳು ಶ್ರೀ ಹೆಚ್ ಆರ್ ಶೇಷಾದ್ರಿಯವರಿಗೆ ಕೊಟ್ಟು ಮೊನ್ನೆ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ ಹುತ್ತು

ಕೊಯಮತ್ತೂರು	೪೦ ೦೦	೪೬ ೨೫
ರತ್ನಚೂಡಿ	೪೦ ೦೦	೪೧ ೫೦
ಕೆಂಬೂತಿ	೪೧ ೫೦	
ಕಾರ್ ಸಣ್ಣ	೨೯ ೨೫	೨೯ ೭೫
ರಾಗಿ	೪೪ ೦೦	೪೬ ೧
ಜೋಳ	೪೪ ೧೨	೪೯ ೦೦
ಕಡಲೆಕಾಯಿ	೧೭ ೧೨	೨೪ ೧೯
ಹರಳುಬೀಜ	೪೪ ೬೧	೪೪ ೪೭
ಹುಚ್ಚೆಳ್ಳು	೪೫ ೦೦	
ಹೊಂಗೆಬೀಜ	೨೫ ೦೦	೨೮ ೧೨
ಹುರುಳಿ	೪೯ ೬೨	೪೨ ೫೦
ಹೆಸರು	೪೬ ೬೨	೫೯ ೦೦
ಹಲಸಂದೆ	೪೮ ೧೨	೬೦ ೬೨
ಧನಿಯ	೨೫ ೪೭	೨೬ ೦೦
ಅವರೆ	೫೫ ೭೫	೫೭ ೨೫
ಉದ್ದು	೬೪ ೦೭	೨೧ ೬೬
ಕಡಲೆ	೪೫ ೭೫	
ಹೀಗೆಕಾಯಿ	೭ ೬೨	
ಹುಣಿಸೆಹಣ್ಣು	೨ ೫೧	೪ ೧೯
ಹುಣಿಸೇಬೀಜ	೬ ೦೦	೬ ೪೫
ಮೆಣಸಿನಕಾಯಿ	೧೪ ೪೭	೯೫ ೦೭
ಬೆಲ್ಲ	೪ ೫೦	
ತೆಂಗಿನಕಾಯಿ	೧೬೦ ೦೦	೨೧೫ ೦೦

ನಗರದಲ್ಲಿ ಮತ್ತೊಬ್ಬರಿಗೆ ಇಂಫ್ಲುಯೆಂಜಾ

ಅಮೃತಸರದ ಮೆಡಿಕಲ್ ಕಾಲೇಜಿನ ರಮೇಶ್ ಪ್ರಕಾಶ್ ಎಂಬುವರೊಬ್ಬರನ್ನು ಇಂಫ್ಲುಯೆಂಜಾ ಖಾಯಿಲೆಯ ಚಿಕಿತ್ಸೆಗಾಗಿ ನೆನ್ನೆ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗೆ ಸೇರಿಸಲು, ಯಾತು ನಗರದಲ್ಲಿ ಇದುವರೆಗೆ ೩ ಮಂದಿಗೆ ಈ ಖಾಯಿಲೆಯುಂಟಾಗಿದೆ

ನೆಹರೂರವರಿಗೆ ಬರುವ ಸಂಬಳ ಎಷ್ಟೆಂಬುದೇ ತಿಳಿಯದು

ಖರ್ಚಿಗೆ ತಕ್ಕಷ್ಟು ವರಮಾನವಿಲ್ಲವೆಂದು ಹೇಳಿಕೆ

ಮಂತ್ರಿಗಳ ಸಂಬಳದ ಮಿತಿಯನ್ನು ಸಾವಿರ ರೂ ಎಂದು ಗೊತ್ತುಮಾಡಲು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಬಂದ ನಿರ್ಣಯದ ಮೇಲೆ ಮಾತನಾಡುತ್ತಾ ಪಂಡಿತ ನೆಹರೂರವರು ಈ ರೀತಿ ನುಡಿದರು —

ಕೇಂದ್ರ ಮತ್ತು ಪ್ರಾಂತ ಮಂತ್ರಿಗಳಿಗೆ, ಈಗ ಕೊಡುತ್ತಿರುವ ಸಂಬಳವು ವಿಪರೀತ ಹೆಚ್ಚಾಗಿಲ್ಲ ವರಮಾನ ತೆರಿಗೆಯನ್ನು ಕಳೆದರೆ ಉಳಿಯುವುದು ಸಾವಿರ ರೂ ಗಿಂತ ಬಹಳ ಹೆಚ್ಚಾಗಿರುವುದಿಲ್ಲ ಹಲವು ವರ್ಷಗಳ ಹಿಂದೆ ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ೫೦೦ ರೂ ಸಂಬಳ ಪರಮಾವಧಿಯಾಗಿರಬೇಕೆಂದು ಗೊತ್ತುಮಾಡಲಾಗಿತ್ತು ಆದರೆ ಅಂದಿನ ೫೦೦ ರೂ ಇಂದಿನ ೨,೦೦೦ ರೂ ಗೆ ಸಮಾನವಾಗುತ್ತಿತ್ತು

ನನಗೆ ಮಾಹೆಯಾನಾ ಬರಬೇಕಾದ ಸಂಬಳವೆಷ್ಟೆಂಬುದು ಗೊತ್ತಿಲ್ಲ ವರಮಾನ ತೆರಿಗೆಯನ್ನು ಕಳೆದು ನನ್ನ ಕೈಗೆ ೧೬೦೦ ರೂ ಬರುತ್ತದೆ ನನ್ನ ಪುಸ್ತಕಗಳ ಪ್ರಕಟಣೆ ಮುಂತಾದುವುಗಳಿಂದ ಬರುವ ವರಮಾನವಿಲ್ಲದಿದ್ದರೆ ಈ ೧,೬೦೦ ರೂ ನಿಂದ ನನ್ನ ಖರ್ಚುವೆಚ್ಚಗಳನ್ನು ನಿರ್ವಹಿಸಲು ಆಗುತ್ತಿರಲಿಲ್ಲ ಅಲಹಾಬಾದಿನಲ್ಲಿ ನನಗೆ ಪಿತ್ರಾರ್ಜಿತವಾದ ಒಂದು ಮನೆಯಿದೆ ನಮ್ಮ ತಂದೆಯವರ ಕಾಲದಿಂದ ಅಲ್ಲಿ ತೋಟಗಾರರೇ ಮುಂತಾದ ಕೆಲವರು ಇದ್ದಾರೆ ಅವರನ್ನು ತೆಗೆಯಲು ನಾನು ಇಷ್ಟಪಡುವುದಿಲ್ಲ ನಾನೂ ನನ್ನ ಮಗಳೂ ಆಗಾಗ್ಗೆ ಅಲ್ಲಿಗೆ ಹೋಗಿ ಇರುತ್ತೇವೆ ಈ ಸಿಬ್ಬಂದಿಗಾಗಿ ತಿಂಗಳಿಗೆ ೯೦೦ ರೂ ವೆಚ್ಚವಾಗುತ್ತದೆ ಉಳಿದ ೭೦೦ ರೂ ನಲ್ಲಿ ೨೦೦ ರೂ ಅನ್ನು ಹಲವು ಸಂಸ್ಥೆಗಳಿಗೆ ಚಂದಾ ರೂಪದಲ್ಲಿ ವಿನಿಯೋಗಿಸುತ್ತೇನೆ ನನ್ನ ಸ್ವಂತಕ್ಕೆ ೫೦೦ ರೂ ಮಾತ್ರ ಉಳಿಯುತ್ತದೆ ನನ್ನ ಸ್ವಂತ ಖರ್ಚು ಬಹಳ ಕಡಿಮೆಯಾಗಿದ್ದರೂ ಈ ಮೊಬಲಗಿಗಿಂತ ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ

ನಾನು ದೆಹಲಿಯಲ್ಲಿ ವಾಸಮಾಡುವ ಮನೆ ರಾಷ್ಟ್ರಾಧ್ಯಕ್ಷರ ಅಸ್ತಿಯ ಒಂದು ಭಾಗ, ಅದಕ್ಕೆ ಬಾಡಿಗೆ ಇಲ್ಲ ಆದರೆ ನನ್ನ ಊಟ ತಿಂಡಿಗಳಿಗಾಗಿ ೦ ವ್ಯಕ್ತಿ ಇಲಾಖೆಯಿಂದ ಬಿಲ್ಲು ಬರುವುದರಿಂದ ನಾನಿರುವ ಮನೆ ಒಂದು ಹೋಟೇಲಿನಂತಿದೆ ಅತಿಥಿ ಸತ್ಕಾರಗಳ ವೆಚ್ಚವನ್ನು ಮಾತ್ರ ಸರ್ಕಾರದವರೇ ವಹಿಸುವರು. ನನ್ನ, ನನ್ನ ಮಗಳ ಮತ್ತು ಸ್ವಂತ ಸ್ನೇಹಿತರ ವೆಚ್ಚವನ್ನು ನಾನೇ ವಹಿಸಬೇಕು

ನನಗೆ ಮಕ್ಕಳ ವಿದ್ಯಾಭ್ಯಾಸವೇ ಮುಂತಾದ ಹೆಚ್ಚಿನ ಜವಾಬ್ದಾರಿಗಳಿಲ್ಲ ಇರುವವಳು ಒಬ್ಬಳೇ ಮಗಳು ಅವಳೂ ಸಹ ತನ್ನ ಯೋಗಕ್ಷೇಮವನ್ನು ತಾನೇ ನೋಡಿಕೊಳ್ಳಬಲ್ಲಳು ಆದರೆ ಇತರ ಮಂತ್ರಿಗಳ ವಿಷಯ ಹಾಗಲ್ಲ ಅವರಿಗೆ ಕೊಡುತ್ತಿರುವ ಸಂಬಳ ಹೆಚ್ಚಲ್ಲ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಂಗೀತ. ೭-೧೫ ಬಿ ಎಸ್. ಸೀತಾರಾಮಯ್ಯ-ನಾದಸ್ವರ ೮-೧೫ ಹಿಂದಿ ಪಾಠ ಮಧ್ಯಾಹ್ನ ೧೨೩೦ ಮತ್ತು ೧-೫೦ ಎಸ್ ಆರ್ ರಂಗಸ್ವಾಮಿ-ಕೊಳಲು ೧೨೪೫ ಆರ್ ಎ ಲಕ್ಷ್ಮಿ, ಸರೋಜಿನಿ ಲಕ್ಷ್ಮಿ, ಶಕುಂತಲ-ಸಂಗೀತ ೧ ರಿಕಾರ್ಡ್ ೧ ೨೦ ಗಾನಮಂಜರಿ. ೨ ೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ಭಕ್ತಿ ಗೀತೆ ೭-೩೦ ವಚನ ಗಾನ ೮ ಬಿ ಎ. ಸೀತಾರಾಮಯ್ಯ-ನಾದಸ್ವರ ೮-೩೦ ರಾಷ್ಟ್ರೀಯ ಕಾರ್ಯಕ್ರಮ ೯-೧೫ ಉರ್ದು ಗೀತೆ ೧೦-೩೦ ಬಿ ಎಸ್. ರಾಜಯ್ಯಂಗಾರ್-ಸಂಗೀತ.

SARADAVILAS COLLEGE,
Mysore
INTER TUTORIAL SECTION
Coaching classes for Sept Examinations in English, Second Language Physics, Chemistry and Mathematics will be started early Further details can be had at the office between 9 and 12
Hon Secretary

WANTED immediately a Lady Receptionist Must be very good in English Knowledge of Typing preferred Decent Salary. Apply to :—
Tourist Bureau
J M Palace Road,
Mysore
Phone No 574

Sarada Vilas College,
MYSORE
Pending sanction by the University, applications for seats in the Pre-University class in Arts and Commerce also will be received In case these new courses are not introduced, the registration fee will be refunded
Honorary Secretary

ಪ್ರ ಕ ಟ ಣೆ

ಮೈಸೂರು ನಗರದಲ್ಲಿ ಮರಾಠಾ ವಿದ್ಯಾರ್ಥಿಗಳಿಗಾಗಿ ತಾರೀಖು 16-6-57ಕ್ಕೆ ಹೊಸದಾಗಿ ತೆರೆಯಲಿರುವ ಹಾಸ್ಟಲಿಗೆ ಸೇರಲು ಬಯಸುವ ವಿದ್ಯಾರ್ಥಿಗಳು ಹಾಸ್ಟಲ್ ಸೆಕ್ರೆಟರಿಯವರಲ್ಲಿ ದೊರೆಯುವ ಫಾರಂಗೆ ಒಂದು ರೂಪಾಯಿ ಶುಲ್ಕ ಕೊಟ್ಟು ಪೋಸ್ಟ್ ಮೂಲಕ ಪಡೆಯುವುದು ಮತ್ತು ಸದರಿ ಫಾರಂ ಪೂರ್ತಿ ಮಾಡಿ ಈ ತಿಂಗಳು 15ನೇ ತಾರೀಖಿನೊಳಗಾಗಿ ಕೆಳಕಂಡ ವಿಳಾಸಕ್ಕೆ ತಲುಪಿಸುವುದು

ಸೆಕ್ರೆಟರಿ,
ವೆಂಕಟರಾವ್-ದೇವೋಜಿರಾವ್ ವಿದ್ಯಾರ್ಥಿ ನಿಲಯ, 2799 ಹಳ್ಳದಕೇರಿ, ಮೈಸೂರು

ಬಾಲಕಿಯರಿಗಾಗಿ ಹೊಸ ಪ್ರೌಢಶಾಲೆ
C. T. C. ಹಳೇ ಅಗ್ರಹಾರ, ಮೈಸೂರು
★ 6-6-57 ನೇ ಗುರುವಾರದಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದು
★ ಜೂನ್ ಎರಡನೇ ವಾರದಲ್ಲಿ H S I Year ತರಗತಿ ಪ್ರಾರಂಭ.
★ ಉತ್ತಮ ವಾತಾವರಣ-ಅನುಭವಸ್ಥ ಉಪಾಧ್ಯಾಯರು
★ 12 ರಿಂದ 5 ರ ವರೆಗೆ ಕ್ರಮವಾದ ಪಾಠಗಳು
ಬಿ ಕೆ ಸತ್ಯಬೋಧ ರಾವ್, ಎಂ ಎ ಬಿ ಟಿ

Edited, Printed and Published by A. R. Nagarajan at Sadhvi Press, D Subbiah Road, Mysore

ರಾ ಜ ಕ ಮ ಲ್ ✱ 7-6-57ರಿಂದ ಅಮೋಘ ಪ್ರಾರಂಭ
ಈಗಾಗಲೇ ಆಂಧ್ರ ಪ್ರದೇಶದಲ್ಲಿ ಜಯಭೇರಿ ಹೊಡೆಯುತ್ತಿರುವ,
12 ಲಕ್ಷ ರೂ ಗಳ ವೆಚ್ಚದಲ್ಲಿ ತಯಾರಿಸಿರುವ, ಅಂಜಲಿ ಪಿಕ್ಚರ್ಸ್‌ರವರ ಮಹೋನ್ನತ ಜಾನಪದ ಕಲಾಕೃತಿ
ಅಂಜಲಿ ಜೆಮಿನಿ ಗಣೇಶ್, ರಾಜಸುಲೋಚನ, ಗಿರಿಜ ನಾಟ್ಯಕಲಾ ಮುಂತಾದವರು ಪಾತ್ರವಹಿಸಿರುವ,
★ ಮಣಾಳನೇ ಮಂಗಯಿನ್ ಭಾಗ್ಯಂ
ಪ್ರತಿ ದಿನ ಮೂರು ಆಟಗಳು : 2—45, 6—30 ಮತ್ತು 9—45
ಕಡೇ 3 ದಿನಗಳು ★ ರತ್ನಗಿರಿ ರಹಸ್ಯ ★
ನಿರ್ದೇಶನ : ವೇದಾಂತ ರಾಘವಯ್ಯ — ಸಂಗೀತ . ಆದಿನಾರಾಯಣರಾವ್ - ಶ್ರೀ ರಾಘವೇಂದ್ರ ರಿಲೀಸ್
6 ವಾರಗಳ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮುಕ್ತಾ ಮಾಡಲಾಗಿದೆ

ಟೆಲಿಫೋನ್ ___ ___

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಅರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಇಂದಿನ ಪತ್ರಿಕೆ 2 ಪುಟ ಮಾತ್ರ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ ಎನ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ ೩ : ೦೫] SADHVI , WEDNESDAY 5-6-1957 ಮೈಸೂರು ಬುಧವಾರ ೫-೬-೧೯೫೭ , [ಸಂಚಿಕೆ : ೩೦೦

- ನಗರದಲ್ಲಿ ೧೧ ಜನರಿಗೆ ಶೀತಜ್ವರ ವ್ಯಾಧಿ ತಗಲಿದೆ -

ಪ್ರೀ-ಯೂನಿವರ್ಸಿಟಿ ಮತ್ತು ಪದವಿ ತರಗತಿಗಳು

ಶಿಕ್ಷಣ ಕ್ರಮಗಳಿಗೆ ಅಕಡೆಮಿಕ್ ಕೌನ್ಸಿಲ್ಲಿನ ಅಂಗೀಕಾರ

ಮೈಸೂರು ೫

ಈ ವರ್ಷದಿಂದ ಆರಂಭವಾಗುವ ಒಂದು ವರ್ಷದ ಪ್ರೀ-ಯೂನಿವರ್ಸಿಟಿ ಮತ್ತು ೩ ವರ್ಷದ ಪದವಿ ತರಗತಿಗಳ ಪಠ್ಯ ಪುಸ್ತಕಗಳು, ಬೋಧ ಕ್ರಮ, ಮುಂತಾದ ವಿವರಗಳನ್ನು ಗೊತ್ತುಪಡಿಸಿ ಉಪ ಸಮಿತಿಯು ಸಲ್ಲಿಸಿದ್ದ ವರದಿಯನ್ನು ನೆನ್ನೆ ಅಕೆಡೆಮಿಕ್ ಕೌನ್ಸಿಲ್ಲಿನ ವಿಶೇಷ ಸಭೆಯು ಹಲವು ಮಾರ್ಪಾಡುಗಳೊಡನೆ ಅಂಗೀಕರಿಸಿತು

ಪ್ರೀ ಯೂನಿವರ್ಸಿಟಿ ತರಗತಿಯ ಶಿಕ್ಷಣವು ಇಂಗ್ಲಿಷ್, ಇತರ ಭಾಷೆ, ಸೈನ್ಸ್ ಅಥವಾ ಆರ್ಟ್ಸ್ ಮತ್ತು ಜನರಲ್ ಎಜುಕೇಷನ್ ಎಂಬುದಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ ಅನಂತರ ಸೈನ್ಸ್ ಮತ್ತು ಆರ್ಟ್ಸ್ ವಿಭಾಗಗಳ ಪೈಕಿ ಯಾವುದಾದರೂ ಮೂರು ವಿಷಯಗಳನ್ನು ಐಚ್ಛಿಕವಾಗಿ ಅಭ್ಯಾಸ ಮಾಡಬೇಕು ಸೈನ್ಸ್ ತೆಗೆದುಕೊಂಡವರು ಸಮಾಜ ವಿಜ್ಞಾನವನ್ನೂ, ಆರ್ಟ್ಸ್ ಅಭ್ಯಾಸ ಮಾಡುವವರು ಸಾಮಾನ್ಯ ವಿಜ್ಞಾನವನ್ನೂ ಓದಬೇಕು ಆದರೆ ಇವುಗಳ ಪಠ್ಯ ಭಾಗವನ್ನು ಅರ್ಧದಷ್ಟು ಕಡಿಮೆ ಮಾಡಲಾಗಿದೆ

ಪದವಿ ತರಗತಿಯನ್ನೂ ಸಹ ೪ ಭಾಗಗಳಾಗಿ ವಿಂಗಡಿಸಲಾಗಿದೆ ಆದರೆ ಇದುವರೆಗೂ ಐಚ್ಛಿಕ ಭಾಗದಲ್ಲಿ ಓದಬೇಕಾಗಿದ್ದ ಸೈನ್ಸ್ ಅಥವಾ ಆರ್ಟ್ಸ್‌ನಲ್ಲಿ ಮೂರು ವಿಷಯಗಳ ಬದಲು ಎರಡು ಮೇಜರ್ ಮತ್ತು ಮೈನರ್ ವಿಷಯಗಳನ್ನೂ ಅಭ್ಯಾಸ ಮಾಡುವಂತೆ ಬದಲಾಯಿಸಿದೆ

ಎರಡನೆಯ ವರ್ಷದ ಅಂತ್ಯ ಭಾಗದಲ್ಲಿ ಒಂದು ಪರೀಕ್ಷೆಯೂ, ಮೂರನೆಯ ವರ್ಷಾಂತ್ಯದಲ್ಲಿ ಮತ್ತೊಂದೂ ವರ್ಷಕ್ಕೆರಡು ಬಾರಿ ನಡೆಯುವುವು ಐಚ್ಛಿಕ ಭಾಗದ ಯಾವುದಾದರೂ ಒಂದು ವಿಷಯದಲ್ಲಿ ಫೇಲಾದವರು ಮತ್ತೆ ಪೂರ್ತಿ ಭಾಗದ ಪರೀಕ್ಷೆಗೆ ಕುಳಿತುಕೊಳ್ಳುವುದರ ಬದಲು ವಿದ್ಯಾರ್ಥಿಯು ಫೇಲಾದ ಮೇಜರ್ ಅಥವಾ ಮೈನರ್ ವಿಷಯದಲ್ಲಿ ಮಾತ್ರ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡಲಾಗಿದೆ

ಅನೇಕ ಸದಸ್ಯರ ಒತ್ತಾಯದ ಮೇಲೆ ಪ್ರೀ-ಯೂನಿವರ್ಸಿಟಿ ಐಚ್ಛಿಕ ವಿಭಾಗದ ವಿಷಯದ ಪಟ್ಟಿಗೆ ಜೀವ ಶಾಸ್ತ್ರವನ್ನೂ ಸೇರಿಸಲಾಯಿತು

ಪದವಿ ತರಗತಿಯ ಮೂರನೇ ವರ್ಷದ ಐಚ್ಛಿಕ ಭಾಗದ ಮೇಜರ್ ವಿಷಯಗಳಲ್ಲಿ ಮಾತ್ರ ಶಿಕ್ಷಣವಿರಬೇಕೆಂದು ತೀರ್ಮಾನಿಸಲಾಯಿತು ಅನಂತರ ಕಾಮರ್ಸ್ ವಿಭಾಗದ ಪ್ರೀ-ಯೂನಿವರ್ಸಿಟಿ ಮತ್ತು ಪದವಿ ತರಗತಿಗಳ ಶಿಕ್ಷಣ ಕ್ರಮಗಳಿಗೂ ಸಭೆಯು ಅಂಗೀಕಾರವಿತ್ತಿತು

ನೂತನ ಐ. ಎ. ಎಸ್. ಅಧಿಕಾರಿಗಳು

ಭಾರತದ ಆಡಳಿತ ಸರ್ವಿಸ್ಸಿಗೆ ಮೈಸೂರಿನ ಶ್ರೀ ಎ. ಸಿ ಸುಬ್ಬಯ್ಯ, ಕೆ ನರಸಿಂಹಯ್ಯ, ಗಾರ್, ಎಂ ಮಲ್ಲೇಶಯ್ಯ ಮತ್ತು ಹೆಚ್ ನರಸಿಂಹರವರನ್ನು ಕಳೆದ ೧೯೫೦ರಿಂದ ಪ್ರೊಬೇಷನ್ ಮೇಲೆ ತೆಗೆದುಕೊಳ್ಳಲಾಗಿದೆ

ಹೊಸ ತೆರಿಗೆಗಳನ್ನು ವಾಪಸು ಪಡೆಯಬೇಕೆಂದು ಒತ್ತಾಯ

ಬಹಿರಂಗ ಸಭೆಯಲ್ಲಿ ನಿರ್ಣಯ

ಮೈಸೂರು ೫

ನಗರದ ಪ್ರಜಾ ಸಮಾಜವಾದಿ ಪಕ್ಷದ ಆಶ್ರಯದಲ್ಲಿ ನೆನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದು ನಡೆದು, ಕೇಂದ್ರ ಸರ್ಕಾರದವರು ವಿಧಿಸಿರುವ ನೂತನ ತೆರಿಗೆಗಳಿಂದ ರೈತರು, ಕೂಲಿಕಾರರು ಮತ್ತು ಮಧ್ಯಮ ವರ್ಗದವರ ಮೇಲೆ ತುಂಬಾ ಹೊರೆ ಬೀಳುವುದೆಂದು ಸೂಚಿಸಲಾಯಿತು ಹೊಸ ತೆರಿಗೆಗಳನ್ನು ಖಂಡಿಸಲಾಯಿತಲ್ಲದೆ, ಅವನ್ನು ವಾಪಸು ಪಡೆಯಬೇಕೆಂದು ಒತ್ತಾಯಪಡಿಸಿ ನಿರ್ಣಯ ಮಾಡಲಾಯಿತು ಲೋಕ ಸಭಾ ಮಾಜಿ ಸದಸ್ಯ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಎಂ ಎನ್ ತಿಮ್ಮಯ್ಯ, ಟಿ ಪಿ. ಕೋದಂಡರಾಮಶೆಟ್ಟಿ, ಎಚ್ ಎನ್ ಮುದ್ದಯ್ಯ, ಸಿ ಎನ್ ನಂಜರಾಯ ಅರಸ್ ಮತ್ತು ವೇದಾಂತ ಹೆಮ್ಮಿಗೆಯವರು ಭಾಷಣ ಮಾಡಿ ತೆರಿಗೆ ವಿಧೇಯಕವನ್ನು ಟೀಕಿಸಿದರು

ಆದಿ ಚುಂಚನಗಿರಿ ಸಾರ್ವಜನಿಕ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆ

ನಗರದ ಸಹವಾರಹಳ್ಳಿ ಬಡಾವಣೆಯಲ್ಲಿ ಆದಿ ಚುಂಚನಗಿರಿ ಶ್ರೀ ಗಂಗಾಧರೇಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆಯನ್ನು ನಾಳೆ ಸಂಜೆ ೫ ಗಂಟೆಗೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ನೆರವೇರಿಸುವರು

ಕಾವ್ಯ ವಾಚನ

ಜಯನಗರದ ಬಡಾವಣೆಯಲ್ಲಿರುವ ಪೌರಾಣಿಕ ಶಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ಈ ಸಂಜೆ ೬ ಗಂಟೆಗೆ ಶ್ರೀ ಪಿ ಎ ಗಿರಿಧರರವರಿಂದ ಶ್ರೀ ಪದ್ಮಾವತೀ ಜನನ" ಎಂಬ ಭಾಗದ ವಾಚನವನ್ನೂ, ಶ್ರೀ ಎಸ್ ಲಕ್ಷ್ಮೀನರಸಿಂಹರವರಿಂದ ವ್ಯಾಖ್ಯಾನವನ್ನೂ ಏರ್ಪಡಿಸಲಾಗಿದೆ

ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಸರ್ಕಾರಕ್ಕೆ ೫ ಲಕ್ಷ ರೂ. ನಷ್ಟ

ಡಿವಿಜನಲ್ ಕಮೀಷನರ ಹೇಳಿಕೆ

ಸ್ವಂ ಸು ಪ್ರೋ] ನಂಜನಗೂಡು ೫

ಇತ್ತೀಚೆಗೆ ಮೈಸೂರು ಜಿಲ್ಲೆಯಲ್ಲಿ ವಿಪರೀತ ಮಳೆಯಿಂದ ಸರ್ಕಾರಕ್ಕೆ ೫ ಲಕ್ಷ ರೂ. ನಷ್ಟವಾಗಿದೆಯೆಂದೂ, ಆ ಪೈಕಿ ಈ ತಾಲ್ಲೂಕಿನಲ್ಲೇ ಒಂದೂವರೆ ಲಕ್ಷ ರೂ ನಷ್ಟವಾಗಿರುವುದೆಂದೂ ಡಿವಿಜನಲ್ ಕಮೀಷನರ್ ಶ್ರೀ ಕೆ ಕೇಶಗಿರಿರಾಯರು ಇಲ್ಲಿ ಈ ದಿನ ತಿಳಿಸಿದರು ತಾಲ್ಲೂಕಿನ ಹಲವಾರು ಹಳ್ಳಿಗಳಿಗೆ ಅವರು ಭೇಟಿಯಿತ್ತು ನಷ್ಟದ ವಿವರಗಳನ್ನು ಪರಿಶೀಲಿಸಿದರು.

ಹದಿನಾಲು ಗ್ರಾಮದ ೪ ಸಾವಿರ ಎಕರೆ ಭೂಮಿಗೆ ನೀರೊದಗಿಸಲು ಅಲ್ಲಿನ ಕೆರೆಯನ್ನು ರಿಪೇರಿ ಮಾಡಿಸಿಕೊಡುವುದಾಗಿ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ ವೆಂಕಟರಾಮಯ್ಯನವರು ಹಳ್ಳಿಗರಿಗೆ ತಿಳಿಸಿದರು ನೊಂದ ಜನರಿಗೆ ಸರ್ಕಾರದ ಸಹಾಯವನ್ನು ಕೊಡಿಸುವುದಾಗಿ ಭರವಸೆಯೀಯಲಾಯಿತು.

ಚನ್ನಪಟ್ಟಣದ ಸ್ಪನ್ ಸಿಲ್ಕ್ ಕಾರ್ಖಾನೆ ಸರ್ಕಾರದ ವಶಕ್ಕೆ

ಬೆಂಗಳೂರು ೫

ಕೈಗಾರಿಕಾ ಮಂತ್ರಿ ಶ್ರೀ ಪೂಣಚ್ಚರವರು ನೆನ್ನೆ ಪತ್ರಿಕಾ ಭೇಟಿಯಲ್ಲಿ ಮಾತನಾಡಿ ಚನ್ನಪಟ್ಟಣದಲ್ಲಿರುವ ಸ್ಪನ್ ಸಿಲ್ಕ್ ಕಂಪೆನಿಯನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳಲಿರುವುದಾಗಿ ತಿಳಿಸಿದರು ಕನಕಪುರ, ಮೈಸೂರು ಟಿ ನರಸೀಪುರ ಮತ್ತು ಕೊಳ್ಳೇಗಾಲದಲ್ಲಿರುವ ಸ್ಪನ್ ಸಿಲ್ಕ್ ಕಾರ್ಖಾನೆಗಳನ್ನು ಈಗ ಸರ್ಕಾರದವರೇ ನಡೆಸುತ್ತಿರುವರು ಶಿಡ್ಲಘಟ್ಟದಲ್ಲಿರುವ ಕಾರ್ಖಾನೆಯನ್ನು ಸಹ ವಶಪಡಿಸಿಕೊಂಡು ಆ ಮೂಲಕ ಈ ಕೈಗಾರಿಕೆಯನ್ನು ಸ್ಥಿರಗೊಳಿಸಬೇಕಾಗಬಹುದೆಂದು ಸಚಿವರು ನುಡಿದರು ಸ್ಪನ್ ಸಿಲ್ಕ್ ಕಾರ್ಖಾನೆ ಅಧ್ಯಕ್ಷರಾಗಿ ಶ್ರೀ ಕೆ ತಿಪ್ಪೇರುದ್ರಯ್ಯನವರನ್ನು ನೇಮಿಸಲಾಗುವುದು

ಚುನಾವಣೆಯಲ್ಲಿ ಸೋತ ಕಾಂಗ್ರೆಸ್ ಅಧ್ಯಕ್ಷರ ರಾಜೀನಾಮೆ

ಮಹಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತುದಕ್ಕಾಗಿ ಆಸ್ಸಾಂ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷರಾದ ಬಿಮಲ ಪ್ರಸಾದ ಚಲಿಹ ರವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿರುವರು ಕಾಂಗ್ರೆಸ್ಸಿನ ಹಿತ ಮತ್ತು ಘನತೆಯ ದೃಷ್ಟಿಯಿಂದ ತಾವು ರಾಜೀನಾಮೆ ಕೊಟ್ಟಿರುವುದಾಗಿ ಅವರು ಹೇಳಿರುವರು

ಉಪನ್ಯಾಸ

ಮದ್ರಾಸಿನಲ್ಲಿರುವ ಅಮೆರಿಕಾ ಸುದ್ದಿ ಸಂಸ್ಥೆಯ ಸಾಂಸ್ಕೃತಿಕ ವ್ಯವಹಾರದ ಅಧಿಕಾರಿಗಳಾದ ಡಾ॥ ಆರ್. ಎಲ್. ಫಂಕ್‌ರವರು ನಾಳೆ ಸಂಜೆ ೬ ಗಂಟೆಗೆ ಇಲ್ಲಿನ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ "ಅಮೆರಿಕದ ಸಾಹಿತ್ಯದ ಇತ್ತೀಚಿನ ಮಾರ್ಗ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು, ಸ್ಪ್ರಿಂಗ್ ಅಂಡ್ ಓ ಆರ್ಸ್ ಮತ್ತು ಮೌಂಟ್ ರೇನರ್ ನ್ಯಾಷನಲ್ ಪಾರ್ಕ್ ಎಂಬ ಎರಡು ವರ್ಣರಂಜಿತ ಚಿತ್ರಗಳನ್ನು ಪ್ರದರ್ಶಿಸಲಾಗುವುದು. ಸರ್ವರಿಗೂ ಸ್ವಾಗತವಿದೆ

ಹೆಚ್ಚು ಸಂಬಳಕ್ಕಾಗಿ ಪಾಕಿಸ್ತಾನದಲ್ಲಿ ಚಿತ್ರಲೆ ಪ್ರದರ್ಶನ

ಹೆಚ್ಚು ಸಂಬಳ ಮತ್ತು ಇನ್ನೂ ಉತ್ತಮ ಜೀವನದ ಸ್ಥಿತಿಗತಿಗಳಿಗೆ ಒತ್ತಾಯಪಡಿಸುವುದಕ್ಕಾಗಿ ಪಾಕಿಸ್ತಾನದ ಸಿವಿಲ್ ಅಕೌಂಟೆಂಟರುಗಳ ಸಂಘದವರು ಚಿತ್ರಲೆ ಪ್ರದರ್ಶನದ ಚಳುವಳಿಯನ್ನು ನಡೆಸಲು ನಿರ್ಧರಿಸಿರುತ್ತಾರೆ. ಇದೇ ೮ನೇ ತಾರೀಕಿನಿಂದ ಪಶ್ಚಿಮ ಪಾಕಿಸ್ತಾನದಲ್ಲೂ ೧ ವಾರದ ತರುವಾಯ ಪೂರ್ವ ಪಾಕಿಸ್ತಾನದಲ್ಲೂ ಇದನ್ನು ನಡೆಸಲಾಗುವುದು ಸಂಘದ ಸದಸ್ಯರು ಅಧಿಕಾರಿಗಳ ಮುಂದೆ ನಿತ್ಯವೂ ಒಂದೊಂದು ಬಟ್ಟೆ ಕಡಿಮೆ ಹಾಕಿಕೊಂಡು ಹೋಗಬೇಕೆಂದೂ ಕಡೆಗೆ ಮಾನ ಮುಚ್ಚಿಕೊಳ್ಳುವಷ್ಟು ಮಾತ್ರ ಬಟ್ಟೆ ಧರಿಸಿ ಪ್ರದರ್ಶನ ನಡೆಸಬೇಕೆಂದೂ ಗೊತ್ತು ಮಾಡಲಾಗಿದೆ. ಈ ಪ್ರದರ್ಶನವು ಯಶಸ್ವಿಯಾಗದಿದ್ದರೆ ೩೦೦ ೩೦೦ ಜನರು ಒಟ್ಟಾಗಿ ಉಪವಾಸ ಮಾಡುವರು

ನಗರದಲ್ಲಿ ಇನ್‌ಫ್ಲುಯೆಂಜಾ ಸ್ಥಿತಿ

ಪೋಲೀಸಿನವನೂ ಸೇರಿ ೧೧ ಮಂದಿಗೆ ವ್ಯಾಧಿ

ಮೈಸೂರು ೫

ನಗರದ ಪೌರಸಭೆ ಆರೋಗ್ಯಾಧಿಕಾರಿ ಶ್ರೀ ಅಣೇಕರ್‌ರವರು ಪ್ರಕಟಣೆ ಹೊರಡಿಸಿ ಕಳೆದ ೩೦ರಂದು ಇಟ್ಟಿಗೆಗೂಡಿನ ಶಿವಣ್ಣ, ೧ನೇ ತಾರೀಖು ನಜರ್ ಬಾದಿನ ಸಾವಿತ್ರಿ, ೨ನೇ ತಾರೀಖು ಕೆ ಟಿ ಬೀದಿಯ ದಯಾನಂದ್, ಜಯರಾಜ್, ಜೋಸೆಫ್ ರಾಜ್, ಟಿ ಮೇರಿ ಮತ್ತು ರಾಣಿ, ೩ನೇ ತಾರೀಖು ಮೆಡಿಕಲ್ ವಿದ್ಯಾರ್ಥಿ ಚಂದ್ರಪ್ರಕಾಶ್ ಮತ್ತು ೪ರಂದು ಜಲಪುರಿಯ ಪೊಲೀಸು ಕಾನ್‌ಸ್ಟೇಬಲ್ ಕೋಟೆಯಪ್ಪ ಮತ್ತು ಹೊಸ ಸಂತೆಪೇಟೆ ಚಾರ್ಲ್ಸ್ ಕಂಪೆನಿಯ ಪೀಟರ್ ರಾಜು-ಇವರುಗಳಿಗೆ ಇನ್‌ಫ್ಲುಯೆಂಜಾ ವ್ಯಾಧಿಯು ತಗಲಿರುವುದಾಗಿ ತಿಳಿಸಿರುತ್ತಾರೆ

ದಾಸಪ್ರಕಾಶದಲ್ಲಿ ರಾಮ ಪಟ್ಟಾಭಿಷೇಕ

ನಗರದ ದಸಪ್ರಕಾಶ ಹೋಟೇಲಿನಲ್ಲಿರುವ ಶ್ರೀರಾಮ ಮಂದಿರದಲ್ಲಿ ನಾಳೆ ಮಧ್ಯಾಹ್ನ ೧ ಗಂಟೆಗೆ ರಾಮ ಪಟ್ಟಾಭಿಷೇಕವು ನಡೆಯುವುದು. ಸಂಜೆ ೬-೩೦ ಗಂಟೆಗೆ ಆ॥ ವಿ॥ ಸಂಗೀತರತ್ನ ಟಿ ಚೌಡಯ್ಯನವರ ಪಿಟೀಲು ವಾದನವು ವಿ॥ ವೀರಭದ್ರಯ್ಯನವರ ಮೃದಂಗ ಮತ್ತು ವಿ॥ ಮಂಜುನಾಥ್‌ರವರ ಘಟದೊಡನೆ ಜರುಗುವುದು ಸಂಜೆ ೭॥ ಗಂಟೆಗೆ ಶ್ರೀ ಕೆ ಸೀತಾರಾಮರಾಯರು ಮತ್ತು ಸಹೋದರರಿಂದ ಭಜನೆಯು ಇದೆ ನಾಳಿದ್ದು ಸಂಜೆ ೬ ಗಂಟೆಗೆ ಭಜನೆಯೂ, ೭ ಗಂಟೆಗೆ ಹನುಮಂತೋತ್ಸವವೂ ಜರುಗುವುವು

ಸಟ್ಟಾ ಜೂಜಿಗಾಗಿ ದಂಡ

ಮಿರ್ಜಾ ಆಸ್ಪತ್ರೆ ರಸ್ತೆಯಲ್ಲಿ ಸಟ್ಟಾ ಜೂಜಾಡುತ್ತಿದ್ದನೆಂದು ಮಂಡಿ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಮಹಮದ್ ಅಬ್ಬಾಸ್ ಎಂಬುವನಿಗೆ ದ್ವಿತೀಯ ನಗರ ನ್ಯಾಯಾಧೀಶರು ನಿನ್ನೆ ೩೦ ರೂ ದಂಡವನ್ನು ವಿಧಿಸಿದರು ಅವನ ಬಳಿ ಇದ್ದ ೪-೧೪-೦ ರೂ ಗಳನ್ನು ವಶಪಡಿಸಿಕೊಳ್ಳಲಾಯಿತು

ಕಾಶ್ಮೀರಕ್ಕೆ ಮೈಸೂರು ರಾಜ್ಯಪಾಲರ ಭೇಟಿ

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ಈ ತಿಂಗಳು ಮಧ್ಯಭಾಗದಲ್ಲಿ ಕಾಶ್ಮೀರಕ್ಕೆ ಭೇಟಿಯಿತ್ತು, ಶ್ರೀನಗರದಲ್ಲಿ ೧೬ನೇ ತಾರೀಖು ನಡೆಯುವ ಅಖಿಲ ಭಾರತ ತತ್ವ ಶಾಸ್ತ್ರ ಸಮ್ಮೇಳನದಲ್ಲಿ ಭಾಷಣ ಮಾಡುವರು

ಪಶ್ಚಿಮ ನೇಪಾಳದಲ್ಲಿ ಪ್ರತಿ ಸರ್ಕಾರವನ್ನು ಸ್ಥಾಪಿಸಲು ಕಮ್ಯೂನಿಸ್ಟರು ನಡೆಸಿದ ಪ್ರಯತ್ನವನ್ನು ವಿಫಲಗೊಳಿಸಲಾಗಿರುವುದೆಂದು ನೇಪಾಳದ ಪ್ರಧಾನಿ ಟಂಕಾ ಪ್ರಸಾದ ಆಚಾರ್ಯರವರು ತಿಳಿಸಿರುತ್ತಾರೆ ಪಶ್ಚಿಮ ನೇಪಾಳದಲ್ಲಿ ಕಮ್ಯೂನಿಸ್ಟರು ತಮ್ಮ ಆಧಿಪತ್ಯವನ್ನು ಏರ್ಪಡಿಸಲು ತೊಡಗಿದ್ದರೆಂದು ಹೇಳಲಾಗಿದೆ ರಾಪ್ತಿ ಹಿಲ್ ಎಂಬಲ್ಲಿ ಜನತಾ "ಪೋಲೀಸ"ರನ್ನು ನೇಮಿಸಿದ್ದುದಾಗಿಯೂ ಒಂದು ತಿಂಗಳಿಂದ ಅಲ್ಲಿ ಪ್ರತಿ ಸರ್ಕಾರವು ನಡೆಯುತ್ತಿತ್ತೆಂದೂ ತಿಳಿದು ಬಂದಿದೆ

ಬಿ. ಎಸ್‌ಸಿ. ರ್‍ಯಾಂಕುಗಳು

ಮೈಸೂರು ೪

ಬಿ ಎಸ್‌ಸಿ ಯ ಎರಡನೇ ಮತ್ತು ಮೂರನೇ ಪಾರ್ಟುಗಳ ರ್‍ಯಾಂಕುಗಳ ಪಟ್ಟಿ ಯು ಈ ರೀತಿ ಇದೆ:—

೨ನೇ ಪಾರ್ಟ್ : ೧ ಬೆಂಗಳೂರು ಮಹಾರಾಣಿ ಕಾಲೇಜಿನ ಶ್ರೀಮತಿ ಎ. ಸುಮತಿ; ೨ ಕಾರ್ಮೆಲ್ಲಿನ ನಳಿನಿ ಮಲ್ಲಯ್ಯ ಮತ್ತು ಮೈಸೂರಿನ ಸೇಂಟ್ ಫಿಲೊಮಿನಾದ ಮಹಮದ್ ನಿಸಾರ್ ಅಹಮದ್; ೩ ಮೌಂಟ್ ಕಾರ್ಮೆಲ್ಲಿನ ಕೆ ನಳಿನಿ ರಾವ್, ೪ ಯುವರಾಜಾ ಕಾಲೇಜಿನ ಜಿ. ಮಹಬೂಬ್ ಅಲಿಖಾನ್; ೫ ನ್ಯಾಷನಲ್ ಕಾಲೇಜಿನ ಬಿ. ಶ್ರೀನಿವಾಸಮೂರ್ತಿ; ೬ ಸೆಂಟ್ರಲ್ ಕಾಲೇಜಿನ ನಿಸಾರ್‌ಮಹಮದ್ ಖದೀರುಲ್ಲಾ; ಯುವರಾಜಾ ಕಾಲೇಜಿನ ಎಂ. ಆರ್. ಹಬೀಬುಲ್ಲಾ ಮತ್ತು ಮೌಂಟ್ ಕಾರ್ಮೆಲ್ಲಿನ ವೋನಿಕಾಲಕ ೭, ೭ ಸೆಂಟ್ರಲ್ ಕಾಲೇಜಿನ ಆರ್. ಮಾಣಿಕ್ಯವಾಚಕರ್ ಮತ್ತು ಆರ್. ಕೃಷ್ಣರಾವ್, ಬೆಂಗಳೂರು ಮಹಾರಾಣಿ ಕಾಲೇಜಿನ ಎ ಎಸ್. ಸುಂದರ, ಸೇಂಟ್ ಫಿಲೊಮಿನಾದ ಜೆಹ್. ಗುಲಾಂ ಅಹಮದ್‌ಖಾನ್, ೮ ಶಾರದಾವಿಲಾಸ ಕಾಲೇಜಿನ ಎಂ. ರಾಮಚಂದ್ರಾಚಾರ್ ಮತ್ತು ಮಹಾರಾಜಾ ಕಾಲೇಜಿನ ಎಸ್. ವಿ. ಅನಂತಸ್ವಾಮಿ; ೯ ಸೆಂಟ್ರಲ್ ಕಾಲೇಜಿನ ಬಿ ಕೆ. ಸುಬ್ರಹ್ಮಣ್ಯಸ್ವಾಮಿ ಮತ್ತು ಮಹಾರಾಣಿ ಕಾಲೇಜಿನ ಬಿ. ಆರ್. ಶ್ರೀಹರಿ; ೧೦ ಸೆಂಟ್ರಲ್ ಕಾಲೇಜಿನ ಎಂ ಕೆ ಅಶ್ವತ್ಥನಾರಾಯಣಸ್ವಾಮಿ ಮತ್ತು ಮೈಸೂರು ಮಹಾರಾಣಿ ಕಾಲೇಜಿನ ಆರ್. ವತ್ಸಲ.

೩ನೇ ಪಾರ್ಟ್ : ೧ ಸೇಂಟ್ ಜೋಸೆಫ್ಸಿನ ಆರ್. ವೆಂಕಟಾಚಲಂ; ೨, ೩, ೪, ೫, ೬ ನ್ಯಾಷನಲ್ ಕಾಲೇಜಿನ ಬಿ ಶ್ರೀನಿವಾಸಮೂರ್ತಿ, ಕೆ. ಎಸ್. ರಾಮಣ್ಣ, ಬಿ ರಘುನಾಥರಾವ್, ಕೆ ರಾಜಣ್ಣ, ಕೆ. ಎಸ್. ಶ್ರೀಕಂಠಶಾಸ್ತ್ರಿ; ೭ ಮೈಸೂರು ಯುವರಾಜಾ ಕಾಲೇಜಿನ ಎಸ್ ಆರ್. ಮಾಧವ್, ೮ ಮತ್ತು ೯ ನ್ಯಾಷನಲ್ ಕಾಲೇಜಿನ ಕೆ ಎಸ್ ನರಸಿಂಹ ಮತ್ತು ಎಸ್. ಕೆ. ಸುನಾರಾಯಣ, ೧೦ ಯುವರಾಜಾ ಕಾಲೇಜಿನ ಓ. ಶ್ರೀಕಂಠ

ಇಂಟರ್ ಕಾಮರ್ಸ್

೧ ಮತ್ತು ೨ ಬೆಂಗಳೂರು ಕಾಮರ್ಸ್ ಕಾಲೇಜಿನ ಎಲ್ ಬನ್ಸಿಲಾಲ್ ಮತ್ತು ಪ್ರೇಮಚಂದ್‌ಜೈನ; ೩ ಸೇಂಟ್ ಜೋಸೆಫಿನ ಜಿ. ಆನಂದ, ೪ ಮತ್ತು ೫ ಬೆಂಗಳೂರಿನ ಕಾಮರ್ಸ್ ಕಾಲೇಜಿನ ಎ. ಆರ್ ಕಣ್ಣನ್ ಮತ್ತು ವಿ. ಕೆ ಶ್ರೀಧರ.

ಡಿಸ್ಕೊ ಟ್ಯಾಬ್—

ಮಕ್ಕಳ ಬೆಳವಣಿಗೆ ಶಾಸ್ತ್ರೀಯ ಔಷಧ-ನಿರೋಧಕ, ನಿವಾರಕ. ಸಲಹೆಗಳಿಗೆ :-

'ಲವರ್ ಹೌಸ್', ಚಾಮರಾಜಪುರಂ, (ಮೈಸೂರು ಸುತ್ತೂರು ಸ್ಕೂಲ್ ಹತ್ತಿರ)

ಆಹಾರದ ಬೆಳೆಗೆ ಬೆಲೆ ನಿರ್ಧರಿಸಲು ರಾಷ್ಟ್ರೀಯ ಮಂಡಲಿಯ ನಿರ್ಧಾರ

ರೈತನು ಹೆಚ್ಚು ಬೆಳೆ ತೆಗೆಯಲು ಪ್ರೋತ್ಸಾಹಿಸುವುದಕ್ಕಾಗಿ ಆಹಾರದ ಬೆಳೆಗೆ ಕನಿಷ್ಠಾಂಶದ ಬೆಲೆಯನ್ನು ಗೊತ್ತುಪಡಿಸಬೇಕೆಂದು ದೆಹಲಿಯಲ್ಲಿ ಸೇರಿದ್ದ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯು ನಿರ್ಧರಿಸಿರುತ್ತದೆ. ಈ ಬಗ್ಗೆ ವಿವರಗಳನ್ನು ತಯಾರಿಸಿ ಪುನಃ ಪರಿಶೀಲಿಸಲಾಗುವುದು ಕಾಳನ್ನು ಚೆಲ್ಲುವುದಕ್ಕೆ ಮುಂಚೆಯೇ ವಿವಿಧ ಧಾನ್ಯಗಳ ಬೆಲೆಯನ್ನು ಗೊತ್ತುಪಡಿಸಲಾಗಿರುವುದೆಂದು ಹೇಳಲಾಗಿದೆ.

ಪೋರ್ಚುಗೀಸರಿಂದ ಭಾರತೀಯ ಪೋಲೀಸನ ಬಂಧನ

ಪೋರ್ಚುಗೀಸ್ ಪೋಲೀಸರು ಗೋವಾ-ಭಾರತ ಗಡಿಯಲ್ಲಿದ್ದ ವಿಠ್ಠಲ ಹನುಮಾ ಎಂಬ ಪೋಲೀಸನನ್ನು ಭಾರತದ ಗಡಿಯೊಳಗೆ ಎಳೆದು ಕೊಂಡುಹೋಗಿರುವುದಾಗಿ ವರದಿಯಾಗಿದೆ. ಈ ವಿಚಾರದ ಬಗ್ಗೆ ಭಾರತ ಸರ್ಕಾರದವರು ತೀವ್ರ ಕ್ರಮ ಕೈಗೊಂಡು ಬಲವಾದ ಪ್ರತಿಭಟನೆ ಸೂಚಿಸಲಿರುವರೆಂದು ಗೊತ್ತಾಗಿದೆ.

ಇರ್ವಿನ್ ಯೆಂಜಾ ತಡೆಯಲು ನಂಜನಗೂಡು ಪೌರಸಭೆಯ ಕ್ರಮ

ನಂಜನಗೂಡು ಪೌರಸಭೆಯ ವಿಶೇಷ ಅಧಿವೇಶನವು ಉಪಾಧ್ಯಕ್ಷ ಶ್ರೀ ವೈ. ಕೆ. ಎಸ್ ಲಕ್ಷ್ಮಣಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದು ಇತ್ತೀಚೆಗೆ ಎಲ್ಲೆಲ್ಲೂ ಹರಡಿರುವ ಇರ್ವಿನ್ ಯೆಂಜಾ ವ್ಯಾಧಿಯನ್ನು ತಡೆಗಟ್ಟಲು ನೂರು ರೂ. ವೆಚ್ಚದಿಂದ ಔಷಧಿಗಳು ಮತ್ತು ಇತರ ಸಾಮಗ್ರಿಗಳನ್ನು ಕೊಳ್ಳತಕ್ಕದ್ದೆಂದು ನಿರ್ಧರಿಸಲಾಯಿತು

ಬಿ ಕಾಂ (೧ನೇ ಪಾರ್ಟ್)

೧ ಡಿ. ಬನುಮಯ್ಯ ಕಾಲೇಜಿನ ಜಿ ಶ್ರೀನಿವಾಸಮೂರ್ತಿ ಮತ್ತು ೨ ಬೆಂಗಳೂರಿನ ಆರ್ ಸಿ. ಕಾಲೇಜಿನ ಬಿ ಎಸ್ ರಾಮಮೂರ್ತಿ

೨ನೇ ಪಾರ್ಟ್ : ೧ ಮತ್ತು ೨ ಬೆಂಗಳೂರಿನ ಬಿ ಎಸ್ ರಾಮಮೂರ್ತಿ ಮತ್ತು ಜಗರಾಜ್, ಪಿ ಶೈಲ. ೩ನೇ ಪಾರ್ಟ್ : ೧ ಬೆಂಗಳೂರಿನ ಬಿ ಎಸ್ ರಾಮಮೂರ್ತಿ; ೨ ಡಿ. ಬನುಮಯ್ಯ ಕಾಲೇಜಿನ ಜಿ ಶ್ರೀನಿವಾಸಮೂರ್ತಿ.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ಚಿಕ್ಕಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 1911)

Edited, Printed and Published by A R. Nagarajan at Sadhvi Press, D-Subbiah Road, Mysore

ಇಸ್ರೇಲ್ ಮೇಲೆ ಈಜಿಪ್ಟಿನ ಗೆರಿಲ್ಲಾ ಯುದ್ಧವೇ ?

ಈಜಿಪ್ಟು ಇಸ್ರೇಲಿನ ವಿರುದ್ಧವಾಗಿ ಪುನಃ ಗೆರಿಲ್ಲಾ ಯುದ್ಧವನ್ನು ಆರಂಭಿಸಲು ಈಜಿಪ್ಟಿನ ಅಧ್ಯಕ್ಷರು ನಿರ್ಧರಿಸಿರುವುದಾಗಿ ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸೊಪ್ಪು ಮತ್ತು		
ಕೊಯಮುತ್ತೂರು	೪೬ ೭೫	೪೩ ೬೨
ರಸ್ತಪುಡಿ	೩೯ ೨೫	೪೨ ೦೦
ಕಡ್ಡಿ	೪೨ ೭೫	೪೩ ೦೦
ಕೆಂಬೂತಿ	೪೧ ೨೫	
ಕಾರ್ ಸೆಜ್ಜೆ	೨೯ ೭೫	
ರಾಗಿ	೪೪ ೬೧	೪೫ ೬೧
ಜೋಳ	೪೪ ೦೦	೪೦ ೬೧
ಕಡಲೆಕಾಯಿ	೧೭ ೫೭	೨೪ ೦೦
ಹರಳುಬೀಜ	೪೨ ೬೧	
ಹುಚ್ಚೆಳ್ಳು	೪೫ ೦೦	
ಹೊಂಗೇಬೀಜ	೩೪ ೫೦	೩೫ ೪೭
ಎಳ್ಳು	೬೬ ೦೦	
ಹುರುಳಿ	೪೧ ೦೦	೪೩ ೬೨
ಕಡಲೆ	೪೪ ೭೮	
ಉದ್ದು	೬೨ ೨೫	೬೫ ೦೦
ಹೆಸರು	೪೪ ೦೦	೫೫ ೨೫
ಹಲಸಂದೆ	೪೩ ೦೦	೬೦ ೭೫
ಧನಿಯ	೨೧ ೫೦	೨೫ ೧೨
ಅವರೆ	೫೧ ೦೦	೫೯ ೫೦
ಟೀಗೆಕಾಯಿ	೭ ೫೦	೭ ೫೭
ಹುಣಸೆಹಣ್ಣು	೨ ೮೧	೯ ೫೦
ಮೆಣಸಿನಕಾಯಿ	೧೨ ೦೫	೨೦ ೭೫
ಹುಣಸೇಬೀಜ	೪ ೦೦	೬ ೨೫
ತೆಂಗಿನಕಾಯಿ	೧೭೯ ೦೦	೨೫೦ ೦೦

SREE GAYATHRI TALKIES

To-day : Last Day

THE WRONG MAN

On 6th Only

Confidential Report

With :-Orson Welles and Patricia Medina

On 7th Only

Miracle in the Rain

With :-Jane Wymann and Van Johnson

Morning Shows On 8th and 9th

LAST TIME I SAW PARIS

ಯಳಂದೂರಿನಲ್ಲಿ ಮಳೆ ಅನಾಹುತದ ಬಗ್ಗೆ ಜಿಲ್ಲಾಧಿಕಾರಿಗಳಲ್ಲಿ ನಿಯೋಗ

ಲೋಕಸಭಾ ಸದಸ್ಯ ಶ್ರೀ ಎಂ.ಎಸ್. ಗುರುಪಾದಸ್ವಾಮಿಯವರ ನೇತೃತ್ವದಲ್ಲಿ ಯಳಂದೂರು ತಾಲ್ಲೂಕಿನ ಪ್ರಮುಖರಾದ ಕೆ. ಬಿ. ಶಾಂತಮೂರ್ತಿ, ಕೆ. ಎಂ. ಬಟ್ಟಪ್ಪ, ಎಂ. ವಿ. ಸುಬ್ಬಯ್ಯ, ಪಟೇಲ್ ಸಿದ್ಧರಾಜೇ ಅರಸ್ ಮತ್ತು ಎಂ. ಪುಟ್ಟಸ್ವಾಮಿ ಇವರುಗಳನ್ನೊಳಗೊಂಡ ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಮೊನ್ನೆ ಭೇಟಿ ಮಾಡಿ, ಮಳೆ ಅನಾಹುತದಿಂದ ಯಳಂದೂರು ತಾಲ್ಲೂಕಿನಲ್ಲಿ ಒಡೆದುಹೋಗಿರುವ ಕೆಸ್ತೂರು, ಮದ್ದೂರು, ಯರಿಯೂರು, ಯಳಂದೂರು ಮತ್ತು ದುಗಹಟ್ಟಿ ಕೆರೆಗಳನ್ನು ಬೇಗನೆ ರಿಪೇರಿ ಮಾಡಿಸಿಕೊಡಬೇಕೆಂದೂ ಮತ್ತು ಮಳೆಯಿಂದ ಹಾಳಾಗಿರುವ ಬೆಳೆಗಳನ್ನೂ ಮತ್ತು ಮನೆಗಳನ್ನೂ ಸರ್ಕಾರೀ ಸಹಾಯದಿಂದ ಸರಿಪಡಿಸಿಕೊಡಬೇಕೆಂದೂ ಮನವಿ ಮಾಡಿಕೊಂಡಿತು ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ಇತ್ತರು.

C T. C. Old Agrahar, Mysore

The Oldest & the Best

Receives admission for

B. A. & B Sc: English & Kannada

INTER: All parts & all Subjects

B K Satyabodhachar M A , B T.

GLOBE TUTORIAL COLLEGE

Sadvidya Patasala Buildings, MYSORE

Offers Excellent Coaching for

S. S. L. C. & INTER STUDENTS

JOIN AT ONCE

C.T.C., Old Agrahar, Mysore

★ Separate English medium class for the Supple. Exam.

★ 5 periods of work daily

★ Separate class for school-going students from 6 to 8-30 p. m.

★ Matriculation classes in full swing

—: Please visit once :—

B K Satyabodhachar M.A , B T., Principal

ರಣಜಿತ್ ★ 6-6-57ನೇ ಗುರುವಾರದಿಂದ : ಅನೋಖೆ ಪ್ರಾರಂಭ ಪ್ರತಿದಿನ 3 ಆಟಗಳು

ಶಾರದಾ ಪ್ರೊಡಕ್ಷನ್ಸ್ ರವರ ಹಿಂದಿ ಚಿತ್ರ ★ ಮಾಯಾ ನಗರಿ

ಪಾತ್ರ : ಶಶೀಲಾ, ಮಹೀಪಾಲ್, ಅಮರನಾಥ್, ಕೃಷ್ಣಕುಮಾರಿ

THE CHAMPION METROPOLITAN COLLEGE OF COMMERCE

Co-operators' Home, 100' Road, Mysore

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE, Diploma in Stenography, COST & WORKS ACCOUNTANCY, Banking, Shorthand, Typewriting etc

Estd. 1917 — Fully qualified full-time staff — Educational atmosphere - Fine building and up-to-date equipment — Decent Library and Reading Room — Western Business education in the East —Good results — College's Own Diploma also.

M S. PUTTANNA, Vice-Principal. P. SUBBARAYA SASTRY, Principal

★ ಬಿಜೋಲಿ ಮಹಾಮದಕ ★

ರಾಜಕಮಲ್ ★ 7-6-57ರಿಂದ ಅನೋಖೆ ಪ್ರಾರಂಭ ಈಗಾಗಲೇ ಆಂಧ್ರ ಪ್ರದೇಶದಲ್ಲಿ ಅಭೂತಪೂರ್ವ ಜಯ ಗಳಿಸುತ್ತಿರುವ,

12 ಲಕ್ಷ ರೂ. ಗಳ ವೆಚ್ಚದಲ್ಲಿ ತಯಾರಿಸಿರುವ, ಅಂಜಲಿ ಪಿಕ್ಚರ್ಸ್‌ರವರ ಮಹೋನ್ನತ ಜಾನಪದ ಕಲಾಕೃತಿ

ಅಂಜಲಿ, ಜೆಮಿನಿ ಗಣೇಶ್, ರಾಜಸುಲೋಚನ, ಗಿರಿಜ ಸೂರ್ಯಕಲಾ ಮುಂತಾದವರು ಪಾತ್ರವಹಿಸಿರುವ,

★ ಮಣಾಳನೇ ಮಂಗಯಿನ್ ಭಾಗ್ಯಂ

ಪ್ರತಿ ದಿನ ಮೂರು ಆಟಗಳು : 2—15, 6—00 ಮತ್ತು 9—45

ಕಡೇ 2 ದಿನಗಳು ★ ರತ್ನಗಿರಿ ರಹಸ್ಯ ★ | — ನಿರ್ದೇಶಕ : ವೇದಾಂತ ರಾಘವಯ್ಯ — ಸಂಗೀತ : ಆದಿನಾರಾಯಣರಾವ್ - [ಶ್ರೀ ರಾಘವೇಂದ್ರ ಪಿಲಂ

6 ವಾರಗಳ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟ್ ಮತ್ತು ಫ್ರೀ ಪಾಸುಗಳನ್ನು ನಿಲ್ಲಿಸಲಾಗಿದೆ.

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೫] SADHVI : THURSDAY 6—6—1957 ಮೈಸೂರು : ಗುರುವಾರ ೬—೬—೧೯೫೭ : [ಸಂಚಿಕೆ : ೩೦

ಸಂಸ್ಥಾನ ಮಂತ್ರಿಮಂಡಲ ವಿಸ್ತರಣೆ ಸಂಭವ ಇನ್ನೂ ಇದೆ

ಮಂತ್ರಿಮಂಡಲದ ವಿಸ್ತರಣೆಯ ಸಂಭವ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಹೇಳಿಕೆ

ಸ್ವಂ ಸು ಶಂತಿ] ಬೆಂಗಳೂರು ೬

ದೆಹಲಿಯಿಂದ ಈ ದಿನ ಹಿಂದಿರುಗಿದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರವಾಗಿ ಸಂಸ್ಥಾನದ ಮಂತ್ರಿಮಂಡಲದ ವಿಸ್ತರಣಾ ಸಂಭವವು ಇನ್ನೂ ಇದ್ದೇ ಇದೆಯೆಂದು ನುಡಿದರು. ದೆಹಲಿಯಲ್ಲಿ ಅವರು ಕಾಂಗ್ರೆಸ್ ಅಧ್ಯಕ್ಷ ಧೇಬರರನ್ನೂ ಭೇಟಿ ಮಾಡಿದ್ದರು.

ಸಂಸ್ಥಾನದ ಉತ್ತರ ಭಾಗಗಳಲ್ಲಿ ಅತಿವೃಷ್ಟಿಯಿಂದ, ಬರುವ ಐದು ತಿಂಗಳ ಕಾಲ ಅಲ್ಲಿ ಆಹಾರ ಸ್ಥಿತಿಯು ಕಠಿಣವಾಗಿರುವುದೆಂದೂ, ಆದುದರಿಂದ ಕೇಂದ್ರ ಸರ್ಕಾರದವರು ತಿಂಗಳಿಗೆ ಸಾವಿರ ಟನ್ನಿನಂತೆ ಅಕ್ಕಿಯನ್ನು ಅಲ್ಲಿಗೆ ಒದಗಿಸುವರೆಂದೂ ಅವರು ತಿಳಿಸಿದರು. ಈ ಕಷ್ಟ ಸ್ಥಿತಿಯಲ್ಲಿ ಜನರು ಅಕ್ಕಿಗೆ ಬದಲು ಗೋಧಿಯನ್ನು ಉಪಯೋಗಿಸಲು ಅಭ್ಯಾಸ ಮಾಡಬೇಕೆಂದೂ ಅವರು ಸೂಚಿಸಿದರು.

ಹೈ ಕೋರ್ಟ್ ನ್ಯಾಯಾಧೀಶರ ನೇಮಕ

ಇನ್ನು ಒಂದು ವಾರದೊಳಗಾಗಿ ಹೈಕೋರ್ಟಿಗೆ ಮೂರು ಅಥವಾ ನಾಲ್ಕು ನ್ಯಾಯಾಧೀಶರುಗಳ ನೇಮಕದ ಬಗ್ಗೆ ಪ್ರಕಟಣೆ ಹೊರಡಲಿದೆಯೆಂದು ಅವರು ತಿಳಿಸಿದರು.

ಸತ್ಯಮಂಗಲದ ರೈಲ್ವೆ

ಚಾಮರಾಜನಗರ-ಸತ್ಯಮಂಗಲದ ರೈಲ್ವೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಾವು ಒತ್ತಾಯ ಮಾಡಿರುವುದಾಗಿಯೂ, ಆದರೆ ಶೀಘ್ರದಲ್ಲಿ ಅದು ಆರಂಭವಾಗುವ ಭರವಸೆ ತಮಗೆ ಇಲ್ಲವೆಂದೂ ಅವರು ಹೇಳಿದರು.

ಆಹಾರ ಧಾನ್ಯಗಳ ಚಲನವನ್ನು ಹತೋಟಿಯಲ್ಲಿಟ್ಟು ಕೇರಳ ಪ್ರಾಂತ್ಯಕ್ಕೆ ಅವು ಸಾಗಾಣಿಕೆಯಾಗದಂತೆ ಮದರಾಸು, ಮೈಸೂರು, ಆಂಧ್ರ ದೇಶಗಳ ಒಂದು ಹತೋಟಿ ವಲಯವನ್ನು ನಿರ್ಮಾಣ ಮಾಡಲು ತಾವು ಒಪ್ಪುವುದಾಗಿಯೂ ಅವರು ನುಡಿದರು.

ಮೈಸೂರು ಜಿಲ್ಲಾಧಿಕಾರಿಗಳ ವರ್ಗ

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಆರ್. ಚನ್ನರುದ್ರಯ್ಯನವರನ್ನು ಬೆಂಗಳೂರು ಜಿಲ್ಲಾಧಿಕಾರಿಗಳಾಗಿ ವರ್ಗಾಯಿಸಲಾಗಿದೆ. ಕೊಡಗು ಜಿಲ್ಲಾಧಿಕಾರಿ ಶ್ರೀ ಸಿ.ವಿ. ಸುಬ್ಬಯ್ಯನವರನ್ನು ಮುಂದೆ ಆಜ್ಞೆಯಾಗುವವರೆಗೆ ಮೈಸೂರು ಜಿಲ್ಲಾಧಿಕಾರಿಗಳಾಗಿ ನೇಮಕ ಮಾಡಲಾಗಿದೆ. ಬೆಂಗಳೂರು ಮಾರ್ಕೆಟ್ ತೆರಿಗೆ ಸ್ಪೆಷಲ್ ಆಫೀಸರ್ ಅಧಿಕಾರಿಗಳಾದ ಶ್ರೀ ಬಿ. ನಾರಾಯಣಸ್ವಾಮಿಯವರನ್ನು ಶ್ರೀ ಸುಬ್ಬಯ್ಯನವರ ಸ್ಥಾನಕ್ಕೆ ನೇಮಿಸಲಾಗಿದೆ.

ಸಯಾಮಿನಲ್ಲಿ ಲಕ್ಷ ಜನರಿಗೆ ಇನ್‌ಫ್ಲುಯೆಂಜಾ

ಸಯಾಮಿನಲ್ಲಿ ೧ ಲಕ್ಷ ಜನರಿಗೆ ಇನ್‌ಫ್ಲುಯೆಂಜಾ ವ್ಯಾಧಿಯು ತಗಲಿರುವುದಾಗಿ ವರದಿಯಾಗಿದೆ. ಬ್ಯಾಂಕಾಂಕ್ ನಗರದಲ್ಲಿ ಅದು ಕಡಿಮೆಯಾಗುತ್ತಿದ್ದರೂ, ಇತರ ಕಡೆ ಹರಡುತ್ತಿದೆ.

ನಗರದಲ್ಲಿ ೧೭ ಜನರಿಗೆ ಇನ್‌ಫ್ಲುಯೆಂಜಾ ವ್ಯಾಧಿ

ಮೈಸೂರು ೬

ನಿನ್ನೆಯಿಂದೀಚೆಗೆ ಇನ್ನೂ ಆರು ಜನರಿಗೆ ಇನ್‌ಫ್ಲುಯೆಂಜಾ ತಗಲಿ ಒಟ್ಟು ಸಂಖ್ಯೆ ೧೭ಕ್ಕೆ ಏರಿದೆ.

ರೇಷ್ಮೆ ಕಾರ್ಖಾನೆ ಕಾರ್ಮಿಕರಿಂದ ಮುಷ್ಕರದ ಬ್ಯಾಲಟ್

ಸರ್ಕಾರಿ ನೌಕರರಿಗೆ ಕೊಟ್ಟಿರುವಂತೆ ಹೆಚ್ಚು ಸಂಬಳ ಮತ್ತು ತುಟ್ಟಿಭತ್ಯವನ್ನು ಸರ್ಕಾರದ ಕೈಗಾರಿಕಾ ಕಾರ್ಮಿಕರಿಗೂ ಕೊಡಬೇಕೆಂಬ ವಿಚಾರದಲ್ಲಿ ರಚಿತವಾಗಿದ್ದ ಸಮಿತಿಯು ವರದಿಯನ್ನು ಕೊಟ್ಟು ೧ ತಿಂಗಳಾದರೂ ಸೂಕ್ತ ಕ್ರಮವನ್ನು ಸರ್ಕಾರದವರು ಕೈಗೊಳ್ಳದಿರುವ ಸಂಬಂಧವಾಗಿ ಸರ್ಕಾರಿ ಕಾರ್ಖಾನೆ ಕಾರ್ಮಿಕರುಗಳ ಫೆಡರೇಷನ್ನಿನ ಕಾರ್ಯಕಾರಿ ಸಮಿತಿ ಸೂಚನೆ ಮೇರೆ ಮುಷ್ಕರ ನಡೆಸಲು ಇಂದು ಸಂಜೆ ಇಲ್ಲಿನ ರೇಷ್ಮೆ ಕಾರ್ಖಾನೆ ಕಾರ್ಮಿಕ ಸಂಘದವರು ಮುಷ್ಕರದ ಬ್ಯಾಲಟ್ಟನ್ನು ತೆಗೆದುಕೊಳ್ಳುವರು. ಕಾರ್ಖಾನೆ ವಾಚ್ಮನ್ನುಗಳ ಓವರ್ ಟೈಂ ವೇತನದ ಸಮಸ್ಯೆಯನ್ನು ೧ ತಿಂಗಳೊಳಗೆ ಇತ್ಯರ್ಥ ಪಡಿಸದಿದ್ದಲ್ಲಿ ಮುಂದಿನ ಕ್ರಮ ಜರುಗಿಸಬೇಕೆಂದೂ ನಿರ್ಧರಿಸಲಾಯಿತು.

ಬೆಳಗಿನ ಜಾವದಲ್ಲಿ ಬೀದಿ ದೀಪ ಆರುವುದು ತಪ್ಪಬೇಕು

ನಗರದಲ್ಲಿ ಅನೇಕ ದಿನಗಳಿಂದ ಬೀದಿ ದೀಪಗಳನ್ನು ಮುಂಜಾನೆ ಆರಿಸಲಾಗುತ್ತಿದೆ. ಅದರಿಂದ ಬೀದಿ ನಲ್ಲಿಗಳಲ್ಲಿ ನೀರು ತೆಗೆದುಕೊಳ್ಳಲು ಬರುವ ಹೆಂಗಸರು, ಕೆಲಸಕ್ಕೆ ಹೋಗುವವರು ಮುಂತಾದವರಿಗೆ ತೊಂದರೆಯಾಗಿದೆ. ದೀಪಗಳ ನಗರ ಎಂದು ಪ್ರಸಿದ್ಧವಾಗಿರುವ ಈ ಊರಿನಲ್ಲಿ ಪ್ರಜೆಗಳ ಉಪಯೋಗಕ್ಕೆ ಅವಶ್ಯವಿದ್ದಾಗ ದೀಪವಿಲ್ಲದಿರುವುದೊಂದು ಕೊರತೆಯಾಗಿದೆ. ಪೌರಸಭೆಯವರು ಬೇಕಾದರೆ ದೂರ ಪ್ರದೇಶಗಳಲ್ಲಿರುವ ಅಲಂಕಾರದ ದೀಪಗಳ ಸಂಖ್ಯೆಯನ್ನು ಕಡಿಮೆ ಮಾಡಿ ಮಿತವ್ಯಯ ಮಾಡಿಕೊಳ್ಳಬಹುದು. ಜನರ ಸೌಕರ್ಯವನ್ನು ಮಾತ್ರ ಕಡಿಮೆ ಮಾಡುವುದು ಸರಿಯಲ್ಲ. ಪೌರಸಭಾ ಸದಸ್ಯರು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳುವರೆಂದು ನಂಬಲಾಗಿದೆ-ಎಂಬುದಾಗಿ ಶ್ರೀ ಜಿ. ಎಸ್. ಭೈರೋಜಿರಾಯರು ಪತ್ರ ಬರೆದು ತಿಳಿಸಿದ್ದಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವೇದಪಠಣ. ೭-೧೫ ಗಾಂಧಿ ಸ್ಮೃತಿ. ೭-೩೦ ರೆಕಾರ್ಡ್-ಶಹನಾಯ್. ೮-೧೫ ಹಿಂದಿ ಪಾಠ. ಮಧ್ಯಾಹ್ನ ೧೨ ಎಂ. ಎ. ನರಸಿಂಹಾಚಾರ್-ಸಂಗೀತ. ೧೨-೩೦ ವನಿತಾ ವಿಹಾರ. ೧-೨೦ ರೆಕಾರ್ಡ್. ೧-೫೦ ಪಿಟೀಲು, ೨-೧೫ ಪ್ರೌಢ ಶಾಲೆಗಳಿಗಾಗಿ. ಸಂಜೆ ೬-೧೦ ನೃತ್ಯಗೀತೆ. ೭-೩೦ ಯೋಜನೆಯ ಸಾಧನೆ-ಭಾಷಣ. ೮ ಟಿ. ಕೃಷ್ಣಯ್ಯಂಗಾರ್-ಸಂಗೀತ ಮತ್ತು ಗೋಷ್ಠಿ. ೯-೫ ವೃಂದಗಾನ. ೯-೩೦ ರಂಗಭೂಮಿಯಿಂದ : ಸಂಸ್ಕೃತ ಕಾರ್ಯಕ್ರಮ. ೧೦-೧೫ ಎಂ. ಎ. ನರಸಿಂಹಾಚಾರ್-ರಾಗ, ತಾನ, ಪಲ್ಲವಿ

ಟ್ಯಾಕ್ಸಿಗೂ, ಗಾಡಿಗೂ ಡಿಕ್ಕಿಯಲ್ಲಿ ಎತ್ತಿನ ಮರಣ

ಸ್ವಂ. ಸು ಫೋ] ನಂಜನಗೂಡು ೬

ನಿನ್ನೆ ರಾತ್ರಿ ಮೈಸೂರು ಕಡೆಯಿಂದ ಬರುತ್ತಿದ್ದ ೨೫೦ನೇ ನಂಬರಿನ ಟ್ಯಾಕ್ಸಿಯು ಇಲ್ಲಿನ ಕಪಿಲಾ ಟೆಕ್ಸ್‌ಟೈಲ್ ಗಿರಣಿ ಬಳಿ ಎರಡು ಎತ್ತಿನ ಗಾಡಿಗಳಿಗೆ ಡಿಕ್ಕಿ ಹೊಡೆದುದರಿಂದ ಒಂದು ಎತ್ತು ಸ್ಥಳದಲ್ಲೇ ಮೃತಪಟ್ಟಿತು. ಇನ್ನೊಂದಕ್ಕೂ ಬಹಳ ಗಾಯವಾಗಿ, ಕೊಂಬುಗಳು ಮುರಿದು ಹೋದುವು. ಇನ್ನೊಂದು ಗಾಡಿಗೂ ಮತ್ತು ಕಾರಿಗೂ ಬಹಳ ಜಖಂ ಆಗಿದೆ. ಯಾರಿಗೂ ಗಾಯವಾಗಿಲ್ಲ. ಪೋಲೀಸಿನವರು ತನಿಖೆ ನಡೆಸುತ್ತಿರುವರು.

ಇನ್‌ಫ್ಲುಯೆಂಜಾ ವ್ಯಾಧಿಗೆ ಸುಲಭ ಚಿಕಿತ್ಸೆ

ಆಯುರ್ವೇದ ವೈದ್ಯರಾದ ಡಾ|| ವಿ. ಆರ್. ಎಸ್. ರಾಯರು ಇನ್‌ಫ್ಲುಯೆಂಜಾ ಸಾಂಕ್ರಾಮಿಕ ಜಾಡ್ಯವನ್ನು ತಡೆಗಟ್ಟಲು ಕೆಳಗೆ ಕಂಡ ಔಷಧಿಯನ್ನು ಉಪಯೋಗಿಸಿದಲ್ಲಿ ಮನುಷ್ಯನಿಗೆ ಅಪಾಯವಿರುವುದಿಲ್ಲವೆಂದು ತಿಳಿಸಿರುತ್ತಾರೆ:—

ಪ್ರತಿ ದಿನವೂ ಬೆಳಗ್ಗೆ ಉಪಾಹಾರಕ್ಕೆ ಮುಂಚೆ ೩ ಗಟ್ಟಿಯಾದ ಮೆಣಸಿನ ಕಾಳನ್ನೂ ಮತ್ತು ಒಂದು ತುಳಸೀ ದಳವನ್ನೂ ಬಾಯಿಯಲ್ಲಿ ಹಾಕಿಕೊಂಡು ಚೆನ್ನಾಗಿ ಅಗಿದು, ರಸವನ್ನು ಸೇವಿಸಿದರೆ ಮೇಲ್ಕಂಡ ಜ್ವರವು ಎಂದಿಗೂ ಬರುವುದಿಲ್ಲ. ಹಾಲಿ ಅನುಭವಿಸುತ್ತಿರುವವರು ಗಟ್ಟಿಯಾದ ಮೆಣಸಿನಕಾಳು ೧|| ತೊಲ, ಹಿಪ್ಪಲಿ, ದಾಲ್ಚಿನ್ನಿ, ಸಣ್ಣ ರಾಷ್ಟ್ರ, ಓಮ ಇವು ತಲಾ ಅರ್ಧ ತೊಲಾ, ಏಲಕ್ಕಿ ಮತ್ತು ಅತಿಮಧುರ ತಲಾ ಕಾಲು ತೊಲವನ್ನು ತೆಗೆದು ಚೂರ್ಣ ಮಾಡಿ ಕಷಾಯವನ್ನು ಕಾಯಿಸಿ ದಿನಕ್ಕೆ ಮೂರು ವೇಳೆ ಅರ್ಧ ಔನ್ಸಿನಷ್ಟು ಸಣ್ಣ ಚಮಚ ಜೇನುತುಪ್ಪ ಬೆರೆಸಿ ಸೇವಿಸಿದರೆ ಗುಣಹೊಂದುವರು.

ದಸರಾ ಉತ್ಸವ ಸಮಿತಿಗಳು

ದಸರಾ ಉತ್ಸವ ನಡೆಸುವ ಸಂಬಂಧವಾಗಿ ಸರ್ಕಾರದವರು ಗೃಹ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚರವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಿರುವರಲ್ಲದೆ ಕೇಂದ್ರ ಸಮಿತಿಯ ಉಪಾಧ್ಯಕ್ಷರಾಗಿ ಮಾಜಿ ಮಂತ್ರಿ ಶ್ರೀ ಎ. ವಿ. ರಾಮನಾಥರವರನ್ನು ನೇಮಿಸಲಾಗಿದೆ. ಅದರಲ್ಲಿ ಶ್ರೀಗಳಾದ ಎಂ. ಜಿ. ವಿಜಯಸಾರಥಿ, ಎಂ. ಸಿ. ಮಹದೇವಸ್ವಾಮಿ, ಟಿ. ವೆಂಕಟರಮಣಯ್ಯ, ಎಲ್. ಎಸ್. ವೆಂಕಾಜಿರಾವ್, ಜಿ. ವಿ. ಹಳ್ಳಿಕೇರಿ, ಟಿ. ರಾಮನಗೌಡ, ಪಿ. ಎಸ್. ಕಾಮತ್, ಕಲ್ಲೂರು ಮಲ್ಲಪ್ಪ, ಜಗನ್ನಾಥರಾವ್ ಚಂದ್ರಕಿ, ಟಿ. ಎ. ಪೈ ಮತ್ತು ಶ್ರೀಮತಿಯರಾದ ರುಕ್ಮಿಣಿ ಅರುಂಡೇಲ್, ಕಾಮೇಶ್ವರಮ್ಮ ಕುಪ್ಪುಸ್ವಾಮಿ ಮತ್ತು ಯಶೋಧರಾ ದಾಸಪ್ಪನವರು ಸದಸ್ಯರಾಗಿರುವರು. ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಕ್ರೀಡೆಗಳನ್ನು ಏರ್ಪಡಿಸುವ ಸಂಬಂಧವಾಗಿ ಮೈಸೂರು ಪೌರಸಭಾಧ್ಯಕ್ಷರು, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು, ಮೈಸೂರು ಡಿ. ಡಿ. ಸಿ. ಐ., ಪೌರಸಭಾ ಕಮೀಷನರ್, ಶ್ರೀಗಳಾದ ಸಿ. ಕೆ. ವೆಂಕಟರಾಮಯ್ಯ, ಕೆ. ಪುಟ್ಟಸ್ವಾಮಿ, ಸೂರ್ಯನಾರಾಯಣರಾವ್ ಮತ್ತು ಮೈಸೂರು ಜಿಲ್ಲಾಧಿಕಾರಿಗಳು ಮತ್ತೊಂದು ಸಮಿತಿ ಸದಸ್ಯರಾಗಿರುವರು.

ಟಿ. ಎಸ್. ವೆಂಕಣ್ಣಯ್ಯನವರ ನೆನಪಿಗಾಗಿ ಪ್ರಶಸ್ತಿ ಗ್ರಂಥ

ದಿವಂಗತ ಟಿ. ಎಸ್. ವೆಂಕಣ್ಣಯ್ಯನವರ ಪುಣ್ಯ ಸ್ಮರಣೆಗಾಗಿ ಬರುವ ಫೆಬ್ರವರಿ ೨೪ನೆ ತಾರೀಕು ಅವರ ಶಿಷ್ಯರು, ಮಿತ್ರರು ಮತ್ತು ಇತರ ಕನ್ನಡ ಅಭಿಮಾನಿಗಳ ನೆರವಿನಿಂದ ಪ್ರಶಸ್ತಿ ಗ್ರಂಥವೊಂದನ್ನು ಪ್ರಕಟಿಸಲಾಗುವುದು. ಶ್ರೀಗಳಾದ ಕೆ. ಗೋಪಾಲಕೃಷ್ಣರಾವ್, ಜಿ. ವೆಂಕಟಸುಬ್ಬಯ್ಯ, ಎಸ್. ಅನಂತನಾರಾಯಣ ಮತ್ತು ಹ. ವಿ. ಚಂದ್ರಶೇಖರರವರು ಅದರ ಸಂಪಾದಕರು. ವೆಂಕಣ್ಣಯ್ಯನವರ ವ್ಯಕ್ತಿತ್ವ, ಶೀಲ, ನಿಷ್ಠೆ, ಕನ್ನಡ ಸಂಸ್ಕೃತಿ, ಸಾಹಿತ್ಯ ಇವುಗಳನ್ನೊಳಗೊಂಡ ೪೦೦ ಪುಟಗಳಿಂದ ಕೂಡಿದ ಗ್ರಂಥವನ್ನು ರಚಿಸಲಾಗುವುದು. ಅವರ ವಿಷಯವನ್ನು ತಿಳಿದಿರುವವರೂ, ಅವರು ಬರೆದ ಪತ್ರಗಳು, ಅವರ ಛಾಯಾಚಿತ್ರಗಳನ್ನು ಹೊಂದಿರುವವರು ಗ್ರಂಥ ರಚನೆಯಲ್ಲಿ ಸಹಾಯ ಮಾಡುವಂತೆ ಕೋರಲಾಗಿದೆ. ಹಾಗೆಯೇ ಲೇಖನಗಳನ್ನು ಬರೆಯುವಂತೆಯೂ ಕೋರಲಾಗಿದೆ. ಜುಲೈ ತಿಂಗಳ ಕೊನೆಯೊಳಗೆ ಅವು ತಲುಪುವಂತೆ ತಿಳಿಸಲಾಗಿದೆ. ಪುಸ್ತಕದ ಬೆಲೆ ೮ ರೂ. ಆಗುವುದು. ಮುಂಗಡ ಹಣವನ್ನು ಕೊಟ್ಟವರಿಗೆ ೫ ರೂ.ನಂತೆ ಸರಬರಾಜು ಮಾಡಲಾಗುವುದು. ಈ ಗ್ರಂಥದಿಂದ ಬರುವ ಹಣದಲ್ಲಿ ವೆಂಕಣ್ಣಯ್ಯನವರ ಊರಾದ ತಳಕಿನಲ್ಲಿ ಸ್ಮಾರಕ ಭವನದ ನಿಧಿಗೆ ಕೊಟ್ಟು, ಉಳಿದುದರಲ್ಲಿ ಅವರ ಹೆಸರಿನಲ್ಲಿ ಒಬ್ಬ ಕನ್ನಡ ವಿದ್ಯಾರ್ಥಿಗೆ ವರ್ಷವರ್ಷವೂ ಪಾರಿತೋಷಕವನ್ನು ಕೊಡುವಂತೆ ಏರ್ಪಡಿಸಲಾಗುವುದು.

ಅಧ್ಯಾಪಕರ ಮೇಲೆ ಕೈ ಮಾಡಿದ ವಕೀಲರಿಗೆ ದಂಡ

ಬೆಂಗಳೂರು ದಂಡಿನ ಪ್ರದೇಶದ ನ್ಯಾಯಾಧೀಶರಾದ ಶ್ರೀ ಟಿ. ರಾಮಸ್ವಾಮಿಯವರು ಕಳೆದ ಸೋಮವಾರ ಶ್ರೀ ಸೈಯದ್ ಅಹಮದ್ ಎಂಬ ಅಡ್ವೋಕೇಟರು ಮತ್ತು ಅವರ ಅಣ್ಣ ಶ್ರೀ ಸೈಯದ್ ಇಸ್ಮೇಲರಿಗೆ ಅತಿಕ್ರಮ ಪ್ರವೇಶ, ಕೈ ಮಾಡಿದ್ದು ಮತ್ತು ಬಯ್ದುದಕ್ಕಾಗಿ ತಲಾ ೫೦ ರೂ ದಂಡ, ತಪ್ಪಿದರೆ ೧ ವಾರ ಸಾದಾ ಸಜವನ್ನು ವಿಧಿಸಿದರು. ವಕೀಲರಿಗೆ ಮೂರು ಅಪಾದನೆಗಳಿಗಾಗಿಯೂ, ಅವರ ಅಣ್ಣನಿಗೆ ಎರಡು ಅಪಾದನೆಗಳಿಗಾಗಿಯೂ ಶಿಕ್ಷೆ ವಿಧಿಸಲಾಯಿತು. ಅವರು ೨ ವರ್ಷಗಳ ಹಿಂದೆ ಅಲ್ಲಿನ ಪ್ರಾಥಮಿಕ ಶಾಲೆಗೆ ನುಗ್ಗಿ ಡ್ರಾಯಿಂಗ್ ಮಾಸ್ಟರ್ ಶ್ರೀ ಬಿ. ಸಿ. ಲೋಗನಾಥರವರನ್ನು ಬೈದುದಲ್ಲದೆ, ಹೊಡೆದರೆಂದೂ ಅಪಾದಿಸಲಾಗಿತ್ತು.

ಏಕಕಾಲದಲ್ಲಿ ೪ ಮಕ್ಕಳ ಜನನ

ಲಂಡನ್ ಆಸ್ಪತ್ರೆಯಲ್ಲಿ ಕಳೆದ ಸೋಮವಾರ ೨೯ ವರ್ಷದ ಹೆಂಗಸೊಬ್ಬಳು ಏಕಕಾಲದಲ್ಲಿ ನಾಲ್ಕು ಹೆಣ್ಣು ಮಕ್ಕಳನ್ನು ಪ್ರಸವಿಸಿದಳು. ಎಲ್ಲವೂ ಒಂದು ತಿಂಗಳ ಮುಂಚೆಯೇ ಹುಟ್ಟಿವೆ. ತಾಯಿ ಸೆಲಿನಾ ಫಿಲಿಪ್ಸಳೂ, ಮಕ್ಕಳೂ ಆರೋಗ್ಯವಾಗಿರುವರು.

ಢಾಕಾ ಬಳಿ ಮುಸ್ಲಿಂ ಲೀಗಿನ ಸಭೆಯಲ್ಲಿ ಗೊಂದಲ

ಅಧ್ಯಕ್ಷ ನಿಷ್ತಾರ್ ಮತ್ತು ಮಾಜಿ ಮುಖ್ಯ ಮಂತ್ರಿಯ ಅವಹೇಳನ

ಪೂರ್ವ ಪಾಕಿಸ್ತಾನದ ರಾಜಧಾನಿ ಢಾಕಾ ಸಮೀಪವಿರುವ ನಾರಾಯಣಗಂಜಿನಲ್ಲಿ ಮೊನ್ನೆ ಮುಸ್ಲಿಂ ಲೀಗಿನ ಬಹಿರಂಗ ಸಭೆಯೊಂದರಲ್ಲಿ ಗೊಂದಲವಾಗಿ ಸಭೆಯನ್ನು ಹಾಗೆಯೇ ಮುಕ್ತಾಯ ಮಾಡಲಾಯಿತು ಭಾಷಣ ಮಾಡಲು ಬಂದಿದ್ದ ಪಾಕಿಸ್ತಾನ ಲೀಗಿನ ಅಧ್ಯಕ್ಷ ಸರ್ದಾರ್ ಅಬ್ದುಲ್ ರಬ್ ನಿಷ್ತಾರ್ ಮತ್ತು ಪೂರ್ವ ಪಾಕಿಸ್ತಾನದ ಮಾಜಿ ಮುಖ್ಯಮಂತ್ರಿ ನೂರುಲ್ ಅಮೀನ್‌ರವರಿಗೆ ಪೊಲೀಸರು ರಕ್ಷಣೆ ಕೊಟ್ಟು ಕಳುಹಿಸಬೇಕಾಯಿತು ಮುಸ್ಲಿಂ ಲೀಗ್ ಉರುಳಲಿ, ದ್ರೋಹಿ ಸರ್ದಾರರೇ ಹಿಂದಿರುಗಿ–ಎಂಬ ಜನರು ಕೂಗಿದರು ರಾಷ್ಟ್ರೀಯವನ್ನು ವಿಮೋಚನೆ ಮಾಡಬೇಕೆಂಗು ಲೀಗ್ ಅಧ್ಯಕ್ಷರು ತಿಳಿಸಿದರೆಂದು ಹೇಳಲಾಗಿದೆ ಅವರ ಮೋಟಾರಿಗೆ ಕಲ್ಲು ಬೀರಲಾಯಿತು ಪೂರ್ವ ಪಾಕಿಸ್ತಾನದ ಹಿಂದೂ ದೇವಾಲಯಗಳ ರಿಪೇರಿಗೆ ಸರ್ಕಾರದ ಗ್ರಾಂಟ ಕೊಡಬಾರದೆಂದು ನೂರುಲ್ ಅಮೀನರು ಹೇಳಿದರು

ವಿದ್ಯಾರಣ್ಯಪುರದಲ್ಲಿ ಹೊಸ ಪ್ರೌಢ ಶಾಲೆ

ವಿದ್ಯಾರಣ್ಯಪುರದಲ್ಲಿ ಈ ತಿಂಗಳಿಂದ ಸಾರ್ವಜನಿಕ ಪ್ರೌಢ ಶಾಲೆಯೊಂದನ್ನು ತೆರೆಯಲು ವಿದ್ಯಾ ಇಲಾಖಾ ಡೆಪ್ಯುಟಿ ಡೈರೆಕ್ಟರರು ಅನುಮತಿಯಿತ್ತಿರುವರು ಮೊದಲನೆಯ ತರಗತಿಯು ಸಧ್ಯದಲ್ಲೇ ಆರಂಭವಾಗಲಿದೆ ಸೇರಲಿಚ್ಛಿಸುವವರು ಕೂಡಲೇ ತಿಳಿಸುವಂತೆ ಶಾಲಾ ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿಯವರು ಕೋರಿರುವರು

SARADAVILAS COLLEGE
Mysore
INTER TUTORIAL SECTION
Eng, S L & P C M are taught
Highly qualified and experienced staff

GLOBE TUTORIAL COLLEGE
Sadvidya Pitas la Buildings
MYSORE
Offers Excellent Coaching for
S. S. L C & INTER STUDENTS
JOIN AT ONCE

ಗ್ರಂಥಗಳಿಗೆ ಮಾರಾಟ ತೆರಿಗೆ ವಿನಾಯಿತಿ

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆಯು ದೆಹಲಿಯಲ್ಲಿ ಸೇರಿ, ಗ್ರಂಥಗಳ ಮೇಲೆ ಮಾರಾಟ ತೆರಿಗೆಯ ವಿನಾಯಿತಿ ಕೊಡಬೇಕೆಂದು ನಿರ್ಧರಿಸಿತು ೧೪ ಸಂಸ್ಥಾನಗಳ ಮುಖ್ಯ ಮಂತ್ರಿಗಳು ಮತ್ತು ಯೋಜನಾ ಮಂಡಲಿಯ ಸದಸ್ಯರುಳ್ಳ ಸ್ಥಾಯೀ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು

ಹಿಂದೀ ತರಗತಿಗಳು

ಇದೇ ಆಗಸ್ಟ್ ತಿಂಗಳು ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾದಮಿಕದಿಂದ ವಿಶಾರದ್‌ವರೆಗಿನ ಪರೀಕ್ಷೆಗಳಿಗೂ, ಅಕ್ಟೋಬರಿನಲ್ಲಿ ನಡೆಯುವ ಮೈಸೂರು ಹಿಂದಿ ಸಾಹಿತ್ಯ ಪರಿಷತ್ತಿನ ಪ್ರಥಮಾ ಮಧ್ಯಮಾ ಉತ್ತಮಾ ಮುಂತಾದ ಪರೀಕ್ಷೆಗಳಿಗೂ ತರಗತಿಗಳು ಮಾದರೀ ಶಾಲೆಯಲ್ಲಿ ಪ್ರತಿ ದಿನ ಸಂಜೆ ೫–೩೦ರಿಂದ ನಡೆಯುತ್ತಿವೆ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ತರಗತಿಗಳನ್ನು ಏರ್ಪಡಿಸಿದೆ ಒರಲಿಚ್ಛಿಸುವವರು ಕೂಡಲೇ ತರಗತಿಗಳಿಗೆ ಸೇರಬೇಕಾಗಿ ಕೋರಿದೆ

ಪೊಲೀಸು ಶಿಕ್ಷಣ ಕಾಲೇಜು

ಪ್ರಿನ್ಸಿಪಾಲರಿಗೆ ನಿವೃತ್ತಿ ರಜಾ

ನಗರದಲ್ಲಿರುವ ಪೊಲೀಸು ಶಿಕ್ಷಣ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಹೆಚ್ ಜಿ ರಾಜಶೇಖರಯ್ಯನವರಿಗೆ ನಿವೃತ್ತಿಗೆ ಪೂರ್ವವಾಗಿ ಕಳೆದ ೧೫ರಿಂದ ೪ ತಿಂಗಳು ಮತ್ತು ೧೮ ದಿನ ರಜಾ ಕೊಡಲಾಗಿದೆ

ಪ್ರ ಕ ಟ ಣೆ

ಮೈಸೂರು ನಗರದಲ್ಲಿ ಮಂಗಳ ವಿದ್ಯಾರ್ಥಿಗಳಿಗಾಗಿ ತಾರೀಕು 16–6–57ಕ್ಕೆ ಹೊಸದಾಗಿ ತೆರೆಯಲಿರುವ ಹಾಸ್ಟಲಿಗೆ ಸೇರಲು ಬಯಸುವ ವಿದ್ಯಾರ್ಥಿಗಳು ಹಾಸ್ಟಲ್ ಸಕ್ರೆಟರಿಯವರಲ್ಲಿ ದೊರೆಯುವ ಫಾರಂಗೆ ಒಂದು ರೂಪಾಯಿ ಶುಲ್ಕ ಕೊಟ್ಟು ಮೊಖ್ತಾ ಯಾ ಟಪ್ಪಾಲ್ ಮೂಲಕ ಪಡೆಯುವುದು ಮತ್ತು ಸದರಿ ಫಾರಂ ಭರ್ತಿ ಮಾಡಿ ಈ ತಿಂಗಳು 15ನೇ ತಾರೀಕಿನೊಳಗಾಗಿ ಕಳ ಕಂಡ ವಿಳಾಸಕ್ಕೆ ತಲುಪಿಸುವುದು

ಸೆ ಕ್ರೆ ಟ ರಿ,
ವೆಂಕಟರಾವ್–ದೇವೋಜಿರಾವ್ ವಿದ್ಯಾರ್ಥಿ ನಿಲಯ, 2/99 ಹಳ್ಳದಕೇರಿ, ಮೈಸೂರು

Edited, Printed and Published by A R Nag... at ... ... Press, D. Subbiah ... Mysore

ಆಯುರ್ವೇದ ವಿದ್ಯಾ ಶಾಲೆಗಳ ಇಂದಿನ ಶೋಚನೀಯ ಸ್ಥಿತಿ

ಆಯುರ್ವೇದ ವಿದ್ವಾನ್ ಆಗರಂ ವೆಂಕಟರಾಮಾ ಪಂಡಿತರು ಮೇಲ್ಕಂಡ ಶಿರೋನಾಮೆಯಲ್ಲಿ ಒಂದು ಗ್ರಂಥವನ್ನು ರಚಿಸಿರುತ್ತಾರೆ. ವೈದ್ಯಬಂಧು ಪತ್ರಿಕಾ ಸಂಪಾದಕರಾದ ಶ್ರೀ ಕೆ ಪಿ ಪುರಾಣಿಕರು ಅದಕ್ಕೆ ಮುನ್ನುಡಿ ಬರೆದಿರುತ್ತಾರೆ ಆ ಪತ್ರಿಕೆಯಲ್ಲಿ ಬಂದ ಲೇಖನಗಳ ಪುನರ್ಮುದ್ರಣವಿದು ಆಯುರ್ವೇದ ವೈದ್ಯ ಸಂಘದ ಸ್ಮಾರಕಕ್ಕಾಗಿ ಇದನ್ನು ಪ್ರಕಟಿಸಲಾಗಿದೆ ಅದರ ಮಾರಾಟದಿಂದ ಬರುವ ಹಣವನ್ನು ಆಯುರ್ವೇದ ವೈದ್ಯ ಸಂಘಕ್ಕೆ ಸಲ್ಲಿಸಲಾಗುವುದು ಆಯುರ್ವೇದ ದರ್ಶನ, ವೇದಾಂತ ಹಾಗೂ ಪಾಶ್ಚಾತ್ಯ ವಿದ್ಯಾವಂತರ ಅಭಿಪ್ರಾಯಗಳನ್ನು ಗ್ರಂಥದಲ್ಲಿ ಕೊಡಲಾಗಿದೆ ಆಯುರ್ವೇದದ ಅಧ್ಯಯನಕ್ಕೆ ಇತರ ದರ್ಶನ ಗ್ರಂಥಗಳ ಅಧ್ಯಯನವೂ ಅಗತ್ಯವೆಂದು ಗ್ರಂಥಕರ್ತರು ಸೂಚಿಸಿರುತ್ತಾರೆ

೨,೫೧೨ ಗ್ರಾಮಗಳ ದಾನ

ಆಚಾರ್ಯ ವಿನೋಬಾಭಾವೆಯವರ ಭೂದಾನ ಚಳುವಳಿಯ ಸಂಬಂಧವಾಗಿ ಇದುವರೆಗೆ ೨,೫೧೨ ಗ್ರಾಮಗಳು ದಾನವಾಗಿ ಬಂದಿವೆ

GRAND ATTRACTION
GROUP & FLASH PHOTOGRAPHS
Roll Films, Developing Printing & Enlarging Undertaken
SRI KANTH STUDIO
Near Prabha Talkies
MYSORE
Your Card size Photo Re One only

ದೆಹಲಿಯಲ್ಲೂ ಇನ್‌ಫ್ಲುಯೆಂಜಾ

ದೆಹಲಿಯಲ್ಲೂ ಇನ್‌ಫ್ಲುಯೆಂಜಾ ವ್ಯಾಧಿಯು ಹರಡಿ ೨,೫೦೦ ಮಂದಿ ರೋಗಪೀಡಿತರಾಗಿರುವರು ಮೊದಲು ಮೂರು ದಿನಗಳಲ್ಲಿ ಸಾವಿರ ಜನರೂ ಮೊನ್ನೆ ೧,೧೬೭ ಮತ್ತು ನೆನ್ನೆ ೧೦೬ ಜನರೂ ಚಿಕಿತ್ಸೆ ಪಡೆದಿರುವರು

ಮೈಸೂರು ಪೇಟೆ ಧಾರಣೆ

ಬಂಗಾರಸಣ್ಣ	[illegible]	[illegible]
ರತ್ನಚೂಡಿ	೪೦ ೦೦	[illegible]
ಕಡ್ಡಿ	[illegible]	
ಸೇಲಂ ಸಣ್ಣ	[illegible]	[illegible]
ಕಾರ್ ಸಣ್ಣ	[illegible]	
ರಾಗಿ	[illegible]	[illegible]
ಜೋಳ	[illegible]	
ಕಂಬು	[illegible]	
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible]	[illegible]
ತೊಗರಿಬೇಳೆ	[illegible] ೦೦	[illegible]
ಹುರುಳಿ	[illegible]	[illegible]
ಉದ್ದು	[illegible]	[illegible]
ಹೆಸರು	[illegible] ೦೦	[illegible]
ಅಲಸಂದೆ	[illegible] ೦೦	[illegible]
ಧನಿಯ	[illegible]	[illegible]
ಅವರೆ	[illegible]	
ಸೀಗೆಕಾಯಿ	[illegible]	
ಹುಣಿಸೆಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ	[illegible] ೦೦	[illegible]

COACHING SECTION
Dalvoy High School Mysore
Excellent Coaching for S S L C Students by Experienced Teachers Classes Started- Morning
H S Ananthachar, Secretary

ಒಲಂಪಿಯಾ ★ 7-6-57ರಿಂದ ಅಮೋಘ ಪ್ರಾರಂಭ ಪ್ರತಿದಿನ ಮೂರು ಪ್ರದರ್ಶನಗಳು
ಬಹು ದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಸಾಗರ್ ಪ್ರೊಡಕ್ಷನ್ಸ್‌ರವರ
★ ಬಂಧನ್ ★
ನಿರಾನ ಕುಮಾರಿ ಪ್ರದೀಪ್ ಕುಮಾರ್ ಮೋತಿಲಾಲ್, ಡೇವಿಡ್ ಮತ್ತು ಇತರರು ಪಾತ್ರವಹಿಸಿರುವ ಸಾಮಾಜಿಕ ಹಿಂದಿ ಚಿತ್ರ
ನಿರ್ದೇಶನ ಹೇಮಚಂದರ್ — — ಸಂಗೀತ • ಹೇಮಂತ ಕುಮಾರ್

ಚಾಮುಂಡೇಶ್ವರಿ ಟಾಕೀಸ್
7–6–57 ರಿಂದ ಅಮೋಘ ಪ್ರಾರಂಭ ಪ್ರತಿದಿನ 3 ಪ್ರದರ್ಶನಗಳು
ಕಾಮಧೇನು ಫಿಲಂಸ್‌ರವರ ಕನ್ನಡ ಚಿತ್ರ ★ ಸತೀ ನಳಾಯಿನಿ
ಭೂಮಿಕೆ ಪಂಡರೀಬಾಯಿ ಮೈನಾವತಿ, ಜಯಶ್ರೀ, ರಾಜಕುಮಾರ್, ನರಸಿಂಹರಾಜು, ಸಿದ್ದಯ್ಯಸ್ವಾಮಿ ಮುಂತಾದವರು [ನೃತ್ಯ ಲೀಲಾ, ರಂಭಾ ಮತ್ತು ಲಕ್ಷ್ಮೀ... ಹಿನ್ನೆಲೆ ಗಾಯನ ಪಿ ಲೀಲ ಸೌಂದರರಾಜ, ಗಾನ ಸರಸ್ವತಿ, ಸೂಲಮಂಗಲಂ ಸಹೋದರಿಯರು
ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ, ಫ್ರೀ ಪಾಸುಗಳನ್ನು 4 ವಾರಗಳ ಕಾಲ ಮನ್ನಾ ಮಾಡಿದೆ

ಲಕ್ಷ್ಮಿ ★ 7–6–57 ರಿಂದ ಚಿಕ್ಕಿಂದ ಜನಸಂದಣಿಗೆ ಪ್ರದರ್ಶಿಸಲ್ಪಡುತ್ತಿರುವ ಅಮೋಘ ...ನೇ ವಾರ
ನೀಲಾ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ
★ ರಾಜರಾಜನ್ ★
ಪಾತ್ರ – ಪದ್ಮಿನಿ, ಎಂ ಜಿ ರಾಮಚಂದ್ರ ಲಲಿತ, ಕೆ.ಎ. ತಂಗವೇಲು, ನಂಬಿಯಾರ್ ಫ್ರೆಂಡ್ ರಾಮಸ್ವಾಮಿ, ಎಂ ಜಿ ಚಕ್ರಪಾಣಿ ಮತ್ತು ಇತರರು

ರಾಜಕಮಲ್ ಟಾಕೀಸ್ ★ 6–6–57ನೇ ಗುರುವಾರ ಯಶಸ್ವಿಯಾದ 100ನೆಯ ಅಮೋಘ ದಿನ
ಬಿ ಆರ್ ಪಂತುಲು, ಎಂ ವಿ ರಾಜಮ್ಮ, ಉದಯಕುಮಾರ್, ಜಮುನ, ಟಿ ಆರ್ ರಾಮಚಂದ್ರನ್, ಸಾಹುಕಾರ್ ಜಾನಕಿ, ತಿಕ್ಕಿ ಮಾಧವರಾವ್, ಮುಂತಾದವರು ಪಾತ್ರ ವಹಿಸಿರುವ
★ ರತ್ನಗಿರಿ ರಹಸ್ಯ ★ (ಕನ್ನಡ)
ಪದ್ಮಿನಿ ಪಿಕ್ಚರ್ಸ್ ರವರ ಅತ್ಯುತ್ತಮ ಜನಪ್ರಿಯ ಕಲಾಕೃತಿ
ನಿರ್ಮಾಪಕ ನಿರ್ದೇಶಕ ಬಿ ಆರ್. ಪಂತುಲು] — — — [ಶ್ರೀ ರಾಘವೇಂದ್ರ ರಿಲೀಸ್

ರಾಜಕಮಲ್ ✱ 7-6-57ರಿಂದ ಅಮೋಘ ಪ್ರಾರಂಭ ಈಗಾಗಲೇ ಆಂಧ್ರ ಪ್ರದೇಶದಲ್ಲಿ ಜಯಭೇರಿ ಹೊಡೆಯುತ್ತಿರುವ,
12 ಲಕ್ಷ ರೂಗಳ ವೆಚ್ಚದಲ್ಲಿ ತಯಾರಿಸಿರುವ, ಅಂಜಲಿ ಪಿಕ್ಚರ್ಸ್‌ರವರ ಮಹೋನ್ನತ ಜಾನಪದ ಕಲಾಕೃತಿ
ಅಂಜಲಿ, ಜೆಮಿನಿ ಗಣೇಶ್, ರಾಜಸುಲೋಚನ, ರೇಲಂಗಿ ಸೂರ್ಯಕಲಾ ಮುಂತಾದವರು ಪಾತ್ರವಹಿಸಿರುವ,
★ ಮಣಾಳನೇ ಮಂಗಯಿನ್ ಭಾಗ್ಯಂ
ಪ್ರತಿ ದಿನ ಮೂರು ಆಟಗಳು : 2—15, 6—00 ಮತ್ತು 9—45
ನಿರ್ದೇಶನ . ವೇದಾಂತ ರಾಘವಯ್ಯ — ಸಂಗೀತ . ಆದಿನಾರಾಯಣರಾವ್ — [ಶ್ರೀ ರಾಘವೇಂದ್ರ ರಿಲೀಸ್
6 ವಾರಗಳ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ

ರಿಜಿಸ್ಟರ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 3 ನಯಾ ಪೈಸೆ

ಇಂದಿನ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಿರುವ
ಸಾಧ್ವಿ ದಿನ ಪತ್ರಿಕೆಗೆ
ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ

ಸಂಪುಟ : ೧೫] SADHVI : FRIDAY 7—6—1957 ಮೈಸೂರು : ಶುಕ್ರವಾರ ೭—೬—೧೯೫೭ : [ಸಂಚಿಕೆ : ೩೦೩

೧೨ ಸಂಸ್ಥಾನಗಳಲ್ಲಿ ಧಾನ್ಯದಾಸ್ತಾನು ವಿರುದ್ಧದ ಶಾಸನ

ರೇಷ್ಮೆ ಕಾರ್ಮಿಕರಿಂದ ಮುಷ್ಕರದ ನಿರ್ಧಾರ

ಮೈಸೂರು ೬

ಸರಕಾರಿ ರೇಷ್ಮೆ ಕಾರ್ಖಾನೆ ಕೆಲಸಗಾರರ ಸಂಘದವರು ನೆನ್ನೆ ಏರ್ಪಡಿಸಿದ್ದ ಮುಷ್ಕರದ ಮತದಾನದಲ್ಲಿ ವಿಶೇಷ ಬಹುಸಂಖ್ಯಾತ ಕಾರ್ಮಿಕರು ಮುಷ್ಕರ ನಡೆಸುವುದಕ್ಕೆ ತಮ್ಮ ಅಭಿಪ್ರಾಯವನ್ನು ಸೂಚಿಸಿರುವುದಾಗಿ ಮತದಾನ ತೆಗೆದುಕೊಳ್ಳಲು ನಿಯೋಜಿತರಾಗಿದ್ದ ಶ್ರೀ ಬಿ ಬಾಲಯ್ಯನವರು ತಿಳಿಸಿರುತ್ತಾರೆ ನಾನ್ ಗೆಜೆಟೆಡ್ ನೌಕರರಿಗೆ ಕೊಟ್ಟಂತೆ ೧೯೫೬ ರ ಆಗಸ್ಟ್ ೧ ರಿಂದ ಸರ್ಕಾರಿ ಕೈಗಾರಿಕಾ ಕಾರ್ಮಿಕರಿಗೂ ವೇತನ ಹೆಚ್ಚಿಸುವ ಬಗ್ಗೆ ಸರ್ಕಾರದವರು ಕಾಲಾವಕಾಶ ಮಾಡುತ್ತಿರುವುದನ್ನು ಪ್ರತಿಭಟಿಸಲು ಮುಷ್ಕರ ಹೂಡಬೇಕೆಂದು ನಿರ್ಧರಿಸಲಾಗಿದೆ.

ಬೆಂಗಳೂರಿನಲ್ಲಿ ೫೦೦ ಮಂದಿಗೆ ಇನ್‌ಫ್ಲುಯೆಂಜಾ

ಬೆಂಗಳೂರಿನಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯು ಹೆಚ್ಚುತ್ತಿದೆ. ಇದುವರೆಗೆ ೫೯೧ ಮಂದಿಗೆ ಅದು ತಗಲಿದೆ. ಆಸ್ಪತ್ರೆಗಳಲ್ಲಿ ೭೨ ಜನರನ್ನು ಸೇರಿಸಲಾಗಿದೆ

ಬಿ ಇ ಪರೀಕ್ಷಾ ಫಲಿತಾಂಶ ಪ್ರಕಟಣೆ ದಿನ

ಬಿ ಇ ಪರೀಕ್ಷಾ ಫಲಿತಾಂಶಗಳ ಪ್ರಕಟಣೆಯು ಇದೇ ೧೦ನೇ ತಾರೀಖು ಬೆಳಗ್ಗೆ ೯|| ಗಂಟೆಗೆ ಆಗುವುದು.

ಬಿ ಎ ಆನರ್ಸ್ ಮುಂತಾದ ಪರೀಕ್ಷಾ ಫಲಿತಾಂಶ

ಬಿ ಎ ಆನರ್ಸ್ ಮತ್ತು ಬಿ ಎಸ್‌ಸಿ ಆನರ್ಸ್ ಅಂತ್ಯದ ಪರೀಕ್ಷೆಗಳ ಮತ್ತು ಪ್ರೀ-ಮೆಡಿಕಲ್ ಪರೀಕ್ಷಾ ಫಲಿತಾಂಶಗಳು ಈ ದಿನ ಪ್ರಕಟವಾದುವು

ಸಂಸ್ಥಾನ ಸರ್ಕಾರಗಳ ಬೇಜವಾಬ್ದಾರಿ ವರ್ತನೆ

ಹಣಕಾಸಿನ ಸಹಾಯಕ್ಕೆ ಅಂಕೆಯಿಲ್ಲದ ಬೇಡಿಕೆ ಬಗ್ಗೆ ನೆಹರೂರವರ ಟೀಕೆ

ಪ್ರಧಾನಿ ನೆಹರೂರವರು ಇತ್ತೀಚೆಗೆ ನಡೆದ ಎ. ಐ. ಸಿ. ಸಿ ಸಭೆಯಲ್ಲಿ ಮಾತನಾಡಿ, ಸಂಸ್ಥಾನ ಸರ್ಕಾರಗಳು ಕೆಲವು ವೇಳೆ ಬೇಜವಾಬ್ದಾರಿಯುತವಾಗಿ ವರ್ತಿಸುತ್ತಿರುವುದಾಗಿ ತಿಳಿಸಿದರು. ತಾವು ತೀವ್ರವಾದ ವಿಚಾರವನ್ನು ಹೇಳುತ್ತಿರುವುದಾಗಿ ಅವರು ಪೀಠಿಕೆ ಹಾಕಿ, ಮಂತ್ರಿಗಳು ಬೇಜವಾಬ್ದಾರಿಯಿಂದ ವರ್ತಿಸುತ್ತಿರುವರೆಂದೂ, ಪ್ರತಿಯೊಂದು ಸಂಸ್ಥಾನ ಸರ್ಕಾರವೂ ಕೇಂದ್ರದಿಂದ ಎಷ್ಟು ಹಣವನ್ನಾದರೂ ಬೇಕಾದಾಗ ಪಡೆಯಬಹುದೆಂದು ಭಾವಿಸಿರುವುದಾಗಿಯೂ, ಕೇಂದ್ರ ಸರ್ಕಾರದ ಬಳಿ ಬಹಳ ಭಾರಿ ಖಜಾನೆಯಿರುವಂತೆ ಮಂತ್ರಿಗಳ ಭಾವನೆಯಿರುವಂತೆ ತೋರುತ್ತಿರುವುದೆಂದೂ ಅವರು ಹೇಳಿದರು. ಸಭೆಯಲ್ಲಿ ಹಲವು ಸಂಸ್ಥಾನಗಳ ಮಂತ್ರಿಗಳೂ ಭಾಗವಹಿಸಿದ್ದರು.

ಅ ವ ಸಾ ನ

ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಕೆ. ಎ ಶ್ರೀಕಂಠಯ್ಯನವರು ತಮ್ಮ ಕುಮಾರ ಚಿ|| ಕೆ ಸುಂದರೇಶನ್‌ರವರ ಮನೆಯಲ್ಲಿ ನೆನ್ನೆ ಬ್ರಹ್ಮೈಕ್ಯ ಹೊಂದಿರುವರು

ನಗರದಲ್ಲಿ ಹೊಸದಾಗಿ ೨೦ ಮಂದಿಗೆ ಇನ್‌ಫ್ಲುಯೆಂಜಾ

ಮೈಸೂರು ೬

ನಗರದಲ್ಲಿ ಈ ದಿನ ಹೊಸದಾಗಿ ೨೦ ಮಂದಿಗೆ ಇನ್‌ಫ್ಲುಯೆಂಜಾ ವ್ಯಾಧಿ ತಗಲಿದೆ ಆಸ್ಪತ್ರೆಗೆ ೧೭ ಜನರು ಮೈಸೂರು ಪೊಲೀಸ್ ರೈಲ್ವೆ ಕ್ವಾರ್ಟರ್ಸಿನಲ್ಲಿರುವವರು ಒಕ್ಕಲಗೇರಿಯ ಇಬ್ಬರಿಗೂ ಪತ್ರ ಮಂಡಿ ಮೊಹಲ್ಲದಲ್ಲಿ ಒಬ್ಬನಿಗೂ ವ್ಯಾಧಿಯುಂಟಾಗಿದೆ ಇದುವರೆಗೆ ೩೭ ಮಂದಿ ಅದರಿಂದ ನರಳುತ್ತಿರುವರು

ನಾಳೆಯೂ ನೀರು ಸರಬರಾಜಿಲ್ಲ

ನಾಲಾ ನಿರ್ಮೂಲೀಕರಣದ ಪ್ರಯುಕ್ತ ಇದೇ ೯ನೇ ತಾರೀಖು ಬೆಳಗ್ಗೆ ೮ ಗಂಟೆಯಿಂದ ಸಂಜೆ ೬ರವರೆಗೆ ನಗರದಲ್ಲಿ ನೀರು ಸರಬರಾಜು ಇರುವುದಿಲ್ಲವೆಂದು ತಿಳಿಸಲಾಗಿದೆ

ಭಕ್ತ ನಾಮದೇವನ ಕಥೆ

ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ನಾಳೆ ರಾತ್ರಿ ೮ ಗಂಟೆಗೆ ಭಕ್ತ ನಾಮದೇವರ ಚರಿತ್ರೆಯ ವ್ಯಾಖ್ಯಾನವನ್ನು ಪಿ. ಆರ್ ಸುಬ್ರಾಮಯ್ಯನವರು ಮಾಡುವರು.

ಸಂಸ್ಥಾನದಲ್ಲಿ ಮೂರು ಉಕ್ಕಿನ ರೋಲಿಂಗ್ ಕಾರ್ಖಾನೆಗಳು

ಹುಬ್ಬಳ್ಳಿ, ಬಳ್ಳಾರಿ ಮತ್ತು ಮಂಗಳೂರುಗಳಲ್ಲಿ ಒಂದೊಂದು ಉಕ್ಕಿನ ರೋಲಿಂಗ್ ಮಿಲ್ಲುಗಳನ್ನು ಸ್ಥಾಪಿಸಲು ಸರ್ಕಾರದವರು ಮಂಜೂರಾತಿಯಿತ್ತಿರುವರು ಖಾಸಗೀ ಉದ್ಯಮವಾಗಿ ಅವನ್ನು ಆರಂಭಿಸಲಾಗುವುದು

ಹನುಮಂತಯ್ಯನವರ ಭಾವಚಿತ್ರ ಅನಾವರಣದ ವೆಚ್ಚ

ಮಾಜಿ ಪೌರಸಭಾಧ್ಯಕ್ಷರು ಹಣ ತೆರುವಂತೆ ಸರ್ಕಾರದ ಸೂಚನೆ

ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ ಮತ್ತು ಸಚಿವ ಶ್ರೀ ಟಿ ಚನ್ನಯ್ಯನವರ ಭಾವಚಿತ್ರಗಳನ್ನು ಚಿಕ್ಕಬಳ್ಳಾಪುರದ ಪುರಭವನದಲ್ಲಿ ಅನಾವರಣ ಮಾಡಿದ ಸಂದರ್ಭದಲ್ಲಿ ಪೌರಸಭೆಗೆ ತಗಲಿದ ೭೨೦ ರೂ ವೆಚ್ಚವನ್ನು ಮಾಜಿ ಪೌರಸಭಾಧ್ಯಕ್ಷ ಶ್ರೀ ವೆಂಕಟರಾಯಪ್ಪನವರು ವಹಿಸಬೇಕೆಂದು, ಸರ್ಕಾರದ ಸೂಚನೆ ಮೇರೆ, ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ಭಾವಚಿತ್ರ ಅನಾವರಣಕ್ಕೆ ಪೌರಸಭೆಯ ಅನುಮತಿಯನ್ನು ಕೇಳಲಿಲ್ಲವೆಂದು ಹೇಳಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವೀಣೆ ೭-೧೫ ಮತ್ತು ೮-೧೫ ಭಾಮಾಮಣಿ ಮತ್ತು ಶಾರದಾ-ಪುರಂದರದಾಸರ ದೇವರ ನಾಮ ಮತ್ತು ಗೀತಾವಳಿ ೭-೩೦ ರಿಕಾರ್ಡ್. ಮಧ್ಯಾಹ್ನ ೧೨ ಎ ನಂಜುಂಡಸ್ವಾಮಿ-ಸಂಗೀತ ೧೨ ೩೦ ಬಾಲ ಜಗತ್. ೧-೩೦ ಗಾನ ಮಂಜರಿ ೧-೫೦ ವೀಣೆ. ಸಂಜೆ ೬-೧೦ ವಚನ ಗಾನ ೬-೩೦ ನಮ್ಮ ಸಂಸ್ಕೃತಿಯಲ್ಲಿ ಕೃಷ್ಣನ ಪಾತ್ರ-ಪ್ರಸಂಗ ೮ ಎ ನಂಜುಂಡಸ್ವಾಮಿ-ಗಾಯನ (ವಾದ್ಯ ವೃಂದದೊಡನೆ) ೮ ೩೦ ರೇಡಿಯೋ ನ್ಯೂಸ್ ರೀಲ್ ೮-೪೦ ಪ್ರಸಾರ ಗೀತೆ ೯-೧೫ ಕಾವ್ಯಧಾರೆ. ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ದೆಹಲಿ ರಿಲೆ.

ಆಹಾರ ಧಾನ್ಯದ ದಾಸ್ತಾನು ಮತ್ತು ಸಟ್ಟಾ ವಿರುದ್ಧ ಕ್ರಮ

ಮೈಸೂರು ಮತ್ತು ಇತರ ೧೧ ಸಂಸ್ಥಾನಗಳಿಗೆ ನೂತನ ಶಾಸನದ ಅನ್ವಯ

ಅತ್ಯವಶ್ಯಕ ವಸ್ತುಗಳ ಶಾಸನದ ತಿದ್ದುಪಡಿ ನಿಯಮಗಳನ್ನು ಭಾರತ ಸರ್ಕಾರದವರು ಮೈಸೂರು, ಆಂಧ್ರ, ಅಸ್ಸಾಂ, ಬಿಹಾರ್, ಬೊಂಬಾಯಿ, ಮಧ್ಯ ಪ್ರದೇಶ, ಮದ್ರಾಸು, ಒರಿಸ್ಸಾ, ಉತ್ತರ ಪ್ರದೇಶ, ರಾಜಸ್ಥಾನ, ಪಂಜಾಬು ಮತ್ತು ಪಶ್ಚಿಮ ಬಂಗಾಳ ಪ್ರಾಂತಗಳಿಗೂ, ದೆಹಲಿ, ಹಿಮಾಚಲ ಪ್ರದೇಶ ಮತ್ತು ತ್ರಿಪುರಾ ಪ್ರದೇಶಗಳಿಗೂ ಅನ್ವಯಿಸುವಂತೆ ಆಜ್ಞೆ ಮಾಡಿರುತ್ತಾರೆ.

ಭತ್ತ ಮತ್ತು ಅಕ್ಕಿ ದಾಸ್ತಾನು ಮತ್ತು ಸಟ್ಟಾ ವ್ಯಾಪಾರಗಳನ್ನು ತೊಡೆದುಹಾಕಲು ಈ ಕ್ರಮವನ್ನು ಜರುಗಿಸಲಾಗಿದೆ ಭತ್ತ ಮತ್ತು ಅಕ್ಕಿಯನ್ನು ಬಹುಪಟ್ಟು ಹೆಚ್ಚು ಬೆಲೆಗೆ ಮಾರುವುದನ್ನು ತಪ್ಪಿಸುವುದೇ ಇದರ ಉದ್ದೇಶ ಯಾವ ದಾಸ್ತಾನುಗಾರನಿಂದಲಾದರೂ ಹಿಂದಿನ ಮೂರು ತಿಂಗಳಲ್ಲಿದ್ದ ಬೆಲೆಯನ್ನು ಕೊಟ್ಟು ಧಾನ್ಯವನ್ನು ಕಡ್ಡಾಯವಾಗಿ ವಶಪಡಿಸಿಕೊಳ್ಳಲಾಗುವುದು ಈ ನಿಯಮವು ೩ ತಿಂಗಳ ಕಾಲ ಜಾರಿಯಲ್ಲಿರುವುದು

ಕೇಂದ್ರ ಆಹಾರ ಮಂತ್ರಿ ಜೈನರವರು ಅಕ್ಕಿ ಮಾರುಕಟ್ಟೆಯಲ್ಲಿ ಸಟ್ಟಾ ವ್ಯಾಪಾರವನ್ನು ಮಟ್ಟ ಹಾಕಲಾಗುವುದೆಂದು ತಿಳಿಸಿರುತ್ತಾರೆ.

೨ನೇ ಯೋಜನೆ ಗುರಿ ಸಾಧನೆಗೆ ಸಂಸ್ಥಾನದ ಅಭಿವೃದ್ಧಿ ಮಂಡಲ

ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸ್ಥಾಪನೆ

ಬೆಂಗಳೂರು ೬

ದ್ವಿತೀಯ ಯೋಜನೆಯ ಕೆಲಸಕಾರ್ಯಗಳನ್ನು ಯಶಸ್ವಿಯಾಗಿ ಜಾರಿಗೆ ತರುವುದರಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಮಾಡಲು ಸರ್ಕಾರದವರು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಅಭಿವೃದ್ಧಿ ಮಂಡಲವೊಂದನ್ನು ಸ್ಥಾಪಿಸಲಿರುವರು. ಮುಂದೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲೂ ಸಮಿತಿಯನ್ನು ರಚಿಸಲಾಗುವುದು ಸಂಸ್ಥಾನ ಮಂಡಲದಲ್ಲಿ ಮಂತ್ರಿಗಳು, ಉಪ ಮಂತ್ರಿಗಳು, ಇಲಾಖಾ ಕಾರ್ಯದರ್ಶಿಗಳು, ಸಂಸ್ಥಾನ ಸಹಕಾರ ಬ್ಯಾಂಕ್, ಜಮೀನು ಅಡಮಾನ ಬ್ಯಾಂಕುಗಳ ಅಧ್ಯಕ್ಷರು, ೪ ಅಥವಾ ೫ ಪ್ರಮುಖ ಖಾಸಗೀ ಕಾರ್ಯಕರ್ತರುಗಳು ಇರುವರು.

ಸಾದಿ ಅರೇಬಿಯಾ ತೀರದ ಮೇಲೆ ಇಸ್ರೇಲ್ ಫಿರಂಗಿ ಗುಂಡು

ಸಾದಿ ಅರೇಬಿಯಾ ತೀರದ ಮೇಲೆ ಇಸ್ರೇಲಿನ ಯುದ್ಧ ನೌಕೆಗಳು ಫಿರಂಗಿ ಗುಂಡನ್ನು ಹಾರಿಸಿ, ಭೂ ಮತ್ತು ಸಮುದ್ರದ ಮೂಲಕ ಯಾತ್ರಿಕರ ಆಗಮನಕ್ಕೆ ಭೀತಿಯನ್ನು ಹಂಚುತ್ತಿರುವುದೆಂದು ಸಾದಿ ಅರೇಬಿಯಾ ವಿಶ್ವಸಂಸ್ಥೆ ಕಾರ್ಯದರ್ಶಿಗೆ ತಿಳಿಸಿದೆ ತನ್ನ ಹಕ್ಕು ಮತ್ತು ಹಕ್ಕುಗಳನ್ನು ಕಾಪಾಡಿಕೊಳ್ಳಲು ಅರೇಬಿಯಾವು ಅಧಿಕಾರ ಹೊಂದಿರುವುದೆಂದೂ ಹೇಳಿದೆ.

ಬಂಡೆಯೊಳಗೆ ವಿದ್ಯುಚ್ಛಕ್ತಿ ಉತ್ಪಾದನಾ ಯಂತ್ರ

ಶರಾವತಿ ಯೋಜನೆಯಲ್ಲಿ ಹೊಸ ಸಾಧನೆ

ಬೆಂಗಳೂರು ೬

೨೦೦ ಅಡಿ ಎತ್ತರ ಮತ್ತು ೮,೦೦೦ ಅಡಿ ಉದ್ದವಿರುವ ಹೊಸ ಶರಾವತಿ ಅಣೆಕಟ್ಟಿನ ಪ್ರದೇಶದಲ್ಲಿ ಬಂಡೆಗಳನ್ನು ಒಡೆದು ಒಳಗೆ ವಿದ್ಯುಚ್ಛಕ್ತಿ ತಯಾರಿಕಾ ಯಂತ್ರವನ್ನು ಸ್ಥಾಪಿಸುವ ಅಪೂರ್ವ ಕೆಲಸವನ್ನು ನಡೆಸುವ ವಿಚಾರವನ್ನು ಪರಿಶೀಲಿಸಲಾಗುತ್ತಿದೆಯೆಂದು ಗೊತ್ತಾಗಿದೆ. ಅಣೆಕಟ್ಟಿನ ಜಲಾಶಯದಲ್ಲಿ ೧೧೫ ಕೋಟಿ ಘನ ಅಡಿ ನೀರು ನಿಲ್ಲುವುದಲ್ಲದೆ ಅದು ಕೃಷ್ಣರಾಜಸಾಗರ ಜಲಾಶಯದ ೧೫ ಪಟ್ಟು ದೊಡ್ಡದಾಗಿರುವುದೆಂದು ಹೇಳಲಾಗಿದೆ. ಅಲ್ಲಿ ಸಿವಿಲ್ ಕಾಮಗಾರಿಗಾಗಿಯೇ ೨೫ ಕೋಟಿ ರೂ ವೆಚ್ಚವಾಗಲಿದೆ

ವಿದ್ಯುಚ್ಛಕ್ತಿ ಯಂತ್ರಗಳಿಂದ ಸಂಸ್ಥಾನಕ್ಕೆ ಸಾಕಾಗಿ ಮಿಗುವಷ್ಟು ವಿದ್ಯುದುತ್ಪಾದನೆಯಾಗಲಿದೆ ೧೯೬೧ರಲ್ಲಿ ೧,೪೦,೦೦೦ ಕಿಲೋವಾಟ್ ಶಕ್ತಿಯನ್ನೂ, ಅನಂತರ ಕಾಲದಲ್ಲಿ ೬,೧೨,೦೦೦ ಕಿಲೋವಾಟ್ ಶಕ್ತಿಯನ್ನೂ ಅಲ್ಲಿ ಉತ್ಪಾದನೆ ಮಾಡಲಾಗುವುದು

ದೆಹಲಿಯಲ್ಲಿ ಇನ್‌ಫ್ಲುಯೆಂಜಾಕ್ಕಾಗಿ ಸಿನಿಮಾ ಶಾಲೆಗಳು ಬಂದ್

ದೆಹಲಿಯಲ್ಲಿ ಇನ್‌ಫ್ಲುಯೆಂಜಾಕ್ಕಾಗಿ, ಶಾಲಾ ಕಾಲೇಜುಗಳು, ಸಿನಿಮಾ ಮಂದಿರಗಳು, ಈಜುವ ಕೊಳ ಮುಂತಾದುವನ್ನು ಸದ್ಯಕ್ಕೆ ಮುಚ್ಚಲು ಆಜ್ಞೆ ಮಾಡಲಾಗಿದೆ ಅಲ್ಲಿ ೪೦೦೦೦ಕ್ಕೂ ಹೆಚ್ಚು ಮಂದಿಗೆ ವ್ಯಾಧಿಯು ತಗಲಿದೆ ವಿದ್ಯಾರ್ಥಿ ನಿಲಯ, ಜಾತ್ರೆ, ಮಾರ್ಕೆಟ್ ಮುಂತಾದುವನ್ನು ಮುಚ್ಚಲೂ ಅಧಿಕಾರ ಕೊಡಲಾಗಿದೆ ಕಲ್ಕತ್ತದಲ್ಲಿ ೫ ಜನರು ಮಡಿದಿರುತ್ತಾರೆ.

ಪೂನಾ ನಗರದಲ್ಲಿ ಸಿನಿಮಾಗಳಿಗೆ ಕೇವಲ ೭೫ ಮಂದಿ ಪ್ರೇಕ್ಷಕರಿಗೆ ಮಾತ್ರ ಅವಕಾಶ ಕೊಡಲಾಗಿದೆ ಬೊಂಬಾಯಿಯಲ್ಲಿ ಮಳೆಯಿಂದ ವ್ಯಾಧಿಯು ಕಮ್ಮಿಯಾಗುತ್ತಿದೆ

ಸದ್ಯದಲ್ಲೇ ಮೈಸೂರು-ತಲಚೇರಿ ರೈಲು ರಸ್ತೆ ಸರ್ವೆ

ಕೊಡಗಿನ ಮೂಲಕ ಮೈಸೂರು-ತಲಚೇರಿ ಮತ್ತು ಕೊಟ್ಟಯಂ-ಬೋಡಿನಾಯಕನೂರು ರೈಲು ಮಾರ್ಗಗಳ ಸರ್ವೆಯನ್ನು ರೈಲ್ವೆ ಬೋರ್ಡಿನವರು ಕೈಗೊಳ್ಳುವರೆಂದು ಕೇರಳದ ಮುಖ್ಯ ಮಂತ್ರಿ ನಂಬೂದ್ರಿಪಾದ್‌ರವರು ತಿಳಿಸುತ್ತಾರೆ

ತೆಲುಗು ದೇವಾಂಗ ಸಂಘದ ಸಭೆ

ನಗರದಲ್ಲಿರುವ ತೆಲುಗು ದೇವಾಂಗ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ಭಾನುವಾರ ನಡೆದು ಕೇಂದ್ರ ಸರ್ಕಾರವು ಹೊಸದಾಗಿ ವಿಧಿಸಬೇಕೆಂದಿರುವ ತೆರಿಗೆಗಳು ಇನ್ನೂ ಜಾರಿಗೆ ಬರದಿದ್ದರೂ ದಿನ ಬಳಕೆ ಪದಾರ್ಥಗಳ ಬೆಲೆ ಏರಿಸಿದೆ ಹೆಚ್ಚುತ್ತಿರುವುದನ್ನು ತಡೆಗಟ್ಟಬೇಕೆಂದೂ, ಕಾರಣವಿಲ್ಲದೆ ಧಾರಣೆಗಳನ್ನು ಹೆಚ್ಚಿಸಿ ಲಾಭದ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದೂ ಕೇಂದ್ರ ಮತ್ತು ಸಂಸ್ಥಾನ ಒತ್ತಾಯ ಮಾಡಲಾಯಿತು.

ನಗರದಲ್ಲಿ ಅಕ್ಕಿ ಬೆಲೆ ಏರಿಕೆ ತಡೆಗಟ್ಟಲು ಕರೆ

ಸಮಾಜವಾದಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ನಿರ್ಣಯ

ಮೈಸೂರು ೬

ನಗರದ ಸಮಾಜವಾದಿ ಪಕ್ಷದ ಕಾರ್ಯಕರ್ತರ ಸಭೆಯು ಕಳೆದ ಭಾನುವಾರ ನಡೆದು ಅಕ್ಕಿ ದರದ ಬೆಲೆಯು ದಿನೇದಿನೇ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಸರ್ಕಾರದವರು ಮತ್ತು ಪೌರಸಭೆಯವರು ಡಿಪೋಗಳಲ್ಲಿ ಬಡವರಿಗಾಗಿ ಸರಿಯಾಗಿ ಅಕ್ಕಿ ಸರಬರಾಜು ಮಾಡಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು ಕೇಂದ್ರದವರು ವಿಧಿಸಿರುವ ನೂತನ ತೆರಿಗೆಗಳಿಂದ ಬಡ ಜನರ ಜೀವನಕ್ಕೆ ಹಾನಿಯಾಗುವುದೆಂದೂ ಈ ಬಗ್ಗೆ ಪ್ರತಿಭಟಿಸಲು ಮೊಹಲ್ಲಾಗಳಲ್ಲಿ ಸಭೆಗಳನ್ನು ನಡೆಸಬೇಕೆಂದೂ ನಿರ್ಧರಿಸಲಾಯಿತು

ಪೌರಸಭಾ ಚುನಾವಣೆಯಲ್ಲಿ ಪಕ್ಷವು ಭಾಗವಹಿಸುವ ಸಂಬಂಧವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಸೋಷಲಿಸ್ಟ್ ದಳವನ್ನು ರಚಿಸುವಂತೆಯೂ ತೀರ್ಮಾನಿಸಲಾಯಿತು ಉತ್ತರ ಪ್ರದೇಶದಲ್ಲಿ ಸಮಾಜವಾದಿಗಳು ನಡೆಸುತ್ತಿರುವ ಅಸಹಕಾರ ಚಳುವಳಿಗೆ ಬಲ ನೀಡಲಾಯಿತು

GLOBE TUTORIAL COLLEGE
Sadvidya Patasala Building
Offers Excellent Coaching
S. S L C & INTER

SARADAVILAS COLLEGE
Mysore
INTER TUTORIAL SECTION
Eng., S L & P C M are taught
Highly qualified and experienced staff
COACHING SECTION
D Devoy High School Mysore
Excellent Coaching for S S L C Students by Experienced Teachers Classes Started Morning
H S Ananthachar
Secretary

ಮೈಸೂರಿನ ಸರ್ಕಾರಿ ತೋಟಗಳ ಸೂಪರಿಂಟೆಂಡೆಂಟ್ ರ ಇವ
ಲಾಲ್‌ಬಾಗ್ ಬೆಂಗಳೂರು-2

ಪ್ರಕಟಣೆ

ಕೃಷ್ಣರಾಜಸಾಗರದಲ್ಲಿರುವ ಸರ್ಕಾರಿ ಫಲೋದ್ಯಾನದಲ್ಲಿ ಬೆಳೆದಿರುವ ಪರಂಗಿ ತೆಂಗು ಸಪೋಟ, ಸೀಬೆ, ಆಸ್ಟ್ರೇಲಿಯಾ ಬಾಳೆ ರಸಬಾಳೆ ಕರಿಬಾಳೆ ಮತ್ತು ಮದುರಂಗದ ಬಾಳೆ ಬಿಲಿಂಬಿ ಪನ್ನೇರಳೆ ಬೆಣ್ಣೆ ಹಣ್ಣು ಫಿಲಯಾಂತಸ್ ಡಿಸ್ಟಿಕಸ್–ಈ ಬಗೆಯ ಫಲಗಳನ್ನು ಕೊಳ್ಳುವ ಬಗ್ಗೆ ಮೊಹರಾದ ದರಗಳ ಪಟ್ಟಿಗಳನ್ನು ಈ ತಿಂಗಳು 17ನೇ ತಾರೀಕು ಮಧ್ಯಾಹ್ನ 4 ಗಂಟೆಯವರೆಗೆ ಬೆಂಗಳೂರು ಲಾಲ್‌ಬಾಗಿನಲ್ಲಿರುವ ಮೈಸೂರು ಸರ್ಕಾರಿ ತೋಟಗಳ ಸೂಪರಿಂಟೆಂಡೆಂಟರು ಸ್ವೀಕರಿಸುವರೆಂದು ಈ ಮೂಲಕ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಲಾಗಿದೆ ಎಲ್ಲಾ ಹಣ್ಣುಗಳಿಗೂ ಪೌಂಡು ತೂಕದ ಲೆಕ್ಕದ ಮೇಲೆ ದರಗಳನ್ನು ಬರೆಯಬೇಕು ಮತ್ತು ಬಾಳೆಹಣ್ಣುಗಳು ಮತ್ತು ತೆಂಗಿನಕಾಯಿಗಳಿಗೆ ಸಂಖ್ಯಾ ಲೆಕ್ಕದ ದರವನ್ನು ಬರೆಯಬೇಕು

ಪ್ರತಿಯೊಂದು ಪಟ್ಟಿಯೊಡನೆ ಸರ್ಕಾರಿ ಖಜಾನೆ ಅಥವ ಮೈಸೂರು ಬ್ಯಾಂಕಿಗೆ 00 ರೂ ಜಮಾ ಮಾಡಿರುವ ಬಗ್ಗೆ (ಡೂಪ್ಲಿಕೇಟ್) ಚಲನ್ನನ್ನು ಹಾಜರುಪಡಿಸಬೇಕು

ಹೆಚ್ಚಿನ ವಿವರಗಳು ಮತ್ತು ಷರತ್ತುಗಳನ್ನು ಮಂಡ್ಯದ ಸರ್ಕಾರಿ ಉದ್ಯಾನವನಗಳ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಅಥವಾ ಕೃಷ್ಣರಾಜಸಾಗರದ ಉದ್ಯಾನದ ಇನ್ಸ್‌ಪೆಕ್ಟರರಿಂದ ತಿಳಿಯಬಹುದು

ಎಂ ಎಚ್ ಮರಿಗೌಡ,
ಸೂಪರಿಂಟೆಂಡೆಂಟ್

Edited Printed and Published by A. R. Nagarajan at Sadhvi Press, D Subbaiah Road, Mysore

ಮೊದಲು ಅಣು ಶಸ್ತ್ರ ನಿಷೇಧ, ನಂತರ ಪರೀಕ್ಷೆಯ ಪ್ರಶ್ನೆ

ರಷ್ಯಕ್ಕೆ ಐಸೆನ್‌ಹೋವರರ ಉತ್ತರ

ಅಣು ಶಸ್ತ್ರಗಳನ್ನು ಪೂರ್ಣವಾಗಿ ನಿಷೇಧಿಸುವಂತೆ ಮೊದಲು ನಿರ್ಧಾರವಾದಹೊರತು ಅಣು ಶಸ್ತ್ರಗಳ ಪರೀಕ್ಷಾ ಸಿಡಿತಗಳನ್ನು ಬಹಿಷ್ಕರಿಸುವುದಕ್ಕೆ ಅಮೆರಿಕವು ಒಪ್ಪುವುದಿಲ್ಲವೆಂದು ಅಧ್ಯಕ್ಷ ಐಸೆನ್‌ಹೋವರರು ರಷ್ಯ ನಾಯಕ ಕ್ರುಶ್ಚೇವರ ಸಲಹೆಗೆ ಉತ್ತರವಾಗಿ ತಿಳಿಸಿರುತ್ತಾರೆ ಪರೀಕ್ಷೆಗಳಿಂದ ರೇಡಿಯೊ ಕಣಗಳ ಮೂಲಕ ಆಗುವ ತೊಂದರೆಯನ್ನು ನಿವಾರಿಸಲು ಪರಿಣಾಮಕಾರಿಯಾದ ಶಸ್ತ್ರ ಸನ್ಯಾಸ ಒಪ್ಪಂದದ ಚೌಕಟ್ಟಿನಲ್ಲಿ ಅಣು ಶಸ್ತ್ರ ಪರೀಕ್ಷೆಯ ನಿಷೇಧವನ್ನು ಮಾಡಬಹುದೆಂದೂ ಅವರು ಹೇಳಿರುವರು

ಮೈಸೂರು ಪೇಟೆ ಧಾರಣೆ

ಬಂಗಾರ ಮತ್ತು ಕೊಯಮುತ್ತೂರು ಸಣ್ಣ	೪೦ ೫೦	೪೬ ೦೦
ರತ್ನಚೂಡಿ	೩೯ ೫೦	೪೩ ೦೦
ಕೆಂಬೂತಿ	೪೦ ೫೫	
ಕಡ್ಡಿ	೩೮ ೮೭	
ಕಾರ್ ಸಣ್ಣ	೩೮ ೫೦	
ರಾಗಿ	೪೪ ೫೦	೪೫ ೪೭
ಜೋಳ	೩೭ ೬೨	
ಕಡಲೆಕಾಯಿ	೧೭ ೮೭	೨೪ ೪೭
ಹರಳುಬೀಜ	೧೪ ೫೭	
ಹುಚ್ಚೆಳ್ಳು	೪೪ ೦೫	
ಹೊಂಗೇಬೀಜ	೨೭ ೦೦	೩೮ ೭೫
ಹುಣಸೆಬೀಜ	೭ ೦೩	೬ ೫೦
ಹುರುಳಿ	೪೯ ೮೭	೪೪ ೦೫
ಹಲಸಂದೆ	೪೯ ೫೦	೬೦ ೬೨
ಧನಿಯ	೩೪ ೪೭	
ಉದ್ದು	೬೪ ೫೦	
ಹುಣಸೆಹಣ್ಣು	೪ ೩೫	೪ ೬೨
ಮೆಣಸಿನಕಾಯಿ	೧೯ ೫೦	
ತೆಂಗಿನಕಾಯಿ	೧೪೩ ೫೦	೨೬೮ ೫೦

C T C Old Agrahar Mysore
The Oldest & the Best
Receives admission for
B A & B Sc English & Kannada
INTER All parts & all Subjects
B K Satyabodhachar M A, B T

Sri Kanyakaparameswari Co operative Society, Ltd.,
Hanumantha Rao Street
(Near Prabha Picture House)
MYSORE

Applications are invited from the public for the Tenancy of shops No 1 & 2 situated at New Statue Circle Mysore The applications should contain full particulars regarding the nature of business, rent etc Full particulars can be obtained from the undersigned during 8 30 to 11 a m and 5 to 7 p m

SECRETARY
5th June 1957

ಲಂಡನ್ನಿನಲ್ಲಿ ರಾ. ವೆಂ. ಶ್ರೀ ಅವರು

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನ ಸಂಪಾದಕರೂ, ಖ್ಯಾತ ಬರಹಗಾರರೂ ಆದ ಶ್ರೀ ಆರ್ ವಿ ಶ್ರೀನಿವಾಸಮೂರ್ತಿಯವರು ಯುನೆಸ್ಕೋ ವೇತನವನ್ನು ಪಡೆದು ಅಮೇರಿಕ ಮತ್ತು ಯೂರೋಪ್ ದೇಶಗಳಲ್ಲಿ ಸಂಚಾರ ಮಾಡುತ್ತಿದ್ದಾರೆ ಹೊಸದಾಗಿ ಅಕ್ಷರಜ್ಞಾನ ಪಡೆದವರಿಗೆ ಸಾಹಿತ್ಯವನ್ನು ರಚಿಸುವುದರಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಅವರು ನ್ಯೂಯಾರ್ಕ್ ನಗರದ ಕೊಲಂಬಿಯಾ ವಿಶ್ವವಿದ್ಯಾನಿಲಯದ ಟೀಚರ್ಸ್ ಕಾಲೇಜಿನ ಸಂಶೋಧನಾ ಶಾಖೆಯಲ್ಲಿ ಡಾ|| ಇರ್ವಿಂಗ್ ಲಾರ್ಜ್ ಅವರ ಹತ್ತಿರವೂ, ಓಹಾಯೋ ಸಂಸ್ಥಾನದ ಕೊಲಂಬಸ್ ನಗರದಲ್ಲಿ ಓಹಿಯೋ ಸ್ಟೇಟ್ ವಿಶ್ವವಿದ್ಯಾನಿಲಯದ ಕಾಲೇಜ್ ಆಫ್ ಎಜುಕೇಷನ್ನಿನ ಸಂಶೋಧನಾಲಯದಲ್ಲಿ ಡಾ|| ಎಡ್ಗರ್ ಡೇಲ್‌ರವರ ಹತ್ತಿರವೂ, ಪ್ಯುಯೆರ್ಟೋ ರಿಕೋ ವಿಶ್ವವಿದ್ಯಾನಿಲಯದ (ವೆಸ್ಟ್ ಇಂಡೀಸ್) ಸುಪೀರಿಯರ್ ಎಜುಕೇಷನ್ ಕೌನ್ಸಿಲ್ಲಿನ ಡೈರೆಕ್ಟರಾದ ಡಾ|| ರೋಡ್ರಿಗಸ್ ಬೋ ಅವರ ಹತ್ತಿರವೂ ಅಭ್ಯಾಸವನ್ನು ಯಶಸ್ವಿಯಾಗಿ ಮುಗಿಸಿ ಪ್ರಶಸ್ತಿಗಳನ್ನು ಗಳಿಸಿದ್ದಾರೆ

ಸಿರಾಕ್ಯೂಸ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಜರ್ನಲಿಸಂ ಶಾಖೆಯಲ್ಲಿ ಡಾ|| ರಾಬರ್ಟ್ ಎಸ್ ಲಾಬರ್ ಅವರ ನೇತೃತ್ವದಲ್ಲಿ ಅಭ್ಯಾಸ ಮಾಡಿ, ಸಿರಕ್ಯೂಸ್ ವಿಶ್ವವಿದ್ಯಾನಿಲಯದ ವಿಶೇಷ ಪ್ರಶಸ್ತಿಯನ್ನು ಗಳಿಸಿದ್ದಾರೆ

ಈಗ ಲಂಡನ್ನಿನಲ್ಲಿರುವ ಪೆಂಗ್ವಿನ್ ಅಂಡ್ ಪೆಲಿಕಾನ್ಸ್ ಮತ್ತು ಎವ್ರಿಮ್ಯಾನ್ಸ್ ಲೈಬ್ರರಿ ಪ್ರಕಾಶನ ಸಂಸ್ಥೆಗಳಲ್ಲಿ ಮುದ್ರಣ ಮತ್ತು ಪ್ರಸಾರದ ವ್ಯವಸ್ಥೆಗಳನ್ನು ಅಭ್ಯಾಸ ಮಾಡುತ್ತಿದ್ದಾರೆ ಮುಂದೆ ಪ್ಯಾರಿಸ್ ನಗರದಲ್ಲಿರುವ ಯುನೆಸ್ಕೊ ಕಾರ್ಯಾಲಯದಲ್ಲಿ ಎರಡು ವಾರ ಇದ್ದು ಅನಂತರ ಅವರು ಭಾರತಕ್ಕೆ ಹಿಂದಿರುಗುವರು

ಶ್ರೀ ಶ್ರೀನಿವಾಸಮೂರ್ತಿಯವರು ಮೈಸೂರು ನಗರದಲ್ಲಿರುವ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ಸಿನ ಮಾಲೀಕರಾದ ಶ್ರೀ ಆರ್ ವೆಂಕೋಬರಾಯರ ಪುತ್ರರೂ ಮತ್ತು ಮೈಸೂರು ನಗರದಲ್ಲಿರುವ ಜಯ ಅಂಡ್ ಕಂಪೆನಿಯ ಸಹ ಮಾಲೀಕರಾದ ಶ್ರೀ ಆರ್ ಗುಂಡೂರಾಯರ ಅಳಿಯಂದಿರೂ ಆಗಿದ್ದಾರೆ

ಬಾಲಕಿಯರಿಗಾಗಿ ಹೊಸ ಪ್ರೌಢಶಾಲೆ
C T C ಹಳೇ ಅಗ್ರಹಾರ, ಮೈಸೂರು
★ 6 6 57 ನೇ ಗುರುವಾರದಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದು
★ ಜೂನ್ ಎರಡನೇ ವಾರದಲ್ಲಿ H S I Year ತರಗತಿ ಪ್ರಾರಂಭ
★ ಉತ್ತಮ ವಾತಾವರಣ ಅನುಭವಸ್ಥ ಉಪಾಧ್ಯಾಯರು
★ 12 ರಿಂದ 5 ರ ವರೆಗೆ ಕ್ರಮವಾದ ಪಾಠಗಳು
ಬಿ ಕೆ ಸತ್ಯಬೋಧಾಚಾರ್, ಎಂ ಎ ಬಿ ಟಿ

ಪ್ರಭು ದೇವಾ ಥಿಯೇಟರ್
(ಪದ್ಮಾ ಟಾಕೀಸ್)
7 6 57ನೇ ಶುಕ್ರವಾರದಿಂದ : ಅಮೋಘ 9 ನೆಯ ವಾರ : ಪ್ರತಿ ದಿನ ಮೂರು ಪ್ರದರ್ಶನಗಳು
★ **ಮಾಯಾ ಬಜಾರ್** ★
(ಶಶಿರೇಖಾ ಪರಿಣಯ)
ಪಾತ್ರ - ಎಸ್ ವರಲಕ್ಷ್ಮಿ, ಸಾವಿತ್ರಿ, ಎನ್ ಟಿ ರಾಮರಾವ್, ಎಸ್ ವಿ ರಂಗರಾವ್, ಹಂಗೇಲು, ಮುಕ್ತಲಕ್ಷ್ಮಿ, ಅಕ್ಕಿನೇನಿ, ಋಷ್ಯೇಂದ್ರಮಣಿ

ಚಾಮುಂಡೇಶ್ವರಿ ಟಾಕೀಸ್
7—6—57 ರಿಂದ ಅಮೋಘ ಪ್ರಾರಂಭ ಪ್ರತಿದಿನ 3 ಪ್ರದರ್ಶನಗಳು
ಶಾಮಧೇನು ಫಿಲಂಸ್ ರವರ ಕನ್ನಡ ಚಿತ್ರ ★ **ಸತೀ ನಳಾಯಿನಿ**
ಭೂಮಿಕೆ ಪಂಡರಿಬಾಯಿ, ಮೈನಾವತಿ, ಜಯಶ್ರೀ, ರಾಜಕುಮಾರ್, ನರಸಿಂಹರಾಜು
ಸಿದ್ಧಯ್ಯಸ್ವಾಮಿ ಮುಂತಾದವರು [ಕೃಷ್ಣ ರೀಟಾ ರಂಭಾ ಮತ್ತು ಲಕ್ಷ್ಮೀರಂಭಾ
ಹಿನ್ನೆಲೆ ಗಾಯನ ಪಿ ಲೀಲ, ಸೌಂದರರಾಜ, ಗಾನ ಸರಸ್ವತಿ, ಜಿಕ್ಕಿ ಮೊದಲಾದವರು
[ನಾರಾಯಣ ಅಂಡ್ ಕಂಪೆನಿ ರಿಲೀಸ್
ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ, ಫ್ರೀ ಪಾಸುಗಳನ್ನು 4 ವಾರಗಳ ಕಾಲ ಮುಕ್ತಾ ಮಾಡಿದೆ



ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ೩ ನಯೆ ಪೈಸೆ



ಬಿಡಿ ಪತ್ರಿಕೆ ೩ ನಯೆ ಪೈಸೆ

ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖ್ಯಾತಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿರಾವ್ ರಸ್ತೆ
ಮೈಸೂರು

ಸಂಪುಟ ೧ ಅಂಕ] SADHVI SATURDAY 8—6—1957 ಮೈಸೂರು ಶನಿವಾರ ೮—೬—೧೯೫೭ [ಸಂಚಿಕೆ ೧ ೩೦೪

ಕೆ. ವಿ. ಪುಟ್ಟಪ್ಪನವರೇ ಇನ್ನೂ ಸ್ವಲ್ಪಕಾಲ ಉಪಸ್ಥಾನಪತಿ

ನಗರದಲ್ಲಿ ಅಕ್ಕಿ ದಾಸ್ತಾನು ಮುಗಿದು ಬೆಲೆಯ ಏರಿಕೆ

ಹೆಚ್ಚು ಧಾನ್ಯದ ರವಾನೆಗಾಗಿ ಮುಖ್ಯ ಮಂತ್ರಿಗಳಿಗೆ ಮನವಿ

ಮೈಸೂರು ೮

ನಗರದ ಡಿಪೋಗಳಲ್ಲಿ ಅಕ್ಕಿ ದಾಸ್ತಾನು ಮುಗಿದುಹೋಗಿರುವುದರಿಂದ ವರ್ತಕರು ವಿಪರೀತವಾಗಿ ಬೆಲೆಯನ್ನು ಹೆಚ್ಚಿಸಿರುವರೆಂದೂ ಆದರಿಂದ ಜನರಿಗೆ ತುಂಬಾ ತೊಂದರೆಯಾಗಿದೆಯೆಂದೂ ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಕೆ. ಎಸ್. ಸೂರ್ಯನಾರಾಯಣರಾಯರು ಮುಖ್ಯ ಮಂತ್ರಿಗಳಿಗೆ ತಂತಿ ಕಳುಹಿಸಿ ಕೂಡಲೇ ಹೆಚ್ಚು ಅಕ್ಕಿಯನ್ನು ಇಲ್ಲಿಗೆ ರವಾನೆ ಮಾಡಬೇಕೆಂದು ಕೋರಿರುತ್ತಾರೆ.

ಸಂಗೀತ ಕಛೇರಿ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ವಿ. ಬಿ. ಶ್ರೀನಿವಾಸಯ್ಯಂಗಾರ್ಯರ ಸಂಗೀತ, [illegible] ರಾಮಕೃಷ್ಣರವರ ಪಿಟೀಲು ಮತ್ತು [illegible] ರಂಗನಾಥರವರ ಮೃದಂಗ ದೊಡನೆ ನಡೆಯುವುದು.

ಕೇರಳ ಸರ್ಕಾರದ ಆಯವ್ಯಯ ಪಟ್ಟಿ ರಹಸ್ಯದ ಬಯಲು

ಪತ್ರಿಕೆಯವರಿಬ್ಬರ ಬಂಧನ

ತಿರುವನಂತಪುರದ ಕೌಮುದಿ ದಿನ ಪತ್ರಿಕೆಯ ಪ್ರಕಟಣಕಾರರಾದ ಕೆ. ಬಾಲಕೃಷ್ಣನ್ ಮತ್ತು ನಗರದ ಮುದ್ರಣಕಾರರಾದ ಜಿ. ವೇಣುಗೋಪಾಲರವರನ್ನು ಅಲ್ಲಿನ ಪೊಲೀಸರು ಸರ್ಕಾರಿ ರಹಸ್ಯ ಶಾಸನದ ಪ್ರಕಾರ ದಸ್ತಗಿರಿ ಮಾಡಿರು [illegible] ಜಾಮೀನಿನ ಮೇಲೆ ಬಿಡಲಾಗಿದೆ. ಕಳೆದ ಬುಧವಾರ ಪತ್ರಿಕೆಯಲ್ಲಿ ಕೇರಳ ಸರ್ಕಾರದ ಈ ವರ್ಷದ ಆಯವ್ಯಯ ಪಟ್ಟಿಯ ವಿವರಗಳನ್ನು ಪ್ರಕಟಿಸಲಾಗಿತ್ತು.

ನೆನ್ನೆ ಅಲ್ಲಿನ ವಿಧಾನ ಸಭೆಯಲ್ಲಿ ಹಣಕಾಸಿನ ಸಚಿವ ಅಚ್ಯುತ ಮೆನನ್‌ರವರು ಮಾತನಾಡಿ, ಆಯವ್ಯಯ ಪಟ್ಟಿಯ ರಹಸ್ಯದ ಬಯಲು ಆಗಿರುವುದೆಂದು ತಿಳಿಸಿ, ಅಪರಾಧಿಗಳು ಎಷ್ಟೇ ದೊಡ್ಡವರಾಗಿರಲಿ ಅವರ ಮೇಲೆ ಕ್ರಮ ಜರುಗಿಸಲಾಗುವುದೆಂದು ಘೋಷಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಗೋಟುವಾದ್ಯ [illegible] ಎಸ್. ಕೆ. ವಸುಮತಿ-ದೇವರ ನಾಮ [illegible] ಸಂಗೀತ [illegible] ಎಂ. ವಿ. ಮಾಲತಿ-ಸಂಗೀತ [illegible] ಮಧ್ಯಾಹ್ನ [illegible] ಎಸ್. ಕೆ. ವಸುಮತಿ-ಗಾಯನ [illegible] ಸಂಜೆ [illegible] ನಿಮ್ಮ ಮೆಚ್ಚಿನ ಗೀತೆಗಳು [illegible] ಭಕ್ತಿಗೀತೆ [illegible] ಸಂಗೀತ [illegible] ಎಂ. ಎ. ಶ್ರೀನಿವಾಸಯ್ಯಂಗಾರ್ ವೀಣೆ

ಕಲ್ಕತ್ತಾ ರೈಲು ನಿಲ್ದಾಣದಲ್ಲಿ ೨ ಲಕ್ಷ ಮಣ ಅಕ್ಕಿ ದಾಸ್ತಾನು

ವರ್ತಕರಿಗೆ ಸರ್ಕಾರದ ಎಚ್ಚರಿಕೆ

ಕಳೆದ ೬ ದಿನಗಳಿಂದ ಕಲ್ಕತ್ತದ ರೈಲ್ವೆ ನಿಲ್ದಾಣದಲ್ಲಿ [illegible] ಅಕ್ಕಿಯು [illegible] ಗೋಣಿ [illegible] ರೈಲ್ವೆ [illegible] ಪರಿಸ್ಥಿತಿಯು [illegible] ಗಿದೆ.

ಹೆಚ್ಚಿನ ಪ್ರಾಥಮಿಕ ಶಿಕ್ಷಣದ ಪಠ್ಯ ಕ್ರಮಗಳ ಸಮಿತಿ

[illegible] ವಿದ್ಯಾಭ್ಯಾಸದ ಪಠ್ಯ ಕ್ರಮಗಳನ್ನು [illegible] ಸರ್ಕಾರದವರು [illegible] ಸಮಿತಿಯನ್ನು ನೇಮಿಸಿರುತ್ತಾರೆ. ಅದರಲ್ಲಿ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ವೈಸ್ ಛಾನ್ಸೆಲರುಗಳು ಪ್ರೊ. ವಿ. ಕೆ. ಗೋಕಾಕ್ [illegible] ಪ್ರಿನ್ಸಿಪಾಲ್ [illegible] ಬೆಂಗಳೂರಿನ ಎಂ. ಸಿ. ಎಲ್ [illegible] ಪ್ರಿನ್ಸಿಪಾಲ್ ಚೆನ್ನಬಸಪ್ಪ [illegible] ಧಾರವಾಡದ ವ್ಯವಸಾಯ ಕಾಲೇಜಿನ ಪ್ರಿನ್ಸಿಪಾಲರು, ಗುಲ್ಬರ್ಗ [illegible] ಪ್ರಿನ್ಸಿಪಾಲರು ಶ್ರೀ ನಾಗಭೂಷಣ ಮತ್ತು [illegible] ಇರುವರು.

ಸಿಂಹಳದ ನೆಲೆಗಳ ವಾಪಸಿಗಾಗಿ ಬ್ರಿಟನ್ನಿಗೆ ೨-೨ ಕೋಟಿ ರೂ

ಸಿಂಹಳದಲ್ಲಿರುವ ಬ್ರಿಟಿಷರ ನೆಲೆಗಳನ್ನು ವಾಪಸು ಮಾಡುವ ಬಗ್ಗೆ ಬ್ರಿಟನ್ ಮತ್ತು ಸಿಂಹಳಗಳು ಪತ್ರ ವ್ಯವಹಾರ ನಡೆಸಿವೆ. ಟ್ರಿಂಕಾಮಲಿಯಲ್ಲಿರುವ ನೌಕಾ ಸ್ಥಳವನ್ನು ಅಕ್ಟೋಬರ್ ಗಳಿಂದೂ, ಕಟುನಾಯಕೆಯಲ್ಲಿರುವ ವಿಮಾನ ನೆಲೆಯನ್ನು ನವೆಂಬರ್ [illegible] ಬ್ರಿಟನ್ನು ಹಿಂದಿರುಗಿಸುವುದು. ಬ್ರಿಟನ್ನಿನ ಸೈನ್ಯಗಳು ವರ್ಷಗಳೊಳಗೆ ಸ್ವದೇಶಕ್ಕೆ ಹಿಂದಿರುಗುವುವು. ಬ್ರಿಟಿಷರ ನೆಲೆಗಳ ಆಸ್ತಿಗಾಗಿ ೫ ವರ್ಷಗಳಲ್ಲಿ ೨-೨ ಕೋಟಿ ರೂಗಳನ್ನು ಬ್ರಿಟನ್ನಿಗೆ ಸಿಂಹಳವು ಕೊಡಲಿದೆ.

○ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪುನರ್ವ್ಯವಸ್ಥೆಯಾಗಬೇಕೆಂದು ವಿಶ್ವವಿದ್ಯಾನಿಲಯದ ಗ್ರಾಂಟ್ಸ್ ಸಮಿತಿಯವರು ಮಾಡಿರುವ ಸಲಹೆ [illegible] ಸರ್ಕಾರದ ಪರಿಶೀಲನೆಯಲ್ಲಿರುವುದೆಂದು ಗೊತ್ತಾಗಿದೆ.

ಕೆ. ವಿ. ಪುಟ್ಟಪ್ಪನವರಿಗೆ ಇನ್ನೂ ಸ್ವಲ್ಪಕಾಲ ಉಪಸ್ಥಾನಪತಿ ಹುದ್ದೆ

ಛಾನ್ಸೆಲರರಿಗೆ ಸರ್ಕಾರದ ಶಿಫಾರಸು

ಸ್ಪೆಷಲ್ ರಿಪೋರ್ಟರ್] ಬೆಂಗಳೂರು ೮

ಮೈಸೂರು ಯೂನಿವರ್ಸಿಟಿಯ ವೈಸ್-ಛಾನ್ಸಲರ್ ಶ್ರೀ ಕೆ. ವಿ. ಪುಟ್ಟಪ್ಪನವರು ಇನ್ನೂ [illegible] ಮೇಲೆ [illegible] ಮಾಡಿರುವುದಾಗಿ ಗೊತ್ತಾಗಿದೆ.

ಮೈಸೂರು ಹೈಕೋರ್ಟಿಗೆ ಕಲ್ಕತ್ತಾ ನ್ಯಾಯಾಧೀಶರು

ಮೈಸೂರು ಹೈಕೋರ್ಟಿಗೆ ಕಲ್ಕತ್ತಾ ನ್ಯಾಯಾಧೀಶ [illegible] ಬೇಲೂರಿನ ಕೂಲಿ ಅಪೀಲು [illegible]

○ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ವಿಧಾನ ಸಭೆ ಮತ್ತು ವಿದ್ಯಾ ಮಂತ್ರಿ ಶ್ರೀ ಎ. ಜಿ. ವೆಂಕಟಪ್ಪನವರು ವಿಧಾನ ಪರಿಷತ್ತಿನ ನಾಯಕರೆಂದು ನಿರ್ಧರಿಸಲಾಗಿದೆ.

○ ಶ್ರೀ [illegible] ಅವರು [illegible] ಗೊತ್ತಾಗಿದೆ.

ಏಕ ಕಾಲದಲ್ಲಿ ಐದು ಮಕ್ಕಳ ಜನನ

ಜೋಹಾನ್ಸ್‌ಬರ್ಗಿನ ಪೂರ್ವ ಆಸ್ಪತ್ರೆಯಲ್ಲಿ ೩೦ ವರ್ಷದ ಆಫ್ರಿಕಾ ಮಹಿಳೆಯೊಬ್ಬಳು ೪ ಗಂಡು ಮತ್ತು ೧ ಹೆಣ್ಣು ಮಕ್ಕಳನ್ನು ಏಕ ಕಾಲದಲ್ಲಿ ಪ್ರಸವಿಸಿರುತ್ತಾಳೆ. ಅವುಗಳು ೧ ತಿಂಗಳ ಮುಂಚೆಯೇ ಹುಟ್ಟಿವೆ. ಅವುಗಳಿಗೆ ರಕ್ತವನ್ನು ಇಂಜಕ್ಷನ್ ಮೂಲಕ ಕೊಡಲಾಗಿದೆ. ಸರ್ಕಾರದ ವೆಚ್ಚದಲ್ಲಿ ತಾಯಿಗೆ ಚಿಕಿತ್ಸೆ ನಡೆಸಲು ಅಲ್ಲಿನ ಗವರ್ನರ್ ಆಜ್ಞೆ ಮಾಡಿದ್ದಾರೆ. [illegible] ಮಕ್ಕಳುಗಳನ್ನು ಪ್ರಸವಿಸಿದ್ದಳು [illegible] ಜೀವಂತವಾಗಿವೆ.

ನಾಟಕ ಪ್ರದರ್ಶನ

ಶ್ರೀರಂಗಪಟ್ಟಣದ ಶ್ರೀ [illegible] ವೆಂಕಟರಮಣ [illegible] ಪ್ರಕಟಿಸಿರುತ್ತಾರೆ. [illegible] ನಮ್ಮ ಹಸ್ತಗತವಾಗಿದೆ.

ಕೇರಳದಲ್ಲಿ ವ್ಯವಸಾಯ ಐಶ್ವರ್ಯದ ಮೇಲೆ ತೆರಿಗೆ

ಕೇರಳದ ಹಣಕಾಸಿನ ಮಂತ್ರಿ ಅಚ್ಯುತಮೆನನ್‌ರವರು ನೆನ್ನೆ ಅಲ್ಲಿನ ವಿಧಾನ ಸಭೆಯಲ್ಲಿ ನೂತನ ವರ್ಷದ ಆಯವ್ಯಯ ಪಟ್ಟಿಯನ್ನು ಮಂಡಿಸಿ [illegible] ಲಕ್ಷ ರೂ. [illegible] ಕೋಟಿ ರೂ. [illegible] ಹೊಸ ತೆರಿಗೆಗಳನ್ನು ವಿಧಿಸಲಾಗುವುದೆಂದು [illegible] ವ್ಯವಸಾಯ ಐಶ್ವರ್ಯದ ತೆರಿಗೆ, ಕಂಪೆನಿಗಳ [illegible] ವರಮಾನದ ಮೇಲೆ [illegible] ವ್ಯಾಪಾರಗಳ ಮೇಲೆ [illegible] ಮತ್ತು ಹೆಚ್ಚು ವರಮಾನ ಬರುವವರ ವೃತ್ತಿ ತೆರಿಗೆಯೂ [illegible] ಲಕ್ಷ ರೂ. [illegible] ಕೋಟಿ ರೂ. [illegible]

ತಾತಯ್ಯನವರ ಅನಾಥಾಲಯ

[illegible] ವಿದ್ಯಾರ್ಥಿಗಳು [illegible] ಎಸ್. ಎಸ್. ಎಲ್. ಸಿ. ಮತ್ತು ಇಂಟರ್‌ಮೀಡಿಯೆಟ್ ಪರೀಕ್ಷೆಗಳನ್ನು [illegible] ತಾತಯ್ಯನವರ [illegible] ಶ್ರೀ ಎಂ. ಎಸ್. ಶ್ರೀನಿವಾಸರಾಯರು ತಿಳಿಸುತ್ತಾರೆ.

ಹಿತ್ತಾಳೆಯನ್ನು ಚಿನ್ನದ ಒಡವೆಗಳೆಂದು ಹೇಳಿ ಮೋಸ

ನಗರದ ಬಂಟಿಕೊಪ್ಪಲಿನಲ್ಲಿ ಹಲವರು [illegible] ಹಿತ್ತಾಳೆ [illegible] ಚಿನ್ನದ ವಸ್ತುಗಳೆಂದು ಮಾರುತ್ತಿರುವರೆಂದೂ [illegible] ಜನರು ಎಚ್ಚರಿಕೆಯಿಂದಿರಬೇಕೆಂದೂ ಸೂಚಿಸಲಾಗಿದೆ.

ಇಂದು ೩೬ ಮಂದಿಗೆ ಇನ್‌ಫ್ಲುಯೆಂಜಾ

ನಗರದಲ್ಲಿ ಇಂದು ೩೬ ಮಂದಿಗೆ ಇನ್‌ಫ್ಲುಯೆಂಜಾ ತಗಲಿರುವುದಾಗಿ [illegible] ಶ್ರೀ [illegible] ನೆನ್ನೆ ದಿನ ವ್ಯಾಧಿ [illegible] ಗುಣವಾಗಿದೆ.

ಅಣು ಶಸ್ತ್ರ ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಲು ರಷ್ಯಾ ಸಿದ್ಧ

ಶಸ್ತ್ರ ಸನ್ಯಾಸ ಸಮ್ಮೇಳನದಲ್ಲಿ ರಷ್ಯಾ ಪ್ರತಿನಿಧಿಯ ಭಾಷಣ

ವಿಶ್ವಸಂಸ್ಥೆ ಶಸ್ತ್ರ ಸನ್ಯಾಸ ಉಪ ಸಮಿತಿ ಸಭೆಯಲ್ಲಿ ಮೊನ್ನೆ ರಷ್ಯದ ಪ್ರತಿನಿಧಿ ವಲೇರಿಯನ್ ಜೋರಿನ್‌ರವರು ಮಾತನಾಡಿ, ಅಣು ಶಸ್ತ್ರಗಳನ್ನು ಬಳಸುವುದಿಲ್ಲವೆಂದು ರಷ್ಯವು ಪ್ರತಿಜ್ಞೆ ತೊಡಲು ಸಿದ್ಧವಿರುವುದಾಗಿ ಹೇಳಿದರು. ಅಣು ಶಸ್ತ್ರಗಳ ತಯಾರಿಕೆಗೆ ನಿಷೇಧವನ್ನು ಸಂಪೂರ್ಣವಾಗಿ ಕೂಡಲೇ ಮಾಡಲು ರಷ್ಯವು ಸಿದ್ಧವಿದ್ದರೂ ಪಶ್ಚಿಮ ರಾಷ್ಟ್ರಗಳ ಸ್ಥಿತಿಯನ್ನು ಗಮನಿಸಿ ಅದಕ್ಕೆ ರಷ್ಯವು ಒತ್ತಾಯ ಮಾಡುವುದಿಲ್ಲವೆಂದೂ, ಆದರೆ ಅಣು ಶಸ್ತ್ರಗಳನ್ನು ಉಪಯೋಗಿಸಬಾರದೆಂದು ಮೊದಲ ಹಂತದಲ್ಲಿ ಎಲ್ಲರೂ ಪ್ರತಿಜ್ಞೆ ಮಾಡಬೇಕೆಂದು ರಷ್ಯವು ಸೂಚಿಸುವುದೆಂದೂ ಅವರು ಹೇಳಿದರು.

ಆಲ್ಜೀರಿಯ ಹೋರಾಟದಲ್ಲಿ ೩ ಲಕ್ಷ ಜನರ ಹತ್ಯೆ

ಅಲ್ಜೀರಿಯದಲ್ಲಿ ೨॥ ವರ್ಷಗಳಿಂದ ನಡೆಯುತ್ತಿರುವ ರಾಷ್ಟ್ರೀಯ ದಂಗೆಯಲ್ಲಿ ಫ್ರೆಂಚ್ ಸೈನಿಕರು ೩ ಲಕ್ಷ ಜನರನ್ನು ಹತ ಮಾಡಿರುವರೆಂದು ರಾಷ್ಟ್ರೀಯ ನಾಯಕರಲ್ಲೊಬ್ಬರು ತಿಳಿಸಿರುತ್ತಾರೆ. ೪ ಲಕ್ಷ ಜನರು ಫ್ರೆಂಚರ ದೌರ್ಜನ್ಯಕ್ಕಾಗಿ ನೆರೆಯ ಮೊರಾಕೊ ಮತ್ತು ಟ್ಯುನೀಷಿಯಾ ರಾಜ್ಯಗಳಿಗೆ ಓಡಿಹೋಗಿರುವರು.

ಸೀತಾ ಸದನ ಶಿಶುವಿಹಾರದ ವ್ಯವಹಾರಗಳು

ಚಾಮುಂಡಿಪುರದಲ್ಲಿರುವ ಸೀತಾ ಸದನದ ಶಿಶುವಿಹಾರದಲ್ಲಿ ಕಾಲಕ್ಕೆ ಸರಿಯಾಗಿ ಕೆಲಸ ನಡೆಯುತ್ತಿಲ್ಲವೆಂದೂ, ಹಿಂದಿ ತರಗತಿಯ ಫೀಸು ಅನ್ಯಾಯವಾಗಿ ಹೆಚ್ಚಾಗಿ (ದಂಡವಂತೆ) ವಸೂಲು ಮಾಡಲಾಗುತ್ತಿರುವುದೆಂದೂ ಬಡವರಿಗೆ ಇದರಿಂದ ಯಾವ ಅನುಕೂಲವೂ ಆಗಿಲ್ಲವೆಂದೂ ಸೂಚಿಸಿ ಅಕ್ಷಿಪ ಪಲವಾರು ಮಹಿಳೆಯರು ಪತ್ರ ಬರೆದು ಈ ಅವ್ಯವಸ್ಥೆಗಳನ್ನು ಸರಿಪಡಿಸಿಕೊಳ್ಳಬೇಕೆಂದು ಮನವಿ ಮಾಡಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಬಂಗಾರ ಮತ್ತು	೪೪ ೦೦	೪೪ ೫೦
ರತ್ನಚೂಡಿ	೩೯ ೫೦	೪೨ ೫೦
ಕಡ್ಡಿ	೪೦ ೦೦	೪೧ ೫೦
ಕಾರ್ ಸಣ್ಣ	೩೨ ೭೫	
ಸೀತಾಸಾಲ್ ಸಣ್ಣ	೪೦ ೦೦	
ರಾಗಿ	೪೪ ೩೮	೪೩ ೦
ಜೋಳ	೨೧ ೦೦	
ಕಡಲೇಕಾಯಿ	೧೪ ೩೭	೨೧ ೩೭
ಗಂಟೆಗೆಳ್ಳು	೪೪ ೧೩	
ಹೊಂಗೇಬೀಜ	೨೭ ೦೦	
ಹರಳುಬೀಜ	೬ ೦೦	
ಎಳ್ಳು	೭೭ ೧೨	
ತೊಗರಿ	೪೧ ೫೫	೪೪ ೧೨
ಹೆಸರು	೪೫ ೦೦	೩೦ ೦೦
ಉದ್ದು	೩೨ ೫೫	೩೪ ೨೫
ಹಲಸಂದೆ	೪೦ ೦೦	೬೨ ೦೦
ಧನ್ಯ	೨೪ ೪೭	
ಅವರೆ	೫೮ ೫೦	
ಬೆಲ್ಲ	೭ ೦೦	೬ ೪೪
ಹುಣಸೆಹಣ್ಣು	೭ ೩೨	೭ ೩೭
ಮೆಣಸಿನಕಾಯಿ	೧೭ ೫೦	೧೯ ೦೦
ತೆಂಗಿನಕಾಯಿ	೧೯೩ ೦೦	೨೩೪ ೦೦

ಪ್ರಕಟಣೆ

ಮೈಸೂರು ನಗರದಲ್ಲಿ ಮರಾಠಾ ವಿದ್ಯಾರ್ಥಿಗಳಿಗಾಗಿ ತಾರೀಖು 16 6–57ಕ್ಕೆ ಹೊಸದಾಗಿ ತೆರೆಯಲಿರುವ ಹಾಸ್ಟಲಿಗೆ ಸೇರಲು ಬಯಸುವ ವಿದ್ಯಾರ್ಥಿಗಳು ಹಾಸ್ಟಲ್ ಸೆಕ್ರೆಟರಿಯವರಲ್ಲಿ ಪಡೆಯುವ ಫಾರಂಗೆ ಒಂದು ರೂಪಾಯಿ ರುಸುಂ ಕೊಟ್ಟು ಹೆಡ್ಮಾಸ್ಟರ ಟೆಸ್ಟ್‌ಮನಿಯಲ್ ಮೂಲಕ ಪಡೆಯುವುದು ಮತ್ತು ಸದರಿ ಫಾರಂ ಭರ್ತಿ ಮಾಡಿ ಈ ತಿಂಗಳು 15ನೇ ತಾರೀಖಿನೊಳಗಾಗಿ ಕೆಳ ಕಂಡ ವಿಳಾಸಕ್ಕೆ ತಲುಪಿಸುವುದು

ಸೆಕ್ರೆಟರಿ,
ವೆಂಕಟರಾವ್ ಡೆವ್ಲಪ್‌ಮೆಂಟ್ ವಿದ್ಯಾರ್ಥಿ ನಿಲಯ, 2799 ಹಳ್ಳದಕೇರಿ, ಮೈಸೂರು

ಲಂಡನ್ನಿನಿಂದ ಕಲ್ಕತ್ತೆಗೆ ಮೊದಲನೇ ಬಸ್ ಪ್ರಯಾಣ

ಲಂಡನ್ನಿನಿಂದ ಕಳೆದ ಏಪ್ರಿಲ್ ೧೭ (ಗುಡ್ ಫ್ರೈಡೆ) ರಂದು ಹೊರಟ ಪ್ರವಾಸಿಗರ ಬಸ್ಸು ೧೧,೦೦೦ ಮೈಲಿ ಪ್ರಯಾಣ ಮಾಡಿ ಮೊನ್ನೆ ಕಲ್ಕತ್ತಾವನ್ನು ತಲುಪಿತು. ಅದು ಫ್ರಾನ್ಸ್, ಇಟಲಿ, ಯುಗೊಸ್ಲಾವಿಯಾ, ಬಲ್ಗೇರಿಯಾ, ತುರ್ಕಿ, ಇರಾನ್ ಮತ್ತು ಪಾಕಿಸ್ತಾನಗಳ ಮೂಲಕ ಬಂದು ದೆಹಲಿ ಮತ್ತು ಕಾಶಿ ಮಾರ್ಗವಾಗಿ ಕಲ್ಕತ್ತಾವನ್ನು ಸೇರಿತು. ಅದರಲ್ಲಿ ೨೦ ಮಂದಿ ಪ್ರಯಾಣಿಕರಿದ್ದರು. ಇದೇ ೧೨ನೇ ತಾರೀಖು ಅದು ಕಲ್ಕತ್ತಾದಿಂದ ಲಂಡನ್ನಿಗೆ ಹಿಂದಿರುಗುವುದು. ಲಂಡನ್-ಕಲ್ಕತ್ತಾ ಬಸ್ಸು ಪ್ರಯಾಣವು ಆಗಿರುವುದು ಇದೇ ಮೊದಲು.

ರೇಡಿಯೊ ಕಣಗಳಿಂದ ಮುಂದಿನ ಪೀಳಿಗೆಗೆ ಅಪಾಯ

ಅಮೆರಿಕದ ಮೂವರು ವಿಜ್ಞಾನಿಗಳ ಎಚ್ಚರಿಕೆ

ಅಮೆರಿಕದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಡಾ॥ ಜೇಮ್ಸ್‌ಕ್ರೌ, ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ಡಾ॥ ಬೆಂಟ್ಲಿಗ್ಲಾಸ್ ಮತ್ತು ಇಂಡಿಯಾನಾ ವಿಶ್ವವಿದ್ಯಾಲಯದ ಡಾ॥ ಹರ್ಮನ್ ಮುಲ್ಲರ್ ಎಂಬ ಮೂವರು ವಿಜ್ಞಾನಿಗಳು ಅಣು ಶಸ್ತ್ರ ಪರೀಕ್ಷೆಯಿಂದ ಉಂಟಾಗುವ ರೇಡಿಯೊ ಕಣಗಳ ಪ್ರಸರಣದಿಂದ ಮುಂದಿನ ಪೀಳಿಗೆಗಳಿಗೆ ಅಪಾಯವುಂಟಾಗುವುದೆಂದು ಹೇಳಿರುತ್ತಾರೆ. ಮಕ್ಕಳು ದೈಹಿಕ ಮತ್ತು ಮಾನಸಿಕವಾಗಿ ವಿಕಾರ ರೂಪವನ್ನು ಹೊಂದುವುವೆಂದು ಅವರು ಹೇಳುವರು. ಈ ಬಗ್ಗೆ ರಕ್ಷಣೆಯೇ ಇಲ್ಲವೆಂದು ಅವರು ತಿಳಿಸಿರುತ್ತಾರೆ.

ಬಿಹಾರಿನ ಅಧಿಕಾರಿಗಳಿಗೆ ಈಜುವುದರಲ್ಲಿ ಕಡ್ಡಾಯ ಶಿಕ್ಷಣ

ಬಿಹಾರಿನ ಸಿವಿಲ್ ಸರ್ವಿಸ್ಸಿಗೆ ಹೊಸದಾಗಿ ಅಧಿಕಾರಿಗಳನ್ನು ತೆಗೆದುಕೊಳ್ಳುವ ಮುಂಚೆ ಅವರು ಈಜು ಕಲಿತಿರುವ ಬಗ್ಗೆ ಸರ್ಟಿಫಿಕೇಟನ್ನು ಹೊಂದಿರಬೇಕೆಂದು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ೩೦ ವರ್ಷಕ್ಕೆ ಕಡಿಮೆ ಇರುವವರಿಗೆ ವಿನಾಯಿತಿ ದೊರೆಯುವುದಿಲ್ಲವೆಂದು ಹೇಳಲಾಗಿದೆ.

ಗಾಯತ್ರಿ ಲಲಿತ ಕಲಾ ಸಂಘ

ನಗರದ ಶ್ರೀ ಗಾಯತ್ರಿ ಲಲಿತ ಕಲಾ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಭಾನುವಾರ ಪೌರಸಭಾ ಸದಸ್ಯ ಶ್ರೀ ಹೆಚ್ ಎಸ್ ಮುದ್ದಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಕಲೆ ಮುಂತಾದುವನ್ನು ಪ್ರೋತ್ಸಾಹಿಸಲು ಮಾಸ ಪತ್ರಿಕೆಯನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಶ್ರೀ ಎಸ್ ಎನ್ ನಾರಾಯಣಸ್ವಾಮಿ ಮತ್ತು ಶ್ರೀ ಎಂ ಕೆ ಸಂಜೀಯ್ಯನವರು ಅದರ ಜಂಟಿ ಸಂಪಾದಕರಾಗುವರು. ಪುಸ್ತಕ ಭಂಡಾರ ಮತ್ತು ವಾಚನಾಲಯವನ್ನೂ ಸಂಘದ ಆಶ್ರಯದಲ್ಲಿ ತೆರೆಯಬೇಕೆಂದು ನಿರ್ಧರಿಸಲಾಯಿತು.

THE NATIONAL INSTITUTE OF COMMERCE, Old Mysore Bank Rd, Mysore · CLASSES in TYPEWRITING & SHORT HAND in full swing Join Now.

ವಿವಾಹ ಮಹೋತ್ಸವಗಳು

ನಗರದ ಕುಂಚಿಟಿಗರ ಸಂಘದ ಗೌರವ ಕಾರ್ಯದರ್ಶಿ ಶ್ರೀ ಎಂ ಸಿ ನರಸಿಂಹಯ್ಯನವರು ತಮ್ಮ ಬಂಧುಗಳಾದ ಗುಂಡ್ಲುಪೇಟೆಯ ಶ್ರೀ ಜಿ ಎಲ್ ದೊಡ್ಡಸಿದ್ದಪ್ಪನವರ ಮಗಳು ಸೌ॥ ಸರೋಜಮ್ಮನನ್ನು ಶ್ರೀ ತಿಮ್ಮಾಜಪ್ಪನವರ ಮಕ್ಕಳು ಶ್ರೀ ಅಣ್ಣಯ್ಯನವರಿಗೆ ಕೊಟ್ಟು ಮೊನ್ನೆ ವಿವಾಹ ಮಹೋತ್ಸವವನ್ನು ನೆರವೇರಿಸಿದರು.

ಸ್ಟೇಟ್ ಕೆಮಿಕಲ್ ವರ್ಕ್ಸಿನ ಶ್ರೀ ಬಿ ಎಸ್ ಆರಾಧ್ಯರವರ ತಮ್ಮ ಕುಮಾರರಾದ ಶ್ರೀ ಬಿ ನಾಗಭೂಷಣರವರಿಗೆ ನಂಜನಗೂಡಿನ ನೇರಳೆ ಮಠದ ಸರ್ವೆಯರ್ ಶ್ರೀ ಎ ವಿಶ್ವನಾಥಾರಾಧ್ಯರ ಕುಮಾರಿ ಸೌ॥ ಲಲಿತಾಂಬನನ್ನು ತಂದುಕೊಂಡು ಮೊನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು.

ಕೃಷ್ಣಮೂರ್ತಿಪುರದ ಅಗ್ರಹಾರದಲ್ಲಿರುವ ಶ್ರೀ ಎ ನಂಜಪ್ಪನವರು ತಮ್ಮ ಕುಮಾರಿ ಸೌ॥ ಕಮಲಮ್ಮನನ್ನು ಹಾಸನದ ಶ್ರೀ ಹೆಚ್ ಎಸ್ ರಾಮರವರ ಸಹೋದರ ಶ್ರೀ ವಿಶ್ವೇಶ್ವರಯ್ಯನವರಿಗೆ ಕೊಟ್ಟು ಮೊನ್ನೆ ವಿವಾಹವನ್ನು ನಡೆಸಿದರು.

ಭಾವಸಾರ ಕ್ಷತ್ರಿಯ ಮಂಡಲಿ ಅಧ್ಯಕ್ಷರೂ, ಬಟ್ಟೆ ವ್ಯಾಪಾರಿಗಳೂ ಆದ ಶ್ರೀ ಪಿ ಎಸ್. ರಾಜಾರಾಮರಾಯರು ತಮ್ಮ ಕುಮಾರ ಶ್ರೀ ಶ್ರೀನಿವಾಸಮೂರ್ತಿರಾಯರಿಗೆ ಬೆಂಗಳೂರಿನ ಜವಳಿ ಅಂಗಡಿ ಶ್ರೀ ಜಿ. ಗಾಡೆ ದಯಾಶಂಕರರಾಯರ ಕುಮಾರಿ ಸೌ॥ ಸರ್ವಮಂಗಳಾದೇವಿಯನ್ನು ತಂದುಕೊಂಡು ಮೊನ್ನೆ ವಿವಾಹವನ್ನು ಬೆಳೆಸಿದರು. ಮತ್ತು ತಮ್ಮ ಕುಮಾರಿ ಸೌ॥ ಕೃಷ್ಣವೇಣಿಯನ್ನು ಭದ್ರಾವತಿಯ ತಾಂವಳೆ ಗೋವಿಂದರಾಯರ ಪುತ್ರ ಶ್ರೀ ಟಿ ಜಿ. ವೆಂಕಟರಾಯರಿಗೆ ಕೊಟ್ಟು ವಿವಾಹವನ್ನು ಬೆಳೆಸಿದರು.

ನಿವೃತ್ತ ಶಾಲಾ ಅಧ್ಯಾಪಕ ಶ್ರೀ ಕೆ. ಸೂರ್ಯನಾರಾಯಣಪ್ಪನವರು ತಮ್ಮ ಪುತ್ರ ಶ್ರೀ ಸುಬ್ಬರಾಯರಿಗೆ ಚಾಮುಂಡಿಪುರದಲ್ಲಿರುವ ದೇವೋತ್ತಮ ಪಟ್ಟರ ಮಕ್ಕಳು ಶ್ರೀ ಶಾಮಣ್ಣನವರ ಮಗಳು ಸೌ॥ ಭಾಗ್ಯಲಕ್ಷ್ಮಮ್ಮನನ್ನು ತಂದುಕೊಂಡು ಮೊನ್ನೆ ವಿವಾಹವನ್ನು ಜರುಗಿಸಿದರು.

ದೇವನಗೆರೆ ಮಂಟಪದ ಬೀದಿಯಲ್ಲಿರುವ ಶ್ರೀ ರಂಚಯ್ಯನವರು ತಮ್ಮ ಕುಮಾರ ಪಿ ಚಂದ್ರಯ್ಯನವರಿಗೆ ಕೃಷ್ಣರಾಜನಗರ ತಾಲ್ಲೂಕು ಚಂದಗಾಲು ಗ್ರಾಮದ ಶ್ರೀ ಬೋರನಾಯಕರ ಕುಮಾರಿ ಸೌ॥ ನಿಂಗಮ್ಮನನ್ನು ತಂದುಕೊಂಡು ವಿವಾಹವನ್ನು ಮೊನ್ನೆ ಬೆಳೆಸಿದರು.

ಬೇಕಾಗಿದೆ

ಒಂದು ಲಿಂಗಾಯಿತರ ಹಾಸ್ಟೆಲಿಗೆ ಒಬ್ಬ ಲಿಂಗಾಯಿತ ಮ್ಯಾನೇಜರು ಬೇಕಾಗಿದೆ. ಪ್ರತಿಫಲ ಮತ್ತು ಇತರ ಮಾಹಿತಿಗಳಿಗೆ ಮೈಸೂರು ತ್ಯಾಗರಾಜ ರೋಡ್ 468 ನೇ ನಂಬರ್ ಮನೆಯಲ್ಲಿ ಮೇಲ್ಕಂಡ ಹಾಸ್ಟೆಲಿನ ಅಧ್ಯಕ್ಷರನ್ನು ಮುಖತಃ ನೋಡುವುದು.

ಶಿಶು ಕ್ಷೇಮ

ಮಕ್ಕಳ ಬಿಕ್ಕಳಿಗೆ ಶಾಸ್ತ್ರೀಯ ಔಷಧ— ನಿರೋಧಕ, ನಿವಾರಕ. ತಲುಪಿಸುವಿಕೆ :— 'ಲಿವರ್ ಹೌಸ್', ಚಾಮರಾಜಪುರಂ, (ಮೈಸೂರು ಸುಬ್ಬಯ್ಯರು ಡಾಕ್ಟರ್ ಹತ್ತಿರ)

ರತ್ನಗಿರಿ ರಹಸ್ಯ ಚಿತ್ರದ ಶತ ದಿನೋತ್ಸವ

ಪದ್ಮಿನಿ ಪಿಕ್ಚರ್ಸ್‌ರವರು ತಯಾರಿಸಿರುವ "ರತ್ನಗಿರಿ ರಹಸ್ಯ" ಚಲನಚಿತ್ರ ಪ್ರದರ್ಶನದ ೧೦೦ನೇ ದಿನದ ಸಂಬಂಧದಲ್ಲಿ ಮೊನ್ನೆ ರಾಜಕಮಲ್ ಚಿತ್ರ ಮಂದಿರದಲ್ಲಿ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ಸಿನಿಮಾ ಪ್ರೇಮಿಗಳು ಮತ್ತು ಪತ್ರಿಕಾ ಪ್ರತಿನಿಧಿಗಳು ಆಹ್ವಾನಿಸಲ್ಪಟ್ಟಿದ್ದರು. ಆಹ್ವಾನಿತರನ್ನು ರಾಘವೇಂದ್ರ ಪಿಕ್ಚರ್ಸಿನ ಪ್ರತಿನಿಧಿ ಶ್ರೀ ಶ್ರೀನಿವಾಸಮೂರ್ತಿಯವರು ಮತ್ತು ಮಂದಿರದ ಪರವಾಗಿ ಶ್ರೀ ಗೋವಿಂದಪ್ರಸಾದ್ ಮತ್ತು ಗುಂಡಪ್ಪನವರು ಸ್ವಾಗತಿಸಿದರು. ಉಪಾಹಾರಾನಂತರ, ಚಿತ್ರದಲ್ಲಿ ಪಾತ್ರವಹಿಸಿರುವ ಶ್ರೀ ದಿಕ್ಕಿ ಮಾಧವರಾಯರು ಮಾತನಾಡಿ, ಕನ್ನಡ ಚಲನ ಚಿತ್ರೋದ್ಯಮದಲ್ಲಿ "ರತ್ನಗಿರಿ ರಹಸ್ಯ"ವು ಗಳಿಸಿರುವ ಖ್ಯಾತಿಗೆ ಅದರ ತಯಾರಕ ಶ್ರೀ ಬಿ ಆರ್. ಪಂತುಲುರವರ ದೂರದರ್ಶಿತ್ವವೇ ಕಾರಣವೆಂದು ಹೇಳಿದರು. ಕನ್ನಡ ನಾಡಿನಲ್ಲಿ ಕನ್ನಡ ಚಿತ್ರಗಳು ಹೆಚ್ಚು ಹೆಚ್ಚಾಗಿ ಬೆಳೆದು ಕಲಾವಿದರಿಗೆ ಪ್ರೋತ್ಸಾಹವೂ, ಜನರಿಗೆ ಮನರಂಜನೆಯೂ ಉಂಟಾಗಲೆಂದು ಹಾರೈಸಿದರು. ಚಿತ್ರದ ಹಂಚಿಕೆಗಾರರಾದ ಶ್ರೀ ರಾಘವೇಂದ್ರ ಸಂಸ್ಥೆಯ ಶ್ರೀ ಕೃಷ್ಣಸ್ವಾಮಿಯವರು ತಮ್ಮ ಸಂಸ್ಥೆ ಮತ್ತು ಪದ್ಮಿನಿ ಪಿಕ್ಚರ್ಸ್‌ನವರ ಪರವಾಗಿ ೧೦೦ ದಿನಗಳ ಪ್ರದರ್ಶನ ನಡೆಸಿದ ರಾಜಕಮಲ್ ಚಿತ್ರ ಮಂದಿರದ ಶ್ರೀ ನಾಗವರ್ಮರವರಿಗೆ ಒಂದು ಗುರಾಣಿಯನ್ನು ಅರ್ಪಿಸಿದರು. ಶ್ರೀ ನಾಗವರ್ಮರವರು ಪದ್ಮಿನಿ ಪಿಕ್ಚರ್ಸ್ ಪ್ರತಿನಿಧಿ ಶ್ರೀ ಮೋರಾರವರಿಗೂ, ರಾಘವೇಂದ್ರ ಚಿತ್ರ ಹಂಚಿಕೆಗಾರ ಸಂಸ್ಥೆಯವರಿಗೂ ಒಂದೊಂದು ಬೆಳ್ಳಿ ಬಟ್ಟಲನ್ನು ಬಹುಮಾನವಾಗಿ ಇತ್ತರು. ಈ ಚಿತ್ರವನ್ನು ನಗರದಲ್ಲಿ ಸುಮಾರು ೫ ಲಕ್ಷ ಮಂದಿ ವೀಕ್ಷಿಸಿರುವುದಾಗಿ ತಿಳಿಸಲಾಗಿದೆ. ಅಲ್ಲದೆ ನೂರು ದಿನ ಯಶಸ್ವಿಯಾಗಿ ಇದನ್ನು ನಡೆಸಿದ ನೆನಪಿಗಾಗಿ ಚಿತ್ರ ಮಂದಿರದ ನೌಕರರಿಗೆ ಮಾಲೀಕರು ೧ ತಿಂಗಳ ಸಂಬಳವನ್ನು ಬೋನಸ್ಸಾಗಿ ಕೊಟ್ಟಿರುತ್ತಾರೆ.

CITY TUTORIAL COLLEGE
Coaching for the Sept Examn
B. A & B Sc: English & Kannada
INTER: All parts & all Subjects
B K Satyabodhachar M A, B T.

ಮಹಾ ಕವಿ ಲಕ್ಷ್ಮೀಶ ವಿರಚಿತ
ಕನ್ನಡ ಜೈಮಿನಿ ಭಾರತ
1957 Edition : Re. 1-0-0
ಕೃಷ್ಣಾ ಕಂಪೆನಿ,
ಪುರದಿ ರಸ್ತೆ, ಮೈಸೂರು

COACHING SECTION
Dalvoy High School Mysore
Excellent Coaching for S S L. C. Students by Experienced Teachers. Classes Started—Morning
S S Ananthachar,
Secretary

SREE GAYATHRI TALKIES
Daily 3 Shows
From 8-6-57 : For 3 days
20th Century's
THE PROUD ONES
(In Cinemascope and Color)
Starring.— Robert Ryan and Virginia Mayo

Morning Show On 9th
LAST TIME I SAW PARIS
With:— Elizabeth Taylor and Van Johnson

THE CHAMPION METROPOLITAN COLLEGE OF COMMERCE
Co-operators' Home 100' Road, Mysore
APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE, Diploma in Stenography, COST & WORKS ACCOUNTANCY, Banking, Shorthand, Typewriting etc
Estd. 1917 — Fully qualified full-time staff — Educational atmosphere — Fine building and up-to-date equipment — Decent Library and Reading Room — Western Business education in the East — Good results — College's Own Diploma also.
M S. PUTTANNA, *Vice-Principal*, P. SUBBARAYA SASTRY, *Principal*

Edited, Printed and Published by A. R. Nagarajan at Sadhvi Press, D. Subbiah Road, Mysore

ರಿಜಿಸ್ಟರ್ಡ್ ನಂ 792

ಚಂದಾ ದರ
ವಾರ್ಷಿಕ ಮೂರು ರೂ.
ಆರು ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾ ಪೈಸೆ

ಇಂದಿನ ಪತ್ರಿಕೆ 2 ನಯಾ ಪೈಸೆ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕ್, ಧರ್ಮಾವರಂ
ಪೂನಾ, ನಾಗಪುರ, ಜರಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : ೦೫] SADHVI । SUNDAY 9—6—1957 ಮೈಸೂರು । ಭಾನುವಾರ ೯—೬—೧೯೫೭ । [ಸಂಚಿಕೆ : ೩೦೫

ಸಂಸ್ಥಾನ ಸರ್ಕಾರದಿಂದ ಹೊಸ ಸಾರ್ವಜನಿಕ ಸಾಲ

ಮೈಸೂರು ಸರ್ಕಾರ ಸಾಲ ಎತ್ತುವ ನಿರೀಕ್ಷೆ

ಮುಖ್ಯ ಮಂತ್ರಿಯವರ ಸೂಚನೆ

ಬೆಂಗಳೂರು ೯

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಿನ್ನೆ ಇಲ್ಲಿನ ಸಮಾರಂಭವೊಂದರಲ್ಲಿ ಮಾತನಾಡುತ್ತಾ, ಸದ್ಯದಲ್ಲೇ ಸರ್ಕಾರದವರು ಸಾರ್ವಜನಿಕ ಸಾಲವನ್ನು ಎತ್ತುವುದಾಗಿ ತಿಳಿಸಿದರು. ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರೂ ಇದೇ ವಿಷಯವನ್ನು ಪ್ರಸ್ತಾಪಿಸಿದರು. ಪಂಚವಾರ್ಷಿಕ ಯೋಜನೆಯನ್ನು ಸಾಧಿಸಲು ಅಲ್ಪ ಉಳಿತಾಯದ ಯೋಜನೆಯು ಹಣವೂ ಸಹಾಯಕವಾಗುವುದೆಂದೂ, ಮಹಾ ಜನರು ಸರ್ಕಾರದ ಪ್ರಯತ್ನಕ್ಕೆ ಬೆಂಬಲ ನೀಡಬೇಕೆಂದೂ ಶ್ರೀ ನಿಜಲಿಂಗಪ್ಪನವರು ಕೋರಿದರು.

ಸೆರೆಮನೆಯಿಂದ ಹಿಂದಿರುಗಿದನ್ನುಪತ್ನಿ ಪತ್ನಿಯ ಕೊಲೆ

ಬೆಂಗಳೂರಿನ ರಾಜಮಹಲ್ ಗುಟ್ಟಹಳ್ಳಿಯಲ್ಲಿ ನಿನ್ನೆ ಸರೋಜ ಎಂಬ ೧೮ ವರ್ಷದ ಹೆಂಗಸನ್ನು ಆಕೆಯ ಗಂಡ, ವಸಂತನಗರದ ರಾಮಕೃಷ್ಣ ಎಂಬಾತನು ಇರಿದು ಕೊಂದನೆಂದೂ, ಆತನು ಸೆರೆಮನೆಯಿಂದ ತನ್ನ ಮನೆಗೆ ಕಳುಹಿಸಿದ್ದ ಅತ್ತೆ ಮತ್ತು ಮಾವನನ್ನೂ ಇರಿದನೆಂದೂ ವರದಿಯಾಗಿದೆ. ಮಾವನ ಸ್ಥಿತಿ ಚಿಂತಾಜನಕವಾಗಿದೆ. ರಾಮಕೃಷ್ಣನನ್ನು ಆಯುಧದ ಸಹಿತ ಬಂಧಿಸಲಾಗಿದೆ. ಸರೋಜಳನ್ನು ರಾಮಕೃಷ್ಣನು ಒಂದು ವರ್ಷದ ಹಿಂದೆ ಮದುವೆಯಾಗಿದ್ದನು.

ಬೆಂಗಳೂರಿನಲ್ಲಿ ೧,೦೦೦ ಮಂದಿಗೆ ಫ್ಲೂ

ಬೆಂಗಳೂರಿನಲ್ಲಿ ಇನ್‌ಫ್ಲುಯೆಂಜಾದಿಂದ ನರಳುತ್ತಿರುವವರ ಸಂಖ್ಯೆಯು ೧೦೦೦ಕ್ಕೆ ಏರಿದೆ.

ವಿದ್ಯಾರ್ಥಿನಿಲಯದ ಶಂಕುಸ್ಥಾಪನೆ

ಮೈಸೂರು ೮

ಕೆಂಪರಾಜಪುರ ಬಡಾವಣೆಯಲ್ಲಿ ನಿರ್ಮಿಸಲಾಗುವ ಆದಿಚುಂಚನಗಿರಿ ಗಂಗಾಧರೇಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆಯನ್ನು ಕಳೆದ ಗುರುವಾರ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನೆರವೇರಿಸಿದರು. ಶ್ರೀ ಎ. ಶಿವಣ್ಣನವರಿಂದ ಸ್ವಾಗತ ಭಾಷಣವಾದ ನಂತರ, ಶ್ರೀ ಸಿ. ಜಿ. ಜೀವನಾಥ್‌ರವರು ವರದಿಯನ್ನು ಓದಿ ಒಪ್ಪಿಸಿದರು.

ಆದಿಚುಂಚನಗಿರಿ ಮಠದ ಸ್ವಾಮಿಗಳವರು ಈ ನಿಲಯದ ಸೌಕರ್ಯವು ವಿದ್ಯಾರ್ಥಿಗಳಿಗೆ ಅಧಿಕ ಅವಕಾಶಗಳು ದೊರೆಯುವಂತಾಗಬೇಕೆಂದು ಹಾರೈಸಿದರು. ಶ್ರೀ ಚನ್ನಯ್ಯನವರು ಮಾತನಾಡಿ, ವಿದ್ಯಾರ್ಥಿಗಳಿಗೆ ಕೋಮುಗಳ ಆಧಾರದ ಮೇಲೆ ಪ್ರತ್ಯೇಕವಾಗಿ ನಿಲಯಗಳು ಇರುವುದು ಸರಿಯಲ್ಲವೆಂದೂ, ಎಲ್ಲರೂ ಇರುವಂತಹ ನಿಲಯಗಳಾಗಬೇಕೆಂದೂ ಸೂಚಿಸಿದರು. ಡಾ॥ ಎಂ ಎಸ್ ಮರಿಸ್ವಾಮಿಯವರು ವಂದನಾರ್ಪಣೆ ಮಾಡಿದರು.

ಜೂಜಾಟಕ್ಕಾಗಿ ದಂಡ

೪೦೦ ರೂ ಗಳ ವಶ ; ಪೊಲೀಸರಿಗೆ ೨೦೦ ರೂ ಬಹುಮಾನ

ಮೈಸೂರು ೯

ನಗರದ ಗಾರ್ಡನ್ ಹೋಟೇಲಿನ ೬ನೇ ನಂಬರ್ ಕೊಠಡಿಯಲ್ಲಿ ನಿನ್ನೆ ಲಷ್ಕರ್ ಪೊಲೀಸರು ಧಾಳಿ ಮಾಡಿ ಶ್ರೀಕಂಠಯ್ಯ ಮತ್ತು ಇತರ ಮೂವರು ಜೂಜಾಡುತ್ತಿದ್ದುದನ್ನು ಪತ್ತೆ ಹಚ್ಚಿ ಹೂಡಿದ್ದ ಮೊಕದ್ದಮೆಯಲ್ಲಿ ಆಪಾದಿತರಿಗೆ ತಲಾ ೧ ವಾರ ಸಾದಾ ಸಜಾ ಮತ್ತು ೫೦ ರೂ ದಂಡವನ್ನು ವಿಧಿಸಲಾಗಿದೆ. ಸ್ಥಳದಲ್ಲಿ ೪೦೩ ರೂ ದೊರಕಿತು. ೨೦೦ ರೂ ಅನ್ನು ಪೊಲೀಸರಿಗೆ ಬಹುಮಾನ ಕೊಡುವಂತೆ ಆಜ್ಞೆಯಾಗಿದೆ.

○ ಮೊನ್ನೆ ರಾತ್ರಿ ೧೦ನೇ ಹೋಟೆಲಿನಲ್ಲಿ ನೀತಿ ವ್ಯಾಪಾರದಲ್ಲಿ ತೊಡಗಿದ್ದ ಗೌರಮ್ಮ ಎಂಬ ಆಕೆಗೆ ೧೦ ರೂ. ದಂಡ ವಿಧಿಸಲಾಗಿದೆ.

ಮುದ್ರಣಾಲಯದಲ್ಲಿ ಆಟೋಮ್ಯಾಟಿಕ್ ಯಂತ್ರದ ಸ್ಥಾಪನೆ

ನಗರದ ಹನುಮಂತರಾವ್ ರಸ್ತೆಯಲ್ಲಿರುವ ಶ್ರೀ ಶಾರದಾ ಪ್ರೆಸ್ಸಿನಲ್ಲಿ ಸ್ಥಾಪಿತವಾಗಿರುವ ಜರ್ಮನಿಯ ಹೈಡಲ್‌ಬರ್ಗ್ ಆಟೋಮ್ಯಾಟಿಕ್ ಯಂತ್ರದ ಆರಂಭೋತ್ಸವವನ್ನು ಮೊನ್ನೆ ಮಧ್ಯಾಹ್ನ ಶ್ರೀಮತ್ಕೃಷ್ಣರಾಜೇಂದ್ರ ಮುದ್ರಣಾಲಯದ ಶ್ರೀ ಎ. ಆರ್ ವೆಂಕಟೇಶಶೆಟ್ಟರು ನೆರವೇರಿಸಿದರು. ಈ ಸಂಬಂಧವಾಗಿ ಸಮಾರಂಭವೊಂದು ನಡೆಯಿತು. ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಭಾಷಣ ಮಾಡಿ ಶಾರದಾ ಪ್ರೆಸ್ಸಿನ ಮಾಲೀಕರ ಉದ್ಯಮಕ್ಕೆ ಯಶಸ್ಸನ್ನು ಕೋರಿದರು. ಆಕಾಶವಾಣಿ ರಕ್ಷಂ ಭಾರತಿಯವರು ಸ್ವಾಗತ ಪದ್ಯಮಾಲಿಕೆಯನ್ನು ಓದಿದರು. ಅತಿಥಿಗಳನ್ನು ಫಲಪುಷ್ಪ ತಾಂಬೂಲಗಳಿಂದ ಸತ್ಕರಿಸಲಾಯಿತು.

ಆಹಾರ ಧಾನ್ಯ ಕೊಳ್ಳಲು ಮುಂಗಡ ಕೊಡುವ ಬಗ್ಗೆ ಮಿತಿ

ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕಿನ ಸೂಚನೆ

ಆಹಾರದ ಬೆಲೆಯನ್ನು ಕೊಳ್ಳಲು ಕೊಡುವ ಮುಂಗಡ ಹಣವನ್ನು ತುಂಬಾ ಕಡಿಮೆ ಮಾಡುವಂತೆ ರಿಸರ್ವ್ ಬ್ಯಾಂಕಿನವರು ಎಲ್ಲಾ ಬ್ಯಾಂಕುಗಳಿಗೂ ಸೂಚನೆಯಿತ್ತಿರುವರು. ಈಗ ಕೊಡುತ್ತಿರುವುದು ಬಹಳ ಹೆಚ್ಚೆಂದೂ, ಅದರಿಂದ ಬೆಲೆ ಏರಿಕೆಗೆ ಕಾರಣವಾಗುತ್ತದೆಂದೂ ತಿಳಿಸಲಾಗಿದೆ. ಬರುವ ತಿಂಗಳು ೧೫ರೊಳಗೆ ಭತ್ತ ಮತ್ತು ಅಕ್ಕಿ ಮೇಲೆ ಶೇಕಡ ೬೦॥ ಗಿಂತ ಹೆಚ್ಚು ಹಣವನ್ನು ಮುಂಗಡ ಕೊಡಬಾರದೆಂದೂ, ಇತರ ಧಾನ್ಯಗಳ ಮೇಲೆ ಶೇಕಡ ೭೫ಕ್ಕೇ ಕಡಿಮೆ ಮಾಡಬೇಕೆಂದೂ ಸೂಚಿಸಲಾಗಿದೆ. ೫೦ ಸಾವಿರ ರೂ. ಗಿಂತ ಹೆಚ್ಚು ಹಣವನ್ನು ಯಾರೊಬ್ಬರಿಗೂ ಕೊಡದಂತೆ ಸಹ ರಿಸರ್ವ್ ಬ್ಯಾಂಕಿನವರು ತಿಳಿಸಿರುತ್ತಾರೆ.

○ ಕೇಂದ್ರ ಆಹಾರ ಮಂತ್ರಿ ಅಜಿತ ಪ್ರಸಾದ್ ಜೈನ್‌ರವರು ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರೊಡನೆ ಈ ದಿನ ಬೆಂಗಳೂರಿಗೆ ಆಗಮಿಸಿದರು. ಆಹಾರ ಪರಿಸ್ಥಿತಿ ಬಗ್ಗೆ ಅವರು ಇಲ್ಲಿನ ಮಂತ್ರಿಗಳೊಡನೆ ಚರ್ಚೆ ನಡೆಸುವರು.

ಆವಡಿಯಲ್ಲಿ ೧.೬ ಕೋಟಿ ರೂ. ಉಕ್ಕಿನ ಟ್ಯೂಬ್‌ಯಂತ್ರ ಸ್ಥಾಪನೆ

ಮೈಸೂರು ರಾಜ್ಯಪಾಲರಿಂದ ಆರಂಭೋತ್ಸವ

೧೯೫೫ರಲ್ಲಿ ಆವಡಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸ್ಥಳದಲ್ಲಿ ಬ್ರಿಟಿಷ್ ಮತ್ತು ಭಾರತೀಯ ಕೈಗಾರಿಕೋದ್ಯಮಿಗಳು ಜಂಟಿಯಾಗಿ ೧.೬ ಕೋಟಿ ರೂ ವೆಚ್ಚದಿಂದ ಉಕ್ಕಿನ ಟ್ಯೂಬ್ ಯಂತ್ರದ ಕಾರ್ಖಾನೆಯನ್ನು ಸ್ಥಾಪಿಸಿದ್ದಾರೆ. ಕಾರ್ಖಾನೆಯಲ್ಲಿ ವರ್ಷಕ್ಕೆ ೧.೩ ಕೋಟಿ ಘನ ಅಡಿ ವಿದ್ಯುಚ್ಛಕ್ತಿ ಟ್ಯೂಬನ್ನೂ, ಮುಂದೆ ಟ್ರಾನ್ಸ್‌ಫಾರ್ಮರ್, ಬಾಯ್ಲರ್ ಮತ್ತು ಬಸ್ಸುಗಳನ್ನೂ ತಯಾರಿಸಲಾಗುವುದು. ಅದರ ಆರಂಭೋತ್ಸವವನ್ನು ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರರು ಮೊನ್ನೆ ನೆರವೇರಿಸಿದರು.

ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಆಯುರ್ವೇದ ಕಾಂಗ್ರೆಸಿನ ಅಧಿವೇಶನದ ಆರಂಭೋತ್ಸವವನ್ನು ಇದೇ ತಿಂಗಳು ೧೫ ರಂದು ಬೆಳಿಗ್ಗೆ ೯ಕ್ಕೆ ಬೆಂಗಳೂರಿನಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆರವೇರಿಸುವರು. ಶ್ರೀ ಅನಂತ ಕೃಪ ತಿರ್ಥರವರು ಅಧ್ಯಕ್ಷತೆ ವಹಿಸುವರು. ಮಧ್ಯಾಹ್ನ ೪ ಗಂಟೆಗೆ ಡಾ॥ ಕೆ ವಿ ಪುಟ್ಟಪ್ಪನವರು ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನವನ್ನು ಆರಂಭಗೊಳಿಸುವರು. ಅದರ ಅಂಗವಾಗಿ ೧೩ನೇ ತಾರೀಖು ಸಮ್ಮೇಳನವು ಸೇರುವ ಯಾದವ್‌ಜಿ ನಗರದಲ್ಲಿ ಬಿ ವಿ ಪಂಡಿತರು ಧ್ವಜಾರೋಹಣ ಮಾಡುವರು. ನಗರದ ಪ್ರಾರಂಭೋತ್ಸವವನ್ನು ಡಾ॥ ಹರ್ಡೀಕರ್‌ರವರು ನೆರವೇರಿಸುವರು. ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗುವ ವಸ್ತು ಪ್ರದರ್ಶನವನ್ನು ಮಂತ್ರಿ ತುಂಗಪ್ಪ ಸಚಿವ ಶ್ರೀ ಹೆಚ್ ಕೆ ವೀರಣ್ಣಗೌಡರು ಆರಂಭಗೊಳಿಸುವರು. ೧೪ನೇ ತಾರೀಖು ಕರ್ನಾಟಕ ಆಯುರ್ವೇದ ಸಮ್ಮೇಳನದ ಉದ್ಘಾಟನೆಯನ್ನು ಸ್ಥಳೀಯ ಸಂಸ್ಥೆ ಸಚಿವ ಶ್ರೀ ಚನ್ನಿಗರಾಮಯ್ಯನವರು ನೆರವೇರಿಸುವರು.

ಇನ್‌ಫ್ಲುಯೆಂಜಾ ಮುಂಜಾಗ್ರತೆ ಕ್ರಮ

ನಗರದ ಪೌರಸಭೆಯವರು ಪ್ರಕಟಣೆಯೊಂದನ್ನು ಹೊರಡಿಸಿ ಇನ್‌ಫ್ಲುಯೆಂಜಾ ರೋಗದ ಬಗ್ಗೆ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಸೂಚನೆಯಿತ್ತಿರುತ್ತಾರೆ. ರೋಗವು ಯಾರಿಗಾದರೂ ತಗಲಿದರೆ ಅಧಿಕಾರಿಗಳಿಗೆ ತಿಳಿಸಬೇಕೆಂದೂ, ೫೫೧ ೬೩೧ ಮತ್ತು ೭೭೭ನೇ ನಂಬರು ಟೆಲಿಫೋನುಗಳಿಗೆ ಮಾತನಾಡಬೇಕೆಂದೂ ತಿಳಿಸಲಾಗಿದೆ. ರೋಗಿಗೆ ವಿಶ್ರಾಂತಿ ಕೊಡುವುದು, ಬೆಳಕು, ಗಾಳಿ ಇರುವ ಸ್ಥಳದಲ್ಲಿ ಇಡುವುದು, ರೋಗಿಯ ಶುಶ್ರೂಷೆಯಲ್ಲಿ ಶುಚಿತ್ವ, ಕ್ರಿಮಿ ನಾಶಕಗಳಿಂದ ಶುದ್ಧಗೊಳಿಸುವುದೇ ಮುಂತಾದ ಕ್ರಮಗಳನ್ನು ಸೂಚಿಸಲಾಗಿದೆ. ಜ್ವರ, ಕೆಮ್ಮು, ನೆಗಡಿ ಮೈ ಕೈ ನೋವುಗಳೆಲ್ಲ ನೋವು ಮತ್ತು ನಿಶ್ಶಕ್ತಿ ಇವು ರೋಗದ ಲಕ್ಷಣವೆಂದು ಹೇಳಲಾಗಿದೆ. ಕೆಮ್ಮು ಮತ್ತು ಸೀನುಗಳಿಂದ ಬರುವ ಕ್ರಿಮಿಗಳು ಗಾಳಿ ಮೂಲಕ ಹರಡುವುವೆಂದು ಹೇಳಲಾಗಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆ

ಎಂ. ಪಿ. ಸಿ. ಸಿ. ಸಭೆ ನಾಳೆಗೆ ಮುಂದೆ ಹೋಯಿತು

[ಸ್ವಂ.ಸು ಫೋನ್] ಬೆಂಗಳೂರು ೯

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ಈ ದಿನ ಬೆಳಿಗ್ಗೆ ಸೇರಿ ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಇತ್ತಿರುವ ರಾಜೀನಾಮೆಯನ್ನು ಅಂಗೀಕರಿಸಲಾಯಿತು. ಆ ಸ್ಥಾನಕ್ಕೆ ಯಾರನ್ನು ತರಬೇಕೆಂಬ ವಿಚಾರವನ್ನೂ ಇತ್ಯರ್ಥವಾಗಿಲ್ಲವಾದುದರಿಂದ ಸಭೆಯನ್ನು ನಾಳೆಗೆ ಮುಂದುವರಿಸಲಾಗಿದೆ.

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆ

ವಿಧಾನ ಸಭೆ ಮತ್ತು ಪರಿಷತ್ತುಗಳಲ್ಲಿರುವ ಕಾಂಗ್ರೆಸ್ ಸದಸ್ಯರ ಸಭೆಯು ಈ ದಿನ ಇಲ್ಲಿ ಸೇರಿತ್ತು. ವಿಧಾನ ಸಭಾಧ್ಯಕ್ಷ ಸ್ಥಾನಕ್ಕೆ ಯಾರನ್ನು ಆರಿಸಬೇಕೆಂಬ ವಿಚಾರವನ್ನು ಚರ್ಚಿಸಲಾಯಿತೆಂದು ಗೊತ್ತಾಗಿದೆ. ಕಾರ್ಯಕಲಾಪಗಳು ರಹಸ್ಯವಾಗಿ ನಡೆದುವು. ಅಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ಎಸ್ ಆರ್ ಕಂಠಿ, ಹೆಚ್. ಎಂ. ಚನ್ನಬಸಪ್ಪ, ಟಿ ಸುಬ್ರಹ್ಮಣ್ಯ, ಅಣ್ಣಾರಾವ್ ಗಣಮುಖಿ ಮತ್ತು ಕೆ ಪುಟ್ಟಸ್ವಾಮಿಯವರ ಹೆಸರುಗಳು ಸೂಚಿತವಾಗಿರುವುವೆಂದು ಹೇಳಲಾಗಿದೆ. ಸಂಜೆ ಪಕ್ಷದ ಸಭೆಯು ಮತ್ತೆ ಸೇರಲಿದೆ.

ನೆಹರೂರವರಿಗೆ ಹಳ್ಳಿಗನ ಸಮಸ್ತ ಆಸ್ತಿಯ ದಾನ

ದೆಹಲಿ ಬಳಿ ಫೀರಾ ಕಾಲಾನ್ ಎಂಬ ಹಳ್ಳಿಯಲ್ಲಿ ೭೦ ವರ್ಷದ ವೃದ್ಧನೊಬ್ಬನು ತನ್ನ ೫೦,೦೦೦ ರೂ ಬೆಲೆಯ ೫೦ ಭಿಗಾ ಜಮೀನು ಮತ್ತು ಎರಡು ಮನೆಗಳನ್ನು ಪಂಡಿತ ನೆಹರೂರವರಿಗೆ ವಹಿಸಿಕೊಡುವಂತೆ ಮರಣ ಪತ್ರವನ್ನು ಬರೆದಿಟ್ಟಿದ್ದಾನೆ. ಅವನಿಗೆ ಮಕ್ಕಳಿಲ್ಲ.

ವೀರಶೇಖರ ಜ್ಞಾನದೇಶಿಕ ಸ್ವಾಮಿಗಳ ಆರಾಧನೋತ್ಸವ

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶಾಂತಿ ಕ್ಷೇತ್ರದಲ್ಲಿ ನಾಳೆ ಬೆಳಿಗ್ಗೆ ೧೦ ಗಂಟೆಗೆ ಶ್ರೀ ವೀರಶೇಖರ ಜ್ಞಾನದೇಶಿಕ ಸ್ವಾಮಿಗಳವರ ೩೬ನೇ ಆರಾಧನೆಯು ನೆರವೇರುವುದು. ಶ್ರೀ ಶ್ರೀ ಸಾಂಖ್ಯಾನಂದ ಸ್ವಾಮಿಗಳವರು ಸತ್ಸಂಗದ ಮಹಿಮೆ ಎಂಬ ವಿಚಾರವಾಗಿ ಭಾಷಣ ಮಾಡುವರು. ಮಧ್ಯಾಹ್ನ ೩ ಗಂಟೆಗೆ ಶ್ರೀ ಆಶುಕವಿರತ್ನಂ ನಾರಾಯಣರವರಿಂದ ಕಥೆಯು ನಡೆಯುವುದು. ಭಕ್ತಾದಿಗಳನ್ನು ಆಹ್ವಾನಿಸಲಾಗಿದೆ.

ಬೀಡಿ ಕಾರ್ಮಿಕರಿಂದ ಮಾಲೀಕರಿಗೆ ಅಂತ್ಯ ಸೂಚನೆ

ಪೀರ್, ಯೂಸುಫಿಯಾ, ಗಫಾರ್ ಮತ್ತು ಜಹಾಂಗೀರ್ ಬೀಡಿ ಕಾರ್ಖಾನೆಗಳ ಮಾಲೀಕರು ನಾಳೆ ಸಂಜೆ ೫ ಗಂಟೆಯೊಳಗೆ ತಮ್ಮ ಕೆಲಸಗಾರರಿಗೆ ಕಳೆದ ವರ್ಷದ ೪ ಹಬ್ಬದ ದಿವಸಗಳ ೫ ರೂ ವೇತನವನ್ನು ಕೊಡಬೇಕೆಂದು ಕೆಲಸಗಾರರ ಸಂಘದವರು ತಿಳಿಸಿರುತ್ತಾರೆ. ಹಾಗೆ ಮಾಡದಿದ್ದರೆ, ಅಂದಿನಿಂದ ಕಾರ್ಖಾನೆಗಳ ಮುಂದೆ ಸಂಘದ ಸದಸ್ಯರು ಉಪವಾಸವನ್ನು ನಡೆಸುವರೆಂದೂ ತಿಳಿಸಲಾಗಿದೆ.

ವಾರ ಭವಿಷ್ಯ

ತಾ॥ ೯-೬-೫೭ ರಿಂದ ೧೫-೬-೫೭ ರ ವರೆಗೆ

ಮೇಷ —ವ್ಯಾಪಾರವ್ಯವಹಾರಗಳಲ್ಲಿ ಅನುಕೂಲ, ಆರೋಗ್ಯ ಉತ್ತಮ, ಸಂಚಾರದಿಂದ ಲಾಭ, ಉದ್ಯೋಗ ಪ್ರಾಪ್ತಿ ಮತ್ತು ಸ್ಥಳ ಬದಲಾವಣೆ, ಕೋರ್ಟು ಕಾರ್ಯ ಜಯ

ವೃಷಭ —ಮನಸ್ಸಿನ ಶಾಂತಿ, ಸಂಪದಭಿವೃದ್ಧಿ, ಅನಿರೀಕ್ಷಿತ ಪತ್ರಾಗಮನ, ನೌಕರರಿಗೆ ಸನ್ಮಾನ ಶತ್ರು ಪರಾಜಯ, ಪ್ರವಾಸ ಲಾಭಕರ

ಮಿಥುನ ಆರೋಗ್ಯ ತೃಪ್ತಿಕರವಿಲ್ಲ, ಆರ್ಥಿಕ ಸ್ಥಿತಿ ಉತ್ತಮ, ವ್ಯಾಪಾರವ್ಯವಹಾರದಲ್ಲಿ ಪ್ರಗತಿ, ಹೊಸ ವ್ಯವಹಾರ ಬೇಡ, ಪ್ರವಾಸದಲ್ಲಿ ಅನುಕೂಲ

ಕಟಕ —ಪ್ರಗತಿಯ ಆಶಾಕಿರಣ, ಆಕಸ್ಮಿಕ ಲಾಭ, ವ್ಯಾಪಾರವ್ಯವಹಾರದಲ್ಲಿ ಅನುಕೂಲ, ಆರೋಗ್ಯ ತೃಪ್ತಿಕರ

ಸಿಂಹ —ಕಾರ್ಯ ಸಿದ್ಧಿ, ಮಾನಸಿಕ ಶಾಂತಿ ಆರೋಗ್ಯ ನೆಟ್ಟಗೆ, ವ್ಯಾಪಾರವ್ಯವಹಾರದಲ್ಲಿ ಲಾಭ, ಸಂಚಾರ ಅನುಕೂಲ, ನೌಕರರಿಗೆ ಬಡ್ತಿ ಹೆಚ್ಚು

ಕನ್ಯಾ —ಆರ್ಥಿಕ ಬಿಕ್ಕಟ್ಟು, ಕೆಲಸದಲ್ಲಿ ತಾಮಸ, ಆರೋಗ್ಯವಿಲ್ಲ ಕುಟುಂಬದ ಅನಾರೋಗ್ಯ, ಅಂತರಂಗದಲ್ಲಿ ಭೀತಿ.

ತುಲಾ :—ಮನಸ್ಸಿಗೆ ಬೇಸರ, ವೃಥಾ ಸಂಚಾರ, ಲಾಭವಿಲ್ಲದ ವ್ಯವಹಾರ, ವೃಥಾ ಖರ್ಚು ವಿರೋಧಿಗಳು ಮತ್ತು ಭ್ರಾತೃಗಳಿಂದ ತೊಂದರೆ

ವೃಶ್ಚಿಕ – ಉತ್ತಮ ಸ್ಥಿತಿ, ಪ್ರಗತಿ, ಹೊಸ ಮಿತ್ರತ್ವ ಆರೋಗ್ಯ ಉತ್ತಮ ಕಾರ್ಯಸಿದ್ಧಿ, ಪ್ರವಾಸ ಜಯ ಪ್ರದ

ಧನುಸ್ಸು — ಸ್ಥಿರ ಲಾಭ, ಯಶಸ್ಸು ಮತ್ತು ಪ್ರಗತಿ, ಆರೋಗ್ಯ ನೆಟ್ಟಗೆ, ಶುಭ ಕಾರ್ಯಕ್ಕಾಗಿ ವೆಚ್ಚ, ನೌಕರರ ಇಷ್ಟಸಿದ್ಧಿ

ಮಕರ —ವ್ಯಾಪಾರವ್ಯವಹಾರ, ರಾಜಕೀಯ, ಆರ್ಥಿಕ, ಸಾಂಸಾರಿಕ ಸ್ಥಿತಿ ಉತ್ತಮ, ಆರೋಗ್ಯ ನೆಟ್ಟಗೆ, ಪ್ರವಾಸದಲ್ಲಿ ಜಯ, ನೂತನ ಉದ್ಯಮಕ್ಕೆ ಸಕಾಲ

ಕುಂಭ —ಅಧಿಕವ್ಯಯ, ವ್ಯಾಪಾರವ್ಯವಹಾರದಲ್ಲಿ ಅಲ್ಪ ಲಾಭ ಪ್ರವಾಸದಲ್ಲಿ ಸ್ವಲ್ಪ ಅನುಕೂಲ ಉದ್ಯೋಗಿಗಳಿಗೆ ಉತ್ಸಾಹ

ಮೀನ —ಕಷ್ಟಗಳಿಂದ ಪಾರು ಸಂಪದಭಿವೃದ್ಧಿ ವೆಚ್ಚ ಕಡಿಮೆ, ಆರೋಗ್ಯ ನೆಟ್ಟಗೆ, ನೌಕರರಿಗೆ ಉತ್ಸಾಹ, ಕುಟುಂಬ ಸೌಖ್ಯ ಉತ್ತಮ ಮಿತ್ರ ಸಹಕಾರ

ಶ್ರೀ ವಿದ್ಯಾರಣ್ಯರ ಸ್ಮಾರಕೋತ್ಸವ

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಘಂಟೆಗೆ ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ವಿದ್ಯಾರಣ್ಯ ಸ್ಮಾರಕೋತ್ಸವವು ನಡೆಯುವುದು ಅದರ ಅಂಗವಾಗಿ, ನಿವೃತ್ತ ವಾಸ್ತು ಶಿಲ್ಪ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಆರ್ ರಾಮರಾಯರು "ಶ್ರೀ ವಿದ್ಯಾರಣ್ಯರ ಮಹಿಮೆ" ಎಂಬ ವಿಷಯವಾಗಿ ಉಪನ್ಯಾಸ ಮಾಡುತ್ತಾರೆ ಸರ್ವರಿಗೂ ಸ್ವಾಗತವಿದೆ

GLOBE TUTORIAL COLLEGE
[illegible]
Offers Excellent Coaching for
S. S. L. C. & INTER

CITY TUTORIAL COLLEGE
Coaching for the Sept Exams
B A & B Sc English & Kannada
INTER : All parts & all Subjects
B K Siwabodhachar M.A., B.T.

VIDYA TUTORIAL COLLEGE
Dalvoy High School Buildings, Mysore
Classes Commence from next week Join at once
INTER Arts, Science & Commerce — B A, B Sc B Com
All Subjects & All Parts
LADIES ALSO ADMITTED
Enquiries for Admission 9 to 10-30 A M & 5-30 to 7-30 P M

ವಿವಾಹ ಮಹೋತ್ಸವಗಳು

ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರರಾದ ಶ್ರೀ ಎಂ ಶಿವಣ್ಣನವರು ತಮ್ಮ ಕುಮಾರಿ ಸೌ॥ ನಾಗರತ್ನಮ್ಮನನ್ನು ತಿಪಟೂರು ಬಟ್ಟೆ ವರ್ತಕರಾದ ಶ್ರೀ ಬಿ. ಎಲ್ ಪಾಪಣ್ಣನವರ ಮಕ್ಕಳೂ, ಸಿ ಪಿ ಸಿ, ವೃತ್ತಿ ಶಿಕ್ಷಣಾಲಯದ ಅಧ್ಯಾಪಕರೂ ಆದ ಶ್ರೀ ಎಲ್. ಚಂದ್ರಶೇಖರರವರಿಗೆ ಕೊಟ್ಟು ಮೊನ್ನೆ ವಿವಾಹವನ್ನು ಜರುಗಿಸಿದರು

ದಕ್ಷಿಣ ವಲಯದ ಮಂಡಲಿಯ ಕಾರ್ಯದರ್ಶಿ ಶ್ರೀ ಸಿ. ನರಸಿಂಹಮೂರ್ತಿಯವರು ತಮ್ಮ ಸೋದರ ಸೊಸೆಯೂ, ಶೃಂಗೇರಿಯ ಶ್ರೀ ಕೆ ರಾಮಕೃಷ್ಣಭಟ್ಟರ ಕುಮಾರಿಯೂ ಆದ ಸೌ॥ ರಾಧಾರವರನ್ನು ನಗರದ ಜ್ಯೋತಿಷ್ಯ ವಿದ್ವಾಂಸರಾದ ಶ್ರೀ ಪಿ ಭೀಮಜೋಯಿಸರ ಮಕ್ಕಳು ಶ್ರೀ ಪಿ ಬಿ ಕೃಷ್ಣಮೂರ್ತಿಯವರಿಗೆ ಕೊಟ್ಟು ಕಳೆದ ಗುರುವಾರ ವಿವಾಹವನ್ನು ನಗರದಲ್ಲಿ ನೆರವೇರಿಸಿದರು

ಅರಮನೆ ಅಶ್ವಶಾಲೆಯ ನಿವೃತ್ತ ಶಿರಸ್ತೆದಾರ್ ಶ್ರೀ ಎಸ್ ನರಸಿಂಗರಾಯರು ತಮ್ಮ ಕುಮಾರರಾದ ಶ್ರೀ ಎಸ್.ರಂಗನಾಥರಾಯರಿಗೆ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಸೀನಿಯರ್ ಇನ್ಸ್ಪೆಕ್ಟರ್ ಶ್ರೀ ಹೆಚ್ ಆರ್ ರಾಮರಾಯರ ಕುಮಾರಿ ಸೌ॥ ಆರ್ ಸುಶೀಲರವರನ್ನು ತಂದುಕೊಂಡು ಮೊನ್ನೆ ವಿವಾಹವನ್ನು ಜರುಗಿಸಿದರು.

ಪಿ ಎಸ್ ಪಿ.ಯವರ ಕಛೇರಿಯ ನಿವೃತ್ತ ಮ್ಯಾನೇಜರ್ ಶ್ರೀ ಕೆ ನಾರಾಯಣ ಅಯ್ಯಂಗಾರ್ಯರು ತಮ್ಮ ಕುಮಾರ ಶ್ರೀ ಕೆ ಎ ಅನಂತರಾಮುರವರಿಗೆ ಬೆಂಗಳೂರಿನ ಶ್ರೀ ಬಿಳಿಗಿರಿರಂಗ ಅಯ್ಯಂಗಾರ್ಯರ ಕುಮಾರಿ ಸೌ॥ ನಾಗಮಣಿಯನ್ನು ತಂದುಕೊಂಡು ಮೊನ್ನೆ ನಗರದಲ್ಲಿ ವಿವಾಹವನ್ನು ಬೆಳೆಸಿದರು.

ಅರಮನೆ ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದ ಪಾರುಪತ್ತೆಗಾರರಾದ ಶ್ರೀ ವೈ. ಸುಬ್ಬಾಶಾಸ್ತ್ರಿಯವರು ತಮ್ಮ ಮಕ್ಕಳು ಶ್ರೀ ವೆಂಕಟಕೃಷ್ಣರವರಿಗೆ ಹಾಸನ ಜಿಲ್ಲೆಯ ಕೋಣನೂರು ಕನಹಳ್ಳಿ ಜೋಡಿದಾರರಾದ ಶ್ರೀ ಸುಬ್ಬರಾಯರ ಪುತ್ರಿ ಸೌ॥ ವೆಂಕಮ್ಮನನ್ನು ತಂದುಕೊಂಡು ಮೊನ್ನೆ ವಿವಾಹವನ್ನು ನಡೆಸಿದರು

ಅಂಚೆ ಇಲಾಖೆಯ ಶ್ರೀ ಎಂ ಸೋಮಶೇಖರಪ್ಪನವರು ತಮ್ಮ ಸಹೋದರಿ ಸೌ॥ ಪುಟ್ಟಗೌರಮ್ಮನನ್ನು ಬಾಲನದೇವನಹಳ್ಳಿ ಶ್ರೀ ರಾಜಪ್ಪನವರ ಮಕ್ಕಳು ಶ್ರೀ ಶಂಭುಲಿಂಗಪ್ಪನವರಿಗೆ ಕೊಟ್ಟು ವಿವಾಹವನ್ನು ಜರುಗಿಸಿದಸಂಬಂಧದಲ್ಲಿ ಮೊನ್ನೆ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು

ಷೇರುಗಳು ಬೇಕೆ ?
ಷೇರುಗಳನ್ನು ಕೊಳ್ಳುವವರು ಮತ್ತು ಕೊಳ್ಳುವವರು ಈ ಕೆಳಕಂಡಲ್ಲಿ ವಿಚಾರಿಸಿ –
ಎಂ. ಶ್ರೀಕಂಠಯ್ಯ, ಷೇರ್ ಬ್ರೋಕರ್,
73 ಕಾಳಮ್ಮನಗುಡಿ ಬೀದಿ ಮೈಸೂರು

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜಾ ಕಳೆದನಂತರ ಮೇ ಲ್ಯಂಡ ಶಿಶುವಿಹಾರವನ್ನು ತೆರೆಯಲಾಗಿದೆ ಮಾಧ್ಯಮಿಕ ಮೊದಲನೆಯ ತರಗತಿಯವರೆಗೂ ಆ ಟಿ ಗಳ ಮೂಲಕವೇ ಹೊಸ ಬಗೆಯ ಶಿಕ್ಷಣವನ್ನು ಕೊಡಲಾಗುತ್ತಿದೆ. ಮಹಾಜನರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ.

ಬಿ. ಕೃಷ್ಣಮೂರ್ತಿ,
ಸೆಕ್ರೆಟರಿ

ಬಳೆ ಸಿದ್ದಲಿಂಗಶೆಟ್ಟರ ಭಾವಚಿತ್ರದ ಅನಾವರಣ

ಕೃಷ್ಣರಾಜನಗರ ೫

ಮಾಜಿ ಪ್ರಜಾ ಪ್ರತಿನಿಧಿ ಸಭಾ ಸದಸ್ಯರಾದ ದಿ॥ ಶ್ರೀ ಬಳೆ ಸಿದ್ದಲಿಂಗಶೆಟ್ಟರ ಭಾವಚಿತ್ರದ ಅನಾವರಣ ಮಹೋತ್ಸವವು ಕಳೆದ ಭಾನುವಾರ ಇಲ್ಲಿನ ಗೃಹ ನಿರ್ಮಾಣ ಸಂಘದ ಆಶ್ರಯದಲ್ಲಿ ವಿದ್ಯಾ ಮಂತ್ರಿ ಶ್ರೀ ಎ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ವೈಭವದಿಂದ ನಡೆಯಿತು ಸಹಸ್ರಾರು ಜನರು ಭಾಗವಹಿಸಿದ್ದರು

ವಿ॥ ಸಿ ಕೆ. ಪುಟ್ಟಣ್ಣಯ್ಯನವರಿಂದ ಸ್ವಾಗತ ಪದ್ಯ ಪಠಣ ಮತ್ತು ಸಬ್ ಡಿವಿಜನ್ ಅಧಿಕಾರಿಗಳಿಂದ ಸ್ವಾಗತ ಭಾಷಣವಾದನಂತರ ಶ್ರೀಗಳಾದ ಡಾ॥ ಕೆ ಎಸ್ ಗೌಡಯ್ಯ, ಶ್ರೀ ದೂಳಿ ಸತ್ಯನಾರಾಯಣಶೆಟ್ಟಿ, ರಾವ್ ಬಹದ್ದೂರ್ ಎಂ. ರಾಮಸ್ವಾಮಿ, ಎ ರಾಜಯ್ಯ ಮತ್ತು ವೈ. ಎ. ನಂಜುಂಡಪ್ಪನವರು ಮಾತನಾಡಿ ದಿವಂಗತರ ಗುಣಗಾನ ಮಾಡಿದರು

ಗೃಹ ನಿರ್ಮಾಣ ಸಂಘದ ಅಧ್ಯಕ್ಷರಾದ ಶ್ರೀ ವೈ ಆರ್ ವೀರಣ್ಣನವರು ವಿದ್ಯಾ ಸಚಿವರು ಮತ್ತು ಶಾಸನಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದರು

ಶ್ರೀ ಎಸ್ ಆರ್ ಕಂಠಿಯವರು ತಮ್ಮ ಭಾಷಣದಲ್ಲಿ ಲೋಕಸೇವಾ ನಿರತ ಬಳೆ ಸಿದ್ದಲಿಂಗಶೆಟ್ಟರ ಪ್ರಶಂಸೆ ಮಾಡಿ,ಅವರ ಭಾವಚಿತ್ರವನ್ನು ಅನಾವರಣ ಮಾಡಿದರು

ಇದೇ ಸಂದರ್ಭದಲ್ಲಿ ಶ್ರೀ ವೈ ಆರ್. ಪುಟ್ಟಣ್ಣಯ್ಯನವರ ಕೋರಿಕೆ ಮೇಲೆ ಇಲ್ಲಿ ಕಂಟ್ರೋಲ್ ಆಸ್ಪತ್ರೆಯನ್ನು ನಿರ್ಮಿಸಲು ಶ್ರೀಗಳಾದ ವೈ ಆರ್ ರುದ್ರಪ್ಪನವರು, ಚಿಕ್ಕಬಸಪ್ಪನವರು ಮತ್ತು ಛತ್ರದ ಸಿದ್ದಲಿಂಗಪ್ಪನವರು ತಲಾ ೫,೦೦೦ ರೂ , ಶ್ರೀಗಳಾದ ವೈ. ಕೆ ಮಂಡಯ್ಯನವರು, ಮಾಜಿ ಪೌರಸಭಾಧ್ಯಕ್ಷ ಶ್ರೀ ಹೆಚ್.ಎ. ಹಿರಣ್ಣಯ್ಯ ಮತ್ತು ಸೂರ್ಯನಾರಾಯಣಶೆಟ್ಟರು ತಲಾ ೩ ಸಾವಿರ ರೂ. ಗಳನ್ನು ಕೊಟ್ಟರು ಒಟ್ಟು ೨೪,೩೦೦ ರೂ. ವಸೂಲಾದುವು.

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಸ್ಥರು
ಅಶೋಕ ರಸ್ತೆ, ಮೈಸೂರು (Estd 1911)

Edited, Printed and Published by A. R. Nagarajan at Sadhvi Press, D. Subbiah Road, Mysore



ಸ್ಟೆನೋಗ್ರಾಫರುಗಳ ಕೊರತೆ

ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ಪ್ರಕಟಿತ ಪತ್ರದಂತೆ ಸ್ಟೆನೋಗ್ರಾಫರುಗಳಿಗೆ ಅಭಾವವಾಗಿದೆ ಇಂಗ್ಲಿಷ್ ಹಿಂದಿ ಮತ್ತು ಇತರ ಭಾಷೆಗಳಲ್ಲಿ, ಸ್ಟೆನೋಗ್ರಾಫರುಗಳ ಅಭಾವವು ತುಂಬಾ ಇರುವುದೆಂದು ಹೇಳಲಾಗಿದೆ ಇದೇ ಅಲ್ಲದೆ ಶುಶ್ರೂಷಕರು, ಆರೋಗ್ಯ ವೀಕ್ಷಕರು, ಸೂಲಗಿತ್ತಿಯರು, ಮೆಕ್ಯಾನಿಕ್‌ಗಳು, [illegible], ಎಲೆಕ್ಟ್ರಿಷಿಯನ್ ಮತ್ತು [illegible] ಟ್ರ್ಯಾಕ್ಟರ್ ಆಪರೇಟರು ಮತ್ತು ಶಿಲ್ಪಿಗಳಿಗೆ ಉದ್ಯೋಗವು ಬಹಳ ದೊರೆಯುತ್ತದೆ

ಬೇಕಾಗಿದೆ
ಒಂದು ಲಿಂಗಾಯತ [illegible] ಶಾಸ್ತ್ರಿಗೆ ಲಿಂಗಾಯತ ವ್ಯಾಸಂಗ ಬೇಕಾಗಿದೆ [illegible] ಫಲ ಮತ್ತು ಇತರ ಮಾಹಿತಿಗಳಿಗೆ [illegible] ರೋಡ್ [illegible]ಯಲ್ಲಿ [illegible] ಮುಖತಃ ನೋಡುವುದು.

ನರಗಳು ನಾಶವಾದರೆ ಎಲ್ಲವೂ ನಾಶವೇ ?
[illegible]
ನವರತ್ನ—ಕಲ್ಪ
[illegible]

NAVRATNA KALPA PHARMACY,
JULLUNDUR CITY (India)

ನವೀನ ಮಾದರಿ
ಗಡಿಯಾರಗಳಿಗೆ
ಫೇವರ್ ಲ್ಯೂಬಾ, ವೆಸ್ಟೆಂಡ್,
[illegible]
ರಾಜಶೇಖರ ಕಂಪೆನಿ,
ಕೃಷ್ಣಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

ST. PHILOMENA'S COLLEGE, MYSORE.
Applications to the PRE-UNIVERSITY class will be received till 15-6-1957 without penalty and till 22-6-1957 with penalty as per rules
Applications to Degree Courses-B A. and B Sc- will be received up to 22-6-1957 without penalty and till 28-6-1957 with penalty as per rules
Combinations available for the Pre-University Class:-
P C M, C B Z, P C Biology, H E L, H B Geography, and H E Commerce.
The Registration Fee, and copies of T C. and Marks card should accompany the application.

ರಿಜಿಸ್ಟರ್ಡ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೫] SADHVI : MONDAY 10—6—1957 ಮೈಸೂರು : ಸೋಮವಾರ ೧೦—೬—೧೯೫೭ : [ಸಂಚಿಕೆ : ೩೦೬

ಅಧ್ಯಕ್ಷರುಗಳಾಗಿ ಪಿ. ಸೀತಾರಾಮಯ್ಯ-ಕಂಠಿ ಆಯ್ಕೆ

ಸಂಸ್ಥಾನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿ ಸರಬರಾಜು

ಕೇಂದ್ರ ಆಹಾರ ಮಂತ್ರಿ ಜೈನರ ಭರವಸೆ

ಬೆಂಗಳೂರು ೧೦

ಕೇಂದ್ರ ಆಹಾರ ಮಂತ್ರಿ ಅಜಿತ ಪ್ರಸಾದ ಜೈನರವರು ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಇತರ ಸಚಿವರುಗಳೊಡನೆ ಸಂಸ್ಥಾನದ ಆಹಾರ ಪರಿಸ್ಥಿತಿ ವಿಷಯವನ್ನು ಕುರಿತು ಚರ್ಚೆ ನಡೆಸಿದರು. ಆಹಾರ ಪದಾರ್ಥಗಳ ಮೇಲೆ ಮಾರಾಟ ತೆರಿಗೆ ವಿಧಿಸುವ ವಿಚಾರವನ್ನು ಅವರು ಪರಿಶೀಲಿಸಿ ಆಹಾರಗಳಿಗೆ ತೆರಿಗೆ ವಿಧಾಯಕ ಮಾಡುವುದು "ಅಭಾಸ" ವೆಂದೂ ಅವರು ಅಭಿಪ್ರಾಯಪಟ್ಟರೆಂದಾಗಿ ಹೇಳಲಾಗಿದೆ.

ಮುಂದಿನ ಸುಗ್ಗಿವರೆಗೆ ಸಂಸ್ಥಾನಕ್ಕೆ ಅಕ್ಕಿ ಮತ್ತು ಗೋಧಿಯನ್ನು ಸರಬರಾಜು ಮಾಡುವ ವಿಚಾರವನ್ನೂ ಚರ್ಚಿಸಲಾಯಿತು. ಅಕ್ಕಿಯನ್ನು ಬಳಸುವ ಜನರು ಮುಂದೆ ಹೆಚ್ಚುಹೆಚ್ಚಾಗಿ ಗೋಧಿಯನ್ನು ಉಪಯೋಗಿಸುವುದು ಉತ್ತಮವೆಂದು ಕೇಂದ್ರ ಸಚಿವರು ಅಭಿಪ್ರಾಯಪಟ್ಟರು. ಆದರೆ ಸಂಸ್ಥಾನಕ್ಕೆ ಶೇಕಡ ೩೩ ರಷ್ಟು ಹೆಚ್ಚು ಅಕ್ಕಿಯನ್ನು ಕಳುಹಲಾಗುವುದೆಂದೂ ಅವರು ಭರವಸೆಯಿತ್ತಿರುವರು. ಎಷ್ಟುದೇಕಾದರೂ ಧಾನ್ಯವನ್ನು ಸಂಸ್ಥಾನಕ್ಕೆ ಒದಗಿಸಲಾಗುವುದೆಂದು ಅವರು ತಿಳಿಸಿರುತ್ತಾರೆ.

ಕಟ್ಟಡಗಳಿಗಿಂತಲೂ ಹೊಸರೈಲ್ವೆ ಲೈನುಗಳಿಗೆ ಹೆಚ್ಚು ಪ್ರಾಮುಖ್ಯತೆ

ಮಂತ್ರಿ ಜಗಜೀವನರಾಂರವರ ಸೂಚನೆ

ಹೊಸ ಮತ್ತು ಹೆಚ್ಚಿನ ರೈಲ್ವೆ ನಿಲ್ದಾಣಗಳು, ತಂಗುವ ಕೊಠಡಿಗಳು ಮತ್ತು ಇತರ ಮುಖ್ಯವಲ್ಲದ ಕಟ್ಟಡಗಳ ನಿರ್ಮಾಣವನ್ನು ನಿಲ್ಲಿಸಿ, ಹೊಸ ರೈಲು ರಸ್ತೆಗಳನ್ನು ಹಾಕುವುದಕ್ಕೆ ಸಿಮೆಂಟ್ ಮತ್ತು ಉಕ್ಕನ್ನು ಬಳಸಲಾಗುವುದೆಂದು ರೈಲ್ವೆ ಮಂತ್ರಿ ಜಗಜೀವನರಾಂರವರು ತಿಳಿಸಿರುತ್ತಾರೆ. ಕಟ್ಟಡಗಳ ಬದಲು ಹಿಂದುಳಿದ ಪ್ರದೇಶಗಳಲ್ಲಿ ಹೊಸ ರಸ್ತೆಗಳನ್ನು ನಿರ್ಮಿಸುವುದರಿಂದ ಹೆಚ್ಚಿನ ಪ್ರಯೋಜನವಾಗುವುದೆಂದೂ ಅವರು ಹೇಳಿರುತ್ತಾರೆ. ರೈಲು ಪ್ರಮಾಣದಲ್ಲಿ ಇಳಿಕೆಯಾಗುವುದನ್ನು ದ್ವಿತೀಯ ಯೋಜನೆ ಅವಧಿಯಲ್ಲಿ ಕಡಿಮೆ ಮಾಡಲು ಸಾಧ್ಯವಾಗುವುದಿಲ್ಲವೆಂದೂ ಸಚಿವರು ತಿಳಿಸಿದರು.

ಚಾಮುಂಡೇಶ್ವರಿ ದೇವಸ್ಥಾನದ ನಗಗಳ ಅಪಹಾರ

[ಸ್ವಂ ಸು ಫೋ॥] ನಂಜನಗೂಡು ೧೦

ಇಲ್ಲಿನ ಕಪಿಲಾ ನದಿ ತೀರದಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದ ಬಾಗಿಲು ಬೀಗವನ್ನು ನೆನ್ನೆ ರಾತ್ರಿ ಯಾರೋ ಮುರಿದು ದೇವರಿಗೆ ಇದ್ದ ಸುಮಾರು ೧,೦೦೦ ರೂ. ಒಡವೆಗಳನ್ನು ಅಪಹರಿಸಿರುತ್ತಾರೆ. ನಗಗಳ ಪೈಕಿ ಅನೇಕವನ್ನು ಮೈಸೂರು ರಾಜಮನೆತನದವರು ಕೊಟ್ಟಿದ್ದರು. ನೂರಾರು ಜನರು ಬಂದು ನೋಡಿಕೊಂಡು ಹೋಗುತ್ತಿರುವರು.

ಶ್ರೀಕಂಠಪುರಿಯ ಬಡಾವಣೆಯಲ್ಲಿರುವರೊಬ್ಬರಿಗೆ ಸೇರಿದ ಉತ್ತಮ ಜಾತಿಯ ೩ ಹಸುಗಳು ಸತ್ತಿವೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆಗೆ ವಿ. ವೆಂಕಟಪ್ಪನವರ ರಾಜೀನಾಮೆ

ವಿಪುಲ ಚರ್ಚೆಯನಂತರ ಬಹುಮತದ ಒಪ್ಪಿಗೆ

ಬೆಂಗಳೂರು ೧೦

ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆಗೆ ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರು ಇತ್ತ ರಾಜೀನಾಮೆಯನ್ನು ಪ್ರದೇಶ ಕಾಂಗ್ರೆಸ್ ಸಮಿತಿಯು ನೆನ್ನೆ [illegible] ಅಂಗೀಕರಿಸಿತು. [illegible] ಸಭೆಯು [illegible] ಸದಸ್ಯರ ಪೈಕಿ [illegible] ರು ರಾಜೀನಾಮೆ [illegible] ಕುರಿತು ಚರ್ಚಿಸಲಾಯಿತು [illegible] ಮೆಯನ್ನು ಅಂಗೀಕರಿಸುವ [illegible] ಜಾರಿಗೆ ಬಾಧಿಸುವುದೇ-ಎಂಬ ವಿಚಾರದ [illegible] ಸ್ವರ [illegible] ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿ. ಜೆ. ಅಂಬಲಿಯವರು ಸಭೆಯ ಓಟನ್ನು ಪಡೆದರು.

ಕಾಲುಜಾರಿ ಕೆರೆಯಲ್ಲಿ ಮುಳುಗಿ ಮುದುಕಿಯ ಮರಣ

[illegible] ೧೦

ನಗರದ ಸೀತಾ ವಿಲಾಸ [illegible] ದ ಶ್ರೀ [illegible] ರಾಮಸ್ವಾಮಿ ಎಂಬುವರ [illegible] ದರಿ ಶ್ರೀಮತಿ ಲಕ್ಷ್ಮೀದೇವಮ್ಮ [illegible] ಯು ಮೊನ್ನೆ ಬೆಳಗ್ಗೆ [illegible] ರಹಳ್ಳಿ ಕೆರೆಯಲ್ಲಿ ಸ್ನಾನ ಮಾಡುವಾಗ ಜಾರಿ ನೀರಿನಲ್ಲಿ ಮುಳುಗಿ ಸತ್ತಿರಬೇಕೆಂದು ಗೊತ್ತಾಗಿದೆ. ಲಕ್ಷ್ಮೀಪುರಂ ಪೋಲೀಸರು ಮಹಜರು ಕ್ರಮ ನಡೆಸಿದರು.

ವೈಶ್ಯರ ವಿದ್ಯಾ ನಿಧಿಗೆ ಕಾಣಿಕೆ

ನಗರದ ಕನ್ಯಕಾಪರಮೇಶ್ವರಿ ಸೊಸೈಟಿಯ ವಿದ್ಯಾ ನಿಧಿಗೆ ಶ್ರೀ ಪಿ. ಎಸ್. ವೆಂಕಟರಮಣ ಶೆಟ್ಟಿಯವರು ತಮ್ಮ ಕುಮಾರಿಯ ವಿವಾಹ ಮಹೋತ್ಸವದ ಸಂಬಂಧವಾಗಿ ೧೦೦೦ ರೂ. ಕಾಣಿಕೆ ಕೊಡುವುದಾಗಿ ವಾಗ್ದಾನ ಮಾಡಿರುವರೆಂದು ತಿಳಿಸಲಾಗಿದೆ. ವರನ ತಂದೆಯವರಾದ ರಾಮನಗರದ ಶ್ರೀ ಎ. ಎಸ್. ರಾಮಚಂದ್ರಶೆಟ್ಟರು ೨೫೦ ರೂ.ಗಳನ್ನು ನಿಧಿಗೆ ದಾನ ಮಾಡಿರುತ್ತಾರೆ.

ಮುನಿಸಿಪಲ್ ಕೆಲಸಗಾರರ ಸಭೆ

ನೆನ್ನೆ ದಿನ ಮುನಿಸಿಪಲ್ ಕೆಲಸಗಾರರು ಮೆರವಣಿಗೆ ಮಾಡಿ ಬಸ್ ಟರ್ಮಿನಸ್ ಮೈದಾನದಲ್ಲಿ ಬಹಿರಂಗ ಸಭೆ ನಡೆಸಿದರು. ಸಂಘದ ಕಾರ್ಯದರ್ಶಿ ಶ್ರೀ ಎಂ. ಎ. ಉಗ್ರಪ್ಪನವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸರ್ಕಾರವು ಮಾಡಿರುವ ಶಿಫಾರಸ್ಸನ್ನು ಕೂಡಲೇ ಕೊಡಬೇಕೆಂದೂ, ಕೆಲಸದಿಂದ ತೆಗೆದುಹಾಕಿರುವವರಿಗೆ ಪರಿಹಾರ ಕೊಡಬೇಕೆಂದೂ, ಇಲ್ಲದಿದ್ದರೆ ಮುಷ್ಕರದ ಬ್ಯಾಲಟ್ಟನ್ನು ತೆಗೆದುಕೊಳ್ಳಬೇಕೆಂದೂ ತೀರ್ಮಾನ ಮಾಡಲಾಯಿತು. [illegible] ವಿರೋಧಿಸುವ ಮತ್ತು ಶಾಂತಿ [illegible] ಶಸ್ತ್ರಾಸ್ತ್ರ ಪ್ರಯೋಗಗಳನ್ನು ನಿಲ್ಲಿಸಲು [illegible] ರಾಷ್ಟ್ರಗಳು ಸೇರಿ ಕೂಡಲೇ [illegible] ಕ್ಕೆ ಬರಬೇಕೆಂದ [illegible] ಗಳನ್ನು ಮಾಡಲಾಯಿತು.

ಪಿ. ಸೀತಾರಾಮಯ್ಯನವರು ವಿಧಾನ ಪರಿಷತ್ತಿನ ಅಧ್ಯಕ್ಷರು

ಸರ್ವಾನುಮತದಿಂದ ಚುನಾವಣೆ

[ಸ್ವಂ ಸು ಫೋ॥] ಬೆಂಗಳೂರು ೧೦

ವಿಧಾನ ಪರಿಷತ್ತಿನ ಸಭೆಯು ಈ ಮಧ್ಯಾಹ್ನ ಸೇರಿತು. ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರನ್ನು ಪರಿಷತ್ತಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು. ಅವರ ಹೆಸರನ್ನು ಕಾಂಗ್ರೆಸ್ ಪಕ್ಷದವರು ಸೂಚಿಸಿದ್ದರು. ನೆನ್ನೆ ಪಕ್ಷದ ಸಭೆಯಲ್ಲಿ ಈ ಬಗ್ಗೆ ಸರ್ವಾನುಮತದ ನಿರ್ಧಾರವಾಗಿದ್ದಿತು. ಬೇರೆ ಪಕ್ಷಗಳ ಉಮೇದವಾರರಾರೂ ಇರಲಿಲ್ಲ.

ವಿಶ್ವದ ಅತ್ಯಂತ ವಯೋವೃದ್ಧನ ನಿಧನ

ವಿಶ್ವದಲ್ಲೇ ಅತ್ಯಂತ ವಯೋವೃದ್ಧರೆಂದು ಪ್ರತೀತಿಯಿರುವ ರಷ್ಯದ ಯೆಗೊರ್ ಕೊರಿಯೆವ್ ರವರು ಕಾಕಸಸ್ ಪ್ರದೇಶದ ತಮ್ಮ ಗ್ರಾಮದಲ್ಲಿ ಮೊನ್ನೆ ಮರಣಹೊಂದಿದರೆಂದು ವರದಿಯಾಗಿದೆ. ಅವರಿಗೆ ೧೫೭ ವರ್ಷ ವಯಸ್ಸಾಗಿತ್ತು. ನೆಪೋಲಿಯನ್ ಚಕ್ರವರ್ತಿಯು ೧೮೧೨ರಲ್ಲಿ ರಷ್ಯಾ ಮೇಲೆ ದಂಡಯಾತ್ರೆ ಮಾಡಿದ್ದಾಗ ಅವರು ಎಳೆಯವನಾಗಿದ್ದು ರಷ್ಯದ ಒಬ್ಬ ಪ್ರಖ್ಯಾತ ಸೈನ್ಯಾಧಿಕಾರಿ [illegible] ಅಡಿಗೆ ಕೆಲಸದಲ್ಲಿದ್ದರು.

ಶಾಸನಸಭಾ ಮಹಿಳಾ ಕಾಂಗ್ರೆಸ್ ಸದಸ್ಯರ ಗೋಷ್ಠಿ ಆರಂಭ

ಹೈದರಾಬಾದು, ಮದ್ರಾಸು, ಮೈಸೂರು ಮತ್ತು ಕೇರಳ ವಿಧಾನ ಸಭೆಗಳ ಕಾಂಗ್ರೆಸ್ ಸದಸ್ಯೆಯರ ಗೋಷ್ಠಿಯು ನೆನ್ನೆ ಇಲ್ಲಿ ಆರಂಭವಾಯಿತು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಭಾಷಣ ಮಾಡಿ ರಾಷ್ಟ್ರದ ಸೇವೆಗೆ ಮಹಿಳಾ ಸದಸ್ಯರು ಸಿದ್ಧತೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ಶಾಸನ ಸಭೆಗಳಲ್ಲಿ ವಿರೋಧ ಪಕ್ಷದವರ ಸಂಖ್ಯೆಯು ಹೆಚ್ಚಿಲ್ಲವೆಂಬ ಕಾರಣಕ್ಕಾಗಿ ಅವರುಗಳು ಉದಾಸೀನರಾಗಿರದೆ ಸಮಸ್ಯೆಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕೆಂದು ಸೂಚಿಸಿದರು. ಕೇಂದ್ರ ಸರ್ಕಾರದ ಮಾಜಿ ಉಪ ಮಂತ್ರಿ ಮರಕತಂ ಚಂದ್ರಶೇಖರ್‌ರವರು ಸ್ವಾಗತ ಭಾಷಣ ಮಾಡಿ ನಾಡಿನಲ್ಲಿ ಒಟ್ಟು ೭೫ ಮಂದಿ ಮಹಿಳೆಯರು ಶಾಸನ ಸಭೆಗಳಲ್ಲೂ, ೨೫ ಮಂದಿ ಪಾರ್ಲಿಮೆಂಟಿನಲ್ಲೂ ಇರುವರೆಂದು ಹೇಳಿದರು. ಗೋಷ್ಠಿಯು ೧ ವಾರ ನಡೆಯುವುದು.

ಲಾರಿ ಡಿಕ್ಕಿ ತನಿಖೆಗಾಗಿ ಹೋಗಿದ್ದ ಪೋಲೀಸನ ಅಪಹಾರ?

ಬೊಂಬಾಯಿ ಕಡೆಯ ಲಾರಿಯೊಂದು ನೆನ್ನೆ ಬೆಂಗಳೂರಿನಲ್ಲಿ ಕಾರೊಂದಕ್ಕೆ ಡಿಕ್ಕಿ ಹೊಡೆದು ಅದನ್ನು ತನಿಖೆ ಮಾಡಲು ಬಂದ ಪೋಲೀಸು ಕಾನ್‌ಸ್ಟೇಬಲ್ ಒಬ್ಬನನ್ನು ಲಾರಿಯೊಳಕ್ಕೆ ಹಾಕಿಕೊಂಡು ಅದರ ಡ್ರೈವರನು ಪರಾರಿಯಾಗಿರುವನೆಂದು [illegible] ಲಾರಿಯನ್ನು ಹುಡುಕಿಕೊಂಡು ಇನ್ನೆರಡು ಕಾರುಗಳು ಹೊರಟಿವೆ [illegible], ಪೋಲೀಸರು ವೈರ್‌ಲೆಸ್ ಮೂಲಕ ಇತರ ಕಡೆಗಳಿಗೆ ವರ್ತಮಾನ ಕೊಟ್ಟಿರುವರೆಂದೂ ವರದಿಯಾಗಿದೆ.

ವಿಧಾನ ಸಭೆಯ ಅಧ್ಯಕ್ಷರಾಗಿ ಎಸ್. ಆರ್. ಕಂಠಿಯವರ ಆಯ್ಕೆ

ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

[ಸ್ವಂ ಸು ಫೋ॥] ಬೆಂಗಳೂರು ೧೦

ಮಹಾ ಚುನಾವಣೆಗಳ ನಂತರ ಇದೇ ಪ್ರಥಮವಾಗಿ ನೂತನ ವಿಧಾನ ಸಭೆಯು ಈ ಮಧ್ಯಾಹ್ನ ಡಾ॥ ಆರ್. ನಾಗನಗೌಡರ ಅಧ್ಯಕ್ಷತೆಯಲ್ಲಿ ಸೇರಿತು. ಒಟ್ಟು ೨೦೮ ಸದಸ್ಯರ ಪೈಕಿ ೧೯೬ ಮಂದಿ ಭಾಗವಹಿಸಿದ್ದರು. ಅವರಲ್ಲಿ ೧೮ ಮಹಿಳೆಯರೂ ಇದ್ದರು.

೪೫ ಮಂದಿ ಸದಸ್ಯರು ಕನ್ನಡ, ೫ ಜನರು ಮರಾಠಿ ಮತ್ತು ಉಳಿದವರು ಇಂಗ್ಲಿಷ್ ಭಾಷೆಗಳಲ್ಲಿ ಪ್ರಮಾಣ ವಚನವನ್ನು ತೆಗೆದುಕೊಂಡರು. ಮೊದಲು ಸಚಿವರುಗಳ ಪ್ರಮಾಣ ವಚನವಾಯಿತು. ಶ್ರೀ ಕೆ. ಹನುಮಂತಯ್ಯನವರು ಕನ್ನಡದಲ್ಲಿ ಸ್ವೀಕರಿಸಿದರು.

ಶ್ರೀ ಬಿ. ಕೆ. ಪುಟ್ಟರಾಮಯ್ಯನವರು ಕ್ರಿಯಾಲೋಪವೆತ್ತಿ ಅಕ್ಷರಾನುಕ್ರಮದ ಪಟ್ಟಿಯಿಂದ ನಡೆಸಿದ ಪ್ರಮಾಣ ವಚನ ಸ್ವೀಕಾರದಲ್ಲಿ ಮಂತ್ರಿಗಳಿಗೆ ಮುಂಚೆ ಅವಕಾಶ ಕೊಟ್ಟಿದ್ದು ಸರಿಯಲ್ಲವೆಂದು ಆಕ್ಷೇಪಿಸಿದರು. ಅಧ್ಯಕ್ಷರು ಅದನ್ನು ತಳ್ಳಿಹಾಕಿದರು.

ಸಭೆಯು ಮಧ್ಯಾಹ್ನ ಸೇರಿದ ಮೇಲೆ ಅಧ್ಯಕ್ಷರ ಚುನಾವಣೆಯಾಯಿತು. ಶ್ರೀ ಎಸ್. ಆರ್. ಕಂಠಿಯವರ ಹೆಸರನ್ನು ಕಾಂಗ್ರೆಸ್ ಪಕ್ಷದವರು ಸೂಚಿಸಿದರು. ಬೇರೆ ಯಾರೂ ಹೆಸರೂ ಇರಲಿಲ್ಲವಾದ ಪ್ರಯುಕ್ತ ಶ್ರೀ ಕಂಠಿಯವರು ಸರ್ವಾನುಮತದಿಂದ ಆರಿಸಲ್ಪಟ್ಟರು.

ಮಂತ್ರಿ ಮತ್ತು ಕಾರ್ಯದರ್ಶಿಗಳ ಮೇಲೆ ಕಂಟ್ರಾಕ್ಟರರ ಕೈ

ವಿಧಾನಸೌಧ ಕಟ್ಟಡದ ಬಳಿ ಈ ದಿನ ಬೆಳಗ್ಗೆ ಮರಾಮತ್ತು ಇಲಾಖೆಯ ಕಾರ್ಯದರ್ಶಿ ಶ್ರೀ ಡಿ. ಕೆ. ಶ್ರೀನಿವಾಸಾಚಾರ್ಯರು ಹೋಗುತ್ತಿದ್ದಾಗ, ಅವರ ಹಿಂದುಗಡೆ ಬರುತ್ತಿದ್ದ ಕಂಟ್ರಾಕ್ಟರನೆಂದು ಹೇಳಲಾದ ತಿಮ್ಮಾಬೋವಿ ಎಂಬುವನು ಅವರ ಮೇಲೆ ಮಣ್ಣು ಹೆಂಟೆಯನ್ನು ಎಸೆದನೆಂದೂ, ಅವರಿಗೆ ಸ್ವಲ್ಪ ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಯಿತೆಂದೂ ಗೊತ್ತಾಗಿದೆ. ತನ್ನ ಕಂಟ್ರಾಕ್ಟ್ ಸಂಬಂಧದ ಪತ್ರವನ್ನು ವಿಲೇ ಮಾಡಿಲ್ಲವೆಂಬುದೇ ಅವನ ಕೋಪಕ್ಕೆ ಕಾರಣವಾಗಿತ್ತೆಂದು ಹೇಳಲಾಗಿದೆ.

ಎ. ಲಕ್ಷ್ಮಣರಾಯರು ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿ

ರಸ್ತೆ ಸಂಚಾರ ಇಲಾಖೆಯ ಜನರಲ್ ಮ್ಯಾನೇಜರ್ ಶ್ರೀ ಎ. ಲಕ್ಷ್ಮಣರಾಯರನ್ನು ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ.

ನಗರದಲ್ಲಿ ೧೧ ಮಂದಿಗೆ ಇನ್‌ಫ್ಲುಯೆಂಜಾ

ಮೈಸೂರು ೧೦

ನಗರದಲ್ಲಿ ಇಂದು ೧೧ ಮಂದಿಗೆ ಇನ್‌ಫ್ಲುಯೆಂಜಾ ಉಂಟಾಗಿರುವುದೆಂದು ತಿಳಿಸಲಾಗಿದೆ. ಇದುವರೆಗೆ ವ್ಯಾಧಿ ತಗಲಿರುವವರ ಸಂಖ್ಯೆಯು ೬೩ ರಷ್ಟು, ಒಟ್ಟು ಸಂಖ್ಯೆಯು ಈಗ [illegible] ಕ್ಕೆ ಏರಿದೆ. ಆ ಪೈಕಿ ೩೦ ಮಂದಿ ಗುಣಹೊಂದಿರುತ್ತಾರೆ.

"ದಾಸಪ್ರಕಾಶದಲ್ಲಿ" ರಾಮೋತ್ಸವ ಸಮಾರಂಭಗಳು

ಮೈಸೂರು ೧೦

ನಗರದ ದಾಸಪ್ರಕಾಶದ ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ಪ್ರತಿ ವರ್ಷದಂತೆ ಕಳೆದ ಗುರು ಮತ್ತು ಶುಕ್ರವಾರಗಳಲ್ಲಿ ರಾಮೋತ್ಸವ ಮತ್ತು ಹನುಮಂತೋತ್ಸವಗಳನ್ನು ನೆರವೇರಿಸಿದರು ೬ನೇ ತಾ|| ಬೆಳಿಗ್ಗೆ ಪೂಜೆ ಮತ್ತು ಬ್ರಾಹ್ಮಣ ಸಂತರ್ಪಣೆಗಳೂ, ಸಂಜೆ ಚೌಡಯ್ಯನವರ ಪಿಟೀಲು ವಾದನ, ಶ್ರೀ ಸೀತಾರಾಮರಾಯರ ಕುಮಾರಿಯರು ಗೀತಾ ಮತ್ತು ವಿಜಯಾರವರ ಭರತ ನಾಟ್ಯ, ಶ್ರೀ ಸೀತಾರಾಮರಾಯರು ಮತ್ತು ಸಹೋದರರಿಂದ ಭಜನೆಗಳೂ ಆದುವು. ಶ್ರೀ ಎಂ. ರಾಮಸ್ವಾಮಿಯವರು ಭಾಷಣ ಮಾಡಿ ಶ್ರೀ ಸೀತಾರಾಮರಾಯರ ಭಗವದ್ಭಕ್ತಿ ಮತ್ತು ಪರೋಪಕಾರ ಬುದ್ಧಿಯನ್ನು ಪ್ರಶಂಸಿಸಿದರು ಶ್ರೀ ಬಿ ಎಸ್. ಸುಬ್ಬರಾಯರು ವಂದನಾರ್ಪಣೆ ಮಾಡಿದರು

ಶುಕ್ರವಾರ ಮಧ್ಯಾಹ್ನ ೩೦೦ ಜನ ಬಡಬಗ್ಗರಿಗೆ ಅನ್ನದಾನ, ಲಾಡು ಮತ್ತು ಪಾಯಸಗಳಿಂದ ಸಂತೃಪ್ತಿಗೊಳಿಸಲಾಯಿತು ಸಂಜೆ ಪುರಂದರದಾಸರ ಕೀರ್ತನೆ ಮತ್ತು ನೃತ್ಯಗಳಾದ ಮೇಲೆ ಶ್ರೀ ರಾಮ ಮತ್ತು ಆಂಜನೇಯರ ಮೆರವಣಿಗೆ ನಡೆಯಿತು. ಮಹಾ ಮಂಗಳಾರತಿಯಾದನಂತರ ಅರಮನೆ ಧರ್ಮಾಧಿಕಾರಿಗಳಾದ ಶ್ರೀ ಹೆಚ್ ಎಸ್. ರಾಘವೇಂದ್ರಾಚಾರ್ಯರು ಶ್ರೀ ಸೀತಾರಾಮರಾಯರ ಭಗವತ್ಸೇವೆಯನ್ನು ಪ್ರಶಂಸಿಸಿದರು ಶ್ರೀ ವಾಸುದೇವರಾಯರು ವಂದನಾರ್ಪಣೆ ಮಾಡಿದರು.

ಉಚಿತ ನೃತ್ಯ ಶಿಕ್ಷಣ

ಅಶೋಕಾ ರಸ್ತೆಯ ಪಶ್ಚಿಮ ೧೧ನೇ ಕ್ರಾಸಿನ ೫೬೦ನೇ ನಂಬರ್ ಮನೆಯಲ್ಲಿರುವ ಶ್ರೀ ಎಂ ಆರ್ ಜಿ ರಾಯರು ಉಚಿತವಾಗಿ ನೃತ್ಯ ಶಿಕ್ಷಣವನ್ನು ಕೊಡುವರೆಂದು ತಿಳಿಸಲಾಗಿದೆ

ವನಿತಾ ಸದನದಲ್ಲಿ ತರಗತಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಪರೀಕ್ಷೆಗಳಿಗೆ ವಿದ್ಯಾರ್ಥಿನಿಯರನ್ನು ತರಪೇತು ಮಾಡಲು ಕಳೆದ ೧ ರಿಂದ ನಗರದ ವನಿತಾ ಸದನದಲ್ಲಿ ತರಗತಿಗಳನ್ನು ಪ್ರಾರಂಭಿಸಲಾಗಿದೆ ಸಂಗೀತ, ಹಿಂದಿ ಮತ್ತು ಹೊಲಿಗೆ ಎಂಬ್ರಾಯ್‌ಡರಿ ತರಗತಿಗಳೂ ಆರಂಭವಾಗಿವೆ. ವಿದ್ಯಾರ್ಥಿನಿಯರೂ, ಮಹಿಳೆಯರೂ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕಾಗಿ ಕೋರಿದೆ

ತಂತಿ ಸುದ್ದಿಗಳಿಗೆ ಹೆಚ್ಚಿನ ದರ

ನೆನ್ನೆ ಮಧ್ಯ ರಾತ್ರಿಯಿಂದ ತಂತಿ ದರವು ಹೆಚ್ಚಿದೆ ಪ್ರತಿ ೮ ಅಥವಾ ಕಡಿಮೆ ಪದಗಳಿಗೆ ಇದು ಅನ್ವಯಿಸುವುದಿಲ್ಲ ಸಾಧಾರಣ ತಂತಿಗೆ ೮೦ ಮತ್ತು ಎಕ್ಸ್‌ಪ್ರೆಸ್ ತಂತಿಗೆ ೧೬೦ ಪೈಸೆಗಳು ಇರುವುವು. ಸಾಧಾರಣ ಮತ್ತು ಎಕ್ಸ್‌ಪ್ರೆಸ್ ತಂತಿಗಳಲ್ಲಿ ಲೆಕ್ಕ ಮೇಲ್ಪಟ್ಟಿರುವ ಪದಗಳಿಗೆ ಪ್ರತಿ ಪದಕ್ಕೂ ಕ್ರಮವಾಗಿ ೮ ಮತ್ತು ೧೬ ನಯಾ ಪೈಸೆ ಕೊಡಬೇಕಾಗುವುದು

ಸೂಯೆಜ್ ಕಾಲುವೆ ಬಳಸಲು ಫ್ರಾನ್ಸಿನ ನಿರ್ಧಾರ

ಸೂಯೆಜ್ ಕಾಲುವೆಯನ್ನು ಪುನಃ ಹಡಗು ಸಂಚಾರಕ್ಕೆ ಉಪಯೋಗಿಸಲು ಫ್ರಾನ್ಸು ನಿರ್ಧರಿಸುವುದಾಗಿ ಗೊತ್ತಾಗಿದೆ ಕಾಲುವೆ ಸುಲ್ಕವನ್ನು ಕೊಡುವ ವಿಚಾರವಾಗಿ ಈಜಿಪ್ಟಿನೊಡನೆ ಸ್ವಿಟ್ಜರ್ಲೆಂಡಿನ ರಾಯಭಾರಿ ಮೂಲಕ ಅದು ಮಾತುಕತೆ ನಡೆಸುತ್ತಿದೆಯೆಂದು ಹೇಳಲಾಗಿದೆ

ಸಮಾಧಿಯ ಕಲ್ಲನ್ನು ಕದ್ದುದಕ್ಕಾಗಿ ೨ ತಿಂಗಳ ಸಜಾ

ಬೆಂಗಳೂರು ದಂಡಿನ ರಾಜಿ ಉರುಫ್ ರಾಯಪ್ಪ ಎಂಬ ತರುಣನು ಹೊಸೂರು ರೋಡ್ ಸ್ಮಶಾನದ ಒಂದು ಸಮಾಧಿಯ ಮೇಲಿದ್ದ ಕಲ್ಲನ್ನು ಕಳುವು ಮಾಡಿದ್ದಕ್ಕಾಗಿ ಸಿವಿಲ್ ಪ್ರದೇಶದ ನ್ಯಾಯಾಧೀಶರು ಅವನಿಗೆ ೨ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ ಅವನಿಗೆ ಈಗಾಗಲೇ ೫ ಸಾರಿ ಸಜಾ ಆಗಿದೆ

Printed and Published by A. R. Nagarajan at Sadhvi Press, ... Road, Mysore

ಬೆಲೆ ಇಳಿಸಲು ಕೇಂದ್ರ ಸರ್ಕಾರದ ನಾಲ್ಕು ಅಂಶಗಳ ಕ್ರಮ

ಆಹಾರ ಧಾನ್ಯದ ಬೆಲೆಯನ್ನು ಇಳಿಸುವುದಕ್ಕೆ ಕೇಂದ್ರ ಸರ್ಕಾರದವರು ೪ ಅಂಶಗಳ ಕ್ರಮವನ್ನು ಸೂಚಿಸಿರುತ್ತಾರೆ. ಧಾನ್ಯದ ವಲಯಗಳಲ್ಲಿ ಸಾಗಾಣಿಕೆ ಹತೋಟಿ, ಬ್ಯಾಂಕುಗಳಿಂದ ಮುಂಗಡ ಕೊಡುವುದಕ್ಕೆ ಮಿತಿ, ದಾಸ್ತಾನುಗಾರರಿಂದ ಧಾನ್ಯವನ್ನು ಸರ್ಕಾರಗಳು ವಶಪಡಿಸಿಕೊಳ್ಳುವುದು, ಮತ್ತು ಅಕ್ಕಿ ಆಮದನ್ನು ಮುಂದುವರಿಸಿ, ಯೋಗ್ಯ ಬೆಲೆ ಡಿಪೋಗಳನ್ನು ತೆರೆಯುವುದು-ಇವೇ ಆ ನಾಲ್ಕು ಅಂಶಗಳು ಇವುಗಳಿಂದಲೂ ಬೆಲೆ ಇಳಿಯದಿದ್ದರೆ ಮುಂದೆ ಸರ್ಕಾರದವರು ಬೇರೆ ಕ್ರಮಗಳನ್ನು ಕೈಗೊಳ್ಳುವರೆಂದು ಹೇಳಲಾಗಿದೆ. ಆದರೆ ಆಹಾರದ ಪಡಿತರವನ್ನು ಮಾತ್ರ ಪುನಃ ಜಾರಿಗೆ ತರುವುದಿಲ್ಲವೆಂದು ಕೇಂದ್ರ ಆಹಾರ ಸಚಿವರು ತಿಳಿಸಿರುತ್ತಾರೆ

ಹೆರಿಗೆ ಆಸ್ಪತ್ರೆಯಲ್ಲಿ ನಾಯಿಯಿಂದ ಶಿಶುವಿನ ಅಪಹಾರ

ಕರ್ನೂಲಿನ ಹೆರಿಗೆ ಆಸ್ಪತ್ರೆಯಲ್ಲಿದ್ದ ಒಂದು ಮಗುವನ್ನು ಕಳೆದ ೩ನೇ ತಾರೀಕು ನಾಯಿಯು ಅಪಹರಿಸಿಕೊಂಡುಹೋಯಿತೆಂದು ವರದಿಯಾಗಿದೆ ಆಸ್ಪತ್ರೆ ನೌಕರರು ನಾಯಿಯನ್ನು ಅಟ್ಟಿಸಿಕೊಂಡುಹೋದರೆಂದೂ, ಆದರೆ ಇದುವರೆಗೂ ಮಗುವು ಪತ್ತೆಯಿಲ್ಲವೆಂದೂ ಹೇಳಲಾಗಿದೆ. ಅದೇ ವಾರ್ಡಿನಲ್ಲಿದ್ದ ಮತ್ತೊಂದು ಮಗುವೂ ಐದು ದಿನಗಳ ಹಿಂದೆ ಅದೃಶ್ಯವಾಗಿದೆಯೆಂದೂ ಹೇಳಲಾಗಿದೆ. ಪೋಲೀಸರು ತನಿಖೆ ನಡೆಸುತ್ತಿರುವರು.

ತಾಜಮಹಲ್ ರಿಪೇರಿಗಾಗಿ ೪ ಲಕ್ಷ ರೂ. ವೆಚ್ಚ

ಜಗತ್ಪ್ರಸಿದ್ಧವಾದ ತಾಜಮಹಲ್ ಕಟ್ಟಡದ ರಿಪೇರಿಗಾಗಿ ೪ ಲಕ್ಷ ರೂ ವೆಚ್ಚವಾಗುವುದೆಂದು ನಿಪುಣರ ಸಮಿತಿಯೊಂದು ತಿಳಿಸಿದೆ.

ರೇಷ್ಮೆ ಕಾರ್ಖಾನೆ ಕಾರ್ಮಿಕರ ಸಂಘದ ಸಭೆ

ಸರ್ಕಾರಿ ರೇಷ್ಮೆ ಕಾರ್ಖಾನೆ ಕಾರ್ಮಿಕರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಗುರುವಾರ ಶ್ರೀ ಹೆಚ್ ನಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಸರ್ಕಾರದವರು ನೌಕರರ ಸಂಬಳ, ತುಟ್ಟಿ ಭತ್ಯ ಮುಂತಾದುವುಗಳ ಬೇಡಿಕೆ ಬಗ್ಗೆ ತಾತ್ಸಾರ ಮಾಡಿರುವುದನ್ನು ಟೀಕಿಸಿ, ಕೂಡಲೇ ಈ ವಿಚಾರವನ್ನು ಇತ್ಯರ್ಥಪಡಿಸಬೇಕೆಂದು ಕೋರಲಾಯಿತು ಕಳೆದ ವರ್ಷ ಆಗಸ್ಟ್ ತಿಂಗಳಿಂದಲೂ ಹೆಚ್ಚು ಸಂಬಳ ತುಟ್ಟಿ ಭತ್ಯ ಕೊಡುವಂತೆ ಒತ್ತಾಯಪಡಿಸಲಾಯಿತು ಸರ್ಕಾರಿ ಕೈಗಾರಿಕೆಗಳಲ್ಲಿ ಕೆಲಸಗಾರರು ೩೫ ವರ್ಷಗಳಿಂದಲೂ ಕಡಿಮೆ ಸಂಬಳದಲ್ಲೇ ದುಡಿಯುತ್ತಿರುವರೆಂದೂ, ಕೈಗಾರಿಕೆಗಳಲ್ಲಿ ಯಥೇಷ್ಟ ಲಾಭವು ಬರುತ್ತಿರುವುದೆಂದೂ ಸೂಚಿಸಲಾಗಿದೆ ಗ್ರಾಚ್ಯುಯಿಟಿ ಮತ್ತು ೩೦ ದಿನ ಸಂಬಳ ಸಹಿತದ ರಜಾವನ್ನು ಕೊಡುವಂತೆಯೂ ಕೋರಲಾಗಿದೆ

ವಿವಾಹ ಮಹೋತ್ಸವಗಳು

ಚಿಟ್ಟದಪುರದ ಜೋಗನಹಳ್ಳಿ ಶ್ಯಾನುಭೋಗರಾದ ಶ್ರೀ ಬಿ. ಎಸ್ ಶ್ರೀಕಂಠಯ್ಯನವರು ತಮ್ಮ ಪುತ್ರ ಶ್ರೀ ಬಿ ಎಸ್. ವೆಂಕಟಸುಬ್ಬಯ್ಯನವರಿಗೆ ನಗರದ ಡೆಪ್ಯುಟಿ ಪೋಸ್ಟ್‌ಮಾಸ್ಟರ್ ಶ್ರೀ ವೈ. ಶಾಮಣ್ಣನವರ ಕುಮಾರಿ ಸೌ|| ಇಂದಿರಳನ್ನು ತಂದುಕೊಂಡು ಕಳೆದ ಶುಕ್ರವಾರ ವಿವಾಹವನ್ನು ನಗರದಲ್ಲಿ ನೆರವೇರಿಸಿದರು

ಅಸಿಸ್ಟೆಂಟ್ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಜಿ ಎಲ್. ಶಿವಶಂಕರಪ್ಪನವರು ತಮ್ಮ ಕುಮಾರಿ ಸೌ|| ಪ್ರಫುಲ್ಲಳನ್ನು ಮಳವಳ್ಳಿ ತಾಲ್ಲೂಕು ನೇಚನೂರಿನ ಶ್ರೀ ವೀರೇಗೌಡರ ಮಕ್ಕಳು ಶ್ರೀ ಹೆಚ್. ವಿ. ರಾಜುರವರಿಗೆ ಕೊಟ್ಟು ಕಳೆದ ಗುರುವಾರ ವಿವಾಹವನ್ನು ನಡೆಸಿದರು

ಗುಂಡ್ಲುಪೇಟೆ ಜಮೀನ್ದಾರ್ ಶ್ರೀ ಟಿ ಬಿ ಸಿ ಲಕ್ಷ್ಮೀಶೆಟ್ಟಿಯವರು ತಮ್ಮ ಪುತ್ರಿ ಸೌ|| ಇಂದಿರಮ್ಮನವರನ್ನು ಕೊಳ್ಳೇಗಾಲ ತಾಲ್ಲೂಕು ತಿಳ್ಳನೂರು ಶ್ರೀ ದಾಸಶೆಟ್ಟಿಯವರ ಮಕ್ಕಳು ಶ್ರೀ ಡಿ. ದಾಸಶೆಟ್ಟಿರಿಗೆ ಕೊಟ್ಟು ಕಳೆದ ಶುಕ್ರವಾರ ಗುಂಡ್ಲುಪೇಟೆಯಲ್ಲಿ ವಿವಾಹವನ್ನು ಜರುಗಿಸಿದರು.

ಆಲ್ ಇಂಡಿಯಾ ರೇಡಿಯೋ ವೈಣಿಕ ವಿದ್ವಾನ್ ವಿ ನಾರಾಯಣ ಅಯ್ಯರ್‌ರವರು ತಮ್ಮ ಕುಮಾರಿ ಸೌ|| ನಿರ್ಮಲಾಂಬನನ್ನು ಬೆಂಗಳೂರಿನ ಶ್ರೀ ಆರ್. ಕೃಷ್ಣಯ್ಯರ್‌ರವರ ಮಗ ಶ್ರೀ ವೆಂಕಟಕೃಷ್ಣರವರಿಗೆ ಕೊಟ್ಟು ಕಳೆದ ಗುರುವಾರ ಭದ್ರಾವತಿಯಲ್ಲಿ ವಿವಾಹವನ್ನು ಬೆಳೆಸಿದರು.

ಉಪನಯನ

ಮಹಾರಾಜಾ ಕಾಲೇಜಿನ ಭಾಷಾ ಶಾಸ್ತ್ರಜ್ಞರಾದ ಶ್ರೀ ಕ ವೆಂ ರಾಘವಾಚಾರ್ಯರು ತಮ್ಮ ಕುಮಾರ ಚಿ|| ದೊರೆಸ್ವಾಮಿಗೆ ಕಳೆದ ಶುಕ್ರವಾರ ಬ್ರಹ್ಮೋಪದೇಶವನ್ನು ನೆರವೇರಿಸಿದರು

ಚೂಡಾಕರ್ಮ

ಚಲುವಾಂಬಾ ಆಸ್ಪತ್ರೆ ನೌಕರರಾದ ಶ್ರೀ ಹೆಚ್. ಕೆ. ಸೀತಾರಾಮಯ್ಯನವರು ತಮ್ಮ ಮಗ ಚಿ|| ರಾಮ ಪ್ರಸನ್ನಕುಮಾರನಿಗೆ ಕಳೆದ ಶುಕ್ರವಾರ ಚೂಡಾಕರ್ಮವನ್ನು ನಂಜನಗೂಡಿನಲ್ಲಿ ನೆರವೇರಿಸಿದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೀಣೆ ೭-೧೫ ಆರ್. ಪರಮಶಿವ-ದೇವರ ನಾಮ ೮-೧೫ ಗಾನವಿಹಾರ. ಮಧ್ಯಾಹ್ನ ೧೨ ಆರ್. ಪರಮಶಿವ-ಸಂಗೀತ. ೧೨-೩೦ ವನಿತಾ ವಿಹಾರ ೧-೩೦ ಗಾನಮಂಜರಿ. ೧-೪೫ ವೀಣೆ. ೩-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ಸುಶೀಲಾ ವಿ. ರಾವ್-ಕಾವ್ಯವಾಚನ. ೭-೩೦ ಭಾರತದ ವಿದೇಶ ವ್ಯಾಪಾರ: ಅದರ ಸಾಗಾಣಿಕೆ ಮತ್ತು ಹಂಚಿಕೆ-ಪ್ರಸಂಗ. ೮ ರಸ ಮಂಜರಿ-ವಿನೋದ ಕಾರ್ಯಕ್ರಮ. ೮-೩೦ ಎ. ಕೆ. ಸಿ. ನಟರಾಜ-ಗಾಯನ. ೯-೧೫ ಟಿ ಗುರುರಾಜಪ್ಪ-ಪಿಟೀಲು ೧೦-೩೦ ಹಿಂದೂಸ್ತಾನಿ ಸಂಗೀತ

ಪೌರಸಭೆಯ ೧೬,೦೦೦ ರೂ. ದುರುಪಯೋಗ

ಬೆಂಗಳೂರು ೧೦

ಇಲ್ಲಿನ ಪೌರಸಭೆಯ ೧೬,೦೦೦ರೂ.ವಿಶ್ವದುರುಪಯೋಗವಾಗಿರುವುದೆಂದು ತಿಳಿದುಬಂದಿದೆ. ಈ ಬಗ್ಗೆ ಪೋಲೀಸರಿಗೆ ದೂರನ್ನು ಕೊಡಲಾಗಿದೆ. ಬ್ಯಾಂಕಿಗೆ ಕಟ್ಟುವಂತೆ ಪೌರಸಭೆಯ ಅಸಿಸ್ಟೆಂಟ್ ಕ್ಯಾಷಿಯರ್ ಶ್ರೀ ಶ್ಯಾಮ್ ಎಂಬುವರಿಗೆ ಹಣವನ್ನು ಕೊಡಲಾಗಿತ್ತೆಂದೂ, ಇವರು ಪತ್ತೆಯಿಲ್ಲವೆಂದೂ ಹೇಳಲಾಗಿದೆ. ಯಾರೂ ಇದುವರೆಗೆ ಬಂಧಿಸಲ್ಪಟ್ಟಿಲ್ಲ.

ಬೆಂಗಳೂರು ಹೋಟೆಲುಗಳಲ್ಲಿ ಪುನಃ ಗೋಧಿಯ ಇಡ್ಲಿ ಮತ್ತು ದೋಸೆ

ಬೆಂಗಳೂರಿನ ಹೋಟೆಲುಗಳಲ್ಲಿ ಪುನಃ ರವೆ ಇಡ್ಲಿ ಮತ್ತು ದೋಸೆಗಳನ್ನು ಮಾಡಲಾಗುವುದೆಂದು ಹೇಳಲಾಗಿದೆ ಹೋಟೆಲು ಮಾಲೀಕರುಗಳ ಸಭೆಯಲ್ಲಿ ಈ ಬಗ್ಗೆ ನಿರ್ಧರಿಸಲಾಗಿದೆ. ಇವರುಗಳನ್ನು ಕೇಂದ್ರ ಆಹಾರ ಮಂತ್ರಿ-ಅಜಿತ್ ಪ್ರಸಾದ್ ಜೈನರು ಆಹ್ವಾನಿಸಿ, ಗೋಧಿಯನ್ನು ಹೆಚ್ಚು ಬಳಸುವಂತೆ ಕೋರಿದರೆಂದೂ, ಅದಕ್ಕಾಗಿ ಅವರುಗಳಿಗೆ ರಿಯಾಯಿತಿ ದರದಲ್ಲಿ ಉತ್ತಮ ಧಾನ್ಯವನ್ನು ಒದಗಿಸುವುದಾಗಿ ಭರವಸೆಯಿತ್ತರೆಂದೂ ಹೇಳಲಾಗಿದೆ. ಊಟಕ್ಕೂ ಸಹ ಗೋಧಿಯನ್ನು ಬಳಸುವಂತೆ ಸಚಿವರು ಅವರನ್ನು ಕೋರಿರುತ್ತಾರೆ

ಇನ್‌ಫ್ಲುಯೆಂಜಾ ವ್ಯಾಧಿ ತಡೆಯಲು ಹೊಸ ಇನಾಕ್ಯುಲೇಷನ್

ಆಸ್ಟ್ರೇಲಿಯಾ ವಿಜ್ಞಾನಿಗಳು ಇನ್‌ಫ್ಲುಯೆಂಜಾ ವ್ಯಾಧಿಗೆ ತಕ್ಕ ಇನಾಕ್ಯುಲೇಷನ್ ಔಷಧಿಯನ್ನು ಕಂಡು ಹಿಡಿದಿರುವುದಾಗಿ ವರದಿಯಾಗಿದೆ. ಅದನ್ನು ಯಥೇಷ್ಟವಾಗಿ ತಯಾರಿಸಲಾಗುತ್ತಿದೆ. ಸಹಸ್ರಾರು ಜನರಿಗೆ ಕೊಡುವಷ್ಟು ಔಷಧವನ್ನು ಒಂದು ವಾರದಲ್ಲೇ ಮಾರಾಟಕ್ಕೆ ಕೊಡಲಾಗುವುದು.

ನಗರಕ್ಕೆ ವಿನೋಬಾ ಭಾವೆಯವರ ಶಿಷ್ಯರ ಆಗಮನ

ಆಚಾರ್ಯ ವಿನೋಬಾ ಭಾವೆಯವರ ಶಿಷ್ಯರಾದ ಶ್ರೀ ಶಂಕರರಾವ್ ಪಾಟೀಲರು ೪ ಮಂದಿ ಭೂದಾನ ಕಾರ್ಯಕರ್ತರೊಡನೆ ಕಾಲ್ನಡಿಗೆಯಲ್ಲಿ ನೆನ್ನೆ ನಗರಕ್ಕೆ ಆಗಮಿಸಿ ಗಾಂಧಿ ವಿಚಾರ ಪರಿಷತ್ತಿನ ಕಾರ್ಯಾಲಯದಲ್ಲಿ ತಂಗಿದ್ದಾರೆ. ಅವರು ನೆನ್ನೆ ನಗರದ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡಿ, ಭೂದಾನದ ಮಹತ್ವವನ್ನು ವಿವರಿಸಿ ಅದರ ಯಶಸ್ಸಿಗಾಗಿ ಸಾಧಿಸ ಪ್ರತಿಯೊಬ್ಬರೂ ಶ್ರಮಿಸಬೇಕೆಂದು ಕೋರಿದರು ಇಂದು ಮಹಾರಾಜಾ ಕಾಲೇಜು ಮತ್ತು ಇತರ ಹಲವಾರು ಸಂಸ್ಥೆಗಳಿಗೆ ಭೇಟಿ ಕೊಡುವರು. ನಾಳೆ ಸಂಜೆ ನಗರದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಅವರು ಭಾಷಣ ಮಾಡುವರು. ನಾಳಿದ್ದು ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ತೆರಳುವರು.

ಬಾಲಕಿಯರಿಗಾಗಿ ಪ್ರೌಢ ಶಾಲಾ ತರಗತಿಗಳು

ಹೈಸ್ಕೂಲು ಮೊದಲನೇ ತರಗತಿಯನ್ನು ಕೂಡಲೇ ಪ್ರಾರಂಭಿಸಲಾಗುವುದು. ವಿದ್ಯಾರ್ಥಿನಿಯರಿಗಾಗಿಯೇ ಪ್ರತ್ಯೇಕವಾದ S. S. L C. ತರಗತಿ ಏರ್ಪಡಿಸಲಾಗಿದೆ. Vth form ಪಾಸಾದ ಅಥವಾ ಫೇಲಾದವರನ್ನೂ ಸೇರಿಸಿಕೊಳ್ಳಲಾಗುವುದು

B. K. ಸತ್ಯನಾರಾಯಣ M. A. B. T., ಪ್ರಿನ್ಸಿಪಾಲರು

CITY TUTORIAL COLLEGE, MYSORE

BRIGHT COLLEGE OF COMMERCE, MYSORE

Applications for admission to the following courses will be received up to 31st July 1957:-

1) Diploma Course in Commerce (Dip-in-Com) } Accountancy and Auditing, Law & Practice of Commerce, Banking and Economics, Commercial Geography.

2) Diploma Course in Stenography (Dip-in-Sten) } Typewriting, Short-hand & Commerce

3) Cost & Works Accounts

Classes handled by technically qualified Graduates with long experience

K. SEETHARAMARAO,
Principal

GLOBE TUTORIAL COLLEGE

Sadvidya Patasala Buildings,
Offers Excellent Coaching for
S. S. L. C. & INTER

SARADAVILAS COLLEGE,
Mysore
INTER TUTORIAL SECTION
Eng., S L, & P. C M are taught
Highly qualified and experienced staff

ಬೇಕಾಗಿದೆ

ಒಂದು ಲಿಂಗಾಯಿತರ ಹಾಸ್ಟೆಲಿಗೆ ಒಬ್ಬ ಲಿಂಗಾಯತ ಮ್ಯಾನೇಜರು ಬೇಕಾಗಿದೆ. ಪ್ರತಿಫಲ ಮತ್ತು ಇತರ ಮಾಹಿತಿಗಳಿಗೆ ಮೈಸೂರು ಶ್ಯಾಗರಾಜ ರೋಡ್ 368 ನೇ ನಂಬರ್ ಮನೆಯಲ್ಲಿ ಮೇಲ್ಕಂಡ ಹಾಸ್ಟೆಲಿನ ಅಧ್ಯಕ್ಷರನ್ನು ಮುಖತಃ ನೋಡುವುದು.

ರಿಜಿಸ್ಟ್ರೀ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾ ಪೈಸೆ

ಇಂದಿನ ಪತ್ರಿಕೆ 2 ನಯಾ ಪೈಸೆ
ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ ೧ : ೦೫] SADHVI : TUESDAY 11—6—1957 ಮೈಸೂರು : ಮಂಗಳವಾರ ೧೧—೬—೧೯೫೭ : [ಸಂಚಿಕೆ : ೩೦೭

ಜಾರ್ಡಾನಿನಿಂದ ಈಜಿಪ್ಟ್ ಸೈನ್ಯಾಧಿಕಾರಿ ಉಚ್ಚಾಟನೆ

ಸಂಸ್ಥಾನದಲ್ಲೆಲ್ಲಾ ದಸರಾ ಉತ್ಸವದ ಆಚರಣೆಗೆ ಏರ್ಪಾಡು

ಜಂಬೂಸವಾರಿಯಲ್ಲಿ ರಾಜ್ಯಪಾಲರು ಭಾಗವಹಿಸುವರು

ಬೆಂಗಳೂರು ೧೧

ಸಂಸ್ಥಾನದಲ್ಲೆಲ್ಲಾ ದಸರಾ ಮಹೋತ್ಸವವನ್ನು ನಾಡ ಹಬ್ಬದಂತೆ ಆಚರಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ ಅದರ ಸಂಬಂಧವಾಗಿ ಕ್ರೀಡಾದಿಗಳನ್ನು ಹಳ್ಳಿಹಳ್ಳಿಗಳಲ್ಲೂ ಸಹ ನಡೆಸಲಾಗುವುದು. ಜಿಲ್ಲೆಗಳಿಂದ ಬರುವ ಕ್ರೀಡಾಪಟುಗಳು ಮೈಸೂರಿನಲ್ಲಿ ನಡೆಯುವ ಹಬ್ಬದ ೬,೭ ಮತ್ತು ೮ನೇ ದಿನಗಳ ಉತ್ಸವಕ್ಕೆ ಬರುವಂತೆ ವ್ಯವಸ್ಥೆ ಮಾಡಲಾಗುವುದು ವಿಜಯದಶಮಿ ದಿನ ಜಂಬೂಸವಾರಿಯು ನಡೆದು ರಾಜ್ಯಪಾಲರು ಅದರಲ್ಲಿ ಭಾಗವಹಿಸುವರು ಅದರಲ್ಲಿ ಜಿಲ್ಲಾ ಟೀಮುಗಳು ತಮ್ಮತಮ್ಮ ಧ್ವಜಗಳೊಡನೆ ಸೇರುವುವು

ಹಳ್ಳಿಗಳಲ್ಲಿ ಕ್ರೀಡೆಗಳಲ್ಲದೆ ಗೀತೆ ಮತ್ತು ಕಾವ್ಯ ವಾಚನ ಮುಂತಾದುವನ್ನೂ ನಡೆಸಲಾಗುವುದು ಅದರಲ್ಲಿ ಶಾಸ್ತ್ರೀಯ ಮತ್ತು ಜಾನಪದ ಗೀತೆಗಳಿಗೂ ಅವಕಾಶವಿದೆ. ಪ್ರಾಚೀನ ಮತ್ತು ನವೀನ ಕವನಗಳನ್ನೂ ಹಾಡಿಸಲಾಗುವುದು

ಸಂಗೀತ, ನೃತ್ಯ, ವ್ಯಾಯಾಮ ಪ್ರದರ್ಶನ, ಮುಂತಾದುವನ್ನು ಒಂದೆಡೆ ನಡೆಸಲಾಗುವುದು ಬಹುಮಾನಗಳನ್ನು ಹಂಚಲಾಗುವುದು ಮೈಸೂರಿನ ಬನ್ನಿಮಂಟಪದಲ್ಲಿ ನಡೆಯುವ ಟಾರ್ಚ್‌ಲೈಟ್ ಪರೇಡಿನೊಡನೆ ಉತ್ಸವಗಳು ಮುಕ್ತಾಯವಾಗುತ್ತವೆ

ಸಂಸ್ಥಾನ ಶಾಸನಸಭಾಸದರ ಸಭೆಯಲ್ಲಿ ಲೋಕಸಭಾಧ್ಯಕ್ಷರ ಭಾಷಣ

ಲೋಕಸಭಾಧ್ಯಕ್ಷ ಶ್ರೀ ಎಂ ಅನಂತಶಯನಂ ಅಯ್ಯಂಗಾರ್ಯರು ನಾಳಿದ್ದು ಬೆಂಗಳೂರಿನಲ್ಲಿ ಮೈಸೂರು ವಿಧಾನ ಸಭಾ ಮತ್ತು ಪರಿಷತ್ತಿನ ಸದಸ್ಯರುಗಳ ಜಂಟಿ ಸಭೆಯಲ್ಲಿ ಭಾಷಣ ಮಾಡುವರು

ವಿ. ವೆಂಕಟಪ್ಪನವರು ವಿಧಾನ ಪರಿಷತ್ತಿನ ನಾಯಕರು

ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪನವರನ್ನು ವಿಧಾನ ಪರಿಷತ್ತಿನ ನಾಯಕರನ್ನಾಗಿ ನೇಮಿಸಲಾಗಿದೆ

ಇಟಲಿ ಸರ್ಕಾರದ ರಾಜೀನಾಮೆ

ಇಟಲಿಯ ಪ್ರಧಾನ ಮಂತ್ರಿ ಅಡೋನಿ ಜೋಲಿಯವರ ಸರ್ಕಾರವು ನೆನ್ನೆ ರಾಜೀನಾಮೆಯನ್ನು ಸಲ್ಲಿಸಿತು

ಹಳೇ ಮೈಸೂರಿಗೆ ತಿಂಗಳಿಗೆ ೪,೦೦೦ ಟನ್ ಅಕ್ಕಿ ಮತ್ತು ೪,೦೦೦ ಟನ್ ಗೋಧಿ

ಹಳೇ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಪ್ರತಿ ತಿಂಗಳು ೪,೦೦೦ ಟನ್ ಅಕ್ಕಿ ಮತ್ತು ೪,೦೦೦ ಟನ್ ಗೋಧಿಯನ್ನು ಇನ್ನು ಮುಂದೆ ಕೇಂದ್ರ ಸರ್ಕಾರದವರು ಒದಗಿಸಲಿರುವರು. ಇದುವರೆಗೆ ೩,೦೦೦ ಟನ್ ಅಕ್ಕಿ ಮತ್ತು ೪೦೦ ಟನ್ ಗೋಧಿಯನ್ನು ಕೊಡಲಾಗುತ್ತಿತ್ತು. ಆ ಪೈಕಿ ಬೆಂಗಳೂರು ನಗರಕ್ಕೆ ೧,೦೦೦ ಟನ್ ಅಕ್ಕಿಯನ್ನು ಒದಗಿಸಲಾಗುವುದು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಎಸ್. ಚನ್ನಯ್ಯನವರ ಆಯ್ಕೆ

ಸ್ಪರ್ಧೆಯಲ್ಲಿ ಎಂ. ವಿ ರಾಮರಾಯರಿಗೆ ೬ ಮತಗಳಿಂದ ಪರಾಜಯ

ಬೆಂಗಳೂರು ೧೦

ನೂತನ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನೆನ್ನೆ ಚುನಾವಣೆಯು ನಡೆದು ಶ್ರೀ ಎಸ್ ಚನ್ನಯ್ಯನವರು ಚುನಾಯಿತರಾದರು ಈ ಸ್ಥಾನಕ್ಕೆ ಸ್ಪರ್ಧಿಸಿದ್ದ ಮಾಜಿ ಗೃಹ ಮಂತ್ರಿ ಶ್ರೀ ಎಂ ವಿ ರಾಮರಾಯರು ಕೇವಲ ಆರು ಮತಗಳಿಂದ ಪರಾಜಿತರಾದರು. ಶ್ರೀ ರಾಮರಾಯರಿಗೆ ೮೧ ಮತ್ತು ಶ್ರೀ ಚನ್ನಯ್ಯನವರಿಗೆ ೮೭ ಓಟುಗಳು ಬಂದುವು ಒಟ್ಟು ೨೩೭ ಸದಸ್ಯರ ಪೈಕಿ ೧೬೯ ಸದಸ್ಯರ ಮತಗಳು ಚಲಾಯಿಸಲ್ಪಟ್ಟವು ಆ ಪೈಕಿ ಒಂದು ಕೆಟ್ಟು ಹೋಯಿತು

ನೂತನ ಅಧ್ಯಕ್ಷರ ಅವಧಿಯು ಇದೇ ನವೆಂಬರ್‌ವರೆಗೆ ಇರುತ್ತದೆ ಚುನಾವಣೆಯಾದನಂತರ ಶ್ರೀ ಎಸ್ ಚನ್ನಯ್ಯನವರು ತಮ್ಮನ್ನು ಆರಿಸಿದ ಬಗ್ಗೆ ಸದಸ್ಯರಿಗೆ ಕೃತಜ್ಞತೆಯನ್ನು ಸೂಚಿಸಿ, ಸಂಸ್ಥೆ ಮತ್ತು ದೇಶದ ಸೇವೆಗಾಗಿ ಅವರ ಬೆಂಬಲವನ್ನು ಕೋರಿದರು ಸಂಸ್ಥಾನದ ರಾಜಕೀಯ ಹಿತ ದೃಷ್ಟಿಯಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಆಗಬಾರದಾಗಿತ್ತೆಂದೂ, ತಾವು ಯಾವಾಗಲೂ ಕೋಮು ಭಾವನೆಯಿಂದ ಕೆಲಸ ಮಾಡಿಲ್ಲವೆಂದೂ ಹೇಳಿದರು

ಸಿಡಿಲು ಬಡಿದು ಮೂರು ಜನ ಮಹಿಳೆಯರ ಮರಣ

ಮೈಸೂರು ೧೧

ಮೊನ್ನೆ ಸಂಜೆ ಭಾರಿ ಮಳೆ ಬಿದ್ದಾಗ ಹಿನಕಲ್ ಬಳಿ ಒಂದು ಹೊಲದಲ್ಲಿ ಕೆಲಸ ಮಾಡುತ್ತಿದ್ದ ಮೂರು ಜನ ಮಹಿಳೆಯರೂ, ಒಬ್ಬ ಗಂಡಸೂ ರಸ್ತೆಗೆ ಬಂದು ಸಾಲುಮರದ ಅಡಿಯಲ್ಲಿ ಕುಳಿತಿರಲು, ಸಿಡಿಲು ಬಡಿದು ಮೂರು ಜನ ಮಹಿಳೆಯರೂ ಅಲ್ಲೇ ಮಡಿದರೆಂದೂ, ಗಂಡಸಿನ ಕಾಲುಗಳಿಗೆ ಪೆಟ್ಟು ತಗಲಿ ಗಾಯವಾಯಿತೆಂದೂ, ಬಹಳ ಹೊತ್ತಿನನಂತರ ಗ್ರಾಮಸ್ಥರು ಅವನನ್ನು ಮನೆಗೆ ಕರೆದುಕೊಂಡುಹೋದರೆಂದೂ ತಿಳಿದುಬಂದಿದೆ.

ಬೀಡಿ ಕಾರ್ಮಿಕರಿಗೆ ಹಬ್ಬದ ದಿನಗಳ ವೇತನ ಕೊಡಲು ಮಾಲೀಕರ ಒಪ್ಪಿಗೆ

ನಗರದ ಪೀರ್, ಯೂನಿಯನ್, ಗಫಾರ್ ಮತ್ತು ಜಹಾಂಗೀರ್ ಬೀಡಿ ಕಾರ್ಖಾನೆಗಳ ಮಾಲೀಕರು ತಮ್ಮ ಕಾರ್ಮಿಕರಿಗೆ ಕಳೆದ ವರ್ಷದ ೪ ಹಬ್ಬದ ದಿನಗಳ ವೇತನವನ್ನು ಈ ತಿಂಗಳು ೨೮ನೇ ತಾರೀಖು ಕೊಡುವುದಾಗಿ ಒಪ್ಪಿರುವುದರಿಂದ ಇಲ್ಲಿಯವರೆಗೆ ಕಾರ್ಮಿಕರ ಉಪವಾಸವನ್ನು ಮುಂದುವರಿಸಲು ಕೆಲಸಗಾರರ ಸಂಘದವರು ನಿರ್ಧರಿಸಿರುತ್ತಾರೆ.

ನಗರದಲ್ಲಿ ಇನ್ನೂ ೩೪ ಮಂದಿಗೆ ಫ್ಲೂ

ನಗರದಲ್ಲಿ ಈ ಮಧ್ಯಾಹ್ನ ೧೨ ಗಂಟೆವರೆಗೆ ೩೪ ಮಂದಿಗೆ ಇನ್‌ಫ್ಲೂಯೆಂಜಾ ವ್ಯಾಧಿಯು ತಗಲಿರುವುದಾಗಿ ವರದಿಯಾಗಿದೆ ಒಟ್ಟು ೯೪ ಮಂದಿಗೆ ಅದು ಹರಡಿದೆ ಆ ಪೈಕಿ ೩೭ ಮಂದಿ ಗುಣವಾಗಿ, ಉಳಿದವರು ಚಿಕಿತ್ಸೆ ಪಡೆಯುತ್ತಿರುವರು

ಜಾರ್ಡಾನಿನಿಂದ ಈಜಿಪ್ಟಿನ ಮಿಲಿಟರಿ ಅಧಿಕಾರಿ ಉಚ್ಚಾಟನೆ

ಜಾರ್ಡಾನಿನ ರಾಜಧಾನಿ ಅಮ್ಮಾನಿನಲ್ಲಿರುವ ಈಜಿಪ್ಟಿನ ರಾಯಭಾರಿಯ ಮಿಲಿಟರಿ ಸಲಹೆಗಾರ ಅಧಿಕಾರಿ ಫೌದ್ ಹಿಲಾಲರನ್ನು ಹೊರಕ್ಕೆ ಕಳುಹುವಂತೆ ಜಾರ್ಡಾನ್ ದೊರೆ ಹುಸೇನರು ಆಜ್ಞೆ ಮಾಡಿರುತ್ತಾರೆ. ಅದಲ್ಲದೆ ಜೆರೂಸಲೆಂ ನಗರದಲ್ಲಿರುವ ಈಜಿಪ್ಟಿನ ಉಪ ರಾಯಭಾರಿ ಮಹಮುದ್ ಅಬ್ದುಲ್ ಅಜೀಜ್‌ರವರನ್ನೂ ಹೊರದೂಡಲಾಗುವುದು ಜಾರ್ಡಾನಿನ ಮಿಲಿಟರಿ ಅಧಿಕಾರಿ ಮೆನಾಲಿ ಎಂಬುವರೊಡನೆ ಹಿಲಾಲ್‌ರವರು ಪಿತೂರಿ ನಡೆಸಿದ್ದರೆಂದು ಹೇಳಲಾಗಿದೆ ಜಾರ್ಡಾನಿನ ಪ್ರಭುತ್ವವನ್ನು ಉರುಳಿಸುವುದೇ ಅವರ ಉದ್ದೇಶವಾಗಿತ್ತೆಂದು ಹೇಳಲಾಗಿದೆ

ಕನ್ಯಕಾಪರಮೇಶ್ವರಿ ಸೊಸೈಟಿಯ ರಜತೋತ್ಸವ

ಮೈಸೂರು ೧೦

ನಗರದಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ಸಹಕಾರ ಸಂಘದ ರಜತ ಮಹೋತ್ಸವವು ಈ ತಿಂಗಳು ೧೬ನೇ ತಾರೀಖು ಬೆಳಗ್ಗೆ ೧೧ ಗಂಟೆಗೆ ಹೊಸ ಸ್ವಾಚೂ ಚೌಕದ ಸರ್ಕಲಿನಲ್ಲಿರುವ ಸಂಘದ ನೂತನ ಕಟ್ಟಡದಲ್ಲಿ ನೆರವೇರುವುದು ಲೋಕಸಭಾಧ್ಯಕ್ಷರಾದ ಶ್ರೀ ಎಂ ಅನಂತಶಯನಂ ಅಯ್ಯಂಗಾರ್ಯರು ಅದರ ಆರಂಭೋತ್ಸವವನ್ನು ನೆರವೇರಿಸುವರು ಕೇಂದ್ರ ಸಹಕಾರ ಮಂತ್ರಿ ಡಾ॥ ಪಂಜಾಬರಾವ್ ದೇಶಮುಖ್‌ರವರು ಅಧ್ಯಕ್ಷತೆ ವಹಿಸುವರು. ಅದೇ ಸಂದರ್ಭದಲ್ಲಿ ನೂತನ ಕಟ್ಟಡದ ಪ್ರವೇಶೋತ್ಸವವೂ ನಡೆಯುವುದು

ಭೂದಾನಕ್ಕೆ ಮಹಿಳೆಯರ ನೆರವು

ನೆನ್ನೆ ಸಂಜೆ ೬ ಗಂಟೆಗೆ ಭೂದಾನ ಪಾದಯಾತ್ರಾ ದಳದ ಸಂಚಾಲಕರಾದ ಶ್ರೀ ಶಂಕರ ಪಾಟೀಲ್ ಮತ್ತು ಶ್ರೀ ಜೋಷಿ ಅವರು ಮಹಿಳಾ ಸದನಕ್ಕೆ ಭೇಟಿಯಿತ್ತು, ಸದನದ ಸದಸ್ಯರು ಮತ್ತು ವಿದ್ಯಾರ್ಥಿಗಳ ಸಭೆಯಲ್ಲಿ "ಭೂದಾನ ಮತ್ತು ಖಾದಿ" ವಿಷಯವಾಗಿ ವಿಚಾರಪೂರಿತ ಭಾಷಣ ಮಾಡಿ ಭೂದಾನದ ಮೂಲಕ ಗ್ರಾಮರಾಜ್ಯ ಸ್ಥಾಪನೆ ಮಾಡುವುದರಲ್ಲಿ ಮಹಿಳೆಯರ ಪಾತ್ರವನ್ನು ವಿವರಿಸಿದರು. ಸದನದ ಸದಸ್ಯರಲ್ಲಿ ಕೆಲವರು ತಿಂಗಳಿಗೊಂದು ಲಡಿ ಖಾದಿ ನೂಲನ್ನು ಭೂದಾನ ಕಾರ್ಯಕ್ಕಾಗಿ ದಾನ ಮಾಡುವ ಸಂಕಲ್ಪ ಮಾಡಿದರು. ಹಾಗೂ ಮತ್ತು ಕೆಲವರು ಸಂಪತ್ತಿ ದಾನದ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಸದನದಲ್ಲಿ ತಯಾರಾದ ಖಾದಿಯನ್ನು ಅಲ್ಲಿನ ಎಲ್ಲ ವಿದ್ಯಾರ್ಥಿನಿಯರು ಮತ್ತು ಸದಸ್ಯರಲ್ಲಿಯೇ ವಿನಿಯೋಗ ಮಾಡಲು ಶ್ರೀ ಪಾಟೀಲ್‌ರವರು ಸಲಹೆಯಿತ್ತರು. ಕಾರ್ಯದರ್ಶಿಯವರ ವಂದನಾರ್ಪಣೆಯೊಡನೆ ಸಭೆಯು ಮುಕ್ತಾಯವಾಯಿತು

○ ಫಿಲಿಪ್ಪೈನ್ ದ್ವೀಪಗಳಲ್ಲಿ ಇನ್‌ಫ್ಲೂಯೆಂಜಾ ವ್ಯಾಧಿಯಿಂದ ಇದುವರೆಗೆ ೮೮ ಜನರು ಮಡಿದಿರುವುದಾಗಿಯೂ, ಅಲ್ಲಿ ೩೦,೦೮೮ ಮಂದಿಗೆ ರೋಗ ತಗಲಿದೆಯೆಂದೂ ಹೇಳಲಾಗಿದೆ.

ಕಾರ್ಮಿಕರ ವಿಮಾ ಯೋಜನೆ

ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಸೂಚನೆ

ಸ್ವಂ ಸು ಫೋ] ಬೆಂಗಳೂರು ೧೧

ಈ ಮಧ್ಯಾಹ್ನ ಉಭಯ ಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಕುರಿತು ರಾಜ್ಯಪಾಲರು ಮಾತನಾಡಿ, ಈ ವರ್ಷ ಸಂಸ್ಥಾನದ ಕಾರ್ಮಿಕರ ವಿಮಾ ಶಾಸನವು ಜಾರಿಗೆ ಬರಲಿದೆಯೆಂದು ತಿಳಿಸಿದರು. ರೆವಿನ್ಯೂ ಮತ್ತು ಮಾರಾಟ ತೆರಿಗೆಗಳ ವ್ಯವಹಾರಗಳ ಇತ್ಯರ್ಥಕ್ಕಾಗಿ ಪಂಚಾಯಿತಿ ಸಮಿತಿಗಳನ್ನು ನೇಮಿಸಲಾಗುವುದೆಂದೂ ನುಡಿದರು

ಕೇಂದ್ರ ಸರ್ಕಾರದವರು ಆಹಾರ ಧಾನ್ಯವನ್ನು ಒದಗಿಸುವುದು ಮಾತ್ರವಲ್ಲದೆ ಪರಿಹಾರ ಕಾರ್ಯಗಳಿಗೂ ನೆರವು ನೀಡುವ ನಿರೀಕ್ಷೆಯಿದೆ; ಈಗಾಗಲೇ ಬೆಳಗಾಂ ಜಿಲ್ಲೆಯಲ್ಲಿ ೧೨ ಮತ್ತು ಗುಲ್ಬರ್ಗದಲ್ಲಿ ೬.೪ ಲಕ್ಷ ರೂ. ನ ಕೆಲಸಗಳನ್ನು ನಡೆಸಲಾಗುತ್ತಿದೆಯೆಂದು ಅವರು ತಿಳಿಸಿ ಸಂಸ್ಥಾನದ ಆಡಳಿತದ ಸೂಕ್ಷ್ಮ ವಿಮರ್ಶೆ ಮಾಡಿದರು.

ನೂತನ ಸಂಸ್ಥಾನಕ್ಕೆ ಕರ್ನಾಟಕವೆಂಬ ಹೆಸರು

ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಸೂಚನೆ

ಸ್ವಂ ಸು ಫೋ] ಬೆಂಗಳೂರು ೧೧

ಈ ದಿನ ಬೆಳಗ್ಗೆ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ಸೇರಿತ್ತು ಹೊಸ ಮೈಸೂರು ಸಂಸ್ಥಾನಕ್ಕೆ ಕರ್ನಾಟಕವೆಂದು ಹೆಸರಿಡಬೇಕೆಂಬ ನಿರ್ಣಯವನ್ನು ಶ್ರೀ ಮಾಗಡಿಯವರು ಸೂಚಿಸಿದರು. ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರು ಅನುಮೋದಿಸಿದರು ಶ್ರೀಗಳಾದ ಕೆ ಹನುಮಂತಯ್ಯ ಮತ್ತು ಕಡಿದಾಳ್ ಮಂಜಪ್ಪನವರು ವಿರೋಧಿಸಿ, ಈಗ ಹೆಸರನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ಹೇಳಿದರು ಯಾವ ನಿರ್ಧಾರವೂ ಆಗದೆ ಸಭೆ ಮುಂದುವರೆಯಿತು.

ಹೆಚ್ಚಿನ ಸ್ನಾತಕ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ

ಭಾರತ ನೌಕೆಯಲ್ಲಿ ಅಧಿಕಾರಿಗಳಾಗಿರುವ ಶ್ರೀ ಎಸ್ ವಿಠ್ಠಲ್‌ರವರು ಹೆಚ್ಚಿನ ವಿಶೇಷ ತರಬೇತಿಗಾಗಿ ನೆನ್ನೆ ಇಂಗ್ಲೆಂಡಿಗೆ ತೆರಳಿದರು ಇವರು ಬೆಂಗಳೂರಿನ ಬಿ ಎಂ ಎಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲವು ಕಾಲ ಇದ್ದರು. ಅಲ್ಲದೆ ಟಾಟಾ ವಿಜ್ಞಾನ ಶಾಲೆಯಲ್ಲೂ ಕೆಲಸ ಮಾಡಿದ್ದರು ಅವರು ಗೌರ್ನರರ ಕಛೇರಿಯ ಮ್ಯಾನೇಜರ್ ಶ್ರೀ ಜಿ ಎ ಮಾಧವರಾಯರ ಮಕ್ಕಳು

ಅಮೆರಿಕದಲ್ಲೂ ಇನ್‌ಫ್ಲೂಯೆಂಜಾ

ಏಷ್ಯಾ ರಾಷ್ಟ್ರಗಳಲ್ಲಿ ಹಬ್ಬುತ್ತಿರುವಂತೆಯೇ ಅಮೆರಿಕಕ್ಕೂ ಸಹ ಇನ್‌ಫ್ಲೂಯೆಂಜಾ ವ್ಯಾಧಿ ಹರಡುತ್ತಿರುವುದಾಗಿ ವರದಿಯಾಗಿದೆ. ಫಿಲಿಪ್ಪೈನ್ಸ್ ದ್ವೀಪಗಳ ರಾಜಧಾನಿ ಮನಿಲಾದಿಂದ ಸಾನ್‌ಫ್ರಾನ್ಸಿಸ್ಕೋವಿಗೆ ಆಗಮಿಸಿದ ನೌಕೆಯೊಂದರಲ್ಲಿ ಬಂದ ಹಲವರಿಗೆ ಇನ್‌ಫ್ಲೂಯೆಂಜಾ ಇತ್ತೆಂದೂ, ಅವರಿಗೆ ೧೦೪ ಡಿಗ್ರಿ ಜ್ವರ ಬರುತ್ತಿತ್ತೆಂದೂ ಹೇಳಲಾಗಿದೆ.

ಭೂದಾನ ಯಜ್ಞಕ್ಕೆ ವಿದ್ಯಾರ್ಥಿಗಳ ಕಾಣಿಕೆ

ಮೈಸೂರು ೧೧

ಆಚಾರ್ಯ ವಿನೋಬಾ ಭಾವೆಯವರ ಶಿಷ್ಯರೂ, ಪ್ರಸಿದ್ಧ ಭೂದಾನ ಕಾರ್ಯಕರ್ತರೂ ಆದ ಶ್ರೀ ಶಂಕರರಾವ್ ಪಾಟೀಲರು ನೆನ್ನೆ ಮಹಾರಾಜಾ ಹೈಸ್ಕೂಲಿನಲ್ಲಿ ಹಿಂದಿಯಲ್ಲಿ ಭಾಷಣ ಮಾಡಿ, ವಿನೋಬಾ ಭಾವೆಯವರ ಭೂದಾನ ಯಜ್ಞದ ಮಹತ್ವವನ್ನು ವಿವರಿಸಿದರು ಸ್ವಾತಂತ್ರ್ಯ ಬಂದನಂತರ ಹೊಸ ಸಮಾಜದ ಸೃಷ್ಟಿಯಾಗಿ ಆ ಮೂಲಕ ಸರ್ವರೂ ಸಮಭಾಗಿಗಳಾಗುವಂತೆ ಮಾಡುವುದೇ ಆಚಾರ್ಯ ಭಾವೆಯವರ ಉದ್ದೇಶವೆಂದೂ, ಆದಕ್ಕಾಗಿ ಅವರು ಭೂದಾನ ಯಜ್ಞವನ್ನು ಕೈಗೊಂಡಿರುವರೆಂದೂ ಅವರು ಸೂಚಿಸಿದರು ಅವರ ಭಾಷಣವನ್ನು ಹಿಂದಿ ಅಧ್ಯಾಪಕರಾದ ಶ್ರೀ ಚಿಕ್ಕನರಸಿಂಹಯ್ಯನವರು ಕನ್ನಡಕ್ಕೆ ತರ್ಜುಮೆ ಮಾಡಿದರು. ಭೂದಾನ ಯಜ್ಞದಲ್ಲಿ ನಗರದ ೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಲು ಪ್ರತಿಜ್ಞೆ ಮಾಡಿರುತ್ತಾರೆ.

ಯಾದವ ಸಂಘದ ಸಭೆ

ನಗರದ ಯಾದವ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಶ್ರೀ ಡಿ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಶನಿವಾರ ನಡೆದು ಶ್ರೀ ಡಿ ಕೃಷ್ಣಯ್ಯನವರನ್ನು ಅಧ್ಯಕ್ಷರಾಗಿಯೂ, ಶ್ರೀ ವಿ ಶಾಮಣ್ಣನವರನ್ನು ಉಪಾಧ್ಯಕ್ಷರು, ಶ್ರೀ ವಿ ಪೆರುಮಾಳಸ್ವಾಮಿಯವರನ್ನು ಕಾರ್ಯದರ್ಶಿಗಳು ಮತ್ತು ವೆಂಕಟಪ್ಪನವರನ್ನು ಖಜಾಂಚಿಯಾಗಿಯೂ ಚುನಾಯಿಸಲಾಯಿತು. ಶ್ರೀಗಳಾದ ರಾಮ ಸಂಜೀವಯ್ಯ ಮತ್ತು ಎಂ ಪಿ. ಸಿದ್ದಯ್ಯನವರನ್ನು ಆಡಿಟರ್ ಮತ್ತು ವಾರ್ಡನ್ನುಗಳಾಗಿ ನೇಮಿಸಲಾಯಿತು.

ಬ್ಯಾಡಗ್ ಟೆನಿಸ್ ಪಂದ್ಯ

ನಗರದ ಚಾಲೆಂಜ್ ಬ್ಯಾಡ್ಜರ್ ಟೆನಿಸ್ ಕ್ಲಬ್ಬಿನ ಆಶ್ರಯದಲ್ಲಿ ಇದೇ ೧೬ ರಿಂದ ಪಂದ್ಯಗಳು ನಡೆಯುವವು. ಸಿಂಗಲ್ಸಿಗೆ ೧೦ಆಣೆ ಮತ್ತು ಡಬ್ಬಲ್ಸಿಗೆ ೧ ರೂನಂತೆ ಪ್ರವೇಶ ಧನವನ್ನು ಗೊತ್ತು ಮಾಡಿದೆ. ಕಡೆಯಲ್ಲಿ ಗೆದ್ದವರಿಗೂ, ಸೋತವರಿಗೂ ಬಹುಮಾನದ ಬಟ್ಟಲುಗಳನ್ನು ಕೊಡಲಾಗುವುದು. ನಾಳದ್ದಿನೊಳಗೆ ಪ್ರವೇಶವನ್ನು ಕಳುಹಿಸಬೇಕು

ಕರ್ನಾಟಕ ಲಲಿತ ಕಲಾ ನಿಕೇತನ

ಮೈಸೂರಿನ ಕರ್ನಾಟಕ ಲಲಿತಕಲಾ ನಿಕೇತನದ ಸಭೆಯು ಮೊನ್ನೆ ಪ್ರಸಿದ್ಧ ಶಿಲ್ಪಿಗಳಾದ ಶ್ರೀ ಎಂ. ಶ್ರೀನಿವಾಸಾಚಾರ್‌ರವರ ಅಧ್ಯಕ್ಷತೆಯಲ್ಲಿ ನಡೆದು, ವಿಧಾನ ಪರಿಷತ್ತಿನಲ್ಲಿ ಲಲಿತಕಲೆಯವರಿಗೆ ಪ್ರಾತಿನಿಧ್ಯವಿತ್ತು ಸುಪ್ರಸಿದ್ಧ ಕಲಾವಿದರಾದ ಶ್ರೀ ಎಂ. ಹೆಚ್. ರಾಮೂರವರನ್ನು ಆ ಸ್ಥಾನಕ್ಕೆ ನಾಮಕರಣ ಮಾಡಬೇಕೆಂದು ರಾಜ್ಯಪಾಲರಲ್ಲಿಯೂ, ಮತ್ತು ಮಾನ್ಯ ಮುಖ್ಯ ಮಂತ್ರಿಗಳವರಲ್ಲಿಯೂ ಪ್ರಾರ್ಥಿಸಿಕೊಳ್ಳಲಾಯಿತು

ಬೊಂಬಾಯಿ ಆನಂದ ಭವನ ಸ್ಟೋರ್ಸಿನ ವಾರ್ಷಿಕೋತ್ಸವ

ಹೊಸ ಸ್ಯಾಂಕ್ಯು ಚೌಕದ ಬಳಿ ಇರುವ ಬೊಂಬಾಯಿ ಆನಂದ ಭವನ ಸ್ಟೋರ್ಸಿನ ಎರಡನೇ ವಾರ್ಷಿಕೋತ್ಸವವು ನೆನ್ನೆ ನಡೆಯಿತು. ಮಾಲೀಕರು ಇಷ್ಟ ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಮದುವೆ ಮುಹೂರ್ತದಲ್ಲಿ ವರನ ಪರಾರಿ

ಮದ್ರಾಸಿನ ಬಳಿ ಇಲುಪುಲೂರು ಎಂಬಲ್ಲಿ ಮೊನ್ನೆ ವಿವಾಹವೊಂದು ನಡೆಯಬೇಕಾಗಿದ್ದಾಗ, ಮುಹೂರ್ತದವರೆಗೆ ಅಲ್ಲಿಯೇ ಇದ್ದ ವರನು ಆಗಲೇ ಪರಾರಿಯಾದನೆಂದು ತಿಳಿದುಬಂದಿದೆ. ಆದಕ್ಕೆ ಮುಖ್ಯವಾಗಿ ಆತನ ವ್ಯವಹಾರಗಳು ಸರಿಯಾಗಿದ್ದುದು ಏತಕ್ಕಾಗಿ ಓಡಿ ಹೋದನೆಂಬುದನ್ನು ಅವನ ಮಾತಾಪಿತೃಗಳು ತಿಳಿಸಲಾರದಾಗಲಿಲ್ಲ ಆವನನ್ನು ಹುಡುಕಿ ವಿಫಲಗೊಂಡ ಮೇಲೆ ಮದುವೆಯು ನಿಂತು ಹೋಗುವ ಸ್ಥಿತಿಯುಂಟಾಗಿತ್ತು ಆದರೆ ವಧುವಿನ ತಾಯಿ ತಂದೆಯವರು ಸಮಾರಂಭಕ್ಕೆ ಬಂದಿದ್ದವರ ಪೈಕಿ ಒಬ್ಬ ಯುವಕನಿಗೆ ತಮ್ಮ ಮಗಳನ್ನು ಕೊಟ್ಟು ವಿವಾಹ ನಡೆಸಿದರು. ಹಠಾತ್ತನೆಯ ಸನ್ನಿವೇಶದಲ್ಲಿ ಆದ ಈ ಮದುವೆಗೆ ದಂಪತಿಗಳು ಒಪ್ಪಿದರು

ಇನ್‌ಫ್ಲುಯೆಂಜಾ ಕೇವಲ "ಪತ್ರಿಕಾ ವ್ಯಾಧಿ"

ಇನ್‌ಫ್ಲುಯೆಂಜಾ ಕೇವಲ ಪತ್ರಿಕಾ ವ್ಯಾಧಿಯೆಂದು ಪೂನಾ ನಗರದ "ವೈರಸ್" ಸಂಶೋಧನಾ ಕೇಂದ್ರದ ಡಾ॥ ಟಾಲ್ಬರ್ಟ್ ಹೆಚ್ ವರ್ನರವರು ತಿಳಿಸಿರುತ್ತಾರೆ ರೋಗದ ಬಗ್ಗೆ ತೀವ್ರ ಆತಂಕಪಡಬೇಕಾಗಿಲ್ಲವೆಂದೂ ಅವರು ಹೇಳಿರುವರು ಭಾರತದಲ್ಲಿ ಹರಡಿರುವ ವ್ಯಾಧಿಯು ಸಿಂಗಪುರದಂತಹುದೇ ಎಂಬುದು ವ್ಯಕ್ತವಾಗಿಲ್ಲವೆಂದೂ ಅವರು ತಿಳಿಸಿರುವರು

ಫ್ರಾನ್ಸಿನ ನೂತನ ಪ್ರಧಾನಿಯಾಗಿ ಮೂರಿಸ್‌ರವರ ನೇಮಕ

ಫ್ರೆಂಚ್ ರಾಷ್ಟ್ರದ ಅಧ್ಯಕ್ಷ ರೀನೆ ಕೋಟಿಯವರು ಅಲ್ಲಿನ ರಾಷ್ಟ್ರೀಯ ಸಭೆಯ ಸದಸ್ಯರಾದ ಎಂ. ಮಾರಿಸ್ ಬೋಜೇಮನೌರಿಯವರನ್ನು ನೂತನ ಪ್ರಧಾನಿಯಾಗಿ ನೇಮಿಸಿರುತ್ತಾರೆ. ಗೈಮೋಲೆಯವರ ಸರ್ಕಾರದ ರಾಜೀನಾಮೆಯಿತ್ತ ಸಂಬಂಧದಲ್ಲಿ ಹೊಸ ಸರ್ಕಾರವನ್ನು ರಚಿಸಲು ಮಾರಿಸ್‌ರವರಿಗೆ ಸೂಚಿಸಲಾಗಿದೆ.

ವಿಧಾನ ಸಭೆಯಲ್ಲಿ ಟೇಪ್ ರಿಕಾರ್ಡರ್ ಇಡಲು ನಿರ್ಧಾರ

ಸಂಸ್ಥಾನದ ವಿಧಾನ ಸಭೆಯಲ್ಲಿ ಸದಸ್ಯರು ಮಾಡುವ ಭಾಷಣಗಳನ್ನು ರಿಕಾರ್ಡು ಮಾಡಿಸುವುದಕ್ಕಾಗಿ ಟೇಪ್ ರಿಕಾರ್ಡಿಂಗ್ ಯಂತ್ರವನ್ನು ತರಿಸಲಾಗುವುದೆಂದು ವಿಧಾನ ಸಭಾಧ್ಯಕ್ಷ ಶ್ರೀ ಎಸ್ ಆರ್. ಕಂಠಿಯವರು ತಿಳಿಸಿರುತ್ತಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ ೭-೧೫ ಬಿ ಪಾಪಯ್ಯ-ನಾಗಸ್ವರ. ೮-೧೫ ಹಿಂದಿ ಪಾಠ ಮಧ್ಯಾಹ್ನ ೧೨ ಮತ್ತು ೧-೫೦ ಸ್ವರ್ಣ ವಿಲೇ-ಸಂಗೀತ ಎ ಡಿ ಜಕಾರಿಯಾ-ಪಿಟೀಲು ೧ ರ ಕಾರ್ಡು ಸಂಗೀತ ೧-೨೦ ಸಿತಾರ್. ೩-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ಗೀತಾವಳಿ ೭-೩೦ ಬಿ. ಪಾಪಯ್ಯ-ನಾಗಸ್ವರ ೮ ಸರಗುಂಡ ಬಂದಿಯ-ರೂಪಕ : ಭಾರತ-ಹದ ರಿಲೆ ೮-೩೦ ರಾಷ್ಟ್ರೀಯ ಕಾರ್ಯಕ್ರಮ. ೮ ೫೦ ನಾಗಸ್ವರ ೯-೧೫ ಉರ್ದು ಗೀತೆ ೯-೩೦ ವಿ ದೇಶಿಕಾಚಾರ್-ವೇಣುಗಾನ.

ಮೈಸೂರು ಪೇಟೆ ಧಾರಣೆ

ಬಂಗಾರ ಮತ್ತು		
ಕೊಯಮತ್ತೂರು ಸಣ್ಣ	೪೭ ೦೦	೪೯ ೭೫
ದಪ್ಪಚೂರಿ	೩೯ ೭೫	೪೧ ೦೦
ಕಡ್ಡಿ	೪೧ ೫೦	
ಕಾರ್ ಸಣ್ಣ		
ಹೊಸ ಬಂಗಾರತ	೩೯ ೬೧	೩೯ ೭೫
ರಾಗಿ	೪೫ ೧೨	೪೭ ೧೦
ಜೋಳ	೪೨ ೬೫	
ಎಳ್ಳು	೬೬ ೧೨	
ಕಡಲೆಕಾಯಿ	೧೯ ೨೫	೨೫ ೬೭
ಕರಳುಬೀಜ	೪೭ ೦೦	೪೫ ೦೦
ಹುಚ್ಚೆಳ್ಳು	೪೧ ೧೨	
ಹೊಂಗೆಬೀಜ	೩೫ ೫೦	೩೯ ೨೫
ತೊಗರಿ	೪೨ ೬೨	೪೯ ೨೮
ಹೆಸರು	೪೧ ೦೨	೫೯ ೫೦
ಕಡಲೆ	೪೮ ೫೦	
ಉದ್ದು	೫೪ ೨೫	೬೫ ೫೦
ಹಲಸಂದೆ	೪೯ ೦೦	೬೧ ೦೦
ಧನಿಯ	೨೯ ೫೦	೨೫ ೬೨
ಅವರೆ	೪೪ ೦೦	೪೬ ೬೨
ಹೊಂಡನೆಬೀಜ	೪೯ ೦೦	
ಹೀಗೆಕಾಯಿ	೬ ೭೫	
ಹುಣಸೆಹಣ್ಣು	೨ ೫೧	೪ ೦೦
ಮೆಣಸಿನಕಾಯಿ	೧೫ ೦	೨೦ ೭೯
ತೆಂಗಿನಕಾಯಿ	೧೮೦ ೦೦	೨೬೪ ೦೦

ದೆಹಲಿಯಲ್ಲಿ ವಿದೇಶೀಯರ ವಿಗ್ರಹಗಳ ಉಚ್ಚಾಟನೆ

೧೮೫೭ ರಲ್ಲಿ ಆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (ಸಿಪಾಯಿ ದಂಗೆ)ಯನ್ನು ದಮನ ಮಾಡಲು ಪ್ರಧಾನ ಪಾತ್ರ ವಹಿಸಿದ್ದ ಜನರಲ್ ನಿಕಲ್‌ಸನ್ ಮತ್ತು ಸರ್ ಅಲೆಕ್ಸಾಂಡರ್ ಟೇಲರ್ ರವರ ವಿಗ್ರಹಗಳನ್ನು ದೆಹಲಿ ಅಧಿಕಾರಿಗಳು ಅವನ್ನು ಸ್ಥಾಪಿಸಿದ ಜಾಗಗಳಿಂದ ತೆಗೆದು ಬೇರೆ ಕಡೆಗೆ ಸಾಗಿಸಿರುವರು ವಿಗ್ರಹಗಳನ್ನು ತೆಗೆದು ಒಂದು ಸಂಗ್ರಹಾಲಯದಲ್ಲಿಡಲಾಗುವುದೆಂದು ಪ್ರಧಾನಿ ಜವಾಹರಲಾಲ್ ನೆಹರೂರವರು ತಿಳಿಸಿರುವ ಪ್ರಕಾರ ಇಂತಹ ವಿಗ್ರಹಗಳನ್ನು ತೆಗೆದು ಹಾಕಲಾಗುತ್ತಿದೆ.

ಕೇರಳ ಮಂತ್ರಿಗಳಿಗೆ ರಕ್ಷಣಾ ವ್ಯವಸ್ಥೆ ರದ್ದು

ಕೇರಳ ಸರ್ಕಾರದ ಸಚಿವರುಗಳ ಪ್ರವಾಸದ ಸಂದರ್ಭಗಳಲ್ಲಿ ಮಾಡಲಾಗುತ್ತಿದ್ದ ರಕ್ಷಣಾ ವ್ಯವಸ್ಥೆಯನ್ನೂ ಮತ್ತು ಅವರುಗಳ ಮೋಟಾರುಗಳ ಮೇಲೆ ಧ್ವಜಗಳನ್ನು ಹಾರಿಸುವುದನ್ನೂ ರದ್ದುಗೊಳಿಸಲಾಗುವುದೆಂದು ಅಲ್ಲಿನ ಮುಖ್ಯ ಮಂತ್ರಿ ನಂಬೂದಿರಿಪಾಡ್‌ರವರು ತಿಳಿಸಿರುತ್ತಾರೆ.

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಫ್ಲೂ ಚಿಕಿತ್ಸೆ ವಾರ್ಡು

ಕೃಷ್ಣರಾಜೇಂದ್ರ ಆಸ್ಪತ್ರೆ ಎಕ್ಸ್‌ರೆ ಶಾಖೆ ಮೇಲ್ಭಾಗದಲ್ಲಿ ಇನ್‌ಫ್ಲುಯೆಂಜಾ ವ್ಯಾಧಿ ತಗಲಿದವರಿಗೆ ಚಿಕಿತ್ಸೆ ನಡೆಸಲು ಏರ್ಪಾಡಾಗಿದೆ. ಈ ಬಗ್ಗೆ ಪೌರಸಭಾ ಕಮಿಷನರ್ ಶ್ರೀ ಎ ವಿಶ್ವನಾಥ್‌ರವರು ಆಸ್ಪತ್ರೆಯ ಸೂಪರಿಂಟೆಂಡೆಂಟ್ ಶ್ರೀ ಗೋಪಾಲರಾಜರವರೊಡನೆ ಮಾತುಕತೆ ನಡೆಸಿರುತ್ತಾರೆ ಅವಶ್ಯವಿದ್ದರೆ ಹೆಚ್ಚಿನ ವಸತಿ ಸೌಲಭ್ಯವನ್ನೂ ಒದಗಿಸುವ ಆಲೋಚನೆ ಇದೆ.

ಅಂಬರ್ ಚರಖಗಳ ವಿನಿಯೋಗ

ನಂಜನಗೂಡಿನಲ್ಲಿ ಕಳೆದ ತಿಂಗಳು ೨೫ರಿಂದ ಅಂಬರ್ ಚರಖಾ ಶಿಕ್ಷಣಾಲಯವು ನಡೆಯುತ್ತಲಿದೆ ಅಲ್ಲಿ ಶಿಕ್ಷಣ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಈ ತಿಂಗಳು ೧೫ರವರೆಗೂ ಅರ್ಜಿಗಳನ್ನು ಹಾಕಿಕೊಳ್ಳಬಹುದು ಆದರ ಅವಧಿಯು ೩ ತಿಂಗಳು ಶಿಕ್ಷಣ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಲಡಿ ೧ಕ್ಕೆ ೧॥ ಆಣೆಯಂತೆ ಶುಲ್ಕವನ್ನು ಕೊಡಲಾಗುತ್ತದೆ ೩ ತಿಂಗಳನಂತರ ಚರಖವನ್ನು ಕಂತುಗಳ ಮೇಲೆ ಕೊಡಲಾಗುತ್ತದೆ ಅಲ್ಲದೆ ಶಿಕ್ಷಣ ಕಾಲದಲ್ಲಿ ಒಟ್ಟು ೨೦ ರೂ ಸಂಭಾವನೆಯು ದೊರೆಯುವುದು ವಿದ್ಯಾರ್ಥಿಗಳು ಚರಖವನ್ನು ತೆಗೆದುಕೊಂಡು ಹಿಂದಿರುಗಿದ ಮೇಲೆ ಒಂದು ವರ್ಷದಲ್ಲಿ ೧,೫೦೦ ಲಡಿಗಳನ್ನು ತೆಗೆದರೆ ಚರಖದ ಬೆಲೆಯಲ್ಲಿ ಅರ್ಧ ಭಾಗವನ್ನು ಸೋದಿ ಬಿಡಲಾಗುವುದು ಮತ್ತು ಲಡಿ ೧ಕ್ಕೆ ೩ ಆಣೆಯಂತೆ ಕೊಡಲಾಗುವುದು. ಈ ಬಗ್ಗೆ ನಂಜನಗೂಡಿನ ಕನಕಾಲಯ ನಿಲಯದಲ್ಲಿರುವ ಪರಿಶಿಕ್ಷಣಾಲಯದ ಶ್ರೀ ಹೆಚ್ ಕೆ. ರಾಜೇಂದ್ರಸ್ವಾಮಿಯವರಿಗೆ ಬರೆದು ಹೆಚ್ಚಿನ ವಿಷಯಗಳನ್ನು ತಿಳಿಯಬಹುದು

ಚಾಮರಾಜನಗರದಲ್ಲಿ ಗಿರಿಜಾ ಕಲ್ಯಾಣ

ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಾಲಯದಲ್ಲಿ ಇದೇ ೧೬ನೇ ತಾರೀಖು ಗಿರಿಜಾ ಕಲ್ಯಾಣ ಮಹೋತ್ಸವವು ನೆರವೇರುವುದು. ಅದರ ಅಂಗವಾಗಿ ೧೫ನೇ ತಾರೀಖಿನಿಂದ ೨೦ ರವರೆಗೆ ವಿವಿಧ ಉತ್ಸವಗಳು ಜರುಗುವುವು.

Edited, Printed and Published by A. R. Nagarajan at Sadhvi Press, 7, Subbiah Road, Mysore

ವಿವಾಹ ಮಹೋತ್ಸವಗಳು

ಸಂತೆಪೇಟೆ ವರ್ತಕರಾದ ಶ್ರೀ ಬಿ. ಎಸ್. ಸುಬ್ಬಣ್ಣನವರು ತಮ್ಮ ಸಹೋದರ ಶ್ರೀ ಬಿ ಎಸ್. ಮಲ್ಲಪ್ಪನವರ ಮಕ್ಕಳು ಶ್ರೀ ಎಂ. ನಾಗರಾಜ್‌ರವರಿಗೆ ಪಿರಿಯಾಪಟ್ಟಣದ ಶ್ರೀ ಪಿ ಎಸ್. ಮುದ್ದಪ್ಪನವರ ಮಗಳು ಸೌ॥ ನಾಗರತ್ನಮ್ಮನನ್ನು ತಂದುಕೊಂಡು ಪಿರಿಯಾಪಟ್ಟಣದಲ್ಲಿ ನೆನ್ನೆ ವಿವಾಹವನ್ನು ನೆರವೇರಿಸಿದರು

ಸರ್ಕಾರಿ ಮಾರಿಮಲ್ಲಪ್ಪ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಹೆಚ್. ಎಂ. ವೀರಭದ್ರಯ್ಯನವರು ತಮ್ಮ ಕುಮಾರಿ ಸೌ॥ ಸುಲೋಚನಾ ವರನ್ನು ಸವಳಂಗದ ಪೋಸ್ಟ್ ಮಾಸ್ಟರ್ ಶ್ರೀ ಹೆಚ್.ಎಂ. ಮರಿದೇವರುರವರ ಮಕ್ಕಳು ಹೆಚ್ ಎಂ ವೀರಭದ್ರಶಾಸ್ತ್ರಿಯವರಿಗೆ ಕೊಟ್ಟು ಮೊನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು.

ಪೌರಸಭಾ ಸದಸ್ಯರಾದ ಶ್ರೀ ಎಂ.ವೆಂಕಟರಂಗಯ್ಯನವರು ತಮ್ಮ ಸಹೋದರ ಶ್ರೀ ಎಂ ನಂಜುಂಡಯ್ಯನವರಿಗೆ ಮದ್ದೂರಿನ ಉಪಾಧ್ಯಾಯರಾದ ಶ್ರೀ ಶಿವಯೋಗಿಯವರ ತಂಗಿ ಸೌ॥ ಶಿವಮ್ಮನನ್ನು ತಂದುಕೊಂಡು ನೆನ್ನೆ ಮದ್ದೂರಿನಲ್ಲಿ ವಿವಾಹವನ್ನು ನಡೆಸಿದರು.

ಗಂಧದೆಣ್ಣೆ ಕಾರ್ಖಾನೆ ಮ್ಯಾನೇಜರಾಗಿದ್ದ ಎಂ ಡಿ. ವೆಂಕಟರಮಣಪ್ಪನವರ ಮಗಳು ಸೌ॥ ಲಕ್ಷ್ಮಮ್ಮನನ್ನು ಕಟ್ಟೆಗೆ ದೋಗಯ್ಯನವರ ತಮ್ಮಂದಿರಾದ ಶ್ರೀ ನಂಜಪ್ಪನವರ ಪುತ್ರ ಶ್ರೀ ಪಟ್ಟಣ್ಣನವರಿಗೆ ಕೊಟ್ಟು ಮೊನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಲಾಯಿತು.

ನಂಜನಗೂಡಿನ ಜಮೀನುದಾರ್ ಶ್ರೀ ಎಂ. ಎಸ್. ಬಸವರಾಜಪ್ಪನವರು ತಮ್ಮ ಕುಮಾರಿ ಸೌ॥ ಜಯಮ್ಮನನ್ನು ಮೈಸೂರಿನ ಟಿಂಬರ್ ವ್ಯಾಪಾರಿ ಶ್ರೀ ಎಂ ಸಿ. ಮಹದೇವಯ್ಯನವರ ಮಕ್ಕಳು ಶ್ರೀ ಎಂ. ವಾಸುದೇವ್‌ರವರಿಗೆ ಕೊಟ್ಟು ನೆನ್ನೆ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

ಕೃಷ್ಣರಾಜನಗರದ ಶ್ರೀ ಬಿ. ಆದಪ್ಪಶೆಟ್ಟರು ತಮ್ಮ ಕುಮಾರಿ ಸೌ॥ ಇಂದ್ರಮ್ಮನನ್ನು ಅರಕಲಗೂಡು ತಾಲ್ಲೂಕು ಬಸವಾಪಟ್ಟಣದ ಮಲ್ಲಪ್ಪಶೆಟ್ಟರ ಪುತ್ರ ಶ್ರೀ ಬಿ ಎಂ. ಶ್ರೀಕಂಠಶೆಟ್ಟರಿಗೆ ಕೊಟ್ಟು ಕಳೆದ ೭ನೇ ತಾರೀಖು ವಿವಾಹವನ್ನು ನೆರವೇರಿಸಿದರು

ಹೊಳೇ ನರಸೀಪುರ ತಾಲ್ಲೂಕು ಜೋಡಿ ಗುಬ್ಬಿಯ ಉಪಾಧ್ಯಾಯರಾದ ಶ್ರೀ ಜಿ.ಡಿ ಸುಬ್ಬೇಗೌಡರು ತಮ್ಮ ಕುಮಾರ ಶ್ರೀ ಜಿ ಎಸ್. ನರಸಿಂಹಗೌಡರಿಗೆ ಶಾಂತಿಗ್ರಾಮದ ಅಬ್ಕಾರಿ ಕಂಟ್ರಾಕ್ಟರ್ ಶ್ರೀ ಜಿ. ಎಸ್. ನಂಜಪ್ಪನವರ ಕುಮಾರಿ ಸೌ॥ ಜಿ. ಎನ್ ಅನಸೂಯಾದೇವಿಯನ್ನು ತಂದುಕೊಂಡು ಶಾಂತಿಗ್ರಾಮದಲ್ಲಿ ಕಳೆದ ಬುಧವಾರ ವಿವಾಹವನ್ನು ನಡೆಸಿದರು

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಖೈದಿಗಳ ತೇರ್ಗಡೆ

ಕಳೆದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ವೆಲ್ಲೂರಿನ ೯ ಖೈದಿಗಳು ಕುಳಿತು, ಅವರ ಪೈಕಿ ೮ ಮಂದಿ ಎರಡನೇ ವರ್ಗದಲ್ಲಿ ತೇರ್ಗಡೆಯಾಗಿರುತ್ತಾರೆ

ಸಿ. ಡಿ. ದೇಶ್‌ಮುಖ್‌ರವರಿಗೆ ಮೈಸೂರು ವಿಶ್ವವಿದ್ಯಾಲಯದ ಗೌರವ ಪ್ರಶಸ್ತಿ

ವಿಶ್ವವಿದ್ಯಾಲಯಗಳ ಗ್ರಾಂಟ್ ಸಮಿತಿಯ ಅಧ್ಯಕ್ಷರಾದ ಸಿ. ಡಿ. ದೇಶ್‌ಮುಖ್‌ರವರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ಕೊಡಲು ಮೈಸೂರು ವಿಶ್ವವಿದ್ಯಾಲಯದವರು ನಿರ್ಧರಿಸಿರುತ್ತಾರೆ. ಅದಕ್ಕಾಗಿ ಈ ತಿಂಗಳು ಕಡೆಯ ಭಾಗದಲ್ಲಿ ವಿಶೇಷ ಘಟಿಕೋತ್ಸವವನ್ನು ನಡೆಸಲಾಗುವುದೆಂದು ಗೊತ್ತಾಗಿದೆ

Coaching for the Sept. Exams.
B. A & B Sc:- English & Kannada
INTER :- All parts & all Subjects
B. K Satyabodhachar M.A.,B.T.

GLOBE TUTORIAL
COLLEGE
Sadvidya Patasala Buildings
Offers Excellent Coaching for
S. S. L. C. & INTER

Sri Kanyakaparameswary Co-operative Society, Ltd., Mysore

It is proposed to have Fancy Dress Competition during the Entertainment Programme in the evening of 16th June 1957 in connection with the Silver Jubilee Celebrations of this Society. Members and the Staff may partake. Such of those who desire to partake may contact the Secretary and give Particulars.

Secretary.

ರಿಜಿಸ್ಟ್ರೇ ನಂ. 792

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಾಧ್ವಿ

ಇಂದಿನ ಪತ್ರಿಕೆ 2 ಪುಟ ಮಾತ್ರ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಸಂಪುಟ : ೧೫] SADHVI : WEDNESDAY 12—6—1957 ಮೈಸೂರು : ಬುಧವಾರ ೧೨—೬—೧೯೫೭ : [ಸಂಚಿಕೆ : ೩೦೮

- ಸಂಸ್ಥಾನದಲ್ಲಿಯೂ ತೆರಿಗೆಗಳು ಹೆಚ್ಚುವ ಸಂಭವ -

ಜಂಟಿ ಅರಬ್ ಮಿಲಿಟರಿ ಕೂಟದಿಂದ ಈಜಿಪ್ಟ್ ವಾಪಸು

ಜೋರ್ಡಾನಿನ ರಾಜಧಾನಿ ಅಮ್ಮಾನಿನಲ್ಲಿ ಏರ್ಪಟ್ಟಿದ್ದ ಜಂಟಿ ಅರಬ್ ಮಿಲಿಟರಿ ಕೂಟದಲ್ಲಿದ್ದ ತನ್ನ ಪ್ರತಿನಿಧಿಯನ್ನು ವಾಪಸು ಕರೆಸಿಕೊಳ್ಳಲಾಗುವುದೆಂದು ಈಜಿಪ್ಟ್ ಸೂಚಿಸಿರುತ್ತದೆ ಇದೇ ಅಲ್ಲದೆ ಕೈರೋವಿನಲ್ಲಿರುವ ಜೋರ್ಡಾನಿನ ರಾಯಭಾರಿಯನ್ನು ಹೊರದೂಡಲೂ ಈಜಿಪ್ಟ್ ನಿರ್ಧರಿಸಿದೆ. ಸೀನಾಯ್ ಪರ್ಯಾಯ ದ್ವೀಪದ ಮೇಲೆ ಇಸ್ರೇಲು ಕಳೆದ ವರ್ಷ ಧಾಳಿ ನಡೆಸುವ ಪೂರ್ವದಲ್ಲಿ ಈಜಿಪ್ಟ್, ಸಿರಿಯಾ ಮತ್ತು ಜೋರ್ಡಾನುಗಳು ಜಂಟಿ ಅರಬ್ ಮಿಲಿಟರಿ ಕೂಟವನ್ನು ರಚಿಸಿದ್ದುವು. ಈಜಿಪ್ಟಿನ ಯುದ್ಧ ಮಂತ್ರಿ ಅಬ್ದುಲ್ ಹಕೀಂ ಅಮೇರ್‌ರವರು ಅದರ ಅಧ್ಯಕ್ಷರಾಗಿದ್ದರು. ಜೋರ್ಡಾನ್ ದೊರೆಯು ಈಜಿಪ್ಟಿನ ರಾಯಭಾರ ಅಧಿಕಾರಿಗಳನ್ನು ಉಚ್ಚಾಟನೆ ಮಾಡಿದ ಪ್ರತೀಕಾರವಾಗಿ ಈಜಿಪ್ಟ್ ಮೇಲ್ಕಂಡ ಕ್ರಮಗಳನ್ನು ಜರುಗಿಸಿದೆ.

ನೆಹರೂರವರೊಡನೆ ಗೋವಾ ನಾಯಕರ ಭೇಟಿ

ಗೋವಾ ವಿಮೋಚನಾ ಚಳುವಳಿಯ ೧೧ ಮಂದಿ ನಾಯಕರು ಮೊನ್ನೆ ಪ್ರಧಾನಿ ನೆಹರೂರವರನ್ನು ಇದೇ ಮೊದಲಾಗಿ ಭೇಟಿ ಮಾಡಿ, ಗೋವಾ ಜನರು ಗೋವೆಯೊಳಗೆ ಹೋಗಲು ರಹದಾರಿ, ಗೋವಾಕ್ಕೆ ಅಂಚೆ ಮೂಲಕ ಹಣದ ರವಾನೆ ಮತ್ತು ಪೋರ್ಚುಗೀಸರ ಜೈಲುಗಳಲ್ಲಿರುವ ನೂರಾರು ಗೋವಾ ಖೈದಿಗಳ ದುಸ್ಥಿತಿ ಇವುಗಳ ವಿಚಾರವಾಗಿ ಬಿಚ್ಚು ಮನಸ್ಸಿನ ಮಾತುಕತೆಗಳನ್ನು ನಡೆಸಿದರೆಂದು ವರದಿಯಾಗಿದೆ ಗೋವಾಕ್ಕೆ ಪ್ರವೇಶಿಸಲು ಭಾರತದಲ್ಲಿರುವ ಅಲ್ಲಿನ ಪ್ರಜೆಗಳಿಗೆ ರಹದಾರಿ ಕೊಡುವುದನ್ನು ಇನ್ನೂ ಹೆಚ್ಚಿಸಲಾಗುವುದೆಂದು ಹೇಳಲಾಗಿದೆ ಗೋವಾಕ್ಕೆ ೧೦೦ ರೂ. ವರೆಗೆ ತೆಗೆದುಕೊಂಡು ಜನರು ಹೋಗಬಹುದೆಂದೂ, ಅಂಚೆ ಮೂಲಕ ಹಣವನ್ನು ರವಾನೆ ಮಾಡುವ ನಿಬಂಧನೆಗಳನ್ನೂ ಸ್ವಲ್ಪ ಉದಾರವಾಗಿ ಮರ್ಪಡಿಸಲಾಗುವುದೆಂದೂ, ಆದರೆ ಗೋವಾದೊಡನೆ ವ್ಯಾಪಾರದ ನಿರ್ಬಂಧವನ್ನು ತೆಗೆಯುವುದಿಲ್ಲವೆಂದೂ ಹೇಳಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗೋಟುವಾದ್ಯ. ೭.೧೫ ಎಂ ವಿ ಗೋಪಿನಾಥ್-ಗೀತಾವಳಿ. ೭-೩೦ ಮತ್ತು ೮-೧೫ ಎಂ. ಎ ಬಳಗಿರಿ ರಂಗಾಚಾರ್-ಕಾವ್ಯವಾಚನ ಮಧ್ಯಾಹ್ನ ೧೨ ಮತ್ತು ೧-೫೦ ಕೆ ವಿ ಕೃಷ್ಣಮೂರ್ತಿ-ಪಿಟೀಲು. ೧೨-೩೦ ಶಂಕರರಾವ್ ವಾಂಬಲ್‌ಕರ್-ಹಿಂದೂಸ್ತಾನಿ ಸಂಗೀತ. ೧ ರಿಂದ ೩ ರ ವರೆಗೆ ೧-೨೦ ಗಾನ ಮಂಜರಿ. ೩.೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೬-೧೦ ದಾಸರ ಪದಗೀತೆ ೭-೩೦ ಭಕ್ತಿ ಗೀತೆ. ಚಿಗೀತಾ ಗುಚ್ಛ. ೮-೩೦ ಶಂಕರರಾವ್ ವಾಂಬಲ್‌ಕರ್-ಹಿಂದೂಸ್ತಾನಿ ಸಂಗೀತ. ೯-೧೫ ಕ್ರೀಡಾ ವಿಮರ್ಶೆ. ೯-೩೦ ರಾಷ್ಟ್ರೀಯ ನಾಟಕ ಕಾರ್ಯಕ್ರಮ-ದೆಹಲಿ ರಿಲೆ

ಅಮೆರಿಕಾ ಸಹಾಯ ಯೋಜನೆಗೆ ಯೆಮೆನ್ನರ ತಿರಸ್ಕಾರ

ಮಧ್ಯ ಪೂರ್ವದ ರಾಷ್ಟ್ರಗಳಿಗೆ ಮಿಲಿಟರಿ ಮತ್ತು ಆರ್ಥಿಕ ಸಹಾಯ ಮಾಡುವ ಬಗ್ಗೆ ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ತಯಾರಿಸಿರುವ ಯೋಜನೆಯ ನೆರವನ್ನು ತೆಗೆದುಕೊಳ್ಳಲು ಯೆಮೆನ್ ಸರ್ಕಾರದವರು ನಿರಾಕರಿಸಿರುತ್ತಾರೆ. ಪರಸ್ಪರ ಸಹಾಯವನ್ನು ಪಡೆಯಲು ಯೆಮೆನ್ನು ಒಪ್ಪುತ್ತದಿಲ್ಲವೆಂದು ಅದರ ಅಧಿಕಾರಿಗಳು ಅಮೆರಿಕದ ನಿಯೋಗಕ್ಕೆ ತಿಳಿಸಿರುವರು

ಒರಿಸ್ಸಾದಲ್ಲಿ ಪ್ರದೇಶ ಕಾಂಗ್ರೆಸ್ಸಿನ ರದ್ದು

ಕಾಂಗ್ರೆಸ್ ಅಧ್ಯಕ್ಷ ಯು ಎನ್ ಧೇಬರ್‌ರವರು ಒರಿಸ್ಸಾ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ನೆನ್ನೆ ರದ್ದುಗೊಳಿಸಿ ಅದರ ಸ್ಥಾನದಲ್ಲಿ ತಾತ್ಕಾಲಿಕ ಪ್ರದೇಶ ಸಮಿತಿಯೊಂದನ್ನು ರಚಿಸುವುದಕ್ಕಾಗಿ ಸಲಹೆ ನೀಡಲು ಮುರಾರ್ಜಿ ದೇಸಾಯ್, ಮಹೇಂದ್ರಮೋಹನ ಚೌಧುರಿ ಮತ್ತು ನಿತ್ಯಾನಂದ ಕನುಂಗೊರವರುಳ್ಳ ಸಮಿತಿಯೊಂದನ್ನು ರಚಿಸಿರುವರು ಒರಿಸ್ಸಾದಲ್ಲಿ ಕಳೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಪ್ರಭಾವವು ಕಡಿಮೆಯಾದ ಬಗ್ಗೆ ಕಾರ್ಯಕಾರಿ ಸಮಿತಿಯವರು ತೀವ್ರವಾಗಿ ಪರಿಶೀಲನೆ ಮಾಡಿ, ಅಲ್ಲಿ ಕಾಂಗ್ರೆಸ್ಸಿನ ಪುನರುಜ್ಜೀವನದ ಪ್ರಯತ್ನ ನಡೆಸಿದ್ದರು ಆದರೆ ಅದು ನಿರೀಕ್ಷಿಸಿದಷ್ಟು ಫಲಕಾರಿಯಾಗಲಿಲ್ಲ ಆದಕಾರಣ ಅಲ್ಲಿ ಕಾಂಗ್ರೆಸ್ಸಿಗೆ ಹೊಸ ಚೈತನ್ಯವನ್ನು ತಂದುಕೊಡಲು ಧೇಬರ್‌ರವರು ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ವಿಸರ್ಜಿಸಿದ್ದಾರೆ.

ಹಿಂದೂ-ಬೌದ್ಧರ ಘರ್ಷಣೆಯಲ್ಲಿ ಒಬ್ಬನ ಮರಣ

ಅಮರಾವತಿ ಬಳಿ ಯೂಲ್ಲ ಎಂಬಲ್ಲಿ ನೂತನ ಬೌದ್ಧರಿಗೂ, ಹಿಂದುಗಳಿಗೂ ಘರ್ಷಣೆಯಾಗಿ ೪೦೦ ಜನರನ್ನು ಬಂಧಿಸಲಾಯಿತೆಂದು ವರದಿಯಾಗಿದೆ. ಭರ್ಜಿ, ಚಾಕು ಮತ್ತು ಲಾಠಿಗಳನ್ನು ಪೊಲೀಸರು ವಶಪಡಿಸಿಕೊಂಡಿರುವರು ಘರ್ಷಣೆಯಲ್ಲಿ ಒಬ್ಬನು ಮಡಿದು ೨೪ ಜನರಿಗೆ ತೀವ್ರ ಗಾಯಗಳಾಗಿವೆ ಅದನ್ನು ಹತೋಟಿಗೆ ತರುವ ಪ್ರಯತ್ನದಲ್ಲಿ ಸಬ್ ಇನ್ಸ್‌ಪೆಕ್ಟರ್ ಮತ್ತು ೮ ಜನ ಕಾನ್ಸ್‌ಟೇಬಲ್ಲುಗಳಿಗೂ ಪೆಟ್ಟು ಬಿದ್ದಿದೆ.

ಶುಕ್ರ ಜ್ವರ ಕೋಟೆಯ ಕೊಳದಲ್ಲಿ ಆತ್ಮಹತ್ಯೆ

ನಿಷಾದ್ ಬಾಗಿನಲ್ಲಿರುವ ಶುಕ್ರನ ಕೋಟೆಯ ಕೊಳದಲ್ಲಿ ಮೊನ್ನೆ ಸಂಜೆ ರಾಮಯ್ಯ ಎಂಬ ಸುಮಾರು ೫೦ ವರ್ಷದ ಮುದಿವಾಳರವನು ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಹೊರಗೆ ಹೋಗಿ ಕಾಫಿ ಕುಡಿದು ಬರುವುದಾಗಿ ಅವನು ಮನೆಯವರಿಗೆ ತಿಳಿಸಿದ್ದನೆಂದು ಹೇಳಲಾಗಿದೆ ಆತನ ಬುದ್ಧಿಯು ಸರಿಯಾಗಿರಲಿಲ್ಲವೆಂದು ತಿಳಿದುಬಂದಿದೆ ನೆನ್ನೆ ನಜರ್‌ಬಾದ್ ಪೊಲೀಸರು ಮಹಜರು ನಡೆಸಿ, ಪರೀಕ್ಷೆಗೆ ಶವವನ್ನು ಕಳುಹಿಸಿದ್ದರು.

೮೫೦ ರೂ.ಗಾಗಿ ಕೊಲೆ
ಅಪರಾಧಿಗೆ ಮರಣದಂಡನೆ

ಮೈಸೂರು ೧೨

ಪಿರಿಯಾಪಟ್ಟಣದ ತಾಲ್ಲೂಕು ಚಿಕ್ಕರಕೊಪ್ಪಲು ಗ್ರಾಮದ ಬಡವೇಗೌಡ ಎಂಬಾತನು ಕಳೆದ ವರ್ಷ ನವೆಂಬರ್ ೨೩ ರಂದು ಅದೇ ತಾಲ್ಲೂಕಿನ ಅಲ್ಲನಾಯಕನಹಳ್ಳಿಗೆ ಎತ್ತನ್ನು ಕೊಡುವ ಸಲುವಾಗಿ ಹೋಗಿದ್ದಾಗ ಅಲ್ಲಿನ ದೊಡ್ಡಗೌಡ ಎಂಬಾತನು ಬಡವೇಗೌಡನ ಬಳಿಯಿದ್ದ ೮೫೦ ರೂಗಳನ್ನು ಅಪಹರಿಸುವ ಉದ್ದೇಶದಿಂದ ಕೊಡಲಿಯಿಂದ ಹೊಡೆದು ಆತನನ್ನು ಕೊಂದ ಅಪರಾಧಕ್ಕಾಗಿ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಮಜೀದ್‌ರವರು ಇಂದು ಅಪರಾಧಿಗೆ ಮರಣ ದಂಡನೆಯನ್ನು ವಿಧಿಸಿದರು

ವಿಶ್ವದಲ್ಲಿ ಅಣ್ವಸ್ತ್ರ ಯುದ್ಧದ ಸಂಭವವಿಲ್ಲ
ಯುಗೋಸ್ಲಾವಿಯಾ ಅಧ್ಯಕ್ಷ ಟಿಟೋರವರ ನಂಬಿಕೆ

ಹಿರಿಯ ರಾಷ್ಟ್ರಗಳು ಅಣು ಶಸ್ತ್ರಾಸ್ತ್ರ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರೂ ಸಹ, ಅಣು ಯುದ್ಧವಾಗುವ ಸಂಭವವಿಲ್ಲವೆಂದು ಯುಗೋಸ್ಲಾವಿಯದ ಅಧ್ಯಕ್ಷ ಮಾರ್ಷಲ್ ಟಿಟೋರವರು ತಮ್ಮ ದೃಢ ನಂಬಿಕೆಯನ್ನು ಸೂಚಿಸಿರುತ್ತಾರೆ ಹಿರಿಯ ರಾಷ್ಟ್ರಗಳು ನಡೆಸುತ್ತಿರುವ ಶಸ್ತ್ರಾಸ್ತ್ರ ತಯಾರಿಕೆ ಸ್ಪರ್ಧೆಯಲ್ಲಿ ಯುಗೋಸ್ಲಾವಿಯವು ಹಿಂಬಾಲಿಸಲಾಗದಿದ್ದರೂ ಅದು ಭಯಪಡಬೇಕಾಗಿಲ್ಲವೆಂದು ಅವರು ಹೇಳಿರುತ್ತಾರೆ. ಅಣು ಯುದ್ಧದಿಂದ ವಿಶ್ವವೇ ನಾಶವಾಗಬಹುದೆಂದೂ, ಆದರೆ ಯಾರು ಮೊದಲು ಅಣು ಬಾಂಬು ಹಾಕುವರೋ ಅವರು ಉಳಿದುಕೊಳ್ಳುವರೆಂಬ ಭರವಸೆ ಇಲ್ಲವೆಂದೂ, ಆದ್ದರಿಂದ ಅಣು ಯುದ್ಧವಾಗುವುದಿಲ್ಲವೆಂದೂ ಅವರು ಸೂಚಿಸಿರುತ್ತಾರೆ.

ಅಲ್ಜಿಯರ್ಸ್‌ನಲ್ಲಿ ಫ್ರೆಂಚ್ ಯುವಕರ ದಾಂಧಲೆ

ಕಳೆದ ಭಾನುವಾರ ರಾತ್ರಿ ಅಲ್ಜಿಯರ್ಸ್ ನಗರದಲ್ಲಿ ಬಿದ್ದ ಒಂದು ಬಾಂಬು ಸಿಡಿದು ೮ ಜನ ಯೂರೋಪಿಯನ್ನರಲ್ಲದೆ ಐವರು ಮುಸ್ಲಿಮರು ಮಡಿದ ಸಂದರ್ಭದಲ್ಲಿ ಮುಸ್ಲಿಮರ ದೇಹಗಳನ್ನು ಒಪ್ಪ ಮಾಡಲು ತೊಡಗಿದ್ದವರ ಮೇಲೆ ನೆನ್ನೆ ನೂರಾರು ಯುವಕ ಫ್ರೆಂಚರು ಧಾಳಿ ಮಾಡಿದರಲ್ಲದೆ, ಕಾರುಗಳನ್ನು ಉರುಳಿಸಿ, ಕಿಟಕಿಗಳನ್ನು ಒಡೆದರೆಂದು ವರದಿಯಾಗಿದೆ. ನಗರಕ್ಕೆ ೩,೦೦೦ ಪ್ಯಾರಾಚ್ಯೂಟ್ ಸೈನಿಕರನ್ನು ತರಲಾಯಿತು ಅಲ್ಲಿ ವಿರೋಧಿಗಳ ಚಳುವಳಿ ತೀವ್ರವಾಗುವುದೆಂದು ರಕ್ಷಣಾ ವ್ಯವಸ್ಥೆ ಮಾಡಲಾಗಿದೆ ಅಲ್ಜಿಯರ್ಸಿನಲ್ಲಿ ಸಾರ್ವತ್ರಿಕ ಮುಷ್ಕರ ನಡೆಸಲು ಕರೆಯಾಯಿತಾಗಿದೆ

ಭಿಕ್ಷುಕ ಗೃಹದಲ್ಲಿ ಆತ್ಮಹತ್ಯೆ ಪ್ರಕರಣ

ನಂಜರಾಜ ಬಹದ್ದೂರ್ ಛತ್ರದ ಹಿಂಭಾಗದಲ್ಲಿ ಭಿಕ್ಷುಕರ ವಸತಿ ಗೃಹದಲ್ಲಿದ್ದ ಅಮಾಸಾಬಿ ಎಂಬಾತನು ತನ್ನನ್ನು ಹೊರಕ್ಕೆ ಬಿಡಲಿಲ್ಲವೆಂಬ ಕಾರಣದಿಂದ ಕತ್ತಿಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡುದಾಗಿ ವರದಿಯಾಗಿದೆ.

ಸಂಸ್ಥಾನದಲ್ಲಿ ಹೆಚ್ಚಿನ ತೆರಿಗೆಗಳ ವಿಧಾಯಕ ಸಂಭವ
ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ

ಬೆಂಗಳೂರು ೧೧

ವಿಧಾನ ಸಭೆ ಮತ್ತು ಪರಿಷತ್ತುಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮೈಸೂರಿನ ರಾಜ್ಯಪಾಲರು ನೆನ್ನೆ ಭಾಷಣ ಮಾಡಿ, ಸರ್ಕಾರದವರು ಈ ವರ್ಷ ಹೆಚ್ಚಿನ ತೆರಿಗೆಗಳನ್ನು ವಿಧಿಸುವ ಸಂಭವವಿರುವುದೆಂದು ಸೂಚಿಸಿದರು. ದ್ವಿತೀಯ ಯೋಜನೆಯ ಗುರಿಯನ್ನು ಸಾಧಿಸಲು ಪ್ರಜಾ ವರ್ಗದವರ ಅಸಾಧಾರಣ ತ್ಯಾಗವು ಅಗತ್ಯವಾಗಿರುವುದೆಂದೂ ಅವರು ತಿಳಿಸಿದರು ಕೇಂದ್ರ ಸರ್ಕಾರದವರು ಆದಷ್ಟು ಮಟ್ಟಿಗೆ ಹಣ ಸಹಾಯ ಮಾಡುವರೆಂದೂ, ಆದರೆ ಸಂಸ್ಥಾನವೂ ಸಹ ತನ್ನ ಸಾಧನ ಸಂಪತ್ತನ್ನು ಪೂರ್ಣವಾಗಿ ಶೇಖರಿಸುವುದು ಅಗತ್ಯವೆಂದೂ ಸೂಚಿಸಿದರು. ಆಹಾರದ ಪರಿಸ್ಥಿತಿಯು ಉತ್ತರ ಕರ್ನಾಟಕದಲ್ಲಿ ಕಳವಳಕ್ಕೆಡೆಯಿತ್ತಿರುವುದನ್ನೂ ಅದನ್ನು ಪರಿಹರಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವುದನ್ನೂ ಅವರು ನಿರೂಪಿಸಿದರು ಸಂಸ್ಥಾನದಲ್ಲಿ ಒಟ್ಟು ೬೩೪ ಫೇರ್‌ಪ್ರೈಸ್ ಡಿಪೋಗಳಿರುವುವೆಂದೂ, ೩೫ ಸಾವಿರ ಟನ್ ಅಕ್ಕಿಯನ್ನು ಅವುಗಳು ಹಂಚುವುದಾಗಿಯೂ ಅವರು ಹೇಳಿದರು ಇಡೀ ಸಂಸ್ಥಾನಕ್ಕೆಲ್ಲಾ ಒಂದೇ ರೆವಿನ್ಯೂ ನ್ಯಾಯಮಂಡಲದ ರಚನೆಯಾಗಬೇಕೆಂಬುದು ಸರ್ಕಾರದ ಅಭಿಪ್ರಾಯವೆಂದು ಅವರು ನುಡಿದರು.

ಈ ವರ್ಷದಲ್ಲಿ ಬೆಂಗಳೂರು ಮತ್ತು ಹೊಸಪೇಟೆ ವಲಯದಲ್ಲಿ ನೌಕರರ ವಿಮಾ ಶಾಸನವನ್ನು ಜಾರಿಗೆ ತರಲಾಗುವುದೆಂದೂ, ೪೫,೦೦೦ ಕೆಲಸಗಾರರಿಗೆ ವೈದ್ಯಕೀಯ ಸೌಲಭ್ಯಗಳನ್ನು ಏರ್ಪಡಿಸಲಾಗುವುದೆಂದೂ, ೧,೬೦೦ ಕಾರ್ಮಿಕರಿಗೆ ಉತ್ತಮ ಪಾರಿಭಾಷಿಕ ಶಿಕ್ಷಣವನ್ನು ಒದಗಿಸಲಾಗುವುದೆಂದೂ ಅವರು ನುಡಿದರು.

ಸಹಕಾರ ಸಂಘಗಳ ಮೂಲಕ ೮.೫೦ ಕೋಟಿ ರೂ. ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ರೈತರಿಗೆ ಕೊಡಲಾಗುವುದೆಂದು ಹೇಳಿದರು. ದೀರ್ಘಾವಧಿ ಸಾಲಕ್ಕಾಗಿ ೫೦ ಲಕ್ಷ ರೂ.ಗಳನ್ನು ಜಮೀನು ಅಡಮಾನ ಬ್ಯಾಂಕು ಸಾಲ ಎತ್ತುವುದಾಗಿ ಸೂಚಿಸಿದರು.

ರಾಜ್ಯದ ಮುಖ್ಯ ಪಟ್ಟಣಕ್ಕೂ ಇತರ ಸ್ಥಳಗಳಿಗೂ ಸಂಚಾರ ಸೌಲಭ್ಯವನ್ನು ಏರ್ಪಡಿಸುವ ಬಗ್ಗೆ ಸಮಗ್ರ ಯೋಜನೆಯು ಇದೆಯೆಂದೂ, ಕೃಷ್ಣಾ ಮತ್ತು ತುಂಗಭದ್ರಾ ನದಿಗಳಿಗೆ ಸೇತುವೆ ಹಾಕಲಾಗುವುದೆಂದೂ ಅವರು ನುಡಿದರು.

ಈ ದಿನ ४८ ಜನರಿಗೆ ಫ್ಲೂ

ಮೈಸೂರು ೧೧

ಈ ಮಧ್ಯಾಹ್ನ ೧೨ ಗಂಟೆವರೆಗೆ ನಗರದಲ್ಲಿ ४८ ಜನರಿಗೆ ಹೊಸದಾಗಿ ಇನ್‌ಫ್ಲುಯೆಂಜಾ ಬಾಧಿಸಿದೆಯೆಂದು ವರದಿಯಾಗಿದೆ. ಇವರಲ್ಲಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ೯, ಖಾಸಗಿ ವೈದ್ಯರಲ್ಲಿ ೯, ಸಾಂಕ್ರಾಮಿಕ ರೋಗದ ಆಸ್ಪತ್ರೆಯಲ್ಲಿ ೨೮ ಜನರಿಗೆ ಚಿಕಿತ್ಸೆ ನಡೆಸಲಾಗಿದೆ. ಒಟ್ಟು ೧೧೧೮ ಜನ ಅವರು ಗುಣಹೊಂದಿರುವರು.

ದೇವನೂರು ಮಠದ ಗದ್ದಿಗೆ ಆಡಳಿತದ ವ್ಯವಹಾರಗಳು

ಜಿಲ್ಲಾ ನ್ಯಾಯಾಧೀಶರ ಆಜ್ಞೆ

ಮೈಸೂರು ೧೧

ನಂಜನಗೂಡು ತಾಲ್ಲೂಕು ದೇವನೂರು ಶ್ರೀ ಗುರುಮಲ್ಲೇಶ್ವರ ಸ್ವಾಮಿ ಗದ್ದಿಗೆ ಆಸ್ತಿಪಾಸ್ತಿ ವ್ಯವಹಾರಗಳ ಸಂಬಂಧವಾಗಿ ಜಿಲ್ಲಾ ಕೋರ್ಟಿನಲ್ಲಿ ಹೂಡಿದ್ದ ದಾವೆಯಲ್ಲಿ ಜಿಲ್ಲಾ ನ್ಯಾಯಾಧೀಶರು ಕಳೆದ ೫ನೇ ತಾ|| ಆಜ್ಞೆಯೊಂದನ್ನು ಹೊರಡಿಸಿ, ಆಡಳಿತವನ್ನು ನಿರ್ವಹಿಸುತ್ತಿದ್ದ ಶ್ರೀ ಬಿ ಎಂ ಸಿದ್ದಯ್ಯನವರು ಗದ್ದಿಗೆಯ ಆಸ್ತಿಪಾಸ್ತಿಗೆ ಸಂಬಂಧಿಸಿದ ಯಾವ ವ್ಯವಹಾರದಲ್ಲೂ ಪ್ರವೇಶಿಸಬಾರದೆಂದೂ, ಅವರು ಇದುವರೆಗೆ ನಡೆಸಿರುವ ಆಡಳಿತದ ಬಗ್ಗೆ ತನಿಖೆ ನಡೆಸಬೇಕೆಂದೂ ತಿಳಿಸಿರುತ್ತಾರೆ ಅಲ್ಲದೆ ತನಿಖೆ ನಡೆದು ತೀರ್ಮಾನವಾಗುವವರೆಗೆ ಶ್ರೀ ಗುರುಸ್ವಾಮಿ ಮತ್ತು ಶ್ರೀ ಬಸವರಾಜುಸ್ವಾಮಿಗಳವರು ಗದ್ದಿಗೆಯ ಆಸ್ತಿಪಾಸ್ತಿಗಳ ವಿಶಿಷ್ಟ ಆಡಳಿತವನ್ನು ನಡೆಸಿ ಕ್ರಮ ಪ್ರಕಾರ ಲೆಕ್ಕ ಪತ್ರಗಳನ್ನು ಒಪ್ಪಿಸತಕ್ಕದೆಂದೂ ಸೂಚಿಸಲಾಗಿದೆ

ಪುಸ್ತಕ ಭಂಡಾರಕ್ಕೆ ಸಹಾಯಕ್ಕಾಗಿ ಮನವಿ

ನಗರದ ಶ್ರೀ ಗಾಯತ್ರಿ ಲಲಿತ ಕಲಾ ಸಂಘದ ಆಶ್ರಯದಲ್ಲಿ ಏರ್ಪಡಿಸಲಾಗುವ ಪುಸ್ತಕ ಭಂಡಾರ ಮತ್ತು ಉಚಿತ ವಾಚನಾಲಯಕ್ಕೆ ಸಂಘದ ಸದಸ್ಯರು ಮತ್ತು ಹಿತೈಷಿಗಳು ಉದಾರವಾಗಿ ಗ್ರಂಥಗಳನ್ನು ಕೊಡುವಂತೆ ಕೋರಲಾಗಿದೆ

ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆ

ಮೈಸೂರು ಚಿತ್ರಕಲಾ ಸಂಸ್ಥೆಯವರು ಬರುವ ತಿಂಗಳು ೧೫ನೇ ತಾರೀಖು ತಮ್ಮ ಸಂಘದ ವಾರ್ಷಿಕೋತ್ಸವದ ಅಂಗವಾಗಿ ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆಯನ್ನು ನಡೆಸುವರು. ಅದಕ್ಕೆ ಪ್ರವೇಶ ಪತ್ರ ಕಳುಹಿಸಲು ಈ ತಿಂಗಳ ೩೦ನೇ ತಾರೀಖು ಕಡೆಯ ದಿನ

ಮುಷ್ಕರ ಹೂಡಲು ಅವಕಾಶಕ್ಕಾಗಿ ರೇಷ್ಮೆ ಕಾರ್ಮಿಕರ ಬೇಡಿಕೆ

ನಗರದಲ್ಲಿರುವ ಸರ್ಕಾರಿ ರೇಷ್ಮೆ ಕಾರ್ಖಾನೆಯ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಶನಿವಾರ ಶ್ರೀ ಎಂ ಎ. ಉಗ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಸರ್ಕಾರಿ ಕೈಗಾರಿಕಾ ಕಾರ್ಮಿಕರ ಫೆಡರೇಷನ್ನಿನಿಂದ ಗ್ರಾಚ್ಯುಯಿಟಿ, ಭತ್ಯ ಮುಂತಾದ ವಿಚಾರವಾಗಿ ಬಂದಿದ್ದ ಪತ್ರವನ್ನು ಪರಿಶೀಲಿಸಲಾಯಿತು ಸರ್ಕಾರದ ಕೈಗಾರಿಕೆಗಳಲ್ಲಿರುವ ಕಾರ್ಮಿಕರಿಗೆ ಹೆಚ್ಚಿನ ವೇತನ, ತುಟ್ಟಿ ಭತ್ಯ ಮುಂತಾದುವನ್ನು ಸರ್ಕಾರಿ ನೌಕರರಿಗೆ ಕೊಟ್ಟಂತೆಯೇ ಕೊಡುವುದರಲ್ಲಿ ವಿಳಂಬ ಮಾಡುತ್ತಿರುವುದನ್ನು ಪ್ರತಿಭಟಿಸಲು ಮುಷ್ಕರ ಹೂಡುವುದಕ್ಕಾಗಿ ಫೆಡರೇಷನ್ನು ಅನುಮತಿಯಾಯುವಂತೆ ಕೋರಲಾಯಿತು ರೇಷ್ಮೆ ಕಾರ್ಮಿಕರು ಮುಷ್ಕರವನ್ನು ನಡೆಸಬೇಕೆಂದು ಈಗಾಗಲೇ ತಮ್ಮ ಅಭಿಮತವನ್ನು ಮತದಾನದ ಮೂಲಕ ಸೂಚಿಸಿರುತ್ತಾರೆ.

ಮಿತವ್ಯಯಕ್ಕಾಗಿ ಸಂಸ್ಥಾನಗಳಿಗೆ ಪ್ರಧಾನಿಯ ಕರೆ

ಪ್ರಧಾನಿ ನೆಹರೂರವರು ಸಂಸ್ಥಾನಗಳ ಮುಖ್ಯ ಮಂತ್ರಿಗಳಿಗೆ ಸೂಚನೆಯಿತ್ತು ಈಗಿನ ಆರ್ಥಿಕ ಬಿಕ್ಕಟ್ಟನ್ನು ಎದುರಿಸಲು ಮಿತವ್ಯಯವನ್ನು ಬಹುಮಟ್ಟಿಗೆ ಮಾಡುವಂತೆ ತಿಳಿಸಿರುವರೆಂದು ವರದಿಯಾಗಿದೆ ಸರ್ಕಾರದವರು ನಡೆಸುವ ಭಾರಿ ಕೆಲಸಗಳಲ್ಲಲ್ಲದೆ ಸಣ್ಣ ಪ್ರಮಾಣದ ಮೋಟಾರು, ತಂತಿ ಮತ್ತು ಕಾಗದಗಳಲ್ಲೂ ಸಹ ಮಿತವ್ಯಯ ಮಾಡುವಂತೆ ಸೂಚಿಸಲಾಗಿದೆ ಅತಿ ಮುಖ್ಯವಾದ ವಸ್ತುಗಳಲ್ಲದೆ ವಿದೇಶೀ ವಿನಿಮಯ ನಾಣ್ಯಗಳನ್ನು ಬಳಸುವ ಇತರ ಪದಾರ್ಥಗಳಿಗೆ ಹಣವನ್ನು ಪೋಲು ಮಾಡಬಾರದೆಂದೂ, ವಿದೇಶಗಳಿಗೆ ನಿಯೋಗಗಳು ಮತ್ತು ಪ್ರತಿನಿಧಿಗಳನ್ನು ಕಳುಹಿಸುವುದನ್ನು ಆದಷ್ಟು ಕಡಿಮೆ ಮಾಡಬೇಕೆಂದೂ ಸೂಚಿಸಿರುವರು ಗವರ್ನರುಗಳು ವಾಸಿಸುವ ರಾಜ ಭವನಗಳಲ್ಲಿ ಆಗುವ ವೆಚ್ಚವನ್ನೂ ಕಡಿಮೆ ಮಾಡಲೂ ನೆಹರೂರವರು ಯೋಚಿಸುತ್ತಿರುವರು

ಸಿಂಹಳದ ತಮಿಳರ ಮೇಲೆ ಬೆತ್ತದ ಪ್ರಹಾರ

ಸಿಂಹಳದ ಜಾಫ್ನದಲ್ಲಿ ಮೊನ್ನೆ ತಮಿಳು ಪ್ರದರ್ಶನಕಾರರ ಮೇಲೆ ಪೋಲೀಸರು ಬೆತ್ತದ ಪ್ರಹಾರ ಮಾಡಲು ೧೦ ಮಂದಿಗೆ ಗಾಯವಾಯಿತೆಂದು ವರದಿಯಾಗಿದೆ ಅಲ್ಲಿನ ಕಾರ್ಮಿಕ ಸಂಸ್ಥೆಯ ಪಾರ್ಲಿಮೆಂಟರಿ ಕಾರ್ಯದರ್ಶಿ ಎಂ ಪಿ. ಡಿ ನಾಯ್ಡುರವರು ರೈಲ್ವೆ ನಿಲ್ದಾಣದಿಂದ ಬಹಿರಂಗ ಸಭೆಯೊಂದಕ್ಕೆ ಹೋಗದಂತೆ ಪ್ರದರ್ಶನಕಾರರು ರಸ್ತೆಯಲ್ಲಿ ಅಡ್ಡ ಮಲಗಿದ್ದರೆಂದು ಹೇಳಲಾಗಿದೆ ಆದರಿಂದ ಸಭೆಯನ್ನು ರದ್ದುಗೊಳಿಸಲಾಯಿತು ಪ್ರದರ್ಶನಕಾರರು ಕಪ್ಪು ಬಾವುಟಗಳನ್ನು ಹಿಡಿದು, ತಮಿಳು ಭಾಷೆಯನ್ನು ಸರ್ಕಾರದವರು ಮಟ್ಟಹಾಕುತ್ತಿರುವರೆಂದು ಆಪಾದಿಸಿದರು

ಒಂದೇ ಬಾರಿ ಹುಟ್ಟಿದ ಐದು ಮಕ್ಕಳ ಮರಣ

ಪೋರ್ಚುಗೀಸರ ಪೂರ್ವ ಆಫ್ರಿಕದಲ್ಲಿ ಒಬ್ಬ ಮಹಿಳೆಯು ಏಕ ಕಾಲದಲ್ಲಿ ಪ್ರಸವಿಸಿದ್ದ ಐದು ಮಕ್ಕಳೂ ಮೃತಪಟ್ಟಿರುವುದಾಗಿ ವರದಿಯಾಗಿದೆ ತಾಯಿ ಆರೋಗ್ಯವಾಗಿರುತ್ತಾಳೆ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್ ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕ ರಸ್ತೆ, ಮೈಸೂರು (Estd 1911)

ಹಿಂದಿ ಪಠ್ಯಪುಸ್ತಕಗಳಿಲ್ಲದೆ ತೊಂದರೆ

ಬೇಸಿಗೆ ರಜಾ ಮುಗಿದು ಪ್ರೌಢಶಾಲೆಗಳು ಪುನಃ ಆರಂಭವಾಗಿ ಈಗಾಗಲೇ ೧೫ ದಿವಸಗಳಾಗಿವೆ ಪಾಠ ಪ್ರವಚನಗಳೂ ನಡೆಯುತ್ತಿವೆ. ಪಠ್ಯ ಪುಸ್ತಕಗಳ ಸಮಿತಿಯವರ ಅಂಗೀಕಾರ ಪಡೆದು ಇತರ ಪಠ್ಯ ಪುಸ್ತಕಗಳು ಹೊರಬಿದ್ದಿವೆ ಆದರೆ ಹೈಸ್ಕೂಲಿನ ೧ ಮತ್ತು ೨ನೇ ತರಗತಿಗಳ ಕಡ್ಡಾಯದ ಹಿಂದಿ ಪಠ್ಯ ಪುಸ್ತಕಗಳಿಗೆ ಸಮಿತಿಯವರ ಅಂಗೀಕಾರವಿನ್ನೂ ದೊರೆತಿಲ್ಲ ಆದರಿಂದ ವಿದ್ಯಾರ್ಥಿಗಳಿಗೆ ಕಡ್ಡಾಯದ ಹಿಂದಿ ಪಠ್ಯ ಪುಸ್ತಕಗಳು ಸಿಗದಂತಾಗಿದೆ ಇದರಿಂದ ಪಾಠ ಮಾಡುವುದಕ್ಕೂ ಸಹ ತೊಂದರೆಯಾಗಿದೆ. ಪುಸ್ತಕ ವ್ಯಾಪಾರಿಗಳು ಪ್ರಕಟಿಸಿರುವ ಪಟ್ಟಿಗಳಲ್ಲಿ ಹಿಂದಿ ಕಡ್ಡಾಯ, ಐಚ್ಛಿಕ ಅಥವಾ ದ್ವಿತೀಯ ಭಾಷೆ ಎಂಬ ಬೇರೆ ವಿಭಾಗಗಳು ಇರುವುದಿಲ್ಲ ಕೇವಲ ಹಿಂದಿ ಪಠ್ಯ ಪುಸ್ತಕಗಳೆಂದು ಮಾತ್ರ ಕಾಣಿಸಲಾಗಿದೆ. ಹೀಗಾಗಿ ಯಾವುದೋ ಪುಸ್ತಕಗಳನ್ನು ಕೊಂಡುಕೊಳ್ಳಬೇಕಾಗಿ ಬಂದು ವಿದ್ಯಾರ್ಥಿಗಳಿಗೂ ಪೋಷಕರಿಗೂ ಮತ್ತು ಉಪಾಧ್ಯಾಯರಿಗೂ ಕಷ್ಟವಾಗುತ್ತಿದೆ

ಈ ಬಗ್ಗೆ ವಿಚಾರಿಸಿದ್ದರಲ್ಲಿ ಹಿಂದಿ ಪುಸ್ತಕಗಳ ರಾಷ್ಟ್ರೀಕರಣ ಮಾಡುವ ವಿಚಾರವು ಪರಿಶೀಲನೆಯಲ್ಲಿರುವುದೆಂದು ಕೇಳಿಬರುತ್ತಿದೆ. ಅಗಲೇ ಹಲವು ಕೈಬರಹ ಗ್ರಂಥಗಳನ್ನೂ ತರಿಸಿಕೊಳ್ಳಲಾಗುತ್ತಿರುವುದೆಂದೂ ಹೇಳಲಾಗಿದೆ ಈ ಯೋಜನೆಯನ್ನು ಕೈ ಬಿಡಬೇಕು ಅಥವಾ ಈಗ ಕೈಗೊಳ್ಳುವುದರ ಬದಲು ಮುಂದಿನ ವರ್ಷಕ್ಕಾದರೂ ಇಲ್ಲ ಕಳೆದ ವರ್ಷದ ಪುಸ್ತಕಗಳನ್ನಾದರೂ ಕೊಟ್ಟರೆ ಅನುಕೂಲ—ಎಂಬುದಾಗಿ ಹಿಂದಿ ಪ್ರಚಾರಕರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

ಬಂಗಾರ ಮತ್ತು		
ಕೊಯಮತ್ತೂರು ಸಣ್ಣ	೪೦ ೧೨	೪೯ ೫೦
ರತ್ನಚೂಡಿ	೩೯ ೫೭	೪೧ ೭೫
ಕಿಂಬೂತಿ	೪೦ ೦೦	
ರಾಗಿ	೪೫ ೩೫	೪೬ ೪೭
ಜೋಳ	೪೯ 50	
ಕಡಲೆಕಾಯಿ	೧೭ ೮೭	೨೯ ೬೨
ಎಳ್ಳು	೭೯ ೦೦	೮೭ ೪೭
ಹರಳುಬೀಜ	೯೪ ೨೫	೯೪ ೭೫
ಹುಚ್ಚೆಳ್ಳು	೯೨ ೧೨	೯೭ ೦೦
ಹೊಂಗೇಬೀಜ	೩೯ ೬೨	
ಹುರುಳಿ	೪೨ ೭೫	೪೯ ೧೨
ಹೆಸರು	೯೧ ೦೮	೫೭ ೮೭
ಕಡಲೆ	೯೫ ೫೦	
ಉದ್ದು	೬೧ ೨೫	೬೪ ೪೭
ಹಲಸಂದೆ	೯೦ ೧೨	೬೨ ೮೭
ಅವರೆ	೫೫ ೧೨	೫೭ 50
ಧನಿಯ	೨೪ ೬೨	೨೬ ೦೦
ಸೆಣಬಿನಬೀಜ	೪೯ ೦೦	೯೨ ೫೦
ಸಾಸಿವೆ	೯೯ ೭೦	
ಹುಣಸೇಬೀಜ	೬ ೧೨	೬ ೪೭
ಸೀಗೆಕಾಯಿ	೭ ೯೯	
ಹುಣಸೆಹಣ್ಣು	೪ ೪೧	೪ ೯೬
ಮೆಣಸಿನಕಾಯಿ	೧೪ ೧೨	೧೭ ೦೦
ತೆಂಗಿನಕಾಯಿ	೧೯೫ ೮೦	೨೭೫ ೦೦

ಸಾರ್ವಜನಿಕರ ಸಂಪರ್ಕಕ್ಕಾಗಿ ಬೊಂಬಾಯಿ ಮುಖ್ಯ ಮಂತ್ರಿ ಪ್ರಯತ್ನ

ಬೊಂಬಾಯಿ ಮುಖ್ಯ ಮಂತ್ರಿ ವೈ ಬಿ ಚವಾಣರವರು ತಮ್ಮ ಪ್ರವಾಸದಲ್ಲಿ ಆದಷ್ಟು ಮಟ್ಟಿಗೆ ಸಾರ್ವಜನಿಕ ಸಮಾರಂಭಗಳ ಭಾಗವಹಿಸುವುದನ್ನು ತ್ಯಜಿಸುವುದಾಗಿ ತಿಳಿಸಿರುತ್ತಾರೆ. ಆದರೆ ಪ್ರಜೆಗಳ ಕಷ್ಟಗಳನ್ನು ವೈಯಕ್ತಿಕ ಸಂಪರ್ಕದಿಂದ ತಿಳಿದುಕೊಳ್ಳಲು ಹೆಚ್ಚು ಕಾಲವಿನಿಯೋಗಿಸುವುದಾಗಿ ಅವರು ಸೂಚಿಸಿರುವರು ಈ ಬಗ್ಗೆ ಜಿಲ್ಲಾ ಕಲೆಕ್ಟರುಗಳಿಗೆ ಸೂಚನೆಯನ್ನು ಕಳುಹಿಸಲಾಗಿದೆ

ಈಜಿಪ್ಟಿನಿಂದ ಜೋರ್ಡಾನ್ ರಾಯಭಾರಿ ವಾಪಸಿಗೆ ಒತ್ತಾಯ

ಕೈರೊ ನಗರದಲ್ಲಿರುವ ಜೋರ್ಡಾನಿನ ರಾಯಭಾರಿಯನ್ನು ಹಿಂದಕ್ಕೆ ಕರೆಸುವಂತೆ ಈಜಿಪ್ಟ್ ಸರ್ಕಾರದವರು ಸೂಚಿಸಿರುತ್ತಾರೆ ಜೋರ್ಡಾನ್ ಸರ್ಕಾರದವರು ಈಗಾಗಲೇ ಅಮ್ಮಾನಿನಲ್ಲಿದ್ದ ಈಜಿಪ್ಟ್ ರಾಯಭಾರಿಯ ಮಿಲಿಟರಿ ಸಲಹೆಗಾರರನ್ನು ಉಚ್ಚಾಟನೆಗೊಳಿಸಿರುತ್ತಾರೆ

ವಿವಾಹ ಮಹೋತ್ಸವ

ಹಳೇ ಅಗ್ರಹಾರದ ರಾಮಕೃಷ್ಣಪ್ಪನವರ ಬೀದಿಯಲ್ಲಿರುವ ಶ್ರೀ ಕೆ. ವಿ ಸುಬ್ರಹ್ಮಣ್ಯಯ್ಯನವರ ಜ್ಯೇಷ್ಠ ಕುಮಾರ ಶ್ರೀ ಎಸ್ ಶ್ರೀನಿವಾಸಯ್ಯನವರಿಗೆ ಚಿತ್ರದುರ್ಗದ ಶ್ರೀ ಹೆಚ್ ಎಲ್ ನರಸಿಂಹಯ್ಯನವರ ಪುತ್ರಿ ಸೌ|| ಸುಂದರಮ್ಮನನ್ನು ತಂದುಕೊಂಡು ಕಳೆದ ಗುರುವಾರ ಚಿತ್ರದುರ್ಗದಲ್ಲಿ ವಿವಾಹವನ್ನು ನೆರವೇರಿಸಿದರು

CITY TUTORIAL COLLEGE

Coaching for the Sept Examn

B A & B Sc English & Kannada

INTER : All parts & all Subjects

B K Satyabodhachar M.A ,B T

ಶಿಶು ಮಿತ್ರ

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ-

ನಿರೋಧಕ, ನಿವಾರಕ ಸಲಹೆಗಳಿಗೆ·

'ಲಿವರ್ ಹೌಸ್', ಚಾಮರಾಜಪುರಂ,

(ಮೈಸೂರು ಸುತ್ತೂರು ಬಾಸ್ಟಲ್ (ಹತ್ತಿರ

SREE GAYATHRI

TALKIES

To-day Last day

GOOD MORNING MISS DOVE

From 13-6 57 : For 2 days

BIGGER THAN LIFE

(Cinemascope & Technicolor)

With :– James Mason and Barbara Rush

Edited, Printed and Published by A. R Nagarajan at Sadhvi Press, D.Subbiah Road, Mysore

ಬಾಲಕಿಯರಿಗಾಗಿ ಪ್ರೌಢ ಶಾಲಾ ತರಗತಿಗಳು

ಹೈಸ್ಕೂಲು ಮೊದಲನೇ ತರಗತಿಯನ್ನು ಕೂಡಲೇ ಪ್ರಾರಂಭಿಸಲಾಗುವುದು. ವಿದ್ಯಾರ್ಥಿನಿಯರಿಗಾಗಿಯೇ ಪ್ರತ್ಯೇಕವಾದ S S L C. ತರಗತಿ ವಿಭಾಗದಲ್ಲಿ Vth form ಪಾಸಾದ ಅಥವಾ ಫೇಲಾದವರನ್ನೂ ಸೇರಿಸಿಕೊಳ್ಳಲಾಗುವುದು

B K ಸತ್ಯಬೋಧಾಚಾರ್ M. A B T , ಪ್ರಿನ್ಸಿಪಾಲರು

CITY TUTORIAL COLLEGE, MYSORE

THE CHAMPION METROPOLITAN COLLEGE OF COMMERCE

Co operators Home 100 Road. Mysore

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE Diploma in Stenography COST & WORKS ACCOUNTANCY Banking, Shorthand, Type-writing etc

Estd 1917 — Fully qualified full-time staff — Educational atmosphere – Fine building and up-to-date equipment — Decent Library and Reading Room — Western Business education in the East — Good results — College's Own Diploma also

M S PUTTANNA, *Vice-Principal.* P SUBBARAYA SASTRY, *Principal*

THE NATIONAL INSTITUTE OF COMMERCE,

Old Mysore Bank Road, Mysore

NEW ADMISSIONS for TYPEWRITING SHORTHAND, ACCOUNTANCY Etc , leading to Mysore Govt. Commercial Exams., are now being received during mornings and evenings The Institute is situated in the heart of the city and is equipped with new typewriters and furniture etc. Individual attention and expert training are the special features of this Institution Particulars can be had in person. JOIN NOW

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 2 ಪುಟ ಸ್ಗಳು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ

ಸಾಧ್ವಿ

ಸಂಪುಟ : ೦೫] SADHVI : THURSDAY 13—6—1957 ಮೈಸೂರು : ಗುರುವಾರ ೧೩—೬—೧೯೫೭ : [ಸಂಚಿಕೆ : ೩೦೯

ಶಾಂತಿ ಘೋಷಣೆ ಬಗ್ಗೆ ರಷ್ಯಾ ಸಲಹೆಗೆ ತ್ರಿರಾಷ್ಟ್ರ ತಿರಸ್ಕಾರ

ಮಧ್ಯ ಪೂರ್ವದಲ್ಲಿ ಶಾಂತಿ ಘೋಷಣೆಯಿಂದಲೇ ಪ್ರಯೋಜನವಿಲ್ಲ

ತ್ರಿರಾಷ್ಟ್ರಗಳಿಂದ ರಷ್ಯಾ ಸಲಹೆಯ ತಿರಸ್ಕಾರ

ಮಧ್ಯ ಪೂರ್ವದಲ್ಲಿ ಬಲಪ್ರಯೋಗವನ್ನು ವರ್ಜಿಸುವುದಾಗಿ ಹಿರಿಯ ರಾಷ್ಟ್ರಗಳು ಘೋಷಣೆ ಮಾಡುವುದು ಅಗತ್ಯವೆಂದು ರಷ್ಯಾ ಮಾಡಿರುವ ಸಲಹೆಯನ್ನು ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸುಗಳು ತಿರಸ್ಕರಿಸಿವೆ. ಮಧ್ಯ ಪೂರ್ವದ ಸಮಸ್ಯೆಗಳನ್ನು ಮುಖ್ಯವಾಗಿ ಅರಬ್-ಇಸ್ರೇಲ್ ವ್ಯಾಜ್ಯವನ್ನು ಪರಿಹರಿಸಲೂ ಮತ್ತು ವಿಶ್ವಸಂಸ್ಥೆಯ ಮೂಲಕ ರಚನಾತ್ಮಕವಾಗಿ ಕೆಲಸ ಮಾಡಲೂ ರಷ್ಯಕ್ಕೆ ಅಮೆರಿಕ ಸೂಚಿಸಿದೆ. ಬಲ ಪ್ರಯೋಗದ ನಿಲುಗಡೆಗಾಗಿ ಘೋಷಣೆ ಮಾಡಿದ ಮಾತ್ರಕ್ಕೆ ಮಧ್ಯ ಪೂರ್ವ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಶಾಂತಿ ಕಾಪಾಡಿದಂತಾಗುವುದಿಲ್ಲವೆಂದು ಬ್ರಿಟನ್ನು ತಿಳಿಸಿದೆ. ಯಾವ ತತ್ವದ ಮೇಲಾಗಲಿ ಘೋಷಣೆ ಹೊರಡಿಸುವ ಮುಂಚೆ ಆ ಸಮಸ್ಯೆಗಳ ಬಗ್ಗೆ ಮೊದಲು ಒಪ್ಪಂದವಾಗಬೇಕೆಂದು ಫ್ರಾನ್ಸ್ ಹೇಳಿದೆ.

ಸಂಸ್ಥಾನಕ್ಕೆ ರಾಷ್ಟ್ರಾಧ್ಯಕ್ಷರ ಭೇಟಿ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಬರುವ ಆಗಸ್ಟ್ ತಿಂಗಳಲ್ಲಿ ಕೇರಳದ ರಾಜಧಾನಿ ತಿರುವನಂತಪುರದಲ್ಲಿ ನಡೆಯುವ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸುವರು. ಈ ಸಂದರ್ಭದಲ್ಲಿ ಅವರು ದಕ್ಷಿಣ ಭಾರತದಲ್ಲಿ ೧ ತಿಂಗಳು ಇರುವರು. ಮೈಸೂರು ಸಂಸ್ಥಾನದಲ್ಲೂ ಜುಲೈ ಕಡೆಯ ಭಾಗ ಅಥವಾ ಆಗಸ್ಟಿನಲ್ಲಿ ೧೦ ದಿನಗಳ ಕಾಲ ಇರುವರೆಂದು ಹೇಳಲಾಗಿದೆ.

ವಚನ ಗಾಯನ ಪರೀಕ್ಷೆಯ ಯೋಗ್ಯತಾ ಪತ್ರ ವಿನಿಯೋಗ ಸಮಾರಂಭ

ನಗರದ ಮಹಿಳಾ ಸದನದ ಸಂಸ್ಥಾಪಕರಾದ ಶ್ರೀ ಎಂ. ಡಿ. ಗೋಪಾಲಾಚಾರ್ಯರ ಸ್ಮಾರಕ ಸಂಸ್ಥೆಯ ಆಶ್ರಯದಲ್ಲಿ ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ನಡೆದ ವಚನ ಗಾಯನ ತರಗತಿ ಪರೀಕ್ಷೆಯ ಯೋಗ್ಯತಾ ಪತ್ರ ವಿನಿಯೋಗ ಸಮಾರಂಭವು ನಾಳೆ ಸಂಜೆ ೫॥ ಗಂಟೆಗೆ ನಡೆಯುವುದು. ಮಹಾರಾಣಿ ಕಾಲೇಜು ಅಧ್ಯಾಪಕಿಯರಾದ ಶ್ರೀಮತಿ ನರಸಮ್ಮನವರು ಅಧ್ಯಕ್ಷತೆ ವಹಿಸುವರು. ಮಹಿಳೆಯರೆಲ್ಲರಿಗೂ ಪ್ರವೇಶವುಂಟು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ದೇವರನಾಮಗಳು ೭-೧೫ ಗಾಂಧಿ ಸ್ಮೃತಿ ೭-೩೦ ಉದಯ ಸಂಗೀತ ೮ ೫ ಹಿಂದಿ ಪಾಠ ಮಧ್ಯಾಹ್ನ ೧೨ ಎಂ. ಶಂಕರನಾರಾಯಣಶಾಸ್ತ್ರಿ—ವೀಣೆ ೧೨-೩೦ ವನಿತಾ ವಿಹಾರ. ೧-೨೦ ರೆಕಾರ್ಡ್ ೧-೫೦ ಕ್ಲಾರಿಯೊನೆಟ್ ೨-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ನೃತ್ಯಗೀತೆ. ೭-೩೦ ಗೀತಾವಳಿ ೮ ಪಿ. ಪಾರ್ಥಸಾರಥಿ—ಸಂಗೀತ : ತಿರುಪ್ಪಿ ಲಿಲಿ. ೯ ೫ ರಾಷ್ಟ್ರಾಭಿವೃದ್ಧಿ ಕಾರ್ಯಕ್ರಮ ೯-೩ ಕವಿ ಕಾವ್ಯ ಪರಿಚಯ ೧೦ ಉಮರ್ ಗೀತೆ ೧೦-೧೫ ಎಂ. ಶಂಕರನಾರಾಯಣಶಾಸ್ತ್ರಿ—ವೀಣೆ

ಕೇರಳದಲ್ಲಿ ಖೈದಿಗಳಿಗೆ ಬೇಡಿ ಹಾಕುವುದು ತಪ್ಪುವುದು

ಖೈದಿಗಳಿಗೆ ಇತರ ಸೌಲಭ್ಯಗಳು

ಕೇರಳ ಸಂಸ್ಥಾನದಲ್ಲಿರುವ ಖೈದಿಗಳಿಗೆ ಬೇಡಿ ಹಾಕುವುದನ್ನು ಅಲ್ಲಿನ ಸರ್ಕಾರದವರು ರದ್ದುಗೊಳಿಸಿರುತ್ತಾರೆ. ಜೈಲುಗಳಲ್ಲಿ ತಪ್ಪಿತ ಮಾಡುವ ಖೈದಿಗಳಿಗೆ ಬೇಡಿ ಹಾಕುವುದರ ಬದಲು ಅವರಿಗೆ ಒದಗಿಸುವ ಇತರ ಸೌಲಭ್ಯಗಳನ್ನು ಕಡಿಮೆ ಮಾಡಲಾಗುತ್ತದೆ. ಖೈದಿಗಳು ಹಾಕಿಕೊಳ್ಳುವುದಕ್ಕಾಗಿ ಪಟ್ಟೆ ಗುರುತುಗಳುಳ್ಳ ಬಟ್ಟೆಗಳನ್ನು ತಪ್ಪಿಸಲಾಗುವುದು. ಅದು ಅಗೌರವದ ಲಾಂಛನವೆಂದು ಸರ್ಕಾರದವರು ಅಭಿಪ್ರಾಯಪಟ್ಟಿರುತ್ತಾರೆ. ಅವುಗಳ ಬದಲು ಸಮವಸ್ತ್ರಗಳನ್ನು ಕೊಡಲಾಗುವುದು.

ಖೈದಿಗಳು ತಮ್ಮ ಕೊಠಡಿಗಳಲ್ಲಿರುವಾಗ, ಮಾತ್ರ ಹೊಗೆಬತ್ತಿ ಸೇದಲು ಅವಕಾಶ ಕೊಡಲಾಗಿದೆ. ಅಲ್ಲದೆ ಪ್ರತಿ ೧೫ ದಿನಗಳಿಗೊಮ್ಮೆ ತಮ್ಮವರಿಗೆ ಕಾಗದಗಳನ್ನು ಬರೆಯಲೂ, ವಾರಕ್ಕೊಮ್ಮೆ ತಮ್ಮವರನ್ನು ಭೇಟಿ ಮಾಡಲೂ ಅವಕಾಶ ಕಲ್ಪಿಸಲಾಗಿದೆ. ಈಗ ಎರಡು ತಿಂಗಳಿಗೊಮ್ಮೆ ಕಾಗದ ಬರೆಯಲು ಮತ್ತು ಭೇಟಿ ಮಾಡಲು ಅವಕಾಶವಿತ್ತು. ಖೈದಿಗಳ ಕೂದಲನ್ನು ಬಹಳ ಸಣ್ಣದಾಗಿ ಕತ್ತರಿಸುವ ಪದ್ಧತಿಯನ್ನೂ ಸಡಿಲಗೊಳಿಸಲಾಗಿದೆ.

ಮಹಿಳೆಯೊಡನೆ ಇನ್ನೊಬ್ಬ ಮಹಿಳೆಯ ವಿವಾಹ

ಇಂಗ್ಲೆಂಡಿನ ನಾರ್ದಂಬರ್‌ಲೆಂಡಿನ ಹೇಬ್ರಿಜ್ ಎಂಬಲ್ಲಿ ಕಳೆದ ಮಂಗಳವಾರ ನಡೆದ ರಹಸ್ಯ ವಿವಾಹದಲ್ಲಿ ಮಾಜಿ ಶಾಲಾ ಉಪಾಧ್ಯಾಯಿನಿಯೊಬ್ಬಳು ಮತ್ತೊಬ್ಬಳನ್ನು ವಿವಾಹವಾಗಿರುತ್ತಾಳೆ. ಮಾಜಿ ಉಪಾಧ್ಯಾಯಿನಿ ಅಲಿವ್ ಬ್ಯಾರಿಯು ಶಸ್ತ್ರಚಿಕಿತ್ಸೆಯಿಲ್ಲದೆ, ಲಿಂಗಪರಿವರ್ತನೆ ಹೊಂದಿ ಈಗ ಆಲಿವರ್ ಆಗಿರುತ್ತಾಳೆ. ಆಕೆಯು ತನ್ನ ಸಂಗಾತಿ ಉಪಾಧ್ಯಾಯಿನಿಯನ್ನು ಮದುವೆಯಾಗಿರುವಳು. ಶಾಲೆಯಲ್ಲಿ ಪಾಠ ಮಾಡುತ್ತಿರುವಾಗ ತನ್ನ ಲಿಂಗ ಪರಿವರ್ತನೆಯಾದುದಾಗಿ ಆಕೆಗೆ ಭಾಸವಾಯಿತೆಂದು ಹೇಳಲಾಗಿದೆ.

ರಾಷ್ಟ್ರೀಯ ಮತ್ತು ಕಮ್ಯೂನಿಸ್ಟ್ ಚೀಣರ ನಡುವೆ ನೌಕಾ ಕದನ

ಚೀಣದ ತೀರದಲ್ಲಿರುವ ಮಟ್ಸು ದ್ವೀಪದ ಹತ್ತಿರ ಮೊನ್ನೆ ರಾತ್ರಿ ರಾಷ್ಟ್ರೀಯ ಮತ್ತು ಕಮ್ಯೂನಿಸ್ಟ್ ಚೀಣರುಗಳ ನೌಕೆಗಳಿಗೆ ಕದನವಾಯಿತೆಂದು ವರದಿಯಾಗಿದೆ. ಅಲ್ಲದೆ ಕ್ವಿಮಾಯ್ ದ್ವೀಪದ ಮೇಲೆ ಕಮ್ಯೂನಿಸ್ಟರು ಫಿರಂಗಿ ಗುಂಡುಗಳನ್ನು ಹಾರಿಸಿದರೆಂದೂ ಹೇಳಲಾಗಿದೆ.

ಡಾ॥ ವೆಂಕಟಸುಬ್ಬರಾಯರಿಗೆ ಹೆಚ್ಚಿನ ಅಧಿಕಾರಾವಧಿ

ಇದೇ ನವೆಂಬರ್ ೧೫ನೇ ತಾರೀಖು ನಿವೃತ್ತರಾಗಲು ಅನುಮತಿ ಕೊಡಲಾಗಿದ್ದ ಸಂಸ್ಥಾನದ ವೈದ್ಯ ಇಲಾಖಾ ಡೈರೆಕ್ಟರ್ ಡಾ॥ ಬಿ. ವೆಂಕಟಸುಬ್ಬರಾಯರನ್ನು ಅಂದಿನಿಂದ ಪುನಃ ೧ ವರ್ಷದ ಅವಧಿಗೆ ಅದೇ ಸ್ಥಾನಕ್ಕೆ ನೇಮಿಸಲಾಗಿದೆ.

ಸಂಸ್ಥಾನದ ಎಲ್ಲಾ ಪೋಲೀಸರಿಗೂ ಒಂದೇ ಬಗೆಯ ಸಮ ವಸ್ತ್ರ

ಸ್ವಂ. ವ. ಫೋ.] ನಂಜನಗೂಡು ೧೨.

ಹೊಸ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಎಂ. ಪಿ. ಮುತ್ತಣ್ಣನವರು ನೆನ್ನೆ ಇಲ್ಲಿಗೆ ಭೇಟಿಯಿತ್ತು ಪೋಲೀಸು ಠಾಣೆಗಳನ್ನು ಪರಿಶೀಲಿಸಿ, ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು. ಪೌರಸಭಾಧ್ಯಕ್ಷ ಶ್ರೀ ವೆಂಕಟಸುಬ್ಬಯ್ಯರವರು ಪ್ರವಾಸೀ ಮಂದಿರದಲ್ಲಿ ಪೌರಸಭಾ ಸದಸ್ಯರೊಡನೆ ಅವರನ್ನು ಭೇಟಿ ಮಾಡಿ, ಇದು ದೊಡ್ಡ ಕ್ಷೇತ್ರವಾಗಿರುವುದರಿಂದ ಹೆಚ್ಚು ಜನ ಪೋಲೀಸು ಸಿಬ್ಬಂದಿ ಮತ್ತು ಅಗ್ನಿಶಾಮಕ ದಳವು ಬೇಕೆಂದು ಕೋರಿದರು. ಅದನ್ನು ಪರಿಶೀಲಿಸುವುದಾಗಿ ಸೂಪರಿಂಟೆಂಡೆಂಟರು ನುಡಿದರು.

ಸಂಸ್ಥಾನದ ಎಲ್ಲಾ ಪೋಲೀಸಿನವರಿಗೂ ಒಂದೇ ಬಗೆಯ ಉಡುಪನ್ನು ಕೊಡಲು ಏರ್ಪಾಡಾಗುತ್ತಿರುವುದೆಂದು ಅವರು ತಿಳಿಸಿದರು. ಚಳಿಯ ದೆಸೆಯಿಂದ ಕೊಡಗಿನವರಿಗೆ ಮಾತ್ರ ಬೆಚ್ಚಗಿರುವ ಉಡುಪನ್ನು ಕೊಡಲಾಗುವುದೆಂದು ಹೇಳಿದರು.

ದೇವನೂರಿಗೆ ಹೋಗುವ ಸರ್ಕಾರಿ ಬಸ್ಸು ಹೂತುಕೊಂಡಿತು

ನೆನ್ನೆ ಬೆಳಗ್ಗೆ ದೇವನೂರಿನಿಂದ ಮೈಸೂರಿಗೆ ಹೊರಟ ಸರ್ಕಾರಿ ಬಸ್ಸು ದೇವನೂರಿಗೆ ೧॥ ಮೈಲಿ ದೂರದಲ್ಲಿ ನೆಲದಲ್ಲಿ ೩ ಅಡಿಯಷ್ಟು ಹೂತುಹೋಯಿತು. ಪ್ರಯಾಣಿಕರನ್ನು ಬೇರೆ ಬಸ್ಸಿನಲ್ಲಿ ಸಾಗಿಸಲಾಯಿತು. ಡ್ರೈವರ ಚಮತ್ಕಾರದಿಂದ ಯಾರಿಗೂ ಅಪಾಯವಾಗಲಿಲ್ಲ. ರಾತ್ರಿ ೮ ಗಂಟೆ ಹೊತ್ತಿಗೆ ಗ್ರಾಮಸ್ಥರ ಸಹಾಯದಿಂದ ಇನ್ಸ್‌ಪೆಕ್ಟರ್ ಶ್ರೀ ರಾಮೇಗೌಡರು ಬಸ್ಸನ್ನು ಮೇಲಕ್ಕೆ ತೆಗೆಸಿದರು. ರಸ್ತೆ ಸರಿಹೋಗುವವರೆಗೆ ಸದ್ಯಕ್ಕೆ ಈ ಬಸ್ಸನ್ನು ನಂಜನಗೂಡಿನವರೆಗೆ ಮಾತ್ರ ಓಡಿಸಲಾಗುವುದು.

ಪಿರಿಯಾಪಟ್ಟಣದ ಬಳಿ ನಡೆದ ಕೊಲೆಗಾಗಿ ಮರಣದಂಡನೆ

ಮೈಸೂರು ೧೨.

ಪಿರಿಯಾಪಟ್ಟಣ ತಾಲ್ಲೂಕು ಚಿಕ್ಕನೇರಳೆ ಪ್ಪಲು ಗ್ರಾಮದ ಬಸವೇಗೌಡ ಎಂಬುವನು ಕಳೆದ ನವೆಂಬರ್ ೨೨ ರಂದು ಅದೇ ತಾಲ್ಲೂಕಿನ ಅಲ್ಲಿ ನಾಯಕನಹಳ್ಳಿ ಸಂತೆಯಲ್ಲಿ ಎತ್ತನ್ನು ಕೊಂಡು ತರಲು ಹೋಗಿದ್ದಾಗ, ಅವನನ್ನು ದೊಡ್ಡೆಗೌಡ ಎಂಬುವನು ಕೊಡಲಿಯಿಂದ ಹೊಡೆದು ಕೊಲೆ ಮಾಡಿ ಅವನ ಬಳಿ ಇದ್ದ ೨೫೦ ರೂ. ಗಳನ್ನು ಅಪಹರಿಸಿದ ಸಂದರ್ಭದಲ್ಲಿ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಮಹೇಶ್ವರಯ್ಯನವರು ಅಪರಾಧಿಗೆ ಮರಣದಂಡನೆಯನ್ನು ವಿಧಿಸಿದರು.

ನಗರದಲ್ಲಿ ಒಟ್ಟು ೧೫೬ ಮಂದಿಗೆ ಫ್ಲೂ

ನಗರದಲ್ಲಿ ಇಂದು ೧೧ ಮಂದಿಗೆ ಹೊಸದಾಗಿ ಇನ್ಫ್ಲೂಯೆಂಜಾ ಉಂಟಾಗಿ, ರೋಗಿಗಳ ಒಟ್ಟು ಸಂಖ್ಯೆಯು ೧೫೬ ಆಗಿದೆ. ಆ ಪೈಕಿ ೧೦೮ ಮಂದಿಗೆ ಗುಣವಾಗಿ, ಉಳಿದವರು ಚಿಕಿತ್ಸೆ ಪಡೆಯುತ್ತಿರುವರು.

ಧಾನ್ಯದ ಬೆಲೆ ಏರಿಕೆಯನ್ನು ತಡೆಗಟ್ಟಲು ಒತ್ತಾಯ

ವಿಧಾನ ಸಭೆಯಲ್ಲಿ ಸದಸ್ಯರ ಸಲಹೆ

ಬೆಂಗಳೂರು ೧೨.

ವಿಧಾನ ಸಭೆಯಲ್ಲಿ ನೆನ್ನೆ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಯಲ್ಲಿ ಸದಸ್ಯರು ಮಾತನಾಡಿ, ಆಹಾರ ಪದಾರ್ಥಗಳ ಬೆಲೆ ಹೆಚ್ಚುತ್ತಿರುವುದನ್ನು ಬಲವಾದ ಕ್ರಮಗಳಿಂದ ತಡೆಗಟ್ಟಬೇಕೆಂದು ಸೂಚಿಸಿದರು. ಲಂಚ ಮುಸುವತ್ತುಗಳ ನಿರ್ಮೂಲ ಮತ್ತು ಪಾನ ನಿರೋಧದ ಯಶಸ್ಸಿಗಾಗಿಯೂ ಪ್ರಯತ್ನ ಮಾಡುವಂತೆ ಒತ್ತಾಯ ಮಾಡಲಾಯಿತು.

ರಾಜ್ಯಪಾಲರು ತಮ್ಮ ಕನ್ನಡ ಭಾಷಣದಲ್ಲಿ "ತಾವು" ಎಂಬ ಪದವನ್ನು ಉಪಯೋಗಿಸಿರುವ ಬಗ್ಗೆ ಒಬ್ಬರು ಆಕ್ಷೇಪಿಸಿ, ಅದು "ಬಿ" ಸಂಸ್ಥಾನದ ಅವಶೇಷವೆಂದು ಹೇಳಿದರು. ದೊಡ್ಡವರು 'ನಾನು' ಅಥವಾ 'ನಾವು' ಎಂದು ಹೇಳುವುದರಲ್ಲಿ ಹೆಚ್ಚಿನ ವ್ಯಾಖ್ಯಾನವನ್ನು ಎಳೆಸಬಾರದೆಂದು ಶಾಸನಸಭಾಧ್ಯಕ್ಷರು ಸಮಾಧಾನವಿತ್ತರು.

ರಾಜಕೀಯ ಸಂತ್ರಸ್ತರಿಗೆ ಜಮೀನು ಹಂಚಿಕೆ

ವಿಧಾನ ಸಭೆಯಲ್ಲಿ ಸದಸ್ಯರ ಪ್ರಶ್ನೆಗಳಿಗೆ ಸಚಿವರ ಉತ್ತರ

ಬೆಂಗಳೂರು ೧೨.

ನೆನ್ನೆ ವಿಧಾನ ಸಭೆಯಲ್ಲಿ ರಾಜಕೀಯ ಸಂತ್ರಸ್ತರಿಗೆ ಜಮೀನನ್ನು ಕೊಡುವ ವಿಚಾರವಾಗಿ ಪ್ರಶ್ನೆಗಳನ್ನು ಹಾಕಲಾಯಿತು. ಶ್ರೀ ಕೆ. ತಿಂಚಪ್ಪನವರಿಗೆ ಉತ್ತರವಾಗಿ, ಕಂದಾಯದ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಸಂತ್ರಸ್ತರಿಗೆ ಜಮೀನು ಕೊಡಲು ಶಿಫಾರಸಿಗಾಗಿ ಸಮಿತಿಯನ್ನು ರಚಿಸಿಲ್ಲವೆಂದು ಹೇಳಿದರು. ಜಮೀನು ದೊರೆತಿರುವವರ ಹೆಸರುಗಳ ಪಟ್ಟಿಯನ್ನು ಗೆಜೆಟಿನಲ್ಲಿ ಪ್ರಕಟಿಸಲಾಗಿದೆಯೆಂದೂ, ಅದನ್ನು ಪುನರ್ವಿಮರ್ಶಿಸಲಾಗುವುದೆಂದೂ ತಿಳಿಸಲಾಯಿತು. ಕಾಂಗ್ರೆಸಿನವರಲ್ಲದವರಿಗೆ ಜಮೀನು ದೊರೆಯದಿರುವ ವಿಚಾರವು ಸರ್ಕಾರಕ್ಕೆ ಗೊತ್ತಿಲ್ಲವೆಂದು ಉತ್ತರಕೊಡುತ್ತ ಜಿಲ್ಲಾ ಕಾಂಗ್ರೆಸ್ ಸಮಿತಿಗಳವರೂ ಶಿಫಾರಸು ಮಾಡುತ್ತಿರುವರೆಂದೂ ತಿಳಿಸಲಾಯಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿರುವವರೇ ರಾಜಕೀಯ ಸಂತ್ರಸ್ತರೆಂದು ಸಚಿವರು ಹೇಳಿದರು.

ಹೈಕೋರ್ಟಿಗೆ ಹೆಚ್ಚು ನ್ಯಾಯಾಧೀಶರ ನೇಮಕದ ಪ್ರಶ್ನೆ

ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಪ್ರಶ್ನೋತ್ತರ ಕಾಲದಲ್ಲಿ ಮುಖ್ಯಮಂತ್ರಿಯವರು ಪಾತಕಾಲ, ಹೈಕೋರ್ಟಿಗೆ ನೇಮಿಸುವ ನ್ಯಾಯಾಧೀಶರ ಹೆಸರುಗಳನ್ನೂ ಮತ್ತು ನೇಮಕದ ತಾರೀಖನ್ನೂ ತಿಳಿಸಲು ನಿರಾಕರಿಸಿದರು. ಹೈಕೋರ್ಟಿನಲ್ಲಿ ೨,೦೦೦ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿರುವುದಾಗಿ ಅವರು ಒಪ್ಪಿಕೊಂಡರು. ರಾಷ್ಟ್ರಾಧ್ಯಕ್ಷರಿಗೆ ಶಿಫಾರಸು ಮಾಡಿರುವ ನ್ಯಾಯಾಧೀಶರ ಹೆಸರನ್ನು ತಿಳಿಸುವುದಕ್ಕಾಗುವುದಿಲ್ಲವೆಂದೂ ಹೇಳಿದರು.

ಕರ್ನಾಟಕ ಕಮ್ಯೂನಿಸ್ಟರಿಂದ ಪ್ರತಿಭಟನಾ ದಿನಾಚರಣೆಗೆ ಕರೆ

ಆಹಾರ ಧಾನ್ಯವನ್ನು ಸಾಕಷ್ಟು ಪ್ರಮಾಣದಲ್ಲೂ ಮತ್ತು ಅಗ್ಗದ ಬೆಲೆಯಲ್ಲೂ ಒದಗಿಸಲು ಸರ್ಕಾರದವರು ವ್ಯವಸ್ಥೆ ಮಾಡದಿರುವುದಕ್ಕಾಗಿ ಈ ತಿಂಗಳು ೨೧ನೇ ತಾರೀಕು ಪ್ರತಿಭಟನಾ ದಿನಾಚರಣೆಯನ್ನು ನಡೆಸಬೇಕೆಂದು ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಕ್ಷವು ಮೊನ್ನೆ ಸೇರಿದ್ದ ಸಭೆಯಲ್ಲಿ ನಿರ್ಧರಿಸಿದೆ ಇತರ ವಾಮ ಪಕ್ಷಗಳ ಸಹಾಯ ಪಡೆದು ಸಭೆ ಮತ್ತು ಮೆರವಣಿಗೆಗಳನ್ನು ಅಂದು ನಡೆಸಲು ಕೋರಲಾಗಿದೆ ಕೇಂದ್ರ ಸರ್ಕಾರದ ನೂತನ ತೆರಿಗೆ ಸಲಹೆಗಳನ್ನು ಸಮಿತಿಯು ಖಂಡಿಸಿದೆ ಭಾರತದ ಕಮ್ಯೂನಿಸ್ಟ್ ಪಕ್ಷದ ನಾಯಕರಲ್ಲೊಬ್ಬರಾದ ಎಸ್ ವಿ ಘಾಟೆಯವರು ಅಧ್ಯಕ್ಷತೆ ವಹಿಸಿದ್ದರು ಕೇಂದ್ರ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯ ಘೋಷ್, ಮುಂತಾದವರು ಭಾಷಣ ಮಾಡಿದರು

ಸಂಬಳ ಕಡಿಮೆಯೆಂದು ಗಲ್ಲಿಗೇರಿಸುವವರ ಕೊರತೆ

ಆಲ್ಜೀರಿಯಾದಲ್ಲಿ ಸರ್ಕಾರದ ನೌಕರಿಯಲ್ಲಿರುವ ಗಲ್ಲಿಗೇರಿಸುವ ಎಂ ಮಾರಿಸ್ ಮೈಸೊನ್ನಿಯರ್ ಮತ್ತು ಆತನ ಇಬ್ಬರು ಸಹಾಯಕರು ತಮಗೆ ಸಂಬಳ ಸಾಲದೆಂದು ತಿಳಿಸಿ ರಾಜೀನಾಮೆ ಕೊಟ್ಟಿರುತ್ತಾರೆ ಅಲ್ಲಿನ ದಂಗೆಕೋರರು ತಮ್ಮ ಮೇಲೆ ದ್ವೇಷ ತೀರಿಸಿಕೊಳ್ಳುವುದರಿಂದ ಆಗುವ ಅಪಾಯಕ್ಕೂ ತಮಗೆ ಬರುವ ವೇತನಕ್ಕೂ ಹೋಲಿಕೆಯೇ ಇಲ್ಲವೆಂದು ಅವರುಗಳು ಅಭಿಪ್ರಾಯಪಟ್ಟಿರುವರು ಆದರೆ ಅವರ ರಾಜೀನಾಮೆಗಳನ್ನು ಅಧಿಕಾರಿಗಳು ಅಂಗೀಕರಿಸಲು ನಿರಾಕರಿಸಿರುವರು

ಬೌದ್ಧಮತಕ್ಕೆ ೧೦ ಸಾವಿರ ಹರಿಜನರು

ಅಕೋಲಾ ಪಟ್ಟಣದಲ್ಲಿ ಮೊನ್ನೆ ೧೦ ೦೦೦ ಜನರು ಬೌದ್ಧಮತವನ್ನು ಅವಲಂಬಿಸಿದರು ಲೋಕಸಭಾ ಸದಸ್ಯರಾದ ಶ್ರೀ ಬಿ ಕೆ ಗಾಯಕವಾಡರು ಈ ಸಂಬಂಧವಾದ ಶಾಸ್ತ್ರಗಳನ್ನು ನಡೆಸಿದರು ವಿದರ್ಭ ನಿಮ್ನವರ್ಗದ ಸಂಘದ ಅಧ್ಯಕ್ಷರಾದ ಶ್ರೀ ವಿ ಎಸ್ ಕಾಂಬಳೆಯವರು ಅಗ್ರಾಸನವನ್ನು ವಹಿಸಿದ್ದರು

ಯುವಕರ ಸಂಘಕ್ಕೆ ಕಾಣಿಕೆ

ಇಟ್ಟಿಗೆಗೂಡಿನಲ್ಲಿರುವ ಶ್ರೀ ಎಂ ಎಸ್ ಕುಮಾರಸ್ವಾಮಿ ಪಿಳ್ಳೆಯವರ ತಮ್ಮನ ಮಗ ಶ್ರೀ ಆರ್ ರಾಧಾಕೃಷ್ಣಪಿಳ್ಳೆಯವರಿಗೆ ಶ್ರೀ ಎ ಸುಬ್ರಮ್ಯಪಿಳ್ಳೆಯವರ ಕುಮಾರಿ ಸೌ॥ ವೆಂಕಟಲಕ್ಷ್ಮಿಯವರನ್ನು ಕೊಟ್ಟು ನಡೆಸಿದ ವಿವಾಹದ ಸಂದರ್ಭದಲ್ಲಿ ಇಟ್ಟಿಗೆಗೂಡಿನ ಯುವಕರ ಸಂಘಕ್ಕೆ ಐದು ರೂ ಕಾಣಿಕೆ ಕೊಡಲಾಗಿದೆ

ನಗರಕ್ಕೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಆಗಮನ

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ನೂತನ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಇಂದು ಸಂಜೆ ೫ ೩೫ ಕ್ಕೆ ರೈಲಿನಲ್ಲಿ ಬೆಂಗಳೂರಿನಿಂದ ನಗರಕ್ಕೆ ಆಗಮಿಸುವರೆಂದೂ, ಅವರನ್ನು ಎದುರುಗೊಳ್ಳಲು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಹಿತೈಷಿಗಳು ರೈಲ್ವೆ ನಿಲ್ದಾಣಕ್ಕೆ ಆಗಮಿಸಬೇಕೆಂದೂ ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳು ಕೋರಿರುತ್ತಾರೆ

ಭಾಗವತ ಪುರಾಣದ ಮಂಗಳ

ನಗರದ ತೆಲುಗು ದೇವಾಂಗ ಸಂಘದ ಆಶ್ರಯದಲ್ಲಿ ಶ್ರೀ ಪಿ ನರಸಿಂಹಾಚಾರ್ಯರು ನಡೆಸುತ್ತಿದ್ದ ಶ್ರೀಮದ್ಭಾಗವತ ಕಥೆಯು ಕಳೆದ ಭಾನುವಾರ ಮುಕ್ತಾಯವಾಗಿ ಮಂಗಳೋತ್ಸವವು ಜರುಗಿತು ಶ್ರೀ ಓಂ ಎಸ್ ಮುರಳಿಯವರು ದೈವಭಕ್ತಿಯ ಮಹಿಮೆಯ ಬಗ್ಗೆ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಎ ಪಾಪಯ್ಯನವರು ವಂದನಾರ್ಪಣೆ ಮಾಡಿದರು

Edited, Printed and Published by A R Nagaraja at Sadhvi Press, D Subbarai Road, Mysore

ಶೃಂಗೇರಿ ಗುರುಗಳಿಗೆ ಪಾಳಯಂಕೋಟೆ ಪೌರಸಭೆಯ ಮಾನಪತ್ರ

ಶೃಂಗೇರಿ ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರಿಗೆ ಪಾಳಯಂಕೋಟೆಯ ಪೌರಸಭೆಯವರು ಕಳೆದ ಸೋಮವಾರ ಬಿನ್ನವತ್ತಳೆಯನ್ನು ಅರ್ಪಿಸಿದರು ಸ್ವಾಮಿಗಳವರು ಉತ್ತರವಿತ್ತು ಪುರಾತನ ಕಾಲದಲ್ಲಿ ದೊರೆಗಳೂ ಶ್ರೀಮಂತರೂ ಕೋಟಿಗಟ್ಟಲೆ ರೂಗಳನ್ನು ವೆಚ್ಚ ಮಾಡಿ ನಿರ್ಮಿಸಿರುವ ದೇವಾಲಯಗಳು ಇನ್ನೂ ಇವತ್ತಿಗೂ ಇರುವುದನ್ನು ನೋಡಿದರೆ ಪ್ರಜೆಗಳಿಗೆ ದೇವರಲ್ಲಿ ಭಕ್ತಿ ಎಷ್ಟಿದೆಯೆಂಬುದು ವ್ಯಕ್ತವಾಗುವುದೆಂದು ತಿಳಿಸಿದರು ದೇವಾಲಯಗಳು ಜನರ ನಿತ್ಯ ಸಂಸಾರದ ಕಷ್ಟಸುಖಗಳನ್ನು ಸ್ವಲ್ಪ ಕಾಲದವರೆಗಾದರೂ ದೂರವಿಡುವಂತೆ ಮಾಡಲು ಸಮರ್ಥವಾಗಿರುವುವೆಂದು ಶ್ರೀ ಶ್ರೀಗಳವರು ತಿಳಿಸಿದರು ದೇವರಲ್ಲಿ ಪೂರ್ಣ ಭಕ್ತಿಯನ್ನಿರಿಸಿ ಮನಸಾರ ಪ್ರಾರ್ಥನೆ ನಡೆಸಿದರೆ ಜನಸಾಮಾನ್ಯರ ಅಭೀಷ್ಟ ಸಿದ್ಧಿಯಾಗುವುದೆಂದೂ, ನಂಬಿಕೆಯಿಲ್ಲದೆ ಮಾಡುವ ಕೆಲಸಕ್ಕೆ ಫಲ ದೊರೆಯುವುದಿಲ್ಲವೆಂದೂ ನುಡಿದರು

ನಗರದಲ್ಲಿರುವ ಕಛೇರಿಗಳ ಸ್ಥಳ ಬದಲಾವಣೆ

ನಗರದಲ್ಲಿರುವ ೧೮ ಸರ್ಕಾರಿ ಕಛೇರಿಗಳನ್ನು ನಾಳಿದ್ದು ನರಸಿಂಹರಾಜ ಬುಲಿವಾರ್ಡ್ ಪ್ರದೇಶದಲ್ಲಿರುವ ಬಾಕಿ ಕ್ವಾರ್ಟರ್ಸಿಗೆ ವರ್ಗಾಯಿಸಲಾಗುವುದು ವರ್ಗಾವಣೆಯಾಗುವ ಕಛೇರಿಗಳಲ್ಲಿ ಸ್ಯಾನಿಟರಿ ಇಂಜನಿಯರ್ ಸ್ಯಾನಿಟರಿ ಸಬ್ ಡಿವಿಜನ್ ವ್ಯವಸಾಯ ಇಲಾಖೆ ಡೆಪ್ಯುಟಿ ಡೈರೆಕ್ಟರ್ ಸಂಖ್ಯಾ ಇನ್ಸ್‌ಪೆಕ್ಟರು ಕೈಗಾರಿಕೆ ಸೂಪರಿಂಟೆಂಡೆಂಟರು, ಗ್ರಾಮ ಕೈಗಾರಿಕಾ ಸೂಪರಿಂಟೆಂಡೆಂಟರು ಇನಾಂ ರದ್ದಿಯಾತಿ ಕಮೀಷನರ್, ಡಿ ಡಿ ಪಿ ಐ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಸ್ಥಳೀಯ ಆಂತರಿಕ ಕಛೇರಿಗಳು ಇವೆ ಈಗ ಅವು ಬಾಡಿಗೆ ಕಟ್ಟಡಗಳಲ್ಲಿವೆ ಬಾಡಿಗೆ ಕೊಡುವುದನ್ನು ತಪ್ಪಿಸಲು ಸರ್ಕಾರಕ್ಕೆ ಸೇರಿರುವ ಬಾಕಿ ಕ್ವಾರ್ಟರ್ಸಿಗೆ ಅವನ್ನು ವರ್ಗ ಮಾಡಲಾಗುವುದು

ಪೂನಾ ಬಳಿ ಡಕಾಯಿತರಿಂದ ೧ ಲಕ್ಷರೂ ಯಂತ್ರದ ಅಪಹಾರ

ಪೂನಾ ನಗರದ ಹೊರ ಪ್ರದೇಶದಲ್ಲಿ ರೇಡಿಯೊ ಉಪಕರಣಗಳನ್ನು ತಯಾರಿಸುವ ಕಾರ್ಖಾನೆಯಲ್ಲಿ ಸೋಮವಾರ ರಾತ್ರಿ ಡಕಾಯಿತರು ದರೋಡೆ ನಡೆಸಿ ೧ ಲಕ್ಷ ರೂ ಬೆಲೆಯ ಭಾರಿ ಯಂತ್ರಗಳನ್ನು ಸಾಗಿಸಿರುವುದಾಗಿ ವರದಿಯಾಗಿದೆ ಲೂಟಿಗೆ ಮುಂಚೆ ಕಾವಲುಗಾರನನ್ನು ಚೆನ್ನಾಗಿ ಹೊಡೆದು ಯಂತ್ರಗಳನ್ನು ಒಯ್ಯಲಾಗಿದೆ

ಎತ್ತಿನ ಗಾಡಿ ಮತ್ತು ಲಾರಿ ಡಿಕ್ಕಿಯಿಂದ ಮಹಿಳೆಗೆ ಗಾಯ

ನಂಜನಗೂಡಿನ ಕಪಿಲಾ ಹತ್ತಿ ಗಿರಣಿ ಬಳಿ ಎತ್ತಿನ ಗಾಡಿಯೊಂದಕ್ಕೂ ಕಾರಿಗೂ ಡಿಕ್ಕಿಯಾಗಿ ಗಾಡಿಯಲ್ಲಿದ್ದ ಭದ್ರಮ್ಮ ಎಂಬ ಹೆಂಗಸಿಗೆ ತೀವ್ರ ಗಾಯವಾಗಿ ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ ಕಾರಿನ ಡ್ರೈವರ್ ನಾಗರಾಜ್ ಎಂಬುವನನ್ನು ಬಂಧಿಸಿ ಜಾಮೀನು ಮೇಲೆ ಬಿಡಲಾಗಿದೆ

ಮೈಸೂರು ಪೇಟೆ ಧಾರಣೆ

ಕೊಯಮುತ್ತೂರು ಸಣ್ಣ	೪೨ ೦೦	
ರಸ್ತಬೂದಿ	೩೯ ೫೮	೪೦ ೦೦
ಕಡ್ಡಿ	೪೦ ೦೦	೪೧ ೫೦
ಕಾರ್ ಸಣ್ಣ	೩೬ ೭೫	೩೯ ೦೦
ಹಾಲುಬಿಳ್ಳ	೩೯ ೦೦	
ರಾಗಿ	೪೧ ೧೩	೪೬ ೬೩
ಕಡಲೆಕಾಯಿ	೧೬ ೧2	22 ೭೫
ಸುಟ್ಟೆಳ್ಳು	೪೧ ೬೨	೪೬ ೫೫
ಹೊಂಗೆಬೀಜ	೩೦ ೮೭	೩೯ ೫೦
ಎಳ್ಳು	೭೪ ೬೦	೮೦ ೬೩
ಹುರುಳಿ	೪೪ ೦೨	೪೪ ೩೫
ಹೆಸರು	೪೪ ೦	೫೪ ೮೭
ಹಲಸಂದೆ	೩೫ ೧೩	೬೧ ೦೦
ಉದ್ದು	೫೭ ೦೦	೬೪ ೧೩
ಅವರೆ	೪೦ ೩೫	೫೭ ೦೦
ತೊಗರಿ	೪೩ ೦೦	
ಧನಿಯ	೨೯ ೦೦	
ಸೂರ್ಯಕಾಂತಿಬೀಜ	೪೫ ೦೦	
ಹುಣಸೇಬೀಜ	೪ ೦೨	೬ ೪೭
ತೆಂಗಿನಕಾಯಿ	೭ ೪೪	
ಹುಣಸೆಹಣ್ಣು	೪ ೪೧	೪ ೫೬
ಹುಣಸೆಹಣ್ಣು	೩ ೮೭	೪ ೦೬
ಮೆಣಸಿನಕಾಯಿ	೧೧ ೫೦	೩೧ ೦೦
ತೆಂಗಿನಕಾಯಿ	೧೭೫ ೫೦	೨೭೭ ೦೦

ಚಾಮುಂಡೇಶ್ವರಿ ಟಾಕೀಸ್

14—6—57 ರಿಂದ ಜನಪ್ರಿಯ 2 ನೇ ವಾರ ಪ್ರತಿದಿನ 3 ಪ್ರದರ್ಶನಗಳು

ಕಾಮಧೇನು ಫಿಲಂಸ್ ರವರ ಕನ್ನಡ ಚಿತ್ರ ★ **ಸತೀ ನಳಾಯಿನಿ**

ಭೂಮಿಕೆ ಪಂಡರಿಬಾಯಿ ಮೈನಾವತಿ ಜಯಶ್ರೀ, ರಾಜಕುಮಾರ್ ನರಸಿಂಹರಾಜು ಸಿದ್ದಯ್ಯಸ್ವಾಮಿ ಮುಂತಾದವರು

[ನೃತ್ಯ ರೀಟಾ ರಂಭಾ ಮತ್ತು ಲಕ್ಷ್ಮೀರಾಜ್ಯಂ] [ನಾರಾಯಣ ಅಂಡ್ ಕಂಪೆನಿ ರಿಲೀಸ್]

Central Food Technological Research Institute

MYSORE

Application stating age, qualifications and experience supported by copies of testimonials are invited for the post of a Clerk-Overseer in Central Food Technological Research Institute, on Rs 60 3 81 EB-4-125-5-130 plus Dearness Allowance and House Rent Allowance as admissible to Central Government official

QUALIFICATIONS: The candidate should preferably have a Diploma in Civil Engineering with experience in executive field and in office work of the nature of maintaining records of an Engineering Sub-division He must also be capable of checking, passing Contractor s Bills and have knowledge of Typewriting

Higher starting salary may be offered to deserving candidate Applications shoud reach the undersigned at the Central Food Technological Research Institute, V V Mohalla Mysore on or before 29-6-1957 Candidates already in service should apply through their re pective offices

A W De SOUZA,
Administrative Officer

೧೮೨೬ ಮೈಲಿಯ ಬೈಸಿಕಲ್ ಪಂದ್ಯ

ಇಟಲಿಯ ಮಿಲಾನ್ ನಗರದಲ್ಲಿ ೧೮೨೬ ಮೈಲಿಯ ಸೈಕಲ್ ಸವಾರಿ ಪಂದ್ಯವು ನಡೆದು ಗಾಸ್ಟನ್ ನೆನ್ಸಿನಿ ಎಂಬಾತನು ಜಯ ಪಡೆದಿರುತ್ತಾನೆ ಮಿಲಾನ್ ನಗರದಿಂದ ಅಪೆನ್ನೈನ್ ಪರ್ವತವನ್ನು ದಾಟಿ ರಾಜಧಾನಿ ರೋಮಿಗೂ ನಂತರ ಆಲ್ಪ್ಸ್ ಪರ್ವತವನ್ನು ದಾಟಿ ಸ್ವಿಟ್ಸರ್‌ಲೆಂಡಿಗೂ ಹೋಗತಕ್ಕದ್ದೆಂದು ಗೊತ್ತುಪಡಿಸಲಾಗಿತ್ತು ಅದರಲ್ಲಿ ೧೨೯ ಮಂದಿ ಭಾಗವಹಿಸಿದ್ದು ೮೮ ಮಂದಿ ೧೮೨೬ ಮೈಲಿಯನ್ನು ದಾಟಿದರು ಫ್ರಾನ್ಸಿನ ಲೂಯಿಸ್ ಬೊಬೆ ಎಂಬಾತನು ಎರಡನೆಯವನಾಗಿರುತ್ತಾನೆ

ಉತ್ಸವ ನಡೆಯುತ್ತಿದ್ದಾಗ ತೇರಿಗೆ ಬೆಂಕಿ

ನಾಗಪಟ್ಟಣದಲ್ಲಿ ಕಳೆದ ಭಾನುವಾರ ಶ್ರೀ ತ್ಯಾಗರಾಜರ ಮೂರ್ತಿಯನ್ನು ಅಲ್ಲಿನ ನೀಲಾಯತಾಕ್ಷಿ ಅಮ್ಮನವರ ರಥದಲ್ಲಿಟ್ಟು ಉತ್ಸವದಲ್ಲಿ ಕೊಂಡೊಯ್ಯುತ್ತಿದ್ದಾಗ, ತೇರಿಗೆ ಬೆಂಕಿ ತಗುಲಿತೆಂದು ವರದಿಯಾಗಿದೆ ತೇರನ್ನು ಎಳೆಯುತ್ತಿದ್ದವರೂ ಭಕ್ತಾದಿಗಳೂ ಓಡಿ ಹೋದರು ತೇರಿನ ಮೇಲೆ ಕೆಲವು ಇದ್ದವರು ಅನಾಮತ್ತು ಧುಮುಕಿದರು ಅಗ್ನಿಶಾಮಕ ದಳದವರು ಬೆಂಕಿಯನ್ನು ಆರಿಸಿದರು ತೇರಿಗೆ ಕಟ್ಟಿದ್ದ ಹಗ್ಗಗಳ ಗೊಂಚಲು ಬಿದ್ದು ಇಬ್ಬರಿಗೆ ಗಾಯವಾಯಿತು ತೇರು ಒಂದು ಪಕ್ಕಕ್ಕೆ ತಿರುಗುತ್ತಿದ್ದಾಗ ವಿದ್ಯುಚ್ಛಕ್ತಿ ತಂತಿ ತಗಲಿ ಬೆಂಕಿಯು ಹತ್ತಿಕೊಂಡು ತೇರಿಗೆ ಹೋಲಿದ್ದ ಧ್ವಜ ಪತಾಕೆಗಳು ಉರಿದುವು

ಆರೋಗ್ಯ ಇನ್ಸ್‌ಪೆಕ್ಟರುಗಳ ಸಮ್ಮೇಳನ

ಸಂಸ್ಥಾನದ ಆರೋಗ್ಯ ಇನ್ಸ್‌ಪೆಕ್ಟರು ಗಳ ಸಮ್ಮೇಳನವು ಮೊನ್ನೆ ಬೆಂಗಳೂರಿನಲ್ಲಿ ಸೇರಿತ್ತು ಆರೋಗ್ಯ ಮಂತ್ರಿ ಶ್ರೀ ಆರ್ ಎಂ ಪಾಟೀಲರು ಅದರ ಆರಂಭೋತ್ಸವವನ್ನು ನೆರವೇರಿಸುತ್ತಾ ಅವರುಗಳ ಸೇವೆಯನ್ನು ಪ್ರಶಂಸಿಸಿ ಅವರುಗಳ ನ್ಯಾಯವಾದ ಬೇಡಿಕೆಗಳನ್ನು ಸಲ್ಲಿಸಲು ತನ್ನ ಕೈಲಾದುದನ್ನೆಲ್ಲಾ ಮಾಡುವುದಾಗಿ ಭರವಸೆಯಿತ್ತರು ಅಧ್ಯಕ್ಷತೆ ವಹಿಸಿದ್ದ ಆರೋಗ್ಯ ಇಲಾಖಾಧಿಕಾರಿಗಳ ಡಾ॥ ಶೇಷಗಿರಿರಾಯರು ಮಾತನಾಡಿ ಮಲೆನಾಡಿನಲ್ಲಿ ಆರೋಗ್ಯ ಇನ್ಸ್‌ಪೆಕ್ಟರುಗಳಿಗೆ ಹೆಚ್ಚು ಸೌಕರ್ಯ ಕಲ್ಪಿಸಲು ೩ ಲಕ್ಷ ರೂಗಳನ್ನು ಒದಗಿಸುವಂತೆ ಸರ್ಕಾರವನ್ನು ಪ್ರಾರ್ಥಿಸಿದರು ಅಗತ್ಯವಾದ ಸಂದರ್ಭಗಳಲ್ಲಿ ಖಬರಿ ಭೀತಿಯನ್ನೂ ತೋರದೆ ಮುಂದೆ ನುಗ್ಗಿ ಕೆಲಸ ಮಾಡುವಂತಹವರಿಗೆ ಪ್ರತ್ಯೇಕ ಭತ್ಯವನ್ನು ಕೊಡಬೇಕೆಂದೂ ಅವರು ಸಲಹೆ ಮಾಡಿದರು ಸಮ್ಮೇಳನದ ಪರವಾಗಿ ಇನ್ಸ್‌ಪೆಕ್ಟರುಗಳ ಸಂಘದ ಅಧ್ಯಕ್ಷ ಶ್ರೀ ಸೂರ್ಯನಾರಾಯಣರಾಯರು ಮಂತ್ರಿಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು

CITY TUTORIAL COLLEGE
Coaching for the Sept Exam:
B A & B Sc English & Kannada
INTER All parts & all Subjects
B K Satyabodhachar M A B T

GRAND ATTRACTION
Group & Flash
PHOTOGRAPHS
Role Films Developing Printing & Enlarging Undertaken
SRI KANTH STUDIO
Near Prabha Talkies
MYSORE
Your Card Size Photo Re One only

ನಮ್ಮ ಹತ್ತಿರ ಇರುವ
ರವೆಯ ರಬಿಂ
ಮತ್ತೆ ಯಾರಲ್ಲೂ ದೊರೆಯುವುದಿಲ್ಲ ಬೇಕಾದರೆ
ಒಂದಾವರ್ತಿ ಬಂದು ನೋಡಿರಿ
ಕೃಷ್ಣಾ ಸೋಪ್ ಡಿಪೋ
ಸಂತೆಪೇಟೆ ಮೈಸೂರು

ರಿಜಿಸ್ಟರ್ಡ್ ನಂ 792

ಸಂಸ್ಕೃತದ ಪತ್ರಿಕೆಗಳಲ್ಲೂ ಪ್ರಾಚೀನವಾದ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ಜನರಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 2 ನಯಾ ಪೈಸೆ

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಪುಟ : ೦೨] SADHVI : FRIDAY 14—6—1957 ಮೈಸೂರು : ಶುಕ್ರವಾರ ೧೪—೬—೧೯೫೭ : [ಸಂಚಿಕೆ : ೩೧೦

ಗೋವಾ ಗಡಂಗಿನ ಸಿಡಿತದಲ್ಲಿ ೪೦ ಸೈನಿಕರ ಮರಣ

ಆಯುರ್ವೇದ ವಸ್ತು ಪ್ರದರ್ಶನದ ಆರಂಭೋತ್ಸವ

ಮರಾಮತ್ತು ಮಂತ್ರಿ ವೀರಪ್ಪಗೌಡರ ಭಾಷಣ

ಬೆಂಗಳೂರು ೧೪

ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ೧೬ನೇ ಅಧಿವೇಶನದ ಅಂಗವಾಗಿ ಏರ್ಪಡಿಸಿದ್ದ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆನ್ನೆ ಮರಾಮತ್ತು ಮಂತ್ರಿ ಶ್ರೀ ಹೆಚ್. ಕೆ ವೀರಪ್ಪಗೌಡರು ನೆರವೇರಿಸಿದರು ಮೇಯರ್ ಶ್ರೀ ಜಿ ನ ಧಾಯಿ ದೇವಿದಾಸ್‌ರವರು ಅಧ್ಯಕ್ಷತೆ ವಹಿಸಿದ್ದರು ಸಚಿವರು ಮಾತನಾಡಿ ಅಗ್ಗವೂ ಮತ್ತು ಗುಣಕಾರಿಯೂ ಆದ ಔಷಧಿಗಳನ್ನು ಕೊಡುವ ಆಯುರ್ವೇದ ವೈದ್ಯ ಪದ್ಧತಿಯನ್ನು ಪ್ರಾಚೀನ ಕಾಲದ ವೈಭವದ ಮಟ್ಟಕ್ಕೆ ಪುನಃ ಏರಿಸುವುದು ಅಗತ್ಯವೆಂದು ತಿಳಿಸಿದರು ಪ್ರತಿಶತ ೮೦ ಮಂದಿ ಆಯುರ್ವೇದ ಔಷಧವನ್ನು ಅವಲಂಬಿಸಿರುವರೆಂದೂ ಅವುಗಳಿಗೆ ಉತ್ತೇಜನವಿತ್ತರೆ ನಮ್ಮ ನಾಡಿನ ಐಶ್ವರ್ಯವು ಬೆಳೆಯುವುದಲ್ಲದೆ ವಿದೇಶೀ ವಿನಿಮಯದ ಹೆಚ್ಚು ಉಳಿತಾಯಕ್ಕೆ ಅವಕಾಶವಾಗುವುದೆಂದೂ ಅವರು ಸೂಚಿಸಿದರು

ಧ್ವಜಾರೋಹಣ ಸಮಾರಂಭ

ನಂಜನಗೂಡಿನ ಭಿಷಗ್ರತ್ನ ಬಿ ವಿ ಪಂಡಿತರು ಬೆಳಿಗ್ಗೆ ರಾಷ್ಟ್ರ ಮತ್ತು ಆಯುರ್ವೇದ ಬಾವುಟಗಳನ್ನು ಯಾದವಗಿರಿನಗರದಲ್ಲಿ ಆರೋಹಣ ಮಾಡಿ, ಆಯುರ್ವೇದವು ಪುನಃ ತನ್ನ ಪೂರ್ವ ವೈಭವವನ್ನು ಪಡೆಯುವುದಕ್ಕೆ ಸಹಕಾರವಾಗಿ ವಿರೋಧ ಶಕ್ತಿಗಳು ಕೆಲಸ ಮಾಡುತ್ತಿರುವುವೆಂದು ತಿಳಿಸಿದರು ಆಯುರ್ವೇದ ಕಾಲೇಜುಗಳಲ್ಲಿ ಉತ್ತೀರ್ಣರಾದ ಅನೇಕ ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಇಂಗ್ಲಿಷ್ ಔಷಧಿಗಳನ್ನೂ, ಇಂಜೆಕ್ಷನ್ನನ್ನೂ ಬಳಸುತ್ತಿರುವರೆಂದೂ, ಹಾಗೆ ಮಾಡಬಾರದೆಂದೂ ಸೂಚಿಸಿದರು. ಆಯುರ್ವೇದ ವೈದ್ಯರಲ್ಲಿ ಒಗ್ಗಟ್ಟು ಮೂಡಬೇಕೆಂದೂ, ಆಯುರ್ವೇದವು ಪರಿಣಾಮಕಾರಿ ಪದ್ಧತಿಯೆಂಬುದರಲ್ಲಿ ನಂಬಿಕೆಯನ್ನು ದೃಢೀಕರಿಸಬೇಕೆಂದೂ ಅವರು ಹೇಳಿದರು

ಜಿಲ್ಲಾಧಿಕಾರಿಗಳ ವರ್ಗಾವರ್ಗಿಯಲ್ಲಿ ಬದಲಾವಣೆ

ಜಿಲ್ಲಾಧಿಕಾರಿಗಳ ವರ್ಗಾವರ್ಗಿ ಬಗ್ಗೆ ಈಚೆಗೆ ಮಾಡಲಾಗಿದ್ದ ಆಜ್ಞೆಯಲ್ಲಿ ಸಧ್ಯಕ್ಕೆ ಈ ರೀತಿ ಬದಲಾವಣೆಯಾಗಿದೆ — ಕಾರವಾರ ಜಿಲ್ಲೆಗೆ ವರ್ಗವಾಗಿದ್ದ ತುಮಕೂರು ಜಿಲ್ಲಾಧಿಕಾರಿಗಳಾದ ಶ್ರೀ ಕೆ ನರಸಿಂಹಯ್ಯಂಗಾರ್ಯರು ಮುಂದಿನ ತಿಳಿಸುವವರೆಗೆ ತುಮಕೂರಿನಲ್ಲೇ ಇರುವರು ತುಮಕೂರಿಗೆ ವರ್ಗವಾಗಿದ್ದ ಶ್ರೀ ಕೆ ಎ ವಾಲ್ಕೇಕರ್‌ರವರು ರಾಯಚೂರಿಗೆ ರಜದ ಮೇಲಿರುವ ಶ್ರೀ ಎಂ. ಎಸ್ ಶಂಕರರಾಯರು ಕಾರವಾರ ಜಿಲ್ಲೆಗೆ, ಕೊಡಗಿನ ಜಿಲ್ಲಾಧಿಕಾರಿ ಶ್ರೀ ಪಿ ಸುಬ್ಬಯ್ಯನವರು ಈಗ ಇದ್ದಲ್ಲೇ ಇರುವರು ಮತ್ತು ಬೆಂಗಳೂರು ಮಾರಾಟ ತೆರಿಗೆ ಅಧಿಕಾರಿಗಳಾದ ಶ್ರೀ ಬಿ ನಾರಾಯಣಸ್ವಾಮಿಗಳು ಮೈಸೂರು ಜಿಲ್ಲಾಧಿಕಾರಿಗಳಾಗಿ

ಮಾಜಿ ಮಂತ್ರಿಗಳಿಂದ ಚಿನ್ನದ ಅಕ್ರಮ ಮಾರಾಟ

ಅಪಾದನೆಗಳು ನಿರಾಧಾರವೆಂದು ಮುಖ್ಯ ಮಂತ್ರಿಗಳ ಹೇಳಿಕೆ

ಬೆಂಗಳೂರು ೧೪

ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಪ್ರಶ್ನೆಗಳಿಗೆ ಉತ್ತರವೀಯುತ್ತಾ, ಇಬ್ಬರು ಮಾಜಿ ಮಂತ್ರಿಗಳಿಂದ ಚಿನ್ನದ ಅಕ್ರಮ ವ್ಯಾಪಾರವಾಯಿತೆಂದು ಪತ್ರಿಕೆಗಳಲ್ಲಿ ಬಂದಿದ್ದ ವರದಿಯನ್ನು ನಿರಾಧಾರವೆಂದು ತಿಳಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ವಿವರಗಳನ್ನು ತಿಳಿಸುವುದಕ್ಕಾಗುವುದಿಲ್ಲವೆಂದು ಹೇಳಿದರು

ಪ್ರಶ್ನೆಗಳಿಗೆ ಉತ್ತರವೀಯುವಂತೆ ಸಚಿವರಿಗೆ ಸೂಚಿಸಬೇಕೆಂದು ಸದಸ್ಯರು ಒತ್ತಾಯಪಡಿಸಿದಾಗ, ಅಧ್ಯಕ್ಷರು ಮಾತನಾಡಿ ರಹಸ್ಯವಾದ ವಿಷಯಗಳೆಂದು ಮಂತ್ರಿಗಳು ಭಾವಿಸುವ ವಿಚಾರವನ್ನು ಹೊರಗೆಡಹಬೇಕೆಂದು ತಾವು ಕಡ್ಡಾಯಪಡಿಸುವುದಕ್ಕಾಗುವುದಿಲ್ಲವೆಂದು ಸೂಚಿಸಿದರು

ಶ್ರೀ ಹೆಚ್ ವಿ ಕೌಜಲಗಿಯವರ ಪ್ರಶ್ನೆಗೆ ಮುಖ್ಯ ಮಂತ್ರಿಗಳು ಲಿಖಿತ ಉತ್ತರವಿತ್ತು ದಾವಣಗೆರೆ ಮತ್ತು ಮದ್ರಾಸ್‌ಗಳಲ್ಲಿ ಆರು ತಿಂಗಳಿಂದ ಚಿನ್ನದ ಅಕ್ರಮ ಮಾರಾಟ ನಡೆಯುತ್ತಿತ್ತೆಂಬುದು ನಿಜವಲ್ಲವೆಂದು ಹೇಳಿದರು ಮಂತ್ರಿಗಳಿಗೂ ಕಂಪೆನಿಗೂ ವೈಯಕ್ತಿಕ ಪತ್ರ ವ್ಯವಹಾರ ನಡೆಯಿತೇ ಎಂದು ಕೇಳಲಾಗಿ ಅಪಾದನೆ ನಿರಾಧಾರವೆಂದು ಪುನಃ ಮುಖ್ಯ ಮಂತ್ರಿಗಳು ತಿಳಿಸಿದರು ತನಿಖೆ ನಡೆಸಿದ ಬಗೆಯನ್ನು ತಿಳಿಸಲಿಕ್ಕಾಗುವುದಿಲ್ಲವೆಂದೂ ಅವರು ನುಡಿದರು ಲಂಚ ನಿರೋಧ ಖಾತೆಗೆ ಅದನ್ನು ಒಪ್ಪಿಸಲಾಗಿತ್ತೆಂಬುದನ್ನು ಅವರು ಹೇಳಲಿಲ್ಲ

ವಿಶ್ವಕರ್ನಾಟಕ ಮತ್ತು ಪ್ರಪಂಚ ಪತ್ರಿಕೆಗಳಲ್ಲಿ ಅಪಾದನೆಗಳನ್ನು ಪ್ರಕಟಿಸಲಾಗಿತ್ತೆಂದೂ ಅವುಗಳ ಮೇಲೆ ಕ್ರಮ ಕೈಗೊಳ್ಳಲು ಪರಿಶೀಲಿಸಲಾಗುತ್ತಿರುವುದೆಂದೂ ತಿಳಿಸಲಾಯಿತು ಪ್ರಶ್ನೆಯು ಅಪ್ರಸ್ತುತವೇ ಎಂಬುದನ್ನೂ ಸಾರ್ವಜನಿಕ ಹಿತದೃಷ್ಟಿಯಿಂದ ತಿಳಿಸಲಾಗದೆಂದೂ ಉತ್ತರವೀಯಲಾಯಿತು

ಬಿ ಇಡಿ ಪರೀಕ್ಷೆ ಮುಂದೆ ಹಾಕಲ್ಪಟ್ಟಿದೆ

ಇದೇ ೧೭ನೇ ತಾರೀಕು ನಡೆಯಬೇಕಾಗಿದ್ದ ಬಿ ಇಡಿ ಪ್ರಾಕ್ಟಿಕಲ್ ಪರೀಕ್ಷೆಗಳನ್ನು ಮುಂದೆ ಹಾಕಲಾಗಿದೆ ಇನ್‌ಫ್ಲುಯೆಂಜಾ ನಿಮಿತ್ತ ಶಾಲೆಗಳನ್ನು ಮುಚ್ಚಲಾಗಿರುವುದೇ ಕಾರಣ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಮುಖವೀಣೆ ೭-೧೫ ಮತ್ತು ೮-೧೫ ಕೆ ಎಸ್ ಇಂದಿರಾ-ದೇವರನಾಮ ೭-೩೦ ಜಾಗೃತ ಮುತ್ತಯ್ಯ ೧೨ ಆರ್ ಜಲ ಜಾಕ್ಸನ್-ಸಂಗೀತ ೧೨-೩೦ ಬಾಲ ಜಗತ್ ೧-೩೦ ರಿಕಾರ್ಡು ೧-೫೦ ಮುಖವೀಣೆ ಸಂಜೆ ೬-೧೦ ವಚನ ಗಾನ ೭-೩೦ ಪ್ರಪಂಚ ವಾರ್ತೆ ಸಮೀಕ್ಷೆ ಪಟ್ಟಾಭಿರಾಮಯ್ಯನವರಿಂದ ಟಿ ಆರ್ ಜಲಜಾಕ್ಷಮ್ಮ-ವಾದ್ಯ ವೃಂದದೊಡನೆ ಸಂಗೀತ ೮-೩೦ ರೇಡಿಯೋ ನ್ಯೂಸ್ ರೀಲ್ ೯-೧೫ ಕಥಾವಳಿ ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ದೆಹಲಿ ರಿಲೆ

ಗೋವಾ ಮದ್ದು ಗಡಂಗಿನಲ್ಲಿ ಸಿಡಿತದಿಂದ ೪೦ ಸೈನಿಕರ ಮರಣ

ಗೋವಾದಲ್ಲಿ ಫಾಂಡಾ ಮಿಲಿಟರಿ ಶಿಬಿರದ ಮದ್ದು ಗುಂಡು ಗಡಂಗಿನಲ್ಲಿ ಭಾರಿ ಸಿಡಿತವುಂಟಾಗಿ ೪೦ ಜನ ಸೈನಿಕರು ಮೃತಪಟ್ಟಿರುವುದಾಗಿ ವರದಿಯಾಗಿದೆ ಅದರ ಕಾರಣವೇನೆಂಬುದು ತಿಳಿದು ಬಂದಿಲ್ಲ ಅಲ್ಲಿ ಬಲವಾದ ಸೈನಿಕ ಕಾವಲನ್ನು ಹಾಕಲಾಗಿದೆ

ಕೇಂದ್ರ ಮಂತ್ರಿಗಳ ವೇತನದಲ್ಲಿ ಶೇಕಡ ೧೦ ರಷ್ಟು ಖೋತಾ

ಸರ್ಕಾರದ ಹಣದ ಮಿತವ್ಯಯದ ಉದ್ದೇಶದಿಂದ ಕೇಂದ್ರ ಸರ್ಕಾರದ ಮಂತ್ರಿಗಳು ಮತ್ತು ಉಪ ಮಂತ್ರಿಗಳು ತಮ್ಮ ವೇತನ ಮತ್ತು ಭತ್ಯದಲ್ಲಿ ಶೇಕಡ ೧೦ರಷ್ಟನ್ನು ತಾವಾಗಿಯೇ ಕಡಿಮೆ ಮಾಡಿಕೊಂಡಿರುವರೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ ಇದರಿಂದ ವರ್ಷಕ್ಕೆ ೧ ೧೨ ೦೦೦ ರೂ ಉಳಿಯುವುದು ನೆಹರೂ ಮತ್ತು ಇತರ ಮಂತ್ರಿಗಳಿಗೆ ಈಗ ೨ ೨೫೦ ರೂ ಸಂಬಳ ಬರುತ್ತಿದೆ ನೆಹರೂರವರು ಒಟ್ಟು ಉಳಿದವರು ೫೦೦ ರೂ ಒಟ್ಟಿನ ಭತ್ಯವನ್ನು ಪಡೆಯುತ್ತಿರುವರು ನೆಹರೂರವರ ಅಧಿಕೃತ ಅತಿಥಿಗಳ ವೆಚ್ಚವನ್ನು ಸರ್ಕಾರದವರು ವಹಿಸುವರು ೧೧೪ ಉಪ ಮಂತ್ರಿಗಳು ೧,೭೫೦ ರೂ ಸಂಬಳ ಪಡೆಯುತ್ತಿರುವರು

ಅಮೆರಿಕಾ ಹಾರಿಸಿದ ದೂರಗಾಮಿ ಕ್ಷಿಪಣಿ ಅಸ್ತ್ರದ ಸಿಡಿತ

೫,೦೦೦ ಮೈಲಿ ದೂರದವರೆಗೂ ಹೋಗಬಲ್ಲ ಖಂಡಾಂತರ ಕ್ಷಿಪಣಿ ಅಸ್ತ್ರವೊಂದನ್ನು ಅಮೆರಿಕದವರು ಮೊನ್ನೆ ಹಾರಿಸಿದಾಗ ಅದು ತಕ್ಷಣವೇ ಸಿಡಿಯಿತೆಂದು ತಿಳಿದುಬಂದಿದೆ ಇದು ಅವರ ಮೊದಲನೇ ಅಸ್ತ್ರವೆಂದು ಹೇಳಲಾಗಿದೆ ಅದು ಎಲ್ಲಿ ಬಿದ್ದಿತೆಂಬುದನ್ನು ವ್ಯಕ್ತಪಡಿಸಿಲ್ಲ ಅದನ್ನು ಬಿಡುವುದರಲ್ಲಿ ದೋಷವಿರಬೇಕೆಂದು ಪ್ರವೀಣರು ಭಾವಿಸಿರುವರು

ಪಾಕಿಸ್ತಾನದಲ್ಲಿ ಗೂಢಚರ್ಯೆ ನಡೆಸಿದವನಿಗೆ ೧೦ ವರ್ಷ ಸಜಾ

ಭಾರತಕ್ಕಾಗಿ ಗೂಢಚರ್ಯೆ ನಡೆಸುತ್ತಿದ್ದನೆಂದು ಹೇಳಲಾದ ಏಜಾಸ್ ಹುಸೇನ್‌ಷಾ ಎಂಬುವನಿಗೆ ಕರಾಚಿ ನ್ಯಾಯಾಧೀಶರು ೧೦ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ ಅವನನ್ನು ೧೯೫೪ ರಲ್ಲಿ ಬಂಧಿಸಲಾಗಿತ್ತು ಅವನ ಮನೆಯಲ್ಲಿ ಹಲವು ದಾಖಲೆಗಳೂ ಸಿಕ್ಕಿದುವೆಂದು ಹೇಳಲಾಗಿದೆ ಇದುವರೆಗೂ ಅವನು ಜೈಲಿನಲ್ಲಿದ್ದನು

"ಫ್ಲೂ" ಗಾಗಿ ಶಾಲೆಗಳ ಬಂದ್

ಬೆಂಗಳೂರಿನಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯು ಅಪಾಯಕರ ಪ್ರಮಾಣವನ್ನು ಮುಟ್ಟುತ್ತಿರುವುದರಿಂದ ಅಲ್ಲಿನ ಎಲ್ಲಾ ವಿದ್ಯಾ ಸಂಸ್ಥೆಗಳನ್ನೂ ಈ ಕೂಡಲೆ ಮುಚ್ಚಲಾಗುವುದು ಅಲ್ಲಿ ಇದುವರೆಗೆ ೫೯೬೬ ಜನರಿಗೆ ವ್ಯಾಧಿ ತಗಲಿದೆ ಶಾಲೆಗಳನ್ನು ೧೦ ದಿನ ಕಾಲ ಮುಚ್ಚುವ ಬಗ್ಗೆ ವಿದ್ಯಾಧಿಕಾರಿಗಳು ಶಾಲಾಧಿಕಾರಿಗಳಿಗೆ ಸೂಚನೆ ಕೊಡುತ್ತಿರುವರು

ರಾಷ್ಟ್ರದ ಐಕ್ಯತೆಯ ಸಾಧನೆಯು ಈಗ ಅತ್ಯಗತ್ಯ

ಶಾಸನ ಸಭಾ ಸದಸ್ಯರಿಗೆ ಲೋಕಸಭಾಧ್ಯಕ್ಷರ ಹಿತೋಕ್ತಿ

ಬೆಂಗಳೂರು ೧೪

ಲೋಕ ಸಭಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್ಯರು ನೆನ್ನೆ ಇಲ್ಲಿ ವಿಧಾನ ಸಭಾ ಮತ್ತು ಪರಿಷತ್ತಿನ ಸದಸ್ಯರುಗಳನ್ನು ಉದ್ದೇಶಿಸಿ ಭಾಷಣ ಮಾಡಿ ರಾಷ್ಟ್ರೀಯ ಐಕ್ಯತೆಯು ಈಗ ಅತ್ಯಗತ್ಯವೆಂದೂ, ಅದರ ಸಾಧನೆಯಲ್ಲಿ ಶಾಸನ ಸಭಾಸದಸ್ಯರು ಸರಿಯಾದ ಪಾತ್ರ ವಹಿಸಬೇಕೆಂದೂ ತಿಳಿಸಿದರು ಪ್ರಾಂತೀಯ ಭಾವನೆಯನ್ನು ಬಿಡಬೇಕೆಂದೂ ಸೂಚಿಸಿದರು ಶಾಸನಾಂಗದಲ್ಲಿ ಪ್ರಶ್ನೆಗಳು ಇರುವುದು ಅವಶ್ಯಕವೆಂದೂ ಅವರು ಅಭಿಪ್ರಾಯಪಟ್ಟರು

ಬೆಂಗಳೂರಿನಲ್ಲೂ ವರ್ಷಕ್ಕೊಮ್ಮೆ ಪಾರ್ಲಿಮೆಂಟ್ ಅಧಿವೇಶನವನ್ನು ನಡೆಸುವುದು ಸಾಧ್ಯವೆಂದು ಅವರು ನುಡಿದರು ಬ್ರಿಟಿಷರ ಕಾಲದಲ್ಲಿ ಸಿಮ್ಲಾ ನಗರದಲ್ಲಿ ನಡೆಯುತ್ತಿದ್ದ ಕೇಂದ್ರ ಶಾಸನಸಭೆಗಳಂತೆ ಬೆಂಗಳೂರಿನಲ್ಲಿ ಪಾರ್ಲಿಮೆಂಟನ್ನು ನಡೆಸಬಹುದೆಂದು ಅವರು ಹೇಳಿದರು

ನಗರದಲ್ಲೂ ಶಾಲೆಗಳನ್ನು ಮುಚ್ಚುವ ಸಂಭವ

ಮೈಸೂರು ೧೪

ಇನ್‌ಫ್ಲುಯೆಂಜಾ ನಿವಾರಣಾ ಕ್ರಮದ ಮುಂಜಾಗ್ರತೆಗಾಗಿ ಬೆಂಗಳೂರಿನಂತೆ ನಗರದಲ್ಲೂ ಶಾಲೆಗಳನ್ನು ಇದೇ ೧೭ನೇ ತಾರೀಕು ಸೋಮವಾರದಿಂದ ಮುಚ್ಚಲಾಗುವುದೆಂದು ನಿರೀಕ್ಷಿಸಲಾಗಿದೆ ಪೌರಸಭಾಧಿಕಾರಿಗಳು ಈ ಬಗ್ಗೆ ವಿದ್ಯಾ ಇಲಾಖಾಧಿಕಾರಿಗಳಿಗೆ ಸಲಹೆ ಇತ್ತಿದ್ದಾರೆ

ಸಿನಿಮಾಗಳ ಬೆಳಗಿನ ಮತ್ತು ಮ್ಯಾಟಿನಿ ಪ್ರದರ್ಶನಗಳನ್ನು ನಿಲ್ಲಿಸಿ ಮೊದಲನೇ ಆಟವನ್ನು ಸಂಜೆ ೭ಕ್ಕೆ ಆರಂಭಿಸುವಂತೆಯೂ ಸಲಹೆ ಕೊಡಲಾಗಿದೆ

ನಗರದಲ್ಲಿ ಹೊಸದಾಗಿ ೨೩ ಮಂದಿಗೆ ಫ್ಲೂ

ಈ ದಿನ ಮಧ್ಯಾಹ್ನದ ವರೆಗೆ ನಗರದಲ್ಲಿ ಹೊಸದಾಗಿ ೨೩ ಜನರಿಗೆ ಇನ್‌ಫ್ಲುಯೆಂಜಾ ತಗಲಿದೆ ಒಟ್ಟು ೧೭೫೮ ರ ಪೈಕಿ ೧೨೦ ಜನರು ಗುಣ ಹೊಂದಿದ್ದಾರೆ ೫೫ ಜನರಿಗೆ ಚಿಕಿತ್ಸೆ ಆಗುತ್ತಿದೆ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಸ್ವಾಗತ

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಶ್ರೀ ಎಸ್ ಚನ್ನಯ್ಯನವರು ಇಲ್ಲಿಗೆ ಬೆಂಗಳೂರಿನಿಂದ ನೆನ್ನೆ ರೈಲಿನಲ್ಲಿ ಆಗಮಿಸಿದರು ಅವರನ್ನು ನಿಲ್ದಾಣದಲ್ಲಿ ಹಲವಾರು ಕಾಂಗ್ರೆಸ್ ಭಕ್ತರೂ ಮತ್ತು ಮಿತ್ರರೂ ಸ್ವಾಗತಿಸಿ ಪುಷ್ಪ ಹಾರಗಳನ್ನು ಅರ್ಪಿಸಿ ಗೌರವವನ್ನು ಸೂಚಿಸಿದರು

ಫಿಲಿಪ್ಪೈನ್ಸಿನಲ್ಲಿ ಭೂಕಂಪ

ಫಿಲಿಪ್ಪೈನ್ಸ್ ದ್ವೀಪಗಳ ಪೈಕಿ ಮುಖ್ಯವಾದ ಲೂಜಾನಿನ ಉತ್ತರ ಮತ್ತು ಮಧ್ಯ ಭಾಗದಲ್ಲಿ ಮೊನ್ನೆ ಉಗ್ರವಾದ ಭೂಕಂಪವಾಗಿ ಅನೇಕ ಕಟ್ಟಡಗಳು, ಚರ್ಚುಗಳು ಮತ್ತು ಗೃಹಗಳಿಗೆ ಭಾರಿ ನಷ್ಟವಾಗಿದೆ ಮನಿಲಾ ನಗರಕ್ಕೆ ಸಮೀಪದ ಕೆಲವು ಕಡೆ ಹಾನಿ ಸಂಭವಿಸಿದೆ

ರಾಷ್ಟ್ರಗಳ ಸ್ವಾತಂತ್ರ್ಯದ ಮೇಲ ಅಮೆರಿಕದ ಕೈವಾಡ

ಚೀಣದ ನಾಯಕರಿಂದ ಖಂಡನೆ

ಕೊಲಂಬೊ ನಗರದಲ್ಲಿ ಸೇರಿರುವ ವಿಶ್ವದ ಶಾಂತಿ ಮಂಡಲಿ ಸಭೆಯಲ್ಲಿ ಮೊನ್ನೆ ಚೀಣದ ಶಲಹಾ ಸಮಿತಿಯ ಉಪಾಧ್ಯಕ್ಷರಾದ ಕುವೋ ಮೋ ಜೂರವರು ಮಾತನಾಡಿ ಅಮೆರಿಕವು ಹೊಸ ಮಾದರಿಯ ವಸಾಹತು ಹಿಗೆ ಆರಂಭಿಸಿರುವುದಾಗಿ ತಿಳಿಸಿದರು ಆ ರಾಷ್ಟ್ರವು ಸಹಾಯ ನೆಪದಲ್ಲಿ ರಾಜಕೀಯ ಮತ್ತು ಮಿಲಿಟರಿ ಷರತ್ತುಗಳಿಂದ ಕೂಡಿರುವ ಡಾಲರ್ ನೆರವನ್ನು ನೀಡುತ್ತಿರುವುದೆಂದೂ ಹೆಚ್ಚೆಚ್ಚು ಮಿಲ್ಲೂ ಇತರ ರಾಷ್ಟ್ರಗಳ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯದ ಮೇಲೆ ಕೈವಾಡ ನಡೆಸುತ್ತಿರುವುದೆಂದೂ ಅವರು ಆಪಾದಿಸಿರುತ್ತಾರೆ

ಹಿಂದಿ ಪರೀಕ್ಷೆಗಳಿಗೆ ಪ್ರವೇಶ ಪತ್ರಗಳು

ಬರುವ ಆಗಸ್ಟ್ ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪ್ರವೇಶಿಕ ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಪ್ರವೇಶ ಪತ್ರಗಳನ್ನು ಕಳುಹಿಸಲು ಇದೇ ತಿಂಗಳು ೨೨ ನೇ ತಾರೀಖು ಶನಿವಾರ ಕೊನೆಯ ದಿನವಾಗಿರುತ್ತದೆ ವಿಳಂಬ ಶುಲ್ಕದೊಡನೆ ೨೯ ರವರೆಗೆ ಸ್ವೀಕರಿಸಲಾಗುವುದು

ಷೇರುಗಳು ಬೇಕೆ ?

ಷೇರುಗಳನ್ನು ಮಾರುವವರು ಮತ್ತು ಕೊಳ್ಳುವವರು ಈ ಕೆಳ ಕಂಡವರಲ್ಲಿ ವಿಚಾರಿಸಿ —

ಎಂ ಶ್ರೀಕಂಠಯ್ಯ, ಷೇರ್ ಬ್ರೋಕರ್

73 ಕಾಳಮ್ಮನ ಗುಡಿ ಬೀದಿ ಮೈಸೂರು

ಶ್ರೀ ಗುರುಮಲ್ಲೇಶ್ವರಯನಮಃ

ದೇವನೂರು ಮಠದ ಆಡಳಿತದ ವ್ಯವಸ್ಥೆಯು ಪ್ರಸಿದ್ಧ ಪತ್ರಿಕೆ

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟು O S 33 of 41-42 ರಲ್ಲಿ ದೇವನೂರು ಮಠದ ತಡೆಯಾಜ್ಞೆ ಸಂಬಂಧ ಗುರುಸ್ವಾಮಿಯವರ ಮತ್ತು ನಾಲ್ಕನೇ ಪ್ರತಿವಾದಿಗಳ ಕುರುಸ್ವಾಮಿ ತ್ತು ಬಸವರಾಜುಸ್ವಾಮಿಯವರು ಕೊಟ್ಟಿದ್ದ ಅರ್ಜಿ ಮೇಲೆ ಹಾಲಿ ಮ್ಯಾನೇಜರ್ ಶ್ರೀ ಚಿ ಸಿದ್ದಯ್ಯನವರು ಆಡಳಿತ ನಿರ್ವಹಿಸಕೂಡದೆಂದೂ, ಮೊದಲನೇ ಮತ್ತು 4ನೇ ಪ್ರತಿವಾದಿಗಳು ಹಂಗಾಮಿಯಾಗಿ ಮ್ಯಾನೇಜರ್ ಗಳೆಂದಿರತಕ್ಕದ್ದೆಂದೂ ಆಗಿದ್ದ ಆಜ್ಞೆಯನ್ನು ಘನವುಳ್ಳ ಕೋರ್ಟಿನವರು ಜಾರಿಗೆ ಕೆ ಪಡಿಸಿ ಅಮಾನತ್ತಾಗಿ ಇಡತಕ್ಕದ್ದೆಂದು 12 6 ೫ ರಲ್ಲಿ ಆಜ್ಞೆ ಮಾಡಿರುತ್ತಾರೆ

ಪಟೇಲ್ ಬಸಪ್ಪ,
ಪಿ ಮಾದಪ್ಪ,
ಚಿಕ್ಕನಂಜಪ್ಪ,
1, 3 ಮತ್ತು 6ನೇ ವಾದಿಗಳು

ದೇವನೂರು ಮಠ
12 6 57

ಕೇರಳದಲ್ಲಿ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ಹೆಚ್ಚು ಸಂಬಳ

ಕೇರಳ ಸರ್ಕಾರದವರು ಅಲ್ಲಿನ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಬಳವನ್ನು ಕಳೆದ ಏಪ್ರಿಲ್ಲಿನಿಂದ ಹೆಚ್ಚಿಸಿರುತ್ತಾರೆ ಸರ್ಕಾರಿ, ಜಿಲ್ಲಾ ಬೋರ್ಡು, ಪೌರಸಭೆ ಮತ್ತು ಖಾಸಗೀ ಶಾಲಾ ಅಧ್ಯಾಪಕರುಗಳಿಗೆ ಅದು ಅನ್ವಯಿಸುವುದು ಆ ದರ ಪ್ರಕಾರ ಪ್ರಾಥಮಿಕ ಶಾಲಾ ಅಧ್ಯಾಪಕರಿಗಳ ೪೦ ರಿಂದ ೧೨೦ ರೂ ವರೆಗಿನ ಗ್ರೇಡು ಸಿಗುವುದು ಸಾಜ ನಿರುವಂತೆ ಶ -ಕೊಚ್ಚಿಯಲ್ಲಿ ತರ್ಬೇತಿ ಇರುವ ಸ್ಕೇಲು ಇತ್ತು ಮಲಬಾರಿನಲ್ಲಿ ಬೇರೆ ಸಂಬಳದ ದರ್ಜೆಯನ್ನು ಗೊತ್ತುಪಡಿಸಲಾಗಿದೆ

ಪಾರ್ಶ್ವನಾಥ ಪುರಾಣದ ಪ್ರಕಟಣಾ ಸಮಾರಂಭ

ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಶ್ರೀ ಶಾಂತೀಶ್ವರಸ್ವಾಮಿ ದೇವಾಲಯದಲ್ಲಿರುವ ಜೈನ ಸಾಹಿತ್ಯ ಪ್ರಚಾರ ಸಂಘದವರು ಪ್ರಚುರಪಡಿಸಿರುವ ಪಾರ್ಶ್ವನಾಥ ಪುರಾಣ ಸಮಾರಂಭವು ನಾಳಿದ್ದು ಸಂಜೆ ೬ ಗಂಟೆಗೆ ಶಾಂತೀಶ್ವರಸ್ವಾಮಿ ಚೈತ್ಯಾಲಯದಲ್ಲಿ ನಡೆಯುವುದು ಶ್ರೀ ಕೆ ಬಸವರಾಜೆ ಅರಸರು ಅಧ್ಯಕ್ಷತೆ ವಹಿಸುವರು ಪ್ರೊ। ಶ್ರೀ ನಂ ಶ್ರೀಕಂಠಯ್ಯನವರ ಪಾರ್ಶ್ವನಾಥಸ್ವಾಮಿ ಯವರ ವಿಷಯವಾಗಿ ಭಾಷಣ ಮಾಡುವರು

SARADAVILAS COLLEGE
Mysore

INTER TUTORIAL SECTION

Eng , S L , & P C M are taught

Highly qualified and experienced staff

ಶ್ರೀ ಕನ್ಯಕಾಪರಮೇಶ್ವರೀ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್., ಮೈಸೂರು

ಪ್ರಕಟಣೆ

ರಜತ ಮಹೋತ್ಸವದ ಅಂಗವಾಗಿ ಹೊರಡಿಸಿರುವ ಶೇ ೩॥ ರೂ ಚಕ್ರಬಡ್ಡಿ ಬರುವ 5 ವರ್ಷದ ಠೇವಣಿಯ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳಿರಿ!

ಈಗ ಠೇವು ಮಾಡುವ ಪ್ರತಿ 80 ರೂ ಗಳಿಗೂ ೫ ವರ್ಷಗಳ ನಂತರ ೧00 ರೂಗಳನ್ನು ಕೊಡಲಾಗುವುದು ಮಧ್ಯದಲ್ಲೇ ಹಣ ಬೇಕಾದಲ್ಲಿ ಸೊಸೈಟಿಯ ನಿಯಮಗಳ ರೀತ್ಯಾ ಬಡ್ಡಿಯೊಡನೆ ಪಡೆಯಬಹುದು

ಪ್ರಾರಂಭದ ತಾರೀಖು 14 6-57

ಈ ಯೋಜನೆಯು ಮೂರು ತಿಂಗಳ ಕಾಲ ಜಾರಿಯಲ್ಲಿರುವುದು ಅಥವಾ ಸೂಚನೆ ಇಲ್ಲದೆಯೇ ಅವಧಿಗೆ ಮೊದಲೇ ನಿಲ್ಲಿಸಲ್ಪಡಬಹುದು

(ಸಹಿ) ಪಿ ಗೋಪಾಲಕೃಷ್ಣ ಶೆಟ್ಟಿ, ಅಧ್ಯಕ್ಷರು

ವಿವಾಹ ಮಹೋತ್ಸವಗಳು

ನಗರದ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಬಿ ಎಸ್ ಸೂರ್ಯನಾರಾಯಣರಾಯರು ತಮ್ಮ ಕುಮಾರಿ ಸೌ। ಸುಮಿತ್ರಳನ್ನು ಡೆಪ್ಯುಟಿ ಪೋಸ್ಟ್ ಮಾಸ್ಟರ್ ಶ್ರೀ ವೈ ರಾಮಣ್ಣನವರ ಕುಮಾರ ಶ್ರೀ ವೈ ಯಸ್ ಛಾಯಾಪತಿರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ಅಲೂರು ಜಿಲ್ಲಾ ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಬಿ ಪಿ ನಂಜುಂಡಯ್ಯನವರು ತಮ್ಮ ಕುಮಾರಿ ಸೌ। ಶಾಂತಳನ್ನು ಬೆಂಗಳೂರು ಶ್ರೀ ಕೊಡಿಗೆಹಳ್ಳಿ ನಂಜುಂಡಯ್ಯನವರ ಪುತ್ರರಾದ ಶ್ರೀ ಕೆ ಎನ್ ರಾಮಚಂದ್ರರವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು

ಕಸಬಾ ಶ್ಯಾನುಭೋಗರಾದ ಶ್ರೀ ಎನ್ ಅನಂತರಾಮಯ್ಯನವರು ತಮ್ಮ ಕುಮಾರರಾದ ಶ್ರೀ ಎ ನರಸಿಂಹಮೂರ್ತಿಯವರಿಗೆ ಮದ್ದೂರು ತಾಲ್ಲೂಕು ಬನ್ನಹಳ್ಳಿ ಶ್ಯಾನುಭೋಗರಾದ ಶ್ರೀ ಬಿ ವಿ ವೆಂಕಟಾಚಲಯ್ಯನವರ ಕುಮಾರಿ ಸೌ। ಸುಲೋಚನೆಯನ್ನು ತಂದುಕೊಂಡು ನೆನ್ನೆ ಬನ್ನಹಳ್ಳಿಯಲ್ಲಿ ವಿವಾಹವನ್ನು ಬೆಳೆಸಿದರು

ಮೈಸೂರು ಪೇಟೆ ಧಾರಣೆ

ಬಂಗಾರ ಮತ್ತು

ಕೊಯಮತ್ತೂರು ಸಣ್ಣ	೩೦ ೭೫	೩೬ ೦೦
ರತ್ನಚೂಡಿ	೩೦ ೦೦	
ಕಡ್ಡಿ	೨೯ ೦೦	೩೯ ೬೨
ಕಾರ್ ಸಣ್ಣ	೨೨ ೭೫	೨೮ ೭೫
ರಾಗಿ	೩೩ ೬೨	೩೩ ೦೦
ಜೋಳ	೩೯ ೭೫	
ಕಡಲೆಕಾಯಿ	೧೯ ೫೦	೨೮ ೭೫
ಹುಚ್ಚೆಳ್ಳು	೩೩ ೦೦	
ಹೊಂಗೆಬೀಜ	೨೨ ೨೭	
ಎಳ್ಳು	೭೩ ೦೦	
ತೊಗರಿ	೩೭ ೭೫	೩೯ ೩೬
ಹೆಸರು	೫೭ ೩೭	
ಉದ್ದು	೬೬ ೦೦	೬೬ ೫೦
ಹುಣಸೆಹಣ್ಣು	೫೮ ೩೭	
ಅವರೆ	೫೫ ೦೦	
ಕಡಲೆ	೧೯ ೩೫	
ಧನಿಯ	೫೯ ೦೦	
ಕೊಬ್ಬರಿಬೀಜ	೪೦ ೦೦	
ಮೆಣಸಿನಕಾಯಿ	೩ ೩೭	೯ ೬೦
ಮೆಣಸಿನಕಾಯಿ	೧೮ ೦೩	
ತೆಂಗಿನಕಾಯಿ	೧೬೦ ೦೦	೨೬೦ ೦೦

ಒಲಂಪಿಯಾ ಟಾಕೀಸ್

14 6 57 ರಿಂದ ಅಮೋಘ 3ನೇ ವಾರ
ಬಿ ಎನ್ ಸರ್ಕಾರ್ ರವರ **ಬಂಧ್ರ**
ಪ್ರದೀಪ್ ಕುಮಾರ್ ಮಿನಾಕುಮಾರಿ

ಮುಂದಿನ ಬದಲಾವಣೆ ಫೋಟೋ ಬಾಬು

ಲಕ್ಷ್ಮಿ

14 6-57 ರಿಂದ ಅಮೋಘ 3ನೇ ವಾರ
ಪ್ರತಿದಿನ ೩ ಆಟಗಳು

ನೀಲ ಪ್ರೊಡಕ್ಷನ್ಸ್ ರವರ ತಮಿಳು ಚಿತ್ರ

ರಾಜರಾಜನ್

ಪಾತ್ರ -ಎಂ ಜಿ ರಾಮಚಂದ್ರನ್, ಪದ್ಮಿನಿ, ನಂಬಿಯಾರ್ ಎಂ ಜಿ ಚಕ್ರಪಾಣಿ ಪದ್ಮಿನಿ

ನಂಜನಗೂಡಿನಲ್ಲಿ ವಿದ್ಯಾರ್ಥಿನಿಯರ ನಿಕೇತನ

ನಂಜನಗೂಡು ವಕೀಲರಾದ ಶ್ರೀ ಬಿ. ಎಂ ಶ್ರೀ ನರಸಿಂಹಯ್ಯನವರು ಅಲ್ಲಿನ ಶ್ರೀಕಂಠಪುರ ಬಡಾವಣೆಯಲ್ಲಿ ತಮ್ಮ ನಿವಾಸದಲ್ಲಿರುವ ವಿದ್ಯಾರ್ಥಿನಿಯರ ನಿಕೇತನದಲ್ಲಿ ಸ್ಕೂಲ್ ಫೈನಲಿನ ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿನಿಯರಿಗಾಗಿ ಸೆಪ್ಟೆಂಬರ್ ಮಧ್ಯದ ಒಂದನೇ ಗಂಟೆಯಿಂದ ಐದರವರೆಗೆ ಇಂಗ್ಲಿಷ್, ಗಣಿತ ಶಾಸ್ತ್ರ ಮತ್ತು ವಿಜ್ಞಾನಗಳಲ್ಲಿ ವಿಶೇಷ ಪಾಠಗಳನ್ನು ಉಚಿತವಾಗಿ ಕಳೆದವರ್ಷ ಆರೇಳು ತಿಂದ ನಡೆಸುತ್ತಿರುವರು ಈ ವರ್ಷ ಸ್ಕೂಲ್ ಫೈನಲಿನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಇಂಗ್ಲಿಷ್ ಜ್ಞಾನಾಭಿವೃದ್ಧಿಗಾಗಿ ಆ ಭಾಷೆಯಲ್ಲಿ ಜ್ಞಾನವನ್ನು ಪ್ರತಿ ಭಾನುವಾರ ಮಧ್ಯಾಹ್ನ ಬೋಧಿಸುವರು ಎಸ್. ಎಸ್ ಎಲ್ ಸಿ ಉತ್ತೀರ್ಣರಾದವರು, ಇತರರೂ ಇದರ ಉಪಯೋಗವನ್ನು ಪಡೆಯಬಹುದು

ಮೈಸೂರಿನಲ್ಲಿ ಪ್ರತಿ ತಿಂಗಳು 17 ನೇ ತಾರೀಕು

ವಿಶ್ವ ವಿಖ್ಯಾತವಾಗಿರುವ

ನವರತ್ನ ಕಲ್ಪ

ಔಷಧಿಗಳನ್ನು ಕಂಡುಹಿಡಿದಿರುವ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮಾ

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಕು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರಭವನದಲ್ಲಿ

ಬೆಳಿಗ್ಗೆ 7-30ರಿಂದ ಸಂಜೆ 5 ಗಂಟೆಯವರೆಗೆ

ಭೇಟಿ ಮಾಡಬಹುದು ಫೋನ್ ನಂ 590

ಮೇಲ್ಕಂಡ ವಿಷಯವನ್ನು ಗಮನಿಸಿ ಅವರ ಔಷಧಿ ವೈದ್ಯಕೀಯ ಸಲಹೆಯನ್ನು ಪಡೆಯಿರಿ ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರುವ ವಿಧಾನದಲ್ಲಿ ಸಂಚರಿಸುವರು

ನವರತ್ನಕಲ್ಪ — ಉಪಯೋಗಿಸಿರಿ

ಇದು ವಜ್ರ, ಕೆಂಪು ಮುತ್ತು, ಪಚ್ಚೆ ಮೊದಲಾದ ಗೋಮೇಧಿಕ ನೀಲ ವಜ್ರಗಳ ಮುತ್ತು ಪ್ರವಾಳ ಕಶಿಲೆ ಈ 9 ಅಮೂಲ್ಯ ಹರಳುಗಳ ಸಂಯೋಗದಿಂದ ತಯಾರಿಸಿದ ನರಗಳ ದೌರ್ಬಲ್ಯ ಅಜೀರ್ಣ ಸಂಬಂಧದ ವ್ಯಾಧಿಗಳು ಬಿಳಿ ಸೆರಗು ರಕ್ತ ಮೂಲವ್ಯಾಧಿ ಸಾಕಷ್ಟು ಬಲಹೀನತೆ ಮುಂತಾದ ಮತ್ತು ಹಿಪ್ನು ಇನ್ನಿತರ ಎಲ್ಲಾ ಕಾಯಿಲೆಗಳಿಗೂ ತೀವ್ರವಾದ ಬಾಯಿಲೆಗಳಿಗೂ ಸಂಪೂರ್ಣವಾಗಿ ಗುಣಹೊಂದುವುದು ಅವಶ್ಯಕತೆ ಇದ್ದವರು ಇಂದೇ ಉಚಿತ ಸಾಹಿತ್ಯಗಳಿಗಾಗಿ ಬರೆಯಿರಿ

NAVRATNA KALPA PHARMACY,

JULLUNDUR CITY (India)

Edited, Printed and Published by A R Nagarajan at Sadhvi Press, Sobh at Road, Mysore

---

ಪರಿಶುದ್ಧ ಮಠದ ಗಾಣದ ಎಣ್ಣೆ

ಸಾರ್ವಜನಿಕರ ಅನುಕೂಲತೆಗಾಗಿ ನಮ್ಮ ಹೊಸ ಮಾರಾಟದ ಶಾಖೆಯನ್ನು ಕೆ. ಆರ್ ಆಸ್ಪತ್ರೆ ರಸ್ತೆಯಲ್ಲಿ, ಸರ್ಕಾರಿ ಪ್ರೈಮರಿ ಸ್ಕೂಲಿನೆದುರಿಗೆ ತೆರೆಯಲಾಗಿದೆ ಎಣ್ಣೆ ಒಂದೇ ದರಕ್ಕೆ ದೊರೆಯುತ್ತದೆ. ಸರ್ವರ ಸಹಕಾರ ಕೋರಲಾಗಿದೆ

ಬ್ರಾಂಚುಗಳು 1) ಶಿವರಾಂಪೇಟೆ — 2) ಕೆ ಆರ್ ಆಸ್ಪತ್ರೆ ರಸ್ತೆ

ಮೈಸೂರು ಸಿಟಿ ಮಠದ ಗಾಣದ ಎಣ್ಣೆ ವ್ಯಾಪಾರಿಗಳ ಸಹಕಾರ ಸಂಘ ೦,

(H O) ವಿನಯವಿಲಾಸ ರಸ್ತೆ, ಮೈಸೂರು

ಪ್ರಭು ದೇವಾ ಥಿಯೇಟರ್

(ಪದ್ಮಾ ಟಾಕೀಸ್)

14 6 ನೇ ಶುಕ್ರವಾರದಿಂದ : ಅಮೋಘ **10** ನೇ ವಾರ : ಪ್ರತಿದಿನ ಮೂರು ಪ್ರದರ್ಶನಗಳು

ಮಾಯಾ ಬಜಾರ್

(ಶಶಿರೇಖಾ ಪರಿಣಯ)

ಬಾಲಕಿಯರಿಗಾಗಿ ಪ್ರೌಢ ಶಾಲಾ ತರಗತಿಗಳು

ಹೈಸ್ಕೂಲು ಮೊದಲನೇ ತರಗತಿಯನ್ನು ಕೂಡಲೇ ಪ್ರಾರಂಭಿಸಲಾಗುವುದು. ವಿದ್ಯಾರ್ಥಿನಿಯರಿಗಾಗಿಯೇ ಪ್ರತ್ಯೇಕವಾದ S S L C. ತರಗತಿ ಏರ್ಪಡಿಸಲಾಗಿದೆ Vth form ಪಾಸಾದ ಅಥವಾ ಫೇಲಾದವರನ್ನೂ ಸೇರಿಸಿಕೊಳ್ಳಲಾಗುವುದು

B K ಸತ್ಯನಾರಾಯಣರಾವ್ M A. B T , ಪ್ರಿನ್ಸಿಪಾಲರು

CITY TUTORIAL COLLEGE, MYSORE

ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರವರ ಸೂಚನೆ ಮೇರೆ

ಬಹಿರಂಗ ಹರಾಜು ಮಾರಾಟ

ಹಳೇ ಜೆಡ್ ಜೆಡ್ ಎಂ ಓ ಐ ಲೈನುಗಳಲ್ಲಿರುವ ಡಿ ಎಸ್ ಪಿ ಯವರ ಕಛೇರಿ ಬಳಿ [ಸಿವಿಲ್ ಪೊಲೀಸು ಹೆಡ್ ಕ್ವಾರ್ಟರ್ಸ್‌ನಲ್ಲಿ]

ಇದೇ ಭಾನುವಾರ 16 6-57 ರಂದು ಬೆಳಿಗ್ಗೆ 11 ಘಂಟೆಗೆ

ನಿಷೇಧಿಸಲ್ಪಟ್ಟಿರುವ ಸ್ಟೋರಿನ ಕೆಟ್ಟ ಸಾಮಾನುಗಳನ್ನು ಮಾರುತ್ತೇವೆ

ಅ ಬಿ ೀ ಡ್ಸ್

ಸರ್ಕಾರಿ ಕಂಟ್ರಾಕ್ಟರುಗಳು

ಸ್ವಾಮಿನ್ನು ಚೌಕ ಮೈಸೂರು ಫೋನ್ 443

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಅಂದಿನ ಪತ್ರಿಕೆ 2 ನಯೆ ಪೈಸೆ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ ಎಂ ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ
ಮೈಸೂರು

ಸಂಪುಟ : ೧೮] SADHVI : SATURDAY 15—6—1957 ಮೈಸೂರು : ಶನಿವಾರ ೧೫—೬—೧೯೫೭ : [ಸಂಚಿಕೆ : ೬೦೦

ಮಡಕೇರಿ ಬಳಿ ಸರ್ಕಾರಿ ಬಸ್ಸಿನ ಡಿಕ್ಕಿ: ೨೦ ಜನಕ್ಕೆ ಗಾಯ

ಆಯುರ್ವೇದದಲ್ಲಿ ಸಂಶೋಧನೆ ಅಗತ್ಯ

ಕರ್ನಾಟಕ ಆಯುರ್ವೇದ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷ ಗುಂಡಾಚಾರ್ಯರ ಭಾಷಣ

ಬೆಂಗಳೂರು ೧೫

ಕರ್ನಾಟಕ ಆಯುರ್ವೇದ ಕಾಂಗ್ರೆಸ್ಸಿನ ೨೧ನೇ ಅಧಿವೇಶನವು ನೆನ್ನೆ ಇಲ್ಲಿ ವೇದಘೋಷಗಳ ನಂತರ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಆರ್ ಚನ್ನಿಗರಾಮಯ್ಯನವರಿಂದ ಆರಂಭಿಸಲ್ಪಟ್ಟಿತು. ಶ್ರೀ ಗುಂಡಾಚಾರ್ಯ ಸವಣೂರ್‌ರವರು ಅಧ್ಯಕ್ಷತೆ ವಹಿಸಿದ್ದರು. ೬೦೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಪಂಡಿತ ಶ್ರೀ ಎಸ್ ಪಿ ರಾಮಚಂದ್ರ ಶರ್ಮರವರು ಸ್ವಾಗತ ಭಾಷಣ ಮಾಡಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಆರೋಗ್ಯ ಇಲಾಖೆಗೆ ಒದಗಿಸಿರುವ ೨೭೦ ಕೋಟಿ ರೂ. ಪೈಕಿ ಆಯುರ್ವೇದಕ್ಕೆ ೩ ಕೋಟಿ ರೂ. ವಿನಿಯೋಗಿಸಲಾಗಿಟ್ಟಿರುವುದೆಂದೂ ಅದು ಭಿಕ್ಷೆಯ ರೂಪದಲ್ಲಿರುವುದೆಂದೂ ತಿಳಿಸಿದರು.

ಶ್ರೀ ಆರ್ ಚನ್ನಿಗರಾಮಯ್ಯನವರು ತಮ್ಮ ಭಾಷಣದಲ್ಲಿ ಧನಸಂಪಾದನೆ ದೃಷ್ಟಿಯನ್ನು ಬಿಟ್ಟು ಪಾರಮಾರ್ಥಿಕ ಗುರಿಯಿಂದ ಆಯುರ್ವೇದ ಪರಂಪರೆಯನ್ನು ಬೆಳಸಬೇಕೆಂದು ಹೇಳಿದರು. ಪೂರ್ಣ ಜ್ಞಾನವಿಲ್ಲದೆ "ಸಿದ್ಧೌಷಧ"ಗಳನ್ನು ಕೊಡಲಾಗುತ್ತಿರುವುದೆಂಬ ದೂರು ಬರುತ್ತಿರುವುದಾಗಿಯೂ, ಇಂತಹ ಕೊರತೆಯನ್ನು ನಿವಾರಿಸಿಕೊಂಡರೆ ಆಯುರ್ವೇದಕ್ಕೆ ಯಶಸ್ಸು ದೊರೆಯುವುದೆಂದೂ ಸಚಿವರು ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಭಾರತದಲ್ಲಿ ಮೊಟ್ಟಮೊದಲು ಆಯುರ್ವೇದ ಶಿಕ್ಷಣಕ್ಕಾಗಿ ಕಾಲೇಜನ್ನು ಏರ್ಪಡಿಸಿ ಕೀರ್ತಿ ಪಡೆದಿರುವ ಮೈಸೂರಿನಲ್ಲಿ ಇತ್ತೀಚೆಗೆ ಮಿಶ್ರ ಶಿಕ್ಷಣ ಕ್ರಮದ ಪರಿಣಾಮವಾಗಿ ವಿದ್ಯಾರ್ಥಿಗಳಿಗೆ ಆಯುರ್ವೇದದ ಪೂರ್ಣ ಪರಿಚಯವಾಗುತ್ತಿಲ್ಲವೆಂದೂ, ಇದನ್ನು ಸುಧಾರಿಸುವುದು ಅಗತ್ಯವೆಂದೂ ಹೇಳಿದರು. ಹಳೇ ಮೈಸೂರಿಗಿಂತ ಬೊಂಬಾಯಿ ಮತ್ತು ಮದ್ರಾಸು ಸರ್ಕಾರದವರು ಆಯುರ್ವೇದಕ್ಕೆ ಹೆಚ್ಚು ಪ್ರೋತ್ಸಾಹವಿತ್ತಿರುವುದಾಗಿ ಅವರು ತಿಳಿಸಿದರು.

ನೂತನ ಸಂಸ್ಥಾನದಲ್ಲಿರುವ ವಿವಿಧ ರೀತಿಯ ಆಯುರ್ವೇದ ವಿದ್ಯಾ ಸಂಸ್ಥೆಗಳಲ್ಲಿ ಪಾಠವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡುಹೋಗಲು ಸಾಧ್ಯವಾಗುವಂತೆ ಸರ್ಕಾರದವರು ಬೇರೊಂದು ಶಾಖೆಯನ್ನು ತೆರೆಯಬೇಕೆಂದು ಅವರು ಸಲಹೆ ಮಾಡಿದರು.

ಆಯುರ್ವೇದದಲ್ಲಿ ಆಳವಾದ ಸಂಶೋಧನೆ ನಡೆಸಲು ಪ್ರಯತ್ನಿಸಬೇಕೆಂದೂ, ಪುರಾತನ ಶ್ಲೋಕಗಳನ್ನು ಇಂದಿನ ವಿಜ್ಞಾನ ಶಾಸ್ತ್ರದ ಓರೆಗಲ್ಲಿಗೆ ಹಚ್ಚುವ ಅವಕಾಶವು ಆಗ ದೊರೆಯುತ್ತದೆಂದೂ ಅವರು ಹೇಳಿದರು. ಆಯುರ್ವೇದದ ಸ್ಥಾನಮಾನಗಳು ದೋಷಾಯಮಾನವಾಗಿರಲು ವೈದ್ಯರುಗಳು ಅಲಕ್ಷ್ಯದಿಂದ ವರ್ತಿಸಿದರೆ ಸರ್ವನಾಶವಾದೀತೆಂದು ಅವರು ಎಚ್ಚರಿಸಿದರು.

ಪ್ರಧಾನಿ ನೆಹರೂರವರಿಗೆ ಸಿರಿಯಾದಲ್ಲಿ ವೈಭವದ ಸ್ವಾಗತ

ಯೂರೋಪು ಪ್ರವಾಸಕ್ಕಾಗಿ ನೆಹರೂರವರ ಪ್ರಯಾಣ

ಯುರೋಪು ಪ್ರವಾಸಕ್ಕಾಗಿ ಪ್ರಧಾನಿ ನೆಹರೂರವರು ನೆನ್ನೆ ದೆಹಲಿಯಿಂದ ವಿಮಾನದಲ್ಲಿ ಹೊರಟು ಸಿರಿಯಾ ರಾಜಧಾನಿ ಡಮಾಸ್ಕಸ್ ನಗರವನ್ನು ತಲುಪಿದರು. ಅಲ್ಲಿ ವೈಭವದ ಸ್ವಾಗತವನ್ನು ಕೊಡಲಾಯಿತು. ಅನಂತರ ನಗರದ ಗೌರವ ನಾಗರಿಕತ್ವವನ್ನು ಅವರು ಸ್ವೀಕರಿಸಿದರು.

ನೆಹರೂರವರು ತಂಗುವ ವಿಮಾನ ನಿಲ್ದಾಣದ ಸಾವಿರ ಧ್ವಜಗಳನ್ನು ಉಭಯ ದೇಶಗಳ ಉಭಯ ಪಾರ್ಶ್ವಗಳಲ್ಲಿ ಇರಿಸಲಾಗಿತ್ತು. ನೆಹರೂರವರು ಸಿರಿಯಾ ಅಧ್ಯಕ್ಷ ಕೌಟ್ಲಿ, ಪ್ರಧಾನಿ ಆಸ್ಸಾಲಿ ಮತ್ತು ವಿದೇಶಾಂಗ ಮಂತ್ರಿ ಸಲಾಹ್ ಬಿತರ್‌ರವರೊಡನೆ ಅರ್ಧ ಗಂಟೆ ಕಾಲ ಸಂಭಾಷಣೆ ನಡೆಸಿದರು.

ಸಿರಿಯಾ ಪ್ರಜೆಗಳು, ಪ್ರಜಾ ವರ್ಗದವರ ಹಕ್ಕು ಮತ್ತು ಸ್ವಾತಂತ್ರ್ಯಗಳ ರಕ್ಷಕ ಎಂದು ನೆಹರೂರವರ ಬಗ್ಗೆ ಘೋಷಣೆ ಮಾಡಿದರು. ನೆಹರೂರವರು ಡೆನ್ಮಾರ್ಕ್ ರಾಜಧಾನಿ ಕೋಪನ್‌ಹೇಗನ್ನನ್ನು ತಲಪುವರು. ಅವರ ಆಗಮನದ ನೆನಪಿಗಾಗಿ ನೆಹರೂರವರಿಗೆ ಡೆನ್ಮಾರ್ಕ್ ಸರ್ಕಾರದವರು ಹೊಸ ಮಾದರಿ ಮೋಟಾರು ಬೈಸಿಕಲ್ (ಸ್ಕೂಟರ್) ಅನ್ನು ಬಹುಮಾನವಾಗಿ ಕೊಡುವರು.

ವಿಶ್ವಾದಲ್ಲಿ "ಫ್ಲೂ" ವ್ಯಾಧಿಗೆ ಅಣು ಸಿಡಿತಗಳು ಕಾರಣ

ಪೆಸಿಫಿಕ್ ಸಾಗರ ಮತ್ತು ಸೈಬೀರಿಯಗಳಲ್ಲಿ ನಡೆಸಲಾಗುತ್ತಿರುವ ಅಣು ಶಸ್ತ್ರಗಳ ಸಿಡಿತಗಳು ವಿಶ್ವದಲ್ಲಿ ಹಬ್ಬುತ್ತಿರುವ ಇನ್‌ಫ್ಲುಯೆಂಜಾ ರೋಗಕ್ಕೆ ಕಾರಣವೆಂದು ಲಂಡನ್ನಿನ ಲಾನ್ಸೆಟ್ ಎಂಬ ಪತ್ರಿಕೆಯಲ್ಲಿ ಎಂ ಪಿರ್ಸ್ ಎಂಬುವರು ತಿಳಿಸಿರುತ್ತಾರೆ. ಈ ವ್ಯಾಧಿಯು ಇದುವರೆಗೆ ಗೊತ್ತಿಲ್ಲದ ದೋಷದಿಂದ ಬಂತೆಂದು ಅವರು ಹೇಳಿರುತ್ತಾರೆ. ಅದು ಯೂರೋಪಿಗೂ ಹರಡಬಹುದೆಂದು ಬ್ರಿಟಿಷ್ ವೈದ್ಯರುಗಳು ಭಾವಿಸಿರುವರೆಂದೂ ಅವರು ತಿಳಿಸಿರುವರು.

ಮುದ್ರಣ ಕಲಾ ಸಂಘದ ಸಮ್ಮೇಳನ ಸಭೆ

ನಗರದ ಮುದ್ರಣ ಕಲಾ ಸಂಘದ ಸಾಮೂಹಿಕ ಸಭೆಯು, ಉಪ ಸಮಿತಿಯಿಂದ ತಯಾರಿಸಲ್ಪಟ್ಟಿರುವ ಕರಡು ನಿಯಮಾವಳಿಗಳನ್ನು ಪರಿಶೀಲಿಸಲು ಮತ್ತು ಕಾರ್ಯನಿರ್ವಾಹಕ ಸಮಿತಿಯನ್ನು ಚುನಾಯಿಸಲು ನಾಳೆ ಬೆಳಿಗ್ಗೆ ೧೧ ಘಂಟೆಗೆ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ರಾಷ್ಟ್ರಶಾಲಾ ಸ್ವಪತ್ರಾಲಯದಲ್ಲಿ ಸೇರಲಿದೆ. ಇದನ್ನೇ ಆಹ್ವಾನವೆಂದು ಪರಿಗಣಿಸಿ ಸದಸ್ಯರೆಲ್ಲರೂ ಸಭೆಗೆ ಬರಲು ದಯಮಾಡಬೇಕೆಂದು ಕೋರಲಾಗಿದೆ.

ಜೂಜಾಟಕ್ಕಾಗಿ ದಂಡ

ನಗರದ ಉದಿಗ ಬಸ್ ಸ್ಟ್ಯಾಂಡ್ ಬಳಿ ಇರುವ ಸಹಕಾರ ಸಂಸ್ಥಾ ಲಾಂಡ್ರಿಯಲ್ಲಿ ಕಳೆದ ಬುಧವಾರ ಕೃಷ್ಣಸ್ವಾಮಿ ಮತ್ತು ಇತರ ಮೂವರು ಜೂಜಾಡುತ್ತಿದ್ದುದಕ್ಕಾಗಿ ಅವರಿಗೆ ತಲಾ ೫೦ ರೂ ದಂಡವನ್ನು ನೆನ್ನೆ ವಿಧಿಸಲಾಯಿತು.

ಸರ್ಕಾರಿ ಬಸ್ ಅಪಘಾತದಲ್ಲಿ ೨೦ ಜನರಿಗೆ ಗಾಯ

ಮಡಕೇರಿ ಬಳಿ ಘಟನೆ

ಮೈಸೂರು ೧೫

ನೆನ್ನೆ ಮಂಗಳೂರಿನಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಸರ್ಕಾರಿ ಎಕ್ಸ್‌ಪ್ರೆಸ್ ಬಸ್ಸು ಮಡಕೇರಿಯಿಂದ ೩ ಮೈಲಿ ದೂರದಲ್ಲಿ ಸ್ಟೀರಿಂಗ್ ರಾಡ್ ಕಿತ್ತುಹೋದ ಕಾರಣ ಮರವೊಂದಕ್ಕೆ ಡಿಕ್ಕಿ ಹೊಡೆದು ಡ್ರೈವರ್ ಮತ್ತು ಕಂಡಕ್ಟರೂ ಸೇರಿ ಒಟ್ಟು ೨೦ ಮಂದಿಗೆ ಗಾಯವಾಯಿತು. ತಕ್ಷಣವೇ ಅವರುಗಳನ್ನು ಮಡಕೇರಿ ಜನರಲ್ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿ ಮೂರು ಮಂದಿಯನ್ನು ಡಿಸ್ಚಾರ್ಜ್ ಮಾಡಲಾಯಿತು. ಯಾರಿಗೂ ಪ್ರಾಣಾಪಾಯವಾಗಿಲ್ಲ.

ಹಲವರಿಗೆ ಕೈಕಾಲು ಮತ್ತು ತಲೆಗಳಲ್ಲಿ ಬಹಳ ಪೆಟ್ಟು ಬಿದ್ದು ಚಿಂತಾಜನಕಸ್ಥಿತಿಯಲ್ಲಿರುವರೆಂದು ಹೇಳಲಾಗಿದೆ.

ರಾಷ್ಟ್ರೀಯ ಉಳಿತಾಯ ಪಕ್ಷಾಚರಣೆ

ಡಿವಿಜನಲ್ ಕಮೀಷನರರಾದ ಶ್ರೀ ಕೆ ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಏರ್ಪಡಿಸಲಾಗಿರುವ ಬಹಿರಂಗ ಸಭೆಯಲ್ಲಿ ರಾಷ್ಟ್ರೀಯ ಉಳಿತಾಯ ಪಕ್ಷಾಚರಣೆಯ ಆರಂಭೋತ್ಸವವನ್ನು ನೆರವೇರಿಸಲಾಗುವುದು. ಬನುಮಯ್ಯ ಕಾಮರ್ಸ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ ವಿ ಬನುಮಯ್ಯನವರು 'ಉಳಿತಾಯ ಚಳುವಳಿಯ ಪ್ರಾಮುಖ್ಯತೆ' ಮತ್ತು ಮಹಾರಾಜಾ ಕಾಲೇಜಿನ ಪ್ರೊಫೆಸರ್ ಶ್ರೀ ಎಸ್. ಕೆ ಏಕಾಂಬರಂರವರು 'ಉಳಿತಾಯಗಳು ಮತ್ತು ಯೋಜನೆ' ಎಂಬ ವಿಚಾರಗಳ ಬಗ್ಗೆ ಭಾಷಣ ಮಾಡುವರು.

೨ ವರ್ಷಗಳವರೆಗೆ ಅಣು ಶಸ್ತ್ರ ಸಿಡಿತ ನಿಲ್ಲಬೇಕು

ಶಸ್ತ್ರ ಸನ್ಯಾಸ ಸಮಿತಿಯಲ್ಲಿ ರಷ್ಯಾ ಪ್ರತಿನಿಧಿಯ ಸೂಚನೆ

ವಿಶ್ವ ಸಂಸ್ಥೆಯ ಶಸ್ತ್ರ ಸನ್ಯಾಸ ಸಮಿತಿ ಸಭೆಯಲ್ಲಿ ನೆನ್ನೆ ರಷ್ಯಾ ಪ್ರತಿನಿಧಿ ವಲೇರಿಯನ್ ಜೋರಿನ್‌ರವರು ಮಾತನಾಡಿ, ೨ ಅಥವಾ ೩ ವರ್ಷಗಳವರೆಗೂ ಎಲ್ಲಾ ಅಣು ಶಸ್ತ್ರ ಪರೀಕ್ಷೆಗಳನ್ನು ನಿಲ್ಲಿಸಬೇಕೆಂದೂ, ಈ ಬಗ್ಗೆ ಪರಿಶೋಧಿಸಲು ಅಂತರ ರಾಷ್ಟ್ರೀಯ ನಿಯಂತ್ರಣಕ್ಕಾಗಿ ಒಪ್ಪಂದವಾಗಬೇಕೆಂದೂ ಸೂಚಿಸಿದರು. ಅಮೆರಿಕಾ, ರಷ್ಯಾ, ಬ್ರಿಟನ್ ಮತ್ತು ಪೆಸಿಫಿಕ್ ಪ್ರದೇಶಗಳಲ್ಲಿ ಪರಿಶೋಧನಾ ಕೇಂದ್ರಗಳನ್ನು ಸ್ಥಾಪಿಸಬೇಕೆಂದೂ ಅವರು ಸೂಚಿಸಿರುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ಕ್ಲಾರಿಯೊನೆಟ್ ೭ ೧೫ ಎಚ್ ಲಕ್ಷ್ಮಣಶಾಸ್ತ್ರಿ ದೇವರ ನಾಮ ೮-೧೫ ಗಾಥ ವಿಹಾರ ಮಧ್ಯಾಹ್ನ ೧೨ ಎಸ್ ಲಕ್ಷ್ಮಣಶಾಸ್ತ್ರಿ ಗಾಯನ ೧೨ ೩೦ ಆರ್ ಎಸ್ ಕೃಷ್ಣಮೂರ್ತಿ ವೀಣೆ ೧ ಹಿಂದಿ ಭಜನೆ ೧ ೨೦ ರಿಕಾರ್ಡ್ ೧ ೫೦ ಕ್ಲಾರಿಯೊನೆಟ್ ಸಂಜೆ ೬ ೧೦ ಜಾನಪದ ಗೀತೆ. ೭ ೩೦ ಹಿಂದಿ ಗೀತೆ ೮ ಗಾನ ವೃಂದ. ೮-೧೫ ಉಭಯ ಕುಶಲೋಪರಿ ೮ ೩೦ ಸಂಗೀತ ೯.೩೦ ಕಥಾಕಾಲಕ್ಷೇಪ ೧೦-೩೦ ಹೆಚ್ ಎಸ್ ಕೃಷ್ಣಮೂರ್ತಿ ವೀಣೆ.

ಸಂಗೀತ ನಾಟಕ ಸಂಸ್ಥೆಯ ವಿಸರ್ಜನೆಯೇ?

ವಿಧಾನ ಪರಿಷತ್ತಿನಲ್ಲಿ ವಿದ್ಯಾಮಂತ್ರಿಗಳ ಹೇಳಿಕೆ

ಬೆಂಗಳೂರು ೧೫

ವಿಧಾನ ಪರಿಷತ್ತಿನಲ್ಲಿ ನೆನ್ನೆ ವಿದ್ಯಾ ಮಂತ್ರಿ ಶ್ರೀ ಎ ವೆಂಕಟಪ್ಪನವರು ಪ್ರಶ್ನೆಗಳಿಗೆ ಉತ್ತರ ವಿತ್ತು, ಸಂಸ್ಥಾನದ ಸಂಗೀತ ನಾಟಕ ಸಂಸ್ಥೆಯನ್ನು ಮುಂದುವರಿಸುವುದೇ ಅಥವಾ ಬಿಡುವುದೇ ಎಂಬ ವಿಚಾರವನ್ನು ಸರ್ಕಾರದವರು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು. ೧೯೫೪ರಲ್ಲಿ ಸ್ಥಾಪಿತವಾದ ಈ ಸಂಸ್ಥೆಗೆ ೫೪-೫೫ರಲ್ಲಿ ೧೫,೦೦೦ ರೂ ಅನ್ನು ಕೊಡಲಾಯಿತಲ್ಲದೆ ಪ್ರತಿ ಸಾಲಿನಲ್ಲೂ ನಿಗದಿಯಾದ ಹಣದ ಜೊತೆಗೆ ಈ ವರ್ಷ ೫೦,೦೦೦ ರೂ ಅನ್ನು ಹೆಚ್ಚಾಗಿ ಒದಗಿಸಲಾಗಿದೆಯೆಂದೂ ಅವರು ಹೇಳಿದರು.

ದಕ್ಷಿಣ ಆಫ್ರಿಕದ ೪ ಲಕ್ಷ ಭಾರತೀಯರಿಗೆ ತೊಂದರೆ

ದಕ್ಷಿಣ ಆಫ್ರಿಕದ ಪಾರ್ಲಿಮೆಂಟಿನಲ್ಲಿ ಸೆನೆಟ್ ಸದಸ್ಯರಾದ ಶ್ರೀಮತಿ ಬಲ್ಲಿಂಗರ್‌ರವರು ಮಾತನಾಡಿ ಸರ್ಕಾರದವರು ಗುಂಪುಗಳ ಪ್ರದೇಶದ ಕಾನೂನು ಪ್ರಕಾರ ಅಲ್ಲಿರುವ ಭಾರತೀಯರಿಗೆ ಅಂತ್ಯ ಸೂಚನೆಯಿತ್ತು "ವಾಪಸು ಹೋಗಿರಿ ಇಲ್ಲವೆ ಇಲ್ಲೇ ಉಪವಾಸ ಬೀಳಿ" ಎಂದು ಅಂತ್ಯ ಎಚ್ಚರಿಕೆ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅದರಿಂದ ೪ ಲಕ್ಷ ಭಾರತೀಯರ ಪ್ರಾಣ ಹಾನಿಯಾಗುವುದೆಂದು ಅವರು ಹೇಳಿರುವರು.

ನಗರದ ಎಲ್ಲಾ ಶಾಲೆಗಳಿಗೂ ೧೦ ದಿವಸ ರಜಾ

ಇನ್‌ಫ್ಲುಯೆಂಜಾ ವ್ಯಾಧಿಯನ್ನು ತಡೆಯುವುದಕ್ಕಾಗಿ

ಮೈಸೂರು ೧೫

ನಗರದಲ್ಲಿ ಇನ್‌ಫ್ಲುಯೆಂಜಾ ವ್ಯಾಧಿ ಹರಡುವುದನ್ನು ತಡೆಗಟ್ಟಲು ಪೌರಸಭೆಯ ಆರೋಗ್ಯಾಧಿಕಾರಿಗಳ ಸಲಹೆಯಂತೆ ನಾಳೆಯಿಂದ ಹತ್ತು ದಿನಗಳ ಕಾಲ ನಗರದ ಎಲ್ಲಾ ಪ್ರೌಢ, ಮಾಧ್ಯಮಿಕ, ಪ್ರಾಥಮಿಕ ಮತ್ತು ನರ್ಸರಿ ಶಾಲೆಗಳೂ ಮುಚ್ಚಲ್ಪಡುತ್ತವೆ. ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರವರು ಸೂಚನೆಯಿತ್ತಿರುತ್ತಾರೆ.

ಈ ದಿನ ಮಧ್ಯಾಹ್ನ ೧೨ ಗಂಟೆವರೆಗೆ ನಗರದಲ್ಲಿ ಹೊಸದಾಗಿ ೩೭ ಜನರಿಗೆ ಫ್ಲೂ ಉಂಟಾಗಿದೆ. ಒಟ್ಟು ೨೮೬ ಪೈಕಿ ೭೩ ಜನರು ಮಾತ್ರ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾಶ್ಮೀರಕ್ಕೆ ರಾಜ್ಯಪಾಲರ ಪ್ರಯಾಣ

ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್‌ರವರು ಮೇಜರ್ ಎಲ್ ವಾಸುದೇವಯ್ಯ, ಮತ್ತು ಕಾರ್ಯದರ್ಶಿ ಶ್ರೀ ಹೆಚ್ ಎಸ್ ಪಾಳೇಗಾರ್‌ರವರೊಡನೆ ನೆನ್ನೆ ಕಾಶ್ಮೀರದ ಪ್ರಯಾಣಕ್ಕಾಗಿ ತೆರಳಿದರು. ಅವರು ಶ್ರೀನಗರದಲ್ಲಿ ಸೇರುವ ತತ್ವಶಾಸ್ತ್ರ ಸಮ್ಮೇಳನದಲ್ಲಿ ಭಾಗವಹಿಸುವರು.

ಕೋಟಿಗಟ್ಟಲೆ ರೂ. ವೆಚ್ಚವಾದರೂ ಆಹಾರದ ಕಷ್ಟ ತಪ್ಪಿಲ್ಲ

ವಿಧಾನ ಪರಿಷತ್ತಿನಲ್ಲಿ ಸಿದ್ದಯ್ಯ ಆಕ್ಷೇಪಣೆ

ಬೆಂಗಳೂರು ೧೨

ವಿಧಾನ ಪರಿಷತ್ತಿನಲ್ಲಿ ... ಭಾಷಣಕ್ಕೆ ವಂದನಾರ್ಪಣೆ ... ಮಾತನಾಡಿ ... ನೀತಿಯನ್ನು ... ಬೆಳೆಯನ್ನು ಹೆಚ್ಚಿಸಲು ... ಗಳನ್ನು ವೆಚ್ಚ ಮಾಡಲಾಯಿತೆಂದೂ ಜನರು ಆಹಾರ ಧಾನ್ಯಕ್ಕಾಗಿ ಕ್ಯೂ ನಿಲ್ಲುತ್ತಲೇ ಇರುವರೆಂದೂ ಹೇಳಿದರು. ಅದಕ್ಕಾಗಿ ವೆಚ್ಚ ಮಾಡಿದ ಹಣವೇನಾಯಿತೆಂದು ಅವರು ಪ್ರಶ್ನಿಸಿದರು. ಮಧ್ಯವರ್ತಿ ಜನರಿಗೆ ಅದು ಹೋಗಿರುವುದೇ, ಅಥವಾ ಆಹಾರ ಉತ್ಪತ್ತಿ ಯೋಜನೆಗೆ ಹಣವನ್ನು ವೆಚ್ಚ ಮಾಡಲಿಲ್ಲವೇ—ಎಂದೂ ಅವರು ಕೇಳಿದರು.

ಮಲೆನಾಡು ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆ

ದ್ವಿತೀಯ ಯೋಜನೆ ಅಂಗವಾಗಿ ಮಲೆನಾಡಿನಲ್ಲಿ ಅಭಿವೃದ್ಧಿ ಕ್ರಮಗಳನ್ನು ಜರುಗಿಸುವ ಸಂಬಂಧದಲ್ಲಿ ಸಂಸ್ಥಾನ ಸರ್ಕಾರವು ಪ್ರತ್ಯೇಕ ಇಲಾಖೆಯನ್ನು ತೆರೆದಿರುವರೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿರುತ್ತಾರೆ.

ಕೇರಳ ಶಾಸನ ಸಭೆಯಲ್ಲಿ ಪೊಲೀಸರ ಕಾವಲು ಇಲ್ಲ

ಕೇರಳದ ವಿಧಾನ ಸಭೆಯಲ್ಲಿ ಇದುವರೆಗೆ ಪ್ರೇಕ್ಷಕರನ್ನು ಒಳಗೆ ಬಿಡುವಾಗ ವ್ಯವಸ್ಥೆ ನೋಡಿಕೊಳ್ಳುತ್ತಿದ್ದ ಪೊಲೀಸರನ್ನು ತಪ್ಪಿಸಲಾಗಿದೆ. ಶಾಸನಸಭಾಧ್ಯಕ್ಷರು ಅವರ ಸ್ಥಾನದಲ್ಲಿ ೪ ಜನ ಗಂಡಸರು ಮತ್ತು ಇಬ್ಬರು ಮಹಿಳೆಯರಿರುವ ವಿಶೇಷ ಸಿಬ್ಬಂದಿಯನ್ನು ನೇಮಿಸಿರುತ್ತಾರೆ.

ಸಹಾಯಾರ್ಥ ನಾಟಕ

ಮೈಸೂರಿನ ಜಿಲ್ಲಾಧಿಕಾರಿಗಳಾದ ಶ್ರೀ ಆರ್ ಚನ್ನರುದ್ರಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ಶ್ರೀ ಚಾಮರಾಜೇಶ್ವರ ಸ್ವಾಮಿಯ " ಗಿರಿಜಾಕಲ್ಯಾಣ ಮಹೋತ್ಸವ"ದ ಸಲುವಾಗಿ ನಡೆದ ಸಹಾಯಾರ್ಥ ನಾಟಕದಲ್ಲಿ ಎರಡು ಸಾವಿರ ರೂಪಾಯಿಗಳು ವಸೂಲಾಗಿ ಆ ಪೈಕಿ ಕೇವಲ ೫೫೦ ರೂಪಾಯಿಗಳ ಮಾತ್ರ ಖರ್ಚಾಗಿರುತ್ತದೆಂದು ತಿಳಿದುಬಂದಿದೆ.

ಕಿಸ್ಸೊ ಟ್ರೀಮ್—

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ
ಶಿರೋಧಕ, ನಿವಾರಕ ಸಲಹೆಗಳಿಗೆ -
"ಲಿವರ್ ಹೌಸ್", ಚಾಮರಾಜಪುರಂ,
(ಮೈಸೂರು ಸುಬ್ಬಯ್ಯ ಹಾಸ್ಟೆಲ್ ಹತ್ತಿರ)

ದೇವನೂರು ಶ್ರೀ ಗುರುಮಲ್ಲೇಶ್ವರ ಸ್ವಾಮಿ ಗದ್ದಿಗೆಯ ವ್ಯವಹಾರ

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ 1941-42ನೆಯ ಸಾಲಿನ ಅಸಲು ದಾವೆ ನಂಬರು 33

13—6—1957

1. ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರು 13-6-1957ರಲ್ಲಿ ತ ಮತ್ತು ೩ನೇ ಪ್ರತಿವಾದಿಗಳ ಸಮ್ಮತಿ ಮೇರೆ ಸದರಿಯವರ ಮ್ಯಾನೇಜ್‌ಮೆಂಟ್ ವಿಚಾರ 29-6-1957ನೇ ತೀರಿಂಗು ತಾರೀಖಿನವರೆಗೆ ಅನೂರ್ಜಿತ್ತಾಗಿರತಕ್ಕದ್ದೆಂದು ಮಾತ್ರ ಆರ್ಡರು ಮಾಡಿರುತ್ತಾರೆ.

2. 5-6-1957ರಲ್ಲಿ ಶ್ರೀ ಡಿ ಎಂ ಸಿದ್ದಯ್ಯನ ಮೇಲೆ ಛಸ ತೀರ್ಪಿನವರು ಕೊಟ್ಟಿರುವ ಇಂಜಂಕ್ಷನ್ ಆರ್ಡರು ಜಾರಿಯಲ್ಲೇ ಇರುತ್ತೆ.

ಬಿ ಬಸವರಾಜುಸ್ವಾಮಿ
ಶ್ರೀ ಗುರುಮಲ್ಲೇಶ್ವರಸ್ವಾಮಿ ಗದ್ದುಗೆ,
ದೇವನೂರು
ತಾ|| 13-6-57

— ನೂತನ ರಾಜ್ಯಪಾಲರುಗಳು —

ಬಿಹಾರ್ ರಾಜ್ಯದ ಗವರ್ನರ್ ಡಾ|| ಜಕೀರ್ ಹುಸೇನ್　　ಉತ್ತರ ಪ್ರದೇಶದ ಗವರ್ನರ್ ಶ್ರೀ ವಿ ವಿ ಗಿರಿ　　ಮಧ್ಯ ಪ್ರದೇಶದ ಗವರ್ನರ್ ಶ್ರೀ ಹೆಚ್ ವಿ ಪಾಟಸ್ಕರ್

ಬಿಸಾಡುವ ಪದಾರ್ಥಗಳಿಂದ ವಿದ್ಯುಚ್ಛಕ್ತಿ ಹರಿಯದಿರುವ ವಸ್ತುಗಳು

ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಹೊಸ ಸಂಶೋಧನೆ

ಕಡಲೇಕಾಯಿ ಸಿಪ್ಪೆ, ಭತ್ತದ ಹೊಟ್ಟು, ಬಾಳೆ ಪಟ್ಟೆ ಹಾಗೂ ಮುಂತಾದುವುಗಳಿಂದ ವಿದ್ಯುತ್ಪ್ರವಾಹ ಹರಿಯದಂತಹ ವಸ್ತುವನ್ನು (ನಾನ್ ಕಂಡಕ್ಟರ್) ತಯಾರಿಸುವ ವಿಧಾನವನ್ನು ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಕಂಡುಹಿಡಿಯಲಾಗಿರುವುದೆಂದು ಕೇಂದ್ರ ಸರ್ಕಾರದ ಪತ್ರಿಕಾ ಪ್ರಕಟನೆಯು ತಿಳಿಸಿದೆ. ಈಗ ಹೊರಗಿನಿಂದ ಆಮದು ಮಾಡುವ ಕಾರ್ಕಿನಲ್ಲಿರುವ ಧಾತುಗಳೇ ಈ ವಸ್ತುವಿನಲ್ಲೂ ಇರುವುದೆಂದು ಹೇಳಲಾಗಿದೆ.

ಕೈಚೀಲ ಕಳೆದುಹೋಗಿದೆ

ತಿರುಮಕೂಡಲು ನರಸೀಪುರದಲ್ಲಿರುವ ತಿರುಮಕೂಡಲು ಫಿರ್ಕಾ ಶ್ಯಾನಭೋಗ್ ಶ್ರೀ ಅನಂತಪದ್ಮನಾಭಯ್ಯನವರಿಗೆ ಸೇರಿದ ಒಂದು ಕ್ಯಾನ್‌ವಾಸ್ ಕೈ ಚೀಲ ಮತ್ತು ಅದರೊಳಗೆ ಇದ್ದ ತಿರುಮಕೂಡಲು ಮತ್ತು ಸುಣ್ಣದಕೇರಿ ಗ್ರಾಮದ ಖಾತೆ, ಖಿರದಿಗಳು ... ಗಳಿಗೆ ಮತ್ತು ... ಪತ್ರಗಳು ... ನ್ನಡ ಸಾರು ... ಪೆಟ್ಟಿಗೆ ವನ್ನು ಬೀಗದ ಕೈಗೊಂಚಲು ಮತ್ತು ನಗದು 3ll ರೂಪಾಯಿ ಮೊನ್ನೆ ಮಧ್ಯಾಹ್ನ ಮೈಸೂರು ನಗರದ ಗಾಂಧಿ ಚೌಕದಲ್ಲಿ ಕಳೆದುಹೋಗಿವೆ. ಸಿಕ್ಕಿದವರು ಅವರಿಗೆ ತಲುಪಿಸಿದರೆ ಸೂಕ್ತ ಬಹುಮಾನ ಕೊಡುವುದಾಗಿ ತಿಳಿಸಲಾಗಿದೆ.

SREE GAYATHRI
TALKIES
From 13-6-57　For 3 days
Daily 3 Shows
THE AMBASSADOR'S DAUGHTER
(Cinemascope & Technicolor)
With – Olivia De Havilland
John Forsythe

Morning Show on 16th
INFERNO

- Coming Shortly -
BHOWANI JUNCTION

ಧಾನ್ಯದ ಕನಿಷ್ಠ ಬೆಲೆ ಬಗ್ಗೆ ಈಗ ನಿರ್ಧಾರವಿಲ್ಲ

ಪ್ರಧಾನಿ ನೆಹರೂರವರ ಸೂಚನೆ

ಆಹಾರ ಧಾನ್ಯಗಳ ಕನಿಷ್ಠಾಂಶದ ಬೆಲೆಯನ್ನು ಸಧ್ಯಕ್ಕೆ ಗೊತ್ತುಪಡಿಸುವುದಿಲ್ಲವೆಂದು ತಿಳಿದುಬಂದಿದೆ. ಪ್ರಧಾನಿ ನೆಹರೂರವರು ಸಂಸ್ಥಾನಗಳ ಮುಖ್ಯ ಮಂತ್ರಿಗಳಿಗೆ ಸೂಚನೆಯೊಂದನ್ನು ಕಳುಹಿಸಿ, ಬೆಲೆಯು ಹೆಚ್ಚಿನ ಮಟ್ಟದಲ್ಲಿರುವಾಗ ಕನಿಷ್ಠ ಬೆಲೆಯನ್ನು ಗೊತ್ತುಪಡಿಸುವುದರಲ್ಲಿ ಉಪಯೋಗವಿಲ್ಲವೆಂದು ತಿಳಿಸಿರುವರು. ಕಡಿಮೆ ಗೊತ್ತುಪಡಿಸಿದರೆ ಬೆಳೆ ಉತ್ಪತ್ತಿಗೆ ಬಾಧಕವೆಂದೂ, ಹೆಚ್ಚಾಗಿ ಇಟ್ಟರೆ ಅದರಿಂದ ದೇಶದ ಆರ್ಥಿಕ ವ್ಯವಸ್ಥೆಗೆ ಅಪಾಯವೆಂದೂ, ನೆಹರೂರವರು ತಿಳಿಸಿರುವುದಾಗಿ ಹೇಳಲಾಗಿದೆ. ಬೆಳೆಯನ್ನು ಹೆಚ್ಚಾಗಿ ತೆಗೆಯಲು ಉತ್ತೇಜನಕ್ಕಾಗಿ ಒಂದು ಎಕರೆಯಲ್ಲಿ ಹೆಚ್ಚು ಬೆಳೆದವರಿಗೆ ಬೋನಸ್ ಕೊಡಬಹುದೆಂದು ಅವರು ಸಲಹೆ ಮಾಡಿರುವರು.

ಹರಿಜನನ ಬಟ್ಟೆ ಒಗೆಯಲು ನಿರಾಕರಿಸಿದ ಧೋಬಿಗೆ ದಂಡ

ಪಾಟಿಯಾಲಾ ಬಳಿ ನಾಮನ ಎಂಬಲ್ಲಿ ಒಬ್ಬ ಧೋಬಿಯು ಹರಿಜನನೊಬ್ಬನ ಬಟ್ಟೆಗಳನ್ನು ಒಗೆಯಲು ನಿರಾಕರಿಸಿದುದಕ್ಕಾಗಿ ಅವನಿಗೆ ಅಲ್ಲಿನ ನ್ಯಾಯಾಧೀಶರು ಅಸ್ಪೃಶ್ಯತೆ ಅಪರಾಧದ ಶಾಸನದ ಪ್ರಕಾರ ೫೦ ರೂ ದಂಡವನ್ನು ವಿಧಿಸಿರುತ್ತಾರೆ.

ವಿವಾಹ ಮಹೋತ್ಸವ

ನರಸಿಂಹರಾಜ ಮೊಹಲ್ಲಾದಲ್ಲಿರುವ ಶ್ರೀ ಆರ್ ಮುಕುಂದಪ್ಪನವರು ತಮ್ಮ ಮಕ್ಕಳು ಶ್ರೀ ರಂಗಸ್ವಾಮಿಯವರಿಗೆ ಬೆಂಗಳೂರಿನ ಶ್ರೀ ವಿ ರಂಗಸ್ವಾಮಪ್ಪನವರ ಕುಮಾರಿ ಸೌ|| ಕನಕಾಂಬನನ್ನು ತಂದುಕೊಂಡು ಮೊನ್ನೆ ವಿವಾಹವನ್ನು ನೆರವೇರಿಸಿದರು.

ಕೃಷ್ಣರಾಜಪೇಟೆ ತಾಲ್ಲೂಕು ರಾಯಸಮುದ್ರದ ಪಟೇಲ್ ಶ್ರೀ ಕ ಕೆಂಗೌಡರು ತಮ್ಮ ಪುತ್ರ ಶ್ರೀ ಆರ್ ಕೆ ಹೊನ್ನೇಗೌಡರಿಗೆ ಶ್ರೀರಂಗಪಟ್ಟಣದ ಶ್ರೀ ಜಿ ಹೆಚ್ ವೆಂಕಟರಮಣೇಗೌಡರವರ ಸೌ|| ಲಲಿತರನ್ನು ತಂದುಕೊಂಡು ಮೊನ್ನೆ ಶ್ರೀರಂಗಪಟ್ಟಣದಲ್ಲಿ ವಿವಾಹವನ್ನು ನಡೆಸಿದರು.

ಓಮ್ಮವಸಾಹತುಗಳಲ್ಲಿ ಹಲವು ಶಾಲೆಭಾಷಿಕ ವಿಷಯಗಳ ಬಗ್ಗೆ ಮೈಸೂರು ಕೈತರಿಗೆ ಶಿಕ್ಷಣವೀಯಲು ಸಂಸ್ಥಾನಕ್ಕೆ ಸಧ್ಯದಲ್ಲೇ ಶಿಕ್ಷಾರ್ಥಿನ ಇಬ್ಬರು ಪ್ರವೀಣರು ಬರುವರು.

ಮೈಸೂರು ಪೇಟೆ ಧಾರಣೆ

ಬಂಗಾರ ತೊ||	೬೪ ೭೫	೬೭ ೦೦
ರಕ್ತಚೂರಿ	೬೦ ೫೦	೬೨ ೯೭
ಕೆಂಬತ್ತ	೩೧ ೦೦	
ಅಕ್ಕಿ	೨೯ ೫೦	೬೨ ೦೦
ರಾಗಿ	೪೮ ೫೦	೪೩ ೬೨
ಜೋಳ	೪೭ ೦೦	
ಕಡಲೆಕಾಯಿ	೯೮ ೦೦	೨೪ ೫೦
ಹರಳುಬೀಜ	೪೪ ೦೦	
ಹುಚ್ಚೆಳ್ಳು	೪೩ ೫೦	೪೬ ೦೩
ಹೊಂಗೇಬೀಜ	೫೬ ೦೦	೨೯ ೫೫
ಎಳ್ಳು	೭೭ ೨೫	
ಹುರುಳಿ	೬೨ ೭೫	೬೩ ೮೭
ಹೆಸರು	೪೬ ೫೦	
ಕಡಲೆ	೪೫ ೦೦	
ಉದ್ದು	೬೧ ೦೦	೬೭ ೨೫
ಹಲಸಂದೆ	೩೦ ೨೫	೫೦ ೮೭
ಅವರೆ	೪೦ ೦೦	೫೬ ೭೫
ಸೀಮೆದವಬೀಜ	೯೭ ೨೨	
ಹುಗೆಕಾಯಿ	೭ ೬೨	
ಹುಣಸೇಹಣ್ಣು	೪ ೦೨	೯ ೫೦
ಮೆಣಸಿನಕಾಯಿ	೧೨ ೦೦	೧೯ ೦೦
ತೆಂಗಿನಕಾಯಿ	೧೯೫ ೫೦	೨೭೪ ೫೦

THE NATIONAL INSTITUTE OF COMMERCE, Old Mysore Bank Rd Mysore CLASSES in TYPEWRITING & SHORT HAND in full swing Join Now

ಮೈಸೂರಿನಲ್ಲಿ ಪ್ರತಿ ತಿಂಗಳು 17 ನೇ ತಾರೀಕು

ವಿಶ್ವ ವಿಖ್ಯಾತವಾಗಿರುವ

ನವರತ್ನ ಕಲ್ಪ

ವಿಜ್ಞಾಪನವನ್ನು ಕಂಡುಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಬೆಳಿಗ್ಗೆ 7-30ರಿಂದ ಸಂಜೆ 5 ಗಂಟೆಯವರೆಗೆ ಭೇಟಿ ಮಾಡಬಹುದು　ಫೋನ್ ನಂ 590

ಮೇಲ್ಕಂಡ ವಿಷಯವನ್ನು ಗಮನಿಸಿ ಅವರ ಪರೀಕ್ಷೆ ವೈದ್ಯಕೀಯ ಸಲಹೆಯನ್ನು ಪಡೆಯಿರಿ ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು ವಿಚಾರದಲ್ಲಿ ಸಂಚರಿಸುವರು

ನಿಮ್ಮ ಹಾಸೂನ್ಯವಾದ ಹಾಗೂ ಹಳೆಯ ವ್ಯಾಧಿಗಳಿಗೆ ವಕ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ ಇವು, ಪದ್ಮರಾಗ ಮತ್ತು ಪ್ರಶಸ್ತ ಹೀಗೆ ಈ 9 ಅನುಭೂತ ಹರಳುಗಳ ಸಂಯೋಗವಾದ

ನವರತ್ನ ಕಲ್ಪ — ಉಪಯೋಗಿಸಿರಿ

ಅತ್ಯುತ್ತಮ ಆರೋಗ್ಯದಾಯಕವಾದ ಒಂದೇ ಔಷಧಿ ಇಂದೊಂದೇ ಉಚಿತ ಸಾಹಿತ್ಯಗಳಿಗಾಗಿ ಬರೆಯಿರಿ

NAVRATNA KALPA PHARMACY,
JULLUNDUR CITY (India)

THE CHAMPION METROPOLITAN COLLEGE OF COMMERCE
Co operators' Home 100' Road Mysore
APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE, Diploma in Stenography COST & WORKS ACCOUNTANCY Banking, Shorthand, Typewriting etc.
Estd 1917　Fully qualified full-time staff — Educational atmosphere　Fine building and up-to-date equipment — Decent　Reading Room　Western Business Education　List — Good results — College's Own Diploma also
M S PUTTANNA, *Vice-Principal*　　P SUBBARAVA SASTRY, *Principal*

Edited, Printed and Published by A R Nagarajan at Sadhvi Press, Irwin Road, Mysore

ರಿಜಿಸ್ಟರ್ಡ್ ನಂ 792

ಇಂದಿನ ಪತ್ರಿಕೆ 3 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋ 446

ಸಂಪುಟ : ೧೫] SADHVI : SUNDAY 16—6—1957 ಮೈಸೂರು : ಭಾನುವಾರ ೧೬—೬—೧೯೫೭ : [ಸಂಚಿಕೆ : ೩೧೨

ಸಂಸ್ಥಾನದ ಆಯುವ್ಯಯದಲ್ಲಿ ೯ ಕೋಟಿ ರೂ. ಖೋತಾ

ಸಂಸ್ಥಾನದ ಆಯುವ್ಯಯದಲ್ಲಿ ೯ ಕೋಟಿ ರೂ. ಖೋತಾ

ಹೊಸ ತೆರಿಗೆಗಳ ಬದಲು ಈಗಿನವುದರಲ್ಲಿ ಏರಿಕೆ

ಬೆಂಗಳೂರು ೧೬

ಸಂಸ್ಥಾನದ ವಿಧಾನ ಸಭೆಯಲ್ಲಿ ನೆನ್ನೆ ಅರ್ಥ ಮಂತ್ರಿ ಶ್ರೀ ಟಿ ಮರಿಯಪ್ಪನವರು ಪ್ರಸಕ್ತ ಸಾಲಿನ(೯ ತಿಂಗಳಿಗೆ ಮಾತ್ರ) ಆಯವ್ಯಯ ಅಂದಾಜನ್ನು ಮಂಡಿಸಿದರು. ಅದರ ಪ್ರಕಾರ ಆದಾಯವು ೫೯ ಕೋಟಿ,ವೆಚ್ಚವು ೬೦ ೫೦ ಕೋಟಿ ರೂ ಗಳು ಆಗಿ ೯ ೩೬ ಕೋಟಿ ರೂ ಖೋತಾ ಬೀಳುವುದು ಆದರೆ ಇದನ್ನು ನಿವಾರಿಸಲು ಸಚಿವರು ಯಾವ ಹೊಸ ತೆರಿಗೆಗಳನ್ನೂ ಸೂಚಿಸಲಿಲ್ಲ ಅದರ ಬದಲು ಈಗಿನ ಮಾರಾಟ ತೆರಿಗೆ, ವಾಹನ ತೆರಿಗೆ, ಸ್ಟ್ಯಾಂಪ್ ಡ್ಯೂಟಿ ಮುಂತಾದುವುಗಳಲ್ಲಿ ದರಗಳನ್ನು ಸಮನ್ವಯಗೊಳಿಸುವುದರಿಂದ ೩ ಕೋಟಿ ರೂ ಖೋತಾ ತುಂಬಲು ಯೋಚಿಸಲಾಗಿದೆ ಉಳಿದುದನ್ನು ಸಾಲ ಮತ್ತು ಇತರ ವಿಧಾನಗಳಿಂದ ಪೂರೈಸಲು ಉದ್ದೇಶಿಸಲಾಗಿದೆ

ಆಯುವ್ಯಯವನ್ನು ಸಭೆಯ ಮುಂದೆ ಮಂಡಿಸಿದಾಗ ಸಚಿವರು ಭಾಷಣ ಮಾಡಿ ಪಂಚವಾರ್ಷಿಕ ಯೋಜನೆಯ ಈ ಸಾಲಿನ ಕಾರ್ಯಗಳನ್ನು ಎಷ್ಟೋ ಕಡಿಮೆ ಮಾಡಿದರೂ, ಅವುಗಳಿಂದ ಒಟ್ಟು ೮ ೩೩ ಕೋಟಿ ರೂ ಖೋತಾ ಬೀಳುತ್ತದೆಂದೂ, ಯೋಜನೆಯನ್ನು ಬಿಟ್ಟು ಉಳಿದ ವೆಚ್ಚದ ಬಾಬುಗಳಲ್ಲಿ ಸರ್ಕಾರವು ಎಷ್ಟೋ ಉಳಿತಾಯವನ್ನು ಮಾಡಿರುತ್ತಾದರೂ ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲಿನ ಕಾರ್ಮಿಕರಿಗೆ ಇತರ ನೌಕರರ ಮಟ್ಟದ ಕುಟ್ಟಿ ಭತ್ಯ ಮತ್ತು ಗ್ರಾಮಾಧಿಕಾರಿಗಳಿಗೆ ಹೆಚ್ಚಿನ ಸಂಭಾವನೆಗಳಿಗಾಗಿ ೮ ಲಕ್ಷ ರೂ ವೆಚ್ಚವು ಆಗುತ್ತದೆಂದೂ ತಿಳಿಸಿದರು ಹೊಸ ತೆರಿಗೆಗಳ ಬದಲು ಹೆಚ್ಚಿನ ಆದಾಯವನ್ನು ಪಡೆಯಲು ಯತ್ನಿಸಲಾಗುವುದೆಂದೂ ತಿಳಿಸಿದರು ಸರ್ಕಾರವು ಕೈಗೊಳ್ಳಲು ಉದ್ದೇಶಿಸಲಾಗಿರುವ ಇತರ ಕ್ರಮಗಳನ್ನು ವಿವರಿಸಿದರು ಮತ್ತು ಕೇಂದ್ರದಿಂದ ಹೆಚ್ಚಿನ ಧನ ಸಹಾಯದ ಬಗ್ಗೆ ಫೈನಾನ್ಸ್ ಕಮಿಷನ್ನಿನವರು ಶಿಫಾರಸು ಮಾಡುವರೆಂದು ಆಶಿಸಿದರು

ಆಹಾರೋತ್ಪತ್ತಿಯನ್ನು ಹೆಚ್ಚಿಸಲು ಪ್ರಥಮ ಗಮನ ಕೊಡಬೇಕು

ಪ್ರದೇಶ ಕಾಂಗ್ರೆಸ್ಸುಗಳಿಗೆ ಪ್ರಧಾನ ಕಾರ್ಯದರ್ಶಿಯವರ ಸೂಚನೆ

ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳಿಗೆ ಪತ್ರ ಬರೆದು, ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಆರ್ಥಿಕ ಪರಿಸ್ಥಿತಿಯು ಆಹಾರದ ಉತ್ಪಾದನೆಯನ್ನು ಅಧಿಕಗೊಳಿಸುವುದನ್ನೇ ಅವಲಂಬಿಸಿರುವುದರಿಂದ ಬರುವ ೧೮ ತಿಂಗಳ ಅವಧಿಯುದ್ದಕ್ಕೂ ದರೂಬದೇಶ ಕಾಂಗ್ರೆಸ್ ಸಮಿತಿಗಳು ಹೆಚ್ಚು ಆಹಾರೋತ್ಪತ್ತಿಗೆ ಪ್ರಥಮ ಗಮನ ಕೊಡಬೇಕೆಂದು ಸೂಚಿಸಿರುವರು

ಸರ್ಕಾರೀ ಕೈಗಾರಿಕಾ ಸಂಸ್ಥೆಗಳ ಕಾರ್ಮಿಕರಿಗೆ ತುಟ್ಟಿಭತ್ಯ

ಇತರ ಸರ್ಕಾರಿ ನೌಕರರಿಗೆ ಕೊಡುತ್ತಿರುವಂತೆಯೇ ದೊರೆಯುವುದು

ಬೆಂಗಳೂರು ೧೬

ಕೈಗಾರಿಕಾ ಸಚಿವ ಶ್ರೀ ಸಿ ಎಂ ಪೂಣಚ್ಚರವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲಿರುವ ಕೆಲಸಗಾರರನ್ನು ಮೂರು ದರ್ಜೆಯಾಗಿ ವಿಂಗಡಿಸಿ ಪ್ರತಿ ದರ್ಜೆಯವರ ಸಂಬಳಗಳನ್ನು ಗೊತ್ತುಪಡಿಸಲಾಗುವುದೆಂದು ತಿಳಿಸಿದರು ಅಲ್ಲದೆ ಪ್ರತಿ ವಯಸ್ಕ ಪುರುಷನಿಗೂ ಒಂದು ರೂ ಮತ್ತು ಹೆಂಗಸರು ಮತ್ತು ಹುಡುಗರಿಗೆ ತಲಾ ಹತ್ತು ಆಣೆ ಕನಿಷ್ಠ ದಿನಗೂಲಿ ಕೊಡಲು ನಿರ್ಧರಿಸಲಾಗಿರುವುದೆಂದೂ ಅವರು ತಿಳಿಸಿದರು.

ಸರ್ಕಾರೀ ರೇಷ್ಮೆ ಕಾರ್ಖಾನೆ ಒಂದನ್ನು ಬಿಟ್ಟು ಉಳಿದ ಎಲ್ಲಾ ಸರ್ಕಾರೀ ಕೈಗಾರಿಕೆಗಳ ಕಾರ್ಮಿಕರಿಗೆ ಕಳೆದ ಜನವರಿಯಿಂದ ಇತರ ಸರ್ಕಾರಿ ನೌಕರರಿಗೆ ಕೊಡುತ್ತಿರುವ ಮಟ್ಟದಲ್ಲೇ ತುಟ್ಟಿಭತ್ಯವನ್ನು ಕೊಡಲಾಗುವುದೆಂದೂ ಸಚಿವರು ಅವರಿಗೆ ೧ ಲಕ್ಷಕ್ಕೂ ಮೀರಿದ ಜನ ಸಂಖ್ಯೆಯ ನಗರದಲ್ಲೂ ಫಿಲೇಚರ್ ಕಾರ್ಖಾನೆ ಕೆಲಸಗಾರರಿಗೆ ೩೦ ರೂ ಬದಲು ೨೫ ರೂ ಮಾತ್ರ ಬರುವುದೆಂದೂ, ರೇಷ್ಮೆ ಕೆಲಸಗಾರರಿಗೆ ಇತರ ಸ್ಥಳಗಳಲ್ಲೂ ಇಷ್ಟೇ ಕೊಡಲಾಗುವುದೆಂದೂ ಅವರು ಸೂಚಿಸಿದರು

ಸಂಗೀತ ನಾಟಕ ಅಕ್ಯಾಡೆಮಿ ರದ್ದಾಗುವುದಿಲ್ಲ

ಸಂಸ್ಥಾನದಲ್ಲಿ ಸಂಗೀತ, ನಾಟಕ ಮತ್ತು ನೃತ್ಯ ಅಕ್ಯಾಡೆಮಿಯನ್ನು ರದ್ದುಗೊಳಿಸುವ ಉದ್ದೇಶವು ಸರ್ಕಾರದವರಿಗಿಲ್ಲವೆಂದು ಸ್ಪಷ್ಟ ಪಡಿಸಲಾಗಿದೆ ಈ ವಿಷಯವನ್ನು ವಿದ್ಯಾ ಸಚಿವ ಶ್ರೀ ಎ. ವೆಂಕಟಪ್ಪನವರು ನೆನ್ನೆ ವಿಧಾನ ಪರಿಷತ್ತಿನಲ್ಲಿ ತಿಳಿಸಿ, ಅಕ್ಯಾಡೆಮಿಯನ್ನು ಪುನರ್ವ್ಯವಸ್ಥೆಗೊಳಿಸಿ ಫಲಪ್ರದವಾದ ಕೆಲಸವಿದನ್ನು ತಯಾರಿಸುವ ಕಾರ್ಯಕ್ಕೆ ಶೀಘ್ರವೇ ಕೈಹಾಕಬೇಕೆಂಬುದೇ ಸರ್ಕಾರದ ಉದ್ದೇಶವೆಂದು ತಿಳಿಸಿದರು

ರಾಜಸ್ಥಾನದ ಸಚಿವರಿಂದಲೂ ಸಂಬಳ ಖೋತಾ

ಕೇಂದ್ರ ಸರ್ಕಾರದ ಮಂತ್ರಿಗಳ ಮೇಲ್ಪಂಕ್ತಿಯನ್ನನುಸರಿಸಿ ರಾಜಸ್ಥಾನದ ಸಚಿವರುಗಳೂ ತಮ್ಮ ಸಂಬಳದಲ್ಲಿ ಶೇಕಡ ೧೦ರಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿರುವರೆಂದೂ,ಈ ಬಗ್ಗೆ ಶೀಘ್ರದಲ್ಲೇ ಆಜ್ಞೆ ಹೊರಬೀಳುವುದೆಂದೂ ವರದಿಯಾಗಿದೆ

ಸಿ ಡಿ ದೇಶಮುಖ್‌ರವರಿಗೆ ಪ್ರಶಸ್ತಿ ನೀಡಲು ವಿಶೇಷ ಘಟಿಕೋತ್ಸವ

ವಿಶ್ವವಿದ್ಯಾಲಯಗಳ ಗ್ರಾಂಟ್ಸ್ ಸಮಿತಿ ಅಧ್ಯಕ್ಷ ಶ್ರೀ ಸಿ ಡಿ ದೇಶಮುಖ್‌ರವರಿಗೆ ಮೈಸೂರು ವಿಶ್ವವಿದ್ಯಾಲಯದವರು ಗೌರವ 'ಡಾಕ್ಟರ್ ಆಫ್ ಲಾ' ಪ್ರಶಸ್ತಿಯನ್ನೀಯಲು ಇದೇ ೩೦ನೇ ತಾರೀಕು ವಿಶೇಷ ಘಟಿಕೋತ್ಸವವನ್ನು ಏರ್ಪಡಿಸಿರುವರು

ಇನ್‌ಫ್ಲುಯೆಂಜಾ ವ್ಯಾಧಿಯ ತೀವ್ರ ಪರಿಣಾಮ

ಬೆಂಗಳೂರಿನಲ್ಲಿ ೯,೦೫೦ ಮಂದಿಗೆ ವ್ಯಾಧಿ

ಬೆಂಗಳೂರು ೧೬

ಇನ್‌ಫ್ಲುಯೆಂಜಾ ಉಪಟಳವು ಇಲ್ಲಿ ದಿನೇದಿನೇ ಪ್ರಬಲವಾಗುತ್ತಾ ನೆನ್ನೆ ಹೊಸದಾಗಿ ೧,೨೦೩ ಮಂದಿಗೆ ವ್ಯಾಧಿ ತಗಲಿತು ಇದುವರೆಗೆ ಒಟ್ಟು ೯,೦೫೦ ಮಂದಿ ಈ ಬಾಯಿಲೆಯಿಂದ ನರಳುತ್ತಿವರೆಂದು ತಿಳಿದುಬಂದಿದೆ ಇದರ ಪರಿಣಾಮವಾಗಿ ನಗರದ ಚಿತ್ರಮಂದಿರಗಳಲ್ಲಿ ಬೆಳಗಿನ ಪ್ರದರ್ಶನಗಳನ್ನೂ ಮತ್ತು ಮ್ಯಾಟಿನಿಗಳನ್ನೂ ನಿಷೇಧಿಸಿ ಆಜ್ಞೆ ಹೊರಡಿಸಲಾಗಿದೆ

ಇನ್‌ಫ್ಲುಯೆಂಜಾದಿಂದ ಸರ್ಕಾರಿ ಬಸ್ ಟ್ರಾನ್ಸ್‌ಪೋರ್ಟ್ ನೌಕರರ ಮೇಲೆ ಹೆಚ್ಚಿನ ಪ್ರಭಾವವುಂಟಾಗಿ ಶೇಕಡ ೪೦ ರಷ್ಟು ಮಂದಿ ನೌಕರರು ಬಾಯಿಲೆಯಿಂದ ನರಳುತ್ತಿರುವುದರಿಂದ, ಬಸ್ಸುಗಳಲ್ಲಿ ಹಲವು ಮಂದಿ ಇನ್‌ಸ್ಪೆಕ್ಟರುಗಳು ಮತ್ತು ಇತರ ನೌಕರರೇ ಕಂಡಕ್ಟರುಗಳ ಕೆಲಸ ಮಾಡುತ್ತಿರುವರು ಹಲವು ಕಡೆ ಬಸ್ಸುಗಳನ್ನು ನಿಲ್ಲಿಸಲಾಗಿದೆ

ಹಲವು ಅಂಚೆ ನೌಕರರಿಗೂ ಬಾಯಿಲೆಯಾಗಿರುವುದರಿಂದ ನೆನ್ನೆ ಹಲವು ಕಡೆ ಒಂದೇ ಬಾರಿ ಮಾತ್ರ ಅಂಚೆ ಬಟವಾಡೆ ನಡೆಯಿತು

ನಗರದ ಬಳಿ ಸಣ್ಣ ರೈಲ್ವೆ ಸೇತುವೆ ಕುಸಿಯಿತು

ಮೂರು ಜನ ಕೆಲಸಗಾರರಿಗೆ ತೀವ್ರಗಾಯ

ಮೈಸೂರು ೧೬

ನಗರದ ರೈಲ್ವೆ ನಿಲ್ದಾಣದಿಂದ ೩ ಮೈಲಿ ದೂರದಲ್ಲಿ ಚಾಮುಂಡಿ ತೆಂಗಿನಪುರದ ಬಳಿ ಇರುವ ಒಂದು ಸಣ್ಣ ರೈಲ್ವೆ ಸೇತುವೆಯು ನಿನ್ನೆ ಮಧ್ಯಾಹ್ನ ಕುಸಿದುಬಿದ್ದುದರಿಂದ ಬೆಂಗಳೂರಿಗೆ ಹೋಗಬೇಕಾಗಿದ್ದ ಮೇಲ್ ಗಾಡಿಯು ಅಲ್ಲಿಯವರೆಗೆ ಹೋಗಿ ಹಿಂದಕ್ಕೆ ಬಂದಿತು ರೈಲು ಸಮೀಪಿಸುತ್ತಿದ್ದಾಗ ಅದರ ಚಲನದ ವೇಗದಿಂದ ಸೇತುವೆ ಕುಸಿದು ಅಲ್ಲಿ ಕೆಲಸ ಮಾಡುತ್ತಿದ್ದ ಐದು ಜನರು ಮಣ್ಣಿನಲ್ಲಿ ಹೂತುಹೋದರು ಅವರುಗಳನ್ನು ಪ್ರಯಾಸದಿಂದ ಮೇಲಕ್ಕೆತ್ತಿ ಮೂವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಗಿದೆ ಸೇತುವೆಯನ್ನು ದುರಸ್ತು ಮಾಡಿದಮೇಲೆ ಮೇಲ್ ಗಾಡಿಯು ರಾತ್ರಿ ೭ ಗಂಟೆಕ್ಕೆ ಪಟೆಲ್ ಗಾಡಿಯು ರಾತ್ರಿ ೧೦ ಗಂಟೆಗೂ ಹೊರಟುವು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೧೫ ಎಸ್ ಲಕ್ಷ್ಮಣಶಾಸ್ತ್ರಿ ದೇವರ ನಾಮ ೮ ೧೫ ಸಂಗೀತ ಪಾಠ ಮಧ್ಯಾಹ್ನ ೧೨ ಎಸ್ ಲಕ್ಷ್ಮಣಶಾಸ್ತ್ರಿ ಗಾಯನ ೧೨ ೩೦ ಆರ್ ಎಸ್. ಕೃಷ್ಣಮೂರ್ತಿ ವೀಣೆ ೧ ಹಿಂದಿ ಭಜನೆ ೧—೨೦ ರಿಕಾರ್ಡ್ ೧ ೩೦ ಕ್ಲಾರಿಯೊನೆಟ್ ೨ ೧೫ ಹೈಸ್ಕೂಲುಗಳಿಗಾಗಿ ಸಂಜೆ ೬—೧೦ ಜನಪದ ಗೀತೆಗಳು ೬ ೩೦ ಗ್ರಾಮಸ್ಥರಿಗಾಗಿ ೭—೩೦ ಸಿ ಡಿ ಗೀತೆ ೮ ಗಾನ ವೃಂದ ೮—೧೫ ವಾದ್ಯಗಳ ಜೋಡಿಕೆ ೮—೪೦ ನಾಟಕ ೯—೧೫ ಇಂಗ್ಲಿಷಿನಲ್ಲಿ ಭಾಷಣ ೯—೩೦ ಕಥಾ ಕಾಲಕ್ಷೇಪ ೧೦ ಎಚ್ ಎಸ್ ಕೃಷ್ಣಮೂರ್ತಿ ವೀಣೆ

ಆಹಾರದ ಪದಾರ್ಥಗಳ ಮೇಲಿನ ತೆರಿಗೆಯ ಪುನರ್ವಿಮರ್ಶೆ

ಶಾಸನ ಸಭೆಯಲ್ಲಿ ಮಸೂದೆಯ ಮಂಡನೆ

ಬೆಂಗಳೂರು ೧೬

ಫಲಾಹಾರ ಮಂದಿರಗಳಲ್ಲಿ ಆಹಾರ ಪದಾರ್ಥಗಳು ಮತ್ತು ಪಾನೀಯಗಳ ಮಾರಾಟದ ಮೇಲಿನ ತೆರಿಗೆಯನ್ನು ಪುನರ್ವಿಮರ್ಶಿಸುವ ಮಸೂದೆಯೊಂದನ್ನು ನೆನ್ನೆ ಶಾಸನ ಸಭೆಯಲ್ಲಿ ಹಣಕಾಸು ಮಂತ್ರಿ ಶ್ರೀ ಟಿ ಮರಿಯಪ್ಪನವರು ಮಂಡಿಸಿದರು

ಅದರ ಪ್ರಕಾರ ೭,೫೦೦ ರಿಂದ ೧೦ ಸಾವಿರ ರೂ ವಾರ್ಷಿಕ ವರಮಾನದ ಮೇಲೆ ೭೫ ರೂ, ೧೦ ಸಾವಿರದಿಂದ ೩೬ ಸಾವಿರ ರೂ ವರಮಾನದವರಿಗೆ ೧೦ ಸಾವಿರದವರೆಗೆ ೭೫ ರೂ. ತೆರಿಗೆ ಮತ್ತು ಅದಕ್ಕೆ ಹೆಚ್ಚಿನ ವರಮಾನದ ಮೇಲೆ ರೂ ಗೆ ೩ ನಯೇ ಪೈಸೆ ೩೬ ಸಾವಿರಕ್ಕೆ ಮೀರಿದ ವರಮಾನದವರಿಗೆ ಮೊದಲು ೩೬ ಸಾವಿರ ರೂ ವರೆಗೆ ರೂ ಗೆ ೩ ನಯೆ ಪೈಸೆ ಮತ್ತು ಉಳಿದ ಮೊತ್ತಕ್ಕೆ ರೂ ಗೆ ೬ ನಯೇ ಪೈಸೆಯಂತೆ ತೆರಿಗೆ ಕೊಡಬೇಕಾಗುವುದು

ಸಂಸ್ಥಾನದ ಮಾಧ್ಯಮಿಕ ಶಾಲೆಗಳಿಗೆ ೮೪೧ ಮಂದಿ ಹೆಚ್ಚು ಶಿಕ್ಷಕರು

ಸಂಸ್ಥಾನದ ಮಾಧ್ಯಮಿಕ ಶಾಲೆಗಳಲ್ಲಿ ೫ ಮತ್ತು ೬ನೇ ತರಗತಿಗಳನ್ನು ಆರಂಭಿಸಲು ೮,೦೪೩೦೦ ರೂ ವೆಚ್ಚದಲ್ಲಿ ೮೪೧ ಮಂದಿ ಹೆಚ್ಚು ಉಪಾಧ್ಯಾಯರನ್ನು ನೇಮಿಸಲು ಸರ್ಕಾರದವರು ಆಜ್ಞೆ ಮಾಡಿದ್ದಾರೆ ಶಿಕ್ಷಕನೊಬ್ಬನಿಗೆ ೩೫ರಂತೆ ವಿದ್ಯಾರ್ಥಿಗಳು ದೊರೆಯುವಂತಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಈ ತರಗತಿಗಳನ್ನು ಆರಂಭಿಸಬಹುದೆಂದೂ ಸೂಚಿಸಲಾಗಿದೆ

ಈಜಿಪ್ಟಿಗೆ ರಷ್ಯದಿಂದ ೩ ಸಬ್ ಮೆರೀನುಗಳು

ರಷ್ಯವು ಈಜಿಪ್ಟಿಗೆ ೩ ಸಬ್ ಮೆರೀನ್ (ಜಲಾಂತರ್ಗಾಮಿ ಹಡಗು)ಗಳನ್ನು ಹೊಸದಾಗಿ ನೀಡಿದೆಯೆಂದೂ, ಅವು ಸಧ್ಯದಲ್ಲೇ ಈಜಿಪ್ಟನ್ನು ತಲಪಲಿವೆಯೆಂದೂ ವರದಿಯಾಗಿದೆ

ಈ ವರ್ಷ ನೈಜೀರಿಯಕ್ಕೆ ಸ್ವಪ್ರಭುತ್ವ

ಈ ವರ್ಷ ಪೂರ್ವ ಮತ್ತು ಪಶ್ಚಿಮ ನೈಜೀರಿಯಗಳಿಗೆ ಸ್ವಪ್ರಭುತ್ವವನ್ನು ನೀಡಲು ಬ್ರಿಟನ್ನು ಒಪ್ಪಿರುತ್ತದೆ ಈ ಬಗ್ಗೆ ಕಳೆದ ೧೮ ದಿವಸಗಳಿಂದ ಲಂಡನ್ನಿನಲ್ಲಿ ಸಮಾಲೋಚನೆಗಳು ನಡೆದುವು

ವೀರಶೈವ ಅನಾಥಾಲಯ

ತ್ಯಾಗರಾಜಾ ರಸ್ತೆಯಲ್ಲಿರುವ ಸುಂದರೇಶ ನಾಯಕ್ ಶ್ರೀ ಟಿ. ಎಂ. ಸಿದ್ದಪ್ಪನವರ ವೀರಶೈವ ಅನಾಥಾಲಯಕ್ಕೆ ಸೇರಲಿಚ್ಛಿಸುವ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಇದೇ ಮಾಹೆ ೨೫ ರೊಳಗೆ ಅರ್ಜಿಗಳನ್ನು ಕಳುಹಿಸಿಕೊಳ್ಳಬಹುದೆಂದು ತಿಳಿಸಲಾಗಿದೆ

ಇನ್‌ಫ್ಲುಯೆಂಜಾದಿಂದ ಅರಮನೆಯಲ್ಲಿ ಪ್ರೇಕ್ಷಕರಿಗೆ ಪ್ರವೇಶವಿಲ್ಲ

ನಗರದಲ್ಲಿ ಇನ್‌ಫ್ಲುಯೆಂಜಾ ಬಾಯಿಲೆ ಹರಡುತ್ತಿರುವುದರಿಂದ ಅರಮನೆಯಲ್ಲಿ ಪ್ರೇಕ್ಷಕರಿಗೆ ತಾತ್ಕಾಲಿಕವಾಗಿ ಪ್ರವೇಶವನ್ನು ನಿಷೇಧಿಸಲಾಗಿದೆ.

ವಾರ ಭವಿಷ್ಯ

ತಾ|| ೧೬-೬-೫೭ ರಿಂದ ೨೨-೬-೫೭ ರ ವರೆಗೆ

ಮೇಷ.— ಆರೋಗ್ಯ ಸಾಧಾರಣ, ಚಿಂತೆ, ಆರ್ಥಿಕ ಸ್ಥಿತಿ ಅತೃಪ್ತಿಕರ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಶುಭ ಫಲ, ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಫಲಗಳು, ಅಪಘಾತ ಭಯ

ವೃಷಭ.– ಆರೋಗ್ಯ ಸಾಧಾರಣ, ಇಷ್ಟಸಿದ್ಧಿ, ಮಂಗಳ ಕಾರ್ಯಗಳು, ಧನವ್ಯಯ, ಮಿತ್ರರ ಸಹಕಾರ, ವ್ಯಾಪಾರವ್ಯವಹಾರಗಳಲ್ಲಿ ಜಯ, ವಿದ್ಯಾರ್ಥಿಗಳಿಗೆ ಸಾಧಾರಣ ಫಲಗಳು

ಮಿಥುನ — ಅನಾರೋಗ್ಯ, ಆರ್ಥಿಕ ಸ್ಥಿತಿ ತೃಪ್ತಿಕರ, ವ್ಯಾಪಾರವ್ಯವಹಾರಗಳಲ್ಲಿ ಅಪಜಯ, ಪ್ರವಾಸ ಯೋಗ, ವಿದ್ಯಾರ್ಥಿಗಳಿಗೆ ಶುಭ ಫಲಗಳು

ಕರ್ಕಾಟಕ — ಆರೋಗ್ಯ ಸಾಧಾರಣ, ಚಿಂತೆ, ಧನಲಾಭ, ಆದರೆ ಮಿತ್ರರಿಂದಲೇ ಮೋಸ, ಗೃಹದಲ್ಲಿ ಕಲಹ, ವ್ಯಾಪಾರವ್ಯವಹಾರಗಳಲ್ಲಿ ಜಯ, ಅಪಘಾತ ಭಯ

ಸಿಂಹ:- ಆರೋಗ್ಯ ಉತ್ತಮ, ಮಿತ್ರರಿಂದ ಸಹಾಯ, ಧನಲಾಭ, ಮಂಗಳ ಕಾರ್ಯಗಳು ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಫಲಗಳು, ವಿದ್ಯಾರ್ಥಿಗಳಿಗೆ ಸಾಧಾರಣ ಫಲ

ಕನ್ಯಾ:- ಧನಲಾಭ, ಸ್ತ್ರೀಯರಿಗೆ ಉತ್ತಮ ಫಲಗಳು, ಆರೋಗ್ಯ ತೃಪ್ತಿಕರ, ಸಮಾಜದಲ್ಲಿ ಪ್ರಗತಿ, ವ್ಯಾಪಾರವ್ಯವಹಾರಗಳಲ್ಲಿ ಅಪಜಯ, ವಿದ್ಯಾರ್ಥಿಗಳಿಗೆ ಉತ್ತಮ ಫಲ

ತುಲಾ.– ಆರೋಗ್ಯ ಉತ್ತಮ, ಚಿಂತೆ, ವಿಪರೀತ ನಷ್ಟ, ಸ್ತ್ರೀಯರಿಂದ ಸಹಕಾರ, ಮಿತ್ರರಿಂದಲೇ ಕಿರುಕುಳ, ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಫಲಗಳು, ವಿದ್ಯಾರ್ಥಿಗಳಿಗೆ ಅಶುಭ ಫಲಗಳು

ವೃಶ್ಚಿಕ —ಆರೋಗ್ಯ ಸಾಧಾರಣ, ಧನಲಾಭ, ಮಿತ್ರರಿಂದ ಸಹಾಯ, ವ್ಯಾಪಾರವ್ಯವಹಾರಗಳಲ್ಲಿ ಜಯ, ಪ್ರವಾಸ ಸಂಭವ, ವಿದ್ಯಾರ್ಥಿಗಳಿಗೆ ಉತ್ತಮ ಫಲಗಳು

ಧನು —ಸತ್ಕಾರ್ಯ ಸಮಾಜದಲ್ಲಿ ಪ್ರತಿ, ಮಂಗಳ ಕಾರ್ಯಗಳು, ಅನಾರೋಗ್ಯ ಪ್ರವಾಸದಿಂದ ಹಾನಿ, ವಿದ್ಯಾರ್ಥಿಗಳಿಗೆ ಅಶುಭ ಫಲಗಳು

ಮಕರ:—ಆರೋಗ್ಯ ಉತ್ತಮ, ಇಷ್ಟಸಿದ್ಧಿ ಮಿತ್ರರಿಂದ ಸಹಾಯ, ಗೃಹದಲ್ಲಿ ಕಲಹ ಚಿಂತೆ ವ್ಯಾಪಾರವ್ಯವಹಾರಗಳಲ್ಲಿ ಲಾಭ, ವಿದ್ಯಾರ್ಥಿಗಳಿಗೆ ಶುಭ

ಕುಂಭ.—ಅನಾರೋಗ್ಯ, ಚಿಂತೆ ಸ್ವಜನ ಕಲಹ, ಧನಲಾಭ, ಪ್ರವಾಸ ಸಂಭವ, ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಫಲಗಳು, ವಿದ್ಯಾರ್ಥಿಗಳಿಗೆ ಉತ್ತಮ ಫಲ

ಮೀನ —ಆರೋಗ್ಯ ಉತ್ತಮ, ಧನಲಾಭ ಹಿರಿಯರಿಂದ ಸನ್ಮಾನ, ಪ್ರವಾಸ ಸಂಭವ, ವ್ಯಾಪಾರವ್ಯವಹಾರಗಳಲ್ಲಿ ಜಯ, ಧನ ವ್ಯಯ, ವಿದ್ಯಾರ್ಥಿಗಳಿಗೆ ಶುಭ.

ಯಾದವ ವಿದ್ಯಾರ್ಥಿ ನಿಲಯ

ನಗರದ ಗೊಲ್ಲಗೇರಿಯಲ್ಲಿರುವ ಯಾದವ ವಿದ್ಯಾರ್ಥಿ ನಿಲಯದಲ್ಲಿ ಯಾದವ ಜನಾಂಗದ ಕಾಲೇಜು ತರಗತಿಯ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ಸೌಕರ್ಯ ಏರ್ಪಡಿಸಲಾಗಿದೆ ಅಪೇಕ್ಷೆ ಪಡುವವರು ಇದೇ ತಿಂಗಳು ೩೦ನೇ ತಾರೀಖಿನೊಳಗಾಗಿ ನಿಲಯದ ವಾರ್ಡನ್‌ರವರಿಗೆ ಬರೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ ಮೈಸೂರು (Estd 1911)

ಸ್ವಾಗತ ಸಮಾರಂಭಗಳು

ನಿವೃತ್ತ ಐ ಎ ಎಸ್ ಅಧಿಕಾರಿಗಳಾದ ಶ್ರೀ ಜೆ ಬಿ ಮಲ್ಲಾರಾಧ್ಯರವರು ತಮ್ಮ ಪುತ್ರ ಶ್ರೀ ಜೆ ಎಂ ವಿಶ್ವನಾಥರವರಿಗೆ ನಂಜನಗೂಡು ತಾಲ್ಲೂಕು ಕಳಲೆ ಗ್ರಾಮದ ಶ್ರೀ ಗುರುಲಿಂಗಾರಾಧ್ಯರ ಪುತ್ರಿ ಸೌ|| ಚಂದ್ರಕಮ್ಮನನ್ನು ತಂದುಕೊಂಡು ವಿವಾಹವನ್ನು ನೆರವೇರಿಸಿದ ಸಂದರ್ಭದಲ್ಲಿ ನೆನ್ನೆ ನಗರದ ಕಂಠೀರವ ಕಲ್ಯಾಣಮಂದಿರದಲ್ಲಿ ಸ್ವಾಗತ ಸಮಾರಂಭವನ್ನೇರ್ಪಡಿಸಿದ್ದರು.

ನಗರದ ಎಂ ಎ ನಾಗಣ್ಣ ಸರ್ ಅಂಗಡಿಯ ಮಾಲೀಕರಾದ ಶ್ರೀ ಎಂ ಎ ರಾಮಣ್ಣನವರು ತಮ್ಮ ಕುಮಾರಿ ಸೌ|| ಸುಶೀಲಮ್ಮನನ್ನು ಬೆಂಗಳೂರಿನ ದುರ್ಗಾ ನಂಜುಂಡಪ್ಪನವರ ಮಕ್ಕಳು ಶ್ರೀ ಡಿ ಎ ರಾಜಶೇಖರಯ್ಯನವರಿಗೆ ಕೊಟ್ಟು ವಿವಾಹ ನಡೆಸಿದ ಸಂದರ್ಭದಲ್ಲಿ ಮೊನ್ನೆ ನಗರದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು.

ನಗರದ ಪೌರಸಭಾ ಸದಸ್ಯರಾದ ಶ್ರೀ ಎಂ ವೆಂಕಟಲಿಂಗಯ್ಯನವರು ತಮ್ಮ ಸಹೋದರ ಶ್ರೀ ಎಂ. ನಂಜುಂಡಯ್ಯನವರಿಗೆ ಮದ್ದೂರು ಟೌನಿನ ಶಿವಯೋಗಿಯವರ ಸಹೋದರಿ ಶಿವಮ್ಮನನ್ನು ತಂದುಕೊಂಡು ನಡೆಸಿದ ವಿವಾಹದ ಸಂದರ್ಭದಲ್ಲಿ ನೆನ್ನೆ ನಗರದಲ್ಲಿ ಸ್ವಾಗತ ಸಮಾರಂಭವನ್ನೇರ್ಪಡಿಸಿದ್ದರು

ಮಹಾ ಕವಿ ಲಕ್ಷ್ಮೀಶ ವಿರಚಿತ

ಕನ್ನಡ ಜೈಮಿನಿ ಭಾರತ

1937 Edition : Re 1-0-0

ಶ್ರೀ ರಾಜರತ್ನಂರವರ

ಭಗವಾನ್ ಬುದ್ಧ : 1 0-0

ಕೃಷ್ಣಾ ಕಂಪೆನಿ,

ನೂರಡಿ ರಸ್ತೆ, ಮೈಸೂರು

ಹೈಟಿ ದ್ವೀಪದಲ್ಲಿ ಮಿಲಿಟರಿ ದಂಗೆಯಿಂದ ಸರ್ಕಾರದ ಪತನ

ಹೈಟಿ ದ್ವೀಪದಲ್ಲಿ ನೀಗ್ರೋ ರಿಪಬ್ಲಿಕ್ಕಿನ ಅಧ್ಯಕ್ಷ ಡಾನಿಯಲ್ ಸೆಗ್ನೋಬಲ್‌ರವರ ವಿರುದ್ಧವಾಗಿ ಅಲ್ಲಿನ ಸೈನ್ಯಾಧಿಕಾರಿ ಆಂಟೊನಿಯೋ ಗಬ್ರಿಯಲ್‌ರವರು ದಂಗೆಯೇಳಲಾಗಿ ಸರ್ಕಾರವು ಪತನವಾಗಿರುವುದೆಂದೂ, ಅಧ್ಯಕ್ಷರು ಮತ್ತು ಮಂತ್ರಿಗಳ ಪತ್ತೆಯಿಲ್ಲವೆಂದೂ ವರದಿಯಾಗಿದೆ. ಕಳೆದ ಡಿಸೆಂಬರಿನಿಂದ ಅಲ್ಲಿ ಉರುಳಿರುವ ಸರ್ಕಾರಗಳಲ್ಲಿ ಇದು ಐದನೆಯದು ಹೊಸ ಸರ್ಕಾರದ ಬಗ್ಗೆ ಪ್ರಕಟಣೆಯೇನೂ ಬಂದಿಲ್ಲ

ನಂಜನಗೂಡಿನಲ್ಲೂ ಹೊಟೇಲು ಸಿನಿಮಾಗಳನ್ನು ಮುಚ್ಚಲು ಸೂಚನೆ

ಇಂಫ್ಲುಯೆಂಜಾ ಖಾಯಿಲೆಯು ನಂಜನಗೂಡಿನಲ್ಲಿ ,ಹರಡುವುದನ್ನು ತಡೆಗಟ್ಟಲು ೧ ವಾರ ಸಿನಿಮಾ ಮತ್ತು ಫಲಾಹಾರ ಮಂದಿರಗಳನ್ನು ಮುಚ್ಚಿಸಬೇಕೆಂದು ಅಲ್ಲಿನ ಪುರಸಭೆಯ ಆರೋಗ್ಯ ಸಮಿತಿಯವರು ನೆನ್ನೆ ತೀರ್ಮಾನಿಸಿದರು ಉಪಾಧ್ಯಕ್ಷ ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರು ಸಭೆಯ ಅಧ್ಯಕ್ಷತೆ ವಹಿಸಿದ್ದರು ಈಗ ಅಲ್ಲಿ ಸುಮಾರು ೫೦ ಮಂದಿ ರೋಗ ಪೀಡಿತರಾಗಿದ್ದಾರೆ.

GLOBE TUTORIAL
COLLEGE
Sadvidya Patasale Buildings,
Offers Excellent Coaching for
S. S. L. C. & INTER

GRAND ATTRACTION
Group & Flash
PHOTOGRAPHS
Role Films Developing Printing & Enlarging Undertaken
SRI KANTH STUDIO
Near Prabha Talkies
Mysore
Your Card Size Photo Re One only

ಅಬಿಸೀನಿಯದಿಂದ ನೆಹರೂರವರಿಗೆ ಸಿಂಹದ ಮರಿಗಳ ದಾನ

ಪ್ರಧಾನಿ ನೆಹರೂರವರಿಗೆ ಅಬಿಸೀನಿಯಾ ದೊರೆ ಹೇಲಿ ಸೆಲಾಸಿಯವರು ಎರಡು ಸಿಂಹದ ಮರಿಗಳನ್ನು ಕಳುಹಿಸಿಕೊಟ್ಟಿರುತ್ತಾರೆ ಅವನ್ನು ಮೊನ್ನೆ ಅಡಿಸ್ ಅಬಾಬಾದಿಂದ ಬೊಂಬಾಯಿಗೆ ಕರೆತರಲಾಯಿತು ಅವು ೪ ತಿಂಗಳ ಮರಿಗಳು

ಟೆನಿಸ್ ಆಟಗಾರರ ಹಣದ ಅಪಹಾರ

ಕಾಸ್ಮಾಪಾಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ನಡೆಯುತ್ತಿರುವ ಟೆನಿಸ್ ಪಂದ್ಯದಲ್ಲಿ ಭಾಗವಹಿಸಲು ಆಗಮಿಸಿದ್ದ ಶ್ರೀ ಉದಯಕುಮಾರ್‌ರವರು ಹೊಟೇಲು ಮೆಟ್ರೊಪೋಲಿನಲ್ಲಿ ಇಳಿದುಕೊಂಡಿದ್ದಾಗ ಅವರ ಸೂಟ್‌ಕೇಸನ್ನು ತೆಗೆದು ಯಾರೋ ೫೨೦ ರೂ. ಗಳನ್ನು ಅಪಹರಿಸಿರುತ್ತಾರೆ ಅವರು ಕಿಟಕಿ ಬಾಗಿಲುಗಳನ್ನು ತೆರೆದು ಕೊಠಡಿಯಲ್ಲಿ ಮಲಗಿದ್ದರೆಂದೂ, ಬೆಳಿಗ್ಗೆ ಹೊಟೇಲು ಆವರಣದಲ್ಲಿ ಪೆಟ್ಟಿಗೆಯನ್ನು ಬಿಸಾಡಲಾಗಿತ್ತೆಂದೂ ಹೇಳಲಾಗಿದೆ

ಸಹಕಾರ ಪರೀಕ್ಷೆ ಫಲಿತಾಂಶ ಪ್ರಕಟಣೆ

ನಗರದ ಸಹಕಾರ ಶಿಕ್ಷಣ ಶಾಲೆಯ ಸಹಕಾರ ಡಿಪ್ಲೋಮಾ ಪರೀಕ್ಷೆಯಲ್ಲಿ ಫಲಿತಾಂಶಗಳನ್ನು ಯೋಗ್ಯತಾನುಸಾರವಾಗಿ ಪ್ರಕಟಿಸಲಾಗಿದೆ

ರಿ ನಂ ೧ನೇ ವರ್ಗ. ೩೩, ೧೧, ೬೦, ೨೫, ೩, ೫೩, ೯ ಮತ್ತು ೨೯

೨ನೇ ವರ್ಗ. ೩೪, ೨೭, ೧೭, ೩೯, ೫೮, ೩೦, ೩೮, ೨೨, ೫೩, ೪೨, ೬, ೫೧, ೨೦, ೧೯, ೫೦, ೧೫, ೩೪, ೨೧, ೫೭, ೧೩, ೧ ಮತ್ತು ೩೩

೩ನೇ ವರ್ಗ ೨೭, ೪೮, ೫೫ ೪೭, ೪೧, ೪, ೬೬, ೪೪, ೬೧, ೧೨, ೪೩, ೫೯, ೬, ೪೦, ೧೫, ೧೦, ೩೨, ೪೫, ೫ ಮತ್ತು ೬೩

ವಿವಾಹ ಮಹೋತ್ಸವ

ನಗರದ ಸುಪ್ರಸಿದ್ಧ ವಕೀಲರಾದ ಶ್ರೀ ಕೆ. ಪುಟ್ಟಸ್ವಾಮಯ್ಯನವರು ತಮ್ಮ ಪುತ್ರ ಶ್ರೀ ಕೆ ಎಲ್ ರಾಮುರವರಿಗೆ ನಿವೃತ್ತ ಪೋಲೀಸ್ ಇನ್‌ಸ್ಪೆಕ್ಟರಾದ ಶ್ರೀ ಮಂಜಯ್ಯನವರ ಪುತ್ರಿ ಸೌ|| ಶಾರದಾರವರನ್ನು ತಂದುಕೊಂಡು ಕಳೆದ ಗುರುವಾರ ದಾವಣಗೆರೆಯಲ್ಲಿ ವಿವಾಹವನ್ನು ನೆರವೇರಿಸಿದರು



ನವೀನ ಮಾದರಿ

ಗಡಿಯಾರಗಳಿಗೆ

ಫೇವರ್ ಲ್ಯೂಬಾ, ವೆಸ್ಟೆಂಡ್,

ಸ್ವಿಮಾ, ರೋಮರ್

ಇತ್ಯಾದಿ ಇತ್ಯಾದಿ

ರಾಂ ಚಿತಂಗೆ ಕಂಪೆನಿ,

ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

The Institute of Social Science, Mysore

(D. Banumaiah's High School Buildings-Science Block)

Applications for admission to the Diploma Course in Social Science are now being received The Course extends over a period of Eight months The classes will be held in the evenings. Graduates and those studying for recognised degrees are eligible to apply Forms of application and Hand book may be had on payment of Re 1/00 only either in person (between 6-30 and 7-30 P M.) or by crossed Postal orders, payable to the Secretary. The last date for the receipt of applications is 25th June 1957

ANNOUNCEMENT

A Branch of our Bank will be opened

In Mysore (Santhepet) On 21—6—57

Sri H K VEERANNA GOWDA,

Minister for Public Works, Government of Mysore,

has kindly consented to preside over

the opening function to be held

on 20—6—1957 at 5—30 P M

At Rangacharlu Memorial Hall (Town Hall)

THE VIJAYA BANK LTD.,

H O Mangalore : Estd 1931

ಮೈಸೂರಿನಲ್ಲಿ ಪ್ರತಿ ತಿಂಗಳು

17 ನೇ ತಾರೀಕು

ವಿಶ್ವ ವಿಖ್ಯಾತರಾಗಿರುವ

ನವರತ್ನಕಲ್ಪ

ದಿವ್ಯೌಷಧವನ್ನು ಕಂಡು ಹಿಡಿದವರ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮಾ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಕು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಬೆಳಿಗ್ಗೆ 7-30ರಿಂದ ಸಂಜೆ 5 ಗಂಟೆಯವರೆಗೆ ಭೇಟಿ ಮಾಡಬಹುದು : ಫೋನ್ ನಂ 590

ರೋಗಿಗಳ ವಿಷಯವನ್ನು ಗಮನಿಸಿ ಅವರ ಪರೀಕ್ಷೆ ವೈದ್ಯಕೀಯ ಸಲಹೆಯನ್ನು ಪಡೆಯಿರಿ

ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು ವಿಮಾನದಲ್ಲಿ ಸಂಚರಿಸುವರು

ನವರತ್ನಕಲ್ಪ — ಉಪಯೋಗಿಸಿರಿ

ಇದು ವಜ್ರ, ಚಿನ್ನ, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ ಪದ್ಮರಾಗದ ಮುತ್ತು ಪ್ರಶಸ್ತ ಶಿಲೆ-ಈ 9 ಅಮೂಲ್ಯ ಹರಳುಗಳ ಸಂಯೋಗ ಇದರಿಂದ ನರಗಳ ಬಲಹೀನತೆ, ಅಜೀರ್ಣ ಸಂಬಂಧದ ವ್ಯಾಧಿಗಳು, ಬಿಳಿ ಸೆರಗು, ರಕ್ತದೋಷ ಮೂಲವ್ಯಾಧಿ, ಸಾಕ್ಷರಾ ಬಹುಮೂತ್ರ, ಅಸ್ತಮಾ ಕೆಮ್ಮು ಇನ್ನು ಇತ್ಯಾದಿ ಎಲ್ಲಾ ಸಾಮಾನ್ಯ ಹಾಗೂ ತೀವ್ರವಾದ ಖಾಯಿಲೆಗಳು ಸಂಪೂರ್ಣವಾಗಿ ಗುಣಹೊಂದುವುವು ಅತ್ಯುತ್ತಮ ಔಷಧಿ ಇದೊಂದೇ ಉಚಿತ ಸಾಹಿತ್ಯಗಳಿಗಾಗಿ ಬರೆಯಿರಿ

NAVRATNA KALPA PHARMACY,

JULLUNDUR CITY (India)

Edited, Printed and Published by A R Nagarajan at Sadhvi Press, 3 Subbiah Road, Mysore

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 2 ನಯೆ ಪೈಸೆ
ಚಂದಾ ದರ
—
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಪುಟ : ೧೫] SADHVI : MONDAY 17—6—1957 ಮೈಸೂರು : ಸೋಮವಾರ ೧೭—೬—೧೯೫೭ : [ಸಂಚಿಕೆ : ೩೦೩

ನಗರದಲ್ಲಿ ಬೆಳಗಿನ ಮತ್ತು ಮ್ಯಾಟಿನಿ ಸಿನಿಮಾ ನಿಷೇಧ

ರಾಷ್ಟ್ರೀಯ ಉಳಿತಾಯದ ಪ್ರಚಾರ ಸಪ್ತಾಹ

ಮೈಸೂರು ೧೬

ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ರಾಷ್ಟ್ರೀಯ ಉಳಿತಾಯದ ಸಪ್ತಾಹದ ಸಂಬಂಧದಲ್ಲಿ ಸಾರ್ವಜನಿಕ ಸಭೆಯು ನಡೆಯಿತು ಡಿವಿಜನಲ್ ಕಮೀಷನರಾದ ಶ್ರೀ ಕೆ ಶೇಷಗಿರಿರಾಯರು ಅಧ್ಯಕ್ಷತೆ ವಹಿಸಿದ್ದರು

ಬನುಮಯ್ಯ ಕಾಲೇಜಿನ ಪ್ರಿನ್ಸಿಪಾಲ್ ಬಿ ವಿ ಬನುಮಯ್ಯನವರು ಉಳಿತಾಯ ಚಳುವಳಿಯ ಪ್ರಾಮುಖ್ಯತೆ ಎಂಬ ವಿಷಯವಾಗಿಯೂ, ವಿಶ್ವವಿದ್ಯಾಲಯದ ಅಧ್ಯಾಪಕರಾದ ಶ್ರೀ ಎಸ್ ಕೆ ಏಕಾಂಬರಂರವರು "ಉಳಿತಾಯ ಮತ್ತು ಯೋಜನೆ" ಎಂಬ ವಿಷಯವಾಗಿಯೂ ವಿಚಾರಪೂರಿತವಾದ ಭಾಷಣಗಳನ್ನು ಮಾಡಿದರು ರಾಷ್ಟ್ರೀಯ ಅಭಿವೃದ್ಧಿಗಾಗಿ ಕೈಗೊಳ್ಳಲಾಗಿರುವ ಈ ಕಾರ್ಯಕ್ರಮದಲ್ಲಿ ದೇಶದ ಜನರೆಲ್ಲರೂ ಭಾಗವಹಿಸಿ ತಮ್ಮಿಂದ ಸಾಧ್ಯವಾದಷ್ಟು ಹಣವನ್ನು ಉಳಿತಾಯ ಮಾಡಿ ಅದರ ಪ್ರತಿಫಲವನ್ನು ಪಡೆಯುವುದಲ್ಲದೆ ದೇಶದ ಅಭ್ಯುದಯ ಸಾಧನೆಯಲ್ಲಿ ಸಹಕರಿಸಬೇಕೆಂದು ಅಧ್ಯಕ್ಷರು ಮನವಿ ಮಾಡಿದರು.

ಪ್ರಾರಂಭದಲ್ಲಿ ಕು ಮಾ ರಿ ಗೀತಾರವರಿಂದ ಪ್ರಾರ್ಥನೆಯಾದ ಮೇಲೆ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಕೆ. ವಿ. ಗೋಪಾಲಕೃಷ್ಣರವರು ಸ್ವಾಗತ ಭಾಷಣ ಮಾಡಿದರು ಮೈಸೂರು ಪ್ರಾಂತದ ಉಳಿತಾಯ ಯೋಜನೆಯ ಅಧಿಕಾರಿಗಳಾದ ಶ್ರೀ ಜಿ ಎಸ್ ಪಾಲ್‌ರವರು ವಂದನಾರ್ಪಣೆ ಮಾಡಿದರು

ಭಾರತೀ ವಿದ್ಯಾ ಭವನದ ಸಂಸ್ಕೃತ ಪರೀಕ್ಷಾ ತರಗತಿಗಳು

ಜೂನ್ ೧೪-೬-೫೭ರ ಸಾಧ್ವೀ ಪತ್ರಿಕೆಯಲ್ಲಿ ಪ್ರಕಟವಾಗಿದ್ದಂತೆ ಭಾರತೀ ವಿದ್ಯಾ ಭವನದ ಸಂಸ್ಕೃತ ಪರೀಕ್ಷೆಗಳ ತರಗತಿಗಳನ್ನು ಕೃಷ್ಣಮೂರ್ತಿಪುರದ ಶ್ರೀ ರಾಮ ಮಂದಿರದಲ್ಲಿ ತಾ॥ ೧೯-೬-೫೭ನೇ ಬುಧವಾರ ಬೆಳಗ್ಗೆ ೮ ಗಂಟೆಯಿಂದ ಪ್ರಾರಂಭಿಸಲಾಗುವುದು. ತರಗತಿಗೆ ಸೇರಬಯಸುವ ವಿದ್ಯಾರ್ಥಿಗಳೆಲ್ಲರೂ ಆ ದಿವಸ ೮ ಘಂಟೆಗೆ ಸರಿಯಾಗಿ ಮೇಲ್ಕಂಡ ಸ್ಥಳಕ್ಕೆ ಬರಬೇಕೆಂದು ವ್ಯವಸ್ಥಾಪಕರಾದ ಸಾಹಿತ್ಯ ವಿದ್ವಾನ್ ಶ್ರೀ ಬಿ. ಎಸ್ ಕೃಷ್ಣಪ್ಪನವರು ತಿಳಿಸುತ್ತಾರೆ

ನೆನ್ನೆ ನಗರದಲ್ಲಿ ೫೪ ಸೆಂಟ್ ಮಳೆ

ನಗರದಲ್ಲಿ ನೆನ್ನೆ ರಾತ್ರಿ ಸುಮಾರು ೫೪ ಸೆಂಟುಗಳಷ್ಟು ಮಳೆ ಬಿದ್ದುದಾಗಿ ಗೊತ್ತಾಗಿದೆ

ಡಾ॥ ಮೋದಿಯವರಿಗೆ ಡಾಕ್ಟರೇಟ್ ಪ್ರಶಸ್ತಿ

ನೇತ್ರ ಪ್ರಾಜ್ಞ ಪದ್ಮಶ್ರೀ ಡಾ॥ ಮೋದಿಯವರಿಗೆ ಡಾಕ್ಟರೇಟ್ ಪ್ರಶಸ್ತಿ ಕೊಡಬೇಕೆಂದು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯು ನೆನ್ನೆ ತೀರ್ಮಾನಿಸಿತೆಂದು ವರದಿಯಾಗಿದೆ

೦ಕ್ಕೇರಳದ ಪುನಲೂರಿನ ಬಳಿ ೩೦ ಜನರಿದ್ದ ಒಂದು ಬಸ್ಸು ಕಲ್ಲಡ ಎಂಬ ನದಿಯೊಳಕ್ಕೆ ಮಗುಚಿಕೊಂಡು ೧೫ ಮಂದಿ ಸತ್ತಿರುವುದಾಗಿ ವರದಿಯಾಗಿದೆ ಪ್ರಯಾಣಿಕರ ಪೈಕಿ ೧೫ ಮಂದಿಯನ್ನು ಮಾತ್ರ ರಕ್ಷಿಸಲಾಯಿತು

ನೆನ್ನೆ ನಡೆದ ಕನ್ನಿಕಾಪರಮೇಶ್ವರಿ ಸಹಕಾರ ಸಂಘದ ರಜತ ಮಹೋತ್ಸವ ಸಂದರ್ಭದಲ್ಲಿ ತೆಗೆದ ಚಿತ್ರ ಲೋಕಸಭಾಧ್ಯಕ್ಷ ಅನಂತಶಯನಂ ಅಯ್ಯಂಗಾರ್ ಮತ್ತು ಕೇಂದ್ರ ಸಹಕಾರ ಮಂತ್ರಿ ಶ್ರೀ ಪಂಜಾಬರಾವ್ ದೇಶಮುಖ್‌ರನ್ನು ಕಾಣಬಹುದು.

ಸಿನಿಮಾಗಳಲ್ಲಿ ಬೆಳಗಿನ ಮತ್ತು ಮ್ಯಾಟಿನಿ ಆಟಕ್ಕೆ ನಿಷೇಧ

ಜಿಲ್ಲಾಧಿಕಾರಿಗಳ ಆಜ್ಞೆ

ಮೈಸೂರು ೧೬

ಇನ್‌ಫ್ಲುಯೆಂಜಾ ವ್ಯಾಧಿಯನ್ನು ತಡೆಗಟ್ಟುವುದಕ್ಕಾಗಿ ನಗರದ ಎಲ್ಲಾ ಸಿನಿಮಾಗಳಲ್ಲೂ ಬೆಳಗಿನ ಮತ್ತು ಮಧ್ಯಾಹ್ನದ ಮ್ಯಾಟಿನಿ ಪ್ರದರ್ಶನಗಳನ್ನು ನಡೆಸದಂತೆಯೂ, ಸಂಜೆಯ ಆಟವನ್ನು ಏಳು ಗಂಟೆಗೆ ಆರಂಭಿಸುವಂತೆಯೂ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿರುತ್ತಾರೆ

ಹೊಸ ಜಿಲ್ಲಾಧಿಕಾರಿಗಳು

ಮೈಸೂರು ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಡಿ ಆರ್ ಚನ್ನರುದ್ರಯ್ಯನವರು ಈ ದಿನ ತಮ್ಮ ಅಧಿಕಾರವನ್ನು ಆ ಸ್ಥಾನಕ್ಕೆ ನೇಮಿತರಾಗಿರುವ ಶ್ರೀ ಬಿ ನಾರಾಯಣಸ್ವಾಮಿಯವರಿಗೆ ವಹಿಸಿಕೊಟ್ಟರು

ರಾಷ್ಟ್ರಪತಿಯವರ ವೆಚ್ಚದಲ್ಲಿ ವರ್ಷಕ್ಕೆ ೨ ಲಕ್ಷ ರೂ. ಉಳಿತಾಯ

ದೇಶದ ಆರ್ಥಿಕ ಸ್ಥಿತಿಯ ಪರಿಣಾಮವಾಗಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ವರ್ಷಕ್ಕೆ ೨ ಲಕ್ಷ ರೂ. ಉಳಿತಾಯ ಮಾಡಲು ಹಲವು ಕ್ರಮಗಳನ್ನು ಕೈಗೊಂಡಿದ್ದಾರೆ ಅವರ ಪ್ರಕಾರ ಅವರು ತಮ್ಮ ಸಂಭಾವನೆಯಲ್ಲಿ ತಿಂಗಳಿಗೆ ೧ ಸಾವಿರ ರೂ ಮೋತಾ ಮಾಡಿಕೊಳ್ಳುವರು ಅವರ ಬಗ್ಗೆ ರಕ್ಷಣಾ ಕ್ರಮಗಳು ಮತ್ತು ಇತರ ಸಮಾರಂಭಗಳ ವಿಧಿಗಳನ್ನು ಬಹಳ ಕಡಿಮೆ ಮಾಡಲಾಗುವುದು ಇದುವರೆಗೆ ಅವರ ಸಿಬ್ಬಂದಿಯವರಿಗೆ ಉಚಿತವಾಗಿ ಒದಗಿಸುತ್ತಿದ್ದ ನೀರು, ದೀಪ ಮತ್ತು ಇತರ ಸೌಕರ್ಯಗಳನ್ನು ನಿಲ್ಲಿಸಲಾಗುವುದು ಹೊಸದಾಗಿ ಸಿಬ್ಬಂದಿಗೆ ಯಾರನ್ನೂ ತೆಗೆದುಕೊಳ್ಳುವುದಿಲ್ಲ ಮತ್ತು ಇನ್ನು ಮುಂದೆ ಪ್ರವಾಸ ಕಾಲದಲ್ಲಿ ವಿಶೇಷ ರೈಲಿನ ಬದಲು ಸಾಮಾನ್ಯ ಗಾಡಿಯ ಜೊತೆಗೆ ಸುಸಜ್ಜಿತವಾದ ಸಲೂನಿನಲ್ಲಿ ಬಹಳ ಮಿತವಾದ ಸಿಬ್ಬಂದಿಯೊಡನೆ ಪ್ರಯಾಣ ಮಾಡುವರು ಹೊಸದಾಗಿ ಕಾರುಗಳನ್ನು ಕೊಳ್ಳುವುದನ್ನು ನಿಲ್ಲಿಸಲಾಗುವುದು

ಹಲವು ಕಚೇರಿಗಳನ್ನು ವಿಕೇಂದ್ರೀಕರಣ ಮಾಡಬೇಕು

ಪೌರಸತ್ಕಾರದಲ್ಲಿ ಲೋಕಸಭಾಧ್ಯಕ್ಷರ ಸಲಹೆ

ಮೈಸೂರು ೧೬

ಸರ್ಕಾರದ ಎಲ್ಲಾ ಇಲಾಖೆಗಳೂ ದೆಹಲಿ ಮುಂತಾದ ನಗರಗಳಲ್ಲಿಯೇ ಕೇಂದ್ರೀಕೃತವಾಗುವ ಪದ್ಧತಿ ತಪ್ಪಿ, ಅವುಗಳಲ್ಲಿ ಕೆಲವನ್ನು ದೇಶದ ನಾನಾ ಭಾಗಗಳಿಗೆ ಹಂಚುವುದು ಸೂಕ್ತ. ಹಾಗೆಯೇ ಪ್ರಾಂತಗಳಲ್ಲಿಯೂ ಸಹ ಕೆಲವು ಕಚೇರಿಗಳನ್ನು ರಾಜಧಾನಿಯಿಂದ ಹೊರಗಿರುವ ಇತರ ನಗರ ಮತ್ತು ಊರುಗಳಿಗೆ ವರ್ಗಾಯಿಸುವುದು ಅಗತ್ಯ ಎಂಬುದಾಗಿ ಲೋಕಸಭಾಧ್ಯಕ್ಷ ಶ್ರೀ ಎಂ ಅನಂತಶಯನಂ ಅಯ್ಯಂಗಾರ್‌ರು ನೆನ್ನೆ ಅವರ ಮತ್ತು ಕೇಂದ್ರ ಸಹಕಾರ ಮಂತ್ರಿ ಶ್ರೀ ಪಂಜಾಬರಾವ್ ದೇಶಮುಖ್‌ರವರ ಗೌರವಾರ್ಥವಾಗಿ ಪೌರಸಭೆಯು ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ತಿಳಿಸಿದರು ಎಲ್ಲ ಸರ್ಕಾರಿ ಇಲಾಖೆಗಳನ್ನೂ ಒಂದೇ ಕಡೆ ಇಡುವುದರಿಂದ ಜನಸಂದಣಿಯು ಏರ್ಪಡುವುದಲ್ಲದೆ ಪುರವಾಸಿಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದೂ ಕಷ್ಟವಾಗುತ್ತದೆ ಅಲ್ಲದೆ ಇತರ ಊರುಗಳೂ ಪಾಳು ಬೀಳುತ್ತವೆ ಹಿಂದೆ ರಾಜಮಹಾರಾಜರುಗಳು ವಿಶೇಷ ಆಸಕ್ತಿಯಿಂದ ನಿರ್ಮಿಸಿದ ಅರಮನೆಗಳು ಈಗ ಹಾಳು ಕೊಂಪೆಗಳಾಗುತ್ತಿವೆ. ಪ್ರಜೆಗಳೇ ಪ್ರಭುಗಳಾಗಿರುವ ಈ ಕಾಲದಲ್ಲಿ ರಾಜರುಗಳ ವಾಸ್ತವ್ಯವನ್ನು ಸಾರ್ವಜನಿಕರು ವಹಿಸಿ ಈ ಭವನಗಳೇ ಮುಂತಾದ ಕಟ್ಟಡಗಳಲ್ಲಿ ಉಪಯುಕ್ತವಾದ ಕಾರ್ಯಗಳು ನಡೆಯುವಂತೆ ಮಾಡಬೇಕು ಮತ್ತು ನಗರಗಳ ಅಂದಚಂದವು ಕ್ಷೀಣಿಸದಂತೆ ನೋಡಿಕೊಳಬೇಕು. ಇದಕ್ಕಾಗಿ ಕೈಗಾರಿಕೆಗಳೇ ಮುಂತಾದ ಉದ್ಯಮಗಳ ವಿಕೇಂದ್ರೀಕರಣವು ಅವಶ್ಯಕ ಎಂಬುದಾಗಿ ಅವರು ನುಡಿದರು.

ಮುಂದುವರಿದು, ಪೌರಸಭೆಯ ಆಡಳಿತದಲ್ಲಿ ಮಹಿಳೆಯರಿಗೆ ಹೆಚ್ಚು ಅವಕಾಶವನ್ನು ಕಲ್ಪಿಸಬೇಕೆಂದು ಸೂಚಿಸಿದರು ಬಡಜನರ ವಸತಿ ಸೌಲಭ್ಯಕ್ಕಾಗಿ ಪೌರಸಭೆಯವರ ಉದ್ಯಮವನ್ನು ಅವರು ಪ್ರಶಂಸಿಸಿ ಅದನ್ನು ಇನ್ನೂ ಹೆಚ್ಚಿಸಬೇಕೆಂದು ಹೇಳಿದರು. ವೃದ್ಧರು ಮತ್ತು ಅಂಗಹೀನರಿಗೆ ನೆರವು ನೀಡಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಕೋರಿದರು

ಶ್ರೀ ಪಂಜಾಬರಾವ್ ದೇಶಮುಖ್‌ರವರು ಮಾತನಾಡಿ ಪುರನಿವಾಸಿಗಳ ಬೇಕುಬೇಕಾದವುಗಳನ್ನು ಪೌರಸಭಾ ಸದಸ್ಯರು ನಿರ್ದಾಕ್ಷಿಣ್ಯವಾಗಿ ನೀಡಬೇಕೆಂದು ಸೂಚಿಸಿದರು

ಮೊದಲು ಪೌರಸಭಾಧ್ಯಕ್ಷ ಶ್ರೀ ಎಸ್ ಸಿ ಜೀವಯ್ಯನವರು ಅತಿಥಿಗಳನ್ನು ಸ್ವಾಗತಿಸಿ ಪೌರಸಭೆಯ ಕೆಲಸಕಾರ್ಯಗಳನ್ನು ವಿವರಿಸಿದರು ಮೈಸೂರು ನಗರದ ಪ್ರಾಮುಖ್ಯತೆಯು ದಿನೇದಿನೇ ಕುಂದುತ್ತಿರುವುದರಿಂದ ಇಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೂ, ಬೆಂಗಳೂರಿನಿಂದ ಮೈಸೂರಿಗೆ ಬ್ರಾಡ್‌ಗೇಜ್ ರೈಲ್ವೆ ಲೈನ್ ಹಾಕುವುದಕ್ಕೂ ಕೇಂದ್ರ ಸರ್ಕಾರದವರು ನೆರವು ನೀಡಬೇಕೆಂದು ಕೋರಿದರು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಸತ್ಕಾರ

ಕಾಂಗ್ರೆಸ್ ಸಂಸ್ಥೆಯಲ್ಲಿ ಸೌಹಾರ್ದತೆಗಾಗಿ ಅನಂತಶಯನಂರವರ ಮನವಿ

ಮೈಸೂರು ೧೬

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾಗಿರುವ ಶ್ರೀ ಎಸ್ ಚನ್ನಯ್ಯನವರ ಗೌರವಾರ್ಥವಾಗಿ ದಸರಾ ವಸ್ತು ಪ್ರದರ್ಶನ ಭವನದಲ್ಲಿ ನೆನ್ನೆ ಭಾರಿ ಸಮಾರಂಭವು ನಡೆಯಿತು ಸುಮಾರು ಸಾವಿರ ಜನ ಅತಿಥಿಗಳು ನೆರೆದಿದ್ದರು ಲೋಕಸಭೆಯ ಅಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್, ಕೇಂದ್ರ ಸಹಕಾರ ಸಚಿವ ಶ್ರೀ ಪಂಜಾಬರಾವ್ ದೇಶಮುಖ್, ಮೈಸೂರಿನ ಆಹಾರ ಸಚಿವ ಶ್ರೀ ಟಿ ಮರಿಯಪ್ಪ, ಲೋಕಸಭೆಯ ಮೈಸೂರು ಸಂಸ್ಥಾನದ ಸದಸ್ಯರೂ ಅನೇಕ ಮಹಿಳೆಯರೂ ಮಹನೀಯರೂ ನೆರೆದಿದ್ದರು ಶ್ರೀಮತಿ ಚೊಕ್ಕಮ್ಮ ಮತ್ತು ವೃಂದದವರಿಂದ ಗಾಯನವಾಯಿತು

ಕುಮಾರಿ ಗಿರಿಜಮ್ಮನವರಿಂದ ಪ್ರಾರ್ಥನೆ ಯಾದನಂತರ ಶ್ರೀ ಬಿ ನಾರಾಯಣಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು ಸ್ವಾಗತ ಸಮಿತಿಯ ಪರವಾಗಿ ಅಧ್ಯಕ್ಷರಾದ ಶ್ರೀ ಎಂ ಬಿ ಬಸವಯ್ಯನವರು ಬಿನ್ನವತ್ತಳೆಯನ್ನು ಓದಿ ಶ್ರೀ ಚನ್ನಯ್ಯನವರಿಗೆ ಒಪ್ಪಿಸಿದರು

ಶ್ರೀ ಚನ್ನಯ್ಯನವರು ಸತ್ಕಾರಕ್ಕಾಗಿ ಧನ್ಯವಾದವನ್ನು ಸಲ್ಲಿಸಿ ತಮ್ಮ ಕೆಲಸಕಾರ್ಯಗಳಲ್ಲಿ ಮಹಾಜನರು ಮುಂದೆಯೂ ನೆರವು ನೀಡಬೇಕೆಂದು ಕೋರಿದರು.

ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಮಾತನಾಡಿ ಕಾಂಗ್ರೆಸ್ ಸಂಸ್ಥೆಯ ಮತ್ತು ಮಂತ್ರಿ ವರ್ಗದ ಸದಸ್ಯರ ನಡುವೆ ಸಂಪೂರ್ಣ ಸೌಹಾರ್ದವು ಇರಬೇಕೆಂದೂ, ಆ ಮೂಲಕವೇ ದೇಶದ ಹಿತವನ್ನು ಸಾಧಿಸಲು ಸಾಧ್ಯವೆಂದೂ ನುಡಿದರು. ರಾಷ್ಟ್ರೀಯ ಅಭಿವೃದ್ಧಿ ಕಾರ್ಯಗಳಲ್ಲಿ ಅನಿಯಮಿತ ಕಾಂಗ್ರೆಸ್ಸಿನವರ ಸಹಕಾರವನ್ನು ಸಂಪೂರ್ಣವಾಗಿ ಪಡೆಯಬೇಕೆಂದು ಸೂಚಿಸಿದರು

ಶ್ರೀ ಎಸ್ ಕೆ. ಲಕ್ಷ್ಮೀನರಸಿಂಹಯ್ಯನವರು ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು

ಕೃಷ್ಣರಾಜನಗರ ಖೂನಿ ಮೊಕದ್ದಮೆಯಲ್ಲಿ ಮರಣ ದಂಡನೆ

ಮೈಸೂರು ೧೬

ಕೃಷ್ಣರಾಜನಗರದ ತಂಬಾಕು ಭವನದ ಹೋಟೆಲಿನ ಕೆಲಸಗಾರ ಸಂಪತ್ತುಮಾರ್ ಎಂಬುವನು ೩೦-೧೦-೫೬ರಲ್ಲಿ ಅಲ್ಲಿನ ಎಲ್ಲಪ್ಪರಾವ್ ಎಂಬುವರನ್ನು ಚಾಕುವಿನಿಂದ ಕೊಂದು ಕೊಲೆ ಮಾಡಿದ ಅಪಾದನೆ ಮೇಲೆ ಮೊಕದ್ದಮೆಯಲ್ಲಿ ಸೆಷನ್ಸ್ ನ್ಯಾಯಾಧೀಶರು ಅವನಿಗೆ ಮರಣದಂಡನೆಯನ್ನು ವಿಧಿಸಿರುವರು ಚಾಕು ನೀಡಿದ ಗೌಡ ಎಂಬುವನಿಗೆ ೬ ತಿಂಗಳ ಕಠಿಣ ಸಜಾ ವಿಧಿಸಲಾಗಿದೆ ಇನ್ನಿಬ್ಬರು ಅಪರಾಧಿಗಳಾದ ಗೋವಿಂದ ಮತ್ತು ನಾರಾಯಣ ಎಂಬುವರು ಬಿಡುಗಡೆಯಾಗಿದ್ದಾರೆ

ಎಲ್ಲಾ ಗ್ರಾಮಗಳಿಗೂ ಸಹಕಾರ ತತ್ವವು ಹರಡಬೇಕು

ಕನ್ಯಕಾಪರಮೇಶ್ವರಿ ಸಂಘದ ರಜತೋತ್ಸವದಲ್ಲಿ ಲೋಕಸಭಾಧ್ಯಕ್ಷರ ಭಾಷಣ

ಮೈಸೂರು ೧೬

ನಗರದಲ್ಲಿರುವ ಶ್ರೀ ಕನ್ಯಕಾಪರಮೇಶ್ವರೀ ಸಹಕಾರ ಸಂಘದ ರಜತ ಮಹೋತ್ಸವವೂ, ಹೊಸ ಸ್ಟ್ಯಾಚ್ಯು ಚೌಕದಲ್ಲಿ ನಿರ್ಮಿಸಲಾಗಿರುವ ಸಂಘದ ನೂತನ ಕಟ್ಟಡದ ಪ್ರವೇಶೋತ್ಸವವೂ ನೆನ್ನೆ ವೈಭವದಿಂದ ಜರುಗಿದುವು. ಲೋಕಸಭಾಧ್ಯಕ್ಷರಾದ ಶ್ರೀ ಎಂ ಅನಂತಶಯನಂ ಅಯ್ಯಂಗಾರ್ಯರು ಆರಂಭೋತ್ಸವವನ್ನು ನೆರವೇರಿಸಿದರು. ಭಾರತ ಸರ್ಕಾರದ ಸಹಕಾರ ಸಚಿವರಾದ ಶ್ರೀ ಪಂಜಾಬರಾವ್ ದೇಶಮುಖ್‌ರವರು ಅಧ್ಯಕ್ಷತೆ ವಹಿಸಿದ್ದರು.

ಕುಮಾರಿಯರಾದ ಸುನಂದೆ ಮತ್ತು ಯಶೋದಾರವರಿಂದ ಪ್ರಾರ್ಥನೆಯಾದನಂತರ ವೇ|| ನೀಲಾಕಬಳ್ಳಿ ವೆಂಕಟನರಸಿಂಹಾಚಾರ್ಯರು ಸಂಸ್ಕೃತದಲ್ಲಿ ರಚಿಸಿದ ಸ್ವಾಗತ ಪದ್ಯವನ್ನು ಹಾಡಿದರು. ಸಂಘದ ಅಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಸ್ವಾಗತ ಭಾಷಣ ಮಾಡಿ ಎಲ್ಲರಿಗೂ ಸುಸ್ವಾಗತವನ್ನು ಬಯಸಿದರು. ಕಾರ್ಯದರ್ಶಿಗಳಾದ ಶ್ರೀ ಎಂ. ಎಸ್. ರಾಮನಾಥರವರು ವರದಿಯನ್ನೊಪ್ಪಿಸಿ ಸಂಘವು ಮೊದಲಿನಿಂದಲೂ ಸಾಧಿಸಿರುವ ಪ್ರಗತಿಯನ್ನು ವಿವರಿಸಿದರು. ಶ್ರೀಮತಿ ಗಿರಿಜಮ್ಮನವರಿಂದ ಸಂಗೀತ ವಾದವೇಲೆ ಲೋಕಸಭಾಧ್ಯಕ್ಷರಿಗೂ, ಕೇಂದ್ರ ಸಚಿವರಿಗೂ ಬೆಳ್ಳಿಯ ಅನೇಕ ಸ್ತಂಭಗಳೊಡನೆ ಬಿನ್ನವತ್ತಳೆಗಳನ್ನು ಸಮರ್ಪಿಸಲಾಯಿತು. ಶ್ರೀ ವೆಂಕಟಸುಬ್ಬಯ್ಯಶೆಟ್ಟರು ಪದ್ಧತಿ ಮೇರೆ ಉಭಯರಿಗೂ ಗಂಧದ ಚಿತ್ರಗಳನ್ನೂ, ಪುಷ್ಪಹಾರವನ್ನೂ ಸಲ್ಲಿಸಿದರು. ಸಮಾರಂಭಕ್ಕೆ ಬಂದಿದ್ದ ಶುಭ ಸಂದೇಶಗಳನ್ನು ಶ್ರೀ ಬಿ ವಿ ಸೂರ್ಯನಾರಾಯಣ ಶೆಟ್ಟರು ಓದಿದರು. ಸಂಘದ ವಿವಿಧ ಚಟುವಟಿಕೆಗಳಲ್ಲಿ ಶ್ರಮಶೀಲರಾದವರಿಗೆ ಬಹುಮಾನಗಳನ್ನು ಹಂಚಲಾಯಿತು.

ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ಯರು ತಮ್ಮ ಭಾಷಣದಲ್ಲಿ ಸಹಕಾರ ತತ್ವವು ಪ್ರತಿ ಹಳ್ಳಿಗೂ ಹರಡಿ ಅಲ್ಲಿ ಸಂಘಗಳು ನಿರ್ಮಾಣವಾಗಬೇಕೆಂದು ಸೂಚಿಸಿದರು. ಹಿಂದೆ ಕೇವಲ ವ್ಯವಸಾಯ ಪ್ರಧಾನವಾಗಿದ್ದ ನಮ್ಮ ದೇಶದಲ್ಲಿ ಈಗ ಅನೇಕ ಬಗೆಯ ವಸ್ತುಗಳ ವ್ಯಾಪಾರಗಳು ಹೆಚ್ಚುತ್ತಿರುವುದರಿಂದ ವಿವಿಧೋದ್ದೇಶ ಸಹಕಾರ ಸಂಸ್ಥೆಗಳ ಆಗತ್ಯವು ಹೆಚ್ಚಾಗಿರುವುದೆಂದು ಅವರು ಹೇಳಿದರು. ಸಹಕಾರ ತತ್ವವು ಕೇವಲ ಕೆಲವು ಜನರಿಗೆ ಮಾತ್ರ ಮಿತಿಗೊಂಡಿರದೆ ಎಲ್ಲ ದೀನದಲಿತರ ಉನ್ನತಿಗೂ ದುಡಿಯಬೇಕೆಂದು ಸೂಚಿಸಿದರು. ನಿರುದ್ಯೋಗ ನಿವಾರಣೆಗೆ ಇದು ಮುಖ್ಯ ಸಾಧನವಾಗಬೇಕೆಂದು ಸೂಚಿಸಿದರು.

ಪುರಾತನ ಕಾಲದಿಂದಲೂ ವ್ಯಾಪಾರದಲ್ಲಿ ಪ್ರಸಿದ್ಧಿಹೊಂದಿರುವ ವೈಶ್ಯ ಜನಾಂಗದವರು ಸಮಾಜದ ಎಲ್ಲ ವರ್ಗಗಳ ಅಶನ ವಸನ ಮತ್ತು ವಸತಿ ಸೌಲಭ್ಯಗಳ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಇನ್ನೂ ಹೆಚ್ಚಿನ ಪಾತ್ರ ವಹಿಸಬೇಕೆಂದು ಸೂಚಿಸಿದರು. ಸಂಘದವರು ಕೇವಲ ತಮ್ಮ ಜನಾಂಗದ ವಿದ್ಯಾರ್ಥಿಗಳಿಗೆ ಮಾತ್ರವೇ ಅಲ್ಲದೆ ಇತರರಿಗೂ ನೆರವು ನೀಡಬೇಕೆಂದು ಸೂಚಿಸಿದರು.

ಶ್ರೀ ಪಂಜಾಬರಾವ್ ದೇಶಮುಖ್‌ರವರು ತಮ್ಮ ಭಾಷಣದಲ್ಲಿ ಸಹಕಾರ ಚಳುವಳಿಯು ಸಮಾಜದ ಆರ್ಥಿಕ ಪ್ರಗತಿಗೆ ಮಾತ್ರವೇ ಅಲ್ಲದೆ ಸಾಮಾಜಿಕ ಮತ್ತು ನೈತಿಕ ಉನ್ನತಿಗೂ ಶ್ರಮಿಸಬೇಕೆಂದು ಅಭಿಪ್ರಾಯಪಟ್ಟರು. ಸಮಾಜವಾದಿ ಸಮಾಜದ ರಚನೆಗೆ ಇದೇ ಅತ್ಯುತ್ತಮ ಮಾರ್ಗವೆಂದು ಹೇಳಿ ಪ್ರಜಾಪ್ರಭುತ್ವದ ಗುರಿಯನ್ನು ಸಾಧಿಸಲು ಜೀವನದ ಎಲ್ಲ ರಂಗಗಳಲ್ಲೂ ಸಹಕಾರ ಭಾವನೆಯನ್ನು ಬೆಳಸಬೇಕೆಂದು ತಿಳಿಸಿದರು. ಅಡಳಿತ ವರ್ಗದವರು ಮಾತ್ರವೇ ಅಲ್ಲದೆ ಸದಸ್ಯರೆಲ್ಲರೂ ಮನಃಪೂರ್ವಕವಾಗಿ ಭಾಗವಹಿಸುವುದರಿಂದಲೇ ಸಂಘಗಳ ಗುರಿಯು ಸಾಧಿಸಲ್ಪಡುವುದೆಂದು ಅವರು ಹೇಳಿದರು. ದಳ್ಳಾಳಿಗಳ ಪ್ರವೇಶವನ್ನು ನಿವಾರಿಸಿ ಬಡ ಜನರಿಗೆ ನೇರವಾಗಿ ನೆರವು ನೀಡಲು ಸಹಕಾರ ಸಂಘಗಳಿಗೆ ಅಪಾರವಾದ ಅವಕಾಶವಿದೆಯೆಂದು ಅವರು ನುಡಿದರು. ಶ್ರೀ ಕನ್ಯಕಾಪರಮೇಶ್ವರೀ ಸಂಘಕ್ಕೆ ಇತೋಪ್ಯತಿಶಯವಾದ ಶ್ರೇಯಸ್ಸನ್ನು ಕೋರಿದರು ವಂದನಾರ್ಪಣೆಯನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು.

ಜಾಕಿ ಕ್ವಾರ್ಟರ್ಸ್ಗೆ ಕಛೇರಿಗಳ ವರ್ಗದಿಂದ ಜನರಿಗೆ ತೊಂದರೆ

ಪಿರಿಯಾಪಟ್ಟಣದ ಇನಾಂದಾರರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಈ ರೀತಿ ಬರೆಯುತ್ತಾರೆ:-

ಇನಾಂ ಸ್ಪೆಷಲ್ ಡೆಪ್ಯುಟಿ ಕಮಿಷನರ್‌ರವರ ಕಛೇರಿ, ಡಿ. ಡಿ. ಪಿ ಐ ಕಛೇರಿ ಮುಂತಾದ ಕೆಲವು ಕಛೇರಿಗಳು "ಜಾಕಿ ಕ್ವಾರ್ಟರ್ಸ್"ಗೆ ಹೋಗುವುದಾಗಿ ಪತ್ರಿಕೆಯಲ್ಲಿ ನೋಡಿ ಸಾರ್ವಜನಿಕರ ಮನಸ್ಸಿನಲ್ಲಿ ಆತಂಕವಾಗಿದೆ. ಈ ಕಛೇರಿಗಳಿಗೆ ಪ್ರತಿದಿನವೂ ಅನೇಕರು ಕೆಲಸಕ್ಕಾಗಿ ಹೋಗಬೇಕಾಗಿದೆ. ಈಗ ಇನಾಂ ಡೆಪ್ಯುಟಿ ಕಮಿಷನರ್‌ರವರ ಆಫೀಸು ಇರತಕ್ಕ ಕಟ್ಟಡದಲ್ಲಿ ಜಿಲ್ಲೆಯ ಅನೇಕ ಕಛೇರಿಗಳಿರುತ್ತವೆ. ಇಲ್ಲಿನ ಕೆಲಸಕ್ಕೆ ಬರತಕ್ಕವರಿಗೆ ಸಾಮಾನ್ಯವಾಗಿ ಈ ಇತರೇ ಕಛೇರಿಗಳಲ್ಲೂ ಕೆಲಸವಿರುತ್ತದೆ. ಇಲ್ಲಿಗೆ ಸಿವಿಲ್ ಕೋರ್ಟುಗಳೂ ಹತ್ತಿರವಾಗಿರುವುದಲ್ಲದೆ, ನಗರದ ಮಧ್ಯ ಭಾಗದಲ್ಲಿದ್ದು ಹೋಟೇಲ್, ಬಸ್, ಜಟಕಾ ಮುಂತಾದ್ದೆಲ್ಲಾ ದೊರೆಯುವ ಸೌಕರ್ಯವೂ ಇದೆ. ಇದನ್ನು ತಪ್ಪಿಸಿ ಮೂರು ಮೈಲಿ ದೂರದಲ್ಲಿ ಒಂದು ಕೊನೆಯಲ್ಲಿರುವ ಜಾಕಿ ಕ್ವಾರ್ಟರ್ಸಿಗೆ ಬದಲಾಯಿಸಿದರೆ ಸಾರ್ವಜನಿಕರಿಗೂ, ವಕೀಲರಿಗೂ ಪ್ರಯಾಣದ ಖರ್ಚು ಮಾತ್ರವಲ್ಲದೆ ಕಾಲವ್ಯಯ ಮುಂತಾದ ಇತರ ತೊಂದರೆಗಳು ಉಂಟಾಗುತ್ತವೆ. ಒಂದು ವೇಳೆ ಈಗಿರುವ ಸ್ಥಳದಿಂದ ಬದಲಾಯಿಸಬೇಕಾದಲ್ಲಿ ಇದಕ್ಕೆ ಕೇವಲ ಸಮೀಪವಾಗಿರುವ ಮತ್ತು ಮಂತ್ರಿಗಳು ಇಳಿದುಕೊಳ್ಳುವ 'ಜಲಸನ್ನಿಧಿ' 'ಜಲದರ್ಶಿನಿ' 'ಪದ್ಮಾಲಯ' ಮುಂತಾದ ಕಟ್ಟಡಗಳ ಪೈಕಿ ಯಾವುದಕ್ಕಾದರೂ ವರ್ಗಾಯಿಸುವುದು ಸೂಕ್ತವೂ, ಅನುಕೂಲವೂ ಆಗಿರುತ್ತದೆ. ಸರ್ಕಾರದವರು ಸಾರ್ವಜನಿಕ ಹಿತ ದೃಷ್ಟಿಯಿಂದ ಮೇಲ್ಕಂಡಂತೆ ನಡೆಸಿಕೊಡಬೇಕಾಗಿ ಪ್ರಾರ್ಥನೆ.

ಮಂತ್ರಿಗಳಿಗೆ ಕಾರು ಮುಂತಾದ ಸೌಕರ್ಯವಿರುವುದರಿಂದ ಜಾಕಿ ಕ್ವಾರ್ಟರ್ಸ್‌ನಲ್ಲಿ ಅವರುಗಳು ಮೈಸೂರಿಗೆ ಬಂದಾಗ ವಾಸ್ತವ್ಯ ಮಾಡಬಹುದಾಗಿದೆ. ಹಿಂದೆ ಶ್ರೀ ಮಾರ್ಕ್ ರಾಬಿನ್ಸನ್‌ರವರು ಮತ್ತು ಇನ್ನೂ ಕೆಲವು ಮಂತ್ರಿಗಳು ಹಾಗೆ ಮಾಡುತ್ತಿದ್ದರು. ಬೇರೆ ವೇಳೆ ಅವು ಅವರುಗಳಿಗೆ ... ಗವರ್ನಮೆಂಟ್ ಹೌಸ್ ಸಮೀಪದಲ್ಲಿ ... ದುದರಿಂದ ಇವರುಗಳು ... ವಾಸ್ತವ್ಯ ಮಾಡುವುದು ಯುಕ್ತವಾಗಿದೆ. ಪ್ರಜಾ ಸರ್ಕಾರದ ಮಂತ್ರಿಗಳು ಈ ಸಲಹೆಯನ್ನು ಒಪ್ಪಿ ಇದರಂತೆ ಮಾಡುತ್ತಾರೆಂದು ನಂಬುತ್ತೇನೆ.

ಮಹಾ ಕವಿ ಲಕ್ಷ್ಮೀಶ ವಿರಚಿತ

ಕನ್ನಡ ಜೈಮಿನಿ ಭಾರತ

1957 Edition : Re. 1-0-0

ಶ್ರೀ ರಾಜರತ್ನಂರವರ

ಭಗವಾನ್ ಬುದ್ಧ : 1-0-0

ಕೃಷ್ಣಾ ಕಂಪೆನಿ,

ನೂರಡಿ ರಸ್ತೆ, ಮೈಸೂರು.

ಜಗದಾಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜಾ ಕಳೆದನಂತರ ಮೇಲ್ಕಂಡ ಶಿಶುವಿಹಾರವನ್ನು ತೆರೆಯಲಾಗಿದೆ. ಮಾಧ್ಯಮಿಕ ಮೊದಲನೆಯ ತರಗತಿಯವರೆಗೂ ಆಟಗಳ ಮೂಲಕವೇ ಓದು ಬರಹದ ಶಿಕ್ಷಣವನ್ನೂ ಕೊಡಲಾಗುತ್ತಿದೆ. ಮಹಾಜನರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ.

ಬಿ. ಕೃಷ್ಣಮೂರ್ತಿ,
ವ್ಯವಸ್ಥಾಪಕ

ರಷ್ಯದಲ್ಲಿ ಮತ್ತೊಂದು ದೊಡ್ಡ ಅಣುಶಕ್ತಿ ಕೇಂದ್ರ

೪ ಲಕ್ಷ, ೨೦ ಸಾವಿರ ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಹೊಸ ಅಣು ಶಕ್ತಿ ಕೇಂದ್ರವೊಂದನ್ನು ರಷ್ಯವು ನಿರ್ಮಿಸಲು ಆರಂಭ ಮಾಡಿದೆಯೆಂದು ವರದಿಯಾಗಿದೆ ೧೯೬೦ರ ವೇಳೆಗೆ ಇದರಿಂದ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗುವುದೆಂದು ಹೇಳಲಾಗಿದೆ.

ಮಲಬಾರಿನ ನ್ಯಾಯಾಧೀಶರ ಸಂಘದ ಸ್ಥಾಪನೆಗೆ ಅವಕಾಶ

ಸಂಸ್ಥಾನಗಳ ಪುನರ್ವಿಂಗಡಣೆ ಸಂಬಂಧದಲ್ಲಿ ತಮ್ಮ ನೇಮಕದ ಬಗ್ಗೆ ಅಹವಾಲುಗಳನ್ನು ಹೇಳಿಕೊಳ್ಳುವುದಕ್ಕಾಗಿ ಕೇರಳದಲ್ಲಿರುವ ಮಲಬಾರಿನ ನ್ಯಾಯಾಧೀಶರುಗಳಿಗೆ ತಮ್ಮದೇ ಪ್ರತ್ಯೇಕವಾದ ಸಂಘವನ್ನು ಸ್ಥಾಪಿಸಿಕೊಳ್ಳಲು ಕೇರಳ ಸರ್ಕಾರದವರು ಹಂಗಾಮಿಯಾಗಿ ಅಧಿಕಾರವಿತ್ತಿರುವರು

ಗಮಕ ಪರೀಕ್ಷೆಯ ತರಗತಿಯ ಪ್ರಾರಂಭೋತ್ಸವ

೫೭-೫೮ನೇ ಸಾಲಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆಯಲಿರುವ ಗಮಕ ಪ್ರವೇಶ ಪರೀಕ್ಷೆಯ ತರಗತಿಯ ಪ್ರಾರಂಭೋತ್ಸವವು ಚಾಮುಂಡಿ ಮೊಹಲ್ಲಾದ ವನಿತಾ ಸದನದಲ್ಲಿ ಇದೇ ಮಾಹೆ ೧೦ನೇ ತಾರೀಖು ಶ್ರೀ ವರ್ಮಾ ತ ಸು. ಶ್ಯಾಮರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿ ಜಿ. ವಸುಧರವರಿಂದ ಪ್ರಾರ್ಥನೆ ಮತ್ತು ಶ್ರೀಮತಿ ಹೆಚ್ ಜಾನಕಿಯವರಿಂದ ಕಾವ್ಯ ವಾಚನವೂ ಅದನಂತರ ಅಧ್ಯಕ್ಷರು ಭಾಷಣ ಮಾಡಿ, ಗಮಕ ಕಲೆಯ ಪ್ರಾಚೀನತೆ ಮತ್ತು ಅದರ ವೈಶಿಷ್ಟ್ಯಗಳನ್ನು ಕುರಿತು, ಮಾತನಾಡುತ್ತಾ ನಮ್ಮ ಪುರಾತನ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಬೇಕಾದರೆ ಗಮಕ ಕಲೆಗಿಂತ ಮುಖ್ಯವಾದ ಸಾಧನ ಬೇರೊಂದಿಲ್ಲವೆಂದು ನುಡಿದರು. ಹೆಚ್ಚು ಜನರು ಇದನ್ನು ಶ್ರದ್ಧೆಯಿಂದ ಕಲಿತು ಜನ ಸಾಮಾನ್ಯರಲ್ಲಿ ಬಳಕೆಗೆ ತರಬೇಕೆಂದು ಹೇಳಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಚೂಡಾ ಕರ್ಮ

ತರೀಕೆರೆ ತಾಲ್ಲೂಕು ಲಿಂಗದಹಳ್ಳಿಯ ಪೊಲೀಸ್ ದಫೇದಾರ್ ಶ್ರೀ ಎಸ್ ನಾಗಪ್ಪನವರು ತಮ್ಮ ದ್ವಿತೀಯ ಕುಮಾರ ಚಿ|| ಅನಂತಪದ್ಮನಾಭನಿಗೆ ಲಿಂಗದಹಳ್ಳಿಯಲ್ಲಿ ನೆನ್ನೆ ಚೂಡಾಕರ್ಮ ಮಹೋತ್ಸವವನ್ನು ನೆರವೇರಿಸಿದರು

೩೦೦ ಮಂದಿ ಹೆಚ್ಚು ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಸೌಲಭ್ಯ

ಸಂಸ್ಥಾನದಲ್ಲಿರುವ ವಿವಿಧ ಇಂಜನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗಕ್ಕಾಗಿ ೩೦೦ ಮಂದಿ ಹೆಚ್ಚು ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸಿಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರದ ಅನುಮತಿಯನ್ನು ಮತ್ತು ನೆರವನ್ನೂ ಪಡೆಯಲು ಯತ್ನಿಸಲಾಗುತ್ತಿರುವುದೆಂದೂ ವಿದ್ಯಾ ಸಚಿವರು ಮೊನ್ನೆ ವಿಧಾನ ಪರಿಷತ್ತಿನಲ್ಲಿ ತಿಳಿಸಿ, ಈ ಪ್ರಯತ್ನವು ಫಲಪ್ರದವಾಗುವ ಬಗ್ಗೆ ಆಶಾಭಾವನೆಯನ್ನು ವ್ಯಕ್ತಪಡಿಸಿದರು.

GLOBE TUTORIAL
COLLEGE
Sadvidya Patasala Buildings,
Offers Excellent Coaching for
S. S. L. C. & INTER

VIDYA TUTORIAL COLLEGE
(Dalvoy High School Buildings)
Mysore
Classes commenced
Join at once
INTER. Arts, Science, Commerce, B.A., B.Sc., B.Com.
All Parts — All Subjects
Ladies also Admitted
Enquiries for Admission 9-30 to 10-30 A.M., 5-30 to 7-30 P.M.

ವಿವಾಹ ಮಹೋತ್ಸವಗಳು

ತಲಕಾಡು ಶ್ರೀ ಅನಂತಭಟ್ಟರು ತಮ್ಮ ಮಗಳು ಸೌ|| ನಾಗರತ್ನಮ್ಮನನ್ನು ಮಂಡ್ಯದ ಎ. ಸಿ. ಭಾರಂನಲ್ಲಿನ ಗುಂಬಳ್ಳಿ ಸುಬ್ಬರಾಯರ ಪುತ್ರ ಶ್ರೀ ಜಿ ಸುಬ್ಬರಾಮಯ್ಯನವರಿಗೆ ಕೊಟ್ಟು ನೆನ್ನೆ ವಿವಾಹವನ್ನು ತಲಕಾಡಿನಲ್ಲಿ ನೆರವೇರಿಸಿದರು.

ಕಲಿಯೂರಿನ ಶ್ರೀ ಜಿ ಕೃಷ್ಣಸ್ವಾಮಿ ಶಾಸ್ತ್ರಿಗಳು ತಮ್ಮ ತಮ್ಮನ ಮಗಳು ಸೌ|| ಶಾಂತಮ್ಮನನ್ನು ತುಮಕೂರು ತಾಲ್ಲೂಕು ಹಿರೇ ಗುಂಡಗಲ್ಲಿನ ಲೇಟ್ ಶ್ರೀ ಜಿ. ಕೃಷ್ಣಮೂರ್ತಿರಾಯರ ಪುತ್ರ ಶ್ರೀ ಜಿ ಕೆ. ನಾರಾಯಣಮೂರ್ತಿಯವರಿಗೆ ಕೊಟ್ಟು ನೆನ್ನೆ ಟಿ. ನರಸೀಪುರದಲ್ಲಿ ವಿವಾಹವನ್ನು ನಡೆಸಿದರು.

ರೈಲ್ವೆಯ ನಿವೃತ್ತ ಟ್ರಾವೆಲಿಂಗ್ ಟಿಕೆಟ್ ಇನ್ಸ್‌ಪೆಕ್ಟರಾದ ಶ್ರೀ ವಿ ಎಸ್. ವೆಂಕಟೇಶರಾಯರು ತಮ್ಮ ಪುತ್ರಿ ಸೌ|| ಲಲಿತಳನ್ನು ನಗರದ ಡಿ ಡಿ. ಪಿ. ಕಛೇರಿಯ ಮ್ಯಾನೇಜರ್ ಶ್ರೀ ಎಂ. ನರಸಿಂಗರಾಯರ ಪುತ್ರ ಶ್ರೀ ಎಂ ಎ. ಆನಂದಮೂರ್ತಿಯವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು

"ಆಧುನಿಕ ಕನ್ನಡ ಕಾದಂಬರಿ" ಬಗ್ಗೆ ರೇಡಿಯೋ ಭಾಷಣ

ಮಹಾರಾಜಾ ಕಾಲೇಜಿನ ತೆಲುಗು ಉಪಪ್ರಧ್ಯಾಪಕರಾದ ವಿ|| ಕೆ. ಸುಬ್ರಹ್ಮಣ್ಯನವರು ನಾಳೆ ರಾತ್ರಿ ೮ ರಿಂದ ೮-೩೦ ರೊಳಗೆ ತೆಲುಗು ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 'ಆಧುನಿಕ ಕನ್ನಡ ಕಾದಂಬರಿ' ಎಂಬ ವಿಷಯವಾಗಿ ಆಕಾಶವಾಣಿಯಲ್ಲಿ ತೆಲುಗಿನಲ್ಲಿ ಭಾಷಣ ಮಾಡುವರು.

ಸಿನಿಮಾ ಮಂದಿರದ ಛಾವಣಿ ಕುಸಿದು ಇಬ್ಬರ ಮರಣ

ಚಂಗಲ್ಪಟ್ ಜಿಲ್ಲೆಯ ಕಡಂಬತೂರ್ ಎಂಬ ಗ್ರಾಮದಲ್ಲಿ ಮೊನ್ನೆ ಸಿನಿಮಾ ಮಂದಿರದ ಛಾವಣಿಯು ಕುಸಿದು ಇಬ್ಬರು ಮಹಿಳೆಯರು ಮೃತಪಟ್ಟು ಹಲವಾರು ಮಂದಿಗೆ ಗಾಯಗಳಾದುವೆಂದು ವರದಿಯಾಗಿದೆ. ಮೃತರಾದವರಲ್ಲಿ ಆ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಮದ್ರಾಸ್ ಶಾಸನಸಭಾ ಸದಸ್ಯರೂ ಆದ ಶ್ರೀ ವಿ. ಎಸ್. ಅರುಣಾಚಲಂರವರ ಪತ್ನಿಯೂ ಒಬ್ಬರು.

ಮೈಸೂರಿನಲ್ಲಿ ಪ್ರತಿ ತಿಂಗಳು 17 ನೇ ತಾರೀಖು

ವಿಶ್ವ ವಿಖ್ಯಾತವಾಗಿರುವ

ನವರತ್ನ ಕಲ್ಪ

ದಿವ್ಯೌಷಧವನ್ನು ಕಂಡು ಹಿಡಿದಿರುವ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮಾ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರಭವನದಲ್ಲಿ

ಬೆಳಿಗ್ಗೆ 7-30ರಿಂದ ಸಂಜೆ 5 ಗಂಟೆಯವರೆಗೆ ಭೇಟಿ ಮಾಡಬಹುದು : ಫೋನ್ ನಂ 590

ಮೇಲ್ಕಂಡ ವಿಷಯವನ್ನು ಗಮನಿಸಿ ಅವರ ಪರಿಣತ ವೈದ್ಯಕೀಯ ಸಲಹೆಯನ್ನು ಪಡೆಯಿರಿ

ಅವರು ತಡವಿಲ್ಲದೆ ಸರಿಯಾಗಿ ಸ್ಥಳದಲ್ಲಿರಲು ವಿಮಾನದಲ್ಲಿ ಸಂಚರಿಸುವರು

ನಿಮ್ಮ ಸಾಮಾನ್ಯವಾದ ಹಾಗೂ ತೀವ್ರವಾದ ಬಾಧೆಗಳಿಗೆ ಪಿತ್ತ, ಕೆಂಪು, ಮುಟ್ಟು, ಹಳದಿ, ಪಕ್ಷಿ, ಗೋಮೆಧಿಕ, ನೀಲ, ಪದ್ಮರಾಗಿಣಿ ಮತ್ತು ಪ್ರಶಸ್ತ ತಿಲ-ಈ 9 ಅಮೂಲ್ಯ ಹರಳುಗಳ ಸಂಯೋಗವಾದ

ನವರತ್ನಕಲ್ಪ — ಉಪಯೋಗಿಸಿರಿ

ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ. ಉಚಿತ ಸಾಹಿತ್ಯಗಳಿಗಾಗಿ ಬರೆಯಿರಿ

NAVRATNA KALPA PHARMACY,
JULLUNDUR CITY (India)

Edited, Printed and Published by A. R. Nagarajau at Sadhvi Press, D. Subbiah Road, Mysore

ರಿಜಿಸ್ಟರ್ ನಂ 792

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ **ಸಾಧ್ವಿ ದಿನ ಪತ್ರಿಕೆಗೆ** ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಪುಟ : ೧೫] SADHVI : TUESDAY 18—6—1957 ಮೈಸೂರು : ಮಂಗಳವಾರ ೧೮—೬—೧೯೫೭ : [ಸಂಚಿಕೆ : ೩೦೪

ಅಣು ಅಸ್ತ್ರ ಪರೀಕ್ಷೆ ನಿಲ್ಲಿಸಲು ವಿಶ್ವಶಾಂತಿ ಸಮ್ಮೇಳನದ ಕರೆ

ಅಣು ಅಸ್ತ್ರ ಪರೀಕ್ಷೆಗಳನ್ನು ಕೂಡಲೇ ನಿಲ್ಲಿಸಲು ಕರೆ

ವಿಶ್ವಶಾಂತಿ ಸಮಿತಿ ಸಮ್ಮೇಳನದ ನಿರ್ಣಯ

ವಿಶ್ವಶಾಂತಿ ಸಮಿತಿಯ ಏಳು ದಿನಗಳ ಅಧಿವೇಶನವು ಸಿಂಹಳದ ಕೊಲಂಬೊ ನಗರದಲ್ಲಿ ಸೋಮವಾರ ನೆನ್ನೆ ಮುಕ್ತಾಯಗೊಂಡಿತು. ಅಣು ಅಸ್ತ್ರ ಪ್ರಯೋಗಗಳನ್ನು ಕೂಡಲೇ ನಿಲ್ಲಿಸಲು ಮಾನವನಿಗೆ ಪವಿತ್ರವಾದ ಎಲ್ಲದರ ಹೆಸರಿನಲ್ಲೂ ಕೆಲಸ ಮಾಡಬೇಕೆಂದು ಪ್ರಪಂಚದ ಎಲ್ಲ ಸರ್ಕಾರಗಳಿಗೂ ಮನವಿ ಮಾಡುವ ನಿರ್ಣಯವನ್ನು ಅಂಗೀಕರಿಸಲಾಯಿತು. ಅಣು ಅಸ್ತ್ರಗಳ ಪ್ರಯೋಗದ ವಿರುದ್ಧವಾಗಿ ಪ್ರಬಲ ಪ್ರತಿಭಟನೆಗಳು ಬರುತ್ತಿದ್ದರೂ ಅದನ್ನು ಧಿಕ್ಕರಿಸಿ ಪ್ರಯೋಗಗಳನ್ನು ಮುಂದುವರಿಸುತ್ತಿರುವುದರಿಂದ ವಾಯು, ಭೂಮಿ ಮತ್ತು ಜಲಗಳು ಕೆಡುವುದೇ ಅಲ್ಲದೆ ಮುಂದಿನ ಜನಾಂಗಕ್ಕೆ ವಿನಾಶ ತಟ್ಟುವುದೆಂದೂ ಆದರಲ್ಲಿ ತಿಳಿಸಲಾಗಿದೆ. ಪ್ರಯೋಗ ಪರೀಕ್ಷೆಗಳ ನಿಷೇಧಕ್ಕಾಗಿ, ಸಂಬಂಧಪಟ್ಟ ರಾಷ್ಟ್ರಗಳು ಒಪ್ಪಂದಕ್ಕೆ ಬರಲು ಸಂಧಾನ ನಡೆಸಬೇಕೆಂದೂ ಒತ್ತಾಯ ಮಾಡಲಾಗಿದೆ. ಸಾಮಾನ್ಯ ನಿಶ್ಶಸ್ತ್ರೀಕರಣದ ಪ್ರಥಮ ಘಟ್ಟವಾಗಿ ಅಣು ಅಸ್ತ್ರ ಪ್ರಯೋಗಗಳನ್ನು ಕೂಡಲೇ ನಿಲ್ಲಿಸುವ ಬಗ್ಗೆ ಒತ್ತಾಯ ಪಡಿಸಲು ವಿಶ್ವ ಸಂಸ್ಥೆ ಮತ್ತು ಆ ದರ ರಾಷ್ಟ್ರಗಳಿಗೆ ನಿಯೋಗಗಳನ್ನು ಕಳುಹಿಸುವಂತೆಯೂ ಶಾಂತಿ ಸಮಿತಿಯ ಕಾರ್ಯಕಾರಿ ಸಮಿತಿಯನ್ನು ಕೋರಲಾಗಿದೆ.

ನೆಹರೂರವರಿಗೆ ಡಮಾಸ್ಕಸ್ ನಗರದ ಗೌರವ ಪೌರತ್ವ

ಪ್ರಧಾನಿ ನೆಹರೂರವರು ಕಳೆದ ಶುಕ್ರವಾರ ಸಿರಿಯಾ ದೇಶಕ್ಕೆ ಭೇಟಿಯಿತ್ತಾಗ ಅಲ್ಲಿ ಅವರಿಗೆ ಬಹಳ ವೈಭವಪೂರಿತವಾದ ಸ್ವಾಗತವನ್ನು ನೀಡಲಾಯಿತು. ಡಮಾಸ್ಕಸ್ ಪಟ್ಟಣದ ಪೌರರು ನೆಹರೂರವರಿಗೆ, ಇದುವರೆಗೆ ಯಾವ ವಿದೇಶೀಯನಿಗೂ ದೊರೆಯುದಿದ್ದ ಅಲ್ಲಿನ ಗೌರವ ಪ್ರಜೆಯ ಸನ್ಮಾನವನ್ನು ನೀಡಿದರು

ಬೊಂಬಾಯಿ ವಿಧಾನ ಸಭೆಯ ಬಾಗಿಲಲ್ಲಿ ಸದಸ್ಯರೊಬ್ಬರ ನಿಧನ

ನೆನ್ನೆ ದಿನ ಆರಂಭವಾದ ಬೊಂಬಾಯಿಯ ನೂತನ ವಿಧಾನ ಸಭೆಯಲ್ಲಿ ಭಾಗವಹಿಸಲು ಶ್ರೀ ಹರಿಪ್ರಸಾದ ವಿ ಭಟ್ ಎಂಬುವರು ಸಭೆಯ ದ್ವಾರದ ಬಳಿ ಹೋದಾಗ ಹಠಾತ್ತನೆ ಅಲ್ಲಿಯೇ ಕುಸಿದು ಬಿದ್ದು ಮೃತಪಟ್ಟರೆಂದು ವರದಿಯಾಗಿದೆ. ಇವರು ಸಭೆಯ ಸದಸ್ಯರ ಪುಸ್ತಕದಲ್ಲಿ ರುಜು ಮಾಡಲು ಹೋಗುತ್ತಿದ್ದಂತೆಯೇ ಅವರಿಗೆ ಎದೆನೋವು ಕಾಣಿಸಿಕೊಂಡಿತೆಂದು ಹೇಳಲಾಗಿದೆ

ವಿಧಾನ ಪರಿಷತ್ತಿನ ಉಪಾಧ್ಯಕ್ಷತೆಗೆ ಪುತ್ತೂರಿನ ಕೆ ಕಾಂತಪ್ಪಶೆಟ್ಟರು

ಸಂಸ್ಥಾನದ ವಿಧಾನ ಪರಿಷತ್ತಿನ ಉಪಾಧ್ಯಕ್ಷಸ್ಥಾನಕ್ಕೆ ಕಾಂಗ್ರೆಸ್ಸಿನ ಪರವಾಗಿ ಪುತ್ತೂರಿನ ಶ್ರೀ ಕೆ. ಕಾಂತಪ್ಪಶೆಟ್ಟಿಯವರನ್ನು ಆರಿಸಲಾಗಿದೆ. ಬೇರೆ ಯಾರೂ ಉಮೇದುವಾರಿಕೆ ಅರ್ಜಿ ಹಾಕದಿದ್ದುದರಿಂದ ಅವರೇ ಚುನಾಯಿತರಾಗಲಿರುವರು

ಈ ವರ್ಷ ವಿಧಾನ ಪರಿಷತ್ತಿಗೆ ಚುನಾವಣೆ

ವಿಧಾನ ಸಭೆಯಲ್ಲಿ ಕಾರ್ಮಿಕ ಸಚಿವರ ಹೇಳಿಕೆ

ಬೆಂಗಳೂರು ೧೮

ಸಂಸ್ಥಾನದ ವಿಧಾನ ಪರಿಷತ್ತಿಗೆ ಚುನಾವಣೆಯು ಈ ವರ್ಷ ನಡೆಯಬಹುದೆಂದು ಕಾರ್ಮಿಕ ಸಚಿವ ಶ್ರೀ ಬಿ. ವೈಕುಂಠ ಬಾಳಿಗರವರು ನೆನ್ನೆ ವಿಧಾನ ಸಭೆಯಲ್ಲಿ ತಿಳಿಸಿದರು. ಈ ಚುನಾವಣೆಯನ್ನು ಮುಂದೆ ಹಾಕಬೇಕೆಂದು ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಿಲ್ಲವೆಂದೂ ಮತ್ತು ಪರಿಷತ್ತಿನ ಸಂಖ್ಯೆಯನ್ನು ಹೆಚ್ಚಿಸುವಂತೆ ಕೋರಲಾಗಿದೆಯೆಂದೂ ಮುಖ್ಯ ಮಂತ್ರಿಯವರು ತಿಳಿಸಿದರು

ಬೆಂಗಳೂರಿನಲ್ಲಿ ಫ್ಲೂ ವ್ಯಾಧಿಗ್ರಸ್ಥರ ಸಂಖ್ಯೆ ೧೦,೮೦೩

ಬೆಂಗಳೂರು ನಗರದಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯು ಇನ್ನೂ ಹೆಚ್ಚುತ್ತಲೇ ಇದೆ. ನೆನ್ನೆ ಹೊಸದಾಗಿ ೮೭೪ ಮಂದಿಗೆ ಖಾಯಿಲೆಯಾಗಿ, ಒಟ್ಟು ಸಂಖ್ಯೆಯು ೧೦,೮೦೩ಕ್ಕೆ ಏರುವುದೆಂದು ತಿಳಿದುಬಂದಿದೆ.

ಕೇರಳದ ವಿಧಾನ ಸಭೆ ಮುಂದೆ ಹಸಿದವರ ತಂಡದ ಪ್ರದರ್ಶನ

ಕೇರಳ ಸಂಸ್ಥಾನದ ತೀರ ಪ್ರದೇಶಗಳಲ್ಲಿರುವ ಕಾರ್ಖಾನೆಗಳ ಕಾರ್ಮಿಕರು, ತಮ್ಮ ಕುಂದು ಕೊರತೆಗಳನ್ನು ನಿವಾರಿಸಿ ನಿರುದ್ಯೋಗ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಧಾನ್ಯಗಳ ಬೆಲೆ ಏರುತ್ತಿರುವುದನ್ನು ತಡೆಗಟ್ಟಲು ಸರ್ಕಾರವನ್ನು ಒತ್ತಾಯಪಡಿಸುವ ಸಲುವಾಗಿ ಬರುವ ಶುಕ್ರವಾರ ಹಸಿದವರ ತಂಡವನ್ನು ಹೊರಡಿಸಿ ರಾಜಧಾನಿಯಾದ ತಿರುವನಂತಪುರದಲ್ಲಿ ವಿಧಾನ ಸಭೆಯ ಮುಂದೆ ಪ್ರದರ್ಶನ ನಡೆಸುವರೆಂದು ಹೇಳಲಾಗಿದೆ

ಕಾಸ್ಮೊಪಾಲಿಟನ್ಸ್ ಬ್ಯಾಡ್‌ಮಿಂಟನ್ ಕ್ಲಬ್

ಮಲ್ಲೇಶ್ವರಂ ಸ.ಘದ ಮೊದಲನೆಯ ವಾರ್ಷಿಕೋತ್ಸವವು ಮೊನ್ನೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಟ್ಟರು ಪಂದ್ಯಗಳಾದಮೇಲೆ ನಡೆದ ಸಭೆಯಲ್ಲಿ ಅಧ್ಯಕ್ಷರು ಬಹುಮಾನಗಳನ್ನು ಹಂಚಿ ಸಂಸ್ಥೆಗೆ ಯಶಸ್ಸನ್ನು ಕೋರಿ ಹದುಗರು ಕ್ರೀಡೆಗಳಲ್ಲಿ ಹೆಚ್ಚುಹೆಚ್ಚು ಆಸಕ್ತಿ ವಹಿಸಬೇಕೆಂದು ಕೋರಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದೇವರ ನಾಮ. ೭-೧೫ ರಾಜಾರಾಂ ನಾಗಸ್ವರ. ೮-೧೫ ಹಿಂದಿ ಶಿಕ್ಷಣ. ಮಧ್ಯಾಹ್ನ ೧೨ ಫಣೀಂದ್ರ ಕುಮಾರಿ ಕೇಸರಿಗಾಯನ. ೧೨-೩೦ ಎಂ. ಪಿ ಶೇಷಾದ್ರಿ-ಪಿಟೀಲು. ೧ ಮತ್ತು ೧-೨೦ ಎಂ. ಸಿ ವಸಂತ ಕೋಕಿಲಂ ಮತ್ತು ದಂಡಪಾಣಿ ದೇಶಿಗರ್-ರಿಕಾರ್ಡು ೧-೫೦ ಗಿಟಾರ್. ೨ ಫಣೀಂದ್ರ ಕುಮಾರಿ ಕೇಸರಿ-ಗಾಯನ. ೨-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೩೦ ಗ್ರಾಮಸ್ಥರಿಗಾಗಿ. ೭-೩೦ ವಚನ ಗಾನ. ೮ ರಾಜಾರಾಂ-ನಾಗಸ್ವರ ೮-೩೦ ರಾಷ್ಟ್ರೀಯ ಕಾರ್ಯಕ್ರಮ : ಭಾಷಣ. ೮-೫೦ ವೃಂದ ಗಾನ. ೯-೧೫ ಉರ್ದು ಗೀತೆಗಳು ೯-೩೦ ಸಂಗೀತ ಸಭೆ

ಅಣು ಸ್ಫೋಟಗಳ ತಡೆ ಬಗ್ಗೆ ರಷ್ಯಾ ಸಲಹೆಗೆ ಅಮೆರಿಕಾ ಸ್ವಾಗತ

ವಿಶ್ವಸಂಸ್ಥೆಯ ನಿಶ್ಶಸ್ತ್ರೀಕರಣ ಉಪ ಸಮಿತಿಯ ಸಭೆಯು ನೆನ್ನೆ ಲಂಡನ್ನಿನಲ್ಲಿ ಆರಂಭವಾಯಿತು. ಸಭೆಯಲ್ಲಿ ಅಮೆರಿಕದ ನಿಯೋಗದ ನಾಯಕ ಹೆರಾಲ್ಡ್ ಸ್ಟ್ಯಾಸೆನ್‌ರವರು ಮಾತನಾಡುತ್ತಾ, ಅಣು ಅಸ್ತ್ರಗಳ ಪರೀಕ್ಷಾ ಪ್ರಯೋಗಗಳನ್ನು ೨-೩ ವರ್ಷಕಾಲ ನಿಲ್ಲಿಸಬೇಕೆಂದೂ ಮತ್ತು ಈ ಬಗ್ಗೆ ಒಪ್ಪಂದದ ಪಾಲನೆಯನ್ನು ವೀಕ್ಷಿಸಲು ಬ್ರಿಟನ್, ಅಮೆರಿಕಾ, ರಷ್ಯಾ ಮತ್ತು ಇತರ ರಾಷ್ಟ್ರಗಳಲ್ಲಿ ಉಸ್ತುವಾರಿ ಕೇಂದ್ರಗಳನ್ನು ಸ್ಥಾಪಿಸಬೇಕೆಂದೂ ರಷ್ಯಾವು ನೀಡಿರುವ ಸಲಹೆಯನ್ನು ಸ್ವಾಗತಿಸಿ, ಇದರಿಂದ ನಿಶ್ಶಸ್ತ್ರೀಕರಣದ ಪ್ರಥಮ ಕ್ರಮದಲ್ಲಿ ಹೆಜ್ಜೆ ಇಟ್ಟಂತಾಗಿರುವುದೆಂದೂ ನುಡಿದರು

ಮೋಟಾರ್ ವ್ಯಾನಿನಲ್ಲಿ ಗುಂಡಿನಿಂದ ಒಬ್ಬನನ್ನು ಕೊಂದು ೧೫ ಸಾವಿರ ರೂ. ದರೋಡೆ

ಬೊಂಬಾಯಿಯಲ್ಲಿ ಸಶಸ್ತ್ರಧಾಳಿಕಾರರ ಕೃತ್ಯ

ಬೊಂಬಾಯಿ ಕ್ವೀನ್ಸ್ ರಸ್ತೆಯ ಜನಭರಿತ ಪ್ರದೇಶದಲ್ಲಿ ನೆನ್ನೆ ಮಧ್ಯಾಹ್ನ ಹಾಲಿನ ಕೇಂದ್ರದ ಹಣವನ್ನು ತೆಗೆದುಕೊಂಡುಹೋಗುತ್ತಿದ್ದ ಒಂದು ಮೋಟಾರು ವ್ಯಾನನ್ನು ೫ ಮಂದಿ ಸಶಸ್ತ್ರ ದರೋಡೆಕಾರರು ಅಡ್ಡಗಟ್ಟಿ ಡ್ರೈವರನನ್ನು ತಿವಿದು ಪೋರ್ಟರ್ ಕಾವಲುಗಾರನನ್ನೂ ಗುಂಡಿನಿಂದ ಹೊಡೆದು ಗಾಯಗೊಳಿಸಿ ಕ್ಯಾಷಿಯರ್ ಮತ್ತು ಜವಾನರುಗಳ ಮೇಲೆ ಕೈ ಮಾಡಿ ೧೫ ಸಾವಿರ ರೂ. ಅಪಹರಿಸಿ ಪರಾರಿಯಾದರೆಂದು ವರದಿಯಾಗಿದೆ.

ಆಹಾರ ಧಾನ್ಯಗಳ ಬೆಲೆಯಲ್ಲಿ ಇಳಿತಾಯ

ಇತ್ತೀಚೆಗೆ ಕೇಂದ್ರ ಸರ್ಕಾರದವರು ಕೈಗೊಂಡ ಹಲವು ಕ್ರಮಗಳ ಪರಿಣಾಮವಾಗಿ ಕಳೆದ ೧೫ ದಿನಗಳಿಂದಲೂ ದೇಶದ ವಿವಿಧ ಭಾಗಗಳಲ್ಲಿ ಗೋಧಿ, ಅಕ್ಕಿ ಮುಂತಾದ ಆಹಾರ ಧಾನ್ಯಗಳ ಬೆಲೆಯಲ್ಲಿ ಇಳಿತಾಯವು ಕಂಡುಬರುತ್ತಿದೆಯೆಂದು ವರದಿಯಾಗಿದೆ.

ಜೋರ್ಡಾನಿಗೆ ಸಿರಿಯಾ ಈಜಿಪ್ಟ್‌ಗಳ ಸಹಾಯದ ನಿರಾಕರಣೆ

ಜೋರ್ಡಾನ್ ರಾಜ್ಯವು ತಾಟಸ್ಥ್ಯ ನೀತಿಯನ್ನು ಬಿಟ್ಟು, ಐಸೆನ್‌ಹೋವರರ ಸಿದ್ಧಾಂತಕ್ಕೆ ಒಪ್ಪಿಗೆಯನ್ನು ಕೊಟ್ಟು ಪಾಶ್ಚಿಮಾತ್ಯ ರಾಜ್ಯಗಳ ಕಡೆ ವಾಲಿರುವುದರಿಂದ ತಾವು ಮೊದಲು ವಾಗ್ದಾನ ಮಾಡಿದ್ದ ಸಾಲಿಯಾನಾ ೧ ಕೋಟಿ ೬೦ ಲಕ್ಷ ಡಾಲರ್ ಸಹಾಯವನ್ನು ಕೊಡಲು ಈಜಿಪ್ಟ್ ಮತ್ತು ಸಿರಿಯಾ ರಾಜ್ಯಗಳು ನಿರಾಕರಿಸಿರುವುದಾಗಿ ವರದಿಯಾಗಿದೆ.

ವಿದ್ಯುತ್ ಪ್ರವಹಿಸಿ ಮರಣ

ಈ ದಿನ ಸಾಯಂಕಾಲ ೧೨ ಘಂಟೆ ಹೊತ್ತಿನಲ್ಲಿ ಆನೆಪಾಳ್ಯದ ರಸ್ತೆಯಲ್ಲಿ ಅಪರಿಚಿತನೊಬ್ಬನು ವಿದ್ಯುತ್ ಕಂಬದಿಂದ ಹರಿಯುತ್ತಿದ್ದ ಕರೆಂಟಿಗೆ ಸಿಕ್ಕಿ ಮೃತಪಟ್ಟನು. ದೇವರಾಜ ಪೊಲೀಸರು ಮಹಜರು ನಡೆಸಿದರು

ಬೊಂಬಾಯಿ ಕರ್ನಾಟಕದ ಸ್ಥಳೀಯ ಸಂಸ್ಥೆಗಳಿಗೆ ಜೀವದಾನ

ಶಾಸನ ಸಭೆಯಲ್ಲಿ ಮಸೂದೆಗೆ ಅಂಗೀಕಾರ

ಬೆಂಗಳೂರು ೧೮

ಹಳೆಯ ಬೊಂಬಾಯಿ ಪ್ರಾಂತಕ್ಕೆ ಸೇರಿದ್ದ ಕನ್ನಡ ಭಾಗಗಳ ಸ್ಥಳೀಯ ಸಂಸ್ಥೆಗಳಿಗೆ ಒಂದು ವರ್ಷ ಜೀವದಾನ ನೀಡಲು ಸೂಚಿಸುವ ತಿದ್ದುಪಡಿ ಮಸೂದೆಯೊಂದಕ್ಕೆ ನೆನ್ನೆ ವಿಧಾನ ಸಭೆಯು ವಿಪುಲ ಚರ್ಚೆಯನಂತರ ಅಂಗೀಕಾರವಿತ್ತಿತು. ಚುನಾವಣೆಗಳ ಏರ್ಪಾಟನ್ನು ಈ ರೀತಿ ಮುಂದುವರಿಸುವುದು ಪ್ರಜಾಪ್ರಭುತ್ವ ತತ್ವಕ್ಕೂ ಮತ್ತು ರಾಜ್ಯಾಂಗದ ವಿಧಿಗಳಿಗೂ ವಿರುದ್ಧವೆಂದು ವಿರೋಧ ಪಕ್ಷದ ಸದಸ್ಯರು ಟೀಕಿಸಿದರು. ಇತರ ಪಕ್ಷಗಳವರು ಪ್ರಾಬಲ್ಯಕ್ಕೆ ಬರುವುದನ್ನು ತಡೆಗಟ್ಟಲು ಈ ರೀತಿ ಮಾಡಲಾಗುತ್ತಿದೆಯೆಂದು ಅವರು ವಾದಿಸಿದರು. ಕಾಂಗ್ರೆಸ್ ಸದಸ್ಯರು ಮಸೂದೆಯನ್ನು ಸಮರ್ಥಿಸಿದರೂ, ಚುನಾವಣೆಗಳು ಬೇಗ ನಡೆಯಬೇಕೆಂದು ಒತ್ತಾಯ ಮಾಡಿದರು.

ಸಚಿವ ಚನ್ನಿಗರಾಮಯ್ಯನವರು ಉತ್ತರವಿತ್ತು, ದೇಶದ ಬೇರೆಬೇರೆ ಭಾಗಗಳಲ್ಲಿ ವಿವಿಧ ಕಾನೂನುಗಳಿರುವುದನ್ನು ಸಮನ್ವಯ ಮಾಡಿದನಂತರ ಚುನಾವಣೆಗಳನ್ನು ನಡೆಸಲು ಬೇಕಾದ ಕಾಲಾವಕಾಶಕ್ಕಾಗಿ ಮಸೂದೆಯನ್ನು ತರಲಾಯಿತೆಂದು ಸಮಾಧಾನವಿತ್ತರು. ಶಾಸನ ಸಭಾ ಸದಸ್ಯರ ವೇತನದ ಮತ್ತು ಮಾರಾಟ ತೆರಿಗೆ ಶಾಸನದ ತಿದ್ದುಪಡಿ ಮಸೂದೆಗಳಿಗೂ ಸಹ ಸಭೆಯು ಒಪ್ಪಿಗೆಯನ್ನಿತ್ತಿತು.

ಅಮೆರಿಕದ ಮಹಿಳೆಯರ ಮೇಲೆ ಉದ್ರಿಕ್ತ ಗ್ರಾಮಸ್ಥರ ಧಾಳಿ

ಮಕ್ಕಳ ಅಪಹರಣದ ವದಂತಿಯ ಪ್ರತಿಧ್ವನಿ

ಕಳೆದ ಶುಕ್ರವಾರ ರಾಜಕೋಟೆಯಿಂದ ಅಹಮದಾಬಾದಿಗೆ ಒಂದು ಜೀಪಿನಲ್ಲಿ ತೆರಳುತ್ತಿದ್ದ ಇಬ್ಬರು ಅಮೆರಿಕದ ಮಹಿಳೆಯರ ಮೇಲೆ ಎರಡು ಹಳ್ಳಿಗಳ ಜನರು ಧಾಳಿ ನಡೆಸಿದ ಪರಿಣಾಮವಾಗಿ ಇಬ್ಬರಿಗೂ ತೀವ್ರ ಗಾಯಗಳಾಗಿ ಅವರನ್ನು ವಿಮಾನದಲ್ಲಿ ದೆಹಲಿಗೆ ಕರೆತಂದು ಆಸ್ಪತ್ರೆಗೆ ಸೇರಿಸಲಾಯಿತೆಂದು ವರದಿಯಾಗಿದೆ. ಘಟನೆ ನಡೆದ ಹಳ್ಳಿಗಳಲ್ಲಿ ಮಕ್ಕಳ ಅಪಹರಣದ ಬಗ್ಗೆ ಜನರು ಗಾಬರಿಗೊಂಡಿದ್ದರೆಂದೂ, ಜೀಪಿನ ಡ್ರೈವರನು ಮಧ್ಯೆ ಒಂದು ಕಡೆ ಮುಂದಿನ ದಾರಿಯ ಅರಿವಿಲ್ಲದೆ ಹಲವು ಹುಡುಗರನ್ನು ಪ್ರಶ್ನಿಸಿದುದರಿಂದ ಜನರಿಗೆ ಅವರ ಬಗ್ಗೆ ಸಂದೇಹ ಮೂಡಿ ಧಾಳಿ ನಡೆಸಿದರೆಂದೂ ಹೇಳಲಾಗಿದೆ.

ಜೋರ್ಡಾನ್ ದೊರೆ ಹುಸೇನರಿಂದ ವಿವಾಹ ವಿಚ್ಛೇದನ

ಜೋರ್ಡಾನಿನ ದೊರೆ ಹುಸೇನರು ಕೈರೋ ನಗರದಲ್ಲಿರುವ ತಮ್ಮ ರಾಣಿಯೊಡನೆ ವಿವಾಹ ವಿಚ್ಛೇದನವನ್ನು ಮಾಡಿಕೊಂಡಿದ್ದಾರೆಂದು ವರದಿಯಾಗಿದೆ. ಈಗ ಆಕೆಯು ತನ್ನ ಮಗುವಿನ ಭವಿಷ್ಯ ಮತ್ತು ಕುಟುಂಬದ ಇತರ ವ್ಯವಹಾರಗಳನ್ನು ಇತ್ಯರ್ಥಗೊಳಿಸಲು ಬಾಗ್ದಾದ್ ನಗರಕ್ಕೆ ಪ್ರಯಾಣ ಮಾಡಿರುವರೆಂದು ತಿಳಿದುಬಂದಿದೆ

ಮಂತ್ರಿಗಳ ಸತ್ಕಾರವನ್ನು ಪ್ರತಿಭಟಿಸಿದವರ ಮೇಲೆ ಧಾಳಿ

ಕೇಂದ್ರ ಮಂತ್ರಿ ಸರ್ದಾರ್ ಸ್ವರ್ಣ ಸಿಂಗ್‌ಗೆ ಪಂಜಾಬಿನ ಲೂಧಿಯಾನಾ ನಗರದಲ್ಲಿ ಕಾಂಗ್ರೆಸ್ಸಿಗರು ಕಳೆದ ಶನಿವಾರ ಸತ್ಕಾರ ಕೂಟವನ್ನು ಏರ್ಪಡಿಸಿದ್ದಾಗ ಪ್ರತಿಭಟನಾ ಪ್ರದರ್ಶನವನ್ನು ನಡೆಸಿ, ಗಲಭೆ ಮಾಡಿದ ಪಿ ಎಸ್. ಪಿ, ಕಮ್ಯೂನಿಸ್ಟ್ ಮುಂತಾದ ಪಕ್ಷಗಳವರಿಗೂ ಮತ್ತು ಸತ್ಕಾರದ ವ್ಯವಸ್ಥಾಪಕರಿಗೂ ಜಗಳ ಪ್ರಾರಂಭವಾಗಿ ಹೊಡೆದಾಟವಾಯಿತೆಂದೂ, ಇದರಿಂದ ಅಲ್ಲಿನ ಪಿ. ಎಸ್. ಪಿ. ಪಕ್ಷದ ಸ್ಥಳೀಯ ಶಾಖಾ ಕಾರ್ಯದರ್ಶಿಯವರಿಗೆ ವಿಪರೀತ ಪೆಟ್ಟಾಗಿ ಪ್ರಜ್ಞಾನ ತಪ್ಪಿತೆಂದೂ ವರದಿಯಾಗಿದೆ. ಸಮಾರಂಭವು ಏರ್ಪಡುವ ಮುಂಚೆಯೇ ಪಿ ಎಸ್. ಪಿ ಮುಖಂಡರು ವ್ಯವಸ್ಥಾಪಕರಲ್ಲಿಗೆ ಬಂದು ಈ ಅಭಾವದ ಕಾಲದಲ್ಲಿ ಇಂತಹ ಸಮಾರಂಭಗಳನ್ನು ನಡೆಸಬಾರದೆಂದು ಪ್ರಾರ್ಥಿಸಿದ್ದರೆಂದೂ, ಆದರೂ ಸಮಾರಂಭವು ನಡೆದಾಗ ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರೆಂದೂ ಹೇಳಲಾಗಿದೆ.

ಕಾರ್ಕಳದ ಬಳಿ ಮಿನುಗುವ ನೀರಿನ ಕೊಳ

ಕಾರ್ಕಳ ನಗರದಲ್ಲಿ ತಿರುವಲರ್ ರಸ್ತೆಯ ಕಲ್ಯಾಣಗಟ್ಟ ಎಂಬಲ್ಲಿನ ಕೊಳವೊಂದು ರಾತ್ರಿಯ ವೇಳೆಯಲ್ಲಿ ಮಿನುಗುತ್ತಿರುವುದೆಂದೂ, ಕತ್ತಲಲ್ಲಿ ಒಂದು ಸಣ್ಣ ಕಲ್ಲನ್ನೆಸೆದರೂ ಸಹ ನೀರು ಬೆಳಗಲು ಆರಂಭಿಸುವುದೆಂದೂ, ಅದನ್ನು ನೋಡಲು ಈಗ ಸಹಸ್ರಾರು ಮಂದಿ ಅಲ್ಲಿಗೆ ಬರುತ್ತಿರುವರೆಂದೂ ವರದಿಯಾಗಿದೆ ಉಪ್ಪಿನ ರುಚಿಯುಳ್ಳ ಆ ನೀರನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಲಾಗುವುದೆಂದು ತಿಳಿದುಬಂದಿದೆ.

ಪಯೊನೀರ್ಸ್ ಸ್ಪೋರ್ಟ್ಸ್ ಕ್ಲಬ್ಬಿನ ಅಧಿಕಾರ ವರ್ಗ

ನಗರದಲ್ಲಿರುವ ಮೇಲ್ಕಂಡ ಕ್ಲಬ್ಬಿನ ಸರ್ವಸದಸ್ಯರ ಸಭೆಯು ಕಳೆದ ೧೦ನೇ ತಾ|| ಎಚ್. ವೀರರಾಜೇ ಅರಸ್‌ರವರ ಅಧ್ಯಕ್ಷತೆಯಲ್ಲಿ ನಡೆದು ಪ್ರಸಕ್ತ ಸಾಲಿನ ಕಾರ್ಯಕಾರೀ ಸಮಿತಿಗೆ ಚುನಾವಣೆಯಾಯಿತು ಶ್ರೀ ಎಚ್. ಎನ್. ಮುದ್ದಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಸಿ ಎಲ್ ನಾರಾಯಣರಾವ್ ಮತ್ತು ಎಚ್ ವೀರರಾಜೇ ಅರಸ್‌ರವರನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಶ್ರೀಗಳಾದ ಎಸ್. ರಾಜಾರಾವ್ ಮತ್ತು ಕೈಲಾಸ್ ಕುಮಾರ್‌ರವರುಗಳನ್ನು ಕಾರ್ಯದರ್ಶಿ ಮತ್ತು ಸಹ ಕಾರ್ಯದರ್ಶಿಗಳನ್ನಾಗಿಯೂ; ಶ್ರೀಗಳಾದ ಟಿ. ಆರ್. ರಂಗನಾಥ್, ಶ್ರೀನಿವಾಸ ಐಯ್ಯಂಗಾರ್, ಎಸ್. ಚಂದ್ರಮೌಳಿ ಇವರುಗಳನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿಯೂ ಆರಿಸಲಾಯಿತು. ಶ್ರೀಗಳಾದ ಶ್ರೀನಿವಾಸರಾವ್, ಮಧ್ವರಾವ್ ಮತ್ತು ಲಕ್ಷ್ಮಣರಾವ್‌ರವರನ್ನು ಕೇರಂ, ಕ್ರಿಕೆಟ್ ಮತ್ತು ಅಥ್ಲೆಟಿಕ್ಸ್ ಕ್ಯಾಪ್ಟನ್ನುಗಳನ್ನಾಗಿಯೂ ಮತ್ತು ಶ್ರೀ ಲಕ್ಷ್ಮಣಪ್ಪನವರನ್ನು ಕ್ಲಬ್ಬಿನ ಕೋಚ್ ಆಗಿಯೂ ಚುನಾಯಿಸಲಾಗಿದೆ.

ಆಲ್ಜೀರಿಯದಲ್ಲಿ ೨೦೫ ಮಂದಿ ಕ್ರಾಂತಿಕಾರರ ಹತ್ಯೆ

ಅಲ್ಜೀರಿಯದ ಟ್ಯುನೀಷಿಯಾ ಬಳಿ ಫ್ರೆಂಚರಿಗೂ ಮತ್ತು ಕ್ರಾಂತಿಕಾರಿ ಪಡೆಗಳಿಗೂ ಮೊನ್ನೆ ಪ್ರಬಲ ಕಾಳಗ ನಡೆದು ೨೦೫ ಮಂದಿ ಕ್ರಾಂತಿಕಾರರು ಮೃತಪಟ್ಟರೆಂದು ವರದಿಯಾಗಿದೆ. ಸುಮಾರು ಹತ್ತು ಗಂಟೆ ಕಾಲ ನಡೆದ ಈ ಘೋರ ಕದನದಲ್ಲಿ ಕ್ರಾಂತಿಕಾರಿ ಪಡೆಗಳ ಇಬ್ಬರು ದಳಪತಿಗಳೂ ಮತ್ತು ಫ್ರೆಂಚರ ಕಡೆ ೧೫ ಜನರೂ ಮಡಿದುದಾಗಿ ಗೊತ್ತಾಗಿದೆ. ೬೨ ಮಂದಿ ಫ್ರೆಂಚರು ಗಾಯಗೊಂಡರು. ದಂಗೆಕೋರರಿಂದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಹಲವರನ್ನು ಬಂಧಿಸಲಾಯಿತೆಂದೂ, ತಂಡವಾಯ ಉಳಿದ ಅವರ ಗುಂಪಿನವರು ಓಡಿಹೋಗಿ ಪರ್ವತದ ಗುಹೆಗಳಲ್ಲಿ ಸೇರಿಕೊಂಡರೆಂದೂ ಹೇಳಲಾಗಿದೆ.

ಅಫ್ಘಾನಿಸ್ತಾನದ ಭೂಕಂಪದಿಂದ ಅಪಾರ ನಷ್ಟ

ದಕ್ಷಿಣ ಅಫ್ಘಾನಿಸ್ತಾನದಲ್ಲಿ ಕಳೆದ ಶುಕ್ರವಾರ ಸಂಭವಿಸಿದ ಭೂಕಂಪದ ಪರಿಣಾಮವಾಗಿ ಕಾಂದಹಾರ್ ಮತ್ತು ಇತರ ಮೂರು ನಗರಗಳಲ್ಲಿ ಹಲವಾರು ಮನೆಗಳು ಕುಸಿದು ರಸ್ತೆಗಳು ಗುರ್ತು ಸಿಕ್ಕದ ರೀತಿಯಲ್ಲಿ ಹಾಳಾಗಿವೆ ಅನೇಕ ಸಾವುನೋವುಗಳೂ ಸಂಭವಿಸಿವೆ

ಪರಕಾಲ ಮಠಕ್ಕೆ ಅನಂತಶಯನಂ ಅಯ್ಯಂಗಾರ್ಯರ ಭೇಟಿ

ಲೋಕ ಸಭೆಯ ಅಧ್ಯಕ್ಷರಾದ ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ಯರು ನಿನ್ನೆ ಬೆಳಿಗ್ಗೆ ಪರಕಾಲ ಸ್ವಾಮಿಗಳವರ ಮಠಕ್ಕೆ ಭೇಟಿಯಿತ್ತು, ನಜ್ರದ ತೊಟ್ಟಿಲಿನಲ್ಲಿ ಶ್ರೀ ಹಯಗ್ರೀವ ಸ್ವಾಮಿಯವರ ದರ್ಶನ ಮಾಡಿ ಶ್ರೀಗಳವರಿಂದ ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿ ಮೇಲ್ಕೋಟೆಗೆ ಪ್ರಯಾಣ ಮಾಡಿದರು.

ಮೈಸೂರು ಪೇಟೆ ಧಾರಣೆ

ಬಂಗಾರ ಮತ್ತು		
ಕೊಯಮುತ್ತೂರು	೪೧ ೭೭	೪೪ ೫೭
ರತ್ನಚೂಡಿ	೨೯ ೭೫	೪೩ ೧೩
ಕಡ್ಡಿ	೨೯ ೦೦	೪೪ ೧೩
ಕೆಂಬತ್ತಿ	೪೧ ೦೨	
ಕಾನ ಸಣ್ಣ	೩೭ ೦೦	೩೬ ೭೫
ಬಂಗಾರತಿ	೨೯ ೫೦	೪೦ ೭೫
ರಾಗಿ	೪೪ ೫೦	೪೭ ೧೦
ಜೋಳ	೬೦ ೫೦	
ಕಡಲೆಕಾಯಿ	೧೩ ೫೦	೨೯ ೩೫
ಹರಳುಬೀಜ	೬೪ ೦೦	
ಹುಚ್ಚೆಳ್ಳು	೮೯ ೦೦	
ಹೊಂಗೇಬೀಜ	೩೩ ೬೨	೨೯ ೫೦
ಎಳ್ಳು	೭೦ ೨೫	೭೬ ೭೫
ಹುರುಳಿ	೪೨ ೭೫	೪೯ ೦೦
ಹೆಸರು	೪೦ ೧೨	೫೭ ೯೭
ಉದ್ದು	೫೯ ೦೦	೬೨ ೧೦
ಹಲಸಂದೆ	೪೪ ೦೦	೬೦ ೫೦
ಧನಿಯ	೨೧ ೫೦	೨೯ ೦೦
ಅವರೆ	೬೯ ೭೫	
ಕೊಬ್ಬರಿಬೀಜ	೪೦ ೦೦	
ಸೀಗೇಕಾಯಿ	೬ ೫೬	
ಹುಣಸೇಹಣ್ಣು	೪ ೨೫	೪ ೬೯
ಕೊಬ್ಬರಿಕಾಯಿ	೧೬ ೯೭	೧೯ ೩೫
ತೆಂಗಿನಕಾಯಿ	೧೪೯ ೦೦	೨೬೦ ೦೦

ಸೂಯೆಜ್ ಮೂಲಕ ಇಸ್ರೇಲ್ ನೌಕಾಯಾನಕ್ಕೆ ಅವಕಾಶವಿಲ್ಲ

ಸೂಯೆಜ್ ಕಾಲುವೆ ಮೂಲಕ ಇಸ್ರೇಲಿನ ನೌಕೆಗಳು ಪ್ರಯಾಣ ಮಾಡಲು ಈಜಿಪ್ಟ್ ಅವಕಾಶವೀಯುವುದಿಲ್ಲವೆಂದು ಅಧ್ಯಕ್ಷ ನಾಸೆರರು ತಿಳಿಸಿ, ಕಾಲುವೆ ಮೇಲೆ ತಮಗಿರುವ ಹಕ್ಕುಗಳ ರೀತ್ಯಾ ಆ ಮಾರ್ಗವಾಗಿ ಸಂಚರಿಸುವ ಯಾವ ಇಸ್ರೇಲ್ ಹಡಗನ್ನಾಗಲೀ ತಡೆಯಲಾಗುವುದೆಂದು ಹೇಳಿರುವರು. ಅಕಾಬಾ ಕೊಲ್ಲಿಯ ಮೇಲೂ ತನಗಿರುವ ಹಕ್ಕುಗಳನ್ನು ಈಜಿಪ್ಟ್ ರಕ್ಷಿಸಿಕೊಳ್ಳುವುದೆಂದು ಅವರು ಸ್ಪಷ್ಟಪಡಿಸಿರುವರು.

ನದಿಯಲ್ಲಿ ಒಬ್ಬನನ್ನು ರಕ್ಷಿಸಲು ಹೋದ ಏಳು ಜನರ ಮರಣ

ಕಾನ್ಪುರದಲ್ಲಿ ಕಳೆದ ಸೋಮವಾರ ಮೃತಪಟ್ಟ ಒಬ್ಬ ಮುದುಕಿಯ ಅಂತ್ಯ ಸಂಸ್ಕಾರ ನಡೆಸುವ ಸಂದರ್ಭದಲ್ಲಿ ಶವಕ್ಕೆ ಸ್ನಾನ ಮಾಡಿಸುವ ಸಲುವಾಗಿ ಎಂಟು ಮಂದಿ ಅದನ್ನು ತೆಗೆದುಕೊಂಡು ಗಂಗಾ ನದಿಯಲ್ಲಿ ಇಳಿದಾಗ ಅವರ ಪೈಕಿ ಒಬ್ಬನು ನೀರಿನಲ್ಲಿ ಮುಳುಗಿ ಕೊಚ್ಚಿಹೋದನು. ಅವನನ್ನು ರಕ್ಷಿಸಲು ಇತರ ಏಳು ಜನರೂ ಒಬ್ಬರ ನಂತರ ಒಬ್ಬರಂತೆ ಇಳಿದು ಎಲ್ಲರೂ ಮುಳುಗಿ ಮೃತಪಟ್ಟರು.

ಬ್ರಾಹ್ಮಣರ ಹೋಟೇಲಿಗೆ ಬಹಿಷ್ಕಾರ

ತಿರುಚಿರಾಪಳ್ಳಿಯಲ್ಲಿ ದ್ರಾವಿಡ ಸಂಘದವರು ಬ್ರಾಹ್ಮಣರ ಹೋಟೇಲುಗಳ ಬೋರ್ಡುಗಳಲ್ಲಿರುವ 'ಬ್ರಾಹ್ಮಣ' ಎಂಬ ಪದವನ್ನು ಅಳಿಸುವ ಚಳುವಳಿಯನ್ನು ಕೈಗೊಂಡಿರುವರಷ್ಟೆ ಈಗ ಅವರು ಬ್ರಾಹ್ಮಣರ ಹೋಟೇಲುಗಳನ್ನೆಲ್ಲಾ ಬಹಿಷ್ಕರಿಸಲು ನಿರ್ಧರಿಸಿದ್ದಾರೆ. ಸಂಘದ ಅನುಯಾಯಿಗಳು ಈ ಚಳುವಳಿಯಲ್ಲಿ ಸೇರಬೇಕೆಂದು ಕರೆಯೀಯಲಾಗಿದೆ

ಮೈಸೂರು ಜಿಲ್ಲಾ ಸೈನಿಕರ ಸಮಿತಿ

ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿರುವ ಮಾಜಿ ಸೈನಿಕರು, ನಾವಿಕರು ಮತ್ತು ವಿಮಾನ ದಳದವರು, ವೇತನ, ಜಮೀನು, ಸೈಟು ಮತ್ತು ಇತರ ಅಗತ್ಯವಾದ ವಿಷಯಗಳಲ್ಲಿ ಮೇಲ್ಕಂಡ ಆಫೀಸಿನಿಂದ ಸಲಹೆ-ಸಹಾಯಗಳನ್ನು ಪಡೆಯಬಹುದು. ಕಷ್ಟ ದೆಸೆಯಲ್ಲಿರುವ ಮಾಜಿ ಮಿಲಿಟರಿಯವರು ದ್ರವ್ಯ ಸಹಾಯ ಅಗತ್ಯವಾಗಿದ್ದಲ್ಲಿ ಇದೇ ಜೂನ್ ತಿಂಗಳೊಳಗಾಗಿ ಮೇಲ್ಕಂಡ ಆಫೀಸಿಗೆ ಅರ್ಜಿ ಹಾಕಿಕೊಳ್ಳಬಹುದು ಹೆಚ್ಚಿನ ವಿವರಗಳನ್ನು ಮುಖತಃವಾಗಲೀ, ಪತ್ರ ಮುಖೇನವಾಗಲೀ ತಿಳಿದುಕೊಳ್ಳಬಹುದೆಂದು ತಿಳಿಸಲಾಗಿದೆ

ಭರತ ನಾಟ್ಯ

ಚಾಮರಾಜನಗರದಲ್ಲಿ ನಡೆಯುತ್ತಿರುವ ಗಿರಿಜಾ ಕಲ್ಯಾಣ ಉತ್ಸವದಲ್ಲಿ ಮೈಸೂರಿನ ಜಿಲ್ಲಾ ಧಿಕಾರಿಗಳ ಕಛೇರಿಯ ಗುಮಾಸ್ತರಾಗಿರುವ ಶ್ರೀ ಪಿ ಜಿ. ನರಸಿಂಹಮೂರ್ತಿಯವರ ಮಗಳು ಕುಮಾರಿ ಜಲಜಾಂ ಭರತ ನೃತ್ಯವು ಕಳೆದ ಶನಿವಾರ ಏರ್ಪಾಡಾಗಿತ್ತು. ಕುಮಾರಿಯು ಚಿಕ್ಕಂದ ಜನಸ್ತೋಮಕ್ಕೆ ನೃತ್ಯವನ್ನು ಪ್ರದರ್ಶಿಸಿ ಅನೇಕ ಜನರ ಮೆಚ್ಚುಗೆಯನ್ನು ಪಡೆದಳು.

ಸೂಯೆಜ್ ಕಾಲುವೆ ವರಮಾನದಿಂದ ಆಸ್ವಾನ್ ಅಣೆಕಟ್ಟಿನ ನಿರ್ಮಾಣ

ಈಜಿಪ್ಟಿನ ಅಧ್ಯಕ್ಷ ನಾಸೆರರ ರಾಜಕೀಯ ಸಲಹೆಗಾರರಾದ ಅಲಿ ಸಾಬ್ರಿಯವರು ಈಜಿಪ್ಟಿಗೆ ಈಗ ಸೂಯೆಜ್ ಕಾಲುವೆಯಿಂದ ಸಾಲಿಯಾನಾ ೧೬೦ ಲಕ್ಷ ಪೌಂಡಿನ ವರಮಾನವಿರುವುದೆಂದೂ, ಈ ಹಣದಿಂದ ಇನ್ನು ಐದು ವರ್ಷಗಳಲ್ಲಿ ಆಸ್ವಾನ್ ಅಣೆಕಟ್ಟನ್ನು ನಿರ್ಮಿಸಿ, ಆ ಮೂಲಕ ವ್ಯವಸಾಯ ಯೋಗ್ಯವಾದ ಭೂಮಿಯ ಪ್ರದೇಶವನ್ನು ವಿಸ್ತರಿಸಿ, ರೈತರಿಗೆ ಹಂಚಲಾಗುವುದೆಂದೂ ಹೇಳಿರುವರು. ಈಜಿಪ್ಟಿನ ಕ್ರಾಂತಿ ಯೋಜನೆಗಳಲ್ಲಿ ಆಸ್ವಾನ್ ಅಣೆಕಟ್ಟಿನ ನಿರ್ಮಾಣವು ಬಹು ಮಹತ್ವದ ಸಾಧನೆಯಾಗುವುದೆಂದೂ ಅವರು ಹೇಳಿದರು.

ಪೆಷಾವರಿನಲ್ಲಿ ಬೆಂಕಿಯಿಂದ ೧೫ ಲಕ್ಷ ರೂ. ನಷ್ಟ

ಪಾಕಿಸ್ತಾನದ ಗಡಿನಾಡು ಪ್ರದೇಶದಲ್ಲಿರುವ ಪೆಷಾವರ್ ನಗರದ ಜನನಿಬಿಡವಾದ ಒಂದು ಭಾಗದಲ್ಲಿ ಮೊನ್ನೆ ಬೆಂಕಿ ಬಿದ್ದು ೮೫ ಅಂಗಡಿಗಳೂ, ಎರಡು ಭವನಗಳೂ ಮತ್ತು ಒಂದು ಪ್ರವಾಸೀ ಮಂದಿರವೂ ಸುಟ್ಟುಹೋದುವು ಇದರಿಂದ ಒಟ್ಟು ೧೫ ಲಕ್ಷ ರೂ. ನಷ್ಟವಾಗಿರುವುದೆಂದು ಅಂದಾಜಾಗಿದೆ ಒಂದು ಚಹಾ ಅಂಗಡಿಯಲ್ಲಿ ಒಲೆ ಹತ್ತಿಸುತ್ತಿದ್ದಾಗ ಬೆಂಕಿಯುಂಟಾಗಿ ಮೇಲ್ಕಂಡ ನಷ್ಟ ಸಂಭವಿಸಿತೆಂದು ಹೇಳಲಾಗಿದೆ

ದೇವನೂರು ಮಠದಲ್ಲಿ ಆರಾಧನೋತ್ಸವ

ನಂಜನಗೂಡು ತಾಲ್ಲೂಕು ದೇವನೂರು ಶ್ರೀ ಗುರುಮಲ್ಲೇಶ್ವರಸ್ವಾಮಿ ಗದ್ದುಗೆಯ ಜನೇವರದ ಆರಾಧನೋತ್ಸವವು ವೇ|| ಬ್ರ|| ಗುರುಸ್ವಾಮಿಯವರ ನೇತೃತ್ವದಲ್ಲಿ ಕಳೆದ ಶನಿವಾರ ವೈಭವಯುತವಾಗಿ ಜರುಗಿತು ಸುಮಾರು ಸಾವಿರ ಮಂದಿ ಭಕ್ತರು ಸೇರಿದ್ದರು.

ಕುಂಚಿಟಿಗರ ಸಂಘ ವಿದ್ಯಾರ್ಥಿ ನಿಲಯ

ಮೇಲ್ಕಂಡ ವಿದ್ಯಾರ್ಥಿ ನಿಲಯಕ್ಕೆ ಸೇರಬೇಕೆಂದಿರುವ ವಿದ್ಯಾರ್ಥಿಗಳು ತಾ|| ೨೫-೬-೫೭ರ ಒಳಗಾಗಿ ನಿಲಯದ ಕಾರ್ಯದರ್ಶಿಯವರಿಗೆ ಅರ್ಜಿ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ

ಉಪನಯನ

ನಗರದ ಇಂಟರ್‌ನ್ಯಾಷನಲ್ ಏಜೆನ್ಸಿಯ ಶ್ರೀ ಎ ಎಸ್. ವಿ. ಮಣಿಯವರು ತಮ್ಮ ಕುಮಾರ ಚಿ|| ವಿಜಯಶಂಕರನಿಗೆ ಬೆಂಗಳೂರಿನಲ್ಲಿ ಮೊನ್ನೆ ಉಪನಯನ ಮಹೋತ್ಸವವನ್ನು ಜರುಗಿಸಿದರು

ಲಾರಿ ಮಾರಾಟಕ್ಕಿದೆ

ಒಳ್ಳೆಯ ರನ್ನಿಂಗ್ ಕಂಡಿಷನ್ನಿನಲ್ಲಿರುವ ಡಬ್ಬಲ್ ಚಾಸ್ಸಿಸ್ ಫೋರ್ಡ್ ಲಾರಿಯೊಂದು ಮಾರಾಟಕ್ಕಿದೆ. 30-6-1957ರ ವರೆಗೆ ಪೂರ್ಣವಾಗಿ ಟ್ಯಾಕ್ಸ್ ಕೊಟ್ಟಿದೆ, ಮತ್ತು ಲಾರಿಯನ್ನು ಇನ್ಷೂರ್ ಮಾಡಲಾಗಿದೆ. ಮುಂದಿನ ಟೈರುಗಳು ಹೊಸಾಹೊಸವು, ಹಿಂದಿನವು ಶೇಕಡ ೭೫ರಷ್ಟು ಮಟ್ಟಿಗೆ ಒಳ್ಳೆಯ ಸ್ಥಿತಿಯಲ್ಲಿವೆ ಕೆಳಗಂಡವರೊಡನೆ ವ್ಯವಹರಿಸಿರಿ

ಫರ್ನಾಂಡೆಜ್,
ನಂ. 2 ಇರ್ವಿನ್ ರಸ್ತೆ,
(ಹೊಟೇಲ್ ಮೆಟ್ರೊಪೋಲ್ ಹಿಂಭಾಗ)
ಮೈಸೂರು

Edited, Printed and Published by M. R. Nagarajan at Sadhvi Press, Subbarao Road, Mysore

BRIGHT COLLEGE OF COMMERCE, MYSORE

College's BRIGHT RECORD OF RESULTS at the April Examination of 1957

Junior Typewriting: 60 per cent (II Class 6); Senior Typewriting: 40 per cent (II Class 6; State average: 19 per cent); Junior Shorthand: 50 per cent (I Class 1; II Class 6); Senior Shorthand: 60 per cent (State average: 28.5 per cent); Senior Accountancy: 60 per cent (II Class 1); Kannada Shorthand: Junior 100 per cent – Senior 100 per cent; Commerce Senior: 100 per cent; Banking Senior: 100 per cent; Economic Geography Senior: 100 per cent.

D. Com. SENIOR: Cent Per Cent Passes

ADMISSIONS RECEIVED

K. Seetharamarao,
Principal

SARADA VILAS COLLEGE,
INTER TUTORIAL SECTION
ENGLISH & P. C. M.
Highly qualified & experienced staff
Classes in full swing

CLASSES COMMENCED
B.A & B.Sc.– English & Kannada
INTER: Eng, Kan, P C M & C. B. Z.
C.T.C., Old Agrahar, Mysore

GLOBE TUTORIAL
COLLEGE
Sadvidya Patasala Buildings,
Offers Excellent Coaching for
S. S. L. C. & INTER

SREE GAYATHRI
TALKIES
From 13-6-57 : Daily 2 shows
THE BIG NOISE
With:- Laurel & Hardy
-: NEXT CHANGE :-
BHOWANI JUNCTION

ರಿಜಿಸ್ಟರ್ ನಂ. 792

ಹೊಸ ಜವಳಿಗಳು
ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ
ಪೂನಾ, ನಾಗಪುರ, ಆರಣಿ
ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ. ಎ. ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ : 446

ಇಂದಿನ ಪತ್ರಿಕೆ 2 ನಯೆ ಪೈಸೆ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

[ಪುಟ : ೦೮] SADHVI : WEDNESDAY 19—6—1957 ಮೈಸೂರು : ಬುಧವಾರ ೧೯—೬—೧೯೫೭ : [ಸಂಚಿಕೆ : ೩೦೫

ಟಿಬೆಟ್ಟಿನಿಂದ ಚೀಣೀಯರ ವಾಪಸಾತಿಗೆ ನಿರ್ಧಾರ –

...ವ್ಯವಸಾಯ ವರಮಾನದ ಮೇಲಿನ ತೆರಿಗೆ

ಬೆಂಗಳೂರು ೧೯

...ಸಂಸ್ಥಾನದ ವಿವಿಧ ಭಾಗಗಳಲ್ಲಿರುವ ವ್ಯವ... ವರಮಾನ ತೆರಿಗೆಗಳನ್ನು ಕೇಂದ್ರೀಕರಿ... ಮಸೂದೆಯೊಂದನ್ನು ನೆನ್ನೆ ವಿಧಾನ ಸಭೆ... ಆರ್ಥಿಕ ಸಚಿವ ಶ್ರೀ ಟಿ. ಮರಿಯಪ್ಪನವ... ಮಂಡಿಸಿದರು.

...ದ ಪ್ರಕಾರ ತೆರಿಗೆಯನ್ನು ವಾಣಿಜ್ಯ ಬೆಳೆ... ಗಾಂಜಾ, ದ್ರಾಕ್ಷಿ, ಅನಾನಸ್, ಅಡಿಕೆ, ...ನಕಾಯಿ, ಆಲೂಗೆಡ್ಡೆ, ಉಪ್ಪನೇರಳೆ, ...ಶುಂಠಿ, ಅರಿಸಿನ, ಹೊಗೆಸೊಪ್ಪು, ಬಾಳೆ, ...ಳ್ಳ, ಈರುಳ್ಳಿ, ಹತ್ತಿ, ತೆಂಗಿನಕಾಯಿ, ...ಟೀ, ಏಲಕ್ಕಿ, ಮೆಣಸು, ಕಿತ್ತಳೆ, ರಬ್ಬರು, ...ಮ ಸಾಸುವೆ, ಕಡಲೆಕಾಯಿ ಮತ್ತು ಮಾ... ...ಂತಾದುವುಗಳಿಂದ ಬರುವ ನಿವ್ವಳ ವರ... ...ದ ಮೇಲೆ ಮಾತ್ರ ವಿಧಿಸಲಾಗುವುದು.

...ನೆಯಲ್ಲಿ ಹಲವು ವಿನಾಯಿತಿಗಳನ್ನು ...ಲಾಗಿದೆ. ಒಬ್ಬ ವ್ಯಕ್ತಿಯ ಒಟ್ಟು ವರಮಾ... ೩,೦೦೦ ರೂ ಗೆ ಮೀರದಿದ್ದರೆ, ಹತ್ತಿ, ಕಾ... ...ಮು ಬೆಳೆಗಳ ಮೂವತ್ತು ಎಕರೆಗೂ ಕಮ್ಮಿ ...ನಿದ್ದರೆ ಅಥವಾ ಬೇರೆ ವರ್ಗಗಳ ಜಮಿ... ...ಬರುವ ಆದಾಯವು ೩,೫೦೦ ರೂ... ...ಕಮವಾಗಿದ್ದರೆ ತೆರಿಗೆ ವಿನಾಯಿತಿಯಿದೆ. ...ಬಿಯು ಒಂದು ಅವಿಭಕ್ತ ಕುಟುಂಬದವ... ...೦೦ ರೂ. ವರಮಾನದ ವರೆಗೂ ತೆರಿಗೆ ...ವಿಧಿಸಲಾಗಿಲ್ಲ

ವಿಧಾನ ಸಭಾ ಭವನದಲ್ಲಿ ಸರ್ದಾರ್ ಪಟೇಲರ ಭಾವಚಿತ್ರದ ಅನಾವರಣ

ಕೇಂದ್ರ ಸರ್ಕಾರದ ಕೈಗಾರಿಕಾ ಮತ್ತು ವಾ... ...ಖಾ ಸಚಿವರಾದ ಶ್ರೀ ಮೊರಾರ್ಜಿ ...ಯವರು ನೆನ್ನೆ ಸಂಜೆ ಬೆಂಗಳೂರು ವಿಧಾನ ...ಭವನದಲ್ಲಿ ಸರ್ದಾರ್ ಪಟೇಲರ ಭಾವ... ...ತ್ರದ ಅನಾವರಣವನ್ನು ನೆರವೇರಿಸಿದರು

...ಗಳ ಕಾರಿನ ಮೇಲೆ ರಾಷ್ಟ್ರಧ್ವಜವಿಲ್ಲ

...ಸಂಸ್ಥಾನದ ಮುಖ್ಯ ಮಂತ್ರಿಗಳೂ ಮತ್ತು ...ಸಚಿವರುಗಳೂ ಈಗ್ಗೆ ಸುಮಾರು ಎರಡು ...ಗಳಿಂದ ತಮ್ಮ ಮೋಟಾರುಗಳ ಮೇಲೆ ರಾ... ...ಧ್ವಜವನ್ನು ಹಾಕುತ್ತಿಲ್ಲ. ಈ ಬಗ್ಗೆ ಮಂತ್ರಿ ...ಮಂಡಲದಲ್ಲಿ ಯಾವ ನಿರ್ಧಾರವನ್ನೂ ಕೈಗೊಂ... ...ವಾದರೂ, ತಾವೂ ತಮ್ಮ ಸಹೋದ್ಯೋಗಿ ...ಕಾರುಗಳ ಮೇಲೆ ಬಾವುಟಗಳನ್ನು ಹಾ... ...ಕೃಬೇಕೆಂಬ ಅಪೇಕ್ಷೆ ಹೊಂದಿಲ್ಲವೆಂದೂ, ...ಪ್ರಮುಖ್ಯವಾದ ಸಮಾರಂಭಗಳಲ್ಲಿ ಭಾ... ...ವಹಿಸಲು ಹೋಗುವಾಗ ಮಾತ್ರ ಬಾವುಟಗಳ ...ಹಾಕಲಾಗುವುದೆಂದೂ ಮುಖ್ಯಮಂತ್ರಿಗ... ...ತಿಳಿಸಿರುವುದಾಗಿ ಗೊತ್ತಾಗಿದೆ.

ಲೆಬನಾನ್ ಚುನಾವಣೆ ...ರ್ಷಣೆಯಲ್ಲಿ ೧೮ ಜನರ ಮರಣ

...ಇತ್ತರ ಲೆಬನಾನಿನಲ್ಲಿ ಮೊನ್ನೆ ನಡೆದ ಚು... ...ವಣೆಗಳಲ್ಲಿ ಇಬ್ಬರು ಉಮೇದುವಾರರ ಪಕ್ಷಗ... ...ಮೆಷೀನ್ ಗನ್ನುಗಳಿಂದ ಹೊಡೆದಾಡಿದ ಪ... ...ಮವಾಗಿ ೧೮ ಮಂದಿ ಮೃತರಾಗಿ, ೫೫ ಜನ ...

ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರಿಗೆ ಪೆನ್ಷನ್

ಬೆಂಗಳೂರು ೧೯

ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ನಿವೃತ್ತ ಸದಸ್ಯರಿಗೆ ಪೆನ್ಷನ್ ಕೊಡಬೇಕೆಂದು ಬಂದಿರುವ ಕೋರಿಕೆಯನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ವಿಧಾನ ಸಭೆಯ ಪ್ರಶ್ನೋತ್ತರದ ಕಾಲದಲ್ಲಿ ತಿಳಿಸಿದರು.

ಈ ಕೋರಿಕೆಯನ್ನು ಹಿಂದಿನ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಮಂಡಿಸಿದ್ದರೆಂದೂ, ಈಗ ಸದ್ಯದಲ್ಲಿ ಬಿಹಾರ್ ರಾಜ್ಯ ಸರ್ಕಾರವು ಖಾಸಗಿ ಸದಸ್ಯರಿಗೆ ಮಾತ್ರ ಈ ರೀತಿ ಪೆನ್ಷನ್ ನೀಡುತ್ತಿದೆಯೆಂದೂ ಅವರು ತಿಳಿಸಿದರು

ಟಿಬೆಟ್ಟಿನಿಂದ ಚೀಣೀಯರ ವಾಪಸಾತಿಗೆ ನಿರ್ಧಾರ

ಟಿಬೆಟ್ಟಿನಲ್ಲಿರುವ ಚೀನಾ ಜನರನ್ನು ವಾಪಸು ಕರೆಸಿ ಅವರನ್ನು ಬೇರೆ ಪ್ರಾಂತಗಳಿಗೆ ಕಳುಹಿಸಲು ಚೀನಾ ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ. ಟಿಬೆಟ್ಟನ್ನು ಸ್ವತಂತ್ರ ಪ್ರದೇಶವನ್ನಾಗಿ ಮಾಡುವ ಬಗ್ಗೆ ಪೂರ್ವಭಾವಿ ಸಿದ್ಧತೆಗಾಗಿ ರಚಿಸಿರುವ ಸಮಿತಿಯು ನಿರ್ಧಾರವನ್ನು ಕೈಗೊಂಡಿರುವುದಾಗಿಯೂ, ಅಲ್ಲಿ ಆಹಾರದ ಅಭಾವವು ಇರುವುದೆಂದೂ ಹೇಳಲಾಗಿದೆ

ಟಿಬೆಟ್ಟಿನಲ್ಲಿ ಇನ್ನು ೬ ವರ್ಷಕಾಲ ಪ್ರಜಾಸತ್ತಾತ್ಮಕ ಸುಧಾರಣೆಯನ್ನು ಜಾರಿಗೆ ತರಬಾರದೆಂದು ಚೀನಾ ಸರ್ಕಾರದವರು ನಿರ್ಧರಿಸಿರುವರೆಂದೂ ಗೊತ್ತಾಗಿದೆ

ಫ್ರೆಂಚ್ ಮಹಿಳೆಯೊಡನೆ ಅಲಿಖಾನರ ಪುನರ್ವಿವಾಹ

ಆಗಾಖಾನರ ಪುತ್ರರಾದ ಅಲಿಖಾನರು ಪ್ಯಾರಿಸ್ಸಿನ ಬೆಟ್ಟಿನಾ ಎಂಬಾಕೆಯನ್ನು ಈಗ ಮತ್ತೆ ವಿವಾಹವಾಗಲಿರುವರೆಂದು ಹೇಳಲಾಗಿದೆ. ವಿವಾಹವಾದನಂತರ ವಧುವು ಇಸ್ಲಾಂ ಮತವನ್ನವಲಂಬಿಸುವಳೆಂದೂ ವರದಿಯಾಗಿದೆ.

ಮಾಯವಾಗಿದ್ದ ಗುಮಾಸ್ತರ ಪತ್ತೆ

ಕಳೆದ ಒಂದೂವರೆ ತಿಂಗಳಿನಿಂದಲೂ ಮಾಯವಾಗಿದ್ದ ಶ್ರೀನಿವಾಸಪುರ ಪೌರಸಭಾ ಗುಮಾಸ್ತರಾದ ಶ್ರೀ ರಾಮದೇಶಿಕ ಎಂಬುವರನ್ನು ಬಾಗೇಪಲ್ಲಿಯಲ್ಲಿ ಪೊಲೀಸರು ಪತ್ತೆಹಚ್ಚಿ ಅವರಿಂದ ಹೇಳಿಕೆಯನ್ನು ಪಡೆಯುತ್ತಿದ್ದಾರೆಂದು ವರದಿಯಾಗಿದೆ. ಅವರು ಮಾಯವಾಗಿದ್ದ ಬಗ್ಗೆ ಸ್ಥಳೀಯ ಸಂಸ್ಥೆ ಸಚಿವರಿಗೆ ಅವರ ಪತ್ನಿಯು ದೂರಿತ್ತಿದ್ದರು

ನೌಕರರಿಗೆ ಇನ್‌ಫ್ಲುಯೆಂಜಾ ಇರುವುದರಿಂದ ಅಂಚೆ ಬಟವಾಡೆ ತಡ

ನಗರದ ಅಂಚೆ ಕಛೇರಿಗಳಲ್ಲಿ ಅನೇಕ ನೌಕರರಿಗೆ ಇನ್‌ಫ್ಲುಯೆಂಜಾ ವ್ಯಾಧಿ ತಗಲಿರುವುದರಿಂದ ಕೆಲಸಕ್ಕೆ ೪೦ ರಷ್ಟು ಮಂದಿ ನೌಕರರು ಗೈರುಹಾಜರಾಗಿರುವರೆಂದು ತಿಳಿದುಬಂದಿದೆ. ಈ ಕಾರಣದಿಂದ ಅಂಚೆ ಬಟವಾಡೆಗಳು ಬಹಳ ತಡವಾಗುತ್ತಿವೆ.

ಸೆಪ್ಟೆಂಬರ್ ೨ರಿಂದ ವಿಶ್ವವಿದ್ಯಾಲಯದ ಸಪ್ಲಿಮೆಂಟರಿ ಪರೀಕ್ಷೆ

ಮೈಸೂರು ೧೯

ಬರುವ ಆಗಸ್ಟ್ ೨೬ನೇ ತಾರೀಖು ಆರಂಭವಾಗಬೇಕಾಗಿದ್ದ ವಿಶ್ವವಿದ್ಯಾಲಯದ ಸಪ್ಲಿಮೆಂಟರಿ ಪರೀಕ್ಷೆಗಳನ್ನು ಸೆಪ್ಟೆಂಬರ್ ೨ನೇ ತಾರೀಖಿಗೆ ಮುಂದುವರಿಸಲಾಗಿದೆ.

ಬಿ. ಎಸ್‌ಸಿ. ಆನರ್ಸ್ ಫೈನಲ್ ಪರೀಕ್ಷಾ ಫಲಿತಾಂಶ

ವಿಶ್ವವಿದ್ಯಾಲಯದ ಬಿ ಎಸ್‌ಸಿ. ಆನರ್ಸ್ ಫೈನಲ್ ಪರೀಕ್ಷೆಗಳ ಫಲಿತಾಂಶವು ಇಂದು ಪ್ರಕಟವಾಯಿತು.

ಮುದ್ರಣ ಕಲಾ ಸಂಘ

ಮೇಲ್ಕಂಡ ಸಂಘದ ಸಮಿತಿಯಿಂದ ತಯಾರಿಸಲ್ಪಟ್ಟಿರುವ ಕರಡು ನಿಯಮಾವಳಿಗಳನ್ನು ಪರಿಶೀಲಿಸಲು ಮತ್ತು ಕಾರ್ಯನಿರ್ವಾಹಕ ಸಮಿತಿಯನ್ನು ಚುನಾಯಿಸಲು ನಾಳೆ ಸಂಜೆ ೭ ಘಂಟೆಗೆ ಸರಿಯಾಗಿ ಮೈಸೂರು ನೂರಡಿ ರಸ್ತೆಯಲ್ಲಿರುವ ರ್‍ಯಾಷನಲಿಸ್ಟ್ ಪತ್ರಿಕಾಲಯದಲ್ಲಿ ಸಂಘದ ಸರ್ವಸದಸ್ಯರ ಸಭೆ ಸೇರಲು ಏರ್ಪಡಿಸಿರುತ್ತದೆ. ಸದರಿ ಕಲೆಯ ವೃತ್ತಿ ಬಾಂಧವರು ಸಕಾಲಕ್ಕೆ ದಯಮಾಡಿಸಿ ಸಹಕರಿಸಬೇಕಾಗಿ ಕೋರಲಾಗಿದೆ

ಸ್ವಾಗತ ಸಮಾರಂಭ

ನಗರದ ವಕೀಲರಾದ ಶ್ರೀ ಕೆ ಪುಟ್ಟಸ್ವಾಮಿಯವರು ತಮ್ಮ ಕುಮಾರರಾದ ಶ್ರೀ ಕೆ ಲಕ್ಷ್ಮಿನಾರಾಯಣರಾಯರಿಗೆ ಸೌ॥ ಶಾರದಾ ರವರನ್ನು ತಂದು ಕೊಂಡು ವಿವಾಹವನ್ನು ನೆರವೇರಿಸಿದ ಸಂದರ್ಭದಲ್ಲಿ ನೆನ್ನೆ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ವಿ॥ ಜಿ. ಎಸ್. ಬಾಲಸುಬ್ರಹ್ಮಣ್ಯರವರ ಗಾಯನವು ಸಂಗೀತ ರತ್ನ ಟಿ. ಚೌಡಯ್ಯನವರ ಪಿಟೀಲು ಮತ್ತು ವಿ॥ ಪಾಲಘಾಟ್ ರಘುರವರ ಮೃದಂಗದೊಡನೆ ಸುಶ್ರಾವ್ಯವಾಗಿ ನಡೆಯಿತು.

ನೆನ್ನೆ ಅಮೆರಿಕದ ಮತ್ತೊಂದು ಅಣು ಬಾಂಬಿನ ಸ್ಫೋಟನೆ

ಅಮೆರಿಕದ ಅಣು ಶಕ್ತಿ ಸಮಿತಿಯವರು ನೆನ್ನೆ ಸಂಜೆ ೫-೧೫ ಗಂಟೆಯ ಸಮಯದಲ್ಲಿ ಲಾಸ್ ವೆಗಾಸಿನಲ್ಲಿ ಮತ್ತೊಂದು ಅಣು ಬಾಂಬನ್ನು ಆಸ್ಫೋಟಿಸಿದರೆಂದೂ, ಅದು ದ್ವಿತೀಯ ಮಹಾಯುದ್ಧದಲ್ಲಿ ಪ್ರಯೋಗಿಸಿದ ಬಾಂಬಿಗಿಂತ ಅರ್ಧದಷ್ಟು ಶಕ್ತಿದಾಯಕವಾಗಿತ್ತೆಂದೂ ಹೇಳಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮುಖವೀಣೆ. ೭-೧೫ ಎಸ್. ಕೃಷ್ಣಮೂರ್ತಿ ದೇವರನಾಮ. ೭-೩೦ ಮತ್ತು ೮-೧೫ ಶಕುಂತಲಾಬಾಯಿ ಪಾಂಡುರಂಗರಾವ್ ಗಾಯನ. ಮಧ್ಯಾಹ್ನ ೧೨ ಮತ್ತು ೧-೫೦ ಆರ್ ಸುಬ್ಬಾಶಾಸ್ತ್ರಿ–ಪಿಟೀಲು. ೧೨-೩೦ ಕೆ ಎಸ್. ಮೋಹನ–ಹಾಡುಗಾರಿಕೆ. ೧ ಮತ್ತು ೧-೨೦ ರೆಕಾರ್ಡ್. ೨-೧೫ ಪ್ರೌಢ ಶಾಲೆಗಳಿಗಾಗಿ. ಸಂಜೆ ೬-೧೦ ಸಿದ್ದಮ್ಮ–ಜಾನಪದ ಗೀತೆಗಳು ೬-೩೦ ಗ್ರಾಮಸ್ಥರಿಗಾಗಿ. ೭-೩೦ ಮತ್ತು ೮-೩೦ ರೆಕಾರ್ಡ್ ಲಘು ಸಂಗೀತ. ೯-೧೫ ಚರ್ಚಾಗೋಷ್ಠಿ ೯-೩೦ "ನಾಗಾರ್ಜುನ ಬೆಟ್ಟ" ನಾಟಕ ೧೦ ೧೫ ರೆಕಾರ್ಡ್. ೧೦-೩೦ ಕೆ ಎಸ್. ಮೋಹನ–ಹಿಂದೂಸ್ಥಾನಿ ಗಾಯನ.

ಅಣು ಸ್ಫೋಟನೆಗಳ ಬಗ್ಗೆ ಭಾರತದ ವಿರೋಧಕ್ಕೆ ಕಾರಣ

ಪ್ರಧಾನಿ ನೆಹರೂರವರ ವಿವರಣೆ

ಡೆನ್ಮಾರ್ಕಿನಲ್ಲಿ ಪ್ರವಾಸ ಮಾಡುತ್ತಿರುವ ಪ್ರಧಾನಿ ನೆಹರೂರವರು ಮೊನ್ನೆ ಪತ್ರಿಕಾ ಗೋಷ್ಠಿಯೊಂದರಲ್ಲಿ ಜಲಜನಕ ಬಾಂಬುಗಳನ್ನು ಭಾರತವು ವಿರೋಧಿಸುವುದಕ್ಕೆ ಕಾರಣವನ್ನು ಸ್ಪಷ್ಟವಾಗಿ ವಿವರಿಸಿದರು. ಪುಷ್ಟಿಯಾದ ಮತ್ತು ಕ್ಯಾಲ್ಸಿಯಂ ವಸ್ತುವಿನ ಪ್ರಮಾಣವು ಕಡಿಮೆಯಾಗಿರುವ ಆಹಾರವನ್ನು ಸೇವಿಸುವ ಏಷ್ಯದ ರಾಷ್ಟ್ರಗಳ ಜನತೆಗೆ ಅಣು ವಿಕಿರಣದಿಂದ ಬೀಳುವ ಸ್ಟ್ರಾನ್ಷಿಯಂ ವಸ್ತುವಿನ ಅಪಾಯವು, ಸಮೃದ್ಧವಾದ ಮತ್ತು ಪುಷ್ಟಿಯುತ ಆಹಾರವನ್ನು ಸೇವಿಸುವ ರಾಷ್ಟ್ರಗಳವರಿಗಿಂತ ಹೆಚ್ಚಾಗಿ ಆಗುವುದೆಂದೂ, ಈ ಅಂಶವು ಪ್ರಪಂಚಕ್ಕೆ ಚೆನ್ನಾಗಿ ಮನವರಿಕೆಯಾಗಿಲ್ಲವೆಂದೂ ಅವರು ಹೇಳಿ ಅದಕ್ಕಾಗಿಯೇ ಭಾರತವು ಆ ಪ್ರಯೋಗಗಳ ನಿಷೇಧಕ್ಕಾಗಿ ಶ್ರಮಿಸುತ್ತಿದೆಯೆಂದೂ ನುಡಿದರು.

೧೦೨೬ ಪ್ರಶ್ನೆಗಳಲ್ಲಿ ಕೇವಲ ೧೦೦ಕ್ಕೆ ಮಾತ್ರ ಸರ್ಕಾರದವರಿಂದ ಉತ್ತರ

ಶಾಸನ ಸಭಾ ಸದಸ್ಯರುಗಳು ಕಳುಹಿಸುವ ಪ್ರಶ್ನೆಗಳಿಗೆ ಸರ್ಕಾರದಿಂದ ಸಮರ್ಪಕವಾಗಿ ಉತ್ತರ ಬಂದಿಲ್ಲವೆಂದು ವಿಧಾನ ಸಭಾಧ್ಯಕ್ಷ ಶ್ರೀ ಎಚ್ ಆರ್. ಕೇಶವಮೂರ್ತಿ ನೆನ್ನೆ ತಿಳಿಸಿದರು. ಸದಸ್ಯರು ಕಳುಹಿಸಿದ ೧೧೬೦ ಪ್ರಶ್ನೆಗಳಲ್ಲಿ ೧೦೨೬ನ್ನು ಉತ್ತರಗಳಿಗಾಗಿ ಸರ್ಕಾರಕ್ಕೆ ಕಳಿಸಲಾಗಿತ್ತೆಂದೂ, ಆದರೆ ಉತ್ತರವು ಕೇವಲ ೧೦೦ಕ್ಕೆ ಮಾತ್ರ ದೊರೆತಿದೆಯೆಂದು, ಉಳಿದವುಗಳಿಗೆ ಉಳಿದವುಗಳಿಗೆ ಉತ್ತರಕ್ಕಾಗಿ ತಾವು ಸರ್ಕಾರವನ್ನು ಒತ್ತಾಯಪಡಿಸುತ್ತಿರುವುದಾಗಿಯೂ ಅವರು ಹೇಳಿದರು.

ಸತ್ಕಾರ ಕೂಟ

ಲೋಕಸಭಾಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರ್, ಕೇಂದ್ರ ಸಹಕಾರ ಮಂತ್ರಿ ಡಾ॥ ಪಂಜಾಬರಾವ್ ದೇಶಮುಖ್ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರ ಗೌರವಾರ್ಥವಾಗಿ ಲೋಕ ಸಭಾಸದಸ್ಯ ಶ್ರೀ ಎಂ. ಶಂಕರಯ್ಯನವರು ಭಾನುವಾರ ರಾತ್ರಿ ಶ್ರೀ ಬೋರಯ್ಯಬಸವಯ್ಯನವರ ಅತಿಥಿಗೃಹದಲ್ಲಿ ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು ಸಂಸ್ಥಾನದ ಹಲವು ಲೋಕ ಸಭಾಸದಸ್ಯರೂ ಇತರ ಪ್ರಮುಖರೂ ಭಾಗವಹಿಸಿದ್ದರು.

ಹೊಸದಾಗಿ ೫೬ ಜನರಿಗೆ ಫ್ಲೂ

ನಗರದಲ್ಲಿ ಹೊಸದಾಗಿ ೫೬ ಜನರಿಗೆ ಇನ್‌ಫ್ಲುಯೆಂಜಾ ಉಂಟಾಗಿದೆ ಒಟ್ಟು ೩೫೫ ರಲ್ಲಿ ೨೬೫ ಜನರು ಗುಣಹೊಂದಿದ್ದಾರೆ. ೯೦ ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ.

ತೆಂಗಿನಕಾಯಿ ವರ್ತಕರ ಸಂಘ

ಮೇಲ್ಕಂಡ ಸಂಘದ ಸರ್ವ ಸದಸ್ಯರ ಸಭೆಯನ್ನು ತಾ॥ ೩೦–೬–೧೯೫೭ನೇ ಭಾನುವಾರ ಸಂಜೆ ೪ ಗಂಟೆಗೆ ಸಂಘದ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಆರ್. ರಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುವುದರಿಂದ ಸದಸ್ಯರೆಲ್ಲರೂ ತಪ್ಪದೆ ಭಾಗವಹಿಸಬೇಕೆಂದು ಪ್ರಾರ್ಥಿಸಲಾಗಿದೆ.

ಮಂಡ್ಯ ಮುನ್ಸಿಫ್ ಕೋರ್ಟ್

O S 592/57

ವಾದಿಗಳು 1 ಎಂ ಎಸ್ ಬಸವರಾಜೆ ಅರಸ್ ವಗೈರೆ

Vs.

ಪ್ರತಿವಾದಿಗಳು 1 ಶ್ರೀ ಗುರುಸಿದ್ಧಸ್ವಾಮಿಗಳು 2 ಶಿವಪ್ಪ

ಮಲ್ಲಿನಾಥಪುರ ಮಠದ ವಿಚಾರ

ಮಳವಳ್ಳಿ ತಾಲ್ಲೂಕು ಬೊಪ್ಪಗೌಡನಪುರದ ಹೋಬಳಿ ಮಲ್ಲಿನಾಥಪುರದಲ್ಲಿರುವ ಮಲ್ಲಿನಾಥಪುರ, ಕಗ್ಗಳ ಗ್ರಾಮಗಳ ಅರಸುಗಳ ಮಠವಾದ ಶ್ರೀ ಮಲ್ಲಿನಾಥಪುರ ಮಠದ ಸ್ವಾಮಿಗಳಾದ 1ನೇ ಪ್ರತಿವಾದಿಯು ಈ ಗ್ರಾಮಗಳ ಅರಸು ಜನಾಂಗದ ಅನುಮತಿ ಇಲ್ಲದೆ ಅರಸುಗಳ ವಿನಹ ಮತ್ತಾವ ಜಾತಿಯವರನ್ನಾಗಲೀ, 2ನೇ ಪ್ರತಿವಾದಿಯಾದ ಶಿವಪ್ಪನವರನ್ನಾಗಲೀ, ಶ್ರೀ ಮಠದ ಪೀಠಕ್ಕೆ ಉತ್ತರಾಧಿಕಾರಿಯಾಗಿ ಸ್ವೀಕರಿಸಕೂಡದೆಂದೂ, ಮರಿಮಾಡ (consecrate) ಕೂಡದೆಂದೂ ವಗೈರೆ ಶಾಶ್ವತವಾದ ಆಜ್ಞೆ (Permanent Injunction) ವಗೈರೆ ಪರಿಹಾರಕ್ಕೆ ಮೇಲ್ಕಂಡ ನಂಬರು ದಾವೆಯನ್ನು ಸದರಿ ಮಲ್ಲಿನಾಥಪುರ ಮತ್ತು ಕಗ್ಗಳ ಗ್ರಾಮಗಳ ಅರಸುಗಳ ಜನಗಳ ಪರವಾಗಿ ಮೇಲ್ಕಂಡ ವಾದಿಗಳು C P C order I R 8 ಮೇರೆ ಪ್ರತಿನಿಧಿ (representative suit) ದಾವೆಯನ್ನು ತಂದಿರುತ್ತಾರೆ. 16-7-57ರಂದು ಮೇಲ್ಕಂಡ ಮೊಕದ್ದಮೆ ಹಿಯರಿಂಗ್ ಇರುತ್ತೆ. ಈ 2 ಗ್ರಾಮಗಳ ಅರಸುಗಳ ಜನಾಂಗದವರಾರಾದರೂ ಪಾರ್ಟಿಯಾಗಲು ಇಷ್ಟಪಟ್ಟವರು ದಾವಾಕ್ಕೆ ಸೇರಬಹುದೆಂದು ಈ ಮೂಲಕ ತಿಳಿಸಿರುತ್ತೆ.

By order of Court,

S Raghavendrachar, Advocate, Mandya, ವಾದಿಗಳ ಪರ

ಮಂಡ್ಯ 18-6-57

ಅಣು ಪ್ರಯೋಗಗಳಿಂದ ಬುದ್ಧಿ ಹೀನರ ಜನನ

ನೊಬೆಲ್ ಬಹುಮಾನಿತ ವಿಜ್ಞಾನಿಯ ಎಚ್ಚರಿಕೆ

ನೊಬೆಲ್ ಪಾರಿತೋಷಕವನ್ನು ಪಡೆದ ಅಮೆರಿಕದ ಸುಪ್ರಸಿದ್ಧ ವಿಜ್ಞಾನಿ ಲೈನಸ್ ಪಾಲಿಂಗ್‌ರವರು ಅಣು ಪ್ರಯೋಗಗಳಿಂದ ಉತ್ಪತ್ತಿಯಾದ ಅಣು ವಿಕಿರಣವು ಮಾನವ ಜನಾಂಗದ ಆರೋಗ್ಯವನ್ನೇ ಹಾಳುಮಾಡುತ್ತಿದೆಯೆಂದು ತಿಳಿಸಿದ್ದಾರೆ. ಇವುಗಳಿಂದ ವರ್ಷಂಪ್ರತಿ ಸಾವಿರ ಮಂದಿ ಮೂಳೆ ವ್ರಣ ಮುಂತಾದ ವಿಚಿತ್ರ ಖಾಯಿಲೆಗಳಿಗೊಳಗಾಗಿ ಮೃತರಾಗುತ್ತಿದ್ದಾರೆಂದೂ, ಈಗಲೇ ಆಗಿರುವ ಪ್ರಯೋಗಗಳ ಫಲವಾಗಿ ಮುಂದಿನ ಪೀಳಿಗೆಯಲ್ಲಿ ಲಕ್ಷಾಂತರ ಮಂದಿ ಬುದ್ಧಿಶೂನ್ಯರಾದ ಮಕ್ಕಳು ನಾನಾ ರೀತಿಯ ಅಂಗವಿಕಲತೆಯೊಡನೆ ಜನಿಸಿ ಮಾನವ ಜನಾಂಗಕ್ಕೆ ಧಕ್ಕೆಯಾಗುವುದೆಂದೂ ಅವರು ಎಚ್ಚರಿಸಿರುರು. ಆದ್ದರಿಂದ ಅಣು ಪ್ರಯೋಗಗಳನ್ನು ತಡೆಗಟ್ಟಲು ರಷ್ಯನರೂ ಸೇರಿ ಎಲ್ಲಾ ದೇಶಗಳ ವಿಜ್ಞಾನಿಗಳೂ ಮನವಿ ಪತ್ರಕ್ಕೆ ರುಜು ಹಾಕಬೇಕೆಂದು ಕೋರಿದರು.

ಕಾವ್ಯ ವಾಚನ

ಈ ಸಂಜೆ 6 ಗಂಟೆಗೆ ಜಯನಗರದ ಶ್ರೀ ಪೌರಾಣಿಕ ಪಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ಶ್ರೀ ಎ ಎ ಗಿರಿಧರಮೂರ್ತಿಯವರಿಂದ "ಶ್ರೀ ಶ್ರೀನಿವಾಸ ಕಲ್ಯಾಣ" ಎಂಬ ಕಾವ್ಯ ವಾಚನವನ್ನು ಶ್ರೀ ಎಸ್ ಲಕ್ಷ್ಮೀನರಸಿಂಹರವರ ವ್ಯಾಖ್ಯಾನದೊಡನೆ ಏರ್ಪಡಿಸಲಾಗಿದೆ.

ಸಂಗೀತ ತರಗತಿಗಳು

ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ರಾಮ ಸಹಾಯ ಸಂಘದ ಆಶ್ರಯದಲ್ಲಿ ಸಂಗೀತ ತರಗತಿಗಳು ಪ್ರತಿ ಸೋಮವಾರ ಬುಧವಾರ ಶನಿವಾರಗಳಲ್ಲಿ ಸಂಜೆ 4-30 ರಿಂದ 6ರವರೆಗೆ ವಿ|| ಬಿ ಆರ್ ಶ್ರೀನಿವಾಸರವರಿಂದ ನಡೆಯುತ್ತವೆ. ಸೇರಲಿಚ್ಛಿಸುವವರು ಬಂದು ವಿಚಾರಿಸಬಹುದು.

ತೆರಿಗೆ ಪ್ರತಿಭಟಿಸಿ ರಾಜಾಜಿ ಜೈಲಿಗೆ ಹೋಗಲೆಂದು ಸಲಹೆ

ಇತ್ತೀಚೆಗೆ ವಿಧಿಸಲಾದ ಹೆಚ್ಚಿನ ತೆರಿಗೆಗಳನ್ನು ಪ್ರತಿಭಟಿಸಿ ಹಿರಿಯ ರಾಜಕಾರಣಿ ರಾಜಾಜಿಯವರು ಬಂಧಿತರಾಗಬೇಕೆಂದು ಸೋಷಲಿಸ್ಟ್ ಪಕ್ಷದ ನಾಯಕ ರಾಮಮನೋಹರ ಲೋಹಿಯಾರವರು ತಿಳಿಸಿದ್ದಾರೆ. ಇದರಿಂದ ಪ್ರತಿಭಟನಾ ಚಳುವಳಿಯು ಹೆಚ್ಚು ಪರಿಣಾಮಕಾರಿಯಾಗುವುದೆಂದು ಅವರು ಅಭಿಪ್ರಾಯಪಟ್ಟಿರುವರು.

○ ಜಪಾನಿನಲ್ಲಿ ಅಮೆರಿಕದವರ ವಶದಲ್ಲಿರುವ ಐದು ವಿಮಾನ ನೆಲೆಗಳನ್ನು 1958ನೇ ಇಸವಿಯೊಳಗೆ ಜಪಾನಿಗೆ ಹಿಂದಿರುಗಿಸುವ ಬಗ್ಗೆ ಎರಡು ರಾಷ್ಟ್ರಗಳಿಗೂ ಒಪ್ಪಂದವಾಗಿದೆ.

ಹೋಟೇಲು ಕೆಲಸಗಾರರು ಬೇಕಾಗಿದ್ದಾರೆ

ಮಹಾರಾಜಾ ಕಾಲೇಜು ಆವರಣದಲ್ಲಿರುವ ಯೂನಿವರ್ಸಿಟಿ ರೆಸ್ಟೋರೆಂಟಿನಲ್ಲಿ ಕೆಲಸ ಮಾಡಲು ಅಡಿಗೆಯವರು ತಿಂಡಿಯವರು, ಸಪ್ಲೈಯರುಗಳು ಮತ್ತು ಕ್ಲೀನರುಗಳು ಬೇಕಾಗಿದ್ದಾರೆ. 22ನೇ ತಾರೀಖು ಶನಿವಾರದೊಳಗಾಗಿ ಹೋಟೇಲಿನಲ್ಲಿ ವಿಚಾರಿಸಿರಿ.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ ಗಡಿಯಾರಗಳು ಮತ್ತು ಕನ್ನಡಕಗಳು ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ. ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 1911)

ಸಂಸ್ಥಾನದ ಮಂತ್ರಿಗಳಲ್ಲಿ ಆಡಂಬರವಿಲ್ಲ

ಶಾಸನ ಸಭೆಯಲ್ಲಿ ಮುಖ್ಯಮಂತ್ರಿಯವರ ಹೇಳಿಕೆ

ಬೆಂಗಳೂರು 18

ಸಂಸ್ಥಾನದ ಮಂತ್ರಿಗಳು ಆಡಂಬರದಿಂದ ಕೂಡಿಲ್ಲವೆಂದು ನೆನ್ನೆ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿದರು. ಕೇಂದ್ರದವರು ಬಹಳ ದಿನಗಳಿಂದಲೂ ಎಷ್ಟೋ ಬಾರಿ ಆಡಂಬರವನ್ನು ಕಡಿಮೆ ಮಾಡಬೇಕೆಂದು ಸೂಚಿಸುತ್ತಲಿದ್ದರೂ ಯಾವ ರೀತಿಯ ಅಧಿಕೃತ ಪತ್ರವ್ಯವಹಾರವೂ ಆಗಿಲ್ಲವೆಂದೂ, ಈ ಬಗ್ಗೆ ಪ್ರಧಾನಿ ನೆಹರೂರವರಿಂದ ತಮಗೆ ಯಾವ ಪತ್ರವೂ ಬಂದಿಲ್ಲವೆಂದೂ ಅವರು ತಿಳಿಸಿದರು. ಮಂತ್ರಿಗಳು ಕಾರಿನ ಮೇಲೆ ಧ್ವಜವನ್ನು ಹಾರಿಸುವುದು ಆಡಂಬರವಲ್ಲವೇ? ಎಂದು ಸದಸ್ಯರೊಬ್ಬರು ಕೇಳಿದ ಪ್ರಶ್ನೆಯನ್ನು ಸಭಾಪತಿಗಳು ತಳ್ಳಿಹಾಕಿದರು.

○ ಮಹಾತ್ಮ ಗಾಂಧಿಯವರ ಎಲ್ಲ ಲೇಖನಗಳು ಭಾಷಣಗಳು ಮತ್ತು ಪತ್ರಗಳನ್ನು ಮುದ್ರಿಸಿ ಪ್ರಕಟಿಸುವ ಕಾರ್ಯವನ್ನು ಕೇಂದ್ರ ಸರ್ಕಾರದವರು ಕೈಗೊಂಡಿರುವರು.

ಶಿಶು ಜೀವಿನಿ-

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ- ನಿರೋಧಕ, ವಿವಾಹ ಸಲಹೆಗಳಿಗೆ - 'ಲಿವರ್ ಹೌಸ್', ಚಾಮರಾಜಪುರಂ, ಮೈಸೂರು (ಸುಬ್ಬರಾಯ ಹಾಸ್ಪಟಲ್ ಹತ್ತಿರ)

Edited, Printed and Published by A R Nagarajan at Sadhvi Press, Dhanvantri Road, Mysore

20-6-57 ರಿಂದ ಅಶೋಕ ಪ್ರಾರಂಭ ಅತ್ಯುತ್ತಮ ಸಾಮಾಜಿಕ ಹಿಂದಿ ಚಿತ್ರ

ಒಲಂಪಿಯಾ ★ ಭೋಟಿ ಬಾಬು

ಪ್ರಕಾಶ್ ಮೂವೀಸ್ ರವರ

ವಾತ್ರ ರೇಖಾ, ನಿರುಪಾ ಅಭಿಭಟ್ಟಾಚಾರ್ಯ ಮತ್ತು ಆಗಾ

[A VIDYUTH RELEASE

ಬೆಂಗಳೂರಿನ ಕೆಂಪೇಗೌಡ ರೋಡಿನಲ್ಲಿ ನೂತನವಾಗಿ ಕಟ್ಟಿರುವ 'ಅಲಂಕಾರ್' ಎಂಬ ಭವ್ಯ ಚಿತ್ರಮಂದಿರದ ಪ್ರಾರಂಭೋತ್ಸವದಿಂದ ಈ ಚಿತ್ರವು ತೆರೆಗೆ ಬರುತ್ತದೆ

The Institute of Social Science, Mysore

(D Banumiah's High School Buildings Science Block)

The Institute re opens on 1st July 1957

Applications for admission to the Diploma Course in Social Science are now being received The Course extends over a period of Eight months The classes will be held in the evenings Graduates and those studying for recognised degrees are eligible to apply Forms of application and Hand book may be had on payment of Re 1/00 only either in person (between 6-30 and 7-30 P M.) or by crossed Postal orders payable to the Secretary The last date for the receipt of applications is 28th June 1957

ಬಹು ಜನಗಳು ತೆಲುಗು 'ಮಾಯಾಬಜಾರ್' ನೋಡಬೇಕೆಂದು ಅಪೇಕ್ಷೆ ಪಡುತ್ತಿರುವುದರಿಂದ

ಪ್ರಭು ದೇವಾ ಥಿಯೇಟರ್

(ಪದ್ಮಾ ಟಾಕೀಸ್)

21-6-57ನೇ ಶುಕ್ರವಾರದಿಂದ : ಅಶೋಕ ಪ್ರಾರಂಭ

ವಿಜಯಾರವರ ತೆಲುಗು

ಮಾಯಾ ಬಜಾರ್

(ಶಶಿರೇಖಾ ಪರಿಣಯ)

ಪಾತ್ರ.— ಎ ನಾಗೇಶ್ವರರಾವ್ ಜೆಮಿನಿ, ಸಿ ಎಸ್ ಆರ್, ಮುಕ್ಕಾಮಲ, ಎನ್ ಟಿ ರಂಗರಾವ್, ಎಸ್ ವಿ ರಂಗರಾವ್, ಸಾವಿತ್ರಿ ಮುಂತಾದವರು

THE VIJAYA BANK Ltd.,

H O Mangalore :: Estd 1931

MYSORE BRANCH

Opening function on 20—6—1957

at 5—30 P M

At Rangacharlu Memorial Hall (Town Hall)

Sri H K VEERANNA GOWDH,
Minister for Public Works Government of Mysore,
will preside.

Banking Business as from 21—6—1957

THE CHAMPION METROPOLITAN COLLEGE OF COMMERCE

Co operators Home 100 Road Mysore

78 per cent.100 per cent GOOD RESULTS IN several subjects & Grades

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE Diploma in Stenography COST & WORKS ACCOUNTANCY Banking, Shorthand, Typewriting etc

Estd 1917 - Fully qualified full-time staff — Educational atmosphere — Fine building and up-to-date equipment — Decent Library and Reading Room — Western Business education in the East — Good results — College's Own Diploma also

M S PUTTANNA, B Sc, N D. Com, F.I B — *Vice-Principal*

P. SUBBARAYA SASTRY, M.A, M A (Com), F.I B — *Principal*

ರಜಿಸ್ಟ್ರೇಷನ್ ನಂ. 792

ಬಿಡಿ ಪತ್ರಿಕೆ 2 ನಯಾ ಪೈಸೆ

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ೧.೫೦ ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : THURSDAY 20—6—1957 ಮೈಸೂರು : ಗುರುವಾರ ೨೦—೬—೧೯೫೭ : [ಸಂಚಿಕೆ : ೩೦೬

ಅಣು ಸಿಡಿತದ ತಾತ್ಕಾಲಿಕ ನಿಲುಗಡೆಗೆ ಅಮೆರಿಕಾ ಸಿದ್ಧ

ಪಾಕಿಸ್ತಾನಕ್ಕೆ ಗೋವಾ ಮೂಲಕ ಮೈಸೂರು ಅಕ್ಕಿಯ ಕಳ್ಳ ರವಾನೆ

ವಿಧಾನ ಸಭೆಯಲ್ಲಿ ಸದಸ್ಯರೊಬ್ಬರ ಆಪಾದನೆ

ಬೆಂಗಳೂರು ೨೦

ವಿಧಾನ ಸಭೆಯಲ್ಲಿ ನೆನ್ನೆ ಆಯವ್ಯಯದ ಒಟ್ಟು ಚರ್ಚೆ ಸಮಯದಲ್ಲಿ ಚಿಕ್ಕನಾಯಕನಹಳ್ಳಿಯ ಪಿ ಎಸ್ ಪಿ ಪ್ರತಿನಿಧಿ ಶ್ರೀ ಕೆ ರಾಜಯ್ಯಶೆಟ್ಟಿಯವರು ಮಾತನಾಡಿ ತಮಗೆ ಬೆಳಗಾವಿಯಿಂದ ಪತ್ರವೊಂದು ಬಂದಿರುವುದೆಂದೂ, ಅದರಲ್ಲಿ ತಿಳಿಸಿರುವಂತೆ ಮೈಸೂರಿನ ಆಹಾರದ ಕಣಜವೆಂದು ಪ್ರಸಿದ್ಧವಾಗಿರುವ ಶಿವಮೊಗ್ಗೆಯಿಂದ ಕಳೆದ ಆರು ತಿಂಗಳಿಂದಲೂ ಗೋವಾ ಮೂಲಕ ಪಾಕಿಸ್ತಾನಕ್ಕೆ ಅಕ್ಕಿಯನ್ನು ಕಳ್ಳತನದಲ್ಲಿ ರವಾನಿಸಲಾಗುತ್ತಿರುವುದೆಂದೂ ಹೇಳಿದರು ಬೆಳಗಾವಿನ ಮೂಲಕ ಗೋವಾಕ್ಕೆ ಅಕ್ಕಿಯು ಹೋಗುತ್ತಿರುವುದಾಗಿ ಅವರು ತಿಳಿಸಿದರು

ಕೋಲಾರದ ಚಿನ್ನದ ಗಣಿ ಪ್ರದೇಶದಿಂದ ಬಂಗಾರವನ್ನು ಕಳ್ಳ ರವಾನೆ ಮಾಡುವುದು ಹೆಚ್ಚಿರುವುದಾಗಿಯೂ ಅವರು ಆಪಾದಿಸಿದರು ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಕೆಲವು ಕಾಲದ ಹಿಂದೆ ಆದ ನಷ್ಟವನ್ನು ವಸೂಲು ಮಾಡಲು ಇನ್ನೂ ಯಾವ ಕ್ರಮವನ್ನೂ ಕೈಗೊಂಡಿಲ್ಲದಿರುವುದನ್ನು ಅವರು ಟೀಕಿಸಿದರು. ಆಯವ್ಯಯ ಪಟ್ಟಿಯನ್ನು ಅವರು ಖಂಡಿಸಿ, ಪ್ರಾರಂಭದ ಅಥವಾ ಮುಕ್ತಾಯದ ಶಿಲ್ಕು ಇಲ್ಲದಿರುವ ಪಟ್ಟಿಯನ್ನು ಹೇಗೆ ಒಪ್ಪಬೇಕೆಂದು ಪ್ರಶ್ನಿಸಿ, ಅದನ್ನು ಒಪ್ಪಿದರೆ ಆಳಲ್ಪಡುತ್ತಿರುವವರು ಕುರಿಗಳಾಗುವರೆಂದೂ ಮತ್ತು ಆಳುವವರು ತೋಳಗಳಾಗುವರೆಂದೂ ನುಡಿದರು

ಕಾಂಗ್ರೆಸ್ ಸದಸ್ಯರನ್ನು ಕೂಡಿಸುವ ಬಗ್ಗೆ ಸೂಚನೆ

ಪ್ರದೇಶ ಕಾಂಗ್ರೆಸ್ಸಿನ ನಾಯಂ ಕಾರ್ಯದರ್ಶಿಯವರು ಪ್ರಕಟಣೆಯೊಂದನ್ನು ಹೊರಡಿಸಿ ಸಂಸ್ಥೆಗೆ ಸದಸ್ಯರನ್ನು ಕೂಡಿಸುವ ಬಗ್ಗೆ ಎಲ್ಲಾ ಕಾಂಗ್ರೆಸ್ ಸಮಿತಿಗಳೂ ಶ್ರದ್ಧಾಸಕ್ತಿಯಿಂದ ಕೆಲಸಮಾಡಿ ಕಾಲಕಾಲಕ್ಕೆ ಆದ ಪ್ರಗತಿಯನ್ನು ತಿಳಿಸುತ್ತಿರಬೇಕೆಂದು ಸೂಚಿಸಿರುತ್ತಾರೆ ಜಿಲ್ಲಾ ಸಮಿತಿಗಳು ತಾಲ್ಲೂಕು ಸಮಿತಿಗಳಿಗೆ ಬೇಕಷ್ಟು ಸದಸ್ಯತನದ ಪುಸ್ತಕಗಳನ್ನು ಹಂಚಬೇಕೆಂದು ತಿಳಿಸಲಾಗಿದೆ ಜಿಲ್ಲಾ ಸಮಿತಿಗಳಿಗೆ ಪ್ರದೇಶ ಸಮಿತಿಯು ಅವನ್ನು ಕೊಡಲಿದೆ ಯಾವ ಸಮಿತಿಯಾದರೂ ಸದಸ್ಯತನದ ಪುಸ್ತಕವನ್ನು ಕೊಡದಿದ್ದರೆ ಈ ಅಂಶವನ್ನು ಪ್ರದೇಶ ಸಮಿತಿಗೆ ತಿಳಿಸಿದರೆ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಸೂಚಿಸಲಾಗಿದೆ

ಅಹಮದಾಬಾದ್ ಬಳಿ ೨೧ ಬಾಲ್ಯ ವಿವಾಹಗಳಿಗೆ ತಡೆ

ಅಹಮದಾಬಾದ್ ನಗರದ ಬಳಿ ಗುಗ್ರೀಜ್ ಎಂಬ ಗ್ರಾಮದಲ್ಲಿ ಕಳೆದ ಶುಕ್ರವಾರ ನಡೆಯಬೇಕಾಗಿದ್ದ ೨೧ ಬಾಲ್ಯ ವಿವಾಹಗಳನ್ನು ಒಂದು ಮಹಿಳಾ ಸಂಸ್ಥೆಯಿತ್ತ ಸುದ್ದಿ ಮೇಲೆ ಪೋಲೀಸರು ಪತ್ತೆಹಚ್ಚಿ ಸಕಾಲದಲ್ಲಿ ತಡೆಗಟ್ಟಿದರೆಂದ ವರದಿಯಾಗಿದೆ. ವಿವಾಹದ ಕನ್ಯೆಯರಿಗೆ ೧೧ರಿಂದ ೧೩ ವರ್ಷದವರೆಗೆ ಮಾತ್ರ ವಯಸ್ಸಾಗಿದ್ದಿತು.

ಕೈ ಬಳೆಗಳಿಗೆ ಮಾರಾಟ ತೆರಿಗೆ ಇಲ್ಲ

ಬೆಂಗಳೂರು ೨೦

ವಿಧಾನ ಪರಿಷತ್ತಿನಲ್ಲಿ ನೆನ್ನೆ ಹಣಕಾಸಿನ ಮಂತ್ರಿ ಟಿ ಮರಿಯಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು ಇನ್ನುಮುಂದೆ ಕೈಬಳೆಗಳಿಗೆ ಮಾರಾಟ ತೆರಿಗೆಯನ್ನು ವಿಧಿಸುವುದಿಲ್ಲವೆಂದು ತಿಳಿಸಿದರು ಸಂಸ್ಥಾನಕ್ಕೆಲ್ಲಾ ಒಂದೇ ಸಮನಾದ ತೆರಿಗೆ ಶಾಸನವನ್ನು ಜಾರಿಗೆ ತರ ಬೇಗ ಈ ವಿಚಾರಯುತ ಪ್ರಶ್ನೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದೆಂದೂ ಅವರು ಹೇಳಿದರು

ಸರ್ಕಾರಿ ನೌಕರರ ಸಂಬಳವನ್ನು ಹೆಚ್ಚಿಸುವುದಕ್ಕಾಗಿ ಕೇಂದ್ರದವರು ಕೊಡುವ ೧ಕೋಟಿ ೩೦ ಲಕ್ಷ ರೂ ಸೇರಿ ಒಟ್ಟು ೪ ಕೋಟಿ ರೂ ಹೆಚ್ಚಾಗಿ ವೆಚ್ಚವಾಗುವುದೆಂದೂ ಸ್ಥಳೀಯ ಸಂಸ್ಥೆಗಳು ತಮ್ಮ ನೌಕರರ ಸಂಬಳವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದವರು ಎಷ್ಟುಮಟ್ಟಿಗೆ ಸಹಾಯ ಮಾಡಬಹುದೆಂಬುದನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲಾಗಿರುವುದೆಂದೂ ಸಚಿವರು ನುಡಿದರು ನೌಕರರ ಸಂಬಳದಲ್ಲಿ ತುಟ್ಟಿಭತ್ಯವನ್ನು ಸೇರಿಸುವುದಿಲ್ಲವೆಂದೂ ಅವರು ಸ್ಪಷ್ಟಪಡಿಸಿದರು

ರಕ್ತಸ್ರಾವವನ್ನು ತಡೆಯಲು ಹಾವಿನ ವಿಷದ ಉಪಯೋಗ

ರಕ್ತಸ್ರಾವವನ್ನು ತಡೆಗಟ್ಟಲು ಪರಿಷ್ಕರಿಸಿದ ಹಾವಿನ ವಿಷವನ್ನು ರಷ್ಯದಲ್ಲಿ ಯಶಸ್ವಿಯಾಗಿ ಉಪಯೋಗಿಸಲಾಗುತ್ತಿದೆಯೆಂದು ವರದಿಯಾಗಿದೆ ಮಧ್ಯ ಏಷ್ಯದ ಗುರ್ಜಾರ್ ಎಂಬ ಹಾವಿನ ವಿಷವನ್ನು ಇದಕ್ಕಾಗಿ ಪ್ರಾಚೀನ ಕಾಲದಿಂದಲೂ ಉಪಯೋಗಿಸಲು ಪ್ರಯತ್ನಗಳಾಗುತ್ತಿದ್ದುವೆಂದೂ, ಈಗ ಆ ವಿಷದಲ್ಲಿನ ಅಪಾಯಕರ ಕ್ರಿಮಿಗಳನ್ನು ತೆಗೆದುಹಾಕಿ ಪ್ಯಾರಿಸ್ ಡಾಬಾದಿನ ಅಸ್ಪತ್ರೆಗಳಲ್ಲಿ ಬಹಳ ಪರಿಣಾಮಕಾರಿಯಾಗಿ ಉಪಯೋಗಿಸಲಾಗುತ್ತಿದೆಯೆಂದೂ ತಿಳಿದುಬಂದಿದೆ

ಕೊಯಮತ್ತೂರಿನ ಬಹುಮಂದಿ ವೈದ್ಯರಿಗೆ ಇನ್‌ಫ್ಲುಯೆಂಜಾ

ಒಂದು ದಿನ ಪತ್ರಿಕೆಯ ಪ್ರಕಟಣೆ ರದ್ದು

ಕೊಯಮತ್ತೂರಿನ 'ನವಇಂಡಿಯಾ' ಎಂಬ ತಮಿಳು ದಿನ ಪತ್ರಿಕೆ ಕಛೇರಿಯ ಸಂಪಾದಕರು ಮತ್ತು ಇತರ ಎಲ್ಲ ನೌಕರರಿಗೂ ಇನ್‌ಫ್ಲುಯೆಂಜಾ ವ್ಯಾಧಿಯು ತಗಲಿದ್ದುದರಿಂದ ಕಳೆದ ಭಾನುವಾರ ಪತ್ರಿಕೆಯನ್ನು ಪ್ರಕಟಿಸಲಾಗಲಿಲ್ಲವೆಂದು ವರದಿಯಾಗಿದೆ ಮತ್ತೊಂದು ಪತ್ರಿಕೆಯನ್ನು ಇದೇ ಕಾರಣದಿಂದ ಆರ್ಧ ಆಕಾರದಲ್ಲಿ ಪ್ರಕಟಿಸಲಾಯಿತು ಕೊಯಮತ್ತೂರು ನಗರದ ಆರೋಗ್ಯಾಧಿಕಾರಿಗಳೂ ಸೇರಿ ಬಹು ಮಂದಿ ವೈದ್ಯರು ಫ್ಲೂ ವ್ಯಾಧಿಗ್ರಸ್ತರಾಗಿರುವರು

ಬ್ರಿಟನ್ನಿನಿಂದ ಜಲಜನಕ ಬಾಂಬಿನ ಪ್ರಯೋಗ

ಬ್ರಿಟನ್ನು ಮಧ್ಯ ಪೆಸಿಫಿಕ್ಕಿನಲ್ಲಿ ನೆನ್ನೆ ಬಹಳ ಎತ್ತರದಿಂದ ತನ್ನ ೩ ನೆಯ ಮತ್ತು ಕಡೆಯ ಜಲಜನಕ ಬಾಂಬನ್ನು ಸಿಡಿಸಿತು

ಅಣು ಶಸ್ತ್ರ ಸಿಡಿತದ ತಾತ್ಕಾಲಿಕ ನಿಲುಗಡೆಗೆ ಅಮೆರಿಕಾ ಸಿದ್ಧ

ಅಧ್ಯಕ್ಷ ಐಸೆನ್‌ಹೋವರರ ಸೂಚನೆ

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ನೆನ್ನೆ ವಾಷಿಂಗ್ಟನ್ನಿನ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ, ಅಣು ಶಸ್ತ್ರಾಸ್ತ್ರಗಳ ಪರೀಕ್ಷಾ ಸ್ಫೋಟನೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಬಗ್ಗೆ ತೃಪ್ತಿಕರವಾದ ವ್ಯವಸ್ಥೆಯನ್ನು ಮಾಡಲು ಅಮೆರಿಕವು ಸಿದ್ಧವಿರುವುದಾಗಿಯೂ, ಅದರ ಜೊತೆಗೆ ಖಾಯಂ ವ್ಯವಸ್ಥೆ ಮಾಡಲೂ ತೊಡಗಲಾಗುವುದೆಂದೂ ಹೇಳಿದರು ಇತ್ತೀಚಿನ ಶಸ್ತ್ರ ಸನ್ಯಾಸ ಸಲಹೆಗಳು ಆಶಾದಾಯಕವಾಗಿರುವುವೆಂದೂ, ರಷ್ಯಾ ಸಲಹೆಯು ಆಸಕ್ತಿ ಮತ್ತು ಸಹಾನುಭೂತಿಯಿಂದ ಪರಿಶೀಲಿಸುವಂತಹುದೆಂದೂ ಅವರು ನುಡಿದರು

ಪೋಲೀಸರೊಡನೆ ಪಾಕ್ ಕಳ್ಳ ಸಾಗಾಣಿಕೆಗಾರರ ಕಾದಾಟ

ಭಾವಲ್ಪುರದ ಬಳಿ ಭಾರತ ಪಾಕಿಸ್ತಾನ ಗಡಿಯ ಫಾಜಿಲ್ಕಾ ಎಂಬಲ್ಲಿ ಕಳೆದ ಸೋಮವಾರ ಪಾಕಿಸ್ತಾನದ ಇಬ್ಬರು ಕಳ್ಳ ಸಾಗಾಣಿಕೆಗಾರರಿಗೂ, ಭಾರತದ ಗಡಿ ಪಹರೆಯವರಿಗೂ ಗುಂಡಿನ ಕಾಳಗವಾಗಿ ಅವರಿಬ್ಬರೂ ಮೃತರಾದರೆಂದೂ, ಅವರಿಂದ ಸುಮಾರು ೨೧ ಸಾವಿರ ರೂ ಭಾರತದ ಹಣವನ್ನೂ ಮತ್ತು ಆಯುಧಗಳನ್ನೂ ವಶಪಡಿಸಿಕೊಳ್ಳಲಾಯಿತೆಂದೂ ವರದಿಯಾಗಿದೆ

ಬಾಲಕನನ್ನು ಹೊಡೆದುದಕ್ಕಾಗಿ ತಲೆ ಬೋಳಿಸುವ ಶಿಕ್ಷೆ

ಅಮೆರಿಕದ ಇಂಡಿಯಾನಾ ಪ್ರಾಂತದ ಗಾರಿ ಎಂಬಲ್ಲಿ ಜೋಸೆಫ್ ಮೆಸ್‌ಚಾರ್ ಎಂಬ ನ್ಯಾಯಾಧೀಶರೊಬ್ಬರು, ಹುಡುಗನನ್ನು ಹೊಡೆದ ಇನ್ನಿಬ್ಬರು ಬಾಲಕರ ತಲೆಗಳನ್ನು ಪೂರ್ಣವಾಗಿ ಬೋಳಿಸುವಂತೆ ಆಜ್ಞೆ ಮಾಡಿದ್ದಾರೆ ಹುಡುಗನಿಗೆ ಅವರು ಹೊಡೆದ ಪರಿಣಾಮವಾಗಿ ಆದ ಗಾಯವನ್ನು ವಾಸಿಮಾಡಲು ಆತನ ತಲೆಯ ಕೂದಲನ್ನು ತೆಗೆಸಬೇಕಾಯಿತೆಂದೂ, ಆದ್ದರಿಂದ ಅವರಿಬ್ಬರ ತಲೆಗಳನ್ನೂ ಬೋಳಿಸಲು ಆಜ್ಞಾಪಿಸಿದುದಲ್ಲದೆ, ಅವರಿಬ್ಬರಿಗೆ ತಲಾ ೨ ವರ್ಷ ಒಳ್ಳೆ ನಡತೆಯಿಂದಿರಲು ಜಾಮೀನು ಕೊಡುವಂತೆ ಆಜ್ಞೆ ಮಾಡಲಾಯಿತೆಂದೂ ತಿಳಿದುಬಂದಿದೆ ಹುಡುಗರ ತಲೆ ಬೋಳಿಸಲು ತಗಲುವ ವೆಚ್ಚವನ್ನು ನ್ಯಾಯಾಧೀಶರೇ ಕೊಡುವರು

ಫಿನ್ಲೆಂಡಿನಲ್ಲಿ ನೆಹರೂ

ಪ್ರಧಾನಿ ನೆಹರೂರವರು ನೆನ್ನೆ ಫಿನ್ಲೆಂಡ್ ದೇಶದ ರಾಜಧಾನಿ ಹೆಲ್ಸಿಂಕಿಯನ್ನು ತಲುಪಿದರು ಅವರನ್ನು ಅಲ್ಲಿನ ಪ್ರಧಾನಿಗಳೂ, ಇತರ ಮಂತ್ರಿಗಳೂ ಸ್ವಾಗತಿಸಿದರು ನೆಹರೂರವರು ಮಾತನಾಡಿ ಪಂಚಶೀಲದಲ್ಲಿ ತಮ್ಮ ನಂಬಿಕೆಯನ್ನು ಒತ್ತಿಹೇಳಿ ಯುದ್ಧಕ್ಕೆ ಪ್ರತಿಯಾಗಿ ಶಾಂತಿ ಮತ್ತು ಸಹಬಾಳ್ವೆಗೆ ಪಂಚಶೀಲದ ತತ್ವಗಳ ಅನುಸರಣೆಯೇ ತಕ್ಕ ವಿಧಾನವೆಂದು ಹೇಳಿದರು ಎಲ್ಲಾ ರಾಷ್ಟ್ರಗಳೂ ಈ ತತ್ವವನ್ನು ಅಂಗೀಕರಿಸಿದರೆ ಅಂತರರಾಷ್ಟ್ರೀಯ ಘರ್ಷಣೆಗೆ ಮುಖ್ಯ ಕಾರಣವೇ ತೊಲಗುವುದೆಂದು ಅವರು ನುಡಿದರು

ಸಂಸ್ಥಾನದಲ್ಲಿ ಸರಕು ಶೇಖರಣಾ ಕೇಂದ್ರದ ಸ್ಥಾಪನೆ

ಬೆಂಗಳೂರು ೨೦

ಕೇಂದ್ರ ಸರ್ಕಾರದ ಸಹಕಾರ ಮಂತ್ರಿ ಶ್ರೀ ಪಿ ಎಸ್ ದೇಶಮುಖ್‌ರವರು ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಸಚಿವರುಗಳಾದ ಶ್ರೀಗಳು ಟಿ ಮರಿಯಪ್ಪ ಮತ್ತು ಆರ್ ಎಂ ಪಾಟೀಲರೊಡನೆ ನಡೆಸಿದ ಮಾತುಕತೆಯ ಪರಿಣಾಮವಾಗಿ ಸಂಸ್ಥಾನದಲ್ಲಿ ೧೦ ಲಕ್ಷ ರೂ ಷೇರು ಬಂಡವಾಳದಿಂದ ಇನ್ನು ೧೫ ದಿನಗಳಲ್ಲಿ ಸರಕು ಶೇಖರಣಾ ಸಂಸ್ಥೆಯೊಂದನ್ನು ಏರ್ಪಡಿಸಲಾಗುವುದು ೨೦ ಕಡೆ ಇರುವ ಗೋಡೌನುಗಳನ್ನು ಈ ಕೆಲಸಕ್ಕೆ ಉಪಯೋಗಿಸಲಾಗುವುದು

ನಗರದಲ್ಲಿ ಇನ್‌ಫ್ಲುಯೆಂಜಾದಿಂದ ಇಬ್ಬರ ಮರಣ

ಮೈಸೂರು ೨೦

ಇನ್‌ಫ್ಲುಯೆಂಜಾದಿಂದ ನಗರದಲ್ಲಿ ಇದೇ ಮೊಟ್ಟಮೊದಲಾಗಿ ಎರಡು ಮರಣವಾಗಿರುವುದೆಂದು ತಿಳಿದುಬಂದಿದೆ ಕಳೆದ ಭಾನುವಾರ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲ್ಪಟ್ಟ ಚನ್ನಯ್ಯ ಎಂಬುವನೊಬ್ಬನು ಮೃತಪಟ್ಟನು ಅವನು ತಾಲ್ಲೂಕು ಕಛೇರಿ ಜವಾನ ಅವನನ್ನು ಬೆಳಿಗ್ಗೆ ೯॥ ಗಂಟೆಗೆ ಸೇರಿಸಿ ಇಂಜಕ್ಷನ್ ಅನ್ನು ಕೊಡಲಾಯಿತು ಆದರೆ ಅರ್ಧ ಗಂಟೆಯಲ್ಲಿ ಅವನು ಮರಣ ಹೊಂದಿದನೆಂದು ಗೊತ್ತಾಗಿದೆ ಈಚೆಗೆ ಅಲ್ಲಿ ಇನ್ನೂ ಒಬ್ಬನು ಮೃತಪಟ್ಟುದಾಗಿ ಗೊತ್ತಾಗಿದೆ ಈ ದಿನ ಮಧ್ಯಾಹ್ನದವರೆಗೆ ಹೊಸದಾಗಿ ೧೧೩ ಜನರಿಗೆ ವ್ಯಾಧಿ ತಗುಲಿತು ಒಟ್ಟು ೬೭೭ ಜನರ ಪೈಕಿ ೫೯ ಜನರು ಮಾತ್ರ ಚಿಕಿತ್ಸೆ ಹೊಂದುತ್ತಿದ್ದಾರೆ

ಧಾರವಾಡದಲ್ಲಿ ಫ್ಲೂ ನಿಂದ ಇಬ್ಬರ ಮರಣ

ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಚಿಂಚಲಿಯಲ್ಲಿ ಇಬ್ಬರು ಇನ್‌ಫ್ಲುಯೆಂಜಾದಿಂದ ಮೃತಪಟ್ಟಿರುವುದಾಗಿ ಸಂಸ್ಥಾನದ ಆರೋಗ್ಯ ಡೈರೆಕ್ಟರ್ ಡಾ॥ ಎಸ್ ಶೇಷಗಿರಿರಾಯರು ತಿಳಿಸಿರುತ್ತಾರೆ ಸಂಸ್ಥಾನದಲ್ಲೆಲ್ಲಾ ಒಟ್ಟು ೧೩,೬೭೯ ಮಂದಿಗೆ ವ್ಯಾಧಿಯು ತಗಲಿರುವುದೆಂದು ಅಧಿಕೃತವಾಗಿ ತಿಳಿದುಬಂದಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದೇವರನಾಮ ೭-೧೫ ಗಾಂಧಿಸ್ಮೃತಿ ೭-೩೦ ಬಿಸ್ಮಿಲ್ಲಾ ಮತ್ತು ಪಾರ್ಟಿ-ಶಹನಾಯ್ ೮-೧೫ ಹಿಂದಿಪಾಠ ಮಧ್ಯಾಹ್ನ ೧೨ ಎಂ ಎಸ್ ಚಂದ್ರಶೇಖರಯ್ಯ-ಸಂಗೀತ ೧೨-೩೦ ವಾರ್ತಾವಿಚಾರ ೧-೨೦ ರಿಕಾರ್ಡ್ ೧-೪೦ ವಾರ್ತೆ ೨-೧೫ ಪ್ರೌಢರ ಬೆಳವಣಿಗೆ ಸಂಜೆ ೬-೧೦ ನೃತ್ಯಗೀತೆ ೭-೩೦ ಕನ್ನಡ ಭಾಷಣ ೮ ಮದ್ರಾಸಿನಿಂದ-ಎ ನಾರಾಯಣ ಅಯ್ಯರ್-ಗೋಟುವಾದ್ಯ, ಆರ್ ಕೆ ವೆಂಕಟರಾಮಶಾಸ್ತ್ರಿ ಪಿಟೀಲು, ಮದ್ರಾಸ್ ಎ ಕಣ್ಣನ್ ಮೃದಂಗ ೯-೧೫ ಸಮಾಚಾರ ದರ್ಶನ ೯-೩೦ ಹೊಸ ಕನ್ನಡ ಪಿತಾಮಹರು ೧೦ ಸುಗಮಗೀತೆ ೧೦-೧೫ ಎಂ ಎಸ್ ಜಿ ಪ್ರಕಾಶರಾವ್-ರಾಗ ತಾನ, ಮತ್ತು ಪಲ್ಲವಿ

ಡೆನ್ಮಾರ್ಕಿನ ಶಿಕ್ಷಣ ತಜ್ಞರಿಗೆ ಸತ್ಕಾರ

ಮೈಸೂರು ೨೦

ತಾಂತ್ರಿಕ ಸಹಾಯಕ್ಕಾಗಿ ೧೯೫೩ರಲ್ಲಿ ಆರಂಭಿಸಲಾದ ಮೈಸೂರು ಡೇನಿಷ್ ಪ್ರಾಜೆಕ್ಟ ಯೋಜನೆಯ ರೀತ್ಯಾ ವಯಸ್ಕರ ವಿದ್ಯಾಭ್ಯಾಸ ವಿದ್ಯಾಪೀಠ ಶಿಕ್ಷಣ ಕ್ರಮಗಳನ್ನು ಅರಿಯಲು ಸಂಸ್ಥಾನಕ್ಕೆ ಆಗಮಿಸಿರುವ ಡೆನ್ಮಾರ್ಕ್ ಜನತಾ ಶಿಕ್ಷಣ ಶಾಲೆಯ ಮತ್ತು ರಾಯಲ್ ಪಶುವೈದ್ಯ ಶಾಲೆಯ ಪ್ರಾಧ್ಯಾಪಕರುಗಳಾದ ಡಾ॥ ಜೆ. ನವರೂಪ್ ಮತ್ತು ಡಾ॥ ಎ ಮಿಲ್ತರ್ಸ್ನರವರುಗಳ ಗೌರವಾರ್ಥವಾಗಿ ನೆನ್ನೆ ವಯಸ್ಕರ ಶಿಕ್ಷಣ ಸಮಿತಿ ಕಛೇರಿಯಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಲಾಗಿತ್ತು. ಶ್ರೀಮತಿ ಅನಂತಲಕ್ಷ್ಮಮ್ಮನವರಿಂದ ಪ್ರಾರ್ಥನೆ ಯೂ, ಶ್ರೀಮತಿ ಶಾಂತರಾಜಮ್ಮಣ್ಣಿಯವರಿಂದ ಜಾನಪದಗೀತೆಯೂ, ಶ್ರೀ ಕೆ ಎಸ್ ರಾಜಗೋಪಾಲ್‌ರವರ ಶಿಷ್ಯರಿಂದ ನೃತ್ಯವೂ ಆದಮೇಲೆ ಸಮಿತಿಯ ಅಧ್ಯಕ್ಷ ಶ್ರೀನ ಭದ್ರಯ್ಯನವರು ಸ್ವಾಗತ ಭಾಷಣ ಮಾಡಿ ತಮ್ಮ ಸಂಸ್ಥೆಯ ಕಾರ್ಯಕಲಾಪಗಳನ್ನು ವಿವರಿಸಿದರು.

ಡಾ॥ ನವರೂಪ್‌ರವರು ಮಾತನಾಡಿ ಮಹಾ ಯುದ್ಧದನಂತರ ಡೆನ್ಮಾರ್ಕಿನಲ್ಲಿ ರಾಷ್ಟ್ರೀಯತೆಯಲ್ಲದೆ ಅಂತರರಾಷ್ಟ್ರೀಯ ಭಾವನೆಯ ಬೆಳವಣಿಗೆಗಾಗಿಯೂ ಶಿಕ್ಷಣ ಕೊಡಲಾಗುತ್ತಿರುವುದೆಂದೂ, ಅದರ ಅಂಗವಾಗಿ ನಾನಾ ದೇಶಗಳಿಗೆ ತಮ್ಮ ಯುವಕರನ್ನು ಕಳುಹಲಾಗುತ್ತಿರುವುದೆಂದೂ ತಿಳಿಸಿದರು. ಡಾ॥ ಮಿಲ್ತರ್ಸ್ನರು ಭಾಷಣ ಮಾಡಿ ಸಂಸ್ಥಾನದಲ್ಲಿ ಗ್ರಾಮಸ್ಥರ ಜೀವನದ ಉನ್ನತಿಗಾಗಿ ಕೊಡುತ್ತಿರುವ ಶಿಕ್ಷಣವನ್ನು ಪ್ರಶಂಸಿಸಿದರು

ಗೃಹಪ್ರವೇಶೋತ್ಸವ

ಭಾರತದ ಟೀ ಬೋರ್ಡಿನ ಸಬ್ ಇನ್ಸ್‌ಪೆಕ್ಟರ್ ಶ್ರೀ ಎಸ್. ಎ. ಎಸ್ ಅಯ್ಯರ್‌ರವರು ನಗರದ ಆದಿ ಪಂಪಾ ರಸ್ತೆಯಲ್ಲಿರುವ ಮಾದರಿ ಮನೆ ನಂಬರ್ ೨೩ ರ ಗೃಹಪ್ರವೇಶೋತ್ಸವವನ್ನು ಕಳೆದ ಸೋಮವಾರ ನೆರವೇರಿಸಿ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

CLASSES COMMENCED

B.A & B.Sc – English & Kannada

INTER : Eng, Kan, P C M & C B Z.

C.T.C., Old Agrahar, Mysore

ವಿವಾಹ ಮಹೋತ್ಸವಗಳು

ಮಹಾರಾಜಾ ಕಾಲೇಜಿನ ಹೆಡ್ ಕ್ಲಾರ್ಕ್ ಶ್ರೀ ಎಂ ವಿ. ವೆಂಕಟಕೃಷ್ಣಯ್ಯನವರು ತಮ್ಮ ಕುಮಾರ ಶ್ರೀ ಎಂ ವಿ ಶ್ರೀನಿವಾಸದಾಸರಿಗೆ ಅರಮನೆ ಸೆಂಟ್ರಲ್ ಕೋ-ಆಪರೇಟಿವ್ ಸೊಸೈಟಿಯ ಅಕೌಂಟೆಂಟರಾದ ಶ್ರೀ ಬಿ ಆರ್ ಜವರಾಯಪ್ಪನವರ ಪುತ್ರಿ ಸೌ॥ ವಿಶಾಲಾಕ್ಷಮ್ಮನನ್ನು ತಂದುಕೊಂಡು ಕಳೆದ ೧೭ನೇ ತಾರೀಖು ವಿವಾಹವನ್ನು ನಗರದಲ್ಲಿ ನಡೆಸಿದರು

ಮೈಸೂರು ನಗರಾಭಿವೃದ್ಧಿ ಸಮಿತಿ ಕಛೇರಿಯ ಶ್ರೀ ಹೆಚ್ ಆರ್. ಕೃಷ್ಣಮೂರ್ತಿಯವರು ತಮ್ಮ ಮಗಳು ಸೌ॥ ಹೆಚ್. ಕೆ ಯಶೋದಾರವರನ್ನು ಶ್ರೀ ಜಿ ಎಸ್ ಸುಬ್ಬರಾಯರ ಸೋದರಳಿಯ ಶ್ರೀ ಜಿ ಪಿ. ಕೃಷ್ಣರಾಯರಿಗೆ ಕೊಟ್ಟು ಕಳೆದ ಸೋಮವಾರ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ರುದ್ರಪಟ್ಟಣದ ಶ್ರೀ ಆರ್ ವಿ ಸುಬ್ಬರಾಯರು ತಮ್ಮ ಸಹೋದರಿ ಸೌ॥ ಭಾಗ್ಯಲಕ್ಷ್ಮಿಯನ್ನು ಮರೂರಿನ ಗುಂಡಪ್ಪನವರ ಕುಮಾರ ಶ್ರೀ ರಾಮಯ್ಯನವರಿಗೆ ಕೊಟ್ಟು ಕಳೆದ ಸೋಮವಾರ ನಗರದಲ್ಲಿ ವಿವಾಹವನ್ನು ಜರುಗಿಸಿದರು

ನಗರದಲ್ಲಿರುವ ಪ್ರಿಂಟಿಂಗ್ ಮಿಷಿನ್ ಮೆಕ್ಯಾನಿಕ್ ಶ್ರೀ ಎಲ್ ಲಕ್ಷ್ಮಣಸಿಂಗ್‌ರವರು ತಮ್ಮ ಕುಮಾರಿ ಸೌ॥ ಎಲ್ ಶಾಂತಾಬಾಯಿಯನ್ನು ಗುಂಡ್ಲುಪೇಟೆಯಲ್ಲಿರುವ ನಿವೃತ್ತ ಪೋಲೀಸು ನೌಕರರಾದ ಶ್ರೀ ಜಯಸಿಂಗ್‌ರವರ ಪುತ್ರ ಶ್ರೀ ಜೆ ಹನುಮಾನ್‌ಸಿಂಗ್‌ರವರಿಗೆ ಕೊಟ್ಟು ಕಳೆದ ಸೋಮವಾರ ಪಶ್ಚಿಮವಾಹಿನಿಯಲ್ಲಿ ವಿವಾಹವನ್ನು ಬೆಳಸಿದರು

ಗುಂಡ್ಲುಪೇಟೆ ನಿವೃತ್ತ ಶಾಲಾ ಅಧ್ಯಾಪಕರಾದ ಶ್ರೀ ಕೆ ಕೃಷ್ಣಪ್ಪನವರು ತಮ್ಮ ಸಹೋದರ ಶ್ರೀ ಚಂದ್ರಶೇಖರ ಘನಪಾಠಿಗಳ ಕುಮಾರಿ ಸೌ॥ ಶಾರದಾಂಬನನ್ನು ಮೈಸೂರಿನ ಶ್ರೀ ಗಂಗಾಧರಶಾಸ್ತ್ರಿಗಳ ಕುಮಾರ ಶ್ರೀ ಹೆಚ್. ಎಸ್ ಕೃಷ್ಣಮೂರ್ತಿಯವರಿಗೆ ಕೊಟ್ಟು ನಂಜನಗೂಡಿನಲ್ಲಿ ಕಳೆದ ಸೋಮವಾರ ವಿವಾಹವನ್ನು ನೆರವೇರಿಸಿದರು

GRAND ATTRACTION

Group & Flash

PHOTOGRAPHS

Role Film Developing Printing & Enlarging Undertaken

SRI KANTH STUDIO

Near Prabha Talkies

Mysore

Your [illegible] rd Size Photo Re One only

ವೆಚ್ಚದ ಮೇಲಿನ ತೆರಿಗೆಯಲ್ಲಿ ರಿಯಾಯಿತಿ ಸಂಭವ

ಕೇಂದ್ರ ಹಣಕಾಸು ಮಂತ್ರಿ ಶ್ರೀ ಟಿ. ಟಿ ಕೃಷ್ಣಮಾಚಾರಿಯವರನ್ನು ಮೊನ್ನೆ ಕಲ್ಕತ್ತದಲ್ಲಿ ವಾಣಿಜ್ಯೋದ್ಯಮಿಗಳ ನಿಯೋಗವೊಂದು ಭೇಟಿ ಮಾಡಿದಾಗ ಹೊಸ ತೆರಿಗೆಗಳಲ್ಲಿ ಮೂಲಭೂತ ಬದಲಾವಣೆ ಮಾಡದಿದ್ದರೂ, ವೆಚ್ಚದ ಮೇಲೆ ವಿಧಿಸಿರುವ ತೆರಿಗೆಯಲ್ಲಿ ಹಲವು ಸಣ್ಣ ರಿಯಾಯಿತಿಗಳನ್ನು ತೋರುವುದಾಗಿ ಅವರು ತಿಳಿಸಿದರೆಂದು ವರದಿಯಾಗಿದೆ

ಷಾರ್ಟ್‌ಹ್ಯಾಂಡ್ ಪರೀಕ್ಷೆಯಲ್ಲಿ ನಗರದ ವಿದ್ಯಾರ್ಥಿಗೆ ಪ್ರಥಮ ಸ್ಥಾನ

ನಗರದ ವಸಂತ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಸಂಸ್ಥೆಯ ಶ್ರೀ ಕೆ. ಸುಬ್ರಹ್ಮಣ್ಯಂ ಎಂಬ ವಿದ್ಯಾರ್ಥಿಯು ಕಳೆದ ಏಪ್ರಿಲ್ಲಿನಲ್ಲಿ ನಡೆದ ಇಂಗ್ಲಿಷ್ ಸೀನಿಯರ್ ಷಾರ್ಟ್‌ಹ್ಯಾಂಡ್ ಪರೀಕ್ಷೆಯಲ್ಲಿ ಸಂಸ್ಥಾನಕ್ಕೇ ಪ್ರಥಮ ಸ್ಥಾನವನ್ನು ಪಡೆದು ತೇರ್ಗಡೆಯಾಗಿದ್ದಾರೆ

ಮೈಸೂರು ಪೇಟೆ ಧಾರಣೆ

ರಸ್ತಬೂದಿ	೪೧ ೧೨	
ಕಡ್ಡಿ	೪೦ ೧೨	
ಕಾರ್ ಸಣ್ಣ	೩೭ ೦೦	
ಸಿಟಾಲ್ ಸಣ್ಣ	೨೮ ೫೦	
ರಾಗಿ	೪೪ ೫೦	೪೫ ೬೭
ಕಡಲೆಕಾಯಿ	೧೫ ೦೦	೨೦ ೪೭
ಎಳ್ಳು	೭೪ ೦೦	೭೯ ೬೨
ತೊಗರಿ	೪೭ ೨೫	೪೪ ೬೨
ಹೆಸರು	೪೨ ೭೫	೫೯ ೭೫
ಹಲಸಂದೆ	೨೮ ೮೭	೫೭ ೫೦
ಕಡಲೆ	೫೦ ೫೦	೬೦ ೦೦
ಅವರೆ	೪೫ ೦೦	೫೬ ೦೦
ಕೊಬ್ಬರಿ	೨೬ ೧೨	೪೧ ೦೦
ಹುಣಸೆಬೀಜ	೪ ೦೦	
ಸೀಗೆಕಾಯಿ	೭ ೬೯	೭ ೮೧
ಹುಣಸೇಹಣ್ಣು	೪ ೪೧	೪ ೪೧
ಮೆಣಸಿನಕಾಯಿ	೧೦ ೫೦	೧೯ ೦೦
ತೆಂಗಿನಕಾಯಿ	೧೬೦ ೦೦	೨೪೦ ೫೦

ಅಪಮಾನದ ಭಯಕ್ಕಾಗಿ ಅಮೇರಿಕಾ ವಿಜ್ಞಾನಿಯ ಆತ್ಮಹತ್ಯೆ

ಅಮೇರಿಕದ ಸುಪ್ರಸಿದ್ಧ ಜೀವ ವಿಜ್ಞಾನಿ ವಿಲಿಯಂ ಷೆರ್‌ವುಡ್ ಎಂಬುವವರು ತಾವು ಅಲ್ಲಿನ ಶಾಸನ ಸಭೆಯ ರಾಷ್ಟ್ರದ್ರೋಹ ಚಟುವಟಿಕೆಗಳ ತನಿಖಾ ಸಮಿತಿಯ ಮುಂದೆ ಸಾಕ್ಷ್ಯ ಕೊಡುವುದರಿಂದ ತಮ್ಮ ಕೀರ್ತಿಗೆ ಕಳಂಕವುಂಟಾಗುವುದೆಂಬ ಭಯದಿಂದ ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿದೆ ಅವರನ್ನು ಏತಕ್ಕಾಗಿ ಸಮಿತಿಯು ಕರೆಸುವುದೆಂಬುದು ಅವರಿಗೆ ತಿಳಿದಿರಲಿಲ್ಲವೆಂದೂ, ಅದರೆ ಅಲ್ಲಿಗೆ ಹೋದರೆ ಮುಂದೆ ಉಂಟಾಗುವ ಅಪಪ್ರಚಾರದಿಂದ ತಮ್ಮ ಜೀವನಕ್ಕೆ ಧಕ್ಕೆಯೊದಗುವುದೆಂಬ ಭಯದಿಂದ ಆತ್ಮಹತ್ಯೆ ಮಾಡಿಕೊಂಡರೆಂದೂ ಹೇಳಲಾಗಿದೆ

೩೦ ಜನ ನಾಗಾ ದೌರ್ಜನ್ಯಕಾರರ ಶರಣಾಗತಿ

ಕಳೆದ ವಾರದಲ್ಲಿ ಸುಮಾರು ೩೦ ಮಂದಿ ನಾಗಾ ದೌರ್ಜನ್ಯಕಾರರು ತಮ್ಮ ಶಸ್ತ್ರಾಸ್ತ್ರಗಳ ಸಮೇತ ಜಪುರಾಂಗ್ ವಿಭಾಗದ ಮುಖಂಡ ಜಮಿರಾರ್ ಎಂಬಾತನ ನೇತೃತ್ವದಲ್ಲಿ ಭಾರತದ ಸೈನ್ಯ ಪಡೆಗಳಿಗೆ ಶರಣಾಗತರಾದರು

ಮನೆ ಮಾರಾಟಕ್ಕಿದೆ

ಡೋರ್ ನಂ 1233 ಕೃಷ್ಣಮೂರ್ತಿಪುರಂ.

ಕಾರಸಿ ಮತ್ತು ಮಂಗಳೂರು ಹೆಂಚಿನ ವಿಶಾಲವಾದ, ಸಲ್ಲಿ, ದೇವ ಉಳ್ಳ ಮನೆ, ವಿವರಗಳಿಗೆ

ಎಗ್. ಜಿ. ಶ್ರೀನಿವಾಸಮೂರ್ತಿ

C/o ಜಯ ಅಂಡ್ ಕಂಪನಿ,

ಮನೆ ಜಮೀನು ಏಜೆಂಟರು, ಹಳೇ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು • ಫೋನ್ ನಂ 520

Edited, Printed and Published by A. R. Nagarajan at Sadhvi Press, D[illegible] Road, Mysore

ಚಾಮುಂಡೇಶ್ವರಿ ಟಾಕೀಸ್

21-6-57 ರಿಂದ. ವಿಜೃಂಭಣೆಯ 3 ನೇ ವಾರ : ಪ್ರತಿದಿನ 2 ಪ್ರದರ್ಶನಗಳು

ಕಾಮಧೇನು ಫಿಲಂಸ್ ರವರ ಕನ್ನಡ ಚಿತ್ರ ★ ಸತೀ ನಳಾಯಿನಿ

ಭೂಮಿಕೆ : ಪಂಡರಿಬಾಯಿ, ಮೈನಾವತಿ, ಜಯಶ್ರೀ, ರಾಜಕುಮಾರ್. ನರಸಿಂಹರಾಜು, ಸಿದ್ಧಯ್ಯಸ್ವಾಮಿ ಮುಂತಾದವರು

ನೃತ್ಯ : ರೀಟಾ, ರಂಭಾ ಮತ್ತು ಲಕ್ಷ್ಮೀರಾಜ್ಯಂ] [ನಾರಾಯಣನ್ ಅಂಡ್ ಕಂಪೆನಿ ರಿಲೀಸ್

ವುಡ್‌ಲ್ಯಾಂಡ್ಸ್ ★ 21 6 57 ರಿಂದ : ಅಮೋಘ ಪ್ರಾರಂಭ

ಜ್ಯುಪಿಟರ್ ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಕರು ಪ್ಪೂಕ್ಕರಸಿ ★

ಪಾತ್ರ ವರ್ಗ — ಜೆಮಿನಿ ಗಣೇಶ, ಸಾವಿತ್ರಿ, ನಂಬಿಯಾರ್, ತಂಗವೇಲು, ಜಿ ವರಲಕ್ಷ್ಮಿ, ಎಂ. ಕೆ ರಾಧಾ ಮುಂತಾದವರು

[ಶ್ರೀ ರಾಘವೇಂದ್ರಾ ರಿಲೀಸ್

ಬಹು ಜನಗಳು ತೆಲುಗು 'ಮಾಯಾಬಜಾರ್' ನೋಡಬೇಕೆಂದು ಅಪೇಕ್ಷೆ ಪಡುತ್ತಿರುವುದರಿಂದ

ಪ್ರಭು ದೇವಾ ಥಿಯೇಟರ್

(ಪದ್ಮಾ ಟಾಕೀಸ್)

21-6-57 ನೇ ಶುಕ್ರವಾರದಿಂದ : ಅಮೋಘವಾದ 11 ನೆಯ ವಾರ : ವಿಜಯಾ ರವರ

(ತೆಲುಗು) ಮಾಯಾಬಜಾರ್

ಪಾತ್ರ:— ಎ. ನಾಗೇಶ್ವರರಾವ್, ರೇಲಂಗಿ, ಸಿ.ಎಸ್ ಆರ್, ಮುಕ್ಕಾಮಲ, ಎಸ್. ವಿ ರಂಗರಾವ್, ಎನ್. ಟಿ. ರಾಮರಾವ್, ಸಾವಿತ್ರಿ ಮುಂತಾದವರು

VASANTHA INSTITUTE OF COMMERCE

Narayana Sastry Road, Mysore

RECORD OF RESULTS THIS YEAR

Junior Typewriting : 55 per cent (1 I Class and 14 II Classes) THE ONLY FIRST CLASS FOR THE CITY. Senior Typewriting : 30 per cent (1 II Class) Shorthand Junior : 30 per cent (3 II Classes). Shorthand Senior : 40 per cent (1 I Class). Banking Senior and Practice of Commerce . 100 per cent

Aggregate Pass of LADY STUDENTS : 88 per cent

★ ★ ★ ★

V. V MOHALLA BRANCH

Junior Typewriting : 37 per cent. (5 II Classes, Senior Typewriting : 30 per cent (2 II Classes, Shorthand Junior : 45 per cent (1 I Class, 3 II Classes, Shorthand Senior : 33 per cent (Only one I Class for the State).

The only First Class for the whole State in Senior Shorthand

Admissions Being Received

Separate facilities for Lady Students

Grand Gala Opening : From 21-6-57 Daily Two shows

★ AT SRI GAYATHRI TALKIES

Metro Goldwyn Mayer's ★ BHOWANI JUNCTION ★ With:— Ava Gardner, Stewart Granger

(IN CINEMASCOPE & TECHNICOLOR)

ರಿಜಿಸ್ಟರ್ಡ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಸಾಧ್ವಿ

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೮] SADHVI : FRIDAY 21—6—1957 ಮೈಸೂರು : ಶುಕ್ರವಾರ ೨೧—೬—೧೯೫೭ : [ಸಂಚಿಕೆ : ೩೧೭

ದಕ್ಷತೆ, ಪ್ರಾಮಾಣಿಕತೆ, ಮಿತವ್ಯಯಕ್ಕಾಗಿ ಕೇಂದ್ರದ ಕ್ರಮ

ಇನ್‌ಫ್ಲುಯೆಂಜಾದಿಂದ ವಿಧಾನ ಸಭೆಗೆ ವಿರಾಮ

ಬೆಂಗಳೂರು ೨೧

ಬರುವ ತಿಂಗಳು ೧೦ನೇ ತಾರೀಖಿನವರೆಗೂ ನಡೆಯಬೇಕಾಗಿದ್ದ ವಿಧಾನ ಸಭಾಧಿವೇಶನವು ಇನ್‌ಫ್ಲುಯೆಂಜಾ ನಿಮಿತ್ತ ಈ ವಾರಾಂತ್ಯದಲ್ಲಿ ಮುಗಿಯುವುದೆಂದು ಗೊತ್ತಾಗಿದೆ ಬಹುಶಃ ಸಭೆಯು ಜುಲೈ ೧೫ರ ನಂತರ ಪುನಃ ಸೇರಬಹುದು

ವಿಧಾನ ಸಭಾಧ್ಯಕ್ಷರು ಮತ್ತು ಮಂತ್ರಿಗಳ ಮನೆಯಲ್ಲಿ ಫ್ಲೂ

ವಿಧಾನ ಸಭಾಧ್ಯಕ್ಷರ ಮನೆಯಲ್ಲಿ ಹಲವರು, ಸ್ಥಳೀಯ ಸಂಸ್ಥೆ ಸಚಿವರ ಮನೆಯಲ್ಲಿ ಐವರು ಫ್ಲೂವಿನಿಂದ ನರಳುತ್ತಿರುವರೆಂದೂ, ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರಿಗೆ ಫ್ಲೂ ಬರುವ ಸೂಚನೆಗಳಿವೆಯೆಂದೂ ಮತ್ತು ಸಚಿವ ಶ್ರೀ ಸಿ. ಎಂ. ಪೂಣಚ್ಚರವರಿಗೆ ಜ್ವರವು ಬರುತ್ತಿರುವುದೆಂದೂ ಹೇಳಲಾಗಿದೆ

ವಿಧಾನ ಸಭೆಯಲ್ಲಿ ಪ್ರಶ್ನೋತ್ತರ ಕಾಲ ರದ್ದು

ವಿಧಾನ ಸಭೆಯಲ್ಲಿ ಮಸೂದೆಗಳ ಪರಿಶೀಲನೆಗೆ ಹೆಚ್ಚು ಕಾಲ ವಿನಿಯೋಗಿಸುವುದಕ್ಕಾಗಿ ನಿತ್ಯ ವೂ ಸಭಾ ಪ್ರಾರಂಭದಲ್ಲಿ ನಡೆಯುತ್ತಿದ್ದ ಪ್ರಶ್ನೋತ್ತರಗಳ ಕಾರ್ಯಕ್ರಮವನ್ನು ರದ್ದುಮಾಡಲು ನಿರ್ಧರಿಸಲಾಗಿರುವುದೆಂದು ವಿಧಾನ ಸಭಾಧ್ಯಕ್ಷ ಶ್ರೀ ಎಸ್ ಆರ್. ಕಂಠಿಯವರು ನೆನ್ನೆ ಸಭೆಯಲ್ಲಿ ತಿಳಿಸಿದರು. ಶ್ರೀ ಕೆ. ಪುಟ್ಟಸ್ವಾಮಿಯವರು ಪ್ರಶ್ನೋತ್ತರ ಕಾಲವು ಸಭಾ ಕಾರ್ಯಕ್ರಮದ ಮುಖ್ಯ ಭಾಗವೆಂದು ಆಕ್ಷೇಪಣೆ ಮಾಡಲಾಗಿ ಸಭಾಧ್ಯಕ್ಷರು ಉತ್ತರವಿತ್ತು, ಈಗ ೨೦-೨೫ ಪ್ರಶ್ನೆಗಳು ಉಳಿದಿರುವುದರಿಂದ ಅವನ್ನು ೧ ದಿನದಲ್ಲಿ ಪೂರೈಸಬಹುದೆಂದೂ ಹೇಳಿದರು. ಇತರ ಪ್ರಶ್ನೆಗಳಿಗೆ ಸರ್ಕಾರದವರು ಉತ್ತರವನ್ನು ಒದಗಿಸಿಲ್ಲವೆಂದೂ ಅವರು ತಿಳಿಸಿದರು

ಗ್ಯಾಲನ್ ಪೆಟ್ರೋಲಿಗೆ ಆರು ಆಣೆ ತೆರಿಗೆ

ವಿಧಾನ ಸಭೆಯಲ್ಲಿ ನೆನ್ನೆ ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಮೋಟಾರು ಸ್ಪಿರಿಟ್ ಮಾರಾಟ ತೆರಿಗೆ ಮಸೂದೆಯನ್ನು ಮಂಡಿಸಿದರು. ಸಂಸ್ಥಾನದಲ್ಲೆಲ್ಲಾ ಒಂದೇ ರೀತಿಯ ತೆರಿಗೆಯನ್ನು ಹಾಕುವ ಬಗ್ಗೆ ಮಸೂದೆಯನ್ನು ತರಲಾಗಿದೆ. ಅದರ ಪ್ರಕಾರ ಒಂದು ಗ್ಯಾಲನ್ ಪೆಟ್ರೋಲಿನ ಮೇಲೆ ೩೭ ನಯೆ ಪೈಸೆಯನ್ನು ತೆರಿಗೆ ವಿಧಿಸಲಾಗುವುದು. ಇತರ ಮೋಟಾರು ಸ್ಪಿರಿಟ್ಟುಗಳಿಗೆ ೧೯ ನಯೆ ಪೈಸೆ ತೆರಿಗೆಯನ್ನು ವಿಧಿಸಲಾಗುವುದು.

ಟೆಲಿಫೋನ್ ತೊಂದರೆ

ಸ್ವಂ ಸು. ಪೋ] ನಂಜನಗೂಡು ೨೧

ನಂಜನಗೂಡಿನಿಂದ ಮೈಸೂರಿಗೆ ಟೆಲಿಫೋನ್ ಸುದ್ದಿ ಮುಟ್ಟಿಸಲು ಗಂಟೆಗಟ್ಟಲೆ ತಾವ ಕಾಶವಾಗುತ್ತಿರುವ ಅಂಶವನ್ನು ಅಧಿಕಾರಿಗಳ ಗಮನಕ್ಕೆ ತರಲು ಬೆಂಗಳೂರಿಗೆ ನಿಯೋಗ ಹೋಗಬೇಕೆಂದೂ, ಪರಿಹಾರ ದೊರೆಯದಿದ್ದರೆ ಟೆಲಿಫೋನಿಗೆ ಬಹಿಷ್ಕಾರ ಹಾಕಬೇಕೆಂದೂ ನಿನ್ನೆ ಶ್ರೀ ಜಿ ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಮಂತ್ರಿಗಳಿಗಾಗಿ ಹೊಸ ಭವನ ಮತ್ತು ಮೋಟಾರು ಬೇಡ

ಸಚಿವರುಗಳಿಗೆ ನೆಹರೂರವರ ಸೂಚನೆ

ಪ್ರಧಾನಿ ನೆಹರೂರವರು ಯೂರೋಪು ಪ್ರವಾಸಕ್ಕೆ ಹೊರಡುವ ಮುಂಚೆ ಸಂಸ್ಥಾನಗಳ ಮುಖ್ಯ ಮಂತ್ರಿಗಳಿಗೆ ಪತ್ರವೊಂದನ್ನು ಬರೆದು, ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಉಪಯೋಗಿಸುತ್ತಿರುವ ಹೆಚ್ಚು ಸಂಖ್ಯೆಯ ಮೋಟಾರುಗಳನ್ನು ಕಡಿಮೆ ಮಾಡಬೇಕೆಂದೂ, ಹೊಸ ಕಾರುಗಳನ್ನು ಕೊಳ್ಳಬಾರದೆಂದೂ ತಿಳಿಸಿರುತ್ತಾರೆ ಮಂತ್ರಿಗಳು, ಅಧಿಕಾರಿಗಳು ಮತ್ತು ಇತರ ರಾದಿಗಳಿಗೆಯೇ ಆಗಲಿ ದೊಡ್ಡದೊಡ್ಡ ವಸತಿ ಗೃಹಗಳನ್ನು ಕಟ್ಟಬಾರದೆಂದೂ, ಈ ಜನ್ಮ ಜನನದಿಂದ ಅವರ ಘನತೆಯು ಹೆಚ್ಚುವುದಿಲ್ಲವೆಂದೂ ನೆಹರೂರವರು ತಿಳಿಸಿರುವರು ಮಂತ್ರಿ ಆಲಯಗಳಲ್ಲಿ ವಿದ್ಯುಚ್ಛಕ್ತಿ ಬಳಕೆ, ಮೋಟಾರು ವೇಗನ ಹಂತ ರವಾನೆ ಮತ್ತು ಕಾಗದ ಇವುಗಳಲ್ಲೂ ಮಿತವ್ಯಯಕ್ಕಾಗಿ ನೆಹರೂರವರು ಸೂಚಿಸಿ, ವಿದೇಶೀ ವಿನಿಮಯ ಸ್ಥಿತಿಯನ್ನು ವರ್ಣಿಸಿ, ಅದನ್ನು ಗಮನಿಸದಿದ್ದರೆ ಭಾರಿ ಬಿಕ್ಕಟ್ಟುಂಟಾಗುವುದೆಂದು ಹೇಳಿರುವರು

ಹಂಗೇರಿಯಲ್ಲಿ ರಷ್ಯದ ಮಿಲಿಟರಿ ಕಾರ್ಯಕ್ರಮ

ವಿಶ್ವಸಂಸ್ಥೆಯ ತನಿಖಾ ಮಂಡಲದ ವರದಿ

ಕಳೆದ ಹೇಮಂತ ಋತುವಿನಲ್ಲಿ ಹಂಗೇರಿಯಲ್ಲಿ ನಡೆದ ರಾಷ್ಟ್ರೀಯ ದಂಗೆಯನ್ನು ದಮನ ಮಾಡಲು ರಷ್ಯವು ಬಲವಾದ ಮಿಲಿಟರಿ ಪಡೆಗಳನ್ನು ನುಗ್ಗಿಸಿತೆಂದು ವಿಶ್ವಸಂಸ್ಥೆಯ ತನಿಖಾ ಸಮಿತಿಯು ತನ್ನ ವರದಿಯಲ್ಲಿ ಸೂಚಿಸಿದೆ. ಹಂಗೇರಿಯ ಈಗಿನ ಪ್ರಧಾನಿ ಜಾನೋಸ್ ಕಾಡಾರ್‌ರವರು ಅಲ್ಲಿನ ಕಾರ್ಮಿಕರ ಶಕ್ತಿಯನ್ನು ನಾಶಪಡಿಸಲು ಹೆಚ್ಚೆಚ್ಚಿಗೂ ಕ್ರಮ ಕೈಗೊಳ್ಳುತ್ತಿರುವರೆಂದು ಸಮಿತಿಯವರು ಅಭಿಪ್ರಾಯಪಟ್ಟಿರುವರು. ಸಮಿತಿಯಲ್ಲಿ ಡೆನ್ಮಾರ್ಕ್, ಸಿಂಹಳ, ಟ್ಯುನೀಷಿಯಾ, ಉರುಗ್ವೆ ಮತ್ತು ಆಸ್ಟ್ರೇಲಿಯಾ ಪ್ರತಿನಿಧಿಗಳಿರುವರು. ಹಂಗೇರಿಯೊಳಗೆ ಹೋಗಿ ಪರಿಶೀಲನೆ ನಡೆಸಲು ಸಮಿತಿಗೆ ಅಲ್ಲಿನ ಸರ್ಕಾರದವರು ಅವಕಾಶ ಕೊಡದಿದ್ದುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಲಾಗಿದೆ. ವರದಿಯು ಸುಳ್ಳು,ಮತ್ತು ಜುಗುಪ್ಸೆ ಪಡಿಸುವ ಅಮೆರಿಕದ ಪ್ರಚಾರ ಸಾಧನವಾಗಿರುವುದಾಗಿ ಮಾಸ್ಕೋ ರೇಡಿಯೋವು ವ್ಯಾಖ್ಯಾನ ಮಾಡಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಪಿಟೀಲು ೭-೧೫ ಎಂ ಶ್ರೀನಿವಾಸಮೂರ್ತಿ-ದೇವರ ನಾಮ. ೭-೩೦ ಟಿ ಪಿ. ಸುಬ್ರಹ್ಮಣ್ಯಪಿಳ್ಳೆ-ನಾಗಸ್ವರ. ೮-೧೫ ಸಂಗೀತ. ಮಧ್ಯಾಹ್ನ ೧೨ ಎಂ. ಎಸ್. ಶೆಲ್ವಪಿಳ್ಳೆ ಅಯ್ಯಂಗಾರ್-ಸಂಗೀತ ೧೨-೩೦ ಬಾಲ ಜಗತ್. ೧-೫೦ ಪಿಟೀಲು ಸಂಜೆ ೬-೧೦ ವಚನ ೬ ನ. ೮ ಎಂ ಎಸ್. ಶೆಲ್ವಪಿಳ್ಳೆ ಅಯ್ಯಂಗಾರ್-ಸಂಗೀತ. ೮-೩೦ ರೇಡಿಯೋ ನ್ಯೂಸ್ ರೀಲ್. ೮ ೪೦-ಪ್ರಸಾರ ಗೀತೆ. ೯-೧೫ ಕೀರ್ತನ. ೯-೩೦ ರಾಷ್ಟ್ರೀಯ ಕಾರ್ಯಕ್ರಮ

ದಕ್ಷತೆ, ಪ್ರಾಮಾಣಿಕತೆ ಮತ್ತು ಮಿತವ್ಯಯಕ್ಕಾಗಿ ಕ್ರಮ

ಅಧಿಕಾರಿಗಳಿಗೆ ಕೇಂದ್ರ ಸರ್ಕಾರದ ಸೂಚನೆ

ಕೇಂದ್ರ ಸರ್ಕಾರದ ಆಡಳಿತದಲ್ಲಿ ದಕ್ಷತೆ, ಪ್ರಾಮಾಣಿಕತೆ ಮತ್ತು ಮಿತವ್ಯಯವನ್ನು ಸಾಧಿಸಲು ಮಂತ್ರಿಗಳು ಮತ್ತು ಇಲಾಖಾ ಕಾರ್ಯದರ್ಶಿಗಳು ತಮ್ಮ ಜರೂರು ಮತ್ತು ಸತತವಾದ ಗಮನವನ್ನೀಯುವಂತೆ ಕೇಂದ್ರ ಮಂತ್ರಿಮಂಡಲವು ಆದೇಶವಿತ್ತಿರುವುದಾಗಿ ವರದಿಯಾಗಿದೆ ಆಡಳಿತದ ವ್ಯವಸ್ಥೆ ಮತ್ತು ವಿಧಾನವಲ್ಲಿರುವ ದೋಷಗಳನ್ನು ತೆಗೆದುಹಾಕುವ ಬಗ್ಗೆ ಸೂಕ್ತ ಕ್ರಮ ಜರುಗಿಸಲೂ ಮತ್ತು ಪ್ರತಿಯೊಂದು ಹಂತದಲ್ಲೂ ಹೇಗೆ ಮತ್ತು ಎಷ್ಟು ಮಟ್ಟಿಗೆ ಕೆಲಸ ನಡೆದಿದೆಯೆಂಬುದನ್ನು ಪರಿಶೀಲಿಸಲೂ ವ್ಯವಸ್ಥೆ ಮಾಡುವಂತೆ ಕೋರಲಾಗಿದೆ ಅದಕ್ಕಾಗಿ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಲಾಗಿದೆ

ಜುಲೈ ೧ನೇ ತಾರೀಖಿನಿಂದ ಕಾಲೇಜುಗಳ ಪ್ರಾರಂಭ

ಇನ್‌ಫ್ಲುಯೆಂಜಾ ನಿಮಿತ್ತ ವಿಶ್ವವಿದ್ಯಾಲಯದ ಎಲ್ಲಾ ಕಾಲೇಜುಗಳು ಜುಲೈ ೧ನೇ ತಾರೀಖು ತೆರೆಯುವುವೆಂದು ರಿಜಿಸ್ಟ್ರಾರರು ತಿಳಿಸಿರುತ್ತಾರೆ

ಇನ್‌ಫ್ಲುಯೆಂಜಾ ಚಿಕಿತ್ಸೆ ನಡೆಯುವ ಆಸ್ಪತ್ರೆಗಳು

ನಗರದಲ್ಲಿ ಇನ್‌ಫ್ಲುಯೆಂಜಾ ಪೀಡಿತರಿಗೆ ಚಿಕಿತ್ಸೆ ಮಾಡಲು ಕೃಷ್ಣರಾಜೇಂದ್ರ ಆಸ್ಪತ್ರೆ, ಚಲುವಾಂಬಾ ಆಸ್ಪತ್ರೆ ಮತ್ತು ಅಂಟು ಜಾಡ್ಯಗಳ ಆಸ್ಪತ್ರೆಗಳಲ್ಲದೆ, ಸೇಠ್ ಮೋಹನದಾಸ್ ತುಳಸೀರಾಂ ಮಹಿಳಾ ಆಸ್ಪತ್ರೆ, ವಾಣಿವಿಲಾಸಪುರಂ ಆಸ್ಪತ್ರೆ, ಫಜರ್‌ಬಾದಿನ ನಾಗಮ್ಮ ಪೆರುಮಾಳ್ ಚೆಟ್ಟಿ ಹೆರಿಗೆ ಆಸ್ಪತ್ರೆ, ಹೆಚ್ ಹೆಚ್ ಎಂ ಓ ವಿ ಕ್ವಾರ್ಟರ್ಸ್ ಆಸ್ಪತ್ರೆ; ಹಳೇ ಅಗ್ರಹಾರ, ಚಾಮುಂಡಿಪುರ, ಕೃಷ್ಣಮೂರ್ತಿಪುರ, ಸರಸ್ವತಿಪುರ ಹಾರ್ಡಿಂಗೆ, ಎಂ ಎ ಆರ್. ಪಿ., ಹೆಚ್. ಹೆಚ್. ಎಂ. ಬಾಡಿಗಾರ್ಡ್, ನಜರಬಾದ್ ಮತ್ತು ನರಸಿಂಹರಾಜ ಮೊಹಲ್ಲಾ ಆಸ್ಪತ್ರೆಗಳಲ್ಲೂ ವ್ಯವಸ್ಥೆ ಮಾಡಲಾಗಿರುವುದೆಂದು ನಗರದ ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ

"ಫ್ಲೂ" ವ್ಯಾಧಿಗೆ ಮಾತ್ರ ಮುಂಡಲಿಯಲ್ಲಿ ಉಚಿತ ಔಷಧಿ

ನಗರದಲ್ಲಿ ದಿನೇದಿನೇ ಹಬ್ಬುತ್ತಿರುವ ಇನ್‌ಫ್ಲುಯೆಂಜಾ ವ್ಯಾಧಿಗೆ ಆಯುರ್ವೇದ ಪಂಡಿತ ಶ್ರೀ ಎಸ್. ಎಲ್ ಭಟ್ಟಾಚಾರ್ಯರಿಂದ ತಯಾರಿಸಲ್ಪಟ್ಟ ಔಷಧಿಯನ್ನು ಉಚಿತವಾಗಿ ಸಾರ್ವಜನಿಕರಿಗೆ ಒಂಟಿಕೊಪ್ಪಲಿನ ಮಾತೃ ಮಂಡಲಿಯಲ್ಲಿ ಕೊಡಲಾಗುತ್ತಿದೆ. ಇದನ್ನು ಸಾರ್ವಜನಿಕರು ಉಪಯೋಗಪಡಿಸಿಕೊಳ್ಳಬೇಕೆಂದು ಕೋರಿದೆ

ನಗರದಲ್ಲಿ ಫ್ಲೂ ವಿಂದ ಮರಣ ಸಂಭವಿಸಿಲ್ಲ

ನಗರದಲ್ಲಿ ಸಂಭವಿಸಿತ್ತೆಂದು ಪ್ರಕಟವಾಗಿದ್ದ ಎರಡು ಮರಣಗಳಿಗೆ ಇನ್‌ಫ್ಲುಯೆಂಜಾ ಕಾರಣವಲ್ಲವೆಂದು ನಗರದ ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ ಆಸ್ಪತ್ರೆಯಲ್ಲಿ ಮೃತಪಟ್ಟ ಚನ್ನಮ್ಮನು "ಎಂಟರಿಕ್" ಜ್ವರದಿಂದಲೂ ಮತ್ತು ಸ್ಟ್ಯಾನ್ಲಿ ಎಂಬ ೫ ವರ್ಷದ ಬಾಲಕನು ಪಲ್ಮನರಿ ಒಡೆಮಾ ಖಾಯಿಲೆಯಿಂದಲೂ ಸತ್ತರೆಂದೂ ತಿಳಿಸಲಾಗಿದೆ.

ಮಂಜಿನಲ್ಲಿ ಹಡಗುಗಳಿಗೆ ಡಿಕ್ಕಿಯಾಗಿ ೮ ಜನರ ಮರಣ

ಅಟ್ಲಾಂಟಿಕ್ ಸಾಗರದಲ್ಲಿ ಗ್ರೀಕರ ಒಂದು ವ್ಯಾಪಾರಿ ಹಡಗಿಗೂ ಅಮೆರಿಕದ ಎಣ್ಣೆ ಹಡಗಿಗೂ ಮೊನ್ನೆ ದಟ್ಟವಾದ ಮಂಜಿನಲ್ಲಿ ಡಿಕ್ಕಿಯಾಗಿ ಜ್ವಾಲೆಯು ಹತ್ತಿಕೊಂಡಿತೆಂದೂ, ಅದರಿಂದ ೮ ಜನ ನಾವಿಕರು ಮೃತಪಟ್ಟು ೧೦ ಮಂದಿ ಪತ್ತೆಯಿಲ್ಲವಾಗಿರುವರೆಂದೂ ವರದಿಯಾಗಿದೆ ವ್ಯಾಪಾರಿ ಹಡಗಿಗೆ ಹತ್ತಿದ್ದ ಬೆಂಕಿಯನ್ನು ಆರಿಸಲಾಯಿತು

ಕೇರಳದಲ್ಲಿ ಸ್ಕೂಲ್ ಫೈನಲ್ಲಿನವರಿಗೆ ಜವಾನರ ಕೆಲಸ

ಕೇರಳದಲ್ಲಿ ಸ್ಕೂಲ್ ಫೈನಲ್ ಆದವರು ಮತ್ತು ಹೆಚ್ಚಿನ ವಿದ್ಯಾ ಅರ್ಹತೆಯುಳ್ಳವರು ಜವಾನರ ಕೆಲಸಕ್ಕೆ ಅನರ್ಹರೆಂದು ಕೇರಳದ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ೨ ವರ್ಷಗಳ ಹಿಂದೆ ಮಾಡಿದ್ದ ನಿಯಮಾವಳಿಯನ್ನು ತೆಗೆದುಹಾಕಲಾಗಿರುವುದೆಂದು ಅಲ್ಲಿನ ಸರ್ಕಾರದ ಗೆಜೆಟ್ ಪ್ರಕಟಣೆಯು ತಿಳಿಸಿದೆ. ಜವಾನರ ಕೆಲಸಕ್ಕೆ ಅಂತಹವರೂ ಅರ್ಜಿ ಹಾಕಿಕೊಳ್ಳಬಹುದೆಂದು ಸೂಚಿಸಲಾಗಿದೆ.

ಹೊಸದಾಗಿ ೫೪ ಜನರಿಗೆ ಫ್ಲೂ

ನಗರದಲ್ಲಿ ಈಚೆಗೆ ೫೪ ಜನರಿಗೆ ಫ್ಲೂ ವ್ಯಾಧಿ ತಗಲಿರುವುದಾಗಿ ವರದಿಯಾಗಿದೆ ಒಟ್ಟು ೩೭೧ ರ ಪೈಕಿ ೪೩೯ ಜನರು ಗುಣಹೊಂದಿ, ೮೨ ಜನರು ಚಿಕಿತ್ಸೆ ಪಡೆಯುತ್ತಿರುವರು

ಜೋರಾಗಿ ಧ್ವನಿವರ್ಧಕವನ್ನು ಹಾಕಿದ್ದಕ್ಕೆ ಜುಲ್ಮಾನೆ

ಲಷ್ಕರ್ ಮೊಹಲ್ಲೆಯ ಒಂದು ಮದುವೆ ಮನೆಯಲ್ಲಿ ನಿಗದಿಯಾಗಿರುವುದಕ್ಕಿಂತ ಜೋರಾಗಿ ಧ್ವನಿವರ್ಧಕವನ್ನು ಹಾಕಿದುದಕ್ಕಾಗಿ ಶಂಕರ್ ಎಂಬಾತನಿಗೆ ಎರಡನೇ ಮ್ಯಾಜಿಸ್ಟ್ರೇಟರು ೫ ರೂ. ದಂಡ ವಿಧಿಸಿರುವರು.

೦ ಮಂಡಿ ಮೊಹಲ್ಲೆಯಲ್ಲಿ ನಿನ್ನೆ ರಾತ್ರಿ ಜೂಜಾಡುತ್ತಿದ್ದ ಷರೀಫ್ ಮತ್ತು ಇನ್ನೊಬ್ಬನನ್ನು ೬೫ ರೂ ಸಮೇತ ದಸ್ತಗಿರಿ ಮಾಡಲಾಗಿದೆ.

ಹೆಚ್ಚು ಸಂಬಳಕ್ಕಾಗಿ ಗುಡಿಸುವವರ ಪ್ರದರ್ಶನ

ನಂಜನಗೂಡು ೨೧

ನಂಜನಗೂಡಿನ ಕಸ ಗುಡಿಸುವವರು ಕಳೆದ ಸೋಮವಾರ ಊರಿನ ಎಲ್ಲಾ ಬೀದಿಗಳಲ್ಲೂ ಮೆರವಣಿಗೆ ನಡೆಸಿ, ತಮಗೆ ಇತರ ನೌಕರರಂತೆ ಹೆಚ್ಚು ಸಂಬಳ ಕೊಡಬೇಕೆಂದೂ, ಸಂಬಳವನ್ನು ಹೆಚ್ಚಿಸದಿದ್ದಲ್ಲಿ ಬರುವ ತಿಂಗಳು ಎರಡನೇ ತಾರೀಖಿನಿಂದ ಮುಷ್ಕರ ಹೂಡುವುದಾಗಿಯೂ ಘೋಷಣೆಗಳನ್ನು ಕೂಗುತ್ತಾ ಪ್ರದರ್ಶನ ನಡೆಸಿದರೆಂದು ವರದಿಯಾಗಿದೆ

ಫ್ಲೂ ವ್ಯಾಧಿ ತಡೆಗಟ್ಟಲು ಕ್ರಮ

ಇಲ್ಲಿನ ಪೌರಸಭೆಯ ವಿಶೇಷ ಸಭೆಯು ಶ್ರೀ ವೈ. ಕೆ ಎಸ್. ಲಕ್ಷ್ಮಣಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದು ಊರಿನಲ್ಲಿ ಫ್ಲೂ ವ್ಯಾಧಿಯು ಹತೋಟಿಗೆ ಬರುವವರೆಗೆ ಒಂದುವಾರ ಶಾಲಾ ಕಾಲೇಜುಗಳು ಮತ್ತು ಹೋಟೆಲುಗಳನ್ನು ಮುಚ್ಚಿಡತಕ್ಕದ್ದೆಂದು ನಿರ್ಧರಿಸಲಾಯಿತು

ವಿಜಯ ಬ್ಯಾಂಕ್ ಶಾಖೆಯ ಆರಂಭ

ಮೈಸೂರು ೨೦

ಮಂಗಳೂರಿನ ವಿಜಯಾ ಬ್ಯಾಂಕ್ ಶಾಖೆಯೊಂದು ಇಂದಿನಿಂದ ಈ ಊರಿನ ಸಂತೆಪೇಟೆಯಲ್ಲಿ ಏರ್ಪಾಡಾಗಲಿರುವ ಸಂಬಂಧವಾಗಿ [illegible] ಟೌನ್ ಹಾಲಿನಲ್ಲಿ ಮಾಜಿ ಮಂತ್ರಿ ಸಚಿವರಾದ ಶ್ರೀ ಹೆಚ್ ಕೆ ವೀರಣ್ಣಗೌಡರು ಅವರ ಆರಂಭೋತ್ಸವವನ್ನು ನೆರವೇರಿಸಿದರು

ಪ್ರಾರ್ಥನೆಯಾದನಂತರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸುಂದರರಾಮ ಶೆಟ್ಟರು [illegible] ಮಾಡಿ, ಕಳೆದ ೩೫ ವರ್ಷಗಳಿಂದಲೂ ಅದು [illegible] ಸಾರ್ವಜನಿಕ ಸೇವೆಯನ್ನು ಮಾಡಿ ಪ್ರಗತಿ [illegible] ಹೊಂದುತ್ತಿರುವ ಅಂಶವನ್ನು ವಿವರಿಸಿದರು

ಶ್ರೀಗಳಾದ ಚೌಡಯ್ಯ ಮತ್ತು ಹಚ್ [illegible] ಸುಬ್ಬರಾಯರು ಬ್ಯಾಂಕಿಗೆ ಯಶಸ್ಸನ್ನು ಕೋರಿ ಭಾಷಣ ಮಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬ್ಯಾಂಕುಗಳಿಂದ ವ್ಯಾಪಾರಸ್ಥರಿಗೆ ಆಗುವ ಪ್ರಯೋಜನಗಳನ್ನು ವಿವರಿಸಿದರು ಶ್ರೀ ಸದಾನಂದ ಹೆಗಡೆಯವರಿಂದ ವಂದನಾರ್ಪಣೆಯಾದನಂತರ [illegible] ಸಭೆಯು ಮುಗಿಯಿತು

ಮೈತ್ರಿಣ ಕಲಾ ಸಂಘ

ಮೇಲ್ಕಂಡ ಸಂಘದ ಸರ್ವ ಸದಸ್ಯರ ಸಭೆಯು ನೆನ್ನೆ ನಡೆದು ಉಪಸಮಿತಿಯಿಂದ ತಯಾರಿಸಲ್ಪಟ್ಟಿದ್ದ ನಿಯಮಾವಳಿಗಳನ್ನು ಪರಿಶೀಲಿಸಿ ಅಂಗೀಕರಿಸಲಾಯಿತು ಶ್ರೀ ಜಿ ಆರ್ ಜೋಸ್ಯರ್‌ರವರು ಅಧ್ಯಕ್ಷರಾಗಿಯೂ ಶ್ರೀ [illegible] ರಂಗಯ್ಯನವರು ಉಪಾಧ್ಯಕ್ಷರಾಗಿಯೂ ಶ್ರೀ ಎಸ್ ಪಿ ಸುರೇಂದ್ರನಾಥ್‌ರವರು ಪ್ರಧಾನ ಕಾರ್ಯದರ್ಶಿಯಾಗಿಯೂ ಶ್ರೀ ಎಸ್ ಆರ್ ಶಿವರಾಂರವರು ಸಹ ಕಾರ್ಯದರ್ಶಿಯಾಗಿಯೂ ಶ್ರೀ ನಾರಾಯಣರಾಜುರವರು ಖಜಾಂಚಿಯಾಗಿಯೂ ಮತ್ತು ಹತ್ತು ಜನರು ಸದಸ್ಯರಾಗಿಯೂ ಇರುವ ಕಾರ್ಯ ನಿರ್ವಾಹಕ ಮಂಡಲಿಯನ್ನು ಚುನಾಯಿಸಲಾಯಿತು

ಸೀತಾ ಸದನದ ವ್ಯವಹಾರಗಳು

ಚಾಮುಂಡಿಪುರದ ಸೀನಿರುಕಟ್ಟೆಯಲ್ಲಿರುವ ಸೀತಾ ಸದನದ ಶಿಶು ವಿಹಾರದ [illegible] ನಡೆಯುತ್ತಿರುವ ವಿಚಾರದಲ್ಲಿ ಹಲವು [illegible] ಪತ್ರಿಕೆಗಳಲ್ಲಿ ಪ್ರಕಟವಾಗಿ [illegible] ಸದನದ ಕಾರ್ಯದರ್ಶಿನಿ ಶ್ರೀಮತಿ [illegible] ಮೂರ್ತಿಯವರು ಪತ್ರ ಬರೆದು, [illegible] ಅಪಪ್ರಚಾರ ನಡೆಸಲಾಗಿದೆಯೆಂದೂ [illegible] ಶಿಶು ವಿಹಾರದಲ್ಲಿ [illegible] ಹಾಕಲಾಗಿರುವುದೆಂದೂ, ಒಂದು ತರಗತಿಯನ್ನು ಯಾವ ದಂಡವನ್ನೂ ವಸೂಲು ಮಾಡುತ್ತಿಲ್ಲವೆಂದೂ, ಈ ಸದನವು ಬಡವರು ಮತ್ತು ಮಧ್ಯಮ ವರ್ಗದವರಿಗೆ ಉಪಯುಕ್ತವಾಗಿರುವ ವಿಷಯವು ಸದನಕ್ಕೆ ಬಂದು ವಿಚಾರಿಸಿದರೆ ತಿಳಿಯುವುದೆಂದೂ, ಲೇಖನ ಬರೆದವರು ನಿಜವಾಗಿ ಈ ಸಮಾಜದ ಹಿತೈಷಿಗಳಾಗಿದ್ದ ಪಕ್ಷದಲ್ಲಿ ಸದನಕ್ಕೆ ಬಂದು ವಿಚಾರಿಸಬೇಕಲ್ಲದೆ, ಅವರೂ ಸಮಾಜಕ್ಕಾಗಿ ದುಡಿಯಬೇಕೆಂದೂ, ಸುಮ್ಮನೆ ಅಪಪ್ರಚಾರ ಮಾಡಬಾರದೆಂದೂ ತಿಳಿಸಿರುವರು

ಮನೆ ಮಾರಾಟಕ್ಕಿದೆ

ಡೋರ್ ನಂ 1283 ಕೃಷ್ಣಮೂರ್ತಿಪುರಂ

ಹಾರಿಸಿ ಮತ್ತು ಮಂಗಳೂರು ಹೆಂಚಿನ ವಿಶಾಲವಾದ, ನಲ್ಲಿ, ದೀಪ ಉಳ್ಳ ಮನೆ ವಿಚಾರಿಸಿ

ಎಸ್. ಜಿ ಶ್ರೀನಿವಾಸಮೂರ್ತಿ

C/o ಜಯ ಅಂಡ್ ಕಂಪನಿ,

ಹೊಸ ಜಮಾನು ಬಿಲ್ಡಿಂಗ್ಸ್ ಹಳೇ ಮೈಸೂರು ಬ್ಯಾಂಕ್ ರಸ್ತೆ

ಮೈಸೂರು ಫೋನ್ ನಂ 520

ಕ್ರಿಸ್ತ ಮತಕ್ಕೆ ಬಿದರೆ ಹರಿಜನರ ಪರಿವರ್ತನೆ

ಹರಿಜನರ ಬಗ್ಗೆ ತಾತ್ಸಾರಕ್ಕಾಗಿ ವಿಧಾನ ಸಭೆಯಲ್ಲಿ ಟೀಕೆ

ಬೆಂಗಳೂರು ೨೦

ವಿಧಾನ ಸಭೆಯಲ್ಲಿ ನೆನ್ನೆ ಆಯವ್ಯಯ ಪಟ್ಟಿ ಚರ್ಚೆಯಲ್ಲಿ ಬಿದರೆಯ ಭಾಗ್ಯ ನಿಮ್ನ ವರ್ಗ ಕ್ಷೇತ್ರದ ಪ್ರತಿನಿಧಿ ಶ್ರೀ [illegible] ರವರು ಹಿಂದಿಯಲ್ಲಿ ಮಾತನಾಡಿ ಹರಿಜನರ ಬಗ್ಗೆ ತಾತ್ಸಾರ ಮಾಡುತ್ತಿರುವುದನ್ನು ಟೀಕಿಸಿದರು [illegible] ಜಿಲ್ಲೆಯಲ್ಲಿ [illegible] ವರ್ಷಗಳ ಹಿಂದೆ ೨೨,೦೦೦ ಹರಿಜನರು [illegible] ಕ್ರಿಸ್ತ ಮತಕ್ಕೆ [illegible] ಸೇರಿದರೆಂದೂ [illegible] ಅಲ್ಲಿ [illegible] ಜನರು [illegible] ಮೇಲೆ ಮಾತ್ರ [illegible] ಅಪೇಕ್ಷಿಸಿದರು [illegible] ಕಾಲದಲ್ಲಿ [illegible] ಅವರು [illegible] ಲಿಂಗಾಯಿತರಿಗೇ ಓಟು ಕೊಡಿ ಒಕ್ಕಲಿಗರು ಒಕ್ಕಲಿಗರಿಗೇ ಓಟು ಕೊಡಿ ಎಂದು ಪ್ರೇರೇಪಿಸಲಾಗುತ್ತಿತ್ತೆಂದೂ ನುಡಿದರು ಅಧ್ಯಕ್ಷರು ಪ್ರಶ್ನೆ ಮಾಡಿ - ನೀವು ನಿಮ್ಮ ಪ್ರಚಾರ ಹೇಗೆ ಮಾಡಿದಿರಿ ? ಎಂದರು

ಬೆಂಗಳೂರಿನಲ್ಲಿ ಲಕ್ಷ ಮಂದಿಗೆ ಫ್ಲೂ ?

ಬೆಂಗಳೂರು ನಗರದಲ್ಲಿ ಇನ್‌ಫ್ಲುಯೆಂಜಾ ಜ್ವರ ವ್ಯಾಪಕವಾಗಿ ಹರಡಿರುವುದರಿಂದ ಅನಧಿಕೃತ ಅಂದಾಜಿನ ಪ್ರಕಾರ ಒಂದು ಲಕ್ಷಕ್ಕೂ ಮೀರಿ ಜನರು ಅದರಿಂದ ನರಳುತ್ತಿರುವರೆಂದೂ ಹೇಳಲಾಗಿದೆ [illegible] ವಿಧಾನ ಸಭೆಯಲ್ಲಿ [illegible] ಜನರಿಗೆ ಚಿಕಿತ್ಸೆ ನಡೆಸಲಾಗುತ್ತಿದೆ [illegible] ರಾತ್ರಿ

ಸಂಗೀತ ತರಗತಿಗಳು

[illegible]

CENTRAL INSTITUTE OF COMMERCE

[illegible]

Efficient Coaching Best Results. Admissions received for Diploma in Commerce & Stenography & for Shorthand and Typewriting. Make haste and rush in before admissions close.

ಮೋತಿ ಲಾಲ್

ಇಂದಿನಿಂದ ಅಮೋಘ ಪ್ರಾರಂಭ

ಪ್ರತಿ ದಿನ ಎರಡು ಪ್ರದರ್ಶನಗಳು

ಸಂಜೆ 7 ಮತ್ತು ರಾತ್ರಿ 10 ಗಂಟೆಗೆ

ವಿರ್ಗೋ ಪ್ರೊಡಕ್ಷನ್ಸ್‌ರವರ ಅತ್ಯುತ್ತಮ ಸಾಮಾಜಿಕ ಕನ್ನಡ ಚಿತ್ರ

ಮುತ್ತೈದೆ ಭಾಗ್ಯ

ಪಾತ್ರ ಕಲ್ಯಾಣಕುಮಾರ್, ರೇವತಿ, ಬಾಲಕೃಷ್ಣ ಮೈನಾವತಿ ಮತ್ತು ಹುಣಸೂರು ಕೃಷ್ಣಮೂರ್ತಿ

Edited, Printed and Published by A. R. Nagaraj [illegible] Press, [illegible] Road, Mysore

ಶಾಲಾ ಕಟ್ಟಡಕ್ಕಾಗಿ ಗಡ್ಡ ಬೆಳೆಸಲು ಪ್ರತಿಜ್ಞೆ

ಕೊಲ್ಲಾಪುರಕ್ಕೆ ೫ ಮೈಲಿ ದೂರವಿರುವ ಟೋಪೆ ಎಂಬ ಹಳ್ಳಿಯಲ್ಲಿ ಶಾಲೆಯ ಕಟ್ಟಡವನ್ನು ನಿರ್ಮಿಸುವಂತೆ ಒತ್ತಾಯಪಡಿಸಲು ಅಲ್ಲಿನ ಯುವಕರ ತಂಡವೊಂದು ಗಡ್ಡವನ್ನು ಬೋಳಿಸಬಾರದೆಂದು ನಿರ್ಧರಿಸಿರುತ್ತದೆ ಹಳ್ಳಿಗೆ ಪ್ರಾಥಮಿಕ ಶಾಲೆಯನ್ನು ಕೊಟ್ಟಿದ್ದರೂ ಕಟ್ಟಡವಿಲ್ಲದೆ ಕೊರತೆಯಾಗಿದೆ

ಎಂ ಎ ಪರೀಕ್ಷೆಯನ್ನು ಮುಂದೆ ಹಾಕಲು ಮನವಿ

ಇನ್‌ಫ್ಲುಯೆಂಜಾ ವ್ಯಾಧಿಯಿಂದ ಎಂ ಎ ಮತ್ತು ಎಂ ಎಸ್‌ಸಿ ವಿದ್ಯಾರ್ಥಿಗಳೂ ಸಹ ನರಳುತ್ತಿರುವುದರಿಂದ ಆ ಪರೀಕ್ಷೆಗಳನ್ನು ಮುಂದೆ ಹಾಕಬೇಕೆಂದು ಹಲವು ವಿದ್ಯಾರ್ಥಿಗಳು ಪತ್ರ ಬರೆದು ಅಧಿಕಾರಿಗಳಿಗೆ ಮನವಿ ಮಾಡಿರುತ್ತಾರೆ

SARADA VILAS COLLEGE

INTER TUTORIAL SECTION

ENGLISH & P C M

Highly qualified & experienced staff

Classes in full swing

THE

BANK OF MYSORE, Ltd.,

MYSORE BRANCH

Mysore 1st June, 1957

PUBLIC NOTICE

The Members of the Mysore Bankers Clearing House Mysore unanimously resolved to restrict the Banking hours from 10 30 A M to 12 30 noon from Monday the 24th instant until further notice on account of the Influenza epidemic

Accordingly the Banks will work from 10 30 A M to 12-30 noon with effect from Monday the 24th June 1957

The Public are requested to kindly note this change in the Banking Hours

SHANK R JAVALY

President

Mysore Bankers Clearing House

MYSORE

ವಿವಾಹ ಮಹೋತ್ಸವಗಳು

ನಗರದ ಸುಪ್ರಸಿದ್ಧ ವರ್ತಕರಾದ ಮೆ|| ಬ್ರಹ್ಮಪ್ಪ ತವನಪ್ಪನವರ ಶ್ರೀ ಟಿ ಶಂಕರಾಚಾರ್ಯಪ್ಪನವರು ತಮ್ಮ ಕುಮಾರಿ ಸೌ|| ಸರಳ ಕುಮಾರಿಯನ್ನು ದಾವಣಗೆರೆಯ ಶ್ರೀ ಗುಬ್ಬಿ ಬ್ರಹ್ಮರಾಯಪ್ಪನವರ ಮಕ್ಕಳು ಶ್ರೀ ಜಿ. ಪಾರ್ಶ್ವನಾಥರವರಿಗೆ ಕೊಟ್ಟು ಈ ದಿನ ಜಯಲಕ್ಷ್ಮಿಪುರದಲ್ಲಿರುವ ತಮ್ಮ ನಿವಾಸದಲ್ಲಿ ವಿವಾಹವನ್ನು ನೆರವೇರಿಸಿದರು

ಹಳ್ಳಿ ವ್ಯವಸಾಯ ಕೇಂದ್ರದ ಮಾಲೀಕರಾದ ಶ್ರೀ ಎಂ ಆರ್ ಸಿ ಬಸಪ್ಪನವರು ತಮ್ಮ ಕುಮಾರಿ ಸೌ|| ಶ್ರೀದೇವಿಯನ್ನು ಬೆಂಗಳೂರಿನ ಡಾ|| ಬಿ ಆರ್ ಮಹಾಲಿಂಗಪ್ಪನವರ ಮಕ್ಕಳು ಶ್ರೀ ಬಿ ಎಂ ಸೋಮಶೇಖರ್‌ರವರಿಗೆ ಕೊಟ್ಟು ಈ ದಿನ ಶ್ರೀರಾಮಪೇಟೆಯಲ್ಲಿರುವ ಶ್ರೀ ವಾಸನೀ ನಿಲಯದಲ್ಲಿ ವಿವಾಹವನ್ನು ಜರುಗಿಸಿದರು.

ನಗರದ ಪೌರಸಭಾ ಸದಸ್ಯರಾದ ಶ್ರೀ ಬಿ ಕೆ ಪುಟ್ಟಯ್ಯನವರು ತಮ್ಮ ಕುಮಾರಿ ಸೌ|| ಪ್ರಮೀಳಳನ್ನು ಚಿಟ್ಟಿಗಾರ್ ವರಳೆ ರಂಗಯ್ಯನವರ ಪುತ್ರ ಶ್ರೀ ಚಿಕ್ಕರಾಮುರವರಿಗೆ ಕೊಟ್ಟು ಈ ದಿನ ತಮ್ಮಯ್ಯಾಚಾರ್ಯರ ಧರ್ಮ ಛತ್ರದಲ್ಲಿ ವಿವಾಹವನ್ನು ಬೆಳೆಸಿದರು

ಮೈಸೂರು ಸಂಸ್ಥಾನದ ಸೈನ್ಯಗಳ ಚೀಫ್ ಕಮ್ಯಾಂಡೆಂಟರ ಕಛೇರಿಯ. ನಿವೃತ್ತ ಮ್ಯಾನೇಜರ್ ಶ್ರೀ ಎಂ ಶೇಷಗಿರಿರಾಯರು ತಮ್ಮ ಕುಮಾರಿ ಸೌ|| ಶಂಕರಾಬಾಯಿಯನ್ನು ಎ ಸಿ ಸಿ ಅಧಿಕಾರಿಗಳಾಗಿದ್ದ ಶ್ರೀ ಟಿ ರಾಮಾಚಾರ್ಯರ ಮಗ ಶ್ರೀ ಟಿ ಆರ್ ರಂಗನಾಥರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನು ನಗರದಲ್ಲಿ ನೆರವೇರಿಸಿದರು

ಚಾಮರಾಜನಗರದ ಬೆಲ್ಲದ ವ್ಯಾಪಾರಿಗಳಾದ ಶ್ರೀ ಕೆ ಸಿ ಬಸವಣ್ಣನವರು ತಮ್ಮ ಕುಮಾರಿ ಸೌ|| ಶಿವಕುಮಾರಿಯನ್ನು ಯಳಂದೂರಿನ ಶ್ರೀ ಮಲ್ಲಿಕಾರ್ಜುನಪ್ಪನವರ ಮಕ್ಕಳು ಶ್ರೀ ಮಹದೇವಪ್ಪನವರಿಗೆ ಕೊಟ್ಟು ಕಳೆದ ೧೭ನೇ ತಾರೀಕು ಚಾಮರಾಜನಗರದಲ್ಲಿ ವಿವಾಹವನ್ನು ನಡೆಸಿದರು

ಅರಸೀಕೆರೆ ತಾಲ್ಲೂಕು ಮಾದನಹಳ್ಳಿಯಲ್ಲಿರುವ ಶ್ರೀ ಬದಂಬರಭಟ್ಟರು ತಮ್ಮ ಸಹೋದರ ಶ್ರೀ ವೆಂಕಟಸುಬ್ಬಾಭಟ್ಟರ ಮಗಳು ಸೌ|| ಸಾವಿತ್ರಮ್ಮನನ್ನು ಅದೇ ತಾಲ್ಲೂಕು ಕಲ್ಲುಗುಂಡಿ ಕೆ ವೆಂಕಣ್ಣಯ್ಯನವರ ಕುಮಾರ ಶ್ರೀ ಶ್ರೀನಿವಾಸಮೂರ್ತಿಯವರಿಗೆ ಕೊಟ್ಟು ಕಳೆದ ಸೋಮವಾರ ವಿವಾಹವನ್ನು ಲಿಂಗದಹಳ್ಳಿಯಲ್ಲಿ ಬೆಳೆಸಿದರು

CLASSES COMMENCED

B A & B Sc - English & Kannada

INTER Eng, Kan, P C M & C B Z

C.T C., Old Agrahar, Mysore

ಲಕ್ಷ್ಮಿ ★ 21—6—57ರಿಂದ ಪ್ರತಿ ದಿನ 2 ಪ್ರದರ್ಶನಗಳು

ಸಂಜೆ 7ಕ್ಕೆ ಮತ್ತು ರಾತ್ರಿ 10—15ಕ್ಕೆ

ಸಿಟಿ ಫಿಲಂ ರವರ ತಮಿಳ ಚಿತ್ರ ★ ಇದಯಗೀತಂ ★ ಹೊಸ ಕಾಪಿ

ಭೂಮಿಕೆ ಟಿ ಆರ್ ಮಹಾಲಿಂಗಂ, ಟಿ ಆರ್ ರಾಜಕುಮಾರಿ, ಪಿ ಎಸ್ ವೀರಪ್ಪ, ಕೆ ಸಾರಂಗಪಾಣಿ ಎಂ ಜಿ ಚಕ್ರಪಾಣಿ, ಫ್ರೆಂಡ್ ರಾಮು, ಲಲಿತ ಮತ್ತು ಪದ್ಮಿನಿ

ವುಡ್‌ಲ್ಯಾಂಡ್ಸ್ ★ 21 6 57 ರಿಂದ : ಅಮೋಘ ಪ್ರಾರಂಭ

ಜ್ಯೂಪಿಟರ್ ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಕರುಪ್ಪುಕ್ಕರಸಿ ★

ಮೊದಲನೇ ಆಟ 7ಕ್ಕೆ, 2ನೇ ಆಟ 10 15ಕ್ಕೆ

ಪಾತ್ರ ವರ್ಗ — ಜೆಮಿನಿ ಗಣೇಶ್, ಸಾವಿತ್ರಿ, ನಂಬಿಯಾರ್, ತಂಗವೇಲು, ಜಿ ವರಲಕ್ಷ್ಮಿ, ಎಂ ಕೆ ರಾಧಾ ಮುಂತಾದವರು

[ಶ್ರೀ ರಾಘವೇಂದ್ರಾ ರಿಲೀಸ್

Grand Gala Opening From 21 6-57 Daily Two shows

★ AT SRI GAYATHRI TALKIES

Metro Goldwyn Mayer's ★ BHOWANI JUNCTION ★ With — Ava Gardner, Stewart Granger

(IN CINEMASCOPE & TECHNICOLOR)

ರಿಜಿಸ್ಟರ್ ನಂ 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಸಾಧ್ವಿ

ಇಂದಿನ ಪತ್ರಿಕೆ 2 ನಯಾ ಪೈಸೆ

ಇಲ್ಲಿ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖ್ಯಾತಿಯಾದ ಅಂಗಡಿ
ಎ. ಎಗ್ ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿರಾವ್ ರಸ್ತೆ,
ಮೈಸೂರು

ಸಂಪುಟ : ೦೫] SADHVI : SATURDAY 22—6—1957 ಮೈಸೂರು : ಶನಿವಾರ ೨೨—೬—೧೯೫೭ [ಸಂಚಿಕೆ : ೩೧೮

ವಿಶ್ವಸಂಸ್ಥೆ ದಳದಿಂದ ದ॥ ಕೊರಿಯಕ್ಕೆ ಆಧುನಿಕ ಶಸ್ತ್ರಾಸ್ತ್ರ

ಈ ವರ್ಷದಿಂದ ಕಾಲೇಜು ಶಿಕ್ಷಣಕ್ಕೆ ಹೆಚ್ಚು ಶುಲ್ಕ

ಮೈಸೂರು ೨೨

ಮೈಸೂರು ವಿಶ್ವವಿದ್ಯಾಲಯದವರು ಜುಲೈ ೧ರಿಂದ ಕಾಲೇಜು ಶಿಕ್ಷಣ ಶುಲ್ಕವನ್ನು ಹೆಚ್ಚಿಸಲಿದ್ದಾರೆ. ಶೇಕಡ ೨೦ ರಿಂದ ೩೦ರ ಒಳಗೆ ಶುಲ್ಕವನ್ನು ಹೆಚ್ಚಿಸಲಾಗುವುದೆಂದು ತಿಳಿದುಬಂದಿದೆ. ಇದರಿಂದ ವಿಶ್ವವಿದ್ಯಾಲಯಕ್ಕೆ ೪ ಲಕ್ಷ ರೂ ಹೆಚ್ಚು ವರಮಾನ ಬರಲಿದೆ. ವಿಶ್ವವಿದ್ಯಾಲಯದ ಹಣಕಾಸಿನ ಸ್ಥಿತಿಯನ್ನು ಉತ್ತಮ ಪಡಿಸುವ ಬಗ್ಗೆ ಉಪ ಸಮಿತಿಯೊಂದು ಈ ವಿಷಯವಾಗಿ ಮಾಡಿದ್ದ ಸಲಹೆಯನ್ನು ಸಿಂಡಿಕೇಟಿನವರು ಒಪ್ಪಿರುತ್ತಾರೆ.

ಮುಷ್ಕರ ಹೂಡಲು ಕಸ ಗುಡಿಸುವವರ ಅಭಿಮತ

ನಗರ ಪೌರಸಭಾ ಕೆಲಸಗಾರರ ಸಂಘದ ಸದಸ್ಯರು ಪೌರಸಭಾಧಿಕಾರಿಗಳಿಗೆ ಸೂಚನೆ ಕಳುಹಿಸಿ ಆರು ವಾರಗಳೊಳಗೆ ತಮ್ಮ ಸಂಬಳ ಮತ್ತು ಭತ್ಯಗಳನ್ನು ಹೆಚ್ಚಿಸದಿದ್ದರೆ ಮುಷ್ಕರ ನಡೆಸಲಾಗುವುದೆಂದು ತಿಳಿಸಿರುತ್ತಾರೆ. ಈ ಬಗ್ಗೆ ನಿನ್ನೆ ನಡೆದ ಗುಪ್ತ ಮತದಾನದಲ್ಲಿ ೭೩೫ ಮಂದಿ ಪೈಕಿ ಮುಷ್ಕರದ ಪರವಾಗಿ ೭೨೮ ಸದಸ್ಯರು ಅಭಿಮತ ಕೊಟ್ಟಿರುವರು.

ಪತ್ರಿಕೋದ್ಯೋಗಿಗಳ ಸಂಘದ ಸಭೆ

ನಾಳೆ ಬೆಳಿಗ್ಗೆ ೯॥ ಗಂಟೆಗೆ ಈವನಿಂಗ್ ಬಜಾರಿನಲ್ಲಿ ಮೈಸೂರು ನಗರ ಪತ್ರಿಕೋದ್ಯೋಗಿಗಳ ಸಂಘದ ಸರ್ವ ಸದಸ್ಯರ ಸಭೆ ನಡೆಯುವುದು.

ಫ್ಲೂ ನಿಂದ ಕೋಲಾರದಲ್ಲಿ ೩ ಮರಣಗಳು

ಕೋಲಾರ ಜಿಲ್ಲೆಯಲ್ಲಿ ಇನ್‌ಫ್ಲುಯೆಂಜಾ ಹೆಚ್ಚಾಗಿ ಹರಡುವುದೆಂದೂ, ಚಿಕ್ಕಬಳ್ಳಾಪುರದಲ್ಲಿ ಒಬ್ಬನೂ, ಮುಳಬಾಗಿಲಿನಲ್ಲಿ ಇಬ್ಬರೂ ಅದರಿಂದ ಮಡಿದಿರುವರೆಂದೂ ವರದಿಯಾಗಿದೆ. ಮುಳಬಾಗಿಲಿನಲ್ಲಿ ಶಾಲೆಗಳನ್ನು ಒಂದುವಾರ ಮುಚ್ಚಲಾಗಿದೆ. ಅಲ್ಲಿ ಔಷಧಿಗಳಿಗೆ ಕೊರತೆಯಾಗಿರುವುದೆಂದು ಹೇಳಲಾಗಿದೆ.

ಸಚಿವರುಗಳಿಗೆ ಫ್ಲೂ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ, ವಿದ್ಯಾ ಮಂತ್ರಿ ಶ್ರೀ ವೆಂಕಟಪ್ಪ ಮತ್ತು ಸರ್ಕಾರದ ಹಣಕಾಸಿನ ಕಾರ್ಯದರ್ಶಿ ಶ್ರೀ ಮ್ಯಾಥ್ಯೂಸ್‌ರವರಿಗೆ ಇನ್‌ಫ್ಲುಯೆಂಜಾ ವ್ಯಾಧಿಯು ತಗಲಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕೊಳಲು ೭-೧೫ ಎಂ ಡಿ ರಾಮಸ್ವಾಮಿ ದೇವರ ನಾಮ ೮-೧೫ ಡಿ ಕೆ ಪಟ್ಟಮ್ಮಾಳ್ ೩೦ ಎ ಎಸ್ ಶಿವರುದ್ರಪ್ಪ ಪಿಟೀಲು ೩-೩೦ ಬಾಲಜಗತ್ ಮಧ್ಯಾಹ್ನ ೧೨ ಎಂ ಡಿ ರಾಮಸ್ವಾಮಿ-ಸಂಗೀತ ೧೨-೩೦ ವಾದ್ಯವೃಂದ ೧ ವಾರ್ತೆ ೧-೪೦ ಎಂ ವಿ ಲಕ್ಷ್ಮೀನರಸಿಂಹಯ್ಯ ಸ್ಯಾಕ್ಸೊಫೋನ್. ೨-೧೫ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೬ ೧೦ ಭಕ್ತಿಗೀತೆ ೭-೩೦ ಗೀತಾ ಲಿ ಮತ್ತು ೧೦ ೩೦ ನಾಟಕ ಚಿಂತಾಮಣಿ ಗೀತೆ ೮ ೩೦ ಪ್ರಚಲಿತ ವಿಷಯಗಳು-ಭಾಷಣ ೯-೧೫ ರಿಕಾರ್ಡು ೯-೩೦ ನಾಟಕ

ನ್ಯಾಸಿಂಗ್ಸ್ ಕಾರ್ಖಾನೆ ಕಾರ್ಮಿಕರ ಮುಷ್ಕರ

ಮೈಸೂರು ೨೨

ನಗರದ ನ್ಯಾಸಿಂಗ್ಸ್ ಕಂಪೆನಿಯವರ ಕಾರ್ಖಾನೆಯ ೭೦ ಮಂದಿ ಕೆಲಸಗಾರರು ಸಂಬಳ, ರಜ ಮತ್ತು ಕೆಲಸದ ಸ್ಥಿತಿಗಳ ಬಗ್ಗೆ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲೂ ಮತ್ತು ಇತ್ತೀಚೆಗೆ ಆಡಳಿತ ವರ್ಗದವರು ಒಂದು ಭಾಗವನ್ನು ಮುಚ್ಚಿ ಹಲವು ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದುದನ್ನು ಪ್ರತಿಭಟಿಸಲೂ ಇಂದಿನಿಂದ ಅನಿರ್ದಿಷ್ಟ ಕಾಲದವರೆಗೆ ಮುಷ್ಕರವನ್ನು ಆರಂಭಿಸಿ ಎರಡು ಅವರು ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಹೋಗಿ ತಮ್ಮ ಸಂಘದ ಕಛೇರಿಯ ಬಳಿ ಶಾಂತವಾಗಿ ಚದುರಿದರು.

ವಧೆಗಾಗಿ ಕರುಗಳನ್ನು ಹೊಡೆದುಕೊಂಡು ಹೋಗಿದ ವ್ಯಕ್ತಿಯ ಬಂಧನ

ನೆನ್ನೆ ರಾತ್ರಿ ಮಂಡಿ ಮೊಹಲ್ಲಾ ನಿವಾಸಿ ಮಹದೇವ ಎಂಬ ಹಳೆಯ ಕೇಡಿಯೊಬ್ಬನು ವಧೆಗಾಗಿ ಎರಡು ಕರುಗಳನ್ನು ಹೊಡೆದುಕೊಂಡು ಹೋಗುತ್ತಿದ್ದಾಗ ಅವನನ್ನು ಲಷ್ಕರ್ ಪೋಲೀಸರು ಬಂಧಿಸಿರುತ್ತಾರೆ.

ಅಂತರರಾಷ್ಟ್ರ ಚಿನ್ನದ ಕಳ್ಳರವಾನೆಯಲ್ಲಿ ಪಾಕ್ ಅಧಿಕಾರಿಗಳ ಪಾತ್ರ

ಅಂತರ ರಾಷ್ಟ್ರೀಯ ಚಿನ್ನದ ಕಳ್ಳ ರವಾನೆಯಲ್ಲಿ ಪಾಕಿಸ್ತಾನದ ಹಲವು ದೊಡ್ಡ ಅಧಿಕಾರಿಗಳು ಸೇರಿರುವರೆಂದು ಕರಾಚಿಯ ವಿಶೇಷ ಪೋಲೀಸರು ತಿಳಿಸಿರುತ್ತಾರೆ. ಅಲ್ಲಿನ ವಿಮಾನ ದಳದ ಅಧಿಕಾರಿಯೊಬ್ಬನ ಮನೆ ಶೋಧಿಸಿ ವಶಪಡಿಸಿಕೊಂಡ ಹಲವು ಕಾಗದ ಪತ್ರಗಳಿಂದ ದೊಡ್ಡ ಅಧಿಕಾರಿಗಳೂ ಇದರಲ್ಲಿ ಸೇರಿರುವರೆಂಬುದು ವ್ಯಕ್ತವಾಗಿದೆ. ಕರಾಚಿಯಲ್ಲಿ ಒಬ್ಬ ಅರಬ್ ಶೇಕನನ್ನು ಬಂಧಿಸಿದ ಸಂಬಂಧವಾಗಿ ಶೋಧನೆ ನಡೆಯಿತು. ಶೇಕನ ಭವನದಲ್ಲಿ ೧೦೦ ಚಿನ್ನದ ಇಟ್ಟಿಗೆ ಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಪರ್ಷಿಯಾ ಕೊಲ್ಲಿಯ ರೇವುಗಳಿಂದ ಅನೇಕ ವರ್ಷಗಳಿಂದಲೂ ಈ ಕಳ್ಳರವಾನೆಯು ನಡೆಯುತ್ತಿರುವುದೆಂದೂ, ಇಂತಹ ಅಕ್ರಮ ವ್ಯಾಪಾರದಿಂದ ಕೋಟ್ಯಾಂತರ ರೂ. ಸಂಪಾದನೆಯಾಗಿರುವುದೆಂದೂ ಹೇಳಲಾಗಿದೆ. ಕರಾಚಿ ಪೋಲೀಸರು ಕಳ್ಳ ರವಾನೆ ವಿರುದ್ಧ ಮತ್ತು ವಿದೇಶೀ ವಿನಿಮಯ ಶಾಸನಗಳ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿರುವರು.

ಬಸ್ಸು ಮರಕ್ಕೆ ಡಿಕ್ಕಿ ಹೊಡೆದು ೧೮ ಮಂದಿಗೆ ತೀವ್ರ ಗಾಯ

ಬೆಂಗಳೂರು ೨೨

ಬೆಂಗಳೂರಿಗೆ ೧೦ ಮೈಲಿ ದೂರದಲ್ಲಿ ಆನೇಕಲ್ ರಸ್ತೆಯಲ್ಲಿ ನೆನ್ನೆ ಬಿ ಕೆ. ಅವಿನಾಶ್ ಸರ್ವಿಸ್ಸಿನ ಬಸ್ಸೊಂದು ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮವಾಗಿ ೩೦ ಜನರಿಗೆ ಗಾಯವಾಯಿತು. ಆ ಪೈಕಿ ೧೮ ಮಂದಿಯು ತೀವ್ರಾವಸ್ಥೆಯಲ್ಲಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು. ಬಸ್ಸಿನ ಡ್ರೈವರ್ ... ಪರಾರಿಯಾಗಿರುವನು

ಆಹಾರ ಪದಾರ್ಥಗಳಿಗೆ ಮಾರಾಟ ತೆರಿಗೆ ವಿನಾಯಿತಿ

ವಿಧಾನ ಸಭೆಯಲ್ಲಿ ಹಣಕಾಸಿನ ಸಚಿವರ ಸೂಚನೆ

ಬೆಂಗಳೂರು ೨೨

ವಿಧಾನ ಸಭೆಯಲ್ಲಿ ನೆನ್ನೆ ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರು ಮಾರಾಟ ತೆರಿಗೆ ಶಾಸನದ ಮಸೂದೆಯನ್ನು ಮಂಡಿಸಿ, ತೆರಿಗೆಯ ವಿಧಾನವನ್ನು ಎಲ್ಲಾ ಕಡೆಗಳಲ್ಲೂ ಒಂದೇ ಮಟ್ಟದಲ್ಲಿಡಲಾಗುವುದೆಂದು ತಿಳಿಸಿದರು. ಆಹಾರ ಪದಾರ್ಥಗಳ ಮೇಲೆ ಮಾರಾಟ ತೆರಿಗೆಯನ್ನು ವಿಧಿಸಲು ಸರ್ಕಾರದವರು ಆಲೋಚಿಸಿಲ್ಲವೆಂದು ಅವರು ಸೂಚಿಸಿ ಇದರಿಂದ ಸರ್ಕಾರಕ್ಕೆ ವರ್ಷಂಪ್ರತಿ ೨೫ ಲಕ್ಷ ರೂ ಆದಾಯದ ನಷ್ಟವಾಗುವುದೆಂದು ಹೇಳಿದರು. ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿ ರಾಗಿ ಜೋಳ ಮುಂತಾದ ಧಾನ್ಯಗಳ ಮಾರಾಟಕ್ಕೆ ತೆರಿಗೆಯನ್ನು ವಿಧಿಸಲಾಗುತ್ತಿದೆ.

ಹಣಕಾಸಿನ ಸಚಿವರು ಮಾತನಾಡಿ ಒಟ್ಟು ವ್ಯಾಪಾರಗಳ ಮೇಲೆ ಹೆಚ್ಚು ಘಟ್ಟಗಳ ತೆರಿಗೆಯನ್ನು ವಿಧಿಸಲಾಗುವುದೆಂದು ತಿಳಿಸಿದರು. ತೆರಿಗೆಯ ಮಟ್ಟವನ್ನು ೭॥ ಸಾವಿರ ರೂ ನಿಂದ ೫ ಸಾವಿರಕ್ಕೆ ಇಳಿಸಲಾಗುವುದೆಂದು ಗೊತ್ತಾಗಿದೆ.

ತೆರಿಗೆಯ ವಿನಾಯಿತಿ ಪಡೆದಿರುವ ವಸ್ತುಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಉಪ್ಪು, ತರಕಾರಿ, ಹಾಲು, ಮೊಸರು ಖಾದಿ ಬಟ್ಟೆ, ರೇಷ್ಮೆ ಗೂಡು, ಕುಂಕುಮ, ಕೈ ಬಳೆ ಮತ್ತು ಮಂಗಳ ಸೂತ್ರ ಇತ್ಯಾದಿಗಳಿಗೆ ವಿನಾಯಿತಿ ಸಿಗುವುದು.

ಡಿ. ಎಂ. ನಂಜುಂಡಪ್ಪನವರಿಗೆ ಪಿಹೆಚ್ ಡಿ ಪ್ರಶಸ್ತಿ

ಮದ್ರಾಸಿನಲ್ಲಿರುವ ಸಣ್ಣ ಕೈಗಾರಿಕಾ ಶಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಡಿ ಎಂ ನಂಜುಂಡಪ್ಪನವರು "ಭಾರತದಲ್ಲಿ ಆರ್ಥಿಕ ನೀತಿ ಮತ್ತು ಪೂರ್ಣ ಉದ್ಯೋಗ" ಎಂಬ ವಿಷಯವಾಗಿ ಬರೆದ ಪ್ರಬಂಧಕ್ಕಾಗಿ ಅವರಿಗೆ ಮೈಸೂರು ವಿಶ್ವವಿದ್ಯಾಲಯದವರು ಪಿಹೆಚ್ ಡಿ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ.

ಇನ್‌ಫ್ಲುಯೆಂಜಾ ಮರುಕಳಿಸುವ ಬಗ್ಗೆ ಎಚ್ಚರಿಕೆ

ಬೆಂಗಳೂರು ೨೨

ಕೇಂದ್ರ ಸರ್ಕಾರದ ಆರೋಗ್ಯ ಡೈರೆಕ್ಟರ್ ಜನರಲ್ಲರು ಸಂಸ್ಥಾನದ ಆರೋಗ್ಯಾಧಿಕಾರಿಗಳಿಗೆ ಸೂಚನೆಯಿತ್ತು, ಈಗ ವ್ಯಾಪಿಸಿರುವ ಇನ್‌ಫ್ಲುಯೆಂಜಾ ವ್ಯಾಧಿಯು ಎರಡನೇ ಬಾರಿ ಉಂಟಾದರೆ ಅದರಿಂದ ರೋಗ ಸ್ಥಿತಿಯು ತೀವ್ರವಾಗುವುದೆಂದು ಎಚ್ಚರಿಕೆಯಿತ್ತಿರುತ್ತಾರೆ. ಜಪಾನಿನಲ್ಲಿ ನಡೆಸಿದ ಪರಿಶೋಧನೆಯ ಪರಿಣಾಮವಾಗಿ ಮೊದಲನೇ ಆವರ್ತಕ್ಕಿಂತ ಎರಡನೇ ಸಾರಿ ಬರುವ ವ್ಯಾಧಿಯು ಉಗ್ರ ರೂಪ ತಾಳುವುದೆಂದೂ, ವ್ಯಾಧಿಯನ್ನು ತಡೆಗಟ್ಟಲು ಸೂಕ್ತ ಕ್ರಮ ಜರುಗಿಸಬೇಕೆಂದೂ ಕೇಂದ್ರ ಆರೋಗ್ಯ ಡೈರೆಕ್ಟರ್ ಜನರಲ್ಲರು ತಿಳಿಸಿರುವರು.

ದಕ್ಷಿಣ ಕೊರಿಯಾಕ್ಕೆ ಆಧುನಿಕ ಶಸ್ತ್ರಾಸ್ತ್ರ ಸರಬರಾಜು

ವಿಶ್ವಸಂಸ್ಥೆ ದಳದ ಸೂಚನೆ

ಕಮ್ಯೂನಿಸ್ಟರು ಕೊರಿಯಾ ಕದನ ವಿರಾಮ ಒಪ್ಪಂದವನ್ನು ಉದ್ದೇಶಪೂರ್ವಕವಾಗಿ ಪದೇ ಪದೇ ಉಲ್ಲಂಘಿಸುತ್ತಿರುವರೆಂದೂ ಆದ ಕಾರಣ ಕೊರಿಯದಲ್ಲಿರುವ ಹಳೇ ಅಸ್ತ್ರ ಶಸ್ತ್ರಗಳನ್ನು ತೆಗೆದು ಅವುಗಳ ಬದಲು ಆಧುನಿಕ ಶಸ್ತ್ರಗಳನ್ನು ಒದಗಿಸಲು ನಿರ್ಧರಿಸಲಾಗಿದೆಯೆಂದೂ ವಿಶ್ವ ಸಂಸ್ಥೆಯ ಕೊರಿಯಾ ಯುದ್ಧ ಕಛೇರಿಯ ಮಿಲಿಟರಿ ಶಾಂತಿ ಸಮಿತಿಯಲ್ಲಿರುವ ಉತ್ತರ ಕೊರಿಯಾ ಮತ್ತು ಚೀನಾ ಪ್ರತಿನಿಧಿಗಳಿಗೆ ಸೂಚನೆಯಿತ್ತಿದೆ. ಈ ಸೂಚನೆಯಿಂದ ಕದನ ವಿರಾಮ ಒಪ್ಪಂದವನ್ನು ಮುಂದೆ ಜಾರಿಗೆ ತರಲಾಗುವುದೆಂದು ಹೇಳಲಾಗಿದೆ. ಒಪ್ಪಂದದ ಪ್ರಕಾರ ಕೊರಿಯಾ ಸೈನ್ಯಗಳಿಗೆ ಆಗ ಉಪಯೋಗಿಸಿದ ಶಸ್ತ್ರಾಸ್ತ್ರಗಳಲ್ಲದೆ ಬೇರೆಯವನ್ನು ಒದಗಿಸಬಾರದೆಂದು ಗೊತ್ತಾಗಿತ್ತು. ವಿಶ್ವಸಂಸ್ಥೆ ದಳದ ಕಛೇರಿಯ ಈ ಸೂಚನೆಗೆ ಉತ್ತರ ಕೊರಿಯಾ ಮತ್ತು ಚೀನಾ ಪ್ರತಿನಿಧಿಗಳು ಪ್ರತಿಭಟಿಸಿರುತ್ತಾರೆ. ಸೀಸ್‌ಫೈರ್‌ನ್ನು ಕಾಪಾಡುವುದಾಗಿ ವಿಶ್ವಸಂಸ್ಥೆಯ ದಳದ ಕಛೇರಿಯವರು ಹೇಳಿರುತ್ತಾರೆ.

ಗುಂಡ್ಲುಪೇಟೆ ಹಳ್ಳಿಗಳಲ್ಲಿ ಮಕ್ಕಳಿಗೆ ಉಚಿತ ಹಾಲು ಹಂಚಿಕೆ

ಕೃಷ್ಣರಾಜ ಮೊಹಲ್ಲಾ ನಾಲ್ಕನೇ ಬೀದಿಯಲ್ಲಿರುವ ಮೆಸರ್ಸ್ ಟಿ ಕೆ ಸುಬ್ರಹ್ಮಣ್ಯಂ ಮತ್ತು ಸನ್ಸ್‌ರವರು ಗುಂಡ್ಲುಪೇಟೆ ತಾಲ್ಲೂಕಿನ ಊತನೂರು, ಕೋಡಿಹಳ್ಳಿ ಮತ್ತು ಪನಿಸ ಲಪುರ ಹಳ್ಳಿಗಳಲ್ಲಿ ಮಕ್ಕಳಿಗೆ ಉಚಿತವಾಗಿ ಹಾಲನ್ನು ಹಂಚುವ ಬಗ್ಗೆ ಕಳೆದ ಅಕ್ಟೋಬರ್ ತಾರೀಖಿನಿಂದ ೧೬ ಗಳವರೆಗೆ ಪರೀಕ್ಷಾರ್ಥವಾಗಿ ಕೇಂದ್ರಗಳ ವ್ಯವಸ್ಥೆ ಮಾಡಿರುತ್ತಾರೆ. ೧೦೦೦ ಮಕ್ಕಳಿಗೆ ಈಗ ಹಾಲನ್ನು ಹಂಚಲಾಗುತ್ತಿದೆ. ಗುಂಡ್ಲುಪೇಟೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಅಧಿಕಾರಿಗಳು ಇದರ ಮೇಲ್ವಿಚಾರಣೆ ಮಾಡುತ್ತಿರುವರು. ನಂಜನಗೂಡು ಸಬ್‌ಡಿವಿಜನ್ ಅಧಿಕಾರಿಗಳು ಮತ್ತು ಶಾಸನಸಭಾ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಜೊತೆಯಲ್ಲಿದ್ದಿರುವರು.

ಮೂರನೇ ವರ್ಗದ ರೈಲು ಪ್ರಯಾಣಿಕರಿಗೆ ಮಲಗುವ ಸೌಲಭ್ಯ

ರೈಲುಗಳಲ್ಲಿ ಮೂರನೇ ವರ್ಗದ ಪ್ರಯಾಣಿಕರಿಗೆ ಮಲಗುವ ಸೌಲಭ್ಯವನ್ನು ಏರ್ಪಡಿಸಲಾಗುವುದೆಂದು ವರದಿಯಾಗಿದೆಯಷ್ಟೆ. ಅದಕ್ಕಾಗಿ ಮೆತ್ತೆಗಳನ್ನು ಹಾಕಲಾಗುವುದು. ಒಂದು ಗಾಡಿಯಲ್ಲಿ ಈ ವ್ಯವಸ್ಥೆ ಮಾಡಲಾಗುವುದು. ಪ್ರಯಾಣಿಕರ ಸಾಮಾನುಗಳಿಗೆ ಪ್ರತ್ಯೇಕ ಕೊಠಡಿಯನ್ನು ಏರ್ಪಡಿಸಲಾಗುವುದು. ಮಲಗುವ ಡಬ್ಬಿಗಳಲ್ಲಿ ಒಬ್ಬೊಬ್ಬ ವಿಶೇಷ ಕಂಡಕ್ಟರು ಇದ್ದು ಪ್ರಯಾಣಿಕರಿಗೆ ಸ್ಥಳಗಳನ್ನು ತೋರುವುದಲ್ಲದೆ ಅವರ ಸಾಮಾನುಗಳನ್ನು ಇಡಲು ಸಹಾಯ ಮಾಡುವರು. ಅಲ್ಲದೆ ಪ್ರಯಾಣಿಕರಿಗೆ ಇತರ ಸಹಾಯವನ್ನೂ ಮಾಡುವರು.

ತಾ॥ ಕಾಂಗ್ರೆಸ್ ಅಧ್ಯಕ್ಷರ ಮೇಲೆ ಗುಂಪಿನ ದೌರ್ಜನ್ಯ

ಕೋಲಾರ ಜಿಲ್ಲೆ ಶ್ರೀನಿವಾಸಪುರದಲ್ಲಿ ಕಳೆದ ಬುಧವಾರ ಅಲ್ಲಿನ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಶ್ರೀ ವೆಂಕಟಪ್ಪಶೆಟ್ಟರ ಮೇಲೆ ಜನರ ಭಾರಿ ಗುಂಪೊಂದು ಮುತ್ತಿಗೆ ಹಾಕಿ, ಅವರ ಜುಟ್ಟನ್ನು ಕತ್ತರಿಸಲಾಯಿತೆಂದು ವರದಿಯಾಗಿದೆ. ಅವರಿಗೆ ಮೂಗು ಪೆಟ್ಟು ಆಗಿರುವುದೆಂದೂ ಗೊತ್ತಾಗಿದೆ ಶ್ರೀರಾಮಭಜನಾ ಎಂಬ ಪೌರಸಭಾ ನೌಕರನು ಕಚೇರಿಯಾಗಿದ್ದ ಸಂದರ್ಭದಲ್ಲಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರು ಅನೇಕರ ಹೆಸರನ್ನು ಕೊಟ್ಟದ್ದೇ ಜನರ ರೋಷಕ್ಕೆ ಕಾರಣವಾಯಿತೆಂದೂ ಹೇಳಲಾಗಿದೆ. ನೌಕರರನ್ನು ಅಪಹರಿಸಿ ಖೂನಿ ಮಾಡಲಾಗಿದ್ದುದಾಗಿ ಪ್ರೀತಿರು ಆಗಿದ್ದಾರು ಶ್ರೀ ಶೆಟ್ಟರ ಮೇಲೆ ದೌರ್ಜನ್ಯದ ಬಗ್ಗೆ ಮುಖ್ಯ ಮಂತ್ರಿಗಳಿಗೂ, ಗೃಹ ಮತ್ತು ಪ್ರಜೋಯ ಸಂಸ್ಥೆಗಳಿಗೂ ತಂತಿ ಕಳುಹಲಾಗಿದೆ

ಅಣು ಕಣಗಳ ಪ್ರಸರಣಕ್ಕೆ ಹೆದರಿ ವಿಜ್ಞಾನಿಗಳ ಪರಾರಿ

ಅಮೇರಿಕದ ಲಾಸ್‌ವೆಗಾಸಿನಲ್ಲಿ ಇತ್ತೀಚೆಗೆ ನಡೆಸಿದ ೪ನೇ ಅಣುಶಸ್ತ್ರದ ಪರೀಕ್ಷಾ ಸಿಡಿತದಿಂದ ಉಂಟಾದ ಅಣುಕಣಗಳು ಪ್ರಸರಿಸಿ ವಿಜ್ಞಾನಿಗಳು ಇದ್ದ ಕಡೆ ಅವು ತೂರಿ ಬರಲಾಗಿ ಅವರುಗಳು ಓಡಿಹೋದರೆಂದು ಹೇಳಲಾಗಿದೆ ಅವರಿದ್ದ ಸ್ಥಳಕ್ಕೆ ೮ ಮೈಲಿ ಸಮೀಪ ಸಿಡಿತವನ್ನು ನಡೆಸಲಾಗಿತ್ತು

ಬೊಂಬಾಯಿ ದರೋಡೆ ಬಗ್ಗೆ ನಾಲ್ವರ ಬಂಧನ

ಬೊಂಬಾಯಿಯಲ್ಲಿ ಇತ್ತೀಚೆಗೆ ನಡೆದ ದರೋಡೆ ಸಂಬಂಧದಲ್ಲಿ ಪೋಲೀಸರು ಒಬ್ಬ ಪಠಾಣ, ಒಬ್ಬ ಕ್ರಿಸ್ತನೂ ಸೇರಿ ೪ ಜನರನ್ನು ಬಂಧಿಸಿರುತ್ತಾರೆ ೭,೦೦೦ ರೂ ನಗದನ್ನು ಅವರಿಂದ ವಶಪಡಿಸಿಕೊಳ್ಳಲಾಗಿದೆ ಹಾಲಿನ ಕೇಂದ್ರವೊಂದರ ಡ್ರೈವರನನ್ನು ಕೊಂದು ೧೪,೦೦೦ ರೂಗಳನ್ನು ದರೋಡೆಕಾರರು ಅಪಹರಿಸಿ, ೭೫,೦೦೦ ರೂ ಇದ್ದ ಪೆಟ್ಟಿಗೆಯನ್ನು ರಸ್ತೆಯಲ್ಲೇ ಬಿಟ್ಟು ಹೋಗಿದ್ದರು

ಡೆನ್ಮಾರ್ಕಿಗೆ ಅಮೇರಿಕದ ರಾಕೆಟ್ ಅಸ್ತ್ರಗಳು

ಯೂರೋಪಿನ ಚಿಕ್ಕ ರಾಷ್ಟ್ರಗಳಲ್ಲೊಂದಾದ ಡೆನ್ಮಾರ್ಕಿಗೆ ಅಮೇರಿಕವು ರಾಕೆಟ್ ಅಸ್ತ್ರಗಳನ್ನು ಉಚಿತವಾಗಿ ಕೊಡಲಿದೆ

ಹರಿಕಥೆ

ಅಶೋಕಾ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಏರ್ಪಾಡಾಗಿ ಪ್ರಯುಕ್ತ ನಾಳೆ ರಾತ್ರಿ ೯ ಗಂಟೆಗೆ ಹರಿಕಥಾ ವಿದ್ವಾನ್ ಟಿ ಆರ್ ಸುಬ್ರಮಣ್ಯನವರಿಂದ "ಭಕ್ತ ನಾಮದೇವ" ಎಂಬ ಹರಿಕಥೆಯನ್ನು ಏರ್ಪಡಿಸಿರುತ್ತೆ.

CENTRAL INSTITUTE OF COMMERCE
Vani Vilas Market, Mysore

Efficient Coaching — Best Results. Admissions received for Diploma in Commerce & Stenography & for Shorthand and Typewriting Make haste and rush in before admissions close.

ಮನೆ ಮಾರಾಟಕ್ಕಿದೆ

ಡೋರ್ ನಂ 1233 ಕೃಷ್ಣಮೂರ್ತಿಪುರಂ.
ಶಾರದಾ ಮತ್ತು ಮಂಗಳೂರು ಹೆಂಚಿನ ವಿಶಾಲವಾದ, ಸಜ್ಜೆ, ದೀಪ ಉಳ್ಳ ಮನೆ ವಿವರಗಳಿಗೆ
ಎಸ್. ಜಿ ಶ್ರೀನಿವಾಸಮೂರ್ತಿ
C/o ಜಯ ಅಂಡ್ ಕಂಪನಿ,
ಮನೆ ಜವಾನು ಏಜೆಂಟರು ಹಳೇ ಮೈಸೂರು ಬ್ಯಾಂಕ್ ರಸ್ತೆ
ಮೈಸೂರು — ಫೋನ್ ನಂ 520

ವಿವಾಹ ಮಹೋತ್ಸವಗಳು

ಶ್ರೀ ಡಿ ವಿ ಗುಂಡಪ್ಪನವರ ಸಹೋದರರಾದ ಶ್ರೀ ಡಿ ವಿ ಶೇಷಗಿರಿರಾಯರು ತಮ್ಮ ಕುಮಾರರಾದ ಶ್ರೀ ಎಸ್ ಶ್ರೀನಿವಾಸಮೂರ್ತಿಯವರಿಗೆ ನಂಜನಗೂಡಿನ ಶ್ರೀ ಎಸ್ ನಾರಾಯಣಸ್ವಾಮಿಯವರ ಮಗಳು ಸೌ॥ ಸುಶೀಲನನ್ನು ತಂದುಕೊಂಡು ನೆನ್ನೆ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

ನಗರದಲ್ಲಿರುವ ವಿಮಾ ಕಾರ್ಪೊರೇಷನ್ನಿನ ಏಜೆಂಟರಾದ ಶ್ರೀ ಎ ಶ್ರೀನಿವಾಸಯ್ಯನವರು ತಮ್ಮ ಕುಮಾರರಾದ ಶ್ರೀ ಎ ಎಸ್ ರಾಮರಾಯರ ಪುತ್ರಿ ಸೌ॥ ಪದ್ಮಾವತಿಯನ್ನು ಶ್ರೀ ಕಿತ್ತೂರು ಕೃಷ್ಣಪ್ಪನವರ ಪುತ್ರ ಶ್ರೀ ಕೆ ಅನಂತಮೂರ್ತಿಯವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು

ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ವೈ ಎಸ್ ವೆಂಕಟರಂಗ ಅಯ್ಯಂಗಾರ್ಯರು ತಮ್ಮ ಕುಮಾರಿ ಸೌಭಾಗ್ಯಲಕ್ಷ್ಮಿಯನ್ನು ವಿದ್ಯಾ ಇಲಾಖೆಯ ನಿವೃತ್ತ ನೌಕರರಾದ ಶ್ರೀ ವಿ. ಎಸ್ ವರದಾಚಾರ್ಯರ ಮಕ್ಕಳು ಶ್ರೀ ವಿ ಎಸ್ ವೆಂಕಟವರದಾಚಾರ್ಯರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನಡೆಸಿದರು

ಕ್ಯಾತಮಾರನಹಳ್ಳಿಯ ಶ್ರೀ ಮಾದಯ್ಯನವರು ತಮ್ಮ ಕುಮಾರಿ ಸೌ॥ ಪುಟ್ಟಮಂಚಮ್ಮನನ್ನು ಅದೇ ಸ್ಥಳದ ಶ್ರೀ ಸಿದ್ದಯ್ಯನವರ ಮಗ ಶ್ರೀ ಬೋರಯ್ಯನವರಿಗೆ ಕೊಟ್ಟು ಪಶ್ಚಿಮವಾಹಿನಿಯಲ್ಲಿ ನೆನ್ನೆ ವಿವಾಹವನ್ನು ನಡೆಸಿದರು

ಅಶೋಕಾ ರಸ್ತೆಯಲ್ಲಿರುವ ಮಲ್ಲಿಕಾರ್ಜುನ ಹಾಲ್ ಮಾಲೀಕರಾದ ಶ್ರೀ ನಂಜುಂಡಪ್ಪನವರು ತಮ್ಮ ಕುಮಾರ ಶ್ರೀ ಎನ್ ಶಿವಶಂಕರ್‌ರವರಿಗೆ ಬೆಂಗಳೂರಿನ ಶ್ರೀ ಎಂ ಶಿವಣ್ಣನವರ ಕುಮಾರಿ ಸೌ॥ ಸರೋಜಮ್ಮನನ್ನು ತಂದುಕೊಂಡು ವಿವಾಹ ನಡೆಸಿದ ಸಂದರ್ಭದಲ್ಲಿ ನೆನ್ನೆ ಆರತಿ ಅಕ್ಷತೆಯನ್ನು ಏರ್ಪಡಿಸಿದ್ದರು.

ಮೈಸೂರು ಪೇಟೆ ಧಾರಣೆ

ಬಂಗಾರ	೯೧	೧೨		
ರತ್ನಚೂಡಿ	೩೭	೨೫	೩೮	೫೦
ಸೀತಾಳಸಣ್ಣ	೩೮	೭೫	೩೯	೦೦
ಕಾರ್ ಸಣ್ಣ	೩೭	೦೦		
ರಾಗಿ	೯೯	೦೭	೯೬	೧೯
ಕಡಲೆ ಬೀ.	೧೫	೭೫	೨೯	೬೧
ಹೊಂಗೆಬೀಜ	೩೮	೦೦	೩೮	೭೨
ಹುಚ್ಚೆಳ್ಳು	೯೯	೫೦	೪೪	೭೨
ಎಳ್ಳು	೭೯	೧೨	೭೫	೧೦
ಹುರುಳಿ	೯೯	೦೦	೯೯	೫೭
ಹೆಸರು	೪೦	೦೦	೫೬	೧೧
ಹಲಸಂದೆ	೯೯	೯೭	೫೪	೦೦
ಉದ್ದು	೫೪	೧೨	೬೨	೫೦
ಸೀಮೆಸಬೀಜ	೯೯	೧೨		
ಹುಣಸೆಬೀಜ	೮	೦೦		
ಹುಣಸೇಹಣ್ಣು	೨	೭೫	೨೯	೫೦
ಮೆಣಸಿನಕಾಯಿ	೧೪	೦೦	೧೮	೨೫
ತೆಂಗಿನಕಾಯಿ	೧೯೦	೦೦	೨೬೦	೦೦

ಶಿಶು ಕ್ಷೇಮ—

ಮಕ್ಕಳ ಖಾಯಿಲೆಗೆ ಶಾಸ್ತ್ರೀಯ ಔಷಧ-
ನಿರೋಧಕ, ನಿವಾರಕ, ಸಲಹೆಗಳಿಗೆ :-
"ಲವರ್ ಹೌಸ್", ಚಾಮರಾಜಪುರಂ,
ಮೈಸೂರು (ಸುತ್ತೂರು ಹಾಸ್ಟೆಲ್ ಹತ್ತಿರ)

SHREE RAMADAS UPPARA HOSTEL
Saraswathipuram, Mysore

Hostel re-opens on 1-7-57 Last date for receiving applications is 29-6-57 Students are admitted subject to rules framed by the Hostel Authorities

Y S LINGAIAH B A B L
Secretary

Edited, Printed and Published by A. R Nagarajan at Sadhvi Press, ...bhiah Road, Mysore

"ಭವಾನಿ ಜಂಕ್ಷನ್" ಚಿತ್ರದ ಪ್ರದರ್ಶನ

ನಗರದ ಗಾಯತ್ರಿ ಚಿತ್ರಮಂದಿರದ ವ್ಯವಸ್ಥಾಪಕರೂ ಮತ್ತು ಮೆಟ್ರೊ ಗೋಲ್ಡ್‌ವಿನ್ ಮೇಯರ್ ಚಿತ್ರ ಸಂಸ್ಥೆಯವರೂ ಮೇಲ್ಕಂಡ ಚಿತ್ರದ ವಿಶೇಷ ಪ್ರದರ್ಶನವೊಂದಕ್ಕೆ ನಗರದ ಪತ್ರಿಕೋದ್ಯೋಗಿಗಳು ಮತ್ತು ಇತರ ಗಣ್ಯರನ್ನು ನೆನ್ನೆ ಆಹ್ವಾನಿಸಿದ್ದರು

ಬ್ರಿಟಿಷರು ಭಾರತದಲ್ಲಿ ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ಉತ್ಪನ್ನವಾದ ಆಂಗ್ಲೊ ಇಂಡಿಯನ್ ಕೋಮಿನವರು, ಭಾರತದಿಂದ ಇಂಗ್ಲಿಷರು ತೆರಳಿದಾಗ ತಾವು ಭಾರತೀಯರಾಗಿ ಉಳಿಯುವುದೇ ಪರಕೀಯರಾಗಿ ತೆರಳುವುದೇ ಎಂಬುದನ್ನು ನಿರ್ಧರಿಸಲಾರದೆ ತೊಳಲಿದ ಪ್ರಸಂಗದ ಚಿತ್ರಣವೇ "ಭವಾನಿ ಜಂಕ್ಷನ್" ಆ ಕೋಮಿನ ವಿಕ್ಟೋರಿಯಾ ಎಂಬ ಯುವತಿಯು 'ಭವಾನಿ ಜಂಕ್ಷನ್' ಎಂಬ ರೈಲ್ವೆ ಕೇಂದ್ರದಲ್ಲಿ ಉದ್ಯೋಗಿ ಸ್ವಾತಂತ್ರ್ಯ ಚಳುವಳಿಯನ್ನು ಕಂಡು ಅವಳ ನಿಷ್ಠೆಯು ಭಾರತದೆಡೆಗೆ ವಾಲುವುದು ತಾನು ಕಷ್ಟಕ್ಕೆ ಸಿಕ್ಕಿದಾಗ ಆಶ್ರಯವಿತ್ತ ಒಬ್ಬ ಸಿಖ್ ಯುವಕನನ್ನು ವಿವಾಹವಾಗಲಿದ್ದಳು ಆದರೆ ತನ್ನ ಜನರನ್ನು ಬಿಡಲಾರದೆ ಆ ಪ್ರಯತ್ನವನ್ನು ನಿಲ್ಲಿಸಿ ಕೊನೆಗೆ ತನ್ನ ಜನಾಂಗದವನನ್ನೇ ವರಿಸುವಳು. ಆಕೆಯ ಪತಿಯು ಸಾಹಸದಿಂದ ರೈಲ್ವೆ ಅಪಘಾತ ತಪ್ಪಿಸಿದುದರಿಂದ ಬಡ್ತಿ ಹೊಂದಿ ವಿಲಾಯಿತಿಗೆ ಹೋಗಬೇಕಾದ ಕಾಯ್ದಾದನ್ನು ಬಿಡಲಾರದ ಅವಳು ಅವನನ್ನು ಭಾರತದಲ್ಲಿಯೇ ಉಳಿಸಿಕೊಳ್ಳುತ್ತಾಳೆ

ಚಿತ್ರದೊಳಗೆ ಸತ್ಯಾಗ್ರಹ ಚಳುವಳಿ, ರೈಲ್ವೆ ಅಪಘಾತದ ಭಯಾನಕ ಪ್ರಸಂಗ ಮುಂತಾದ ದೃಶ್ಯಗಳು ಕಣ್ಣಿಗೆ ಕಟ್ಟಿದಂತಿವೆ ವಿಕ್ಟೋರಿಯಾ ಪಾತ್ರದ ಅವಾ ಗಾರ್ಡ್‌ನರಳ ಅಭಿನಯವು ಶ್ಲಾಘನೀಯವಾಗಿದೆ ಎಲ್ಲರೂ ತಪ್ಪದೆ ನೋಡಬೇಕಾದ ಚಿತ್ರ 'ಭವಾನಿ ಜಂಕ್ಷನ್'

○ ಪೂರ್ವ ಅಮೇರಿಕದಲ್ಲಿ ಕಳೆದ ೪ ದಿನಗಳಿಂದ ವಿಪರೀತ ಬಿಸಿಯುಂಟಾಗಿ ೨೨೦ ಜನರು ಮಡಿದಿರುವರೆಂದು ವರದಿಯಾಗಿದೆ

THE
BANK OF MYSORE, Ltd.,
MYSORE BRANCH
Mysore 21st June, 1957

PUBLIC NOTICE

The Members of the Mysore Bankers Clearing House, Mysore unanimously resolved to restrict the Banking hours from 10-30 A M to 12-30 noon from Monday the 24th instant until further notice on account of the Influenza epidemic.

Accordingly, the Banks will work **from 10-30 A M to 12-30 noon with effect from Monday the 24th June 1957**

The Public are requested to kindly note this change in the Banking Hours

SHANKAR JAVALY,
President,
Mysore Bankers Clearing House,
MYSORE

ಬೆಂಗಳೂರಿನಲ್ಲಿ ಜುಲೈ ೧೪ರ ವರೆಗೆ ಶಾಲೆಗಳಿಲ್ಲ

ಬೆಂಗಳೂರಿನಲ್ಲಿ ಜುಲೈ ೧೪ರ ವರೆಗೆ ಶಾಲಾ ಕಾಲೇಜುಗಳನ್ನು ನಡೆಸಬಾರದೆಂದು ಆರೋಗ್ಯ ಡೈರೆಕ್ಟರರು ಸಲಹೆ ಮಾಡಿರುತ್ತಾರೆ ಅಲ್ಲಿ ಸಿನಿಮಾಗಳ ಮ್ಯಾಟನಿ ಪ್ರದರ್ಶನಗಳೂ ಜುಲೈ ೧೪ರ ವರೆಗೆ ಇರುವುದಿಲ್ಲ

ಉಪನಯನ

ಮೈಸೂರು ಸಂಸ್ಥಾನದ ಸೈನ್ಯಗಳ ಚೀಫ್ ಕಮ್ಯಾಂಡೆಂಟರ ಕಛೇರಿಯ ನಿವೃತ್ತ ಮ್ಯಾನೇಜರ್ ಶ್ರೀ ಎಂ. ಶೇಷಗಿರಿರಾಯರು ತಮ್ಮ ಕುಮಾರ ಚಿ॥ ಎಂ ಎಸ್ ಕೃಷ್ಣಮೂರ್ತಿ ಮತ್ತು ತಮ್ಮ ಮೊಮ್ಮಗ ಶ್ರೀ ಕೆ ಎನ್ ರಾಮರಾವ್ ಇವರುಗಳಿಗೆ ೧೯ನೇ ತಾ॥ ನಗರದಲ್ಲಿ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ನಾದನಿಕೇತನ

ಮೇಲ್ಕಂಡ ಸಂಗೀತ ಮಂದಿರದ ಆಶ್ರಯದಲ್ಲಿ ತಾ॥ 23-6 57 ರಿಂದ ವೀಣೆ ಮತ್ತು ಗಾಯಗಾರಿಕೆಯಲ್ಲಿ ಸಂಗೀತ ಪಾಠವನ್ನು ಲಕ್ಷ್ಮೀಪುರಂನಲ್ಲಿರುವ 'ಮಕ್ಕಳ ಕೂಟ'ದ ಆವರಣದಲ್ಲಿ ಹೇಳಿಕೊಡಲಾಗುತ್ತದೆ ಸಂಗೀತ ಕಲಾಭಿಮಾನಿಗಳೆಲ್ಲರೂ ಸಹಕರಿಸಬೇಕಾಗಿ ಕೋರಿದೆ

ವಿ. ರಾಮಸ್ವಾಮಿ,
ವ್ಯವಸ್ಥಾಪಕ

The Cauvery Valley Paper Mills Ltd.,
(In Liquidation)
Clock Tower Square,
Mysore, 21st June 57

SALE NOTICE

Offers are invited for the purchase of the following materials from the intending buyers upto 1 PM ON 29TH JUNE 1957 Please contact the undersigned for rules and conditions of sale and for further particulars.

'Pumps, cable wire, pipe bushes, ball bearings, V. Grooved pulleys, china clay, sulphuric acid jars, 100 K V A Transformer, One O C B Asbestos packing rope, M.S & C.I scrap, Electrical materials (Starters, switches, fuse cut-outs, shades etc.) grease cups, Fire extinguisher, barbed wire, Gate valves, Furniture (Steel, Rosewood, T W tables, almirahs, chairs etc)

S. SANJEEVIAH
B A, B Com., B L,
Y. S LINGIAH, B A, B.L.,
Official Liquidators.

Mysore
21-6-57

ರಾಜಕಮಲ್ ● 21-6-57ರಿಂದ : ಜನಪ್ರಿಯ ತಾರೆ ವಾಣಿ ಅಂಜಲಿ ಪಿಕ್ಚರ್ಸ್‌ರವರ ತಮಿಳು ಚಿತ್ರ

ಮಣಾಳನೇ ಮಂಗೈಯಿನ್ ಭಾಗ್ಯಂ

ಪಾತ್ರ.—ಜೆಮಿನಿ ಗಣೇಶನ್, ಅಂಜಲಿ, ರಾಜಸುಲೋಚನ,ಗಿರಿಜ, ಸೂರ್ಯಕಲಾ ಮುಂತಾದವರು
ನಿರ್ದೇಶನ : ವೇದಾಂತಂ ರಾಘವಯ್ಯ — ಸಂಗೀತ : ಆದಿನಾರಾಯಣರಾವ್
[ಶ್ರೀ ರಾಘವೇಂದ್ರ ರಿಲೀಸ್

ಟೆಲಿಫೋನ್ ನಂ 792

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಹೊಸ ಜವಳಿಗಳು ಬಂದಿವೆ

ಮೈಸೂರು ಸಿಲ್ಕು, ಧರ್ಮಾವರಂ

ಪೂನಾ, ನಾಗಪುರ, ಅರಣಿ ಸೀರೆಗಳು ಬಂದಿವೆ

M.V. ಭೋಜಯ್ಯ

ಬಿ ಎ ಅಂಡ್ ಬ್ರದರ್ಸ್

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು ಫೋನ್ 446

ಪುಟ : ೧೮] SADHVI । SUNDAY 23—6—1957 ಮೈಸೂರು । ಭಾನುವಾರ [illegible] । [ಸಂಚಿಕೆ : [illegible]

ಸಿರಿಯದ ಸರ್ಕಾರ ಉರುಳಿಸಲು ಅಮೆರಿಕದ ಸಂಚು ?

ಸಿರಿಯದಲ್ಲಿ ದಂಗೆ ನಡೆಸಲು ಅಮೆರಿಕಾ ಸನ್ನಾಹವೇ ?

ಸಿರಿಯದಲ್ಲಿ "ಈಗಿನ ಸರ್ಕಾರವನ್ನು ಉರುಳಿಸಿ ಅನೇಕ ಮುಖಂಡರನ್ನು ಕೊಲ್ಲುವ ಬಗ್ಗೆ ಅಮೆರಿಕದ ಅಧಿಕಾರಿಗಳು ಯೋಚನೆ ಹಾಕುತ್ತಿದ್ದಾರೆಂದು" ಈಜಿಪ್ಟಿನ ಅಲ್ ಷಾಬ್ ಎಂಬ ಪತ್ರಿಕೆಯು ಆಪಾದಿಸಿದೆ. ಸಿರಿಯಾ ರಾಜಧಾನಿಯಲ್ಲಿರುವ ಅಮೆರಿಕಾ ರಾಯಭಾರಿ ಕಛೇರಿಯ ಮಿಲಿಟರಿ ಅಧಿಕಾರಿಯು ಈ ಸಂಚಿನಲ್ಲಿ ಸೇರಿರುವರೆಂದೂ, ಕೋಟಿಗಟ್ಟಲೆ ಹಣವನ್ನು ವೆಚ್ಚ ಮಾಡಲಾಗುತ್ತಿರುವುದೆಂದೂ ವರದಿಯಾಗಿದೆ. ಈ ಕಾರ್ಯಕ್ಕೆ ಅರಬ್ ರಾಷ್ಟ್ರಗಳಲ್ಲಿ ಅಮೆರಿಕಾ ತೆರೆದಿರುವ ರಾಯಭಾರ ಕಛೇರಿಗಳು ಸಹಾಯಕವಾಗಿರುವುದಾಗಿಯೂ ಆ ಪತ್ರಿಕೆ ತಿಳಿಸಿದೆ.

ಜಪಾನಿನಲ್ಲಿ ಅಮೆರಿಕಾ ಸೈನ್ಯದ ಕಡಿತ

ಜಪಾನ್ ಪ್ರಧಾನಿ ಕಿಷಿ ಮತ್ತು ಐಸೆನ್‌ಹೋವರರ ಜಂಟಿ ಹೇಳಿಕೆ

ಜಪಾನಿನಲ್ಲಿರುವ ಅಮೆರಿಕದ ಭದ್ರತಾ ಸೈನ್ಯದ ಸಂಖ್ಯೆಯನ್ನು ಬರುವ ವರ್ಷದೊಳಗೆ ಗಣನೀಯವಾಗಿ ಕಡಿಮೆ ಮಾಡಲಾಗುವುದೆಂದು ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ಜಪಾನಿನ ಪ್ರಧಾನಿ ಕಿಷಿಯವರೊಡನೆ ಜಂಟಿ ಹೇಳಿಕೆ ಹೊರಡಿಸಿ ತಿಳಿಸಿದ್ದಾರೆ. ಆದರೆ ಓಕಿನಾವಾ ದ್ವೀಪದ ಪೂರ್ಣ ಹತೋಟಿಯನ್ನು ಅಮೆರಿಕವು ಇಟ್ಟುಕೊಳ್ಳುವುದೆಂದೂ, ಅಲ್ಲಿನ ನಿವಾಸಿಗಳ ಯೋಗಕ್ಷೇಮವನ್ನು ಸಾಧಿಸಲು ಪ್ರಯತ್ನಿಸುವುದಾಗಿ ಅಮೆರಿಕವು ಪ್ರತಿಜ್ಞೆ ಕೊಟ್ಟಿರುವುದೆಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ. ಲಂಡನ್ನಿನಲ್ಲಿ ಸೇರಿದ್ದ ಪತ್ರ ಸನ್ನಾಸ ಸಮ್ಮೇಳನದಲ್ಲಿ ಅಣು ಶಸ್ತ್ರಾಸ್ತ್ರಗಳ ಪರೀಕ್ಷೆ ಬಗ್ಗೆ ಜಪಾನಿನ ಅಭಿಪ್ರಾಯವನ್ನು ಗಮನಿಸಲಾಗುವುದೆಂದೂ ಅಧ್ಯಕ್ಷರು ಕಿಷಿಯವರಿಗೆ ತಿಳಿಸಿರುವುದಾಗಿ ವರದಿಯಾಗಿದೆ.

ಮುಖ್ಯ ಮಂತ್ರಿಗಳ ಕಾರ್ಯಕ್ರಮ ರದ್ದು

ಇನ್‌ಫ್ಲುಯೆಂಜಾ ಪೀಡಿತರಾಗಿರುವ ಮುಖ್ಯ ಮಂತ್ರಿಯವರು ನೆನ್ನೆಯಿಂದ ೮ ದಿನಗಳ ತಮ್ಮ ಕಾರ್ಯಕ್ರಮಗಳನ್ನು ರದ್ದುಗೊಳಿಸಿರುತ್ತಾರೆ. ಪ್ರೇಕ್ಷಕರು ಅವರನ್ನು ಭೇಟಿ ಮಾಡಬಾರದೆಂದು ಕೋರಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕ್ಲಾರಿಯೊನೆಟ್ ೭-೧೫ ಶ್ರೀಮತಿ ಪ್ರಸಾದ್–ದೇವರ ನಾಮ. ೮-೧೫ ಗಾನ ವಿಶಾರದ ಮಧ್ಯಾಹ್ನ ೧೨ ಶ್ರೀಮತಿ ಪ್ರಸಾದ್–ಸಂಗೀತ ೧೨ ೩೦ ಡಿ ರವೀಂದ್ರ–ವೀಣೆ ೧ ವಿನುಲಾ ಹತ್ತಂಗಡಿ-ಹಿಂದಿ ಗೀತೆ ೧-೩೦ ರಿ ಸಿತಾರ್ ೧-೫೦ ಕ್ಲಾರಿಯೊನೆಟ್. ೨-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ಜಾನಪದ ಗೀತೆ ೭ ೩೦ ಹಿಂದಿ ಗೀತೆ. ೮ ವೃಂದ ಗಾನ ಮತ್ತು ಯುಗಳ ಗಾನ. ೮-೧೫ ನಾಟ್ಯ ಮತ್ತು ಶಿವಪ್ಪನವರು ೮-೩೦ ಸಂಗೀತ. ೮-೪೫ ವಾದ್ಯ ವೃಂದ ೯-೨೫ ಕಲಾ ಮತ್ತು ಸಂಸ್ಕೃತಿಯ ಸ್ಮಾರಕಗಳು ಭಾಷಣ ೯-೩೦ ನಾರಾಯಣದಾಸ್–ಕಥಾ ಕಾಲಕ್ಷೇಪ ೧೦-೩೦ ಡಿ ರವೀಂದ್ರ–ವೀಣೆ.

ಆರು-ಎಂಟು ವಾರಗಳಲ್ಲಿ ಮತ್ತೊಮ್ಮೆ ಫ್ಲೂ ವ್ಯಾಪನೆ

ಉಗ್ರರೂಪ ತಾಳುವುದರ ಬಗ್ಗೆ ಕೇಂದ್ರ ಆರೋಗ್ಯ ಡೈರೆಕ್ಟರರ ಹೇಳಿಕೆ

ಬೆಂಗಳೂರು, ೨೨

ಆರೋಗ್ಯ ಮಂತ್ರಿ ಶ್ರೀ ಆರ್ ಎಂ ಪಾಟೀಲರು ನೆನ್ನೆ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ, ಇನ್ನು ಆರು ಅಥವಾ ೮ ವಾರಗಳಲ್ಲಿ ಇನ್‌ಫ್ಲುಯೆಂಜಾವು ಮತ್ತೆ ಬರುವುದೆಂದೂ ಅದು ಈಗಿನದಕ್ಕಿಂತಲೂ ಉಗ್ರ ರೂಪವನ್ನು ತಾಳಿ ಹೆಚ್ಚು ಮರಣಗಳು ಸಂಭವಿಸಬಹುದೆಂದೂ ತಿಳಿಸಿದರು. ಈಗ ವ್ಯಾಧಿಯು ಇಳಿಮುಖವಾಗಿರುವುದೆಂದೂ ಸಂದೆ ತೊಂದರೆಯು ಕಾದಿದೆಯೆಂದೂ ಅವರು ಹೇಳಿದರು. ಈ ಬಗ್ಗೆ ಕೇಂದ್ರ ಸರ್ಕಾರದ ಆರೋಗ್ಯ ಡೈರೆಕ್ಟರ್ ಜನರಲ್ಲರು ಎಲ್ಲಾ ಸಂಸ್ಥಾನಗಳಿಗೂ ಎಚ್ಚರಿಕೆ ಕೊಟ್ಟಿರುವರೆಂದೂ, ಈಗಿನಿಂದಲೇ ರೋಗದ ಹತೋಟಿ ಕ್ರಮ ಕೈಗೊಳ್ಳುವಂತೆ ಅವರು ಸೂಚಿಸಿರುವರೆಂದೂ ಸಚಿವರು ಹೇಳಿದರು. ಎರಡನೇ ಆವರ್ತಿ ಶಾಲಾ ಮಕ್ಕಳುಗಳಿಗೆ ರೋಗವು ಬಾಧಿಸಬಹುದೆಂದೂ ಜಪಾನಿನಲ್ಲಿ ಈಗಾಗಲೇ ಎರಡನೇ ಸಾರಿ ಇನ್‌ಫ್ಲುಯೆಂಜಾವು ಹಬ್ಬಿರುವುದೆಂದೂ ಕೇಂದ್ರ ಆರೋಗ್ಯಾಧಿಕಾರಿಗಳು ತಿಳಿಸಿರುವುದಾಗಿಯೂ ಸಚಿವರು ನುಡಿದರು.

ಇನ್‌ಫ್ಲುಯೆಂಜಾಕ್ಕಾಗಿ ವಿಧಾನ ಸಭೆಯು ಮುಂದಕ್ಕೆ

ಇನ್‌ಫ್ಲುಯೆಂಜಾ ವ್ಯಾಧಿಗಾಗಿ ವಿಧಾನ ಸಭೆಯ ಆಯವ್ಯಯ ಅಧಿವೇಶನವು ನೆನ್ನೆ ವಿರಮಿಸಿತು. ಪುನಃ ಜುಲೈ ೧ಕ್ಕೆ ಅದು ಆಯವ್ಯಯ ಚರ್ಚೆಯನ್ನು ಮುಂದುವರಿಸುವುದು.

ಕರವಸ್ತ್ರ ಬಳಕೆಯಿಂದ ಫ್ಲೂ ಸೋಂಕು ಕಡಿಮೆ

ಇನ್‌ಫ್ಲುಯೆಂಜಾ ರೋಗಿಗಳು ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರಗಳನ್ನು ಉಪಯೋಗಿಸಿದರೆ ರೋಗವು ಹರಡುವುದು ಶೇಕಡ ೫೦ರಷ್ಟು ಕಡಿಮೆಯಾಗುವುದೆಂದು ಸಂಸ್ಥಾನದ ಆರೋಗ್ಯಾಧಿಕಾರಿಗಳಾದ ಶ್ರೀ ಶೇಷಗಿರಿರಾಯರು ತಿಳಿಸಿರುತ್ತಾರೆ.

ವಿಶ್ವವಿದ್ಯಾನಿಲಯದ ಪ್ರಾಚ್ಯ ಸಂಶೋಧ ನಾಲಯಕ್ಕೆ ರಷ್ಯನ್ ವಿಜ್ಞಾನಿಗಳ ಭೇಟಿ

ರಷ್ಯದ ನಾಲ್ಕು ಮಂದಿ ವಿಜ್ಞಾನಿಗಳ ತಂಡದವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ಸಂಶೋಧನಾಲಯಕ್ಕೆ ಕಳೆದ ಗುರುವಾರ ಭೇಟಿಯಿತ್ತು ಅಲ್ಲಿನ ಪಾಠ್ಯಕಲಾಪಗಳನ್ನು ಪರಿಶೀಲಿಸಿದರು. ಸಂಸ್ಥೆಯ ಮುಖ್ಯಾಧಿಕಾರಿಗಳಾದ ಶ್ರೀ ಹೆಚ್. ದೇವೀರಪ್ಪನವರು ಅವರನ್ನು ಸ್ವಾಗತಿಸಿ, ಸಂಶೋಧನಾಲಯದ ಎಲ್ಲಾ ವಿಭಾಗಗಳಿಗೂ ಕರೆದೊಯ್ದು ಕಾರ್ಯಕಲಾಪಗಳ ಪರಿಚಯವನ್ನು ಮಾಡಿಕೊಟ್ಟರು. ಸಂಸ್ಥೆಯಲ್ಲಿ ಶೇಖರಿಸಿರುವ ಅಮೂಲ್ಯವಾದ ಹಸ್ತಪ್ರತಿಗಳನ್ನು ವಿಜ್ಞಾನಿಗಳು ಆಸಕ್ತಿಯಿಂದ ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುವುದಲ್ಲದೆ, ಕೆಲವು ಹಸ್ತಪ್ರತಿಗಳ ಚಿತ್ರವನ್ನೂ ಸಹ ತೆಗೆದುಕೊಂಡರು.

ಹೋಟೇಲು ತಿಂಡಿ ಮತ್ತು ಆಹಾರಗಳಿಗೆ ಮಾರಾಟ ತೆರಿಗೆ

ವಿಧಾನ ಪರಿಷತ್ತಿನಲ್ಲಿ ಮಸೂದೆ ಮೇಲೆ ಉಗ್ರ ಟೀಕೆ

ಬೆಂಗಳೂರು ೨೨

ವಿಧಾನ ಸಭೆಯಲ್ಲಿ ಅಂಗೀಕೃತವಾದ ಮೈಸೂರು ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ಪರಿಷತ್ತಿನಲ್ಲಿ ನೆನ್ನೆ ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರು ಮಂಡಿಸಿದರು. ಅದು ಅಂಗೀಕೃತವಾಯಿತು. ಅದರಲ್ಲಿ ತೆರಿಗೆ ಬಂದು, ಅದರಲ್ಲಿ ಪರಿಷ್ಕೃತವಾದ ಶಾಸನಕ್ಕೆ ಈಗ ತಿದ್ದುಪಡಿ ತರಲಾಗಿದೆ.

ಹೋಟೇಲು, ಬೋರ್ಡಿಂಗ್ ಭವನ, ರೆಸ್ಟೋರೆಂಟ್ ಮುಂತಾದುವುಗಳಲ್ಲಿ ಆಹಾರ ಮತ್ತು ಪಾನೀಯಗಳ ಒಟ್ಟು ಮಾರಾಟದಮೇಲೆ ಇತರ ವಸ್ತುಗಳ ತೆರಿಗೆಗಿಂತ ಹೆಚ್ಚಾಗಿ ವಿಧಿಸಿದ್ದ ಸಂದರ್ಭದಲ್ಲಿ ಹಲವು ಹೋಟೇಲು ಮಾಲೀಕರು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕಲಾಗಿ ಹೆಚ್ಚಿನ ತೆರಿಗೆಯು ರಾಜ್ಯಾಂಗದ ವಿರೋಧವಾದುದೆಂದು ಹೈಕೋರ್ಟಿನವರು ತೀರ್ಪಿತ್ತಿದ್ದರು. ಈ ಬಗ್ಗೆ ತಿದ್ದುಪಡಿಯನ್ನು ತಂದು, ಹೋಟೇಲು ಮುಂತಾದುವುಗಳ ಜೊತೆಗೆ ಎಲ್ಲಿಯೇ ಮಾರಲಿ ಆಹಾರ ಮತ್ತು ಪಾನೀಯಗಳಿಗೆ ತೆರಿಗೆ ವಿಧಿಸಲು ಅವಕಾಶ ಕೊಟ್ಟಿದೆ.

ತಿದ್ದುಪಡಿಯನ್ನು ಶ್ರೀ ಎಂ ಪಿ ಎಲ್ ಶಾಸ್ತ್ರಿಯವರು ಕಟುವಾಗಿ ಟೀಕಿಸಿ, ಒಟ್ಟು ವ್ಯಾಪಾರದ ಮೇಲೆ ಹಾಕುವ ತೆರಿಗೆಯು ಮಾರಾಟ ತೆರಿಗೆಯಾಗುವುದಿಲ್ಲವೆಂದೂ, ಈ ತೆರಿಗೆಯು ಅನ್ಯಾಯವಾದುದೆಂದೂ, ಇಂತಹ ಕಾನೂನುಗಳು ಪ್ರಜಾಸತ್ತಾತ್ಮಕ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆಂದೂ, ಅವುಗಳನ್ನು ಮಾಡಿದರೆ ಜನರ ವಿಶ್ವಾಸವು ಹೋಗುವುದೆಂದೂ ಹೇಳಿದರು. ಹಣಕಾಸಿನ ಸಚಿವರು ಉತ್ತರವಿತ್ತು, ಹೋಟೇಲು ತೆರಿಗೆ ವಿಚಾರವನ್ನು ವಿವರಿಸಿದರು.

ರಷ್ಯಕ್ಕೆ ಮೋದಿಯವರ ಭೇಟಿ

ಕರ್ನಾಟಕದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾII ಎಂ ಸಿ ಮೋದಿಯವರು ಬರುವ ತಿಂಗಳಲ್ಲಿ ರಷ್ಯಕ್ಕೆ ಭೇಟಿ ಕೊಡುವರು. ಅವರು ಮಾಸ್ಕೋವಿನಲ್ಲಿ ನಡೆಯುವ ಯುವಕರ ಹಬ್ಬದಲ್ಲಿ ಭಾಗವಹಿಸಿ, ಎರಡು ತಿಂಗಳ ಕಾಲ ರಷ್ಯದಲ್ಲಿ ಪ್ರವಾಸ ಮಾಡಿ ಅಲ್ಲಿನ ಆಸ್ಪತ್ರೆಗಳು ಮತ್ತು ಇತರ ಸ್ಥಳಗಳನ್ನು ಸಂದರ್ಶಿಸುವರು.

ರಷ್ಯಾ ಸೈನ್ಯಗಳಿಂದ ಹಂಗೆರಿ ರಾಜ್ಯ ಕ್ರಾಂತಿಯ ದಮನ

ಕಳೆದ ಹೇಮಂತ ಋತುವಿನಲ್ಲಿ ಹಂಗೆರಿಯಲ್ಲಿ ಸಾರ್ವತ್ರಿಕ ರಾಷ್ಟ್ರೀಯ ದಂಗೆಯಾದುದಾಗಿಯೂ, ಅದನ್ನು ರಷ್ಯಾ ಸೈನ್ಯಗಳು ದಮನ ಮಾಡಿದುವೆಂಬುದರಲ್ಲಿ ಸಂಶಯವೇನೂ ಇಲ್ಲವೆಂದೂ ಪ್ರಧಾನಿ ನೆಹರೂರವರು ತಿಳಿಸಿದ್ದಾರೆ. ಹಂಗೆರಿ ಕ್ರಾಂತಿಯು ನಮ್ಮ ಕಾಲದ ಅತ್ಯಂತ ಘೋರ ದುರಂತಗಳಲ್ಲೊಂದೆಂದು ಅಭಿಪ್ರಾಯಪಟ್ಟು, ಹಂಗೆರಿ ಕ್ರಾಂತಿಯಲ್ಲಿ ಇತರ ಶಕ್ತಿಗಳೂ ಸೇರಿಕೊಂಡಿದ್ದುವೆಂದೂ ಅವರು ತಿಳಿಸಿರುವರು.

"ಕನ್ನಡ ಥಿಯೇಟರ್ಸ್" ಆರಂಭೋತ್ಸವ

ಮೈಸೂರು, ೨೨

ಕನ್ನಡ ರಂಗಭೂಮಿಯ ಅಭ್ಯುದಯಕ್ಕಾಗಿ ಶ್ರೀಗಳಾದ ಎಂ ಬಿ ದೊರೆಯ್ಯ, ಜಿ ಹೆಚ್ ವೀರಣ್ಣ, ನಾಟ್ಯ ಕಲಾ ವಿಶಾರದ ಎಂ ಸಿ ಮಹದೇವಸ್ವಾಮಿ, ಶ್ರೀಮತಿ ಎಂ. ವಿ. ರಾಜಮ್ಮನವರು ಸ್ಥಾಪಿಸಿರುವ "ಕನ್ನಡ ಥಿಯೇಟರ್ಸ್ ಪ್ರೈವೇಟ್" ಸಂಸ್ಥೆಯ ಕಾರ್ಯಾರಂಭದ ಅಂಗವಾಗಿ ನೆನ್ನೆ ಸಂಜೆ ಶ್ರೀ ಶಾರದಾ ಗಣಪತಿ ಪೂಜಾ ಮಂಗಳಾರತಿಯು ದೊರೆಯ್ಯ ಬಸವಯ್ಯನವರ ಅತಿಥಿ ಗೃಹದಲ್ಲಿ ನಡೆಯಿತು. ಪೌರಸಭಾಧ್ಯಕ್ಷರಾದ ಶ್ರೀ ಎಸ್ ಸಂಜೀವಯ್ಯನವರು ಅಧ್ಯಕ್ಷತೆ ವಹಿಸಿದ್ದರು. ನಗರದ ಅನೇಕ ಪ್ರಮುಖರೂ, ಕಲಾವಿದರೂ ಬಂದಿದ್ದರು.

ಶ್ರೀಮತಿ ಶಾಂತರಾಜಮ್ಮಣ್ಣಿಯವರ ಗಾಯನವಾದನಂತರ ಶ್ರೀ ಮಹದೇವಸ್ವಾಮಿಯವರು ಸ್ವಾಗತ ಭಾಷಣ ಮಾಡಿ, ಹಿಂದೆ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕನ್ನಡ ರಂಗಭೂಮಿ ಮತ್ತು ಕಲಾವಿದರ ಸ್ಥಿತಿಗತಿಗಳು ದಿನೇದಿನೇ ಕ್ಷೀಣಿಸುತ್ತಿರುವುದನ್ನು ವಿವರಿಸಿ ಇದನ್ನು ತಪ್ಪಿಸಿ ನಾಟ್ಯ ಕಲೆಯನ್ನು ಪುನರುಜ್ಜೀವನಗೊಳಿಸುವುದಲ್ಲದೆ ಕಲಾವಿದರಿಗೆ ಪ್ರೋತ್ಸಾಹವನ್ನು ನೀಡಿ ಮಹಾಜನರ ಮನರಂಜನೆಗೂ, ಸಮಾಜದ ಕಲ್ಯಾಣಕ್ಕೂ ಸಾಧಕವಾಗುವ ಉದ್ದೇಶದಿಂದ ಈ ಸಂಸ್ಥೆಯನ್ನು ಸ್ಥಾಪಿಸಿರುವುದಾಗಿ ಹೇಳಿ, ಅದಕ್ಕೆ ಎಲ್ಲರ ನೆರವನ್ನೂ ಕೋರಿದರು.

ಶ್ರೀ ತ ರಾ ಸುಬ್ಬರಾಯರು ನಾಟಕ ಕಲೆ ವಿಷಯವಾಗಿ ಭಾಷಣ ಮಾಡಿ ಪರಕೀಯರ ಅನುಕರಣವನ್ನು ಬಿಟ್ಟು ಕನ್ನಡ ಸಂಸ್ಕೃತಿ ಮತ್ತು ಕಲೆಯನ್ನು ಪ್ರತಿಬಿಂಬಿಸುವ ನಾಟಕಗಳಿಗೆ ಪುರಸ್ಕಾರ ದೊರೆಯಬೇಕೆಂದು ನುಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮೈಸೂರಿನ ನಾಗರಿಕರ ಕಲಾ ಪ್ರೇಮವನ್ನು ವಿವರಿಸಿ ಈ ಸಂಸ್ಥೆಯ ಉತ್ತಮ ಧ್ಯೇಯ ಸಾಧನೆಯಲ್ಲಿ ಸಕಲರೂ ನೆರವು ನೀಡುವರೆಂದು ತಿಳಿಸಿ, ಅದಕ್ಕೆ ಯಶಸ್ಸನ್ನು ಕೋರಿದರು. ವಂದನಾರ್ಪಣೆಯಾದನಂತರ ಪ್ರಸಾದ ವಿನಿಯೋಗ ಮತ್ತು ಉಪಾಹಾರದೊಡನೆ ಸಮಾರಂಭವು ಮುಗಿಯಿತು.

ಯಕ್ಷಗಾನ ಕಥಾ ಕಾಲಕ್ಷೇಪ

ನಗರದ ರಮಾವಿಲಾಸ ರಸ್ತೆಯಲ್ಲಿರುವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ಈ ರಾತ್ರಿ ೮ ಗಂಟೆಗೆ ಶ್ರೀ ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ "ದ್ರೌಪದಿ ಪ್ರತಾಪ" ಎಂಬ ಕಥೆಯು ನಡೆಯುವುದು.

ಅರಗು ಮತ್ತು ಬಣ್ಣದ ಕಾರ್ಖಾನೆ ಕೆಲಸಗಾರರ ಬೇಡಿಕೆ

ನಗರದ ಅರಗು ಮತ್ತು ಬಣ್ಣದ ಕಾರ್ಖಾನೆ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಗುರುವಾರ ಶ್ರೀ ಎಂ ಲಕ್ಷ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಕಳೆದ ಜನವರಿಯಿಂದ ಸರ್ಕಾರಿ ಕಾರ್ಖಾನೆ ಕಾರ್ಮಿಕರಿಗೆ ಕೊಡಬೇಕೆಂದಿರುವ ೩೦ ರೂ ತುಟ್ಟಿಭತ್ಯವನ್ನು ತಮ್ಮ ಕಾರ್ಮಿಕರಿಗೂ ಕೊಡಬೇಕಾಗಿ ಸರ್ಕಾರವನ್ನು ಕೋರಿರುತ್ತಾರೆ.

ವಾರ ಭವಿಷ್ಯ

ತಾ॥ ೨೩-೬-೫೭ ರಿಂದ ೩೦-೬-೫೭ ರ ವರೆಗೆ

ಮೇಷ :— ಕೆಲಸದಲ್ಲಿ ವಿಪರೀತ ವಿಳಂಬ, ವ್ಯಾಪಾರಗಾರರಿಗೆ ಸಾಮಾನ್ಯ ಲಾಭ, ಪ್ರವಾಸದಲ್ಲಿ ನಷ್ಟ, ವ್ಯವಸಾಯಗಾರರಿಗೆ ನಷ್ಟ, ಮಹಿಳೆಯರಿಗೆ ಅನಾರೋಗ್ಯ

ವೃಷಭ :—ಹಿಡಿದ ಕಾರ್ಯ ಜಯ, ಲೇವಾದೇವಿಗಾರರಿಗೆ ಸುಯೋಗ, ಗುರುಹಿರಿಯರ ಜಗಮನ, ಜವಾಹಿರಿ ವ್ಯಾಪಾರಿಗಳಿಗೆ ಒಳ್ಳೆಯ ಕಾಲ, ಪ್ರವಾಸದಲ್ಲಿ ಲಾಭ, ಬಂಧುಮಿತ್ರರ ಟೀಕಣ.

ಮಿಥುನ :—ನಂಬಿದವರೆಲ್ಲಾ ಕೈಬಿಡುವರು, ಹಣದ ಕಾಟತ್ರಯ, ವ್ಯಾಪಾರಗಾರರಿಗೆ ತೊಂದರೆ, ವ್ಯವಸಾಯಗಾರರಿಗೆ ನಷ್ಟ, ಬಂಧುಮಿತ್ರರೊಡನೆ ಸಂತೋಷ

ಕಟಕ :—ಪ್ರವಾಸ ಬೇಡ, ಮನೆಯವರಿಗೆ ಪ್ಲ್ಯೂ ಬರುವ ಸಂಭವ, ವ್ಯವಸಾಯದವರಿಗೆ ಸಾಮಾನ್ಯ ಫಲ, ಅನಿರೀಕ್ಷಿತ ಧನಾಗಮ.

ಸಿಂಹ :—ಸಕಲ ಕಾರ್ಯ ಜಯ, ಶತ್ರುಗಳು ಮಿತ್ರರಾಗುವರು, ವ್ಯಾಪಾರಗಾರರಿಗೆ ಸುಯೋಗ, ಸ್ತ್ರೀಯರಿಗೆ ವಸ್ತ್ರಾಭರಣ ಪ್ರಾಪ್ತಿ.

ಕನ್ಯಾ :— ಅನಿರೀಕ್ಷಿತ ಧನಾಗಮ, ಪ್ರವಾಸದಿಂದ ಲಾಭ, ವ್ಯವಸಾಯಗಾರರಿಗೆ ವಿಶೇಷ ಲಾಭ, ಹತ್ತಿ ಗಿರಣಿ ಕಂಪೆನಿಯವರಿಗೆ ಯಶಸ್ಸು

ತುಲಾ :—ವ್ಯಾಪಾರಗಾರರಿಗೆ ಅಧಿಕ ನಷ್ಟ, ಸಾಮಾನ್ಯ ಲಾಭ, ಪ್ರವಾಸದಲ್ಲಿ ಜಯ, ಅನಿರೀಕ್ಷಿತ ಧನಾಗಮ.

ವೃಶ್ಚಿಕ :—ಅನಾರೋಗ್ಯ, ಕುಟುಂಬದವರಿಗೂ ಆರೋಗ್ಯವಿರುವುದಿಲ್ಲ, ವ್ಯಾಪಾರಗಾರರಿಗೆ ಸಾಮಾನ್ಯ ಲಾಭ, ಪ್ರವಾಸದಲ್ಲಿ ಸಾಮಾನ್ಯ ಸುಖ, ಸ್ತ್ರೀಯರಿಗೆ ಚಿಂತೆ; ಅನೂರಾಧಾ ನಕ್ಷತ್ರದವರಿಗೆ ಲಾಭ

ಧನುಸ್ಸು :—ಮರ್ಯಾದೆಗೆ ಕೊರತೆ ಇಲ್ಲ, ಈ ರಾಶಿಯ ವೈದ್ಯರಿಗೆ ಸುಯೋಗ, ಪ್ರವಾಸ ಬೇಡ, ಸಾಲ ಕೊಟ್ಟರೆ ಕಷ್ಟ

ಮಕರ :—ಸರ್ವ ಕಾರ್ಯಗಳಲ್ಲೂ ಜಯ, ಯಂತ್ರ, ಗಿರಣಿಯವರಿಗೆ ವಿಶೇಷ ಲಾಭ, ಶತ್ರುಗಳಿಂದ ವಿಚಿತ್ರಕಷ್ಟ, ಗೃಹದಲ್ಲಿ, ಸಂತೋಷ ಕೂಟ, ಪ್ರವಾಸದಲ್ಲಿ ಲಾಭ

ಕುಂಭ :—ಹಣದ ಕೊರತೆ, ಸಾಲ ಮಾಡಬೇಕಾಗುವ ಪ್ರಸಂಗ, ಪ್ರವಾಸದಲ್ಲಿ ಸುಖ, ವ್ಯವಸಾಯಗಾರರಿಗೆ ಮಧ್ಯಮ ಲಾಭ, ಶುಕ್ರನಿಂದ ಉತ್ತಮ ಫಲ.

ಮೀನ :— ವ್ಯಾಪಾರಸ್ಥರಿಗೆ ವಿಶೇಷ ಲಾಭ, ವ್ಯವಸಾಯಗಾರರಿಗೆ ಸುಯೋಗ, ಸ್ತ್ರೀಯರ ಗಡಿಬಿಡಿ, ಬಂಧುಮಿತ್ರರಿಗೆ ಔತಣ, ಮನರಂಜನೆಗಾಗಿ ಖರ್ಚು.

CENTRAL INSTITUTE OF COMMERCE
Vani Vilas Market, Mysore

Efficient Coaching — Best Results. Admissions received for Diploma in Commerce & Stenography & for Shorthand and Typewriting Make haste and rush in before admissions close.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 1911)

ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್, ಮೈಸೂರು

ಫೋ ನಂ 575 : ತಾರೀಖು 22-6-57

ಹೊಸ ಅಕ್ಕಿ ಡಿಪೋ ಪ್ರಾರಂಭ

ಮಹಾ ಜನಗಳ ಸೌಕರ್ಯಕ್ಕಾಗಿ ಹೊಸ ಸ್ವಾಟ್ಸ್ ಸರ್ಕಲ್ಲಿನಲ್ಲಿರುವ ಸೊಸೈಟಿಯ ಸೊಸ ಕಟ್ಟಡದಲ್ಲಿ ಹೊಸದಾಗಿ ಅಕ್ಕಿ ಡಿಪೋ ಮೊನ್ನೆಯಿಂದ ಪ್ರಾರಂಭಕಲಾಗಿದೆ. ಈ ಡಿಪೋವಿನಲ್ಲಿ ರೂ 1ಕ್ಕೆ 2 ಸೇರಿನಂತೆ ಅಕ್ಕಿ ಮಾರಾಟ ಮಾಡಲಾಗುತ್ತಿದೆ ಮತ್ತು ನಾನಾ ತರಹೆಯ ಕಾಫಿ ಬೀಜಗಳು ಕಂಟ್ರೋಲ್ ಬೆಲೆಗಳಿಗೆ ಮಾರಾಟಕ್ಕಿವೆ ಮಹಾ ಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

ಪಿ. ಗೋಪಾಲಕೃಷ್ಣ ಶೆಟ್ಟಿ,
ಅಧ್ಯಕ್ಷರು

ನಗರಕ್ಕೆ ದುರ್ಗಾಬಾಯಿ ದೇಶಮುಖ್‌ರವರ ಭೇಟಿ

ಕೇಂದ್ರ ಸಮಾಜ ಕಲ್ಯಾಣ ಬೋರ್ಡಿನ ಅಧ್ಯಕ್ಷಿಣಿ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ಈ ತಿಂಗಳು ೨೬ನೇ ತಾರೀಖು ನಗರಕ್ಕೆ ಆಗಮಿಸಿ ಮಾರನೇ ದಿನ ಜಿಲ್ಲಾ ಯೋಜನಾ ಕೇಂದ್ರಗಳನ್ನು ಸಂದರ್ಶಿಸುವರು ಒಂಟಿಕೊಪ್ಪಲಿನ ಮಾತೃ ಮಂಡಲಿ ಮತ್ತು ಕಸ್ತೂರ್‌ಬಾ ಕನ್ಯಾ ವಿದ್ಯಾಲಯಗಳಿಗೂ ಭೇಟಿಯಾಯುವರು ಅವರೊಡನೆ ಪಾಟಿಯಾಲಾ ಮಹಾರಾಣಿಯವರೂ ಆಗಮಿಸುವರು

GRAND ATTRACTION
Group & Flash
PHOTOGRAPHS
Role Films, Developing, Printing & Enlarging Undertaken
SRI KANTH STUDIO
Near Prabha Talkies
Mysore
Your Card Size Photo Re. One only

ನಾದ ನಿಕೇತನ

ಮೇಟಗಳ್ಳಿಯ ಸಂಗೀತ ಮಂದಿರದ ಆಶ್ರಯದಲ್ಲಿ 23 6 57 ರಿಂದ ವೀಣೆ ಮತ್ತು ಹಾಡುಗಾರಿಕೆಯಲ್ಲಿ ಸಂಗೀತ ಪಾಠವನ್ನು ಲಕ್ಷ್ಮೀಪುರಂನಲ್ಲಿರುವ 'ಮಕ್ಕಳ ಕೂಟ'ದ ಆವರಣದಲ್ಲಿ ಹೇಳಿಕೊಡಲಾಗುತ್ತದೆ ಸಂಗೀತ ಕಲಾಭಿಮಾನಿಗಳೆಲ್ಲರೂ ಸಹಕರಿಸಬೇಕಾಗಿ ಕೋರಿಕೆ

ವಿ. ರಾಮಸ್ವಾಮಿ,
ವ್ಯವಸ್ಥಾಪಕ

ನಗರದಲ್ಲಿ ಇನ್‌ಫ್ಲುಯೆಂಜಾದಿಂದ ಒಂದು ಮರಣ

ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಇನ್‌ಫ್ಲುಯೆಂಜಾದಿಂದ ಒಂದು ಮರಣವು ಸಂಭವಿಸಿರುವುದಾಗಿ ಅಧಿಕೃತವಾಗಿ ತಿಳಿದುಬಂದಿದೆ.

ಅವನನ್ನು ನೋಡಿರಿ

- ★ ಅವನ ಮೂಗು ಬಾಧೆ ಪಡುತ್ತಿದೆ ಅಥವಾ ಅವನ ಗಂಟಲಿನಲ್ಲಿ ತೀಕವಾಗಿದೆ
- ★ ಅವನು ಹಾಸಿಗೆಯಿಂದ ಎದ್ದು ಕೂಡುವನು ಅಥವಾ ಕಿಟಕಿಯ ಬಳಿಗೆ ಓಡುವನು
- ★ ಅವನು ದಿಗ್ಭ್ರಾಂತನಾಗುವನು ಮತ್ತು ಉಸಿರಾಡಲು ಒದ್ದಾಡುವನು
- ★ ಅವನ ಉಚ್ಛ್ವಾಸವು ತುಂಬಾ ಕಡಿಮೆಯದ್ದು ಮತ್ತು ಅತಿ ಶೀಘ್ರವಾದುದು, ನಿಶ್ವಾಸವು ತುಂಬಾ ಕಠಿಣವಾಗಿಯೂ ಕಷ್ಟವಾದುದೂ
- ★ ಅವನು ಕೆಮ್ಮು ಸದಾಗೆ ಕಲ್ಲಿಸುವನು
- ★ ಅವನ ತುಟಿಗಳು ಬಿಳಿಚಿಕೊಂಡಿವೆ
- ★ ಅವನ ಮುಖವೇ ಒಂದು ಕಥೆ ಹೇಳುತ್ತದೆ

ಅ.ದೇ ಆಸ್ತಮಾ

ದಾರುಣ ಮತ್ತು ಕಾತುರತೆಯ ಒಂದು ಚಿತ್ರ ಕಣ್ಣೀರಿನ ಅಳವಾದ ಈ ಚಿತ್ರವನ್ನು

ಆಸೆ ಮತ್ತು ಹರ್ಷಕ್ಕೆ ಬದಲಿಸುವುದು

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ

ವೈದ್ಯ ವಾಚಸ್ಪತಿ

ನವರತ್ನ-ಕಲ್ಪ

ಕಂಡುಹಿಡಿದವರು

ವಜ್ರ, ವೈಡೂರ್ಯ, ಮುತ್ತು ಹವಳ ಇತ್ಯಾದಿ ಅಮೂಲ್ಯ ನವರತ್ನಗಳಿಂದ ತಯಾರಿಸಿದ ಉಚಿತ ಸಾಹಿತ್ಯಕ್ಕೆ ಬರೆಯಿರಿ

NAVRATNA KALPA PHARMACY
JULLUNDUR CITY (India)

Edited, Printed and Published by A. R. Nagarajan at Sadhvi Press, 7 Subbiah Road, Mysore

ಒಲಂಪಿಯಾ

20-6-57 ರಿಂದ : ಯಶಸ್ವಿ ಪ್ರಾರಂಭ
ಅತ್ಯುತ್ತಮ ಸಾಮಾಜಿಕ ಹಿಂದಿ ಚಿತ್ರ

ಸ್ಟಾರ್ಸ್ ಮೂವೀಸ್ ರವರ

★ ಛೋಟೆ ಬಾಬು

ಪಾತ್ರ :- ಶೇಖರ್, ನಿಮ್ಮಿ, ಅಭಿಭಟ್ಟಾಚಾರ್ಯ ಮತ್ತು ಆಗಾ

[A VIDYUTH RELEASE

ಬೆಂಗಳೂರಿನ ಕೆಂಪೇಗೌಡ ರೋಡಿನಲ್ಲಿ ನೂತನವಾಗಿ ಕಟ್ಟಿರುವ "ಅಲಂಕಾರ್" ಎಂಬ ಭವ್ಯ ಚಿತ್ರಮಂದಿರದ ಪ್ರಾರಂಭೋತ್ಸವದಿಂದ ಈ ಚಿತ್ರವು ತೆರೆಗೆ ಬರುತ್ತದೆ

ನವೀನ ಮಾದರಿ ಗಡಿಯಾರಗಳಿಗೆ

ಫೇವರ್ ಲ್ಯೂಬಾ, ವೆಸ್ಟೆಂಡ್, ಸೈಮಾ, ರೋಮರ್ ಇತ್ಯಾದಿ, ಇತ್ಯಾದಿ

ರಾಂ ಪತಂಗೆ ಕಂಪೆನಿ,
ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

5 ಹೆಚ್ಚಿಗೆ ಶಾಖೆಗಳು ನಿಮ್ಮ ಸೇವೆಗಾಗಿ

ಇತ್ತೀಚೆಗೆ ತೆರೆಯಲ್ಪಟ್ಟಿರುವವು

ವಾರಂಗಲ್	ಆಂಧ್ರ ರಾಜ್ಯ
ಉಲ್ಲಾಸ್‌ನಗರ್	ಬೊಂಬಾಯಿ ರಾಜ್ಯ

ಶೀಘ್ರದಲ್ಲಿಯೇ ತೆರೆಯಲಾಗುವುವು

ಗುಲ್ಬರ್ಗ	ಮೈಸೂರು ರಾಜ್ಯ
ಮಡಕೇರಿ	ಮೈಸೂರು ರಾಜ್ಯ
ದಾದರ್	ಬೊಂಬಾಯಿ ನಗರ

ವಿಶ್ವದಾದ್ಯಂತದ ಬ್ಯಾಂಕಿಂಗಿಗೆ

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ 1906.

100 ವರ್ಷ ಖ್ಯಾತಿ ಗಳಿಸಿದ ಪಂಡಿತ ಚಿಂಬಳಿ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂದೂರ

ಈ ಭಸ್ಮವು ಬಸಿಕ್ಕ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ ಹಾಳಾದ ಅಂಗಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ

ಪುರುಷ ವಿಭಾಗ :— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನವನ್ನು ನಿವಾರಿಸಿ ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ ವೀರ್ಯಾಣುಗಳನ್ನು ವೃದ್ಧಿಪಡಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ದಾಂಪತ್ಯ ಜೀವನವು ಪ್ರಾರಂಭವಾಗಿ 16-18 ವರ್ಷ ಮಕ್ಕಳಿಲ್ಲದವರೂ 'ತಾಯ್ತಂದೆ'ಗಳಾಗಿ ದ್ದಾರೆ

ಪೂರ್ಣ ವಿವರಗಳ ಪ್ಯಾಟಲಾಗಿಗೆ ನಾಲ್ಕು ಆಣೆ ಸ್ಟಾಂಪು ಕಳಿಸಿ

ತಯಾರಕರು : ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628- "ಸಂತಾನ ಸಿಂದೂರ-ಸದನ" (ಕೃಷ್ಣ ರೈಸ್ ಮಿಲ್ ಕ್ರಾಸ್, ಹೊರಡಿ ರಸ್ತೆ, ಮೈಸೂರು.

Ava Gardner, Stewart Granger in Metro Goldwyn Mayer's

Running to Crowded Houses ! Don't Miss the rare Opportunity

★ BHOWANI JUNCTION ★

★ AT SRI GAYATHRI TALKIES ★

Cinemascope Technicolor

Visit to-day alone

ರಿಜಿಸ್ಟ್ರೇ ನಂ 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೮] SADHVI : MONDAY 24—6—1957 ಮೈಸೂರು : ಸೋಮವಾರ ೨೪—೬—೧೯೫೭ : [ಸಂಚಿಕೆ : ೩೩೦

ಭಾರತ ಸರ್ಕಾರದಿಂದ ನೂರು ಕೋಟಿ ರೂ. ಹೊಸ ಸಾಲ

ಭಾರತ ಸರ್ಕಾರದಿಂದ ೧೦೦ ಕೋಟಿ ರೂ. ಹೊಸ ಸಾಲ

ಸಣ್ಣ ಉಳಿತಾಯಗಳಿಂದ ಹಣ ಶೇಖರಣೆಗೆ ಸಂಸ್ಥಾನಗಳಿಗೆ ಕರೆ

ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ನೆನ್ನೆ ಬೊಂಬಾಯಿಯಲ್ಲಿ ಸಂಸ್ಥಾನಗಳ ಹಣಕಾಸು ಸಚಿವರುಗಳ ಸಮ್ಮೇಳನದಲ್ಲಿ ಮಾತನಾಡಿ, ಜುಲೈ ಅಥವಾ ಆಗಸ್ಟಿನಲ್ಲಿ ಭಾರತ ಸರ್ಕಾರದವರು ಬಹಿರಂಗ ಮಾರುಕಟ್ಟೆಯಲ್ಲಿ ೧೦೦ ಕೋಟಿ ರೂ ಸಾಲವನ್ನು ಎತ್ತುವರೆಂದೂ, ಆ ಪೈಕಿ ೩೨ ಕೋಟಿ ರೂ ಪರಿವರ್ತನೆ ಮತ್ತು ೬೮ ಕೋಟಿ ರೂ ನಗದು ಸಾಲವೆಂದು ತಿಳಿಸಿದರು. ಸಂಸ್ಥಾನ ಸರ್ಕಾರಗಳು ತಮ್ಮ ಅವಶ್ಯಕತೆಗಳನ್ನು ಸಣ್ಣ ಉಳಿತಾಯದಿಂದ ಪೂರೈಸಿಕೊಳ್ಳಬಹುದೆಂದು ಅವರು ಸೂಚಿಸಿದರು. ಸಂಸ್ಥಾನ ಸರ್ಕಾರಗಳು ಇಷ್ಟಪಟ್ಟಲ್ಲಿ ಬಹಿರಂಗ ಮಾರುಕಟ್ಟೆಯಲ್ಲಿ ಸಾಲ ಎತ್ತಲು ಸ್ವತಂತ್ರರಾಗಿರುವರೆಂದೂ ಅವರು ಹೇಳಿದರು. ಮುಂದೆ ಸಣ್ಣ ಉಳಿತಾಯದ ಚಳುವಳಿಯು ಪ್ರಬಲವಾಗುವುದೆಂದೂ, ಸಂಸ್ಥಾನಗಳಿಗೆ ಇಂತಹ ನಿಧಿ ಶೇಖರಣೆಯೇ ಆಧಾರವಾಗಬೇಕೆಂದೂ ಕೇಂದ್ರ ಸಚಿವರು ನುಡಿದರು. ರಾಷ್ಟ್ರೀಯ ಉಳಿತಾಯದಲ್ಲಿ ಶೇಕಡ ೬೬ ೨/೩ ರಷ್ಟು ಭಾಗವು ಸಂಸ್ಥಾನಗಳಿಗೂ, ಉಳಿದುದು ಕೇಂದ್ರಕ್ಕೂ ಹೋಗಬಹುದೆಂದೂ ಅವರು ನುಡಿದರು. ಸಂಸ್ಥೆಗಳಲ್ಲದವರಿಂದ ಇಂತಹ ಉಳಿತಾಯವು ಆಗಬೇಕೆಂದೂ ಅವರು ಹೇಳಿದರು.

ಪಂಜಾಬಿನಲ್ಲಿ ಹಿಂದಿ ಚಳುವಳಿ ನಿಲ್ಲಿಸುವಂತೆ ನೆಹರೂರವರ ಕರೆ

ಪಂಜಾಬಿನಲ್ಲಿ ಆರ್ಯ ಸಮಾಜದ ಮುಖಂಡ ಸ್ವಾಮಿ ಆತ್ಮಾನಂದರ ನೇತೃತ್ವದಲ್ಲಿ ನಡೆಯುತ್ತಿರುವ "ಹಿಂದಿ ರಕ್ಷಾ" ಚಳುವಳಿಯನ್ನು ನಿಲ್ಲಿಸುವಂತೆ ನೆಹರೂರವರು ಸ್ವಾಮಿಯವರನ್ನು ಪ್ರಾರ್ಥಿಸಿರುತ್ತಾರೆ. ರಾಜಕೀಯ ಚಳುವಳಿಯಲ್ಲಿ ಯಾವುದೇ ಮತೀಯ ಅಥವಾ ಸಾಂಸ್ಕೃತಿಕ ಸಂಸ್ಥೆಯೂ ಭಾಗವಹಿಸಬಾರದೆಂದು ಅವರು ಪುನಃ ಹೇಳಿರುತ್ತಾರೆ. ರಾಜಕೀಯ ಜೀವನದಲ್ಲಿ ಎಂತಹ ಉದ್ದೇಶದಿಂದಲೇ ಆಗಲೀ ಕೋಮು ಭಾವನೆಯು ಪ್ರವೇಶಿಸಿದರೆ ಅದರಿಂದ ವಿಷ ವಾತಾವರಣವು ಹರಡಿ ಭಾರತಕ್ಕೆ ಭಾರಿ ಅಪಾಯವಾಗುವುದೆಂದು ನೆಹರೂರವರು ಅಭಿಪ್ರಾಯಪಟ್ಟಿರುವರು. ನೆಹರೂರವರಿಗೆ ಸ್ವಾಮಿ ಆತ್ಮಾನಂದಜಿಯವರು ಬಹಿರಂಗ ಪತ್ರ ಬರೆದು ದ್ವಿ... ಅವರು ಮೊಲ್ಲಿಂಡಂತೆ ಉತ್ತರವಿತ್ತಿರುವರು. ಚಳುವಳಿಯು ಹಲವಾರು ದಿನಗಳಿಂದ ನಡೆಯುತ್ತಿದ್ದು ಅನೇಕರ ಬಂಧನವಾಗಿದೆ.

"ಫ್ಲೂ"ವಿಗೆ ಉಚಿತ ಔಷಧಿ

ಇನ್‌ಫ್ಲುಯೆಂಜಾ ವ್ಯಾಧಿ ತಗಲಿದವರಿಗೆ ಸುಬ್ಬರಾವ್ ಪೇಟೆಯ ೩ನೇ ಕ್ರಾಸ್ ರಸ್ತೆ ಲೇ. ೧೧ ನಂಬರು ಮನೆಯಲ್ಲಿ ಕಾಶಿ ಪಂಡಿತ ಶ್ರೀ ಎ. ಕೃಷ್ಣಸ್ವಾಮಿ ಮತ್ತು ಶ್ರೀ ಎಂ. ಮಹಲಿಂಗಪ್ಪನವರು ನಿತ್ಯವೂ ಬೆಳಿಗ್ಗೆ ೮ ರಿಂದ ೧೧ ಮತ್ತು ಮಧ್ಯಾಹ್ನ ೩ ರಿಂದ ೫ ಗಂಟೆವರೆಗೆ ಉಚಿತವಾಗಿ ಔಷಧಿ ಕೊಡುವರು.

ಫ್ಲೂ ವ್ಯಾಧಿಗ್ರಸ್ತರಿಗಾಗಿ ಪೌರಸಭೆಯವರಿಂದ ಔಷಧಿ ಹಂಚಿಕೆ

ಮೈಸೂರು ೨೪

ನಗರದಲ್ಲಿ ಇನ್‌ಫ್ಲುಯೆಂಜಾ ರೋಗದಿಂದ ನರಳುತ್ತಿರುವವರಿಗಾಗಿ ಇಲ್ಲಿನ ಪೌರಸಭೆಯವರು ಮೋಟಾರು ವ್ಯಾನಿನಲ್ಲಿ ನಿತ್ಯವೂ ಬೆಳಿಗ್ಗೆ ೯ ರಿಂದ ೧೨ ಗಂಟೆವರೆಗೆ ನಗರದ ನಾನಾ ಭಾಗಗಳಲ್ಲಿ ಔಷಧಿಯನ್ನು ಹಂಚುವರು. ... ಔಷಧಿ ಆರೋಗ್ಯಾಧಿಕಾರಿಗಳಿಂದ ... ಸರ್ವಜನಿಕರು ... ಕೋರಲಾಗಿದೆ.

ಮೋಟಾರು ಚಕ್ರಕ್ಕೆ ಗಾಳಿ ತುಂಬುತ್ತಿದ್ದಾಗ ಗಾಯ

ನಗರದ ತ್ಯಾಗರಾಜ-ನೂರಡಿ ರಸ್ತೆ ಕೂಡುವಲ್ಲಿರುವ ಪೆಟ್ರೋಲ್ ... ಕೇಂದ್ರದಲ್ಲಿ ನೆನ್ನೆ ಸಂಜೆ ಬಸ್ಸೊಂದರ ಮುಂಭಾಗದ ಚಕ್ರಕ್ಕೆ ಗಾಳಿಯನ್ನು ತುಂಬುತ್ತಿದ್ದಾಗ ಟೈರು ಇದ್ದಕ್ಕಿದ್ದಂತೆ ಸಿಡಿದು, ಚಕ್ರದ ಕಬ್ಬಿಣದ ರಿಮ್ಮು ಹಾರಿ ಬಂದು ಗಾಳಿ ತುಂಬುತ್ತಿದ್ದ ಯುವಕನ ಮುಖಕ್ಕೆ ಬಡಿದು ಪೆಟ್ಟಾಯಿತು. ಆತನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಯಿತು.

ಖೈದಿಯ ಚಿತ್ರಹಿಂಸೆಗಾಗಿ ಪೊ|| ಇನ್‌ಸ್ಪೆಕ್ಟರಿಗೆ ೧೦ ವರ್ಷ ಸಜಾ

ಅಹಮದಾಬಾದಿನ ಪೌರಸಭಾ ರಂಗ ಮಂದಿರದ ಕಾವಲುಗಾರ ರಾಮಸಿಂಗ್ ಎಂಬುವನನ್ನು ಅಕ್ರಮವಾಗಿ ಬಂಧಿಸಿ ಅವನಿಗೆ ಚಿತ್ರಹಿಂಸೆ ಕೊಟ್ಟುದಕ್ಕಾಗಿ ಅಲ್ಲಿನ ಸೆಷನ್ಸ್ ನ್ಯಾಯಾಧೀಶರು ಪೊಲೀಸು ಇನ್‌ಸ್ಪೆಕ್ಟರ್ ಜಿತೇಂದ್ರ ಶಿರೋನೇರಿ ಎಂಬುವರಿಗೆ ಎರಡು ಆಪಾದನೆಗಳ ಮೇಲೆ ಒಟ್ಟು ೧೦ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ. ರಾಣೆಯಲ್ಲಿ ರಾಮಸಿಂಗನು ಮೃತಪಟ್ಟನು. ಅಲ್ಲದೆ ಅವನ ದೇಹದ ಮಾಯುವಾಗಲು ಕಾರಣನಾದ ಜನಾಬ್ ಬಿಲ್‌ಖಾನ್ ಎಂಬಾತನಿಗೆ ೩ ವರ್ಷ ಕಠಿಣ ಸಜಾ ವಿಧಿಸಲಾಗಿದೆ. ಮೂವರು ಸಬ್ ಇನ್‌ಸ್ಪೆಕ್ಟರುಗಳೂ ಸೇರಿ ೧೪ ಮಂದಿ ಪೊಲೀಸರನ್ನು ಖುಲಾಸೆ ಮಾಡಲಾಗಿದೆ. ಎರಡು ವರ್ಷಗಳ ಹಿಂದೆ ಕೊಲೆ ಸಂಬಂಧದಲ್ಲಿ ರಾಮಸಿಂಗನನ್ನು ಬಂಧಿಸಿ ಅವನಿಗೆ ಚಿತ್ರಹಿಂಸೆ ಕೊಡಲಾಗಿತ್ತೆಂದು ಹೇಳಲಾಗಿದೆ. ಆತನನ್ನು ಬಿಸಿಲಿನಲ್ಲಿ ನಿಲ್ಲಿಸುತ್ತಿದ್ದುದರಿಂದ ಅವನಿಗೆ ಗಾಯಗಳಾಗಿದ್ದುವೆಂದೂ, ಅವನಿಗೆ ಔಷಧೋಪಚಾರವನ್ನು ನಡೆಸಲಿಲ್ಲವೆಂದೂ, ತತ್ಪರಿಣಾಮವಾಗಿ ಅವನು ಮಡಿದನೆಂದೂ ತಿಳಿದುಬಂದಿದೆ.

ನೂತನ ಬೌದ್ಧ ಮತಾವಲಂಬಿಗಳ "ಬುದ್ಧಿಸ್ತಾನ"

ಇತ್ತೀಚೆಗೆ ಬೌದ್ಧಮತವನ್ನು ಅವಲಂಬಿಸಿರುವ ಹಲವು ನಿಮ್ನವರ್ಗದವರು "ಬುದ್ಧಿಸ್ತಾನ" ಎಂಬ ಪ್ರತ್ಯೇಕದ ನಾಡನ್ನು ಸೃಷ್ಟಿಸಿಕೊಳ್ಳಲು ಆಲೋಚಿಸುತ್ತಿರುವರೆಂದು ಬೊಂಬಾಯಿ ಮುಖ್ಯಮಂತ್ರಿ ವೈ. ಬಿ. ಚವಾಣರವರು ತಿಳಿಸಿರುತ್ತಾರೆ. ಇದು ವಿಪತ್ಕಾರಕ ಮನೋಭಾವವೆಂದೂ, ಈ ಬಗ್ಗೆ ತಮ್ಮಲ್ಲಿ ಸಾಕ್ಷಿ ಸಾಹಿತ್ಯಗಳಿರುವುದಾಗಿಯೂ ಚವಾಣರವರು ನುಡಿದಿರುವರು.

ಸಂಸ್ಥಾನದಲ್ಲಿ ಪ್ರಥಮ ಗ್ರಾಮದಾನ

ಮೈಸೂರು ೨೪

ಮೈಸೂರು ಸಂಸ್ಥಾನದಲ್ಲಿ ಇದೇ ಮೊಟ್ಟಮೊದಲಾಗಿ ಗ್ರಾಮವೊಂದು ಭೂದಾನವಾಗಿ ಬಂದಿರುತ್ತದೆ. ಕೇರಳದ ಕಾಲಡಿಯಲ್ಲಿ ನಡೆದ ಸರ್ವೋದಯ ಸಮ್ಮೇಳನದಲ್ಲಿ ಭಾಗವಹಿಸಿ ಪಾದಯಾತ್ರೆ ಮಾಡುತ್ತಿದ್ದ ಒಂದು ತಂಡವು ಚಿಕ್ಕದೇವನಕೋಟೆ ತಾಲ್ಲೂಕಿಗೆ ಕಳೆದ ೧೯ನೇ ತಾರೀಕು ಹೋಗಿದ್ದಾಗ ಅಂತರಸಂತೆ ಸಮೀಪದ ಚಿಲ್ಲರೆಸಾಹುಕಟ್ಟೆ ಎಂಬ ಗ್ರಾಮವನ್ನು ಸುಮಾರು ೧೫೦ ಮಂದಿ ಹಳ್ಳಿಯವರು ದಾನ ಕೊಟ್ಟರು. ಶ್ರೀ ಶಂಕರಗೌಡ ಪಾಟೀಲ್ ಮತ್ತು ಇತರ ಆರು ಮಂದಿ ಭೂದಾನ ಕಾರ್ಯಕರ್ತರು ಅದನ್ನು ಸ್ವೀಕರಿಸಿದರು. ಗ್ರಾಮದಲ್ಲಿ ೩೦೦ ಜನರಿದ್ದು, ೪೭ ಕುಟುಂಬಗಳಿವೆ. ಗ್ರಾಮವು ಸುಮಾರು ೧೫೦ ಎಕರೆ ಜಮೀನಿಯಿಂದ ಕೂಡಿದೆ. ಅದಕ್ಕೆ ವಿನೋಬಾ ಗ್ರಾಮವೆಂದು ನಾಮಕರಣ ಮಾಡಲಾಗಿದೆ.

ಗ್ರಾಮದಾನ ಸಂಬಂಧವಾಗಿ ೧೯ನೇ ತಾರೀಕು ದಾನಪತ್ರವನ್ನು ಬರೆದುಕೊಡುವ ಸಮಾರಂಭವು ಜರುಗಿತು. ಪಾದಯಾತ್ರಿಕರು ಪ್ರವಚನಗಳನ್ನು ಮಾಡಿದರು. ಶ್ರೀ ಶಂಕರ ಪಾಟೀಲರು ಗ್ರಾಮದಾನದ ಪ್ರಾಮುಖ್ಯವನ್ನು ಕುರಿತು ಮಾತನಾಡಿದರು. ಮೈಸೂರು ಜಿಲ್ಲಾ ಭೂದಾನ ಕಾರ್ಯಕರ್ತರಾದ ಶ್ರೀ ಡಿ. ಎಲ್. ಸಿದ್ದಪ್ಪನವರು ಗ್ರಾಮದಾನದ ಮಹತ್ವವನ್ನು ವಿವರಿಸಿದರು.

ಗೋವಧೆಗಾಗಿ ಬಂಧನ

ಲಷ್ಕರ್ ಮೊಹಲ್ಲಾ ಕಸಾಬ್‌ಗೇರಿಯಲ್ಲಿ ಈ ದಿನ ಚೋಟಾ ಖುರೇಷಿ ಎಂಬುವನು ಒಂದು ಎತ್ತನ್ನು ಕುಯ್ಯುತ್ತಿದ್ದಾಗ ಪೊಲೀಸರಿಂದ ಬಂಧಿಸಲ್ಪಟ್ಟನು.

ಜೂಜಾಟಕ್ಕಾಗಿ ದಂಡ

ಮಿರ್ಜಾ ಆಸ್ಪತ್ರೆ ರಸ್ತೆಯ ಒಂದು ಮನೆಯಲ್ಲಿ ಕಟ್ಟಾ ಜೂಜಾಟವಾಡುತ್ತಿದ್ದ ಮಹಮದ್ ಗೌಸ್ ಷರೀಫ್ ಮತ್ತು ಇನ್ನೊಬ್ಬನ ಮೇಲೆ ಮಂಡಿ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಆಪಾದಿತರುಗಳಿಗೆ ಕೋರ್ಟು ಏಳುವವರೆಗೆ ಸಜಾ ಮತ್ತು ತಲಾ ೨೪ ರೂ. ದಂಡವನ್ನು ವಿಧಿಸಲಾಗಿದೆ.

ನಗರದಲ್ಲಿ ಇನ್‌ಫ್ಲುಯೆಂಜಾ ಸ್ಥಿತಿ

ಇಂದು ವರದಿಯಾಗಿರುವ ಪ್ರಕಾರ ಹೊಸದಾಗಿ ೭೫ ಮಂದಿಗೆ ಫ್ಲೂ ವ್ಯಾಧಿಯು ತಗಲಿ ಒಟ್ಟು ೩೬೭ ಜನರಿಗೆ ಹರಡಿತ್ತು. ಆ ಪೈಕಿ ೬೨೫ ಮಂದಿ ಗುಣ ಹೊಂದಿದ್ದಾರೆ. ೫೫ ಜನರು ಚಿಕಿತ್ಸೆ ಪಡೆಯುತ್ತಿರುವರು.

ನೈಜೀರಿಯಕ್ಕೆ ೩ ವರ್ಷಗಳಲ್ಲಿ ಸ್ವಾತಂತ್ರ್ಯ

ಉತ್ತರ ಆಫ್ರಿಕದ ಅಟ್ಲಾಂಟಿಕ್ ಸಾಗರ ತೀರದ ದೇಶವಾದ ನೈಜೀರಿಯಕ್ಕೆ ೩ ವರ್ಷಗಳಲ್ಲಿ ಸ್ವಾತಂತ್ರ್ಯವೀಯುವ ಬಗ್ಗೆ ಒಪ್ಪಲು ಬ್ರಿಟನ್ನು ಸಿದ್ಧವಾಗಿರುವುದೆಂದು ಹೇಳಲಾಗಿದೆ. ಅಲ್ಲಿ ೩-೩ ಕೋಟಿ ಜನರು ವಾಸಿಸುತ್ತಿರುವರು.

ದಕ್ಷಿಣ ಭಾರತ ರೇಡಿಯೊ ನಾಟಕ ಕರ್ತೃಗಳ ಗೋಷ್ಠಿ

ಕೇಂದ್ರ ವಾರ್ತಾ ಮಂತ್ರಿ ಕೇಸ್ಕರರಿಂದ ಆರಂಭ

ಸ್ವಂ. ಸು. ಶಂಕ] ಬೆಂಗಳೂರು ೨೪

ದಕ್ಷಿಣ ಭಾರತ ರೇಡಿಯೊ ನಾಟಕ ಕರ್ತೃಗಳು, ಪ್ರಸಂಗಗಳನ್ನು ಬರೆಯುವವರು ಮುಂತಾದವರ ಗೋಷ್ಠಿಯನ್ನು ಈ ದಿನ ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿ ಡಾ|| ಬಿ. ವಿ. ಕೇಸ್ಕರ್‌ರವರು ಇಲ್ಲಿ ಆರಂಭಗೊಳಿಸಿದರು. ಅವರು ಎಲ್ಲಾ ಭಾಷೆ ಕಲೆಗಳೂ ಪ್ರಚಾರಕ್ಕೆ ಬರಬೇಕಾದರೆ ರೇಡಿಯೊವು ತಕ್ಕ ಒಂದೇ ಸಾಧನವೆಂದು ಹೇಳಿದರು. ಗೋಷ್ಠಿಯು ಉತ್ತಮ ಕೃತಿಕಾರರಿಗೆ ಪ್ರೋತ್ಸಾಹ ನೀಡಬೇಕೆಂದು ಅವರು ಸೂಚಿಸಿದರು.

ನಗರದಲ್ಲಿ ಕಾಫಿ ವರ್ತಕರ ಸಮ್ಮೇಳನ

ಮೈಸೂರು ೨೪

ನಗರದಲ್ಲಿ ನಾಳೆ ಕಾಫಿ ವರ್ತಕರ ಸಮ್ಮೇಳನವೊಂದು ನಡೆಯುವುದು. ಕಳೆದ ತಿಂಗಳು ೧೭ ರಿಂದ ಜೂನ್ ೧ ರವರೆಗೆ ಕಾಫಿ ಬೋರ್ಡಿನವರು ಮಾರಿದ ಕಾಫಿಗೆ ತೆಗೆದುಕೊಂಡ ಹೆಚ್ಚಿನ ಸುಂಕವನ್ನು ವಾಪಸು ಕೊಡುವಂತೆ ವರ್ತಕರ ಸಂಘದವರು ಕೋರಿದ್ದರ ಮೇಲೆ ಬೋರ್ಡಿನಿಂದಲಾಗಲೀ, ಸರ್ಕಾರದಿಂದಲಾಗಲೀ ನಿರ್ದಿಷ್ಟ ಉತ್ತರ ಬಾರದಿರುವುದರಿಂದ ಮುಂದಿನ ಕ್ರಮದ ಬಗ್ಗೆ ಸಮ್ಮೇಳನದಲ್ಲಿ ಪರಿಶೀಲಿಸಲಾಗುವುದು. ಕಾಫಿ ಗೃಹಗಳ ಬದಲು ಕಾಫಿ ಮಾರಾಟ ಡಿಪೋ ತೆರೆಯಬಾರದೆಂದು ವರ್ತಕರ ಸಂಘದವರು ಬೋರ್ಡಿಗೆ ತಿಳಿಸಿರುತ್ತಾರೆ. ಅಲ್ಲದೆ ಕಾಫಿ ಮಾರಾಟದ ಮೇಲೆ ಸಂಸ್ಥಾನದ ತೆರಿಗೆಯನ್ನು ತೆಗೆದು ಕೇಂದ್ರದ ಅಬ್ಕಾರಿ ಸುಂಕವನ್ನು ವಿಧಿಸುವಂತೆ ಭಾರತ ಸರ್ಕಾರವನ್ನು ಸಂಘದ ಅಧ್ಯಕ್ಷರು ಪ್ರಾರ್ಥಿಸಿರುತ್ತಾರೆ.

ನಂಜನಗೂಡಿನಲ್ಲಿ ಇನ್‌ಫ್ಲುಯೆಂಜಾ ಸ್ಥಿತಿ

ಸ್ವಂ. ಸು. ಫೋನ್] ನಂಜನಗೂಡು ೧೪

ಈ ಊರಿನಲ್ಲಿ ಶೇಕಡ ೩೦ ಮಂದಿಗೆ ಇನ್‌ಫ್ಲುಯೆಂಜಾ ವ್ಯಾಧಿಯು ತಗಲಿರುವುದೆಂದೂ, ಇದುವರೆಗೆ ೫,೦೦೦ಕ್ಕೂ ಹೆಚ್ಚು ಜನರು ಗುಣಹೊಂದಿ ೩,೦೦೦ ಮಂದಿ ಚಿಕಿತ್ಸೆ ಪಡೆಯುತ್ತಿರುವರೆಂದೂ ಗೊತ್ತಾಗಿದೆ. ನಿತ್ಯವೂ ಆಸ್ಪತ್ರೆಗಳಲ್ಲಿ ೫೦೦ ಜನರಿಗೆ ಔಷಧಿಗಳನ್ನು ವಿನಿಯೋಗಿಸಲಾಗುತ್ತಿದೆ.

ಪೌರಸಭೆಯವರು ೩೦೦ ರೂ. ವೆಚ್ಚದಿಂದ ಔಷಧಿ ಮಾತ್ರೆಗಳನ್ನು ತರಿಸಿ ಹಂಚುತ್ತಿರುವರು.

ಭೂ ಸುಧಾರಣೆ ಸಮಿತಿಯವರ ಆಗಮನ

ಗೇಣಿ ಶಾಸನದ ಮುಂತಾದ ವಿಚಾರಗಳ ಸಮಗ್ರ ಪರಿಶೀಲನೆಗಾಗಿ ನೇಮಕವಾಗಿರುವ ಭೂಸುಧಾರಣಾ ಸಮಿತಿಯವರು ಇಲ್ಲಿಗೆ ಆಗಮಿಸಿದ್ದಾರೆ. ಅವರ ಮುಂದೆ ಶ್ರೀಗಳಾದ ಬಿ. ವಿ. ಪಂಡಿತರು, ಕೆ. ವೆಂಕಟಸುಬ್ಬಯ್ಯ, ಕೆ. ವಿಶ್ವೇಶ್ವರಗೌಡ, ಎಸ್. ನಾರಾಯಣರಾವ್ ಮುಂತಾದವರು ಜಮೀನುದಾರರ ಪರವಾಗಿ ಸಲಹೆಗಳನ್ನಿತ್ತರು. ಶ್ರೀ ಹೆಜ್ಜಿಗೆ ವೆಂಕಟರಮಣಯ್ಯ ಮುಂತಾದವರು ರೈತರ ಪರ ಸಾಕ್ಷ್ಯವಿತ್ತರು.

ನಾದ ನಿಕೇತನದ ಆರಂಭ

ಮೈಸೂರು ೨೪

ಲಕ್ಷ್ಮೀಪುರದಲ್ಲಿರುವ ಮಕ್ಕಳ ಕೂಟದ ಆವರಣದಲ್ಲಿ ವೀಣೆ ವಿದ್ವಾನ್ ವೆಂಕಟಕೃಷ್ಣಪ್ಪನವರ ಮಕ್ಕಳು ವಿ|| ವಿ. ರಾಮಸ್ವಾಮಿಯವರಿಂದ ಸ್ಥಾಪಿತವಾಗಿರುವ 'ನಾದ ನಿಕೇತನ' ವೆಂಬ ಸಂಗೀತ ಶಿಕ್ಷಣ ಶಾಲೆಯ ಆರಂಭೋತ್ಸವವನ್ನು ನೆನ್ನೆ ಶ್ರೀ ಎಂ ಯಾಮುನಾಚಾರ್ಯರವರು ನೆರವೇರಿಸಿದರು ಟಿ|| ಸುರೇಶನಿಂದ ಪ್ರಾರ್ಥನೆಯಾದನಂತರ ಶ್ರೀ ಎಸ್ ವಿ. ಶ್ರೀನಿವಾಸಯ್ಯಂಗಾರ್ಯರು ಸ್ವಾಗತ ಭಾಷಣ ಮಾಡಿ ಸಂಘದ ಉದ್ದೇಶವನ್ನು ವಿವರಿಸಿ, ಅದಕ್ಕೆ ಎಲ್ಲರ ನೆರವನ್ನು ಕೋರಿದರು ಶಾಲಾ ವಿದ್ಯಾರ್ಥಿಯಿಂದ ಸಂಗೀತವಾದನಂತರ ಶ್ರೀ ಯಾಮುನಾಚಾರ್ಯರು ಭಾಷಣ ಮಾಡಿ ಮಾನವನ ಉನ್ನತಿ ಸಾಧನೆಗೆ ಸಹಕಾರಿಯಾದ ಗಾನ ಕಲೆಯನ್ನು ಸಾರ್ವತ್ರಿಕವಾಗಿ ಪ್ರಸಾರ ಮಾಡಬೇಕೆಂದು ಹೇಳಿದರು ಜಗತ್ತಿನಲ್ಲೆಲ್ಲಾ ಪ್ರಸಿದ್ಧಿ ಪಡೆದಿರುವ ದಾಕ್ಷಿಣಾತ್ಯ ಸಂಗೀತವನ್ನು ಪರಿಶುದ್ಧವಾಗಿ ಬೆಳೆಸಿ ಪೋಷಿಸಿಕೊಂಡು ಬರಬೇಕೆಂದೂ, ಉತ್ತಮ ಗಾಯನದ ಅಭಿರುಚಿಯನ್ನು ಹೆಚ್ಚಿಸಬೇಕೆಂದೂ ಹೇಳಿದರು ಗಾನ ಕಲೆಯಲ್ಲಿ ಪರಮಾಪ ಸಾಧನೆಯು ಪ್ರಧಾನ ಗುರಿಯಾಗಿರಬೇಕೆಂದೂ ಅವರು ನುಡಿದರು

ಅಧ್ಯಕ್ಷತೆ ವಹಿಸಿದ್ದ ಶ್ರೀ ಅಗರಂ ರಂಗಯ್ಯನವರು ತಮ್ಮ ಭಾಷಣದಲ್ಲಿ ಸಂಗೀತ ಕಲೆಯು ಇತರ ಎಲ್ಲ ವಿದ್ಯೆಗಳಿಗಿಂತಲೂ ಬಹು ಶೀಘ್ರವಾಗಿ ಮಾನವನಿಗೆ ಆನಂದವನ್ನುಂಟುಮಾಡುವುದೆಂದೂ, ಅದನ್ನು ಶಾಸ್ತ್ರೀಯ ರೀತಿಯಲ್ಲಿ ಅಭ್ಯಾಸ ಮಾಡಿ ಇಹಪರ ಸುಖ ಸಾಧನೆಯನ್ನು ಮಾಡಬೇಕೆಂದೂ ಸೂಚಿಸಿದರು ಶ್ರೀ ಶಾರದ ಪೂಜೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗಗಳಾದನಂತರ ಶ್ರೀ ವಿ ರಂಗಸ್ವಾಮಿಯವರು ವಂದನಾರ್ಪಣೆ ಮಾಡಿದರು

ನೌಕಾ ಇಲಾಖೆಯವರಿಂದ ಇಂಜನಿಯರಿಂಗ್ ಶಿಕ್ಷಣ

ಭಾರತದ ನೌಕಾ ಇಲಾಖೆಯವರು ೪ ವರ್ಷದ ಇಂಜನಿಯರಿಂಗ್ ಶಿಕ್ಷಣವನ್ನು ಕೊಡಲು ಸ್ಮಾಲ್ ಫೈನಲ್ ಆದವರನ್ನು ಆರಿಸಲಿದ್ದಾರೆ ಅದಕ್ಕೆ ಹೋಗುವವರು ೧೭|| ವರ್ಷದೊಳಗೆ ಇರಬೇಕು ಆರಿಸಲ್ಪಟ್ಟವರಿಗೆ ಉಚಿತ ಶಿಕ್ಷಣ, ಊಟ ಮತ್ತು ವಸತಿಗಳನ್ನೂ ಮಾಹೆಯಾನ ೭೨ ರೂ ಗಳನ್ನೂ ಕೊಡಲಾಗುವುದು ಮೊನ್ನೆಯಿಂದ ಬೆಂಗಳೂರು ರಿಸಿಡೆನ್ಸಿ ರಸ್ತೆ ನೌಕಾ ರಿಕ್ರೂಟ್‌ಮೆಂಟ್ ಏರಿಯದ ಕೇಂದ್ರ ಕಛೇರಿಯಲ್ಲಿ ಈ ಬಗ್ಗೆ ಪರೀಕ್ಷೆ ನಡೆಯುತ್ತಿದೆ.

ಸೀತಾ ಸದನದಲ್ಲಿ ಗಮಕ ವಾಚನಗಳು

ಸೀತೀಲಂಕಟ್ಟೆ ಬೀದಿಯಲ್ಲಿರುವ ಸೀತಾ ಸದನದಲ್ಲಿ ಹೋದ ವರ್ಷದಂತೆ ಈ ಸಲವೂ ಗಮಕ ವಾಚನಗಳನ್ನು ಹೇಳಿಕೊಡಲಾಗುತ್ತಿದೆ. ಇಷ್ಟವುಳ್ಳವರು ಬಂದು ಸೇರಬೇಕಾಗಿ ವಿನಂತಿ ಮಾಡಲಾಗಿದೆ

ಹೆಚ್ಚು ಆಹಾರ ಬೆಳೆಗೆ ನೆಹರೂರವರ ಸೂಚನೆ

ಪ್ರಧಾನಿ ನೆಹರೂರವರು ಸಂಸ್ಥಾನ ಸರ್ಕಾರಗಳಿಗೆ ಸೂಚನೆಯಿತ್ತು, ಅಧಿಕ ಆಹಾರ ಬೆಳೆ ಚಳುವಳಿಯನ್ನು ತೀವ್ರಗೊಳಿಸಬೇಕೆಂದೂ, ವ್ಯವಸಾಯವನ್ನು ಚುರುಕಾಗಿಮಾಡಲು ಹೆಚ್ಚು ಗಮನವೀಯಬೇಕೆಂದೂ ತಿಳಿಸಿರುತ್ತಾರೆ ಸೀಮೆಂಟಿನ ದರವು ಹೆಚ್ಚೆಂದೂ, ಅದರ ಸೌಕರ್ಯವನ್ನು ಜನರು ಸರಿಯಾಗಿ ತೆಗೆದುಕೊಳ್ಳುತ್ತಿಲ್ಲವೆಂದೂ, ಅದನ್ನು ಕಡಿಮೆ ಮಾಡಬೇಕೆಂದೂ ಅವರು ಸೂಚಿಸಿರುತ್ತಾರೆ.

Edited, Printed and Published by A. K. Naga[illegible] Sadhvi Press, [illegible] Road, Mysore

ವಿವಾಹ ಮಹೋತ್ಸವಗಳು

ಮೈಸೂರು ತಾಲ್ಲೂಕು [illegible] ದ ಶ್ರೀ ಪಿ ರಾಮಪ್ಪನವರ [illegible] ಗುರುಕುಲದ ಆನರರಿ [illegible] ಶ್ರೀ ಹೆಚ್ ಕೆ ಪುಟ್ಟಣ್ಣನವರ ಮಗ ಶ್ರೀ ಹೆಚ್ ಪಿ. ಶಿವಪ್ರಸಾದ್‌ರವರಿಗೆ ಶ್ರೀ ಬಿ ಎಸ್ ಶರಿಯಪ್ಪನವರ ಕುಮಾರಿ ಸೌ|| ಸಾವಿತ್ರಮ್ಮನನ್ನು ತಂದುಕೊಂಡು ಕಳೆದ ಶುಕ್ರವಾರ ಮದ್ದೂರು ತಾಲ್ಲೂಕು ದೊಡ್ಡರಸಿನಕೆರೆಯ[illegible] ವಿವಾಹವನ್ನು ನೆರವೇರಿಸಿದರು

[illegible] ಶ್ರೀ ವಿ ಕೆ [illegible] ಶೆಟ್ಟರು ತಮ್ಮ ಕುಮಾರ ಶ್ರೀ ವಿ ಎಂ [illegible] ಶೆಟ್ಟರಿಗೆ ಮಾದಗೂರಿನ ಶ್ರೀ ಎಸ್ ಆದಿಕೃಷ್ಣಯ್ಯಶೆಟ್ಟರ ಮಗಳು ಸೌ|| ಸೌಭಾಗ್ಯವತಮ್ಮನನ್ನು ತಂದುಕೊಂಡು ಕಳೆದ ಶುಕ್ರವಾರ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು

ಚಿಕ್ಕತೂರು ತಾಲ್ಲೂಕು ಸಾರ್ಥವಳ್ಳಿಯ ಶ್ರೀ ಲಿಂಗಪ್ಪಯ್ಯನವರ ಮಗಳು ಸೌ|| ಶಾಮಸುಂದರಮ್ಮನನ್ನು ಬೆಂಗಳೂರಿನಲ್ಲಿರುವ ದಿಂಡಗನೂರಿನ ಶ್ರೀ ರಾಮಯ್ಯನವರ ಕುಮಾರ ಶ್ರೀ ಡಿ ಆರ್ ನಾರಾಯಣಶರ್ಮರವರಿಗೆ ಕೊಟ್ಟು, ಸಾರ್ಥವಳ್ಳಿಯಲ್ಲಿ ಕಳೆದ ೨ನೇ ತಾರೀಕು ವಿವಾಹವು ಜರುಗಿತು

ನಗರದ ವಿದ್ಯಾವರ್ಧಕ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಿ ನರಸಿಂಗರಾಯರು ತಮ್ಮ ಕುಮಾರರಾದ ಶ್ರೀ ನರಸಿಂಹಸ್ವಾಮಿಯವರಿಗೆ ನಿವೃತ್ತ ಮುನ್ಸಿಫ್ ಮತ್ತು [illegible] ಶ್ರೀ ಎಂ ವೆಂಕಟನರಸಪ್ಪನವರ ಮಗಳು ಸೌ|| [illegible]ನ್ನು ತಂದುಕೊಂಡು ನೆನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ಪೌರಸಭಾ ಉಚಿತ ವಿದ್ಯಾರ್ಥಿನಿಲಯಕ್ಕೆ ಪ್ರವೇಶ

ನಂಜನಗೂಡು ರಸ್ತೆಯಲ್ಲಿ [illegible] ಅಗ್ರಹಾರ ಸಂಡಿತರ ಪಕ್ಕದಲ್ಲಿರುವ ಪೌರಸಭಾ ವಿದ್ಯಾರ್ಥಿನಿಲಯದಲ್ಲಿ ಎಂದಿನಂತೆ ಹಲವು [illegible] ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿಯನ್ನು ಈ ವರ್ಷವೂ ಏರ್ಪಡಿಸಲಾಗಿದೆ ಅದಕ್ಕೆ ಬರುವ ತಿಂಗಳು ೧೫ನೇ ತಾರೀಕು ಸಂಜೆ ೫ ಗಂಟೆವರೆಗೆ ಅರ್ಜಿಗಳನ್ನು [illegible] ನಂತರ ಬರುವ ಅರ್ಜಿ[illegible] ಅರ್ಜಿ ಫಾರಂಗ[illegible] ಕಛೇರಿಯಲ್ಲಿ ನಿತ್ಯವೂ [illegible] ಸಂಜೆ ೫|| ಗಂಟೆವರೆಗೆ [illegible] ಪಡೆಯಬಹುದೆಂದು [illegible]

ಉತ್ತರ ಡಕೋಟಾದಲ್ಲಿ ಬಿರುಗಾಳಿಯಿಂದ ೧೦ ಜನರ ಮರಣ

೧೫೦ ಲಕ್ಷ ಡಾಲರ್ ನಷ್ಟ

ಅಮೆರಿಕಾ ಸಂಯುಕ್ತ ಸಂಸ್ಥಾನದ ಡಕೋಟಾ ಪ್ರಾಂತ್ಯದಲ್ಲಿರುವ ಫಾರ್ಗೊ ಎಂಬಲ್ಲಿ ಕಳೆದ ಬುಧವಾರ ರಾತ್ರಿ ಪ್ರಚಂಡ ಬಿರುಗಾಳಿಯು ಬೀಸಿದ ಪರಿಣಾಮವಾಗಿ ಹತ್ತು ಜನರು ಮಡಿದು, ೮೫ ಮಂದಿ ಗಾಯಗೊಂಡರೆಂದು ವರದಿಯಾಗಿದೆ. ೫೦೦ ಮನೆಗಳ ನಾಶವಾಗಿ ಎರಡು ಸಾವಿರ ಜನರು ನಿರಾಶ್ರಿತರಾಗಿರುವರು ಮೂವರ ಪತ್ತೆಯಿಲ್ಲವೆಂದು ಹೇಳಲಾಗಿದೆ ಈ ಅನಾಹುತದಿಂದ ೧೫೦ ಲಕ್ಷ ಡಾಲರುಗಳಷ್ಟು ನಷ್ಟ ಸಂಭವಿಸಿರುವುದೆಂದು ಅಂದಾಜಾಗಿದೆ

GLOBE TUTORIAL COLLEGE
Sadvidya Patasala Buildings Mysore
Offers excellent coaching for
S. S. L. C. & INTER
★
Inter Eng. Texts of 54 & 57
will be done
Classes in Full Swing

ನಂಬಿಕೆ ದ್ರೋಹಕ್ಕಾಗಿ ವರನ ಬಂಧನ

ಧಾರವಾಡ ಜಿಲ್ಲೆಯ ಗದಗಿನಲ್ಲಿ ಕಳೆದ ಶುಕ್ರವಾರ ಪೋಲೀಸರು ಮದುವಣಿಗನೊಬ್ಬನನ್ನು ಬಂಧಿಸಿದರು ಅವನು ಅಲ್ಲಿನ ಒಬ್ಬರ ಮಗಳನ್ನು ವಿವಾಹವಾಗುವುದಾಗಿ ಹೇಳಿ ವರದಕ್ಷಿಣೆಯನ್ನು ಪಡೆದು ನಂತರ ಹೆಚ್ಚಿನ ವರಮಾನದ ಆಸೆಯಿಂದ ಬೇರೊಬ್ಬ ಕನ್ಯೆಯನ್ನು ವಿವಾಹವಾಗಲು ಒಪ್ಪಿಕೊಂಡು ಮುಹೂರ್ತಕ್ಕಾಗಿ ಅಲ್ಲಿಗೆ ಹೋಗಿದ್ದನೆಂದೂ, ಮೊದಲು ವರದಕ್ಷಿಣೆಯಿತ್ತವರು ಮ್ಯಾಜಿಸ್ಟ್ರೇಟರಿಗೆ ದೂರು ಕೊಡಲಾಗಿ, ಅವರು ವಾರಂಟು ಕೊಟ್ಟರೆಂದೂ ಹೇಳಲಾಗಿದೆ ಪೋಲೀಸರು ವರನ ಮನೆಯಲ್ಲಿ ಶೋಧಿಸಿ ಅಲ್ಲಿ ಅವನು ಇಲ್ಲದುದನ್ನು ಕಂಡು ಕಡೆಗೆ ನೂತನ ವಧುವಿನ ಗೃಹದಲ್ಲಿರುವುದನ್ನು ಪತ್ತೆ ಹಚ್ಚಿ ಅಲ್ಲಿ ಅವನನ್ನೂ ಅವನ ಚಿಕ್ಕಪ್ಪನನ್ನೂ ಬಂಧಿಸಿದರು ವರನನ್ನು ಜಾಮೀನು ಮೇಲೆ ಬಿಡಲಾಗಿದೆ

ಉಪ ಮಂತ್ರಿ ಹೆಗ್ಗಡೆಯವರ ಚುನಾವಣೆ ವಿರುದ್ಧ ಅರ್ಜಿ

ಸಿರಸಿ ಕ್ಷೇತ್ರದಿಂದ ವಿಧಾನ ಸಭೆಗೆ ಆರಿಸಿ ಬಂದಿರುವ ಉಪ ಮಂತ್ರಿ ಶ್ರಿ ರಾಮಕೃಷ್ಣ ಹೆಗ್ಗಡೆಯವರ ಚುನಾವಣೆ ವಿರುದ್ಧವಾಗಿ ಅಲ್ಲಿನ ಪಿ ಎಸ್ ಪಿ ಉಮೇದುವಾರರಾದ ಶ್ರಿ ಎಸ್ ಎಸ್ ಥಾಕಪ್ಪನವರು ತಕರಾರು ಅರ್ಜಿ ಹಾಕಿರುತ್ತಾರೆ ಇದು ನಿವೃತ್ತ ಹೈ ಕೋರ್ಟ್ ನ್ಯಾಯಾಧೀಶರಾದ ಶ್ರಿ ಎಸ್ ಬಾಲಕೃಷ್ಣಯ್ಯನವರ ಮುಂದೆ ಈ ತಿಂಗಳು ೨೮ ನೇ ತಾರೀಕು ಪರಿಶೀಲನೆಗೆ ಬರಲಿದೆ

ಸಣ್ಣ ಪ್ರಮಾಣದ ಕೈಗಾರಿಕೆ ಸೇವಾ ಸಂಸ್ಥೆ

ಭಾರತ ಸರ್ಕಾರದವರು ಬೆಂಗಳೂರಿನ ಗಾಂಧಿ ನಗರದಲ್ಲಿ ಸಣ್ಣ ಕೈಗಾರಿಕೆ ಸೇವಾ ಶಾಖೆಯೊಂದನ್ನು ತೆರೆದಿದ್ದಾರೆ ಹಳೇ ಮೈಸೂರು, ಕೊಡಗು ಮತ್ತು ಮಂಗಳೂರಿಗೆ ಅದರ ವ್ಯಾಪ್ತಿಯಿದೆ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗೆ ಇಲ್ಲಿ ಉಚಿತ ಪಾರಿಭಾಷಿಕ ಶಿಕ್ಷಣ ಮತ್ತು ಸಹಾಯವನ್ನೀಯಲಾಗುವುದು ಮಾದರಿ ಯೋಜನೆಗಳ ಪ್ರಕಟಣೆ, ಪಾರಿಭಾಷಿಕ ವಿವರಗಳ ತಿಳಿವಳಿಕೆ, ಉಪನ್ಯಾಸ ಪ್ರದರ್ಶನ ಮುಂತಾದ ಪ್ರಯೋಜನಗಳಿವೆ ಸಣ್ಣ ಕೈಗಾರಿಕೆಗಳಲ್ಲಿ ಆಸಕ್ತಿ[illegible] ಈ ಅವಕಾಶವನ್ನು ಉಪಯೋಗಪಡಿಸಿಕೊಳ್ಳಬಹುದು

ವಯಸ್ಕರ ಶಿಕ್ಷಣ ಸಮಿತಿಗೆ ಪರ್ಯಾಯ ಪಾರಿತೋಷಕದ ದಾನ

ಗುಂಡ್ಲುಪೇಟೆ ತಾಲ್ಲೂಕು ಭೋಗನಹುಂಡಿ ಸಾಹುಕಾರ್ ಶ್ರಿ ಮಲ್ಲಪ್ಪನವರು ಕಳೆದ ೧೭ ರಂದು ತಮ್ಮ ಮಗಳು ಶ್ರೀಮತಿ ಬಸವಣ್ಣಿಯವರ ವಿವಾಹ ಮಹೋತ್ಸವದ ಸಂಬಂಧವಾಗಿ ವಧೂವರರ ಹೆಸರಿನಲ್ಲಿ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಗೆ ಒಂದು ದೊಡ್ಡ ಪರ್ಯಾಯ ಪಾರಿತೋಷಕವನ್ನು ದಾನವಾಗಿ ಕೊಟ್ಟಿರುತ್ತಾರೆ ಸಂಸ್ಥಾನದಲ್ಲಿ ಉತ್ತಮವಾಗಿ ಕೆಲಸ ಮಾಡತಕ್ಕ ಗ್ರಾಮ ಪುಸ್ತಕ ಭಂಡಾರಕ್ಕೆ ಅದನ್ನು ಬಹುಮಾನವಾಗಿ ಕೊಡಲಾಗುವುದು

ಜಗದಾಂಬಾ ಶಿಶುವಿಹಾರ
ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜಾ ಕಳೆದನಂತರ ಮೊದಲಿಂದ ಶಿಶುವಿಹಾರವನ್ನು ತೆರೆಯಲಾಗಿದೆ ಮಾಂಟೆಸ್ಸೊರಿ ಮೊದಲನೆಯ ತರಗತಿಯವರೆಗೂ ಆಟಗಳ ಮೂಲಕವೇ ಓದು ಬರಹದ ಶಿಕ್ಷಣವನ್ನೂ ಸಹ ಕೊಡಲಾಗುತ್ತಿದೆ. ಮಹಾಜನರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ

ಡಿ ಕೃಷ್ಣಮೂರ್ತಿ,
ಡೈರೆಕ್ಟರ್

ವೈದ್ಯ ಬಂಧು - ವಿಶೇಷ ಸಂಚಿಕೆ

ನಗರದ ಸುಪ್ರಸಿದ್ಧ ಆಯುರ್ವೇದ ವೈದ್ಯರಾದ ಪಂಡಿತ ಕೆ ಸಿ. ಪುರಂದರರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ವೈದ್ಯ ಬಂಧು ಪತ್ರಿಕೆಯ ವಿಶೇಷ ಸಂಚಿಕೆಯೊಂದು ನಮ್ಮ ಹಸ್ತಗತವಾಗಿದೆ ಬೆಂಗಳೂರಿನಲ್ಲಿ ನಡೆಸಿದ ಅಖಿಲ ಭಾರತ ಮತ್ತು ಕರ್ನಾಟಕ ಆಯುರ್ವೇದ ಮಹಾಸಮ್ಮೇಳನದ ಅಂಗವಾಗಿ ಈ ವಿಶೇಷಾಂಕವನ್ನು ಪ್ರಕಟಿಸಲಾಗಿದೆ. ಆಯುರ್ವೇದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಲೇಖನಗಳನ್ನು ಪ್ರಕಟಿಸಲಾಗಿದೆ. ಆಯುರ್ವೇದ ವಿದ್ವಾಂಸರುಗಳ ಚಿತ್ರಗಳನ್ನೂ ಕೊಡಲಾಗಿದೆ ಸಿರಿಭೂವಲಯದ ಬಗ್ಗೆ ಶ್ರಿ ಕೆ ಅನಂತಸುಬ್ಬರಾಯರ ವಿಶೇಷ ಲೇಖನವನ್ನೂ ಪತ್ರಿಕೆಯು ಒಳಗೊಂಡಿದೆ.

ಜಗಳದಿಂದ ಪ್ರೇಮಿಗಳು ಆಸ್ಪತ್ರೆಗೆ ದಾಖಲು

ಶಿವಮೂರಿನ ಮರಿಮಲ್ಲಯ್ಯ ಮತ್ತು ಆತನ ರಖಾವುದಾರಳಾದ ಅಮ್ಮಣ್ಣಮ್ಮ ಉರುಫ್ ಯಲ್ಲಮ್ಮ ಎಂಬುವರಿಬ್ಬರು ಅರಸೀಕೆರೆಯಲ್ಲಿ ೩ ತಿಂಗಳ ಕಾಲ ಇದ್ದು ಸ್ವಂತ ಊರಿಗೆ ಹಿಂದಿರುಗಬೇಕೆಂದಿದ್ದ ಸಮಯದಲ್ಲಿ ಅವರಿಬ್ಬರಿಗೂ ಜಗಳವಾಗಿ ಮರಿಮಲ್ಲಯ್ಯನು ಹೆಂಗಸನ್ನು ಕುಡುಗೋಲಿನಿಂದ ಹೊಡೆದು ತೀವ್ರ ಗಾಯಗೊಳಿಸಿ, ತಾನೂ ಹೊಡೆದುಕೊಂಡು ಓಡಿಹೋದನೆಂದೂ, ಅವನು ಐದು ಮೈಲಿ ಹೋದ ಮೇಲೆ ಒಂದು ಕಡೆ ಪ್ರಜ್ಞೆ ತಪ್ಪಿ ಬಿದ್ದನೆಂದೂ ವರದಿಯಾಗಿದೆ ಆಕೆಯನ್ನು ಅರಸೀಕೆರೆ ಆಸ್ಪತ್ರೆಗೂ, ಅವನನ್ನು ಹಾಸನದ ಆಸ್ಪತ್ರೆಗೂ ಸೇರಿಸಲಾಗಿದೆ.

ಶಾರದಾ ನಿಕೇತನ ವಿದ್ಯಾರ್ಥಿನಿಲಯ

ಚಾಮುಂಡಿಪುರಂ ಮೈಸೂರ್‌ರೋಡ್ ರಸ್ತೆಯಲ್ಲಿರುವ ಶ್ರೀ ಶಾರದಾ ನಿಕೇತನ ವಿದ್ಯಾರ್ಥಿನಿಲಯವು ಮಾಮೂಲಿನಂತೆ ಜುಲೈ ೧ನೇ ತಾರೀಕಿನಿಂದ ಪ್ರಾರಂಭವಾಗುತ್ತದೆ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಈ ಮಾಹೆ ೩೦ರೊಳಗಾಗಿ ಪ್ರವೇಶ ಪತ್ರಿಕೆಯನ್ನು ಕಳುಹಿಸಿಕೊಡಬೇಕು ಅದನ್ನು ನಿಲಯದ ಸೂಪರಿಂಟೆಂಡೆಂಟರಲ್ಲಿ ಒಂದೂವರೆ ರೂಪಾಯಿ ಪಾವತಿ ಮಾಡಿ ಪಡೆಯಬಹುದು ಅಂಚೆ ಮೂಲಕ ಪ್ರವೇಶ ಪತ್ರಿಕೆಯನ್ನು ಅಪೇಕ್ಷಿಸುವವರು ಸಾಕಾಗುವಷ್ಟು ಪೋಸ್ಟೇಜು ಸ್ಟಾಂಪು ಮತ್ತು ಒಂದೂವರೆ ರೂಪಾಯಿಯನ್ನು ಮುಂಚಿತವಾಗಿ ಕಳುಹಿಸಿ ಪಡೆಯಬಹುದು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಪಿಟೀಲು ೭-೧೫ ಎಂ ಎ ನಿರ್ಮಲಾದೇವಿ-ದೇವರ ನಾಮ ೮-೧೫ ಗಾನ ವಿಹಾರ ಮಧ್ಯಾಹ್ನ ೧೨ ಎಂ ಎ ನಿರ್ಮಲಾದೇವಿ-ಸಂಗೀತ ೧೨-೩೦ ವನಿತಾ ವಿಹಾರ ೧-೨೦ ರೇಕಾರ್ಡು. ೧-೫೦ ಪಿಟೀಲು ೩-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೬-೧೦ ಕಾವ್ಯ ವಾಚನ ೭ ೩೦ "ಉಮ್ಮರ್ ಖಯಾಂ"-ಭಾಷಣ ೮ ಇಂದ್ರ ಧನುಷ್-ಹಿಂದಿ ವಿನೋದ ಕಾರ್ಯಕ್ರಮ ೮-೩೦ ರೇಕಾರ್ಡು ೯-೧೫ ವಿ ದೊರಸ್ವಾಮಿ ಅಯ್ಯಂಗಾರ್-ವೀಣೆ

SARADA VILAS COLLEGE
INTER TUTORIAL SECTION
ENGLISH & P C. M
Highly qualified & experienced staff
Classes in full swing

ಮಹಾಕವಿ ಲಕ್ಷ್ಮೀಶ ವಿರಚಿತ
ಕನ್ನಡ ಜೈಮಿನಿ ಭಾರತ
1957 Edition : Re 1-0-0
ಶ್ರೀ ರಾಜರತ್ನಂರವರ
ಭಗವಾನ್ ಬುದ್ಧ : 1-0-0
ಕೃಷ್ಣಾ ಕಂಪೆನಿ,
ನೂರಡಿ ರಸ್ತೆ, ಮೈಸೂರು

ಲಕ್ಷ್ಮಿ ಥಿಯೇಟರ್ ★
ಎನ್ ಟಿ ರಾಮರಾವ್, ಎಎನ್ ನಾಗೇಶ್ವರರಾವ್, ಶೇಲಂಗಿ, ಅಂಜಲಿ, ಸಾವಿತ್ರಿ ಜಾನಕಿ ಮುಂತಾದವರು ಪಾತ್ರವಹಿಸಿರುವ

24-6-57ನೇ ಇಂದಿನಿಂದ : ಅನೋಖ ಪ್ರಾರಂಭ . ದಿನವಹಿ 2 ಆಟಗಳು
ರಾಜಶ್ರೀ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ
★ ವೆತ್ರಿವೀರನ್ ★

ರಿಜಿಸ್ಟ್ರೇಷನ್ ನಂ. 792

ಚಂದಾ ದರ
ವಾಣಿಜ್ಯೋದ್ಯಮಿಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರದಿಗಳಿಗೆ ಬರೆಯಿರಿ

ಸಂಪುಟ-೨ ೦೫] SADHVI TUESDAY 25-6-1957 ಮೈಸೂರು, ಮಂಗಳವಾರ ೨೫-೬-೧೯೫೭ [ಸಂಚಿಕೆ : ೩೩೦

ಕೊರಿಯ ಕಮ್ಯೂನಿಸ್ಟರಿಂದ ಶಾಂತಿ ರೇಖೆ ಉಲ್ಲಂಘನೆ?

ಕೊರಿಯಾ ಶಾಂತಿ ರೇಖೆ ದಾಟಿ ಕಮ್ಯೂನಿಸ್ಟರ ವಿಮಾನ ಸಂಚಾರ

ಒಪ್ಪಂದದ ಉಲ್ಲಂಘನೆಯೆಂದು ದಕ್ಷಿಣ ಕೊರಿಯಾ ಹೇಳಿಕೆ

ಕಮ್ಯೂನಿಸ್ಟರ ಜೆಟ್ ವಿಮಾನಗಳು ನೆನ್ನೆ ಕೊರಿಯಾ ಶಾಂತಿ ರೇಖೆಯನ್ನು ದಾಟಿ ದಕ್ಷಿಣಕ್ಕೆ ಬಂದಿದ್ದವೆಂದು ದಕ್ಷಿಣ ಕೊರಿಯಾ ರಕ್ಷಣಾ ಇಲಾಖಾ ಹೇಳಿಕೆಯು ತಿಳಿಸುತ್ತದೆ. ಇದರಿಂದ ಶಾಂತಿ ಒಪ್ಪಂದದ ಉಲ್ಲಂಘನೆಯಾಗಿರುವುದೆಂದು ಆಪಾದಿಸಲಾಗಿದೆ. ಮಧ್ಯ ಕೊರಿಯದ ಕುಂವ್ಹಾ ಎಂಬಲ್ಲಿ ಈ ಘಟನೆ ನಡೆದುದಾಗಿ ಸೂಚಿಸಲಾಗಿದೆ. ವಿಮಾನಗಳು ಯಾವ ಕಾರ್ಯಾಚರಣೆಯನ್ನೂ ನಡೆಸಲಿಲ್ಲವೆಂದು ಹೇಳಲಾಗಿದೆ. ಕಮ್ಯೂನಿಸ್ಟರು ಯುದ್ಧ ಹೂಡುವ ಸಂಭವವಿರುವದೆಂದೂ, ಜನತೆಯು ಎಚ್ಚರಿಕೆಯಿಂದ ಇರಬೇಕೆಂದೂ ದಕ್ಷಿಣ ಕೊರಿಯಾ ಸರ್ಕಾರವು ಸೂಚಿಸಿದೆ.

ಟಿ. ಟಿ. ಕೃಷ್ಣಮಾಚಾರಿಯವರ ಮೇಲೆ ಕೇಂದ್ರ ನೌಕರರ ಹಲ್ಲೆ

ಬೊಂಬಾಯಿಯಲ್ಲಿ ನೆನ್ನೆ ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರ ಮೇಲೆ ಕೇಂದ್ರ ಸರ್ಕಾರದ ವರಮಾನ ತೆರಿಗೆ ಮತ್ತು ಇತರ ಇಲಾಖೆಗಳ ೧,೦೦೦ ನೌಕರರು ಹಲ್ಲೆ ನಡೆಸಿದರೆಂದೂ, ಅವರನ್ನು ಪ್ರಯಾಸದಿಂದ ಬೇರೆ ಕಡೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ. ವರಮಾನ ತೆರಿಗೆ ಕಛೇರಿಯಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಭಾಷಣ ಮಾಡಲು ಕೇಂದ್ರ ಮಂತ್ರಿಯವರು ಹೋಗುತ್ತಿದ್ದಾಗ ಈ ಘಟನೆ ನಡೆಯಿತು. ಕೇಂದ್ರ ವರಮಾನ ಬೋರ್ಡಿನ ನೌಕರರ ಸಂಘದ ಪ್ರತಿನಿಧಿಗಳಿಗೆ ಭೇಟಿ ಕೊಡಲು ಕೃಷ್ಣಮಾಚಾರಿಯವರು ನಿರಾಕರಿಸಿದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಸಚಿವರೊಡನೆ ಮುಂಚಿತವಾಗಿ ಗೊತ್ತುಪಡಿಸದೆ, ನೌಕರರ ಪ್ರತಿನಿಧಿಗಳು ಭೇಟಿ ಮಾಡಬೇಕೆನ್ನಿಸಿದರೆಂದೂ, ಅವರನ್ನು ಭೇಟಿ ಮಾಡಲು ತಮಗೆ ಕಾಲವಿಲ್ಲವೆಂದು ಸಚಿವರು ತಿಳಿಸಿದರೆಂದೂ ಗೊತ್ತಾಗಿದೆ. ಇದರಿಂದ ಇತರ ನೌಕರರಿಗೆ ರೋಷವು ಬಂದಿತು. ಮಂತ್ರಿಯವರ ಪರ್ಸನಲ್ ಅಸಿಸ್ಟೆಂಟ್‌ರನ್ನೂ ಮತ್ತು ಮೋಟಾರು ಡ್ರೈವರನ್ನೂ ಜನರು ಹೊಡೆದರೆಂದು ಹೇಳಲಾಗಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ ೭-೧೫ ಎಂ. ನಂಜಪ್ಪ-ನಾದಸ್ವರ ೮-೧೫ ಹಿಂದಿ ಪಾಠ ಮಧ್ಯಾಹ್ನ ೧೨ ಮತ್ತು ೨ ತಾರಾ ಶ್ರೀರಂಗನಾಥ-ಪಿಟೀಲು ೧೨-೩೦ ಬಿ. ಎಸ್ ನಾರಾಯಣಯ್ಯಂಗಾರ್-ಸಂಗೀತ ೧ ಗಾನ ಮಂಜರಿ ೧-೨೦ ಗೀತಾ ಮಂಜರಿ. ೧-೫೦ ಸಂಗೀತ ೨-೧೫ ಸ್ತ್ರೀಯರಿಗಾಗಿ ಸಂಜೆ ೬-೧೦ ಗೀತಾವಳಿ. ೬-೩೦ ವಚನಗಾಥ. ೮ ಎಂ. ನಂಜಪ್ಪ-ನಾದಸ್ವರ. ೮-೩೦ ರಾಷ್ಟ್ರೀಯ ಕಾರ್ಯಕ್ರಮ-ಡೆಹಲಿಯಿಂದ ೮-೫೦ ವಾದ್ಯಗೋಷ್ಠಿ ೯-೧೫ ಉರ್ದು ಗೀತೆ. ೯-೩೦ ಸಂಗೀತ ಸಭಾ-ಮುಸಿರಿ ಸುಬ್ರಹ್ಮಣ್ಯ ಅಯ್ಯರ್ : ಗಾಯನ, ಟಿ. ಚೌಡಯ್ಯ : ಪಿಟೀಲು ಮತ್ತು ಪಳನಿ ಸುಬ್ರಹ್ಮಣ್ಯ ಪಿಳ್ಳೆ : ಮೃದಂಗ

ನಗರದಲ್ಲಿ ಸಿ. ಡಿ. ದೇಶಮುಖ್‌ರವರ ಕಾರ್ಯಕ್ರಮ

ನಾಳೆ ವಿದ್ಯಾರ್ಥಿಗಳ ಸಭೆಯಲ್ಲಿ ಭಾಷಣ

ಮೈಸೂರು ೨೫

ವಿಶ್ವವಿದ್ಯಾಲಯಗಳ ಗ್ರಾಂಟು ಕಮಿಟಿ ಅಧ್ಯಕ್ಷರಾದ ಶ್ರೀ ಸಿ. ಡಿ. ದೇಶಮುಖ್‌ರವರು ನಾಳೆ ನಗರಕ್ಕೆ ಆಗಮಿಸಿ, ವಿಶ್ವವಿದ್ಯಾಲಯದ ವೈಸ್ ಛಾನ್ಸೆಲರ್, ಪ್ರಿನ್ಸಿಪಾಲರುಗಳು ಮತ್ತು ಸಿಂಡಿಕೇಟಿನ ಸದಸ್ಯರೊಡನೆ ಕಾಲೇಜುಗಳ ದರ್ಜೆ ಹೆಚ್ಚಿಸುವುದು ಮತ್ತು ಅಭಿವೃದ್ಧಿಗೊಳಿಸುವುದು, ಅಧ್ಯಾಪಕರುಗಳ ಸಂಬಳದ ಪುನರ್ವಿಮರ್ಶೆ ಮುಂತಾದುವನ್ನು ಕುರಿತು ಚರ್ಚಿಸುವರು. ಅವರು ನಾಳಿದ್ದು ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡುವರು. ಮಾರನೇ ಸಂಜೆ ೫ಕ್ಕೆ ಅಧ್ಯಾಪಕರುಗಳ ಸಭೆಯಲ್ಲಿ ಅವರ ಭಾಷಣವಿದೆ.

೨೮ನೇ ತಾರೀಖು ಬೆಳಿಗ್ಗೆ ೧೦ ಗಂಟೆಗೆ ಇಲ್ಲಿ ನಡೆಯುವ ವಿಶೇಷ ಘಟಿಕೋತ್ಸವದಲ್ಲಿ ಅವರು ಗೌರವ ಪ್ರಶಸ್ತಿಯನ್ನು ಸ್ವೀಕರಿಸಿ, ಮಧ್ಯಾಹ್ನ ಮದ್ರಾಸಿಗೆ ತೆರಳುವರು.

ಎಂ. ಎ., ಎಂ. ಎಸ್‌ಸಿ. ಪರೀಕ್ಷೆಗಳು ಮುಂದಕ್ಕೆ

ಮೈಸೂರು ವಿಶ್ವವಿದ್ಯಾಲಯದ ಎಂ. ಎ. ಮತ್ತು ಎಂ. ಎಸ್‌ಸಿ. ಪರೀಕ್ಷೆಗಳನ್ನು ಜುಲೈ ೧೫ಕ್ಕೆ ಮುಂದೆ ಹಾಕಲಾಗಿದೆ.

ಸೆನೆಟ್ಟಿಗೆ ವಿಧಾನ ಪರಿಷತ್ತಿನಿಂದ ಆಯ್ಕೆ

ವಿಧಾನ ಪರಿಷತ್ತಿನಿಂದ ಶ್ರೀಗಳಾದ ಎ. ಆರ್ ರಾಮರಾವ್ ಮತ್ತು ಗಾಂಜಿ ವೀರಪ್ಪನವರು ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಆರಿಸಲ್ಪಟ್ಟಿರುತ್ತಾರೆ. ಶ್ರೀ ಎಚ್. ಹೆಚ್. ಕಟ್ಟಿಮನಿಯವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಚುನಾಯಿತರಾಗಿರುವರು.

ಕಾಫಿ ಬೋರ್ಡಿನ ನೌಕರರ ಹೋರಾಟ ರದ್ದು

ಇಂಡಿಯಾ ಕಾಫಿ ಬೋರ್ಡಿನವರು ಬೋನಸ್ ಮಾಡಿದ್ದ ೧೨ ನೌಕರರನ್ನು ಕೆಲಸದಿಂದ ತೆಗೆದುಹಾಕಿದ್ದುದನ್ನು ಈಗ ವಾಪಸು ತೆಗೆದುಕೊಂಡಿರುತ್ತಾರೆ. ಕಾಫಿ ಗೃಹಗಳನ್ನು ಮುಚ್ಚಬೇಕೆಂದು ಬೋರ್ಡಿನವರು ತೀರ್ಮಾನಿಸಿದ ಸಂಬಂಧವಾಗಿ ನೌಕರರ ಹೋರಾಟ ಆಗಿದ್ದಿತು.

ಪೆಟ್ರೋಲ್ ಟೆಂಕಿ ಅಪಘಾತದಿಂದ ೧೨ ಜನರ ಮರಣ

ದಕ್ಷಿಣ ಕೊರಿಯದ ಪುಸಾನ್ ರೇವು ನಗರದ ಬಸ್ ನಿಲ್ದಾಣದಲ್ಲಿ ಪೆಟ್ರೋಲ್ ಪೈಪು ಲೈನಿನಿಂದ ಸೋರುತ್ತಿದ್ದ ಎಣ್ಣೆಗೆ ಬೆಂಕಿ ಹತ್ತಿ ಸಂಭವಿಸಿದ ಅಪಘಾತದಲ್ಲಿ ೧೨ ಜನರು ಮಡಿದು, ೫೦ ಮಂದಿಗೆ ತೀವ್ರವಾಗಿ ಸುಟ್ಟ ಗಾಯಗಳಾಗಿವೆ.

○ ಕೂನೂರಿನ ಪಾಸ್ಚರ್ ಇನ್‌ಸ್ಟಿಟ್ಯೂಟಿನಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯ ನಿರೋಧ ವ್ಯಾಕ್ಸೀನನ್ನು ತಯಾರಿಸಲಾಗಿದೆ. ಅದರ ಮೊದಲನೆ ಕಂತು ಔಷಧಿಯನ್ನು ಬರುವ ಆಗಸ್ಟ್ ೧೫ರಿಂದ ಉಪಯೋಗಕ್ಕಾಗಿ ಕೊಡಲಾಗುವುದು.

ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆ ವರ್ಷ ಮಾತ್ರ

ಬೆಂಗಳೂರು ೨೫

ಬರುವ ಸೆಪ್ಟೆಂಬರಿನಲ್ಲಿ ನಡೆಯುವ ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಗೆ ಅರ್ಜಿಗಳನ್ನು ಕಳುಹಿಸಲು ಜುಲೈ ೧೦ನೇ ತಾರೀಖು ಕಡೇ ದಿನವೆಂದು ಪ್ರಕಟಿಸಲಾಗಿದೆ. ಇನ್ನೂ ಮೂರು ವರ್ಷಗಳ ಕಾಲ ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಸರ್ಕಾರದವರು ಮಂಜೂರಾತಿಯಿತ್ತಿರುವರು.

ಬಸ್-ಲಾರಿ ಮಧ್ಯೆ ಇರುಕಿ ಮಹಿಳೆಯ ಕೈ ಮುರಿಯಿತು

ಕೋಲಾರ ಬೆಂಗಳೂರು ರಸ್ತೆಯಲ್ಲಿ ಕೋಲಾರಕ್ಕೆ ೧೪ ಮೈಲಿ ದೂರದಲ್ಲಿ ಮೊನ್ನೆ ಬಸ್-ಲಾರಿ ಅಪಘಾತವಾಗಿ ಮಧ್ಯ ವಯಸ್ಸಿನ ಮಹಿಳೆಯೊಬ್ಬಳ ಕೈ ಕತ್ತರಿಸಿ ಹೋದ ವಿಷಯವು ವರದಿಯಾಗಿದೆ. ಎರಡು ವಾಹನಗಳೂ ಎದುರುಬದುರಾಗಿ ಬರುತ್ತಿದ್ದವೆಂದೂ, ಲಾರಿ ಪಕ್ಕದಲ್ಲಿ ಓಡಿದಾಗ ಹೆಂಗಸು ಕಿಟಕಿಯಿಂದ ಹೊರಕ್ಕೆ ಇಟ್ಟಿದ್ದ ಆಕೆಯ ತೋಳು ಕತ್ತರಿಸಿ ನೆಲಕ್ಕೆ ಬಿದ್ದಿತೆಂದೂ ಹೇಳಲಾಗಿದೆ. ಆಕೆಯನ್ನು ತೀವ್ರಾವಸ್ಥೆಯಲ್ಲಿ ಕೋಲಾರದ ಆಸ್ಪತ್ರೆಗೆ ಸೇರಿಸಲಾಗಿದೆ. ಲಾರಿಯಲ್ಲಿ ತುಂಬಿದ್ದ ಸೌದೆಯು ಬಸ್ಸಿನ ಭಾಗಕ್ಕೆ ಸಿಕ್ಕಿಕೊಂಡು ಹೋದುದೇ ಇದಕ್ಕೆ ಕಾರಣ.

ಲೋಕ ಮತ್ತು ರಾಜ್ಯಸಭಾಧ್ಯಕ್ಷರಿಂದ ಸಂಬಳದ ಖೋತಾ

ಲೋಕ ಸಭೆ ಮತ್ತು ರಾಜ್ಯ ಸಭೆಗಳ ಅಧ್ಯಕ್ಷರಾದ ಎಂ. ಅನಂತಶಯನಂ ಅಯ್ಯಂಗಾರ್ ಮತ್ತು ಡಾ|| ರಾಧಾಕೃಷ್ಣನ್‌ರವರು ತಮ್ಮ ಸಂಬಳದಲ್ಲಿ ಶೇಕಡ ೧೦ರಷ್ಟನ್ನು ೬ ತಿಂಗಳ ಕಾಲ ಸ್ವಯಿಚ್ಛೆಯಾಗಿಯೇ ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿರುತ್ತಾರೆ. ಹಾಗೆಯೇ ಉಭಯ ಸಭೆಗಳ ಉಪಾಧ್ಯಕ್ಷರಾದ ಸರ್ದಾರ್ ಹುಕುಂಸಿಂಗ್ ಮತ್ತು ಎಸ್. ವಿ. ಕೃಷ್ಣಮೂರ್ತಿರಾಯರೂ ಮಾಡುವರು. ಅಧ್ಯಕ್ಷರುಗಳಿಗೆ ಮಾಹೆಯಾನ ೩,೫೦೦ ರೂ. ಮತ್ತು ಉಪಾಧ್ಯಕ್ಷರುಗಳಿಗೆ ೩,೦೦೦ ರೂ. ವೇತನ ಬರುವುದು. ಸಾರ್ವತ್ರಿಕವಾಗಿ ಮಿತವ್ಯಯ ಪಾಲಿಸಬೇಕೆಂಬ ದೃಷ್ಟಿಯಿಂದ ಕೇಂದ್ರ ಮಂತ್ರಿಗಳು ಕೈಗೊಂಡ ತೀರ್ಮಾನವನ್ನನುಸರಿಸಿ ಇವರುಗಳೂ ತಮ್ಮ ವೇತನಗಳನ್ನು ಖೋತಾ ಮಾಡಿಕೊಂಡಿರುತ್ತಾರೆ. ಹಲವು ರಾಜ್ಯಸಭಾ ಸದಸ್ಯರೂ ಶೇಕಡ ೧೦ರಂತೆ ತಮ್ಮ ಸಂಬಳದ ಖೋತಾಕ್ಕೆ ಸಮ್ಮತಿಸಿರುವರೆಂದು ಹೇಳಲಾಗಿದೆ.

ಅಮೆರಿಕದ ಮತ್ತೊಂದು ಭಾರಿ ಅಣು ಬಾಂಬಿನ ಸಿಡಿತ

ಅಮೆರಿಕವು ಈ ಸಾರಿ ನಡೆಸುತ್ತಿರುವ ಅಣು ಪರೀಕ್ಷಾ ಸಿಡಿತಗಳಲ್ಲಿ ಐದನೆಯದಾದ ಶಸ್ತ್ರದ ಸಿಡಿತವು ನೆನ್ನೆ ಲಾಸ್ ವೇಗಾಸಿನಲ್ಲಿ ನಡೆಯಿತು. ಈಗಿನ ಸಿಡಿತಗಳಲ್ಲಿ ಇದೇ ದೊಡ್ಡದಾಗಿತ್ತೆಂದು ಹೇಳಲಾಗಿದೆ. ೪೦ ಮೈಲಿ ಆಚೆ ನಿಂತು ನೋಡಿದವರು ಅದನ್ನು 'ಸೂರ್ಯೋದಯ'ಕ್ಕೆ ಹೋಲಿಸಿದರು.

ಆಹಾರದ ಬೆಲೆ ಏರಿಕೆ ತನಿಖೆಗಾಗಿ ಸಮಿತಿ

ಅಶೋಕ ಮೆಹತಾರವರ ಅಧ್ಯಕ್ಷತೆಯಲ್ಲಿ ನೇಮಕ

ದೇಶದಲ್ಲಿ ಆಹಾರ ಧಾನ್ಯಗಳ ಬೆಲೆ ಹೆಚ್ಚುತ್ತಿರುವ ಬಗ್ಗೆ ಕಾರಣಗಳನ್ನು ಕುರಿತು ತನಿಖೆ ನಡೆಸಲು ಕೇಂದ್ರ ಸರ್ಕಾರದವರು ಲೋಕಸಭಾ ಪ್ರಜಾ ಸಮಾಜವಾದಿ ಪಕ್ಷದ ಸದಸ್ಯರಾದ ಶ್ರೀ ಅಶೋಕ ಮೆಹತಾರವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರವುಳ್ಳ ಸಮಿತಿಯೊಂದನ್ನು ರಚಿಸಿರುತ್ತಾರೆ. ಬಳಕೆಗಾರನ ನಿಲುಕಿಗೆ ಮತ್ತು ಬೆಳೆಗಾರನಿಗೆ ಪ್ರೋತ್ಸಾಹಕ್ಕೆ ತಕ್ಕಂತೆ ಧಾನ್ಯಗಳ ಬೆಲೆಯಲ್ಲಿ ಮಾರ್ಪಾಡು ಮಾಡಲು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಶಿಫಾರಸು ಮಾಡಲು ಸಮಿತಿಗೆ ಸರ್ಕಾರದವರು ಸೂಚನೆಯಿತ್ತಿರುವರು. ೩ ತಿಂಗಳಲ್ಲಿ ಸಮಿತಿಯವರು ವರದಿಯನ್ನು ಒಪ್ಪಿಸಬೇಕು.

ರೆಗ್ಯುಲೇಟೆಡ್ ಮಾರ್ಕೆಟ್ ಆರಂಭದಲ್ಲೇ ಮಂಡಿ ಕಾರ್ಮಿಕರ ಮುಷ್ಕರ

ಬೆಂಗಳೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ವ್ಯವಸ್ಥೆಯು ಏರ್ಪಟ್ಟು ನೆನ್ನೆಯಿಂದ ಕಾರ್ಯಾರಂಭವಾದ ಸಮಯದಲ್ಲೇ ಅಲ್ಲಿನ ಹಳೇ ಮತ್ತು ಹೊಸ ತರಗುಪೇಟೆಯ ೩೦೦ ಮಂದಿ ಕೆಲಸಗಾರರು ತಮ್ಮ ತಮ್ಮ ಸಂಬಳವನ್ನು ದಿನಂಪ್ರತಿ ೧೫-೧೨ ರೂ. ನಂತೆ ಗೊತ್ತುಪಡಿಸಬೇಕೆಂದು ಪ್ರತಿಭಟಿಸಿ ಸಾಮಾನುಗಳನ್ನು ಹೊರ ಹಾಕಲು ನಿರಾಕರಿಸಿದರು. ಮೊದಲು ಸಾಮಾನುಗಳ ಬೆಲೆಯ ಏರಿಳಿತದಂತೆ ಅವರ ಸಂಬಳವು ಗೊತ್ತುಮಾಡಲ್ಪಟ್ಟು ಅವರಿಗೆ ದಿನಂಪ್ರತಿ ೧೮ ರೂ. ಸಿಗುತ್ತಿತ್ತು.

ಫ್ಲೂ ವ್ಯಾಧಿಯು ಮತ್ತೆ ಹೆಚ್ಚುವುದೆಂಬ ಭೀತಿಗೆ ಕಾರಣವಿಲ್ಲ

ಜಿಲ್ಲಾ ಆರೋಗ್ಯಾಧಿಕಾರಿಗಳ ಹೇಳಿಕೆ

ಸ್ವಂತ ವರದಿಗಾರರಿಂದ] ನಂಜನಗೂಡು ೨೫

ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳಾದ ಶ್ರೀ ನಂಜುಂಡಯ್ಯನವರು ನೆನ್ನೆ ಪುರಭವನದಲ್ಲಿ ನಾಗರೀಕ ಮತ್ತು ಸರ್ಕಾರಿ ವೈದ್ಯರುಗಳೊಡನೆ ಸಮಾಲೋಚನೆ ನಡೆಸಿ ಇನ್ನು ಮುಂದೆ ಇನ್‌ಫ್ಲುಯೆಂಜಾ ವ್ಯಾಧಿಯು ಉಗ್ರರೂಪದಲ್ಲಿ ಬರುವುದೆಂಬ ಭೀತಿಗೆ ಕಾರಣವಿಲ್ಲವೆಂದು ಹೇಳಿದರು. ಇಂದಿನ ವಿಜ್ಞಾನ ಯುಗದಲ್ಲಿ ಇದನ್ನು ತಡೆಗಟ್ಟಲು ನಾನಾ ಪರಿಹಾರೋಪಾಯಗಳು ಸಿದ್ಧವಾಗುತ್ತಿರುವುವೆಂದೂ, ಸರ್ಕಾರದವರೂ ಸಹ ಎಲ್ಲ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳುತ್ತಿರುವರೆಂದೂ ಅವರು ನುಡಿದರು. ಪೌರಸಭಾಧ್ಯಕ್ಷ ಶ್ರೀ ಕೆ. ವೆಂಕಟಸುಬ್ಬರವರು ಎಲ್ಲರಿಗೂ ವಂದನೆಯನ್ನು ಅರ್ಪಿಸಿದರು.

ವ್ಯಾಧಿಯು ಈಗ ಸುತ್ತಮುತ್ತಲ ಗ್ರಾಮಾಂತರಗಳಲ್ಲಿ ಹರಡುತ್ತಿದೆ.

ಇನ್ನೂ ಹತ್ತು ದಿನಗಳ ಕಾಲ ಶಾಲೆಗಳನ್ನು ಮುಚ್ಚುವಂತೆ ಸಲಹೆ ಕೊಡಲಿಚ್ಛೆಯಿದ್ದಾಗಿ ಆರೋಗ್ಯಾಧಿಕಾರಿಗಳು ಸೂಚಿಸಿದರು.

ಅಭಿವೃದ್ಧಿ ಕಾರ್ಯದಲ್ಲಿ ಸರ್ಕಾರಕ್ಕೆ ಕಾರ್ಮಿಕರ ನೆರವು ಅಗತ್ಯ

ಕೈಗಾರಿಕಾ ಮಂತ್ರಿ ಪೂಣಚ್ಚರವರ ಕರೆ

ಬೆಂಗಳೂರು ೨೪

ಕೈಗಾರಿಕಾ ಮಂತ್ರಿ ಶ್ರೀ ಸಿ ಎಂ ಪೂಣಚ್ಚರವರು ನೆನ್ನೆ ಬಿನ್ನಿ ಮಿಲ್ ಕಾರ್ಮಿಕರ ಸಂಘ ಕಟ್ಟಿಸಿದ ಸಂಸ್ಥಾಪನೆಯನ್ನು ನೆರವೇರಿಸುತ್ತ, ಸರ್ಕಾರದವರು ನಡೆಸುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ಕಾರ್ಮಿಕರು ಹೃತ್ಪೂರ್ವಕವಾಗಿ ಸಹಕಾರವೀಯಬೇಕೆಂದು ತಿಳಿಸಿದರು ಉಭಯ ಪಕ್ಷಗಳಲ್ಲೂ ಸೌಹಾರ್ದ ಮತ್ತು ಸಹಕಾರ ಅಗತ್ಯವೆಂದೂ, ಕೈಗಾರಿಕಾ ವ್ಯಾಜ್ಯಗಳನ್ನು ಪರಸ್ಪರ ಚರ್ಚೆಯಿಂದ ಪರಿಹರಿಸಬಹುದೆಂದೂ ಹೇಳಿದರು ದ್ವಿತೀಯ ಯೋಜನೆಯನ್ನು ಯಶಸ್ವಿಗೊಳಿಸಲು ಸರ್ಕಾರದವರು ತಮ್ಮ ಶಕ್ತಿಯನ್ನೆಲ್ಲಾ ವಿನಿಯೋಗಿಸುವರೆಂದೂ ಸರ್ಕಾರದ ತೊಂದರೆಗಳನ್ನು ಕಾರ್ಮಿಕರು ಗಮನಿಸಬೇಕೆಂದೂ ಅವರ ಸೂಚಿಸಿ, ಕಾರ್ಮಿಕರ ಹಿತಚಿಂತನೆಯು ಸರ್ಕಾರದ ಗಮನದಲ್ಲಿರುವುದೆಂದೂ ನುಡಿದರು ವಿವಾದಗಳನ್ನು ಪರಿಹರಿಸುವುದರಲ್ಲಿ ವಿಳಂಬವಾದರೆ ಅದಕ್ಕೆ ಕಾರ್ಮಿಕರು ತಾಳ್ಮೆಯನ್ನು ಅವಲಂಬಿಸಬೇಕೆಂದೂ ತಿಳಿಸಿದರು

ಹಿಂದಿ ಪರೀಕ್ಷೆಯಲ್ಲಿ ರ್‍ಯಾಂಕು

ಬೆಂಗಳೂರಿನ ಹಿಂದಿ ಸಾಹಿತ್ಯ ಪರಿಷತ್ತಿನವರು ನಡೆಸಿದ ಪ್ರಥಮಾ ಪರೀಕ್ಷೆಯಲ್ಲಿ ಬೆಂಗಳೂರಿನ ಶ್ರೀ ಆರ್ ಚಲಾಪತಿ ರಾವ್‌ರವರು ಪ್ರಥಮ ಸ್ಥಾನ ಗಳಿಸಿರುತ್ತಾರೆ ಅದೇ ಊರಿನ ಶ್ರೀ ಎಸ್ ಕುಶಾಲ, ಎಂ ಕೆ ಪ್ರಸನ್ನ [illegible] ಆರ್ ಕಿಶೋರ್ ಮತ್ತು ಶ್ರೀಮತಿ ಇಮ್ತಿಯಾಜ್ ಬೇಗಂರವರು ಕ್ರಮವಾಗಿ ೨ರಿಂದ ೫ನೇ ಸ್ಥಾನಗಳನ್ನು ಗಳಿಸಿರುವರು ಕೇರಳ ಪ್ರದೇಶದ ಶ್ರೀಗಳು ಕೆ ಯೋಗಾನಂದ ಮತ್ತು ಹೆಚ್ ರಾಮೇಗೌಡರು ಮತ್ತು ಮೈಸೂರಿನ ಕೆ ಸೀತಾರಾಂ ಮತ್ತು ಎ ಎಲ್ ಲಕ್ಷ್ಮೀನಾರಾಯಣರವರು ಐದನೇ ಸ್ಥಾನ ಪಡೆದಿರುವರು

೧೮೫೭ರ ಸಂಗ್ರಾಮದ ಸ್ಮಾರಕ ಸ್ಟಾಂಪುಗಳು

೧೮೫೭ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸ್ಮಾರಕಕ್ಕಾಗಿ ಅಂಚೆ ಇಲಾಖೆಯವರು ಎರಡು ಆಗಸ್ಟ್ ತಿಂಗಳಲ್ಲಿ ೨ ವಿಶೇಷ ರೀತಿಯ ಸ್ಟಾಂಪ್‌ಗಳನ್ನು ಮುದ್ರಿಸಿ ಮಾರಾಟಕ್ಕೆ ಕೊಡಲಿರುವರು ಒಂದರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ರ ಚಿತ್ರವನ್ನೂ ಮತ್ತೊಂದರಲ್ಲಿ ಜ್ಯೋತಿಯೊಂದನ್ನೂ ಮುದ್ರಿಸಲಾಗುವುದು ಝಾನ್ಸಿ ರಾಣಿಯವರ ಚಿತ್ರವಿರುವ ಸ್ಟಾಂಪನ್ನು ಒಳನಾಡಿನ ಅಂಚೆ ಪತ್ರಗಳಿಗೂ, ಮತ್ತೊಂದನ್ನು ಯೂರೋಪು ದೇಶಗಳಿಗೆ ಕಳುಹಿಸುವ ಅಂಚೆ ಪದಾರ್ಥಗಳಿಗೂ ಉಪಯೋಗಿಸಬಹುದು

ಗುರುವಾಯೂರು ಗುಡಿ ಪ್ರವೇಶಿಸಲು ವಿನೋಬಾಜಿ ನಿರಾಕರಣೆ

ಗುರುವಾಯೂರು ದೇವಸ್ಥಾನಕ್ಕೆ ಹಿಂದೂಗಳಲ್ಲದವರು ಪ್ರವೇಶಿಸಲು ಅವಕಾಶವಿಲ್ಲದಿರುವುದರಿಂದ ವಿನೋಬಾ ಭಾವೆಯವರೂ ಆ ದೇವಸ್ಥಾನಕ್ಕೆ ಹೋಗಲು ನಿರಾಕರಿಸಿರುವರು

ವಿವಾಹ ಮಹೋತ್ಸವ

ನಗರದ ಓರಿಯಂಟಲ್ ಇಂಡಸ್ಟ್ರೀಸಿನ ಮಾಲೀಕರಾದ ಶ್ರೀ ಬಿ ಎಸ್ ಸುಬ್ರಾಂರವರು ತಮ್ಮ ಸಹೋದರ ಶ್ರೀ ಬಿ ಎಸ್ ರಾಮರಾಯರ ಕುಮಾರರಾದ ಶ್ರೀ ಬಿ ಆರ್ ಶಶಿಶೇಖರರವರಿಗೆ ಪೂನಾದಲ್ಲಿರುವ ಶ್ರೀ ಕೆ ಎಸ್ ರಾಯರ ಪುತ್ರಿ ಸೌ॥ ಶರ ದನ್ನು ತಂದುಕೊಂಡ ನೆನ್ನೆ ನಗರದಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸಿದರು. ನೆನ್ನೆ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿತ್ತು

ಕಳ್ಳತನಕ್ಕೆ ಸಜಾ

ಕೆಸರೆಯ ಅಮೀನ ಕಾಲೊನಿಯಲ್ಲಿ ವಿದ್ಯುಚ್ಛಕ್ತಿ ಸಾಮಗ್ರಿಗಳನ್ನು ಕದ್ದುದಕ್ಕಾಗಿ ಚಂದ್ರ ಎಂಬುವನಿಗೆ ಮೊದಲನೇ ನಗರ ನ್ಯಾಯಾಧೀಶರು ಒಂದು ತಿಂಗಳು ಕಠಿಣ ಸಜಾ ವಿಧಿಸಿರು

ಭೂಗರ್ಭದಲ್ಲಿ ಉಷ್ಣಾಂಶ ಹೆಚ್ಚುತ್ತಿದೆಯೇ?

ಮನುಷ್ಯ ಕೃತ ದೋಷದ ಬಗ್ಗೆ ವಿಜ್ಞಾನಿಗಳ ಸಂಶೋಧನೆ

ಮನುಷ್ಯ ಕೃತ ಅನಾಚಾರದಿಂದ ವಾಯುಗುಣವು ಕೆಟ್ಟು ಭೂಮಿಯು ಜೀವಿಸಲು ಅಗದ ತಹ ರೀತಿಯು ಉಷ್ಣದಿಂದ ಕೂಡಿರಬಹುದ ದ ವಿಷಯವನ್ನು ಕುರಿತು ಅಮೇರಿಕಾ ವಿಜ್ಞಾನಿಗಳು ತನಿಖೆ ನಡಸಲಿರುವರು ಬರುವ ತಿಂಗಳು ವಿಜ್ಞಾನಿಗಳು ಪೆಸಿಫಿಕ್ ಸಾಗರ ಪ್ರದೇಶದ ಹವಾಮಾನದ ವಿವ ಮಾದರಿಗಳನ್ನು ಪರೀಕ್ಷೆ ನಡೆಸುವರು. ಜಗತ್ತಿನಲ್ಲಿ ಇಂಗಾಲ [illegible] ವ್ಯಾಪನೆಯು ಹೆಚ್ಚಾಗಿ ಭೂಮಿಯು ಹೆಚ್ಚು ಉಷ್ಣತೆಗೊಳ್ಳುತ್ತಿದೆಯೆಂಬ ಅಂಶವನ್ನು ಅವರ ಗಳು ಪರಿಶೀಲಿಸುವರು

ಜೇಬುಗಳ್ಳತನ ಕಲಿಸುವ ಶಾಲೆ

ಪಶ್ಚಿಮ ಬಂಗಾಳದ ನದಿಯಾ ಜಿಲ್ಲೆಯ ನವದ್ವೀಪವೆಂಬಲ್ಲಿ ಚಿಕ್ಕ ವಯಸ್ಸಿನವರಿಗೆ ಜೇಬುಗಳ್ಳತನದ ಶಿಕ್ಷಣವನ್ನು ಕೊಡುವುದಕ್ಕಾಗಿ ವ್ಯವಸ್ಥಿತ ಸಂಸ್ಥೆಯೊಂದು ಇರುವುದೆಂಬುದನ್ನು ಬಂಗಾಳ ಪೊಲೀಸರು ಪತ್ತೆ ಹಚ್ಚಿರುತ್ತಾರೆ ಅಲ್ಲಿಂದ ೪ ಜನ ಬಾಲಕರನ್ನು ಪೊಲೀಸರು ಕರೆತಂದಿರುವರು ತಮಗೆ ಅಲ್ಲಿ ಶಿಕ್ಷಣ ದೊರೆಯುತ್ತಿತ್ತೆಂದು ಬಾಲಕರು ತಿಳಿಸಿರುವರು ನಾನಾ ಜಿಲ್ಲೆಗಳಿಂದ [illegible] ಬಾಲಕರನ್ನು ಕರೆತರಲಾಗುತ್ತಿತ್ತೆಂದು ಹೇಳಲಾಗಿದೆ

ನೂರು ವರ್ಷ ಉರಿಯುವ ವಿದ್ಯುಚ್ಛಕ್ತಿ ದೀಪ

ಅಮೇರಿಕದ ಸೈನಾಪಡೆಯಲ್ಲಿರುವ ಸಂಶೋಧನಾಲಯದವರು ೧೦೦ ವರ್ಷಗಳವರೆಗೆ ಸತತವಾಗಿ ಉರಿಯುವ ಹಗುರವಾದ ವಿದ್ಯುಚ್ಛಕ್ತಿ ಬಲ್ಬನ್ನು ತಯಾರಿಸಿರುವರೆಂದು ಗೊತ್ತಾಗಿದೆ [illegible] ರಲ್ಲಿ ಥಾಮಸ್ ಎಡಿಸನ್‌ರವರು ಮೊದಲು ಕಂಡು ಹಿಡಿದ ದೀಪದ ಮಾದರಿಯಲ್ಲಿ ಅದು ಇದೆ ಆ ದೀಪವು ೬೧ ಗಂಟೆ ಕಾಲ ಉರಿದಿತ್ತು

ಅಣು ಪರೀಕ್ಷೆ ನಿಲ್ಲಿಸುವಂತೆ ಒತ್ತಾಯಕ್ಕಾಗಿ ಸ್ತ್ರೀಯರ ಕ್ರಮ

[illegible] ಪರೀಕ್ಷೆಯನ್ನು ನಿಲ್ಲಿಸಲು [illegible] ಸರಕಾರಗಳ ಮೇಲೆ ಒತ್ತಾಯ [illegible] ನಡೆಸಲು [illegible] ಕ್ರಿಶ್ಚಿಯನ್ [illegible] ದೇಶದ ಗಲ್ಸ್ ಉರ್ನರ್‌ರವರು [illegible] ಎಂಬುವರ ಗಳು ಮಕ್ಕಳ ಛಾಯಾಚಿತ್ರಗಳನ್ನು ಸಂಗ್ರಹಿಸಲಿರುವರು ಆಗಸ್ಟ್ ೬ರಂದು (ಹಿರೋಷಿಮಾ ಮೇಲೆ ೧೨ ವರ್ಷಗಳ ಹಿಂದೆ ಅಣು ಬಾಂಬು ಬಿದ್ದ ದಿನ) ಆಕೆಯು ಐಸೆನ್‌ಹೋವರ್, ಮ್ಯಾಕ್‌ಮಿಲನ್ ಮತ್ತು ನಿಕಿಟಾ ಕ್ರುಶ್ಚೇವರಿಗೆ ಅವನ್ನ ಕಳುಹಿಸುವಳು ಮಕ್ಕಳ ಮುಖವನ್ನು ನೋಡಿಯಾದರೂ ಪರೀಕ್ಷಾ ಸಿಡಿತಗಳನ್ನು ನಿಲ್ಲಿಸುವಂತೆ ಆಕೆಯು ಪ್ರಾರ್ಥಿಸಲಿರುವಳು ಅದಕ್ಕಾಗಿ ೧೦ ಸಾವಿರ ಚಿಕ್ಕ ಮಕ್ಕಳ ಛಾಯಾಚಿತ್ರಗಳನ್ನ ಸಂಗ್ರಹಿಸುತ್ತಿರುವಳು

ಮೈಸೂರು ಪೇಟೆ ಧಾರಣೆ

ಬಂಗಾರ ಮತ್ತು		
ಕೊಯಮುತ್ತೂರು ಹತ್ತಿ	೩೦ ೫೭	೩೪ ೦೦
ರತ್ನಚೂಡಿ	೩೮ ೦೦	೪೪ ೫೭
ಕಡ್ಲೆ	೨೯ ೦೦	೩೦ ೦೦
ಸೀತಾಭೋಗ	೩೬ ೦೦	೪೪ ೦೦
ರಾಗಿ	೩೨ ೦೨	೩೪ ೦೦
ಕಡಲೆಕಾಯಿ	೧೩ ೦೦	೨೦ ೦೦
ಹುಚ್ಚೆಳ್ಳು	೪೦ ೦೦	
ಹೊಂಗೆಬೀಜ	೨೭ ೩೫	೨೯ ೯೭
ಎಳ್ಳು	೨೯ ೬೭	೩೪ ೦೦
ಹುರುಳಿ	೩೭ ೩೫	೩೩ ೩೭
ಹೆಸರು	೩೩ ೩೭	೩೫ ೦೦
ಹಲಸಂದೆ	೩೦ ೦೦	೩೪ ೦೨
ಉದ್ದು	೪೫ ೫೦	೫೫ ೦೦
ತೊಗರಿ	೩೯ ೯೭	
ಸಾಬಸಿಗೆಬೀಜ	೩೦ ೧೫	
ಗುಳ್ಳೆಸಿಗೆಬೀಜ	೪ ೦೦	
ಸೀಗೆಕಾಯಿ	೭ ೫೦	೭ ೬೭
ಮೆಣಸಿನಕಾಯಿ	೬ ೧೮	೭ ೬೭
ಮೆಣಸಿನಕಾಯಿ	೧೪ ೫೦	೧೭ ೦೦
ತೆಂಗಿನಕಾಯಿ	೧೫೦ ೦೦	೨೦೨ ೫೦

ಬೆಳಗಾಮಿನ ಭವಿಷ್ಯದ ಬಗ್ಗೆ ನಿಜಲಿಂಗಪ್ಪನವರ ಹೇಳಿಕೆ

ಬೊಂಬಾಯಿ ಮುಖ್ಯ ಮಂತ್ರಿಗಳ ವಿವರಣೆ

ಬೊಂಬಾಯಿ ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ವೈ ಬಿ ಚವಾಣರವರು ಮಾತನಾಡಿ ಬೆಳಗಾಂ ಮತ್ತು ಇತರ ಗಡಿ ಪ್ರದೇಶಗಳ ಹೊಂದಾಣಿಕೆ ವಿಚಾರವಾಗಿ ಮೈಸೂರಿನ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಕೊಟ್ಟಿರುವರೆಂದು ಹೇಳಲಾದ ಹೇಳಿಕೆಯನ್ನು ಪ್ರಸ್ತಾಪಿಸಿದರು ಈ ಬಗ್ಗೆ ತಾವು ಕೇಂದ್ರಕ್ಕೆ ತಮ್ಮ ಅಭಿಪ್ರಾಯವನ್ನು ಸೂಚಿಸಿರುವುದಾಗಿಯೂ ಅಂತಹ ಭಾಷಣ ಮಾಡಿಲ್ಲವೆಂದು ಶ್ರೀ ನಿಜಲಿಂಗಪ್ಪನವರು ತಮಗೆ ತಿಳಿಸಿರುವರೆಂದೂ ಚವಾಣರವರು ಹೇಳಿದರು ಗಡಿ ಸಮಸ್ಯೆಯನ್ನು ವಲಯ ಮಂಡಲದ ಸಭೆಯಲ್ಲಿ ಪರಿಶೀಲಿಸಲಾಗುವುದೆ ದೂ ಅವರು ಸೂಚಿಸಿದರು ದ್ವಿಭಾಷಾ ಬೊಂಬಾಯಿ ಸಂಸ್ಥಾನವು ನಡೆದುಕೊಂಡುಬರುವುದಕ್ಕೆ ನ್ಯಾಯವಾದ ಅವಕಾಶವನ್ನು ಕಲ್ಪಿಸಲು ಸರ್ಕಾರದವರು ನಿರ್ಧರಿಸಿರುವರೆಂದೂ ಅವರು ತಿಳಿಸಿದರು

ಎಕ್ಸ್‌ಪ್ರೆಸ್ ಮತ್ತು ಗೂಡ್ಸ್ ರೈಲುಗಳಿಗೆ ಡಿಕ್ಕಿ

ಮಧ್ಯ ರೈಲ್ವೆಯ ಪಠಾಣಕೋಟೆ ಎಕ್ಸ್‌ಪ್ರೆಸ್ ರೈಲು ದೆಹಲಿ ಅಭಿಮುಖವಾಗಿ ಹೋಗುತ್ತಾ ಕಳೆದ ಶನಿವಾರ ಮಥುರಾ ದೆಹಲಿ ವಿಭಾಗದಲ್ಲಿರುವ ಚಾಟಾ ನಿಲ್ದಾಣದಲ್ಲಿದ್ದ ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆಯಲಾಗಿ ೮ ಜನರಿಗೆ ತೀವ್ರವಾಗಿಯೂ ೪೩ ಮಂದಿಗೆ ಸ್ವಲ್ಪವೂ ಗಾಯವಾಯಿತೆಂದು ವರದಿಯಾಗಿದೆ

ಮುಮುಕ್ಷುಗಳ ಕೃತಿಡಿ

ನಗರದಲ್ಲಿರುವ ಆತ್ಮ ವಿಚಾರ ಮಂದಿರದ ಅಧ್ಯಕ್ಷರಾದ ಡಾ॥ ಎಂ ಎಲ್ ನಾಗಣ್ಣನವರು ಮೇಲ್ಕಂಡ ಶಿರೋನಾಮೆಯ ಚಿಕ್ಕ ಕನ್ನಡ ಗ್ರಂಥವನ್ನು ರಚಿಸಿ ಪ್ರಕಟಿಸಿರುತ್ತಾರೆ ಮೋಕ್ಷದ ಸ್ವರೂಪ ಅದರ ಅವಶ್ಯಕತೆ ಮತ್ತು ಸಾಧನೆಗಳು ಮುಂತಾದುವನ್ನು ಗ್ರಂಥದಲ್ಲಿ ಸುಲಭವಾಗಿ ಎಲ್ಲರಿಗೂ ತಿಳಿಯುವಂತೆ ವಿವರಿಸಲಾಗಿದೆ ಸಂಸ್ಕೃತ ಶ್ಲೋಕಗಳು ಮತ್ತು ಅವುಗಳ ಅರ್ಥಗಳನ್ನೂ ಕೊಡಲಾಗಿದೆ ತತ್ವ ವಿಚಾರಗಳಲ್ಲಿ ಆಸಕ್ತಿಯುಳ್ಳವರು ಇದರಲ್ಲಿರುವ ರಸವನ್ನು ಸವಿಯಬಹುದು ಬೆಲೆ ೮ ಆಣೆ

ಹರಿಕಥೆಗಳು

ನಗರದ ನಜರ್‌ಬಾದಿನ ಶ್ರೀ ಕೋದಂಡರಾಮಸ್ವಾಮಿಯವರ ದೇವಸ್ಥಾನದಲ್ಲಿ ಇಂದಿನಿಂದ ಪ್ರತಿ ದಿನ ಸಂಜೆ ೭ ಗಂಟೆಗೆ ಶ್ರೀ ಬಿ ಎಂ ಒಡೆಯರ್ ರವರಿಂದ ಹರಿಕಥೆ ಕಾಲಕ್ಷೇಪಗಳು ನಡೆಯುವಂತೆ ಏರ್ಪಡಿಸಿದೆ

ಗೋಹತ್ಯೆಗಾಗಿ ಶಿಕ್ಷೆ

ಯಾಕೂಬ್ ಎಂಬ ಕನು ಜಲಪುರಿಯ ಅಲ್ಲಾ [illegible] ದನವನ್ನು ಕೊಂದುದಕ್ಕಾಗಿ ಲ್ಯಾಂಡ್ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅವನಿಗೆ ಎರಡನೇ ನ್ಯಾಯಾಧೀಶರು ೫೦ ರೂ ಜುಲ್ಮಾನೆ ವಿಧಿಸಿರುತ್ತಾರೆ

ಲಕ್ಷ್ಮಿ ಥಿಯೇಟರ್ ★

24 6 57ರಿಂದ ಅಮೋಘ ಪ್ರಾರಂಭ ದಿನವೂ 2 ಆಟಗಳು ರಾಜಶ್ರೀ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ

★ ವೆ ಟ್ರಿ ವಿ ೕ ರ ನ್ ★

ಪಾತ್ರ — ಎ ಟಿ. ರಾಮರಾವ್, ಆರ್ ನಾಗೇಶ್ವರರಾವ್, ರೇಲಂಗಿ, ಅಂಜಲಿ, ಸಾಹುಕಾರ್ ಜಾನಕಿ ಮುಂತಾದವರು

ವುಡ್‌ಲ್ಯಾಂಡ್ಸ್ ★

ಈ ದಿನವೇ ನೋಡಿ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿರುವ ಅಮೋಘ ತಮಿಳು ಚಿತ್ರ

★ ಕ ರು ಪ್ಪು ಕ್ಕ ರ ಸಿ ★

ಮೊದಲನೇ ಆಟ 7 ಕ್ಕೆ 2ನೇ ಆಟ 10-15 ಕ್ಕೆ

ಪಾತ್ರ ವರ್ಗ — ಜೆಮಿನಿ ಗಣೇಶ್, ಸಾವಿತ್ರಿ, ನಂಬಿಯಾರ್, ತಂಗವೇಲು, ಜಿ ವರಲಕ್ಷ್ಮಿ, ಎಂ ಕೆ ರಾಧಾ ಮುಂತಾದವರು

[ಶ್ರೀ ರಾಘವೇಂದ್ರಾ ರಿಲೀಸ್

ಕ್ರಿಮಾಯ್ ಮೇಲೆ ಷೆಲ್ ಧಾಳಿ

ರಷ್ಯಾದ ವಶದಲ್ಲಿರುವ ಕ್ರಿಮಾಯ್ ದ್ವೀಪದ ಮೇಲೆ ಚೀಣದ ಭೂಭಾಗದಿಂದ ನೆನ್ನೆ ಫಿರಂಗಿ ಗುಂಡುಗಳನ್ನು ಯಥೇಚ್ಛವಾಗಿ ಹಾರಿಸಲಾಯಿತೆಂದೂ, ಅದರಿಂದ ಥೈವಾನ್ ಕೊಲ್ಲಿಯಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯುಂಟಾಗಿರುವುದೆಂದೂ ವರದಿಯಾಗಿದೆ ೩ ವರ್ಷಗಳ ಹಿಂದೆ ಆದ ಧಾಳಿಯಿಂದ ಈಚೆಗೆ ಇಷ್ಟು ಭಾರಿ ಪ್ರಮಾಣದಲ್ಲಿ ಷೆಲ್ ಧಾಳಿಯಾಗಿರಲಿಲ್ಲ ರಷ್ಯಾದ ವಿಮಾನ ಮತ್ತು ಯುದ್ಧ ನೌಕೆಗಳಿಗೆ ಕಾರ್ಯಾಚರಣೆಗೆ ಸಿದ್ಧವಾಗಿರುವಂತೆ ಎಚ್ಚರಿಕೆ ಸೂಚನೆ ಕೊಡಲಾಗಿದೆ ಕ್ರಿಮಾಯ್ ಮತ್ತು ಹತ್ತಿರದಲ್ಲಿರುವ ಕಮ್ಯೂನಿಸ್ಟರ ಅಮಾಯ್ ಪ್ರದೇಶಗಳ ನಡುವೆ ವಿದೇಶೀ ಹಡಗುಗಳ ಸಂಚಾರದಿಂದ ಅಪಾಯವಿರುವುದೆಂದು ರಷ್ಯಾದ ಚೀಣದ ಅಧಿಕಾರಿಯು ಎಚ್ಚರಿಸಿರುತ್ತಾರೆ

ಮೋಟಾರು ಸೈಕಲ್ ಮತ್ತು ಲಾರಿ ಡಿಕ್ಕಿ

ರಣಜಿತ್ ಸಿನಿಮಾ ಮಂದಿರದ ಬಳಿ ನೆನ್ನೆ ಮೋಟಾರು ಸೈಕಲೊಂದಕ್ಕೂ ಒಂದು ಲಾರಿಗೂ ಡಿಕ್ಕಿಯಾಗಿ ಮೋಟಾರು ಸೈಕಲ್ ಸವಾರರಾದ ಹಳ್ಳದಕೇರಿ ಬೆಣ್ಣೆ ವ್ಯಾಪಾರಿಗಳ ದ ಶ್ರೀ ಸೋಮರವರ ತಲೆಗೆ ತೀವ್ರ ಗಾಯವಾಯಿತು

CENTRAL INSTITUTE OF COMMERCE

Vani Vilas Market, Mysore

Efficient Coaching — Best Results Admissions received for Diploma in Commerce & Stenography & for Shorthand and Typewriting Make haste and rush in before admission close.

ಮಹಾ ಕವಿ ಲಕ್ಷ್ಮೀಶ ವಿರಚಿತ

ಕನ್ನಡ ಜೈಮಿನಿ ಭಾರತ

1957 Edition . Re 1-0-0

ಶ್ರೀ ರಾಜರತ್ನಂರವರ

ಭಗವಾನ್ ಬುದ್ಧ . 1 0 0

ಕೃಷ್ಣಾ ಕಂಪೆನಿ,

ಸೂರಡಿ ರಸ್ತೆ, ಮೈಸೂರು

ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ

ಲಿಮಿಟೆಡ್, ಮೈಸೂರು

ಪ್ರಕಟಣೆ

ಮೇಲ್ಕಂಡ ಸೊಸೈಟಿಯ ಲೇವಾದೇವಿ ಶಾಖೆಯನ್ನು ಹೊಸ ಸ್ವತ್ತಿನ ಸಹ ಬಿಲ್ಡಿಂಗಲ್ಲಿರುವ ಸೊಸೈಟಿಯ ಹೊಸ ಕಟ್ಟಡಕ್ಕೆ ತಾ॥ 26 6 57ನೇ ಬುಧವಾರ ಬೆಳಗ್ಗೆ 8 ಘಂಟೆಗೆ ವರ್ಗಾಯಿಸಲಾಗುವುದು

ಪಿ. ಗೋಪಾಲಕೃಷ್ಣಶೆಟ್ಟಿ, ಅಧ್ಯಕ್ಷ

Edited, Printed and Published by A. R Nagarajan at Sadhvi Press Sanjival Road, Mysore

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ ೭ ನಯಾ ಪೈಸ

ಒಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ
ಮೈ ಸೂ ರು

ಸಂಪುಟ : ೧೫] SADHVI : WEDNESDAY 26—6—1957 ಮೈಸೂರು : ಬುಧವಾರ ೨೬—೬—೧೯೫೭ : [ಸಂಚಿಕೆ : ೩೬೨

೨೫ ಲಕ್ಷಕ್ಕೆ ರಷ್ಯಾ-ಅಮೆರಿಕಾ ಸೈನ್ಯ ಇಳಿಸಲು ಸಲಹೆ

ಅಮೆರಿಕಾ ಮತ್ತು ರಷ್ಯದ ಸೈನ್ಯಗಳನ್ನು ೨೫ ಲಕ್ಷಕ್ಕೆ ಇಳಿಸಲು ಕರೆ

ರಷ್ಯಕ್ಕೆ ಅಮೆರಿಕದ ಸೂಚನೆ

ಶಸ್ತ್ರ ಸನ್ಯಾಸದ ಒಪ್ಪಂದದ ಮೊದಲನೇ ಹಂತವಾಗಿ ರಷ್ಯಾ ಮತ್ತು ಅಮೆರಿಕಗಳು ತಮ್ಮ ಈಗಿನ ಸೈನ್ಯಗಳನ್ನು ೨೫ ಲಕ್ಷಕ್ಕೆ ಇಳಿಸಬೇಕೆಂದೂ ಮುಂದೆ ಕ್ರಮವಾಗಿ ೨೫ ಮತ್ತು ೧೭ ಲಕ್ಷಕ್ಕೆ ಕಡಿಮೆ ಮಾಡಿಕೊಳ್ಳಬೇಕೆಂದೂ ಅಮೆರಿಕವು ರಷ್ಯಕ್ಕೆ ಸೂಚಿಸಿರುತ್ತದೆ. ಎರಡು ಮತ್ತು ಮೂರನೇ ಘಟ್ಟಗಳಲ್ಲಿ ಸೈನ್ಯದ ಖೋತಾವು ರಾಜಕೀಯ ಸಮಸ್ಯೆಗಳನ್ನು ಅವಲಂಬಿಸಿರುವದೆಂದು ಅಮೆರಿಕವು ಹೇಳಿ ರಾಜಕೀಯ ಇತ್ಯರ್ಥವಿಲ್ಲದೆ ಮೊದಲನೇ ಹಂತದ ಇಳಿತಾಯವಾಗಬೇಕೆಂದು ಸಲಹೆ ಮಾಡಿದೆ

ಲಂಡನ್ನಿಗೆ ನೆಹರೂರ ಆಗಮನ

ಇಂದಿನಿಂದ ಸೇರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದ ಪ್ರಧಾನಿ ನೆಹರೂರವರು ನೆನ್ನೆ ಜ್ಯೂರಿಕ್ಲೋಮಿನಿಂದ ಲಂಡನ್ನಿಗೆ ಆಗಮಿಸಿದರು. ಕಾಮನ್‌ವೆಲ್ತ್ ಪ್ರಧಾನಿಗಳು ಕಾಶ್ಮೀರ ಪ್ರಶ್ನೆಯನ್ನು ಬಿಡಿಸುವ ಬಗ್ಗೆ ಹೇಗೆ ಸಹಾಯಕರಾಗುವರೆಂದು ಅವರನ್ನು ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಿದಾಗ, ಕಾಶ್ಮೀರವು ಮೂಲತಃ ಭಾರತದ ಭಾಗವಾಗಿರುವದೆಂದೂ, ಕಾಶ್ಮೀರದಲ್ಲಿ ಪಾಕಿಸ್ತಾನವು ಆಕ್ರಮಣ ನಡೆಸಿದೆಯೆಂದೂ, ಇನ್ನೂ ನಮಗೆ ತೋರಿಸಿಲ್ಲವೆಂದೂ ಅವರು ಹೇಳಿದರು. ವಿಶ್ವ ಸಂಸ್ಥೆಯ ನಿರ್ಮಾಣಗಳನ್ನು ಒಪ್ಪಿಲ್ಲದಿರುವ ರಾಷ್ಟ್ರ ಪಾಕಿಸ್ತಾನವೆಂದು ಅವರು ಹೇಳಿ, ಇನ್ನೂ ಕಾಶ್ಮೀರದಿಂದ ಅದು ಕಾಲ್ತೆಗೆದಿಲ್ಲವೆಂದು ತಿಳಿಸಿದರು. ಕಾಶ್ಮೀರದ ಬಗ್ಗೆ ಖಾಸಗಿಯಾಗಿ ಮಾತುಕತೆ ನಡೆಸಲು ಯಾವ ವಿಶೇಷ ಕಾರಣವೂ ಇಲ್ಲವೆಂದೂ ಅವರು ನುಡಿದರು.

ಭರತರ್ ಕುಮಾರಪ್ಪನವರ ನಿಧನ

ಗಾಂಧೀವಾದಿ ವಿದ್ವಾಂಸರಾದ ಡಾ|| ಭರತರ್ ಕುಮಾರಪ್ಪನವರು ನೆನ್ನೆ ದೆಹಲಿಯಲ್ಲಿ ಹಠಾತ್ತನೆ ಶಿರೋರಕ್ತಸ್ರಾವದಿಂದ ಮೃತಪಟ್ಟರು. ಅವರಿಗೆ ೬೦ ವರ್ಷ ವಯಸ್ಸಾಗಿತ್ತು. ಅವರು ಮಹಾತ್ಮಾ ಗಾಂಧಿಯವರ ಲೇಖನಗಳ ಒಟ್ಟು ಜೀವನ ಮುಖ್ಯ ಸಂಪಾದಕರಾಗಿದ್ದರು. ಗ್ರಂಥವನ್ನು ಸಧ್ಯದಲ್ಲೇ ಅಚ್ಚಿಗೆ ಕಳುಹಲಾಗುವುದು. ಅವರು ಕೇರಳದವರು. ಅವರ ಸಹೋದರ ಡಾ|| ಜೆ ಸಿ ಕುಮಾರಪ್ಪನವರು ಗಾಂಧಿಯವರ ನಿಕಟವರ್ತಿಗಳಾಗಿದ್ದರು. ಭರತರ್ ಕುಮಾರಪ್ಪನವರ ಪರೋಕ್ಷ ಮತ್ತು ಭಾರತೀಯ ಸಾರ್ವಜನಿಕರು

ವಿದ್ವಾನ್ ಪಾಲಘಾಟ್ ರಾಮಭಾಗವತರ ನಿಧನ

ಸುಪ್ರಸಿದ್ಧ ಕರ್ನಾಟಕ ಸಂಗೀತಗಾರರಾದ ಪಾಲಘಾಟ್ ರಾಮಭಾಗವತರ್‌ರವರು ನೆನ್ನೆ ರಾತ್ರಿ ಪಾಲಘಾಟ್ ಬಳಿ ಮುಂಡೈ ಗ್ರಾಮದಲ್ಲಿ ಎಪ್ಪತ್ತನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಸಂಗೀತ ಪ್ರಪಂಚದಲ್ಲಿ ಅವರು ವಿಶೇಷ ಗೌರವವನ್ನು ಗಳಿಸಿದ್ದರು. ಪಾಲಘಾಟ್ ಅನಂತರಾಮ ಭಾಗವತರ ಬಳಿ ಅವರು ಗುರುಕುಲ ಪದ್ಧತಿಯಂತೆ ವ್ಯಾಸಂಗ ಮಾಡಿದ್ದರು

ಸಾಮಾಜಿಕ ಸೇವಾ ಕಾರ್ಯಕರ್ತರ ಸಭೆ

ದುರ್ಗಾಬಾಯಿ ದೇಶಮುಖ್‌ರವರ ಭಾಷಣ

ಮೈಸೂರು ೨೬

ಸಂಸ್ಥಾನದ ಸಾಮಾಜಿಕ ಯೋಗಕ್ಷೇಮ ಸಲಹಾ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೫|| ಗಂಟೆಗೆ ಬೋರ್ಡ್ ಹಾಲಿನಲ್ಲಿ ಸಮಾಜ ಸೇವಾ ಕಾರ್ಯಕರ್ತರ ಸಭೆಯು ಸೇರುವುದು. ಕೇಂದ್ರ ಸಮಿತಿ ಅಧ್ಯಕ್ಷಿಣಿ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ಭಾಷಣ ಮಾಡುವರು. ಮಹಾರಾಣಿ ಶ್ರೀಮತಿ ತ್ರಿಪುರ ಸುಂದರಮ್ಮಣ್ಣಿಯವರು ಅಧ್ಯಕ್ಷತೆ ವಹಿಸುವರು

ರಾಷ್ಟ್ರಾಧ್ಯಕ್ಷರೊಡನೆ ಮೈಸೂರು ರಾಜ್ಯಪಾಲರ ಭೇಟಿ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರನ್ನು ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ಕಳೆದ ಭಾನುವಾರ ಭೇಟಿ ಮಾಡಿದ್ದರು

ಎಂ ಪಿ ಸಿ ಸಿ ಖಾಯಂ ಕಾರ್ಯದರ್ಶಿ

ಶ್ರೀ ಎಂ ಎ ಗೋಪಾಲಸ್ವಾಮಿ ಅಯ್ಯಂಗಾರರನ್ನು ಹೊಸ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಖಾಯಂ ಕಾರ್ಯದರ್ಶಿಯಾಗಿ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ನೇಮಿಸಿರುತ್ತಾರೆ

ಕಾವ್ಯ ವಾಚನ

ಜಯನಗರ ಬಡಾವಣೆಯಲ್ಲಿರುವ ಪೌರಾಣಿಕ ಸಾಂಗ್ರಾಮದ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ಪ್ರತಿ ಸಂಜೆ ೭ ಗಂಟೆಗೆ ಶ್ರೀ ಪಿ ಎ ಗಿರಿಧರರವರಿಂದ 'ಶ್ರೀನಿವಾಸ ಕಲ್ಯಾಣ' ಎಂಬ ಭಾಗದ ವಾಚನವೂ, ಶ್ರೀ ಎಸ್ ಲಕ್ಷ್ಮೀನರಸಿಂಹರವರಿಂದ ವ್ಯಾಖ್ಯಾನವೂ ನಡೆಯುತ್ತಿದೆ

○ ಅನೆಸಾರೋಟು ಬೀದಿಯಲ್ಲಿ ನೆನ್ನೆ ರಾತ್ರಿ ಸಟ್ಟಾ ಜೂಜಾಡುತ್ತಿದ್ದ ಅಬ್ದುಲ್ ಬಾಸಿತ್ ಎಂಬುವನ ಮೇಲೆ ಮೊಕದ್ದಮೆ ಹೂಡಲಾಗಿದೆ. ಅವನ ಬಳಿ ಇದ್ದ ೨೩ ರೂ ಗಳನ್ನು ವಶಪಡಿಸಿಕೊಳ್ಳಲಾಗಿದೆ

ರಾಜಧನದಲ್ಲಿ ಖೋತಾಕ್ಕಾಗಿ ಕರೆ

ರಾಜರುಗಳಿಗೆ ಸಲ್ಲುತ್ತಿರುವ ಧನದಲ್ಲಿ ಶೇಕಡ ೧೫ರಷ್ಟನ್ನು ಪಂಚವಾರ್ಷಿಕ ಯೋಜನೆಗಳಿಗಾಗಿ ಖೋತಾ ಮಾಡಿಕೊಳ್ಳುವಂತೆ ಭಾರತ ಸರ್ಕಾರದವರು ಅವರುಗಳಿಗೆ ಸಧ್ಯದಲ್ಲೇ ಸೂಚಿಸಲಿರುವರೆಂದು ಗೊತ್ತಾಗಿದೆ. ದ್ವಿತೀಯ ಯೋಜನೆಗೆ ಕುಂಠಿತವಾಗಿಯೇ ಪ್ರಧಾನಿಯವರು ಅವರುಗಳಿಗೆ ಪ್ರಾರ್ಥನೆ ಮಾಡಿ ರಾಜಧನವನ್ನು ಸ್ವಯಂ ಖೋತಾ ಮಾಡುವಂತೆ ಕೋರಿದ್ದರು. ಅದಕ್ಕೆ ಒಬ್ಬಿಬ್ಬರ ಹೊರತು ಮಿಕ್ಕವರಿಂದ ಅನುಕೂಲವಾದ ಉತ್ತರ ಬಂದಿಲ್ಲ. ದ್ವಿತೀಯ ಪ್ರಯತ್ನದಿಂದ ಇದನ್ನು ಮತ್ತೆ ಒತ್ತಾಯ ಮಾಡಲಾಗುವುದೆಂದು ಹೇಳಲಾಗಿದೆ. ರಾಜಧನದ ಪಲ್ಲಿಕೆಯಿಂದ ಕೇಂದ್ರ ಸರ್ಕಾರಕ್ಕೆ ವರ್ಷಂಪ್ರತಿ ೫ ಕೋಟಿ ರೂ ವೆಚ್ಚವಾಗುತ್ತಿದೆ. ಅದಕ್ಕೆ ವರಮಾನ ತೆರಿಗೆಯೂ ಇಲ್ಲ

ಈಜಿಪ್ಟಿಗೆ ರಷ್ಯದ ಸಬ್‌ಮೆರೀನ್‌ಗಳ ಮಾರಾಟ

ಅಮೆರಿಕಾ ವಿದೇಶಾಂಗ ಮಂತ್ರಿಯ ಖಂಡನೆ

ಈಜಿಪ್ಟಿಗೆ ರಷ್ಯವು ಮೂರು ಸಬ್‌ಮೆರೀನುಗಳನ್ನು ಮಾರಿರುವುದನ್ನು ಅಮೆರಿಕದ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಲೆಸ್‌ರವರು ಖಂಡಿಸಿ, ಮಧ್ಯ ಪೂರ್ವದಲ್ಲಿ ಯುದ್ಧದ ಪರಿಸ್ಥಿತಿಯನ್ನು ಮುಂದುವರಿಸಲು ರಷ್ಯವು ಪ್ರಯತ್ನಿಸುತ್ತಿರುವುದಾಗಿ ನುಡಿದಿದ್ದಾರೆ. ಮಧ್ಯ ಪೂರ್ವಕ್ಕೆ ರಷ್ಯವು ಅಸಾಮಾನ್ಯವಾದ ಮಿಲಿಟರಿ ಶಸ್ತ್ರಾಸ್ತ್ರಗಳನ್ನು ಅಸಾಧಾರಣ ಮೊತ್ತದಲ್ಲಿ ಸರಬರಾಜು ಮಾಡುತ್ತಿರುವುದಾಗಿ ಡಲೆಸ್‌ರು ಸೂಚಿಸಿರುವರು

ಹೈದರಾಬಾದಿನಲ್ಲಿ ಮಾರಾಟ ತೆರಿಗೆ ವಿರುದ್ಧದ ಹರತಾಳ

ಒಟ್ಟು ವ್ಯಾಪಾರದ ಮೇಲೆ ಮಾರಾಟ ತೆರಿಗೆಯನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಹೈದರಾಬಾದು ನಗರದ ಒಟ್ಟು ವ್ಯಾಪಾರಿಗಳು ನಡೆಸುತ್ತಿರುವ ಹರತಾಳ ವೇಳೆಗನುಗುಣವಾಗಿ ನಿರಾಕರಣೆಗೆ ತೋರುವುದಕ್ಕಾಗಿ ಆ ಊರಿನ ಎಲ್ಲಾ ವ್ಯಾಪಾರಿಗಳೂ ನೆನ್ನೆ ಅಂಗಡಿಗಳನ್ನು ಮುಚ್ಚಿದ್ದರಿಂದ ವ್ಯಾಪಾರವೇ ನಿಂತು ಹೋಯಿತು. ಸಿಕಂದರಾಬಾದಿನಲ್ಲೂ ಅದೇ ಸ್ಥಿತಿಯಾಯಿತು. ಅಲ್ಲಿ ಒಟ್ಟು ಬಟ್ಟೆ ವ್ಯಾಪಾರಿಗಳು ಕಳೆದ ೧೫ರಿಂದ ಹರತಾಳವನ್ನು ಆಚರಿಸುತ್ತಿರುವರು. ಆಂಧ್ರ ದೇಶದಲ್ಲಿರುವಂತೆ ಮಾರಾಟ ತೆರಿಗೆಯನ್ನು ತೆಲಂಗಾಣಕ್ಕೂ ವಿಧಿಸಿರುವುದನ್ನು ವರ್ತಕರು ಪ್ರತಿಭಟಿಸುತ್ತಿರುವರು. ಸಿಕಂದರಾಬಾದಿನ ಮೇಯರ್ ಮತ್ತು ಮೂವರು ಮಾಜಿ ಮೇಯರುಗಳೂ ಇದ್ದ ಮೆರವಣಿಗೆ ಮತ್ತು ಸಭೆಗಳು ನೆನ್ನೆ ಜರುಗಿದುವು. ಹಲವು ಹೋಟೇಲಿನವರೂ ಹರತಾಳದಲ್ಲಿ ಸೇರಿದ್ದರು

ಬ್ರಿಟನ್ನಿನಿಂದ ಭಾರತಕ್ಕೆ ಶಸ್ತ್ರಾಸ್ತ್ರ

ಪ್ರಧಾನಿ ನೆಹರೂರವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಭಾರತವು ಅಮೆರಿಕದಿಂದ ಶಸ್ತ್ರಾಸ್ತ್ರವನ್ನು ಕೇಳಿಲ್ಲವೆಂದು ತಿಳಿಸಿರುತ್ತಾರೆ. ರಷ್ಯವು ಆಯುಧಗಳನ್ನು ಕೊಡಲು ಮುಂದೆ ಬಂದಿಲ್ಲವೆಂದೂ, ಅದನ್ನು ಕೇಳಿಯೂ ಇಲ್ಲವೆಂದೂ ಅವರು ಹೇಳಿರುವರು. ಭಾರತದ ಸೈನ್ಯಗಳನ್ನು ಬ್ರಿಟಿಷ್ ಮಾದರಿಯಲ್ಲಿ ತರಪೇತು ಮಾಡಿರುವುದರಿಂದ ಬ್ರಿಟನ್ನಿನ ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಭಾರತವು ಇಚ್ಛಿಸುವುದಾಗಿ ಅವರು ವಿವರಿಸಿರುವರು

ಕಾಮರಾಜ ನಾಡಾರರ ಚುನಾವಣೆ ಬಗ್ಗೆ ತಕರಾರು

ಮದ್ರಾಸು ಮುಖ್ಯಮಂತ್ರಿ ಕಾಮರಾಜ ನಾಡಾರರು ಸಾತ್ತೂರು ಕ್ಷೇತ್ರದಿಂದ ಅಲ್ಲಿನ ವಿಧಾನ ಸಭೆಗೆ ಆರಿಸಿಬಂದಿರುವುದನ್ನು ಪ್ರಶ್ನಿಸಿ ಆ ಕ್ಷೇತ್ರದ ಓಟರು ಕುಂಜು ತೇವರ್‌ರವರು ತಕರಾರು ಅರ್ಜಿ ಸಲ್ಲಿಸಿದ್ದಾರೆ. ಅದನ್ನು ವಿಚಾರಣೆ ಮಾಡಲು ಹೈಕೋರ್ಟು ಮಾಜಿ ನ್ಯಾಯಾಧೀಶ ಪಿ ಕೆ ಸುಬ್ರಹ್ಮಣ್ಯ ಅಯ್ಯರ್‌ರವರು ವಿಚಾರಿಸುವರು. ಚುನಾವಣೆಯಲ್ಲಿ ಅಕ್ರಮಗಳು ನಡೆದುವೆಂದು ಕುಂಜು ತೇವರ್ ಹೇಳುತ್ತಾರೆ.

ಪರದೇಶಕ್ಕೆ ಸರ್ಕಾರಿ ರಹಸ್ಯಗಳನ್ನು ಕೊಟ್ಟುದಕ್ಕೆ ೧೦ ವರ್ಷ ಸಜಾ

ಭಾರತ ಸರ್ಕಾರದ ಹೊರದೇಶ ವ್ಯವಹಾರಗಳ ಮಂತ್ರಿ ಇಲಾಖೆಯ ಮಾಜಿ ಗುಮಾಸ್ತ ಶಾದಿಲಾಲ್ ಕಪೂರ್ ಎಂಬುವನು ವಿದೇಶ ಸರ್ಕಾರದ ಏಜೆಂಟನಿಗೆ ಸರ್ಕಾರಿ ಕಾಗದಪತ್ರಗಳ ಹಲವು ವಿಷಯಗಳನ್ನು ತಿಳಿಯಪಡಿಸಿದ ಸಂಬಂಧವಾಗಿ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಅವನಿಗೆ ದೆಹಲಿ ಸೆಷನ್ಸ್ ನ್ಯಾಯಾಧೀಶರು ಸರ್ಕಾರಿ ರಹಸ್ಯ ಶಾಸನಗಳ ಉಲ್ಲಂಘನೆಗಾಗಿ ೧೦ ವರ್ಷ ಕಠಿಣ ಸಜಾ ಮತ್ತು ರಹಸ್ಯಗಳನ್ನು ಬಿಟ್ಟುಕೊಟ್ಟುದಕ್ಕಾಗಿ ೩ ವರ್ಷ ಕಠಿಣ ಸಜವನ್ನು ವಿಧಿಸಿರುತ್ತಾರೆ. ಅವನ ಪತ್ನಿ ಶಕುಂತಲಾ ಎಂಬುಕೆಯ ಮೇಲೂ ಮೊಕದ್ದಮೆ ಹೂಡಲ್ಪಟ್ಟು ಆಕೆಯನ್ನು ಖುಲಾಸೆ ಮಾಡಲಾಗಿದೆ. ಕಳೆದ ವರ್ಷ ಸೆಪ್ಟೆಂಬರ್ ೮ರಲ್ಲಿ ಅವರಿಬ್ಬರನ್ನೂ ದಸ್ತಗಿರಿ ಮಾಡಿ, ಪೊಲೀಸರು ಅರ್ಧ ಸುಟ್ಟ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು

ಇನ್‌ಫ್ಲುಯೆಂಜಾ ಇಳಿಮುಖ

ದೇಶದಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯು ಬಹಳ ಮಟ್ಟಿಗೆ ಕಡಿಮೆಯಾಗಿರುವುದೆಂದು ಕೇಂದ್ರ ಆರೋಗ್ಯ ಮಂತ್ರಿ ಡಿ ಸಿ ಕರ್ಮರ್‌ಕರ್‌ರವರು ತಿಳಿಸಿರುತ್ತಾರೆ. ಅದು ಹರಡುವುದನ್ನು ತಡೆಗಟ್ಟಲು ಎಲ್ಲ ಕ್ರಮಗಳನ್ನೂ ಸರ್ಕಾರದವರು ಕೈಗೊಂಡಿರುವುದಾಗಿ ಅವರು ಹೇಳಿರುವರು

ಯಾವ ರಾಷ್ಟ್ರಗಳ ಬೆದರಿಕೆಗೂ ಭಾರತವು ಮಣಿಯುವುದಿಲ್ಲ

ಪ್ರಧಾನಿ ನೆಹರೂರವರು ನೆನ್ನೆ ಲಂಡನ್ನಿಗೆ ಹೊರಡುವ ಮುಂಚೆ ಜ್ಯೂರಿಕ್ಲೋಮಿನಲ್ಲಿ ಮಾತನಾಡಿ, ಭಾರತವು ರಾಷ್ಟ್ರಗಳ ಕೂಟದಿಂದ ದೂರವಿರುವುದೆಂದು ಹೇಳಿದರು. ಇಂತಹ ಮಾರ್ಗ ಅನುಸರಿಸಬೇಕೆಂದು ಯಾವುದೇ ರಾಷ್ಟ್ರವಾಗಲೀ ಮಾಡುವ ಬೆದರಿಕೆಯ ಸೂಚನೆಗೆ ಭಾರತವು ಮಣಿಯುವುದಿಲ್ಲವೆಂದೂ, ಅದು ತಾಟಸ್ಥ್ಯನೀತಿಯನ್ನೇ ಅನುಸರಿಸುವುದೆಂದೂ ನೆಹರೂರವರು ಸ್ಪಷ್ಟಪಡಿಸಿರುವರು

ಇನ್‌ಫ್ಲುಯೆಂಜಾ ಪರಿಸ್ಥಿತಿ

ನಗರದಲ್ಲಿ ನೆನ್ನೆ ಮಧ್ಯಾಹ್ನ ೧೨ ಗಂಟೆವರೆಗೆ ೬೦ ಮಂದಿಗೆ ಇನ್‌ಫ್ಲುಯೆಂಜಾವು ತಗಲಿ ಒಟ್ಟು ರೋಗಗ್ರಸ್ತರ ಸಂಖ್ಯೆ ೭೦೬ ಆಗಿದೆ. ನಗರದಲ್ಲಿ ನಾಳೆ ದಿನ ತೆರೆಯಬೇಕಾದ ಶಾಲೆಗಳು ಫ್ಲೂ ವಿನಾಗಿ ಜುಲೈ ೧ರ ವರೆಗೂ ಮುಚ್ಚಲ್ಪಡುತ್ತವೆಂದು ಗೊತ್ತಾಗಿದೆ

ಸರ್ಕಾರಿ ಬಸ್ಸು ಡಿಕ್ಕಿಯಾಗಿ ರೈಲ್ವೆ ಕೆಲಸಗಾರನ ಮರಣ

ನಗರದ ಮಾನಂದವಾಡಿ ರಸ್ತೆಯಲ್ಲಿ ಮೊನ್ನೆ ಸರ್ಕಾರಿ ಬಸ್ಸು ಡಿಕ್ಕಿಯಾದಂತ ರೈಲ್ವೆ ವರ್ಕ್‌ಷಾಪಿನ ಕೆಲಸಗಾರ ೫೫ ವರ್ಷದ ಸಿದ್ದೋಜಿರಾವ್ ಎಂಬಾತನಿಗೆ ಪೆಟ್ಟು ಬಿದ್ದು ಆಸ್ಪತ್ರೆಗೆ ಸಾಗಿಸಲಾಗಿ, ರಾತ್ರಿ ಮೃತಪಟ್ಟನು

○ ಮಸ್ಜಿದ್ ಚೌಕದಲ್ಲಿ ಸಿದ್ದೋಜಿರಾವ್, ಮುತ್ತೆವಂದ್ ಮತ್ತು ರಾಮ್ ಎಂಬುವರು ಬಸ್ಸ್ಯಾ ಹುತ್ತಿದ್ದುದಕ್ಕಾಗಿ ಅವರ ಮೇಲೆ ದೀವಾನ ದಾಪೊಲೀಸರು ಮೊಕದ್ದಮೆ ಹೂಡಿದ್ದಾರೆ

ಅಣು ಕಣಗಳಿಲ್ಲದ ಜಲಜನಕ ಬಾಂಬಿನ ಸೃಷ್ಟಿ ಸಾಧ್ಯ

ಅಣು ಬಾಂಬುಗಳನ್ನು ಸಿಡಿಸಿದಾಗ ಅಣು ಕಣಗಳನ್ನು ಹೊರಡುವುದನ್ನು ? ಅಂತಹ ಕಣಗಳು ಇಲ್ಲದಿರುವ ಜಲಜನಕ ಬಾಂಬುಗಳನ್ನು ತಯಾರಿಸಲು ಅಮೆರಿಕಕ್ಕೆ ಸಾಧ್ಯವಿದೆಯೆಂದು ಅಲ್ಲಿನ ೩ ಜನ ವಿಜ್ಞಾನಿಗಳು ಅಧ್ಯಕ್ಷ ಐಸೆನ್‌ಹೋವರರಿಗೆ ತಿಳಿಸಿರುತ್ತಾರೆ ಅಂತಹ ಬಾಂಬಿನಲ್ಲಿ ಶೇಕಡ ೯೫ ರಷ್ಟು ಮುಟ್ಟಿಗೆ ಅಣು ಕಣಗಳಿರುವುದಿಲ್ಲವೆಂದು ಹೇಳಲಾಗಿದೆ ಇತ್ತೀಚೆಗೆ ನಡೆಸಿದ ಪರೀಕ್ಷೆಯಲ್ಲಿ ೧೦ ನೇ ೯ ಭಾಗದಷ್ಟು ಅಣು ಕಣಗಳ ಪ್ರಸರಣವು ಕಡಿಮೆಯಾಗಿದ್ದುದಾಗಿ ಅಧ್ಯಕ್ಷ ಐಸೆನ್‌ಹೋವರರು ಸೂಚಿಸಿರುತ್ತಾರೆ

ಮದ್ರಾಸಿನಲ್ಲಿ ಫ್ಲೂ ನಿಂತು ಕಾಲರಾ ಆರಂಭ

ಇನ್‌ಫ್ಲೂಯೆಂಜಾದಿಂದ ನರಳಿ ಚೇತರಿಸಿಕೊಳ್ಳುತ್ತಿರುವ ಮದ್ರಾಸು ಜನರನ್ನು ಈಗ ಕಾಲರಾ ವ್ಯಾಧಿಯು ಪೀಡಿಸುತ್ತಿರುವುದಾಗಿ ಗೊತ್ತಾಗಿದೆ ವಿಸ್ತರ ಪ್ರದೇಶದಲ್ಲಿ ಇದು ಹೆಚ್ಚಾಗಿದೆ ಕಳೆದ ಎರಡು ದಿನಗಳಿಂದ ೬೫ ಮಂದಿಯನ್ನು ಆಸ್ಪತ್ರೆಗಳಿಗೆ ಸೇರಿಸಿ, ೧೨ ಮಂದಿ ಮೃತಪಟ್ಟಿರುತ್ತಾರೆ

ಬೌದ್ಧರಾದ ನಿಮ್ನ ವರ್ಗದವರಿಗೆ ವಿಶೇಷ ಸೌಲಭ್ಯಗಳಿಲ್ಲ

ನಿಮ್ನವರ್ಗದವರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ರಾಜ್ಯಾಂಗದಲ್ಲಿ ಉಕ್ತವಾಗಿರುವುದನ್ನು ಬೌದ್ಧಮತವನ್ನವಲಂಬಿಸಿರುವ ಹರಿಜನರಿಗೆ ಇದು ಅನ್ವಯಿಸುವುದಿಲ್ಲವೆಂಬ ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ಅಖಿಲ ಭಾರತ ನಿಮ್ನವರ್ಗದ ಫೆಡರೇಷನ್ನಿನ ಮಹಾರಾಷ್ಟ್ರ ಶಾಖೆಯವರಿಗೆ ತಿಳಿಸಲಾಗಿದೆ

ದಿಬ್ರುಗಢಕ್ಕೆ ಪ್ರವಾಹದ ಭೀತಿ

ಉತ್ತರ ಅಸ್ಸಾಮಿನಲ್ಲಿರುವ ದಿಬ್ರುಗಢಕ್ಕೆ ಪುನಃ ಪ್ರವಾಹದ ಭೀತಿಯುಂಟಾಗಿದೆ ಬ್ರಹ್ಮಪುತ್ರದಲ್ಲಿ ಪ್ರವಾಹವು ಉಕ್ಕಿ ನಗರದ ರಕ್ಷಣೆಗಾಗಿ ಕಟ್ಟಿರುವ ಕಲ್ಲು ದಂಡೆಗೆ ಅಲೆಗಳು ಅಪ್ಪಳಿಸುತ್ತಿರುವುದಾಗಿ ಗೊತ್ತಾಗಿದೆ ದಂಡೆಯನ್ನು ಇನ್ನೂ ಭದ್ರಗೊಳಿಸಲು ಹಗಲೂ ರಾತ್ರಿಯೂ ಕೆಲಸ ನಡೆಯುತ್ತಿದೆ

ಹಿಂದಿ ಪರೀಕ್ಷಾ ಫಲಿತಾಂಶ

ನಗರದ ಮಾದರಿ ಶಾಲಾ ಸೇವಾ ಸಂಘದ ಮೂಲಕ ಕಳೆದ ೯ನೇ ತಾರೀಖು ನಡೆದ ಮೈಸೂರು ಹಿಂದೀ ಸಾಹಿತ್ಯ ಪರಿಷತ್ತಿನ ವಿಶೇಷ ಪ್ರಥಮಾ ಪರೀಕ್ಷೆಗೆ ಹೋಗಿದ್ದ ೩೭ ಮಂದಿ ವಿದ್ಯಾರ್ಥಿಗಳ ಪೈಕಿ ೩೫ ಜನರು ಉತ್ತೀರ್ಣರಾಗಿರುತ್ತಾರೆ ಇವರಲ್ಲಿ ೭ ಮಂದಿ ಮೊದಲನೇ ದರ್ಜೆ ಪಡೆದಿರುವರು ಶ್ರೀಗಳಾದ ಕೆ ಸೀತಾರಾಂ ಮತ್ತು ಎ. ಎನ್ ಲಕ್ಷ್ಮೀನಾರಾಯಣರವರು ಐದನೇ ಸ್ಥಾನವನ್ನು ಗಳಿಸಿರುವರು.

ಜ್ಯೋತಿಷಿಣ ಯುವಜನ ವಿದ್ಯಾರ್ಥಿನಿಲಯ

ಮೇಲ್ಕಂಡ ವಿದ್ಯಾರ್ಥಿನಿಲಯದಲ್ಲಿ ಜ್ಯೋತಿಷಣ ಮತಸ್ಥರ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿಗಳನ್ನು ಏರ್ಪಡಿಸಲಾಗಿದೆ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಜುಲೈ ೧ನೇ ತಾರೀಖಿನೊಳಗೆ ಮ್ಯಾನೇಜರಿಂದ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿ ಸಲ್ಲಿಸಬೇಕಾಗಿ ಕೋರಲಾಗಿದೆ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕ ರಸ್ತೆ, ಮೈಸೂರು (Estd 1911)

Edited Printed and Published by A. R. Nagarajan at Sadhvi Press, L Sentinel Road, Mysore

೧೦ ಸಾವಿರ ಗ್ಯಾಲನ್ ಅಕ್ರಮ ಮದ್ಯದ ನಾಶ

ಹೈದರಾಬಾದು ಬಳಿ ಧೂಲ್‌ಪೇಟೆಯಲ್ಲಿ ಅಬ್ಕಾರಿ ಇಲಾಖೆಯವರು ಸಶಸ್ತ್ರ ಪೋಲೀಸರ ಸಹಾಯದಿಂದ ಕಳೆದ ಗುರುವಾರ ಒಂದು ಕಡೆ ಧಾಳಿ ನಡೆಸಿ ೧೦ ಸಾವಿರ ಗ್ಯಾಲನ್ ಅಕ್ರಮ ತಯಾರಿ ಮದ್ಯವನ್ನು 'ವಶಪಡಿಸಿಕೊಂಡು ನಾಶ ಮಾಡಿದರು ೧೭ ಮದ್ಯ ತಯಾರಿಕೆ ಒಲೆಗಳನ್ನು ಧ್ವಂಸ ಮಾಡಲಾಯಿತು ೧೧ ಜನರ ದಸ್ತಗಿರಿಯಾಯಿತು ೬,೦೦೦ ಗ್ಯಾಲನ್ ಬೆಲ್ಲದ ಹುಳಿಯನ್ನು ಚೆಲ್ಲಲಾಯಿತಲ್ಲದೆ, ೪ ಲಾರಿಯಷ್ಟು ಬೆಲ್ಲ, ಅಮೋನಿಯಂ ಸಲ್ಫೇಟ್ ಮುಂತಾದುವನ್ನು ವಶಪಡಿಸಿಕೊಳ್ಳಲಾಯಿತು

ಸಂಚರಂಗಿ ಖೈದಿಗಳಿಗೆ ಉತ್ತಮ ಜೀವನದ ಶಿಕ್ಷಣ

ಪದೇಪದೇ ಅಪರಾಧ ಮಾಡಿ ಜೈಲುಗಳಿಗೆ ಹೋಗುವ ಸಂಚರಂಗಿ ಖೈದಿಗಳ ಜೀವನವನ್ನು ಉತ್ತಮ ಪಡಿಸುವುದಕ್ಕಾಗಿ ಅವರಿಗೆ ತಕ್ಕ ತರಪೇತನ್ನು ಕೊಡಲು ಭಾರತ ಸರ್ಕಾರದವರು ಮಸೂದೆಯೊಂದನ್ನು ಸಿದ್ಧಗೊಳಿಸಿ ಅದನ್ನು ಸಂಸ್ಥಾನಗಳಲ್ಲಿ ಜಾರಿಗೆ ತರುವಂತೆ ಕಳುಹಿಸಿರುತ್ತಾರೆ ೧೮ ವರ್ಷಕ್ಕೆ ಹೆಚ್ಚಿನವರನ್ನು ಈ ರೀತಿ ತರಪೇತಿಗೆ ಒಳಪಡಿಸಲಾಗುವುದು

ಕೃಷ್ಣರಾಜನಗರದ ಕ್ರೀಡಾ ಕ್ಲಬ್ಬಿನ ವಾರ್ಷಿಕೋತ್ಸವ

ಕೃಷ್ಣರಾಜನಗರದ ದಿ ನ್ಯೂ ನಗರ್ ಸ್ಪೋರ್ಟ್ಸ್ ಕ್ಲಬ್ಬಿನ ೭ನೇ ವಾರ್ಷಿಕೋತ್ಸವವು ಈ ತಿಂಗಳು ೩೦ನೇ ತಾರೀಖು ಸಂಜೆ ೬॥ ಗಂಟೆಗೆ ಅಲ್ಲಿನ ಶಿಶು ವಿಹಾರ ಕಟ್ಟಡದ ಹಿಂಭಾಗದ ಮೈದಾನದಲ್ಲಿ ನೆರವೇರುವುದು

ಮುದ್ರಣಕಾರರ ಸಭೆ

ನಗರದ ಮುದ್ರಣ ಕಲಾ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೭ ೩೦ ಗಂಟೆಗೆ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ 'ರ್ಯಾಷನಲಿಸ್ಟ್'' ಪತ್ರಿಕಾ ಭವನದಲ್ಲಿ ಪೌರಸಭಾ ಚುನಾವಣೆಗಳ ಪಟ್ಟಿಯ ಮುದ್ರಣದ ವಿಷಯವನ್ನು ಚರ್ಚಿಸಲು ಸಭೆಯೊಂದನ್ನು ಏರ್ಪಡಿಸಲಾಗಿದೆ ಮುದ್ರಣಕಾರರೆಲ್ಲರೂ ದಯಮಾಡಿಸಬೇಕಾಗಿ ಕೋರಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವೀಣೆ ೭-೧೫ ಎಸ್ ಶಂಕರ ಡಾ ಕನ್ನಡ ಗೀತೆ ೭ ೩೦ ಮತ್ತು ೮ ೧೫ ಎಚ್ ಕೆ ರಾಮಸ್ವಾಮಿ ರಾಮ್ಯವಾಚನ ಮಧ್ಯಾಹ್ನ ೧೨ ಆನೂರು ರಾಮಕೃಷ್ಣ ಪಿಟೀಲು ೧೨-೩೦ ಎಸ್ ಎ ಲತೀಫ್ ಹಿಂದೂಸ್ತಾನಿ ಹಾಡುಗಾರಿಕೆ ೧ ೮ ಕಾ ಮು ೯ ೧ ೨೦ ಗಾನಮಂಜರಿ ೧-೫೦ ಸಂಗೀತ ೨-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ಜಾನಪದ ಗೀತೆ ೭-೩೦ ಭಕ್ತಿಗೀತಾವಳಿ ೮ ನವೀನ ಕನ್ನಡ ಗೀತೆ ೮ ೩೦ ಆನೂರು ಎಸ್ ರಾಮಕೃಷ್ಣ ಪಿಟೀಲು ೯-೧೫ ದೇಶೀಯ ರಂಗ ಸರ್ಕಾರದ ಅಭಿವೃದ್ಧಿ ಯೋಜನೆ ಬಗ್ಗೆ ಚರ್ಚೆ ೯-೩೦ ರಾಷ್ಟ್ರೀಯ ನಾಟಕ (ಮಲೆಯಾಳ)

ಮೈಸೂರು ಪೇಟೆ ಧಾರಣೆ

ಬಂಗಾರ ಮುತ್ತು		
ಕೊಯಮುತ್ತೂರು ಸಣ್ಣ	೬೦ ೦೦	[illegible]
ರತ್ನಚೂಡಿ	[illegible]	[illegible]
ಕೇಬಿಂಡಿ	[illegible] ೦೦	[illegible]
ಕಾರ್ ಸಣ್ಣ	[illegible]	[illegible]
ಸೀರಾಳ್ ಸಣ್ಣ	[illegible]	೬೦ [illegible]
ನಾಗಪುರಿ ಸಣ್ಣ	೬[illegible] ೦೨	
ರಾಗಿ	[illegible]	[illegible]
ಕಡಲೆಕಾಯಿ	[illegible]	[illegible]
ಹರಳುಬೀಜ	[illegible] ೦೦	
ಹೊಂಗೆಬೀಜ	[illegible]	
ಎಳ್ಳು	[illegible]	[illegible]
ತೊಗರಿ	೬೧ [illegible]	[illegible]
ಹೆಸರು	[illegible] ೦೦	[illegible]
ಉದ್ದು	[illegible]	[illegible] ೦೦
ಅವರೆ	[illegible] ೦೦	[illegible]
ಹಲಸಂದೆ	೬೦ [illegible]	[illegible]
ಮುಂಡುಕೊಬ್ಬರಿ	[illegible]	[illegible]
ಮುಂಡುಕೊಬ್ಬರಿ	೧[illegible] ೦೦	[illegible]
ತೆಂಗಿನಕಾಯಿ	೧[illegible]	[illegible]

ಉಡುಪಿ ಮೆಡಿಕಲ್ ಕಾಲೇಜಿನ ಬಂದ್

ಉಡುಪಿ ಬಳಿ ಮಣಿಪಾಲದಲ್ಲಿ ಸ್ಥಾಪಿಸಲ್ಪಟ್ಟಿರುವ ಮೆಡಿಕಲ್ ಕಾಲೇಜನ್ನು ಮುಚ್ಚಲಾಗುವುದೆಂದು ಅದರ ಸ್ಥಾಪಕರೂ ಮತ್ತು ರಿಜಿಸ್ಟ್ರಾರರೂ ಆದ ಶ್ರೀ ಟಿ ಎಂ ಎ ಪೈಯವರು ತಿಳಿಸಿರುತ್ತಾರೆ ಬಹಳ ಕಷ್ಟ ಮತ್ತು ತ್ಯಾಗದಿಂದ ಪ್ರಾರಂಭಿಸಲ್ಪಟ್ಟ ಕಾಲೇಜಿನ ಗೌರವವು ಹಲವು ವಿದ್ಯಾರ್ಥಿಗಳ ದುರ್ವರ್ತನೆ ಮತ್ತು ಅವಿವೇಕದಿಂದ ಹೋಗುತ್ತಿರುವುದೆಂದು ಅವರು ಹೇಳಿರುವರು ಕಾಲೇಜಿನ ಹಲವು ಹಿರಿಯ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳಲಿಲ್ಲವೆಂದೂ, ಇದುವರೆಗೆ ಶಿಕ್ಷಣ ಶುಲ್ಕವನ್ನು ಕೊಟ್ಟಿಲ್ಲವೆಂದೂ ಹೇಳಲಾಗಿದೆ ಆ ವಿದ್ಯಾರ್ಥಿಗಳ ಚಳುವಳಿಯಿಂದ ಕಾಲೇಜನ್ನು ಮುಚ್ಚಲಾಗಿರುವುದೆಂದೂ, ಹಾಗೆ ಮಾಡದಿದ್ದರೆ ಕಾಲೇಜಿನ ಆಸ್ತಿಪಾಸ್ತಿಗಳಿಗೆ ಹೆಚ್ಚು ನಷ್ಟವಾಗುತ್ತಿತ್ತೆಂದೂ ತಿಳಿಸಲಾಗಿದೆ. ಕಾಲೇಜು ಜೂನ್ ೧೫ ರಿಂದ ಕೆಲಸಮಾಡುತ್ತಿಲ್ಲ ವಿದ್ಯಾರ್ಥಿಗಳು ತಮ್ಮ ಮೇಲಿನ ಆಪಾದನೆಗಳು ನಿಜವಲ್ಲವೆಂದು ತಿಳಿಸಿರುವರು ವಿದ್ಯಾರ್ಥಿಗಳ ಸಂಘದ ನಿರ್ಣಯದಂತೆ ಅದರ ಸದಸ್ಯರು ಒಟ್ಟು ೧,೮೩೪ ರೂ ಶಿಕ್ಷಣ ಶುಲ್ಕವನ್ನು ಕೊಡದೆ ಇರುವರು

ಪತ್ರಿಕೋದ್ಯಮಿಯ ಮೇಲೆ ದೌರ್ಜನ್ಯ

ಶ್ರೀನಿವಾಸಪುರದ ಪತ್ರಿಕೋದ್ಯಮಿಯೂ ಕಾಂಗ್ರೆಸ್ ಕಾರ್ಯಕರ್ತರೂ ಆದ ಶ್ರೀ ಟಿ ವೆಂಕಟಸ್ವಾಮಿಶೆಟ್ಟಿಯವರ ಮೇಲೆ ಮೊನ್ನೆ ೮ ಊರಿನಲ್ಲಿ ದೌರ್ಜನ್ಯ ನಡೆಸಲಾಯಿತೆಂದು ವರದಿಯಾಗಿದೆ ಶ್ರೀ ಶೆಟ್ಟರು ಮತ್ತೊಬ್ಬರೊಡನೆ ರಸ್ತೆಯಲ್ಲಿ ಮಾತನಾಡುತ್ತಿದ್ದಾಗ ಬುದ್ಧರೆಡ್ಡಿ ಎಂಬಾತನು ಅಲ್ಲಿಗೆ ಬಂದು ಅವರನ್ನು ಬಯ್ದುದಲ್ಲದೆ ಅವರ ಜುಟ್ಟನ್ನು ಕತ್ತರಿಸಿ ಓಡಿದನೆಂದು ಹೇಳಲಾಗಿದೆ ಇತರ ೩-೪ ಜನರು ಅವರನ್ನು ಹೊಡೆದರು ಮಹಾ ಚುನಾವಣೆಗಳನಂತರ ಅಲ್ಲಿ ಪುಂಡುತನ ಹೆಚ್ಚುತ್ತಿರುವುದೆಂದು ಹೇಳಲಾಗಿದೆ ಜಿಲ್ಲಾಧಿಕಾರಿಗಳಾದ ಶ್ರೀ ಬಿ ಬೈರಪ್ಪನವರು ದೌರ್ಜನ್ಯದ ವಿಚಾರವಾಗಿ ತನಿಖೆ ನಡೆಸಲಾಗುವುದೆಂದು ತಿಳಿಸಿರುತ್ತಾರೆ

ಮೋಸಕ್ಕಾಗಿ ಚೀನಾ ಪ್ರವಾಸೀ ಏಜಂಟನ ಬಂಧನ

ಕಲ್ಕತ್ತದಲ್ಲಿ ಪ್ರವಾಸಿಗರ ಕಛೇರಿಯಿಟ್ಟುಕೊಂಡಿರುವ ನೆಲ್ಸನ್ ಲೂ ಎಂಬ ಚೀನೀ ಏಜಂಟೊಬ್ಬನನ್ನು ಹಾಂಕಾಂಗಿನಲ್ಲಿ ದಸ್ತಗಿರಿ ಮಾಡಿ ಕಲ್ಕತ್ತಕ್ಕೆ ಕರೆತರಲಾಗಿದೆ ಅವನ ದಸ್ತಗಿರಿಗೆ ಕಲ್ಕತ್ತಾ ಪೋಲೀಸರು ಸೂಚನೆಯಿತ್ತಿದ್ದರು ಬಂಧನಕ್ಕೊಳಗಾದವನು ಸಮುದ್ರಾಂತರ ವಿಮಾನ ಪ್ರವಾಸದ ಕಂಪೆನಿಯ ಮಾಲೀಕನೆಂದು ಹೇಳಲಾಗಿದೆ ಅವನು ಭಾರತದ ಏರ್ ಇಂಡಿಯಾ ಇಂಟರ್ ನ್ಯಾಷನಲ್ ಮತ್ತು ಇಂಡಿಯನ್ ಏರ್ ಲೈನ್ಸ್ ವಿಮಾನ ಸಂಸ್ಥೆಗಳಿಗೆ ೫೩,೦೦೦ ರೂ ಮತ್ತು ೧। ಲಕ್ಷ ರೂ ಬಗ್ಗೆ ವಂಚನೆ ಮಾಡಿರುವುದಾಗಿ ಹೇಳಲಾಗಿದೆ

ಸಚಿವರು ಮತ್ತು ಶಾಸನಸಭಾಸದರ ವಯೋಮಿತಿಗೆ ವಿನೋಬಾ ಕರೆ

ಹೈಕೋರ್ಟ್ ನ್ಯಾಯಾಧೀಶರು ಮತ್ತು ಸರ್ಕಾರಿ ಸೇವೆಯಲ್ಲಿರುವ ಇತರ ಉನ್ನತಾಧಿಕಾರಿಗಳಿಗೆ ಇರುವಂತೆ ಸೇವಾ ವಯೋಮಿತಿಯನ್ನು ಮಂತ್ರಿಗಳಿಗೂ ಮತ್ತು ಶಾಸನಸಭಾ ಸದಸ್ಯರಿಗೂ ಗೊತ್ತುಪಡಿಸಬೇಕೆಂದು ಆಚಾರ್ಯ ವಿನೋಬಾ ಭಾವೆಯವರು ತಿಳಿಸಿರುತ್ತಾರೆ ಒಂದು ಸಾರಿ ಅಧಿಕಾರಕ್ಕೆ ಸೇರಿದರೆ ಅದಕ್ಕೇ ಅಂಟಿಕೊಳ್ಳುವ ಮನೋಭಾವವನ್ನು ಅವರು ತೀವ್ರವಾಗಿ ಖಂಡಿಸಿರುತ್ತಾರೆ ಇಂತಹ ಮನೋಭಾವವು 'ರಾಷ್ಟ್ರೀಯ ದೌರ್ಬಲ್ಯ'ವಾಗಿ ಪರಿಣಮಿಸಿ 'ಪಕ್ಷ ಮತ್ತು ನಿಸ್ಸಹಾಯಕ ನಿಶ್ಚೇತನ'ಕ್ಕೆ ಎಡೆಯಾಗುವುದೆಂದೂ, ಅದು ತಪ್ಪದೇಕೆಂದೂ ಅವರು ಅಭಿಪ್ರಾಯಪಟ್ಟಿರುವರು

" ಹಿಂದಿ ರಕ್ಷಾ " ಚಳುವಳಿ ನಿಲ್ಲುವುದಿಲ್ಲ

ಪಂಜಾಬಿನ ಹಿಂದಿ ರಕ್ಷಾ ಸಮಿತಿಯವರು ಹಿಂದಿ ರಕ್ಷಾ ಚಳುವಳಿಯನ್ನು ನಿಲ್ಲಿಸಲು ಸಕಾರಣವಾವುದೂ ಇಲ್ಲವೆಂದು ತಿಳಿಸಿರುತ್ತಾರೆ ಸಮಿತಿ ಅಧ್ಯಕ್ಷ ಸ್ವಾಮಿ ಆತ್ಮಾನಂದ ಸರಸ್ವತಿಯವರಿಗೆ ಪ್ರಧಾನಿ ನೆಹರೂರವರು ಬರೆದಿದ್ದ ಪತ್ರದಲ್ಲಿ ಸೂಚಿಸಿರುವ ಪ್ರಕಾರ ವ್ಯಾಜ್ಯದ ಮೂಲ ಅಂಶಗಳನ್ನು ನೆಹರೂರವರು ಒಪ್ಪಿಲ್ಲವೆಂದು ಸಮಿತಿಯವರು ಈ ವಿಷಯ ಚಳುವಳಿಯನ್ನು ನಿಲ್ಲಿಸಬಾರದೆಂದು ಸರ್ವಾನುಮತದಿಂದ ನಿರ್ಧರಿಸಿರುತ್ತಾರೆ

ರಾಂಪೈರಿಯ ಚೀನರ ಕ್ವೆಮಾಯ್ ದ್ವೀಪದ ಮೇಲೆ ನೆನ್ನೆ ಕಮ್ಯೂನಿಸ್ಟರು ಪುನಃ ಷೆಲ್ ಧಾಳಿ ಮಾಡಿದರೆಂದೂ ೯೦೦೦ ಫಿರಂಗಿ ಗುಂಡುಗಳನ್ನು ಹೊಡೆದರೆಂದೂ ವರದಿಯಾಗಿದೆ

SARADA VILAS COLLEGE

INTER TUTORIAL SECTION

ENGLISH & P C M

Highly qualified & experienced staff

Classes in full swing

ನಿಕ್ಸೋ ಪ್ಯೂರ್

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ-ಪಿರೋಜಕ, ನಿವಾರಕ ಸಲಹೆಗಳಿಗೆ - 'ಲಿವರ್ ಹೌಸ್', ಚಾಮರಾಜಪುರಂ, ಮೈಸೂರು (ಸುಬ್ಬರಾಯನ ಕೆರೆ ಹತ್ತಿರ)

INTERMEDIATE

★ *P C M & C B Z Classes in full swing*

★ *Separate English Classes For 1956 and 57 Texts*

B A & B Sc English & Kannada

Classes begin on Sunday

Best Staff & Equipment

CITY TUTORIAL COLLEGE

Old Agrahar, Mysore



ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

28—6—57 ನೇ ಶುಕ್ರವಾರದಿಂದ ಪ್ರತಿದಿನ 2 ಆಟಗಳು

ಸಾಹಿತಿರವರ ತೆಲುಗು ಚಿತ್ರ ★ **ಪೆದ್ದರಿ ಕಾಲು**

ಪಾತ್ರ.— ಅಂಜಲಿ, ಗಿರಿಜ, ರಾಗಿಣಿ, ರೇಲಂಗಿ, ಜಗ್ಗಯ್ಯ, ಗುಮ್ಮಡಿ, ಮುಂತಾದವರು

ರಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಣೆಗೆ ಬರೆಯಿರಿ

ಸಾಧ್ವಿ

ಹಿಂದಿನ ಪತ್ರಿಕೆ 2 ನಯೆ ಪೈಸೆ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಪುಟ : ೦೫] SADHVI : THURSDAY 27—6—1957 ಮೈಸೂರು : ಗುರುವಾರ ೨೭—೬—೧೯೫೭ [ಸಂಚಿಕೆ : ೬೨೪

ಕೊರಿಯಾ ಐಕ್ಯದ ಬಗ್ಗೆ ಸಲಹೆಗೆ ವಿಶ್ವಸಂಸ್ಥೆ ತಿರಸ್ಕಾರ

ಕೊರಿಯಾ ಐಕ್ಯದ ಬಗ್ಗೆ ಅಂತರ ರಾಷ್ಟ್ರ ಸಭೆಗಾಗಿ ಕರೆ

ವಿಶ್ವಸಂಸ್ಥೆಯವರಿಂದ ಉತ್ತರ ಕೊರಿಯಾ ಸಲಹೆಯ ತಿರಸ್ಕರಣೆ

ಕೊರಿಯಾದ ಐಕ್ಯದ ಬಗ್ಗೆ ಅಂತರ್ರಾಷ್ಟ್ರೀಯ ಸಭೆಯನ್ನು ನಡೆಸುವುದು ಮತ್ತು ಅಲ್ಲಿರುವ ಎಲ್ಲ ವಿದೇಶೀ ಸೈನ್ಯಗಳನ್ನೂ ವಾಪಸು ಕರೆಸುವುದು ಈ ವಿಚಾರವಾಗಿ ಕಮ್ಯೂನಿಸ್ಟರು ಮಾಡಿರುವ ಸಲಹೆಯು ಕೊರಿಯಾ ಶಾಂತಿ ಸಮಿತಿಯ ಪರಿಶೀಲನಾ ವ್ಯಾಪ್ತಿಗೆ ಹೊರಗಿದೆಯೆಂದು ವಿಶ್ವಸಂಸ್ಥೆಯ ಕಮ್ಯಾಂಡು ಸಮಿತಿಯು ತಿಳಿಸಿ ಕಮ್ಯೂನಿಸ್ಟರ ಸಲಹೆಯನ್ನು ನಿರಾಕರಿಸಿದೆ ಕಮ್ಯೂನಿಸ್ಟರು ಶಾಂತಿ ಸಮಿತಿಯಲ್ಲಿ ಈ ಸಲಹೆ ಮಾಡಿದ್ದರು ದಕ್ಷಿಣ ಕೊರಿಯಾದಲ್ಲಿರುವ ತನ್ನ ದಳಗಳಿಗೆ ಹೊಸ ಅಸ್ತ್ರಗಳನ್ನು ಸರಬರಾಜು ಮಾಡಲು ವಿಶ್ವಸಂಸ್ಥೆಯ ಕಮ್ಯಾಂಡು ಮಾಡಿರುವ ನಿರ್ಧಾರವನ್ನು ಪ್ರತಿಭಟಿಸುವುದಕ್ಕಾಗಿ ಶಾಂತಿ ಸಮಿತಿ ಸಭೆಯನ್ನು ಕರೆಯಲು ಕಮ್ಯೂನಿಸ್ಟರು ಸೂಚಿಸಿದ್ದುದರ ಮೇಲೆ ಸಮಿತಿ ಸಭೆಯು ಸೇರಿದ್ದಿತು

ನೀರು ಹಂಚಿಕೆ ಬಗ್ಗೆ ವಿಶ್ವಬ್ಯಾಂಕ್ ಸಲಹೆಗೆ ಪಾಕ್ ತಿರಸ್ಕಾರ

ಸಿಂಧೂ ನದಿಯ ಉಪ ನದಿಗಳ ಪೈಕಿ ಪೂರ್ವದ ೩ ನದಿಗಳ ನೀರನ್ನು ಭಾರತವೂ ಪಶ್ಚಿಮದ ಮೂರು ನದಿಗಳ ನೀರನ್ನು ಪಾಕಿಸ್ತಾನವೂ ಹಂಚಿಕೊಳ್ಳಬೇಕೆಂದು ವಿಶ್ವ ಬ್ಯಾಂಕು ೩ ವರ್ಷಗಳ ಹಿಂದೆ ಮಾಡಿರುವ ಸೂಚನೆಯನ್ನು ಪಾಕಿಸ್ತಾನದ ಪ್ರಧಾನಿ ಸುಹ್ರವರ್ದಿಯವರು ತಿರಸ್ಕರಿಸಿರುವರೆಂದು ವರದಿಯಾಗಿದೆ ಈ ಸಂಬಂಧವಾಗಿ ವಿಶ್ವ ಬ್ಯಾಂಕಿನ ಪ್ರತಿನಿಧಿ ಇಲಿಫ್‌ರವರು ಭಾರತ ಮತ್ತು ಪಾಕಿಸ್ತಾನದೊಡನೆ ಚರ್ಚಿಸಿದ್ದರು ವಿಶ್ವ ಬ್ಯಾಂಕಿನ ಸಲಹೆಗಳನ್ನು ಪಾಕಿಸ್ತಾನವು ಒಪ್ಪಿದರೆ ಈ ಬಗ್ಗೆ ಸಂಧಾನದ ಮೂಲಕ ಒಪ್ಪಂದವು ಸಾಧ್ಯವೆಂದು ಭಾರತವು ತಿಳಿಸಿರುತ್ತದೆ

ಮೈಸೂರು ಕಾಫಿ ಬೆಳೆಗಾರರ ಸಭೆ

ಹರಾಜು ಕಾಫಿ ಮಾರಾಟದ ವ್ಯಾಪಾರಿಗಳ ಸಭೆಯು ಮೊನ್ನೆ ಇಲ್ಲಿನ ಮಾಡರ್ನ್ ಹಿಂದೂ ಹೋಟೇಲಿನಲ್ಲಿ ನಡೆಯಿತು ಕಳೆದ ತಿಂಗಳು ೧೫ರಿಂದ ಜೂನ್ ೧೮ರ ವರೆಗೆ ಕಾಫಿ ಬೋರ್ಡಿನವರು ವಸೂಲು ಮಾಡಿದ ಹೆಚ್ಚು ಸುಂಕವನ್ನು ವಾಪಸು ಕೊಡಬೇಕೆಂದು ಒತ್ತಾಯಪಡಿಸಲು ಬೋರ್ಡಿನ ಅಧ್ಯಕ್ಷರು ಮತ್ತು ಕೇಂದ್ರ ಹಣಕಾಸಿನ ಮಂತ್ರಿಯವರ ಬಳಿ ನಿಯೋಗ ಹೋಗಬೇಕೆಂದು ನಿರ್ಧರಿಸಲಾಯಿತು. ಕಳೆದ ತಿಂಗಳು ೧೫ನೇ ತಾರೀಖು ಕೇಂದ್ರ ಮಂತ್ರಿಯು ಆಯವ್ಯಯ ಪಟ್ಟಿಯನ್ನು ಮಂಡಿಸಿದಾಗ ಸುಂಕವನ್ನು ಹೆಚ್ಚಿಸಿ ಜೂನ್ ೧೮ರಲ್ಲಿ ಅದನ್ನು ರದ್ದುಗೊಳಿಸಿದ್ದರು

ಕಾಫಿ ಗೃಹಗಳನ್ನು ತಾವೇ ನಡೆಸಲು ಕಾರ್ಮಿಕರ ನಿರ್ಧಾರ

ಕಾಫಿ ಬೋರ್ಡಿನವರು ಮುಚ್ಚಿರುವ ಕಾಫಿ ಗೃಹಗಳನ್ನು ತಾವೇ ವಹಿಸಿ ನಡೆಸಿಕೊಂಡು ಬರಲು ನೌಕರರು ನಿರ್ಧರಿಸಿರುವರೆಂದು ವರದಿಯಾಗಿದೆ.

ಲಂಡನ್ನಿನಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದ ಆರಂಭ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ನೆನ್ನೆ ಲಂಡನ್ನಿನಲ್ಲಿ ಬ್ರಿಟಿಷ್ ಪ್ರಧಾನಿಯ ಅಧಿಕೃತ ನಿವಾಸದಲ್ಲಿ ಆರಂಭವಾಯಿತು ನ್ಯೂಜಿಲೆಂಡ್ ಸಿಹಳ ಮತ್ತು ದಕ್ಷಿಣ ಆಫ್ರಿಕಗಳ ಮಂತ್ರಿಗಳೂ ಬಿರ್ಟಿ ಕೆನಡಾ ಭಾರತ ಘಾನಾ ಆಸ್ಟ್ರೇಲಿಯಾ ರೊಡೀಷಿಯಾ ಮತ್ತು ಪಾಕಿಸ್ತಾನದ ಪ್ರಧಾನಿಗಳೂ ಭಾಗವಹಿಸಿದ್ದರು ಅಧ್ಯಕ್ಷತೆ ವಹಿಸಿದ್ದ ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್‌ಮಿಲನ್ ವರು ಸ್ವಾಗತ ಭಾಷಣ ಮಾಡಿದನಂತರ ಬ್ರಿಟಿಷ್ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರು ಪ್ರಸ್ತುತ ಸನ್ನಿವೇಶದ ಬಗ್ಗೆ ವಿವರಣೆಯನ್ನಿತ್ತರು ಪ್ರಧಾನಿಗಳು ರಷ್ಯದ ನೀತಿಯಲ್ಲಿ ಇತ್ತೀಚೆಗೆ ಆಗಿರುವ ಬದಲಾವಣೆಗಳನ್ನು ಕುರಿತು ಚರ್ಚಿಸಿದರು ಪ್ರಾಲಿತ ರಷ್ಯದ ಗುರಿಯು ಬದಲಾಯಿಸಿಲ್ಲವೆ ಎಂದೂ, ಪಶ್ಚಿಮ ಪ್ರಜಾಪ್ರಭುತ್ವ ರಾಷ್ಟ್ರಗಳು ಎಚ್ಚರಿಕೆಯಿಂದ ಇರಬೇಕೆಂದೂ ಹಲವರು ನುಡಿದರು ರಷ್ಯದ ನೀತಿ ಬದಲಾವಣೆಯಲ್ಲಿ ತಂತ್ರವಿರುವುದೆಂದು ಸೂಚಿಸಲಾಯಿತು

ಇದೇ ಪ್ರಥಮವಾಗಿ ಸಮ್ಮೇಳನದಲ್ಲಿ ಭಾಗವಹಿಸಿರುವ ಘಾನಾ ಪ್ರಧಾನಿ ನ್ಕ್ರುಮಾರವರು ಮಾತನಾಡಿ ಆಫ್ರಿಕದಲ್ಲಿ ಉಂಟಾಗಿರುವ ಅತೃಪ್ತಿ ಮತ್ತು ಅಲ್ಲಿನ ಜನರ ಅಸಮಾಧಾನಗಳನ್ನು ಪರಿಹರಿಸಬೇಕೆಂದೂ, ಇಲ್ಲದಿದ್ದರೆ ಕಮ್ಯೂನಿಸಂ ತತ್ವವು ಅಲ್ಲಿ ಹರಡುತ್ತದೆಂದೂ ಸೂಚಿಸಿದರು ಬ್ರಿಟಿಷ್ ರಾಣಿಯವರು ನೆಹರೂರವರಿಗೆ ನೆನ್ನೆ ಭೇಟಿಯಿತ್ತರು ಪ್ರಧಾನಿಗಳ ಗೌರವಾರ್ಥವಾಗಿ ಅವರು ವಿಂಡ್ಸರ್ ಭವನದಲ್ಲಿ ಅವರು ರಾಜ ಭೋಜನವನ್ನು ಏರ್ಪಡಿಸಿದ್ದರು ನೆಹರೂ ಮತ್ತು ಘಾನಾ ಪ್ರಧಾನಿಗಳು ನೆನ್ನೆ ಪ್ರತ್ಯೇಕವಾಗಿ ಸಂಧಿಸಿದ್ದರು

ಅಣು ಶಸ್ತ್ರ ಸಿಡಿತ ನಿಲ್ಲಿಸಲು ಪಶ್ಚಿಮ ರಾಷ್ಟ್ರಗಳ ಒಪ್ಪಿಗೆ

ವಿಶ್ವಸಂಸ್ಥೆಯ ಶಸ್ತ್ರಸನ್ಯಾಸ ಉಪಸಮಿತಿಯಲ್ಲಿರುವ ೪ ಪಶ್ಚಿಮ ರಾಷ್ಟ್ರಗಳ ಪ್ರತಿನಿಧಿಗಳು ಅಣು ಶಸ್ತ್ರ ಪರೀಕ್ಷಾ ಸಿಡಿತಗಳನ್ನು ನಿಲ್ಲಿಸುವುದಕ್ಕೆ ಒಪ್ಪಿರುವರೆಂದು ವರದಿಯಾಗಿದೆ ಮಿಲಿಟರಿ ಕೆಲಸಗಳಿಗಾಗಿ ಅಣು ವಸ್ತು ತಯಾರಿಕೆಗಳನ್ನು ನಿಲ್ಲಿಸುವ ಬಗ್ಗೆ ಮುಂದೆ ಒಪ್ಪಂದವಾಗುವುದಾದರೆ ಸಧ್ಯದಲ್ಲಿ ಅಣು ಶಸ್ತ್ರ ಪರೀಕ್ಷೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗುವುದೆಂದು ಹೇಳಲಾಗಿದೆ

ಶ್ರೀರಂಗಪಟ್ಟಣ ಹೆರಿಗೆ ಆಸ್ಪತ್ರೆಗೆ ೧೦ ಸಾವಿರ ರೂ. ದಾನ

ಶ್ರೀರಂಗಪಟ್ಟಣ ೨೬

ಇಲ್ಲಿ ಹೆರಿಗೆ ಆಸ್ಪತ್ರೆಯನ್ನು ನಿರ್ಮಿಸಲು ಮೈಸೂರಿನ "ಶ್ರೀ ಹರ್ಷ" ರಾಮಯ್ಯನವರು ೧೦,೦೦೦ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ. ಶ್ರೀಯುತರು ಹಿಂದೆ ಇಲ್ಲಿ ಶಾಲೆಯ ನೂತನ ಕಟ್ಟಡಕ್ಕಾಗಿ ೧೦,೦೦೦ ರೂ ಗಳನ್ನು ಕೊಟ್ಟಿದ್ದರು ಅವರು ಬಾಬೂರಾಯನಕೊಪ್ಪಲಿನ ದಿವಂಗತ ಶ್ರೀ ಹೊನ್ನಪ್ಪನವರ ಮಕ್ಕಳು

ಮೈಸೂರು ವಿಶ್ವವಿದ್ಯಾಲಯಕ್ಕೆ ಹಣದ ಅವಶ್ಯಕತೆ

ಗ್ರಾಂಟ್ ಸಮಿತಿಯವರಿಗೆ ಸಿಂಡಿಕೇಟಿನ ಮನವಿ

ಮೈಸೂರು ೨೬

ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟಿನವರು ನೆನ್ನೆ ಇಲ್ಲಿಗೆ ಆಗಮಿಸಿದ ಗ್ರಾಂಟ್ ಸಮಿತಿ ಅಧ್ಯಕ್ಷರಾದ ಶ್ರೀ ಸಿ ಡಿ ದೇಶಮುಖ್‌ರವರಿಗೆ ಮೈಸೂರು ವಿಶ್ವವಿದ್ಯಾಲಯದ ಹಣಕಾಸಿನ ಅವಶ್ಯಕತೆಗಳ ಬಗ್ಗೆ ಮನವಿ ಪತ್ರವನ್ನು ಸಮರ್ಪಿಸಿ ಅವರೊಡನೆ ೩ ಗಂಟೆ ಕಾಲ ಚರ್ಚೆ ನಡೆಸಿದರು

ವಿಶ್ವವಿದ್ಯಾಲಯದವರು ಕೈಗೊಳ್ಳಬೇಕೆಂದಿರುವ ಅಭಿವೃದ್ಧಿ ಕೆಲಸಗಳು ಅಧ್ಯಾಪಕರ ಸಂಬಳದ ಸ್ಥಿತಿಗತಿಗಳ ಕುರಿತ ನಿವಾರಣೆ ಮತ್ತು ವಿಶ್ವವಿದ್ಯಾಲಯ ಸಂಸ್ಥೆಗಳನ್ನು ಸರಿಯಾಗಿ ನಡೆಸಿಕೊಂಡು ಬರಲು ತಗಲುವ ವೆಚ್ಚಗಳ ಬಗ್ಗೆ ಗ್ರಾಂಟ್ ಸಮಿತಿಯ ಸಹಾಯವನ್ನು ಸಿಂಡಿಕೇಟಿನವರು ಕೋರಿದರು

ನಾನಾ ಕಾಲೇಜುಗಳ ಅವಶ್ಯಕತೆಗಳ ಬಗ್ಗೆ ವಿಶ್ವವಿದ್ಯಾಲಯದವರು ತಮ್ಮ ಸೂಚನೆಗಳನ್ನು ಸಿಂಡಿಕೇಟಿನವರಿಗೆ ಸಲ್ಲಿಸಿ ಅವರ ಒಪ್ಪಿಗೆ ಪಡೆದನಂತರ ಗ್ರಾಂಟು ಸಮಿತಿಗೆ ಅವನ್ನು ಕಳುಹಬೇಕೆಂದು ಶ್ರೀ ದೇಶಮುಖ್‌ರವರು ಸಲಹೆ ಮಾಡಿದರು

ಕೆ ವಿ ಪುಟ್ಟಪ್ಪನವರ ಅಧಿಕಾರಾವಧಿ ಹೆಚ್ಚಿತು

ಮೈಸೂರು ವಿಶ್ವವಿದ್ಯಾಲಯದ ವೈಸ್‌ಚಾನ್ಸೆಲರ್ ಶ್ರೀ ಕೆ ವಿ ಪುಟ್ಟಪ್ಪನವರ ಅಧಿಕಾರಾವಧಿಯನ್ನು ಮುಂದೆ ತಿಳಿಸುವವರೆಗೆ ಹೆಚ್ಚಿಸಲಾಗಿರುವುದೆಂದು ಗೊತ್ತಾಗಿದೆ

ನಗರದಲ್ಲಿ ಸಾವಿರಕ್ಕೆ ಮೀರಿ ಇನ್‌ಫ್ಲುಯೆಂಜಾ ರೋಗ ಗ್ರಸ್ತರು

ನೆನ್ನೆ ದಿನ ೪೧೩ ಮಂದಿಗೆ ನಗರದಲ್ಲಿ ಇನ್‌ಫ್ಲುಯೆಂಜಾ ವ್ಯಾಧಿಯು ತಗಲಿ, ಒಟ್ಟು ೧೧೩೬ ಜನರಿಗೆ ಅದು ಹರಡಿರುವುದಾಗಿ ತಿಳಿಸಲಾಗಿದೆ

ಕೊರಿಯಾ ಬಗ್ಗೆ ಅಂತರ ರಾಷ್ಟ್ರ ಸಮ್ಮೇಳನಕ್ಕೆ ಬೆಂಬಲ

ಜಗತ್ತಿನಲ್ಲಿ ಯುದ್ಧ ಭೀತಿ ಇದೆಯೆಂದು ಚೌ ರವರ ಹೇಳಿಕೆ

ಚೀಣದ ಪ್ರಧಾನಿ ಚೌ ಎನ್ ಲೈಯವರು ಅಲ್ಲಿನ ಜನತಾ ಕಾಂಗ್ರೆಸ್ ಸಭೆಯಲ್ಲಿ ಮಾತನಾಡಿ ಕೊರಿಯಾ ಐಕ್ಯದ ಬಗ್ಗೆ ಉತ್ತರ ಕೊರಿಯನ್ನರು ಅಂತರ ರಾಷ್ಟ್ರೀಯ ಸಮ್ಮೇಳನ ಕರೆಯಬೇಕೆಂದು ಸೂಚಿಸಿರುವುದಕ್ಕೆ ಬೆಂಬಲವಿತ್ತಿರುವರು ಜಗತ್ತಿನಲ್ಲಿ ಇನ್ನೂ ಯುದ್ಧದ ಭೀತಿಯಿರುವುದಾಗಿ ಅವರು ನುಡಿದು, ಎಚ್ಚರಿಕೆ ಕ್ರಮಗಳನ್ನು ಸಡಿಲಗೊಳಿಸಬಾರದೆಂದು ಸೂಚಿಸಿರುವರು.

○ ಪಾಕಿಸ್ತಾನದ ಪ್ರಧಾನಿ ಸುಹ್ರವರ್ದಿಯವರು ಅಮೆರಿಕಾ ಅಧ್ಯಕ್ಷರ ಆಹ್ವಾನದ ಮೇಲೆ ಬರುವ ತಿಂಗಳು ೧೦ನೇ ತಾರೀಖು ಅಮೆರಿಕಕ್ಕೆ ಭೇಟಿಯಿತ್ತು ಅಲ್ಲಿ ೧೦ ದಿವಸಗಳವರೆಗೆ ಇರುವರು

ಸಂಸ್ಥಾನದಲ್ಲಿ ೯೦ ಸಾವಿರ ಜನರಿಗೆ ಇನ್‌ಫ್ಲುಯೆಂಜಾ

ಬೆಂಗಳೂರು ೨೬

ಸಂಸ್ಥಾನದಲ್ಲಿ ಇದುವರೆಗೆ ಒಟ್ಟು ೯೦ ಸಾವಿರ ಮಂದಿ ಇನ್‌ಫ್ಲುಯೆಂಜಾ ವ್ಯಾಧಿಯಿಂದ ನರಳುತ್ತಿರುವರೆಂದು ಗೊತ್ತಾಗಿದೆ ನೆನ್ನೆ ೫೩ ಸಾವಿರ ಜನರಿಗೆ ವ್ಯಾಧಿ ತಗಲಿತೆಂದೂ, ಈ ನಗರದಲ್ಲಿಯೇ ೨೮,೦೦೦ ಜನರು ರೋಗಪೀಡಿತರಾಗಿರುವರೆಂದೂ ಹೇಳಲಾಗಿದೆ

ವಿದೇಶಗಳಿಗೆ ಭಾರತೀಯರು ಭೇಟಿ ಕೊಡಲು ತೀವ್ರ ನಿರ್ಬಂಧ

ವಿದೇಶಗಳಿಗೆ ಭಾರತೀಯರು ಭೇಟಿ ಕೊಡುವುದನ್ನು ಭಾರತ ಸರ್ಕಾರದವರು ಬಹಳ ಬಿಗ್ಗಿಗೆ ಮಿತಿಗೊಳಿಸಿರುತ್ತಾರೆ ಭೇಟಿಗಳಿಗೆ ತಗಲುವ ವಿದೇಶೀ ವಿನಿಮಯ ವೆಚ್ಚವನ್ನು ಮಂಜೂರು ಮಾಡಲಾಗುವುದು ಅಧಿಕೃತವಾಗಿಯಾಗಲೀ ಅಥವಾ ಖಾಸಗಿಯಾಗಿಯಾಗಲೀ ಹೋಗುವ ನಿಯೋಗಗಳು ಅತ್ಯವಶ್ಯಕವಾದರೆ ಮಾತ್ರ ಅವು ಕಳಿಸಲಾಗುವುದು ಹಾಗೆಯೇ ವ್ಯಾಪಾರಿಗಳ ಭೇಟಿಗಳಿಗೂ ಮಿತಿ ಇಡಲಾಗುವುದು ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಿನ ವ್ಯಾಸಂಗ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ಹೊರಗೆ ಹೋಗಲು ಅವಕಾಶ ಕೊಡಲಾಗುವುದು

ಸಿಡಿಲು ಬಡಿದು ಇಬ್ಬರು ಖೈದಿಗಳ ಮರಣ

ಜಬ್ಬಲ್ಪುರದ ಬಂದೀಖಾನೆಯಲ್ಲಿ ಖೈದಿಗಳು ನೆಯ್ಗೆ ಕೆಲಸದಲ್ಲಿ ತೊಡಗಿದ್ದಾಗ ಮೊನ್ನೆ ಸಿಡಿಲು ಬಡಿದು ಸ್ಥಳದಲ್ಲಿಯೇ ಇಬ್ಬರು ಖೈದಿಗಳು ಮೃತರಾದರು ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ ಒಟ್ಟು ಹದಿಮೂರು ಜನರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ

ಹಾಸನೂರು ಸಮಾಜ ಕಲ್ಯಾಣ ಕೇಂದ್ರಕ್ಕೆ ದುರ್ಗಾಬಾಯಿ ಭೇಟಿ

ಸ್ವಂ ಸು ವರ್ತ] ನಂಜನಗೂಡು ೨೬

ಈ ತಾಲ್ಲೂಕಿನ ಹಾಸನೂರಿನಲ್ಲಿರುವ ಸಮಾಜ ಕಲ್ಯಾಣ ಕೇಂದ್ರಕ್ಕೆ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ಈ ದಿನ ಭೇಟಿಯಿತ್ತು ಮಹಿಳೆಯರು ಸುಸಂಸ್ಕೃತರಾಗಿ ಮುಂದುವರಿದು, ತಮ್ಮ ಮಕ್ಕಳನ್ನು ಪುರೋಭಿವೃದ್ಧಿಗೆ ತರಬೇಕೆಂದು ಸೂಚಿಸಿದರು ಗ್ರಾಮಸ್ಥರು ವಿಶೇಷ ಶ್ರದ್ಧೆ ವಹಿಸಿ ಅನಕ್ಷರತೆಯನ್ನು ನಿರ್ಮೂಲ ಮಾಡಿ ಗ್ರಾಮ ನೈರ್ಮಲ್ಯ ಮತ್ತು ಆರೋಗ್ಯವನ್ನು ಕಾಪಾಡಬೇಕೆಂದು ತಿಳಿಸಿದರು

ಪಿ ಸೆಸ್ ಜಾನ ಮತ್ತಾಯಸ್‌ರವರು ಮಾತನಾಡಿ ಸ್ವಾತಂತ್ರ್ಯವು ಬಂದನಂತರ ನಡೆಯುತ್ತಿರುವ ಅನೇಕ ಅಭಿವೃದ್ಧಿ ಕಾರ್ಯಗಳಲ್ಲಿ ಮಹಿಳೆಯರೂ ತಕ್ಕ ಪಾತ್ರವಹಿಸಬೇಕೆಂದು ಕೋರಿದರು ಗ್ರಾಮದ ಚೇರ್ಮನ್ ಶ್ರೀ ಪುಟ್ಟಸ್ವಾಮಿಯವರು ವಂದನಾರ್ಪಣೆ ಮಾಡಿದರು

ಅತಿಥಿಗಳು ನಂಜನಗೂಡಿನ ಕೇಂದ್ರಕ್ಕೂ ಭೇಟಿ ಇತ್ತು ಅಲ್ಲಿನ ಕೆಲಸ ಕಾರ್ಯಗಳ ಪ್ರಗತಿಯನ್ನು ಸೂಚಿಸಿದರು

ಅಮೇರಿಕಾ ಕಛೇರಿ ಮುಂದೆ ಕಮ್ಯೂನಿಸ್ಟ್ ಕೊರಿಯನ್ನರ ಪ್ರದರ್ಶನ

ಟೋಕಿಯೋದಿನ ಅಮೆರಿಕಾ ರಾಯಭಾರಿ ಕಛೇರಿ ಎದುರಿನಲ್ಲಿ ಕಮ್ಯೂನಿಸ್ಟರ ಪರವಿರುವ ೮೦ ಮಂದಿ ಕೊರಿಯನ್ನರು ಮೊನ್ನೆ ಕೊರಿಯಾ ಯುದ್ಧದ ೭ನೇ ವಾರ್ಷಿಕ ದಿನದಂದು ಪ್ರದರ್ಶನ ನಡೆಸಿದರು. ಪೋಲೀಸರಿಗೂ, ಅವರಿಗೂ ಚಿಕ್ಕ ಘರ್ಷಣೆಯಾಯಿತು. ನಂತರ ಅವರ ಪರ ನಿಯೋಗವೊಂದು ಕಛೇರಿಗೆ ಹೋಗಿ ಕಳೆದ ವಾರ ಆದ ಕೊರಿಯಾ ಶಾಂತಿ ಒಪ್ಪಂದದ ಶಸ್ತ್ರಾಸ್ತ್ರ ವಿಧಿ ನಿಯಮದ ಉಲ್ಲಂಘನೆಯನ್ನು ಖಂಡಿಸುವ ನಿರ್ಣಯವನ್ನು ಅಧಿಕಾರಿಗಳಿಗೆ ಒಪ್ಪಿಸಲು ಅವಕಾಶ ಕೊಡಲ್ಪಟ್ಟಿತು.

ಪ್ರತಿ ಜಿಲ್ಲೆಯಲ್ಲೂ ಒಂದು ಅನಾಥಾಶ್ರಮ

ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಅನಾಥಾಶ್ರಮವನ್ನು ತೆರೆದು ಅನಾಥರಿಗೆ ಆಶ್ರಯನೀಯಲಾಗುವುದೆಂದು ಕೇಂದ್ರ ಸಾಮಾಜಿಕ ಕಲ್ಯಾಣ ಸಮಿತಿ ಅಧ್ಯಕ್ಷಿಣಿ ದುರ್ಗಾಬಾಯಿ ದೇಶಮುಖ್‌ರವರು ತಿಳಿಸಿರುತ್ತಾರೆ. ದ್ವಿತೀಯ ಯೋಜನೆಯ ಅವಧಿಯಲ್ಲಿ ಸಮಿತಿಯ ಕಾರ್ಯಗಳಿಗಾಗಿ ೩೦ ಕೋಟಿ ರೂ ಗಳನ್ನು ಕೇಂದ್ರ ಸರ್ಕಾರದವರು ಒದಗಿಸಿರುವರೆಂದೂ, ಇನ್ನೂ ಆರು ಕೋಟಿ ರೂ ಒದಗಿಸಬಹುದೆಂದೂ ಅವರು ಹೇಳಿರುವರು.

"ಧರ್ಮ ಸಂದೇಶ"

ಆಗಮ ರತ್ನ, ವಿದ್ಯಾ ಭೂಷಣ. ಆಗಮಿಕ ಕೃಷ್ಣದೀಕ್ಷಿತರ ಸಂಪಾದಕತ್ವದಲ್ಲಿ ಹೊರಡುತ್ತಿರುವ "ಧರ್ಮ ಸಂದೇಶ" ಕನ್ನಡ ಮಾಸ ಪತ್ರಿಕೆಯ ವೈಶಾಖ ಮಾಸದ ಸಂಚಿಕೆ ನಮ್ಮ ಹಸ್ತಗತವಾಗಿದೆ ಇದರಲ್ಲಿ ಹಲವಾರು ಉಪಯುಕ್ತ ಧಾರ್ಮಿಕ ಲೇಖನಗಳಿವೆ. ನಮ್ಮ ಪೂರ್ವಜರು ಮರಗಳನ್ನೇಕೆ ಪೂಜಿಸುತ್ತಿದ್ದರು ? -ಯಜ್ಞದಲ್ಲಿ ಹಿಂಸೆಯು ಕರ್ತವ್ಯತೆ; ಯಜ್ಞದಿಂದ ಮಳೆ, ಮಳೆಯಿಂದ ಬೆಳೆ; ಮಹಾ ಕವಿ ಬಾಣ, ಸರ್ವೋದಯ ಸಂದೇಶ, ಭಗವದಾರಾಧನೆ-ಮುಂತಾದ ಅಮೂಲ್ಯ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ ಆಸ್ತಿಕ ಮಹನೀಯರುಗಳೆಲ್ಲರೂ ಅಗತ್ಯವಾಗಿ ಓದಲೇಬೇಕು ವಾರ್ಷಿಕ ಚಂದಾ ೪ ರೂ ಬೆಂಗಳೂರು ಮಾವಳ್ಳಿಯ 'ಶ್ರೀ ಮನೋನ್ಮನಿ ಕೃಪಾ' ದಲ್ಲಿ ದೊರೆಯುತ್ತದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ದೇವರ ನಾಮ ೭-೧೫ ಗಾಂಧಿ ಸ್ಮೃತಿ. ೭-೩೦ ರಿಕಾರ್ಡು ೮-೧೫ ಹಿಂದಿ ಪಾಠ. ಮಧ್ಯಾಹ್ನ ೧೨ ಎ ವಿ. ಕೃಷ್ಣಮಾಚಾರ್-ಪಿಟೀಲು ೧೨-೩೦ ವನಿತಾ ವಿಹಾರ. ೧-೨೦ ರಿಕಾರ್ಡು. ೧-೫೦ ಗೋಟು ವಾದ್ಯ. ೩-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೬-೧೦ ನೃತ್ಯ ಗೀತೆ. ೭-೩೦ ತಿಂಗಳ ಸಮಾಲೋಚನೆ. ೮ ಪಾಲಘಾಟ್ ಕೆ. ವಿ. ನಾರಾಯಣಸ್ವಾಮಿ-ಸಂಗೀತ: ಮದ್ರಾಸ್ ರಿಲೆ ೯-೧೫ ರಿಕಾರ್ಡು ೯-೩೦ ನರಲೋಕದಲ್ಲಿ ನಾರದರು ೧೦ ಉರ್ದು ಕವನ. ೧೦-೧೫ ಎ. ವಿ ಕೃಷ್ಣಮಾಚಾರ್-ಪಿಟೀಲು.

ಬಿಕರಿಗೆ ಸಿದ್ಧವಾಗಿದೆ

ಮೈಸೂರು ಶೇಷ್ ಮಾನಂದವಾಡಿ ರಸ್ತೆಯಲ್ಲಿ, ಹಾಲಿ ಭಾರತ್ ಸಾ ಮಿಲ್ ಇಟ್ಟಿರುವ 250'x60 ಅಡಿ ಉಳ್ಳ ಸೈಟು. ಆಫೀಸ್ ರೂಂ, ಮಿಲ್‌ಷೆಡ್, ಕಾಂಪೌಂಡು, ನಲ್ಲಿ, ಲಕ್ಕಸು ವಗೈರೆ ಉಳ್ಳದ್ದಾಗಿದೆ. ಒಳ್ಳೆಯ ವ್ಯಾಪಾರ ಸ್ಥಳವಾಗಿರುತ್ತೆ. ವಿವರಗಳಿಗೆ ಈ ಕೆಳಗೆ ಕಂಡವರಲ್ಲಿ ವಿಚಾರಿಸಿರಿ.

ಎಚ್. ತಮ್ಮಯ್ಯ,
ಟಿಂಬರ್ ಮರ್ಚೆಂಟ್, ಈಡಿಗಾ,
ನ್ಯೂ ಬೆಂಬೂ ಬಜಾರ್, ಮೈಸೂರು.

Edited, Printed and Published by A. R. Nagarajan at Sadhvi Press, Dewan's Road, Mysore

ಜಗತ್ತಿನ ಆರು ಮಹಾ ಪುರುಷರಲ್ಲಿ ನೆಹರೂ ಒಬ್ಬರು

ಭಾರತದ ಪ್ರಧಾನಿ ನೆಹರೂರವರು ಜಗತ್ತಿನ ಆರು ಅತ್ಯಂತ ಪ್ರಬಲ ಪುರುಷರ ಪೈಕಿ ಒಬ್ಬರೆಂದು ಅಮೆರಿಕದ ಸುದ್ದಿ ವಿಮರ್ಶಕರಲ್ಲಿ ಅಗ್ರಗಣ್ಯರಾದ ಹೆಚ್ ವಿ ಕಾಲ್ಟೆನ್ ಬಾರ್ನರವರು ತಿಳಿಸುತ್ತಾರೆ. ಅವರಿಗೆ ಈಗ ೬೦ ವರ್ಷ ವಯಸ್ಸು. ನೆಹರೂರವರು ಹಿರಿಯ ಮತ್ತು ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರದ ಮುಖ್ಯಸ್ಥರಾಗಿ ವಿಶ್ವದ ಗೌರವವನ್ನು ಸಂಪಾದಿಸಿರುವರೆಂದೂ, ಅವರ ಉತ್ತಮ ಮನೋಭಾವ ಮತ್ತು ತಾಟಸ್ಥ್ಯ ನೀತಿಯಿಂದ ಅವರು ಜಗತ್ತಿನ ಶಾಂತಿ ಸಾಧನೆಗೆ ನಿರ್ಧಾರಾತ್ಮಕ ಪ್ರಭಾವವುಳ್ಳವರಾಗಿರುವರೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ಅಮೆರಿಕದ ಐಸೆನ್‌ಹೋವರ್, ರಷ್ಯದ ಕ್ರುಶ್ಚೇವ್, ಯುಗೊಸ್ಲಾವಿಯದ ಮಾರ್ಷಲ್ ಟಿಟೋ, ಚೀಣದ ಮಾವೋಟ್ಸೆ ಟುಂಗ್ ಮತ್ತು ಜಗತ್ತಿನ ಕ್ರಿಸ್ತ ಗುರು ಪೋಪರು ಉಳಿದ ಐದು ಪ್ರಭಾವ ಶಾಲಿಗಳೆಂದು ಸೂಚಿಸಲಾಗಿದೆ.

ಗಡಿನಾಡಿನಲ್ಲಿ ಪುನಃ ಕೆಂಪು ಷರಟಿನವರ ಕಾರ್ಯಾರಂಭ

ಪಾಕಿಸ್ತಾನದ ಸ್ಥಾಪನೆಯಾದಾಗಿನಿಂದ ಮುಚ್ಚಲ್ಪಟ್ಟಿದ್ದ ಗಡಿನಾಡಿನ ಕೆಂಪು ಷರಟಿನವರ ಕಾರ್ಯಾಲಯ ಕೇಂದ್ರವನ್ನು ಮತ್ತೆ ಆರಂಭಿಸಲಾಗುವುದೆಂದೂ, ಅಲ್ಲಿ ರಾಷ್ಟ್ರೀಯ ಪಕ್ಷದ ಕಾರ್ಯಕರ್ತರಿಗೆ ತರಪೇತು ಕೊಡಲಾಗುವುದೆಂದೂ ವರದಿಯಾಗಿದೆ. ಕೇಂದ್ರದ ಪುನರ್ನಿರ್ಮಾಣಕ್ಕಾಗಿ ಖಾನ್ ಅಬ್ದುಲ್ ಗಫಾರ್ ಖಾನರು ಪಕ್ಷದ ಕಾರ್ಯಕರ್ತರ ಸಭೆಯೊಂದನ್ನು ನಡೆಸಲಿರುವರು ೧೯೪೮ ರಲ್ಲಿ ಕೇಂದ್ರವನ್ನು ನಾಶಪಡಿಸಿ, ಕೆಂಪು ಷರಟಿನವರ ಸಂಸ್ಥೆಯನ್ನು ನಿಷೇಧಿಸಲಾಗಿತ್ತು ಆಗ ಗುಂಡು ಹಾರಿಸಿದ ಸಂದರ್ಭದಲ್ಲಿ ನೂರಾರು ಕೆಂಪು ಷರಟಿನವರ ಸ್ವಯಂ ಸೇವಕರು ಮಡಿದಿದ್ದರು

ತಲೆ ಮೇಲೆ ಕಲ್ಲು ಹಾಕಿ ಕೊಲೆ

ಕುಣಿಗಲ್ ತಾಲ್ಲೂಕು ಪಣಬ ಗ್ರಾಮದ ಚನ್ನಪ್ಪೇಗೌಡ ಎಂಬಾತನು ಮನೆ ಹೊರಗಡೆ ಮಲಗಿದ್ದಾಗ ಅವನ ಮೇಲೆ ಯಾರೋ ಕಲ್ಲನ್ನು ಎತ್ತಿಹಾಕಿ ಕೊಲೆಮಾಡಿದರೆಂದೂ, ಆತನನ್ನು ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ದಾರಿಯಲ್ಲಿ ಮೃತಪಟ್ಟನೆಂದೂ ವರದಿಯಾಗಿದೆ.

ಬೆಂಗಳೂರಿನಲ್ಲಿ ವ್ರಣ ರೋಗದ ಆಸ್ಪತ್ರೆ

ಕೇಂದ್ರ ಸರ್ಕಾರದ ಮಾಜಿ ಮಂತ್ರಿ ರಫಿ ಅಹಮದ್ ಕಿದ್ವಾಯಿಯರ ಸ್ಮಾರಕವಾಗಿ ಬೆಂಗಳೂರಿನಲ್ಲಿ ೩ ಲಕ್ಷ ರೂ. ವೆಚ್ಚದಿಂದ ಈ ವರ್ಷಾಂತ್ಯದಲ್ಲಿ ವ್ರಣ ರೋಗದ ಆಸ್ಪತ್ರೆಯನ್ನು ನಿರ್ಮಿಸಲಾಗುವುದೆಂದು ಗೊತ್ತಾಗಿದೆ. ಆಹಾರ ಡಿಪೋಗಳನ್ನು ನಡೆಸುವುದರಲ್ಲಿ ಬಂದ ಲಾಭದಿಂದ ಪುರಸಭೆಯವರು ಅದನ್ನು ಕಟ್ಟುವರೆಂದೂ, ಇದುವರೆಗೆ ೧೧ ಲಕ್ಷ ರೂ. ಲಾಭಬಂದಿರುವುದೆಂದೂ ಗೊತ್ತಾಗಿದೆ

CENTRAL INSTITUTE OF COMMERCE
Vani Vilas Market, Mysore

Efficient Coaching — Best Results. Admissions received for Diploma in Commerce & Stenography & for Shorthand and Typewriting Make haste and rush in before admissions close.

INTERMEDIATE
★ *P. C. M. & C. B. Z. Classes in full swing*
★ *Separate English Classes For 1956 and '57 Texts*
B.A & B.Sc : English & Kannada
Classes begin on Sunday
Best Staff & Equipment
CITY TUTORIAL COLLEGE
Old Agrahar, Mysore

ನೋಟುಗಳ ಕಳ್ಳ ರವಾನೆಗಾರ ಗುಂಡಿಗೆ ಬಲಿ

ಭಾರತ ಮತ್ತು ಪಾಕಿಸ್ತಾನದ ಗಡಿಯ ವಾಗಾ ಎಂಬಲ್ಲಿ ಕಳೆದ ಶನಿವಾರ ರಾತ್ರಿ ೪೧ ಸಾವಿರ ರೂ ಬೆಲೆ ಭಾರತದ ನೋಟುಗಳನ್ನು ಕಳ್ಳ ರವಾನೆ ಮಾಡುತ್ತಿದ್ದ ಒಬ್ಬಾತನ ಮೇಲೆ ಗುಂಡು ಹಾರಿಸಿ ಕೊಲ್ಲಲಾಯಿತೆಂದೂ, ಅವನ ಬಳಿ ೪೧,೦೦೦ ರೂ. ನಷ್ಟು ನೋಟುಗಳಿದ್ದುವೆಂದೂ ವರದಿಯಾಗಿದೆ. ಗಡಿ ಬಳಿ ಇಬ್ಬರು ಕಳ್ಳ ರವಾನೆಗಾರರನ್ನು ತಡೆದಾಗ ಅವರು ಗುಂಡು ಹಾರಿಸಿದರೆಂದು ಹೇಳಲಾಗಿದೆ ಆ ಪೈಕಿ ಒಬ್ಬನು ಮಡಿದನು. ಮತ್ತೊಬ್ಬನು ಭಾರತದೊಳಗೆ ಪ್ರವೇಶಿಸಿದನೆಂದು ಹೇಳಲಾಗಿದೆ.

ನೌಕೆಗೆ ಸೇರಲು ಯುವಕರಿಗೆ ಕರೆ

ಭಾರತದ ನೌಕಾ ಇಲಾಖೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕಾಗಿ ತರುಣರನ್ನು ಆರಿಸಲು ಈ ದಿನ, ನಾಳೆ ಮತ್ತು ನಾಳಿದ್ದು ಬೆಂಗಳೂರಿನ ಅಸಿಸ್ಟೆಂಟ್ ರಿಕ್ರೂಟಿಂಗ್ ಅಧಿಕಾರಿಗಳು ನಗರದಲ್ಲಿ ಬಿಡಾರ ಮಾಡುವರು. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಗಾಂಧಿ ಚೌಕದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಅಧಿಕಾರಿಗಳಿಂದ ತಿಳಿಯಬಹುದು.

ಸಾಮಾನು ಸಮೇತ ಮಿಲಿಟರಿ ವಾಹನದ ಕಳುವು

ಬೆಂಗಳೂರಿನ ಬಳಿ ಅಗರಮ್ಮನ ಮಿಲಿಟರಿ ಕೇಂದ್ರದಲ್ಲಿ ನೆನ್ನೆ ಬೆಳಗಿನಜಾವ ಮಿಲಿಟರಿ ಉಡುಪು ಧರಿಸಿದ್ದವನೊಬ್ಬನು, ಗುಡಾರದ ಸಾಮಾನುಗಳ ಸಮೇತ ಒಂದು ಮಿಲಿಟರಿ ಲಾರಿಯನ್ನು ಅಪಹರಿಸಿರುವುದಾಗಿ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ರಸ್ತಬೂದಿ	೨೬	೨೫	೯೧	೭೫
ಕಡ್ಲಿ	೪೪	೦೦		
ಕಾರ ಸಣ್ಣ	೨೬	೨೮	೨೭	೧೨
ರಾಗಿ	೪೪	೬೫	೪೬	೫೦
ಜೋಳ	೪೨	೦೦		
ಕಡಲೆಕಾಯಿ	೧೪	೦೬	೨೬	೬೦
ಹುಚ್ಚೆಳ್ಳು	೪೧	೧೨		
ಎಳ್ಳು	೭೪	೬೨	೭೭	೦೦
ಹುರುಳಿ	೩೨	೦೦	೩೪	೦೦
ಹೆಸರು	೪೫	೩೭	೫೪	೦೦
ಹಲಸಂದೆ	೨೮	೧೨	೩೬	೦೧
ಅವರೆ	೪೪	೪೭		
ಉದ್ದು	೪೫	೦೨	೫೬	೭೫
ಹುಣಸೇಹಣ್ಣು	೩	೧೯	೪	೪೭
ಮೆಣಸಿನಕಾಯಿ	೦೪	೦೦	೧೭	೨೫
ತೆಂಗಿನಕಾಯಿ	೧೧೬	೦೧	೨೪೯	೬೦

GRAND ATTRACTION
Group & Flash
PHOTOGRAPHS
Role Films, Developing, Printing & Enlarging Undertaken
SRI KANTH STUDIO
Near Prabha Talkies
Mysore
Your Card Size Photo Re. One only

ಕುಂದೂರು ರುದ್ರಪ್ಪನವರ ಚುನಾವಣೆ ವಿರುದ್ಧ ತಕರಾರು ಅರ್ಜಿ ವಜಾ

ಮೈಸೂರು ವಿಧಾನ ಸಭೆಗೆ ಚನ್ನಗಿರಿ ಕ್ಷೇತ್ರದಿಂದ ಅವಿರೋಧವಾಗಿ ಆರಿಸಿಬಂದ ಶ್ರೀ ಕುಂದೂರು ರುದ್ರಪ್ಪನವರ ಚುನಾವಣೆಯ ನ್ಯಾಯಬದ್ಧತೆಯನ್ನು ಪ್ರಶ್ನಿಸಿ ಶ್ರೀ ತಿಪ್ಪೇ ರುದ್ರಪ್ಪಗೌಡ ಎಂಬ ಓಟುದಾರರು ಹೂಡಿದ್ದ ತಕರಾರು ಅರ್ಜಿಯನ್ನು ಚುನಾವಣಾ ಮೊಕದ್ದಮೆ ನ್ಯಾಯಾಧೀಶ ಶ್ರೀ ವೆಂಕಟಪ್ಪಶೆಟ್ಟರು ವಜಾ ಮಾಡಿರುತ್ತಾರೆ. ಮತ್ತೊಬ್ಬ ಉಮೇದುವಾರ ಶ್ರೀ ಎ. ಜಿ ರುದ್ರಪ್ಪನವರ ಹೆಸರನ್ನು ಚುನಾವಣಾಧಿಕಾರಿಗಳು ತಿರಸ್ಕರಿಸಿದ್ದುದು ನ್ಯಾಯವಲ್ಲವೆಂದು ಅರ್ಜಿದಾರರು ತಿಳಿಸಿದ್ದರು.

ಹಿಂದಿ ವಿದ್ಯಾರ್ಥಿಗಳ ಸಂಘ

ಚಾಮರಾಜ ಮೊಹಲ್ಲಾ ಹಿಂದೀ ಪ್ರಚಾರ ಕೇಂದ್ರದ ವಿದ್ಯಾರ್ಥಿಗಳ ಸಭೆಯೊಂದು ಮೊನ್ನೆ ನಡೆದು ಛಾತ್ರ ಸಂಘವನ್ನು ಸ್ಥಾಪಿಸಲಾಯಿತು. ಶ್ರೀಗಳಾದ ಕೆ. ಎಸ್. ಶ್ರೀನಿವಾಸಮೂರ್ತಿ, ಎಸ್. ಆರ್. ಮುರಹರಿರಾವ್ ಮತ್ತು ಶ್ರೀಮತಿ ಪ್ರವಿಶಾಲಮ್ಮನವರುಗಳು ಕಾರ್ಯದರ್ಶಿಗಳಾಗಿಯೂ, ಶ್ರೀಮತಿಯರಾದ ಆರ್. ಸಾವಿತ್ರಿ, ಕಮಲ, ಭಾಗ್ಯಲಕ್ಷ್ಮಿ, ಸಿ. ಎಸ್. ಕಮಲ ಮತ್ತು ಎಂ. ಎನ್. ನಾಗಮಣಿ ಮತ್ತು ಶ್ರೀಗಳಾದ ಯು ವಿ. ಅನಂತರಾವ್, ಹೆಚ್ ಎಸ್ ಎಸ್. ಸ್ವಾಮಿ, ನಾಗರಾಜ್ ಮತ್ತು ಜಯದೇವಮೂರ್ತಿಯವರು ಸದಸ್ಯರುಗಳಾಗಿಯೂ ಚುನಾಯಿತರಾದರು.

ಜಿಲ್ಲೆಯ ಆರೋಗ್ಯ ಪರಿಸ್ಥಿತಿ

ಜಿಲ್ಲೆಯಲ್ಲಿ ಈ ತಿಂಗಳ ಆದಿಯಿಂದ ೧೫ರವರೆಗೆ ಕಾಲರಾ, ಪ್ಲೇಗು, ಸಿಡುಬು ಮುಂತಾದ ರೋಗಗಳು ಯಾವುವೂ ವರದಿಯಾಗಿಲ್ಲ. ಆದರೆ ಗುಂಡ್ಲುಪೇಟೆಯಲ್ಲಿ ೬, ಹೆಗ್ಗಡದೇವನ ಕೋಟೆಯಲ್ಲಿ ೪, ಸೆರಗೂರಿನಲ್ಲಿ ೨ ಮತ್ತು ಕೃಷ್ಣರಾಜನಗರದಲ್ಲಿ ಒಬ್ಬರಿಗೆ ಇನ್ಫ್ಲುಯೆಂಜಾ ರೋಗವು ತಗುಲಿ ರೋಗ ನಿರೋಧಕ ಕ್ರಮಗಳನ್ನು ಕೈಗೊಂಡಿರುವುದಾಗಿ ವರದಿಯಾಗಿದೆ.

VIDYA TUTORIAL COLLEGE,
Dalvoy High School Buildings, Mysore
INTERMEDIATE : 1956 English Texts
Classes Commenced
B.A., B Sc. : English 1957 Texts
Classes formed. Join immediatly
Other classes in full swing
Inter : Eng. 1957 texts, Kan., P. C. M., P. E. M., P. C. B., C. B. Z., H. E. L, H. E. G.,
B.A., B.Sc.,-All subjects, All Parts
Ladies also admitted
Enquiries 9-30 to 10-30 A.M.
5-30 to 7-30 P.M.

ಪ್ರಭು ದೇವಾ ಥಿಯೇಟರ್
(ಪದ್ಮಾ ಟಾಕೀಸ್)

28—6—57 ನೇ : ಶುಕ್ರವಾರದಿಂದ : ಪ್ರತಿದಿನ 3 ಆಟಗಳು

ಸಾರಥಿರವರ ತೆಲುಗು ಚಿತ್ರ ★ **ಪೆದ್ದರಿ ಕಾಲು**

ಪಾತ್ರ:— ಅಂಜಲಿ, ಗಿರಿಜ, ರಾಗಿಣಿ, ರೇಲಂಗಿ, ಜಗ್ಗಯ್ಯ, ಗುಮ್ಮಡಿ, ಮುಂತಾದವರು

ಚಾಮುಂಡೇಶ್ವರಿ ಟಾಕೀಸ್

27-6-57ರಿಂದ : 8 ದಿನಗಳು ಮಾತ್ರ : ದಿನವಹಿ 2 ಆಟಗಳು

ಲಲಿತಾ ಫಿಲಂಸ್‌ರವರ ತಮಿಳು ಚಿತ್ರ **ಮಾದರಕುಲ ಮಾಣಿಕ್ಯಂ**

ನಟವರ್ಗ:- ಅರ್. ಗಣೇಶ್, ಎ. ನಾಗೇಶ್ವರರಾವ್, ಎಸ್. ವಿ. ರಂಗರಾವ್, ಅಂಜಲೀದೇವಿ, ಸಾರಂಗಪಾಣಿ, ಅಂಜಲಿದೇವಿ, ಸಾವಿತ್ರಿ, ಎಂ. ಎನ್. ರಾಜಂ ಮುಂತಾದವರು

ಶೀಘ್ರವೇ ಬರಲಿವೆ:— ★ ಯಾರ ಪಯ್ಯನ್, ★ ರಾಜ ಲಲಿತಾಂಗಿ, ಭಾಗ್ಯವತಿ

[ಟೆಲಿಫೋನ್ ನಂ 792

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆ ಪೈಸೆ

ಸಂಪುಟ : ೧೫] SADHVI : FRIDAY 28—6—1957 ಮೈಸೂರು : ಶುಕ್ರವಾರ ೨೮—೬—೧೯೫೭ : [ಸಂಚಿಕೆ : ೩೬೪

ಫಾರ್ಮೋಸಾ ಸಮುದ್ರ ಪ್ರದೇಶದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ

ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಮೇಲೆ ಬೆತ್ತದ ಪ್ರಹಾರ

ವರ್ಣಭೇದ ನೀತಿಗೆ ಪ್ರತಿಭಟನಾ ಪ್ರದರ್ಶನ

ದಕ್ಷಿಣ ಆಫ್ರಿಕದ ಜೋಹಾನ್ಸ್‌ಬರ್ಗ್‌ನಲ್ಲಿ ವರ್ಣಭೇದ ನೀತಿಯನ್ನು ಪ್ರತಿಭಟಿಸಲು ಭಾರತೀಯರು ಮೊನ್ನೆ ರಾತ್ರಿ ಟಾರ್ಚ್ ಲೈಟ್ (ಪಂಜು) ಪ್ರದರ್ಶನ ನಡೆಸಿದಾಗ ಪೋಲೀಸರು ಬೆತ್ತದ ಪ್ರಹಾರ ಮಾಡಿ ಅವರನ್ನು ಚದುರಿಸಿದರು. ಇಬ್ಬರು ಬಾಲಕರೂ, ಇಬ್ಬರು ಹುಡುಗಿಯರೂ ಸೇರಿ ೧೫ ಮಂದಿಗೆ ಗಾಯವಾಯಿತು. ಇಬ್ಬರು ಪೋಲೀಸರಿಗೆ ತಲೆ ಮೇಲೆ ಗಾಯವಾಗಿದೆ. ಎರಡು ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಲಾಯಿತು. ಪೋಲೀಸರು ಮೊದಲನೆಯದನ್ನು ತಡೆದು ಮೆರವಣಿಗೆ ಅನುಮತಿ ಚೀಟಿಗಳಿಗಾಗಿ ಪ್ರದರ್ಶನಕಾರರು ಕೊಡಲಿಲ್ಲ. ಆಗ ಬೆತ್ತದ ಪ್ರಹಾರ ಮಾಡಲಾಗಿ, ಜನರು ಉರಿಯುವ ಪಂಜುಗಳನ್ನು ಬಿಸಾಡಿ ಓಡಿದರು. ಅದರಿಂದ ಗೊಂದಲವಾಯಿತು. ಮೂವರು ಮಹಿಳೆಯರು ಮತ್ತು ಒಬ್ಬ ಗಂಡಸನ್ನು ಬಂಧಿಸಿ, ಸ್ವಲ್ಪ ಹೊತ್ತಿನನಂತರ ಬಿಡಲಾಯಿತು.

ಮತ್ತೊಂದು ಪ್ರದರ್ಶನ ನಡೆಸಿದವರ ಮೇಲೆ ಪೋಲೀಸರು ನುಗ್ಗಿದಾಗ ಒಬ್ಬ ವೃದ್ಧ ಭಾರತೀಯನು ಪೋಲೀಸರ ವಾಹನದ ಬಳಿ ಹೋಗಿ "ಜನರನ್ನು ಕೊಲ್ಲಬೇಡಿ, ಬೇಕಾದರೆ ನನ್ನನ್ನು ಹೊಡೆಯಿರಿ" ಎಂದು ಕೂಗಿದನು. ಆದರೆ ಇತರರು ಅವನನ್ನು ಹಿಂದಕ್ಕೆ ಕರೆದುಕೊಂಡು ಹೋದರು. ವರ್ಣ ಭೇದವನ್ನು ಪ್ರತಿಭಟಿಸುವ ದಿನವನ್ನು ಮೊನ್ನೆ ನಡೆಸಲಾಯಿತು.

ವಿದೇಶಗಳಿಗೆ ಮನಿಯಾರ್ಡರ್ ಸೌಲಭ್ಯ ರದ್ದು

ವಿದೇಶಗಳಿಗೆ ಮನಿಯಾರ್ಡರುಗಳನ್ನು ಕಳುಹಿಸುವ ಸೌಲಭ್ಯವನ್ನು ಕೂಡಲೆ ರದ್ದು ಪಡಿಸಲಾಗುವುದೆಂದು ಭಾರತ ಸರ್ಕಾರದವರು ಪ್ರಕಟಿಸಿರುತ್ತಾರೆ. ವಿದೇಶೀ ವಿನಿಮಯದ ಪರಿಸ್ಥಿತಿಯು ತೀವ್ರವಾಗಿರುವುದೇ ಇದಕ್ಕೆ ಕಾರಣ. ಇದುವರೆಗೆ ೨ ಪೌಂಡು ಅಥವಾ ೩೦ ರೂ. ಗಳವರೆಗೆ ಮನಿಯಾರ್ಡರ್ ಕಳುಹಿಸಲು ಅವಕಾಶವಿದ್ದಿತು.

ಸುರಂಗ ಕುಸಿದು ೨೧ ಜನರು ಹೂತುಹೋದ ಪ್ರಸಂಗ

ಟೋಕಿಯೋವಿಗೆ ೧೨೦ ಮೈಲಿ ದೂರದಲ್ಲಿರುವ ಅಷಿಮುರಾ ನಿಗಾಟಾ ಎಂಬಲ್ಲಿ ಮೊನ್ನೆ ರಾತ್ರಿ ಭಾರಿ ಮಳೆಯ ಪರಿಣಾಮವಾಗಿ ಸುರಂಗವೊಂದು ಕುಸಿದುಬಿದ್ದು, ೨೧ ಜನರು ಮಣ್ಣಿನ ರಾಶಿಯೊಳಗೆ ಹೂತುಹೋದರು.

ಇರಾಕ್ ಸೈನ್ಯಗಳಿಂದ ಜೋರ್ಡಾನಿನ ಆಕ್ರಮಣ

ಜೋರ್ಡಾನಿನ ಹಾಫರ್ ನೆಲೆಯನ್ನು ಇರಾಕಿನ ಸೈನ್ಯಗಳು ಆಕ್ರಮಿಸಿರುವುದಾಗಿ ಈಜಿಪ್ಟಿನ ಪತ್ರಿಕೆಗಳು ತಿಳಿಸಿವೆ. ಆಂಗ್ಲೋ-ಜೋರ್ಡಾನ್ ಒಪ್ಪಂದವನ್ನು ಜೋರ್ಡಾನು ರದ್ದುಗೊಳಿಸಿದ ಮೇಲೆ ಅಲ್ಲಿಂದ ಈಚೆಗೆ ಬ್ರಿಟಿಷ್ ಪಡೆಗಳು ವಾಪಸಾಗಿದ್ದುವು.

ಪಂಜಾಬು ಸರ್ಕಾರಿ ಕಛೇರಿಗೆ ನುಗ್ಗುವ ಪ್ರಯತ್ನ

ಹಿಂದಿ ರಕ್ಷಾ ಚಳುವಳಿಗಾರರಿಗೂ ಪೋಲೀಸರಿಗೂ ಘರ್ಷಣೆ

ಪಂಜಾಬಿನ ಹಿಂದಿ ರಕ್ಷಾ ಸಮಿತಿಯ ಸುಮಾರು ೬೦ ಮಂದಿ ಸ್ವಯಂಸೇವಕರು ಚಂಡೀಗಢದಲ್ಲಿರುವ ಸರ್ಕಾರಿ ಕಛೇರಿಗೆ ನೆನ್ನೆ ನುಗ್ಗುವ ಪ್ರಯತ್ನ ನಡೆಸಿದಾಗ ಪೋಲೀಸರು ಅವರನ್ನು ತಡೆಯಲಾಗಿ ಉಭಯರಿಗೂ ತಿಕ್ಕಾಟವಾಗಿ ೯ ಮಂದಿ ಸ್ವಯಂಸೇವಕರು ಮೂರ್ಛೆ ಹೋದರೆಂದೂ, ಅವರನ್ನು ಆಸ್ಪತ್ರೆಗೆ ಕಳುಹಲಾಯಿತೆಂದೂ ವರದಿಯಾಗಿದೆ. ರಾತ್ರಿ ಹೊತ್ತಿಗೆ ಹಲವರು ಪ್ರಜ್ಞೆ ಪಡೆದರು. ಹಲವು ಸ್ವಯಂಸೇವಕರು ಮಹಿಳಾ ಪೋಲೀಸರ ವೇಷದಲ್ಲಿ ಮುಂದೆ ಮಾಲಿಗೆ ಅದನ್ನು ಪಡೆದು ನಿಲ್ಲಿಸಿದರು. ಕಛೇರಿಯ ಹೆಬ್ಬಾಗಿಲಿನಲ್ಲಿ ೧೧ ಮಂದಿ ಸನ್ಯಾಸಿಗಳು ಕುಳಿತು ಉಪವಾಸ ನಡೆಸುತ್ತಿರುವರು. ಹಿಂದಿ ಭಾಷೆಯನ್ನು ರಕ್ಷಿಸುವ ಸಲುವಾಗಿ ಅವರು ಚಳುವಳಿ ನಡೆಸುತ್ತಿರುವರು. ೧೮ ಜನ ಮುಖಂಡರನ್ನೂ, ಪ್ರಾಂತರನ್ನೂ ಪೋಲೀಸರು ಬಂಧಿಸಿರುತ್ತಾರೆ. ಪ್ರದರ್ಶನಕಾರರಿಗೆ ಬೆಂಬಲವೀಯುತ್ತಿದ್ದ ಜನರು ಉದ್ರೇಕಕಾರಕ ಕೂಗುಗಳನ್ನು ಕೂಗುತ್ತಾ ಎದೆಗಳನ್ನು ಬಡಿದುಕೊಳ್ಳುತ್ತಿದ್ದರು.

ಕೇರಳದ ಜಮೀನುದಾರರ ೨೦೦ ಮೈಲಿ ಪಾದಯಾತ್ರೆ

ಕೇರಳ ಸರ್ಕಾರದವರು ಜಮೀನು ಉಳುಮೆ ಮತ್ತು ನ್ಯಾಯವಾದ ಗುತ್ತಿಗೆಯನ್ನು ನಿಗದಿ ಮಾಡುವ ಮಸೂದೆಯನ್ನು ತರಲು ನಿರ್ಧರಿಸಿರುತ್ತಾರೆ. ಆದರೆ ಭೂ ಮಾಲೀಕತ್ವದ ಪರಮಾವಧಿಯನ್ನು ಇನ್ನೂ ಸರ್ಕಾರದವರು ನಿರ್ಧರಿಸಿಲ್ಲ. ಕೇರಳದ ಸಣ್ಣ ಜಮೀನುದಾರರು ತಮ್ಮ ಕುಂದುಕೊರತೆಗಳನ್ನು ಅಧಿಕಾರಿಗಳಲ್ಲಿ ಹೇಳಿಕೊಳ್ಳಲು ತಿರುಚೂರಿನಿಂದ ಸಧ್ಯದಲ್ಲೇ ೨೦೦ ಮೈಲಿ ದೂರ ಪಾದಯಾತ್ರೆ ಮಾಡಿ ತಿರುವನಂತಪುರಕ್ಕೆ ಹೋಗಲು ನಿರ್ಧರಿಸಿರುತ್ತಾರೆ.

ಬೆಲೆ ಏರಿಕೆ ವಿರುದ್ಧವಾಗಿ ಶಾಸನ ಸಭೆ ಮುಂದೆ ಪ್ರದರ್ಶನ

ಪಶ್ಚಿಮ ಬಂಗಾಳದ ಶಾಸನ ಸಭೆ ಮುಂದೆ ನೆನ್ನೆ ಹಲವು ಮಹಿಳೆಯರೂ ಸೇರಿ ೧,೦೦೦ ಜನರು ಆಹಾರ ಧಾನ್ಯದ ಬೆಲೆ ಏರಿಕೆಯ ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು. ಪೋಲೀಸರು ಪ್ರದರ್ಶನಕಾರರನ್ನು ಭವನದ ಮುಂದೆ ಪ್ರತಿಬಂಧಕಾಜ್ಞೆ ಇರುವ ಪ್ರದೇಶದಲ್ಲಿ ತಡೆದರು. ಅವರಲ್ಲಿ ಹಲವರು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಕುಂದುಕೊರತೆಗಳನ್ನು ನಿವೇದಿಸಿಕೊಳ್ಳಲು ಒಳಕ್ಕೆ ಹೋದರು. ಅವರುಗಳನ್ನು ಬೇರೊಂದು ಸಮಯದಲ್ಲಿ ಸಂಧಿಸುವುದಾಗಿ ಡಾ॥ ಬಿ. ಸಿ. ರಾಯರು ತಿಳಿಸಲಾಗಿ ಮೆರವಣಿಗೆಕಾರರು ಹಿಂದಿರುಗಿದರು.

ಜೋರ್ಡಾನ್ ಸೈನ್ಯದ ದಂಗೆ

ಜೋರ್ಡಾನ್ ನದಿ ಪಶ್ಚಿಮ ಭಾಗದಲ್ಲಿರುವ ಜೋರ್ಡಾನ್ ರಾಜ್ಯದ ಸೈನ್ಯಗಳ ತಂಡವೊಂದು ದಂಗೆಯೆದ್ದಿರುವುದಾಗಿ ತಿಳಿದುಬಂದಿದೆ.

ಮಧ್ಯಪೂರ್ವದ ಪರಿಸ್ಥಿತಿ ಬಗ್ಗೆ ಕಾಮನ್‌ವೆಲ್ತ್ ಪ್ರಧಾನಿಗಳ ಚರ್ಚೆ

ನೆಹರೂರವರಿಂದ ಮಿಲಿಟರಿ ಕೂಟದ ಮನೋಭಾವದ ಖಂಡನೆ

ಲಂಡನ್ನಿನಲ್ಲಿ ಸೇರಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ, ಸೂಯೆಜ್ ಕಾಲುವೆ ಬಿಕ್ಕಟ್ಟಿನ ಪರಿಣಾಮವಾಗಿ ಉಂಟಾದ ಮಧ್ಯಪೂರ್ವದ ಪರಿಸ್ಥಿತಿಯನ್ನು ನೆನ್ನೆ ದೀರ್ಘವಾಗಿ ಚರ್ಚಿಸಲಾಯಿತು. ಅರಬ್ ಪ್ರಪಂಚದಲ್ಲಿ ಪರಿಸ್ಥಿತಿಯು ಉತ್ತಮಗೊಂಡಿರುವುದೆಂದು ಪ್ರಧಾನಿಗಳು ಅಭಿಪ್ರಾಯಪಟ್ಟರು. ಸೂಯೆಜ್ ಕಾಲುವೆ ಕೆಲಸದ ಬಗ್ಗೆ ಈಜಿಪ್ಟ್ ಇತ್ತೀಚೆಗೆ ಮಾಡಿರುವ ಘೋಷಣೆಯನ್ನು ಪರಿಶೀಲಿಸಲಾಯಿತು. ಕಾಲುವೆ ಕಾರ್ಯಾಚರಣೆಯು ಯಾವ ಒಂದು ರಾಷ್ಟ್ರದ ರಾಜಕೀಯಕ್ಕೂ ಸೇರಿರದೇ ಇರಬೇಕೆಂಬ ಅಭಿಪ್ರಾಯವನ್ನು ಹಲವು ಪ್ರಧಾನಿಗಳು ವ್ಯಕ್ತಪಡಿಸಿ, ಭದ್ರತಾ ಸಮಿತಿಯು ಕಳೆದ ಅಕ್ಟೋಬರಿನಲ್ಲಿ ಈ ಬಗ್ಗೆ ಮಾಡಿರುವ ಸೂಚನೆಯಂತೆ ನಡೆದುಕೊಳ್ಳಬೇಕೆಂದು ಸಲಹೆಮಾಡಿದರು. ಸಿರಿಯಾ, ಈಜಿಪ್ಟ್ ಮತ್ತು ಜೋರ್ಡಾನಿನ ಈಚಿನ ಬಿಕ್ಕಟ್ಟು ಪರಿಸ್ಥಿತಿಯನ್ನೂ ಚರ್ಚಿಸಲಾಯಿತು.

ಪ್ರಧಾನಿ ನೆಹರೂರವರು ಮಾತನಾಡಿ, ಮಧ್ಯ ಪೂರ್ವ ಸಮಸ್ಯೆ ನಿವಾರಣೆಗೆ ಮಿಲಿಟರಿ ಒಪ್ಪಂದಗಳನ್ನು ಮಾಡಿಕೊಳ್ಳುವ ಮಾರ್ಗವು ಸರಿಯಲ್ಲವೆಂದು ಸೂಚಿಸಿದರು. ಬಾಗ್ದಾದ್ ಮತ್ತು ಸೀಟೊ ಒಪ್ಪಂದಗಳಿಂದ ಭಾರತದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಧಕ್ಕೆಯಾಗಿ ಮಿಲಿಟರಿ ವೆಚ್ಚವು ಹೆಚ್ಚಾಯಿತೆಂದು ನುಡಿದರು.

ಬೊಂಬಾಯಿ ಶಾಸನ ಸಭೆಯಲ್ಲಿ ವಿರೋಧ ಪಕ್ಷದವರ ಸಭಾತ್ಯಾಗ

ಭಾಷಾವಾರು ಪ್ರಾಂತಗಳ ಸಂಬಂಧವಾದ ಗಲಭೆಗಳಲ್ಲಿ ಪೋಲೀಸರ ಗುಂಡಿನೇಟಿನ ಬಗ್ಗೆ ನ್ಯಾಯಾಧಿಕಾರಿಗಳಿಂದ ವಿಚಾರಣೆ ನಡೆಸಬೇಕೆಂದು ಬೊಂಬಾಯಿ ವಿಧಾನ ಸಭೆಯಲ್ಲಿ ನೆನ್ನೆ ನಿರ್ಣಯವನ್ನು ತಂದು ಅದರ ಚರ್ಚೆಯಾಗುತ್ತಿದ್ದಾಗ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು. ಅವರು ಹೊರಗೆ ಹೋದಮೇಲೆ ನಿರ್ಣಯವನ್ನು ತಿರಸ್ಕರಿಸಲಾಯಿತು. ಸಭೆಯಲ್ಲಿ ಓಟು ತೆಗೆದುಕೊಳ್ಳಲು ಸದಸ್ಯರನ್ನು ವಿಭಾಗಿಸಬೇಕೆಂದು ಒತ್ತಾಯಪಡಿಸಿದಾಗ ಅಧ್ಯಕ್ಷರು ಅದಕ್ಕೆ ಅವಕಾಶವೀಯದಿದ್ದುದೇ ಸಭಾತ್ಯಾಗಕ್ಕೆ ಕಾರಣ.

ದೇಶಮುಖ್‌ರವರಿಗೆ ಅಸ್ವಸ್ಥತೆ

ವಿಶ್ವವಿದ್ಯಾಲಯದ ಗ್ರಾಂಟ್ ಸಮಿತಿ ಅಧ್ಯಕ್ಷರಾದ ಸಿ. ಡಿ. ದೇಶಮುಖ್‌ರವರು ನಗರಕ್ಕೆ ಆಗಮಿಸಿದಾಗಿನಿಂದ ಅಸ್ವಸ್ಥರಾಗಿ ಗವರ್ನಮೆಂಟ್ ಹೌಸಿನಲ್ಲಿ ಹಾಸಿಗೆ ಹಿಡಿದಿರುವರು. ಅವರು ತಮ್ಮ ಕಾರ್ಯಕ್ರಮಗಳನ್ನು ರದ್ದುಗೊಳಿಸಿರುತ್ತಾರೆ. ನೆನ್ನೆ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಲಿಲ್ಲ. ಇಂದಿನ ಕಾರ್ಯಕ್ರಮಗಳೂ ರದ್ದಾಗಿವೆ. ನಾಳೆ ಅವರು ಬೆಂಗಳೂರಿಗೆ ಹೋಗುವುದಿಲ್ಲ. ನಾಳಿದ್ದು ಘಟಿಕೋತ್ಸವದಲ್ಲಿ ಭಾಗವಹಿಸಲಿರುವರು.

ಫಾರ್ಮೋಸಾ ತೀರ ಪ್ರದೇಶದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ

ಕ್ವಿಮಾಯ್ ಮೇಲೆ ಕಮ್ಯೂನಿಸ್ಟ್ ಚೀಣದ ಫಿರಂಗಿ ಧಾಳಿ ಪರಿಣಾಮ

ರಾಷ್ಟ್ರೀಯ ಚೀನದ ಕ್ವಿಮಾಯ್ ದ್ವೀಪದ ಮೇಲೆ ಕಮ್ಯೂನಿಸ್ಟರು ಕಳೆದ ವಾರ ಮೂರಾವರ್ತಿ ಭಾರಿ ಫಿರಂಗಿ ಧಾಳಿ ನಡೆಸಿದ ಸಂಬಂಧವಾಗಿ ಫಾರ್ಮೋಸಾ ಜಲಸಂಧಿ ಪ್ರದೇಶದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿಯುಂಟಾಗಿರುವುದೆಂದೂ, ಅದನ್ನು ಕುರಿತು ಚರ್ಚಿಸಲು ಅಮೆರಿಕದ ಪೆಸಿಫಿಕ್ ಸಾಗರದ ನೌಕಾ ಬಲಗಳ ಮುಖ್ಯಾಧಿಕಾರಿ ಫೆಲಿಕ್ಸ್ ಸ್ಟಂಪ್‌ರವರು ಫಾರ್ಮೋಸಾ ರಾಜಧಾನಿ ಟೈಪೆಗೆ ಆಗಮಿಸಿರುವರೆಂದೂ ವರದಿಯಾಗಿದೆ. ಚೀಣದ ಭೂ ಭಾಗ ಹೊಂದಿಕೊಂಡು ಇರುವ ಮಟ್ಸು ದ್ವೀಪದ ಮೇಲೂ ನೆನ್ನೆ ಬೆಳಿಗ್ಗೆ ಕಮ್ಯೂನಿಸ್ಟರು ಫಿರಂಗಿಗಳನ್ನು ಹಾರಿಸಿದರು. ಕ್ವಿಮಾಯ್ ದ್ವೀಪಸ್ತೋಮದ ಟಾಟಾನ್ ದ್ವೀಪದ ಮೇಲೆ ಕಮ್ಯೂನಿಸ್ಟ್ ಫಿರಂಗಿ ನಾಲ್ಕುಗುಂಡನ್ನು ಹಾರಿಸಿದುವು. ೨೦ ನಿಮಿಷಗಳಲ್ಲಿ ೩೦೦ ಶೆಲ್ಲುಗಳನ್ನು ಹೊಡೆಯಲಾಯಿತೆಂದೂ, ಮಧ್ಯಾಹ್ನ ಕ್ವಿಮಾಯ್ ಮೇಲೆ ಬಲವಾದ ಫಿರಂಗಿ ಧಾಳಿಯಾಯಿತೆಂದೂ ಹೇಳಲಾಗಿದೆ. ಕಮ್ಯೂನಿಸ್ಟರು ಹಾರಿಸಿದ ೩,೦೦೦ ಫಿರಂಗಿಗಳಿಗೆ ಪ್ರತಿಯಾಗಿ ರಾಷ್ಟ್ರೀಯರು ೧,೦೦೦ ಗುಂಡನ್ನು ಹಾರಿಸಿ ಉತ್ತರ ಕೊಟ್ಟಿರುವರು.

ಸಂಸ್ಥಾನ ಸರ್ಕಾರಗಳು ಹೊಸ ಉದ್ಯಮಗಳಿಗೆ ಕೈಹಾಕದಂತೆ ಸಲಹೆ

ಭಾರತ ಸರ್ಕಾರಕ್ಕೆ ಹಣಕಾಸು ಮಂಡಲಿಯವರು ತಮ್ಮ ವರದಿಯನ್ನು ಒಪ್ಪಿಸಿದ್ದಾರೆ. ಅದರ ಮೇಲೆ ಭಾರತ ಸರ್ಕಾರದವರು ನಿರ್ಧಾರ ಕೈಗೊಳ್ಳುವವರೆಗೆ ಸಂಸ್ಥಾನ ಸರ್ಕಾರಗಳು ಹೊಸ ಯೋಜನೆಗಳನ್ನು ಕೈಗೊಳ್ಳಬಾರದೆಂದು ಮಂಡಲದ ಅಧ್ಯಕ್ಷ ಕೆ. ಸಂತಾನಂರವರು ಸೂಚಿಸಿರುತ್ತಾರೆ.

ಸಂಸ್ಥಾನದಲ್ಲಿ ಫ್ಲೂ ಇಳಿಮುಖ

ಬೆಂಗಳೂರು ೨೮

ಸಂಸ್ಥಾನದಲ್ಲಿ ಇನ್ಫ್ಲುಯೆಂಜಾ ವ್ಯಾಧಿಯು ಇಳಿಮುಖವಾಗಿರುವುದೆಂದು ಆರೋಗ್ಯ ಮಂತ್ರಿ ಶ್ರೀ ಆರ್. ಎಂ. ಪಾಟೀಲರು ನೆನ್ನೆ ತಿಳಿಸಿದರು. ನೆನ್ನೆ ೧,೮೦೮ ಮಂದಿಗೆ ಹೊಸದಾಗಿ ವ್ಯಾಧಿ ತಗಲಿರುವುದೆಂದು ನಗರದ ನಾನಾ ಕಡೆಗಳಿಂದ ವರದಿ ಬಂದಿದೆ. ನಗರದಲ್ಲಿ ಒಟ್ಟು ೩೦,೧೧೨ ಜನರು ರೋಗಪೀಡಿತರಾಗಿರುವರು.

ಇನ್ನೂ ೧೦ ದಿನಗಳು ಶಾಲಾ ಕಾಲೇಜುಗಳು ಬಂದ್ ಆಗುವ ಸಂಭವ

ಇನ್ಫ್ಲುಯೆಂಜಾ ಕಾರಣವಾಗಿ ಸಂಸ್ಥಾನದ ನಾನಾ ಶಾಲಾ ಕಾಲೇಜುಗಳನ್ನು ಮುಚ್ಚಿಸಿರುವುದನ್ನು ಇನ್ನೂ ಹತ್ತು ದಿನಗಳ ಕಾಲ ಮುಚ್ಚುವಂತೆ ಆರೋಗ್ಯ ಇಲಾಖಾ ಡೈರೆಕ್ಟರು ವಿದ್ಯಾಧಿಕಾರಿಗಳಿಗೆ ಸಲಹೆ ಮಾಡಿರುವುದಾಗಿ ವರದಿಯಾಗಿದೆ.

ದೆಹಲಿಗೆ ಆರೋಗ್ಯ ಮಂತ್ರಿಗಳ ಪ್ರಯಾಣ

ಸಂಸ್ಥಾನದ ಆರೋಗ್ಯ ಮಂತ್ರಿ ಶ್ರೀ ಆರ್. ಎಂ. ಪಾಟೀಲರು ದೆಹಲಿಯಲ್ಲಿ ನಾಳೆಯಿಂದ ಸೇರಲಿರುವ ಆರೋಗ್ಯ ಸಚಿವರುಗಳ ಸಭೆಯಲ್ಲಿ ಭಾಗವಹಿಸಲು ಇಂದು ತೆರಳಿದರು.

ವಿಮಾ ಸಂಸ್ಥೆ ಮೋಸದ ಮೊಕದ್ದಮೆಯಲ್ಲಿ ನೆಹರೂ ಸಾಕ್ಷ್ಯ

ಎಂಪೈರ್ ಆಫ್ ಇಂಡಿಯಾ ಜೀವ ವಿಮಾ ಸಂಸ್ಥೆಗೆ ೭೭ ಲಕ್ಷ ರೂ. ನಷ್ಟ ಮೋಸ ಮಾಡಲು ಪಿತೂರಿ ನಡೆಸಿದರೆಂದು ಸೇಠ್ ದಾಮೋದರ ಸ್ವರೂಪ್ ಮತ್ತು ಇತರ ೮ ಜನರ ಮೇಲೆ ಹೂಡಿರುವ ಮೊಕದ್ದಮೆಯಲ್ಲಿ ಸೇಠರ ಪರವಾಗಿ ಪ್ರಧಾನಿ ನೆಹರೂ ಮತ್ತು ಬೊಂಬಾಯಿ ಗವರ್ನರ್ ಶ್ರೀಪ್ರಕಾಶರವರನ್ನು ಕಪೂರ್ ಮೇಲೆ ಸಾಕ್ಷ್ಯವೀಯಲು ಕರೆಯಲಾಗುವುದು. ದಾಮೋದರ ಸ್ವರೂಪ ಸೇಠರ ನಡತೆ ಬಗ್ಗೆ ಸಾಕ್ಷ್ಯವೀಯಲು ಅವರನ್ನು ಕೋರಲಾಗಿದೆ. ೯ ಜನರ ಮೇಲೆ ೭೭ ಲಕ್ಷ ರೂ. ಬಾಂಡುಗಳನ್ನು ವರ್ಗಾಯಿಸಿ ನಂಬಿಕೆ ದ್ರೋಹ ನಡೆಸಿದ ಬಗ್ಗೆಯೂ ಆಪಾದನೆ ಮಾಡಲಾಗಿದೆ. ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಪರ ೧೮೮ ಮಂದಿ ಸಾಕ್ಷ್ಯವಿತ್ತಿರುವರು.

ಸಿರಿಯದಿಂದ ಸಾದಿ ಅರೇಬಿಯಾ ರಾಯಭಾರಿ ವಾಪಸು

ಸಿರಿಯದ ಅಧಿಕಾರಿಗಳು ಮತ್ತು ಪತ್ರಿಕೆಗಳು ಸಾದಿ ಅರೇಬಿಯಾ ಸರ್ಕಾರವನ್ನು ದೂಷಿಸುತ್ತಿರುವುದನ್ನು ಪ್ರತಿಭಟಿಸಲು ಸಿರಿಯಾದಲ್ಲಿರುವ ಅರೇಬಿಯಾ ರಾಯಭಾರಿಯನ್ನು ಲೆಬನಾನಿನ ಜೆರೂತಿಗೆ ಹೋಗುವಂತೆ ಸೂಚಿಸಲಾಗಿದೆ.

ವಿವಾಹಕ್ಕಾಗಿ ಸರ್ಕಾರದ ಸಾಲ

ಮಧ್ಯಮ ವರ್ಗದ ಜನರು ತಮ್ಮ ಹೆಣ್ಣು ಮಕ್ಕಳ ವಿವಾಹ ಮಾಡುವಸಲುವಾಗಿ ಸರ್ಕಾರದವರು ಸಾಲ ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಪಶ್ಚಿಮ ಬಂಗಾಳ ಶಾಸನ ಸಭೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಸದಸ್ಯ ದಾಶರಥಿ ರಥ್‌ರವರು ತಿಳಿಸಿರುತ್ತಾರೆ. ಶಾಸನ ಸಭಾಸದಸ್ಯರಿಂದಲೇ ಅದನ್ನು ಆರಂಭಿಸಬಹುದೆಂದೂ ಅವರು ಹೇಳಿರುವರು.

ನ್ಯಾಷನಲ್ ಸ್ಪೋರ್ಟ್ಸ್ ಕ್ಲಬ್ಬಿನ ಸಭೆ

ನಗರದ ನ್ಯಾಷನಲ್ ಸ್ಪೋರ್ಟ್ಸ್ ಕ್ಲಬ್ಬಿನ ಸರ್ವ ಸದಸ್ಯರ ಸಭೆಯು ಕಳೆದ ಶನಿವಾರ ನಡೆದು ಪ್ರಸಕ್ತ ಸಾಲಿಗೆ ಶ್ರೀ ಬಿ. ಎಸ್. ಹಿರಣ್ಣಯ್ಯನವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಯು ನಾಗರಾಜಭಟ್ ಮತ್ತು ಬಿ ಎಚ್. ರಾಮಸ್ವಾಮಿಯವರು ಉಪಾಧ್ಯಕ್ಷರುಗಳಾಗಿಯೂ, ಶ್ರೀಗಳಾದ ಎಂ ಎಸ್ ಶ್ರೀಕಂಠ ಮತ್ತು ವಿ. ಎ. ಶರ್ಮರವರು ಜಂಟಿ ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಶ್ರೀಗಳಾದ ಆರ್. ರಾಜಗೋಪಾಲ್, ಅನಂತಪದ್ಮನಾಭ, ಎಂ. ಎಸ್. ನಾಗರಾಜ, ಗುಪ್ತ ಮತ್ತು ಸೀತಾರಾಂರವರು ಸದಸ್ಯರುಗಳಾಗಿಯೂ; ರಂಗಣ್ಣ, ನಂಜುಂಡಸ್ವಾಮಿ ಮತ್ತು ಆಶೋಕ್‌ರವರುಗಳು ಕ್ರಮವಾಗಿ ಕೊಕ್ಕೊ, ಕಬಡ್ಡಿ ಮತ್ತು ವ್ಯಾಯಾಮ ಕ್ಯಾಪ್ಟನ್‌ಗಳಾಗಿಯೂ ಆರಿಸಲ್ಪಟ್ಟರು.

ಬೇವಾರಸಿ ಠೇವಣಿಗಳು ವೈಯಕ್ತಿಕೀಯ ಪತ್ರಿಕೆಗೆ

ಮೈಸೂರು ಸರ್ಕಾರದವರು ಗೆಜೆಟ್ ಪ್ರಕಟಣೆಯೊಂದನ್ನು ಹೊರಡಿಸಿ ಆಸ್ಪತ್ರೆಗಳಲ್ಲಿ ಮೃತಪಟ್ಟ ವಾರಸುದಾರರು ಇಲ್ಲದ ಶವಗಳನ್ನು ಶಾಲೆಗಳಿಗೆ ಪರೀಕ್ಷೆಗಾಗಿ ಒಪ್ಪಿಸಲಾಗುವುದೆಂದು ತಿಳಿಸಿರುವರು. ಈ ಬಗ್ಗೆ ಮಸೂದೆಯೊಂದು ಪ್ರಕಟವಾಗಿದೆ.

ಬಿಕರಿಗೆ ಸಿದ್ಧವಾಗಿದೆ

ಮೈಸೂರು ಸೌತ್ ಮಾನಂದವಾಡಿ ರಸ್ತೆಯಲ್ಲಿ, ಹಾಲಿ ಥಾರ್ಕ್ ಸಾ ಮಿಲ್ ಇಟ್ಟಿರುವ 250'x60 ಅಡಿ ಉಳ್ಳ ಸೈಟು. ಆಫೀಸ್ ರೂಂ, ಮಿಲ್‌ಷೆಡ್, ಕಾಂಪೌಂಡು, ನಲ್ಲಿ, ಕಕ್ಕಸು ಇತ್ಯಾದಿ ಉಳ್ಳದ್ದಾಗಿದೆ. ಒಳ್ಳೆಯ ವ್ಯಾಪಾರ ಸ್ಥಳವಾಗಿರುತ್ತೆ. ವಿವರಗಳಿಗೆ ಈ ಕೆಳಗೆ ಕಂಡವರಲ್ಲಿ ವಿಚಾರಿಸಿ

ಎಚ್. ತಮ್ಮಯ್ಯ,
ಟಿಂಬರ್ ಮರ್ಚೆಂಟ್, ಈದಿಗ್ಗಾ,
ನ್ಯೂ ಬೋಂಬೂ ಬಜಾರ್, ಮೈಸೂರು.

Edited, Printed and Published by A. R. Nagarajan at Sadhvi Press, D[illegible] Road, Mysore

ಮದ್ರಾಸಿನಲ್ಲಿ ಆಗಸ್ಟ್ ೧ ರಿಂದ ಸಮಾಜವಾದಿಗಳ ಚಳುವಳಿ

ಸಮಾಜವಾದಿ ಪಕ್ಷದವರು ಮದ್ರಾಸು ಸಂಸ್ಥಾನದಲ್ಲಿ ಬರುವ ಆಗಸ್ಟ್ ೧ರಿಂದ [ಕಾ]ನೂನು ಭಂಗ ಚಳುವಳಿಯನ್ನು ನಡೆಸುವರು. ಈ ವಿಚಾರವನ್ನು ಕುರಿತು ಪಕ್ಷದ ನಾಯಕ ಡಾ|| ಲೋಹಿಯಾರವರು ಹೇಳಿಕೆಯೊಂದನ್ನಿತ್ತು ಅದರ ಗುರಿಯನ್ನು ವಿವರಿಸಿರುತ್ತಾರೆ. ಸಾರ್ವಜನಿಕವಾಗಿ ಇಂಗ್ಲಿಷ್ ಭಾಷೆಯಿರುವವರೆಗೆ ದೇಶದಲ್ಲಿ ಸಮಾಜವಾದವಾಗಲೀ, ಪ್ರಜಾಸತ್ತೆಯಾಗಲೀ ಅಥವಾ ಪ್ರಾಮಾಣಿಕತನವಾಗಲೀ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಹಿಂದಿ ಮತ್ತು ತಮಿಳನ್ನು ಅಧಿಕಾರಿ ಭಾಷೆಗಳನ್ನಾಗಿ ಮಾಡಬೇಕೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ.

ಒರಿಸ್ಸಾ ಮಾಜಿ ರಾಜರುಗಳ ಜಮೀನು ಮೇಲೆ ಕಂದಾಯ

ಒರಿಸ್ಸಾದ ಮಾಜಿ ರಾಜರುಗಳ ಜಮೀನುಗಳ ಮೇಲೆ ಕಂದಾಯವನ್ನು ವಿಧಿಸಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ. ಇದುವರೆಗೆ ಆ ಜಮೀನುಗಳಿಗೆ ಕಂದಾಯವಿರಲಿಲ್ಲ. ಇದಕ್ಕಾಗಿ ಪ್ರತ್ಯೇಕ ಮಸೂದೆಯೊಂದನ್ನು ತರಲಾಗುವುದು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಮುಖವೀಣೆ ೭-೧೫ ಮತ್ತು ೮-೧೫ ಬೆಜ್ ಅಲ್. ಲೀಲಾವತಿ-ಕನ್ನಡ ಗೀತೆಗಳು. ೭-೩೦ ಸಹನಾಯ್. ಮಧ್ಯಾಹ್ನ ೧೨ ಟಿ ನಾಗಮ್ಮ-ಸಂಗೀತ ೧೨-೩೦ ಬಾಲ ಜಗತ್. ೧-೩೦ ಪಿ ಕಾಳಿಂಗರಾವ್-ರೀಕಾರ್ಡು ೧-೫೦ ಮುಖವೀಣೆ ಸಂಜೆ ೬-೧೦ ವಚನ ಗಾನ ೬-೩೦ ಎಂ ಎಸ್ ಚೌಡಪ್ಪ-ಪಿಟ್ಟೀಲು. ೮ ವಿಧಾನ ಮಂಡಲದಲ್ಲಿ. ೮-೧೫ ಟಿ. ನಾಗಮ್ಮ-ಸಂಗೀತ ೮-೩೦ ರೇಡಿಯೊ ನ್ಯೂಸ್ ರೀಲ್ ೮-೪೦ ಪ್ರಸಾರ ಗೀತೆ. ೯-೧೫ ಕನ್ನಡ ಗೀತೆ. ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ಅಲಿ ಅಕ್ಬರ್ ಖಾನ್ ಸರೋದ್

ಮೈಸೂರು ಪೇಟೆ ಧಾರಣೆ

ಬಂಗಾರ ಪವನ್ನು	೪೪ ೦೦	೪೪ ೬೩
ರತ್ನ ಚೂರು	೨೬ ೭೫	೪೨ ೦೩
ಬಂಗಾರ ತ	೨೮ ೭೫	೨೮ ೮೭
ರಾಗಿ	೪೪ ೦೦	೪೯ ೦೩
ಕಡಲೆಕಾಯಿ	೧೨ ೧೨	೨೦ ೭೫
ಹುಚ್ಚೆಳ್ಳು	೪೪ ೭೫	
ಎಳ್ಳು	೭೪ ೫೦	೭೯ ೨೫
ಹುರುಳಿ	೪೪ ೫೦	೪೯ ೬೨
ಉದ್ದು	೪೫ ೦೦	೫೬ ೦೦
ಹಲಸಂದೆ	೪೧ ೧೨	೫೬ ೦೦
ಅವರೆ	೫೨ ೮೭	೫೫ ೦೦
ಕೆಂಪಿನ ಬೀಜ	೪೦ ೧೨	
ಹುಣಿಸೇಹಣ್ಣು	೪ ೨೫	೪ ೬೯
ಹುಣಿಸೆಕಾಯಿ	೧೨ ೩೭	
ತೆಂಗಿನಕಾಯಿ	೧೪೦ ೦೦	೨೨೧ ೫೦

ಮಹಾಕವಿ ಲಕ್ಷ್ಮೀಶ ವಿರಚಿತ
ಕನ್ನಡ ಜೈಮಿನಿ ಭಾರತ
1957 Edition : Re 1-0-0
ಶ್ರೀ ರಾಜಶೇಖರಂರವರ
ಭಗವಾನ್ ಬುದ್ಧ : 1-0-0
ಕೃಷ್ಣಾ ಕಂಪೆನಿ,
ಸಾರಿಟಿ ರಸ್ತೆ, ಮೈಸೂರು

ಜಗದಾಂಬಾ ಶಿಶುವಿಹಾರ
ವಿಜಾಸ್ಸ್ ರೋಡ್, ಮೈಸೂರು

ಬೇಸಿಗೆ ರಜಾ ಕಳೆದನಂತರ ಮೇಲ್ಕಂಡ ಶಿಶುವಿಹಾರವನ್ನು ತೆರೆಯಲಾಗಿದೆ. ಮಾಂಟೆಸ್ಸರಿ ಮೊದಲನೆಯ ತರಗತಿಯವರೆಗೂ ಆಟಗಳ ಮೂಲಕವೇ ಓದು ಬರಹದ ಶಿಕ್ಷಣವನ್ನು ಇಲ್ಲಿ ಕೊಡಲಾಗುತ್ತಿದೆ. ಮಹಾಜನರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ,
ಡೈರೆಕ್ಟರ್

ಟ್ಯುನೀಷಿಯಾ ಸೈನ್ಯಗಳಿಂದ ಆಲ್ಜೀರಿಯ ದಂಗೆಕೋರರ ಕೊಲೆ

ಟ್ಯುನೀಷಿಯದ ರಾಷ್ಟ್ರೀಯ ಸೇನಾ ಪಡೆಯವರು ತಮ್ಮ ದೇಶಕ್ಕೆ ಗಡಿ ದಾಟಿ ಓಡಿಬಂದ ೫೦ ಮಂದಿ ಆಲ್ಜೀರಿಯಾ ದಂಗೆಕೋರರನ್ನು ಕೊಂದುಹಾಕಿರುವರೆಂದು ವರದಿಯಾಗಿದೆ. ೨೦೦ ಜನರು ಆ ರೀತಿ ಓಡಿಬಂದಿದ್ದರೆಂದೂ, ಉಳಿದವರನ್ನು ಸೆರೆ ಹಿಡಿಯಲಾಗಿದೆಯೆಂದೂ ಹೇಳಲಾಗಿದೆ.

ಗ್ರೀಸಿನಲ್ಲಿ ಅಣು ವಿಮಾನ ನೆಲೆ?

ಗ್ರೀಸಿನಲ್ಲಿ ಅಣು ವಿಮಾನ ನೆಲೆಗಳನ್ನು ಏರ್ಪಡಿಸಲಾಗುವುದೆಂದು ಗೊತ್ತಾಗಿದೆ. ಉತ್ತರ ಅಟ್ಲಾಂಟಿಕ್ ಸಾಗರದ ರಕ್ಷಣಾ ಕೂಟದ ವ್ಯವಸ್ಥೆ ಅಂಗವಾಗಿ ಈ ಕೆಲಸವನ್ನು ಕೈಗೊಳ್ಳಲಾಗುತ್ತದೆಂದೂ ಹೇಳಲಾಗಿದೆ. ಆದರೆ ಗ್ರೀಸಿನಲ್ಲಿರುವ ಅಮೆರಿಕಾ ರಾಯಭಾರ ಕಛೇರಿಯು ವರದಿಯನ್ನು ನಿರಾಕರಿಸಿದೆ.

ಜಪಾನಿನಲ್ಲಿ ಬಿರುಗಾಳಿಯಿಂದ ೭೧ ಸಾವಿರ ಮನೆಗಳಿಗೆ ಜಖಂ

ಜಪಾನಿನ ಪಶ್ಚಿಮ ಭಾಗದಲ್ಲಿ ನೆನ್ನೆ ಬೀಸಿದ ಭಾರಿ ಬಿರುಗಾಳಿಯ ಪರಿಣಾಮವಾಗಿ ಒಬ್ಬರು ಸತ್ತು, ಇಬ್ಬರಿಗೆ ಗಾಯಗಳಾದುವು ೭೧ ಸಾವಿರ ಮನೆಗಳಿಗೆ ಜಖಂ ಆಗಿ, ಎರಡು ಸೇತುವೆಗಳು ನಾಶವಾಗಿರುವುವೆಂದು ಹೇಳಲಾಗಿದೆ.

ಹೊಸ ನೋಟುಗಳು

ರಿಸರ್ವ್ ಬ್ಯಾಂಕ್ ಗವರ್ನರರ ರುಜುವುಳ್ಳ ಹೊಸ ನೂರು ರೂಪಾಯಿ ನೋಟುಗಳನ್ನು ಶೀಘ್ರದಲ್ಲೇ ಚಲಾವಣೆಗೆ ಕೊಡಲಾಗುವುದು. ಹಿಂದಿನ ನೋಟುಗಳೂ ಸಹಾ ಚಲಾವಣೆಯಲ್ಲಿರುವುವು. ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿಯವರ ರುಜುವುಳ್ಳ ಹೊಸ ೧ ರೂ. ನೋಟು ಜಾರಿಗೆ ಬರಲಿದೆ

ರಸ್ತೆಯಲ್ಲಿ ಮುರಿದ ದಿಮ್ಮಿಗಳಿಂದ ಅಪಾಯ ಸಂಭವ

ನಗರದ ಮಾನಂದವಾಡಿ ರಸ್ತೆಯಲ್ಲಿ ಅನೇಕ ಮರದ ಡಿಪೋಗಳೂ ಮತ್ತು ಸಾ ಮಿಲ್ಲುಗಳೂ ಇವೆ. ಅದೇ ರಸ್ತೆ ಮೂಲಕ ರೈಲ್ವೆ ವರ್ಕ್‌ಷಾಪ್ ನೌಕರರೂ ಮತ್ತು ಗಂಧದೆಣ್ಣೆ ಕಾರ್ಖಾನೆ ನೌಕರರೂ ಕೆಲಸಕ್ಕೆ ಹೋಗಬೇಕಾಗಿದೆ. ರಸ್ತೆಯು ಯಾವಾಗಲೂ ಜನಭರಿತವಾಗಿರುತ್ತದೆ. ವಾಹನ ಸಂಚಾರವೂ ಸಹ ತುಂಬಾ ಇರುತ್ತದೆ. ಆಲ್ಲಿ ಡಿಪೋಗಳ ಮಾಲೀಕರು ಫುಟ್‌ಪಾತುಗಳ ಮೇಲೆ ದಿಮ್ಮಿಗಳನ್ನು ಸಾಲಾಗಿ ಜೋಡಿಸಿರುತ್ತಾರೆ. ಅವನ್ನು ತೆಗೆಸಿ ರಸ್ತೆ ಸಂಚಾರಕ್ಕೆ ಅನುಕೂಲಪಡಿಸುವಂತೆ ಆರು ತಿಂಗಳ ಹಿಂದೆಯೇ ಪೌರಸಭಾಧ್ಯಕ್ಷರನ್ನು ಕೆಲಸಗಾರರು ಕೋರಿ, ಹಾಗೆ ಮಾಡದಿದ್ದರೆ ಪ್ರಾಣಾಪಾಯವಾಗುವುದೆಂದೂ ತಿಳಿಸಲಾಗಿತ್ತು. ಆದರೆ ಈವರೆಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಕಳೆದ ೨೫ನೇ ತಾರೀಖು ಬೆಳಿಗ್ಗೆ ಅದೇ ರಸ್ತೆಯಲ್ಲಿ ಸಿದ್ದೋಜಿರಾವ್ ಎಂಬ ರೈಲ್ವೆ ಕೆಲಸಗಾರರು ಸರ್ಕಾರಿ ಬಸ್ಸಿಗೆ ಸಿಕ್ಕಿ ಮೃತಪಟ್ಟಿರುತ್ತಾರೆ. ಕಾಲು ದಾರಿಯಲ್ಲಿ ತೊಲೆಗಳಿಲ್ಲದಿದ್ದ ಪಕ್ಷದಲ್ಲಿ ಅವರಿಗೆ ಮರಣ ಸಂಭವಿಸುವ ಕಾರಣವಿರಲಿಲ್ಲ. ಈಗಲಾದರೂ ಪೌರಸಭೆಯವರು ಈ ಕಡೆಗೆ ಗಮನವಿತ್ತು ಫುಟ್‌ಪಾತಿನಿಂದ ಮರದ ದಿಮ್ಮಿಗಳನ್ನು ತೆಗೆಸುವರೆಂದು ನಿರೀಕ್ಷಿಸಲಾಗಿದೆ -ಎಂಬುದಾಗಿ ರೈಲ್ವೆ ವರ್ಕ್‌ಷಾಪ್ ನೌಕರರ ಸಂಘದ ಕಾರ್ಯದರ್ಶಿಯವರು ಪತ್ರ ಬರೆದು ತಿಳಿಸಿರುತ್ತಾರೆ.

ಹಣದೊಡನೆ ಪರಾರಿಯಾದ ಪೌರಸಭಾ ನೌಕರನ ಬಂಧನ

ಬೆಂಗಳೂರು ೨೬

ಇಲ್ಲಿನ ಪೌರಸಭೆಗೆ ಸೇರಿದ ೧೬,೦೦೦ ರೂ. ಗಳನ್ನು ತೆಗೆದುಕೊಂಡು ಪರಾರಿಯಾಗಿದ್ದ ಅಸಿಸ್ಟೆಂಟ್ ಕ್ಯಾಷಿಯರ್ ಬಿ ಎಸ್. ಎಸ್. ಜೈನ್ ಎಂಬಾತನನ್ನು ಪೊಲೀಸರು ಜುನಾಗಢದಲ್ಲಿ ಪತ್ತೆ ಮಾಡಿ ಬಂಧಿಸಿರುವುದಾಗಿ ವರದಿಯಾಗಿದೆ. ಬೆಂಗಳೂರು ಪೋಲೀಸರು ಅವನ ಪತ್ತೆಗಾಗಿ ಬೊಂಬಾಯಿ ಮತ್ತು ಗುಜರಾತುಗಳಲ್ಲಿ ಸಂಚರಿಸಿದ್ದರು

ಷೋಲಾಪುರದಲ್ಲಿ ಫ್ಲೂವಿನಿಂದ ೧೨ ಮರಣಗಳು

ಷೋಲಾಪುರದಲ್ಲಿ ಕಳೆದ ೧ ವಾರದಲ್ಲಿ ಇನ್‌ಫ್ಲುಯೆಂಜಾದಿಂದ ೧೨ ಜನರು ಮಡಿದಿರುವರೆಂದು ವರದಿಯಾಗಿದೆ.

ನಗರದಲ್ಲಿ ಎರಡು ಸ್ಕೌಟು ಸಂಘಗಳು

ನಗರದ ಸ್ಕೌಟು ಇಲಾಖೆಯ ಅಧಿಕಾರಿಗಳು ಮತ್ತು ಸ್ಕೌಟು ಮತ್ತು ಗರ್ಲ್ ಗೈಡುಗಳ ಸಭೆಯು ಕಳೆದ ೨೨ನೇ ತಾರೀಖು ಬನುಮಯ್ಯನವರ ಶಾಲೆಯಲ್ಲಿ ನಡೆದು ಉತ್ತರ ಮತ್ತು ದಕ್ಷಿಣ ಭಾಗಗಳ ಎರಡು ಸ್ಕೌಟು ಸಂಸ್ಥೆಗಳನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ರೆ| ಫಾದರ್ ಅಡಿಯೊರವರು ಉತ್ತರ ಸಂಸ್ಥೆಯ ಅಧ್ಯಕ್ಷರಾಗಿರುವರು. ಶ್ರೀಮತಿ ಸಯಿದಾ ಖಾದರ್ ಮತ್ತು ಶ್ರೀ ಎಂ ಆರ್. ರಾಮಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಪಠ್ಯಂ ಕೃಷ್ಣಯ್ಯಂಗಾರ್‌ರವರು ಕಾರ್ಯದರ್ಶಿ ಮತ್ತು ಖಜಾಂಚಿಯಾಗಿಯೂ ಆರಿಸಲ್ಪಟ್ಟರುವರು. ದಕ್ಷಿಣ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ಚೌಹನ್ಯ, ಉಪಾಧ್ಯಕ್ಷರಾಗಿ ಶ್ರೀಮತಿ ಗ್ರೇಸ್ ಅರ್. ಪಿಚ್ಚಮುತ್ತು ಮತ್ತು ಶ್ರೀ ಎಂ. ಎಸ್. ತಿರುಮಲಾಚಾರ್ ಮತ್ತು ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಶ್ರೀ ಸಿ ರಾಮಚಂದ್ರರಾಯರು ಚುನಾಯಿತರಾಗಿರುವರು.

ಪುರಾಣ ಪ್ರವಚನ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯೀ ಮಂದಿರದಲ್ಲಿ ಕಳೆದ ೧೭ರಿಂದ ಪ್ರತಿನಿತ್ಯವೂ ಸಂಜೆ ೬|| ಗಂಟೆಗೆ, ಗಮಕ ಸಹೋದರರಾದ ವಿ|| ಬಿ ಎಸ್. ಎಸ್. ಕೌಶಿಕ್ ಮತ್ತು ವಿ|| ಕೆ. ವೆಂಕಟಸುಬ್ಬಯ್ಯನವರಿಂದ ವಾಲ್ಮೀಕಿ ರಾಮಾಯಣದ ಕಾವ್ಯ ವಾಚನವು ನಡೆಯುತ್ತಿದೆ ನಾಳೆ ಸಂಜೆ ೬|| ಗಂಟೆಗೆ ಶನಿಮಹಾತ್ಮೆ ಕಥೆಯನ್ನು ಏರ್ಪಡಿಸಲಾಗಿದೆ.

SARADA VILAS COLLEGE
INTER TUTORIAL SECTION
ENGLISH & P. C. M.
Highly qualified & experienced staff
Classes in full swing

VIDYA TUTORIAL COLLEGE,
Dalvoy High School Buildings, Mysore
INTERMEDIATE : 1956 English Texts
Classes Commenced
B A., B Sc. : English 1957 Texts
Classes formed. Join immediatly
Other classes in full swing
Inter : Eng. 1957 texts, Kan., P. C. M., P. E. M., P. C. B., C. B. Z., H. E. L., H. E. G.,
B. A., B. Sc.-All subjects, All Parts
Ladies also admitted
Enquiries 9-30 to 10-30 A.M
5-30 to 7-30 P.M.

SREE GAYATHRI TALKIES
Running to Crowded houses in its
2nd Week from 28-6-57
BHOWANI JUNCTION
(Cinemascope & Technicolor)
With:- Ava Gardner. Stewart Granger Don't Miss
the rare Opportunity

[ದೂರವಾಣಿ ನಂ 792

ಇಂದಿನ ಪತ್ರಿಕೆ 2 ನಯೆ ಪೈಸೆ

ಸಾಧ್ವಿ

ಸಂಪುಟ : ೧೮] SADHVI : SATURDAY 29—6—1957 ಮೈಸೂರು : ಶನಿವಾರ ೨೯—೬—೧೯೫೭ [ಸಂಚಿಕೆ : ೩೨೫

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರದಿಗಳಿಗೆ ಬರೆಯಿರಿ

ಇಂಪೋ ಫ್ರೆಟ್ ಶೂಪ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಅಮೆರಿಕದಲ್ಲಿ ಬಿರುಗಾಳಿಯಿಂದ ಸಾವಿರಾರು ಮರಣ?

ಅಮೆರಿಕದಲ್ಲಿ ಬಿರುಗಾಳಿಯಿಂದ ಸಾವಿರಾರು ಮರಣ

ಅಮೆರಿಕದ ಲೂಸಿಯಾನಾ ಪ್ರಾಂತದ ನೈಋತ್ಯ ಭಾಗದಲ್ಲಿ ನೆನ್ನೆ ಭಾರಿ ಬಿರುಗಾಳಿಯು ಬೀಸಿಯಿಂದ ನೂರಾರು ಜನರು ಮೃತರಾಗಿರುವರೆಂದು ವರದಿಯಾಗಿದೆ. ೨೦೦-೩೦೦ ಮಂದಿ ಮಡಿದಿರಬೇಕೆಂದು ಅಧಿಕೃತವಾಗಿ ಹೇಳಲಾಗಿದೆ. ಅನಧಿಕೃತ ಸುದ್ದಿ ಪ್ರಕಾರ ೩,೦೦೦ ಕ್ಕೂ ಹೆಚ್ಚು ಜನರು ಮಡಿದಿರಬೇಕೆಂದು ಗೊತ್ತಾಗಿದೆ

ದಲೈ ಲಾಮಾರವರಿಗೆ ಚಿನ್ನದ ಸಿಂಹಾಸನ

ಟಿಬೆಟ್ಟಿನ ಜನರ ಗುರು ಮತ್ತು ಅಧಿಪತಿಯಾದ ದಲೈ ಲಾಮಾರವರಿಗೆ ಚಿನ್ನದ ಸಿಂಹಾಸನವನ್ನು ಮಾಡಿಸಿ, ಬಹುಮಾನವಾಗಿ ಕೊಡಲು ಹಿಮಾಲಯಾ ಗಡಿ ಬಳಿ ಇರುವಕಾಲಿಂಪಾಂಗಿನ ಟಿಬೆಟ್ ಜನರು ಚಂದಾ ಎತ್ತುತ್ತಿರುವರೆಂದು ವರದಿಯಾಗಿದೆ ಲಾಮಾರವರು ಆ ಸಿಂಹಾಸನದ ಮೇಲೆ ಕುಳಿತು ವಿಶೇಷ ಉಪದೇಶ ಭಾಷಣ ಮಾಡುವರೆಂದು ಹೇಳಲಾಗಿದೆ.

ಕೇಂದ್ರ ಮಂತ್ರಿಗಳ ಹಣದ ಕಳುವು

ಕೇಂದ್ರ ಸರ್ಕಾರದ ಸಾಮೂಹಿಕ ಯೋಜನಾ ಮಂತ್ರಿ ಎಸ್ ಕೆ ಡೇಯವರು ಜಬ್ಬಲ್ಪುರದ ಸರ್ಕಾರಿ ಭವನಕ್ಕೆ ನೆನ್ನೆ ಆಗಮಿಸಿ ತಮ್ಮ ಜೇಬಿನಲ್ಲಿದ್ದ ಹಣದ ಚೀಲವನ್ನು ಮೇಲಿಟ್ಟು ಕೊಠಡಿಯಿಂದ ಹೊರಗೆ ಹೋಗಿ ಬರುವಷ್ಟರಲ್ಲೇ ಚೀಲದಲ್ಲಿದ್ದ ದುಡ್ಡು ಅಪಹೃತವಾದುದಾಗಿ ವರದಿಯಾಗಿದೆ.

ಮಹಮದ್ ಸೇಟರ ಚುನಾವಣೆ ವಿರುದ್ಧವಾಗಿ ತಕರಾರು ಅರ್ಜಿ

ನಗರದ ಉತ್ತರ ಭಾಗದ ಕ್ಷೇತ್ರದಿಂದ ವಿಧಾನ ಸಭೆಗೆ ಆರಿಸಿಬಂದಿರುವ ಶ್ರೀ ಎ ಮಹಮದ್ ಸೇಟರ ಚುನಾವಣೆಯ ನ್ಯಾಯಬದ್ಧತೆಯನ್ನು ಪ್ರಶ್ನಿಸಿ ಲಷ್ಕರ್ ಮೊಹಲ್ಲಾ ಕುರುಬಗೇರಿಯ ಶ್ರೀ ಸಿ. ರಾಮಲಿಂಗಯ್ಯನವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಶ್ರೀ ಸೇಟರ ಚುನಾವಣೆಯಲ್ಲಿ ಅಕ್ರಮಗಳು ನಡೆದುವೆಂದು ಅರ್ಜಿಯಲ್ಲಿ ತಿಳಿಸಲಾಗಿದೆ ಶ್ರೀ ಅಹಮದ್ ಅಲ್ಲಿಖಾನರು ಚುನಾಯಿತರಾಗಿರುವರೆಂದು ಘೋಷಿಸುವಂತೆ ಕೋರಲಾಗಿದೆ.

ಸಚಿವರ ನೇತೃತ್ವದಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳ ಸಭೆ

ವಿದ್ಯಾ ಸಚಿವರಾದ ಶ್ರೀ ಎ. ವೆಂಕಟಪ್ಪನವರು ನಾಳೆ ಮಧ್ಯಾಹ್ನ ೨ ಗಂಟೆಗೆ ಮಹಾರಾಜಾ ಹೈಸ್ಕೂಲಿನಲ್ಲಿ ಜಿಲ್ಲೆಯ ವಿದ್ಯಾಧಿಕಾರಿಗಳ ಸಭೆಯನ್ನು ಕರೆದಿರುತ್ತಾರೆ.

ಡಿ. ಎಂ. ಸಿದ್ದಯ್ಯನವರ ಮೇಲೆ ನಂಬಿಕೆ ದ್ರೋಹದ ಮೊಕದ್ದಮೆ

ದೇವನೂರು ಮಠದ ಮೋಟಾರೊಂದನ್ನು ದುರುಪಯೋಗಪಡಿಸಿಕೊಂಡರೆಂಬ ಕಾರಣಕ್ಕಾಗಿ ಶ್ರೀ ಡಿ. ಎಂ. ಸಿದ್ದಯ್ಯನವರ ಮೇಲೆ ನಂಜನಗೂಡು ತಾಲ್ಲೂಕು ಪೋಲೀಸರು ನಂಬಿಕೆ ದ್ರೋಹದ ಮೊಕದ್ದಮೆಯನ್ನು ಹೂಡಿರುತ್ತಾರೆ.

ಆಜಾದ್ ಕಾಶ್ಮೀರದ ವಿಮೋಚನೆಗೆ ಭಾರತದ ಲಕ್ಷ ಮುಸ್ಲಿಮರು

ಆಜಾದ್ ಕಾಶ್ಮೀರವನ್ನು ಪಾಕಿಸ್ತಾನದ ಹಿಡಿತದಿಂದ ವಿಮೋಚನೆಗೊಳಿಸಲು ೧ ಲಕ್ಷ ಮಂದಿ ಭಾರತೀಯ ಮುಸ್ಲಿಂ ಯುವಕರನ್ನು ಕಳುಹಿಸಲಾಗುವುದೆಂದು ಬಿಹಾರಿನ ಮಾಜಿ ಮಂತ್ರಿಯೂ, ಭಾರತೀಯ ಮುಸ್ಲಿಂ ಕಾಶ್ಮೀರ ರಂಗ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಅನ್ಸಾರಿಯವರು ತಿಳಿಸಿರುತ್ತಾರೆ ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಿರುತ್ತದೆಂಬುದನ್ನು ಭಾರತೀಯ ಮುಸ್ಲಿಮರು ತೀವ್ರವಾಗಿ ವಿರೋಧಿಸುತ್ತಿದ್ದಾರೆ ಈ ವಿಚಾರವನ್ನು ಸಮಸ್ತ ಜಗತ್ತಿಗೂ ತಿಳಿಸಲಿರುವುದಾಗಿ ಅವರು ಹೇಳಿರುತ್ತಾರೆ ಸಭೆಯಲ್ಲೇ ಈ ಬಗ್ಗೆ ಶಾಂತಿಯುತ ಚಳುವಳಿಯೂ ಆರಂಭವಾಗಲಿದೆ.

ದೋಣಿಗೆ ಸಿಡಿಲು ಬಡಿದು ೬೦ ಜನರ ಮರಣ

ಪೂರ್ವ ಪಾಕಿಸ್ತಾನದ ಬಾರಿಸಾಲ್ ನದಿಯಲ್ಲಿ ಹೋಗುತ್ತಿದ್ದ ದೋಣಿಯೊಂದಕ್ಕೆ ಕಳೆದ ಸೋಮವಾರ ಸಿಡಿಲು ಬಡಿದು ಅದರಲ್ಲಿದ್ದವರಲ್ಲಿ ೬೦ ಜನರು ನೀರಿನ ಪಾಲಾಗಿರುತ್ತಾರೆ ೨೫ ಶವಗಳು ಮಾತ್ರ ಪತ್ತೆಯಾಗಿವೆ ದೋಣಿಯಲ್ಲಿ ವಿಪರೀತ ಜನರಿದ್ದರೆಂದೂ ಹೇಳಲಾಗಿದೆ

ನೀರಿನ ಅಭಾವದಿಂದ ಕರಾಚಿಯಲ್ಲಿ ಗಲಭೆ

ಕರಾಚಿಯ ಒಂದು ಪ್ರದೇಶದಲ್ಲಿ ನೀರಿನ ಅಭಾವದ ಪರಿಣಾಮವಾಗಿ ಕಳೆದ ಮಂಗಳವಾರ ಚಿಕ್ಕ ಗಲಭೆಯಾಯಿತೆಂದೂ, ಅದರಲ್ಲಿ ನೂರಾರು ಮಂದಿ ಸೇರಿದ್ದರೆಂದೂ ವರದಿಯಾಗಿದೆ. ನಲ್ಲಿ ನೀರು ಇಲ್ಲದಿದ್ದುದರಿಂದ ಜನರು ರೋಷಗೊಂಡು ಮೆರವಣಿಗೆ ಇಲಾಖಾ ಕಚೇರಿಗೆ ಹೋಗಿ ಅದರ ಬಾಗಿಲು ಮತ್ತು ಕಿಟಕಿಗಳನ್ನು ಒಡೆದರು ೧೨ ಜನರನ್ನು ಪೋಲೀಸರು ಬಂಧಿಸಿರುವರು.

ಉದ್ಯಾನ ಪಂಡಿತ ಪ್ರಶಸ್ತಿ

ದೇಶದಲ್ಲಿ ಅತ್ಯುತ್ತಮ ಹಣ್ಣಿನ ತೋಟವನ್ನು ಬೆಳೆಯುವಾತನಿಗೆ ಉದ್ಯಾನ ಪಂಡಿತ-ಎಂಬ ಪ್ರಶಸ್ತಿಯನ್ನು ಕೊಡಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ. ಅದಕ್ಕೆ ೫,೦೦೦ ರೂ. ಬಹುಮಾನವನ್ನು ಕೊಡಲಾಗುವುದು

ಸಚಿವ ಆರ್.ಎಂ. ಪಾಟೀಲರ ಚುನಾವಣೆ ಬಗ್ಗೆ ತಕರಾರು ಅರ್ಜಿ

ಆರೋಗ್ಯ ಮಂತ್ರಿ ಶ್ರೀ ಆರ್. ಎಂ. ಪಾಟೀಲರು ನವಲಗುಂದ ಕ್ಷೇತ್ರದಿಂದ ಸಂಸ್ಥಾನದ ವಿಧಾನ ಸಭೆಗೆ ಆರಿಸಿಬಂದಿರುವುದರ ನ್ಯಾಯಬದ್ಧತೆಯನ್ನು ಪ್ರಶ್ನಿಸಿ ತಕರಾರು ಅರ್ಜಿಯನ್ನು ಹೂಡಲಾಗಿದೆ. ಒಟ್ಟು ೧೮ ಮಂದಿ ವಿಧಾನ ಸಭಾ ಸದಸ್ಯರ ಮೇಲೂ; ಕಾರವಾರ, ಗುಲ್ಬರ್ಗಾ ಮತ್ತು ಕೊಪ್ಪಳ ಕ್ಷೇತ್ರಗಳಿಂದ ಲೋಕ ಸಭೆಗೆ ಆರಿಸಿಬಂದಿರುವ ಜೋಕಿಂ ಆಳ್ವ, ಶಂಕರ ದೇವ ಮತ್ತು ಎಸ್. ವಿ. ಅಗಡಿಯವರ ಮೇಲೂ ತಕರಾರು ಅರ್ಜಿಗಳನ್ನು ಹೂಡಲಾಗಿದೆ. ಉಪ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರ ವಿರುದ್ಧ ಶ್ರೀ ಥಾಕಪ್ಪನವರು ಹೂಡಿದ್ದ ತಕರಾರು ಅರ್ಜಿಯನ್ನು ವಾಪಸು ಪಡೆದಿದ್ದಾರೆ.

ನಗರದಲ್ಲಿ ೧೪೧ ಜನರಿಗೆ ಹೊಸದಾಗಿ ಫ್ಲೂ ವ್ಯಾಧಿ

ಮೈಸೂರು ೨೯

ನಗರದಲ್ಲಿ ನೆನ್ನೆ ಹೊಸದಾಗಿ ೧೪೧ ಮಂದಿಗೆ ಇನ್ಫ್ಲುಯೆಂಜಾ ರೋಗವು ತಗಲಿರುವುದಾಗಿ ಗೊತ್ತಾಗಿದೆ ಇದುವರೆಗೆ ಆ ಖಾಯಿಲೆಯಿಂದ ನರಳುತ್ತಿರುವವರ ಸಂಖ್ಯೆ ೧೪೭೧.

ನಾಳೆ ನಗರದಲ್ಲಿ ಎರಡು ಗಂಟೆ ಕಾಲ ನೀರು ಸರಬರಾಜು ಇರುವುದಿಲ್ಲ

ನಾಳೆ ಬೆಳಿಗ್ಗೆ ೧೦ ಘಂಟೆಯಿಂದ ೧೨ ರವರೆಗೆ ವಿದ್ಯುಚ್ಛಕ್ತಿ ಸರಬರಾಜು ಇರುವುದಿಲ್ಲವಾದ ಕಾರಣ ಆ ವೇಳೆಯಲ್ಲಿ ನಗರದಲ್ಲಿ ನೀರು ಸರಬರಾಜೂ ಇರುವುದಿಲ್ಲವೆಂದು ತಿಳಿಸಲಾಗಿದೆ.

ವಿವಿಧ ಅಪರಾಧಗಳಿಗಾಗಿ ದಂಡ

ಸಬ್ಬು ಜೂಜು ಆಡುತ್ತಿದ್ದನೆಂಬ ಆಪಾದನೆಗಾಗಿ ಲಷ್ಕರಿನ ಕೇಡಿ ಮಹದೇವ ಎಂಬುವನಿಗೆ ೨೫ ರೂ. ದಂಡ ವಿಧಿಸಲಾಗಿದೆ.

ಸಿದ್ದ ಮತ್ತು ಇನ್ನಿಬ್ಬರಿಗೆ ಅನೀತಿ ವ್ಯಾಪಾರಕ್ಕಾಗಿ ತಲಾ ೨೦ ರೂ

ಪುಡ್‌ಲ್ಯಾಂಡ್ಸ್ ಚಿತ್ರಮಂದಿರದಲ್ಲಿ ಧೂಮಪಾನ ಮಾಡಿದುದಕ್ಕಾಗಿ ಸತ್ತಾರ್ ಮತ್ತು ಇತರ ಹತ್ತು ಮಂದಿಗೆ ತಲಾ ಐದು ರೂ

ಜಿಲ್ಲಾ ಬೋರ್ಡ್ ಅಧಿಕಾರಿಗಳು

ಬೆಳಗಾಮಿನ ಮಾಮಲೆತ್‌ದಾರರಾದ ಶ್ರೀ ಟಿ ಎಸ್. ಕುಲಕರ್ಣಿಯವರನ್ನು ಮೈಸೂರು ಜಿಲ್ಲಾ ಬೋರ್ಡ್ ಮುಖ್ಯ ಅಧಿಕಾರಿಯಾಗಿ ನೇಮಿಸಲಾಗಿದೆ.

ಯೆಮೆನ್ ನಗರದ ಮೇಲೆ ಬ್ರಿಟಿಷ್ ವಿಮಾನಗಳ ಬಾಂಬು ಧಾಳಿ

ಬ್ರಿಟನ್ನಿನ ವಿಮಾನಗಳು ಯೆಮೆನ್ ರಾಜ್ಯದ ಪೂರ್ವ ಗಡಿಯಲ್ಲಿರುವ ಹುಕೀರ್ ಎಂಬ ಪಟ್ಟಣದ ಮೇಲೆ ಕಳೆದ ೧೦ ದಿನಗಳ ಹಿಂದೆ ಬಾಂಬು ಧಾಳಿ ನಡೆಸಿರುವುದಾಗಿ ಯೆಮೆನ್ನಿನ ಸರ್ಕಾರದವರು ವಿಶ್ವಸಂಸ್ಥೆಯ ಕಾರ್ಯದರ್ಶಿ ಹ್ಯಾಮರ್‌ಷೀಲ್ಡರಿಗೆ ತಿಳಿಸಿರುತ್ತಾರೆ ಐದು ಗಂಟೆಗಳ ಕಾಲ ರಾತ್ರಿವೇಳೆಯಲ್ಲಿ ಧಾಳಿ ನಡೆಯಿತೆಂದೂ ತಿಳಿಸಲಾಗಿದೆ.

ಹತ್ತಿ ಬಟ್ಟೆ ಮೇಲೆ ಹೆಚ್ಚಿನ ಸುಂಕ

ಹತ್ತಿ ಬಟ್ಟೆಗಳ ಮೇಲೆ ಹೆಚ್ಚಿನ ಅಬ್ಕಾರಿ ಸುಂಕವನ್ನು ವಿಧಿಸುವ ಸಲುವಾಗಿ ಪಾರ್ಲಿಮೆಂಟಿನ ಬರುವ ಅಧಿವೇಶನದಲ್ಲಿ ಮಸೂದೆಯೊಂದನ್ನು ತರಲಾಗುವುದೆಂದು ವರದಿಯಾಗಿದೆ.

ಮುಖ್ಯ ಜಿಲ್ಲಾ ನ್ಯಾಯಾಧೀಶರಾಗಿ ಸುಬ್ಬಯ್ಯನವರ ನೇಮಕ

ಶ್ರೀ ಕೆ ಸುಬ್ಬಯ್ಯನವರನ್ನು ಮೈಸೂರಿನ ಮುಖ್ಯ ಜಿಲ್ಲಾ ನ್ಯಾಯಾಧೀಶರಾಗಿ ನೇಮಿಸಲಾಗಿದೆ.

ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ

ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿ ಶ್ರೀ ಬಿ ಪಿ. ಮಲ್ಲಪ್ಪನವರನ್ನು ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿ ನೇಮಕರೂಪ ಮಾಡಲಾಗಿದೆ. ಇದುವರೆಗೆ ಆಪ್ತ ಕಾರ್ಯದರ್ಶಿಯಾಗಿದ್ದ ಶ್ರೀ ಎ. ಹನುಮಂತಪ್ಪನವರನ್ನು ಮಂತ್ರಿ ಸಭೆಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ

ನಗರದಲ್ಲಿ ಇನ್ಫ್ಲುಯೆಂಜಾಗಾಗಿ ೪,೦೦೦ ಮಂದಿಗೆ ಔಷಧಿ

ಪೌರಸಭೆಯಲ್ಲಿ ಆರೋಗ್ಯಾಧಿಕಾರಿಗಳ ಹೇಳಿಕೆ

ಮೈಸೂರು ೨೯

ನೆನ್ನೆ ಸೇರಿದ್ದ ಪೌರಸಭಾಧಿವೇಶನದಲ್ಲಿ ಆರೋಗ್ಯಾಧಿಕಾರಿಗಳು ಹೇಳಿಕೆಯೊಂದನ್ನು ಕೊಟ್ಟು ನಗರದಲ್ಲಿ ೪,೦೦೦ ಮಂದಿಗೆ ಇನ್ಫ್ಲುಯೆಂಜಾಕ್ಕಾಗಿ ಔಷಧಿಯನ್ನು ವಿನಿಯೋಗ ಮಾಡಲಾಗುತ್ತಿರುವುದೆಂದು ತಿಳಿಸಿದರು.

ಶ್ರೀ ಶ್ರೀಕಂಠಶರ್ಮರವರು ಪುರಸಭೆಯವರು ತಿಳಿಸುತ್ತಿರುವ ಸಂಖ್ಯೆಯು ಕಡಿಮೆಯೆಂದೂ, ಕನಿಷ್ಠ ಪಕ್ಷ ೭,೦೦೦ ಮಂದಿಗಾದರೂ ವ್ಯಾಧಿ ತಗಲಿರುವಂತೆ ಕಾಣುವುದೆಂದೂ ಹೇಳಿದರು.

ಸಬ್ ಇನ್ಸ್ಪೆಕ್ಟರ್ ಮೇಲೆ ವಿಚಾರಣಾ ಪ್ರಯತ್ನ

ಈ ದಿನ ಪ್ರಥಮ ನ್ಯಾಯಾಧೀಶರ ಕೋರ್ಟಿನ ಕಟ್ಟಡದಲ್ಲಿ ಕಳುವು ಕೇಸೊಂದರಲ್ಲಿ ವಿಚಾರಣೆಗಾಗಿ ಕರೆತರಲ್ಪಟ್ಟ ಕಾಳಯ್ಯ ಎಂಬುವನು ಕ್ರೈಂ ಬ್ರಾಂಚ್ ಸಬ್‌ಇನ್ಸ್ಪೆಕ್ಟರನ್ನು ಏನೋ ಮಾತನಾಡಬೇಕೆಂದು ಕರೆದು ಅವರ ಮುಖದ ಮೇಲೆ ಸಿಗರೇಟ್ ಟಿನ್ನಿನ ಚೂರಿನಿಂದ ಗೀರಿ ಗಾಯಗೊಳಿಸಿದನು. ಈ ಬಗ್ಗೆ ಮೊದಲು ಒಂದನ್ನು ರಿಜಿಸ್ಟರ್ ಮಾಡಿಕೊಳ್ಳಲಾಗಿದೆ.

ಪರಾರಿಯಾಗಿದ್ದ ಪೌರಸಭಾ ಗುಮಾಸ್ತನ ಬಂಧನದ ವಿವರ

ಬೆಂಗಳೂರು ಪೌರಸಭೆಯ ಅಸಿಸ್ಟೆಂಟ್ ಇಂಜಿನಿಯರ್ ಬಿ ಎಸ್. ಎಸ್ ಜೈನನು ಜುನಾಗಡದಲ್ಲಿ ಪೋಲೀಸರಿಗೆ ಸಿಕ್ಕಿದ ವಿವರಗಳು ಈಚೆಗೆ ತಿಳಿದುಬಂದಿವೆ ಈ ತಿಂಗಳು ಪ್ರಥಮ ವಾರದಲ್ಲಿ ಅವನು ಪೌರಸಭಾ ಕಮಿಷನರಿಗೆ ಪತ್ರ ಬರೆದು ತಾನು ಹಣವನ್ನು ದುರುಪಯೋಗಪಡಿಸಿದ್ದುದನ್ನು ಒಪ್ಪಿಕೊಂಡು, ಕೃಷ್ಣರಾಜಸಾಗರದಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡುದಾಗಿ ತಿಳಿಸಿದ್ದನು. ಅವನ ಮನೆಯನ್ನು ಶೋಧಿಸಿದುದಲ್ಲದೆ, ಅಲ್ಲಿ ಕಾವಲನ್ನು ಹಾಕಿ ಅವನ ಮನೆಯವರಿಗೆ ಬರುವ ಕಾಗದಪತ್ರಗಳ ಮೇಲೆ ನಿಗಾ ಇಡಲಾಗಿತ್ತು. ೨೫ ದಿನಗಳನಂತರ ಅವನ ಹೆಂಡತಿಗೆ ಬಂದ ಪತ್ರವೊಂದರಲ್ಲಿ ಅವನು ಅಡಗಿರುವ ಸ್ಥಾನವು ತಿಳಿಯಿತು ಮತ್ತೊಂದರಲ್ಲಿ ತನ್ನ ಅಂತ್ಯ ಕರ್ಮಗಳನ್ನು ಹೆಂಡತಿಯು ನಡೆಸಿ, ವಿಧವೆಯಂತೆ ಆ ಊರಿನಿಂದ ಹೊರಟುಬರುವಂತೆ ಅವನು ತಿಳಿಸಿದ್ದನೆಂದು ಹೇಳಲಾಗಿದೆ. ಇದರ ಮೇಲೆ ಅವನ ದಸ್ತಗಿರಿಯಾಯಿತು. ಅವನ ಬಳಿ ೧೫,೦೦೦ ರೂ. ಇದ್ದಿತು.

ಮಣಿಪಾಲದ ಮೆಡಿಕಲ್ ಕಾಲೇಜಿನ ಪುನರಾರಂಭ

ವಿದ್ಯಾರ್ಥಿಗಳು ಮತ್ತು ಆಡಳಿತದವರ ನಡುವೆ ಭಿನ್ನಾಭಿಪ್ರಾಯ ಬಂದು ೧೦ ದಿನಗಳಿಂದ ಲೂ ಮುಚ್ಚಲ್ಪಟ್ಟಿದ್ದ ಉಡುಪಿ ಮಣಿಪಾಲದ ಕಸ್ತೂರ್ ಬಾ ಮೆಡಿಕಲ್ ಕಾಲೇಜು ಪುನಃ ಮೊನ್ನೆಯಿಂದ ಆರಂಭವಾಗಿದೆ. ಶಿಕ್ಷಣ ಶುಲ್ಕವನ್ನು ಕೊಡುವುದಾಗಿಯೂ, ಶಿಸ್ತಿನಿಂದ ವರ್ತಿಸುವುದಾಗಿ ಯೂ ವಿದ್ಯಾರ್ಥಿಗಳು ಒಪ್ಪಿರುವರು.

ಸ್ವತಂತ್ರ ಭಾರತದಲ್ಲಿ ಸಮಾಜ ಕಲ್ಯಾಣ ಕಾರ್ಯದ ಮಹತ್ವ

ಮಹಾರಾಣಿ ತ್ರಿಪುರಸುಂದರಮ್ಮಣ್ಣಿ ಮತ್ತು ದುರ್ಗಾಬಾಯಿ ದೇಶಮುಖ್ ರವರ ಭಾಷಣಗಳು

ಮೈಸೂರು ೨೫

ಸಂಸ್ಥಾನದ ಸಾಮಾಜಿಕ ಕಲ್ಯಾಣ ಸಮಿತಿ ಆಶ್ರಯದಲ್ಲಿ ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ಸಾಮಾಜಿಕ ಕಾರ್ಯಕರ್ತರ ಸಭೆಯು ನಡೆಯಿತು ಮಹಾರಾಣಿ ಶ್ರೀಮತಿ ತ್ರಿಪುರಸುಂದರಮ್ಮಣ್ಣಿಯವರು ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಬೋರ್ಡಿನ ಅಧ್ಯಕ್ಷಿಣಿ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ಭಾಷಣ ಮಾಡಿದರು

ಮಹಾರಾಣಿಯವರು ತಮ್ಮ ಭಾಷಣದಲ್ಲಿ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ಸಮಾಜ ಕಲ್ಯಾಣಕ್ಕಾಗಿ ನಡೆಸುತ್ತಿರುವ ಕಾರ್ಯಗಳನ್ನು ಪ್ರಶಂಸಿಸಿದರು ಸಮಾಜ ಕಲ್ಯಾಣ ಬೋರ್ಡಿನವರು ಅಜ್ಞಾನಾಂಧಕಾರದಲ್ಲಿರುವ ಪ್ರದೇಶಗಳಿಗೆ ಬೆಳಕನ್ನು ತಂದು ಕೊಟ್ಟು ಕಷ್ಟದಲ್ಲಿ ಕೊಳಲುತ್ತಿರುವವರು ಉತ್ತಮ ಜೀವನ ನಡೆಸಲು ಸಹಕಾರಿಯಾಗಿರುವರೆಂದು ಅವರು ಹೇಳಿದರು. ಮಹಿಳೆಯರು ಮತ್ತು ಮಕ್ಕಳ ಸಮಾಜ ಕಲ್ಯಾಣ ಕೆಲಸವು ಅತ್ಯಗತ್ಯವೆಂದೂ ಅದು ಗೃಹಸ್ಥ ಮತ್ತು ಸಹಧರ್ಮಿಣಿಯರ ಆದ್ಯ ಕರ್ತವ್ಯವಾಗಿರುವುದೆಂದೂ ಮಹಾರಾಣಿಯವರು ತಿಳಿಸಿದರು

ಬುದ್ಧ ಮತ್ತು ಅಶೋಕರ ಕಾಲದಿಂದಲೂ ನಮ್ಮ ದೇಶದಲ್ಲಿ ನಡೆದುಬಂದಿರುವ ಸಾಮಾಜಿಕ ಕಲ್ಯಾಣ ಕಾರ್ಯವು ಇತ್ತೀಚೆಗೆ ರಾಜಾರಾಮ ಮೋಹನರಾಯ್, ಗೋಪಾಲಕೃಷ್ಣ ಗೋಖಲೆ ಮುಂತಾದವರಿಂದ ಬೆಳೆಸಲ್ಪಟ್ಟಿತೆಂದು ಅವರು ಹೇಳಿ, ಮಹಾತ್ಮಾ ಗಾಂಧೀಜಿಯವರಿಗೆ ಸಮಾಜ ಸೇವೆಯು ಜೀವನದ ಉಸಿರಾಗಿತ್ತೆಂದು ನುಡಿದರು ಪ್ರಾಚೀನ ಕಾಲದಲ್ಲಿ ಬ್ರಹ್ಮದ ದಿವ್ಯ ಕುಟುಂಬ ಸುಸಂಸ್ಕೃತ ಮತ್ತು ವಿದ್ಯಾವಂತ ಮಹಿಳೆಯರು ಅದಕ್ಕಾಗಿ ದುಡಿಯುತ್ತಿದ್ದರೆಂದೂ ಹೇಳಿದರು ಅವರು ಮುಂದುವರಿದು ಈ ರೀತಿ ತಿಳಿಸಿದರು —

ಭಾರತವು ಇಂದು ಸ್ವತಂತ್ರವಾಗಿ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು ಅವಕಾಶವಿದೆ ಹಲವು ತಲೆಮಾರುಗಳ ಬಡತನ ಮತ್ತು ಅಜ್ಞಾನದ ಸಮಸ್ಯೆಗಳು ಇನ್ನೂ ಪರಿಹಾರವಾಗದೆ ಉಳಿದಿವೆ ಜನಸಾಮಾನ್ಯರು ಹೆಚ್ಚು ಸಾಮಾನ್ಯ ಯೋಜನೆಯು ಕಷ್ಟತರವಾಗಿಯೂ, ಹೃದಯ ದೌರ್ಬಲ್ಯಕಾರಿಯಾಗಿಯೂ ಪರಿಣಮಿಸುವಷ್ಟು ವ್ಯಕ್ತವಾಗಿದೆ ಈಗಲೂ ಸಹ ಸಮಾಜದ ಅನ್ಯಾಯ ಮತ್ತು ಅವಮಾನತೆಯನ್ನು ಹೋಗಲಾಡಿಸಲು ಕೆಲಸ ಮಾಡಲಾಗುತ್ತಿದೆ.

ಸಾಮಾನ್ಯ ಮನುಷ್ಯರು ಮತ್ತು ಮುಖ್ಯವಾಗಿ ಮಕ್ಕಳ ಯೋಗಕ್ಷೇಮಕ್ಕೆ ಹೆಚ್ಚು ಗಮನ ಕೊಡುವುದು ಅಗತ್ಯ ರೋಗರುಜಿನ, ಮರಣ ಮುಂತಾದುವುಗಳಿಂದ ಅನಾಥರೂ ನಿಸ್ಸಹಾಯಕರೂ ಆಗಿರುವ ಮಕ್ಕಳ ಬೆಳವಣಿಗೆಗೆ ಹೆಚ್ಚು ಗಮನ ಅಗತ್ಯ ಹಾಗೆಯೇ ಎಸೆಗಳಲ್ಲಿ ಸಣ್ಣ ಶಾಲೆಗಳನ್ನು ನಡೆಸಿ ಅಲ್ಲಿ ಮಕ್ಕಳ ಪುರೋಭಿವೃದ್ಧಿಗೆ ಅವಕಾಶವಾಗಬೇಕು ಸರ್ಕಾರಿ ಶಿಕ್ಷಣ ವಲ್ಲದೆ, ಅವರುಗಳ ಮುಂದಿನ ಯೋಗಕ್ಷೇಮದ ನ್ನು ನೋಡಿಕೊಳ್ಳುವುದು ಅವಶ್ಯಕ ಆದುದರಿಂದ ಅವರನ್ನು ಸರಿಯಾಗಿ ತರಬೇತು ಮಾಡಿದರೆ ಉತ್ತಮ ನಾಗರಿಕರಾಗಲು ಅವಕಾಶವಿದೆ

ಈ ಸಮಸ್ಯೆಗಳನ್ನು ತಾಳ್ಮೆ, ಧೈರ್ಯ, ಪ್ರಾಮಾಣಿಕತೆ ಮತ್ತು ಏಕಾಗ್ರತೆಯಿಂದ ಬಗೆಹರಿಸಬೇಕಲ್ಲದೇ, ಪ್ರತಿಯೊಬ್ಬರೂ ತಮ್ಮ ಗೃಹಗಳಲ್ಲೇ ಸಮಾಜ ಸೇವೆಯನ್ನು ಮಾಡಬಹುದು ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಮಾಡಬಹುದು ಈ ಮಹತ್ಕಾರ್ಯಕ್ಕೆ ಜನತೆಯು ಒಟ್ಟಿನ ಸೌಹಾರ್ದ ಮತ್ತು ಬೆಂಬಲವಿದ್ದರೆ ಅದು ಸಫಲ ಸಾಧ್ಯವಾಗುವುದು ರಾಷ್ಟ್ರವನ್ನು ಪುನರ್ನಿರ್ಮಾಣ ಮಾಡುವುದರಲ್ಲಿ ಈ ಮೂಲಕ ಎಲ್ಲರೂ ಭಾಗಿಗಳಾಗಬೇಕು

ಮೊದಲು ಶ್ರೀಮತಿ ಗೌರಮ್ಮ ನಾಗರಾಜ್‌ರವರಿಂದ ಪ್ರಾರ್ಥನೆಯಾದನಂತರ ಸಂಸ್ಥಾನ ಸಮಿತಿಯ ಅಧ್ಯಕ್ಷಿಣಿ ಶ್ರೀಮತಿ ಲಕ್ಷ್ಮಿ ಕೃಷ್ಣಪ್ಪನವರು ಸ್ವಾಗತ ಭಾಷಣ ಮಾಡಿ ಮೈಸೂರು ಸಂಸ್ಥಾನದಲ್ಲಿ ಬಹಳ ಹಿಂದಿನಿಂದಲೂ ರಾಜಮನೆತನದವರು ಸಮಾಜದ ಉನ್ನತಿಗಾಗಿ ಕೈಗೊಂಡಿದ್ದ ಕಾರ್ಯಕ್ರಮಗಳನ್ನು ವಿವರಿಸಿದರು ಸಭೆಗೆ ಬಂದಿದ್ದ ಕೇಂದ್ರಸಮಿತಿಯ ಸದಸ್ಯರಾದ ಶ್ರೀಮತಿ ಇಶಾನ್ ಮಧಾಯಿರವರು ಭಾಷಣ ಮಾಡಿ ನಾಲ್ಕು ವರ್ಷಗಳ ಹಿಂದೆ ಸಮಾಜ ಕಲ್ಯಾಣ ಸಮಿತಿಯು ಸ್ಥಾಪಿತವಾದಾಗಿನಿಂದ ಇದುವರೆಗೆ ಮಾಡಿರುವ ಕೆಲಸಕಾರ್ಯಗಳನ್ನು ನಿರೂಪಿಸಿದರು

ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ತಮ್ಮ ದೀರ್ಘ ಭಾಷಣದಲ್ಲಿ ಭರತಖಂಡವು ಸ್ವಾತಂತ್ರ್ಯವನ್ನು ಪಡೆದನಂತರ ಸಮಾಜದ ಸರ್ವತೋಮುಖವಾದ ಅಭ್ಯುದಯಕ್ಕಾಗಿ ಕೈಗೊಳ್ಳಲಾಗುತ್ತಿರುವ ಕಾರ್ಯಗಳನ್ನು ವಿವರಿಸಿದರು ಕೇವಲ ರಾಜಕೀಯ ಸ್ವಾತಂತ್ರ್ಯದಿಂದ ರಾಷ್ಟ್ರದ ಸಂಪೂರ್ಣವಾದ ಬೆಳವಣಿಗೆಯಾಗುವುದಿಲ್ಲವೆಂದು ಕಾಯಕರುಗಳು ಮನಗಂಡು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ದೊಡ್ಡದಾದ ಕಾರ್ಯಕ್ರಮಗಳನ್ನು ಕೈಗೊಂಡರು ಎರಡು ಪಂಚ ವಾರ್ಷಿಕ ಯೋಜನೆಗಳಲ್ಲಿಯೂ ಅದಕ್ಕಾಗಿ ಅಪಾರ ಹಣವನ್ನು ವಿನಿಯೋಗಿಸಲಾಗಿದೆ ಇದರಲ್ಲಿ ಮಹಿಳೆಯರು ಮತ್ತು ಮಕ್ಕಳ ಹಿತ ಚಿಂತನೆಗಾಗಿ ೩೦ ಕೋಟಿ ರೂ ಗಳನ್ನು ಒದಗಿಸಲಾಯಿತು ದೇಶದ ಅರ್ಧ ಭಾಗ ಪ್ರಜೆಗಳಾಗಿರುವ ಮಹಿಳೆಯರಲ್ಲಿ ಕಡಮೆ ಅಕ್ಷರಸ್ಥರಿರುವುದನ್ನು ಕಂಡ ಆಕ್ಷರ ಪ್ರಚಾರಕ್ಕೆ ಪ್ರಥಮ ಗಮನವನ್ನು ಕೊಡಲಾಗುತ್ತಿದೆ ಇದಲ್ಲದೆ ಒಡೆಯರಾದ ಹೆಂಗಸರು ತಮ್ಮನ್ನು ತಾವೇ ಸಲಹಿಕೊಳ್ಳಲು ಸಣ್ಣ ಉದ್ಯೋಗಗಳನ್ನು ಮಾಡಿ ಅವುಗಳ ಮೂಲಕ ಜೀವನೋಪಾಯವನ್ನು ಸಾಧಿಸಲು ಸಹಾಯ ಮಾಡಲಾಗುತ್ತಿದೆ ಸಾಲಗಿತ್ತಿಯರಾಗಿಯೂ, ನರ್ಸುಗಳಾಗಿಯೂ ಕೆಲಸ ಮಾಡಲು ಅನೇಕರಿಗೆ ಶಿಕ್ಷಣವೀಯಲಾಗುತ್ತಿದೆ ಅನೀತಿ ವ್ಯಾಪಾರದಲ್ಲಿ ತೊಡಗಬಹುದಾದವರನ್ನು ರಕ್ಷಿಸಿ ಆಶ್ರಯಾಲಂ

ಅಮೆರಿಕಾ ವಿರುದ್ಧ ಗಲಭೆಗಾಗಿ ರಾಷ್ಟ್ರೀಯ ಚೀಣರಿಗೆ ಸಜಾ

ಕಳೆದ ತಿಂಗಳು ೨೪ನೇ ತಾರೀಖು ಫಾರ್ಮೋಸಾ ದ್ವೀಪದ ರಾಜಧಾನಿ ಟೈಪೆಯಲ್ಲಿ ಅಮೆರಿಕದವರ ವಿರುದ್ಧ ನಡೆದ ಗಲಭೆಗಳ ಸಂಬಂಧವಾಗಿ ರಾಷ್ಟ್ರೀಯ ಚೀಣರ ಮಿಲಿಟರಿ ನ್ಯಾಯ ಮಂಡಲವೊಂದು ೧೧ ಮಂದಿಗೆ ೬ ರಿಂದ ೧೨ ತಿಂಗಳ ಕಾಲ ಸಜಾ ವಿಧಿಸಿ ೨೯ ಜನರನ್ನು ಖುಲಾಸೆ ಮಾಡಿರುತ್ತದೆ ಒಟ್ಟು ೪೦ ಮಂದಿಯನ್ನು ವಿಚಾರಣೆಗೆ ಗುರಿಪಡಿಸಲಾಗಿತ್ತು ಗಲಭೆಗಳನ್ನು ಯಾರೂ ವ್ಯವಸ್ಥೆ ಮಾಡಿರಲಿಲ್ಲವೆಂದೂ, ಗಲಭೆಕಾರರಿಗೆ ಯಾರೂ ನಾಯಕರಿರಲಿಲ್ಲವೆಂದೂ ನ್ಯಾಯ ಮಂಡಲವು ತಿಳಿಸಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ನಾಗಸ್ವರ ೭ ೧೫ ಹೆಚ್ ಟಿ ರಾಮಸ್ವಾಮಿ—ದೇವರ ನಾಮ ೮ ೧೫ ಕನ್ನಡ ಗೀತೆ ೮ ೩೦ ರಂಗಿಲ್ಲ-ಕೋಳಲು ೯-೩೦ ಬಾಲಜಗತ್ ಮಧ್ಯಾಹ್ನ ೧೨ ಹೆಚ್ ಟಿ ರಾಮಸ್ವಾಮಿ ಸಂಗೀತ ೧೨-೩೦ ವಾದ್ಯವೃಂದ ೧ ರಿಕಾರ್ಡು ೧ ೫೦ ಜಯಂ ಮತ್ತು ಭಾಗ್ಯಂ—ಸಂಗೀತ ೨ ೧೫ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೬-೧೦ ಕನ್ನಡ ಗೀತೆ ೭-೩೦ ಪಕ್ಷಿನೋಟ ೮ ಮತ್ತು ೧೦-೩೦ ಟಿ ಆರ್ ಶ್ರೀನಿವಾಸ ಸಂಗೀತ ೮ ೩೦ ಸ್ನೇಹಪರ ಎಚ್ಚರಿಕೆ ವಿಶ್ವ ಸಂಸ್ಥೆ ರೂಪಕ ೯-೧೫ ರಿಕಾರ್ಡು ೯ ೩೦ ಪಠಿಸಿದ ಕಥನ—ನಾಟಕ ೧೦ ಜಯಂ ಮತ್ತು ಭಾಗ್ಯಂ ಸಂಗೀತ

ಬನೆಯ ಮಾರ್ಗವನ್ನು ಕಲಿಸಲು ನಿಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂಬುದಾಗಿ ಅವರು ಹೇಳಿದರು

ಪಂಚ ವಾರ್ಷಿಕ ಯೋಜನೆಯ ಯಶಸ್ಸಿಗೆ ಸಾಮಾಜಿಕ ಅಭ್ಯುದಯವೇ ಒರೆಗಲ್ಲು ಮಹಿಳೆಯರ ಸ್ಥಿತಿಗತಿಗಳ ಉನ್ನತಿಯೇ ಇದಕ್ಕೆ ಆಧಾರ ನಮ್ಮದೇಶದ ಸ್ತ್ರೀಯರು ಮತ್ತು ಮಕ್ಕಳ ಪುರೋಭಿವೃದ್ಧಿಗಾಗಿ ಏರ್ಪಡಿಸಿರುವ ಈ ಮಹತ್ಕಾರ್ಯ ಸಾಧನೆಯಲ್ಲಿ ಸಕಲರೂ ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು

ಸಭೆಗೆ ಬಂದಿದ್ದ ಆರ್ಥಿಕ ಸಚಿವ ಶ್ರೀ ಟಿ ಮರಿಯಪ್ಪನವರು ಧನ್ಯವಾದಗಳನ್ನು ಸಲ್ಲಿಸಿದರು ಕನ್ಯಾ ವಿದ್ಯಾಲಯದ ಬಾಲಿಕೆಯರಿಂದ ನೃತ್ಯ ಪ್ರದರ್ಶನವಾದಮೇಲೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು

ಶಿಶ್ನ ಖಾಯಿಲೆ
ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ-
ಪಿರೋಧಕ, ನಿವಾರಕ ಸಲಹೆಗಳಿಗೆ -
'ಲಿವರ್ ಹೌಸ್', ಚಾಮುಂಡಿಪುರಂ,
ಮೈಸೂರು (ಸುಬ್ಬರಾಯ ಹಾಸ್ಟೆಲ್ ಹತ್ತಿರ)

ಭಾರತದಲ್ಲಿ ರಾಷ್ಟ್ರೀಯ ಉತ್ಪತ್ತಿ ಮಂಡಲದ ಸ್ಥಾಪನೆ

ಜಪಾನಿಗೆ ಕಳೆದ ಅಕ್ಟೋಬರಿನಲ್ಲಿ ಭೇಟಿಯಿತ್ತ ಅಧಿಕಾರಿಗಳು, ಕೈಗಾರಿಕೋದ್ಯಮಿಗಳು ಮತ್ತು ಪ್ರವೀಣರ ನಿಯೋಗದ ಶಿಫಾರಸಿನಂತೆ ಭಾರತ ಸರ್ಕಾರದವರು ಸಧ್ಯದಲ್ಲೇ ರಾಷ್ಟ್ರೀಯ ಉತ್ಪತ್ತಿ ಮಂಡಲವೊಂದನ್ನು ಸ್ಥಾಪಿಸಲಿರುವರು ಜಪಾನಿನ ಉತ್ಪತ್ತಿ ಕೇಂದ್ರದ ಮಾದರಿಯಲ್ಲಿ ಅದು ಇರುವುದು. ಸರ್ಕಾರಿ ಮತ್ತು ಖಾಸಗಿ ಕೈಗಾರಿಕೋದ್ಯಮದಲ್ಲಿ ಉತ್ಪತ್ತಿ-ಮನೋಧರ್ಮವನ್ನು ಮೂಡಿಸುವುದೇ ಮಂಡಲದ ಸ್ಥಾಪನೆಯ ಉದ್ದೇಶ.

ಮದ್ರಾಸಿನಲ್ಲಿ ಕಚ್ಚಾ ಕಬ್ಬಿಣ ಯಂತ್ರದ ಸ್ಥಾಪನೆ

ಸೇಲಂ ಜಿಲ್ಲೆಯಲ್ಲಿ ದೊರೆಯುವ ಕೆಳವರ್ಗದ ಕಬ್ಬಿಣದ ಅದಿರಿನಿಂದ ಕಚ್ಚಾ ಕಬ್ಬಿಣವನ್ನು ತಯಾರಿಸುವಸಲುವಾಗಿ ಸೇಲಮ್ಮಿನಲ್ಲಿ ಯಂತ್ರವೊಂದನ್ನು ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ

ಔದ್ಯೋಗಿಕ ಕಾಲೇಜುಗಳ ಪ್ರವೇಶ ನಿಯಮದಲ್ಲಿ ಈ ವರ್ಷ ಬದಲಾವಣೆಯಿಲ್ಲ

ವಿಶ್ವವಿದ್ಯಾನಿಲಯ ಸಂಸ್ಥಾನದ ಪಾರಿಭಾಷಿಕ ಮತ್ತು ಔದ್ಯೋಗಿಕ ಕಾಲೇಜು ಮತ್ತು ಶಾಲೆಗಳ ಈ ವರ್ಷದ ಪ್ರವೇಶ ನಿಯಮವನ್ನು ಬದಲಾಯಿಸುವುದಿಲ್ಲವೆಂದು ಸರ್ಕಾರದವರು ನಿರ್ಧರಿಸಿರುತ್ತಾರೆ ಪ್ರವೇಶಗಳ ಬಗ್ಗೆ ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸುವಂತೆ ಮಹಾಜನರು ಕೋರಿದರು ಆದರೆ ಮೇಲೆ ಸರ್ಕಾರದವರು ಪತ್ರಿಕಾ ಪ್ರಕಟಣೆ ಹೊರಡಿಸಿ, ಈ ವರ್ಷವಾಗಲೀ, ಮುಂದೆ ಅಷ್ಟು ಮಾಡುವವರೆಗಾಗಲೀ ನಿಯಮಗಳನ್ನು ಬದಲಾಯಿಸುವುದಿಲ್ಲವೆಂದೂ, ವಿಶ್ವವಿದ್ಯಾನಿಲಯ ಸಂಸ್ಥಾನಕ್ಕೆ ಮುಂಚೆ ಇದ್ದ ನಿಯಮಗಳೇ ಜಾರಿಯಲ್ಲಿರುವುವೆಂದೂ ಸೂಚಿಸುತ್ತಾರೆ ಎಲ್ಲ ಕಡೆಗಳಿಗೂ ಒಂದೇ ರೀತಿಯ ನಿಯಮಾವಳಿಯನ್ನು ಜಾರಿಗೆ ತರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಾಗಿಯೂ ಸೂಚಿಸಲಾಗಿದೆ

CENTRAL INSTITUTE OF COMMERCE
Vani Vilas Market, Mysore
Efficient Coaching — Best Results. Admissions received for Diploma in Commerce & Stenography & for Shorthand and Typewriting Make haste and rush in before admissions close.

THE CHAMPION METROPOLITAN COLLEGE OF COMMERCE
Co operators' Home 100 Road Mysore
78 per cent.-100 per cent GOOD RESULTS IN several subjects & Grades
APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE Diploma in Stenography COST & WORKS ACCOUNTANCY Banking, Shorthand, Typewriting etc.
Estd 1917 — Fully qualified full-time staff — Educational atmosphere Fine building and up-to-date equipment — Decent Library and Reading Room — Western Business education in the East — Good results — College's Own Diploma also.
M S PUTTANNA, B Sc, N D Com., F I B Vice-Principal
P. SUBBARAYA SASTRY, M.A M A (Com), F.I.B Principal

SARADA VILAS COLLEGE
INTER TUTORIAL SECTION
ENGLISH & P C M.
Highly qualified & experienced staff
Classes in full swing

SREE GAYATHRI TALKIES
BHOWANI JUNCTION
LAST DAY
From 30-6-57 For 3 days
TRIBUTE TO A BAD MAN
(Cinemascope & Technicolor)
With -James Cagney

VIDYA TUTORIAL COLLEGE,
Dalvoy High School Buildings Mysore
INTERMEDIATE 1956 English Texts
Classes Commenced
B A., B Sc English 1957 Texts
Classes formed Join immediately
Other classes in full swing
Inter Eng 1957 texts Kan., P. C M., P E M, P C B, C B Z., H E L H E G,
B A., B Sc All subjects All Parts
Ladies also admitted
Enquiries 9 30 to 10 30 A M
5-30 to 7 30 P M

Edited, Printed and Published by A R Nagaraju at Sadhvi Press, D Subbiah Road, Mysore

ರಾಜಕಮಲ್ ಟಾಕೀಸ್ ✱ 28—6—57ರಿಂದ ಜನಪ್ರಿಯ 4ನೇ ವಾರ
ಅಂಜಲಿ ಪಿಕ್ಚರ್ಸ್‌ರವರ ತಮಿಳು ಚಿತ್ರ
ನಿರ್ಮಾಪಕರು, ಅಂಜಲಿ ರಾಜ-ಅಂಜಲೀದೇವಿ, ನಿರ್ದೇಶಕರು ವೇದಾಂತಂ ರಾಘವಯ್ಯ ಪಾತ್ರವಹಿಸಿರುವ
ಮಣಾಳನೇ ಮಂಗೈಯಿನ್ ಭಾಗ್ಯಂ
ಸಂಗೀತ ಆದಿನಾರಾಯಣರಾವ್ ನಿರ್ದೇಶನ ವೇದಾಂತಂ ರಾಘವಯ್ಯ
[ಶ್ರೀ ರಾಘವೇಂದ್ರ ರಿಲೀಸ್]

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ ೭ ನಯಾ ಪೈಸೆ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಪುಟ : ೧೫] SADHVI : SUNDAY 30—6—1957 ಮೈಸೂರು : ಭಾನುವಾರ ೩೦—೬—೧೯೫೭ : [ಸಂಚಿಕೆ : ೩೨೭

ದೇಶಮುಖ್‌ರವರಿಗೆ ವಿಶ್ವವಿದ್ಯಾಲಯದ ಗೌರವ ಪ್ರಶಸ್ತಿ

ನಗರದಲ್ಲಿ ಶಾಲೆಗಳನ್ನು ಇನ್ನೂ ೧೦ ದಿವಸ ಮುಚ್ಚಲು ಸೂಚನೆ

ಮೈಸೂರು ೩೦

ಇನ್‌ಫ್ಲುಯೆಂಜಾ ನಿಮಿತ್ತ ನಗರದಲ್ಲಿರುವ ಶಾಲೆಗಳನ್ನು ನಾಳೆಯಿಂದ ಇನ್ನೂ ಹತ್ತು ದಿನಗಳ ಕಾಲ ಮುಚ್ಚಬೇಕೆಂದು ನಗರದ ಆರೋಗ್ಯ ಅಧಿಕಾರಿಗಳು ವಿದ್ಯಾ ಇಲಾಖೆಗೆ ಸೂಚಿಸಿರುತ್ತಾರೆ

ಲೂಸಿಯಾನಾ ಪ್ರಾಂತದಲ್ಲಿ ಬಿರುಗಾಳಿಯ ಅನಾಹುತ

ನೀರಿನ ಮೇಲೆ ನೂರಾರು ಶವಗಳು

ಅಮೆರಿಕದ ಲೂಸಿಯಾನಾ ಪ್ರಾಂತದಲ್ಲಿ ಕಳೆದ ಗುರುವಾರ ಬಲವಾದ ಬಿರುಗಾಳಿ ಬೀಸಿ, ಸಮುದ್ರದ ಅಲೆಗಳು ಉಕ್ಕಿಬಂದ ಪರಿಣಾಮವಾಗಿ ನೀರಿನಲ್ಲಿ ಅನೇಕರ ಶವಗಳು ತೇಲುತ್ತಿರುವುವೆಂದೂ, ಕನಿಷ್ಠ ಪಕ್ಷ ೨೫೦ ಜನರಾದರೂ ಮಡಿದಿರುವರೆಂದೂ ವರದಿಯಾಗಿದೆ. ಲೂಸಿಯಾನಾ ಮತ್ತು ಟೆಕ್ಸಾಸಿನಲ್ಲಿ ೪೦,೦೦೦ ಜನರು ನಿರಾಶ್ರಿತರಾಗಿರುತ್ತಾರೆ ರೋಗಗಳು ಉಲ್ಬಣಿಸುವುದೆಂಬ ಭೀತಿ ಆವರಿಸಿದೆ ಸಹಸ್ರಾರು ದನಕರುಗಳು ಮತ್ತು ಕಾಡು ಪ್ರಾಣಿಗಳು ಸತ್ತು ತೇಲುತ್ತಿವೆ ೩೦,೦೦೦ ದನಕರುಗಳು ಸತ್ತಿರುವುದಾಗಿಯೂ ಹೇಳಲಾಗಿದೆ. ಅನಾಹುತಕ್ಕೊಳಗಾದ ಪ್ರದೇಶದಲ್ಲಿ ರಕ್ಷಣಾ ಕಾರ್ಯಕ್ಕಾಗಿ ಅನೇಕ ಹೆಲಿಕಾಪ್ಟರ್ ವಿಮಾನಗಳನ್ನೂ, ದೋಣಿಗಳನ್ನೂ ಉಪಯೋಗಿಸಲಾಗುತ್ತಿದೆ ಬಿರುಗಾಳಿಯಿಂದ ಕ್ಯಾಮರಾನ್ ಎಂಬಲ್ಲಿ ಶೇಕಡ ೯೦ ರಷ್ಟು ಮನೆಗಳು ನಾಶವಾಗಿವೆ. ಒಟ್ಟು ೧½ ಕೋಟಿ ಡಾಲರಿನಷ್ಟು ನಷ್ಟವಾಗಿರುವುದೆಂದು ಅಂದಾಜಾಗಿದೆ

ಬೆಂಗಳೂರು ನಗರದಲ್ಲಿ ಇನ್ನೂ ೧೦ ದಿನ ಶಾಲೆಗಳ ಬಂದ್

ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಸ್ಥಳಗಳಲ್ಲಿ ಫಾಸಲೆಯಲ್ಲಿ ನಾಳೆಯಿಂದ ಇನ್ನೂ ೧೦ ದಿನಗಳವರೆಗೆ ಎಲ್ಲಾ ಶಾಲೆಗಳನ್ನು ಇನ್‌ಫ್ಲುಯೆಂಜಾಕ್ಕಾಗಿ ಮುಚ್ಚಲಾಗುವುದು ಚಿಕ್ಕ ಮಕ್ಕಳು ಈ ವ್ಯಾಧಿಗೆ ಬಹಳ ಬೇಗ ಒಳಗಾಗುವರೆಂದೂ, ಆ ವಯಸ್ಸಿನವರಿಗೆ ಅದು ತಗಲಿ ವಿಪರೀತಕ್ಕಿಟ್ಟುಕೊಳ್ಳಬಹುದೆಂದೂ ಸಂಸ್ಥಾನದ ಆರೋಗ್ಯಾಧಿಕಾರಿಗಳು ಸೂಚಿಸಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕ್ಲಾರಿಯೊನೆಟ್ ೭ ೧೫ ಎಸ್ ಲಕ್ಷ್ಮೀದೇವಿ ದೇವರ ನಾಮ ೮-೧೫ ಗಾನವಿಹಾರ ಮಧ್ಯಾಹ್ನ ೧೨ ಎಸ್ ಲಕ್ಷ್ಮೀದೇವಿ-ಗಾಯನ ೧೨-೩೦ ಎಂ ಹೆಚ್ ಜಯಮ್ಮ-ವೀಣೆ ೧ ವಾಸಂತಿ ಸತ್ಯನಾರಾಯಣ-ಹಿಂದಿ ಗೀತೆ ೧-೨೦ ವಿಜಯ ಉಗ್ರಾಂಕರ್-ಕವಿ ಭಜನೆ ೧ ೫೦ ಕ್ಲಾರಿಯೊನೆಟ್ ೨ ೧೫ ಪ್ರೌಢ ಶಾಲೆಗಳಿಗಾಗಿ ಸಂಜೆ ೬-೧೦ ಜಾನಪದ ಗೀತೆ. ೭-೩. ವಾರವಾರದಂತೆ ಛ ವೃಂದಗಾನ ಮತ್ತು ಯುಗಳ ಗಾನ ೮-೩೦ ಅಂತರ್ರಾಷ್ಟ್ರೀಯ ಭೂಗೋಳಿಕ ವರ್ಷ ಮತ್ತು ಭಾರತ ರೂಪಕ ೯-೧೫ ಕ್ರೀಡಾ ವಿಮರ್ಶೆ. ೯-೨೫ ಸಿ ಶಾರ್ ೯-೩೦ ಕಥಾ ಕಾಲಕ್ಷೇಪ ೧೦ ೩೦ ಎಂ ಎಸ್. ಜಯಮ್ಮ-ವೀಣೆ

ಪಾಕ್ ಗುಡ್ಡಗಾಡಿನವರಿಂದ ೧೨ ಜನರ ಕೊಲೆ, ಇಬ್ಬರ ದಹನ

ಗುಡ್ಡಗಾಡಿನ ಎರಡು ಗುಂಪುಗಳ ವೈಷಮ್ಯದ ಪರಿಣಾಮ

ಪಶ್ಚಿಮ ಪಾಕಿಸ್ತಾನದ ಪಶ್ಕರ್ ಬಳಿ ಇರುವ ಒಂದು ಹಳ್ಳಿಗೆ ಕಳೆದ ಬುಧವಾರ ಯಿದ್ದ ಶಸ್ತ್ರ ಗುಡ್ಡಗಾಡಿನ ಗುಂಪಿನವರು ನುಗ್ಗಿ ಧಾಳಿ ನಡೆಸಿ ೧೨ ಜನರನ್ನು ಗುಂಡಿನಿಂದ ಸಾಯಿಸಿ ಇಬ್ಬರನ್ನು ಜೀವಸಹಿತ ಸುಟ್ಟರೆಂದೂ ಅನೇಕರಿಗೆ ತೀವ್ರ ಗಾಯಗಳಾದುವೆಂದೂ ವರದಿಯಾಗಿದೆ ಸಿಂಧ್ ಪ್ರಾಂತದಲ್ಲಿ ಎರಡು ಗುಂಪುಗಳಿಗೆ ಒಡುದಿನಗಳಿಂದಲೂ ಇದ್ದ ವೈಷಮ್ಯದ ಪರಿಣಾಮವಾಗಿ ವೈರತ್ವ ಇದ್ದಿತೆಂದೂ, ಒಂದು ಗುಂಪಿನವರು ಈ ಕೃತ್ಯವನ್ನು ನಡೆಸಿ ಪರಾರಿಯಾದರೆಂದೂ ಹೇಳಲಾಗಿದೆ ಸಿಂಧ್ ಪ್ರದೇಶದಲ್ಲಿ ಈ ಘೋರ ಕೃತ್ಯವು ಆಗಿರುವುದು ಎರಡನೇ ಬಾರಿ ೧೫ ದಿನಗಳ ಹಿಂದೆ ಪುಂಡರು ಕಾರವಾನುಗಳನ್ನೂ ಪ್ರಯಾಣಿಕರನ್ನೂ ತಡೆದು ಲೂಟಿ ಮಾಡಿದ್ದರು

ಆರನೇ ಅಣು ಶಸ್ತ್ರ ಸಿಡಿಯಲಿಲ್ಲ

ಅಮೆರಿಕದವರು ಲಾಸ್ ವೇಗಾಸಿನಲ್ಲಿ ಮೊನ್ನೆ ಪರೀಕ್ಷಾರ್ಥವಾಗಿ ಹಾಕಿದ ಆರನೇ ಅಣು ಶಸ್ತ್ರವು ಸಿಡಿಯಲಿಲ್ಲವೆಂದು ಹೇಳಲಾಗಿದೆ ಅದಕ್ಕೆ ತಾಂತ್ರಿಕ ಅನಾನುಕೂಲವೇ ಕಾರಣವೆಂದು ಹೇಳಲಾಗಿದೆ

ಇಡೀ ಗ್ರಾಮದಲ್ಲಿ ಫ್ಲೂ

ಸೇಲಂ ಬಳಿ ಆತನೂರುಪಟ್ಟಿ ಎಂಬಲ್ಲಿರುವ ೩೫೦ ಸಂಸಾರಗಳಲ್ಲಿ ಎಲ್ಲರೂ ಇನ್‌ಫ್ಲುಯೆಂಜಾದಿಂದ ನರಳುತ್ತಿರುವರೆಂದು ಗೊತ್ತಾಗಿದೆ ಇಬ್ಬರು ಮಡಿದಿರುವರು

ನಂಜನಗೂಡು ಪೌರಸಭಾ ಆಯವ್ಯಯದ ಪರಿಶೀಲನೆ

ಸ್ವಂ ಸು. ಪ್ರೋ] ನಂಜನಗೂಡು ೩೦

ಪೌರಸಭೆಯ ಅಧಿವೇಶನವು ಈ ದಿನ ನಡೆದು ಪ್ರಸಕ್ತ ಸಾಲಿನ ಆಯವ್ಯಯ ಪಟ್ಟಿಯನ್ನು ಪರಿಶೀಲಿಸಲಾಯಿತು ೨ ೩೭ ಲಕ್ಷ ರೂ ಆದಾಯ ಮತ್ತು ೨-೧೪ ಲಕ್ಷ ರೂ ವೆಚ್ಚವಾಗಿ, ೨೩ ಸಾವಿರ ರೂ ಉಳಿತಾಯದ ನಿರೀಕ್ಷೆಯಿದೆ ಮನೆಗಂದಾಯವನ್ನು ಹೊಸದಾಗಿ ಕರಾಯಿಸಿರುವ ಬಗ್ಗೆ ಪುನರ್ವಿಮರ್ಶೆ ಮಾಡಲು ಉಪಾಧ್ಯಕ್ಷರ ನೇತೃತ್ವದಲ್ಲಿ ಉಪ ಸಮಿತಿಯೊಂದನ್ನು ರಚಿಸಲಾಯಿತು ಸಂಸ್ಥಾನದ ಎಲ್ಲಾ ಪೌರಸಭೆಗಳ ಸಂಘವೊಂದನ್ನು ಸ್ಥಾಪಿಸಬೇಕೆಂದೂ ಅದಕ್ಕಾಗಿ ಇಲ್ಲಿನ ಅಧ್ಯಕ್ಷರು ಪ್ರಯತ್ನಿಸಬೇಕೆಂದೂ ನಿರ್ಧರಿಸಲಾಯಿತು

ನಾಲೆಯ ಆರಂಭ

ಕಡಿಹಾರು ಗ್ರಾಮದ ಕೆರೆಯ ಏರಿಯು ಈಚೆಗೆ ಮಳೆಯಿಂದ ಒಡೆದುದನ್ನು ೧,೦೦೦ ಕೆಲಸಗಾರರ ಸಹಾಯದಿಂದ ಸರಿಪಡಿಸಲಾಯಿತಲ್ಲದೆ, ೧೦ ಫರ್ಲಾಂಗಿನ ಹೊಸ ನಾಲೆಯೊಂದನ್ನು ತೆಗೆದು ಈ ದಿನ ನೀರನ್ನು ಬಿಡಲಾಯಿತು ಅದಕ್ಕೆ ೯೦,೦೦೦ರೂ ವೆಚ್ಚವಾಯಿತು, ೩ ೦೦೦ ಎಕರೆ ಜಮೀನಿಗೆ ನೀರಾವರಿ ಸೌಲಭ್ಯವು ಇದರಿಂದ ಒದಗುವುದು

ವಿಜ್ಞಾನ ಮತ್ತು ಪಾರಿಭಾಷಿಕ ವಿದ್ಯೆ ಹೆಚ್ಚಾಗಿ ಬೆಳೆಯಬೇಕು

ವಿಶೇಷ ಘಟಿಕೋತ್ಸವದಲ್ಲಿ ಸಿ. ಡಿ. ದೇಶಮುಖ್‌ರವರ ಭಾಷಣ

ಮೈಸೂರು ೩೦

ರಾಷ್ಟ್ರದ ಆರ್ಥಿಕ ಉನ್ನತಿಯಾಗಬೇಕಾದರೆ ವಿಜ್ಞಾನ ಮತ್ತು ಪಾರಿಭಾಷಿಕ ವಿದ್ಯೆಗೆ ಹೆಚ್ಚು ಗಮನ ಕೊಡಬೇಕೆಂದು ವಿಶ್ವವಿದ್ಯಾಲಯಗಳ ಗ್ರಾಂಟ್ ಸಮಿತಿ ಅಧ್ಯಕ್ಷ ಶ್ರೀ ಸಿ ಡಿ ದೇಶಮುಖ್‌ರವರು ಈ ದಿನ ವಿಶ್ವವಿದ್ಯಾಲಯದ ವಿಶೇಷ ಘಟಿಕೋತ್ಸವದಲ್ಲಿ ಭಾಷಣ ಮಾಡುತ್ತ ತಿಳಿಸಿದರು ಮಾನವೀಯ ಶಾಸ್ತ್ರಗಳ ಅಧ್ಯಾಪನ ಪ್ರಾಮುಖ್ಯವಿದ್ದರೂ ಈಗಿನ ಕಾಲದಲ್ಲಿ ಆರ್ಥಿಕಾಭಿವೃದ್ಧಿಯ ಜ್ಞಾನವನ್ನೂ ಹರಡುವುದು ಮುಖ್ಯವೆಂದು ಅಭಿಪ್ರಾಯಪಟ್ಟರು ಅವರಿಗೆ ವಿಶ್ವವಿದ್ಯಾಲಯದವರು "ಡಾಕ್ಟರ್ ಆಫ್ ಲಾಸ್" ಎಂಬ ಗೌರವ ಪ್ರಶಸ್ತಿಯನ್ನಿತ್ತರು ಮ್ಯಾನಕುಲಪತಿಗಳಾದ ಶ್ರೀ ಜಯಚಾಮರಾಜ ಒಡೆಯರವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ದೇಶಮುಖ್‌ರವರು ತಮ್ಮ ಭಾಷಣದಲ್ಲಿ ಹೀಗೆ ನುಡಿದರು —

ವಿಜ್ಞಾನ ಸಂಶೋಧನೆಗಳ ಫಲವಾಗಿ ಮಾರಕಾಸ್ತ್ರಗಳ ಮೂಲಕ ಪ್ರಪಂಚಕ್ಕೆ ಉಂಟಾಗಿರುವ ಸರ್ವನಾಶದ ಭೀತಿಯನ್ನು ತಪ್ಪಿಸಿ ಜೀವನದ ಉನ್ನತಿಗೆ ಸಾಧಕವಾದ ವಿದ್ಯೆಯನ್ನು ಪ್ರಸಾರ ಮಾಡಲು ವಿಶ್ವವಿದ್ಯಾಲಯಗಳು ತೊಡಗಬೇಕು ನಿಜವಾದ ಜ್ಞಾನಕ್ಕೂ, ಕೇವಲ ತಿಳಿವಳಿಕೆಗೂ ಇರುವ ವ್ಯತ್ಯಾಸವನ್ನು ಮನಗಾಣಬೇಕು

ಪ್ರಜಾಪ್ರಭುತ್ವದಲ್ಲಿ ವಿದ್ಯಾಭ್ಯಾಸಕ್ಕೆ ಪ್ರಥಮ ಪುರಸ್ಕಾರವು ದೊರೆಯಬೇಕು ಪ್ರಜೆಗಳ ಜ್ಞಾನದ ಮಟ್ಟಕ್ಕೆ ಅನುಗುಣವಾಗಿ ಪ್ರಜಾಪ್ರಭುತ್ವದ ಯಶಸ್ಸು ಇರುತ್ತದೆ ನಮ್ಮ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ನೂರಕ್ಕೆ ೧೬ ಮಾತ್ರ ಇವೆ ಸ್ತ್ರೀಯರಲ್ಲಿ ಈ ಸಂಖ್ಯೆ ಇನ್ನೂ ಕಡಮೆ

ಮೈಸೂರು ಸಂಸ್ಥಾನದಲ್ಲಿ ಬಹಳ ಹಿಂದೆಯೇ ವಿದ್ಯಾಭ್ಯಾಸವು ವಿಶೇಷವಾಗಿ ಹಂತಿತ್ತು ಶಾಲಾ ಕಾಲೇಜುಗಳ ಫೀಜೂ ಕಡಮೆಯಾಗಿತ್ತು ಆದರೆ ಇಲ್ಲಿನ ಉಪಾಧ್ಯಾಯರುಗಳ ಸಂಬಳವು ಅತ್ಯಂತ ಕಡಮೆ. ಇದನ್ನು ಸುಧಾರಿಸುವುದು ತುರ್ತಿನ ಪ್ರಶ್ನೆ. ಕೇಂದ್ರ ಸಮಿತಿಯ ಹಣವನ್ನೆಲ್ಲಾ ಈಗ ಬಹುಮಟ್ಟಿಗೆ ವಿನಿಯೋಗಿಸಲಾಗಿದೆ ಇಲ್ಲಿನ ಇಂಟರ್ ಕಾಲೇಜುಗಳ ಜವಾಬ್ದಾರಿಯನ್ನು ಸಂಸ್ಥಾನ ಸರ್ಕಾರವು ವಹಿಸಿಕೊಳ್ಳಬೇಕು ಸದ್ಯಕ್ಕೆ ವಿದ್ಯಾರ್ಥಿ ನಿಲಯಗಳಿಗಾಗಿ ಸೂಕ್ತವಾದ ಧನ ಸಹಾಯ ಮಾಡಲಾಗುವುದು

ಮೈಸೂರು ಸಂಸ್ಥಾನದಲ್ಲಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವವರ ಸಂಖ್ಯೆ ಅತ್ಯಂತ ಕಡಿಮೆ ವಿಶ್ವವಿದ್ಯಾಲಯಕ್ಕೆ ಪ್ರವೇಶಿಸುವ ಮೊದಲೇ ವಿದ್ಯಾರ್ಥಿಗಳು ಬೇರೆಬೇರೆ ಪಾರಿಭಾಷಿಕ ಶಾಖೆಗಳಿಗೆ ಹೋಗಲು ಪ್ರೇರೇಪಿಸಬೇಕು ಇದರಿಂದ ಉದ್ಯೋಗ ಸಮಸ್ಯೆಯು ಬಹುಮಟ್ಟಿಗೆ ಪರಿಹಾರವಾಗುವುದು ಉದ್ಯೋಗಕ್ಕೆ ಪದವೀಧರರೇ ಬೇಕೆಂಬ ವ್ಯಾಮೋಹವು ತಪ್ಪಬೇಕು ಎಲ್ಲರೂ ಕಾಲೇಜುಗಳಿಗೆ ಹೋಗಿ ತಮ್ಮ ಶಕ್ತಿ, ಹಣ ಮತ್ತು ಕಾಲವನ್ನು ವ್ಯರ್ಥ ಮಾಡುವುದು ತಪ್ಪಬೇಕು

ದೇಶದ ಅಭ್ಯುದಯಕ್ಕೆ ವಿದ್ಯೆಯೇ ಆಧಾರ ಅದಕ್ಕಾಗಿ ಎಷ್ಟು ಹಣವನ್ನು ಬೇಕಾದರೂ ಒದಗಿಸುವುದು ಎಲ್ಲರ ಕರ್ತವ್ಯ.

ಪಾಕಿಸ್ತಾನದಲ್ಲಿರುವ ಎಲ್ಲಾ ಕಮ್ಯೂನಿಸ್ಟರ ಬಂಧನ

ಒಳಾಡಳಿತ ಮಂತ್ರಿಯ ಸೂಚನೆ

ಪಾಕಿಸ್ತಾನದಲ್ಲಿರುವ ಎಲ್ಲಾ ಕಮ್ಯೂನಿಸ್ಟರನ್ನೂ ಬಂಧಿಸಲು ಸರ್ಕಾರದವರು ಕ್ರಮವನ್ನು ತೆಗೆದುಕೊಳ್ಳುತ್ತಿರುವರೆಂದು ಪಾಕಿಸ್ತಾನದ ಒಳಾಡಳಿತ ಮಂತ್ರಿ ಮಿರ್ ಗುಲಾಂ ಅಲಿ ಖಾನ್ ತಾಲ್ಪುರ್‌ರವರು ತಿಳಿಸಿರುತ್ತಾರೆ ಕಮ್ಯೂನಿಸ್ಟರ ಚಟುವಟಿಕೆಗಳ ಮೇಲೆ ಸರ್ಕಾರದವರು ಕಣ್ಣಿಟ್ಟು ಕಾಯುತ್ತಿರುವರೆಂದೂ, ಸಕಾಲದಲ್ಲಿ ಅವರನ್ನು ಬಂಧಿಸಲಾಗುವುದೆಂದೂ ಅವರು ಹೇಳುವರು ಕಮ್ಯೂನಿಸ್ಟ್ ದೇಶಗಳೊಡನೆ ಸಂಪರ್ಕ ಹೊಂದಿರುವವರು ಯಾರೇ ಆಗಲಿ ಅವರನ್ನು ಬಿಟ್ಟುಕೊಡುವುದಿಲ್ಲವೆಂದೂ ಸಚಿವರು ಸ್ಪಷ್ಟಪಡಿಸುತ್ತಾರೆ ಪಾಕಿಸ್ತಾನದಲ್ಲಿ ಕಮ್ಯೂನಿಸ್ಟರ ಚಟುವಟಿಕೆಗಳು ನಡೆಯುತ್ತಿವೆಯೆಂದೂ ವಿಶೇಷ ರಾಯಭಾರ ಕಛೇರಿಗಳ ಪೈಕಿ ಹಲವು ಇಲ್ಲಿ ಕಮ್ಯೂನಿಸ್ಟ್ ಪ್ರಚಾರಕ್ಕೆ ವಿಪರೀತ ಹಣವನ್ನು ವೆಚ್ಚ ಮಾಡುತ್ತಿರುವುದಾಗಿಯೂ ಅವರು ಆಪಾದಿಸಿರುತ್ತಾರೆ

ಕೇಂದ್ರ ಮಂತ್ರಿ ಮುಂದೆ ಪ್ರದರ್ಶನ ನಡೆಸಿದ ನೌಕರರ ಸಸ್ಪೆಂಡ್

ಬೊಂಬಾಯಿಯಲ್ಲಿ ಈಚೆಗೆ ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರ ವಿರುದ್ಧವಾಗಿ ೧ ೦೦೦ ಕೇಂದ್ರ ನೌಕರರು ಪ್ರದರ್ಶನ ನಡೆಸಿದ ಸಂಬಂಧವಾಗಿ ಬೊಂಬಾಯಿ ವರಮಾನ ತೆರಿಗೆ ಕಛೇರಿಯ ೪೦ ನೌಕರರನ್ನು ಕೂಡಲೇ ಸಸ್ಪೆಂಡ್ ಮಾಡಲಾಗಿರುವುದೆಂದು ಅವರಿಗೆ ತಿಳಿಸಲಾಗಿದೆ ನೌಕರರ ಪ್ರತಿನಿಧಿಗಳಿಗೆ ಎರಡು ನಿಮಿಷ ಕಾಲವಾದರೂ ಭೇಟಿ ಕೊಟ್ಟು ಕೇಂದ್ರ ಮಂತ್ರಿಯವರು ಮಾತುಕತೆ ನಡೆಸಲು ಒಪ್ಪದಿರುವುದನ್ನು ಪ್ರತಿಭಟಿಸಲು ನೌಕರರ ಸಂಘದವರು ಮುಷ್ಕರ ಹೂಡುವ ಬಗ್ಗೆ ಮತದಾನ ತೆಗೆದುಕೊಳ್ಳಲಾಗುವುದೆಂದು ಹೇಳಲಾಗಿದೆ

ಕಾಲೇಜು ಪ್ರಿನ್ಸಿಪಾಲರಿಗೆ ಇರಿತ

ತಿರುವಾಂಕೂರು ಕೊಚ್ಚಿಯ ಮಾಜಿ ವಿದ್ಯಾ ಇಲಾಖಾಧಿಕಾರಿ ಮತ್ತು ಕಾರೈಕುಡಿ ಅಳಗಪ್ಪ ಕಾಲೇಜಿನ ಪ್ರಿನ್ಸಿಪಾಲರಾದ ಎ ಎನ್ ತಂಪಿಯವರನ್ನು ಮೊನ್ನೆ ರಾತ್ರಿ ಒಬ್ಬ ಯುವಕನು ಅವರ ಮನೆಯಲ್ಲಿ ಇರಿದನೆಂದೂ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ ಯುವಕನ ದಸ್ತಗಿರಿಯಾಗಿದೆ

ವಿಧಾನ ಸಭೆಯ ಕರ್ನಾಟಕದ ಸದಸ್ಯ ತಂಬಾಕದರವರ ನಿಧನ

ಧಾರವಾಡ ಜಿಲ್ಲೆಯ ಕಲ್ಘಟಗಿ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಆರಿಸಲ್ಪಟ್ಟಿದ್ದ ಶ್ರೀ ಬಿ. ಆರ್ ತಂಬಾಕದರವರು ಕಳೆದ ೨೭ನೇ ತಾರೀಕು ಧಾರವಾಡದಲ್ಲಿ ನಿಧನ ಹೊಂದಿದರು

ವಾರ ಭವಿಷ್ಯ

ತಾ|| ೩೦-೬-೫೭ ರಿಂದ ೭-೭-೫೭ ರ ವರೆಗೆ

ಮೇಷ:—ಪ್ರಕೃತಿ ಮತ್ತು ಪ್ರಾಸಂಗಿಕ ಸುಖ ಸ್ವಜನರಿಂದ ಅನುಕೂಲ, ಕೋರ್ಟು ಕಾರ್ಯ ಜಯ, ಪ್ರವಾಸ ನಿರ್ವಿಘ್ನಕರ, ಕಾರ್ಯಸಿದ್ಧಿ.

ವೃಷಭ:—ಆರೋಗ್ಯ ನೆಟ್ಟಗೆ, ವ್ಯಾಪಾರ ವ್ಯವಹಾರಗಳಲ್ಲಿ ಸುಖ, ನೌಕರಿ,ದಂಧೆ ಉದ್ಯೋಗಗಳಲ್ಲಿ ಲಾಭ, ಕಾರ್ಯಸಿದ್ಧಿ, ಕೋರ್ಟು ಕಾರ್ಯ ಜಯ.

ಮಿಥುನ:—ಆರೋಗ್ಯ ನೆಟ್ಟಗೆ, ವ್ಯಾಪಾರ ವ್ಯವಹಾರಗಳಲ್ಲಿ ಲಾಭ, ಬಾಕಿ ವಸೂಲಿ, ಖರ್ಚಿನ ತೀರ್ವೆ, ನೌಕರಿ ಉದ್ಯೋಗಗಳಲ್ಲಿ ಲಾಭ, ಮಹತ್ವದ ಕಾರ್ಯಕ್ಕೆ ಪತ್ರ ಬರೆಯಲು ಸಕಾಲ.

ಕರ್ಕ:—ಉಷ್ಣ ವಿಕಾರ, ನಿದ್ರೆಯಿಲ್ಲ, ಅಪಚನ, ನೌಕರಿ ಮತ್ತು ಉದ್ಯೋಗದಲ್ಲಿ ಸ್ಥಿತಿ ಕೆಡುವುದು, ನೌಕರರಿಂದ ಹಾನಿ, ಕೋರ್ಟು ಕಾರ್ಯ ಮುಂದಕ್ಕೆ

ಸಿಂಹ:—ಆರೋಗ್ಯ ನೆಟ್ಟಗೆ, ಆರ್ಥಿಕ ಸುಖ, ಪ್ರಿಯ ವ್ಯಕ್ತಿಯ ಅಗಲುವಿಕೆ, ಧೈರ್ಯದಿಂದ ಕಾರ್ಯಸಾಧನೆ, ಪತ್ನಿಗೆ ಅನಾರೋಗ್ಯ, ಹಿರಿಯರೊಡನೆ ಕಲಹ

ಕನ್ಯಾ:— ಆರೋಗ್ಯ ನೆಟ್ಟಗೆ, ಹಣಕಾಸಿನ ಅನುಕೂಲ, ಪ್ರವಾಸ ಯೋಗ, ಅಪ್ತೇಷ್ಟರ ಇಚ್ಛೆಯಂತೆ ಕಾರ್ಯ ಸಾಧನೆ, ಅತಿ ಆಕಾಂಕ್ಷೆಗಳ ಪೂರ್ತಿಕೆ, ನೌಕರಿ ಉದ್ಯೋಗಾದಿಗಳಲ್ಲಿ ಲಾಭ.

ತುಲಾ:— ಆರೋಗ್ಯ ನೆಟ್ಟಗೆ, ಮನಶ್ಯಾಂತಿ ಇಲ್ಲ, ಸುಳ್ಳು ಹೇಳುವ ಪ್ರಸಂಗ, ಪತ್ನಿಗೆ ಆರೋಗ್ಯ, ಮಕ್ಕಳ ಆರೋಗ್ಯವಿರದು

ವೃಶ್ಚಿಕ:— ಅಪ್ತೇಷ್ಟರೊಬ್ಬರಿಂದ ಅಪಮಾನ, ನೌಕರಿ, ದಂಧೆಗಳಲ್ಲಿ ತೊಂದರೆ, ನಿದ್ರೆ ಮತ್ತು ಕಾಯಿಯ ಆರೋಗ್ಯ ಕೆಡಬಹುದು.

ಧನು:— ಆರೋಗ್ಯ ನೆಟ್ಟಗೆ, ಪತ್ನಿ ಪುತ್ರರಿಂದ ಸುಖ, ಮಹತ್ವ ಕಾರ್ಯದ ಸಾಧನೆ, ಮೃಷ್ಟಾನ್ನ ಭೋಜನ, ಮಿತ್ರರ ಪ್ರೋತ್ಸಾಹ, ನೌಕರಿ ದಂಧೆಯಲ್ಲಿ ಲಾಭ. ಸಂತೋಷ ವಾರ್ತೆ ಶ್ರುತ.

ಮಕರ:— ಆರೋಗ್ಯ ಮತ್ತು ಆರ್ಥಿಕ ಸುಖ, ಕಣ್ಣಿನ ಬಾಧೆ, ಪತ್ನಿಯಿಂದ ತೊಂದರೆ, ಅಧಿಕ ವ್ಯಯ, ಮಕ್ಕಳ ಕಾಟ, ನೌಕರಿ ಮತ್ತು ಉದ್ಯೋಗದಲ್ಲಿ ಲಾಭವಾಗುವ ಸನ್ನಿವೇಶ

ಕುಂಭ:— ಉಷ್ಣ ವಿಕಾರ,ಸಹನಾಶಕ್ತಿ ಇಲ್ಲ ಸಂಶಯಕ್ಕೆಡೆ, ಹೊಸ ಜವಾಬ್ದಾರಿಗಳು, ಆರೋಗ್ಯಕ್ಕೆ ಕೇಡು.

ಮೀನ:— ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ನೆಟ್ಟಗೆ, ತನ್ನವರ ಬರುವುದು, ವೆಚ್ಚ ಅಧಿಕ, ಧನವ್ಯಯ ಮಿತಿಮೀರುವುದು, ಕೋರ್ಟು ಕಾರ್ಯ ಜಯವಿಲ್ಲ, ಪ್ರವಾಸದಲ್ಲಿ ನಷ್ಟ.

ನಾದಬ್ರಹ್ಮ ಸಂಗೀತ ಸಭಾ, ಮೈಸೂರು
ಪ್ರಕಟಣೆ

ಈ ತಿಂಗಳು ನಡೆಯಬೇಕಾದ ಸಂಗೀತ ಕಛೇರಿಯನ್ನು "ಫ್ಲೂ" ವಿನ ಪ್ರಯುಕ್ತ ನಿಲ್ಲಿಸಲಾಗಿದೆ.

ಮುಂದಿನ ತಿಂಗಳು, ಅಂದರೆ ಜುಲೈ ೨೭-೭-೫೭ ಕ್ಕೆ ವಿ|| ಎ. ಕೆ. ಸಿ. ನಟರಾಜರವರ "ಕ್ಲಾರಿಯೊನೆಟ್" ಕಛೇರಿಯನ್ನು ಏರ್ಪಡಿಸಿದೆ. ಸದಸ್ಯರುಗಳು ಸಹಕರಿಸಬೇಕಾಗಿ ಪ್ರಾರ್ಥನೆ.

ವ್ಯವಸ್ಥಾಪಕರು

Edited, Printed and Published by A. R. Nagarajan at Sadhvi Press, D Subbaiah Road, Mysore

ಜರ್ಮನಿ ಐಕ್ಯಕ್ಕೆ ಅಣು ಶಸ್ತ್ರ ಶೇಖರಣೆಯಿಂದ ಅಡ್ಡಿ

ಪಶ್ಚಿಮ ಜರ್ಮನಿಗೆ ರಷ್ಯದ ಪತ್ರ

ರಷ್ಯವು ಪಶ್ಚಿಮ ಜರ್ಮನಿಗೆ ಹೊಸ ಪತ್ರವೊಂದನ್ನು ಬರೆದು ಪಶ್ಚಿಮ ಜರ್ಮನಿಯ ಸೈನ್ಯಗಳಿಗೆ ಅಣು ಶಸ್ತ್ರಗಳನ್ನು ಒದಗಿಸಿದರೆ ಎರಡು ಭಾಗದ ಜರ್ಮನಿಗಳೂ ಒಟ್ಟುಗೂಡುವುದಕ್ಕೆ ಭಾರಿ ಅಡ್ಡಿಯಾಗುವುದೆಂದು ತಿಳಿಸಿದೆ. ಶಸ್ತ್ರ ಸನ್ಯಾಸ ಒಪ್ಪಂದಕ್ಕೆ ರಾಜಕೀಯ ಪರಿಸ್ಥಿತಿಗಳನ್ನು ಪಶ್ಚಿಮ ಜರ್ಮನಿಯು ವಿಧಿಸುತ್ತಿರುವುದನ್ನು ರಷ್ಯ ಆಕ್ಷೇಪಿಸಿದೆ. ... ಶಸ್ತ್ರಾಸ್ತ್ರ ಯುದ್ಧದಲ್ಲಿ ಜರ್ಮನಿಯ ... ಭೂಮಿಯಾಗುವುದೆಂದೂ ಜರ್ಮನಿಯು ಅಣು ಶಸ್ತ್ರ ಧಾರಣೆಗೆ ಬೆಂಬಲ ಕೊಡುವವರು ಆದರ ಐಕ್ಯಕ್ಕೆ ಮುಳುವಾಗುವರೆಂದೂ ರಷ್ಯವು ಸೂಚಿಸಿದೆ.

ಅರಿಯಲೂರು ದುರಂತದಲ್ಲಿ ಮಡಿದವರಿಗೆ ಹೆಚ್ಚಿನ ಪರಿಹಾರ

ಅರಿಯಲೂರು ರೈಲು ಅಪಘಾತದಲ್ಲಿ ಮಡಿದವರ ವಾರಸುದಾರರಿಗೂ ಮತ್ತು ಗಾಯಗೊಂಡವರಿಗೂ ಕಮಿಷನರು ಇತ್ತ ಪರಿಹಾರದ ಜೊತೆಗೆ ಶಲಾ ಶೇಕಡ ೨೦ ರಷ್ಟು ಹೆಚ್ಚಿನ ಪರಿಹಾರವನ್ನು ಕೊಡುವಂತೆ ರೈಲ್ವೆ ಬೋರ್ಡಿನವರು ಆಜ್ಞೆ ಮಾಡಿರುತ್ತಾರೆ

ವಿದ್ಯಾಧಿಕಾರಿಗಳಿಗೆ ಬೀಳ್ಕೊಡುಗೆ

ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದು ಸೆಕೆಂಡರಿ ವಿದ್ಯಾಭ್ಯಾಸ ಸಮಿತಿ ಕಾರ್ಯದರ್ಶಿಯಾಗಿ ವರ್ಗಾವಣೆಯಾಗಿರುವ ಶ್ರೀ ಹೆಚ್. ಎ. ಶ್ರೀರಂಗರಾಜುರವರನ್ನು ಬೀಳ್ಕೊಡಲು ಕಳೆದ ಭಾನುವಾರ ನಗರದ ಮಾಧ್ಯಮಿಕ ಶಾಲಾ ಅಧ್ಯಾಪಕರ ಸಂಘದ ಆಶ್ರಯದಲ್ಲಿ ಸಮಾರಂಭವೊಂದು ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆಯಿತು. ಶ್ರೀಮತಿ ... ಸಂಗೀತವಾದ ನಂತರ ಸಂಘದ ಅಧ್ಯಕ್ಷ ಶ್ರೀ ಎ. ಪಿ. ವೆಂಕಟರಾಮಯ್ಯನವರು ಸ್ವಾಗತ ಬಯಸಿದರು. ಶ್ರೀಗಳಾದ ಎ. ಎಲ್. ಸೂರ್ಯನಾರಾಯಣರಾವ್, ದೊಡ್ಡೇಗೌಡ, ನಾರಾಯಣರಾವ್ ಮತ್ತು ನರಸಿಂಹಾಚಾರ್ ... ಭಾಷಣ ಮಾಡಿ ವಿದ್ಯಾಧಿಕಾರಿಗಳ ಗುಣ ... ಹೊಗಳಿದರು. ಶ್ರೀಯುತರು ... ತೆಯನ್ನು ಸಲ್ಲಿಸಿದರು.

ವಿವಾಹ ಮಹೋತ್ಸವ

... ವಿಶ್ವವಿದ್ಯಾಲಯದ ಸಂಸ್ಕೃತ ಅಧ್ಯಾಪಕ ಶ್ರೀ ಆರ್. ನ ... ಸ್ವಾಮಿಯವರು ತಮ್ಮ ಕುಮಾರಿ ಸೌ|| ಪದ್ಮಾವತಿಯನ್ನು ಶ್ರೀ ಎಸ್. ಲಕ್ಷ್ಮಣಶಾಸ್ತ್ರಿಗಳವರ ಪುತ್ರರಾದ ಶ್ರೀ ಎಲ್. ಶ್ರೀಕಂಠಯ್ಯನವರಿಗೆ ಕೊಟ್ಟು ಈ ದಿನ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 1911)

ಮೈಸೂರು ವಿದ್ಯಾರ್ಥಿಗಳಿಗೆ ನೆರೆ ಪ್ರಾಂತದಲ್ಲಿ ವಿದ್ಯಾಭ್ಯಾಸ ಸೌಕರ್ಯ

ಆಂಧ್ರ, ಮದ್ರಾಸು ಮತ್ತು ಬೊಂಬಾಯಿಗಳಿಗೆ ಕೇಂದ್ರದ ಸೂಚನೆ

ಕೇಂದ್ರ ಸರ್ಕಾರದವರು ಸಂಸ್ಥಾನ ಪುನರ್ವಿಂಗಡಣೆ ಶಾಸನದ ಪ್ರಕಾರ ಬೊಂಬಾಯಿ, ಮದ್ರಾಸು ಮತ್ತು ಆಂಧ್ರಪ್ರದೇಶ ಸರ್ಕಾರಗಳಿಗೆ ನಿರ್ದೇಶನವಿತ್ತು, ಆಯಾ ಪ್ರಾಂತಗಳಲ್ಲಿ ವಿಸ್ತೃತ ಮೈಸೂರಿನ ವಿಭಾಗಗಳಿಗೆ ಸರ್ಕಾರಿ ವಿದ್ಯಾ ಸಂಸ್ಥೆಗಳಲ್ಲಿ ಅವಕಾಶವೀಯುವಂತೆ ತಿಳಿಸಿರುತ್ತಾರೆ.

ಜಪಾನೀಯರಿಂದ ಪಾಕಿಸ್ತಾನದಲ್ಲಿ ಜಪಾನ್ ಮಾದರಿ ಬೇಸಾಯ

ಪಶ್ಚಿಮ ಪಾಕಿಸ್ತಾನದಲ್ಲಿ ೪೦೦ ಜಪಾನೀ ಸಂಸಾರಗಳಿಗೆ ವಾಸಿಸಲು ಆಶ್ರಯವೀಯಲಾಗುವುದು. ಆ ಸಂಸಾರಗಳವರು ಗುಲಾಂ ಮಹಮದ್ ಅಣೆಕಟ್ಟಿನ ಪ್ರದೇಶದಲ್ಲಿ ಜಪಾನ್ ಮಾದರಿಯ ಭತ್ತದ ವ್ಯವಸಾಯ ಮಾಡುವರು. ಜಪಾನಿನ ಪ್ರಧಾನಿ ನೊಬುಸುಕೆ ಕಿಷಿಯವರು ಕರಾಚಿಗೆ ಭೇಟಿಯಿತ್ತಿದ್ದಾಗ ಅವರಿಗೆ ಪಾಕಿಸ್ತಾನ ಸರ್ಕಾರದವರು ಈ ಸಲಹೆ ಮಾಡಿದ್ದರು. ಜಪಾನೀ ಜನರಿಗೆ ಪಾಕಿಸ್ತಾನದ ನಾಗರೀಕತ್ವವನ್ನು ಕೊಡಲಾಗುವುದೆಂದು ಹೇಳಲಾಗಿದೆ.

ಮಹಿಳಾ ಬಸ್ ಕಂಡಕ್ಟರ ಉಪವಾಸ

ಬೆಂಗಳೂರು ನಗರದ ಬಸ್ ಸರ್ವಿಸ್ಸಿನ ಕಂಡಕ್ಟರ್ ಶ್ರೀಮತಿ ಚಂದ್ರಪ್ರಭಾ ಎಂಬಾಕೆಯು ಕೆಲವು ದಿನಗಳ ಹಿಂದೆ ಕೆಲಸಕ್ಕೆ ಬರಲು ತಪ್ಪಿಸಿಕೊಂಡುದರ ಮೇಲೆ ಅವಳನ್ನು ಸಸ್ಪೆಂಡ್ ಮಾಡಿದುದರಿಂದ ಆಕೆಯು ಮೊನ್ನೆ ಬಸ್ ಕಛೇರಿ ಬಳಿ ೬ ಗಂಟೆ ಕಾಲ ಉಪವಾಸ ಮುಷ್ಕರವನ್ನು ನಡೆಸಿದಳು. ಆಕೆಯ ವಿಷಯವನ್ನು ಪರಿಶೀಲಿಸುವುದಾಗಿ ಜನರಲ್ ಮ್ಯಾನೇಜರ್ ಶ್ರೀ ಎಲ್. ಲಕ್ಷ್ಮಣರಾಯುಡು ಭರವಸೆಯಿತ್ತ ಮೇಲೆ ಉಪವಾಸವನ್ನು ನಿಲ್ಲಿಸಿದರು.

ಯಶವಂತಪುರದಲ್ಲಿ ರೈಲು ಇಂಜಿನ ಷೆಡ್ಡು

ಬೆಂಗಳೂರಿಗೆ ೩ ಮೈಲಿ ದೂರವಿರುವ ಯಶವಂತಪುರದಲ್ಲಿ ಹೊಸ ರೈಲು ಇಂಜಿನ ಷೆಡ್ಡನ್ನು ೧೧|| ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲು ರೈಲ್ವೆ ಬೋರ್ಡಿನವರು ಮಂಜೂರಾತಿ ಇತ್ತಿರುವರು

ಕುಂಚಿಟಿಗರ ವಿದ್ಯಾರ್ಥಿನಿಲಯ

ಇಲವಾಲದ ರಸ್ತೆಯಲ್ಲಿರುವ ಕುಂಚಿಟಿಗರ ಸಂಘದ ವಿದ್ಯಾರ್ಥಿನಿಲಯಕ್ಕೆ ಸೇರುವ ವಿದ್ಯಾರ್ಥಿಗಳು ಅರ್ಜಿ ಕೊಡುವ ಅವಧಿಯನ್ನು ಜುಲೈ ೨ನೇ ತಾರೀಖಿನ ವರೆಗೆ ಹೆಚ್ಚಿಸಲಾಗಿದೆ

SARADA VILAS COLLEGE
INTER TUTORIAL SECTION
ENGLISH & P. C. M.
Highly qualified & experienced staff
Classes in full swing

NALINS

Furniture on hire

Enquire at:—
602 College Road,
MYSORE
Concession to students

ಚೀಣಕ್ಕೆ ವಿಶ್ವಸಂಸ್ಥೆ ಸದಸ್ಯತ್ವ

ಕಾಮನ್‌ವೆಲ್ತ್ ಪ್ರಧಾನಿಗಳ ಸಭೆಯಲ್ಲಿ ನೆಹರೂ ಒತ್ತಾಯ

ವಿಶ್ವ ಸಂಸ್ಥೆಯಲ್ಲಿ ಚೀಣಕ್ಕೆ ಪ್ರವೇಶ ದೊರೆಯಬೇಕೆಂದು ನೆಹರೂರವರು ಕಾಮನ್‌ವೆಲ್ತ್ ಪ್ರಧಾನಿಗಳ ಸಭೆಯಲ್ಲಿ ಮೊನ್ನೆ ಒತ್ತಾಯ ಮಾಡಿದರು. ಪಾಕಿಸ್ತಾನದ ಪ್ರಧಾನಿಯವರು ಚೀಣಕ್ಕೆ ಸದಸ್ಯತ್ವ ಕೊಡುವುದು ಉಚಿತವೆಂದು ಹೇಳಿದರೂ, ಈಗ ಸಕಾಲವಲ್ಲವೆಂದೂ ಅದರಿಂದ ಕ್ಲಿಷ್ಟ ಸಮಸ್ಯೆಗಳು ಉಂಟಾಗುವುದೆಂದೂ, ತಿಳಿಸಿದರು. ಆಸ್ಟ್ರೇಲಿಯದ ರಾಬರ್ಟ್ ಮೆಂಜೀಸ್‌ರವರು ಚೀಣಕ್ಕೆ ಪ್ರಾತಿನಿಧ್ಯವನ್ನು ವಿರೋಧಿಸಿದರೆಂದು ಹೇಳಲಾಗಿದೆ. ಆದರೆ ಬ್ರಿಟಿಷ್ ಪ್ರತಿನಿಧಿಗಳು ನೆಹರೂರವರ ವಾದವನ್ನು ಎತ್ತಿಹಿಡಿದು ಚೀಣಕ್ಕೆ ಭದ್ರತಾ ಸಮಿತಿಯಲ್ಲೂ ವಿಶ್ವಸಂಸ್ಥೆಯ ಇತರ ಸಮಿತಿಗಳಲ್ಲೂ ಸದಸ್ಯತ್ವ ವೀಯಬೇಕೆಂದು ತಿಳಿಸಿದರು. ಆದರೆ ಅದನ್ನು ಕೊಡುವ ಕಾಲದ ಬಗ್ಗೆ ಬ್ರಿಟನ್ನಿನ ಮತಭೇದವನ್ನು ವಿವರಿಸಲಾಯಿತು

ರಾಜಾಸ್ತಾನದ ಮಂತ್ರಿಗಳಿಂದ ಶೇ|| ೧೫ರಷ್ಟು ಸಂಬಳ ಖೋತಾ

ರಾಜಾಸ್ತಾನದ ಮಂತ್ರಿಗಳು ಮತ್ತು ಉಪಮಂತ್ರಿಗಳು ತಮ್ಮ ಸಂಬಳದಲ್ಲಿ ಶೇಕಡ ೧೫ ರಷ್ಟು ಖೋತಾಕ್ಕೆ ತಮ್ಮ ಸಮ್ಮತಿಸಿರುತ್ತಾರೆ. ನಾಳೆಯಿಂದ ಇದು ಜಾರಿಗೆ ಬರುವುದು. ಅಲ್ಲಿನ ಮಂತ್ರಿಗಳಿಗೆ ೧ ಸಾವಿರ ಮತ್ತು ಉಪ ಮಂತ್ರಿಗಳಿಗೆ ೮೦೦ ರೂ ತಲಬು ಇದೆ.

ಬಿಹಾರಿನಲ್ಲಿ ಬೆಂಕಿಯಿಂದ ೧೦ ಲಕ್ಷ ರೂ. ಆಸ್ತಿ ನಷ್ಟ

ಬಿಹಾರಿನ ಪಾಚರುಪಿ ಎಂಬಲ್ಲಿ ಒಂದು ಸಕ್ಕರೆ ಕಾರ್ಖಾನೆಯ ಗಡಂಗಿನಲ್ಲಿ ಬೆಂಕಿಯೆದ್ದು ೧೦ ಲಕ್ಷ ರೂ. ನಷ್ಟು ಆಸ್ತಿಪಾಸ್ತಿಗಳ ನಷ್ಟವಾಗಿದೆ. ಪಕ್ಕದ ಗ್ಯಾಸ್ ಯಂತ್ರಕ್ಕೆ ಬೆಂಕಿಯು ವ್ಯಾಪಿಸದಂತೆ ತಡೆಗಟ್ಟಲಾಯಿತು.

ಹೈದರಾಬಾದಿಗೆ
ಹೆಚ್. ಎಸ್. ರುದ್ರಪ್ಪನವರ ಭೇಟಿ

ಹೈದರಾಬಾದಿನಲ್ಲಿ ಬರುವ ೩ನೇ ತಾರೀಖು ಸೇರುವ ಆಹಾರ ಸಚಿವರುಗಳ ಸಮ್ಮೇಳನದಲ್ಲಿ ಮೈಸೂರಿನ ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪನವರು ಭಾಗವಹಿಸಲಿರುವರು. ಅವರೊಡನೆ ರೆವಿನ್ಯೂ ಕಾರ್ಯದರ್ಶಿ ಶ್ರೀ ಎಂ. ಎಸ್. ಸ್ವಾಮಿನಾಥನವರೂ ತೆರಳುವರು.

ಡಿವಿಜನಲ್ ಕಮಿಷನರ ಅಸಿಸ್ಟೆಂಟರು

ಬೆಂಗಳೂರಿನಲ್ಲಿರುವ ಮೈಸೂರು ಫುಡ್ ಪ್ರಾಡಕ್ಟ್ಸ್ ಸಂಸ್ಥೆ ಕಾರ್ಯದರ್ಶಿ ಶ್ರೀ ಎಸ್. ಮುನೀಂದ್ರಸ್ವಾಮಿಯವರನ್ನು ಮೈಸೂರು ಡಿವಿಜನಲ್ ಕಮಿಷನರ ಅಸಿಸ್ಟೆಂಟರಾಗಿ ನೇಮಿಸಲಾಗಿದೆ

ಮುನಿಸಂಜಪ್ಪನವರ ಪುನರ್ನೇಮಕ

ಕಳೆದ ೨೫ನೇ ತಾರೀಖು ನಿವೃತ್ತರಾದ ಕೋಲಾರದ ಚಿನ್ನದ ಗಣಿ ಆಡಳಿತ ಬೋರ್ಡಿನ ಉಪಾಧ್ಯಕ್ಷ ಶ್ರೀ ಎಸ್. ಮುನಿಸಂಜಪ್ಪನವರನ್ನು ಬರುವ ಏಪ್ರಿಲ್ ಆಖೈರುವರೆಗೆ ಪುನಃ ಅದೇ ಸ್ಥಾನಕ್ಕೆ ನೇಮಿಸಲಾಗಿದೆ.

VIDYA TUTORIAL COLLEGE,
Dalvoy High School Buildings, Mysore
INTERMEDIATE : 1956 English Texts
Classes Commenced
B A., B Sc : English 1957 Texts
Classes formed. Join immediatly
Other classes in full swing
Inter : Eng 1957 texts Kan, P. C. M., P. E. M, P. C. B., C. B. Z., H. E. L, H. E. G.,
B.A., B.Sc.,—All subjects, All Parts
Ladies also admitted
Enquiries 9-30 to 10-30 A.M.
5-30 to 7-30 P.M



ನವೀನ ಮಾದರಿ ಗಡಿಯಾರಗಳಿಗೆ

ಫೇವರ್ ಲ್ಯೂಬಾ, ವೆಸ್ಟೆಂಡ್, ಸ್ಕೈಮಾ, ರೋಮರ್ ಇತ್ಯಾದಿ, ಇತ್ಯಾದಿ

ರಾಂ ಪತಂಗೆ ಕಂಪೆನಿ,
ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

ಪುಟ್ಟ ಅಣ್ಣ ತಂಗಿ ★

ಪಾತ್ರವರ್ಗ :— ಜೆಮಿನಿ ಗಣೇಶ್, ಸಾವಿತ್ರಿ, ನಂಬಿಯಾರ್, ತಂಗವೇಲು, ಜಿ. ವರಲಕ್ಷ್ಮಿ, ಎಂ. ಕೆ. ರಾಧಾ ಮುಂತಾದವರು

28—6—57 ರಿಂದ : ಅಮೋಘವಾದ 2ನೇ ವಾರ : ದಿನವಹಿ 2 ಆಟಗಳು
ಜೂಪಿಟರ್ ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಕರ್ಪೂರಕ್ಕರಸಿ ★

[ಶ್ರೀ ರಾಘವೇಂದ್ರಾ ರಿಲೀಸ್]

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 2 ನಯಾ ಪೈಸೆ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಪುಟ : ೦೫] SADHVI : MONDAY 1—7—1957 ಮೈಸೂರು : ಸೋಮವಾರ ೧—೭—೧೯೫೭ : [ಸಂಚಿಕೆ : ೩೨೭

ಡಾಕ್ಟರ್ ಎಂ. ವಿ. ಗೋಪಾಲಸ್ವಾಮಿಯವರ ನಿಧನ

ಪ್ರಾಥಮಿಕ ವಿದ್ಯಾಭ್ಯಾಸದ ಪ್ರಗತಿ ಬಗ್ಗೆ ಸಮಾಲೋಚನೆ

ವಿದ್ಯಾಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ

ಮೈಸೂರು ೧

ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ನಿರೀಕ್ಷಿಸಿರುವ ಮಟ್ಟವನ್ನು ಮುಟ್ಟದೇ ಇರುವ ಬಗ್ಗೆ ಕಾರಣಗಳನ್ನು ಕಂಡುಹಿಡಿಯುವ ಸಲುವಾಗಿ ನೆನ್ನೆ ಇಲ್ಲಿನ ಮಹಾರಾಜಾ ಹೈಸ್ಕೂಲಿನಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳ ಮತ್ತು ಮುಖ್ಯೋಪಾಧ್ಯಾಯರುಗಳ ಸಭೆಯೊಂದು ನಡೆಯಿತು ವಿದ್ಯಾ ಮಂತ್ರಿ ಶ್ರೀ ಎ ವೆಂಕಟಪ್ಪನವರು ಅಧ್ಯಕ್ಷತೆ ವಹಿಸಿದ್ದರು

ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಬಿ. ಎಂ. ಕೃಷ್ಣೇಗೌಡರು ಸಭೆಯ ಉದ್ದೇಶವನ್ನು ವಿವರಿಸಿದರು. ವಿದ್ಯಾ ಮಂತ್ರಿಗಳು ಭಾಷಣ ಮಾಡಿ ಇತರ ಜಿಲ್ಲೆಗಳಿಗಿಂತಲೂ ಮೈಸೂರು ಜಿಲ್ಲೆಯಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಮಕ್ಕಳ ಸಂಖ್ಯೆಯು ಕಡಿಮೆಯಾಗಿದೆಯೆಂದು ಹೇಳಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಈಗ ಗೊತ್ತು ಮಾಡಲಾಗಿರುವ ಮಟ್ಟದಲ್ಲಿ ಪ್ರಸಾರ ಮಾಡಲು ವಿದ್ಯಾ ಇಲಾಖಾಧಿಕಾರಿಗಳೆಲ್ಲರೂ ಸೂಕ್ತ ಸಲಹೆಯನ್ನು ಕೊಡಬೇಕೆಂದು ಕೋರಿದರು. ತಮ್ಮ ಕೈ ಕೆಳಗಿನ ನೌಕರರ ಮೇಲ್ವಿಚಾರಣೆಯನ್ನು ನಡೆಸುವುದು ಮಾತ್ರವಲ್ಲದೆ, ಅವಶ್ಯಕವಾದ ಕರ್ತವ್ಯ ಮಾರ್ಗದಲ್ಲಿ ಅವರನ್ನೂ ಮತ್ತು ತಂದೆ ತಾಯಿಗಳನ್ನೂ ಪ್ರೇರೇಪಿಸುವುದು ಅಧಿಕಾರಿಗಳ ಕರ್ತವ್ಯವೆಂದು ಅವರು ಸೂಚಿಸಿದರು. ಈಗ ದೊರೆತಿರುವ ಭೂದಾನದ ಜಮೀನಿನ ಪೈಕಿ ನೇಕದ ಎಂರಷ್ಟು ಅಪ್ರಯೋಜಕವಾಗಿರುವುದರಿಂದ ಅವುಗಳನ್ನು ನೂರಿ ಶಾಲೆಗಳಿಗೆ ಉಪಯೋಗವಾಗುವ ಬೇರೆ ಜಮೀನುಗಳನ್ನು ಕೊಳ್ಳಬೇಕೆಂದು ಅವರು ಸೂಚಿಸಿದರು ದಾನಿಗಳಿಂದ ಬಂದಿರುವ ಶಾಲಾ ಕಟ್ಟಡಗಳ ದುರಸ್ತಿಗೆ ತಕ್ಕ ಗಮನವೀಯದಿರುವುದನ್ನು ಅವರು ಟೀಕಿಸಿದರು. ಹಲವು ಗ್ರಾಂಟುಗಳನ್ನು ಉಪಯೋಗಿಸಿಕೊಳ್ಳದೆ ಅವುಗಳು ಉಳಿದುಹೋಗುವುದನ್ನು ಅವರು ತಿಳಿಸಿ, ಅದಕ್ಕೆ ಅವಕಾಶ ಕೊಡಬಾರದೆಂದು ಹೇಳಿದರು

ಮೈಸೂರು ಮಹಾರಾಣಿ ಹೈಸ್ಕೂಲಿನಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಬೆಳಗಿನ ತರಗತಿಗಳನ್ನು ನಡೆಸುವಂತೆ ಒಂದು ಸಲಹೆಯನ್ನು ಮಂಡಿಸಲಾಯಿತು. ನಂಜನಗೂಡಿನ ವಿದ್ಯಾರ್ಥಿನಿಯರ ಹೈಸ್ಕೂಲನ್ನು ಊರಿನ ಬೇರೆಕಡೆಗೆ ವರ್ಗಾಯಿಸುವುದಾಗಿ ವಿದ್ಯಾಧಿಕಾರಿಗಳು ತಿಳಿಸಿದರು. ಉಪಾಧ್ಯಾಯರುಗಳಿಗೆ ಶಿಕ್ಷಣ ಸೌಲಭ್ಯವನ್ನು ಹೆಚ್ಚಿಸುವುದಕ್ಕಾಗಿ ಬೇಸಗೆಯ ತರಗತಿಗಳನ್ನು ತೆರೆಯುವಂತೆಯೂ, ಇನ್ನು ಮುಂದೆ ತರಬೇತು ಹೊಂದಿದವರನ್ನೇ ಉಪಾಧ್ಯಾಯರನ್ನಾಗಿ ಆರಿಸಬೇಕೆಂದೂ ಡಿ. ಡಿ. ಪಿ. ಐ. ಶ್ರೀ ವಾಸುದೇವಯ್ಯನವರು ಸೂಚಿಸಿದರು.

ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯನ್ನು ೪ ರಿಂದ ೭ ವರ್ಷಕ್ಕೆ ಇಳಿಸುವುದಾಗಿ ಡಿ ಪಿ ಐ ರವರು ಸೂಚಿಸಿದರು.

ವಿದ್ಯಾ ಇಲಾಖೆ ಮತ್ತು ಇತರ ಕಛೇರಿಗಳನ್ನು ಜಾಕಿ ಕ್ವಾರ್ಟರ್ಸಿಗೆ ವರ್ಗಾಯಿಸುವುದರಿಂ

ಭೂಕಂದಾಯದ ಬದಲು ವ್ಯವಸಾಯ ವರಮಾನ ತೆರಿಗೆ

ಸಂಸ್ಥಾನ ಸರ್ಕಾರಗಳಿಗೆ ಕೇಂದ್ರ ಹಣಕಾಸಿನ ಮಂತ್ರಿಯ ಸಲಹೆ

ಈಗಿನ ಭೂ ಕಂದಾಯದ ಬದಲು ವ್ಯವಸಾಯ ವರಮಾನ ತೆರಿಗೆಯನ್ನು ವಿಧಿಸುವಂತೆ ಸಂಸ್ಥಾನ ಸರ್ಕಾರಗಳಿಗೆ ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ ಇದರಿಂದ ಆಹಾರ ಮತ್ತು ಭೂ ಸಮಸ್ಯೆಗಳು ಪರಿಹಾರವಾಗುವವೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಸಣ್ಣ ಸಣ್ಣ ಹಿಡುವಳಿದಾರರಿಗೆ ವಿನಾಯಿತಿ ಕೊಟ್ಟು ಅವರಿಗೆ ಕ್ರೆಡಿಟ್ ಕಾರ್ಡ್ ಸೌಕರ್ಯ ನೀಡಬಹುದೆಂದೂ ಸಚಿವರು ಸಲಹೆ ಮಾಡಿರುತ್ತಾರೆ

ಅಮೆರಿಕದ ಹಡಗಿನಲ್ಲಿ ಬೆಂಕಿ; ೧,೦೦೦ ಬೇಲು ಹತ್ತಿ ನಾಶ

ಜಪಾನಿನ ಯಾಕೊಹಾಮ ರೇವು ಬಳಿ ಅಮೆರಿಕದ ಸಾಮಗ್ರಿ ವಾಹಕ ನೌಕೆಯೊಂದರಲ್ಲಿ ನೆನ್ನೆ ಬೆಂಕಿಯುಂಟಾಗಿ ೧,೦೦೦ ಬೇಲು ಹತ್ತಿ ಮತ್ತು ೪೦೦ ಟನ್ ಇತರ ವಸ್ತುಗಳು ಸುಟ್ಟು ಕಾಗದಪತ್ರಗಳು ನಾಶವಾದುವು ರೇವನ್ನು ಸಮೀಪಿಸುತ್ತಿದ್ದಾಗ ಬೆಂಕಿಯುಂಟಾಯಿತು ಅದನ್ನು ನಂತರ ಆರಿಸಲಾಯಿತು

ಟೆಲಿಫೋನ್ ನೌಕರರಿಂದ ಈ ದಿನ ಸಂಬಳದ ನಿರಾಕರಣೆ

ನಗರದಲ್ಲಿರುವ ಟೆಲಿಫೋನು ಇಂಜನಿಯರಿಂಗ್ ೩ನೇ ವರ್ಗದ ಸಂಘದ ಶಾಖೆಯ ಕಾರ್ಯಕಾರಿ ಸಮಿತಿಯವರು ನೆನ್ನೆ ಸಭೆ ನಡೆಸಿ, ನೌಕರರು ಈ ದಿನ ಸಂಬಳವನ್ನು ತೆಗೆದುಕೊಳ್ಳಲು ನಿರಾಕರಿಸಬೇಕೆಂದು ನಿರ್ಧರಿಸಿದರು ನಾಳೆ ದಿನ ಅವರುಗಳು ಸಂಬಳವನ್ನು ಪಡೆಯುವರು. ಕೇಂದ್ರ ಸರ್ಕಾರದವರು ಇಲಾಖೆಯ ಇಂಜನಿಯರಿಂಗ್ ವಿಭಾಗದ ಬಗ್ಗೆ 'ಮಲತಾಯಿ' ವರ್ತನೆಯನ್ನು ತೋರುತ್ತಿರುವುದಕ್ಕೂ ಮತ್ತು ನೌಕರರ ಬೇಡಿಕೆಗಳನ್ನು ವರ್ಗವರ್ಗವಾಗಿ ಪರಿಶೀಲಿಸುತ್ತಿರುವುದಕ್ಕಾಗಿಯೂ ಈ ದಿನ ಸಂಬಳ ಪಡೆಯದಿರುವುದರ ಮೂಲಕ ಅವರು ಪ್ರತಿಭಟಿಸಿದರು

ಅಶೋಕಾ ಇಂಡಸ್ಟ್ರೀಸ್ ಆರಂಭೋತ್ಸವ

ಸಂತೆಪೇಟೆ ಮಂಡಿ ವ್ಯಾಪಾರಿಗಳಾದ ಶ್ರೀ ಬಿ. ಎಂ. ನಾಗರಾಜಶೆಟ್ಟಿ ಮತ್ತು ಸನ್ಸ್‌ರವರು ಇಲವಾಲ ರಸ್ತೆಯಲ್ಲಿರುವ ತಮ್ಮ ಸ್ವಂತ ಕಟ್ಟಡದಲ್ಲಿ ಏರ್ಪಡಿಸಿರುವ ಅಶೋಕಾ ಇಂಡಸ್ಟ್ರೀಸಿನ ಆರಂಭೋತ್ಸವವನ್ನು ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ನಿನ್ನೆ ನೆರವೇರಿಸಿದರು. ಶ್ರೀ ಸಿ. ಗೋಪಾಲಕೃಷ್ಣಶೆಟ್ಟರು ಅಧ್ಯಕ್ಷತೆ ವಹಿಸಿದ್ದರು.

ದ ನೌಕರರೂ, ಸಾರ್ವಜನಿಕರೂ ೩-೪ ಮೈಲಿ ದೂರ ಊರಿನ ಹೊರಗೆ ಪ್ರತಿದಿನವೂ ಹೋಗಬೇಕಾಗುವ ತೊಂದರೆಯನ್ನು ತಪ್ಪಿಸಿ ನಗರದೊಳಗೆ ಕಛೇರಿಗಳನ್ನು ಏರ್ಪಡಿಸಬೇಕೆಂದು ಶ್ರೀ ಎ. ರಾಮಣ್ಣನವರು ಒತ್ತಾಯಪಡಿಸಿದರು ಅದನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸುವುದಾಗಿ ಸಚಿವರು ಉತ್ತರವಿತ್ತರು

ನಗರದ ಶಾಲಾ ಕಾಲೇಜುಗಳಿಗೆ ೧೧ ನೇ ತಾರೀಕಿನವರೆಗೆ ರಜಾ

ಮೈಸೂರು ೧

ಇನ್‌ಫ್ಲುಯೆಂಜಾ ವ್ಯಾಧಿ ನಿಮಿತ್ತ, ಆರೋಗ್ಯಾಧಿಕಾರಿಗಳ ಸಲಹೆ ಮೇಲೆ ನಗರದ ಎಲ್ಲಾ ಶಾಲೆಗಳಿಗೂ ಮತ್ತು ಕಾಲೇಜುಗಳಿಗೂ ಇನ್ನೂ ಹತ್ತು ದಿವಸ ರಜಾ ಕೊಡುವಂತೆ ಆಜ್ಞೆಯಾಗಿದೆ. ಅವುಗಳು ೧೧ ನೇ ತಾರೀಕು ಗುರುವಾರ ತೆರೆಯಲ್ಪಡುವುವು

ಬೆಂಗಳೂರಿನಲ್ಲಿಯೂ ಇದೇ ರೀತಿ ಶಾಲಾ ಕಾಲೇಜುಗಳು ೧೧ ನೇ ತಾರೀಕು ತೆರೆಯುವುವು ಇತರ ಕಡೆಗಳಲ್ಲೂ ಸ್ಥಳೀಯ ಆರೋಗ್ಯಾಧಿಕಾರಿಗಳ ಸಲಹೆಪಡೆದು ಸೂಕ್ತಾನುಸಾರ ಕಾಲೇಜುಗಳಿಗೆ ರಜಾ ಕೊಡಬಹುದೆಂದು ತಿಳಿಸಲಾಗಿದೆ

ಜೋರ್ಡಾನಿಗೆ ಅಮೆರಿಕದಿಂದ ಕೋಟಿ ಡಾಲರ್ ಮಿಲಿಟರಿ ನೆರವು

ಜೋರ್ಡಾನಿನ ಸೈನ್ಯಗಳಿಗೆ ೧ ಕೋಟಿ ಡಾಲರಿನಷ್ಟು ಮಿಲಿಟರಿ ಸಾಧನಗಳನ್ನು ಅಮೆರಿಕವು ಒದಗಿಸುವುದೆಂದು ಜೋರ್ಡಾನ್ ಸರ್ಕಾರದವರು ತಿಳಿಸಿರುತ್ತಾರೆ ಜೋರ್ಡಾನ್ ಸೈನ್ಯದಲ್ಲಿ ದಕ್ಷತೆಯ ಮಟ್ಟವನ್ನು ಒಂದೇ ಸಮನಾಗಿ ಇಟ್ಟುಕೊಳ್ಳುವುದಕ್ಕಾಗಿ ನೆರವಿಗೆ ಅಮೆರಿಕವನ್ನು ಜೋರ್ಡಾನು ಕೋರಿದ್ದಿತು. ಅಲ್ಲಿನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ಕಳೆದ ತಿಂಗಳು ಜೋರ್ಡಾನಿಗೆ ಅಮೆರಿಕವು ೧ ಕೋಟಿ ಡಾಲರ್ ಸಹಾಯವನ್ನು ಕೊಟ್ಟಿದ್ದಿತು. ಇನ್ನೂ ೧೦೦ ಲಕ್ಷ ಡಾಲರ್ ಸಹಾಯವನ್ನು ಕೊಡಲಾಗುವುದು. ಒಟ್ಟು ೩೦೦ ಲಕ್ಷ ಡಾಲರ್ ಸಹಾಯವನ್ನು ಯಾವ ಷರತ್ತುಗಳಿಲ್ಲದೆ ಕೊಡಲಾಗಿದೆ.

ದಕ್ಷಿಣ ವಿಯಟ್ನಾಂ ಮಾಜಿ ದೊರೆಯ ಆಸ್ತಿ ವಶ

ದಕ್ಷಿಣ ವಿಯಟ್ನಾಮಿನ ರಾಷ್ಟ್ರೀಯ ಸಭೆಯು ಅಲ್ಲಿನ ಮಾಜಿ ದೊರೆ ಬಾವೊದಾಯರ ಆಸ್ತಿಗಳನ್ನು ಕಿತ್ತುಕೊಳ್ಳಲು ಸರ್ಕಾರಕ್ಕೆ ಅನುಮತಿಯಿತ್ತಿರುವುದಾಗಿ ವರದಿಯಾಗಿದೆ. ಮಾಜಿ ದೊರೆಯು ಈಗ ಫ್ರಾನ್ಸಿನಲ್ಲಿರುವರು. ಅವರ ಸ್ಥಾನಕ್ಕೆ ಡೀನ್ ದೀಮರು ಆರಿಸಬಂದಿರುವರು.

ಸಣ್ಣ ಉಳಿತಾಯ ಯೋಜನೆ ತೀವ್ರಗೊಳಿಸಲು ನಿರ್ಧಾರ

ಸ್ವಂ ಸು ತಂತಿ] ಬೆಂಗಳೂರು ೧

ದ್ವಿತೀಯ ಪಂಚ ವಾರ್ಷಿಕ ಯೋಜನೆ ಕಾರ್ಯಗಳಿಗಾಗಿ ಹಣವನ್ನು ಒದಗಿಸಲು ಸರ್ಕಾರದವರು ಸಣ್ಣ ಉಳಿತಾಯ ಯೋಜನೆಯನ್ನು ತೀವ್ರತೆಯಿಂದ ಜಾರಿಗೆ ತರಲು ನಿರ್ಧರಿಸಿರುತ್ತಾರೆ. ಈ ಬಗ್ಗೆ ವಿವರಗಳನ್ನು ಸಿದ್ಧಗೊಳಿಸಲಾಗುತ್ತಿದೆ ನೆನ್ನೆ ಸರ್ಕಾರದವರು ಈ ವಿಚಾರವಾಗಿ ಸಭೆಯೊಂದನ್ನು ಕರೆದಿದ್ದರು. ಅದರಲ್ಲಿ ಹಣಕಾಸು, ರೆವಿನ್ಯೂ, ಸ್ಥಳೀಯ ಸಂಸ್ಥೆ, ವ್ಯವಸಾಯ ಮತ್ತು ಅಭಿವೃದ್ಧಿ ಸಚಿವರುಗಳು ಭಾಗವಹಿಸಿದ್ದರು. ನಗರದಲ್ಲಿರುವ ಭಾರತ ಸರ್ಕಾರದ ಕೈಗಾರಿಕೆಗಳ ಮುಖ್ಯಾಧಿಕಾರಿಗಳು ಪ್ರಮುಖ ಹಣಕಾಸಿನ ಉದ್ಯಮಗಾರರಾದ ಶ್ರೀ ಎ. ಆರ್ ಚಂದಾವರ್ಕರ್ ಮುಂತಾದವರೂ ಹಾಜರಿದ್ದರು

ಡಾ|| ಎಂ.ವಿ. ಗೋಪಾಲಸ್ವಾಮಿಯವರ ನಿಧನ

ಮೈಸೂರು ೧

ಮೈಸೂರು ವಿಶ್ವವಿದ್ಯಾಲಯದ ಮನಶ್ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ|| ಎಂ. ವಿ. ಗೋಪಾಲಸ್ವಾಮಿಯವರು ಮೊನ್ನೆ ದಿನ ಬೆಂಗಳೂರಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಅವರಿಗೆ ಮೂರು ದಿನಗಳ ಹಿಂದೆ ಮೆದುಳಿನ ರಕ್ತಸ್ರಾವ ಉಂಟಾಗಿತ್ತೆಂದು ತಿಳಿದುಬಂದಿದೆ.

ಅವರು ಮಹಾರಾಜಾ ಕಾಲೇಜಿನಲ್ಲಿ ಮೊಟ್ಟ ಮೊದಲನೆಯದಾಗಿ ಮನಶ್ಶಾಸ್ತ್ರದ ಶಾಖೆಯನ್ನು ಆರಂಭಿಸಿದರು ಇದರಲ್ಲಿ ಇಡೀ ಏಷ್ಯಾ ಖಂಡದಲ್ಲೇ ಪ್ರಖ್ಯಾತಿ ಪಡೆದಿದ್ದರು ಪಾಶ್ಚಿಮಾತ್ಯ ದೇಶಗಳಲ್ಲಿಯೂ ಸಹಾ ಇವರ ಪಾಂಡಿತ್ಯಕ್ಕೆ ಪುರಸ್ಕಾರವು ದೊರೆತಿತ್ತು. ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿ ಇವರು ನಿವೃತ್ತಿ ಹೊಂದಿದ ಮೇಲೆ ಇತ್ತೀಚೆಗೆ ಬೆಂಗಳೂರಿನ ಅಖಿಲ ಭಾರತ ಮನಶ್ಶಾಸ್ತ್ರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು

ಮೈಸೂರು ಆಕಾಶವಾಣಿಯ ಸಂಸ್ಥಾಪಕರು ಇವರು. ಶಿಶು ವಿಹಾರಗಳನ್ನು ಆರಂಭಿಸಿದ ಕೀರ್ತಿಯು ಇವರಿಗೆ ಸಲ್ಲತಕ್ಕದ್ದು ಇವರು ಮಾಡಿರುವ ಅನೇಕ ಸಂಶೋಧನೆಗಳು ಘನ ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿವೆ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧು ವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸೂಚಿಸುತ್ತೇವೆ.

ಮೃತರಿಗೆ ೬೧ ವರ್ಷ ವಯಸ್ಸಾಗಿತ್ತು. ಅವರಿಗೆ ಪತ್ನಿಯೂ, ೪ ಜನ ಗಂಡು ಮಕ್ಕಳೂ, ಒಬ್ಬ ಹೆಣ್ಣು ಮಗಳೂ ಇರುವರು. ಹಿರಿಯ ಮಗನು ಭಾರತದ ವಿಮಾನ ದಳದಲ್ಲಿ ಉನ್ನತ ನೌಕರಿಯಲ್ಲಿರುವರು. ಡಾ|| ಗೋಪಾಲಸ್ವಾಮಿಯವರು ಲಂಡನ್ನಿನ ಪಿಹೆಚ್. ಡಿ. ಪ್ರಶಸ್ತಿಯನ್ನು ಪಡೆದಿದ್ದರು.

ಜೂಜಾಟಕ್ಕೆ ಜುಲ್ಮಾನೆ

ಮಂಡಿ ಮೊಹಲ್ಲೆಯ ಆಗಾ ಜಾನ್ ಮತ್ತು ಇನ್ನೊಬ್ಬನು ನಿನ್ನೆ ಕುದುರೆ ಜೂಜಾಡುತ್ತಿದ್ದುದಕ್ಕಾಗಿ ತಲಾ ಇಪ್ಪತ್ತು ರೂ. ಜುಲ್ಮಾನೆ ವಿಧಿಸಲಾಗಿದೆ.

ಬರ್ಮಾ ಪೋಲೀಸರಿಗೂ, ಚೀನಾ ಸೈನಿಕರಿಗೂ ಘರ್ಷಣೆ

ಉತ್ತರ ಬರ್ಮದ ಒಂದು ಗಡಿ ಹಳ್ಳಿಯಲ್ಲಿ ಕಳೆದ ವಾರ ಬರ್ಮಾ ಪೋಲೀಸರಿಗೂ, ಚೀನಾ ಸೈನಿಕರಿಗೂ ಗುಂಡಿನ ಕಾಳಗವಾಯಿತೆಂದು ವರದಿಯಾಗಿದೆ. ಆದರೆ ಅದರಲ್ಲಿ ಯಾವ ಸಾವುನೋವುಗಳೂ ಆಗಿಲ್ಲ ಚೀಣದ ಜನರು ಬರ್ಮದೊಳಗೆ ಅಕ್ರಮವಾಗಿ ಪ್ರವೇಶಿಸುವುದನ್ನು ಬರ್ಮಾ ಪೋಲೀಸರು ತನಿಖೆ ಮಾಡುತ್ತಿದ್ದಾಗ ಚೀಣೀಯರು ಗುಂಡು ಹಾರಿಸಿದರೆಂದು ಹೇಳಲಾಗಿದೆ. ಸುಮಾರು ೧೮೦ ಮಂದಿ ಅಕ್ರಮ ಪ್ರವೇಶ ಮಾಡಿದವರನ್ನು ಪೋಲೀಸರು ಬಂಧಿಸಿ ಠಾಣೆಗೆ ಕರೆದೊಯ್ದಿದ್ದರು. ರಾತ್ರಿಯನ್ನೇ ಆಕ್ರಮಿಸುತ್ತಾ ಬಂದ ಚೀನಾ ಸೈನಿಕರು ಬೆದರಿಸಿದಾಗ ಬಂಧಿತರಾದವರನ್ನು ಬಿಡುಗಡೆ ಮಾಡಲಾಯಿತು.

ವಾರ ಭವಿಷ್ಯ

ತಾ|| ೩೦-೬-೫೭ ರಿಂದ ೬-೭-೫೭ ರ ವರೆಗೆ

ಮೇಷ:—ಪ್ರಕೃತಿ ಮತ್ತು ಪ್ರಾಸಂಗಿಕ ಸುಖ ಸ್ವಜನರಿಂದ ಅನುಕೂಲ, ಕೋರ್ಟು ಕಾರ್ಯ ಜಯ, ಪ್ರವಾಸ ನಿರ್ವಿಘ್ನಕರ, ಕಾರ್ಯ ಸಿದ್ಧಿ.

ವೃಷಭ:—ಆರೋಗ್ಯ ನೆಟ್ಟಗೆ, ವ್ಯಾಪಾರ ವ್ಯವಹಾರಗಳಲ್ಲಿ ಸುಖ, ನೌಕರಿ,ದಂಧೆ ಉದ್ಯೋಗಗಳಲ್ಲಿ ಲಾಭ, ಕಾರ್ಯಸಿದ್ಧಿ, ಕೋರ್ಟು ಕಾರ್ಯ ಜಯ.

ಮಿಥುನ:—ಆರೋಗ್ಯ ನೆಟ್ಟಗೆ, ವ್ಯಾಪಾರ ವ್ಯವಹಾರಗಳಲ್ಲಿ ಲಾಭ, ಬಾಕಿ ವಸೂಲಿ, ಋಣದ ತೀರ್ವೆ, ನೌಕರಿ ಉದ್ಯೋಗಗಳಲ್ಲಿ ಲಾಭ, ಮಹತ್ವದ ಕಾರ್ಯಕ್ಕೆ ಪತ್ರ ಬರೆಯಲು ಸಕಾಲ.

ಕರ್ಕ:—ಉಷ್ಣ ವಿಕಾರ, ನಿದ್ರೆಯಿಲ್ಲ, ಅಜೀರ್ಣ, ನೌಕರಿ ಮತ್ತು ಉದ್ಯೋಗದಲ್ಲಿ ಸ್ಥಿತಿ ಕೆಡುವುದು, ನೌಕರರಿಂದ ಹಾನಿ, ಕೋರ್ಟು ಕಾರ್ಯ ಮುಂದಕ್ಕೆ

ಸಿಂಹ:—ಆರೋಗ್ಯ ನೆಟ್ಟಗೆ, ಆರ್ಥಿಕ ಸುಖ, ಪ್ರಿಯ ವ್ಯಕ್ತಿಯ ಅಗಲುವಿಕೆ, ಧೈರ್ಯದಿಂದ ಕಾರ್ಯಸಾಧನೆ, ಪತ್ನಿಗೆ ಅನಾರೋಗ್ಯ, ಪಾಲುಗಾರರೊಡನೆ ಕಲಹ.

ಕನ್ಯಾ:—ಆರೋಗ್ಯ ನೆಟ್ಟಗೆ, ಹಣಕಾಸಿನ ಅನುಕೂಲ, ಪ್ರವಾಸ ಯೋಗ, ಅಪ್ತೇಷ್ಟರ ಇಚ್ಛೆಯಂತೆ ಕಾರ್ಯ ಸಾಧನೆ, ಅತಿ ಆಕಾಂಕ್ಷೆಗಳ ಪೂರೈಕೆ, ನೌಕರಿ ಉದ್ಯೋಗಾದಿಗಳಲ್ಲಿ ಲಾಭ.

ತುಲಾ:— ಆರೋಗ್ಯ ನೆಟ್ಟಗೆ, ಮನಶ್ಶಾಂತಿ ಇಲ್ಲ, ಸುಳ್ಳು ಹೇಳುವ ಪ್ರಸಂಗ, ಪತ್ನಿಗೆ ಆರೋಗ್ಯ, ಮಕ್ಕಳ ಆರೋಗ್ಯವಿರದು

ವೃಶ್ಚಿಕ:— ಅಪ್ತೇಷ್ಟರೊಬ್ಬರಿಂದ ಅವಮಾನ, ನೌಕರಿ, ದಂಧೆಗಳಲ್ಲಿ ತೊಂದರೆ, ನಿಮ್ಮ ಮತ್ತು ತಾಯಿಯ ಆರೋಗ್ಯ ಕೆಡಬಹುದು.

ಧನು:— ಆರೋಗ್ಯ ನೆಟ್ಟಗೆ, ಪತ್ನಿ ಪುತ್ರರಿಂದ ಸುಖ, ಮಹತ್ವ ಕಾರ್ಯದ ಸಾಧನೆ, ಮೃಷ್ಟಾನ್ನ ಭೋಜನ, ಮಿತ್ರರ ಪ್ರೋತ್ಸಾಹ, ನೌಕರಿ ದಂಧೆಗಳಲ್ಲಿ ಲಾಭ, ಮಹತ್ವ ವಾರ್ತೆ ಶ್ರುತ

ಮಕರ:— ಆರೋಗ್ಯ ಮತ್ತು ಆರ್ಥಿಕಸುಖ, ಕಣ್ಣಿನ ಬಾಧೆ, ಪತ್ನಿಯಿಂದ ತೊಂದರೆ, ಆಧಿವ್ಯಾಧಿ, ಮಕ್ಕಳ ಕಾಟ, ನೌಕರಿ ಮತ್ತು ಉದ್ಯೋಗದಲ್ಲಿ ಲಾಭವಾಗುವ ಸನ್ನಿವೇಶ.

ಕುಂಭ:— ಉಷ್ಣ ವಿಕಾರ,ಸಹನಾಶಕ್ತಿ ಇಲ್ಲ ಸಂಶಯಕ್ಕೆಡೆ, ಹೊಸ ಜವಾಬ್ದಾರಿಗಳು, ಆರೋಗ್ಯಕ್ಕೆ ಕೇಡು.

ಮೀನ:— ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ನೆಟ್ಟಗೆ, ಅನ್ಯರ ಬಿರುನುಡಿ, ವೆಚ್ಚ ಅಧಿಕ, ಧನವ್ಯಯ ಮಿತಿಮೀರುವುದು, ಕೋರ್ಟು ಕಾರ್ಯ ಜಯವಿಲ್ಲ, ಪ್ರವಾಸದಲ್ಲಿ ನಷ್ಟ.

ನಾದಬ್ರಹ್ಮ ಸಂಗೀತ ಸಭಾ, ಮೈಸೂರು

ಪ್ರಕಟಣೆ

ಈ ತಿಂಗಳು ನಡೆಯಬೇಕಾದ ಸಂಗೀತ ಕಛೇರಿಯನ್ನು "ಫ್ಲೂ" ವಿನ ಪ್ರಯುಕ್ತ ನಿಲ್ಲಿಸಲಾಗಿದೆ

ಮುಂದಿನ ತಿಂಗಳು, ಅಂದರೆ ಜುಲೈ ೨೭-೭-೫೭ ಕ್ಕೆ ವಿ|| ಎ. ಕೆ. ಸಿ ನಟರಾಜರವರ "ಕ್ಲಾರಿಯೊನೆಟ್" ಕಛೇರಿಯನ್ನು ಏರ್ಪಡಿಸಿದೆ ಸದಸ್ಯರುಗಳು ಸಹಕರಿಸಬೇಕಾಗಿ ಪ್ರಾರ್ಥನೆ.

ವ್ಯವಸ್ಥಾಪಕರು

Edited. Printed and Published by A. R. Nagarajan at Sadhvi Press, D.Subbaiah Road, Mysore

ಜರ್ಮನಿ ಐಕ್ಯಕ್ಕೆ ಅಣು ಶಸ್ತ್ರ ಶೇಖರಣೆಯಿಂದ ಅಡ್ಡಿ

ಪಶ್ಚಿಮ ಜರ್ಮನಿಗೆ ರಷ್ಯದ ಪತ್ರ

ರಷ್ಯವು ಪಶ್ಚಿಮ ಜರ್ಮನಿಗೆ ಹೊಸ ಪತ್ರವೊಂದನ್ನು ಬರೆದು ಪಶ್ಚಿಮ ಜರ್ಮನಿಯ ಸೈನ್ಯಗಳಿಗೆ ಅಣು ಶಸ್ತ್ರಗಳನ್ನು ಒದಗಿಸಿದರೆ ಅದರಿಂದ ಉಭಯ ಜರ್ಮನಿಗಳೂ ಒಟ್ಟುಗೂಡುವುದಕ್ಕೆ ಭಾರಿ ಅಡ್ಡಿಯಾಗುವುದೆಂದು ತಿಳಿಸಿದೆ. ಶಸ್ತ್ರ ಸನ್ಯಾಸ ಒಪ್ಪಂದಕ್ಕೆ ರಾಜಕೀಯ. ಪರಿಹಾರಗಳನ್ನು ಪಶ್ಚಿಮ ಜರ್ಮನಿಯು ವಿಧಿಸುತ್ತಿರುವುದನ್ನು ರಷ್ಯ ಆಕ್ಷೇಪಿಸಿದೆ. ಅಣು ಶಸ್ತ್ರಾಸ್ತ್ರ ಯುದ್ಧದಲ್ಲಿ ಜರ್ಮನಿಯು ರಣಭೂಮಿಯಾಗುವುದೆಂದೂ, ಜರ್ಮನಿಯ ಅಣು ಶಸ್ತ್ರ ಧಾರಣೆಗೆ ಬೆಂಬಲ ಕೊಡುವವರು ಅದರ ಐಕ್ಯಕ್ಕೆ ಮುಳುವಾಗುವರೆಂದೂ ರಷ್ಯವು ಸೂಚಿಸಿದೆ.

ಅರಿಯಲೂರು ದುರಂತದಲ್ಲಿ ಮಡಿದವರಿಗೆ ಹೆಚ್ಚಿನ ಪರಿಹಾರ

ಅರಿಯಲೂರು ರೈಲು ಅಪಘಾತದಲ್ಲಿ ಮಡಿದವರ ವಾರಸುದಾರರಿಗೂ ಮತ್ತು ಗಾಯಗೊಂಡವರಿಗೂ ಕಮಿಷನರು ಇತ್ತ ಪರಿಹಾರದ ಜೊತೆಗೆ ತಲಾ ಶೇಕಡ ೩೦ ರಷ್ಟು ಹೆಚ್ಚಿನ ಪರಿಹಾರವನ್ನು ಕೊಡುವಂತೆ ರೈಲ್ವೆ ಬೋರ್ಡಿನವರು ಆಜ್ಞೆ ಮಾಡಿದ್ದಾರೆ.

ವಿದ್ಯಾಧಿಕಾರಿಗಳಿಗೆ ಬೀಳ್ಕೊಡುಗೆ

ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದು ಸೆಕೆಂಡರಿ ವಿದ್ಯಾಭ್ಯಾಸ ಸಮಿತಿ ಕಾರ್ಯದರ್ಶಿಯಾಗಿ ವರ್ಗಾವಣೆಯಾಗಿರುವ ಶ್ರೀ ಹೆಚ್ ವಿ ಶ್ರೀರಂಗರಾಜುರವರನ್ನು ಬೀಳ್ಕೊಡಲು ಕಳೆದ ಭಾನುವಾರ ನಗರದ ಮಾಧ್ಯಮಿಕ ಶಾಲಾ ಅಧ್ಯಾಪಕರ ಸಂಘದ ಆಶ್ರಯದಲ್ಲಿ ಸಮಾರಂಭವೊಂದು ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆಯಿತು ಶ್ರೀಮತಿ ಜಯಲಕ್ಷ್ಮಮ್ಮನವರ ಸಂಗೀತವಾದನಂತರ ಸಂಘದ ಅಧ್ಯಕ್ಷ ಶ್ರೀ ಎ. ವಿ ವೆಂಕಟರಾಮಯ್ಯನವರು ಸ್ವಾಗತ ಬಯಸಿದರು ಶ್ರೀಗಳಾದ ಎ ಎಲ್ ಸೂರ್ಯನಾರಾಯಣರಾವ್, ದೊಡ್ಡೇಗೌಡ, ನಾರಾಯಣರಾವ್ ಮತ್ತು ನರಸಿಂಹಾಚಾರ್ ಮೊದಲಾದವರು ವಿದ್ಯಾಧಿಕಾರಿಗಳ ಗುಣ ಶೀಲ ಎಲ್ಲ ಹೊಗಳಿದರು ಶ್ರೀಯುತರು ಕೃತಜ್ಞತೆಯನ್ನು ಸೂಚಿಸಿದರು.

ವಿವಾಹ ಮಹೋತ್ಸವ

ಶ್ರೀ ವಿಶ್ವವಿದ್ಯಾಲಯದ ನಿವೃತ್ತ, ಅಧ್ಯಾಪಕ ಶ್ರೀ ಆರ್. ನರಸಿಂಹಯ್ಯನವರು ತಮ್ಮ ಕುಮಾರಿ ಸೌ|| ಪದ್ಮಾವತಿಯನ್ನು ಶ್ರೀ ಎಸ್. ಲಕ್ಷ್ಮಣಶಾಸ್ತ್ರಿಗಳವರ ಪುತ್ರರಾದ ಶ್ರೀ ಎಲ್ ಶ್ರೀಕಂಠಯ್ಯನವರಿಗೆ ಕೊಟ್ಟು ಈ ದಿನ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 1911)

ಮೈಸೂರು ವಿದ್ಯಾರ್ಥಿಗಳಿಗೆ ನೆರೆ ಪ್ರಾಂತದಲ್ಲಿ ವಿದ್ಯಾಭ್ಯಾಸ ಸೌಕರ್ಯ

ಆಂಧ್ರ, ಮದ್ರಾಸು ಮತ್ತು ಬೊಂಬಾಯಿಗಳಿಗೆ ಕೇಂದ್ರದ ಸೂಚನೆ

ಕೇಂದ್ರ ಸರ್ಕಾರದವರು ಸಂಸ್ಥಾನ ಪುನರ್ವಿಂಗಡಣೆ ಶಾಸನದ ಪ್ರಕಾರ ಬೊಂಬಾಯಿ, ಮದ್ರಾಸು ಮತ್ತು ಆಂಧ್ರಪ್ರದೇಶ ಸರ್ಕಾರಗಳಿಗೆ ನಿರ್ದೇಶನವಿತ್ತು, ಆಯಾ ಪ್ರಾಂತಗಳಲ್ಲಿ ವಿಸ್ತೃತ ಮೈಸೂರಿನ ವಿಭಾಗಗಳಿಗೆ ಸರ್ಕಾರಿ ವಿದ್ಯಾ ಸಂಸ್ಥೆಗಳಲ್ಲಿ ಅವಕಾಶವೀಯುವಂತೆ ತಿಳಿಸಿರುತ್ತಾರೆ

ಜಪಾನೀಯರಿಂದ ಪಾಕಿಸ್ತಾನದಲ್ಲಿ ಜಪಾನ್ ಮಾದರಿ ಬೇಸಾಯ

ಪಶ್ಚಿಮ ಪಾಕಿಸ್ತಾನದಲ್ಲಿ ೪೦೦ ಜಪಾನೀ ಸಂಸಾರಗಳಿಗೆ ವಾಸಿಸಲು ಆಶ್ರಯವೀಯಲಾಗುವುದು. ಆ ಸಂಸಾರಗಳವರು ಗುಲಾಂ ಮಹಮದ್ ಅಣೆಕಟ್ಟಿನ ಪ್ರದೇಶದಲ್ಲಿ ಜಪಾನ್ ಮಾದರಿಯ ಭತ್ತದ ವ್ಯವಸಾಯ ಮಾಡುವರು ಜಪಾನಿನ ಪ್ರಧಾನಿ ನೊಬುಸೂಕಿ ಕಿಷಿಯವರು ಕರಾಚಿಗೆ ಭೇಟಿಯಿತ್ತಿದ್ದಾಗ ಅವರಿಗೆ ಪಾಕಿಸ್ತಾನ ಸರ್ಕಾರದವರು ಈ ಸಲಹೆ ಮಾಡಿದ್ದರು. ಜಪಾನೀ ಜನರಿಗೆ ಪಾಕಿಸ್ತಾನದ ನಾಗರೀಕತ್ವವನ್ನು ಕೊಡಲಾಗುವುದೆಂದು ಹೇಳಲಾಗಿದೆ.

ಮಹಿಳಾ ಬಸ್ ಕಂಡಕ್ಟರ ಉಪವಾಸ

ಬೆಂಗಳೂರು ನಗರದ ಬಸ್ ಸರ್ವೀಸ್ಸಿನ ಕಂಡಕ್ಟರ್ ಶ್ರೀಮತಿ ಚಂದ್ರಪ್ರಭಾ ಎಂಬಾಕೆಯು ಕೆಲವು ದಿನಗಳ ಹಿಂದೆ ಕೆಲಸಕ್ಕೆ ಬರಲು ತಪ್ಪಿಸಿಕೊಂಡುದರ ಮೇಲೆ ಅವಳನ್ನು ಸಸ್ಪೆಂಡ್ ಮಾಡಿದುದರಿಂದ ಆಕೆಯು ಮೊನ್ನೆ ಬಸ್ ಕಛೇರಿ ಬಳಿ ೬ ಗಂಟೆ ಕಾಲ ಉಪವಾಸ ಮುಷ್ಕರವನ್ನು ನಡೆಸಿದಳು ಆಕೆಯ ವಿಷಯವನ್ನು ಪರಿಶೀಲಿಸುವುದಾಗಿ ಜನರಲ್ ಮ್ಯಾನೇಜರ್ ಶ್ರೀ ಎಲ್. ಲಕ್ಷ್ಮಣರಾಯರು ಭರವಸೆಯಿತ್ತ ಮೇಲೆ ಉಪವಾಸವನ್ನು ನಿಲ್ಲಿಸಿದಳು.

ಯಶವಂತಪುರದಲ್ಲಿ ರೈಲು ಇಂಜಿನ್ ಷೆಡ್ಡು

ಬೆಂಗಳೂರಿಗೆ ೩ ಮೈಲಿ ದೂರವಿರುವ ಯಶವಂತಪುರದಲ್ಲಿ ಹೊಸ ರೈಲು ಇಂಜಿನ್ ಷೆಡ್ಡನ್ನು ೧೯|| ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಲು ರೈಲ್ವೆ ಬೋರ್ಡಿನವರು ಮಂಜೂರಾತಿ ಇತ್ತಿರುವರು.

ಕುಂಚಿಟಿಗರ ವಿದ್ಯಾರ್ಥಿನಿಲಯ

ಇಲವಾಲದ ರಸ್ತೆಯಲ್ಲಿರುವ ಕುಂಚಿಟಿಗರ ಸಂಘದ ವಿದ್ಯಾರ್ಥಿನಿಲಯಕ್ಕೆ ಸೇರುವ ವಿದ್ಯಾರ್ಥಿಗಳು ಅರ್ಜಿ ಕೊಡುವ ಅವಧಿಯನ್ನು ಜುಲೈ ೮ನೇ ತಾರೀಕಿನ ವರೆಗೆ ಹೆಚ್ಚಿಸಲಾಗಿದೆ

SARADA VILAS COLLEGE
INTER TUTORIAL SECTION
ENGLISH & P. C. M.
Highly qualified & experienced staff
Classes in full swing

NALINS

Furniture on hire

Enquire at:—
602 College Road,
MYSORE
Concession to students

ಚೀಣಕ್ಕೆ ವಿಶ್ವಸಂಸ್ಥೆ ಸದಸ್ಯತ್ವ

ಕಾಮನ್‌ವೆಲ್ತ್ ಪ್ರಧಾನಿಗಳ ಸಭೆಯಲ್ಲಿ ನೆಹರೂ ಒತ್ತಾಯ

ವಿಶ್ವ ಸಂಸ್ಥೆಯಲ್ಲಿ ಚೀಣಕ್ಕೆ ಪ್ರವೇಶ ದೊರೆಯಬೇಕೆಂದು ನೆಹರೂರವರು ಕಾಮನ್‌ವೆಲ್ತ್ ಪ್ರಧಾನಿಗಳ ಸಭೆಯಲ್ಲಿ ಮೊನ್ನೆ ಒತ್ತಾಯ ಮಾಡಿದರು ಪಾಕಿಸ್ತಾನದ ಪ್ರಧಾನಿಯವರು ಚೀಣಕ್ಕೆ ಸದಸ್ಯತ್ವ ಕೊಡುವುದು ಉಚಿತವೆಂದು ಹೇಳಿದರೂ, ಈಗ ಸಕಾಲವಲ್ಲವೆಂದೂ ಅದರಿಂದ ಕ್ಲಿಷ್ಟ ಸಮಸ್ಯೆಗಳು ಉಂಟಾಗುತ್ತವೆಂದೂ, ತಿಳಿಸಿದರು. ಆಸ್ಟ್ರೇಲಿಯದ ರಾಬರ್ಟ್ ಮೆಂಜಿಸ್‌ರವರು ಚೀಣಕ್ಕೆ ಪ್ರಾತಿನಿಧ್ಯವನ್ನು ವಿರೋಧಿಸಿದರೆಂದು ಹೇಳಲಾಗಿದೆ ಆದರೆ ಬ್ರಿಟಿಷ್ ಪ್ರತಿನಿಧಿಗಳು ನೆಹರೂರವರ ವಾದವನ್ನು ಎತ್ತಿಹಿಡಿದು ಚೀಣಕ್ಕೆ ಭದ್ರತಾ ಸಮಿತಿಯಲ್ಲೂ ವಿಶ್ವಸಂಸ್ಥೆಯ ಇತರ ಸಮಿತಿಗಳಲ್ಲೂ ಸದಸ್ಯತ್ವ ನೀಯಬೇಕೆಂದು ತಿಳಿಸಿದರು. ಆದರೆ ಅದನ್ನು ಕೊಡುವ ಕಾಲದ ಬಗ್ಗೆ ಬ್ರಿಟನ್ನಿನ ಮತಭೇದವನ್ನು ವಿವರಿಸಲಾಯಿತು

ರಾಜಾಸ್ತಾನದ ಮಂತ್ರಿಗಳಿಂದ ಶೇ|| ೧೫ರಷ್ಟು ಸಂಬಳ ಖೋತಾ

ರಾಜಾಸ್ತಾನದ ಮಂತ್ರಿಗಳು ಮತ್ತು ಉಪಮಂತ್ರಿಗಳು ತಮ್ಮ ಸಂಬಳದಲ್ಲಿ ಶೇಕಡ ೧೫ ರಷ್ಟು ಖೋತಾಕ್ಕೆ ತಮ್ಮ ಸಮ್ಮತಿಸಿರುತ್ತಾರೆ. ನಾಳೆಯಿಂದ ಇದು ಜಾರಿಗೆ ಬರುವುದು. ಅಲ್ಲಿನ ಮಂತ್ರಿಗಳಿಗೆ ೧ ಸಾವಿರ ಮತ್ತು ಉಪಮಂತ್ರಿಗಳಿಗೆ ೮೦೦ ರೂ ತಲಬು ಇದೆ.

ಬಿಹಾರಿನಲ್ಲಿ ಬೆಂಕಿಯಿಂದ ೧೦ ಲಕ್ಷ ರೂ. ಆಸ್ತಿ ನಷ್ಟ

ಬಿಹಾರಿನ ಪಾಚಗುಪಿ ಎಂಬಲ್ಲಿ ಒಂದು ಸಕ್ಕರೆ ಕಾರ್ಖಾನೆಯ ಗುದಾಮಿನಲ್ಲಿ ಬೆಂಕಿಯುಂಟಾಗಿ ೧೦ ಲಕ್ಷ ರೂ ನಷ್ಟು ಆಸ್ತಿಪಾಸ್ತಿಗಳ ನಷ್ಟವಾಗಿದೆ ಪಕ್ಕದ ಗ್ಯಾಸ್ ಯಂತ್ರಕ್ಕೆ ಬೆಂಕಿಯು ವ್ಯಾಪಿಸದಂತೆ ತಡೆಗಟ್ಟಲಾಯಿತು.

ಹೈದರಾಬಾದಿಗೆ ಹೆಚ್. ಎಸ್. ರುದ್ರಪ್ಪನವರ ಭೇಟಿ

ಹೈದರಾಬಾದಿನಲ್ಲಿ ಬರುವ ೩ನೇ ತಾರೀಕು ಸೇರುವ ಅಹಾರ ಸಚಿವರುಗಳ ಸಮ್ಮೇಳನದಲ್ಲಿ ಮೈಸೂರಿನ ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪನವರು ಭಾಗವಹಿಸಲಿರುವರು. ಅವರೊಡನೆ ರೆವಿನ್ಯೂ ಕಾರ್ಯದರ್ಶಿ ಶ್ರೀ ಎಂ ಎಸ್ ಸ್ವಾಮಿನಾಥನವರೂ ತೆರಳುವರು.

ಡಿವಿಜನಲ್ ಕಮಿಷನರ ಅಸಿಸ್ಟೆಂಟರು

ಬೆಂಗಳೂರಿನಲ್ಲಿರುವ ಮೈಸೂರು ಫುಡ್ ಪ್ರಾಡಕ್ಟ್ಸ್ ಸಂಸ್ಥೆ ಕಾರ್ಯದರ್ಶಿ ಶ್ರೀ ಎಸ್. ಮುದ್ದುಶೇಂದ್ರಸ್ವಾಮಿಯವರನ್ನು ಮೈಸೂರು ಡಿವಿಜನಲ್ ಕಮಿಷನರ ಅಸಿಸ್ಟೆಂಟರಾಗಿ ನೇಮಿಸಲಾಗಿದೆ.

ಮುನಿಸಂಜಪ್ಪನವರ ಪುನರ್ನೇಮಕ

ಕಳೆದ ೨೫ನೇ ತಾರೀಕು ನಿವೃತ್ತರಾದ ಕೋಲಾರದ ಚಿನ್ನದ ಗಣಿ ಆಡಳಿತ ಬೋರ್ಡಿನ ಉಪಾಧ್ಯಕ್ಷ ಶ್ರೀ ಎಸ್. ಮುನಿಸಂಜಪ್ಪನವರನ್ನು ಬರುವ ಏಪ್ರಿಲ್ ಅಖೈರುವರೆಗೆ ಪುನಃ ಅದೇ ಸ್ಥಾನಕ್ಕೆ ನೇಮಿಸಲಾಗಿದೆ.

VIDYA TUTORIAL COLLEGE,
Dalvoy High School Buildings, Mysore
INTERMEDIATE : 1956 English Texts
Classes Commenced
B A., B Sc : English 1957 Texts
Classes formed. Join immedially
Other classes in full swing
Inter : Eng 1957 texts Kan, P. C, M., P. E. M, P. C. B., C. B. Z., H. E. L, H. E. G.
B.A., B.Sc.,-All subjects, All Parts
Ladies also admitted
Enquiries 9-30 to 10-30 A.M.
5-30 to 7-30 P.M.



ನವೀನ ಮಾದರಿ ಗಡಿಯಾರಗಳಿಗೆ

ಫೇವರ್ ಲ್ಯೂಬಾ, ವೆಸ್ಟೆಂಡ್, ಸೈಮಾ, ರೋಮರ್ ಇತ್ಯಾದಿ, ಇತ್ಯಾದಿ

ರಾಂ ಪತಂಗೆ ಕಂಪೆನಿ,
ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

ವುಡ್‌ಲ್ಯಾಂಡ್ಸ್ ★

ಪಾತ್ರವರ್ಗ :— ಜೆಮಿನಿ ಗಣೇಶ್, ಸಾವಿತ್ರಿ, ನಂಬಿಯಾರ್, ತಂಗವೇಲು, ಜಿ. ವರಲಕ್ಷ್ಮಿ, ಎಂ. ಕೆ. ರಾಧಾ ಮುಂತಾದವರು

28—6—57ರಿಂದ : ಅಮೋಘವಾದ 2ನೇ ವಾರ : ದಿನವಹಿ 2 ಆಟಗಳು
ಜೂಪಿಟರ್ ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಕರ್ಪೂರಕ್ಕರಸಿ ★

[ಶ್ರೀ ರಾಘವೇಂದ್ರಾ ರಿಲೀಸ್

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 2 ನಯಾ ಪೈಸೆ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯಾ ಪೈಸೆ

ಸಂಪುಟ : ೦೫] SADHVI : MONDAY 1—7—1957 ಮೈಸೂರು : ಸೋಮವಾರ ೧—೭—೧೯೫೭ [ಸಂಚಿಕೆ : ...

ಡಾಕ್ಟರ್ ಎಂ. ವಿ. ಗೋಪಾಲಸ್ವಾಮಿಯವರ ನಿಧನ

ಪ್ರಾಥಮಿಕ ವಿದ್ಯಾಭ್ಯಾಸದ ಪ್ರಗತಿ ಬಗ್ಗೆ ಸಮಾಲೋಚನೆ

ವಿದ್ಯಾಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ

ಮೈಸೂರು ೧

ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ನಿರೀಕ್ಷಿಸಿರುವ ಮಟ್ಟವನ್ನು ಮುಟ್ಟದಿರುವ ಬಗ್ಗೆ ಕಾರಣಗಳನ್ನು ಕಂಡುಹಿಡಿಯುವ ಸಲುವಾಗಿ ನೆನ್ನೆ ಇಲ್ಲಿನ ಮಹಾರಾಜಾ ಹೈಸ್ಕೂಲಿನಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳ ಮತ್ತು ಮುಖ್ಯೋಪಾಧ್ಯಾಯರುಗಳ ಸಭೆಯೊಂದು ನಡೆಯಿತು. ವಿದ್ಯಾಮಂತ್ರಿ ಶ್ರೀ ಎ. ವೆಂಕಟಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಬಿ. ಎಂ. ಕೃಷ್ಣಾರವರು ಸಭೆಯ ಉದ್ದೇಶವನ್ನು ವಿವರಿಸಿದರು. ವಿದ್ಯಾ ಮಂತ್ರಿಗಳು ಭಾಷಣ ಮಾಡಿ ಇತರ ಜಿಲ್ಲೆಗಳಿಗಿಂತಲೂ ಮೈಸೂರು ಜಿಲ್ಲೆಯಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಮಕ್ಕಳ ಸಂಖ್ಯೆಯು ಕಡಿಮೆಯಾಗಿದೆಯೆಂದು ಹೇಳಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಈಗ ಗೊತ್ತು ಮಾಡಲಾಗಿರುವ ಮಟ್ಟದಲ್ಲಿ ಪ್ರಸಾರ ಮಾಡಲು ವಿದ್ಯಾ ಇಲಾಖಾಧಿಕಾರಿಗಳೆಲ್ಲರೂ ಸೂಕ್ತ ಸಲಹೆಯನ್ನು ಕೊಡಬೇಕೆಂದು ಕೋರಿದರು. ತಮ್ಮ ಕೈ ಕೆಳಗಿನ ನೌಕರರ ಮೇಲ್ವಿಚಾರಣೆಯನ್ನು ನಡೆಸುವುದು ಮಾತ್ರವಲ್ಲದೆ, ಅವಶ್ಯಕವಾದ ಕರ್ತವ್ಯ ಮಾರ್ಗದಲ್ಲಿ ಅವರನ್ನೂ ಮತ್ತು ತಂದೆ ತಾಯಿಗಳನ್ನೂ ಪ್ರೇರೇಪಿಸುವುದು ಅಧಿಕಾರಿಗಳ ಕರ್ತವ್ಯವೆಂದು ಅವರು ಸೂಚಿಸಿದರು. ಈಗ ದೊರೆತಿರುವ ಭೂದಾನದ ಜಮೀನಿನ ಪೈಕಿ ಶೇಕಡ ೧೦ರಷ್ಟು ಅಪ್ರಯೋಜಕವಾಗಿರುವುದರಿಂದ ಅವುಗಳನ್ನು ಶಾಲೆಗಳಿಗೆ ಉಪಯೋಗವಾಗುವ ಬೇರೆ ಜಮೀನುಗಳನ್ನು ಕೊಳ್ಳಬೇಕೆಂದು ಅವರು ಸೂಚಿಸಿದರು. ದಾನಿಗಳಿಂದ ಬಂದಿರುವ ಶಾಲಾ ಕಟ್ಟಡಗಳ ದುರಸ್ತಿಗೆ ತಕ್ಕ ಗಮನವೀಯದಿರುವುದನ್ನು ಅವರು ಟೀಕಿಸಿದರು. ಹಲವು ಗ್ರಾಂಟುಗಳನ್ನು ಉಪಯೋಗಿಸಿಕೊಳ್ಳದೆ ಅವುಗಳು ಉಳಿದುಹೋಗುವುದನ್ನು ಅವರು ತಿಳಿಸಿ, ಅದಕ್ಕೆ ಅವಕಾಶ ಕೊಡಬಾರದೆಂದು ಹೇಳಿದರು.

ಮೈಸೂರು ಮಹಾರಾಣಿ ಹೈಸ್ಕೂಲಿನಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಬೆಳಗಿನ ತರಗತಿಗಳನ್ನು ನಡೆಸುವಂತೆ ಒಂದು ಸಲಹೆಯನ್ನು ಮಂಡಿಸಲಾಯಿತು. ನಂಜನಗೂಡಿನ ವಿದ್ಯಾರ್ಥಿನಿಯರ ಹೈಸ್ಕೂಲನ್ನು ಊರಿನ ಬೇರೆಕಡೆಗೆ ವರ್ಗಾಯಿಸುವುದಾಗಿ ವಿದ್ಯಾಧಿಕಾರಿಗಳು ತಿಳಿಸಿದರು. ಉಪಾಧ್ಯಾಯರುಗಳಿಗೆ ಶಿಕ್ಷಣ ಸೌಲಭ್ಯವನ್ನು ಹೆಚ್ಚಿಸುವುದಕ್ಕಾಗಿ ಬೆಳಗಿನ ತರಗತಿಗಳನ್ನು ತೆರೆಯುವಂತೆಯೂ, ಇನ್ನು ಮುಂದೆ ತರಪೇತು ಹೊಂದಿದವರನ್ನೇ ಉಪಾಧ್ಯಾಯರನ್ನಾಗಿ ಆರಿಸಬೇಕೆಂದೂ ಡಿ. ಡಿ. ಪಿ. ಐ. ಶ್ರೀ ವಾಸುದೇವಯ್ಯನವರು ಸೂಚಿಸಿದರು.

ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯನ್ನು ೪ ರಿಂದ ೭ ವರ್ಷಕ್ಕೆ ಇಳಿಸುವುದಾಗಿ ಡಿ ಪಿ ಐ ರವರು ಸೂಚಿಸಿದರು.

ವಿದ್ಯಾ ಇಲಾಖೆ ಮತ್ತು ಇತರ ಕಛೇರಿಗಳನ್ನು ಪಬ್ಲಿಕ್ ಆಫೀಸಿಗೆ ವರ್ಗಾಯಿಸುವುದರಿಂ

ಭೂಕಂದಾಯದ ಬದಲು ವ್ಯವಸಾಯ ವರಮಾನ ತೆರಿಗೆ

ಸಂಸ್ಥಾನ ಸರ್ಕಾರಗಳಿಗೆ ಕೇಂದ್ರ ಹಣಕಾಸಿನ ಮಂತ್ರಿಯ ಸಲಹೆ

ಈಗಿನ ಭೂ ಕಂದಾಯದ ಬದಲು ವ್ಯವಸಾಯ ವರಮಾನ ತೆರಿಗೆಯನ್ನು ವಿಧಿಸುವಂತೆ ಸಂಸ್ಥಾನ ಸರ್ಕಾರಗಳಿಗೆ ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ. ಇದರಿಂದ ಆಹಾರ ಮತ್ತು ಭೂ ಸಮಸ್ಯೆಗಳು ಪರಿಹಾರವಾಗುವುವೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಸಣ್ಣ ಸಣ್ಣ ಹಿಡುವಳಿದಾರರಿಗೆ ವಿನಾಯಿತಿ ಕೊಟ್ಟು ಅವರಿಗೆ ಕ್ರೆಡಿಟ್ ಕಾರ್ಡ ಕೊಡಬಹುದೆಂದೂ ಸಚಿವರು ಸಲಹೆ ಮಾಡಿರುತ್ತಾರೆ.

ಅಮೆರಿಕದ ಹಡಗಿನಲ್ಲಿ ಬೆಂಕಿ; ೧,೦೦೦ ಬೇಲು ಹತ್ತಿ ನಾಶ

ಜಪಾನಿನ ಯಾಕೊಹಾಮಾ ರೇವು ಬಳಿ ಅಮೆರಿಕದ ಸಾಮಗ್ರಿ ಸಾಗಣೆ ನೌಕೆಯೊಂದರಲ್ಲಿ ನೆನ್ನೆ ಬೆಂಕಿಯುಂಟಾಗಿ ೧,೦೦೦ ಬೇಲು ಹತ್ತಿ ಮತ್ತು ೪೦೦ ಟನ್ ಇತರ ವಸ್ತುಗಳು ಮತ್ತು ಕಾಗದಪತ್ರಗಳು ನಾಶವಾದುವು. ರೇವನ್ನು ಸಮೀಪಿಸುತ್ತಿದ್ದಾಗ ಬೆಂಕಿಯುಂಟಾಯಿತು. ಅದನ್ನು ನಂತರ ಆರಿಸಲಾಯಿತು.

ಟೆಲಿಫೋನ್ ನೌಕರರಿಂದ ಈ ದಿನ ಸಂಬಳದ ನಿರಾಕರಣೆ

ನಗರದಲ್ಲಿರುವ ಟೆಲಿಫೋನು ಇಂಜಿನಿಯರಿಂಗ್ ಇನ್ನೇ ವರ್ಗದ ಸಂಘದ ಕಾರ್ಯಕಾರಿ ಸಮಿತಿಯವರು ನೆನ್ನೆ ಸಭೆ ನಡೆಸಿ, ನೌಕರರು ಈ ದಿನ ಸಂಬಳವನ್ನು ತೆಗೆದುಕೊಳ್ಳಲು ನಿರಾಕರಿಸಬೇಕೆಂದು ನಿರ್ಧರಿಸಿದರು. ನಾಳೆ ದಿನ ಅವರುಗಳು ಸಂಬಳವನ್ನು ಪಡೆಯುವರು. ಕೇಂದ್ರ ಸರ್ಕಾರದವರು ಇಲಾಖೆಯ ಇಂಜಿನಿಯರಿಂಗ್ ವಿಭಾಗದ ಬಗ್ಗೆ 'ಮಲತಾಯಿ' ವರ್ತನೆಯನ್ನು ತೋರುತ್ತಿರುವುದಕ್ಕೂ ಮತ್ತು ನೌಕರರ ಬೇಡಿಕೆಗಳನ್ನು ವರ್ಗವರ್ಗವಾಗಿ ಪರಿಶೀಲಿಸುತ್ತಿರುವುದಕ್ಕಾಗಿಯೂ ಈ ದಿನ ಸಂಬಳ ಪಡೆಯದಿರುವುದರ ಮೂಲಕ ಅವರು ಪ್ರತಿಭಟಿಸಿದರು.

ಅಶೋಕಾ ಇಂಡಸ್ಟ್ರೀಸ್ ಆರಂಭೋತ್ಸವ

ಸಂತೆಪೇಟೆ ಮಂಡಿ ವ್ಯಾಪಾರಿಗಳಾದ ಶ್ರೀ ಬಿ. ಎಂ. ನಾಗರಾಜಶೆಟ್ಟಿ ಮತ್ತು ಸನ್ಸ್‌ರವರು ಇಲವಾಲ ರಸ್ತೆಯಲ್ಲಿರುವ ತಮ್ಮ ಸ್ವಂತ ಕಟ್ಟಡದಲ್ಲಿ ಏರ್ಪಡಿಸಿರುವ ಅಶೋಕಾ ಇಂಡಸ್ಟ್ರೀಸಿನ ಆರಂಭೋತ್ಸವವನ್ನು ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ನಿನ್ನೆ ನೆರವೇರಿಸಿದರು. ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ಅಧ್ಯಕ್ಷತೆ ವಹಿಸಿದ್ದರು.

ದ ನೌಕರರೂ, ಸಾರ್ವಜನಿಕರೂ ೩-೪ ಮೈಲಿ ದೂರ ಊರಿನ ಹೊರಗೆ ಪ್ರತಿದಿನವೂ ಹೋಗಬೇಕಾಗುವ ತೊಂದರೆಯನ್ನು ತಪ್ಪಿಸಿ ನಗರದೊಳಗೆ ಕಛೇರಿಗಳನ್ನು ಏರ್ಪಡಿಸಬೇಕೆಂದು ಶ್ರೀ ಎ. ರಾಮಣ್ಣನವರು ಒತ್ತಾಯಪಡಿಸಿದರು. ಅದನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸುವುದಾಗಿ ಸಚಿವರು ಉತ್ತರವಿತ್ತರು.

ನಗರದ ಶಾಲಾ ಕಾಲೇಜುಗಳಿಗೆ ೧೧ ನೇ ತಾರೀಖಿನವರೆಗೆ ರಜಾ

ಮೈಸೂರು ೧

ಇನ್‌ಫ್ಲುಯೆಂಜಾ ವ್ಯಾಧಿ ನಿಮಿತ್ತ, ಆರೋಗ್ಯಾಧಿಕಾರಿಗಳ ಸಲಹೆ ಮೇಲೆ ನಗರದ ಎಲ್ಲಾ ಶಾಲೆಗಳಿಗೂ ಮತ್ತು ಕಾಲೇಜುಗಳಿಗೂ ಇನ್ನೂ ಹತ್ತು ದಿವಸ ರಜಾ ಕೊಡುವಂತೆ ಆಜ್ಞೆಯಾಗಿದೆ. ಅವುಗಳು ೧೧ ನೇ ತಾರೀಖು ಗುರುವಾರ ತೆರೆಯಲ್ಪಡುವುವು.

ಬೆಂಗಳೂರಿನಲ್ಲಿಯೂ ಇದೇ ರೀತಿ ಶಾಲಾ ಕಾಲೇಜುಗಳು ೧೧ ನೇ ತಾರೀಖು ತೆರೆಯುವುವು. ಇತರ ಕಡೆಗಳಲ್ಲೂ ಸ್ಥಳೀಯ ಆರೋಗ್ಯಾಧಿಕಾರಿಗಳ ಸಲಹೆಪಡೆದು ಸೂಕ್ತಾನುಸಾರ ಕಾಲೇಜುಗಳಿಗೆ ರಜಾ ಕೊಡಬಹುದೆಂದು ತಿಳಿಸಲಾಗಿದೆ.

ಜಾಡರ್ಾನಿಗೆ ಅಮೆರಿಕದಿಂದ ಕೋಟಿ ಡಾಲರ್ ಮಿಲಿಟರಿ ನೆರವು

ಜಾರ್ಡಾನಿನ ಸೈನ್ಯಗಳಿಗೆ ೧ ಕೋಟಿ ಡಾಲರಿನಷ್ಟು ಮಿಲಿಟರಿ ಸಾಧನಗಳನ್ನು ಅಮೆರಿಕವು ಒದಗಿಸುವುದೆಂದು ಜಾರ್ಡಾನ್ ಸರ್ಕಾರದವರು ತಿಳಿಸಿರುತ್ತಾರೆ. ಜಾರ್ಡಾನ್ ಸೈನ್ಯದಲ್ಲಿ ದಕ್ಷತೆಯ ಮಟ್ಟವನ್ನು ಒಂದೇ ಸಮನಾಗಿ ಇಟ್ಟುಕೊಳ್ಳುವುದಕ್ಕಾಗಿ ನೆರವಿಗೆ ಅಮೆರಿಕವನ್ನು ಜಾರ್ಡಾನು ಕೋರಿದ್ದಿತು. ಅಲ್ಲಿನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ಕಳೆದ ತಿಂಗಳು ಜಾರ್ಡಾನಿಗೆ ಅಮೆರಿಕವು ೧ ಕೋಟಿ ಡಾಲರ್ ಸಹಾಯವನ್ನು ಕೊಟ್ಟಿದ್ದಿತು. ಇನ್ನೂ ೧೦೦ ಲಕ್ಷ ಡಾಲರ್ ಸಹಾಯವನ್ನು ಕೊಡಲಾಗುವುದು. ಒಟ್ಟು ೩೦೦ ಲಕ್ಷ ಡಾಲರ್ ಸಹಾಯವನ್ನು ಯಾವ ಷರತ್ತುಗಳಿಲ್ಲದೆ ಕೊಡಲಾಗಿದೆ.

ದಕ್ಷಿಣ ವಿಯಟ್ನಾಂ ಮಾಜಿ ದೊರೆಯ ಆಸ್ತಿ ವಶ

ದಕ್ಷಿಣ ವಿಯಟ್ನಾಮಿನ ರಾಷ್ಟ್ರೀಯ ಸಭೆಯು ಅಲ್ಲಿನ ಮಾಜಿ ದೊರೆ ಬಾವೊಡಾಯಿರ ಆಸ್ತಿಗಳನ್ನು ಕಿತ್ತುಕೊಳ್ಳಲು ಸರ್ಕಾರಕ್ಕೆ ಅನುಮತಿಯಿತ್ತಿರುವುದಾಗಿ ವರದಿಯಾಗಿದೆ. ಮಾಜಿ ದೊರೆಯು ಈಗ ಫ್ರಾನ್ಸಿನಲ್ಲಿರುವರು. ಅವರ ಸ್ವಾಮ್ಯಕ್ಕೆ ದೀರ್ಘ ದೀಮರು ಆರಿಸಿಬಂದಿರುವರು.

ಸಣ್ಣ ಉಳಿತಾಯ ಯೋಜನೆ ತೀವ್ರಗೊಳಿಸಲು ನಿರ್ಧಾರ

ಸ್ವಂ. ಸು. ತಂತಿ] ಬೆಂಗಳೂರು ೧

ದ್ವಿತೀಯ ಪಂಚ ವಾರ್ಷಿಕ ಯೋಜನೆ ಕಾರ್ಯಗಳಿಗಾಗಿ ಹಣವನ್ನು ಒದಗಿಸಲು ಸರ್ಕಾರದವರು ಸಣ್ಣ ಉಳಿತಾಯ ಯೋಜನೆಯನ್ನು ತೀವ್ರತೆಯಿಂದ ಜಾರಿಗೆ ತರಲು ನಿರ್ಧರಿಸಿರುತ್ತಾರೆ. ಈ ಬಗ್ಗೆ ವಿವರಗಳನ್ನು ಸಿದ್ಧಗೊಳಿಸಲಾಗುತ್ತಿದೆ. ನೆನ್ನೆ ಸರ್ಕಾರದವರು ಈ ವಿಚಾರವಾಗಿ ಸಭೆಯೊಂದನ್ನು ಕರೆದಿದ್ದರು. ಅದರಲ್ಲಿ ಹಣಕಾಸು, ರೆವಿನ್ಯೂ, ಸ್ಥಳೀಯ ಸಂಸ್ಥೆ, ವ್ಯವಸಾಯ ಮತ್ತು ಕಾರ್ಮಿಕ ಸಚಿವರುಗಳು ಭಾಗವಹಿಸಿದ್ದರು. ನಗರದಲ್ಲಿರುವ ಭಾರತ ಸರ್ಕಾರದ ಕೈಗಾರಿಕೆಗಳ ಮುಖ್ಯಾಧಿಕಾರಿಗಳು ಪ್ರಮುಖ ಖಾಸಗಿ ಉದ್ಯಮಗಾರರಾದ ಶ್ರೀ ಎ. ಆರ್. ಚಂದಾವರ್ಕರ್ ಮುಂತಾದವರೂ ಹಾಜರಿದ್ದರು.

ಡಾ|| ಎಂ. ವಿ. ಗೋಪಾಲಸ್ವಾಮಿಯವರ ನಿಧನ

ಮೈಸೂರು ೧

ಮೈಸೂರು ವಿಶ್ವವಿದ್ಯಾಲಯದ ಮನಶ್ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ|| ಎಂ. ವಿ. ಗೋಪಾಲಸ್ವಾಮಿಯವರು ಮೊನ್ನೆ ದಿನ ಬೆಂಗಳೂರಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಅವರಿಗೆ ಮೂರು ದಿನಗಳ ಹಿಂದೆ ಮೆದುಳಿನ ರಕ್ತಸ್ರಾವ ಉಂಟಾಗಿತ್ತೆಂದು ತಿಳಿದುಬಂದಿದೆ.

ಅವರು ಮಹಾರಾಜಾ ಕಾಲೇಜಿನಲ್ಲಿ ಮೊಟ್ಟಮೊದಲನೆಯದಾಗಿ ಮನಶ್ಶಾಸ್ತ್ರದ ಶಾಖೆಯನ್ನು ಆರಂಭಿಸಿದರು. ಇದರಲ್ಲಿ ಇಡೀ ಏಷ್ಯಾ ಖಂಡದಲ್ಲೇ ಪ್ರಖ್ಯಾತಿ ಪಡೆದಿದ್ದರು. ಪಾಶ್ಚಿಮಾತ್ಯ ದೇಶಗಳಲ್ಲಿಯೂ ಸಹಾ ಇವರ ಪಾಂಡಿತ್ಯಕ್ಕೆ ಪುರಸ್ಕಾರವು ದೊರೆತಿತ್ತು. ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿ ಇವರು ನಿವೃತ್ತಿ ಹೊಂದಿದ ಮೇಲೆ ಇತ್ತೀಚೆಗೆ ಬೆಂಗಳೂರಿನ ಅಖಿಲ ಭಾರತ ಮನಶ್ಶಾಸ್ತ್ರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು.

ಮೈಸೂರು ಆಕಾಶವಾಣಿಯ ಸಂಸ್ಥಾಪಕರು ಇವರು. ಶಿಶು ವಿಹಾರಗಳನ್ನು ಆರಂಭಿಸಿದ ಕೀರ್ತಿಯು ಇವರಿಗೆ ಸಲ್ಲತಕ್ಕದ್ದು. ಇವರು ಮಾಡಿರುವ ಅನೇಕ ಸಂಶೋಧನೆಗಳು ಘನ ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿವೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧು ವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸೂಚಿಸುತ್ತೇವೆ.

ಮೃತರಿಗೆ ೬೧ ವರ್ಷ ವಯಸ್ಸಾಗಿತ್ತು. ಅವರಿಗೆ ಪತ್ನಿಯೂ, ೪ ಜನ ಗಂಡು ಮಕ್ಕಳೂ, ಒಬ್ಬ ಹೆಣ್ಣು ಮಗಳೂ ಇರುವರು. ಹಿರಿಯ ಮಗನು ಭಾರತದ ವಿಮಾನ ದಳದಲ್ಲಿ ಉನ್ನತ ನೌಕರಿಯಲ್ಲಿದ್ದಾರೆ. ಡಾ|| ಗೋಪಾಲಸ್ವಾಮಿಯವರು ಲಂಡನ್ನಿನ ಪಿಹೆಚ್. ಡಿ. ಪ್ರಶಸ್ತಿಯನ್ನು ಪಡೆದಿದ್ದರು.

ಜೂಜಾಟಕ್ಕೆ ಜುಲ್ಮಾನೆ

ಮಂಡಿ ಮೊಹಲ್ಲೆಯ ಆಗಾ ಜಾನ್ ಮತ್ತು ಇನ್ನೊಬ್ಬನು ನಿನ್ನೆ ಕುದುರೆ ಜೂಜಾಡುತ್ತಿದ್ದುದಕ್ಕಾಗಿ ತಲಾ ಇಪ್ಪತ್ತು ರೂ. ಜುಲ್ಮಾನೆ ವಿಧಿಸಲಾಗಿದೆ.

ಬರ್ಮಾ ಪೋಲೀಸರಿಗೂ, ಚೀಣಾ ಸೈನಿಕರಿಗೂ ಘರ್ಷಣೆ

ಉತ್ತರ ಬರ್ಮದ ಒಂದು ಗಡಿ ಹಳ್ಳಿಯಲ್ಲಿ ಕಳೆದ ವಾರ ಬರ್ಮಾ ಪೋಲೀಸರಿಗೂ, ಚೀನಾ ಸೈನಿಕರಿಗೂ ಗುಂಡಿನ ಕಾಳಗವಾಯಿತೆಂದು ವರದಿಯಾಗಿದೆ. ಆದರೆ ಅದರಲ್ಲಿ ಯಾವ ಸಾವುನೋವುಗಳೂ ಆಗಿಲ್ಲ. ಚೀಣಾದ ಜನರು ಬರ್ಮದೊಳಗೆ ಅಕ್ರಮವಾಗಿ ಪ್ರವೇಶಿಸುವುದನ್ನು ಬರ್ಮಾ ಪೋಲೀಸರು ತನಿಖೆ ಮಾಡುತ್ತಿದ್ದಾಗ ಚೀಣೀಯರು ಗುಂಡು ಹಾರಿಸಿದರೆಂದು ಹೇಳಲಾಗಿದೆ. ಸುಮಾರು ೧೦೦ ಮಂದಿ ಅಕ್ರಮ ಪ್ರವೇಶ ಮಾಡಿದವರನ್ನು ಪೋಲೀಸರು ಬಂಧಿಸಿ ಠಾಣೆಗೆ ಕರೆದೊಯ್ದಿದ್ದರು. ಠಾಣೆಯನ್ನೇ ಆಕ್ರಮಿಸಲು ಆಗಿ ಚೀಣಾ ಸೈನಿಕರು ಬೆದರಿಸಿದಾಗ ಬಂಧಿತರಾದವರನ್ನು ಬಿಡುಗಡೆ ಮಾಡಲಾಯಿತು.

ಪಾಕಿಸ್ತಾನದಲ್ಲಿ ನೀರು ಶೇಖರ ಣೆಗೆ ಭಾರತ ಹಣ ತೆರಬೇಕು

ವಿಶ್ವ ಬ್ಯಾಂಕಿಗೆ ಪಾಕಿಸ್ತಾನ ಸರ್ಕಾರದ ಕೋರಿಕೆ

ಪಶ್ಚಿಮ ಪಾಕಿಸ್ತಾನದಲ್ಲಿ ನೀರನ್ನು ಶೇಖರಿಸಿ ಕೊಳ್ಳುವುದಕ್ಕೆ ಸೂಕ್ತ ಸೌಕರ್ಯಗಳನ್ನು ಕಲ್ಪಿಸಲು ಭಾರತವು ಹಣವನ್ನು ತೆರಬೇಕೆಂದು ಪಾಕಿಸ್ತಾನವು ವಿಶ್ವ ಬ್ಯಾಂಕಿನ ಉಪಾಧ್ಯಕ್ಷ ಇಲಿಫ್‌ರವರಿಗೆ ಬೇಡಿಕೆಯನ್ನು ಸಲ್ಲಿಸಿರುವುದಾಗಿ ಗೊತ್ತಾಗಿದೆ. ಇಲಿಫ್‌ರವರು ಸಿಂಧೂ ನದಿ ಮತ್ತು ಉಪ ನದಿಗಳ ಹಂಚಿಕೆ ಬಗ್ಗೆ ಭಾರತ ಮತ್ತು ಪಾಕಿಸ್ತಾನಗಳೊಡನೆ ಮಾತುಕತೆಗಾಗಿ ಆಗಮಿಸಿದ್ದರು. ಹಲವು ಮೂರು ನದಿಗಳನ್ನು ಹಂಚಿಕೊಳ್ಳಬೇಕೆಂದು ಬ್ಯಾಂಕು ೩ ವರ್ಷಗಳ ಹಿಂದೆ ಮಾಡಿದ್ದ ಸಲಹೆಯನ್ನು ಪಾಕಿಸ್ತಾನವು ಈಚೆಗೆ ತಿರಸ್ಕರಿಸಿದೆ

ರವಿ ನದಿ ಪ್ರವಾಹದಿಂದ ಪಟ್ಟಣಕ್ಕೆ ಭೀತಿ

ಸಿಂಧೂ ನದಿಯ ಉಪನದಿಗಳಲ್ಲೊಂದಾದ ರವಿಯಲ್ಲಿ ಪ್ರವಾಹ ಬಂದು ಪಾಕಿಸ್ತಾನ-ಭಾರತದ ಗಡಿಯಲ್ಲಿ ಗುರುದಾಸಪುರದ ಹತ್ತಿರವಿರುವ ಶಕರ್‌ಗಢ ತಾಲ್ಲೂಕಿನಲ್ಲಿ ೮೦,೦೦೦ ಎಕರೆ ಜಮೀನು ನೀರಿನಲ್ಲಿ ಮುಳುಗಿದೆ. ಅದು ಹೀಗೆಯೇ ಮುಂದುವರಿದರೆ ೧೦,೦೦೦ ಮಂದಿ ಜನಸಂಖ್ಯೆಯಿರುವ ಶಕರ್‌ಗಢವು ಜಲಮಯವಾಗುವ ಭೀತಿಯಿದೆ. ಈ ವರೆಗೆ ೩,೦೦೦ ಸಂಸಾರಗಳಿಗೆ ಆಶ್ರಯ ತಪ್ಪಿದೆ

ದ್ವಿತೀಯ ಯೋಜನೆಯ ಗ್ರಂಥಾವಳಿ

ಕೇಂದ್ರ ಯೋಜನಾ ಮಂಡಲಿಯವರು ಸಿದ್ಧಗೊಳಿಸಿರುವ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಸಂಗ್ರಹವಾಗಿ ಕನ್ನಡದಲ್ಲಿ ತಿಳಿಸುವ ಗ್ರಂಥವನ್ನೂ, ಅದರ ಸಂಬಂಧಪಟ್ಟಂತೆ ಭಾರತದ ಪುರೋಗಮನವೆಂಬ ಶೀರ್ಷಿಕೆಯಲ್ಲಿ ಯೋಜನೆಯ ಪರಿಣಾಮ, ಅನ್ನವೇ ಪ್ರಾಣ, ನದಿಗಳಿಂದ ಸೌಭಾಗ್ಯ, ರಾಷ್ಟ್ರದ ಜೀವನಾಡಿಗಳು, ಸಮಾಜವಾದಿ ಸಮಾಜ, ಸೌಭಾಗ್ಯದ ಸೋಪಾನ ಮುಂತಾದ ಕಿರುಗ್ರಂಥಗಳನ್ನೂ ಮುದ್ರಿಸಲಾಗಿದೆ ಅವುಗಳ ಒಂದೊಂದು ಪ್ರತಿಗಳು ನಮ್ಮ ಹಸ್ತಗತವಾಗಿವೆ. ಯೋಜನೆಯಲ್ಲಿ ಆಸಕ್ತಿಯಿರುವವರೂ, ಭಾರತದ ಅಭ್ಯುದಯವನ್ನು ಸಾಧಿಸಬೇಕೆಂದಿರುವವರೂ ಅವಶ್ಯವಾಗಿ ಓದಬೇಕಾದ ಗ್ರಂಥಗಳಿವು

ಪುನಃ ಖಾನ್ ಸಾಹೇಬರ ಮಂತ್ರಿ ಮಂಡಲಕ್ಕೆ ಅವಕಾಶ

ಕಳೆದ ಮಾರ್ಚಿಯಲ್ಲಿ ಪಾಕಿಸ್ತಾನದ ಅಧ್ಯಕ್ಷರು ಸಸ್ಪೆಂಡ್ ಮಾಡಿದ್ದ ಪಶ್ಚಿಮ ಪಾಕಿಸ್ತಾನದ ತಮ್ಮ ಮಂತ್ರಿಮಂಡಲವು ನಾಳೆಯಿಂದ ನೊಳಗೆ ಪುನಃ ಅಸ್ತಿತ್ವಕ್ಕೆ ಬರಲಿರುವುದಾಗಿ ಡಾಕ್ಟರ್ ಖಾನ್‌ಸಾಹೇಬರು ತಿಳಿಸಿರುತ್ತಾರೆ.

ನಂಜನಗೂಡಿನಲ್ಲಿ "ಫ್ಲೂ" ರೋಗಿಗಳಿಗೆ ಉಚಿತ ಔಷಧ

ನಂಜನಗೂಡು ಪುರಸಭಾಧ್ಯಕ್ಷರೂ, ಉಪಾಧ್ಯಕ್ಷರೂ ಮೊನ್ನೆ ಊರಿನ ನಾನಾ ಭಾಗಗಳಲ್ಲಿ ಸಂಚರಿಸಿ ಸುಮಾರು ೬೦೦ ಮಂದಿ ಫ್ಲೂ ರೋಗಿಗಳಿಗೆ ಔಷಧಿ ಮಾತ್ರೆಗಳನ್ನು ಹಂಚಿದರು ರೋಗ ಪೀಡಿತರು ಸಹಾಯ ಪಡೆಯಲು ಪುರಸಭೆಗೆ ತಿಳಿಸಬೇಕೆಂದು ಅಧ್ಯಕ್ಷರು ಕೋರಿದ್ದಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗೋಟುವಾದ್ಯ ೭ ೧೫ ಜಿ ಪಿ ಸೀತಾರಾಂ—ದೇವರನಾಮ ೮-೧೫ ಗಾನ ವಿಹಾರ ಮಧ್ಯಾಹ್ನ ೧೨ ಜಿ ಪಿ ಸೀತಾರಾಂ—ಗ ... ವನಿತಾ ವಿಹಾರ ೧ ೩೦ ರಿಂದ ... ಬಿ. ಪಿ ನರಸಿಂಹಮೂರ್ತಿ—ಸಲೀತ ... ಪ್ರೌಢಶಾಲೆಗಳಿಗಾಗಿ ಸಂಜೆ ೬-೩೦ ಎಂ. ಶಾಂತಲಕ್ಷ್ಮಿ—ಶಾಸ್ತ್ರವಾದನ ೭ ೩ ಕನ್ನಡ ಭಾಷಣ. ಚ ತರಂಗರಂಗ ೮-೩೦ ... ನರಸಿಂಹಮೂರ್ತಿ ಗಾಯನ ೯-೧೫ ಭಾವಗ ಡನಂತೆ: ಎಂ ಟಿ. ಪಿಕ್ಚರ್-ಸಂಗೀತ

ಒರಿಸ್ಸಾ ರಾಜಮನೆತನದವರ ರಾಜ ಧನದಲ್ಲಿ ಭಾರಿ ಖೋತಾ

೧೯೪೮ ರಲ್ಲಿ ಒರಿಸ್ಸಾದಲ್ಲಿ ವಿಲೀನವಾದ ಆ ಸ್ವಾತಂತ್ರ ಹಳೇ ಸಂಸ್ಥಾನಗಳ ಮಾಜಿ ರಾಜರುಗಳ ಸಂಬಂಧಿಕರಿಗೆ ಕೊಡಲಾಗುತ್ತಿದ್ದ ಧನದಲ್ಲಿ ಭಾರಿ ಖೋತಾವನ್ನು ಮಾಡಲಾಗಿದೆ. ಪಂಕ್ತಿಗನುಸಾರವಾಗಿ ಈ ಕ್ರಮವನ್ನು ಕೈಗೊಳ್ಳಲಾಗಿದೆ. ಇಂದಿನಿಂದ ಅದು ಜಾರಿಗೆ ಬರುವುದು ವಿಧವೆಯರಾದ ರಾಜಮಾತೆಯರಿಗೆ ತಿಂಗಳಿಗೆ ೫೦೦ ರೂ. ಗೆ ಹೆಚ್ಚದಂತೆ ರಾಜಧನವನ್ನು ಇಳಿಸಲಾಗುವುದು. ಭತ್ಯದ ಖೋತಾದಿಂದ ಯಾರಿಗಾದರೂ ತೊಂದರೆಯಾದರೆ ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳಲು ಅವಕಾಶವಿದೆ ರಾಜಮನೆತನದವರಿಗೆ ವರ್ಷಂಪ್ರತಿ ಸಲ್ಲುತ್ತಿದ್ದ ೩,೭೦ ೦೦೦ ರೂ ಪೈಕಿ ಈ ಕ್ರಮದಿಂದ ೩ ಲಕ್ಷ ರೂ ಉಳಿಯುವುದು. ಕೇಂದ್ರ ಸರ್ಕಾರದವರು ಒರಿಸ್ಸಾ ರಾಜರುಗಳಿಗೆ ೧೮॥ ಲಕ್ಷ ರೂ ಕೊಡುತ್ತಿರುವರು

ಕೇರಳದಲ್ಲಿ ಅರ್ಹತೆ ಮೇಲೆ ಕಾಲೇಜುಗಳಿಗೆ ಪ್ರವೇಶಾವಕಾಶ

ಕೇರಳದ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ನಿಮ್ನ ವರ್ಗ ಮತ್ತು ಗುಡ್ಡಗಾಡಿನವರಿಗೆ ೨೦ ಸೇಕಡ ೫ ರಷ್ಟು ಮೀಸಲು ಸ್ಥಾನ ಬಿಟ್ಟು, ಮಿಕ್ಕವುಗಳಿಗೆ ಅರ್ಹತೆ ಮೇಲೆ ಪ್ರವೇಶವೀಯಬೇಕೆಂದು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಸಾಕಷ್ಟು ನಿಮ್ನವರ್ಗದವರು ಬಾರದಿದ್ದ ಪಕ್ಷದಲ್ಲಿ ಉಳಿದವರಿಗೆ ಅವನ್ನು ಹಂಚಬೇಕೆಂದು ಸೂಚಿಸಲಾಗಿದೆ

ಇಂಜನಿಯರಿಂಗ್, ವ್ಯವಸಾಯ, ವೈದ್ಯಕೀಯ ಮತ್ತು ಪಶುವೈದ್ಯ ಔದ್ಯೋಗಿಕ ಕಾಲೇಜುಗಳಲ್ಲಿ ಹಿಂದುಳಿದವರಿಗೆ ಶೇಕಡ ೩೫ ರಷ್ಟು ಸ್ಥಾನವನ್ನು ಮೀಸಲಿಡಬೇಕೆಂದೂ, ಉಳಿದ ಪ್ರಿನ್ಸಿಪಾಲರುಗಳೇ ಸ್ಥಾನಗಳನ್ನು ಹಂಚುವಂತೆಯೂ ತಿಳಿಸಲಾಗಿದೆ

ಜಾರ್ಡಾನ್ ಸರ್ಕಾರದಿಂದ ಅಧ್ಯಾಪಕರುಗಳ ಬಂಧನ

ಜಾರ್ಡಾನ್ ಸರ್ಕಾರವನ್ನು ಉರುಳಿಸುವ ಕೃತ್ಯ ನಡೆಸಿದರೆಂದು ಅಲ್ಲಿನ ಸರ್ಕಾರದವರು ಏಳು ಜನ ಉಪಾಧ್ಯಾಯರನ್ನು ಬಂಧಿಸಿರುತ್ತಾರೆ ಜಾರ್ಜ್ ಟರ್ಜಿನರ್ಸ್ ಎಂಬ ಕಮ್ಯೂನಿಸ್ಟ್ ಮುಖಂಡನನ್ನು ಬಂಧಿಸಲಾಗಿದೆ ಆತನು ಬಹಳ ದಿನಗಳಿಂದಲೂ ಪೋಲೀಸರಿಗೆ ಸಿಕ್ಕಿರಲಿಲ್ಲ

ಅಲ್ಜೀರಿಯ ನಗರದಲ್ಲಿ ಭೂಕಂಪ

ಅಲ್ಜೀರಿಯದ ಅರ್ಲಿಯನ್ಸ್‌ವಿಲ್ಲೆ ಎಂಬಲ್ಲಿ ಭೂಕಂಪಗಳಾಗಿ ಮೊನ್ನೆ ಊರಿನ ೩೨,೦೦೦ ನಿವಾಸಿಗಳಲ್ಲಿ ಹಲವು ಮಂದಿ ಹೊಲ ಗದ್ದೆಗಳಲ್ಲಿ ಹೋಗಿ ನಿದ್ರಿಸಿದರೆಂದು ವರದಿಯಾಗಿದೆ ಮಾರನೇ ದಿನ ಅವರು ಬಂದು ನೋಡಿದಾಗ, ಗೋಡೆಗಳಲ್ಲಿ ಬಿರುಕುಗಳು ಬಿಟ್ಟಿದ್ದುವು ಸಾವುನೋವುಗಳಾಗಿಲ್ಲ ೧೯೫೪ರಲ್ಲೂ ಅಲ್ಲಿ ಭೂಕಂಪವಾಗಿದ್ದಿತು

ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಅಖಿಲ ಭಾರತ ಮಂಡಲಿ

ಅಖಿಲ ಭಾರತ ಪ್ರಾಥಮಿಕ ವಿದ್ಯಾಭ್ಯಾಸ ಮಂಡಲಿಯೊಂದನ್ನು ಭಾರತ ಸರ್ಕಾರದವರು ಸ್ಥಾಪಿಸಿರುತ್ತಾರೆ ಅದು ಕೇಂದ್ರ ಸರ್ಕಾರ, ಪ್ರಾಂತ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಪ್ರಾಥಮಿಕ ವಿದ್ಯಾಭ್ಯಾಸದ ಸಂಬಂಧವಾಗಿ ಸೂಕ್ತ ಸಲಹೆ ನೀಡಲಿದೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಶೀಘ್ರಗೊಳಿಸುವುದೇ ಇದರ ಉದ್ದೇಶ

ಚಕ್ಕಳದ ಚೂರಿನಿಂದ ಬೋರ್ಡು ತಯಾರಿಕೆ

ಚಕ್ಕಳದ ಚೂರುಗಳನ್ನು ಸೇರಿಸಿ ಬೋರ್ಡನ್ನು ತಯಾರಿಸುವ ವಿಧಾನವನ್ನು ಸಿದ್ಧಗೊಳಿಸಲಾಗಿದೆ ಚೀಲ ಮತ್ತು ಪೆಟ್ಟಿಗೆಗಳಿಗೆ ಇವನ್ನು ಉಪಯೋಗಿಸಬಹುದು ಭಾರತದಲ್ಲಿ ವರ್ಷಕ್ಕೆ ೩ ಲಕ್ಷ ರೂ ನ ಸುಮಾರು ೩,೦೦೦ ಟನ್ನಿನಷ್ಟು ಚಕ್ಕಳದ ಚೂರು ವ್ಯರ್ಥವಾಗುತ್ತಿದೆ ಅದರಿಂದ ೪॥ ಸಾವಿರ ಟನ್ ಬೋರ್ಡನ್ನು ತಯಾರಿಸಬಹುದೆಂದು ಹೇಳಲಾಗಿದೆ.

ಹುಬ್ಬಳ್ಳಿ ಮೆಡಿಕಲ್ ಕಾಲೇಜಿಗೆ ಕೇಂದ್ರ ಸರ್ಕಾರದ ನೆರವು

ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜನ್ನು ತೆರೆಯುವ ಬಗ್ಗೆ ಮೈಸೂರು ಸರ್ಕಾರದ ಯೋಜನೆಯನ್ನು ಭಾರತ ಸರ್ಕಾರದವರು ಅಂಗೀಕರಿಸಿರುತ್ತಾರೆ. ಅದಕ್ಕೆ ಬೇಕಾಗುವ ಸಹಾಯವನ್ನು ಮಾಡಲು ಕೇಂದ್ರದವರು ಒಪ್ಪಿರುತ್ತಾರೆ ಕಾಲೇಜಿನ ಸ್ಥಾಪನೆಗೆ ೧ ೩೦ ಕೋಟಿ ರೂ ವೆಚ್ಚವಾಗುವುದು.

ಭಾರತದ ರೈಲ್ವೆಗೆ ಅಮೆರಿಕದ ೪೫ ಲಕ್ಷ ಡಾಲರ್ ಸಹಾಯ

ಅಮೆರಿಕಾ ಸರ್ಕಾರದ ಅಂತರ ರಾಷ್ಟ್ರೀಯ ಸಹಕಾರ ಆಡಳಿತದವರು ಭಾರತಕ್ಕೆ ರೈಲ್ವೆಗಳ ವಿಸ್ತರಣೆ ಮತ್ತು ಪುನರ್ವ್ಯವಸ್ಥೆ ಗಾಗಿ ೬೭,೮೭೦ ಟನ್ ಉಕ್ಕನ್ನು ಕೊಳ್ಳಲು ೪೫ ಲಕ್ಷ ಡಾಲರ್ ಹಣವನ್ನು ಕೊಡಲಿದ್ದಾರೆ ಈ ಬಗ್ಗೆ ಮೊನ್ನೆ ಒಪ್ಪಂದಕ್ಕೆ ರುಜುವಾಯಿತು.

ಖೋಟಾ ಅಂಚೆ ಕವರು ಮತ್ತು ಸ್ಟಾಂಪು ತಯಾರಿಕೆ ಪತ್ತೆ

ಅಂಚೆ ಕವರು ಮತ್ತು ಸ್ಟಾಂಪುಗಳನ್ನು ಹೋಲುವ ಖೋಟಾ ಪದಾರ್ಥಗಳ ತಯಾರಿಕೆಯನ್ನು ಕಲ್ಕತ್ತದಲ್ಲಿ ಪೊಲೀಸರು ಪತ್ತೆ ಹಚ್ಚಿ, ಇಬ್ಬರು ವ್ಯಕ್ತಿಗಳನ್ನೂ ಮತ್ತು ಒಬ್ಬ ಮಾರಾಟಗಾರನನ್ನೂ ಬಂಧಿಸಿರುತ್ತಾರೆ ಅಲ್ಲಿ ರಾಣಿಗಂಜೆ ನಡೆಸಿದಾಗ ೧ ೨೦೦ ರೂ ಬೆಲೆಯ ಅಂಚೆ ಕವರುಗಳು ದೊರೆತುವು ಅವುಗಳ ಮುದ್ರಣ ಸಾಮಾನುಗಳೂ ಮುದ್ರಣಾಲಯವೂ ಪೊಲೀಸರ ವಶವಾಗಿವೆ ಇಲ್ಲಿನಯ ಸೈಸಿ ಕವರಿನಂತಹ ಕೃತ್ರಿಮ ಕವರುಗಳಿವೆ ... ಪ್ರೆಸ್ ಸ್ಟಾಂಪನ್ನೂ ಮುದ್ರಿಸಲಾಗುತ್ತಿತ್ತು ರಾತ್ರಿ ವೇಳೆ ಮುದ್ರಣ ... ನಡೆಯುತ್ತಿತ್ತೆಂದು ಹೇಳಲಾಗಿದೆ

ಪಾಕಿಸ್ತಾನದಲ್ಲಿರುವ ಭಾರತೀಯರಿಗೆ ರಹದಾರಿ ಅವಶ್ಯಕ

ಪಾಕಿಸ್ತಾನದಲ್ಲಿರುವ ಭಾರತೀಯರು ಅಲ್ಲಿನ ನಿವಾಸಿಗಳೆಂದು ಸೂಚಿಸುವ ರಹದಾರಿ ಪತ್ರಗಳನ್ನು ಪಡೆದಿರಬೇಕೆಂಬ ನಿರ್ಬಂಧವನ್ನು ಪಾಕಿಸ್ತಾನ ಸರ್ಕಾರದವರು ವಿಧಿಸಿರುತ್ತಾರೆ. ಭಾರತೀಯರು ಪಡೆದಿದ್ದ ಕಾಮನ್‌ವೆಲ್ತ್ ನಾಗರೀಕರ ಹಕ್ಕನ್ನು ಇದರಿಂದ ರದ್ದುಗೊಳಿಸಿದಂತಾಗಿದೆ

ಕೇಂದ್ರ ಯೋಜನಾ ಮಂಡಲಿ ಉಪಾಧ್ಯಕ್ಷತೆಗೆ ತ್ರಿವೇದಿ

ಆಂಧ್ರ ಪ್ರದೇಶದ ಗವರ್ನರ್ ಚಂದೂಲಾಲ್ ತ್ರಿವೇದಿಯವರನ್ನು ಕೇಂದ್ರ ಯೋಜನಾ ಮಂಡಲಿಯ ಉಪಾಧ್ಯಕ್ಷರಾಗಿ ಶ್ರೀ ವಿ. ಟಿ ಕೃಷ್ಣಮಾಚಾರಿಯವರ ಸ್ಥಾನದಲ್ಲಿ ನೇಮಿಸಲಾಗಿದೆ ತ್ರಿವೇದಿಯವರು ಜುಲೈ ೩೦ ನೇ ತಾರೀಕು ಗವರ್ನರ್ ಅಧಿಕಾರವನ್ನು ಬಿಡುವರು

ಇದುವರೆಗೆ ಫ್ಲೂ ನಿಂದ ೩೧೯ ಜನರ ಮರಣ

ಇನ್‌ಫ್ಲುಯೆಂಜಾ ವ್ಯಾಧಿಯಿಂದ ದೇಶದಲ್ಲಿ ಇದುವರೆಗೆ ೩೧೯ ಮಂದಿ ಮೃತರಾಗಿರುವರೆಂದೂ, ೪॥ ಲಕ್ಷ ಜನರು ವ್ಯಾಧಿ ಪೀಡಿತರಾಗಿರುವರೆಂದೂ ಕೇಂದ್ರ ಆರೋಗ್ಯ ಮಂತ್ರಿ ಡಿ ಪಿ ಕರ್ಮಾರ್ಕರ್ ರವರು ತಿಳಿಸಿರುತ್ತಾರೆ. ವ್ಯಾಧಿ ನಿವಾರಕ ಔಷಧಿಯನ್ನು ಬರುವ ೧೫ ದಿನಗಳಲ್ಲಿ ತಿಳಿಸಲಾಗುವುದೆಂದೂ ಅವರು ಹೇಳಿರುವರು.

ಹಿಂಡಲ್ಗಿಯಲ್ಲಿ ಕಚ್ಚಾ ರೇಷ್ಮೆ ಕೇಂದ್ರ

ಬೆಳಗಾಂ ಸಮೀಪದ ಹಿಂಡಲ್ಗಿಯಲ್ಲಿ ಕಚ್ಚಾ ರೇಷ್ಮೆ ಅಭಿವೃದ್ಧಿಗಾಗಿ ೬೮,೦೦೦ ರೂ ವೆಚ್ಚದಲ್ಲಿ ಕೇಂದ್ರವೊಂದನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ಒಪ್ಪಿರುತ್ತಾರೆಂದು ವರದಿಯಾಗಿದೆ.

CENTRAL INSTITUTE OF COMMERCE
Vani Vilas Market, Mysore
Efficient Coaching — Best Results. Admissions received for Diploma in Commerce & Stenography & for Shorthand and Typewriting Make haste and rush in before admissions close.

ವಿವಾಹ ಮಹೋತ್ಸವಗಳು

ನಗರದ ಉಷಾ ಪ್ರೆಸ್ಸಿನ ಶ್ರೀ ರಾಘವೇಂದ್ರ ಹೆಬ್ಬಾರರವರು ತಮ್ಮ ಕುಮಾರಿ ಸೌ॥ ಉಷಾಳನ್ನು ದಾವಣಗೆರೆ ವಕೀಲರಾದ ಶ್ರೀ ಹೆಚ್ ಶ್ರೀ. ಕೋಟಾಚಾರ್ಯರ ಪುತ್ರ ಶ್ರೀ ಹೆಚ್ ವಾಮನರಾಯರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ಕೊಳ್ಳೇಗಾಲದ ಶ್ರೀ ಎ ನಾರಾಯಣಮೂರ್ತಿಯವರ ಸಹೋದರರಾದ ಶ್ರೀ ಎ ವೇದವ್ಯಾಸಾಚಾರ್ಯರ ಪುತ್ರಿ ಸೌ॥ ದ್ರೌಪದಿಬಾಯಿಯನ್ನು ಕೆಸ್ತೂರು ಕೊಪ್ಪಲು ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಎ ಗುರುರಾಜಾಚಾರ್ಯರ ಪುತ್ರ ಶ್ರೀ ಎಸ್. ಜಿ. ಶ್ರೀನಿವಾಸಮೂರ್ತಿಯವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಲಾಯಿತು

ಶ್ರೀರಂಗಪಟ್ಟಣದ ಪೇಷ್ಕಾರ್ ಶ್ರೀ ಎಂ. ಎ. ಕೃಷ್ಣಯ್ಯಂಗಾರ್ಯರು ತಮ್ಮ ಕುಮಾರಿ ಸೌ॥ ಎಂ ಎ ಶ್ರೀನಿವಾಸನಿಗೆ ಉಷಾ ನಯ ... ನ್ನು, ತಮ್ಮ ಕುಮಾರ ಸೌ॥ ನಾಗರತ್ನಮ್ಮ ... ರವರನ್ನು ಬೆಂಗಳೂರಿನ ಶ್ರೀ ಎಂ. ಎ ಮೂರ್ತಿ ಸ್ವಾಮಿಯವರಿಗೆ ಕೊಟ್ಟು ವಿವಾಹವನ್ನೂ ನೆನ್ನೆ ಶ್ರೀರಂಗಪಟ್ಟಣದಲ್ಲಿ ನೆರವೇರಿಸಿದರು.

ಮದ್ರಾಸ್ ಶಾಸನಸಭಾ ಸದಸ್ಯನಿಂದ ಸಂಬಳ, ಭತ್ಯಗಳ ತ್ಯಾಗ

ಮದ್ರಾಸು ವಿಧಾನ ಪರಿಷತ್ತಿನ ನಾಮಕರಣ ಸದಸ್ಯರಾದ ಡಾ॥ ಎಂ. ಆರ್. ಗುರುಸ್ವಾಮಿ ಮುದಲಿಯಾರರು ಶಾಸನಸಭಾ ಸದಸ್ಯರಾಗಿ ತಮಗೆ ಬರುವ ಸಂಬಳ ಮತ್ತು ಭತ್ಯವನ್ನು ನಾಳೆಯಿಂದ ತೆಗೆದುಕೊಳ್ಳುವುದಿಲ್ಲವೆಂದು ನಿರ್ಧರಿಸಿರುತ್ತಾರೆ ಎಲ್ಲಾ ರೀತಿಯ ಮಿತವ್ಯಯತ್ವವನ್ನೂ ಕೈಗೊಳ್ಳಬೇಕೆಂದು ಪ್ರಧಾನಿಯವರು ಮಾಡಿರುವ ಪ್ರಾರ್ಥನೆಯನ್ನು ಅನುಸರಿಸಿ ಅವರು ಈ ರೀತಿ ಮಾಡಿರುವರು

ಪಾರ್ಲಿಮೆಂಟ್ ಸದಸ್ಯರ ಸಂಬಳದ ಖೋತಾಕ್ಕೆ ಕರೆ

ಪಾರ್ಲಿಮೆಂಟಿನ ಸದಸ್ಯರೂ ಮತ್ತು ೫೦೦ ರೂ ಗಿಂತ ಹೆಚ್ಚು ವೇತನ ಪಡೆಯುವ ಪಾರ್ಲಿಮೆಂಟ್ ಕಛೇರಿ ಅಧಿಕಾರಿಗಳೂ ತಮ್ಮ ಸಂಬಳದಲ್ಲಿ ಶೇಕಡ ೧೦ ರಷ್ಟನ್ನು ಖೋತಾ ಮಾಡಿಕೊಳ್ಳಬೇಕೆಂದು ಲೋಕ ಸಭಾಧ್ಯಕ್ಷ ಅನಂತಶಯನಂ ಅಯ್ಯಂಗಾರ್ಯರು ತಿಳಿಸಿರುತ್ತಾರೆ. ಈಗಿನ ಉತ್ಕಟ ಸಮಯದಲ್ಲಿ ಮಿತವ್ಯಯ ಕ್ರಮದಲ್ಲಿ ಸಹಕರಿಸದಿದ್ದರೆ, ಸರ್ಕಾರದವರೇ ಬಲವಂತದಿಂದ ಅವರುಗಳ ಸಂಬಳವನ್ನು ಕಡಿಮೆ ಮಾಡಿದರೂ ಅದು ತಪ್ಪಾಗಲಾರದೆಂದು ಅನಂತಶಯನಂ ಅಯ್ಯಂಗಾರ್ಯರು ಸೂಚಿಸಿರುವರು.

ಸಟ್ಟಾ ವ್ಯಾಪಾರ ಶಾಸನ ಉಲ್ಲಂಘಿಸಿದ ವರ್ತಕರ ಬಂಧನ

೧೯೫೨ರ ಸಟ್ಟಾ ವ್ಯಾಪಾರ ಶಾಸನವನ್ನು ಉಲ್ಲಂಘನೆ ಮಾಡಿದರೆಂದು ಅಹಮದಾಬಾದಿನ ತುಪ್ಪ ಮತ್ತು ಎಣ್ಣೆ ಬ್ರೋಕರುಗಳ ಸಂಘದ ಅಧಿಕಾರ ವರ್ಗದವರು, ಡೈರೆಕ್ಟರುಗಳು, ಸದಸ್ಯರು ಮುಂತಾಗಿ ೨೪ ಜನರನ್ನು ಕಳೆದ ಸು ಕ್ರವಾರ ಬಂಧಿಸಿ ಜಾಮೀನು ಮೇಲೆ ಬಿಡಲಾಗಿದೆ. ಅವರುಗಳು ಕಡಲೆಕಾಯಿ ಎಣ್ಣೆಯಲ್ಲಿ ಸಟ್ಟಾ ವ್ಯಾಪಾರ ನಡೆಸಿದ್ದರೆಂದು ವರದಿಯಾಗಿದೆ ಪೊಲೀಸರು ಅವರ ಭವನದ ಮೇಲೆ ಧಾಳಿ ಮಾಡಿ ಹಲವು ಪುಸ್ತಕ ಮತ್ತು ಕಾಗದಗಳನ್ನು ವಶಪಡಿಸಿಕೊಂಡರು.

Admissions about to close
SARADA VILAS COLLEGE, MYSORE
INTER TUTORIAL SECTION
ENGLISH & P. C. M.
Students joining on or before 5-7-57 get the benefits of earlier lessons by Special classes
JOIN AT ONCE
Ladies allowed 40 per cent concession

Edited, Printed and Published by A. R. Nagrajan at Sadhvi Press, D Subbiah Road, Mysore

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 2 ನಯೆ ಪೈಸೆ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆಪೈಸೆ

ಸಂಪುಟ : ೧೫] SADHVI · TUESDAY 2—7—1957 ಮೈಸೂರು · ಮಂಗಳವಾರ ೨—೭—೧೯೫೭ · [ಸಂಚಿಕೆ : ೩೨೮

ಶಿವನಸಮುದ್ರದಲ್ಲಿ ಕೊಳಾಯಿ ಬಿದ್ದು ೧೧ ಜನರ ಮರಣ

ಭಾರಿ ಕೊಳಾಯಿ ಬಿದ್ದು ೧೧ ಜನರ ಮರಣ

ಶಿವನಸಮುದ್ರದ ವಿದ್ಯುಚ್ಛಕ್ತಿ ಕೇಂದ್ರದ ಬಳಿ ಘಟನೆ

ಮೈಸೂರು ೨

ಶಿವನಸಮುದ್ರದಲ್ಲಿ ನೆನ್ನೆ ಬೆಳಗ್ಗೆ ವಿದ್ಯುತ್ ಶಕ್ತ್ಯಾಗಾರದ ಪ್ರದೇಶದಲ್ಲಿ ಭಾರಿ ಕೊಳಾಯಿಯನ್ನು ಎತ್ತುತ್ತಿದ್ದಾಗ ಉಕ್ಕಿನ ಹಗ್ಗವು ಕಡಿದು ಬಿದ್ದ ಪರಿಣಾಮವಾಗಿ ಕೆಳಗಡೆ ಇದ್ದ ೮ ಜನ ಕಾರ್ಮಿಕರು ಸ್ಥಳದಲ್ಲೂ, ಮೂವರು ಆಸ್ಪತ್ರೆಯಲ್ಲೂ ಮೃತಪಟ್ಟರು ಇನ್ನೂ ಮೂವರ ಸ್ಥಿತಿ ಚಿಂತಾಜನಕವಾಗಿದೆ ಅವರನ್ನು ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕರೆತರಲಾಗಿದೆ. ೯ ಜನರಿಗೆ ಅಲ್ಪಸ್ವಲ್ಪ ಗಾಯಗಳಾಗಿ ಅವರಿಗೆ ಚಿಕಿತ್ಸೆ ಮಾಡಲಾಯಿತು ವಿದ್ಯುಚ್ಛಕ್ತಿ ಇಲಾಖಾಧಿಕಾರಿಗಳಾದ ಶ್ರೀ ಡಿ ಸ್ವಾರವರು ಸ್ಥಳಕ್ಕೆ ತೆರಳಿರುತ್ತಾರೆ

ಘಟನೆ ಬಗ್ಗೆ ಮೈಸೂರು ಡಿವಿಜನ್ ಕಮಿಷನರು ತನಿಖೆ ನಡೆಸುವಂತೆ ಆಜ್ಞೆಯಾಗಿದೆ ಮಂಡ್ಯ ಮತ್ತು ಮೈಸೂರುಗಳಿಂದ ಅಲ್ಲಿಗೆ ವೈದ್ಯಕೀಯ ಸಹಾಯವನ್ನು ಕಳುಹಲಾಗಿದೆ

ಡಾ|| ಗೋಪಾಲಸ್ವಾಮಿಯವರ ನಿಧನಕ್ಕಾಗಿ ಸಂತಾಪ ಸೂಚನೆ

ನಗರದ ಮಹಾರಾಜಾ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಭೆಯು ಈ ದಿನ ಪ್ರಿನ್ಸಿಪಲ್ ಸಿ. ಡಿ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿ ಡಾ|| ಎಂ. ವಿ ಗೋಪಾಲಸ್ವಾಮಿಯವರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು ಪ್ರೊ|| ಟಿ. ಎಸ್. ಶ್ರೀಕಂಠಯ್ಯ, ಡಾ|| ಬಿ ಕುಪ್ಪುಸ್ವಾಮಿ. ಶ್ರೀಗಳಾದ ಸಿ ಪಿ ಶ್ರೀನಿವಾಸಮೂರ್ತಿ ಮತ್ತು ಎಂ ಎಸ್ ಪಾರ್ಥಸಾರಥಿಯವರು ಭಾಷಣ ಮಾಡಿ ದಿವಂಗತರ ಗುಣಾತಿಶಯಗಳನ್ನು ಕೊಂಡಾಡಿದರು

೧೦೫ ಗಂಟೆಕಾಲ ಹೂತುಹೋಗಿದ್ದ ಗಣಿ ಕಾರ್ಮಿಕರ ರಕ್ಷಣೆ

ಬೋಕಿಯೊ ಬಳಿ ಒಂದು ಸುರಂಗವು ಕುಸಿದ ಮಣ್ಣು ರಾಶಿಯಲ್ಲಿ ಹೂತುಹೋಗಿದ್ದ ೧೮ ಜನ ಗಣಿ ಕಾರ್ಮಿಕರನ್ನು ೧೦೫ ಗಂಟೆಗಳ ನಂತರ ರಕ್ಷಿಸಲಾಗಿದೆ ಅವರಿಗೆ ಸ್ವಲ್ಪವೂ ಗಾಯವಾಗಿಲ್ಲವೆಂದು ಹೇಳಲಾಗಿದೆ

ಸತತವಾಗಿ ನಿಂತು ಮೋಕ್ಷ ಸಾಧಿಸಲು ಸಾಧುವಿನ ಪ್ರಯತ್ನ

ಹೈದರಾಬಾದಿನಿಂದ ಲಕ್ನೋವಿಗೆ ಭೈರಾಗಿನಾಥ್ ಎಂಬ ೪೮ ವರ್ಷದ ಸಾಧುವೊಬ್ಬರು ಆಗಮಿಸಿರುತ್ತಾರೆ. ಅವರು ಸತತವಾಗಿ ನಿಂತುಕೊಂಡಿದ್ದು ಮೋಕ್ಷ ಸಾಧನೆ ಮಾಡಲು ಅಭಿಲಾಷೆ ಹೊಂದಿರುತ್ತಾರೆ ೧೮ ವರ್ಷ ಕಾಲ ಅವಿಚ್ಛಿನ್ನವಾಗಿ ನಿಂತುಕೊಂಡಿರಬೇಕೆಂದು ಅವರು ನಿರ್ಧರಿಸಿ, ಅದರಂತೆ ಇದುವರೆಗೆ ಆರು ವರ್ಷ ತಪಸ್ಸು ಮಾಡಿರುವರೆಂದು ಹೇಳಲಾಗಿದೆ: ಅವರ ಕಾಲು ಬಾತುಕೊಂಡಿದೆ ಅವರು ಗೋಮತಿ ನದಿ ತೀರದಲ್ಲಿರುವ ರುದ್ರ ಭೂಮಿಯ ಮರವೊಂದರ ಕೆಳಗೆ ನಿತ್ಯ ನಿಂತಿರುವರು ಅವರು ನಿಂತುಕೊಂಡೇ ಊಟ ಮಾಡುವರು

ಕಾಶ್ಮೀರದಲ್ಲಿ ಪಾಕಿಸ್ತಾನದ ವಿನಾಶಕಾರರ ಪತ್ತೆ ತರದೂದು

ಹಲವರ ಬಂಧನ

ಕಾಶ್ಮೀರದಲ್ಲಿ ಆಂತರಿಕವಾದ ಅವ್ಯವಸ್ಥೆಯನ್ನುಂಟುಮಾಡಲು ಹವಣಿಸಿರುವ ಪಾಕಿಸ್ತಾನದ ವಿನಾಶಕೃತ್ಯಕಾರರ ಗುಂಪೊಂದನ್ನು ಪತ್ತೆ ಹಚ್ಚುವುದರಲ್ಲಿ ಕಾಶ್ಮೀರದ ಪೋಲೀಸರು ತೊಡಗಿರುತ್ತಾರೆ ಗುಮಾನಿಸಿದವರನ್ನು ಹಿಡಿಯುತ್ತಿರುವರಲ್ಲದೆ ಕೆಲವರು ಸಭ್ಯದಲ್ಲೇ ಬಂಧಿತರಾಗಲಿರುವರೆಂದು ಹೇಳಲಾಗಿದೆ. ರಾಜ್ಯ ಸಂಸ್ಥಾನದಲ್ಲಿ ಅದಕ್ಕಾಗಿ ತರದೂದು ನಡೆಯುತ್ತಿದೆ ಶ್ರೀನಗರದ ಒಳ ಶೋಧನೆ ನಡೆಸಿ ಹಲವು ಗಾಂ ಸಿಡಿಮದ್ದುಗಳನ್ನು ವಶಪಡಿಸಿಕೊಳ್ಳಲಾಗಿದೆ ಇತ್ತೀಚೆಗೆ ಶ್ರೀನಗರದಲ್ಲೂ ಮತ್ತು ಜಮ್ಮುವಿನಲ್ಲೂ ಸಿಡಿತಗಳಾಗಿ ಹಲವರ ಸಾವುನೋವುಗಳಿಗಿಮ್ಮು ಸಿಕ್ಕಿರುವ ಸಿಡಿತದ ವಸ್ತುಗಳು ಪ್ರವೀಣರೇ ಒದಗಿಸಿದಂತಹವೆಂದು ಹೇಳಲಾಗಿದೆ ಅವನ್ನು ನೋಡಿದರೆ ಕಾಶ್ಮೀರ ಸಂಸ್ಥಾನದಲ್ಲಿ ತೊಂದರೆಯನ್ನುಂಟುಮಾಡಬೇಕೆಂದು ಪಿತೂರಿ ನಡೆಯುತ್ತಿರುವುದೆಂದು ಪೋಲೀಸರಿಗೆ ಭಾಸವಾಗುತ್ತಿದೆ ದೊಮ್ಮೆಯಿಂದ ಅನೇಕರನ್ನು ಪೋಲೀಸರು ಪ್ರಶ್ನಾರ್ಥವಾಗಿ ತಮ್ಮ ವಶಕ್ಕೆ ತೆಗೆದುಕೊಂಡು, ಹಲವರನ್ನು ಬಂಧಿಸಿರುವರೆಂದೂ ವರದಿಯಾಗಿದೆ.

ಸಾಲ ಕೊಡುವುದನ್ನು ಕಡಿಮೆ ಮಾಡಲು ಬ್ಯಾಂಕುಗಳಿಗೆ ಸೂಚನೆ

ಬೆಳೆಯು ಇಲ್ಲದ ಕಾಲದಲ್ಲಿ ಧಾನ್ಯಗಳಿಗಾಗಿ ಸಾಲ ಕೊಡುವುದನ್ನು ಕಡಿಮೆ ಮಾಡಬೇಕೆಂದು ರಿಸರ್ವ್ ಬ್ಯಾಂಕಿನ ಗವರ್ನರ್ ಶ್ರೀ ಹೆಚ್.ವಿ ಆರ್ ಅಯ್ಯಂಗಾರ್ಯರು ನಾನಾ ಬ್ಯಾಂಕುಗಳಿಗೆ ಕಳುಹಿಸಿರುವ ಸೂಚನಾ ಪತ್ರದಲ್ಲಿ ತಿಳಿಸಿರುತ್ತಾರೆ ಅದರಿಂದ ಬ್ಯಾಂಕುಗಳು ತಮ್ಮ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದಲ್ಲದೆ ರಿಸರ್ವ್ ಬ್ಯಾಂಕಿನ ಸಹಾಯವನ್ನು ಕೇಳುವ ಸ್ಥಿತಿಯು ತಪ್ಪುವುದೆಂದೂ ಅವರು ಸೂಚಿಸಿರುವರು.

ಆಮದುಗಳ ರಹದಾರಿ ಬಗ್ಗೆ ತೀವ್ರ ನಿರ್ಬಂಧವನ್ನು ವಿಧಿಸಬೇಕೆಂದಿರುವಾಗ ಅಂತಹ ವಸ್ತುಗಳ ಬಗ್ಗೆಯೂ ಬಹಳ ಎಚ್ಚರಿಕೆಯಿಂದ ವರ್ತಿಸುವುದು ಅವಶ್ಯಕವೆಂದು ಅವರು ಸಲಹೆ ಮಾಡಿರುತ್ತಾರೆ ಹಾಗೆ ಮಾಡದಿದ್ದರೆ ಅವುಗಳ ಅಭಾವವು ತಲೆದೋರಿ ವಸ್ತುಗಳ ಬೆಲೆಯು ಹೆಚ್ಚುವುದೆಂಬ ನಿರೀಕ್ಷೆಯಿಂದ ಅವನ್ನು ಬಚ್ಚಿಡುವ ಪ್ರಮೇಯಗಳು ಹೆಚ್ಚಾಗುವುವೆಂದು ಗವರ್ನರರು ಹೇಳಿರುತ್ತಾರೆ ೧೯೫೬ ರ ಜೂನಿನಲ್ಲಿ ೬೧೩ ಕೋಟಿ ರೂ ಸಾಲ ಕೊಟ್ಟಿದ್ದಿದ್ದುದು ಈ ಜೂನ್ ಹೊತ್ತಿಗೆ ೧೩೨ ಕೋಟಿ ರೂ ಆಗಿರುವುದೆಂದು ಅವರು ತೋರಿಸಿರುತ್ತಾರೆ.

ಚಿನ್ನದ ಗಣಿಯಲ್ಲಿ ಫ್ಲೂವಿನಿಂದ ಎರಡು ಮರಣಗಳು

ಕೋಲಾರದ ಚಿನ್ನದ ಗಣಿಯಲ್ಲಿ ಇನ್ಫ್ಲುಯೆಂಜಾದಿಂದ ನೆನ್ನೆ ಇಬ್ಬರು ಮಡಿದರೆಂದು ವರದಿಯಾಗಿದೆ. ಸಂಸ್ಥಾನದಲ್ಲಿ ಒಟ್ಟು ೧೭ ಮಂದಿಯು ಇದರಿಂದ ಮೃತರಾಗಿರುವರೆಂದೂ, ೩ ಲಕ್ಷ ಪ್ರಜೆಗಳಿಗೆ ವ್ಯಾಧಿಯುಂಟಾಗಲಿರುವುದಾಗಿಯೂ ಗೊತ್ತಾಗಿದೆ.

ವಿಶ್ವವಿದ್ಯಾಲಯದ ತರಗತಿಗಳಲ್ಲಿ ಹೊಸ ಶುಲ್ಕ

ಮೈಸೂರು ೨

ವಿಶ್ವವಿದ್ಯಾಲಯದಲ್ಲಿ ವಿವಿಧ ಶಿಕ್ಷಣಗಳಿಗಾಗಿ ಶುಲ್ಕವನ್ನು ಪುನರ್ವಿಮರ್ಶಿಸಲಾದೆಯಷ್ಟೆ ಅದರ ಪ್ರಕಾರ ಪ್ರಸಕ್ತ ಸಾಲಿನಿಂದ ಕೆಳಗೆ ಕಂಡಂತೆ ವಾರ್ಷಿಕ ಶುಲ್ಕವನ್ನು ೯ ತಿಂಗಳ ಸಮ ಕಂತುಗಳಲ್ಲಿ ವಸೂಲು ಮಾಡಲಾಗುವುದು:—

ಪ್ರೀ-ಯೂನಿವರ್ಸಿಟಿ ಶಿಕ್ಷಣ

ಹ್ಯುಮ್ಯಾನಿಟೀಸ್, ಸೈನ್ಸ್ ಮತ್ತು ಹೋಮ್ ಸೈನ್ಸ್ ವಿಭಾಗಗಳಿಗೆ ತಲಾ ವರ್ಷಕ್ಕೆ ೯೦ ರೂ ಅಲ್ಲದೆ ಸೈನ್ಸ್ ವಿಭಾಗದಲ್ಲಿ ಪ್ರಯೋಗ ಶಾಲೆಗ ೧೨ ರೂ

ಸೀನಿಯರ್ ಇಂಟರ್ಮೀಡಿಯೆಟ್ಟಿಗೂ ಮೇಲ್ಕಂಡಂತೆಯೇ

ಬಿ ಎ, ಬಿ ಎಸ್‌ಸಿ, ಬಿ. ಕಾಂ ಡಿಗ್ರಿಗಳಿಗಾಗಿ ತಲಾ ೧೩೩ ರೂ, ಬಿ ಎ. ಆನರ್ಸ್, ಬಿ ಎಸ್‌ಸಿ. ಆನರ್ಸ್, ಎಂ ಎ ಮತ್ತು ಎಂ. ಎಸ್‌ಸಿ. ಡಿಗ್ರಿಗಳು ತಲಾ ೧೬೪ ರೂ ಪ್ರಯೋಗ ಶಾಲೆಗಾಗಿ ಬಿ ಎಸ್‌ಸಿ ಡಿಗ್ರಿ ಕೋರ್ಸಿನಲ್ಲಿ ೨೭ ರೂ ಮತ್ತು ಬಿ ಎಸ್‌ಸಿ ಆನರ್ಸ್ ಮತ್ತು ಎಂ.ಎಸ್‌ಸಿ. ಕೋರ್ಸುಗಳಲ್ಲಿ ತಲಾ ೪೫ ರೂ.

ಬಿ ಇ ಡಿಗ್ರಿಯಲ್ಲಿ ೧೯೮, ಬಿ ಇಡಿ ಡಿಗ್ರಿ ೧೩೫ ಪ್ರೀ ಮೆಡಿಕಲ್ ಪೂರ್ತಿ ಕೋರ್ಸಿಗೆ ೧೨೦ ರೂ ಎಂ. ಬಿ ಬಿ ಎಸ್ ಡಿಗ್ರಿ ಪೂರ್ತಿ ವ್ಯಾಸಂಗಕ್ಕಾಗಿ ೨೭೦ ರೂ ಮತ್ತು ಎಲ್ ಎಂ. ಪಿ. ೯೯ ರೂ

ಯೋಜನೆಯ ಹಲವು ಕಾರ್ಯಗಳು ಮುಂದೆಹೋಗುವ ಸಂಭವ

ದ್ವಿತೀಯ ಯೋಜನೆಯಲ್ಲಿ ಮುಖ್ಯವಾದ ಕೈಗಾರಿಕಾ ಕಾರ್ಯಗಳನ್ನು ಬಿಟ್ಟು ಇತರ ಸಾಧಾರಣ ಕೆಲಸಕಾರ್ಯಗಳನ್ನು ಮುಂದೆ ಹಾಕುವ ಸಂಭವವಿರುವುದೆಂದು ನಿರೀಕ್ಷಿಸಲಾಗಿದೆ. ಯೋಜನೆಯ ಪ್ರಮಾಣವು ೪,೮೦೦ ಕೋಟಿ ರೂ ನಿಂದ ೫,೫೦೦ ಕೋಟಿ ರೂ. ಗೆ ಬೆಲೆ ಏರಿಕೆ ಪರಿಣಾಮವಾಗಿ ಹೆಚ್ಚಿರುವುದೆಂದೂ, ೬,೦೦೦ ಕೋಟಿ ರೂ ಗೆ ಹೆಚ್ಚಿರುವುದೆಂದೂ, ಇಷ್ಟೊಂದು ಭಾರಿ ಮೊತ್ತವನ್ನು ಒದಗಿಸಲು ದೇಶಕ್ಕೆ ಸಾಧ್ಯವಿಲ್ಲವೆಂದೂ ನೆಹರೂರವರು ಇತರ ಮಂತ್ರಿಗಳಿಗೆ ಸೂಚಿಸಿರುತ್ತಾರೆ

೨೩ ಜನರಿದ್ದ ಪಾಕಿಸ್ತಾನದ ವಿಮಾನ ಮಾಯ

೧೯ ಮಂದಿ ಪ್ರಯಾಣಿಕರೂ ಮತ್ತು ೪ ಜನ ಚಾಲಕರೂ ಇದ್ದ ಪಾಕಿಸ್ತಾನದ ವಿಮಾನವೊಂದು ನೆನ್ನೆ ಬೆಳಗ್ಗೆ ಚಿತ್ತಗಾಂಗಿನಿಂದ ಹೊರಟು ೨೫ ನಿಮಿಷಗಳಲ್ಲೇ ಕಣ್ಮರೆಯಾಗಿರುತ್ತದೆ. ಅದರ ಶೋಧನೆಗಾಗಿ ಇತರ ೫ ವಿಮಾನಗಳು ಹಿಂದಿನವರೆಗೂ ಪ್ರಯತ್ನಿಸಿ ವಿಫಲವಾಗಿವೆ

○ ಪಂಜಾಬಿನ ಹಿಂದಿ ರಕ್ಷಣಾ ಚಳುವಳಿಯ ಮೇಲ್ವಿಚಾರಣೆ ಮಾಡುವ ಹಿಂದಿ ರಕ್ಷಣಾ ಸಮಿತಿಯವರು ಸಮಿತಿಯ ಮೊದಲನೇ ಡಿಕ್ಟೇಟರ್ ಸ್ವಾಮಿ ಆತ್ಮಾನಂದರವರನ್ನು ಉಚ್ಚಾಟನೆ ಮಾಡಿದ್ದಾರೆ ಅವರು ಆರ್ಯ ಸಮಾಜದ ಮುಖಂಡರು.

ವಿಧಾನ ಪರಿಷತ್ತಿನ ಅಧ್ಯಕ್ಷ ಪಿ. ಸೀತಾರಾಮಯ್ಯನವರ ಭೇಟಿ

ಸ್ವಂ ಪ್ರ] ನಂಜನಗೂಡು ೧

ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಪಿ ಸೀತಾರಾಮಯ್ಯನವರು ಈ ದಿನ ಇಲ್ಲಿಗೆ ಭೇಟಿಯಿತ್ತರು ಕನಕದಾಸ ವಿದ್ಯಾರ್ಥಿ ನಿಲಯದಲ್ಲಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ವಿಶ್ವೇಶ್ವರಗೌಡರು ಅವರನ್ನು ಸ್ವಾಗತಿಸಿದರು. ಈ ವರ್ಷ ಮಳೆಯ ಅಭಾವದಿಂದ ತಾಲ್ಲೂಕು ಜನರಿಗೆ ತುಂಬಾ ಕಷ್ಟವಾಗಿರುವುದೆಂದು ವಿಧಾನ ಸಭಾ ಸದಸ್ಯರಾದ ಶ್ರೀ ಪಿ ಮಹದೇವಯ್ಯನವರು ತಿಳಿಸಿ, ಈ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆಗೆ ಅಧ್ಯಕ್ಷರ ಬೆಂಬಲವನ್ನು ಕೋರಿದರು ಅಧ್ಯಕ್ಷರು ಉತ್ತರವಿತ್ತು, ಕಾಂಗ್ರೆಸ್ಸಿನವರು ಒಗ್ಗಟ್ಟಿನಿಂದ ಇದ್ದು ಜನರ ಸೇವೆಯನ್ನು ಮಾಡಬೇಕೆಂದು ನುಡಿದರು

ಅವರು ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನಕ್ಕೆ ತೆರಳಿ ಧರ್ಮದರ್ಶಿಗಳನ್ನು ಉದ್ದೇಶಿಸಿ ಮಾತನಾಡಿ, ಯಾತ್ರಿಕರಿಗೆ ಹೆಚ್ಚು ಸೌಕರ್ಯ ಕಲ್ಪಿಸುವುದು ಅಗತ್ಯವೆಂದು ಸೂಚಿಸಿದರು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಚನ್ನರಾಜೆ ಅರಸು ಈ ಕ್ಷೇತ್ರಕ್ಕೆ ವರ್ಷಂಪ್ರತಿ ೫ ಲಕ್ಷ ಜನರು ಬರುವರೆಂದೂ, ೧ ಲಕ್ಷ ರೂ ಉತ್ಪತ್ತಿಯಾಗುವುದೆಂದೂ, ಯಾತ್ರಿಕರ ಸೌಕರ್ಯಕ್ಕಾಗಿ ಸನಿಹದಲ್ಲಿ ಒಂದು ದೊಡ್ಡ ಛತ್ರವನ್ನು ಕಟ್ಟಿಸಲೂ ಮತ್ತು ದೇವಸ್ಥಾನದ ಗರ್ಭಗುಡಿಗೆ ಅಮೃತ ಶಿಲೆಯನ್ನು ಹಾಕಿಸಲೂ ಏರ್ಪಾಡಾಗಬೇಕೆಂದೂ ತಿಳಿಸಿದರು

ದೇವಸ್ಥಾನದ ನೌಕರರಿಗೆ ಎಂಟಾಣೆಯಿಂದ ೧೪ ರೂ. ವರೆಗೆ ಸಂಬಳ ದೊರೆಯುತ್ತಿದೆಯೆಂದೂ, ಅವರ ಸ್ಥಿತಿಯನ್ನು ಉತ್ತಮಪಡಿಸಬೇಕೆಂದೂ ಶ್ರೀ ವೆಂಕಟಪತಿ ಜೋಯಿಸರು ಮನವಿ ಮಾಡಿದರು.

ಶ್ರೀ ಪಿ. ಸೀತಾರಾಮಯ್ಯನವರು ಪುರಸಭಾ ಕಛೇರಿಗೂ ಭೇಟಿಯಿತ್ತಿದ್ದರು ಅವರನ್ನು ಉಪಾಧ್ಯಕ್ಷ ಶ್ರೀ ಲಕ್ಷ್ಮಣಶೆಟ್ಟರು ಸ್ವಾಗತಿಸಿ, ಸಭೆಗೆ ವರ್ಷಕ್ಕೆ ೫೦,೦೦೦ ರೂ ಗ್ರಾಂಟನ್ನು ಕೊಡಿಸುವಂತೆ ಕೋರಿದರು

ಪೀಠಾಪುರದ ದಿವಾನರ ಮನೆಯ ಶೋಧನೆ

ಛತ್ರದ ಹಣದ ದುರುಪಯೋಗದ ಆಪಾದನೆ

ಆಂಧ್ರ ದೇಶದಲ್ಲಿರುವ ಪೀಠಾಪುರ ಸಂಸ್ಥಾನದ ಛತ್ರಕ್ಕೆ ಸಂಬಂಧಪಟ್ಟ ಧರ್ಮದರ್ಶಿ ಕಚೇರಿಯ ಮೇಲ್ವಿಚಾರಣೆಯಲ್ಲಿರುವ ಪೀಠಾಪುರದ ದಿವಾನರಾದ ಕೋಟಿಪಲ್ಲಿ ವಿಶ್ವನಾಥಶಾಸ್ತ್ರಿಯವರ ಮನೆಯನ್ನು ಆಂಧ್ರ ಪ್ರದೇಶದ ಪೋಲೀಸ್ ಸಂಸ್ಥೆಗಳ ಪುದುವಟ್ಟಿನ ಅಧಿಕಾರಿಗಳು ಶೋಧಿಸಿ ಹಲವು ಕಾಗದಪತ್ರಗಳನ್ನು ವಶಪಡಿಸಿಕೊಂಡಿರುತ್ತಾರೆ. ಅವರು ಛತ್ರದ ೧ ಲಕ್ಷ ರೂ ಗಳನ್ನು ದುರುಪಯೋಗಪಡಿಸಿಕೊಂಡಿದ್ದರೆಂದು ವ್ಯಕ್ತಪಟ್ಟಿದೆ

ಭಾರತಕ್ಕೆ ಪಾಕಿಸ್ತಾನದಿಂದ ೮॥ ಲಕ್ಷ ರೂ. ಕಳ್ಳಸಾಗಾಣೆ ಯತ್ನ

ಕ್ಯೂಬಾ ರಾಯಭಾರಿಯ ಆಪ್ತ ಕಾರ್ಯದರ್ಶಿಯ ಬಂಧನ

ಪಾಕಿಸ್ತಾನದಿಂದ ಭಾರತಕ್ಕೆ ಕಳೆದ ೨೮ನೇ ತಾರೀಖು ಅಮೃತಸರದ ಬಳಿ ಪ್ರವೇಶಿಸುತ್ತಿದ್ದ ವಿದೇಶೀಯರ ಮೋಟಾರೊಂದರಲ್ಲಿ ರಹಸ್ಯವಾಗಿಡಲ್ಪಟ್ಟಿದ್ದ ೮॥ ಲಕ್ಷ ರೂ. ನಷ್ಟು ಭಾರತೀಯ ನೋಟುಗಳು ಮತ್ತು ಅಮೆರಿಕದ ೧೦ ಸಾವಿರ ಡಾಲರ್‌ಗಳು ಪತ್ತೆ ಮಾಡಲ್ಪಟ್ಟಿವೆ ಕಾರಿನಲ್ಲಿದ್ದವರು ಬೆಲ್ಜಿಯಮ್ಮಿಗೆ ನೇಮಿಸಲ್ಪಟ್ಟಿರುವ ಕ್ಯೂಬಾ ರಾಯಭಾರಿಯ ಆಪ್ತ ಕಾರ್ಯದರ್ಶಿ ಪಾಮುಕ್ ಷಾಷಾ ಎಂಬುವರು ಅವರ ಜೊತೆಗೆ ಲಿಯೊರಾಯ್ ಎಂಬ ಷೇರ್ ಮಾರ್ಕೆಟ್ ದಳ್ಳಾಳಿಯನ್ನೂ ಬಂಧಿಸಲಾಗಿದೆ ಆತನ ಬಳಿ ಲೈಸೆನ್ಸಿಲ್ಲದ ಪಿಸ್ತೂಲು ಮತ್ತು ಮದ್ದುಗುಂಡುಗಳು ಸಿಕ್ಕವು ಈಗ ಆತನು ಪೊಲೀಸರ ವಶದಲ್ಲಿರುವನು ಕ್ಯೂಬಾ ಅಧಿಕಾರಿಯು ತನಿಖೆಗಾಗಿ ದೆಹಲಿಯ ವಿಶೇಷ ಅಧಿಕಾರಿಯೊಬ್ಬರು ಅಮೃತಸರಕ್ಕೆ ಹೋಗಿರುತ್ತಾರೆ

ಕುಟುಂಬ ಯೋಜನೆ ಜಾರಿಗೆ ಕೇಂದ್ರದ ಕರೆ

ಕುಟುಂಬ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳುವ ಅಗತ್ಯವನ್ನು ಮೊನ್ನೆ ದೆಹಲಿಯಲ್ಲಿ ನಡೆದ ಆರೋಗ್ಯ ಸಚಿವರುಗಳ ಸಭೆಯಲ್ಲಿ ಒತ್ತಿ ಹೇಳಲಾಯಿತು ಕೇಂದ್ರ ಆರೋಗ್ಯ ಮಂತ್ರಿ ಡಿ ಪಿ ಕರ್ಮಾರ್‌ಕರ್‌ರವರು ಅಧ್ಯಕ್ಷತೆ ವಹಿಸಿದ್ದರು ಈಗಾಗಲೇ ಈ ವಿಚಾರವಾಗಿ ಕ್ರಮ ಕೈಗೊಳ್ಳದಿರುವ ಪ್ರಾಂತ ಸರ್ಕಾರಗಳವರು ಅದನ್ನು ಕಾರ್ಯಗತ ಮಾಡುವಂತೆ ಸೂಚಿಸಲಾಯಿತು.

ಬಹುಮಾನದ ಅಂಚೆ ಕೂಪನ್ನುಗಳ ಮಾರಾಟ

ಅಂಚೆ ಮತ್ತು ತಂತಿ ಇಲಾಖೆಯವರು ನೆನ್ನೆಯಿಂದ ೫ ೧೦, ೫೦, ೧೦೦ ಮತ್ತು ೧,೦೦೦ ರೂ ಗಳ ಬಹುಮಾನದ ಕೂಪನ್ನುಗಳನ್ನು ಮಾರಾಟಕ್ಕೆ ಕೊಟ್ಟಿರುತ್ತಾರೆ ಅವು ಸಣ್ಣ ಉಳಿತಾಯದ ಹೊಸ ಮಾರ್ಗವೆಂದು ಹೇಳಲಾಗಿದೆ ವಿವಾಹ, ಹುಟ್ಟಿದ ಹಬ್ಬ ಮುಂತಾದ ದಿನಗಳಲ್ಲಿ ಅದನ್ನು ಬಹುಮಾನವಾಗಿ ಕೊಡಬಹುದು ಅದನ್ನು ಕೊಟ್ಟರೆ ರಾಷ್ಟ್ರೀಯ ಯೋಜನೆ ಉಳಿತಾಯದ ಸರ್ಟಿಫಿಕೇಟನ್ನು ಕೊಡಲಾಗುವುದು

ತಲಕಾಡು ರಾಮರಾಯರ ನಿಧನ

ಟಿ ನರಸೀಪುರ ತಾಲ್ಲೂಕು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಶ್ರೀ ತಲಕಾಡು ರಾಮರಾಯರು ನಗರದಲ್ಲಿ ಕಳೆದ ೨೯ನೇ ತಾರೀಖು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ಹೃದಯ ವೇದನೆಯುಂಟಾಗಿತ್ತು ಮೃತರಿಗೆ ೬೮ ವರ್ಷ ವಯಸ್ಸಾಗಿತ್ತು ಬಹು ದಿನಗಳಿಂದಲೂ ಅವರು ಕಾಂಗ್ರೆಸ್ಸಿನಲ್ಲಿದ್ದು ಸಂಸ್ಥಾನದ ಜವಾಬ್ದಾರಿ ಸರ್ಕಾರ ಮತ್ತು ಭಾರತದ ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿದ್ದರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಬಂಧುಮಿತ್ರರಿಗೆ ಹೃತ್ಪೂರ್ವಕ ಅನುಕಂಪವನ್ನು ಸೂಚಿಸುತ್ತೇವೆ

ಪೌರಸಭಾ ಕೆಲಸಗಾರರ ಮೆರವಣಿಗೆ ಮತ್ತು ಸಭೆ

ನಗರದ ಪೌರಸಭಾ ಕೆಲಸಗಾರರ ಸಂಘದ ಸದಸ್ಯರು ಮೊನ್ನೆ ನಗರದಲ್ಲಿ ಮೆರವಣಿಗೆ ನಡೆಸಿ, ಮಂಡಿ ಮೊಹಲ್ಲಾದಲ್ಲಿ ಸಭೆ ಸೇರಿದ್ದರು ಶ್ರೀ ಎಂ. ಎ. ಚಿಕ್ಕಣ್ಣನವರು ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಪೌರಸಭಾ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಡಿ ಶ್ರೀರಾಮುಲುರವರು ಭಾಷಣ ಮಾಡಿದ ಬರುವ ಚುನಾವಣೆಯ ನಗರಗಳ ಪೌರಸಭೆ ಆಡಳಿತ ವರ್ಗದವರಿಗೂ, ಕೆಲಸಗಾರರಿಗೂ ನಡೆಯುವ ರಾಜಿ ಮಾತುಕತೆಗಳಲ್ಲಿ ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ಅವರು ತಿಳಿಸಿ ಸಂಧಾನವು ಮುರಿದುಬಿದ್ದಲ್ಲಿ, ಕಾರ್ಮಿಕರು ಹೂಡುವ ಹೋರಾಟಕ್ಕೆ ಬೆಂಗಳೂರು ಪೌರಸಭಾ ಕೆಲಸಗಾರರ ಬೆಂಬಲ ಭರವಸೆಯನ್ನಿತ್ತರು

ದಿನಸಿಗಳ ಮೇಲೆ ಬಹುಘಟ್ಟದ ತೆರಿಗೆ ಕೂಡದು

ದಿನಸಿ ವರ್ತಕರ ಸಭೆಯ ನಿರ್ಣಯ

ಮೈಸೂರು ೧

ನಗರದ ದಿನಸಿ ವರ್ತಕರು ಕಳೆದ ಶನಿವಾರ ಇಲ್ಲಿನ ಧಾನ್ಯ ವ್ಯಾಪಾರಿಗಳ ಸಂಘದ ಆಶ್ರಯದಲ್ಲಿ ಸಭೆ ನಡೆಸಿ, ಸರ್ಕಾರದವರು ಮಾರಾಟ ತೆರಿಗೆ ಕಾನೂನಿಗೆ ತಿದ್ದುಪಡಿ ತಂದು ಇದುವರೆಗೆ ವಿನಾಯಿತಿ ಹೊಂದಿರುವ ಅಕ್ಕಿ, ರಾಗಿ, ಜೋಳ, ಗೋಧಿ ನವಣೆ, ದ್ವಿದಳಧಾನ್ಯ, ಕಡಲೆಕಾಯಿ ಎಣ್ಣೆ ಮುಂತಾದ ನಿತ್ಯಜೀವನದ ಪದಾರ್ಥಗಳ ಮೇಲೆ ಬಹುಘಟ್ಟದ ಮಾರಾಟ ತೆರಿಗೆಯನ್ನು ವಿಧಿಸಲು ಯತ್ನಿಸಿರುವುದು ಬಳಕೆಗಾರರಿಗೆ ತುಂಬಾ ಹೊರೆಯಾಗುವುದಲ್ಲದೆ, ವರ್ತಕರ ವ್ಯಾಪಾರಕ್ಕೆ ತುಂಬಾ ಧಕ್ಕೆಯಾಗುವುದೆಂದು ಅಸಮಾಧಾನವನ್ನು ಸೂಚಿಸಿರುತ್ತಾರೆ ಈ ವಿಷಯವಾಗಿ ವರ್ತಕರ ಕುಂದುಕೊರತೆಗಳನ್ನು ಅರಿಕೆ ಮಾಡಲು ಹಣಕಾಸಿನ ಮಂತ್ರಿಗಳ ಬಳಿ ನಿಯೋಗ ಹೋಗಬೇಕೆಂದು ಅವರುಗಳು ನಿರ್ಧರಿಸಿದರು ವಿಧಾನಸಭಾ ಸದಸ್ಯ ಶ್ರೀ ಕೆ ಎಸ್ ಸೂರ್ಯನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು

ಏಕ ಪಕ್ಷದಲ್ಲಿ ಅಣು ಸಿಡಿತವನ್ನು ನಿಲ್ಲಿಸುವುದರಿಂದ ಆಕ್ರಮಣಕ್ಕೆ ಸಹಾಯ

ರಷ್ಯದ ನಾಯಕ ಕ್ರುಶ್ಚೇವರ ಹೇಳಿಕೆ

ಜಪಾನಿನ ಅಸಾಹಿ ಷಿಂಬುನ್ ಪತ್ರಿಕಾ ಸಂಪಾದಕ ಹಿರೋಕಾರವರಿಗೆ ರಷ್ಯದ ನಾಯಕ ಕ್ರುಶ್ಚೇವರು ಕೊಟ್ಟ ಭೇಟಿಯಲ್ಲಿ ರಷ್ಯವು ಏಕ ಪಕ್ಷೀಯವಾಗಿ ಅಣು ಶಸ್ತ್ರಗಳ ಪರೀಕ್ಷಾರ್ಥ ಸಿಡಿತವನ್ನು ನಿಲ್ಲಿಸಿದರೆ ಅದರಿಂದ ಆಕ್ರಮಣಕಾರರಿಗೆ ಉತ್ತೇಜನವಿತ್ತಂತಾಗುವುದೆಂದು ತಿಳಿಸಿರುತ್ತಾರೆ ಅಣು ಮತ್ತು ಜಲಜನಕ ಬಾಂಬು ಸಿಡಿತಗಳನ್ನು ನಿಲ್ಲಿಸಲು ರಷ್ಯವು ಒಪ್ಪುವುದೆಂದೂ, ಆದರೆ ಅದಕ್ಕೆ ಇತರ ರಾಷ್ಟ್ರಗಳ ಬೆಂಬಲವಿಲ್ಲವೆಂದೂ ಅವರು ಹೇಳಿ, ಅಮೆರಿಕಾ ಮತ್ತು ಬ್ರಿಟನ್ನುಗಳು ಈ ಬಗ್ಗೆ ಕೊನೆಯಿಲ್ಲದ ಷರತ್ತುಗಳನ್ನು ಹಾಕುತ್ತಿರುವುದಾಗಿ ಆಕ್ಷೇಪಿಸಿರುತ್ತಾರೆ ರಷ್ಯದ ಗುರಿಯು ಶಸ್ತ್ರಾಸ್ತ್ರ ಸ್ಪರ್ಧೆಯನ್ನು ನಿಲ್ಲಿಸುವುದೇ ಆಗಿರುವುದೆಂದೂ ಅವರು ಸೂಚಿಸಿರುವರು

ಕೊಳ್ಳೇಗಾಲದ ವಿದ್ಯಾರ್ಥಿಗಳಿಗೆ ಮದ್ರಾಸಿನಲ್ಲಿ ವಿದ್ಯಾ ಸೌಕರ್ಯ

ಈಗ ಮೈಸೂರು ರಾಜ್ಯದ ಭಾಗವಾಗಿರುವ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಳ್ಳೇಗಾಲ ತಾಲ್ಲೂಕು ಇವುಗಳ ವಿದ್ಯಾರ್ಥಿಗಳಿಗಾಗಿ ಮದ್ರಾಸಿನ ಮೆಡಿಕಲ್ ಕಾಲೇಜುಗಳಲ್ಲಿ ಹನ್ನೊಂದು ಸ್ಥಾನಗಳನ್ನೂ, ಕೊಯಮುತ್ತೂರಿನ ವ್ಯವಸಾಯ ಕಾಲೇಜಿನಲ್ಲಿ ಶೇಕಡಾ ೪೧ ಸ್ಥಾನಗಳನ್ನೂ ಕಾದಿಡಲಾಗಿದೆ ಮದ್ರಾಸಿನ ವೆಟರಿನರಿ ಕಾಲೇಜಿನಲ್ಲಿ ೫ ಸ್ಥಾನಗಳನ್ನು ಮದ್ರಾಸ್ ಸರ್ಕಾರವು ಈಗಾಗಲೇ ಕಾದಿರಿಸಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	೩೩ ೬೨	೩೪ ೦೦
ರತ್ನಚೂಡಿ	೩೭ ೦೦	೩೧ ೬೦
ಕೆಂಬೂತಿ	೨೮ ೦೦	
ಬಂಗಾರತಿ	೨೮ ೬೨	೨೪ ೮೭
ಕಡ್ಡಿ	೨೮ ೦೦	೩೧ ೨೫
ಕಾರ್‌ಸಣ್ಣ	೨೬ ೨೫	೨೬ ೫೦
ರಾಗಿ	೩೭ ೬೫	೩೬ ೦೦
ಜೋಳ	೪೨ ೦೦	
ಕಡಲೆಕಾಯಿ	೦೯ ೫೦	೨೭ ೮೭
ಎಳ್ಳು	೭೫ ೦೦	೮೦ ೫೦
ಹರಳುಬೀಜ	೪೨ ೧೨	
ತೊಗರಿ	೩೭ ೧೧	೩೩ ೨೫
ಹೆಸರು	೩೪ ೦೦	೫೯ ೦೦
ಕಡಲೆಬೇಳೆ	೩೨ ೦೦	೫೯ ೫೦
ಧನಿಯ	೨೦ ೩೭	೨೪ ೦೦
ಅವರೆ	೫೨ ೦೦	೫೨ ೬೨
ಉದ್ದು	೫೭ ೮೭	
ಹೊಂಗಿನ ಬೀಜ	೩೩ ೧೨	
ಹುಣಸೆಬೀಜ	೦೯ ೮೦	
ಹುಣಸೇಹಣ್ಣು	೦೭ ೫೦	೩ ೬೨
ಮೆಣಸಿನಕಾಯಿ	೧೧ ೭೭	೧೬ ೭೭
ತೆಂಗಿನಕಾಯಿ	೧೨೦ ೫೦	೨೬೦ ೫೦

೮೦ ರಾಷ್ಟ್ರಗಳ ಅಣು ಶಕ್ತಿ ಸಮ್ಮೇಳನ

ಬರುವ ವರ್ಷ ಸೆಪ್ಟೆಂಬರ್‌ನಲ್ಲಿ ೮೦ ರಾಷ್ಟ್ರಗಳ ಅಣು ಶಕ್ತಿ ಸಮ್ಮೇಳನವನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡ್ ರು ಕರೆದಿದ್ದಾರೆ ಸಂಸ್ಥೆಯ ೮೧ ಸದಸ್ಯ ರಾಷ್ಟ್ರಗಳಲ್ಲದೆ, ದಕ್ಷಿಣ ಕೊರಿಯಾ, ಮೊನ ಕೊ, ಸಾನ್ ಮಾರಿನೊ, ಸ್ವಿಟ್ಸರ್ಲೆಂಡ್, ವಾಟಿಕನ್ ಮತ್ತು ವಿಯಟ್ನಾಮುಗಳೂ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ ಅಣು ಶಕ್ತಿಯನ್ನು ಶಾಂತಿ ಬಳಕೆಗೆ ಉಪಯೋಗಿಸುವ ವಿಚಾರವನ್ನು ಅಲ್ಲಿ ಪರಿಶೀಲಿಸಲಾಗುವುದು ಇಂತಹ ಸಮ್ಮೇಳನವು ಹಿಂದೊಮ್ಮೆ ನಡೆದಿತ್ತು

ಆಹಾರದ ಬೆಲೆ ಇಳಿತಾಯಕ್ಕೆ ಸಲಹೆಗಳು

ಆಹಾರ ಧಾನ್ಯದ ಬೆಲೆಯನ್ನು ಗಣನೀಯವಾಗಿ ಕಡಿಮೆ ಮಾಡುವುದಕ್ಕೆ ೪ ಅಂಶಗಳ ಯೋಜನೆಯನ್ನು ಕೇಂದ್ರ ಹಣಕಾಸಿನ ಮಂತ್ರಿಯವರು ಸೂಚಿಸಿರುತ್ತಾರೆ ಸಂಸ್ಥಾನ ಸರ್ಕಾರಗಳು ಆಹಾರ ಧಾನ್ಯಗಳನ್ನು ಪೂರ್ಣವಾಗಿ ಕೊಳ್ಳುವುದು ಅವುಗಳ ಪೈಕಿ ಒಂದಾಗಿದೆ ಜಮೀನು ಕಂದಾಯದ ರದ್ದು, ಕೈಗಾರಿಕೆಗಳು ಮತ್ತು ವ್ಯವಸಾಯ ವರಮಾನದ ಮೇಲೆ ತೆರಿಗೆ ವಿಧಿಸಬೇಕೆಂದೂ ಮಾಡಬೇಕೆಂದೂ ಅವರು ಸಲಹೆ ಮಾಡಿರುವರು

ಕೃತಕ ಭೂಕಂಪ

ಜಪಾನಿನ ವಿಜ್ಞಾನಿಗಳು ಬರುವ ಆಗಸ್ಟ್ ತಿಂಗಳಲ್ಲಿ ಕೃತಕ ಭೂಕಂಪವನ್ನುಂಟುಮಾಡಲಿರುವುದಾಗಿ ಜಪಾನಿನ ಅಂತರರಾಷ್ಟ್ರೀಯ ಭೂಗೋಳಿಕ ಸಮಿತಿಯು ತಿಳಿಸಿದೆ ಈ ಭೂಕಂಪವು ಅಕ್ಕಪಕ್ಕದ ಪ್ರದೇಶವನ್ನು ಅಲುಗಾಡಿಸುವುದೆಂದೂ ೫೦೦ ಮೈಲಿ ದೂರದವರೆಗೂ ಭೂಕಂಪ ಸೂಚಕ ಯಂತ್ರಗಳಿಗೆ ಅದು ಗೊತ್ತಾಗುವುದೆಂದೂ ಹೇಳಲಾಗಿದೆ ಭೂಗರ್ಭದಲ್ಲಿ ೬೦ ಅಡಿ ಕೆಳಗೆ ೧ ಟನ್ನಿನಷ್ಟು ಡೈನಮೈಟನ್ನು ಆಸ್ಫೋಟಿಸಿ ಭೂಕಂಪವನ್ನುಂಟುಮಾಡುವರೆಂದು ಹೇಳಲಾಗಿದೆ

ಕಮ್ಯೂನಿಸ್ಟ್ ಪಕ್ಷದ ಸಭೆ

ನಗರದ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಮೊನ್ನೆ ಮಂಡಿ ಮೊಹಲ್ಲಾದಲ್ಲಿ ಸಭೆಯೊಂದು ಜರುಗಿತು ಶ್ರೀ ಡಿ ರಾಮುಲುರವರು ಅಧ್ಯಕ್ಷತೆಯಲ್ಲಿ ಒಗ್ಗಿತು ಜನಶಕ್ತಿ ಪತ್ರಿಕೆ ಸಂಪಾದಕ ಶ್ರೀ ..ರನ್ ದುಲ್ಲ ಖಾನರು ಮಾತನಾಡಿ ಭಾರತದಲ್ಲಿ ಸರ್ಕಾರಗಳ ತೆರಿಗೆ ನೀತಿ ಯೋಜನಾ ಆಯೋಗದ ಮುಂತಾದವನ್ನು ಟೀಕಿಸಿ ಕೇರಳ ಸರ್ಕಾರದ ಕಾರ್ಯಗಳನ್ನು ಪ್ರಶಂಸಿಸಿದರು. ನಿತ್ಯೋಪಯುಕ್ತವಾದ ವಸ್ತುಗಳ ಬೆಲೆಗಳು ದಿನೇದಿನೇ ಹೆಚ್ಚುತ್ತಿರುವುದನ್ನು ಅವರು ಟೀಕಿಸಿದರು

ವಿವಾಹ ಮಹೋತ್ಸವದ ಸ್ವಾಗತ ಸಮಾರಂಭ

ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಹೆಚ್ ಕೆ ರಾಜಾರಾಯರು ತಮ್ಮ ಕುಮಾರಿ ಸೌ॥ ರಮಾಮಣಿಯನ್ನು ವಾಸ್ತುಶಿಲ್ಪ ಇಲಾಖಾ ನಿವೃತ್ತ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಆರ್ ರಾಮರಾಯರ ಮಕ್ಕಳು ಶ್ರೀ ಆರ್. ಅನಂತರಾಯರಿಗೆ ಕೊಟ್ಟು ವಿವಾಹವನ್ನು ನಡೆಸಿದ ಸಂಬಂಧವಾಗಿ ನೆನ್ನೆ ನಗರದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು ಶ್ರೀಮತಿ ಗೌರಿ ಕುಪ್ಪುಸ್ವಾಮಿ ಮತ್ತು ಸಂಗಡಿಗರ ಸಂಗೀತವನ್ನೇರ್ಪಡಿಸಲಾಗಿತ್ತು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ದೇವರನಾಮ. ೭-೧೫ ಎಂ ಪುಟ್ಟರಾಜು-ನಾಗಸ್ವರ ೮-೧೫ ಹಿಂದಿ ಪರಮಧ್ಯಾಹ್ನ ೧೨ ಮತ್ತು ೨ ಶಾಂತ ಸುಬ್ರಹ್ಮಣ್ಯಂ ಸಂಗೀತ ೧೨ ೩೦ ಪದ್ಮಿನಿ ಕೃಷ್ಣಸ್ವಾಮಿ ಪಿಟೀಲು ೧ ವಿರಾಮ ೧ ೨೦ ಮತ್ತು ೧ ೫೦ ಸಂಗೀತ. ೨-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬ ೧೦ ಕನ್ನಡ ಗೀತೆ ೬ ೩೦ ವಚನಗಾನ ೮ ಎಂ ಪುಟ್ಟರಾಜು ನಾಗಸ್ವರ ೮-೩೦ ರಾಷ್ಟ್ರೀಯ ಕಾರ್ಯಕ್ರಮ ೮-೫೦ ವಾದ್ಯವೃಂದ ೯-೧೫ ಉರ್ದು ಗೀತೆ ೯-೩೦ ಕೆ ಎಸ್ ರಾಮಮಣಿ ಅಯ್ಯಂಗಾರ್-ಗೋಟು ವಾದ್ಯ

ಪ್ರಾಚೀನ ನಾಣ್ಯಗಳನ್ನು ಸ್ವಂತಕ್ಕೆ ಉಪಯೋಗಿಸಿದ್ದಕ್ಕೆ ದಂಡ

ಬಿಜಾಪುರದ ಸಿಕಾರ್ ಬಾನೆಯ ಬಳಿ ಸರ್ಕಾರಿ ಜಮೀನಿನಲ್ಲಿ ಕಳೆದ ಜನವರಿಯಲ್ಲಿ ಮಣ್ಣನ್ನು ತೆಗೆಯುತ್ತಿದ್ದ ಅಗಿನಪ್ಪಹೊಸ್ಮನಿ ಮತ್ತು ಲಕ್ಷ್ಮಣ ಸಾಳಿ ಎಂಬಿಬ್ಬರು ಕಾರ್ಮಿಕರಿಗೆ ಎರಡು ಪಾತ್ರೆಗಳಲ್ಲಿ ಸಿಕ್ಕಿದ ಪ್ರಾಚೀನ ಕಾಲದ ನಾಣ್ಯಗಳನ್ನು ಸರ್ಕಾರಕ್ಕೆ ಒಪ್ಪಿಸದೆ, ಮರುಪಯೋಗಪಡಿಸಿಕೊಂಡದ್ದರಿಂದ ಅವರಿಗೆ ತಲಾ ೨೦೦ ರೂ ದಂಡ, ತಪ್ಪಿದರೆ ೧ ತಿಂಗಳ ಕಠಿಣ ಸಜಾವನ್ನು ವಿಧಿಸಲಾಗಿದೆ ನಾಣ್ಯಗಳ ಮಾರಾಟದಿಂದ ಅವರು ಮಾಡಿಕೊಂಡಿರುವ ಆಸ್ತಿಯನ್ನು ಮುಟ್ಟುಗೋಲು ಹಾಕಲೂ ಸೂಚಿಸಲಾಗಿದೆ.

ಸಂಸ್ಥಾನದಲ್ಲಿ ೧೮೨ ಸಮಾಜ ಕಲ್ಯಾಣ ಕೇಂದ್ರಗಳು

ಮೈಸೂರು ಸಂಸ್ಥಾನದ ೧೯ ಜಿಲ್ಲೆಗಳಲ್ಲಿ ೨೦ ಸಮಾಜ ಕಲ್ಯಾಣ ಯೋಜನೆಗಳನ್ನು ಏರ್ಪಡಿಸಿ, ೧೮೨ ಕೇಂದ್ರಗಳನ್ನು ದ್ವಿತೀಯ ಯೋಜನೆ ಅವಧಿಯಲ್ಲಿ ತೆರೆಯಲಾಗುವುದೆಂದೂ, ಇದರಿಂದ ೬। ಲಕ್ಷ ಜನರಿರುವ ಪ್ರದೇಶಗಳಿಗೆ ಅನುಕೂಲವಾಗುವುದೆಂದೂ, ಗ್ರಾಮಸ್ಥರು ಸಹಕಾರ ನೀಡಬೇಕೆಂದೂ ಕೇಂದ್ರ ಸಾಮಾಜಿಕ ಕಲ್ಯಾಣ ಸಮಿತಿ ಅಧ್ಯಕ್ಷಿಣಿ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ತಿಳಿಸಿರುತ್ತಾರೆ

ಭೂ ವಿಜ್ಞಾನದ ಸರ್ವೆ

ನೆನ್ನೆಯಿಂದ ಭಾರತ ಮತ್ತು ಇತರ ೭೦ ರಾಷ್ಟ್ರಗಳಲ್ಲಿ ಭೂ ವಿಜ್ಞಾನದ ಸರ್ವೆಯು ಆರಂಭವಾಗಿದೆ ಭೂಮಿ ಮತ್ತು ಅದರ ವಾಯು ಗುಣದ ಬಗ್ಗೆ ವಿಮರ್ಶೆಯಾಗುವುದು ಒಟ್ಟು ೧೮ ತಿಂಗಳ ಕಾಲ ಇದು ನಡೆಯುವುದೆಂದು ಹೇಳಲಾಗಿದೆ. ವಾಯು ಗುಣ, ಭೂಕಂಪ ಮಾಪನಾಶಾಸ್ತ್ರ ಭೂಮಿಯ ಮಧ್ಯ ಭಾಗ, ಸಾಗರ ಶಾಸ್ತ್ರ ಮುಂತಾದುವನ್ನು ಪರಿಶೀಲಿಸಲಾಗುವುದು ಕೊಡೈಕೆನಾಲ್ ತಿರುವನಂತಪುರ, ತಿರುಚಿರಾಪಳ್ಳಿಗಳಲ್ಲಿ ಈ ಬಗ್ಗೆ ತಕ್ಕ ವಿಷಯಗಳು ವೇದ್ಯವಾಗಲಿರುವುದಾಗಿ ವಿಜ್ಞಾನಿಗಳ ಭಾವನೆಯಿದೆ

ವಿಧಾನ ಸಭೆಯ ಅಧಿವೇಶನ ಜುಲೈ ೧೨ರಿಂದ ಆಗಸ್ಟ್ ೧೦ರ ವರೆಗೆ

ಇಸ್ಲಾಮಿಯಾ ನಿಮಿತ್ತ ಮುಂದುವರಿಸಲ್ಪಟ್ಟಿದ್ದ ವಿಧಾನ ಸಭೆಯ ಅಧಿವೇಶನವು ಈ ತಿಂಗಳು ೧೨ ರಿಂದ ಪುನಃ ಸೇರಿ ಆಗಸ್ಟ್ ೧೦ರ ವರೆಗೆ ನಡೆಯುವುದು. ಜುಲೈ ೧೦ ರಿಂದ ಆಗಸ್ಟ್ ೭ರ ವರೆಗೆ ಸರ್ಕಾರಿ ಕಾರ್ಯಕ್ರಮಗಳು ಇವೆ ಆಗಸ್ಟ್ ೩ನೇ ತಾರೀಖು ಖಾಸಗೀ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು

ಕೇಡಿಗಳ ಬಂಧನ

ನಂಜನಗೂಡು ತಾಲ್ಲೂಕು ಪೊಲೀಸರು ದೇಸಿ, ಮುಳ್ಳೂರು ಉರುಫ್ ಕಾಳ, ಚಿಕ್ಕಶೆಟ್ಟಿ ಮತ್ತು ಕುಂಟ ಎಂಬ ನಾಲ್ಕು ಜನ ಭಾರಿ ಕೇಡಿಗಳನ್ನು ರಾತ್ರಿ ಹೊತ್ತು ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದರೆಂಬ ಕಾರಣಕ್ಕಾಗಿ ದಸ್ತಗಿರಿ ಮಾಡಿ ತನಿಖೆ ನಡೆಸುತ್ತಿರುವರು ಅವರುಗಳಿಗೆ ಹಿಂದೆ ಅನೇಕ ಬಾರಿ ಶಿಕ್ಷೆಯಾಗಿದೆ

SREE GAYATHRI

TALKIES

From 2-7-57 For 3 days

M G M's Cinemascope in Color

KISMET

With – Howard Keel and Ann Blyth

Admissions about to close

SARADA VILAS COLLEGE, MYSORE

INTER TUTORIAL SECTION

ENGLISH & P C M.

Students joining on or before 5-7-57 get the benefits of earlier lessons by Special classes

JOIN AT ONCE

Ladies allowed 40 per cent concession

Edited, Printed and Published by A. P. Nagarajan at Sadhvi Press, D Subbiah Road, Mysore

ರಿಜಿಸ್ಟ್ರೇ ನಂ 792

ಇಂದಿನ ಪತ್ರಿಕೆ 2 ಆಣೆ ಪೈಸ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ಚಂದಾದಾರರಿಗೆ ಬರೆಯಿರಿ

ಸಾಧ್ವಿ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೦೩] SADHVI ; WEDNESDAY 3—7—1957 ಮೈಸೂರು ; ಬುಧವಾರ ೩—೭—೧೯೫೭ ; [ಸಂಚಿಕೆ : ೩೨೯

ಜೈಲುಗಳ ಐ. ಜಿ. ಬಿ. ತಿಮ್ಮರಾಜ ಅರಸರ ಸಸ್ಪೆಂಷನ್

ಜೈಲುಗಳ ಇನ್ಸ್‌ಪೆಕ್ಟರ್ ಜನರಲ್ ತಿಮ್ಮರಾಜ ಅರಸರ ಸಸ್ಪೆಂಷನ್

ಡಿ. ಎಸ್ ಪಿ ಸುಬ್ರಹ್ಮಣ್ಯರಾಯರಿಗೆ ಕಡ್ಡಾಯದ ರಜಾ

ಬೆಂಗಳೂರು ೩

ಲಂಚ ನಿರೋಧ ಶಾಖೆಯವರು ನಡೆಸಿದ ತನಿಖೆಯ ಪರಿಣಾಮವಾಗಿ ಸಂಸ್ಥಾನದ ಜೈಲುಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲರಾದ ಶ್ರೀ ಬಿ ತಿಮ್ಮರಾಜ ಅರಸರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಸರಕಾರದವರು ಆಜ್ಞೆ ಮಾಡಿರುತ್ತಾರೆ ರಜಾ ತೆಗೆದುಕೊಳ್ಳುವಂತೆ ಅವರಿಗೆ ಸರ್ಕಾರದವರು ಸೂಚಿಸಿದ್ದರೂ, ಹಾಗೆ ಮಾಡದಿದ್ದ ಪ್ರಯುಕ್ತ ಅವರನ್ನು ಸಸ್ಪೆಂಡ್ ಮಾಡಲಾಗಿದೆ ಅವರು ಪೊಲೀಸು ಇಲಾಖಾ ಮುಖ್ಯಾಧಿಕಾರಿಗಳಾಗಿದ್ದಾಗ ಚಿನ್ನದ ಗಣಿಯಲ್ಲಿ ಕೆಲವು ಕೊಲೆಗಳು ಮಾಯವಾದ ಸಂದರ್ಭದಲ್ಲಿ ಲಂಚ ನಿರೋಧ ಇಲಾಖೆಯವರು ತನಿಖೆ ನಡೆಸಿದ್ದರು

ಇದೇ ಸಂದರ್ಭದಲ್ಲಿ ಗಣಿಯ ಡಿ ಎಸ್ ಪಿ ಯಾಗಿದ್ದ ಶ್ರೀ ಎಲ್ ಸುಬ್ರಹ್ಮಣ್ಯರಾಯರಿಗೆ ಕಡ್ಡಾಯದ ರಜಾ ಕೊಡಲಾಗಿದೆ ಅಲ್ಲದೆ ಪೊಲೀಸು ಸಬ್ ಇನ್ಸ್‌ಪೆಕ್ಟರ್ ಶ್ರೀ ಬಸವರಾಜ ಅರಸರನ್ನೂ ಸಸ್ಪೆಂಡ್ ಮಾಡಲಾಗಿದೆ ಮೂವರಿಗೂ ಕೊಲೆಯಗಳ ನಾಪತ್ತೆ ವಿಚಾರದಲ್ಲಿ ಪರಸ್ಪರ ಸಂಪರ್ಕವು ಇದ್ದುದಾಗಿ ಹೇಳಲಾಗಿದೆ. ಈ ಸಂಬಂಧದಲ್ಲಿ ಹಲವು ವಿಷಯಗಳು ಬೆಳಕಿಗೆ ಬಂದಿರುವುವೆಂದು ಮಾತ್ರ ಸೂಚಿಸಲಾಗಿದೆ

ಇಲಾಖಾ ತನಿಖೆಯನ್ನು ನಡೆಸಿ ಆದಷ್ಟು ಬೇಗನೆ ವರದಿಯನ್ನು ಒಪ್ಪಿಸುವಂತೆ ಸರ್ಕಾರದ ಗೃಹ ಇಲಾಖಾ ಕಾರ್ಯದರ್ಶಿ ಶ್ರೀ ರೆಡ್ಡಿಯವರಿಗೆ ಸೂಚಿಸಲಾಗಿದೆ

ಹೆಸರಘಟ್ಟದಲ್ಲಿ ಪಶು ವೈದ್ಯ ಕಾಲೇಜು ಸ್ಥಾಪನೆ

ಕೇಂದ್ರದಿಂದ ೪೦ ಲಕ್ಷ ರೂ. ಸಹಾಯದ ನಿರೀಕ್ಷೆ

ಸ್ವಂ ಸು ಸಂ] ಬೆಂಗಳೂರು ೩

ಹೆಸರಘಟ್ಟದಲ್ಲಿ ಪಶುವೈದ್ಯ ಕಾಲೇಜನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ ಕೇಂದ್ರದಿಂದ ೪೦ ಲಕ್ಷ ರೂ ಸಹಾಯವು ಇದಕ್ಕೆ ದೊರಕಬಹುದಾದ ನಿರೀಕ್ಷೆಯಿದೆ

ವ್ಯವಸಾಯ ಡಿಪ್ಲೊಮಾ ತರಗತಿಯನ್ನೂ ಆರಂಭಿಸಲು ನಿರ್ಧರಿಸಲಾಗಿದೆ

○ ಸಂಸ್ಥಾನದ ವಿದ್ಯುಚ್ಛಕ್ತಿ ಬೋರ್ಡನ್ನು ರಚಿಸುವ ಬಗ್ಗೆ ಕೇಂದ್ರದವರು ಅವಧಿಯನ್ನು ಕೊಟ್ಟಿರುತ್ತಾರೆ

○ ಸಂಸ್ಥಾನದ ದಕ್ಷಿಣ ವಿಭಾಗದ ಚೀಫ್ ಇಂಜಿನಿಯರ್ ಶ್ರೀ ಹೆಚ್ ಅನಂತಾಚಾರ್ಯರು ಬರುವ ತಿಂಗಳು ೨ನೇ ತಾರೀಖು ನಿವೃತ್ತರಾಗುತ್ತಾರೆ

○ ಸರ್ಕಾರದವರು ಶಾವೇ ಮ್ಯಾಂಗನೀಸ್ ಮತ್ತು ಕಬ್ಬಿಣ ಮಿಶ್ರಿತವಾದ ಮುಖ್ಯ ಖನಿಜ ಸಂಪತ್ತನ್ನು ತೆಗೆಯಲು ನಿರ್ಧರಿಸಿರುತ್ತಾರೆ

○ ಹುಬ್ಬಳ್ಳಿಯ ರಾಜ ಧಾನಿ ಕೈಗಾರಿಕೋದ್ಯಮ ಚೇಂಬರಿನ ರಾಯಭಾರಿ ಕಛೇರಿಯನ್ನು ಅಧಿಕೃತವಾಗಿ ನೆನ್ನೆ ಮುಚ್ಚಿ, ಅಲ್ಲಿದ್ದ ಬೋರ್ಡುಗಳನ್ನು ತೆಗೆದುಹಾಕಲಾಗಿದೆ

ಅಂತರ ಸಂಸ್ಥಾನ ರಸ್ತೆ ಸಂಚಾರ ನಿರ್ಬಂಧದ ರದ್ದಿಗೆ ಕರೆ

ಸಂಸ್ಥಾನಗಳಿಗೆ ಕೇಂದ್ರ ಸಾರಿಗೆ ಸಚಿವರ ಸೂಚನೆ

ದ್ವಿತೀಯ ಯೋಜನೆ ಅವಧಿಯಲ್ಲಿ ಸರಕುಗಳ ಸಾಗಾಣಿಕೆಯು ಸುಗಮವಾಗಿ ನಡೆಯುವುದಕ್ಕೆ ಇರುವ ಅಂತರ ಸಂಸ್ಥಾನ ನಿರ್ಬಂಧಗಳನ್ನೆಲ್ಲಾ ತೆಗೆದುಹಾಕಬೇಕೆಂದು ಕೇಂದ್ರ ಸರ್ಕಾರದ ಸಾಗಾಣಿಕೆ ಖಾತೆ ಮಂತ್ರಿ ರಾಜಬಹದ್ದೂರ್ ರವರು ತಿಳಿಸುತ್ತಾರೆ ಲಾರಿ ಮತ್ತು ಟ್ರಕ್ಕುಗಳ ಓಡಾಟಕ್ಕೆ ಈ ಸೂಚನೆಯು ಸಂಬಂಧಿಸಿದೆ ರೈಲ್ವೆಯಲ್ಲಿ ಶೇ|| ೭೦ರಷ್ಟು ಮಾತ್ರ ಸಾಮಾನುಗಳನ್ನು ಸಾಗಿಸಬಹುದೆಂದೂ ಉಳಿದುವನ್ನು ರಸ್ತೆ ಮೂಲಕ ತೆಗೆದುಕೊಂಡುಹೋಗಬೇಕಾಗುವುದೆಂದೂ, ಈಗ ವಿಧಿಸಿರುವ ನಿರ್ಬಂಧದಿಂದ ಲಾರಿಗಳ ಸಂಚಾರಕ್ಕೆ ಅಡ್ಡಿಯಾಗಿರುವುದೆಂದೂ ಸೂಚಿಸಲಾಗಿದೆ ಈ ನಿರ್ಬಂಧವನ್ನು ತೆಗೆದರೆ ರೈಲು ಮೂಲಕದ ಸಾಗಾಣಿಕೆಯ ಪರಿಸ್ಥಿತಿಯು ಉತ್ತಮಗೊಳ್ಳುವುದೆಂದು ಸಚಿವರು ಹೇಳಿರುತ್ತಾರೆ

ಭಾರತದ ಹಳ್ಳಿಯ ಮೇಲೆ ಪಾಕಿಸ್ತಾನಿಗಳ ಧಾಳಿ

ಪಶ್ಚಿಮ ಬಂಗಾಳದ ಗಡಿಯಲ್ಲಿ ಕಚುಂಕರಾ ಎಂಬ ಗ್ರಾಮದ ಮೇಲೆ ಕಳೆದ ಶನಿವಾರ ರಾತ್ರಿ ೨೦೦ ಜನ ಪಾಕಿಸ್ತಾನಿಗಳು ಧಾಳಿ ನಡೆಸಿ, ಅವರನ್ನು ಪ್ರತಿಭಟಿಸಿದ ಹಳ್ಳಿಯವರ ಮೇಲೆ ಗುಂಡು ಮತ್ತು ಬಾಣಗಳನ್ನು ಹೊಡೆದರೆಂದೂ, ಆರು ಜನರಿಗೆ ಗಾಯಗಳಾದುವೆಂದೂ, ಗುಂಡಿನೇಟು ತಗಲಿದವನೊಬ್ಬನನ್ನು ಪಕ್ಕದ ಊರಿನ ಆಸ್ಪತ್ರೆಗೆ ಸೇರಿಸಲಾಗಿರುವುದೆಂದೂ ಹೇಳಲಾಗಿದೆ

ಕೇರಳದಲ್ಲಿ ಇಂಜನಿಯರರ ಸಸ್ಪೆಂಡ್

ರಸ್ತೆ ನಿರ್ಮಾಣದ ಸಂಬಂಧವಾಗಿ ಹಲವು ತೀವ್ರವಾದ ಅಕ್ರಮಗಳಾದುವೆಂಬ ದೂರಿನ ಬಗ್ಗೆ ಕೇರಳ ಸರ್ಕಾರದವರು ನ್ಯಾಯಾಂಗ ವಿಚಾರಣೆಯನ್ನು ನಡೆಸಲಿರುವರು ಒಬ್ಬ ಎಕ್ಸಿಕ್ಯೂಟಿವ್ ಇಂಜನಿಯರರು ಮತ್ತು ಒಬ್ಬ ಅಸಿಸ್ಟೆಂಟ್ ಇಂಜನಿಯರ್, ಒಬ್ಬ ಸೂಪರ್‌ವೈಸರ್ ಮತ್ತು ಒಬ್ಬ ವರ್ಕ್ಸ್ ಸೂಪರಿಂಟೆಂಡೆಂಟರುಗಳು ಕೆಲಸದ ನಿರ್ವಹಣೆಯಲ್ಲಿ ಅಕ್ರಮ ನಡೆಸಿದ್ದುದು ಪತ್ತೆಯಾಗಿ ನಾಲ್ವರನ್ನೂ ಸಸ್ಪೆಂಡ್ ಮಾಡಲಾಗಿದೆ

ರೈಲ್ವೆ ಪ್ರಯಾಣದ ರಿಯಾಯಿತಿ ರಿಟರ್ನ್ ಟಿಕೆಟ್ಟುಗಳು

ಈ ತಿಂಗಳು ೧೫ರಿಂದ ಸೆಪ್ಟೆಂಬರ್ ಮಧ್ಯಭಾಗದವರೆಗೆ ರೈಲಿನ ಮೂರು ವರ್ಗಗಳ ಪ್ರಯಾಣದಲ್ಲೂ ೧|| ದರದಲ್ಲಿ ಹೋಗಿಬರುವ ಟಿಕೆಟ್ಟುಗಳನ್ನು ಕೊಡಲಾಗುವುದು ೩೦೦ ಮೈಲಿಗಿಂತ ಹೆಚ್ಚಿನ ಪ್ರಯಾಣಕ್ಕೆ ಇದು ಅನ್ವಯಿಸುವುದು ೩೦೧ರಿಂದ ೫೦೦ ಮೈಲಿವರೆಗೆ ೨೦ ದಿನ, ೫೦೧ರಿಂದ ೭೫೦ರವರೆಗೆ ೩೫ ಅಲ್ಲಿಂದ ಮುಂದಕ್ಕೆ ೩೦ ದಿನಗಳ ಅವಧಿಯನ್ನು ಗೊತ್ತುಪಡಿಸಲಾಗಿದೆ

ಆತುರವಾಗಿ ವಿಶ್ವಸಂಸ್ಥೆಯ ಪ್ರಣಾಳಿಕೆ ಬದಲಾವಣೆ ಕೂಡದು

ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ನೆಹರೂರವರ ಸೂಚನೆ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ನೆನ್ನೆ ನೆಹರೂರವರು ಮಾತನಾಡಿ ವಿಶ್ವಸಂಸ್ಥೆಯ ಪ್ರಣಾಳಿಕೆಯನ್ನು ಆತುರದಿಂದ ಪುನರ್ ಪರಿಶೀಲನೆ ಮಾಡಬಾರದೆಂದು ತಿಳಿಸಿರುತ್ತಾರೆ ಸಂಸ್ಥೆಯ ಕಛೇರಿಯಲ್ಲಿ ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳಿಗೆ ಪ್ರಾತಿನಿಧ್ಯವಿರಬೇಕೆಂದೂ ಅವರು ಸಲಹೆ ಮಾಡಿರುವರು ಪಾಕಿಸ್ತಾನದ ಪ್ರಧಾನಿಯವರು ವಿಶ್ವಸಂಸ್ಥೆಗೆ ಪೊಲೀಸು ಪಡೆಯ ಅವಶ್ಯಕತೆಯನ್ನು ಒತ್ತಿಹೇಳಿ ಸಂಸ್ಥೆಯ ನಿರ್ದೇಶನಗಳನ್ನು ಉಲ್ಲಂಘಿಸುವ ರಾಷ್ಟ್ರಗಳ ಬಗ್ಗೆ ಏನು ಮಾಡಬೇಕೆಂಬುದನ್ನು ಪರಿಶೀಲಿಸುವಂತಾಗಬೇಕೆಂದು ತಿಳಿಸಿರುವರು.

ಜವಾಹಿರಿ ಅಂಗಡಿಯಿಂದ ಲಕ್ಷ ರೂ. ನಗಗಳ ಅಪಹರಣ

ಹೈದರಾಬಾದಿನ ಒಬ್ಬರತ್ನಪಡಿ ವ್ಯಾಪಾರಿಯಂಗಡಿಗೆ ಮೊನ್ನೆ ರಾತ್ರಿ ಕಳ್ಳರು ನುಗ್ಗಿ ೧ ಲಕ್ಷ ರೂ ಬೆಲೆಯ ಚಿನ್ನದ ಒಡವೆಗಳನ್ನು ಅಪಹರಿಸಿರುವುದಾಗಿ ವರದಿಯಾಗಿದೆ ಅಂಗಡಿಯಲ್ಲಿದ್ದ ಕಬ್ಬಿಣದ ಪೆಟ್ಟಿಗೆಯನ್ನು ಒಡೆಯುವುದರಲ್ಲಿ ಕಳ್ಳರು ವಿಫಲರಾಗಿರುವರೆಂದೂ, ಅದರಲ್ಲಿ ವಜ್ರಗಳಿದ್ದುವೆಂದೂ ಹೇಳಲಾಗಿದೆ

ಓಕಿನಾವಾ ರೇವಿನ ಬಳಿ ಆಸ್ಫೋಟನೆಯಿಂದ ೩೨ ಜನರ ಮರಣ

ಓಕಿನಾವಾ ದ್ವೀಪದ ಓಕಿನಾವಾ ರೇವು ನಗರದಲ್ಲಿ ಮೊನ್ನೆ ರಾತ್ರಿ ಆಸ್ಫೋಟನೆಯಾಗಿ ೩೨ ಜನರು ಮೃತಪಟ್ಟಿರುತ್ತಾರೆ ಕಳೆದ ಮಹಾಯುದ್ಧದಲ್ಲಿ ಆ ರೇವಿನಲ್ಲಿ ಮುಳುಗಿದ್ದ ಮದ್ದು ತುಂಬಿದ ಹಡಗೊಂದನ್ನು ಎತ್ತುತ್ತಿದ್ದಾಗ ಸಿಡಿತವುಂಟಾಯಿತು ಹಲವರು ಪತ್ತೆಯಿಲ್ಲ

೭ ಲಕ್ಷ ರೂ. ಕಳ್ಳ ರವಾನೆ ಚಿನ್ನದ ಪತ್ತೆ

ಬೊಂಬಾಯಿಯಲ್ಲಿ ಕೇಂದ್ರ ಸುಂಕದ ಇಲಾಖೆಯವರು ೭ ಲಕ್ಷ ರೂ ಗಿಂತ ಹೆಚ್ಚು ಬೆಲೆಬಾಳುವ ಅಕ್ರಮ ರವಾನೆ ಚಿನ್ನವನ್ನು ಪತ್ತೆ ಮಾಡಿರುತ್ತಾರೆ

ಹರಿಕಥಾ ಕಾಲಕ್ಷೇಪ

ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ನಾಳೆಯಿಂದ ಪ್ರತಿದಿನ ಸಾಯಂಕಾಲ ೬ ಗಂಟೆಯಿಂದ ೭-೩೦ರ ವರೆಗೆ ವೇ|| ಹೆಚ್ ಟಿ ರಾಮಣ್ಣನವರಿಂದ "ಶ್ರೀನಿವಾಸ ಕಲ್ಯಾಣ" ಹರಿಕಥೆಯು ನಡೆಯುವುದು. ಮಹಾಶಯರು ದಯಮಾಡಿಸಬೇಕಾಗಿ ಭಕ್ತ ಮಂಡಲಿಯವರು ಕೋರಿರುತ್ತಾರೆ

ಶಿವನಸಮುದ್ರದ ದುರಂತದಲ್ಲಿ ನೊಂದವರಿಗೆ ಪರಿಹಾರ

ಶಿವನಸಮುದ್ರದಲ್ಲಿ ಮೊನ್ನೆ ನಡೆದ ದುರಂತದಲ್ಲಿ ಮಡಿದವರು ಮತ್ತು ಗಾಯಗೊಂಡವರ ಸಂಸಾರಗಳಿಗೆ ಆದಷ್ಟು ಬೇಗನೆ ಪರಿಹಾರ ನೀಡಲು ಸರ್ಕಾರದವರು ನಿರ್ಧರಿಸಿರುತ್ತಾರೆ

ಅಸ್ಸಾಂ, ಪೂರ್ವ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಭೂಕಂಪ

ಅಸ್ಸಾಮಿನ ಈಶಾನ್ಯ ಗಡಿ ಪ್ರದೇಶ, ಮಣಿಪುರ, ಪಶ್ಚಿಮ ಬಂಗಾಳ ಮತ್ತು ಪೂರ್ವ ಪಾಕಿಸ್ತಾನಗಳಲ್ಲಿ ಮೊನ್ನೆ ಮಧ್ಯರಾತ್ರಿಯಲ್ಲಿ ಭೂಕಂಪವಾಯಿತು ೧ ನಿಮಿಷದವರೆಗೂ ಭೂಮಿಯು ನಡುಗಿತೆಂದು ಹೇಳಲಾಗಿದೆ ನಿದ್ರೆ ಮಾಡುತ್ತಿದ್ದ ಜನರು ಹೊರಕ್ಕೆ ಓಡಿದರು ಷಿಲಾಂಗ್, ಕಲ್ಕತ್ತಾ, ಇಂಫಾಲ್, ಡಿಬ್ರುಗಢ ಮತ್ತು ಕರೀಂಗಂಜುಗಳಲ್ಲೂ, ಪೂರ್ವ ಪಾಕಿಸ್ತಾನದ ಢಾಕಾ ಮತ್ತು ಚಿತ್ತಗಾಂಗಿನಲ್ಲೂ ಮೂರು ಸಾರಿ ಭೂಮಿ ಅದುರಿತು. ಪ್ರಾಣಕ್ಕೆ ಅಪಾಯವಾಗಲೀ, ಅಥವಾ ಆಸ್ತಿಗಳಿಗೆ ನಷ್ಟವಾಗಲೀ ಇದುವರೆಗೆ ವರದಿಯಾಗಿಲ್ಲ ೧೯೫೦ ರಲ್ಲಿ ಆದ ಭೂಕಂಪದ ನಂತರ ಇದುವರೆಗೆ ಇಷ್ಟು ಜೋರಾಗಿ ಅಗಿರಲಿಲ್ಲ

ಹಂಗೆರಿ ಬಗ್ಗೆ ವಿಶ್ವಸಂಸ್ಥೆಯ ವಿಶೇಷ ಸಭೆಗಾಗಿ ಕರೆ

ಹಂಗೆರಿ ಪ್ರಶ್ನೆಯ ಪರಿಶೀಲನೆಗಾಗಿ ವಿಶ್ವಸಂಸ್ಥೆ ಸಾಧಾರಣ ಸಭೆಯ ವಿಶೇಷ ಅಧಿವೇಶನವನ್ನು ನಡೆಸಬೇಕೆಂಬ ಸರ್ವಾನುಮತದ ಸಲಹೆಯನ್ನು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ಮಾಡಿರುವುದಾಗಿ ವರದಿಯಾಗಿದೆ

ಸಚಿವರಿಂದ ರೈಲು ಅಪಘಾತ ತಪ್ಪಿತು

ಸಿಕಂದರಾಬಾದ್ —ಘೋರ್ಜ್ ಎಕ್ಸ್‌ಪ್ರೆಸ್ ರೈಲಿಗೆ ಅಪಘಾತವಾಗುತ್ತಿದ್ದುದನ್ನು ಆಂಧ್ರ ಪ್ರದೇಶದ ಮಂತ್ರಿ ಪಿ ತಿಮ್ಮರೆಡ್ಡಿಯವರು ತಪ್ಪಿಸಿರುತ್ತಾರೆ ಕರ್ನೂಲಿಗೆ ೩೦ ಮೈಲಿ ದೂರದಲ್ಲಿ ಬರುತ್ತಿದ್ದಾಗ ಮೊದಲನೇ ಗಾಡಿಯ ಕೆಳಗೆ ವಿಪರೀತ ಶಬ್ದವಾಗ ತೊಡಗಿತೆಂದೂ, ಸಚಿವರು ನೋಡಲಾಗಿ ರೈಲು ರಸ್ತೆ ಕಲ್ಲುಗಳು ಎತ್ತಿಹಾಕಲ್ಪಟ್ಟಿದ್ದುದಾಗಿಯೂ ವರದಿಯಾಗಿದೆ ಅವರು ಕೂಡಲೇ ಸರಪಳಿಯನ್ನು ಎಳೆದು ರೈಲನ್ನು ನಿಲ್ಲುವಂತೆ ಮಾಡಿದರು ಮೊದಲನೇ ಗಾಡಿಯ ಸ್ಪ್ರಿಂಗುಗಳು ಮುರಿದುಹೋಗಿದ್ದುದು ನಂತರ ಗೊತ್ತಾಗಿ ಆ ಗಾಡಿಯನ್ನು ಪ್ರತ್ಯೇಕಿಸಲಾಯಿತು

ಇನ್‌ಫ್ಲುಯೆಂಜಾ ಮತ್ತೆ ಶೀಘ್ರದಲ್ಲೇ ಬರುವ ಭೀತಿಯಿಲ್ಲ

ಇನ್‌ಫ್ಲುಯೆಂಜಾ ರೋಗವು ಮತ್ತೆ ಮೈದೋರಬಹುದೆಂದು ಇತ್ತೀಚೆಗೆ ಕೇಂದ್ರ ಸರ್ಕಾರದ ಆರೋಗ್ಯ ಡೈರೆಕ್ಟರ್ ಜನರಲ್ಲರು ಹೊರಡಿಸಿದ್ದ ಸೂಚನಾ ಪತ್ರವು ಎಚ್ಚರಿಕೆ ತಪ್ಪದಿರಲೆಂಬ ಉದ್ದೇಶದಿಂದ ಕೊಡಲ್ಪಟ್ಟಿದ್ದುದಾಗಿ ಹೇಳಲಾಗಿದೆ ಕೂಡಲೇ ವ್ಯಾಧಿಯು ಪುನಃ ಅಂಕುರಿಸ ಬಹುದೆಂದು ಅದರಿಂದ ಅರ್ಥವಾಗದೆಂದೂ ಸೂಚಿಸಲಾಗಿದೆ

ನಗರದಲ್ಲಿ ಇನ್‌ಫ್ಲುಯೆಂಜಾ ಪರಿಸ್ಥಿತಿ

ನಗರದಲ್ಲಿ ಈ ದಿನ ೬೨೦ ಮಂದಿ ಹೊಸದಾಗಿ ಇನ್‌ಫ್ಲುಯೆಂಜಾ ತಗಲಿರುವುವೆಂದೂ, ಇದುವರೆಗೆ ೨೬,೩೬೮ ಮಂದಿ ಇದರಿಂದ ನರಳುವಂತಾಗಿಯೂ ವರದಿಯಾಗಿದೆ ಇತ್ತೀಚೆಗೆ ೨ ಮರಣಗಳು ಮಾತ್ರ ಸಂಭವಿಸಿವೆ

ಅನಧಿಕೃತ ಕಾಂಗ್ರೆಸ್ ಸದಸ್ಯತ್ವಕ್ಕೆ ಮನ್ನಣೆ ಇಲ್ಲ

ಪ್ರಾದೇಶಿಕ ಕಾಂಗ್ರೆಸ್ ಕಾರ್ಯದರ್ಶಿಯವರ ಸೂಚನೆ

ಬೆಂಗಳೂರು ೩

ನೂತನ ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಜಾಯಿಂಟ್ ಕಾರ್ಯದರ್ಶಿ ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರು ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸಿ ಹಲವು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಪ್ರದೇಶ ಸಮಿತಿಯ ಅನುಮತಿಯಿಲ್ಲದೆ ಪ್ರಾಥಮಿಕ ಮತ್ತು ಸಕ್ರಿಯಾ ಸದಸ್ಯತ್ವದ ಪುಸ್ತಕಗಳನ್ನು ಮುದ್ರಿಸಿ ಹಂಚುತ್ತಿರುವುದಾಗಿ ದೂರುಗಳು ಬಂದಿರುವುದೆಂದು ತಿಳಿಸಿ, ಅಧಿಕೃತ ಸದಸ್ಯತ್ವದ ನಮೂನೆಯಲ್ಲಿ ರುಜು ಮಾಡಿಲ್ಲದಿರುವವರ ಸದಸ್ಯತ್ವವನ್ನು ಪ್ರದೇಶ ಸಮಿತಿಯು ಮನ್ನಿಸುವುದಿಲ್ಲವೆಂದು ಸೂಚಿಸಿರುತ್ತಾರೆ. ಪ್ರದೇಶ ಸಮಿತಿಯೇ ಸದಸ್ಯತ್ವ ಪುಸ್ತಕಗಳನ್ನು ಮುದ್ರಿಸಬೇಕೆಂಬ ನಿಯಮವನ್ನು ಅವರು ಜಿಲ್ಲಾ ಸಮಿತಿಗಳ ಗಮನಕ್ಕೆ ತಂದು, ಮೂರು ತಿಂಗಳಿಗೊಮ್ಮೆ ಸದಸ್ಯತ್ವದ ಬಗ್ಗೆ ವರದಿಯನ್ನು ಕಳುಹಬೇಕೆಂದೂ ಹೇಳಿರುತ್ತಾರೆ.

ಪ್ರದೇಶ ಕಾಂಗ್ರೆಸ್ ಸಮಿತಿ ಅಂಗರಚನೆ ಬಗ್ಗೆ ತಿದ್ದುಪಡಿ ಕಳುಹಲು ಅವಕಾಶ

ನೂತನ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯನ್ನು ಬೆಂಗಳೂರಿನಲ್ಲಿ ಈ ತಿಂಗಳು ೩ ಅಥವಾ ೪ನೇ ವಾರದಲ್ಲಿ ಕರೆಯಲಾಗುವುದೆಂದೂ, ಅದರಲ್ಲಿ ಪ್ರದೇಶ ಸಮಿತಿಯ ಅಂಗರಚನೆ ವಿಷಯವನ್ನು ಪರಿಶೀಲಿಸಲಾಗುವುದೆಂದೂ ತಿದ್ದುಪಡಿಗಳನ್ನು ಕಳುಹಿಸುವುದಿದ್ದರೆ ಸದಸ್ಯರು ಇದೇ ೧೦ನೇ ತಾರೀಕಿನೊಳಗೆ ಕಳುಹಿಸುವಂತೆಯೂ ಸಮಿತಿಯ ಕಾರ್ಯದರ್ಶಿ ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರು ತಿಳಿಸಿರುತ್ತಾರೆ.

ಸಯಾಮಿನಲ್ಲಿ ದಂಗೆಯ ಬಗ್ಗೆ ಪ್ರಧಾನಿಯ ನಿರಾಕರಣೆ

ಥೈಲ್ಯಾಂಡಿನ ಪ್ರಧಾನಿ ಮಾರ್ಷಲ್ ಪಿಪುಲ ಸಂಗ್ರಾಮರವರು ವಿಶೇಷ ಪತ್ರಿಕಾ ಸಮ್ಮೇಳನ ನಡೆಸಿ ಸ್ಥಳೀಯ ದಂಗೆಯೊಂದನ್ನು ನಡೆಸಿ ತಮ್ಮನ್ನು ಅಧಿಕಾರ ಚ್ಯುತರನ್ನಾಗಿ ಮಾಡಲಾಗಿರುವುದೆಂಬ ಸುದ್ದಿಯನ್ನು ನಿರಾಕರಿಸಿರುತ್ತಾರೆ. ಈ ವಾರವೆಲ್ಲಾ ಅಲ್ಲಿನ ರಾಜಧಾನಿಯಲ್ಲಿ ದಂಗೆಯ ಸುದ್ದಿಯು ಮನೆ ಮಾತಾಗಿದ್ದಿತೆಂದು ಹೇಳಲಾಗಿದೆ. ಪ್ರಧಾನಿಯವರು ರಾಜೀನಾಮೆ ಕೊಡುವರೆಂದೂ, ಸೈನ್ಯಗಳ ಪ್ರಧಾನಾಧಿಕಾರಿ ಮಾರ್ಷಲ್ ಸರಿತ ತನರಥರವರು ಅವರ ಅಧಿಕಾರವನ್ನು ವಹಿಸಿಕೊಳ್ಳುವರೆಂದೂ ಪ್ರತೀತಿ ಇದ್ದಿತು.

ಸುಡಾನಿನಲ್ಲಿ ಭಾರತದ ರಾಯಭಾರಿ ನೇಮಕ

ಆಫ್ರಿಕದ ಸುಡಾನಿಗೆ ಭಾರತದ ಪ್ರಥಮ ರಾಯಭಾರಿಯಾಗಿ ಲೋಕ ಸಭೆಯ ಮಾಜಿ ಸದಸ್ಯ ಸಿ. ಓ. ಮ್ಯಾಥ್ಯೂರವರನ್ನು ನೇಮಿಸಲಾಗಿದೆ.

ಜಮ್ಮು ಜೈಲಿನ ಬಳಿ ನಾಡು ಬಾಂಬು ಪತ್ತೆ

ಜಮ್ಮುವಿನ ಸೆಂಟ್ರಲ್ ಜೈಲಿನ ಬಳಿ ಮೊನ್ನೆ ಸಂಜೆ ನಾಡು ಬಾಂಬೊಂದನ್ನು ಇಟ್ಟಿದ್ದುದು ಪತ್ತೆಯಾಗಿ ಅದನ್ನು ಪೊಲೀಸರ ವಶಕ್ಕೆ ಕೊಡಲಾಗಿದೆ. ಬಾಂಬನ್ನು ಸ್ಫೋಟಿಸುವ ವ್ಯವಸ್ಥೆ ಮಾಡಲಾಗಿತ್ತೆಂದೂ ಹೇಳಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮುಖವೀಣೆ ೭-೧೫ ಕನ್ನಡ ಗೀತೆ. ೭ ೩೦ ಮತ್ತು ೮-೧೫ ಬಿ. ಎಸ್. ಎಸ್ ಕೌಶಿಕ್—ಕಾವ್ಯವಾಚನ ಮಧ್ಯಾಹ್ನ ೧೨ ಮತ್ತು ೧ ೫೦ ಸಂಗೀತ. ೧೨-೭.೦ ಮತ್ತು ರಾತ್ರಿ ೧೨.೩೦ ಎ. ಆರ್. ಸಹಜಾನಂದ್-ಸಿತಾರ್. ೧೦ ೧೫ [illegible] ೨-೧೫ ಪ್ರೌಢ ಶಾಲೆಗಳಿಗಾಗಿ. ಸಂಜೆ ೬-೧೦ ಚಾನಲವಗೀತೆ ೭-೩೦ ಕನ್ನಡ ಭಾಷಣ ಆಗೀಸಿಗುಚ್ಛ, ೮-೩೦ ತಾಳ ವಾದ್ಯ ಕಛೇರಿ. ೯-೧೫ ಬೆಂಗಳೂರಿನ ಇತಿಹಾಸದ ಹಿನ್ನಲೆ: ಇಂಗ್ಲಿಷ್ ಭಾಷಣ. ೯-೩೦ ಕನ್ನಡ ವಾರ್ತೆ, ೧೦-೧೫ ರಿಕಾರ್ಡು.

ಚಿನ್ನ ಮತ್ತು ಅಫೀಮು ಕಳ್ಳ ರವಾನೆಗಾಗಿ ವರ್ತಕರ ಬಂಧನ

ಚಿನ್ನ ಮತ್ತು ಅಫೀಮಿನ ಕಳ್ಳ ರವಾನೆಗಾಗಿ ಅಮೃತಸರದ ಹಲವಾರು ವರ್ತಕರನ್ನು ಬಂಧಿಸಲಾಗಿದೆ. ಅವರು ಪಾಕಿಸ್ತಾನದಿಂದ ಭಾರತಕ್ಕೆ ಚಿನ್ನ ಮತ್ತು ಅಫೀಮನ್ನು ಅಕ್ರಮವಾಗಿ ತರಿಸುತ್ತಿದ್ದರೆಂದು ಹೇಳಲಾಗಿದೆ. ಈ ತಿಂಗಳು ೧೭ರೊಳಗೆ ಪೊಲೀಸರ ವಶವಾಗುವಂತೆ ೨೫ ಮಂದಿಗೆ ಎಚ್ಚರಿಕೆ ಕೊಡಲಾಗಿದೆ. ಅವರೊಡನೆ ಸಹಕರಿಸಿದ ಒಬ್ಬ ಸಬ್ ಇನ್ಸ್‌ಪೆಕ್ಟರನ್ನೂ ಬಂಧಿಸಲಾಗಿದೆ ೬ ಜನ ಪೊಲೀಸರನ್ನು ಸಸ್ಪೆಂಡ್ ಮಾಡಲಾಗಿದೆ. ಕಳ್ಳ ಸಾಗಾಣಿಕೆ ಸಂಬಂಧವಾಗಿ ಒಟ್ಟು ೧೧೮ ಜನರನ್ನು ಬಂಧಿಸಲಾಗಿದೆ

ಭಾರತದಲ್ಲಿ ಹಣದ ಉಬ್ಬರವಿಲ್ಲ

ಭಾರತದಲ್ಲಿ ಹಣದ ಉಬ್ಬರವು ಆರಂಭವಾಗಿಲ್ಲವೆಂದೂ, ಪರಿಸ್ಥಿತಿ ಬಗ್ಗೆ ಕಾತರರಾಗಬೇಕಾಗಿಲ್ಲವೆಂದೂ ರಿಸರ್ವ್ ಬ್ಯಾಂಕಿನ ಗವರ್ನರ್ ಹೆಚ್ ವಿ. ಆರ್. ಅಯ್ಯಂಗಾರ್ಯರು ತಿಳಿಸಿರುತ್ತಾರೆ. ಆಹಾರ ಪದಾರ್ಥಗಳ ಬೆಲೆ ಏರಿಕೆಯೇ ಈಗ ನಿಜವಾದ ತೊಂದರೆಗೆ ಕಾರಣವಾಗಿರುವುದೆಂದೂ, ಮುಂಗಾರು-ಹಿಂಗಾರು ಮಳೆಗಳ ಅತಿವೃಷ್ಟಿ, ಅನಾವೃಷ್ಟಿಗಳಿಂದ ಬೆಳೆಯು ವ್ಯತ್ಯಾಸವಾಗಿರುವುದೆಂದೂ ಹೇಳಿ ೧೯೫೪ರಿಂದ ಭಾರತದಲ್ಲಿ ಉತ್ತಮ ಬೆಳೆಯಾಗಿಲ್ಲವೆಂದು ಅವರು ನುಡಿದಿರುವರು.

ಸಿರಿಯಾಕ್ಕೆ ಇಸ್ರೇಲಿನ ಭೀತಿ

ಸಿರಿಯಕ್ಕೆ ಇಸ್ರೇಲಿನಿಂದ ಭೀತಿಯುಂಟಾಗಿರುವುದೆಂದೂ ಈ ವಿಚಾರವಾಗಿ ಈಜಿಪ್ಟು ಮತ್ತು ಸಿರಿಯಗಳು ಪರಸ್ಪರ ಚರ್ಚೆ ನಡೆಸುತ್ತಿರುವುದಾಗಿಯೂ ವರದಿಯಾಗಿದೆ. ಸಿರಿಯದ ಬಳಿ ಹುಲೇ ಸರೋವರದ ಹತ್ತಿರ ಇಸ್ರೇಲಿನ ಸೈನ್ಯಗಳ ಕೇಂದ್ರೀಕರಣವಾಗಿರುವುದೆಂದು ವರದಿಯಾಗಿದೆ. ಗಡಿ ಬಳಿ ಉಭಯ ಸರ್ಕಾರಗಳು ಜನರನ್ನು ಸೇನೆಗಳಿಗೆ ಜಮಾಯಿಸುತ್ತಿರುವುವೆಂದು ಹೇಳಲಾಗಿದೆ.

ಅಂಡಮಾನಿನ ಗುಡ್ಡಗಾಡಿನವರಿಗಾಗಿ ೧ ಲಕ್ಷ ರೂ. ವೆಚ್ಚ

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿರುವ ಪ್ರಾಚೀನ ಗುಡ್ಡಗಾಡಿನವರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಭಾರತ ಸರ್ಕಾರದವರು ೧ ಲಕ್ಷ ರೂ ಗಳನ್ನು ಮಂಜೂರು ಮಾಡಿರುತ್ತಾರೆ.

ಭಗವದ್ಗೀತೆಯ ಮೇಲೆ ಉಪನ್ಯಾಸಗಳು

ನಗರದ ಕೃಷ್ಣಮೂರ್ತಿಪುರದಲ್ಲಿರುವ ಚಾಮರಾಜ ಮೊಹಲ್ಲಾ ಮಹಾಜನ ಸಭೆಯ ರಾಮಮಂದಿರದಲ್ಲಿ ನಾಳೆಯಿಂದ ದಿನವೂ ಸಂಜೆ ೬ರಿಂದ ೭ ಘಂಟೆವರೆಗೆ ವಿ|| ಶಾರಣಕರ ಚಂದ್ರಶೇಖರಭಟ್ಟರಿಂದ ಭಗವದ್ಗೀತೆಯ ಮೇಲೆ ದಿನವೊಂದಕ್ಕೆ ಒಂದು ಅಧ್ಯಾಯದಂತೆ ಉಪನ್ಯಾಸವು ನಡೆಯುವುದು.

ಚಾಮರಾಜ ಮೊಹಲ್ಲಾ ಯುವಕರ ಸಂಘ

ಚಾಮರಾಜ ಮೊಹಲ್ಲಾ ಯುವಕರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ೨೭ನೇ ತಾರೀಕು ನಡೆದು, ಅರಮನೆ ನೌಕರರ ಸಿಬ್ಬಂದಿ ಹೋರಾಟ ಮತ್ತು ಧೌರಸಭಾ ಕೆಲಸಗಾರರ ಮಹಾ ವಿಚಾರಗಳನ್ನು ಪರಿಶೀಲಿಸಿತು. ಕೆಲಸಗಾರರ ಹಿತವನ್ನು ರಕ್ಷಿಸಿಕೊಳ್ಳುವ ಪ್ರಯತ್ನಕ್ಕೆ ಬೆಂಬಲವನ್ನು ಸೂಚಿಸಲಾಯಿತು ಶ್ರೀ ಎ. ಎಸ್. ನಾರಾಯಣಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

CITY TUTORIAL COLLEGE

Old Agrahar, Mysore

B A & B Sc.— Kannada & English *Classes Commenced*

INTER :— English (56 & 57 Texts) Kannada, Samskrita, P C. M. & C. B Z.

Classes in full swing

Admissions for S S L C will close on 10-7 57 Join at once

Edited, Printed and Published by A. R. Nagarajan at Sadhvi Press, [illegible] Road, Mysore

ವಿವಾಹಕ್ಕೆ ಅಡ್ಡಿ ಬಂದ ತಂದೆಯ ಹಿಡಿತದಿಂದ ತರುಣಿಯ ಪರಾರಿ

ಕೊಲಂಬೊ ಬಳಿ ಇರುವ ಕ್ಯಾಂಡಿ ಎಂಬಲ್ಲಿ ಇತ್ತೀಚೆಗೆ ಪಲಾಯನಂರಾದ ಇಬ್ಬರು ಪ್ರೇಮಿಗಳು ರಿಜಿಸ್ಟರ್ ವಿವಾಹ ಮಾಡಿಕೊಳ್ಳಲು ಕಛೇರಿಗೆ ಹೋದಾಗ ಅಲ್ಲಿಗೆ ಹುಡುಗಿಯ ತಂದೆಯು ಹಠಾತ್ತನೆ ಬಂದು ತನ್ನ ಮಗಳು ಮೈನರೆಂದು ಹೇಳಿ ವಿವಾಹಕ್ಕೆ ಅಡ್ಡಿಪಡಿಸಿದನೆಂದೂ, ಅದಾದ ಮೇಲೆ ಹುಡುಗಿಯು ತನ್ನ ಪ್ರೇಮಿಯೊಡನೆ ಓಡುತ್ತಿದ್ದಾಗ ಆಕೆಯ ಸೀರೆ ಸೆರಗನ್ನು ತಂದೆಯು ಹಿಡಿದು ನಿಲ್ಲಿಸಿದನೆಂದೂ, ಹುಡುಗಿಯು ಸಿಟ್ಟುಗೊಂಡಿದ್ದ ತಂದೆ ಮುಂದೆ ಕುರಿಯ ಹಾಗೆ ನಿಂತಂತೆ ನಟಿಸಿ, ಸೀರೆಯನ್ನು ಕಟ್ಟಿ ಬಿಗಿಹಿಡಿದಿದ್ದ ಪಿನ್ನನ್ನು ಕಿತ್ತು ಓಡಿಹೋಗಿ ತರುಣನನ್ನು ಸೇರಿದಳೆಂದೂ, ಅಲ್ಲಿಂದ ಅವರಿಬ್ಬರೂ ಮೋಟಾರಿನಲ್ಲಿ ಪರಾರಿಯಾದರೆಂದೂ ಹೇಳಲಾಗಿದೆ ದಿಗ್ಭ್ರಾಂತನಾದ ತಂದೆಯ ಕೈಯಲ್ಲಿ ಹುಡುಗಿಯ ಸೀರೆಯು ಮಾತ್ರ ಉಳಿದಿತ್ತು. ಆತನು ಪೊಲೀಸರಿಗೆ ದೂರು ಕೊಟ್ಟು, ಮನೆಗೆ ತೆರಳಿದನು

ಕಾಮನ್‌ವೆಲ್ತಿನ ಐಕ್ಯದ ಯೋಜನೆ

ಕಾಮನ್‌ವೆಲ್ತ್ ರಾಜ್ಯಗಳ ಐಕ್ಯದ ಬಗ್ಗೆ ಯೋಜನೆಯೊಂದನ್ನು ಸಿದ್ಧಗೊಳಿಸಿ ಅದನ್ನು ಆಯಾ ರಾಷ್ಟ್ರಗಳ ಪ್ರತಿನಿಧಿ ಮಂಡಲಗಳ ಪರಿಶೀಲನೆಗಾಗಿ ಒಪ್ಪಿಸಲಾಗಿರುವುದೆಂದು ವರದಿಯಾಗಿದೆ. ಅದನ್ನು ಕಾಮನ್‌ವೆಲ್ತ್ ಐಕ್ಯವಾದಿ ಕ್ಲಿಫರ್ಡ್ ಹೀತ್‌ಕೋಟ್ ಎಂಬುವರು ತಯಾರಿಸಿದ್ದಾರೆ. ಬ್ರಿಟಿಷ್ ಪ್ರಧಾನಿ ಮತ್ತು ಇತರ ಪ್ರಧಾನಿಗಳು ಅದನ್ನು ಪರಿಶೀಲಿಸುತ್ತಿರುವರೆಂದು ಹೇಳಲಾಗಿದೆ.

ಮೈದಾ ಮತ್ತು ಗೋಧಿ ಹಿಟ್ಟಿನ ಬೆಲೆ ನಿಗದಿ

ಮದ್ರಾಸು ಪ್ರಾದೇಶಿಕ ಆಹಾರ ಡೈರೆಕ್ಟರು ಮೈದಾ ಮತ್ತು ಗೋಧಿ ಹಿಟ್ಟಿನ ಬೆಲೆಯನ್ನು ನಿಗದಿ ಮಾಡಿರುತ್ತಾರೆ ಮೈದಾವನ್ನು ಮಣಕ್ಕೆ ೨೦|| ರೂ ಮತ್ತು ಗೋಧಿ ಹಿಟ್ಟನ್ನು ೧೨ ರೂ. ನಂತೆ ಚೀಲದ ಸಮೇತ ಮಾರಬೇಕೆಂದು ಗೊತ್ತುಪಡಿಸಲಾಗಿದೆ ಮಾರಾಟ ತೆರಿಗೆಯು ಅದಕ್ಕೆ ಸೇರಿಲ್ಲ

ಭಾರತಕ್ಕೆ ಯುಗೊಸ್ಲಾವಿಯಾ ಉಪಾಧ್ಯಕ್ಷರು

ಯುಗೊಸ್ಲಾವಿಯದ ಉಪಾಧ್ಯಕ್ಷರಾದ ಸ್ವೆಟೊಜಾರ್ ಟೆಂಪೋವರು ಭಾರತ ಮತ್ತು ಪಾಕಿಸ್ತಾನಗಳಿಗೆ ಈ ಬೇಸಿಗೆಯಲ್ಲಿ ಭೇಟಿಯಾಯುವರು.

ಸತ್ಯನಾರಾಯಣಸ್ವಾಮಿಯವರ ಡೋಲೋತ್ಸವ

ಸಂತೇಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನದಲ್ಲಿರುವ ಶ್ರೀ ಸತ್ಯನಾರಾಯಣ ಸ್ವಾಮಿಯವರ ಗುಡಿಯಲ್ಲಿ ಇದೇ ೮ನೇ ತಾರೀಕು ರಾತ್ರಿ ೭|| ಗಂಟೆಗೆ ಡೋಲೋತ್ಸವವು ಜರುಗುವುದು. ೨೦ ದಿನಗಳ ವರೆಗೆ ಅದು ನಡೆಯುವುದು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕ ರಸ್ತೆ, ಮೈಸೂರು (Estd 1911)

ಬೇಡಿಕೆ ಈಡೇರದಿದ್ದರೆ ಆಂಧ್ರದ ಗ್ರಾಮಾಧಿಕಾರಿಗಳ ರಾಜೀನಾಮೆ

ಆಂಧ್ರದ ಗ್ರಾಮಾಧಿಕಾರಿಗಳ ಸಮ್ಮೇಳನವು ನೆಲ್ಲೂರಿನಲ್ಲಿ ನಡೆದು, ಈ ತಿಂಗಳು ಅಖೈರಿನೊಳಗೆ ತಾತ್ಕಾಲಿಕ ಪರಿಹಾರದ ಬೇಡಿಕೆಯನ್ನು ಸರ್ಕಾರದವರು ಈಡೇರಿಸದಿದ್ದರೆ ಗ್ರಾಮಾಧಿಕಾರಿಗಳು ರಾಜೀನಾಮೆ ಕೊಡಬೇಕೆಂದು ನಿರ್ಧರಿಸಿರುತ್ತದೆ. ಸಮ್ಮೇಳನದಲ್ಲಿ ೬೦೦ ಮಂದಿ ಭಾಗವಹಿಸಿದ್ದರು. ಆಂಧ್ರ ಪ್ರದೇಶ ಸಂಸ್ಥಾನದ ಆಂಧ್ರ ಭಾಗದಲ್ಲಿಯೇ ೪೦,೦೦೦ ಮಂದಿ ಗ್ರಾಮಾಧಿಕಾರಿಗಳಿರುವರು ಈ ನಿರ್ಧಾರವು ತೆಲಂಗಾಣದವರಿಗೆ ಅನ್ವಯಿಸುವುದಿಲ್ಲ

ಈ ವಿಚಾರವಾಗಿ ಅಲ್ಲಿನ ರೆವಿನ್ಯೂ ಮಂತ್ರಿ ಕಳಾ ವೆಂಕಟರಾಯರು ಮಾತನಾಡಿ, ಬೇಡಿಕೆಯ ಪರಿಶೀಲನೆಗಾಗಿ ಸರ್ಕಾರದವರು ಒಂದು ಸಮಿತಿಯನ್ನು ರಚಿಸಲಿರುವುದಾಗಿ ತಿಳಿಸಿದರು ಗ್ರಾಮಾಧಿಕಾರಿಗಳು ಜಮಾಬಂದಿ ಕಾರ್ಯದಲ್ಲಿ ಪಾತ್ರ ವಹಿಸದಿದ್ದರೆ ಅದನ್ನು ಸಹಿಸುವುದಕ್ಕಾಗುವುದಿಲ್ಲವೆಂದು ಅವರು ಹೇಳಿ, ಯಾರಾದರೂ ಗ್ರಾಮಾಧಿಕಾರಿಗಳು ರಾಜೀನಾಮೆಯಿತ್ತರೆ ಅದನ್ನು ಒಪ್ಪಿಕೊಳ್ಳಲು ಸೂಚಿಸಲಾಗಿರುವುದೆಂದೂ ವ್ಯಕ್ತಪಡಿಸಿರುವರು

ಬಿಕನೀರ್ ಮಹಾರಾಜರಿಂದ ಸಂಬಳದ ತ್ಯಾಗ

ಲೋಕಸಭಾ ಸದಸ್ಯರಾಗಿರುವ ಬಿಕನೀರಿನ ಮಹಾರಾಜಾ ಕರ್ಣಸಿಂಗ್‌ರವರು ತಮಗೆ ಬರುತ್ತಿರುವ ಮಾಹೆಯಾನ ೪೦೦ ರೂ. ಸಂಬಳವನ್ನು ತೆಗೆದುಕೊಳ್ಳದೆ ಬಿಟ್ಟುಬಿಡುವುದಾಗಿ ಸೂಚಿಸಿರುತ್ತಾರೆ ಸರ್ಕಾರದವರು ಮಿತವ್ಯಯವನ್ನು ಜಾರಿಗೆ ತರುವುದರಲ್ಲಿ ಸಹಕರಿಸಲು ತಾವು ಈ ರೀತಿ ಮಾಡಿರುವುದಾಗಿ ಅವರು ಹೇಳಿರುತ್ತಾರೆ

ಟೆಹರಾನ್ ಬಳಿ ಭೂಕಂಪದಿಂದ ೫೦ ಜನರ ಮರಣ

ಇರಾನಿನ ರಾಜಧಾನಿ ಟೆಹರಾನಿಗೆ ೫೦ ಮೈಲಿ ದೂರದಲ್ಲಿ ಮೊನ್ನೆ ರಾತ್ರಿ ಭೂಕಂಪವುಂಟಾಗಿ ೫೦ ಜನರು ಮಡಿದು, ಅನೇಕರಿಗೆ ಗಾಯಗಳಾಗಿವೆ ಎರಡು ಗ್ರಾಮಗಳು ನಾಶವಾಗಿವೆ.

ತ್ರಿನಯನೇಶ್ವರ ಗುಡಿಯಲ್ಲಿ ಗಿರಿಜಾ ಕಲ್ಯಾಣೋತ್ಸವ

ಅರಮನೆ ಕೋಟೆಯಲ್ಲಿರುವ ಶ್ರೀ ತ್ರಿನಯನೇಶ್ವರಸ್ವಾಮಿ ದೇವಾಲಯದಲ್ಲಿ ಗಿರಿಜಾಕಲ್ಯಾಣಮಹೋತ್ಸವವು ಇದೇ ೬ನೇ ತಾರೀಕು ಶನಿವಾರ ರಾತ್ರಿ ೯-೪೭ ಗಂಟೆಗೆ ನೆರವೇರುವುದು. ಅದರ ಅಂಗವಾಗಿ ವಿವಿಧ ಉತ್ಸವಗಳು ನಾಳೆಯಿಂದ ೧೧ನೇ ತಾರೀಕಿನವರೆಗೂ ಇವೆ.

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ,

ಮೈಸೂರು

ಶ್ರೇಷ್ಠತರವಾದ ಅಗರಬತ್ತಿ, ಗಂಧದ ಬತ್ತಿ, ಕಾಶ್ಮೀರದ ಕೇಸರಿ ಮತ್ತು ಇತರೆ ಸುಗಂಧ ದ್ರವ್ಯಗಳಿಗೆ ಇಂದೇ ಭೇಟಿ ಕೊಡಿ.

[illegible]

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ— ನಿರೋಧಕ, ನಿವಾರಕ. ಸಲಹೆಗಳಿಗೆ :— "ಲಿವರ್ ಹೌಸ್", ಚಾಮರಾಜಪುರಂ, ಮೈಸೂರು (ಸುಸ್ತೂರು ಹಾಸ್ಟೆಲ್ ಹತ್ತಿರ)



ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 2 ನಯಾ ಪೈಸೆ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೧೫] SADHVI : THURSDAY 4—7—1957 ಮೈಸೂರು : ಗುರುವಾರ ೪—೭—೧೯೫೭ : [ಸಂಚಿಕೆ : ೩೩೦

ರಷ್ಯದಲ್ಲಿ ಮೂವರು ಅಗ್ರನಾಯಕರುಗಳ ಉಚ್ಚಾಟನೆ

ರಷ್ಯದಲ್ಲಿ ಮೂವರು ಅಗ್ರನಾಯಕರ ಉಚ್ಚಾಟನೆ

ಮಾಲಟೋವ್, ಮಾಲೆಂಕೋವ್ ಮತ್ತು ಕಗಾನೊವಿಚ್‌ರವರ ಮೇಲೆ ಪಕ್ಷದ ವಿರುದ್ಧ ವರ್ತನೆಯ ಆಪಾದನೆ

ರಷ್ಯದ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಪ್ರೆಸಿಡಿಯಂ ಎಂಬ ಆಡಳಿತ ಮಂಡಲಿಯಿಂದ ಜಾರ್ಜಿ ಮಾಲೆಂಕೋವ್, ಕಗಾನೊವಿಚ್ ಮತ್ತು ಮಾಲಟೋವ್‌ರವರನ್ನು ತೆಗೆದುಹಾಕಿದೆ. ಕಗಾನೊವಿಚ್ ಮತ್ತು ಮಾಲಟೋವ್‌ರವರು ರಷ್ಯದ ಮೊದಲನೇ ಉಪ ಪ್ರಧಾನಿಗಳಾಗಿದ್ದರು ಮಾಲೆಂಕೋವರು ಒಬ್ಬ ಉಪ ಪ್ರಧಾನಿಯಾಗಿದ್ದರು.

ವಿದೇಶಾಂಗ ಮಂತ್ರಿ ಡಿಮಿಟ್ರಿ ಶಿಪಿಲೋವ್‌ರವರನ್ನೂ ತೆಗೆದುಹಾಕಲಾಗಿತ್ತೆಂದು ಮೊದಲು ಅಸ್ಪಷ್ಟವಾಗಿ ವರದಿಯಾಗಿತ್ತು. ಅವರನ್ನು ತೆಗೆದುಹಾಕಿಲ್ಲವೆಂಬುದು ಈಗ ವ್ಯಕ್ತವಾಗಿದೆ. ಅವರನ್ನು ಪಕ್ಷದ ಕೇಂದ್ರ ಸಮಿತಿ ಕಾರ್ಯದರ್ಶಿ ಸ್ಥಾನದಿಂದ ತೆಗೆಯಲಾಗಿದೆ. ಉಚ್ಚಾಟನೆಯಾದ ಮೂವರು ನಾಯಕರೂ ಪಕ್ಷದ ವಿರುದ್ಧದ ನೀತಿಯನ್ನನುಸರಿಸುತ್ತಿದ್ದರೆಂದು ಪಕ್ಷದ ಪ್ರಕಟಣೆಯು ಸೂಚಿಸಿದೆ. ಮಾಲಟೋವ್‌ರವರು ಪ್ರಜಾ ಕೋಟಿಯಲ್ಲಿ ಶಾಂತಿ ನೆಲೆಸುವ ಬಗ್ಗೆ ರಷ್ಯಾ ಸರ್ಕಾರದ ನೀತಿಗೆ ಅಡ್ಡಿಯಾಗಿದ್ದರೆಂದು ಆಪಾದಿಸಲಾಗಿದೆ. ಪಕ್ಷದ ೨೦ನೇ ಕಾಂಗ್ರೆಸ್ಸಿನ ಅಧಿವೇಶನವು ಕಳೆದ ವರ್ಷ ನಡೆದು ಹಲವು ನಿರ್ಧಾರಗಳನ್ನು ಕೈಗೊಂಡಿದ್ದುದರ ವಿರುದ್ಧವಾಗಿ ಅವರುಗಳು ವರ್ತಿಸುತ್ತಿದ್ದರೆಂದು ಹೇಳಲಾಗಿದೆ. ಆ ಅಧಿವೇಶನದಲ್ಲಿ ಪಕ್ಷದ ಪ್ರಥಮ ಕಾರ್ಯದರ್ಶಿ ಕ್ರುಶ್ಚೇವರು ಸ್ಟಾಲಿನ್ನರ ನೀತಿಯನ್ನು ಖಂಡಿಸಿ ಕೊಟ್ಟಿದ್ದ ಒಂದು ದೀರ್ಘ ಹೇಳಿಕೆಯನ್ನು ಅಂಗೀಕರಿಸಲಾಗಿತ್ತು

ಕೇಂದ್ರ ಸಮಿತಿಯಲ್ಲಿ ೧೧ ಜನ ಪೂರ್ಣ (ಓಟು ಉಳ್ಳ) ಸದಸ್ಯರೂ, ಆರು ಮಂದಿ ಉಮೇದುವಾರ ಸದಸ್ಯರೂ ಇರುವರು. ಉಚ್ಚಾಟನೆಯಾದ ಮೂವರು ನಾಯಕರೂ ಪೂರ್ಣ ಸದಸ್ಯರಾಗಿದ್ದವರು. ಶಿಪಿಲೋವರು ಉಮೇದುವಾರ ಸದಸ್ಯರಾಗಿದ್ದು ಅವರಿಗೆ ಓಟಿನ ಹಕ್ಕು ಇರುವುದಿಲ್ಲ. ಪ್ರೆಸಿಡಿಯಂ ಎಂದು ಕರೆಯಲ್ಪಡುವ ಈ ಸಮಿತಿಯು ಹಿಂದೆ ಪಾಲಿಟ್‌ಬ್ಯೂರೋ ಎಂದು ಪ್ರಸಿದ್ಧವಾಗಿತ್ತು. ಅದು ಪಕ್ಷದ ಅಗ್ರ ಸಮಿತಿ.

ಶ್ರೀಕಂಠೇಶ್ವರ ಸ್ವಾಮಿಯವರ ಕಲ್ಯಾಣೋತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಕಲ್ಯಾಣ ಮಹೋತ್ಸವವು ನಾಳಿದ್ದು ನೆರವೇರುವುದು. ಈ ಸಂಬಂಧವಾಗಿ ವಿವಿಧ ಉತ್ಸವಗಳು ನಾಳೆಯಿಂದ ೧೨ರ ಪೂರ್ತಿ ನಡೆಯುವುವು. ಉತ್ಸವದ ಅಂಗವಾಗಿ ನಾಳೆ ರಾತ್ರಿ ೯ ಗಂಟೆಗೆ ಬೆಂಗಳೂರಿನ ವಿ|| ಹೆಚ್. ವಿ. ವೆಂಕಟರಾಮಯ್ಯನವರ ಸಂಗೀತವು ವಿ|| ಕೃಷ್ಣಗಿರಿ ಸುಬ್ರಹ್ಮಶಾಸ್ತ್ರಿಯವರ ಪಿಟೀಲು ಮತ್ತು ವಿ|| ಹೆಚ್. ವಿ. ವೆಂಕಟದಾಸಪ್ಪನವರ ಮೃದಂಗದೊಡನೆ ಏರ್ಪಾಡಾಗಿದೆ

ಪಾಕಿಸ್ತಾನದಿಂದ ಭಾರತೀಯರನ್ನು ಹೊರಕ್ಕೆ ಅಟ್ಟುವ ಪ್ರಯತ್ನ

ಪಾಕಿಸ್ತಾನದಲ್ಲಿ ಕೆಲಸ ಮಾಡುತ್ತಿರುವ ಭಾರತೀಯರನ್ನು ಕ್ರಮಕ್ರಮವಾಗಿ ಅಲ್ಲಿಂದ ಹೊರಹಾಕಲು ಅಲ್ಲಿನ ಸರ್ಕಾರದವರು ಕ್ರಮಗಳನ್ನು ಕೈಗೊಳ್ಳುತ್ತಿರುವುದಾಗಿ ವರದಿಯಾಗಿದೆ. ಭಾರತ ಸರ್ಕಾರದವರು ಪಾಕಿಸ್ತಾನಿಗಳಿಗೆ ಇಲ್ಲಿ ತೋರುತ್ತಿರುವ ವರ್ತನೆಗೆ ವಿರೋಧವಾಗಿ ಪಾಕಿಸ್ತಾನ ಸರ್ಕಾರದವರು ವರ್ತಿಸುತ್ತಿರುವರೆಂದು ಹೇಳಲಾಗಿದೆ. ಭಾರತ ಸರ್ಕಾರದವರು ಇಲ್ಲಿರುವ ಪಾಕಿಸ್ತಾನಿಗಳು ಪ್ರಯಾಣದ ಚೀಟಿಗಳನ್ನು ಹೊಂದಲು ಅವಧಿಯನ್ನು ಇನ್ನೂ ಹೆಚ್ಚಿಸುತ್ತಿದ್ದಾರೆ ಆದರೆ ಪಾಕಿಸ್ತಾನದವರು ರಹದಾರಿ ಚೀಟಿಗಳನ್ನು ಭಾರತೀಯರಿಗೆ ನಿರಾಕರಿಸುತ್ತಿರುವರೆಂದು ಹೇಳಲಾಗಿದೆ

ಬೀಡಿ ಕಾರ್ಮಿಕರ ಮೇಲೆ ಗುಂಡಿನೇಟು

ನಾಗಪುರಕ್ಕೆ ಸುಮಾರು ೧೧೦ ಮೈಲಿ ದೂರವಿರುವ ಆಮಗಾವ್ ಎಂಬಲ್ಲಿ ಕಳೆದ ೧ನೇ ತಾರೀಕು ಕಲ್ಲುಗಳನ್ನು ಬೀರಿದ ಬೀಡಿ ಕಾರ್ಮಿಕರನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರೆಂದೂ, ಒಬ್ಬ ಕೆಲಸಗಾರನಿಗೆ ಪೆಟ್ಟು ತಗಲಿತೆಂದೂ, ಕೆಲವು ಪೋಲೀಸರಿಗೂ ಗಾಯವಾಗಿರುವುದೆಂದೂ ವರದಿಯಾಗಿದೆ ಒಟ್ಟು ೧೨ ಮಂದಿಗೆ ಪೆಟ್ಟು ಬಿದ್ದಿದೆ. ೯ ಜನ ಕಾರ್ಮಿಕರ ದಸ್ತಗಿರಿಯಾಗಿದೆ ಕೆಲಸದ ಹಂಚುವಿಕೆಯ ಬಗ್ಗೆ ತೊಂದರೆಯುಂಟಾಗಿ ಕಾರ್ಖಾನೆಯನ್ನು ೨೬ ರಿಂದ ೩೧ ರವರೆಗೆ ಮುಚ್ಚಲಾಗಿತ್ತೆಂದೂ, ೧ನೇ ತಾರೀಕು ಅದನ್ನು ತೆರೆಯಬೇಕೆಂದು ಕಾರ್ಮಿಕರು ಒತ್ತಾಯ ಮಾಡಲಾಗಿ ಅದಕ್ಕೆ ನಿರಾಕರಿಸಲಾಯಿತೆಂದೂ ಹೇಳಲಾಗಿದೆ. ಆ ಸಂಬಂಧದಲ್ಲಿ ಮಧ್ಯೆ ಪ್ರವೇಶಿಸಿದ ಪೋಲೀಸರಿಗೆ ಪೆಟ್ಟುಬಿದ್ದು, ಅವರು ಮೊದಲು ಲಾಠಿ ಪ್ರಹಾರ ಮಾಡಿದರು.

ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ಅಧಿಕಾರಿಗಳ ಸಮ್ಮೇಳನ

ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಲು ನಾಳಿದ್ದು ದೆಹಲಿಯಲ್ಲಿ ಸಂಸ್ಥಾನ ಸರ್ಕಾರಗಳ ಸಭೆಯು ನಡೆಯುವುದು ಅದರಲ್ಲಿ ೧೪ ಸಂಸ್ಥಾನಗಳ ಡೈರೆಕ್ಟರುಗಳು ಭಾಗವಹಿಸುವರು.

ಅವನಿ ಶೃಂಗೇರಿ ಮಠದ ದೇವರ ಆಭರಣ ಕಳುವು

ಬೆಂಗಳೂರು ಮಲ್ಲೇಶ್ವರದಲ್ಲಿ ಬಿಡಾರ ಮಾಡಿರುವ ಶ್ರೀ ಅವನಿ ಶೃಂಗೇರಿ ಸ್ವಾಮಿಗಳವರು ಪೂಜೆ ಮಾಡುವ ದೇವರ ಸುಮಾರು ೨,೦೦೦ ರೂ. ಬೆಲೆಯ ನಾಗಾಭರಣ ಮತ್ತು ಕವಚವು ನೆನ್ನೆ ಬೆಳಿಗ್ಗೆಯಿಂದ ಮಾಯವಾಗಿರುವುದೆಂದು ಪೋಲೀಸರಿಗೆ ದೂರು ಕೊಡಲಾಗಿದೆ.

ಗೃಹ ವಿಜ್ಞಾನದ ಪ್ರೊಫೆಸರಾಗಿ ಸುಶೀಲಾ ಲಿಂಗಯ್ಯನವರ ನೇಮಕ

ಶ್ರೀಮತಿ ಡಾ|| ಬಿ. ಸುಶೀಲಾ ಲಿಂಗಯ್ಯನವರನ್ನು ಬೆಂಗಳೂರು ಮಹಾರಾಣಿ ಕಾಲೇಜಿನ ಗೃಹ ವಿಜ್ಞಾನದ ಪ್ರೊಫೆಸರರಾಗಿ ನೇಮಿಸಲಾಗಿದೆ.

ಅಣು ಶಸ್ತ್ರ ಪರೀಕ್ಷೆ ನಿಲ್ಲಿಸಲು ಪಶ್ಚಿಮ ರಾಷ್ಟ್ರಗಳ ಷರತ್ತು

ಶಸ್ತ್ರ ಸನ್ಯಾಸದ ಬಗ್ಗೆ ವಿಶ್ವ ಒಪ್ಪಂದದ ಪ್ರಥಮ ಹೆಜ್ಜೆಯಾಗಿ, ಷರತ್ತುಗಳ ಮೇರೆ ಅಣು ಶಸ್ತ್ರಗಳ ಪರೀಕ್ಷೆ ನಡೆಸುವುದನ್ನು ನಿಲ್ಲಿಸುವುದಕ್ಕೆ ೪ ಪಶ್ಚಿಮ ರಾಷ್ಟ್ರಗಳ ಪ್ರತಿನಿಧಿಗಳು ಶಸ್ತ್ರ ಸನ್ಯಾಸ ಸಮಿತಿಯಲ್ಲಿ ಇದೇ ಮೊದಲಾಗಿ ಸೂಚನೆಯಿತ್ತಿರುವರು ೧೦ ತಿಂಗಳ ಕಾಲ ಅಣು ಪ್ರಯೋಗಗಳನ್ನು ನಿಲ್ಲಿಸಬಹುದೆಂದು ಅಮೆರಿಕದ ಪ್ರತಿನಿಧಿ ಸ್ಟ್ಯಾಸೆನ್‌ರವರು ತಿಳಿಸಿರುತ್ತಾರೆ.

ಮಾರಾಟ ತೆರಿಗೆ ವಿರುದ್ಧದ ಪ್ರದರ್ಶನಕಾರರ ಮೇಲೆ ಅಶ್ರುವಾಯು

ಅಂತರ ಸಂಸ್ಥಾನ ಮಾರಾಟ ತೆರಿಗೆ ಶಾಸನವನ್ನು ಜಾರಿಗೆ ತರುವುದನ್ನು ಪ್ರತಿಭಟಿಸಲು ನೆನ್ನೆ ದೆಹಲಿಯಲ್ಲಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರ ಮನೆ ಮುಂದೆ ಪ್ರದರ್ಶನ ನಡೆಸಿದ ೬೦೦ ಜನರನ್ನು ಚದುರಿಸಲು ಪೋಲೀಸರು ಅಶ್ರುವಾಯುವನ್ನು ಪ್ರಯೋಗಿಸಿದರು. ಅದಕ್ಕೆ ಮುಂಚೆ ಲಾಠಿ ಪ್ರಹಾರ ನಡೆದು, ಜನರು ಕೇಂದ್ರ ಮಂತ್ರಿಗಳ ಗೃಹಕ್ಕೆ ನುಗ್ಗುವುದನ್ನು ತಪ್ಪಿಸಲಾಯಿತು. ಗಾಯಗೊಂಡ ನಾಲ್ವರನ್ನು ಪ್ರದರ್ಶನಕಾರರು ಹೊತ್ತುಕೊಂಡುಹೋದರೆಂದು ಹೇಳಲಾಗಿದೆ ದೆಹಲಿ ವ್ಯಾಪಾರಿ ಸಂಘದವರು ಪ್ರದರ್ಶನವನ್ನು ಏರ್ಪಡಿಸಿ, ಮೆರವಣಿಗೆಯನ್ನು ನಡೆಸಿ, ಕೇಂದ್ರ ಮಂತ್ರಿಗಳ ಮನೆ ಮುಂದೆ ಹೋಗಿದ್ದರು. ತಮ್ಮನ್ನು ಪಂಡಿತ ಪಂತರು ಹೊರಕ್ಕೆ ಬಂದು ಕಾಣಬೇಕೆಂದು ಪ್ರದರ್ಶನಕಾರರು ಒತ್ತಾಯಪಡಿಸಿದರು.

ಚುನಾವಣೆಯಲ್ಲಿ ಸೋತವರು ಗವರ್ನರರಾದುದಕ್ಕೆ ಸಭಾತ್ಯಾಗ

ಚುನಾವಣೆಯಲ್ಲಿ ಸೋತುಹೋದ ಹೆಚ್. ವಿ. ಪಾಟಸ್ಕರರನ್ನು ಮಧ್ಯ ಪ್ರದೇಶದ ಗವರ್ನರರಾಗಿ ನೇಮಿಸಿರುವುದನ್ನು ಪ್ರತಿಭಟಿಸಿ, ಮೊನ್ನೆ ಪಾಟಸ್ಕರ್‌ರವರು ವಿಧಾನ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಲು ಬಂದಾಗ ಕಮ್ಯೂನಿಸ್ಟ್ ಮತ್ತು ಸಮಾಜವಾದಿ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು ಸೋತವರನ್ನು ಹುದ್ದೆಗಳಿಗೆ ನೇಮಿಸುವುದು ಪ್ರಜಾಸತ್ತಾತ್ಮಕ ಕಾರ್ಯವಲ್ಲವೆಂದು ಅವರು ತಿಳಿಸಿದರು.

ಹುಬ್ಬಳ್ಳಿಯಿಂದ ಹಣ ಅಪಹರಿಸಿಕೊಂಡು ಬಂದವನಿಗೆ ಸಜಾ

ಹುಬ್ಬಳ್ಳಿಯ ಅಂದಾನಪ್ಪ ಅಂಡ್ ಸನ್ಸ್ ಸಂಸ್ಥೆಯವರ ೯ ಸಾವಿರ ರೂ ಗಳನ್ನು ಕಳೆದ ತಿಂಗಳು ಅಪಹರಿಸಿಕೊಂಡು ನಗರಕ್ಕೆ ಬಂದು ಇಲ್ಲಿ ಸಿಕ್ಕಿಬಿದ್ದ ಕಪಲನಗೌಡ ಮಲ್ಲನಗೌಡ ಪಾಟೀಲ್ ಎಂಬಾತನಿಗೆ ಹುಬ್ಬಳ್ಳಿಯ ನ್ಯಾಯಾಧೀಶರು ೧ ತಿಂಗಳ ಕಠಿಣ ಸಜಾ ಮತ್ತು ೨೦೦ ರೂ. ದಂಡವನ್ನು ವಿಧಿಸಿರುವರೆಂದು ಗೊತ್ತಾಗಿದೆ.

ಭೂಕಂಪದಲ್ಲಿ ೫೦೦ ಮರಣ

ಕಳೆದ ಸೋಮವಾರ ಇರಾನಿನಲ್ಲಿ ಸಂಭವಿಸಿದ ಭೂಕಂಪದಿಂದ ೫೦೦ ಜನರು ಮೃತಪಟ್ಟಿರುವರೆಂದು ವರದಿಯಾಗಿದೆ.

ರೇಡಿಯೊ ಕಣಗಳಿಲ್ಲದ ಅಣು ಬಾಂಬು

ಪರೀಕ್ಷೆಗಾಗಿ ಜಗತ್ತಿನ ರಾಷ್ಟ್ರಗಳಿಗೆ ಅಮೆರಿಕದ ಸವಾಲ್

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ಹೇಳಿಕೆ ಇತ್ತು ಮುಂದೆ ಅಮೆರಿಕವು ಅಣು ಶಸ್ತ್ರ ಪರೀಕ್ಷಾ ಸಿಡಿತಗಳನ್ನು ನಡೆಸಿದಾಗ ಜಗತ್ತಿನ ಯಾವ ರಾಷ್ಟ್ರವಾದರೂ ಅಲ್ಲಿಗೆ ಅಣು ಕಣಗಳ ಪ್ರಸರಣವನ್ನು ಪರೀಕ್ಷೆ ಮಾಡುವ ಸಾಧನಗಳನ್ನು ಕಳುಹಿಸಬಹುದೆಂದು ಸೂಚಿಸಿರುತ್ತಾರೆ ಅಮೆರಿಕದ ವಿಜ್ಞಾನಿಗಳು ಸ್ವಚ್ಛವಾದ ಬಾಂಬನ್ನು ತಯಾರಿಸುವವರೆಂಬುದನ್ನೂ, ಅವುಗಳಿಂದ ರೇಡಿಯೋ ಕಣಗಳ ಪತನದ ಭೀತಿಯಿರುವುದಿಲ್ಲವೆಂಬುದನ್ನೂ ಇತರ ರಾಷ್ಟ್ರಗಳು ಪರೀಕ್ಷೆ ಮಾಡಬಹುದೆಂದು ಅವರು ಸವಾಲು ಮಾಡಿರುವರು.

ಸಂಸ್ಥಾನದಲ್ಲಿ ಅಖಿಲ ಭಾರತ ಗ್ರಾಮದಾನ ಸಮ್ಮೇಳನ

ಆಚಾರ್ಯ ವಿನೋಬಾಭಾವೆಯವರು ಬರುವ ಸೆಪ್ಟೆಂಬರ್ ತಿಂಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳುವರು. ಅವರು ಸಂಸ್ಥಾನದಲ್ಲಿ ಸಂಚರಿಸುವಾಗ ಗ್ರಾಮಾಂತರ ಪ್ರದೇಶದಲ್ಲಿ ಅಖಿಲ ಭಾರತ ಗ್ರಾಮದಾನ ಸಮ್ಮೇಳನವು ನಡೆಯಲಿರುವುದೆಂದೂ, ಅದು ೨೭ ೨೮ ಮತ್ತು ೨೯ಕ್ಕೆ ಸೇರಬಹುದೆಂದೂ ಗೊತ್ತಾಗಿದೆ ಅದರಲ್ಲಿ ಪ್ರಧಾನಿ ನೆಹರೂರವರು ಭಾಗವಹಿಸುವ ನಿರೀಕ್ಷೆಯಿದೆ. ಪ್ರಾಯಶಃ ತುಮಕೂರು ಅಥವಾ ಮೈಸೂರಿನಲ್ಲಿ ಸಮ್ಮೇಳನವು ಜರುಗಬಹುದು.

ಕಾಂಗ್ರೆಸ್ ಭವನಕ್ಕೆ ಮಾಧವನ್ ನಾಯರರಿಂದ ೧೦,೦೦೦ ರೂ.

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಕೆ. ಪಿ. ಮಾಧವನ್ ನಾಯರ್‌ರವರು ೨ ವರ್ಷಗಳ ಹಿಂದೆ ಸಾರ್ವಜನಿಕ ಸಭೆಯಲ್ಲಿ ತಮಗೆ ಅರ್ಪಿಸಲಾದ ನಿಧಿಯಲ್ಲಿ ೧೦,೦೦೦ ರೂ ಗಳನ್ನು ಎರ್ನಾಕುಲದಲ್ಲಿ ಕಾಂಗ್ರೆಸ್ ಭವನವನ್ನು ನಿರ್ಮಿಸಲು ಕೊಟ್ಟಿರುತ್ತಾರೆ.

ರಾಜರಿಗೂ ಐಶ್ವರ್ಯ ಮತ್ತು ವೆಚ್ಚದ ತೆರಿಗೆ

ಕೇಂದ್ರ ಸರ್ಕಾರದ ಐಶ್ವರ್ಯ ಮತ್ತು ವೆಚ್ಚದ ತೆರಿಗೆಯು ರಾಜರಿಗೂ ಅನ್ವಯವಾಗುವುದೆಂದು ಗೊತ್ತಾಗಿದೆ.

ಮೀನಿನಿಂದ ಕೃತಕ ಮೊಟ್ಟೆ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದ ಡಾ|| ಎಲ್. ಎಸ್. ರಾಮಸ್ವಾಮಿ ಮತ್ತು ಬಿ ಐ ಸುಂದರರಾಜ್‌ರವರು ಬೆಳ್ಳಂದೂರು ಕೆರೆಯಿಂದ ತರಿಸಿದ ಗಬ್ಬದ ಒಂದು ಜಾತಿಯ ಮೀನಿಗೆ ಇಂಜಕ್ಷನ್ ಕೊಟ್ಟು ಕೃತಕವಾಗಿ ಮೊಟ್ಟೆ ಹಾಕುವಂತೆ ಮಾಡಿರುತ್ತಾರೆ ಈ ವಿಜ್ಞಾನಿಗಳಿಗೆ ಮೀನುಗಳ ಸಂಶೋಧನೋದ್ದೇಶಕ್ಕಾಗಿ ಸರ್ಕಾರದ ವೇತನ ದೊರೆಯುತ್ತಿದೆ.

ಪೌರಸಭಾ ಚುನಾವಣೆಗಳನ್ನು ಮುಂದುವರಿಸುವ ಉದ್ದೇಶವಿಲ್ಲ

ಅಧಿವೇಶನದಲ್ಲಿ ವಿರೋಧ ಪಕ್ಷದವರ ಟೀಕೆಗೆ ಅಧ್ಯಕ್ಷರ ಉತ್ತರ

ಮೈಸೂರು ೪

ನಗರದ ಪೌರಸಭೆಯ ಮುಂದುವರಿದ ಅಧಿವೇಶನವು ನೆನ್ನೆ ಶ್ರೀ ಎಸ್ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತು.

ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ ಪುರಸಭಾ ಚುನಾವಣೆಗಳ ಸಂಬಂಧದ ಪೂರ್ವಭಾವಿ ಕಾರ್ಯಕ್ಕಾಗಿ ಸಿಬ್ಬಂದಿಯನ್ನು ನೇಮಿಸುವ ವಿಷಯವು ಪರಿಶೀಲನೆಗೆ ಬಂದಿತು. ಆಡಳಿತ ವರ್ಗದವರು ವಿರೋಧ ಪಕ್ಷದವರ ಸಹಕಾರವನ್ನು ಪಡೆಯುತ್ತಿಲ್ಲವೆಂದೂ, ಚುನಾವಣೆಯ ಕ್ಷೇತ್ರಗಳ ವಿಂಗಡಣೆ ಮುಂತಾದುವುಗಳು ಸಾರ್ವಜನಿಕ ವಿಷಯಗಳಾದರೂ ಅವನ್ನು ಗುಟ್ಟಿನಲ್ಲಿಡಲಾಗಿದೆಯೆಂದೂ, ಆ ಕಾರ್ಯಗಳೆಲ್ಲವೂ ಮುಗಿದನಂತರ ಸಿಬ್ಬಂದಿ ನೇಮಕವನ್ನು ಮಾಡಬಹುದೆಂದೂ ಶ್ರೀಗಳಾದ ಶ್ರೀಕಂಠ ಶರ್ಮ ಮತ್ತು ಪಿಾರ್ ನೂರ್ ಹುಸೇನರು ಸೂಚಿಸಿದರು.

ಅಧ್ಯಕ್ಷರು ಮತ್ತು ಕಮೀಷನರು ಆಪಾದನೆಗಳನ್ನು ನಿರಾಕರಿಸಿ ಚುನಾವಣೆಯನ್ನು ಮುಂದುವರಿಸುವುದೇ ಮುಂತಾದ ಯಾವ ಉದ್ದೇಶಗಳೂ ಆಡಳಿತ ವರ್ಗದವರಿಗೆ ಇಲ್ಲವೆಂದು ಭರವಸೆಯಿತ್ತರು

ವಿಷಯದ ಪರಿಶೀಲನೆಯನ್ನು ಮುಂದೆ ಹಾಕಬೇಕೆಂಬ ಶ್ರೀ ಶ್ರೀಕಂಠ ಶರ್ಮರ ಸೂಚನೆಯು ೮-೧೪ ಮತಗಳಿಂದ ತಿರಸ್ಕೃತವಾಯಿತು ಸಿಬ್ಬಂದಿ ನೇಮಕವನ್ನು ಮಾಡಿಕೊಳ್ಳಬಹುದೆಂದು ೧೪-೮ ಮತಗಳಿಂದ ಅಂಗೀಕರಿಸಲಾಯಿತು

ಸಂಸ್ಥಾನದ ವಿದ್ಯುಚ್ಛಕ್ತಿ ಸಲಹಾ ಮಂಡಲಿಗೆ ಪುರಸಭೆಯ ಪ್ರತಿನಿಧಿಗಳಾಗಿ ಶ್ರೀಗಳಾದ ಎಸ್. ಸಂಜೀವಯ್ಯ ಮತ್ತು ಕೆ. ಪುಟ್ಟಸ್ವಾಮಿಯವರನ್ನು ಚುನಾಯಿಸಲಾಯಿತು.

ನಗರದಲ್ಲಿ ೧೦೦ ರೂಪಾಯಿಗಿಂತ ಹೆಚ್ಚಿನ ನೀರು ಕಂದಾಯದ ಬಾಕಿಯು ೪೫ ಜನರಿಂದ ಬರಬೇಕಾಗಿದೆಯೆಂದು ಶ್ರೀ ಶ್ರೀಕಂಠಶರ್ಮರ ಪ್ರಶ್ನೆಯೊಂದಕ್ಕೆ ಅಧ್ಯಕ್ಷರು ಉತ್ತರವಿತ್ತರು. ಅನೇಕ ಮಂದಿ ಶ್ರೀಮಂತರ ಹೆಸರುಗಳು ಈ ಪಟ್ಟಿಯಲ್ಲಿವೆಯೆಂದೂ, ಒಡವರಿಗೂ ಅವರಿಗೂ ವಸೂಲಿ ಕ್ರಮದಲ್ಲಿ ತಾರತಮ್ಯ ಮಾಡಬಾರದೆಂದೂ ಶ್ರೀ ಶರ್ಮರು ಮಾಡಿದ ಕೋರಿಕೆಯನ್ನು ಒಪ್ಪಲಾಯಿತು

ನಗರದ ನಾನಾ ಮೊಹಲ್ಲಾಗಳಲ್ಲಿ ಇದುವರೆಗೆ ಒಟ್ಟು ೫೫ ಮೈಲಿ ರಸ್ತೆಗಳನ್ನು ಟಾರ್ ಮಾಡಲಾಗಿದೆಯೆಂದು ಮೋಟಾರು ವಾಹನಗಳ ಸಂಚಾರವು ಹೆಚ್ಚಾಗಿರುವ ಮಾರ್ಗಗಳಿಗೆ ಆದ್ಯತೆ ಕೊಡುವ ನೀತಿಯನ್ನನುಸರಿಸಿ ಈ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆಯೆಂದೂ ಶ್ರೀ ಕೆ ಸಿದ್ದಯ್ಯನವರ ಪ್ರಶ್ನೆಗೆ ಉತ್ತರವೀಯಲಾಯಿತು.

ಸೇಠ್ ಮೋಹನದಾಸ್ ತುಳಸಿದಾಸ್ ಆಸ್ಪತ್ರೆಗೆ ವರ್ಷಂಪ್ರತಿ ೮ ಸಾವಿರ ರೂ. ಗ್ರಾಂಟನ್ನು ಕೊಡಲಾಗುತ್ತಿದೆಯೆಂದೂ, ಅಲ್ಲಿನ ಆಡಳಿತವು ನೇರವಾಗಿ ಆರೋಗ್ಯ ಇಲಾಖಾ ಡೈರೆಕ್ಟರಿಗೆ ಸೇರಿದೆಯೆಂದೂ, ಅಲ್ಲಿ ಏನು ಲೋಪಗಳಿದ್ದರೂ ಡೈರೆಕ್ಟರ ಗಮನಕ್ಕೆ ತಂದರೆ ಅವರು ಸಂಪಡಿಸುತ್ತಾರೆಂದೂ ಶ್ರೀ ಎಂ. ಎ. ತಿಮ್ಮಯ್ಯನವರ ಪ್ರಶ್ನೆಗೆ ಉತ್ತರವೀಯಲಾಯಿತು.

ಚಾಮರಾಜ, ಕೃಷ್ಣರಾಜ ಮತ್ತು ವಿಲ್ಲೆ ಮೊಹಲ್ಲಾ ವಿದ್ಯಾರ್ಥಿನಿಯರ ಸೌಕರ್ಯಕ್ಕಾಗಿ ಆ ಭಾಗದಲ್ಲಿ ಒಂದು ಹೆಣ್ಣು ಮಕ್ಕಳ ಪ್ರೌಢಶಾಲೆಯನ್ನು ತೆರೆಯುವಂತೆ ಸರ್ಕಾರವನ್ನು ಕೋರುವ ಶ್ರೀ ಕೆ. ಸಿದ್ದಯ್ಯನವರ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಶ್ರೀ ಪಿಾರ್ ನೂರ್ ಹುಸೇನರು ಮಾತನಾಡಿ, ಮಹಾರಾಣಿ ಹೈಸ್ಕೂಲಿನಲ್ಲಿ ಸ್ಥಳ ಸಂಕೋಚ

ಪೌರಸಭೆಯ ಉಪ ಸಮಿತಿಗಳು

ಮೈಸೂರು ೪

ಪುರಸಭೆಯ ಮುಂದುವರಿದ ಅಧಿವೇಶನವು ನೆನ್ನೆ ನಡೆದು ಉಪ ಸಮಿತಿಗಳಿಗೆ ಕೆಳಗೆ ಕಂಡಂತೆ ಸದಸ್ಯರನ್ನು ಆರಿಸಲಾಯಿತು

ಆಡಳಿತ ಸಮಿತಿ:- ಶ್ರೀಗಳಾದ ಕೆ. ಪುಟ್ಟಸ್ವಾಮಿ, ಟಿ. ನರಸಿಂಹಯ್ಯಂಗಾರ್, ಫಾ|| ಅಡಿಯೋ, ಕೆ. ಸಿದ್ದಯ್ಯ, ಬಿ.ಎಲ್ ಕೆಂಗೇಗೌಡ, ಬಿ. ಕೆ. ಪುಟ್ಟಯ್ಯ, ಸಿ. ಎಲ್. ನಾರಾಯಣರಾವ್ ಮತ್ತು ಎಂ. ಸಿ ಮಹದೇವಸ್ವಾಮಿ.

ಕಾಂಗಾರಿ ಸಮಿತಿ:- ಶ್ರೀಗಳಾದ ಎಸ್. ಲಿಂಗಣ್ಣ, ಜೆ. ಎ. ಕುಟ್ಟಿನೋ, ಕೆ. ಕರಿಯಣ್ಣ ಮತ್ತು ಚೌಡಯ್ಯ

ಆರೋಗ್ಯ ಸಮಿತಿ:- ಶ್ರೀಗಳಾದ ಬಿ. ಜಿ. ದಾಸ್, ಎ. ಕೃಷ್ಣಮೂರ್ತಿರಾವ್, ಎಂ. ವೆಂಕಟಲಿಂಗಯ್ಯ ಮತ್ತು ಶ್ರೀನಿವಾಸನ್.

ಟ್ಯಾಪ್ಪಾಲ್ ಸಮಿತಿ:- ಶ್ರೀಗಳಾದ ಡಿ. ಲಿಂಗಯ್ಯ, ಜೋಗಿಸಿದ್ದಯ್ಯ, ಶ್ರೀಕಂಠಶರ್ಮ ಮತ್ತು ಜಿ ಆರ್. ರಂಗಸ್ವಾಮಯ್ಯ

ಕಾನೂನು ಸಮಿತಿ:- ಶ್ರೀಗಳಾದ ಶ್ರೀಕಂಠಶರ್ಮ, ಟಿ. ನರಸಿಂಹಯ್ಯಂಗಾರ್ ಮತ್ತು ಬಿ. ಎಲ್ ಕೆಂಗೇಗೌಡ

ಲೆಕ್ಕ ಪತ್ರಗಳ ಸಮಿತಿ: ಶ್ರೀಗಳಾದ ಎಂ ವೆಂಕಟಲಿಂಗಯ್ಯ, ಜಿ. ಎಸ್ ರಾಮಕೃಷ್ಣಯ್ಯ ಮತ್ತು ಎಸ್. ಗೋವಿಂದಯ್ಯ

ಕುದುರೆ ಜೂಜಿನ ಮೇಲೆ ಪಣ ಕಟ್ಟಿದವರಿಗೆ ಜುಲ್ಮಾನೆ

ಕಳೆದ ಶನಿವಾರ ಮಕ್ಕಾಜಿ ಚೌಕದಲ್ಲಿ ಕೃಷ್ಣಾಜಿರಾವ್ ಮತ್ತು ಅಮಿಾರ್ ಎಂಬುವರೂ, ಸಯ್ಯಾಜಿರಾವ್ ರಸ್ತೆಯಲ್ಲಿ ಆರ್. ಎಲ್. ಮೂರ್ತಿರಾವ್ ಎಂಬಾತನೂ ಕುದುರೆ ಜೂಜಿನ ಮೇಲೆ ಪಣ ಕಟ್ಟುತ್ತಿದ್ದರೆಂದು ಅವರ ಮೇಲೆ ದೇವರಾಜ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಮೊನ್ನೆ ನಗರದ ದ್ವಿತೀಯ ನ್ಯಾಯಾಧೀಶರು ತಲಾ ೨೦ ರೂ ಜುಲ್ಮಾನೆ ವಿಧಿಸಿದರು

ದಿಂದಾಗಿ ಶಾಖಾನೆಗಳ ಕೆಲಸದಂತೆ ದಿನವೂ ಎರಡು ತಂಡಗಳಲ್ಲಿ ನಡೆಸಬೇಕೆಂದು ಇತ್ತೀಚೆಗೆ ತೀರ್ಮಾನಿಸಿದ್ದಾರೆಂದೂ, ಅದು ವಿದ್ಯಾರ್ಥಿಗಳಿಗೆ ಒಳ್ಳೆಯದಲ್ಲವೆಂದೂ, ಇದನ್ನು ತಪ್ಪಿಸಲು ನಗರದ ದಕ್ಷಿಣ ಭಾಗವೇ ಅಲ್ಲದೆ ಉತ್ತರ ಭಾಗದಲ್ಲೂ ಅಲ್ಲಿನವರ ಸೌಕರ್ಯಕ್ಕಾಗಿ ಒಂದು ಬಾಲಕಿಯರ ಪ್ರೌಢಶಾಲೆಯನ್ನು ವಸ್ತು ಪ್ರದರ್ಶನ ಕಟ್ಟಡದಲ್ಲಿ ತೆರೆಯುವಂತೆ ಸರ್ಕಾರವನ್ನು ಒತ್ತಾಯಪಡಿಸಬೇಕೆಂದೂ ನುಡಿದರು.

ಪೌರಸಭೆಗೆ ಸೇರಿದ ಜಾಗದ ಮೇಲೆ ಒತ್ತುವರಿ ಮಾಡಿ ಕಟ್ಟಿರುವ ಎಲ್ಲಾ ಕಟ್ಟಡಗಳ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಿ, ಎಲ್ಲರಿಗೂ ಒಂದೇ ತೆರನಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಕೋರುವ ಶ್ರೀ ಎಂ ಎ ತಿಮ್ಮಯ್ಯನವರ ನಿರ್ಣಯವನ್ನು ಆಡಳಿತ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಯಿತು

ದೇವರಾಜ ಮೊಹಲ್ಲಾ ಕುಂಬಾರ ಕೊಪ್ಪಲಿನಲ್ಲಿ ಕೇವಲ ಮೂರು ಬಾವಿಗಳಿದ್ದು ನೀರಿಗೆ ತೊಂದರೆಯಾಗಿರುವುದರಿಂದ ಅಲ್ಲಿಗೆ ನೀರಿನ ಪಬ್ಲಿಕ್ ಹಾಕಿ ನಲ್ಲಿಗಳನ್ನು ಕೊಡಬೇಕೆಂದು ಕೋರುವ ಶ್ರೀ ದೊಡ್ಡತಿಮ್ಮಯ್ಯನವರ ನಿರ್ಣಯವು ಅಂಗೀಕೃತವಾಯಿತು.

ಸಂಗೀತ ತರಗತಿಗಳು

ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ರಾಮ ಸಹಾಯ ಸಂಘದ ಆಶ್ರಯದಲ್ಲಿ ಸಂಗೀತ ತರಗತಿಗಳು ಪ್ರತಿ ಸೋಮವಾರ, ಬುಧವಾರ, ಶನಿವಾರಗಳಲ್ಲಿ ಸಂಜೆ 4-30ರಿಂದ 6ರ ವರೆಗೆ ವಿ|| ಟಿ ಆರ್. ಶ್ರೀನಿವಾಸನ್‌ರವರಿಂದ ನಡೆಯುತ್ತಿವೆ. ಸೇರಬಿಚ್ಛಿಸುವವರು ಬಂದು ವಿಚಾರಿಸಬಹುದು.

ವಿವಾಹ ಮಹೋತ್ಸವ

ನಗರದ ಔಷಧಿ ಮತ್ತು ಕನ್ನಡಕಗಳ ವ್ಯಾಪಾರಿಗಳಾದ ಶ್ರೀ ಟಿ ಸಿ. ನಟರಾಜ್‌ರವರು ತಮ್ಮ ಕುಮಾರ ಶ್ರೀ ಟಿ.ಎನ್. ರಾಮನಾಥರವರಿಗೆ ಮಧುರಾಸಿಪಲ್ಲಿಯ ದಕ್ಷಿಣ ರೈಲ್ವೆ ಚೀಫ್ ಕ್ಯಾಷಿಯರ್ ಶ್ರೀ ಎಂ. ಎ. ರಂಗಸ್ವಾಮಿ ಪಿಳ್ಳೆಯವರ ಕುಮಾರಿ ಸೌ|| ಗುಣಸುಂದರಿಯನ್ನು ತಂದುಕೊಂಡು ನೆನ್ನೆ ನಗರದ ಶ್ರೀ ವಾಸವೀ ನಿಲಯದಲ್ಲಿ ವಿವಾಹವನ್ನು ನೆರವೇರಿಸಿದರು. ಸಂಜೆ ಸ್ವಾಗತ ಸಮಾರಂಭವು ಏರ್ಪಾಡಾಗಿತ್ತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೫ ದೇವರನಾಮ. ೬-೧೫ ಗಾಂಧಿ ಸ್ಮೃತಿ. ೬-೩೦ ರಿಕಾರ್ಡ್. ೮-೧೫ ಹಿಂದಿ ಪಾಠ ಮಧ್ಯಾಹ್ನ ೧೨ ಎಂ ಎಸ್ ಕಲ್ಯಪುಳ್ಳಿ ಅಯ್ಯಂಗಾರ್-ಸಂಗೀತ. ೧೨-೩೦ ವನಿತಾ ವಿಹಾರ. ೧-೨೦ ರಿಕಾರ್ಡ್ ೧-೫೦ ಸಂಗೀತ. ೨-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೬-೧೦ ನೃತ್ಯಗೀತ. ೬-೩೦ ಕನ್ನಡ ಭಾಷಣ. ೮ ಮದ್ರಾಸಿನಂತೆ. ೯-೧೫ ಸಮಾಚಾರ ದರ್ಶನ. ೯-೨೫ ಗಾನಕಲ್ಪ. ೯-೩೦ ರಂಗಭೂಮಿ: ಕನ್ನಡದಲ್ಲಿ ಕಾರ್ಯಕ್ರಮ. ೧೦ ಉರ್ದು ಕವನ. ೧೦-೧೪ ಸಂಗೀತ ಸಾಮ್ರಾಜ್ಯ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	೩೪ ೬೨	
ರಷ್ಕಜಾಡಿ	೨೬ ೫೦	೩೮ ೬೨
ಬಂಗಾರಕಿ	೨೯ ೦೦	೨೯ ೨೫
ಕಡ್ಡಿ	೨೫ ೦೦	೨೫ ೦೨
ಕಾರ್ ಸಣ್ಣ	೨೫ ೭೫	೨೭ ೫೦
ರಾಗಿ	೩೩ ೫೦	೩೬ ೫೦
ಜೋಳ	೯೨ ೦೦	
ಕಡಲೆಕಾಯಿ	೧೨ ೨೫	೨೦ ೬೨
ಹುಚ್ಚೆಳ್ಳು	೯೩ ೦೦	
ಎಳ್ಳು	೭೭ ೦೦	೭೯ ೦೦
ತೊಗರಿ	೩೧ ೭೫	೩೩ ೭೫
ಹೆಸರು	೩೫ ೦೦	೫೭ ೫೭
ಹುರುಳಿ	೯೦ ೦೦	೫೩ ೦೦
ಕಡಲೆಕಂಡ	೨೭ ೦೨	೨೩ ೫೦
ಧನಿಯ	೯೫ ೦೦	೯೫ ೬೨
ಉದ್ದು	೫೭ ೫೦	೫೭ ೭೫
ಹುಣಸೆಬೀಜ	೯ ೬೨	೬ ೨೫
ಹುಣಸೇಹಣ್ಣು	೩ ೩೭	೩ ೫೭
ಮೆಣಸಿನಕಾಯಿ	೧೭ ೦೦	೧೭ ೩೭
ತೆಂಗಿನಕಾಯಿ	೯೦ ೦೦	೨೯೦ ೦೦

WANTED One Sales-man Pay Rs. 45 only. Rs. 500 deposit essential. Apply :—
'X' C/o SADHVI

ಮಹಾ ಕವಿ ಲಕ್ಷ್ಮೀಶ ವಿರಚಿತ
ಕನ್ನಡ ಜೈಮಿನಿ ಭಾರತ
1957 Edition : Re 1-0-0
Mysore Code Replacement
Vol. I No. I
Rs. 3-8-0
ಕೃಷ್ಣಾ ಕಂಪೆನಿ,
ನೂರಡಿ ರಸ್ತೆ, ಮೈಸೂರು

Edited, Printed and Published by A. R Nagarajan at Sadhvi Press, D. Subbiah Road Mysore

ಜಪಾನಿನಲ್ಲಿ ಇನ್‌ಫ್ಲುಯೆಂಜಾ ನಂತರ ಆಮಶಂಕೆ

ಜಪಾನಿನಲ್ಲಿ ಇತ್ತೀಚೆಗೆ ಇನ್‌ಫ್ಲುಯೆಂಜಾ ರೋಗವು ಮತ್ತೊಂದು ವಿಧವಾಗಿ ಹಬ್ಬಿರುವುದೆಂದೂ, ಅದು ಈಗ ಆಮಶಂಕೆ ರೂಪದಲ್ಲಿ ಪ್ರಬಲವಾಗಿ ಹರಡಿ ೩೪,೩೩೦ ಮಂದಿ ಆಮಶಂಕೆಯಿಂದ ನರಳುತ್ತಿರುವುದಾಗಿಯೂ ಹೇಳಲಾಗಿದೆ. ಈ ವರ್ಷಾದಿಯಿಂದ ಅಲ್ಲಿ ಆಮಶಂಕೆಯು ಪರಿಣಾಮವಾಗಿ ೧,೦೫೬ ಜನರು ಮಡಿದಿರುವರು. ಹೊಸ ರೀತಿಯ ಇನ್‌ಫ್ಲುಯೆಂಜಾ ಪಶ್ಚಿಮ ಮತ್ತು ದಕ್ಷಿಣ ಜಪಾನಿನಲ್ಲಿ ಹರಡಿದೆ. ಇನ್‌ಫ್ಲುಯೆಂಜಾದಿಂದ ಅಲ್ಲಿ ಒಟ್ಟು ೮,೯೭,೦೦೦ ಜನರು ಪೀಡಿತರಾಗಿದ್ದರು.

ಚೀಣಾದ ಮೇಲೆ ರಾಷ್ಟ್ರೀಯರ ಹಸ್ತ ಪತ್ರಿಕೆ ಪ್ರಚಾರ

ರಾಷ್ಟ್ರೀಯ ಚೀಣಾದ ವಿಮಾನಗಳು ಮೊನ್ನೆ ಪ್ರಜಾ ಚೀಣಾದ ಮೇಲೆ ಹಾರಾಡಿ, ಅಣು ಬಾಂಬು ಧಾಳಿಗಳನ್ನು ತಪ್ಪಿಸಿಕೊಳ್ಳುವ ಬಗೆಯನ್ನು ವಿವರಿಸುವ ಲಕ್ಷಗಟ್ಟಲೆ ಹಸ್ತ ಪತ್ರಿಕೆಗಳನ್ನು ಚೆಲ್ಲಿದುವೆಂದು ವರದಿಯಾಗಿದೆ

ಒಲಂಪಿಯಾ ಟಾಕೀಸ್
ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ
ಜಯಪ್ರದ 3 ನೇ ವಾರ
ಯಶಸ್ವಿಯಾಗಿ ನಡೆದಿದೆ
ಘೋಟೆ ಬಾಬು
ಪಾತ್ರ:- ಪದ್ಮಿನಿ, ಶೇಖರ್, ಅಭಿಭಟ್ಟಾಚಾರ್ಯ ಮತ್ತು ಇತರ

SREE GAYATHRI TALKIES
Grand Gala opening of
RUSSIAN FILM FESTIVAL WEEK
Daily Change of Programmes
On 5-7-57
SPRING FROSTS
With:- Golden Antelope
(Colour Cartoon,
On 6-7-57
Rumyanstsev Case
With - Fox the Builder
(Colour Cartoon)
On 7-7-57
Russian Tournament
(1956 Colour)-With:- a. Flight to the Moon, b Sunday in Leningrad
(Documentary)
On 8-7-57
TWELFTH NIGHT
With Side Reels
On 9-7-57
Russian Daring Circus
With Side Reels
On 10-7-57
TWO CAPTAINS
With Relics of Urartu Civilization
On 11-7-57
Admiral Ushakov
With - Frog Princess

ಚಾಮುಂಡೇಶ್ವರಿ ಟಾಕೀಸ್
5-7-57ರಿಂದ : ಒಂದು ವಾರ ಮಾತ್ರ : ದಿನವೂ 2 ಆಟಗಳು
★ ಕು ಮಾ ರಿ ★
(ತ ಮಿ ಳು)
ನಟ ವರ್ಗ:- ಎಂ. ಜಿ ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜನಿ,
ದೊರೈರಾಜ್ ಮುಂತಾದವರು

ರ ಣ ಜಿ ತ್ ★ 5-7-57ನೇ ಶುಕ್ರವಾರದಿಂದ ಅಮೋಘ ಪ್ರಾರಂಭ : ನಿಮ್ಮನ್ನು ಕಣ್ಮರಳಿಸುವ ಜಾನಿ ವಾಕರನ ಹಾಸ್ಯ ಮತ್ತು ಕಿವಿಗಿಂಪಾದ ಓ. ಪಿ. ನಯ್ಯಾರ್‌ರವರ ಸಂಗೀತಗಳಿಂದ ಕೂಡಿದ
ಸಾದಿಕ್‌ರವರ ಹಿಂದಿ ಕಲಾಕೃತಿ
★ ದು ನಿ ಯಾ ರಂ ಗ್ ರಂ ಗೀ ಲಿ ★
ಪಾತ್ರ ವರ್ಗ:—ಶ್ಯಾಮಾ, ಜಾನ್ ಉಸ್ಮಾನಿ, ರಾಜೇಂದ್ರ ಕುಮಾರ್, ಹೆಲೆನ್ ಮುಂತಾದವರು — ದಿಗ್ದರ್ಶಕ : ಸಾದಿಕ್

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ಚಂದಾದಾರರಾಗಿರಿ



ಇಂದಿನ ಪತ್ರಿಕೆ 2 ನಯಾ ಪೈಸೆ

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೧೩] SADHVI FRIDAY 5—7—1957 ಮೈಸೂರು : ಶುಕ್ರವಾರ ೫—೭—೧೯೫೭ : [ಸಂಚಿಕೆ : ೩೩೦

ಸೋಮನಾಥಯ್ಯರ್-ಮಲ್ಲಿಮಠ್ ಹೈಕೋರ್ಟ್ ಜಡ್ಜರು

ಸಹಾಯ ಪಡೆವ ಶಾಲಾ ಅಧ್ಯಾಪಕರಿಗೆ ಸರ್ಕಾರಿ ಮಟ್ಟದ ವೇತನ

ತನಿಖೆಗಾಗಿ ಸಮಿತಿಗಳು

ಬೆಂಗಳೂರು ೫

ಜಿಲ್ಲಾ ಬೋರ್ಡು ಮತ್ತು ಇತರ ಸಹಾಯ ಪಡೆಯುವ ಶಾಲೆಗಳ ಅಧ್ಯಾಪಕರಿಗೆ ಸರ್ಕಾರದ ನೌಕರರಂತೆ ಸಂಬಳದ ಪ್ರಮಾಣವನ್ನು ಗೊತ್ತುಪಡಿಸುವ ಬಗ್ಗೆ ಸರ್ಕಾರದವರು ಎರಡು ತನಿಖೆ ಸಮಿತಿಗಳನ್ನು ನೇಮಿಸಲಿರುವರು. ಕಳೆದ ಜನವರಿಯಲ್ಲಿ ಸರ್ಕಾರಿ ನೌಕರರಿಗೆ ಸಂಬಳವನ್ನು ಹೆಚ್ಚಿಸಿ ಇತರ ಸಂಸ್ಥೆಗಳವರೂ ಅದನ್ನು ಅನುಸರಿಸಬಹುದೆಂದು ಆಶಿಸಿದ್ದರೂ ಜಿಲ್ಲಾ ಬೋರ್ಡುಗಳು ಈ ವಿಚಾರವಾಗಿ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸಹಾಯ ಪಡೆಯುವ ಖಾಸಗೀ ಶಾಲೆಗಳಲ್ಲಿ ಹೆಚ್ಚು ವೇತನ ಕೊಡದಿರುವ ಬಗ್ಗೆ ಆ ಸಂಸ್ಥೆಗಳ ಹುಟ್ಟುವಳಿಯನ್ನು ಹೆಚ್ಚಿಸುವ ವಿಚಾರವನ್ನು ಸರ್ಕಾರದವರು ಗಮನಿಸಿರುತ್ತಾರೆ. ಇವುಗಳ ಬಗ್ಗೆ ತನಿಖೆ ಮಾಡಿ ಶಿಫಾರಸು ಮಾಡುವಂತೆ ಎರಡು ಸಮಿತಿಗಳನ್ನು ಸ್ಥಾಪಿಸಲಾಗುವುದು.

ಮಾಧ್ಯಮಿಕ ವಿದ್ಯಾಭ್ಯಾಸದ ಬೋರ್ಡಿನ ಪುನರ್ವ್ಯವಸ್ಥೆ

ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಬಿ.ಎಂ ಕೃಷ್ಣರವರ ಅಧ್ಯಕ್ಷತೆಯಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸದ ಸಮಿತಿಯನ್ನು ಸರ್ಕಾರದವರು ಪುನರ್ರಚಿಸಿರುತ್ತಾರೆ. ಅದರಲ್ಲಿ ಹೆಡ್ ಕ್ವಾರ್ಟರ್ಸ್ ಸೀನಿಯರ್ ಮತ್ತು ಅಸಿಸ್ಟೆಂಟ್ ಡಿ ಡಿ ಪಿ ಐಗಳು; ಬೆಂಗಳೂರು, ಮೈಸೂರು, ಚಿತ್ರದುರ್ಗ, ಧಾರವಾಡ ಮತ್ತು ರಾಯಚೂರು ಡಿವಿಜನ್ ಡಿ. ಡಿ. ಪಿ ಐಗಳು; ಡಾ॥ ಆರ್. ನಾಗನಗೌಡ, ಪ್ರೊ॥ ಟಿ. ಎಸ್. ಶ್ರೀಕಂಠಯ್ಯ, ವಿ ಕೆ ಗೋಕಾಕ್, ಮಣಿಪಾಲದ ಟಿ ಎ. ಪೈ, ಹೆಚ್. ವಿ ಕಟ್ಟಿಮನಿ, ಟಿ. ಸಿಂಗಾರವೇಲು ಮುದಲಿಯಾರ್, ಡಾ॥ ಎಂ ಸಿದ್ಧಲಿಂಗಯ್ಯ ಮುಂತಾದವರು ಸದಸ್ಯರಾಗಿರುವರು.

ದೋಣಿ ಮುಳುಗಿ ೫೦ ಜನರ ಮರಣ

ಬಿಹಾರಿನ ಷಹಾಪುರದಿಂದ ಡಾಲ್ಟನ್‌ಗಂಜಿಗೆ ನೆನ್ನೆ ಕೊಯಲ್ ನದಿಯಲ್ಲಿ ಬರುತ್ತಿದ್ದ ದೋಣಿಯೊಂದು ಮುಳುಗಿ ಅದರಲ್ಲಿದ್ದ ೭೦ ಮಂದಿಯ ಪೈಕಿ ೫೦ ಜನರು ಮೃತಪಟ್ಟಿರುತ್ತಾರೆ. ಪೋಲೀಸರು ೧೫ ಮಂದಿಯನ್ನು ರಕ್ಷಿಸಿರುತ್ತಾರೆ. ಅಧ್ಯಾಪಕರೊಬ್ಬರು ಈಜಿ ದಡ ಸೇರಿರುವರು ನದಿಯಲ್ಲಿ ಪ್ರವಾಹವು ಬಂದಿದೆ. ದೋಣಿಯಲ್ಲಿ ರಂಧ್ರವಿದ್ದಿತೆಂದು ಹೇಳಲಾಗಿದೆ.

ಫ್ಲೂ ವ್ಯಾಧಿಗೆ ಚಿಕಿತ್ಸೆ

ನಾಳೆ ದಿನ ಒಂಟಿಕೊಪ್ಪಲು, ಲಕ್ಷ್ಮೀಪುರಂನ ಕೊಪ್ಪಲುಗಳಲ್ಲಿ ಡಾ॥ ಬಿ. ಎಸ್. ಸೂರ್ಯನಾರಾಯಣರಾವ್, ನರಸಿಂಹರಾಜ ಮೊಹಲ್ಲಾ ಮತ್ತು ಊರನಗೆರೆಗಳಲ್ಲಿ ಡಾ॥ ಕುಂದಗೋಳ್ಕರ್ ಮತ್ತು ರಾಜಾರಾಂ ಅಗ್ರಹಾರ ಮತ್ತು ನಜರಬಾದ್ ಪ್ರದೇಶದಲ್ಲಿ ಡಾ॥ ಬಿ. ಶೇಷ ನಾರಾಯಣ ಅಯ್ಯಂಗಾರ್ಯರು ಫ್ಲೂ ವ್ಯಾಧಿಗಾಗಿ ಉಚಿತ ಚಿಕಿತ್ಸೆ ನಡೆಸುವರು.

ನಗರದಲ್ಲಿ ಫ್ಲೂ ನಿವಾರಣೆ ಕ್ರಮ

ಮೈಸೂರು ೪

ಇನ್‌ಫ್ಲುಯೆಂಜಾ ವ್ಯಾಧಿಯ ನಿವಾರಣೆಗಾಗಿ ನಗರದ ಪೌರಸಭಾ ಆರೋಗ್ಯ ಇಲಾಖೆಯವರು ಚಲಿಸುವ ಆಸ್ಪತ್ರೆ ಮೂಲಕ ಔಷಧವನ್ನು ಕಳೆದ ೩ರಿಂದ ಹಂಚುತ್ತಿರುವರು ಅವರು ಈಗಾಗಲೇ ಮಂಡಿ ಮೊಹಲ್ಲಾ, ಫೋರಂ ಕೇರಿ, ಕನ್ನೇಗೌಡನ ಕೊಪ್ಪಲು, ಬೆಳ್ಳಿಕಟ್ಟೆಗೆ ಕೆಳಗಿನ ಮತ್ತು ಮೇಲಿನ ಬೀದಿ. ಕುದಿಗಾ, ಇಟ್ಟಿಗೆಗೂಡು, ಜಲಪುರಿ ಮುಂತಾದ ನಾನಾ ಕ್ಷೇತ್ರಗಳಲ್ಲಿ ಔಷಧವನ್ನು ಹಂಚಿರುತ್ತಾರೆ.

ಇದುವರೆಗೆ ೧೧೦೦೦ ಮಂದಿಗೆ ವೈದ್ಯಕೀಯ ಸಹಾಯ ದೊರೆತಿದೆ ನೆನ್ನೆ ಜಲಪುರಿ, ಕೇರಿಗಳಲ್ಲೂ, ಈ ದಿನ ಸೋನಾರ್ ಬೀದಿ ಪ್ರದೇಶ ಮತ್ತು ಸುಣ್ಣದಕೇರಿಯಲ್ಲೂ ಔಷಧಿಯನ್ನು ವಿನಿಯೋಗಿಸಲಾಯಿತು ಮೊನ್ನೆ ೩೦ ಕಡೆಗಳಿಂದ ಬಂದಿರುವ ವರದಿಪ್ರಕಾರ ಅರ್ಧ ಭಾಗದಲ್ಲಿ ವ್ಯಾಧಿಯು ಹೊಸದಾಗಿ ತಗಲಿದಂತೆ ಕಂಡುಬಂದಿಲ್ಲ

ಪಾಕ್ ಆಕ್ರಮಣ ಕಡೆಗಣಿಸಿದರೆ ಕಾಶ್ಮೀರ ಪ್ರಶ್ನೆ ನಿವಾರಣೆ ಅಸಾಧ್ಯ

ಪ್ರಧಾನಿ ನೆಹರೂರವರ ಸ್ಪಷ್ಟ ನುಡಿ

ಕಾಶ್ಮೀರದಲ್ಲಿ ಪಾಕಿಸ್ತಾನವು ನಡೆಸಿರುವ ಆಕ್ರಮಣವನ್ನು ಕಡೆಗಣಿಸಿದರಾಗಲೀ, ಆ ಬಗ್ಗೆ ಮೌನವನ್ನು ಧರಿಸಿದರಾಗಲೀ ಕಾಶ್ಮೀರದ ಪ್ರಶ್ನೆಯ ನಿವಾರಣೋಪಾಯವನ್ನು ಭಾರತವು ಅಂಗೀಕರಿಸುವುದಿಲ್ಲವೆಂದು ಪ್ರಧಾನಿ ನೆಹರೂರವರು ನೆನ್ನೆ ಲಂಡನ್ನಿನಲ್ಲಿ ಹೇಳಿದರು ವಿಶ್ವಸಂಸ್ಥೆಯ ನಿರ್ಣಯವನ್ನು ಭಾರತವು ಪಾಲಿಸಿಲ್ಲವೆಂದು ಹೇಳಲಾಗುತ್ತಿರುವುದೆಂದೂ, ಯಾವ ಸಂದರ್ಭದಲ್ಲೂ ವಿಶ್ವಸಂಸ್ಥೆಗೆ ಕೊಟ್ಟ ಯಾವ ಭರವಸೆಯನ್ನೂ ಭಾರತವು ಉಪೇಕ್ಷಿಸಿಲ್ಲವೆಂದೂ ನುಡಿದರು. ಕಾಶ್ಮೀರದಲ್ಲಿ ಭಾರತವು ಏನೇ ಮಾಡಿರಲಿ, ಪಾಕಿಸ್ತಾನವು ಅಲ್ಲಿ ಪ್ರವೇಶಿಸಲು ಕಾರಣವೇ ಇಲ್ಲವೆಂದು ಅವರು ಸೂಚಿಸಿದರು. ಕಾಶ್ಮೀರದ ಸ್ಥಿತಿಯು ತಮ್ಮ ವೈಯುಕ್ತಿಕವಾದುದಲ್ಲವೆಂದೂ, ಇದು ಭಾರತದ ಇಡೀ ಪ್ರಜಾವರ್ಗದ್ದೆಂದೂ ಅವರು ಸ್ಪಷ್ಟಪಡಿಸಿದರು. ಆದ್ದರಿಂದ ತಾವೊಬ್ಬರೇ ಆಗಲೀ, ಭಾರತದಲ್ಲಿ ಇನ್ಯಾವ ವ್ಯಕ್ತಿಯೇ ಆಗಲೀ ಏಕೈಕವಾಗಿ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸುವ ಪ್ರಶ್ನೆಯೇ ಇಲ್ಲವೆಂದೂ ಅವರು ಸೂಚಿಸಿದರು.

ಇರಾನಿನ ಭೂಕಂಪದಲ್ಲಿ ೧,೦೦೦ ಮರಣಗಳು

ಇರಾನಿನ ಭೂಕಂಪದಲ್ಲಿ ೧,೦೦೦ ಜನರು ಮಡಿದು,೪-೫ ಸಾವಿರ ಮಂದಿಗೆ ಗಾಯವಾಗಿರುವುದಾಗಿಯೂ, ೫೦ ಸಾವಿರ ಪ್ರಜೆಗಳು ಮನೆ ಮಠಗಳನ್ನು ಕಳೆದುಕೊಂಡಿರುವರೆಂದೂ ವರದಿಯಾಗಿದೆ. ಟೆಹರಾನಿಗೆ ಈಶಾನ್ಯದಲ್ಲಿರುವ ಲಾರ್ಜಾನ್‌ನಲ್ಲಿ ರಾತ್ರಿಹೊತ್ತು ಭೂಕಂಪವಾದುದೇ ಇಷ್ಟು ಭಾರಿ ಅನಾಹುತ ಸಂಭವಿಸಲು ಕಾರಣವಾಗಿದೆ

○ ಪಂಜಾಬಿನ ಉಪ ಮಂತ್ರಿ ಯಶಪಾಲ್‌ರವರು ರಾಜಕೀಯ ಕಾರಣಕ್ಕಾಗಿ ರಾಜೀನಾಮೆ ಯಿತ್ತಿರುವರು.

ಹೈಕೋರ್ಟಿನ ನೂತನ ನ್ಯಾಯಾಧೀಶರುಗಳು

ಸೋಮನಾಥ ಅಯ್ಯರ್ ಮತ್ತು ಮಲ್ಲಿಮಠರವರ ನೇಮಕ ಖಚಿತ

ಸ್ವಂ.ಸು. ತಂತಿ] ಬೆಂಗಳೂರು ೫

ಮಾಜಿ ಅಡ್ವೊಕೇಟ್ ಜನರಲ್ ಶ್ರೀ ಎ. ಆರ್ ಸೋಮನಾಥ ಅಯ್ಯರ್ ಮತ್ತು ರೆವಿನ್ಯೂ ಬೋರ್ಡಿನ ಅಧ್ಯಕ್ಷ ಶ್ರೀ ಮಲ್ಲಿಮಠರವರನ್ನು ಸಂಸ್ಥಾನದ ಹೈಕೋರ್ಟಿನ ನ್ಯಾಯಾಧೀಶರುಗಳಾಗಿ ನೇಮಿಸಲಾಗುವುದೆಂದೂ, ಈ ಬಗ್ಗೆ ಬರುವ ವಾರ ಆಜ್ಞೆಯಾಗಲಿರುವುದೆಂದೂ ತಿಳಿದುಬಂದಿದೆ. ಉಳಿದ ನ್ಯಾಯಾಧೀಶರುಗಳ ನೇಮಕಕ್ಕೆ ಇನ್ನೂ ಸ್ವಲ್ಪ ಕಾಲ ಹಿಡಿಯುವುದು.

ಹುಬ್ಬಳ್ಳಿ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಲ್ ಆಗಿ ಕೊಪ್ಪೀಕರ್

ಮಣಿಪಾಲದ ಕಾಲೇಜಿನಲ್ಲಿರುವ, ಬೊಂಬಾಯಿಯ ನಿವೃತ್ತ ಸರ್ಜನ್ನರಾದ ಡಾ॥ ಕೊಪ್ಪೀಕರ್‌ರವರನ್ನು ಹುಬ್ಬಳ್ಳಿಯ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಲ್ಲರಾಗಿ ಆರು ವರ್ಷಕ್ಕೆ ನೇಮಿಸಲಾಗುವುದೆಂದು ಗೊತ್ತಾಗಿದೆ ಕಾಲೇಜು ಬರುವ ತಿಂಗಳು ಆರಂಭವಾಗುವುದು ಅದಕ್ಕೆ ಕೇಂದ್ರ ಸರ್ಕಾರದವರು ೬೦ ಲಕ್ಷ ರೂ ಸಹಾಯದ ವಾಗ್ದಾನ ಮಾಡಿರುತ್ತಾರೆ

ಕಲ್ಕತ್ತಾ ವಕೀಲರಿಂದ ಸಂಭಾವನೆಯಲ್ಲಿ ಮೋಸ

ಕಲ್ಕತ್ತಾದಲ್ಲಿ ಸರ್ಕಾರದ ಪರ ವಾದಿಸುವ ವಕೀಲರು ತಮ್ಮ ಕೆಲಸಕ್ಕಾಗಿ ಸಂಭಾವನೆಯನ್ನು ಸರ್ಕಾರದ ಕೋರಿಕೆ ಮೇಲೆ ಮೋಸ ಮಾಡಿಕೊಂಡಿರುವರೆಂದು ಕೇಂದ್ರ ನ್ಯಾಯಾಂಗ ಮಂತ್ರಿ ಅಶೋಕ ಸೇನರವರು ತಿಳಿಸಿರುತ್ತಾರೆ. ರಾಜ್ಯದ ಅಭ್ಯುದಯ ಕಾರ್ಯಗಳು ಹೆಚ್ಚಿದಂತೆಲ್ಲಾ ಸರ್ಕಾರದ ಮೇಲೆ ದಾವಾ ವ್ಯವಹಾರಗಳು ವಿಪರೀತವಾಗಿರುವುವೆಂದೂ, ಅದರಿಂದ ಹೆಚ್ಚು ಹಣ ವ್ಯಯವಾಗುತ್ತಿರುವುದೆಂದೂ ಅವರು ಹೇಳುತ್ತಾರೆ ಸರ್ಕಾರದವರ ಮಿತವ್ಯಯ ಚಳುವಳಿಗೆ ಸಹಾಯ ಮಾಡುವುದಾಗಿ ಕಲ್ಕತ್ತದ ಪ್ರಮುಖ ವಕೀಲರುಗಳು ಸೂಚಿಸಿರುತ್ತಾರೆ

ವಿಕ್ಟೋರಿಯಾ ವಿಗ್ರಹದ ಬದಲು ಝಾನ್ಸಿ ಲಕ್ಷ್ಮೀಬಾಯಿ ಪ್ರತಿಮೆ

ಗೋರಖಪುರದ ಟೌನ್‌ಹಾಲಿನಲ್ಲಿಡಲಾಗಿರುವ ವಿಕ್ಟೋರಿಯಾ ರಾಣಿಯವರ ವಿಗ್ರಹವನ್ನು ತೆಗೆದುಹಾಕಲಾಗಿದೆ. ಅದರ ಸ್ಥಾನದಲ್ಲಿ ಝಾನ್ಸಿ ಲಕ್ಷ್ಮೀಬಾಯಿಯವರ ಪ್ರತಿಮೆಯನ್ನು ಸ್ಥಾಪಿಸಲಾಗುವುದು.

ರಷ್ಯಾ ಮಂತ್ರಿಗಳ ಪದಚ್ಯುತಿ

ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಸ್ಥಾನಗಳಿಂದ ಉಚ್ಚಾಟನೆ ಹೊಂದಿರುವ ಮಾಲಟಾವ್, ಮಾಲೆಂಕಾವ್ ಮತ್ತು ಕಗಾನೋವಿಚ್ ಎಂಬ ಮೂವರು ನಾಯಕರನ್ನು ಉಪ ಪ್ರಧಾನಿಗಳು ಮತ್ತು ಮಂತ್ರಿ ಸ್ಥಾನಗಳಿಂದ ತಪ್ಪಿಸಲಾಗಿದೆ ಮಾಲೆಂಕಾವರ ಸ್ಥಾನದಲ್ಲಿ ಅಲೆಕ್ಸಿಪೆರ್ವೊಕಿನ್‌ರವರನ್ನು ನೇಮಿಸಲಾಗಿದೆ.

ಆನೇ ವನಮಹೋತ್ಸವ ನಡೆಸಲು ಸರ್ಕಾರದ ನಿರ್ಧಾರ

ಮೈಸೂರು ೫

ಈ ತಿಂಗಳಲ್ಲಿ ಆನೇ ವನಮಹೋತ್ಸವವನ್ನು ನಡೆಸಲು ಸರ್ಕಾರದವರು ನಿರ್ಧರಿಸಿರುತ್ತಾರೆ ವಿಸ್ತೃತ ಸಂಸ್ಥಾನವಾದ ಮೇಲೆ ಇದೇ ಮೊದಲು ಈ ಉತ್ಸವವನ್ನು ನಡೆಸುತ್ತಿರುವುದು. ಸಸಿಗಳನ್ನು ನೆಡಲು ಉತ್ತೇಜನವೀಯುವುದಕ್ಕಾಗಿ ೧೦೦ ಮತ್ತು ೫೦ ರೂ ಗಳ ಎರಡು ಬಹುಮಾನಗಳನ್ನು ಅತ್ಯುತ್ತಮ ಕೆಲಸ ಮಾಡುವ ಪ್ರತಿ ಜಿಲ್ಲೆಯ ಎರಡು ಹಳ್ಳಿಗಳಿಗೆ ಕೊಡಲು ನಿರ್ಧರಿಸಲಾಗಿದೆ ಈ ಉತ್ಸವವನ್ನು ನಡೆಸಲು ಎಲ್ಲರ ಸಹಕಾರವನ್ನು ಸರ್ಕಾರದವರು ಕೋರುತ್ತಾರೆ.

ಸಸಿಗಳನ್ನು ಮುಖ್ಯ ಅರಣ್ಯ ಇಲಾಖಾಧಿಕಾರಿಗಳು ಒದಗಿಸುವರು. ಕೊಡಗಿನ ಸರ್ಕಲ್ಲಿಗೆ ೧,೫೦,೦೦೦, ಬೆಳಗಾಂ ಸರ್ಕಲ್ಲಿಗೆ ೪ ಲಕ್ಷ, ಬಳ್ಳಾರಿ ಸರ್ಕಲ್ಲಿಗೆ ೫ ಲಕ್ಷ ಸಸಿಗಳನ್ನು ಕೊಡಲಾಗುವುದು ೫೦ ೭೦ ಸಾವಿರ ಸಸಿಗಳಾಗುವಷ್ಟು ಸುಮಾರು ೧೫೦೦ ಪೌಂಡು ಗೇರು ಬೀಜವನ್ನೂ ವಿತರಿಸಲಾಗುವುದು ಗೇರು ಬೀಜವು ಹೆಚ್ಚು ಡಾಲರ್‌ಗಳನ್ನು ತಂದುಕೊಡುವ ಬೆಳೆಯಾಗಿದೆ. ಜನರು ಮರಗಳನ್ನು ಸಿಕ್ಕಿದ ಹಾಗೆ ಕತ್ತರಿಸಬಾರದೆಂದೂ ಸೂಚಿಸಲಾಗಿದೆ

ಫ್ಲೂ ವ್ಯಾಧಿಯ ವರದಿ

ನೆನ್ನೆ ಮಧ್ಯಾಹ್ನದವರೆಗೆ ನಗರದಲ್ಲಿ ಹೊಸದಾಗಿ ೧೯೩ ಜನರಿಗೆ ಫ್ಲೂ ವ್ಯಾಧಿ ತಗುಲಿತ್ತು. ಸಾವುಗಳೇನೂ ಇಲ್ಲ ಒಟ್ಟು ವ್ಯಾಧಿಗ್ರಸ್ಥರ ಸಂಖ್ಯೆ ೩,೮೮೪ ಕಳೆದ ೩ ಗಳ ಸಂಖ್ಯೆ ಎರಡು ವಾರಗಳಲ್ಲಿ ಜಿಲ್ಲೆಯಲ್ಲಿ ಎಲ್ಲಿಯೂ ಕಾಲರಾ, ಪ್ಲೇಗು, ಸಿಡುಬು ಮುಂತಾದ ಅಂಟು ಜಾಡ್ಯಗಳಿರಲಿಲ್ಲ ೬,೫೦೭ ಜನರಿಗೆ ಇನ್‌ಫ್ಲುಯೆಂಜಾ ಬಂದು ಒಬ್ಬರು ಮಡಿದರೆಂದು ವರದಿಯಾಗಿದೆ.

ಸೆಪ್ಟೆಂಬರ್ ಎಂಜಿನಿಯರಿಂಗ್ ಪರೀಕ್ಷೆಗಳು

೧೯೫೭ನೇ ಸೆಪ್ಟೆಂಬರ್ ೨ನೇ ತಾರೀಕಿನಿಂದ ನಡೆಸಲು ಗೊತ್ತುಪಡಿಸಿದ್ದ ೧೯೫೭ನೇ ಸೆಪ್ಟೆಂಬರ್ ಎಂಜಿನಿಯರಿಂಗ್ ಪರೀಕ್ಷೆಗಳನ್ನು ಮುಂದುವರಿಸಿ, ೧೯೫೭ನೇ ಸೆಪ್ಟೆಂಬರ್ ೧೬ನೇ ತಾರೀಕು ಸೋಮವಾರ ನಡೆಯುವಂತೆ ಗೊತ್ತು ಪಡಿಸಲಾಗಿದೆ.

ಶರಾವತಿ ಯೋಜನೆಗೆ ಈ ವರ್ಷ ೭೦ ಲಕ್ಷ ರೂ. ಹೆಚ್ಚು ಹಣ

ಶರಾವತಿ ಯೋಜನೆಗಾಗಿ ಈ ವರ್ಷ ವೆಚ್ಚ ಮಾಡಬೇಕೆಂದಿದ್ದ ೧೩೦ ಲಕ್ಷ ರೂ. ಅನ್ನು ೨ ಕೋಟಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ ... ಲ್ಲಿ ಕೆಲಸಕಾರ್ಯಗಳನ್ನು ಗೊತ್ತಾದ ಅವಧಿಯಲ್ಲಿ ಮುಗಿಸಲು ಹೆಚ್ಚು ಹಣವನ್ನು ಒದಗಿಸಲಾಗಿದೆ. ಯೋಜನೆಗೆ ಬೇಕಾಗುವ ಯಂತ್ರಗಳ ಆಮದಿನ ವಿಷಯವನ್ನು ಕುರಿತು ಯೋಜನಾ ಸಮಿತಿಯು ಪರಿಶೀಲನೆ ನಡೆಸುತ್ತಿದೆ.

○ ರಷ್ಯವು ಬರ್ಮದಿಂದ ಕೊಂಡ ೫೭,೦೦೦ ಟನ್ ಅಕ್ಕಿಯನ್ನು ಭಾರತಕ್ಕೆ ಒಪ್ಪಿಸಿದೆ ಅದರಲ್ಲಿ ೪,೦೦೦ ಟನ್ ಅನ್ನು ಕೇರಳಕ್ಕೆ ಕೊಡಲಾಗುವುದು

ಕಾಲೇಜುಗಳಲ್ಲಿ ಕೋಮು ವಾರು ಪ್ರಾತಿನಿಧ್ಯ ಕೂಡದು

ಕರ್ನಾಟಕ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರ್ ಪಾವಟೆಯವರ ಹೇಳಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ ವೈಸ್‌ಚಾನ್ಸೆಲರ್ ಡಿ. ಸಿ. ಪಾವಟೆಯವರು ವೃತ್ತಿಪರ ಕಾಲೇಜುಗಳಲ್ಲಿ ಪ್ರವೇಶವೀಯುವಾಗ ಕೋಮುವಾರು ಪ್ರಾತಿನಿಧ್ಯಕ್ಕೆ ಸಂಪೂರ್ಣ ವಿರೋಧವನ್ನು ವ್ಯಕ್ತಪಡಿಸಿದರು ಕೋಮುವಾರು ಪ್ರಾತಿನಿಧ್ಯ ಪದ್ಧತಿಯು ಪ್ರತಿಗಾಮಿಯೆಂದು ಸರ್ಕಾರಕ್ಕೆ ತಿಳುವಳಿಕೆ ಮಾಡಿಕೊಡಲು ಸರ್ವ ಪ್ರಯತ್ನವನ್ನೂ ಮಾಡುವುದಾಗಿ ಅವರು ಸೂಚಿಸಿರುವರು

ಜೆ ಎಸ್. ಕುಲಕರ್ಣಿಯವರು ಮಾತನಾಡಿ, ಕರ್ನಾಟಕ ವಿಶ್ವವಿದ್ಯಾಲಯವು ಕೋಮುವಾರು ಭೇದವಿಲ್ಲದ ನೀತಿಯನ್ನು ಅನುಸರಿಸುವುದು ಮಾತ್ರವಲ್ಲದೆ, ಮೈಸೂರು ವಿಶ್ವವಿದ್ಯಾಲಯವೂ ಸಹ ಅದೇ ಮಾರ್ಗದಲ್ಲಿ ನಡೆಯುವಂತೆ ಪ್ರಯತ್ನಪಡಬೇಕೆಂದೂ ಸೂಚಿಸುತ್ತಾರೆ.

ಸಣ್ಣ ನೌಕರರಿಂದ ಸಂಬಳದ ಖೋತಾ

ಮಿತವ್ಯಯದ ಬಗ್ಗೆ ಪ್ರಧಾನಿ ನೆಹರೂರವರ ಪ್ರಾರ್ಥನೆಗನುಸಾರವಾಗಿ ರ ರರಬಾಬಾಯಿ ವ್ ಶಿಂದೆ ಎಂಬ ನಾಸಿಕದ ಜವಾನನು ತನಗೆ ಬರುವ ಸಂಬಳದಲ್ಲಿ ... ಮಾಡಿಕೊಂಡಿರುತ್ತಾನೆ ... ಯಾಲಾ ಜಿಲ್ಲೆಯ ... ಜನ ಗುಮಾಸ್ತರ ... ೩೦ ರೂ. ಖೋತಾ ಮಾಡಿಕೊಂಡಿರುವರ ... ವರ ಹೆಸರು ಸತ್ಯನಾರಾಯಣ, ... ಶರ್ಮಾ, ... ಮತ್ತು ... ಸಿಂಗ್ ಅವರಿಗೆ ... ಸಂಬಳ ಮತ್ತು ... ರೂ ತುಟ್ಟಿಭತ್ಯ ಬರುತ್ತದೆ

ಶಾಸನ ಸಭೆಯಿಂದ ಪತ್ರಿಕಾ ಪ್ರತಿನಿಧಿಗಳ ಸಭಾತ್ಯಾಗ

ಮಧ್ಯ ಪ್ರದೇಶ ... ಸಭೆಯಿಂದ ಮೊನ್ನೆ ಪತ್ರಿಕಾ ಪ್ರತಿನಿಧಿಗಳೆಲ್ಲರೂ ಸಭಾತ್ಯಾಗ ಮಾಡಿದರು ಅವರಿಗೆ ಕುಳಿತ ಕೊಳ್ಳಲು ಮತ್ತು ಚರ್ಚೆಯನ್ನು ಆಲಿಸಲು ಸರಿಯಾದ ವ್ಯವಸ್ಥೆ ಮಾಡದೆ ಇದ್ದುದೇ ಇದಕ್ಕೆ ಕಾರಣ ... ಕರ್ತವ್ಯ ನಿರ್ವಹಣೆಗೆ ಸರಿಯಾದ ... ವರೆಗೆ ಅವರು ಸಭೆಗೆ ಹೋಗದಿರುವುದೆಂದು ನಿರ್ಧರಿಸಿರುತ್ತಾರೆ

ಕೇಂದ್ರ ನೌಕರರಿಂದ ಮುಷ್ಕರದ ಬೆದರಿಕೆ

ಬೊಂಬಾಯಿಯಲ್ಲಿ ಇತ್ತೀಚೆಗೆ ಕೇಂದ್ರ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರ ಮುಂದೆ ವಿರೋಧ ಪ್ರದರ್ಶನ ನಡೆಸಿದುದಕ್ಕಾಗಿ ಸಸ್ಪೆಂಡ್ ಆಗಿರುವ ೧೩ ಜನ ಕೇಂದ್ರ ಸರ್ಕಾರದ ನೌಕರರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ, ಇಲ್ಲದಿದ್ದರೆ ಬೊಂಬಾಯಿಯಲ್ಲಿರುವ ಎಲ್ಲಾ ಕೇಂದ್ರದ ನೌಕರರೂ ಮುಷ್ಕರ ಹೂಡಬೇಕಾಗುವುದೆಂದೂ ಸೂಚಿಸಲಾಗಿದೆ

ಆಸ್ಟ್ರೇಲಿಯಕ್ಕೆ ನೆಹರೂ ಭೇಟಿ

ಭಾರತದ ಪ್ರಧಾನಿ ನೆಹರೂರವರು ಮುಂದಿನ ವರ್ಷದ ಆದಿ ಭಾಗದಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡುಗಳಿಗೆ ಭೇಟಿ ಕೊಡಲಿರುವರು

ಗಿರಿಜಾ ಕಲ್ಯಾಣದಲ್ಲಿ ಸಂಗೀತ

ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣದ ಅಂಗವಾಗಿ ನಾಳೆ ರಾತ್ರಿ ೮ ಗಂಟೆಗೆ ಹರಿಕಥಾ ಸದಸ್ಯ ಶ್ರೀ ಎಲ್. ನಾಗಪ್ಪ ಮತ್ತು ವೃಂದದವರಿಂದ ವಾದ್ಯ ಗೋಷ್ಠಿ ಗಾನವು ನಡೆಯುವುದು ರಾತ್ರಿ ೧೦ಗೆ ಮಧುರ ಗಾನ ಕಲಾ ಮಂಡಲಿಯವರಿಂದ ಆರ್ಕೆಸ್ಟ್ರಾ ವಾದನವಿದೆ

ದಕ್ಷಿಣ ಪ್ರದೇಶದ ಆಹಾರ ಮಂತ್ರಿಗಳ ಸಭೆ

ಆಂಧ್ರ, ಮದರಾಸು, ಮೈಸೂರು ಮತ್ತು ಕೇರಳ ಸಂಸ್ಥಾನಗಳ ಆಹಾರ ಮಂತ್ರಿಗಳ ಸಭೆಯು ಮೊನ್ನೆ ಹೈದರಾಬಾದಿನಲ್ಲಿ ನಡೆಯಿತು. ಕೇಂದ್ರ ಆಹಾರ ಮಂತ್ರಿ ಅಜಿತ್ ಪ್ರಸಾದ ಜೈನರವರು ಅಧ್ಯಕ್ಷತೆ ವಹಿಸಿದ್ದರು. ದಕ್ಷಿಣದಲ್ಲಿ ಗೋಧಿ ಮತ್ತು ಗೋಧಿ ಪದಾರ್ಥಗಳ ಕೊರತೆಯನ್ನು ಕುರಿತು ಸಚಿವರು ಚರ್ಚೆ ನಡೆಸಿದರು ಬೇಕಾದಷ್ಟು ಗೋಧಿಯನ್ನು ಒದಗಿಸುವಂತೆ ಪ್ರಾದೇಶಿಕ ಡೈರೆಕ್ಟರಿಗೆ ಕೇಂದ್ರ ಮಂತ್ರಿಯು ಸೂಚಿಸಿರುತ್ತಾರೆ ತಿಂಗಳಿಗೆ ೨೫ ಸಾವಿರ ಟನ್ನಿನಿಂದ ೫೦೦೦೦ ಟನ್ನಿಗೆ ಗೋಧಿ ಪ್ರಮಾಣವನ್ನು ಹೆಚ್ಚಿಸಲಾಗಿದೆ ದಕ್ಷಿಣದಲ್ಲಿ ಆಹಾರ ವಲಯವನ್ನು ಏರ್ಪಡಿಸುವುದಕ್ಕೆ ಸಚಿವರುಗಳು ಸಮ್ಮತಿಸಿರುತ್ತಾರೆ

ಸುಗ್ಗಿವರೆಗೆ ಕೇರಳದಲ್ಲಿ ೨೫ ಲಕ್ಷ ಮದ್ರಾಸಿನಲ್ಲಿ ೧ ಲಕ್ಷ ಮತ್ತು ಮೈಸೂರಿನಲ್ಲಿ ೫೦,೦೦೦ ಟನ್ ಅಕ್ಕಿ ಕೊರತೆಯನ್ನು ನಿವಾರಿಸಲು ಆಂಧ್ರದಲ್ಲಿ ಬೆಳೆದಿರುವ ೬ ಲಕ್ಷ ಟನ್ ಹೆಚ್ಚುವರಿ ಅಕ್ಕಿಯಲ್ಲಿ ೪ ಲಕ್ಷವನ್ನು ಒದಗಿಸಬಹುದೆಂದೂ, ಉಳಿದುದನ್ನು ಕೊರತೆ ಪ್ರಾಂತಗಳಿಗೆ ಕಳುಹಬಹುದೆಂದೂ ಅಂದಾಜಾಗಿದೆ

ಕಂದಾಯದ ವಸೂಲಿ ಬಗ್ಗೆ ತೀವ್ರ ಕ್ರಮ ಮುಂದೆ ಹಾಕಲು ಮನವಿ

ನಂಜನಗೂಡು ತಾಲ್ಲೂಕಿನಲ್ಲಿ ಕಂದಾಯದ ವಸೂಲಿ ಬಗ್ಗೆ ಜಿಲ್ಲಾಧಿಕಾರಿಗಳು ಅಲ್ಲಿಗೆ ಭೇಟಿಯಿತ್ತು ತನಿಖೆ ನಡೆಸಿರುತ್ತಾರೆ ಕಳೆದ ವರ್ಷ ಕಸಬಾದಲ್ಲಿ ಮಳೆಯಾಗದೆ ಬುಷ್ಟಿ ಬೆಳೆಯು ಪೂರ್ತಿಯಾಗಿ ಹೋಗಿ ಅಭಾವ ಪರಿಸ್ಥಿತಿಯು ತಲೆದೋರಿತ್ತು ಈಚೆಗೆ ಕೆಲವು ತಿಂಗಳಲ್ಲಿ ಮಳೆಯ ವೈಪರೀತ್ಯದಿಂದ ರೈತರಿಗೆ ತುಂಬಾ ನಷ್ಟವಾಗಿದೆ ಅಲ್ಲದೆ ಗ್ರಾಮಾಂತರದಲ್ಲಿ ಪ್ಲೇಗ್ ವ್ಯಾಧಿಯು ಹರಡಿ ಮತ್ತಷ್ಟು ತೊಂದರೆಯಾಗಿದೆ ಆದ್ದರಿಂದ ಕಂದಾಯದ ವಸೂಲಿ ಬಗ್ಗೆ ತೀವ್ರ ಕ್ರಮಗಳನ್ನು ಸರ್ಕಾರದವರು ... ಗಳವರೆಗಾದರೂ ಮುಂದೂಡಬೇಕೆಂದು ರೈತರ ... ಅಲ್ಲಿನ ರೈತರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

ರತ್ನಚೂಡಿ	೩೯ ೦೦	೪೭ ೬೩
ಕಡ್ಡಿ	೩೯ ೦೦	೪೦ ೦೦
ಬಂಗಾರ	೩೯ ೪೭	
[illegible]ಸಣ್ಣ	೩೬ ೫೦	೩೭ ೭೫
ರಾಗಿ	೪೪ ೭೫	೪೬ ೦೦
ಕಡಲೆಕಾಯಿ	೧೩ ೩೭	೧೮ ೮೭
ಎಳ್ಳು	೮೦ ೦೦	
ತೊಗರಿ	೪೧ ೭೫	೪೪ ೫೦
ಹೆಸರು	೪೫ ೬೦	೫೫ ೧೩
ಹಲಸಂದೆ	೪೦ ೦೦	೩೪ ೧೩
ಧನಿಯ	೩೭ ೭೫	
ಅವರೆ	೫೪ ೩೫	
ಉದ್ದು	೫೧ ೦೦	೬೩ ೦೦
ಹುಣಸೇಹಣ್ಣು	೩ ೭೫	೪ ೭೫
ಮೆಣಸಿನಕಾಯಿ	೧೪ ೧೩	
ತೆಂಗಿನಕಾಯಿ	೧೬೩ ೦೦	೩೮೭ ೦೦

CITY TUTORIAL COLLEGE

Old Agrahar, Mysore

B A & B Sc.- Kannada & English

Classes Commenced

INTER English (56 & 57 Texts) Kannada, Samskrita, P C M & C B Z.

Classes in full swing

Admissions for S S L C will close on 10-7-57 Join at once

Edited, Printed and Published by A R Nagarajan at Sadhvi Press, D Subbiah Road Mysore

ಪಾಕಿಸ್ತಾನದ ಮಾಜಿ ಗವರ್ನರ್ ಜನರಲ್ಲರ ಅಳಿಯನ ಬಂಧನ

ಪಾಕಿಸ್ತಾನದ ಮಾಜಿ ಗವರ್ನರ್ ಜನರಲ್ ಗುಲಾಂ ಮಹಮದ್ದರ ಅಳಿಯಂದಿರಾದ ಹುಸೇನ್ ಮಲ್ಲಿಕ್ ಎಂಬುವರನ್ನು ಕರಾಚಿಯಲ್ಲಿ ವಿಶೇಷ ಪೊಲೀಸರು ಮೊನ್ನೆ ಬಂಧಿಸಿದರು ಅವರನ್ನು ಜಾಮೀನು ಮೇಲೆ ಬಿಡಲು ಆಜ್ಞೆಯಾಗಿದೆ. ಸಾಮಾನನ್ನು ಬಚ್ಚಿಡುವುದು, ಕಾಳ ಸಂತೆ, ಮತ್ತು ಕಳ್ಳ ರವಾನೆಗಾಗಿ ಬಂಧನವಾಗಿದೆ. ಕಳೆದ ೧೧ನೇ ತಾರೀಕು ಅವರ ಗಡಂಗು ಮತ್ತು ಕಛೇರಿಯನ್ನು ಶೋಧನೆ ಮಾಡಲಾಗಿತ್ತು. ಡೀಸೆಲ್ ಇಂಜನ್ನುಗಳು, ಭಾಗಗಳೇ ಮುಂತಾದ ಸುಮಾರು ೧ ಲಕ್ಷ ರೂ ಬೆಲೆಯ ಕಳ್ಳ ರವಾನೆ ಸಾಮಾನು ಅವರ ಬಳಿ ಸಿಕ್ಕಿತು

ಚೀಣದಲ್ಲಿ ಕಮ್ಯೂನಿಸ್ಟರ ವಿರೋಧವಾಗಿ ಪ್ರಚಾರ

ಚೀಣದ ಟೀನ್ಸಿನ್ನಲ್ಲಿರುವ ನಾಂಕೈ ವಿಶ್ವವಿದ್ಯಾಲಯ ಭವನಗಳ ಮೇಲೆ "ಕಮ್ಯೂನಿಸ್ಟ್ ನ್ಯಾಯಾಧಿಕಾರರನ್ನು ನಿರ್ನಾಮ ಮಾಡಿ" ಎಂದು ಸೂಚಿಸುವ ಪತ್ರಿಕೆಗಳನ್ನು ಅಂಟಿಸಲಾಗಿರುವುದೆಂದು ಹೇಳಲಾಗಿದೆ ಅದೇ ವಿಶ್ವವಿದ್ಯಾಲಯದಲ್ಲಿ ಅಲ್ಲಿನ ಪ್ರಧಾನಿ ಚೌ ಎನ್ ಲೈರವರು ವಿದ್ಯಾಭ್ಯಾಸ ಮಾಡಿದ್ದರು ಅಲ್ಲಿನ "ಬಲ ಪಕ್ಷದ" ಯುವಕರಿಂದ ಕಮ್ಯೂನಿಸ್ಟರ ವಿರುದ್ಧದ ಚಳುವಳಿಯು ಆರಂಭವಾಗಿದೆ

ಆಗಸ್ಟ್ ೩೧ ರಂದು ಮಲಯಕ್ಕೆ ಸಾರ್ವಭೌಮಾಧಿಕಾರ

ಆಗಸ್ಟ್ ೩೧ನೇ ತಾರೀಕು ಮಲಯವು ಸಾರ್ವಭೌಮ ರಾಷ್ಟ್ರವಾಗಿ ಕಾಮನ್‌ವೆಲ್ತ್ ಸದಸ್ಯ ರಾಜ್ಯವಾಗುವುದು ಅಂದಿನಿಂದ ಬ್ರಿಟಿಷ್ ರಾಣಿಯು ಅವರ ರಾಣಿಯಾಗಿರುವುದಿಲ್ಲ ಭಾರತ ಮತ್ತು ಪಾಕಿಸ್ತಾನಗಳು ಪರಿಗಣಿಸುವಂತೆ ರಾಣಿಯನ್ನು ಕಾಮನ್‌ವೆಲ್ತಿನ ಮುಖ್ಯಾಧಿಕಾರಿಣಿಯಾಗಿ ಮಲಯವು ಅಂಗೀಕರಿಸುವುದು

ಪಂಚತಂತ್ರ

ಜಯನಗರದ ಶಿಶು ಸಾಹಿತ್ಯ ಸಂಘದವರು ಮೇಲ್ಕಂಡ ಹೆಸರಿನ ಕನ್ನಡ ಸಚಿತ್ರ ಗ್ರಂಥವೊಂದನ್ನು ಮುದ್ರಿಸಿ ಪ್ರಕಟಿಸಿರುತ್ತಾರೆ ಸಂಸ್ಕೃತ ಭಾಷೆಯಲ್ಲಿ ಬಹಳ ಕಾಲದಿಂದಲೂ ಪ್ರಸಿದ್ಧವಾಗಿರುವ ಈ ಕಥಾವಳಿಯಲ್ಲಿ ಪ್ರಾಣಿ ಮಾತ್ರಗಳ ಮೂಲಕ ಸುಲಭವಾಗಿ ನೀತಿ ಬೋಧೆ ಮಾಡುವುದನ್ನು ಪ್ರಚಾರಕ್ಕೆ ತರಲಾಗಿದೆ ಅದನ್ನು ಕನ್ನಡದಲ್ಲಿ ಮುದ್ರಿಸಿ ಮಕ್ಕಳಿಗೆ ಸುಲಭವಾಗಿ ತಿಳಿಯುವಂತೆ ಮಾಡಿರುವುದು ದೊಡ್ಡ ಉಪಕಾರವೇ ಸರಿ ಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತರಾದವರೂ, ಇತರರೂ ಅವಶ್ಯಕವಾಗಿ ಓದಬೇಕಾದ ಗ್ರಂಥವಿದು. ಬೆಲೆ ೧-೮-೦ ರೂ.

ಸಿನಿಮಾ ಮಂದಿರಗಳಲ್ಲಿ ಧೂಮಪಾನ

ಮೈಸೂರು ಸಿನಿಮಾ ಮಂದಿರಗಳಲ್ಲಿ ಧೂಮಪಾನವು ಸರ್ವಸಾಮಾನ್ಯವಾಗಿದೆ ಕೆಳವರ್ಗಗಳಲ್ಲಂತೂ ಇದು ವಿಪರೀತವಾಗಿದೆ ಧೂಮಪಾನ ಮಾಡಕೂಡದೆಂದು ಶಾಸನವಿದ್ದರೂ, ಬೋರ್ಡುಗಳನ್ನು ಹಾಕಿ ಸಿನಿಮಾದಲ್ಲೂ ಪ್ರದರ್ಶಿಸಿದ್ದರೂ ಈ ಬಗ್ಗೆ ಯಾರೂ ಗಮನ ಕೊಡುತ್ತಿಲ್ಲ ಈ ನಿಯಮವನ್ನು ಜಾರಿಗೆ ತರದಿದ್ದರೆ ಶಾಸನವನ್ನಾದರೂ ವಾಪಸು ತೆಗೆದುಕೊಳ್ಳುವುದು ಉತ್ತಮ-ಎಂಬುದಾಗಿ ವಾಚಕರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

ಭಾರತ ಸೇವಕ ಸಮಾಜದ ಕಾರ್ಯಕ್ರಮ

ಭಾರತ ಸೇವಕ ಸಮಾಜದ ಕಾರ್ಯಕ್ರಮವನ್ನು ಕೇಂದ್ರ ಮಂತ್ರಿ ಗುಲ್ಜಾರಿಲಾಲ್ ನಂದಾರವರು ವಿವರಿಸಿರುತ್ತಾರೆ. ರಾಷ್ಟ್ರೀಯ ಒಗ್ಗಟ್ಟಿನ ರಕ್ಷಣೆ, ಹೆಚ್ಚು ಉತ್ಪತ್ತಿ ತೆಗೆಯುವುದು ಮತ್ತು ವ್ಯರ್ಥವಾಗುವುದನ್ನು ತಪ್ಪಿಸುವುದು, ಜರೂರಾತಿ ಸಮಯದಲ್ಲಿ ಸೇವೆ, ಕೊಳಕು ಪ್ರದೇಶಗಳನ್ನು ತೆಗೆಯುವುದರ ಮೂಲಕ ರಾಷ್ಟ್ರದ ಆರೋಗ್ಯ ರಕ್ಷಣೆ ಮತ್ತು ಯೋಗಾಸನ ಪ್ರಚಾರ-ಈ ಐದು ಕಾರ್ಯಕ್ರಮಗಳನ್ನು ಅವರು ಸೂಚಿಸಿರುತ್ತಾರೆ

ಜಿಲ್ಲೆಯಲ್ಲಿ ಮರಾಮತ್ತು ಶಾಖಾ ಸಚಿವರ ಪ್ರವಾಸ

ಸಂಸ್ಥಾನದ ಮರಾಮತ್ತು ಇಲಾಖಾ ಮಂತ್ರಿ ಶ್ರೀ ಹೆಚ್ ಕೆ ವೀರಣ್ಣಗೌಡರು ಇಂದು ಸಂಜೆ ನಗರಕ್ಕೆ ಆಗಮಿಸುವರು ನಾಳೆ ಬೆಳಿಗ್ಗೆ ಬನ್ನೂರು, ಟಿ. ನರಸೀಪುರ, ಮೂಗೂರು, ಅಗರ-ಮಾಂಬಳ್ಳಿ, ಕೊಳ್ಳೇಗಾಲಗಳಿಗೆ ಭೇಟಿಯಿತ್ತು ಮಧ್ಯಾಹ್ನ ಯಳಂದೂರಿನಿಂದ ಚಾಮರಾಜನಗರ, ನಂಜನಗೂಡುಗಳಿಗೆ ತೆರಳಿ ನಗರಕ್ಕೆ ವಾಪಸಾಗುವರು ನಾಳಿದ್ದು ಬೆಳಿಗ್ಗೆ ಹುಣಸೂರು ಮತ್ತು ಕಂಗಾಲಗಳಿಗೆ ಭೇಟಿಯಿತ್ತು ನಗರಕ್ಕೆ ಹಿಂದಿರುಗುವರು ಮಧ್ಯಾಹ್ನ ಬೀಕನಹಳ್ಳಿ ಮತ್ತು ಹುಸೇನ್‌ಪುರಗಳ ಮಾರ್ಗವಾಗಿ ಹುಣಸೂರಿಗೆ ಭೇಟಿಯಿತ್ತು ಅಲ್ಲಿಂದ ಮುಂದಕ್ಕೆ ಪುತ್ತೂರಿಗೆ ತೆರಳುವರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ಪಿಟೀಲು ೭-೧೫ ಮತ್ತು ೮-೧೫ ಕೆ. ನಾಗೇಶರಾವ್-ದೇವರನಾಮ ೭-೩೦ ರಿಕಾರ್ಡು ಸಂಗೀತ ಮಧ್ಯಾಹ್ನ ೧೨ ಸರೋಜಾ ನಾರಾಯಣರಾವ್-ಸಂಗೀತ ೧೨-೩೦ ಬಾಲ ಪ್ರಪಂಚ. ೧-೩೦ ರಿಕಾರ್ಡು ೧-೫೦ ಪಿಟೀಲು ಸಂಜೆ ೬-೧೦ ಸಂಗೀತ ೬-೩೦ ಕನ್ನಡದಲ್ಲಿ ಭಾಷಣ ೮ ವಿಧಾನ ಮಂಡಲದಲ್ಲಿ ೮-೧೫ ಸರೋಜಾ ನಾರಾಯಣರಾವ್-ಸಂಗೀತ ೮-೩೦ ರೇಡಿಯೊ ನ್ಯೂಸ್ ರೀಲ್. ೮-೪೦ ಪ್ರಸಾರ ಗೀತೆ. ೯-೧೫ ಶಾಸ್ತ್ರೀಯ ೯-೩೦ ರಾಷ್ಟ್ರೀಯ ಕಾರ್ಯಕ್ರಮ

WANTED One Sales-man Pay Rs. 45 only Rs 500 deposit essential Apply.—
'X' C/o SADHVI

SREE GAYATHRI

On 5-7-57

SPRING FROSTS

With - Golden Antelope (Colour Cartoon)

ಲಕ್ಷ್ಮಿ ★ 6 7-57ನೇ ಶನಿವಾರದಿಂದ ದಿನವಹಿ 2 ಆಟಗಳು ಸಂಜೆ 7, ರಾತ್ರಿ 10 15

ಡಾಕ್ಟರ್ ಸಾವಿತ್ರಿ (ತಮಿಳು)

ಭೂಮಿಕೆ - ಅಂಜಲಿ ಎಂ ಎನ್ ರಾಜಂ ನಂಬಿಯಾರ್ ಬಾಲಚಂದರ್ ಮುಂತಾದವರು

ಕೊನೇ ದಿನ – ತೆನಾಲಿರಾಮ - (ತಮಿಳು)

ಪ್ರಭು ದೇವಾ ಥಿಯೇಟರ್ (ಪದ್ಮಾ ಟಾಕೀಸ್)

5—7—57 ನೇ ಶುಕ್ರವಾರದಿಂದ : ಅಮೋಘ 2 ನೇ ವಾರ

ಸಾರಥಿರವರ ತೆಲುಗು ಚಿತ್ರ ★ **ಪೆದ್ದರಿಕಾಲು**

ಪಾತ್ರ:— ಅಂಜಲಿ, ಗಿರಿಜ, ರಾಗಿಣಿ, ರೇಲಂಗಿ, ಜಗ್ಗಯ್ಯ, ಗುಮ್ಮಡಿ ಮುಂತಾದವರು

ಪ್ರೌಡ್ ಲ್ಯಾಂಡ್ಸ್ ★

ಪಾತ್ರವರ್ಗ.— ಶಿವಾಜಿ ಗಣೇಶ್, ಸಾವಿತ್ರಿ, ನಂಬಿಯಾರ್, ತಂಗವೇಲು, ಜಿ ವರಲಕ್ಷ್ಮಿ, ಎಂ ಕೆ ರಾಧಾ ಮುಂತಾದವರು

5-7-57ರಿಂದ : ಜಯಪ್ರದವಾದ 3ನೇ ವಾರ : ದಿನವಹಿ 2 ಆಟಗಳು ಜೂಪಿಟರ್ ಪಿಕ್ಚರ್ಸ್‌ರವರ ತಮಿಳು ಚಿತ್ರ — ಸಂಜೆ 7ಕ್ಕೆ ಮತ್ತು ರಾತ್ರಿ 10-15ಕ್ಕೆ

★ **ಕರ್ಪೂರಕ್ಕರಸಿ** ★ [ಶ್ರೀ ರಾಘವೇಂದ್ರಾ ರಿಲೀಸ್

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ಚಂದಾದಾರರಾಗಿ ಸೇರಿರಿ

ಇಂದಿನ ಪತ್ರಿಕೆ ೭ ನಯೆ ಪೈಸೆ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸರ್ದಾರ್ ರಾಜರಾವ್ ರಸ್ತೆ,
ಮೈಸೂರು

ಸಂಪುಟ : ೦೮] SADHVI : SATURDAY 6—7—1957 ಮೈಸೂರು : ಶನಿವಾರ ೬—೭—೧೯೫೭ : [ಸಂಚಿಕೆ : ೩೬

ಮಿತ ಶಸ್ತ್ರ ಸನ್ಯಾಸದ ಒಪ್ಪಂದಕ್ಕಾಗಿ ಕಾಮನ್‌ವೆಲ್ತಿನ ಕರೆ

ವಿಶ್ವ ಶಾಂತಿ ಮತ್ತು ಭದ್ರತೆಯ ಸಾಧನೆಯೇ ಕಾಮನ್‌ವೆಲ್ತಿನ ಗುರಿ

ಸಹಕಾರದಿಂದ ಕಾರ್ಯ ಸಾಧನೆಗಾಗಿ ಪ್ರಧಾನಿಗಳ ಸಮ್ಮೇಳನದ ಕರೆ

ಮಿತವಾದ ಶಸ್ತ್ರ ಸನ್ಯಾಸ ಒಪ್ಪಂದಕ್ಕಾಗಿ ಸಲಹೆ

ಕಾಮನ್‌ವೆಲ್ತಿನ ಪ್ರಧಾನಿಗಳ ಸಮ್ಮೇಳನವು ನೆನ್ನೆ ಮುಕ್ತಾಯವಾಯಿತು ೧೦ ರಾಷ್ಟ್ರಗಳ ಪ್ರಧಾನಿಗಳು ಸಂಯುಕ್ತ ಹೇಳಿಕೆಯೊಂದನ್ನಿತ್ತು, ಜಗತ್ತಿನ ಶಾಂತಿ ಮತ್ತು ಭದ್ರತೆಯನ್ನು ಸಾಧಿಸುವುದೇ ಕಾಮನ್‌ವೆಲ್ತ್ ಸರ್ಕಾರಗಳ ಗುರಿಯೆಂದು ಸೂಚಿಸಿ, ವಿಶೇಷ ರೀತಿಯ ಸಹಕಾರದಿಂದ ಅದನ್ನು ಸಾಧಿಸಬಹುದೆಂದು ತಿಳಿಸಿರುತ್ತಾರೆ.

ಶಸ್ತ್ರ ಸನ್ಯಾಸದ ಬಗ್ಗೆ ಮಿತಿಗೊಂಡ ಒಪ್ಪಂದವಾದರೂ, ಅದರಿಂದ ಜಗತ್ತಿನಲ್ಲಿ ಬಿಕ್ಕಟ್ಟುಗಳೂ, ಸಂಶಯಗಳೂ ತುಂಬಾ ಕಡಿಮೆಯಾಗುವುವೆಂದು ಪ್ರಧಾನಿಗಳು ಭಾವಿಸಿರುತ್ತಾರೆ ಇಂತಹ ಒಪ್ಪಂದದಿಂದ ಇನ್ನೂ ವ್ಯಾಪಕವಾದ ಕರಾರು ಆಗಲು ಮಾರ್ಗವಾಗುವುದೆಂದೂ ಅವರು ನಂಬಿರುತ್ತಾರೆ.

ಅಣು ಶಕ್ತಿಯನ್ನು ಶಾಂತಿಯುತ ಕಾರ್ಯಗಳಿಗಾಗಿ ಬಳಸಲು ಒಟ್ಟಾಗಿ ಕಲೆತು ಚರ್ಚಿಸುವುದಕ್ಕಾಗಿ ಮುಂದಿನ ವರ್ಷ ಕಾಮನ್‌ವೆಲ್ತಿನ ಅಣು ವಿಜ್ಞಾನಿಗಳ ಖಾಸಗೀ ಸಮ್ಮೇಳನವನ್ನು ಬ್ರಿಟನ್ನಿನಲ್ಲಿ ನಡೆಸಲು ನಿರ್ಧರಿಸಲಾಗಿದೆ

ಮಧ್ಯ ಪ್ರಾಚ್ಯದ ಸಮಸ್ಯೆ ಬಗ್ಗೆ ೧೦ ರಾಷ್ಟ್ರಗಳ ಪ್ರಧಾನಿಗಳು ಮತ್ತು ಸಚಿವರುಗಳು ಏಕಾಭಿಪ್ರಾಯವನ್ನು ಸೂಚಿಸಿ, ಆ ಪ್ರದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯನ್ನು ಸಾಧಿಸುವ ದೀರ್ಘ ಕಾಲದ ದೃಷ್ಟಿಯಿರಬೇಕೆಂದೂ, ಸಧ್ಯದಲ್ಲಿ ಅರಬ್-ಇಸ್ರೇಲ್ ವ್ಯಾಜ್ಯ, ಅರಬ್ ನಿರಾಶ್ರಿತರ ಪ್ರಶ್ನೆ ಮತ್ತು ಸೂಯೆಜ್ ಕಾಲುವೆ ಸಮಸ್ಯೆಗಳಿಂದ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಬೇಕೆಂದೂ ತಿಳಿಸಿರುತ್ತಾರೆ

ಜಗತ್ತಿನಲ್ಲಿ ಶಾಂತಿ ಸಾಧನೆಗೆ ವಿಶ್ವ ಸಂಸ್ಥೆಯನ್ನು ಸಾಧನವಾಗಿ ಉಪಯೋಗಿಸಬೇಕೆಂದು ಸಮ್ಮೇಳನವು ಅಭಿಪ್ರಾಯಪಟ್ಟಿದೆ ಹಂಗೆರಿಯಲ್ಲಿ ಆದ ದುರ್ಘಟನೆ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದೆ

ದೂರ ಪ್ರಾಚ್ಯ ಮತ್ತು ಆಗ್ನೇಯ ಏಷ್ಯಾ ಬಿಕ್ಕಟ್ಟನ್ನು ಪರಿಹರಿಸಲೂ, ಅಲ್ಲಿನ ರಾಷ್ಟ್ರಗಳಿಗೆ ಸ್ವಾತಂತ್ರ್ಯ ತಂದುಕೊಡಲೂ ಉದ್ದೇಶಿಸಲಾಗಿದೆ.

ಬ್ರಿಟನ್, ಭಾರತ ಮತ್ತು ಪಾಕ್ ಪ್ರಧಾನಿಗಳ ಮಾತುಕತೆ

ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್‌ಮಿಲನ್ನರ ಕೋರಿಕೆ ಮೇರೆ ನೆನ್ನೆ ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳು ಅವರೊಡನೆ ಸಮಾಲೋಚನೆ ನಡೆಸಿದರು. ಮೂವರೂ ಭಾರತ ಮತ್ತು ಪಾಕಿಸ್ತಾನಗಳ ಬಾಂಧವ್ಯದ ವಿಚಾರವನ್ನು ಚರ್ಚಿಸಿದರು ಕಾಶ್ಮೀರ, ಕಾಲುವೆ ವಿವಾದ ಮತ್ತು ನಿರಾಶ್ರಿತ ಸಮಸ್ಯೆಗಳು ಪರಿಶೀಲಿಸಲ್ಪಟ್ಟುವೆಂದು ಹೇಳಲಾಗಿದೆ.

ಅಮೆರಿಕದ ಅತ್ಯಂತ ಭಾರಿ ಅಣು ಶಸ್ತ್ರದ ಸಿಡಿತ

ಅಮೆರಿಕದ ಇತಿಹಾಸದಲ್ಲಿ ನಡೆಸಲಾದಿದ್ದಂತಹ ಅತ್ಯಂತ ಬಲಯುತವಾದ ಅಣು ಶಸ್ತ್ರವೊಂದನ್ನು ನೆವಾಡಾದಲ್ಲಿ ನೆನ್ನೆ ಸಿಡಿಸಲಾಯಿತು. ಈ ಸಿಸ್ಫೋಟನೆಯು ಜುಲೈ ೩ರಂದು ನಡೆಯಬೇಕಾಗಿದ್ದುದು, ಹವಾ ಪರಿಸ್ಥಿತಿಯು ಪ್ರತಿಕೂಲವಾದ ಪ್ರಯುಕ್ತ ನೆನ್ನೆ ದಿನಕ್ಕೆ ಮುಂದೆ ಹಾಕಲ್ಪಟ್ಟಿತ್ತು

ಬಿಹಾರ್ ಮಂತ್ರಿ ಅನುಗ್ರಹ ನಾರಾಯಣ ಸಿನ್ಹರವರ ನಿಧನ

ಬಿಹಾರಿನ ಹಣಕಾಸಿನ ಮಂತ್ರಿ ಅನುಗ್ರಹ ನಾರಾಯಣಸಿನ್ಹರವರು ನೆನ್ನೆ ದಿನ ಮಧ್ಯ ರಾತ್ರಿ ಮೃತಪಟ್ಟರು ಅವರಿಗೆ ೭೧ ವರ್ಷ ವಯಸ್ಸಾಗಿತ್ತು ಅವರು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಬಹು ದಿನಗಳಿಂದಲೂ ಭಾಗವಹಿಸಿದ್ದರು ಅವರ ತೀವ್ರ ಅಸ್ವಸ್ಥತೆಯನ್ನು ಕೇಳಿ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಪಾಟ್ನಾಕ್ಕೆ ಭೇಟಿ ಕೊಟ್ಟು ಅವರನ್ನು ಸಂದರ್ಶಿಸಿದ್ದರು

ಸಂಗೀತ ಕಛೇರಿ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಡಾ॥ ಎ. ಎಸ್. ಪದ್ಮರವರ ವೀಣಾವಾದನವು ವಿ॥ ಕೆ ಹರಿಶ್ಚಂದ್ರರವರ ಮೃದಂಗದ ಸಮೇತ ನಡೆಯುವುದು

ಹೂವಿನ ಪಲ್ಲಕ್ಕಿ ಉತ್ಸವ

ಶ್ರೀರಾಮಪೇಟೆ ಶ್ರೀ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯವರು ಶ್ರೀ ರಾಮಚಂದ್ರಸ್ವಾಮಿಯವರ ಹೂವಿನ ಪಲ್ಲಕ್ಕಿ ಉತ್ಸವವನ್ನು ನಾಳೆ ಸಂಜೆ ೭ ಗಂಟೆಗೆ ನಗರದ ನಾನಾ ಬೀದಿಗಳಲ್ಲಿ ನಡೆಸುವರು.

ಫ್ಲೂ ವಿಗಾಗಿ ಚಿಕಿತ್ಸೆ

ನಗರದ ಇಟ್ಟಿಗೆ ಬೀದಿ ಮತ್ತು ಶಾಂತಲಾ ಪಾರ್ಕ ಪ್ರದೇಶಗಳಲ್ಲೂ ಮತ್ತು ಅಶೋಕಪುರ,ವಿದ್ಯಾರಣ್ಯಪುರಗಳಲ್ಲೂ ನಾಳೆ ದಿನ ಫ್ಲೂ ವಿಗಾಗಿ ಔಷಧವನ್ನು ವಿನಿಯೋಗಿಸಲಾಗುವುದು

ದನ ಕದ್ದವನಿಗೆ ಸಜಾ ಮತ್ತು ೧೦೦ ರೂ ದಂಡ

ಲಷ್ಕರ್ ಮೊಹಲ್ಲಾ ಕಸಾಬಗೇರಿಯಲ್ಲಿ ಜಬ್ಬಾರ್ ಎಂಬುವನು ದನವನ್ನು ಕದ್ದುದಕ್ಕಾಗಿ ಅವನಿಗೆ ೧ ತಿಂಗಳ ಕಠಿಣ ಸಜಾ ಮತ್ತು ೧೦೦ ರೂ. ದಂಡವನ್ನು ವಿಧಿಸಲಾಗಿದೆ

ಸಟ್ಟಾ ಜೂಜಿಗಾಗಿ ದಂಡ

ಶಿವರಾಂಪೇಟೆಯಲ್ಲಿ ನಿನ್ನೆ ಸಟ್ಟಾ ಜೂಜು ನುತ್ತಿದ್ದ ಚಲುವಯ್ಯ ಮತ್ತು ರಾಮಯ್ಯ ಎಂಬುವರ ಮೇಲೆ ದೇವರಾಜಾ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ತಲಾ ಇಪ್ಪತ್ತು ರೂ ಜುಲ್ಮಾನೆಯಾಗಿದೆ

ಡಿ ಎಚ್ ಚಂದ್ರಶೇಖರಯ್ಯನವರು ಕೈಗಾರಿಕಾ ನ್ಯಾಯಮಂಡಲದ ಅಧ್ಯಕ್ಷರು

ಬೆಂಗಳೂರಿನ ಕೈಗಾರಿಕಾ ನ್ಯಾಯಮಂಡಲದ ಅಧ್ಯಕ್ಷರನ್ನಾಗಿ ಶ್ರೀ ಡಿ ಎಚ್. ಚಂದ್ರಶೇಖರಯ್ಯನವರನ್ನು ನೇಮಕ ಮಾಡಲಾಗಿದೆ

ಅಕ್ರಮವಾಗಿ ೩ ಲಕ್ಷ ರೂ. ನೋಟು ಒಯ್ಯುವ ಯತ್ನಕ್ಕೆ ಸಜ

೩ ಲಕ್ಷ ರೂ ಆಗುವ ಭಾರತ ಮತ್ತು ವಿದೇಶೀ ನಾಣ್ಯವನ್ನು ರಹದಾರಿಯಿಲ್ಲದೆ ಹೊರಕ್ಕೆ ಸಾಗಿಸಲೆತ್ನಿಸಿದರೆಂಬ ಕಾರಣಕ್ಕಾಗಿ ದೆಹಲಿಯ ನ್ಯಾಯಾಧೀಶರು ರಸೆಲ್ ಫ್ರಾನ್ಸಿಸ್ ವೆಬ್ ಎಂಬ ಬ್ರಿಟಿಷ್ ಪ್ರಜೆ ಮತ್ತು ಮಾಡಲೀನ್ ಪಾಲೆಟ್ಟೆ ಪೋರಿಯಟ್ ಎಂಬ ಫ್ರೆಂಚ್ ಮಹಿಳೆ ಇವರಿಬ್ಬರಿಗೆ ತಲಾ ೧ ವರ್ಷ ಸಾದಾ ಸಜವನ್ನು ವಿಧಿಸಿರುತ್ತಾರೆ ಅಪಾದಿತರಿಬ್ಬರೂ ತಪ್ಪನ್ನು ಒಪ್ಪಿಕೊಂಡಿರುತ್ತಾರೆ. ಇವರು ಕಳೆದ ಏಪ್ರಿಲ್ ೧೩ರಂದು ಕರಾಚಿಗೆ ವಿಮಾನದಲ್ಲಿ ಹೊರಡುವುದರಲ್ಲಿದ್ದಾಗ ಆಗ ಸುಂಕದ ಅಧಿಕಾರಿಗಳು ತನಿಖೆ ಮಾಡಲಾಗಿ ಅವರ ಬಳಿ ೩ ಲಕ್ಷ ರೂ ನೋಟುಗಳು ಸಿಕ್ಕಿದುವು

ನಗರಕ್ಕೆ ವಿ ಟಿ ಕೃಷ್ಣಮಾಚಾರಿ ಮತ್ತು ಎಸ್ ವಿ ರಾಮಮೂರ್ತಿಯವರ ಆಗಮನ

ಭಾರತದ ಯೋಜನಾ ಮಂಡಲಿಯ ಉಪಾಧ್ಯಕ್ಷರಾದ ಶ್ರೀ ವಿ ಟಿ ಕೃಷ್ಣಮಾಚಾರಿ ಮತ್ತು ಸಲಹೆಗಾರರಾದ ಶ್ರೀ ಎಸ್ ವಿ ರಾಮಮೂರ್ತಿಯವರು ನೆನ್ನೆ ಇಲ್ಲಿಗೆ ಆಗಮಿಸಿ,ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿಯಿತ್ತರು ರಾಮಮೂರ್ತಿಯವರು ಬೆಂಗಳೂರಿನಲ್ಲಿ ಸರ್ಕಾರದ ಯೋಜನಾ ಅಡಿಷನಲ್ ಕಮಿಷನರ್ ಶ್ರೀ ಜಿ ವಿ ಕೆ ರಾವ್, ಡೆಪ್ಯುಟಿ ಛೀಫ್ ಸೆಕ್ರೆಟರಿ ಶ್ರೀ ಎಂ ಎಸ್.ಸ್ವಾಮಿನಾಥ ಮತ್ತು ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಬಿ ಎಂ ಕೃಷ್ಣರವರೊಡನೆ ಯೋಜನೆ ಕಾರ್ಯಕ್ರಮಗಳಿಗೆ ಹಣದ ಹಂಚುವಿಕೆ ಬಗ್ಗೆ ಮೊನ್ನೆ ಚರ್ಚಿಸಿದರು

ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಪ್ರಥಮ ಸಂಗ್ರಾಮದ ಶತಮಾನೋತ್ಸವವನ್ನು ನಗರದಲ್ಲಿ ಬರುವ ತಿಂಗಳು ನಡೆಸುವ ಸಂಬಂಧವಾಗಿ ಇಲ್ಲಿನ ಪೌರಸಭೆಯವರು ನಾಟಕ, ನೃತ್ಯ, ವ್ಯಾಯಾಮ ಪ್ರದರ್ಶನ, ಲಾವಣಿ ಮುಂತಾದುವುಗಳನ್ನು ಏರ್ಪಡಿಸುವರು ಸಮಾರಂಭದಲ್ಲಿ ಭಾಗವಹಿಸುವ ವ್ಯಕ್ತಿಗಳಾಗಲೀ, ಸಂಸ್ಥೆಗಳಾಗಲೀ ನಾಳಿದ್ದಿನೊಳಗೆ ತಮ್ಮ ಅರ್ಜಿಗಳನ್ನು ಕೊಡಬಹುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ನಾಗಸ್ವರ ೭-೧೫ ಎಂ ಜಿ ಸುಲೋಚನ-ದೇವರ ನಾಮ ೮-೧೫ ಗೀತಾವಳಿ ೮-೩೦ ಪಿ ಭುವನೇಶ್ವರಯ್ಯ-ಪಿಟೀಲು. ೯-೩೦ ಬಾಲ ಜಗತ್. ಮಧ್ಯಾಹ್ನ ೧೨ ಎಂ ಜಿ ಸುಲೋಚನ-ಸಂಗೀತ ೧೨-೩೦ ವಾದ್ಯವೃಂದ ೧ ರಿಕಾರ್ಡ ೧-೩೦ ಬಿ ಆರ್. ಶಾಮಾಚಾರ್-ಕೊಳಲು ೨-೧೫ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೬-೧೦ ಭಕ್ತಿ ಗೀತಾವಳಿ ೭-೩೦ ಗೀತಾವಳಿ. ೮ ಮತ್ತು ೧೧-೩೦ ವಿಶಾಖ ಸ್ಥಿ ಸುಬ್ರಹ್ಮಣ್ಯಂ ಸಂಗೀತ ೮-೩೦ ಯೋಜನೆಗಳ ಪ್ರಗತಿ ಬಗ್ಗೆ ಭಾಷಣ . ದೆಹಲಿ ರಿಲೆ ೮-೪೫ ವಾದ್ಯ ಸಂಗೀತ ೯-೧೫ ಚಿತ್ರ ಸಂಗೀತ ೯-೩೦ ಎರಡು ಆಡೆಗಳು ೧೦ ಬಿ ಆರ್ ಶಾಮಾಚಾರ್-ಕೊಳಲು.

ರಷ್ಯದಲ್ಲಿ ಮತ್ತಿಬ್ಬರು ನಾಯಕರ ಉಚ್ಚಾಟನೆ

ರಷ್ಯದಲ್ಲಿ ಇನ್ನಿಬ್ಬರು ಪ್ರಧಾನ ನಾಯಕರನ್ನು ಉಚ್ಚಾಟನೆಗೊಳಿಸಲಾಗಿದೆ ಅಲ್ಲಿನ ಉಪಪ್ರಧಾನಿಗಳಾದ ಪೆರೂವ್‌ಕಿನ್ ಮತ್ತು ಸಬುರೋವ್‌ರವರು ಈಗ ಪದಚ್ಯುತರಾಗಿರುವರು ಅವರನ್ನು ಪಕ್ಷದ ಕೇಂದ್ರ ಸಮಿತಿಯಿಂದಲೂ ಮತ್ತು ಅಧಿಕಾರ ಸ್ಥಾನದಿಂದಲೂ ತಪ್ಪಿಸಲಾಗಿದೆ

ಬಿಳಿ ಬಣ್ಣದ ಹುಲಿ

ರೀವಾ ಮಹಾರಾಜ ಠಾಕೂರ್ ಗುಲಾಬ್ ಸಿಂಹಜಿಯವರ ಅರಮನೆಯಲ್ಲಿ ಬಿಳಿಯ ಬಣ್ಣದ ಹುಲಿಯೊಂದನ್ನು ಸಾಕಲಾಗುತ್ತಿದೆ ಅದು ಮೊಲದಷ್ಟು ಬೆಳ್ಳಗಿರುತ್ತದೆ. ೯॥ ಅಡಿ ಉದ್ದ ೪॥ ಅಡಿ ಎತ್ತರವಿದೆ ಹುಲಿಯ ಜೊತೆಗೆ ಹೆಣ್ಣು ಹುಲಿಯೂ ಇರುತ್ತದೆ ಅವಕ್ಕೆ ೪ ಮರಿಗಳಿವೆ ಅವರ ಮರಿಗಳು ಮಾತ್ರ ಬೆಳ್ಳಗಿಲ್ಲ ನೇಕ ವಿದೇಶೀಯರು ಇವನ್ನು ಕೊಳ್ಳಲು ಮುಂದೆ ಬಂದು ೨೦,೦೦೦ ರೂ ಗಳಿಗೆ ಕೇಳಿದ್ದರು ದರೆ ಮಹಾರಾಜರು ಒಪ್ಪಿಲ್ಲ

ನಗರದಲ್ಲಿ ಸಂಸ್ಥಾನಗಳ ಚೀಫ್ ಇಂಜನಿಯರುಗಳ ಸಭೆ

ನಾನಾ ಸಂಸ್ಥಾನಗಳ ಚೀಫ್ ಇಂಜನಿಯರುಗಳ ಸಮ್ಮೇಳನವು ಈ ತಿಂಗಳು ೧೭ರಿಂದ ೨೦ರವರೆಗೆ ನಗರದಲ್ಲಿ ಸೇರುವುದು ಮೈಸೂರಿನ ರಾಜ್ಯಪಾಲರು ಅದರ ಆರಂಭೋತ್ಸವವನ್ನು ನೆರವೇರಿಸುವರು. ನೀರಾವರಿ ವಿದ್ಯುಚ್ಛಕ್ತಿ ವಿಚಾರಕ್ಕೆ ಸಂಬಂಧಿಸಿದ ಹಲವು ಪ್ರಾಮುಖ್ಯ ವಿಷಯಗಳನ್ನು ಪರಿಶೀಲಿಸಲಾಗುವುದು.

ನಗರದ ವೀರಶೈವರ ಸಭೆ

ಅಖಿಲ ಭಾರತ ವೀರಶೈವ ಮಹಾ ಸಭೆಯನ್ನು ಈ ವರ್ಷ ನಗರದಲ್ಲಿ ನಡೆಸುವ ವಿಚಾರದಾಗಿ ನಾಳೆ ಸಾಯಂಕಾಲ ೬ ಗಂಟೆಗೆ ವಾಣೀವಿಲಾಸ ರಸ್ತೆಯಲ್ಲಿರುವ ಕ್ಯಾತನಹಳ್ಳಿ ಸಿದ್ದಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಸಭೆಯನ್ನು ಏರ್ಪಡಿಸಿದೆ ಎಲ್ಲಾ ವೀರಶೈವರೂ ಭಾಗವಹಿಸಬೇಕೆಂದು ಕೋರಲಾಗಿದೆ

○ ಬೆಂಗಳೂರಿನಲ್ಲಿ ಕಳೆದ ೨೨ನೇ ತಾರೀಕಿಗೆ ಆಖೈರಾದ ಒಂದು ವಾರದಲ್ಲಿ ೨೩ ಜನರಿಗೆ ಸಿಡುಬು ತಗುಲಿ ಎಲ್ಲರೂ ಮೃತಪಟ್ಟಿರುತ್ತಾರೆ.

○ ರಜದ ಮೇಲಿರುವ ಶ್ರೀ ಎಸ್. ಎಸ್ ಹಿರಣ್ಣಯ್ಯನವರನ್ನು ಗುಲ್ಬರ್ಗಾ ಡಿವಿಜನ್ನಿನ ಕಮಿಷನರಾಗಿ ಮತ್ತೆ ನೇಮಿಸಲಾಗಿದೆ

ನುಗು ಜಲಾಶಯದಿಂದ ಕಾಲುವೆಗೆ ನೀರು

ಸ್ವಂ ವರದಿಗಾರ] ನಂಜನಗೂಡು ೬

ನುಗು ಜಲಾಶಯದಿಂದ ಇದೇ ಮೊದಲಿಗೆ ಈ ರಾತ್ರಿ ನೀರನ್ನು ಬಿಡಲಾಗಲಿದೆ. ಕಾಲುವೆಯು ೫೦ ಮೈಲಿ ಉದ್ದವಿದ್ದು ನಂಜನಗೂಡು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳ ೨೦,೦೦೦ ಎಕರೆ ಜಮೀನಿಗೆ ನೀರನ್ನು ಒದಗಿಸುವುದು ಜಲಾಶಯದ ಕಟ್ಟೆಯು ೧೨೦ ಅಡಿ ಎತ್ತರವಿದ್ದು ೧,೪೪೦ ಅಡಿ ಉದ್ದವಿದೆ ೩ ಕೋಟಿ ರೂ ವೆಚ್ಚದಿಂದ ಇದನ್ನು ಕಟ್ಟಲಾಗಿದೆ. ೧೯೪೭ ರಲ್ಲಿ ಕೆಲಸವು ಆರಂಭವಾಯಿತು

ರಷ್ಯದ ನಾಯಕರ ಉಚ್ಚಾಟನೆ

ನೆಹರೂರವರ ಸಮರ್ಥನೆ, ನಾನಾ ರಾಷ್ಟ್ರಗಳ ಪ್ರತಿಕ್ರಿಯೆ

ರಷ್ಯದ ಅಗ್ರ ನಾಯಕರ ಉಚ್ಚಾಟನೆಯನ್ನು ನೆಹರೂರವರು ಪ್ರಶಂಸಿಸಿ, ಈ ಬದಲಾವಣೆಗಳು ಹಿತಕರವಾದ ಮಾರ್ಗದ ಮತ್ತೊಂದು ಹೆಜ್ಜೆಯೆಂದು ಸೂಚಿಸಿರುತ್ತಾರೆ ಕೆಲವು ಕಾಲದಿಂದಲೂ ಆ ರಾಜ್ಯದಲ್ಲಿ ಆಗಿರುವ ಬದಲಾವಣೆಯ ಪ್ರಗತಿಯನ್ನು ಅದು ಸೂಚಿಸುವುದೆಂದೂ, ಅದರಿಂದ ಆ ದೇಶವು ಸಾಧಾರಣ ಪರಿಸ್ಥಿತಿಯ ಕಡೆಗೆ ಹೋಗುತ್ತಿರುವುದು ಕಾಣ ಬರುವುದಾಗಿಯೂ ಅವರು ತಿಳಿಸಿರುತ್ತಾರೆ

ಕ್ರಾಂತಿಯಾದ ಪ್ರತಿ ರಾಜ್ಯವೂ ಕಾಲಕ್ರಮದಲ್ಲಿ ಸಾಧಾರಣ ಪರಿಸ್ಥಿತಿಗೆ ಹಿಂದಿರುಗುವುದೆಂದೂ, ಕ್ರಾಂತಿಯು ಅಸಾಧಾರಣ ಪರಿಸ್ಥಿತಿಯೆಂದೂ, ರಷ್ಯದಲ್ಲಿ ಸಾಧಾರಣ ಪರಿಸ್ಥಿತಿಯು ಬರಲು ಇಷ್ಟೊಂದು ಕಾಲ ತಳ್ಳಿರುವುದು ಆಶ್ಚರ್ಯಕರ ಸಂಗತಿಯೆಂದೂ ನೆಹರೂರವರು ನುಡಿದಿರುವರು

ಅಮೆರಿಕದ ಅಧ್ಯಕ್ಷರಿಗೆ ರಷ್ಯದ ಬದಲಾವಣೆಗಳು ಮುಂಚೆಯೇ ತಿಳಿದಿದ್ದುವೆಂದು ಹೇಳಲಾಗಿದೆ. ರಷ್ಯದಲ್ಲಿ ಕ್ರುಶ್ಚೇವರ ಅಧಿಕಾರವು ಇನ್ನೂ ಅವ್ಯಾಹತವಾಗುವುದೆಂದು ಅಮೆರಿಕದಲ್ಲಿ ಅಭಿಪ್ರಾಯಪಡಲಾಗಿದೆ ಬ್ರಿಟಿಷ್ ವಿದೇಶಾಂಗ ಇಲಾಖೆಯು ರಷ್ಯಾ ಅಧಿಕಾರಿಗಳ ವಜಾ ಬಗ್ಗೆ ಮೌನವನ್ನು ತಾಳಿದೆ ಯುಗೊಸ್ಲೇವಿಯದ ಕಮ್ಯೂನಿಸ್ಟ್ ನಾಯಕರು ಬದಲಾವಣೆಯನ್ನು ಸ್ವಾಗತಿಸಿರುತ್ತಾರೆ

ನಾಪತ್ತೆಯಾಗಿದ್ದ ಪಾಕಿಸ್ತಾನದ ವಿಮಾನದ ಪತ್ತೆ

ಚಿತ್ತಗಾಂಗಿನಿಂದ ಢಾಕಾವಿಗೆ ಕೆಲವು ದಿನಗಳ ಹಿಂದೆ ಹೊರಟು ಕಣ್ಮರೆಯಾಗಿದ್ದ ಪಾಕಿಸ್ತಾನದ ವಿಮಾನವು ಬಂಗಾಳಕೊಲ್ಲಿಯ ನವಖಲಿ ತೀರದಲ್ಲಿರುವ ಚಾರಲಕ್ಕಿ ಎಂಬ ಸಣ್ಣ ದ್ವೀಪದಲ್ಲಿ ಮುರಿದು ಬಿದ್ದಿದ್ದುದು ಪತ್ತೆಯಾಗಿದೆ ಅದರಲ್ಲಿದ್ದ ೨೦ ಪ್ರಯಾಣಿಕರೂ ನಾಲ್ಕು ಜನ ಚಾಲಕರೂ ಮೃತಪಟ್ಟಿರುವರೆಂದು ಹೇಳಲಾಗಿದೆ ವಿಮಾನವು ಸಿಡಿದು ಜ್ವಾಲೆಯಿಂದ ಆವರಿಸಲ್ಪಟ್ಟು ಬಿದ್ದಿತೆಂದೂ ಗೊತ್ತಾಗಿದೆ

ಮಲ್ಪೆಯಲ್ಲಿ ಹಡಗು ನಿರ್ಮಾಣದ ಕೇಂದ್ರ

ಮಲ್ಪೆ ಅಥವಾ ಕಾರವಾರದಲ್ಲಿ ಭಾರತದ ೨ನೇ ಹಡಗು ನಿರ್ಮಾಣ ಕೇಂದ್ರವನ್ನು ಸ್ಥಾಪಿಸುವ ವಿಚಾರದ ಬಗ್ಗೆ ಸ್ಥಳ ಪರಿಶೀಲನೆ ನಡೆಸಲು ಇದೇ ತಿಂಗಳು ೧೦ನೇ ತಾರೀಕು ವಿದೇಶೀ ಪ್ರವೀಣರು ಅಲ್ಲಿಗೆ ಭೇಟಿ ಕೊಡುವರು

ಚೀಣದಲ್ಲಿ ಸಚಿವರಿಬ್ಬರಿಂದ ಬುಡಮೇಲು ಚಳುವಳಿ?

ಚೀಣದಲ್ಲಿ ಇಬ್ಬರು ಮಂತ್ರಿಗಳು ಅಲ್ಲಿನ ಕಮ್ಯೂನಿಸ್ಟ್ ಸರ್ಕಾರವನ್ನು ಉರುಳಿಸುವ ಉದ್ದೇಶದಿಂದ ಪಿತೂರಿ ನಡೆಸಿರುವರೆಂದು ಕಮ್ಯೂನಿಸ್ಟ್ ಪಕ್ಷದ ಸದಸ್ಯರೊಬ್ಬರು ಆಪಾದಿಸಿರುತ್ತಾರೆ

ಗಿರಿಜಾ ಕಲ್ಯಾಣದ ಸಂಗೀತ ಕಛೇರಿಗಳು

ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯವರ ಗಿರಿಜಾಕಲ್ಯಾಣೋತ್ಸವದ ಅಂಗವಾಗಿ ನಾಳೆ ಬೆಳಗ್ಗೆ ೧೦ ಗಂಟೆಗೆ ಕು ಎಸ್ ಆರ್ ಜಾನಕಮ್ಮನವರ ಮತ್ತು ಪಾರ್ಟಿಯವರು ಮತ್ತು ಸಂಜೆ ೭ಕ್ಕೆ ವಿ ಎಂ ಸಿ ಚಿಕ್ಕಸ್ವಾಮಿ ಮತ್ತು ಪಾರ್ಟಿಯವರ ಸಂಗೀತ ಕಛೇರಿಗಳು ಜರುಗುವುವು ರಾತ್ರಿ ೯ಕ್ಕೆ ವಿ ಟಿ ಎಸ್ ರಾಮಚಂದ್ರರವರ ಗಾಯನ ಕಛೇರಿಯು ವಿ ಆನೂರು ರಾಮಕೃಷ್ಣರವರ ಪಿಟೀಲು ಮತ್ತು ಆ ವಿ ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗಗಳೊಡನೆ ಜರುಗುವುದು

ಶಿಶು ಕ್ಷೇಮ—

ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ- ನಿರೋಧಕ ನಿವಾರಕ ಸಲಹೆಗಳಿಗೆ - 'ಲಿವರ್ ಹೌಸ್', ಚಾಮರಾಜಪುರಂ, ಮೈಸೂರು (ಸುತ್ತೂರು ಹಾಸ್ಟಲ್ ಹತ್ತಿರ)

ಹುಬ್ಬಳ್ಳಿ-ಬೆಂಗಳೂರು ಎಕ್ಸ್‌ಪ್ರೆಸ್ ರೈಲು

ಬೆಂಗಳೂರಿಗೆ ಪದೇಪದೇ ಬರುವವರ ಸೌಕರ್ಯಕ್ಕಾಗಿ ದಕ್ಷಿಣ ರೈಲ್ವೆಯವರು ಮೊನ್ನೆಯಿಂದ ಹುಬ್ಬಳ್ಳಿ ಮತ್ತು ಬೆಂಗಳೂರುಗಳ ನಡುವೆ ಮತ್ತೊಂದು ರೈಲನ್ನು ಬಿಡುತ್ತಿರುವರು ಪೂನಾ-ಹರಿಹರದ ಎಕ್ಸ್‌ಪ್ರೆಸ್ ರೈಲಿನ ವಿಸ್ತರಣೆಯಿದು ಹುಬ್ಬಳ್ಳಿಯಿಂದ ರಾತ್ರಿ ೮-೫ಕ್ಕೆ ಬಿಟ್ಟು ಬೆಂಗಳೂರನ್ನು ಮಾರನೇ ದಿನ ಬೆಳಗ್ಗೆ ೧೦-೨೦ಕ್ಕೆ ಅದು ತಲುಪುವುದು ಬೆಂಗಳೂರಿನಿಂದ ರಾತ್ರಿ ೭॥ಗೆ ಬಿಟ್ಟು, ಹುಬ್ಬಳ್ಳಿಗೆ ಮಾರನೇ ಬೆಳಗ್ಗೆ ೯-೩೦ಕ್ಕೆ ಸೇರುವುದು

"ವಂದೇಮಾತರಂ" ನಾಟಕದ ಆರಂಭೋತ್ಸವ

ನಗರದ ಶ್ರೀ ಗಾಯತ್ರೀ ಲಲಿತಕಲಾ ಸಂಘದವರು ಮೊನ್ನೆ ಸಂಜೆ ಶ್ರೀ ಹೆಚ್ ಎಂ ಮುದ್ದಯ್ಯನವರ ಅಧ್ಯಕ್ಷತೆಯಲ್ಲಿ 'ವಂದೇಮಾತರಂ' ಎಂಬ ಸಾಮಾಜಿಕ ನಾಟಕದ ಆರಂಭೋತ್ಸವವನ್ನೂ ಮತ್ತು ಶಾರದಾ ಪೂಜೆಯನ್ನೂ ನೆರವೇರಿಸಿದರು ಶ್ರೀಮತಿ ವಿ ಶೈಲಜಾರವರಿಂದ ಪ್ರಾರ್ಥನೆಯಾದ ನಂತರ, ನಾಟಕದ ಸಮಿತಿಯ ನಿರ್ದೇಶಕರಾದ ಶ್ರೀ ಎ ವಿ ಕೃಷ್ಣಮೂರ್ತಿಯವರು ಸ್ವಾಗತ ಭಾಷಣ ಮಾಡಿದರು ಶ್ರೀ ಎಸ್ ವೈ ಸುಂದರ್ ಮತ್ತು ಪಾರ್ಟಿಯವರಿಂದ ಲಘು ಗೀತೆಗಳಾದ ನಂತರ ಮಂಗಳಾರತಿ ನಡೆದು, ಅಧ್ಯಕ್ಷರು ನಾಟಕದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಅಧ್ಯಕ್ಷ ಶ್ರೀ ಹೆಚ್ ಎಂ ಮುದ್ದಯ್ಯನವರು ಭಾಷಣ ಮಾಡಿ, ನಶಿಸುತ್ತಿರುವ ನಾಟಕ ಕಲೆಯ ಪುನರುಜ್ಜೀವನಕ್ಕೆ ಸರ್ವರೂ ಶ್ರಮಿಸಬೇಕೆಂದು ಕೋರಿದರು

ಅಳತೆ ಮತ್ತು ತೂಕದಲ್ಲಿ ಮೆಟ್ರಿಕ್ ಪದ್ಧತಿ

ಅಳತೆ ಮತ್ತು ತೂಕದಲ್ಲಿ ಮೆಟ್ರಿಕ್ ಪದ್ಧತಿಯನ್ನು ಜಾರಿಗೆ ತರುವ ವಿಷಯವನ್ನು ಮೊನ್ನೆ ಬೆಂಗಳೂರಿನಲ್ಲಿ ಸೇರಿದ್ದ ಡಿವಿಜನಲ್ ಕಮೀಷನರುಗಳ ಸಭೆಯಲ್ಲಿ ಚರ್ಚಿಸಲಾಯಿತು ಸ್ಥಳೀಯ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವೀಯುವುದ ಮುಂತಾದುವನ್ನೂ ಸಹ ಪರಿಶೀಲಿಸಲಾಯಿತು

ಮೈಸೂರು ಪೇಟೆ ಧಾರಣೆ

ಕೊಯಮುತ್ತೂರು	೩೩ ೭೭	
ಕಣ್ಣಕೂಡಿ	೩೧ ೩೭	೩೧ ೧೨
ಬಂಗಾರಕಡ್ಡಿ	೨೯ ೦೦	
ರಾಗಿ	೩೪ ೫೭	೩೬ ೯೭
ಕಡಲೆಕಾಯಿ	೯೩ ೦೦	೧೮ ೯೭
ಎಳ್ಳು	೭೩ ೦೦	೭೯ ೦೦
ಹೊಂಗೆಬೀಜ	೨೯ ೫೦	
ಹುಚ್ಚೆಳ್ಳು	೪೬ ೦೦	
ಹುರುಳಿ	೩೧ ೦೦	೨೩ ೫೦
ಹೆಸರು	೩೨ ೦೦	೬೧ ೩೭
ಹಲಸಂದೆ	೩೪ ೦೦	೪೮ ೩೭
ಧನಿಯ	೧೯ ೭೫	೨೧ ೦೦
ಕಡಲೆ	೪೬ ೧೨	
ಉದ್ದು	೫೦ ೦೦	೫೬ ೧೨
ಹುಣಿಸೇಹಣ್ಣು	೨ ೬೯	೩ ೬೨
ಮೆಣಸಿನಕಾಯಿ	೧೩ ೫೦	೧೪ ೫೦
ತೆಂಗಿನಕಾಯಿ	೧೭೧ ೦೦	[illegible] ೦೦

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲೆ ಬೀದಿ,
ಮೈಸೂರು

ಶ್ರೇಷ್ಠತರವಾದ ಅಗರಬತ್ತಿ, ಗಂಧದ ಬಿಲ್ಲೆ ಕಾಶ್ಮೀರದ ಕೇಸರಿ ಮತ್ತು ಇತರೆ ಸುಗಂಧ ದ್ರವ್ಯಗಳಿಗೆ ಇಂದೇ ಭೇಟಿ-ಕೊಡಿ

CITY TUTORIAL COLLEGE
Old Agrahar, Mysore
B A & B Sc – Kannada & English
Classes Commenced
INTER – English (56 & 57 Texts)
Kannada, Samskrita,
P C M & C B Z.
Classes in full swing

Admissions for S S L C will close on 10-7 57 Join at once

ವ್ರಣ ರೋಗದ ಬಗ್ಗೆ ಆಯುರ್ವೇದದ ಸಂಶೋಧನೆಗಾಗಿ ಸಹಾಯ

ವಿಜಯವಾಡದ ಬಳಿ ಮಚಲಿಪಟ್ಟಣ ಎಂಬಲ್ಲಿರುವ ಚಂದ್ರಮೌಳೀಶ್ವರ ವ್ರಣ ಸಂಶೋಧನಾಲಯಕ್ಕೆ ಕೇಂದ್ರ ಸರ್ಕಾರದವರು ೨೦,೦೦೦ ರೂ. ಗ್ರಾಂಟನ್ನು ಕೊಟ್ಟಿರುತ್ತಾರೆ ಅಲ್ಲಿ ಆಯುರ್ವೇದ ರೀತ್ಯಾ ವ್ರಣ ರೋಗದ ಸಂಶೋಧನೆ ನಡೆಸಲಾಗುವುದು

ಮೇಳದಲ್ಲಿ ೩೦೦ ವಿವಾಹಗಳ ನಿಶ್ಚಿತಾರ್ಥ

ಮೈಥಿಲಿ ಬ್ರಾಹ್ಮಣರ ವಾರ್ಷಿಕ ವಿವಾಹ ಮೇಳವು ಕಳೆದ ಶುಕ್ರವಾರ ದರ್ಭಾಂಗದಲ್ಲಿ ಸೇರಿ ೩೦೦ ವಧೂವರರ ವಿವಾಹಗಳ ನಿಶ್ಚಯವಾಯಿತು ೨೫ ಸಾವಿರ ಜನರು ಮೇಳದಲ್ಲಿ ಭಾಗವಹಿಸಿದ್ದರು

ಪದ್ಮಾವತೀ ಪರಿಣಯ

ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ಒಂದು ತಿಂಗಳಿಂದ ನಡೆಯುತ್ತಿದ್ದ ಶ್ರೀನಿವಾಸ ಕಲ್ಯಾಣ ಪುರಾಣದ ಶ್ರೀ ಪದ್ಮಾವತೀ ಪರಿಣಯ ಘಟ್ಟವು ಕಳೆದ ಬುಧವಾರ ನೆರವೇರಿತು ಬ್ರಾಹ್ಮಣ ಸಂತರ್ಪಣೆಯೂ, ಕಲ್ಯಾಣ ಮಹೋತ್ಸವವೂ ನೆರವೇರಿ, ರಾತ್ರಿ ಶ್ರೀ ಪಿ ಎ ಗಿರಿಧರಮೂರ್ತಿಯವರ ವಾಚನವೂ, ಶ್ರೀ ಎಸ್ ಲಕ್ಷ್ಮೀನರಸಿಂಹರವರಿಂದ ವ್ಯಾಖ್ಯಾನವೂ ನಡೆದುವು ರಿಟೈರ್ಡ್ ಸೂಪರಿಂಟೆಂಡಿಂಗ್ ಇಂಜನಿಯರಾದ ಶ್ರೀ ಎಂ. ಆರ್ ಕೃಷ್ಣಮೂರ್ತಿರಾಯರ ಉಪನ್ಯಾಸವು ನಡೆಯಿತು. ಶ್ರೀ ಕೃಷ್ಣಗಿರಿ ಕೃಷ್ಣರಾಯರು ಗಮಕದ ವಿಷಯವಾಗಿ ಉಪನ್ಯಾಸ ಮಾಡಿದರು

ತೆಂಗಿನಕಾಯಿ ವರ್ತಕರ ಸಭೆ

ನಗರದ ತೆಂಗಿನಕಾಯಿ ವರ್ತಕರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಭಾನುವಾರ ಫ್ಲೂ' ಪ್ರಯುಕ್ತ ಮುಂದುವರಿಸಲ್ಪಟ್ಟು ಇದೇ ೧೦ನೇ ತಾರೀಕು ಬುಧವಾರ ಸಂಜೆ ೭ ಗಂಟೆಗೆ ಸಂಘದ ಕಛೇರಿಯಲ್ಲಿ ಸೇರುವುದು ಸದಸ್ಯರು ಸಭೆಗೆ ದಯಮಾಡಿಸಬೇಕಾಗಿ ಕೋರಿದೆ

ಈಜಿಪ್ಟಿನಲ್ಲಿ ಮಹಾ ಚುನಾವಣೆ

ಈಜಿಪ್ಟಿನ ರಾಷ್ಟ್ರೀಯ ಸಭೆಯ ೩೫೦ ಜನ ಸದಸ್ಯರ ಆಯ್ಕೆಗಾಗಿ ಮೊನ್ನೆ ಆ ದೇಶಾದ್ಯಂತ ಚುನಾವಣೆಯು ನಡೆಯಿತು ಅಧ್ಯಕ್ಷ ನಾಸೆರ್‌ರವರು ಮತ್ತು ಮಂತ್ರಿಗಳ ಸಮಿತಿಯೊಂದು ಸೂಚಿಸಿರುವ ೧೨೫೧ ಮಂದಿ ಉಮೇದುವಾರರ ಪೈಕಿ ಮತದಾರರು ಸದಸ್ಯರನ್ನು ಆರಿಸುವರು ೭೩ ಸದಸ್ಯರು ಅವಿರೋಧವಾಗಿ ಆರಿಸಲ್ಪಟ್ಟಿರುವುದರಿಂದ ಶೇಕಡ ೨೦ ಮಂದಿ ಮತದಾರರು ಓಟು ಮಾಡುವ ಪ್ರಮೇಯವಿಲ್ಲ ಅಲ್ಲಿ ೨ ಲಕ್ಷ ಮಹಿಳೆಯರೂ ಸೇರಿ ೫೯ ೬೪,೭೫೪ ಓಟರುಗಳಿರುವರು ಓಟು ಚಲಾಯಿಸಲು ಸಹಸ್ರಾರು ಜನರು ಉಚಿತವಾಗಿ ರೈಲು ಮತ್ತು ಬಸ್ಸುಗಳಲ್ಲಿ ಪ್ರಯಾಣ ಮಾಡಿದರು.

ವಿದ್ಯುಚ್ಛಕ್ತಿ ತಂತಿ ತಗಲಿ ಮರಣ

ನಗರದ ಟೆಲಿಫೋನ್ ಶಾಖೆಯ ಶಿವಾಸ್ವಾಮಿ ಎಂಬ ೩೩ ವರ್ಷದ ಕೆಲಸಗಾರನು ನಿಜಗಲ್ಲು ದಿನದಲ್ಲಿ ನೆನ್ನೆ ಟೆಲಿಫೋನ್ ಕಂಬವನ್ನು ಹತ್ತಿ ಕೆಲಸ ಮಾಡುತ್ತಿದ್ದಾಗ ಆಕಸ್ಮಾತ್ ವಿದ್ಯುಚ್ಛಕ್ತಿ ತಂತಿ ತಗುಲಿ ತಕ್ಷಣವೇ ಮೃತಪಟ್ಟನು

SREE GAYATHRI
On 6-7 57
Rumyanstsev Case
With Fix the Builder
(Colour Cartoon)

ಲಕ್ಷ್ಮಿ ★ ಟಾಕೀಸ್
6 7 57ನೇ ಶನಿವಾರದಿಂದ
ದಿನಕ್ಕೆ 2 ಆಟಗಳು
ಸಂಜೆ 7, ರಾತ್ರಿ 10 15
ಅರುಣಾ ಫಿಲಂಸ್‌ರವರ
ಡಾಕ್ಟರ್ ಸಾವಿತ್ರಿ (ತಮಿಳು)
ಭೂಮಿಕೆ - ಅಂಜಲಿ, ಎಂ ಎನ್ ರಾಜ್ಯಂ ಸಂದ ಯಾಲ್ ಬಾಲಚಂದರ್, ಕೃಷ್ಣನ್, ಮಧುರಂ

Edited Printed and Published by A R Nagarajan at Sadhvi Press D Subbiah Road Mysore

THE STATE SPORTS WORKS
297 Lakshmivilas Agrahar, Mysore

We have much pleasure in announcing that A Branch will be opened
FROM MONDAY 8th JULY 1957
In 1687-B. Hanumantha Rao Road,
(Near Prabha Talkies)
in order to give more facilities to our esteemed patrons

THE CHAMPION METROPOLITAN COLLEGE OF COMMERCE
Co operators Home 100' Road Mysore
78 per cent 100 per cent GOOD RESULTS IN
several subjects & Grades
APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE Diploma in Stenography COST & WORKS ACCOUNTANCY Banking, Shorthand, Type-writing etc,
Estd 1917 — Fully qualified full-time staff — Educational atmosphere — Fine building and up-to-date equipment — Decent Library and Reading Room — Western Business education in the East — Good results — College's Own Diploma also.
M S PUTTANNA, B Sc, N D Com, F I B Vice-Principal
P SUBBARAYA SASTRY, M A M A (Com), F I.B Principal

ಪ್ರಭು ದೇವಾ ಥಿಯೇಟರ್
(ಪದ್ಮಾ ಟಾಕೀಸ್)
7—7—57ನೇ ಭಾನುವಾರದಿಂದ • ಅಶೋಕ ಪ್ರೊಡಕ್ಷನ್ಸ್
★ ಜಯಸಿಂಹ ★
ಎನ್. ಟಿ ರಾಮರಾವ್, ಅಂಜಲಿದೇವಿ, ಎಸ್ ವಿ ರಂಗರಾವ್, ಡಿಎಫಾ, ವಹೀದಾ ರಹಮಾನ್, ರಾಜನಾಲ ಮುಂತಾದವರು ನಟಿಸಿರುವ ತಮಿಳು ಚಿತ್ರ

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿಪ ಪತ್ರಿಕೆ 2 ನಯೆಪೈಸೆ

ಚಂದಾ ದರ — ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ ಅಂಚೆ ಮೂಲಕ ತಿಂಗಳಿಗೆ ಒಂದು ರೂ ಬಿಡಿ ಪತ್ರಿಕೆ 2 ನಯೆಪೈಸೆ

ಸಂಪುಟ : ೦೮] SADHVI SUNDAY 7—7—1957 ಮೈಸೂರು : ಭಾನುವಾರ ೭—೭—೧೯೫೭ [ಸಂಚಿಕೆ : ೩೬೩

ಗಲ್ಲು ಶಿಕ್ಷೆಯಾದ ವಾಸುಪಿಳ್ಳೆಗೆ ರಾಷ್ಟ್ರಾಧ್ಯಕ್ಷರ ಕ್ಷಮೆ

ಮರಣ ದಂಡನೆಗೆ ಗುರಿಯಾದ ವಾಸುಪಿಳ್ಳೆಗೆ ರಾಷ್ಟ್ರಪತಿ ಕ್ಷಮೆ

ಮೂರು ವರ್ಷಗಳ ಹಿಂದೆ ಕೇರಳದ ಒಂದು ಪಂಚಾಯತಿ ಚುನಾವಣೆಯಲ್ಲಿ ಕಾಂಗ್ರೆಸ್ಸಿನವನೊಬ್ಬನನ್ನು ಕೊಲೆ ಮಾಡಿ, ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಸದಸ್ಯ ವಾಸುಪಿಳ್ಳೆಗೆ ರಾಷ್ಟ್ರಾಧ್ಯಕ್ಷರು ಕ್ಷಮೆ ತೋರಿದ್ದಾರೆ. ಆತನ ಮರಣದಂಡನೆಯನ್ನು ತಪ್ಪಿಸಿಗೊಳಿಸಿ, ಜೀವಾವಧಿ ಶಿಕ್ಷೆಗೆ ಇಳಿಸಲಾಗಿದೆ. ಮರಣ ದಂಡನೆಯನ್ನು ಖಾಯಂ ಮಾಡಿ ೧೮ ತಿಂಗಳಾದ ಕಾರಣ ಶಿಕ್ಷೆಯನ್ನು ಇಳಿಸಲಾಗಿರುವುದೆಂದು ಸೂಚಿಸಲಾಗಿದೆ. ಜೀವಾವಧಿ ಶಿಕ್ಷೆಯನ್ನು ಇನ್ನೂ ಕಡಿಮೆ ಮಾಡುವುದಿಲ್ಲವೆಂದು ಕೇರಳ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಭರವಸೆಯಿತ್ತಿರುವರು.

ಹೆಚ್ಚು ಆಹಾರ ಬೆಳೆಗೆ ಸಂಸ್ಥಾನದಲ್ಲಿ ೨೩ ಯೋಜನಾ ಕೇಂದ್ರಗಳು

ಪ್ರಸಕ್ತ ಸಾಲಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆ ಕಾರ್ಯಕ್ರಮದ ಅಂಗವಾಗಿ ೨೩ ಯೋಜನೆಗಳನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿರುತ್ತಾರೆ. ಈ ಪೈಕಿ ಎರಡು ಯೋಜನೆಗಳು ತೀವ್ರ ಸಾಗುವಳಿಯ ಅಂಗವಾದ ಕಾಂಪೋಸ್ಟ್ ಗೊಬ್ಬರ ಮತ್ತು ಉತ್ತಮ ಬೀಜಗಳ ಹಂಚಿಕೆಗೆ ಸಂಬಂಧಪಟ್ಟಿವೆ. ಇದರಿಂದ ೩,೩೦,೭೦೦ ಎಕರೆ ಜಮಾನಿಗೆ ಹೆಚ್ಚಿನ ಸೌಲಭ್ಯವು ದೊರೆತು, ೩೩,೭೩೩ ಟನ್ ಹೆಚ್ಚು ವರಿ ಧಾನ್ಯವು ದೊರೆಯುವುದೆಂದು ಅಂದಾಜಾಗಿದೆ. ಸರ್ಕಾರದವರು ೮೮ ಸಾವಿರ ಮಣ ಉತ್ತಮ ಬೀಜ, ೩,೫೦೩ ಟನ್ ಸಲ್ಫರ್ ಫಾಸ್ಫೇಟ್ ಮತ್ತು ೫೦೦ ಟನ್ ಮೂಳೆ ಗೊಬ್ಬರವಲ್ಲದೆ ೧,೦೩,೩೦೦ ಟನ್ ಮೂಳೆ ಕಾಂಪೋಸ್ಟ್ ಅನ್ನೂ ತಯಾರಿಸಿ ಒದಗಿಸುವರು. ಈ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದವರು ೩-೧೩ ಲಕ್ಷ ರೂ. ನೆರವನ್ನು ಕೊಡುವರು.

ರೇಡಿಯೊ ಆಡಿಷನ್ ಸಮಿತಿಯಲ್ಲಿ ಟಿ. ಚೌಡಯ್ಯನವರು

ಆಕಾಶವಾಣಿಯ ದಕ್ಷಿಣ ಭಾಗದ ಆಡಿಷನ್ ಬೋರ್ಡಿನಲ್ಲಿ ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆ, ರಾಜಮಾಣಿಕ್ಯಂಪಿಳ್ಳೆ, ಟಂಬೈ ವೈದ್ಯನಾಥ ಭಾಗವತರ್, ಮೈಸೂರಿನ ಸಂಗೀತರತ್ನ ಟಿ. ಚೌಡಯ್ಯ, ಮುಸಿರಿ ಸುಬ್ರಹ್ಮಣ್ಯ ಅಯ್ಯರ್, ಜಸ್ಟಿಸ್ ಟಿ. ಎಲ್. ವೆಂಕಟರಾಮಯ್ಯರ್ ಮತ್ತು ಪಲ್ಲಡಂ ವೆಂಕಟೇಶ್ವರ ಶರ್ಮರವರು ಸದಸ್ಯರಾಗಿರುತ್ತಾರೆ. ಈ ಸಮಿತಿಯನ್ನೂ ಉತ್ತರ ಭಾಗದ ಸಮಿತಿಯನ್ನೂ ಒಂದು ವರ್ಷಕ್ಕಾಗಿ ನೇಮಿಸಲಾಗಿದೆ.

ಬೆಂಗಳೂರು ಇಂಜನಿಯರಿಂಗ್ ಶಾಲೆಯಲ್ಲಿ ಹೆಚ್ಚು ಸ್ಥಾನ

ಬೆಂಗಳೂರಿನ ಇಂಜನಿಯರಿಂಗ್ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ೨೧೦ ರಿಂದ ೨೪೦ಕ್ಕೆ ಹೆಚ್ಚಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಿಯೋಗವೊಂದಕ್ಕೆ ಭರವಸೆಯಿತ್ತಿರುವುದಾಗಿ ಹೇಳಲಾಗಿದೆ.

ಸರ್ಕಾರದಿಂದ ಮಾರಾಟವಾಗುವ ಗೋಧಿ ಬೆಲೆಯು ನಿಗದಿ

ಬೆಂಗಳೂರು ೬

ಕೇಂದ್ರ ವ್ಯವಸಾಯ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪ ಮತ್ತು ಪ್ರಾದೇಶಿಕ ಆಹಾರ ಡೈರೆಕ್ಟರ್ ಡಾ|| ಆನಂದ್‌ರವರು ಮೈಸೂರು ಸರ್ಕಾರದ ಪ್ರತಿನಿಧಿಗಳೊಡನೆ ಸಂಸ್ಥಾನದಲ್ಲಿ ಕೇಂದ್ರದವರ ಗೋಧಿ ಹಂಚಿಕೆ ಬಗ್ಗೆ ಚರ್ಚೆ ನಡೆಸಿರುತ್ತಾರೆ. ಇಲ್ಲಿ ಒಂದು ಪಲಿಕ್ಕೆ ೨ ... ರೂ.ನಷ್ಟು ಗೋಧಿಯನ್ನು ಒದಗಿಸಲಾಗುವುದು. ಸಂಸ್ಥಾನದ ಇತರ ಕಡೆಗಳಲ್ಲೂ ಇದನ್ನು ಹಂಚಲಾಗುವುದು. ಗೋಧಿಯನ್ನು ಸಗಟಾಗಿ ೧-೭ ಗೆ ... ಗೊತ್ತುಪಡಿಸಲಾಗಿದೆ. ... ಬಂಗಾಳಾ ಮಣಕ್ಕೆ ೧೬ ... ಮತ್ತು ಗೋಧಿ ಹಿಟ್ಟನ್ನು ... ಮಾರಲಾಗುವುದು. ಸಾರ್ವಜನಿಕರು ಈ ಬೆಲೆಗಿಂತ ಹೆಚ್ಚು ಕೊಡಬಾರದೆಂದು ಸೂಚಿಸಲಾಗಿದೆ.

ಬೆಂಗಳೂರು ಪ್ರಯೋಗ ಶಾಲೆಯಲ್ಲಿ ಇನ್‌ಫ್ಲ್ಯೂಯೆಂಜಾ ವಿಷದ ಬೇರ್ಪಡಿಸುವಿಕೆ

ಸಂಸ್ಥಾನದ ಆರೋಗ್ಯ ಇಲಾಖೆಯ ವ್ಯಾಕ್ಸೀನ್ ಸಂಸ್ಥೆಯ ಪ್ರಯೋಗ ಶಾಲೆಯಲ್ಲಿ ಇನ್‌ಫ್ಲ್ಯೂಯೆಂಜಾ ರೋಗದ ವಿಷವನ್ನು ಬೇರ್ಪಡಿಸುವ ಕಾರ್ಯವು ಯಶಸ್ವಿಯಾಗಿ ನಡೆದಿದೆಯೆಂದು ತಿಳಿದುಬಂದಿದೆ.

ಸೋತ ಮಂತ್ರಿಗಳಿಗೆ ಸ್ಥಾನಗಳನ್ನು ಕಲ್ಪಿಸಲಾಗದು

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ತೀರ್ಮಾನ

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಮನ್ನಾರಾಯಣರವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ವಿಶೇಷ ರೀತಿಯಲ್ಲಿ ಸ್ಥಾನಗಳನ್ನು ಖಾಲಿ ಮಾಡಿಸಿ ಚುನಾವಣೆಯಲ್ಲಿ ಸೋತ ಸಚಿವರುಗಳಿಗೆ ಅವಕಾಶ ಕೊಡುವುದಿಲ್ಲವೆಂದು ಸೂಚಿಸಿದರು. ಸೋತ ಅಭ್ಯರ್ಥಿಗಳನ್ನು ಮೇಲ್ಮನೆಗಳಿಗೆ ನಾಮಕರಣ ಮಾಡಕೂಡದೆಂದು ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಸಮಿತಿಯು ನಿರ್ಧರಿಸಿರುವುದಾಗಿಯೂ ಅವರು ಸೂಚಿಸಿದರು. ಸಾಮಾನ್ಯವಾಗಿ ಖಾಲಿಯಾಗುವ ಸ್ಥಾನಗಳಿಗೆ ಮಾತ್ರ ಸೋತ ಮಂತ್ರಿಗಳನ್ನು ಆರಿಸಬಹುದೆಂದೂ ಅವರು ತಿಳಿಸಿದರು.

ತಂಜಾವೂರಿನಲ್ಲಿ ಸಂಗೀತ ಕಛೇರಿಗಳು

ತಂಜಾವೂರು ಶ್ರೀಶಂಕರೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣದ ಪ್ರಯುಕ್ತ ನಾಳೆ ಸಂಜೆ ೬.೩೦ ಗಂಟೆಗೆ ಶ್ರೀ ಕೆ. ಎಸ್. ಲಕ್ಷ್ಮೀನಾರಾಯಣನ್‌ರವರಿಂದ ಶಂಕರ ಸ್ತೋತ್ರ ಪಠಣವೂ, ೭ ಗಂಟೆಗೆ ವಿ|| ಶಿವನಾದಪ್ಪ ಮತ್ತು ಪಾರ್ಟಿಯವರಿಂದಲೂ, ೮ ಗಂಟೆಗೆ ವಿ|| ಎಚ್. ವಿ. ಕೃಷ್ಣರಾಯರ ಪಿಟೀಲು ಮತ್ತು ವಿ|| ರಾಮಚಂದ್ರರವರ ಮೃದಂಗದೊಡನೆ ವಿದುಷಿ ಡಿ. ಭಾಗೀರಥಮ್ಮನವರಿಂದಲೂ ಮತ್ತು ೯-೩೦ ಗಂಟೆಗೆ ವಿ|| ಬಿ. ಎಂ. ಮುನಿವೆಂಕಟಪ್ಪನವರಿಂದಲೂ ಸಂಗೀತ ಕಛೇರಿಗಳೂ ಜರುಗುವುವು.

ಮಾಲಟೋವ್ ಮತ್ತು ಇತರರಿಂದ ಅಧಿಕಾರಾಕ್ರಮಣ ಪ್ರಯತ್ನ

ಉಚ್ಚಾಟಿತರಾದ ನಾಯಕರ ಬಗ್ಗೆ ಕ್ರುಶ್ಚೇವರ ಖಂಡನೆ

ಲೆನಿನ್‌ಗ್ರಾಡಿನಲ್ಲಿ ನೆನ್ನೆ ರಷ್ಯದ ಕಮ್ಯೂನಿಸ್ಟ್ ನಾಯಕ ನಿಕಿಟಾ ಕ್ರುಶ್ಚೇವರು ಮಾತನಾಡಿ ಇತ್ತೀಚೆಗೆ ಉಚ್ಚಾಟನೆ ಮಾಡಲ್ಪಟ್ಟ ಮಾಲೆಂಕೋವ್, ಮಾಲಟೋವ್ ಮತ್ತು ಕಗನೋವಿಚ್‌ರವರು ಸರ್ಕಾರದ ಮತ್ತು ಕಮ್ಯೂನಿಸ್ಟ್ ಪಕ್ಷಗಳಲ್ಲಿ ಮುಖ್ಯ ಸ್ಥಾನಗಳನ್ನು ಆಕ್ರಮಿಸಿ ಪಕ್ಷದ ರಾಜಕೀಯ ನೀತಿಯನ್ನು ಬದಲಾಯಿಸುವ ಹವಣಿಕೆಯನ್ನಿಟ್ಟುಕೊಂಡಿದ್ದರೆಂದು ತಿಳಿಸಿದರು. ಕಳೆದ ವರ್ಷ ನಡೆದ ಪಕ್ಷದ ೨೦ನೇ ಕಾಂಗ್ರೆಸ್ಸಿನ ನಿರ್ಧಾರಗಳನ್ನು ಇವರುಗಳು ವಿರೋಧಿಸಿದರು. ... ಇದ್ದವರನ್ನು ಈಗ ತೆಗೆದುಹಾಕಲಾಗಿರುವುದೆಂದು ಅವರು ಹೇಳಿದರು. ಹಿಂದೆ ವಿದೇಶಾಂಗ ಮಂತ್ರಿಯಾಗಿದ್ದು ಪದಚ್ಯುತರಾದ ಡಿಮಿಟ್ರಿ ಶಿಪಿಲೋವ್‌ರವರು ಎರಡು ಬಗೆಯುವ ದ್ರೋಹಿಯೆಂದು ಅವರು ಖಂಡಿಸಿದರು.

ರಷ್ಯದ ಪ್ರಧಾನಿ ಬುಲ್ಗಾನಿನ್ನರು ಮಾತನಾಡಿ ೨೫ ವರ್ಷಗಳಿಂದ ಮಾಲಟೋವ್-ಮಾಲೆಂಕೋವ್ ಗುಂಪು ಪಕ್ಷದ ಕಾರ್ಯಗಳಿಗೆ ವಿರೋಧವಾಗಿತ್ತೆಂದು ಸೂಚಿಸಿದರು. ಅವರುಗಳ ಉಚ್ಚಾಟನೆ ಕ್ರಮಕ್ಕೆ ರಷ್ಯದ ಸಮಸ್ತ ಸೈನ್ಯಗಳ ಬೆಂಬಲವಿರುವುದೆಂದು ಅಲ್ಲಿನ ರಕ್ಷಣಾ ಮಂತ್ರಿ ಝುಕಾಫ್‌ರವರು ಹೇಳಿದರು.

ಅಣು ಶಸ್ತ್ರದ ಪೂರ್ಣ ನಿಷೇಧಕ್ಕೆ ಅಮೇರಿಕದ ಸಮ್ಮತಿ ಇಲ್ಲ

ವಿಶ್ವ ಸಂಸ್ಥೆಯ ಶಸ್ತ್ರ ಸನ್ಯಾಸ ಸಮಿತಿ ಸಭೆಯಲ್ಲಿ ಅಮೇರಿಕದ ಪ್ರತಿನಿಧಿ ಹೆರಾಲ್ಡ್ ಸ್ಟಾಸೆನ್‌ರವರು ಮಾತನಾಡಿ ಅಣು ಶಸ್ತ್ರಗಳ ಪೂರ್ಣ ನಿಷೇಧಕ್ಕೆ ತಮ್ಮ ರಾಷ್ಟ್ರವು ಒಪ್ಪುವುದಿಲ್ಲವೆಂದು ತಿಳಿಸಿರುತ್ತಾರೆ.

ಫೆಬ್ರವರಿ ಮಾರ್ಚಿಯಲ್ಲಿ ಜಿಲ್ಲಾ ಬೋರ್ಡ್ ಚುನಾವಣೆ

ಈ ವರ್ಷ ಡಿಸೆಂಬರಿನಲ್ಲಿ ಬೆಂಗಳೂರು ನಗರದ ಪೌರಸಭಾ ಚುನಾವಣೆ ನಡೆಸಲಾಗುವುದೆಂದೂ, ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಆರ್. ಚನ್ನಿಗರಾಮಯ್ಯನವರು ತಿಳಿಸಿರುತ್ತಾರೆ. ಜಿಲ್ಲಾ ಬೋರ್ಡುಗಳಿಗೆ ಮುಂದಿನ ಫೆಬ್ರವರಿ ಅಥವಾ ಮಾರ್ಚಿಯಲ್ಲಿ ಚುನಾವಣೆಗಳಾಗುವುವೆಂದೂ ಅವರು ತಿಳಿಸಿರುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫೫ ಕೊಳಲು ೭-೧೫ ವಿ. ಹೆಚ್. ಶ್ರೀನಿವಾಸಮೂರ್ತಿ-ಜೀವನ ಶ್ರಾವ್ಯ ೮-೧೫ ಗಾನ ವಿಹಾರ. ಮಧ್ಯಾಹ್ನ ೧-೩೦ ವಿ. ಹೆಚ್. ಶ್ರೀನಿವಾಸಮೂರ್ತಿ-ಗಾಯನ ೧-೩೦ ಎ. ರಾಜಲಕ್ಷ್ಮಿ-ವೀಣೆ ೧ ಮತ್ತು ೧-೩೦ ರವೀಂದ್ರ-ಸಂಗೀತ ೧-೫೦ ಕೊಳಲು. ಸಂಜೆ ೬-೧೦ ರಿ. ಕಾರ್ಯ ೬.೩೦ ಹಿಂದಿಗೀತೆ ೮ ಸ್ವಿಂಗರ್‌ಗಳು ಮತ್ತು ಯುಗಳ ಗಾನ ೮-೧೫ ತಾಳೆ ಮತ್ತು ನಮ್ಮವರು. ೮.೩೦ ಸಂಗೀತ ೮-೫೫ ರೀಕಾರ್ಡ್ ೯-೧೫ ಸಿತಾರ್ ಶ್ರೀ ಜಯಚಾಮರಾಜ ಒಡೆಯರ ಕೃತಿಗಳು ೯.೩೦ ಎ. ರಾಜಲಕ್ಷ್ಮಿ ವೀಣೆ

ಸೋಮನಾಥಯ್ಯರ್ ಮತ್ತು ಮಲ್ಲಿಮರ್ ಹೈಕೋರ್ಟು ಜಡ್ಜರು

ರಾಷ್ಟ್ರಾಧ್ಯಕ್ಷರ ಆಜ್ಞೆ

ಮೈಸೂರು ಹೈಕೋರ್ಟಿನ ಖಾಯಂ ನ್ಯಾಯಾಧೀಶರಾಗಿ ಅಡ್ವೊಕೇಟ್ ಶ್ರೀ ಎ. ಆರ್. ಸೋಮನಾಥಯ್ಯರ್‌ರವರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಮಲ್ಲಿಮಾರರವರನ್ನು ೧೯೫೮ ರ ಮಾರ್ಚಿ ೩೧ ರವರೆಗೆ ಹೈಕೋರ್ಟಿನ ಅಡಿಷನಲ್ ನ್ಯಾಯಾಧೀಶರಾಗಿ ನೇಮಿಸಲಾಗಿದೆ. ಉಭಯರೂ ಅಧಿಕಾರ ವಹಿಸಿದಂದಿನಿಂದ ಈ ನೇಮಕವು ಜಾರಿಗೆ ಬರುವುದು.

ಗೋದಾವರಿಯಲ್ಲಿ ದೋಣಿ ಮುಳುಗಿ ೨೦ ಮರಣಗಳು

ಆಹಮದ್‌ನಗರದ ಸಮೀಪದಲ್ಲಿರುವ ಪೈಠಣದ ಬಳಿ ಗೋದಾವರಿ ನದಿಯಲ್ಲಿ ಹೋಗುತ್ತಿದ್ದ ... ದೋಣಿಯೊಂದು ಮುಳುಗಿ ೨೦ ಮಂದಿ ಮೃತಪಟ್ಟಿರುತ್ತಾರೆ. ೧೧ ಜನರು ಈಜಿ ದಡ ಸೇರಿದರು.

ರಷ್ಯದ ಪದಚ್ಯುತ ನಾಯಕರ ದಸ್ತಗಿರಿ ಇಲ್ಲ

ಉಚ್ಚಾಟನೆಯಾಗುವ ರಷ್ಯದ ನಾಯಕರುಗಳನ್ನು ದಸ್ತಗಿರಿ ಮಾಡಲಾಗಿರುವುದೆಂಬ ವರದಿಯನ್ನು ಮಾಸ್ಕೋ ರೇಡಿಯೊವು ತಿರಸ್ಕರಿಸಿದೆ. ಅವರುಗಳು ಮಾಸ್ಕೋವಿನ ಸ್ಥಳೀಯ ಪಕ್ಷದ ಸಭೆಯಲ್ಲಿ ಭಾಗವಹಿಸಿದ್ದರೆಂದೂ ಅದು ಹೇಳಿದೆ.

ನಿವೃತ್ತ ಅರಮನೆ ನೌಕರರಿಗೆ ಮುಖ್ಯ ಮಂತ್ರಿಗಳಿಂದ ಸಹಾಯದ ಭರವಸೆ

ಅರಮನೆ ನೌಕರರ ಸಂಘದ ಕಾರ್ಯದರ್ಶಿ ಶ್ರೀ ವೇದಾಂತ ಹೆಮ್ಮಿಗೆಯವರು ಕಳೆದ ವಾರ ಬೆಂಗಳೂರಿನಲ್ಲಿ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಅರಮನೆ ನಿವೃತ್ತ ನೌಕರರ ಸಮಸ್ಯೆಯನ್ನು ಚರ್ಚಿಸಿದರು. ಅವರುಗಳಿಗೆ ಬೇರೆ ಉದ್ಯೋಗವನ್ನು ಒದಗಿಸಲು ಶೀಘ್ರವಾಗಿ ಪರಿಶೀಲನೆ ಮಾಡುತ್ತಿರುವುದಾಗಿಯೂ ಮತ್ತು ಮೈಸೂರು ಅರಮನೆಯವರಿಗಾಗಿ ಅವರಲ್ಲಿ ಹಲವರಿಗೆ ಜಮೀನನ್ನು ಕೊಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಮುಖ್ಯ ಮಂತ್ರಿಗಳು ತಿಳಿಸಿದರೆಂದು ಗೊತ್ತಾಗಿದೆ.

ವಯಸ್ಕರ ಶಿಕ್ಷಣ ಸಮಿತಿಯವರ ಪ್ರವಾಸ ಕಾರ್ಯಕ್ರಮ

ಗುಂಡ್ಲುಪೇಟೆ ತಾಲ್ಲೂಕು ವಯಸ್ಕರ ಶಿಕ್ಷಣ ಸಮಿತಿಯ ಸಂಚಾಲಕರ ಕಛೇರಿಯಲ್ಲಿ ಕಳೆದ ೨ ರಂದು ಅಲ್ಲಿಂದ ವರ್ಗವಾಗಿರುವ ಸಾಮೂಹಿಕ ವಿಕಾಸ ಯೋಜನೆಯ ಅಧಿಕಾರಿ ಶ್ರೀ ಹೆಚ್. ಸುಬ್ಬಣ್ಣನವರು ಮತ್ತು ಲೇಡಿ ವರ್ಕರ್ ಶ್ರೀಮತಿ ಸುಭದ್ರಮ್ಮ ಇವರುಗಳಿಗೆ ಸತ್ಕಾರ ಕೂಟವನ್ನು ಏರ್ಪಡಿಸಲಾಗಿದ್ದಿತು. ಶಿಕ್ಷಣ ಸಮಿತಿಯ ಸಂಚಾಲಕರಾದ ಶ್ರೀ ... ಇವರ ಬಗ್ಗೆ ಪ್ರಶಂಸಾ ಭಾಷಣ ಮಾಡಿ ಬೀಳ್ಕೊಟ್ಟರು.

ಸೂಚನೆ

ಪ್ರಥಮೈಕಾದಶಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ವಾರ ಭವಿಷ್ಯ

ತಾ|| ೭-೭-೫೭ ರಿಂದ ೧೪-೭-೫೭ ರ ವರೆಗೆ

ಮೇಷ — ಕಾರ್ಯ ಸಿದ್ಧಿ, ಅಧಿಕ ಲಾಭ, ಆರೋಗ್ಯ ತೃಪ್ತಿಕರ, ಕುಟುಂಬ ಸೌಖ್ಯ, ನೂತನ ಸಖ್ಯ, ನೌಕರರಿಗೆ ಉತ್ಸಾಹ, ಮಾನ ಮರ್ಯಾದೆ, ಪ್ರಗತಿ

ವೃಷಭ — ಮೊದಲು ಕಾರ್ಯದಲ್ಲಿ ಅಡ್ಡಿ ಬಂದರೂ ಅಂತ್ಯದಲ್ಲಿ ಜಯ ಶುಭ ಕಾರ್ಯಕ್ಕಾಗಿ ವೆಚ್ಚ, ಆರೋಗ್ಯ ನೆಟ್ಟಗೆ, ಸಾಂಸಾರಿಕ ಸುಖ, ನೌಕರರ ಪ್ರಗತಿ, ಶುಭ ವಾರ್ತೆ, ಪ್ರವಾಸದಲ್ಲಿ ಅನುಕೂಲ

ಮಿಥುನ — ಕಾರ್ಯದಲ್ಲಿ ಸಾಧಾರಣ ಪ್ರಗತಿ, ಆದಾಯಕ್ಕಿಂತ ಹೆಚ್ಚು ವೆಚ್ಚ, ವ್ಯಾಪಾರ ವ್ಯವಹಾರಗಳಲ್ಲೂ, ನೌಕರಿ ಸ್ಥಿತಿಗತಿಗಳಲ್ಲೂ ಮಧ್ಯಮ ಸ್ಥಿತಿ, ಪ್ರವಾಸ ಸಾಮಾನ್ಯ

ಕಟಕ :— ಮನೋಚಿಂತೆ, ಉಪಯೋಗವಿಲ್ಲದ ಅಲೆದಾಟ, ಅನಾರೋಗ್ಯ, ಕಲಹ ಧನವ್ಯಯ, ನೌಕರರಿಗೆ ಸಾಮಾನ್ಯ, ನಿಂತೆ ಅಸ್ವಸ್ಥ, ಪ್ರವಾಸ ಬೇಡ

ಸಿಂಹ — ಆರ್ಥಿಕ ಪ್ರಗತಿ, ಆರೋಗ್ಯ ಸಾಮಾನ್ಯ, ವ್ಯಾಪಾರವ್ಯವಹಾರಗಳಲ್ಲಿ ಎಚ್ಚರಿಕೆ ಕೌಟುಂಬಿಕ ಸೌಖ್ಯ ಉತ್ತಮ, ಉದ್ಯೋಗಿಗಳಿಗೆ ಮಧ್ಯಮ, ಪ್ರವಾಸದಲ್ಲಿ ಸುಖವಿಲ್ಲ,

ಕನ್ಯಾ — ಮನೋಶಾಂತಿ ಆರೋಗ್ಯ ನೆಟ್ಟಗೆ, ಕುಟುಂಬದಲ್ಲಿ ಹರ್ಷ ಆರ್ಥಿಕ ಲಾಭ ಪ್ರವಾಸಿಗಳಿಗೆ ಅನುಕೂಲ, ಇಷ್ಟ ಕಾರ್ಯ ಸಿದ್ಧಿ

ತುಲಾ — ಶ್ರಮ ಹೆಚ್ಚು ಬದರೆ ಲಾಭವಿಲ್ಲ ಹೊಸ ಪರಿಚಯ, ಶುಭ ಕಾರ್ಯಗಳಲ್ಲಿ ಆಸಕ್ತಿ ವ್ಯಾಪಾರವ್ಯವಹಾರಗಳಲ್ಲಿ ಮಧ್ಯಮ ಫಲ, ಪ್ರವಾಸದಲ್ಲಿ ಅಲ್ಪ ಸುಖ

ವೃಶ್ಚಿಕ — ಲಾಭವೂ ಇಲ್ಲ, ನಷ್ಟವೂ ಇಲ್ಲ ನೌಕರಿಯಲ್ಲಿ ಪ್ರಗತಿ, ಮಿತ್ರ ಸಹಾಯ ಶತ್ರು ಪರಾಜಯ, ಗೃಹ ನಿರ್ಮಾಣದ ಕಾರ್ಯ, ಪ್ರವಾಸದಲ್ಲಿ ಜಯ

ಧನುಸ್ಸು :— ಶುಭ ಕಾರ್ಯ, ಆರ್ಥಿಕಾಭಿವೃದ್ಧಿ ಕೆಲಸಕಾರ್ಯಗಳಲ್ಲಿ ಸಂತೃಪ್ತಿ ಕುಟುಂಬ ಸೌಖ್ಯ ಉದ್ಯೋಗದಲ್ಲಿ ಜಯ ಶುಭ ವಾರ್ತೆ, ಸಂಚಾರದಲ್ಲಿ ಲಾಭ

ಮಕರ — ನೂತನ ವ್ಯವಹಾರಗಳಿಂದ ಅನುಕೂಲ, ಕುಟುಂಬದಲ್ಲಿ ಅನಾರೋಗ್ಯ ಅಧಿಕ ವ್ಯಯ, ಉದ್ಯೋಗದಲ್ಲಿ ತಾತ್ಸಾರ, ದೊಡ್ಡವರ ಸಹವಾಸ, ಸಾಮಾನ್ಯ ಪ್ರಗತಿ, ಪ್ರವಾಸ ಸುಖಕರ.

ಕುಂಭ — ರಾಜಕೀಯ ಜನರ ಸ್ನೇಹ ಮತ್ತು ಸಹಾಯ ಆರೋಗ್ಯ ವ್ಯಾಪಾರ, ನೌಕರಿ ಸ್ಥಿತಿ ಉತ್ತಮ, ಲಾಭ, ಮಿತ್ರ ಸಹಾಯ, ಶುಭ ವಾರ್ತೆ.

ಮೀನ — ಮಿತ್ರ ವರ್ಗದಿಂದ ಸಹಾಯ, ಶುಭ ಕಾರ್ಯ, ಸಂತೋಷ ವಾರ್ತೆ, ಉದ್ಯೋಗದಲ್ಲಿ ಉತ್ಸಾಹ, ಕೀರ್ತಿ ಲಾಭ

ಮುಂಡಾ ರಾಜರಿಂದ ಭೂದಾನಕ್ಕೆ ೨೦ ಲಕ್ಷ ರೂ ಆಸ್ತಿ

ಅಲಹಾಬಾದು ಜಿಲ್ಲೆಯಲ್ಲಿರುವ ಮುಂಡಾ ರಾಜರಾದ ವಿಶ್ವನಾಥ ಪ್ರತಾಪ ಸಿಂಗ್‌ರವರು ೧|| ಸಾವಿರ ಎಕರೆ ಜಮೀನು, ಹಲವು ಮಾರ್ಕೆಟ್ಟು ಮತ್ತು ತೋಟಗಳನ್ನು ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ಒಪ್ಪಿಸಿರುತ್ತಾರೆ ಈ ಒಟ್ಟು ಆಸ್ತಿಯ ಬೆಲೆಯು ೨೦ ಲಕ್ಷ ರೂ. ಆಗುವುದೆಂದು ಅಂದಾಜು ಮಾಡಲಾಗಿದೆ ಉತ್ತರ ಪ್ರದೇಶ ಪ್ರಾಂತದಲ್ಲಿ ಇವರಿಗಿಂತ ಹೆಚ್ಚು ಕಾಣಿಕೆಯನ್ನು ಕೊಟ್ಟಿರುವ ಮತ್ತೊಬ್ಬ ವ್ಯಕ್ತಿ ಇಲ್ಲ

೧೬೦ ಮೈಲಿ ಎತ್ತರಕ್ಕೆ ರಾಕೆಟ್ ಪ್ರಯಾಣ

ಕೆನಡಾ ರಾಜ್ಯದ ಮಾನಿಟೋಬಾ ಪ್ರಾಂತದ ಚರ್ಚಿಲ್ ಪೋರ್ಟಿನಿಂದ ಬಿಡಲ್ಪಟ್ಟ ರಾಕೆಟ್ ಸಾಧನವು ೧೬೦ ಮೈಲಿ ಎತ್ತರದವರೆಗೂ ಹೋಯಿತೆಂದು ವರದಿಯಾಗಿದೆ

ಗಂಡನಿಂದ ಗರ್ಭಿಣಿ ಸ್ತ್ರೀಯ ಕೊಲೆ

ಮಂಗಳೂರು ಬಳಿ ಬೋಳೂರುಎಂಬಲ್ಲಿ ಕಳೆದ ವಾರ ಅಂಗಾರ ಮೊಯಿಲಿ ಎಂಬಾತನು ಪೂರ್ಣ ಗರ್ಭಿಣಿಯಾದ ತನ್ನ ಪತ್ನಿಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿ ತಾನೂ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದನೆಂದೂ ಅವನನ್ನು ಪೋಲೀಸರು ಬಂಧಿಸಿರುವರೆಂದೂ ವರದಿಯಾಗಿದೆ

ಸಟ್ಟಾ ಜೂಜಾಟಕ್ಕೆ ಜುಲ್ಮಾನೆ

ಮಂಡಿ ಮೊಹಲ್ಲೆಯ ಅಬ್ಬಾಸ್ ಎಂಬುವನು ಸುನ್ನಿ ಚೌಕದಲ್ಲಿ ಸಟ್ಟಾ ಜೂಜಾಟ ಆಡುತ್ತಿದ್ದುದಕ್ಕಾಗಿ ಮಂಡಿ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರದ ದ್ವಿತೀಯ ನ್ಯಾಯಾಧೀಶರು ನೆನ್ನೆ ಅಪಾದಿತನಿಗೆ ೨೦ ರೂ ಜುಲ್ಮಾನೆ ವಿಧಿಸಿದರು

ಯಕ್ಷಗಾನ

ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಪ್ರಥಮ ಏಕಾದಶಿ ಪ್ರಯುಕ್ತ ಈ ರಾತ್ರಿ ೯ ಗಂಟೆಗೆ ಶ್ರೀ ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ ಭೀಷ್ಮಪ್ರತಾಪವೆಂಬ ಕಥೆಯು ನಡೆಯುತ್ತದೆ ಸರ್ವರಿಗೂ ಆಹ್ವಾನವುಂಟು

SREE GAYATHRI

On 7 7 57

Russian Tournament

1956 (Colour) With a Flight to Moon,b Sunday in Leningrad (Documentary)

Edited, Printed and Published by A R Nagarajan at Sadhvi Press, D. Subbiah Road Mysore

ಸ್ಥಳೀಯ ಸಂಸ್ಥೆ ನೌಕರರು ಮತ್ತು ಉಪಾಧ್ಯಾಯರ ಸೇವಾ ಸ್ಥಿತಿ ತನಿಖೆ

ಸ್ಥಳೀಯ ಸಂಸ್ಥೆಗಳ ಮತ್ತು ಸಹಾಯ ಪಡೆಯುವ ಶಾಲೆಗಳ ನೌಕರರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಉದ್ದೇಶದಿಂದ ಅವರ ಸೇವಾ ನಿಬಂಧನೆಗಳ ತನಿಖೆಗಾಗಿ ಎರಡು ಸಮಿತಿಗಳನ್ನು ಸರ್ಕಾರದವರು ರಚಿಸಲಿರುವರು ಗ್ರಾಂಟ್ ಪದ್ಧತಿ ಪರಿಶೀಲನೆಗಾಗಿ ಹಣಕಾಸು, ವಿದ್ಯಾಭ್ಯಾಸ, ಸ್ಥಳೀಯ ಸಂಸ್ಥೆ ಮತ್ತು ಆರೋಗ್ಯ ಇಲಾಖಾ ಕಾರ್ಯದರ್ಶಿಗಳು ಮತ್ತು ವಿದ್ಯಾ ಇಲಾಖಾಧಿಕಾರಿಗಳುಳ್ಳ ಸಮಿತಿಯೊಂದನ್ನು ರಚಿಸಲಾಗುವುದು ಜಿಲ್ಲಾ ಬೋರ್ಡು ಸಂಸ್ಥೆಗಳೂ ಸೇರಿ ಸಹಾಯ ಪಡೆಯುವ ಎಲ್ಲಾ ಶಾಲೆಗಳ ನೌಕರರ ಸಂಬಳ ಮತ್ತು ಭತ್ಯವನ್ನೂ, ಈ ಸಮಿತಿಯು ಪುನರ್ವಿಮರ್ಶೆ ಮಾಡುವುದು ಮತ್ತೊಂದು ಸಮಿತಿಯಲ್ಲಿ ಹಣಕಾಸು ಮತ್ತು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಮತ್ತು ಡಿವಿಜನಲ್ ಕಮಿಷನರುಗಳು ಇರುವರು ಅವರು ಸ್ಥಳೀಯ ಸಂಸ್ಥೆ ನೌಕರರ ಸ್ಥಿತಿಗತಿಗಳನ್ನು ಪರಿಶೀಲಿಸುವರು ಉಭಯ ಸಮಿತಿಗಳ ಶಿಫಾರಸಿನ ಪರಿಶೀಲನೆಗಾಗಿ ಹಣಕಾಸು, ವಿದ್ಯಾಭ್ಯಾಸ ಮತ್ತು ಸ್ಥಳೀಯ ಸಂಸ್ಥೆ ಸಚಿವರುಗಳ ಸಮಿತಿಯೊಂದೂ ಇರುವುದು.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ ಎಸ್ ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (E. d 1911)

ಹರಿಕಥೆ

ನರಸಿಂಹರಾಜ ಮೊಹಲ್ಲಾ ಹೊಟೇಲು ಸರ್ಕಲಿನಲ್ಲಿ ಈ ರಾತ್ರಿ ೧೦ ಗಂಟೆಗೆ ಶ್ರೀ ಬಿ. ಎಂ ಬಸವಣ್ಣನವರಿಂದ ರುಕ್ಮಾಂಗದ ಎಂಬ ಹರಿಕಥೆಯು ಜರುಗುತ್ತದೆ.

ನವರತ್ನ ವಿಧಾನದಿಂದ ಪೂರ್ಣ ಆರೋಗ್ಯ ಪಡೆಯಿರಿ

ಅಮೂಲ್ಯವಾದ ನವರತ್ನಗಳಲ್ಲಿ ಅಡಕವಾಗಿರುವ ರೋಗ ನಿವಾರಣಾ ಶಕ್ತಿಯನ್ನು ಕಂಡುಹಿಡಿದು ಅದನ್ನು ಸತತವಾಗಿ ಮಥನ ಮಾಡಿ ವೀರ್ಯ ವೃದ್ಧಿಯನ್ನುಂಟುಮಾಡುವಂತಹ ಶಕ್ತಿಗಳನ್ನು ಕಂಡುಹಿಡಿದ ಆಯುರ್ವೇದ ಶಾಸ್ತ್ರಕ್ಕೆ ಜನಕಿಯು ಮಣಿಯಾಗಿರುತ್ತದೆ



ನೋಲ್ಕಂಡ ಎರಡು ತತ್ವಗಳನ್ನು ವಿಶ್ವವಿಖ್ಯಾತವಾಗಿರುವ ದಿವ್ಯೌಷಧವನ್ನು ಕಂಡುಹಿಡಿದಂಥ ಕವಿರಾಜ ಪಂಡಿತ ದುರ್ಗಾದತ್ತ ಶರ್ಮ, ವೈದ್ಯ ವಾಚಸ್ಪತಿಯವರು ನವರತ್ನ ಕಲ್ಪ ದಲ್ಲಿ ಒಂದುಗೂಡಿಸಿರುವರು

ಇದು ವಜ್ರ, ನೀಲ, ಕೆಂಪು ಮುತ್ತು ಪಚ್ಚೆ, ಪ್ರಶಸ್ತಿಶಿಲೆ ಗೋಮೇಧಿಕ ಪುಷ್ಯರಾಗ ಮತ್ತು ಹವಳ ಈ ೯ ಅಮೂಲ್ಯ ಹರಳುಗಳ ಸಂಯೋಗ ಪೂರ್ಣವಾಗಿ ವಿಷ ರಹಿತವಾದ ಮತ್ತು ದೋಷ ರಹಿತವಾದ, ಸರ್ವರೂ ಉಪಯೋಗಿಸುವಂತಹ ಔಷಧಿ ಅಜೀರ್ಣ, ನರಗಳ ದೌರ್ಬಲ್ಯ, ಬಿಳಿಕೂಸು, ಎಲಿಕ್ಯಂಟಿಯಾಸಿಸ್, ರಕ್ತದಲ್ಲಿ ವಿಷ ಫಿಸ್ತುಲ ಸೈನಸ್ ಮೂಲವ್ಯಾಧಿ ಮತ್ತು ಉಬ್ಬಸಗಳಿಗೆ ದಿವ್ಯೌಷಧ ವಿವರಗಳಿಗೆ ಬರೆಯಿರಿ

NAVRATHA KALPA PHARMACY, JULLUNDUR CITY (India)

ಸಿ ಟಿ. ಸಿ., ಹಳೇ ಅಗ್ರಹಾರ - ಮೈಸೂರು.

S. S L. C. ಸಪ್ಲಿಮೆಂಟರಿ ತರಗತಿಗಳು

★ ಇಂಗ್ಲಿಷ್ ಮಾಧ್ಯಮಕ್ಕೇ ಬೇರೆ ತರಗತಿ

★ ಬಾಲಕಿಯರಿಗೇ ಪ್ರತ್ಯೇಕವಾದ ತರಗತಿ

★ ದಕ್ಷರಾದ ಉಪಾಧ್ಯಾಯರು ಉತ್ತಮ ಸಲಕರಣೆ

ಕೆಲವೇ ಸೀಟುಗಳು ಉಳಿದಿವೆ

ಟೆಲಿಫೋನ್ ನಂ. 541 — ಟೆಲಿಗ್ರಾಂ ಅಡ್ರಸ್

ನ್ಯೂ ಚಾಮುಂಡೇಶ್ವರಿ ಕೆಫೆ,

ಇಲವಾಲ ರಸ್ತೆ, ಮೈಸೂರು

ತಾ|| 10-7-1957 ರಿಂದ ರಿಯಾಯಿತಿ ದರ

ವಿದ್ಯಾರ್ಥಿಗಳಿಗೂ ಖಾಯಂ ಬೋರ್ಡರುಗಳಿಗೂ ಊಟದ 30 ಟಿಕೆಟ್ಟುಗಳ ಪುಸ್ತಕಕ್ಕೆ ರೂ 16-8-0 ಮಾತ್ರ ಪ್ರೊ|| ಸಿ ಬಿ ಎಂ ಚಂದ್ರಯ್ಯ

10 ದಶಕಗಳ ಖ್ಯಾತಿಗಳಿಸಿದ ಡಾ|| ಅಂಬಲೆ ರಾಮಸ್ವಾಮಿ ಅಯ್ಯರ್‌ರವರ ದಿವ್ಯ ಔಷಧಿಗಳು

ಟ್ರೇಡ್ ಮಾರ್ಕ್

ಡಾ|| A R ಅಯ್ಯರ್

ಸಂತಾನ ಸಿಂಧೂರ (ಸ್ತ್ರೀಯರಿಗೆ ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ ಗುಳಿಗೆ)

ಈ ಭಸ್ಮವು ಋತು ಸಂಬಂಧದ ಹೊಟ್ಟೆ ನೋವನ್ನು ನಿವಾರಿಸಿ ಗರ್ಭಸ್ರಾವ ಗರ್ಭಪಾತ ಇತ್ಯಾದಿ ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಾಜೆತನವನ್ನು ಹೋಗಲಾಡಿಸುತ್ತದೆ

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಕೃಷ್ಟ ತರುಣ ಮಾಡಿ ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯನಾಳಗಳನ್ನು ವೃದ್ಧಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ" ಗಳಾಗಿದ್ದಾರೆ

ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 4 ಅಣೆ ಸ್ಟಾಂಪು ಕಳಿಸಿ.

ಎ ರಾಮಸ್ವಾಮಿ ಅಯ್ಯರ್ ಸನ್ಸ್ & ಕಂ, (S).

628 ಸೀತಾವಿಲಾಸ ಛತ್ರ ಕ್ರಾಸ್ ವಿಲ್ ಬ್ರಾಂಚ್, ನಾರದ ರಸ್ತೆ ಮೈಸೂರು



ನವೀನ ಮಾದರಿ ಗಡಿಯಾರಗಳಿಗೆ

ಫೇವರ್ ಲ್ಯೂಬಾ, ವೆಸ್ಟೆಂಡ್, ಸ್ವಿಮಾ, ರೋಮರ್ ಇತ್ಯಾದಿ, ಇತ್ಯಾದಿ

ರಾಂ ಪತಂಗೆ ಕಂಪೆನಿ,

ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

ಪ್ರಥಮೈಕಾದಶಿ ಪ್ರಯುಕ್ತ ಈ ರಾತ್ರಿ I ಗಂಟೆಗೆ ವಿಶೇಷ ಪ್ರದರ್ಶನವಿರುತ್ತೆ

ಪ್ರಭು ದೇವಾ ಥಿಯೇಟರ್

(ಪದ್ಮಾ ಟಾಕೀಸ್)

7—7—57ನೇ ಭಾನುವಾರದಿಂದ : ಅಮೋಘ ಪ್ರಾರಂಭ

★ ಜಯಸಿಂಹ ★

ಎನ್ ಟಿ ರಾಮರಾವ್ ಅಂಜಲಿದೇವಿ, ಎಸ್ ವಿ ರಂಗರಾವ್, ರೇಲಂಗಿ, ವಾಹಿನಿಂದ್ರವ ಣಿ, ರಾಜಸುಲೋಚನ ಮುಂತಾದವರು ನಟಿಸಿರುವ ತಮಿಳು ಚಿತ್ರ

ಒಲಂಪಿಯಾ ಟಾಕೀಸ್ 12-7-57 ರಿಂದ ಅಮೋಘ ಪ್ರಾರಂಭ

ದಿಲೀಪ್ ಫಿಲಂಸ್‌ರವರ ಅತ್ಯುತ್ತಮ ರಜಪೂತರ ಐತಿಹಾಸಿಕ ಹಿಂದಿ ಕಲಾಕೃತಿ

ಅಮರಸಿಂಗ್ ರಾಥೂರ್

ಜಾಕ್ರ, ನಿರೂಪರಾಯ್, ಕೃರಾಜ್, ರಾಂಸಿಂಗ್, ರಾಜಕುಮಾರ್, ನೀಲಾ ಮತ್ತು ಯಶೋಧರಾ ಕಟ್ಟು

ದೇಶಾದ್ಯಂತ ಎಲ್ಲಾ ಚಿತ್ರಮಂದಿರಗಳಲ್ಲೂ ಈ ಚಿತ್ರವು ಜಯಭೇರಿ ಹೊಡೆಯುತ್ತಿದೆ

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ ೨ ನಯಾ ಪೈಸೆ

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೦೫] SADHVI : TUESDAY 9—7—1957 ಮೈಸೂರು : ಮಂಗಳವಾರ ೯—೭—೧೯೫೭ : [ಸಂಚಿಕೆ ೩೩೪

ಆಹಾರ ಧಾನ್ಯ ಮತ್ತು ಸಕ್ಕರೆ ಮೇಲೆ ಹತೋಟಿ ಸಂಭವ

ಕೆರೆಗೆ ಕಾರು ಮಗುಚಿ ಪಿ. ಮಹದೇವಯ್ಯನವರ ನಿಧನ

೪ ವರ್ಷದ ಹುಡುಗಿಗೂ ಮೃತ್ಯು

ಸ್ವಂ ವ] ನಂಜನಗೂಡು ೯

ಈ ತಾಲ್ಲೂಕಿನಿಂದ ಶಾಸನಸಭೆಗೆ ಆರಿಸಿಬಂದಿರುವ ಶ್ರೀ ಪಿ ಮಹದೇವಯ್ಯನವರು ನೆನ್ನೆ ಬೆಳಗ್ಗೆ ಸುಮಾರು ೯ ಗಂಟೆ ಸಮಯದಲ್ಲಿ ಕಸಬ ಹೋಬಳಿ ಬಳಿ ಉಂಡುಬತ್ತ ಕೆರೆಯಲ್ಲಿ ಮೋಟಾರು ಅಪಘಾತದಿಂದ ಮೃತಪಟ್ಟರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಅವರೊಡನೆ ಇದ್ದ ಅವರ ೪ ವರ್ಷದ ಮಗಳೂ ಸಾವಿಗೀಡಾದಳು. ಕಾರಿನ ಹಿಂಭಾಗದಲ್ಲಿ ಕುಳಿತಿದ್ದ ಮಂಚ ಎಂಬ ಸೇವಕನು, ಶ್ರೀ ಮಹದೇವಯ್ಯನವರ [illegible]ರಾದ ಶ್ರೀ ಚಂದಗಾಲ ಮರಿಯಪ್ಪನವರ ಕುಮಾರಿಯೊಬ್ಬಳು ಮತ್ತು ಗುಂಡ್ಲುಪೇಟೆಯ ಹುಡುಗನೊಬ್ಬನು ಪಾರಾಗಿರುತ್ತಾರೆ. ಅವರುಗಳು ಮೋಟಾರಿನ ಗಾಜುಗಳನ್ನು ಒಡೆದುಕೊಂಡು ಹೊರಕ್ಕೆ ಬಂದರು.

ಶ್ರೀ ಮಹದೇವಯ್ಯನವರು ಮೈಸೂರಿಗೆ ಬರಲು ತಮ್ಮ ಕಾರಿನಲ್ಲಿ ಹೊರಟಿದ್ದರು. ಅವರು ಮೊದಲು ಒಂದುಬಾರಿ ಹೊರಟು ನಂತರ ತಮ್ಮ ಅಳುತ್ತಿದ್ದ ಮಗನನ್ನು ಬಿಟ್ಟು ಹೋಗಲಾರದೆ, ಹಿಂದಿರುಗಿ ಅವನನ್ನು ಕರೆದುಕೊಂಡು ತೆರಳಿದರು. ಅವರೇ ನಡೆಸುತ್ತಿದ್ದ ಕಾರಿನ ಸ್ಟಿಯರಿಂಗ್ ಹತೋಟಿ ತಪ್ಪಿ ಕಲ್ಲಿಗೆ ಡಿಕ್ಕಿ ಹೊಡೆದು ಕೆರೆಗೆ ಮಗುಚಿಕೊಂಡಿತು. [illegible] ಅವರು ಸಿಕ್ಕಿ ಕೆಸರಿನಲ್ಲಿ ಉಸಿರು ಕಟ್ಟಿ ಮೃತಪಟ್ಟರು.

ಅವರ ಗೌರವಾರ್ಥವಾಗಿ ನೆನ್ನೆ ಟಿ. ನರಸೀಪುರ ಪೌರಸಭೆಯವರು ಏರ್ಪಡಿಸಿದ್ದ ಒಂದು ಸತ್ಕಾರ ಸಮಾರಂಭದಲ್ಲಿ ಭಾಗವಹಿಸಲು ಅವರು ಹೊರಟಿದ್ದರು. ಮೃತರ ಕಳೇಬರಗಳನ್ನು ನೆನ್ನೆ ದಿನವೇ ಇಲ್ಲಿಗೆ ತಂದು ಸಂಸ್ಕಾರ ಮಾಡಲಾಯಿತು. ಅವರಿಗೆ ಪತ್ನಿ ಮತ್ತು ೪ ಮಂದಿ ಮಕ್ಕಳು ಇರುವರು.

ಸುದ್ದಿ ತಿಳಿದಕೂಡಲೇ ಅವರ [illegible]ರಾದ ವಿದ್ಯಾ ಮಂತ್ರಿ ಶ್ರೀ ಎ. ವೆಂಕಟಪ್ಪ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯ ಮತ್ತು ಸಚಿವ ಶ್ರೀ ಟಿ. ಮರಿಯಪ್ಪನವರು ಇಲ್ಲಿಗೆ ಬಂದು ಮೃತರ ಅಂತ್ಯ ದರ್ಶನ ಪಡೆದರು.

ಸ್ಥಳೀಕ ಪಟ್ಟಣದ ಸಾವಿರಾರು ಜನರು ಬಂದು ತಮ್ಮ ಅನುಕಂಪವನ್ನು ಸೂಚಿಸಿದರು.

ದಿವಂಗತರ ೩ನೇ ದಿನದ ಉತ್ತರ ಕ್ರಿಯೆಯು ನಾಳೆ ದಿನ ನಂಜನಗೂಡಿನಲ್ಲಿ ನೆರವೇರುವುದು. ಬಂಧು ಮಿತ್ರರೆಲ್ಲರೂ ಬರಬೇಕೆಂದು ಪ್ರಾರ್ಥಿಸಲಾಗಿದೆ.

ವಿವೇಕಿ ಜನಾನುರಾಗಿಗಳೂ, ಸರಳ ಹೃದಯರೂ ಆಗಿದ್ದ ಶ್ರೀಯುತರ ಅಕಾಲ ಮೃತ್ಯುವಿಗಾಗಿ ಸಾಧ್ವಿ ಅತ್ಯಂತ ವಿಷಾದವನ್ನು ವ್ಯಕ್ತಪಡಿಸಿ, ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲೆಂದು ಪ್ರಾರ್ಥಿಸಿ, ಬಂಧುಮಿತ್ರರಿಗೆ ಹೃತ್ಪೂರ್ವಕವಾದ ಅನುಕಂಪವನ್ನು ಸೂಚಿಸುತ್ತೇವೆ.

ಮೈಸೂರು ಹೈಕೋರ್ಟಿಗೆ ೧೦ ಮಂದಿ ನ್ಯಾಯಾಧೀಶರು ಅಗತ್ಯ

ಕೇಂದ್ರಕ್ಕೆ ಸಂಸ್ಥಾನ ಸರ್ಕಾರದ ಕೋರಿಕೆ

ಬೆಂಗಳೂರು ೯

ಮೈಸೂರು ಹೈಕೋರ್ಟಿನ ನ್ಯಾಯಾಧೀಶರುಗಳ ಸಂಖ್ಯೆಯನ್ನು ೫ರಿಂದ ೧೦ಕ್ಕೆ ಹೆಚ್ಚಿಸಬೇಕೆಂದು ಸಂಸ್ಥಾನ ಸರ್ಕಾರದವರು ಭಾರತ ಸರ್ಕಾರವನ್ನು ಪ್ರಾರ್ಥಿಸಿರುತ್ತಾರೆಂದು ವರದಿಯಾಗಿದೆ. ಹೈಕೋರ್ಟಿನಲ್ಲಿ ವಿಪರೀತವಾಗಿ ಅಪೀಲು ಮೊಕದ್ದಮೆಗಳಿರುವುದರ ಕಾರಣ ಒಡನೆ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಕೋರಲಾಗಿದೆ. ಹೈಕೋರ್ಟಿನಲ್ಲಿ ೮,೦೦೦ ಅಪೀಲುಗಳು ಇತ್ಯರ್ಥವಾಗದೆ ಉಳಿದಿರುವುದಾಗಿ ಹೇಳಲಾಗಿದೆ.

ಆಫ್ಘನ್ ಮಂತ್ರಿಯ ವಜಾ

ಲಂಚದ ಆಪಾದನೆಗಾಗಿ ಆಫ್ಘಾನಿಸ್ತಾನದ ಹಣಕಾಸಿನ ಮಂತ್ರಿ ಅಬ್ದುಲ್ ಮಲಿಕ್‌ರವರನ್ನು ಅಲ್ಲಿನ ಪ್ರಧಾನಿ ಮಹಮದ್ ದಾವೂದ್ ಖಾನರು ವಜಾ ಮಾಡಿರುತ್ತಾರೆ.

ಶಿವಮೊಗ್ಗದ ಅರಣ್ಯ ಅಧಿಕಾರಿಗಳಿಗೆ ೨ ವರ್ಷ ಸಜಾ

ಶಿವಮೊಗ್ಗಾ ಜಿಲ್ಲೆಯ ಆನಂದಪುರದ ಅರಣ್ಯ ಇಲಾಖಾ ರೇಂಜ್ ಆಫೀಸರ್ ಆಗಿದ್ದ ಶ್ರೀ ಪರಶುರಾಮಪ್ಪನವರು ರೂ ೧,೧೮೦-೬-೯ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡರೆಂದು ಅವರಿಗೆ ಸಾಗರದ ವಿಶೇಷ ನ್ಯಾಯಾಧೀಶರು ೨ ವರ್ಷ ಕಠಿಣ ಸಜಾವನ್ನು ವಿಧಿಸಿರುತ್ತಾರೆ. ೩ ವರ್ಷಗಳ ಹಿಂದೆ ಅವರು ಶ್ರೀ ನಾಗೇಶ್ವರ ಶಾಸ್ತ್ರಿಯವರಿಗೆ ರಹದಾರಿ ಮೀರಿ ೬೨ ದಿಮ್ಮಿಗಳನ್ನು ಮಾರಿ ಅವರು ಕೊಟ್ಟ ಹಣವನ್ನು ಖಜಾನೆಗೆ ಕಟ್ಟದೆ ದುರುಪಯೋಗಪಡಿಸಿಕೊಂಡರೆಂದು ಹೇಳಲಾಗಿದೆ. ಅಲ್ಲಿನ ಸೆಷನ್ಸ್ ನ್ಯಾಯಾಧೀಶರು ಅಪಾದಿತರಿಂದ ೫೦೦ ರೂ ಸ್ವಂತ ಮುಚ್ಚಳಿಕೆ ಮತ್ತು ಅದೇ ಮೊತ್ತಕ್ಕೆ ಇಬ್ಬರ ಜಾಮೀನು ತೆಗೆದುಕೊಂಡು ಸಜಾವನ್ನು ಸಸ್ಪೆಂಡ್ ಮಾಡಿರುತ್ತಾರೆ.

ಹೆಬ್ಬೂರು ಮಠದ ಪೀಠಕ್ಕೆ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳು

ತುಮಕೂರು ತಾಲ್ಲೂಕು ಶ್ರೀ ಹೆಬ್ಬೂರು ಕೋದಂಡಾಶ್ರಮ ಮಠದ ಶ್ರೀ ಶ್ರೀಧರಾನಂದಾಶ್ರಮ ಸ್ವಾಮಿಗಳವರು ಸುಮಾರು ೨೦ ವರ್ಷಗಳಿಂದಲೂ ಶ್ರೀ ಮಠದ ಅಧಿಪತಿಗಳಾಗಿದ್ದು ನಾಳೆ ದಿನ ಅದೇ ತಾಲ್ಲೂಕು ಮುಳಕುಂಟೆ ಗ್ರಾಮದ ಶ್ರೀ ಗಿರಿಗಿರಿಭಟ್ಟರ ಪುತ್ರರಾದ ವೇ|| ಬ್ರ|| ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಅದನ್ನು ವಹಿಸಿಕೊಡುವರು. ಶ್ರೀ ಶ್ರೀಗಳವರಿಗೆ ವೃದ್ಧಾಪ್ಯದಿಂದ ದೇಹ ದೌರ್ಬಲ್ಯವುಂಟಾಗಿರುವುದರಿಂದ ಅವರು ಇನ್ನು ಮುಂದೆ ತಪೋನಿರತರಾಗಲು ಸಂಕಲ್ಪಿಸಿರುತ್ತಾರೆ.

ಜೂಜಾಟಕ್ಕಾಗಿ ದಂಡ

ಲಿಂಗ ಮತ್ತು ೪ ಜನರು ಬಸ್ ನಿಲ್ದಾಣದ ಬಳಿಯೂ ಮತ್ತು ಮಲ್ಲಯ್ಯ ಎಂಬುವವನು ಮಾರ್ಕೆಟ್‌ನ ಬಳಿಯಲ್ಲಿಯೂ ಜೂಜಾಡುತ್ತಿದ್ದುದಕ್ಕಾಗಿ ತಲಾ ೧೦ ರೂ ಜುಲ್ಮಾನೆ ವಿಧಿಸಲಾಗಿದೆ.

ಧಾನ್ಯದ ಬೆಲೆ, ಶೇಖರಣೆ ಮತ್ತು ಸಾಗಾಣಿಕೆ ಹತೋಟಿ ಅನಿವಾರ್ಯ

ಕೇಂದ್ರ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರ ಸೂಚನೆ

ಆಹಾರ ಧಾನ್ಯಗಳ ಬೆಲೆ, ದಾಸ್ತಾನು ಮತ್ತು ಪ್ರಾದೇಶಿಕ ಸಾಗಾಣಿಕೆ ಬಗ್ಗೆ ಯಾವುದಾದರೂ ರೀತಿಯ ಹತೋಟಿಯು ಅನಿವಾರ್ಯವೆಂದು ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ. ಕೆಳ ಮಧ್ಯಮ ವರ್ಗದವರು ಮತ್ತು ಕಾರ್ಮಿಕರು ಧಾನ್ಯ ಮತ್ತು ಅಗತ್ಯ ವಸ್ತುಗಳ ಹತೋಟಿಗೆ ಪೂರ್ಣ ಬೆಂಬಲವೀಯದಿದ್ದರೆ ಅದನ್ನು ಜಾರಿಗೆ ತರಲು ಸಾಧ್ಯವಾಗುವುದಿಲ್ಲವೆಂದು ಅವರು ಹೇಳುವರು. ಮಧ್ಯಮ ವರ್ಗದ ಜನರು ಹತೋಟಿಯನ್ನು ಒಪ್ಪುತ್ತಿಲ್ಲವೆಂದೂ, ತೆರಿಗೆ ಮತ್ತು ಹಣದ ಉಬ್ಬರದ ಬಗ್ಗೆ ಅವರುಗಳು ಆಕ್ಷೇಪಣೆ ಹೇಳುವುದರ ಬದಲು ಬೆಲೆ ಹತೋಟಿಗೆ ಒತ್ತಾಯ ಮಾಡಿದರೆ ಸರ್ಕಾರದಿಂದ ಅದಕ್ಕೆ ಹೆಚ್ಚು ಪುರಸ್ಕಾರ ಸಿಗುವುದೆಂದೂ ಸಚಿವರು ನುಡಿದಿದ್ದಾರೆ. ಹತೋಟಿಯು ಬೆಲೆ ಸಾಗಾಣಿಕೆ ಮತ್ತು ಶೇಖರಣೆಗೂ ಅನ್ವಯಿಸುವುದೆಂದು ಅವರು ತಿಳಿಸಿರುವರು.

ಸಕ್ಕರೆ ಮೇಲೆ ಹತೋಟಿ ಸಂಭವ

ಸಕ್ಕರೆಯ ಮೇಲೆ ಹತೋಟಿ ವಿಧಿಸುವ ವಿಚಾರವನ್ನು ಕೇಂದ್ರ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ಕೇಂದ್ರ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ನೆನ್ನೆ ಮದ್ರಾಸಿನಲ್ಲಿ ತಿಳಿಸಿದರು. ಕಳೆದ ವರ್ಷ ಏಪ್ರಿಲ್ಲಿನಿಂದ ಜೂನ್ ವರೆಗೆ ೮,೫೦೦ ಬ್ಯಾಗು ಸಕ್ಕರೆ ರವಾನೆಯಾಗಿ, ಈ ವರ್ಷ ಅದೇ ಅವಧಿಯಲ್ಲಿ ೧೪,೦೦೦ ಬ್ಯಾಗುಗಳಷ್ಟು ಸಾಗಿರುವುದೆಂದೂ, ಇದರಿಂದ ಸಕ್ಕರೆಯನ್ನು ದಾಸ್ತಾನು ಮಾಡಲಾಗುತ್ತಿರುವುದೆಂಬುದು ವ್ಯಕ್ತವಾಗುವುದೆಂದೂ ಅವರು ನುಡಿದರು.

ಬಿಜಾಪುರದ ಡಿ. ಎಸ್. ಪಿ. ಯವರ ಸಸ್ಪೆನ್ಷನ್

ತೀವ್ರತರವಾದ ದುರ್ನಡತೆಯ ಆಪಾದನೆಗಾಗಿ ಬಿಜಾಪುರದ ಡಿ ಎಸ್ ಪಿ ಶ್ರೀ ವಸ್ತ್ರದ್‌ರವರನ್ನು ಸಸ್ಪೆಂಡ್ ಮಾಡಲಾಗಿರುವುದೆಂದು ವರದಿಯಾಗಿದೆ. ಕಳ್ಳಭಟ್ಟಿ ಮದ್ಯದ ವ್ಯಾಪಾರಿಗಳೊಡನೆ ಸಹಕರಿಸುತ್ತಿದ್ದರೆಂದು ಅಲ್ಲಿ ಕೆಲವು ದಿನಗಳ ಹಿಂದೆ ಇಬ್ಬರು ಪೊಲೀಸು ಇನ್ಸ್‌ಪೆಕ್ಟರನ್ನೂ, ಒಬ್ಬ ಕಾನ್ಸ್‌ಟೇಬಲ್ಲನನ್ನೂ ಸಸ್ಪೆಂಡ್ ಮಾಡಲಾಗಿತ್ತು.

ಇನ್‌ಫ್ಲೂಯೆಂಜಾ ಭೀತಿಗಾಗಿ ಕೋಳಿ, ನಾಯಿ, ಹಂದಿಗಳ ಕೊಲೆ

ಸಂಸ್ಥಾನದಲ್ಲಿ ಹರಡಿರುವ ಇನ್‌ಫ್ಲೂಯೆಂಜಾ ಹೆಚ್ಚಲು ನಾಯಿ, ಕೋಳಿ ಮತ್ತು ಹಂದಿಗಳೇ ಕಾರಣವೆಂದು ಯಾರೋ ವದಂತಿ ಹಬ್ಬಿಸಿರುವುದರಿಂದ ಆ ಪ್ರಾಣಿಗಳನ್ನು ಗ್ರಾಮಾಂತರದಲ್ಲಿ ಕೊಲ್ಲಲಾಗುತ್ತಿರುವುದೆಂದು ವರದಿಯಾಗಿದೆ. ಈ ಬಗ್ಗೆ ಆರೋಗ್ಯ ಡೈರೆಕ್ಟರು ಹೇಳಿಕೆಯಿತ್ತು, ಈ ಪ್ರಾಣಿಗಳಿಂದ ರೋಗವು ಹಬ್ಬುವುದೆಂಬುದಕ್ಕೆ ಆಧಾರವಿಲ್ಲವೆಂದು ತಿಳಿಸಿರುತ್ತಾರೆ.

ಮುಂದಿನ ತಿಂಗಳಿಂದ ಅಂಚೆ ನೌಕರರ ಮುಷ್ಕರವೇ ?

ಬರುವ ತಿಂಗಳಿಂದ ಮುಷ್ಕರ ಹೂಡುವುದರ ಬಗ್ಗೆ ಸರ್ಕಾರಕ್ಕೆ ನೋಟೀಸು ಕೊಡುವಂತೆ ಅಂಚೆ ಮತ್ತು ತಂತಿ ಇಲಾಖೆಗಳ ನೌಕರರ ಸಂಘಗಳ ಪೈಕಿ ಏಳು ಸಂಸ್ಥೆಗಳು ಕೇಂದ್ರ ಸಂಸ್ಥೆಗೆ ಶಿಫಾರಸು ಮಾಡಿವೆ. ಮೂರನೇ ವರ್ಗದ ಅಂಚೆ ಮತ್ತು ತಂತಿ ನೌಕರರ ಸಂಘದವರ ಮುಷ್ಕರ ವಿಚಾರವನ್ನು ಪರಿಶೀಲಿಸುತ್ತಿರುವರು. ಈ ಬಗ್ಗೆ ಇಂದು ಸೇರಲಿರುವ ಕೇಂದ್ರ ಸಮಿತಿಯು ಆಖೈರು ನಿರ್ಧಾರ ಕೈಗೊಳ್ಳುವುದು. ಎರಡನೇ ಸಂಬಳದ ಸಮಿತಿಯನ್ನು ರಚಿಸಬೇಕು, ತಾತ್ಕಾಲಿಕವಾಗಿ ತುಟ್ಟಿ ಭತ್ಯವನ್ನು ಹೆಚ್ಚಿಸಬೇಕು ಮತ್ತು ಮೂಲ ಸಂಬಳದಲ್ಲಿ ತುಟ್ಟಿ ಭತ್ಯವನ್ನು ವಿಲೀನಗೊಳಿಸಬೇಕು ಇವೇ ಅವರುಗಳ ಮುಖ್ಯ ಬೇಡಿಕೆಗಳಾಗಿವೆ. ಕೇಂದ್ರ ಸಂಘದವರು ಮುಷ್ಕರಕ್ಕಿಂತಲೂ ಸಂಧಾನದ ಮೂಲಕವೇ ಬೇಡಿಕೆಗಳು ಇತ್ಯರ್ಥವಾಗಲು ಇನ್ನೂ ಆಶಿಸುತ್ತಿರುವರು.

ಅಮೆರಿಕದಿಂದ ವಿಶ್ವಸಂಸ್ಥೆಯ ಹಂಗೇರಿ ಪ್ರತಿನಿಧಿ ಉಚ್ಚಾಟನೆ

ವಿಶ್ವಸಂಸ್ಥೆಯ ಹಂಗೇರಿ ಪ್ರತಿನಿಧಿ ಪಾಲ್ [illegible]ರವರು ತಮಗೆ ಕೊಡಲಾಗಿದ್ದ ರಾಜತಂತ್ರೀಯ ಹಕ್ಕುಬಾಧ್ಯತೆಯ ಎಲ್ಲೆಯನ್ನ ಮೀರಿ ವರ್ತಿಸಿದರೆಂಬ ಕಾರಣಕ್ಕಾಗಿ ಅವರನ್ನು ಅಮೆರಿಕಾ ಸರ್ಕಾರದವರು ಹೊರಕ್ಕೆ ಅಟ್ಟಿರುತ್ತಾರೆ.

ಜಗನ್ನಾಥನ ತೇರು ಎಳೆಯಲು ಟ್ರಾಕ್ಟರ್ ಉಪಯೋಗ

ಪುರಿಯ ಜಗನ್ನಾಥದೇವ ಉತ್ಸವದ ರಥೋತ್ಸವದಲ್ಲಿ ತೇರನ್ನು ೩ ಮೈಲಿ ಸ್ಥಳದಿಂದ ಎಳೆಯಲು ಸಾಕಾದಷ್ಟು ಮಂದಿ ಭಕ್ತರು ದೊರಕದ ಪ್ರಯುಕ್ತ ಟ್ರಾಕ್ಟರ್ ಯಂತ್ರದಿಂದ ಅದನ್ನು ಎಳೆಸಲಾಯಿತು. ಆಧುನಿಕ ಯಂತ್ರದ ಸಾಧನಗಳನ್ನು ರಥ ಎಳೆಯಲು ಉಪಯೋಗಿಸಿರುವ ಸನ್ನಿವೇಶವು ಜನರಲ್ಲಿ ಧಾರ್ಮಿಕ ಭಾವನೆಯು ಕಡಿಮೆಯಾಗುತ್ತಿರುವುದನ್ನು ಸೂಚಿಸುತ್ತದೆಯೆಂದು ಜನರು ಟೀಕಿಸಿದರು.

ಬೆಂಗಳೂರಿನಲ್ಲಿ ಒಟ್ಟು ಅರ್ಧ ಜನರಿಗೆ ಫ್ಲೂ ವ್ಯಾಧಿ

ಬೆಂಗಳೂರು ನಗರದಲ್ಲಿ ಪ್ರತಿ ಇಬ್ಬರಲ್ಲಿ ಒಬ್ಬನಿಗೆ ಇನ್‌ಫ್ಲೂಯೆಂಜಾ ವ್ಯಾಧಿಯು ತಗಲಿದ್ದುದಾಗಿ ಅಧಿಕೃತ ರೀತಿಯಲ್ಲಿ ವರದಿಯಾಗಿದೆ. ಅಲ್ಲಿ ೫ ಲಕ್ಷ ಜನರು ಈ ವ್ಯಾಧಿಯಿಂದ ನರಳುತ್ತಿದ್ದರು.

ಅನೀತಿ ವ್ಯಾಪಾರಕ್ಕಾಗಿ ದಂಡ

ಅನೀತಿ ವ್ಯಾಪಾರ ನಡೆಸಿದರೆಂದು ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರದ ನ್ಯಾಯಾಧೀಶರು ಚನ್ನಮ್ಮ, [illegible]ರಂಗಮ್ಮ, ಗೌರಿ, ಸುಮಿತ್ರೆಯರಿಗೆ ತಲಾ ೩೦ ರೂ, ಶಾಂತಾ, ಲಿಂಗಮ್ಮ, [illegible], ಲೀಲಾ, ಲಕ್ಷ್ಮಿ, ದೇವೀರಮ್ಮನವರುಗಳಿಗೆ ತಲಾ ೫೦ ರೂ ಮತ್ತು ಜಯಲಕ್ಷ್ಮಮ್ಮ ಮತ್ತು [illegible]ವರುಗಳಿಗೆ ತಲಾ ೭೫ ರೂ ದಂಡ ವಿಧಿಸಿರುತ್ತಾರೆ.

ಶಿವಸಮುದ್ರದ ಘಟನೆಯಲ್ಲಿ ನೊಂದವರಿಗೆ ಪರಿಹಾರ

ಸ್ವಂ ಸು.ತಂತಿ] ಬೆಂಗಳೂರು ೯

ಶಿವಸಮುದ್ರದಲ್ಲಿ ಈಚೆಗೆ ಆದ ದುರ್ಘಟನೆಯಿಂದ ಮೃತಪಟ್ಟ ೧೧ ಜನರ ಮನೆಯವರಿಗೆ ತಲಾ ೨೫೦ ರೂ ಅನ್ನು ತಕ್ಷಣದ ಪರಿಹಾರವಾಗಿ ಸರ್ಕಾರದವರು ಕೊಟ್ಟಿರುತ್ತಾರೆ

○ ದಸರಾ ಉತ್ಸವದ ಕೇಂದ್ರ ಸಮಿತಿಯವರು ಈ ಸಂಜೆ ಇದೇ ಮೊದಲಬಾರಿ ಸಭೆ ಸೇರುವರು

ಮೈಸೂರಿನಲ್ಲಿ ಕೇಂದ್ರ ನೀರಾವರಿ ಸಂಶೋಧನಾ ಸಮಿತಿ ಸಭೆ

ಮೈಸೂರಿನಲ್ಲಿ ಈ ತಿಂಗಳು ೧೯ರಿಂದ ೫ ದಿನಗಳವರೆಗೆ ಕೇಂದ್ರ ನೀರಾವರಿ ಬೋರ್ಡಿನ ಸಂಶೋಧನಾ ಸಮಿತಿಯು ಸೇರುವುದು ರಾಜ್ಯಪಾಲರು ಅದರ ಆರಂಭೋತ್ಸವವನ್ನು ನೆರವೇರಿಸುವರು.

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ದರಗಳ ಏರಿಕೆ ?

ಸಚಿವ ವೀರಣ್ಣಗೌಡರ ಸೂಚನೆ

ಸ್ವಂ ಸು] ನಂಜನಗೂಡು ೭

ಸಂಸ್ಥಾನದ ಮರಾಮತ್ತು ಸಚಿವ ಶ್ರೀ ಹೆಚ್ ಕೆ ವೀರಣ್ಣಗೌಡರು ನೆನ್ನೆ ಇಲ್ಲಿಗೆ ಆಗಮಿಸಿ, ಪೌರಸಭಾ ಕಛೇರಿಗೆ ಭೇಟಿಯಿತ್ತಿದ್ದರು ಅಧ್ಯಕ್ಷ ಶ್ರೀ ಕೆ. ವೆಂಕಟಸುಬ್ಬೈರವರು ಅವರಿಗೆ ಮನವಿಯೊಂದನ್ನು ಸಲ್ಲಿಸಿ ಗುಂಡ್ಲು ನದಿಗೆ ಸೋಪಾನವನ್ನು ಕಟ್ಟಿಸಬೇಕೆಂದೂ, ಹುರಾ ರಸ್ತೆಗೆ ತಾರು ಹಾಕಿಸಬೇಕೆಂದೂ, ಮುಖ್ಯ ರಸ್ತೆಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದೂ, ವಿದ್ಯುಚ್ಛಕ್ತಿ ದರದಲ್ಲಿ ಪೌರಸಭೆಗೆ ರಿಯಾಯಿತಿ ಕೊಡಬೇಕೆಂದೂ ಮತ್ತು ಈ ನಗರವು ಪ್ರಸಿದ್ಧ ಯಾತ್ರಾ ಸ್ಥಳವಾಗಿರುವುದರಿಂದ ಅದರ ಅಭಿವೃದ್ಧಿಗಾಗಿ ೫೦,೦೦೦ ರೂ ಸಹಾಯ ದ್ರವ್ಯವನ್ನು ಕೊಡಿಸಿಕೊಡಬೇಕೆಂದೂ ಪ್ರಾರ್ಥಿಸಿದರು

ಸಚಿವರು ಉತ್ತರವಿತ್ತು ಸಂಸ್ಥಾನದಲ್ಲೆಲ್ಲಾ ಒಂದೇ ಮಟ್ಟದ ವಿದ್ಯುಚ್ಛಕ್ತಿ ದರವನ್ನು ಜಾರಿಗೆ ತರುವ ಉದ್ದೇಶ್ಯದಿಂದ ವಿದ್ಯುಚ್ಛಕ್ತಿ ಬೋರ್ಡನ್ನು ಸಧ್ಯದಲ್ಲೇ ರಚಿಸಲಾಗುವುದೆಂದೂ, ಅನಂತರ ಬೋರ್ಡಿನವರು ವಿದ್ಯುಚ್ಛಕ್ತಿ ದರವನ್ನು ಏರಿಸಲಿರುವರೆಂದೂ ತಿಳಿಸಿ, ಮನವಿಯ ಇತರ ಅಂಶಗಳನ್ನು ಇಲಾಖೆಯವರು ಸೂಕ್ತಾನುಸಾರ ಪರಿಶೀಲಿಸುವರೆಂದೂ ಹೇಳಿದರು

ವಿಸ್ತೃತ ಮೈಸೂರು ಸಂಸ್ಥಾನದಲ್ಲಿ ಸರ್ಕಾರದ ಜವಾಬ್ದಾರಿಯು ಹೆಚ್ಚಾಗಿ, ಹಿಂದುಳಿದ ಪ್ರದೇಶಗಳಿಗೆ ಪ್ರಥಮ ಗಮನ ಕೊಡಬೇಕಾಗಿರುವುದರಿಂದ ೫೦,೦೦೦ ರೂ. ಗ್ರಾಂಟಿನ ವಿಷಯವನ್ನು ಕ್ರಮೇಣ ಪರಿಶೀಲಿಸಲಾಗುವುದೆಂದೂ ಸಚಿವರು ತಿಳಿಸಿದರು. ಅನಂತರ ಅವರು ಹದಿನಾರು ಗ್ರಾಮಕ್ಕೆ ತೆರಳಿ ಅಲ್ಲಿನ ಕೆರೆಯನ್ನು ಪರಿಶೀಲಿಸಿದರು.

○ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ತಯಾರಿಸಲ್ಪಟ್ಟಿರುವ ಕೃತಕ ಅಕ್ಕಿಯನ್ನು ೩೦ ಟನ್ನಿನಷ್ಟು ಕೇರಳಕ್ಕೆ ಒದಗಿಸಲಾಗುವುದೆಂದು ಗೊತ್ತಾಗಿದೆ. ಕೇರಳದಲ್ಲಿ ಕೃತಕ ಅಕ್ಕಿ ತಯಾರಿಕೆ ಯಂತ್ರವನ್ನು ಸ್ಥಾಪಿಸಲು ಕೇಂದ್ರದವರು ಹೆಚ್ಚಿನ ಗ್ರಾಂಟನ್ನು ಕೊಡಲಿರುವರು.

ಸರ್ಕಾರಿ ನೌಕರರ ತಪ್ಪಿತಕ್ಕಾಗಿ ಉಗ್ರ ಶಿಕ್ಷೆಗೆ ಶಾಸನ

ಸರ್ಕಾರದ ನೌಕರರ ಅಪರಾಧಗಳಿಗೆ ೧ ವರ್ಷಕ್ಕೆ ಕಡಿಮೆಯಿಲ್ಲದಂತೆ ಸಜವನ್ನು ವಿಧಿಸುವ ಬಗ್ಗೆ ಕೇಂದ್ರ ಸರ್ಕಾರದವರು ಪಾರ್ಲಿಮೆಂಟಿನಲ್ಲಿ ಮಸೂದೆಯೊಂದನ್ನು ತರಲಿರುವರು. ೧ ವರ್ಷಕ್ಕಿಂತ ಕಡಿಮೆ ಸಜಾ ವಿಧಿಸುವ ಸಂದರ್ಭವಿದ್ದರೆ ನ್ಯಾಯಾಧೀಶರು ಅದಕ್ಕೆ ವಿಶೇಷ ಕಾರಣಗಳನ್ನು ನಮೂದಿಸಬೇಕೆಂದು ಗೊತ್ತುಪಡಿಸಲಾಗುವುದು ಲಂಚದ ಮೊಕದ್ದಮೆಗಳಲ್ಲಿ ಅಪರಾಧಿಯು ಕೆಟ್ಟ ಮಾರ್ಗಗಳಿಂದ ಗಳಿಸಿರುವ ಲಾಭ ಮತ್ತು ವಿವರಣೆಯಿಲ್ಲದ ಆಸ್ತಿಗೆ ತಕ್ಕಂತೆ ದಂಡವನ್ನೂ ವಿಧಿಸಬೇಕೆಂದು ಸೂಚಿಸಲಾಗುವುದು ಲಂಚ ಕೊಡುವವನಿಗೆ ಪಡೆಯುವವನಿಂದ ತೊಂದರೆಯಾಗದಂತೆ ರಕ್ಷಣೆ ಕೊಡಲು ನಿಬಂಧನೆ ಮಾಡಲಾಗುವುದು

ಚಿನ್ನದ ಗಣಿ ಪ್ರದೇಶದಲ್ಲಿ ಖನಿಜ ಉತ್ಪತ್ತಿ ಶಿಕ್ಷಣ ಶಾಲೆ

ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿರುವ ಉರಿಗಾಮಿನಲ್ಲಿ ಈ ವರ್ಷದಿಂದ ಖನಿಜ ಉತ್ಪತ್ತಿ ಶಿಕ್ಷಣ ಶಾಲೆಯೊಂದನ್ನು ತೆರೆಯಲಾಗುವುದು. ಅಲ್ಲಿ ಡಿಪ್ಲೊಮಾ ಕೊಡಲಾಗುವುದು ೪೦ ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದು ಸಂಸ್ಥಾನದ ಪಾರಿಭಾಷಿಕ ಶಿಕ್ಷಣ ಡೈರೆಕ್ಟರು ಅದರ ಮೇಲ್ವಿಚಾರಣೆಯಲ್ಲಿರುವರು

ಜಿಲ್ಲಾ ಭೂದಾನ ಅಭಿಮಾನಿಗಳ ಸಭೆ

ಬರುವ ಸೆಪ್ಟೆಂಬರ್ ಉತ್ತರಾರ್ಧದಲ್ಲಿ ಪೂಜ್ಯ ವಿನೋಬಾಜಿಯವರು ಮೈಸೂರು ಜಿಲ್ಲೆಯಲ್ಲಿ ಪಾದಯಾತ್ರೆಯನ್ನು ಕೈಗೊಳ್ಳುವವರಾಗಿದ್ದಾರೆ ಆಗ ಅವರ ಸಮ್ಮುಖದಲ್ಲಿ ಅಖಿಲ ಭಾರತ ಜಿಲ್ಲಾ ಭೂದಾನ ಕಾರ್ಯಕರ್ತರ ಶಿಬಿರವೂ, ಅಖಿಲ ಭಾರತ ಸರ್ವ ಪಕ್ಷ ಪ್ರಮುಖರ ಸಮ್ಮೇಳನವೂ ನಡೆಯಲಿವೆ ಪಂಡಿತ ನೆಹರೂ, ಆಚಾರ್ಯ ಕೃಪಲಾನಿ, ಜೈ ಪ್ರಕಾಶ್ ನಾರಾಯಣ್, ಧೇಬರ್ ಇತ್ಯಾದಿ ರಾಷ್ಟ್ರ ನಾಯಕರು ಬರುವ ನಿರೀಕ್ಷೆಯಿದೆ ಈ ಕಾರ್ಯಕ್ರಮದ ಸಿದ್ಧತೆಯ ಬಗ್ಗೆ ಮತ್ತು ಪೂಜ್ಯ ವಿನೋಬಾರವರ ಆಗಮನಕ್ಕೆ ತಕ್ಕ ಕಾರ್ಯರೂಪ ವಾತಾವರಣವನ್ನು ಜಿಲ್ಲೆಯಲ್ಲಿ ಏರ್ಪಡಿಸುವ ವಿಚಾರದಲ್ಲಿ ಸಮಾಲೋಚನೆ ನಡೆಸಲು ಜಿಲ್ಲೆಯ ಭೂದಾನ ಅಭಿಮಾನಿಗಳ ಸಭೆಯನ್ನು ಇದೇ ೧೧ನೇ ತಾರೀಖು ಗುರುವಾರ ಮಧ್ಯಾಹ್ನ ೩ ಗಂಟೆಗೆ ನಗರದ ನಜರ್‌ಬಾದಿನಲ್ಲಿ ಶ್ರೀ ಎಸ್. ಚನ್ನಯ್ಯನವರ ಮನೆಯ ಪಕ್ಕದಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ಆವರಣದಲ್ಲಿ ಕರೆಯಲಾಗಿದೆ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು. ಜಿಲ್ಲೆಯ ಭೂದಾನ ಪ್ರೇಮಿಗಳೆಲ್ಲರೂ ಈ ಪ್ರಕಟಣೆಯನ್ನೇ ಆಮಂತ್ರಣವೆಂದು ಭಾವಿಸಿ ಸಭೆಯಲ್ಲಿ ಭಾಗವಹಿಸಬೇಕಾಗಿ ಜಿಲ್ಲಾ ಭೂದಾನ ಸೇವಕ ಶ್ರೀ ಎಸ್. ವಿ. ಮಂಜುನಾಥರವರು ಪ್ರಾರ್ಥಿಸುತ್ತಾರೆ

ಪರ್ಷಿಯದಲ್ಲಿ ಭೂಕಂಪದಿಂದ ೨,೦೦೦ ಜನರ ಸಾವು

ಇರಾನಿನಲ್ಲಿ ಇತ್ತೀಚೆಗೆ ಆದ ಭೂಕಂಪದಲ್ಲಿ ೨,೦೦೦ ಜನರು ಮೃತಪಟ್ಟಿರುತ್ತಾರೆಂದು ಗೊತ್ತಾಗಿದೆ. ಅಧಿಕೃತ ವರದಿ ಪ್ರಕಾರ ೧,೫೬೪ ಜನರು ಸಾವಿಗೀಡಾಗಿರುವರು. ಅಲ್ಲಿನ ಷಹಾರವರ ಸಹೋದರ ರಾಜಕುಮಾರ ಶಾಂಸ್‌ರವರು ಕಷ್ಟಕ್ಕೊಳಗಾಗಿರುವ ಪ್ರದೇಶದಲ್ಲಿ ಪ್ರವಾಸ ಮಾಡುತ್ತಿರುವರು.

ಊಟ ಮಾಡುತ್ತಿದ್ದಾಗ ಹೆಂಗಸಿಗೆ ಇರಿತ

ಕುಂಬಕೋಣದ ಬಳಿ ಅಲವೇಂಡಿಪುರಂ ಎಂಬಲ್ಲಿರುವ ಮಿರಾಸದಾರ್ ವೆಂಕಟರಾಮಯ್ಯರ್‌ರವರ ಪತ್ನಿ ಜಯಲಕ್ಷ್ಮಿ ಎಂಬ ೩೦ ವರ್ಷದ ಮಹಿಳೆಯು ಕಳೆದ ೬ನೇ ತಾರೀಖು ರಾತ್ರಿ ಪೊನ್ನಮ್ಮಾಳ್ ಎಂಬಾಕೆಯ ಜೊತೆ ತಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದಾಗ, ಹಿತ್ತಲ ಕಡೆಯಿಂದ ಯಾವನೋ ಗೋಡೆ ಹಾರಿ ಬಂದು ಹೆಂಗಸನ್ನು ಈಟಿಗೋಲಿನಿಂದ ಇರಿದನೆಂದೂ, ಹತ್ತಿರದಲ್ಲಿದ್ದ ಮಗುವಿಗೆ ಹೊಡೆಯಲೆತ್ನಿಸಿದಾಗ ಮತ್ತೊಬ್ಬ ಹೆಂಗಸು ತಡೆದಳೆಂದೂ, ಇಬ್ಬರು ಹೆಂಗಸರಿಗೂ ಇರಿತದ ಗಾಯಗಳಾದುವೆಂದೂ ವರದಿಯಾಗಿದೆ. ಜಯಲಕ್ಷ್ಮಿಯಿಂದ ಮರಣ ಪೂರ್ವದ ಹೇಳಿಕೆಯನ್ನು ತೆಗೆದುಕೊಳ್ಳಲಾಗಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗಾತ್ರ ಸಂಗೀತ ೭-೧೫ ಮತ್ತು ರಾತ್ರಿ ೮ ವಿ ಕೃಷ್ಣಪ್ಪ-ನಾಗಸ್ವರ ೮-೧೫ ಹಿಂದಿ ಶಿಕ್ಷಣ ಮಧ್ಯಾಹ್ನ ೧೨ ಮತ್ತು ೨ ಸಿ ಟಿ. ಶ್ರೀನಿವಾಸಮೂರ್ತಿ-ಕೊಳಲು ೧೨-೩೦ ಆರ್. ಎಸ್. ಜಾನಕಿ-ಸಂಗೀತ ೧ ರೆಕಾರ್ಡು ೧-೫೦ ಗಾತ್ರ ಸಂಗೀತ ೨-೧೫ ಪ್ರೌಢ ಶಾಲೆಗಳಿಗಾಗಿ. ಸಂಜೆ ೬-೧೦ ಗೀತಾವಳಿ ೬-೩೦ ವಚನಗಾನ. ೮-೩೦ ರಾಷ್ಟ್ರೀಯ ಕಾರ್ಯಕ್ರಮ- ದೆಹಲಿ ರಿಲೆ ೮-೫೦ ವಾದ್ಯವೃಂದ. ೯-೧೫ ಉರ್ದು ಪಾಠ ೯ ೩೦ ಆರ್ ಕೆ. ರಾಮನಾಥ-ಸಂಗೀತ

ಬಿ ಜಿ ದಾಸ್ ಮತ್ತು ನಂಜಪ್ಪನವರಿಂದ ಫ್ಲೂ ವ್ಯಾಧಿಗೆ ಉಚಿತ ಚಿಕಿತ್ಸೆ

ಪೌರಸಭಾ ಸದಸ್ಯರಾದ ಶ್ರೀ ಬಿ ಜಿ ದಾಸರು ಮತ್ತು ಸಾಹುಕಾರ್ ಶ್ರೀ ಟಿ ನಂಜಪ್ಪನವರು ಇನ್‌ಪ್ಲುಯೆಂಜಾ ಪೀಡಿತರಾಗಿರುವ ಅನೇಕರಿಗೆ ಉಚಿತ ಔಷಧಿ ಕೊಟ್ಟುದಲ್ಲದೆ ಗಂಜಿಗಾಗಿ ರವೆಯನ್ನು ಒದಗಿಸಿರುತ್ತಾರೆ ಈ ಮಹನೀಯರನ್ನು ಪುರಜನರು ಸನ್ಮಾನಿಸಬೇಕೆಂದು ಸರ್ಕಾರಿ ವಿರಾಮ ವೇತನ ಪಡೆಯುವವರ ಸಂಘದ ಕಾರ್ಯದರ್ಶಿ ಶ್ರೀ ಆರ್. ಕೆ ಶಾಮಾಚಾರ್ ಮತ್ತು ಶ್ರೀ ಆರ್. ರಂಗರಾಜುರವರು ಸೂಚಿಸಿರುತ್ತಾರೆ.

ಬಂಗಾಳಾ ಕ್ರಾಂತಿಕಾರಿಯ ನಿಧನ

ಬಂಗಾಳದ ಪ್ರಸಿದ್ಧ ಕ್ರಾಂತಿಕಾರಿ ಮುಖಂಡ ಪ್ರತುಲ ಚಂದ್ರ ಗಾಂಗುಲಿಯವರು ಹೃದಯರೋಗದಿಂದ ಕಲ್ಕತ್ತದಲ್ಲಿ ನಿಧನ ಹೊಂದಿರುತ್ತಾರೆ ಅವರಿಗೆ ೬೪ ವರ್ಷ ವಯಸ್ಸು ಬಾರಿಸಾಲ್ ಪಿತೂರಿ ಮೊಕದ್ದಮೆಯಲ್ಲಿ ಅವರಿಗೆ ೧೯೧೩ರಲ್ಲಿ ೧೦ ವರ್ಷ ಕಾರಾಗೃಹ ವಾಸವಾಗಿ ನಂತರ ೧೫ ವರ್ಷಕಾಲ ರಾಜ್ಯ ಕೈದಿಯಾಗಿದ್ದರು.

ಭಾರತಕ್ಕೆ ಘಾನಾ ಪ್ರಧಾನಿಯ ಭೇಟಿ

ಬ್ರಿಟನ್ನಿನ ವಸಾಹತು ರಾಜ್ಯವಾಗಿ ಈಚೆಗೆ ಸ್ವತಂತ್ರವಾದ (ಗೋಲ್ಡ್ ಕೋಸ್ಟ್) ಘಾನಾ ರಾಜ್ಯದ ಪ್ರಧಾನಿ ಕ್ವಾಮೆನ್ಕ್ರುಮಾರವರು ಭಾರತ, ಬರ್ಮ ಮತ್ತು ಪಾಕಿಸ್ತಾನಗಳಿಗೆ ಭೇಟಿ ಕೊಡಲಿರುವರು

ಗಲ್ಲಿಗೇರುವವನಿಂದ ನೇತ್ರದಾನ

ಮದುರೆ ಸೆಂಟ್ರಲ್ ಜೈಲಿನಲ್ಲಿ ಫಾಸಿ ಶಿಕ್ಷೆಗೆ ಗುರಿಯಾಗಿರುವ ಒಬ್ಬ ಕೈದಿಯು ತನ್ನ ಕಣ್ಣುಗಳನ್ನು ಅಲ್ಲಿನ ಆಸ್ಪತ್ರೆಯ ನೇತ್ರ ಬ್ಯಾಂಕಿಗೆ ಒಪ್ಪಿಸಲು ಸೂಚಿಸಿರುತ್ತಾನೆ ಗಲ್ಲಿಗೇರಿಸಲ್ಪಡುವವರಿಂದ ನೇತ್ರ ದಾನವು ನಡೆಯುತ್ತಿರುವುದು ಇದು ಎರಡನೇ ಬಾರಿ. ಕಳೆದ ಮೇ ನಲ್ಲಿ ಒಬ್ಬ ಗಲ್ಲಿಗೇರಿದ ಖೈದಿಯು ಕಣ್ಣುಗಳನ್ನು ಇದೇರೀತಿ ಒಪ್ಪಿಸಿದ್ದನು.

ಮಹಿಳಾ ಸದನದ ಅಧಿಕಾರಿ ವರ್ಗ

ನಗರದ ಮಹಿಳಾ ಸದನದ ಸರ್ವ ಸದಸ್ಯರ ಸಭೆಯು ಕಳೆದ ವಾರ ನಡೆಯಿತು. ಪ್ರಸಕ್ತ ಸಾಲಿನ ಅಧಿಕಾರ ವರ್ಗದವರನ್ನು ಆರಿಸಲಾಯಿತು. ಶ್ರೀಮತಿ ಕೆ. ವೆಂಕಟಸುಬ್ಬಮ್ಮನವರು ಅಧ್ಯಕ್ಷೆಯರಾಗಿಯೂ, ಶ್ರೀಮತಿ ಎ. ಶರಸಮ್ಮನವರು ಉಪಾಧ್ಯಕ್ಷೆಯಾಗಿಯೂ, ಶ್ರೀಮತಿಗಳಾದ ಕೆ. ವಿಶಾಲಾಕ್ಷಮ್ಮ ಮತ್ತು ಎಂ. ತಿ. ರಂಗನಾಯಕಮ್ಮನವರು ಕಾರ್ಯದರ್ಶಿ ಮತ್ತು ಖಜಾಂಚಿ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು

CAR FOR SALE

Christ the King Convent
Viceroy Road,
MYSORE

SREE GAYATHRI
On 9-7-57
Russian Daring Circus
With Side Reels

ಮೈಸೂರು ಪೇಟೆ ಧಾರಣೆ

ಬಂಗಾರ ಮುತ್ತು

ತೊಯಮುತ್ತೂರು ಸಣ್ಣ	[illegible]	[illegible]
ರತ್ನಚೂಡಿ	[illegible]	
ಕಡ್ಡಿ	[illegible]	[illegible]
ಬಂಗಾರದ	[illegible]	
ಕಾರ್ ಸಣ್ಣ	[illegible]	
ರಾಗಿ	[illegible]	[illegible]
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಜಲಸೆಂಡೆ	[illegible]	[illegible]
ಧನಿಯ	[illegible]	
ಗಂಜೀಸೇಪಣ್ಣು	[illegible]	[illegible]
ಗಂಜಾಸಿಟಾಯು	[illegible]	
ತೆಂಗಿನಕಾಯಿ	[illegible]	[illegible]

ಪ್ರಸಿದ್ಧ ಪತ್ರಿಕೆ

27 ಮತ್ತು 28-6-57ನೇ ತಾರೀಖಿನ ಸಾಧ್ವಿ ಪತ್ರಿಕೆಯಲ್ಲಿ "ಬಿಳಲಿಗೆ ಸಿದ್ಧವಾಗಿದೆ" ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿರುವ ಜಾಹಿರಾತಿನ ವಿವರ ಅಪೂರ್ಣವಾಗಿರುತ್ತಯಾಗಿ, ಭಾವಿ ಗಿರಾಕಿಗಳ ಸರಿಯಾದ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಚುರಪಡಿಸುವುದೇನೆಂದರೆ-ಸದರಿ ಸ್ವತ್ತು ಭೋಗ್ಯಕ್ಕೆ ಒಳಪಟ್ಟಿರುತ್ತೆ. ಮತ್ತು ಹಾಲಿ ಬಾಡಿಗೆದಾರರಾದ ಭಾರತ್ ಸಾ ಮಿಲ್ಲಿನವರ ಬಾಡಿಗೆ ಕರಾರಿಗೆ ಒಳಪಟ್ಟಿರುತ್ತೆ ಇವುಗಳ ಅವಧಿಯು ಇನ್ನೂ ಹಲವು ವರ್ಷಗಳಿರುತ್ತೆ.

ಎ ಕೆ. ಮೊಹಿದೀನ್, ಮಾಲೀಕರು,
ಭಾರತ್ ಸಾ ಮಿಲ್ಸ್,
ಮಾರ್ಕಂಡನಾಗಿ ರಸ್ತೆ, ಮೈಸೂರು

ಸಿ. ಟಿ. ಸಿ., ಹಳೇ ಅಗ್ರಹಾರ - ಮೈಸೂರು.
S. S L. C. ಸಪ್ಲಿಮೆಂಟರಿ ತರಗತಿಗಳು
★ ಇಂಗ್ಲಿಷ್ ಮಾಧ್ಯಮಕ್ಕೇ ಬೇರೆ ತರಗತಿ
★ ಬಾಲಕಿಯರಿಗೇ ಪ್ರತ್ಯೇಕವಾದ ತರಗತಿ
★ ದಕ್ಷರಾದ ಉಪಾಧ್ಯಾಯರು - ಉತ್ತಮ ಸಲಕರಣೆ
ಕೆಲವೇ ಸೀಟುಗಳು ಉಳಿದಿವೆ.

ಟೆಲಿಫೋನ್ ನಂ. 541 — — ಟೆಲಿಗ್ರಾಂ : ಕಾಫಿ
ನ್ಯೂ ಚಾಮುಂಡೇಶ್ವರಿ ಕೆಫೆ,
ಇರ್ವಿನ್ ರಸ್ತೆ, ಮೈಸೂರು.
ತಾ|| 10-7-1957 ರಿಂದ ರಿಯಾಯಿತಿ ದರ
ವಿದ್ಯಾರ್ಥಿಗಳಿಗೂ ಹಾಗೂ ಬೋರ್ಡರುಗಳಿಗೂ ಊಟದ 30 ಟಿಕೆಟ್ಟುಗಳ ಪುಸ್ತಕಕ್ಕೆ ರೂ. 16-8-0 ಮಾತ್ರ. ಪ್ರೊ|| ಸಿ ಬಿ ಎಂ. ಚಂದ್ರಯ್ಯ.

ದಿ ಸ್ಟೇಟ್ ಸ್ಪೋರ್ಟ್ಸ್ ವರ್ಕ್ಸ್,
297. ಲಕ್ಷ್ಮೀವಿಲಾಸ ಅಗ್ರಹಾರ.
ನಮ್ಮ ಮಾನ್ಯ ಗಿರಾಕಿಗಳಿಗೆ ಹೆಚ್ಚಿನ ಸೌಕರ್ಯ ಮತ್ತು ಸೇವೆಗಾಗಿ
ಜುಲೈ ೮ನೇ ತಾರೀಖು ಸೋಮವಾರದಿಂದ, ಪ್ರಭಾ ಟಾಕೀಸ್ ಬಳಿ
ಚಾಮುಂಡಿರಾಜ್ ರಸ್ತೆಯ
1684-B ನೇ ನಂಬರು ಮಳಿಗೆಯಲ್ಲಿ ಒಂದು ಶಾಖೆಯನ್ನು
ತೆರೆಯಲಾಗಿರುವ ಅಂಶವನ್ನು ತಿಳಿಸಲು ಹರ್ಷಿಸುತ್ತೇವೆ ಗಿರಾಕಿಗಳು
ಪ್ರೋತ್ಸಾಹಿಸಬೇಕಾಗಿ ಮನವಿ ಮಾಡುತ್ತೇವೆ.

Edited, Printed and Published by A R Nagarajan at Sadhvi Press, D Subbiah Road Mysore

ರಿಜಿಸ್ಟ್ರೇಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 2 ಪುಟ ಸ್ಪೆಷಲ್

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖ್ಯಾತಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈ ಸೂ ರು

ಸಂಪುಟ : ೧೩] SADHVI : WEDNESDAY 10—7—1957 ಮೈಸೂರು : ಬುಧವಾರ ೧೦—೭—೧೯೫೭ : [ಸಂಚಿಕೆ : ೩೩೪

ಆಲ್ಜೀರಿಯದ ಜನರ ಮೇಲೆ ಫ್ರೆಂಚರಿಂದ ವಿಷವಾಯು?

ಆಲ್ಜೀರಿಯಾ ದಂಗೆಕೋರರ ಮೇಲೆ ಫ್ರೆಂಚರಿಂದ ವಿಷವಾಯು ಪ್ರಯೋಗ?

ಆಲ್ಜೀರಿಯಾ ದಂಗೆಕೋರರ ಮೇಲೆ ಫ್ರೆಂಚರು ವಿಷವಾಯು ಮತ್ತು ನಾಪಾಂ (ಬೆಂಕಿ ಹತ್ತುವ ಸಾಧನ) ಅಸ್ತ್ರಗಳನ್ನು ಉಪಯೋಗಿಸುತ್ತಿರುವರೆಂದು ಆಲ್ಜೀರಿಯದ ರಾಷ್ಟ್ರೀಯ ನಾಯಕ ರಾಚಿಡ್ ಬೇ ಅಬೆಲ್ ಅಜೀದ್‌ರವರು ಆಪಾದಿಸಿರುತ್ತಾರೆ. ಅವರು ಅಂತರ ರಾಷ್ಟ್ರೀಯ ಕಾರ್ಮಿಕ ಫೆಡರೇಷನ್ನಿನ ಕಾಂಗ್ರೆಸ್ಸಿನಲ್ಲಿ ಮಾತನಾಡಿ, ತಮ್ಮ ಮಾತಿನಲ್ಲಿ ನಂಬಿಕೆಯಿಲ್ಲದಿದ್ದರೆ ಟ್ಯೂನಿಸ್ಸಿನ ಆಸ್ಪತ್ರೆಗಳಲ್ಲಿರುವವರನ್ನು ನೋಡಿ ತಿಳಿದುಕೊಳ್ಳಬಹುದೆಂದೂ ಅವರು ಹೇಳಿರುವರು. ಆಲ್ಜೀರಿಯದ ಜನರ ಸ್ವಾತಂತ್ರ್ಯದ ಮನ್ನಣೆಯಾದರೆ ಮಾತ್ರ ಅಲ್ಲಿ ಶಾಂತಿ ಒಪ್ಪಂದ ಸಾಧ್ಯವೆಂದು ಅವರು ಹೇಳಿರುತ್ತಾರೆ.

ಜಪಾನಿಗೆ ಅಕ್ಟೋಬರಿನಲ್ಲಿ ನೆಹರೂರವರ ಭೇಟಿ

ಈ ವರ್ಷ ಅಕ್ಟೋಬರ್ ತಿಂಗಳಲ್ಲಿ ಪ್ರಧಾನಿ ನೆಹರೂರವರು ಜಪಾನಿಗೆ ಭೇಟಿ ಕೊಡುವರು. ಕಳೆದ ಮೇ ತಿಂಗಳಲ್ಲಿ ಭಾರತಕ್ಕೆ ಜಪಾನಿನ ಪ್ರಧಾನಿ ನೊಬುಸುಕೆ ಕಿಷಿಯವರು ಆಗಮಿಸಿದ್ದಾಗ ನೆಹರೂರವರನ್ನು ಆಹ್ವಾನಿಸಿದ್ದರು.

ಆಹಾರ ಧಾನ್ಯದ ಹತೋಟಿಗೆ ರೆವಿನ್ಯೂ ಸಚಿವರ ಸಮ್ಮತಿ ಇಲ್ಲ

ಭೂಕಂದಾಯದ ಬದಲು ವರಮಾನ ತೆರಿಗೆಗೆ ವಿರೋಧ

ಬೆಂಗಳೂರು ೧೦

ರಾಜ್ಯದಲ್ಲಿ ಪುನಃ ಆಹಾರ ಧಾನ್ಯದ ಹತೋಟಿಯನ್ನು ತರುವುದಕ್ಕೆ ಸಮ್ಮತಿಸುವುದಿಲ್ಲವೆಂಬ ಅಂಶವನ್ನು ರೆವಿನ್ಯೂ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಸೂಚಿಸಿರುತ್ತಾರೆ. ಬೆಲೆ ಹತೋಟಿಗಾಗಿ ಕೇಂದ್ರ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ಮಾಡಿರುವ ಸಲಹೆ ಬಗ್ಗೆ ರೆವಿನ್ಯೂ ಸಚಿವರು ತಮ್ಮ ಪ್ರತಿಕ್ರಿಯೆಯನ್ನು ಸೂಚಿಸಿ, ಧಾನ್ಯದ ಹತೋಟಿ ಕಾಲದಲ್ಲಿ ಕೆಟ್ಟ ಅನುಭವವನ್ನು ಪಡೆದಿರುವುದಾಗಿಯೂ, ವಾಗ್ದಾನದಲ್ಲಿ ಹತೋಟಿಯು ಉತ್ತಮವಾಗಿ ಕಂಡುಬಂದರೂ ಕಾರ್ಯತಃ ಅದು ಹಾಗಿಲ್ಲವೆಂದೂ ತಿಳಿಸಿರುತ್ತಾರೆ.

ಭೂ ಕಂದಾಯವನ್ನು ತೆಗೆದುಹಾಕಿ ಅದರ ಸ್ಥಾನದಲ್ಲಿ ವ್ಯವಸಾಯ ವರಮಾನ ತೆರಿಗೆಯನ್ನು ವಿಧಿಸಬೇಕೆಂದು ಕೇಂದ್ರ ಮಂತ್ರಿಯವರು ಮಾಡಿರುವ ಸಲಹೆಯನ್ನು ಸಚಿವರು ಒಪ್ಪಲಿಲ್ಲ. ಈಗಿನ ಪದ್ಧತಿಯು ಅನೇಕ ಶತಮಾನಗಳಿಂದಲೂ ನಡೆದುಬಂದಿರುವುದಾಗಿಯೂ, ಅದರಲ್ಲಿ ಹಲವು ದೋಷಗಳಿದ್ದರೂ, ಅದು ಜನರಿಗೆ ತಕ್ಕುದಾಗಿರುವುದೆಂದೂ ಸಚಿವರು ಹೇಳಿರುತ್ತಾರೆ. ವ್ಯವಸಾಯ ವರಮಾನ ತೆರಿಗೆ ಪದ್ಧತಿಯನ್ನು ಕಾರ್ಯಗತ ಮಾಡಲು ಸಾಧ್ಯವಿಲ್ಲವೆಂದೂ, ತೆರಿಗೆ ತನಿಖೆ ಸಮಿತಿಯವರೂ ಸಹ ಅದನ್ನು ಪರಿಶೀಲಿಸಿ ಈಗಿನ ಪದ್ಧತಿಯೇ ಇರಲೆಂದು ಸೂಚಿಸಿದ್ದುದಾಗಿಯೂ ಸಚಿವರು ಹೇಳಿರುವರು.

ಅಕ್ಕಿ ಸಾಗಾಣಿಕೆಗೆ ದಕ್ಷಿಣ ವಲಯದ ನಿರ್ಮಾಣ

ಆಹಾರ ಮಂತ್ರಿ ಪಾಟೀಲರಿಂದ ವಿವರಣೆ

ಬೆಂಗಳೂರು ೧೦

ಮೈಸೂರು, ಮದ್ರಾಸು, ಆಂಧ್ರ ಮತ್ತು ಕೇರಳಗಳಲ್ಲಿ ಅಕ್ಕಿಯನ್ನು ಸಗಟು ರವಾನೆ ಮಾಡುವ ಬಗ್ಗೆ ತಕ್ಕ ವ್ಯವಸ್ಥೆ ಮಾಡಲು ದಕ್ಷಿಣ ವಲಯದ ನಿರ್ಮಾಣಕ್ಕೆ ಕೇಂದ್ರ ಸರ್ಕಾರದವರು ತಾತ್ಕಾಲಿಕ ನಿರ್ಧಾರ ತೆಗೆದುಕೊಂಡಿರುವರೆಂದು ಆಹಾರ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ತಿಳಿಸಿರುತ್ತಾರೆ. ಆಹಾರ ಧಾನ್ಯಗಳ ಗಡಂಗುಗಳಲ್ಲಿ ಸಾಕಾದಷ್ಟು ದಾಸ್ತಾನು ಇರುವುದೆಂದೂ, ಪರಿಸ್ಥಿತಿಯನ್ನು ತೃಪ್ತಿಕರವಾಗಿ ಎದುರಿಸಬಹುದೆಂದೂ ಅವರು ಹೇಳಿ, ಧಾನ್ಯದ ಬೆಲೆಯು ಇಳಿಯುವುದೆಂಬ ನಂಬಿಕೆಯನ್ನು ವ್ಯಕ್ತಪಡಿಸಿರುತ್ತಾರೆ.

ಭಾರತ ಸರ್ಕಾರದವರು ಸಂಸ್ಥಾನಕ್ಕೆ ಅವಶ್ಯಕವಾದಷ್ಟು ಗೋಧಿಯನ್ನೂ, ತಿಂಗಳಿಗೆ ೪,೦೦೦ ಟನ್ ಅಕ್ಕಿಯನ್ನೂ ಮುಂದಿನ ತಿಂಗಳಲ್ಲಿ ಕಳುಹಿಸುವರೆಂದೂ, ಸಂಸ್ಥಾನಕ್ಕೆ ಅಕ್ಕಿ ಸರಬರಾಜಿನ ಪ್ರಮಾಣವನ್ನು ಇನ್ನೂ ೧೦೦೦ ಟನ್ನಿನಷ್ಟು ಹೆಚ್ಚಿಸುವ ವಿಚಾರವನ್ನು ಕೇಂದ್ರದವರು ಪರಿಶೀಲಿಸಲಿರುವರೆಂದೂ ಸಚಿವರು ನುಡಿದಿರುತ್ತಾರೆ. ಗೋಧಿಗೆ ಕೊರತೆಯೇ ಇಲ್ಲವೆಂದು ಅವರು ಭರವಸೆಯಿತ್ತಿರುವರು.

ನೇಪಾಳದ ಮಂತ್ರಿಮಂಡಲದ ರಾಜೀನಾಮೆ

ನೇಪಾಳದ ಪ್ರಧಾನಿ ಟಂಕಾ ಪ್ರಸಾದ ಆಚಾರ್ಯರು ತಮ್ಮ ಮಂತ್ರಿ ಮಂಡಲದ ರಾಜೀನಾಮೆಯನ್ನು ಕಳೆದ ಭಾನುವಾರ ದೊರೆ ಮಹೇಂದ್ರರವರಿಗೆ ಸಮರ್ಪಿಸಿದರು. ಮುಂದೆ ಆಜ್ಞೆಯಾಗುವವರೆಗೆ ಪ್ರಧಾನಿಯವರು ಅಧಿಕಾರದಲ್ಲಿರುವರು. ಮಂತ್ರಿ ಮಂಡಲದಲ್ಲಿ ಒಗ್ಗಟ್ಟು ಇಲ್ಲದಿರುವ ಬಗ್ಗೆ ಅವರು ಈ ಕ್ರಮ ಕೈಗೊಂಡಿರುತ್ತಾರೆ. ಮಂತ್ರಿ ಮಂಡಲದಲ್ಲಿರುವ ಹಲವು ಸ್ವತಂತ್ರ ಸದಸ್ಯರನ್ನು ಕೈ ಬಿಟ್ಟು ಹೊಸ ಮಂಡಲವನ್ನು ರಚಿಸಬೇಕೆಂದು ಪ್ರಧಾನಿಯವರು ದೊರೆಗೆ ಶಿಫಾರಸು ಮಾಡಿದ್ದರು.

ದ್ರವ್ಯಾರ್ಜನೆಗಾಗಿ ರಾಷ್ಟ್ರಧ್ವಜದ ಉಪಯೋಗ ಕೂಡದು

ಸಾರ್ವಜನಿಕರಲ್ಲಿ ಸರ್ಕಾರದ ಕೋರಿಕೆ

ಬೆಂಗಳೂರು ೧೦

ರಾಷ್ಟ್ರ ಧ್ವಜವನ್ನು ಗೌರವಿಸಿ, ಅದರ ಘನತೆಯನ್ನು ಎತ್ತಿಹಿಡಿಯಬೇಕೆಂದು ಸರ್ಕಾರದವರು ಮನವಿಯೊಂದನ್ನು ಹೊರಡಿಸಿರುತ್ತಾರೆ. ಹಲವು ಖಾಸಗೀ ಜನರು ಮತ್ತು ಸಂಸ್ಥೆಗಳವರು ಕಾಗದದ ಮೇಲೆ ಸಣ್ಣ ರಾಷ್ಟ್ರ ಧ್ವಜಗಳನ್ನು ಮುದ್ರಿಸಿ ಮಾರುತ್ತಿರುವ ವಿಚಾರವು ತಮ್ಮ ಗಮನಕ್ಕೆ ಬಂದಿರುವುದಾಗಿಯೂ, ಇದು ಧ್ವಜದ ಘನತೆಯನ್ನು ಕಡಿಮೆ ಮಾಡುವುದೆಂದೂ, ವ್ಯಾಪಾರದ ದೃಷ್ಟಿಯಿಂದ ಅಂತಹ ಕೆಲಸಗಳು ನಡೆಯಬಾರದೆಂದೂ ಸರ್ಕಾರದವರು ಸೂಚಿಸಿರುತ್ತಾರೆ. ರಾಷ್ಟ್ರಧ್ವಜದ ಗೌರವವನ್ನು ಎತ್ತಿಹಿಡಿಯುವುದರಲ್ಲಿ ಸಾರ್ವಜನಿಕರು ಸಹಕರಿಸುವರೆಂದು ಸರ್ಕಾರದವರು ನಂಬಿಕೆ ವ್ಯಕ್ತಪಡಿಸಿರುತ್ತಾರೆ.

ಪಾಕಿಸ್ತಾನದಲ್ಲಿ ಹಣದ ಉಬ್ಬರದಿಂದ ತೀವ್ರ ಪರಿಸ್ಥಿತಿ

ಪಾಕಿಸ್ತಾನದಲ್ಲಿ ಹಣದ ಉಬ್ಬರವು ವಿಶೇಷವಾಗಿ ಅದನ್ನು ತಡೆಗಟ್ಟಲು ಅಲ್ಲಿನ ಸರ್ಕಾರದವರು ತೀವ್ರ ಕ್ರಮಗಳನ್ನು ಕೈಗೊಳ್ಳುತ್ತಿರುವರೆಂದು ಪಾಕಿಸ್ತಾನದ ಹಣಕಾಸಿನ ಕಾರ್ಯದರ್ಶಿ ಮುಮ್ತಾಜ್ ಹಸನರವರು ತಿಳಿಸಿರುತ್ತಾರೆ. ಸರ್ಕಾರದ ರೆವಿನ್ಯೂ ಮತ್ತು ಬಂಡವಾಳ ಕೆಲಸಗಳ ವೆಚ್ಚದಲ್ಲಿ ಮಿತವ್ಯಯ ಮಾಡಲಾಗುವುದು. ಅಲ್ಲಿನ ಸ್ಟೇಟ್ ಬ್ಯಾಂಕು ಸಾಲ ಕೊಡುವುದರ ಬಗ್ಗೆ ತೀವ್ರವಾದ ನಿರ್ಬಂಧಗಳನ್ನು ವಿಧಿಸಲಾಗುವುದು. ಅಲ್ಲದೆ ಸರ್ಕಾರಕ್ಕೆ ಬರಬೇಕಾದ ಬಾಕಿಯ ವಸೂಲಿಗೆ ಬಲವಾದ ಕ್ರಮಗಳನ್ನು ಜರುಗಿಸಲಾಗುವುದು.

ಭಾರತದ ರೈಲ್ವೆ ಸ್ಟೇಷನ್ ಮಾಸ್ಟರುಗಳ ಸಮ್ಮೇಳನ

ಅಖಿಲ ಭಾರತ ರೈಲ್ವೆ ಸ್ಟೇಷನ್ ಮಾಸ್ಟರುಗಳ ಸಮ್ಮೇಳನವು ಈ ತಿಂಗಳು ೧೩ರಂದು ಬೆಂಗಳೂರಿನಲ್ಲಿ ಸೇರುವುದು. ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ಪಿ. ಎಲ್. ಶಾಸ್ತ್ರಿಯವರು ಆರಂಭೋತ್ಸವವನ್ನು ನೆರವೇರಿಸುವರು. ಬೆಂಗಳೂರಿನ ವಕೀಲರಾದ ಶ್ರೀ ಆರ್. ರಂಗಯ್ಯನವರು ಅಧ್ಯಕ್ಷತೆ ವಹಿಸುವರು. ಬರುವ ಸೆಪ್ಟೆಂಬರ್ ೧೫ರಿಂದ ಸ್ಟೇಷನ್ ಮಾಸ್ಟರುಗಳು ಮುಷ್ಕರ ನಡೆಸುವ ವಿಚಾರವನ್ನು ಸಮ್ಮೇಳನದಲ್ಲಿ ಪರಿಶೀಲಿಸಲಾಗುವುದು.

ಆಗಸ್ಟ್ ೮ರಿಂದ ಅಂಚೆ ಮತ್ತು ತಂತಿ ನೌಕರರ ಮುಷ್ಕರ

ಬರುವ ತಿಂಗಳು ೮ರಿಂದ ದೇಶಾದ್ಯಂತ ಅಂಚೆ ಮತ್ತು ತಂತಿ ನೌಕರರ ಮುಷ್ಕರವು ಆರಂಭವಾಗುವ ಬಗ್ಗೆ ಸರ್ಕಾರಕ್ಕೆ ನೌಕರರ ಕೇಂದ್ರ ಸಂಘದವರು ನೋಟೀಸನ್ನು ಕೊಡಲಿರುವರು. ಸಂಘದ ಇನ್ನೊಂದು ಶಾಖೆಯವರು ಮುಷ್ಕರಕ್ಕೆ ಬೆಂಬಲವಿತ್ತಿರುವರು.

ರೆವಿನ್ಯೂ ಮಂತ್ರಿ ಪಾಟೀಲರ ರಾಜೀನಾಮೆಯಿಲ್ಲ

ಅವರಿಂದಲೇ ವದಂತಿಯ ನಿರಾಕರಣೆ

ಬೆಂಗಳೂರು ೧೦

ತಾವು ತಮ್ಮ ಅಧಿಕಾರ ಸ್ಥಾನವನ್ನು ಶೀಘ್ರದಲ್ಲೇ ಬಿಟ್ಟುಬಿಡುವುದಾಗಿ ಬಂದಿರುವ ಪತ್ರಿಕಾ ವರದಿಯನ್ನು ರೆವಿನ್ಯೂ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ನಿರಾಕರಿಸಿರುತ್ತಾರೆ. ಆರೋಗ್ಯದ ಕಾರಣಗಳಿಗಾಗಿ ಅವರು ರಾಜೀನಾಮೆ ಕೊಡುವರೆಂದು ಸೂಚಿಸಲಾಗಿದ್ದಿತು. ಅಲ್ಲದೆ ಭೂ ಶಾಸನದ ಬಗ್ಗೆ ಜಂಟಿ ಸಮಿತಿಯ ವರದಿಯ ಪರಿಣಾಮವಾಗಿ ಅವರು ರಾಜೀನಾಮೆಯೀಯುವರೆಂದೂ ವರದಿಯಾಗಿತ್ತು. ಈ ಸುದ್ದಿಗೆ ಆಧಾರವೇ ಇಲ್ಲವೆಂದು ಸಚಿವರು ನುಡಿದಿರುವರು.

○ ಸಂಸ್ಥಾನದಲ್ಲಿ ಸದ್ಯದಲ್ಲಿಯೇ ಪ್ರವಾಸ ಸೌಲಭ್ಯಗಳ ಇಲಾಖೆಯನ್ನು ಸ್ಥಾಪಿಸಲಾಗುವುದು. ವಾರ್ತಾ ಇಲಾಖಾಧಿಕಾರಿ ಶ್ರೀ ಶ್ರೀಪತ್ತೂರರವರು ಅದರ ಮುಖ್ಯಾಧಿಕಾರಿಗಳಾಗಲಿರುವರು. ಶ್ರೀ ಡಿ. ಆರ್. ರಾಮಯ್ಯನವರು ವಾರ್ತಾ ಇಲಾಖಾಧಿಕಾರಿಗಳಾಗುವರು.

ಸಂಸ್ಥಾನದ ಮಂತ್ರಿಗಳ ಸಂಬಳದಲ್ಲಿ ಖೋತಾ

ಮಂತ್ರಿಮಂಡಲದ ನಿರ್ಧಾರ

ಸ್ವಂ. ವಿ. ತಂತಿ] ಬೆಂಗಳೂರು ೧೦

ಸಂಸ್ಥಾನದ ಮಂತ್ರಿಗಳ ಸಂಬಳದಲ್ಲಿ ಶೇಕಡ ೧೦ರಷ್ಟು ಖೋತಾ ಮಾಡಲು ಈ ದಿನ ಮಂತ್ರಿ ಮಂಡಲದ ಸಭೆಯಲ್ಲಿ ನಿರ್ಧರಿಸಲಾಯಿತು. ಮಿತವ್ಯಯಕ್ಕಾಗಿ ದೇಶದಲ್ಲೆಲ್ಲಾ ಕೈಗೊಳ್ಳಲಾಗುತ್ತಿರುವ ಕಾರ್ಯಕ್ರಮದ ಅಂಗವಾಗಿ ಈ ರೀತಿ ತೀರ್ಮಾನಿಸಲಾಗಿದೆ.

ಜಿ. ಎಸ್. ನಾಗರಾಜರಾಯರು ರೆವಿನ್ಯೂ ಬೋರ್ಡ್ ಅಧ್ಯಕ್ಷರು

ಶ್ರೀ ಮಲ್ಲಿಮಾರ್‌ರವರು ಹೈಕೋರ್ಟ್ ನ್ಯಾಯಾಧೀಶರಾಗಲಿರುವುದರಿಂದ ಅವರ ಸ್ಥಾನದಲ್ಲಿ ಬೆಂಗಳೂರಿನ ಡಿವಿಜನಲ್ ಕಮೀಷನರ್ ಶ್ರೀ ಜಿ. ಎಸ್. ನಾಗರಾಜರಾಯರನ್ನು ನೇಮಿಸಲಾಗುವುದೆಂದೂ, ಬೆಂಗಳೂರು ಕಾರ್ಪೊರೇಷನ್ ಕಮೀಷನರಾದ ಶ್ರೀ ಮಹಮದ್ ಅಹಮದ್‌ರವರನ್ನು ಡಿವಿಜನಲ್ ಕಮೀಷನರಾಗಿ ನೇಮಿಸಲಾಗುವುದೆಂದೂ ತಿಳಿದುಬಂದಿದೆ.

ಸ್ವಯಂವರದಲ್ಲಿ ೪೦ ವರ್ಷದವನ ಕೂಡ ೧೦ ವರ್ಷದ ಕನ್ಯೆ ವಿವಾಹ

ಮಧ್ಯ ಪ್ರದೇಶದ ಬಜ್‌ವಾಡಾ ಎಂಬ ಗ್ರಾಮದಲ್ಲಿ ೧೦ ವರ್ಷದ ಒಬ್ಬ ಬಾಲಕಿಯನ್ನು ಸ್ವಯಂವರದಲ್ಲಿ ೪೦ ವರ್ಷದವನಿಗೆ ಕೊಟ್ಟು ವಿವಾಹ ನಡೆದ ಪ್ರಸಂಗವು ವರದಿಯಾಗಿದೆ. ಅದಕ್ಕಾಗಿ ಹುಡುಗಿಯ ತಂದೆಯು ವರರನ್ನು ಆಹ್ವಾನಿಸಲಾಗಿ, ಮೂವರು ತಮ್ಮ ಬಿರುದಾವಳಿಗಳೊಡನೆ ಬಂದರು. ಕೂಡಲೇ ಅವರವರಲ್ಲೇ ಜಗಳವುಂಟಾಗಿ, ಕನ್ಯೆಯ ತಂದೆಯು ಮೂವರ ಪೈಕಿ ಬಲಾಢ್ಯನಾದವನಿಗೆ ಮಗಳನ್ನು ಕೊಡುವುದಾಗಿ ತಿಳಿಸಿದನು. ಕಡೆಗೆ ಅವರ ಪೈಕಿ ೪೦ ವರ್ಷದವನು ದ್ವಂದ್ವದಲ್ಲಿ ಗೆದ್ದು, ಕನ್ಯೆಯನ್ನು ಶಾಸ್ತ್ರೋಕ್ತವಾಗಿ ವಿವಾಹವಾದನು.

ಮರಕ್ಕೆ ಲಾರಿ ಡಿಕ್ಕಿಯಿಂದ ಇಬ್ಬರ ಮರಣ

ನೆಲಮಂಗಲದ ಬಳಿ ಬೆಂಗಳೂರು-ತುಮಕೂರು ರಸ್ತೆಯಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ೧೮ ಜನ ನೌಕರರು ಇದ್ದ ಲಾರಿಯೊಂದು ನೆನ್ನೆ ಸಾಲು-ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮವಾಗಿ ಇಬ್ಬರು ಸ್ಥಳದಲ್ಲೇ ಮೃತಪಟ್ಟರು. ನೌಕರರು ತುಮಕೂರು ಬಳಿ ಕೆಲಸಕ್ಕಾಗಿ ಹೋಗುತ್ತಿದ್ದರು. ೮ ಜನರಿಗೆ ಗಾಯಗಳಾದುವು. ೬ ಜನರು ಪಾರಾದರು. ಎದುರಾಗಿ ಬರುತ್ತಿದ್ದ ಮತ್ತೊಂದು ಲಾರಿಯವರು ಗಾಯಗೊಂಡವರನ್ನು ಬೆಂಗಳೂರು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಮಾಡಿಸಿದರು. ಅಪಘಾತದ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿರುವರು.

○ ಆಚಾರ್ಯ ವಿನೋಬಾ ಭಾವೆಯವರು ಕಳೆದ ಶನಿವಾರದಿಂದ ಇನ್ನಷ್ಟು ಅಸ್ವಸ್ಥರಾಗಿರುವರೆಂದು ವರದಿಯಾಗಿದೆ. ಜ್ವರ ಬಂದಿದ್ದರೂ ಅವರು ೮ ಮೈಲಿ ದೂರ ನಡೆದು ಮರವಾಲಂ ಎಂಬಲ್ಲಿ ತಂಗಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿರುವರು.

ಸಂಸ್ಥಾನದಲ್ಲಿ ಮಿತವ್ಯಯಕ್ಕಾಗಿ ವಿಶೇಷ ಅಧಿಕಾರಿಯ ನೇಮಕ

ಬೆಂಗಳೂರು ೧೦

ಆಡಳಿತದಲ್ಲಿ ಮಿತವ್ಯಯವನ್ನು ತರುವ ಬಗ್ಗೆ ಸೂಕ್ತ ಮಾರ್ಗದ ಪರಿಶೀಲನೆಗಾಗಿ ಸಂಸ್ಥಾನ ಸರ್ಕಾರದವರು ವಿಶೇಷ ಅಧಿಕಾರಿಯೊಬ್ಬರನ್ನು ನೇಮಿಸಲು ಆಲೋಚಿಸುತ್ತಿರುವರೆಂದು ವರದಿಯಾಗಿದೆ. ಅದಕ್ಕಾಗಿ ಒಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸುವಂತೆ ಸಂಸ್ಥಾನ ಸರ್ಕಾರದವರು ಕೇಂದ್ರದವರನ್ನು ಕೋರಿರುವರೆಂದು ಹೇಳಲಾಗಿದೆ. ಸರ್ಕಾರಿ ನೌಕರರ ಕೆಲಸದಲ್ಲೂ ದಕ್ಷತೆಯನ್ನು ಸಾಧಿಸುವ ವಿಷಯವನ್ನೂ ವಿಶೇಷ ಅಧಿಕಾರಿಗಳು ಪರಿಶೀಲಿಸುವರು. ಈಗ ನೌಕರಿಯಲ್ಲಿರುವವರನ್ನು ತೆಗೆಯದೆ, ವೆಚ್ಚ ಮಾಡುವ ಹಣಕ್ಕೆ ಪೂರ್ಣ ಪ್ರತಿಫಲ ದೊರೆಯುವ ಬಗ್ಗೆ ಪರಿಶೀಲನೆ ನಡೆಸಲು ಉದ್ದೇಶಿಸಲಾಗಿದೆ.

ಭಾರತ-ಪಾಕಿಸ್ತಾನಗಳನ್ನು ಕಾಡಿಸುತ್ತಿರುವ ದುರದೃಷ್ಟ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇರುವ ಕಷ್ಟಗಳಿಗೆಲ್ಲಾ ಕಟ್ಟ ವಿಧಿಯೇ ಕಾರಣವೆಂದು ನೆಹರೂರವರು ಹೇಳಿರುತ್ತಾರೆ. ಸ್ವಾತಂತ್ರ್ಯ ಬಂದಮೇಲೆ ಉಭಯ ರಾಷ್ಟ್ರಗಳೂ ನೆಮ್ಮದಿ ಮತ್ತು ಪರಸ್ಪರ ಸಹಕಾರದಿಂದ ಬಾಳಲು ಭಾರತೀಯರು ಶ್ರಮಪಟ್ಟದ್ದಾಗಿಯೂ ಆದರೆ ಈ ವಿಧಿಯು ತಮ್ಮನ್ನು ಹಿಂಬಾಲಿಸುತ್ತಿರುವುದೆಂದೂ ಅವರು ಹೇಳಿರುವರು. ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿದ್ದ ದುರ್ವಿಧಿಯೇ ಅದು. ಅದನ್ನು ಕಂಡು ಬೇಸತ್ತು ಸ್ವಾತಂತ್ರ್ಯ ಪಡೆಯಲು ಅತ್ಯಂತ ಹೆಚ್ಚಿನ ಬೆಲೆಯನ್ನು ಕೊಟ್ಟದ್ದಾಯಿತು. ಎರಡು ಸ್ವತಂತ್ರ ರಾಜ್ಯಗಳಿದ್ದರೆ ಪರಸ್ಪರ ಸಹಕಾರವಿರುವುದೆಂದು ಭಾವಿಸಲಾಗಿತ್ತು. ಆದರೆ ಸ್ವಾತಂತ್ರ್ಯಾನಂತರ ಭಯಂಕರ ವ್ಯಾಪಾರಗಳೇ ನಡೆದುವು. ಇತ್ತಗಳಿಂದ ಸ್ವಾತಂತ್ರ್ಯ ಬರುವ ಮುಂಚೆ ಉಂಟಾಗಿದ್ದ ದುರದೃಷ್ಟ ಸ್ಥಿತಿಯೇ ಮುಂದುವರಿಯಿತು. ಕಾಶ್ಮೀರ, ಕಾಲುವೆ ವಿವಾದ, ನಿರಾಶ್ರಿತರ ಪ್ರಶ್ನೆ ಮುಂತಾದುವುಗಳ ಸ್ವರೂಪದಲ್ಲಿ ಅದು ಇನ್ನೂ ಕಾಡುತ್ತಿದೆ. ಅದು ದ್ವೇಷ ಮತ್ತು ಅಸೂಯೆಯಿಂದ ಆದುದು. ಅದನ್ನು ಸೌಹಾರ್ದ ಮತ್ತು ತಾಳ್ಮೆಯಿಂದ ಪರಿಹರಿಸಬೇಕು-ಎಂದು ನೆಹರೂರವರು ಹೇಳಿರುತ್ತಾರೆ.

ಅಲ್ಪಾದಾಯದವರ ವಸತಿಗಾಗಿ ಸಂಸ್ಥಾನಕ್ಕೆ ೩೫ ಲಕ್ಷ ರೂ

ಮೈಸೂರು ಸಂಸ್ಥಾನದಲ್ಲಿ ಅಲ್ಪ ಆದಾಯದವರ ಗೃಹ ನಿರ್ಮಾಣಕ್ಕಾಗಿ ಈ ವರ್ಷ ಕೇಂದ್ರ ಸರ್ಕಾರದವರು ಸಂಸ್ಥಾನಕ್ಕೆ ೩೫ ಲಕ್ಷ ರೂ ಅನ್ನು ಮಂಜೂರು ಮಾಡಿರುತ್ತಾರೆ. ೨ನೇ ಯೋಜನೆ ಅವಧಿಯಲ್ಲಿ ೨॥ ಕೋಟಿ ರೂ ವೆಚ್ಚದಿಂದ ಇಲ್ಲಿ ಮನೆಗಳನ್ನು ಕಟ್ಟಲಾಗುವುದು.

ಗಿರಿಜಾ ಕಲ್ಯಾಣದ ಸಂಗೀತ

ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣದ ಪ್ರಯುಕ್ತ ನಾಳೆ ಸಂಜೆ ೭ಕ್ಕೆ ತೆಪ್ಪದಲ್ಲಿ ಕುಮಾರಿ ದೇವಕಿ ಮತ್ತು ಪದ್ಮ ಸಹೋದರಿಯರಿಂದ ಸಂಗೀತವಿದೆ. ರಾತ್ರಿ ೯ಕ್ಕೆ ದೇವಸ್ಥಾನದಲ್ಲಿ ವಿ॥ ಎ ಎಚ್ ಶ್ರೀನಿವಾಸಮೂರ್ತಿಯವರು ಗಾಯನ ಮಾಡುವರು.

ಕೋರ್ಟಿನ ಅಪಮಾನಕ್ಕಾಗಿ ಪೌರಸಭಾ ಕಮಿಷನರಿಗೆ ದಂಡ

ಹೈದರಾಬಾದಿನ ಮಹಿಳೆಯೊಬ್ಬರು ಒಂದು ನಿವೇಶನದಲ್ಲಿ ಚಿತ್ರಮಂದಿರವನ್ನು ಕಟ್ಟಲು ಅನುಮತಿ ಕೋರಿ ಹಾಕಿದ್ದ ಅರ್ಜಿಯನ್ನು ಅಲ್ಲಿನ ಪೌರಸಭಾ ಕಮಿಷನರರು ಎಂಟುವರ್ಷಗಳ ಕಾಲ ತಳ್ಳಿ, ಈಗ ನಿರಾಕರಿಸಿದುದರಿಂದ ಆಕೆಯು ಆಂಧ್ರದ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿ, ಮಂದಿರವನ್ನು ಕಟ್ಟಲು ಅನುಮತಿಯನ್ನು ಪಡೆದರು. ಹೀಗಿದ್ದರೂ ಪೌರಸಭಾ ಕಮಿಷನರರು ಕಟ್ಟಡ ಕಟ್ಟಲು ಜೇರೊಬ್ಬರಿಗೆ ಅನುಮತಿ ಕೊಡಲಿಲ್ಲ. ಅವರ ವರ್ತನೆಯು ನ್ಯಾಯಾಲಯದ ಅವಮಾನವೆಂದು ಕೋರ್ಟಿನವರು ಭಾವಿಸಿ ಅವರಿಗೆ ೧೦೦ ರೂ ದಂಡವನ್ನು ವಿಧಿಸಿರುತ್ತಾರೆ.

ಅಮೆರಿಕದಿಂದ ಭಾರತಕ್ಕೆ ಮತ್ತೆ ೩೦ ಲಕ್ಷ ಟನ್ ಗೋಧಿ ಸಾಲ

ಭಾರತ ಸರ್ಕಾರದವರು ಈ ವರ್ಷ ಅಮೆರಿಕದಿಂದ ೩೦ ಲಕ್ಷ ಟನ್ ಗೋಧಿಯನ್ನು ಸಾಲದ ರೂಪದಲ್ಲಿ ಆಮದು ಮಾಡಿಕೊಳ್ಳಲಿರುವರೆಂದು ವರದಿಯಾಗಿದೆ. ಉತ್ತರ ಭಾರತದಲ್ಲಿ ಗೋಧಿ ವಲಯವನ್ನು ಏರ್ಪಡಿಸಿರುವಂತೆ ದಕ್ಷಿಣದಲ್ಲಿ ಅಕ್ಕಿ ವಲಯವನ್ನು ವ್ಯವಸ್ಥೆ ಮಾಡಲಾಗುವುದೆಂದು ಗೊತ್ತಾಗಿದೆ. ಗೋಧಿ ವಲಯದ ವ್ಯವಸ್ಥೆಯಿಂದ ಆ ಪ್ರದೇಶದಲ್ಲಿ ಗೋಧಿಯ ಬೆಲೆಯು ಇಳಿದಿದೆ.

ಸ್ವಚ್ಛ ಬಾಂಬಿನಿಂದಲೂ ಅಪಾಯ

ನೆಹರೂರವರ ಹೇಳಿಕೆ

ಸ್ವಚ್ಛ ಜಲಜನಕ ಬಾಂಬನ್ನು ಬಹಳ ಎತ್ತರದಿಂದ ಆಸ್ಫೋಟನೆ ಮಾಡಿದರೆ ಅದರಿಂದ ಕೂಡಲೇ ಅಣು ಕಣಗಳು ಹೊರಡುವುದು ಬಹಳ ಕಡಿಮೆಯೆಂಬುದು ನಿಜವಾದರೂ ಅವು ವಾಯು ಮಂಡಲವನ್ನು ದಾಟಿರುವ ಅಂತರಿಕ್ಷದಲ್ಲಿ ಹರಡಿ ಹಲವು ವರ್ಷಗಳನಂತರ ಕೆಳಗಿಳಿದು ಅಪಾಯವನ್ನುಂಟುಮಾಡುವುವೆಂದು ನೆಹರೂರವರು ತಿಳಿಸಿರುತ್ತಾರೆ. ಅಣು ಶಸ್ತ್ರ ಪರೀಕ್ಷೆಗಳನ್ನು ನಿಲ್ಲಿಸಬೇಕೆಂದೂ ಅದನ್ನು ನಿಲ್ಲಿಸುವುದರಿಂದ ಯಾವ ರಾಷ್ಟ್ರಕ್ಕೂ ಅಪಾಯವಿಲ್ಲವೆಂದೂ ಇತರ ಸಮಸ್ಯೆಗಳ ಪರಿಶೀಲನೆಗೆ ಅದು ಸಹಕಾರಿಯಾಗುವುದೆಂದೂ ಅವರು ಸೂಚಿಸಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಮುಖ್ಯ ವಿಷಯ ೭ ೧೫ ದೇವರನಾಮ ೭ ೩೦ ಮತ್ತು ೮-೧೫ ಬಿ ಪಿ ವಿಶ್ವೇಶ್ವರಯ್ಯ- ಕಾವ್ಯ ವಾಚನ ಮಧ್ಯಾಹ್ನ ೧-೩ ಟಿ ರುಕ್ಮಿಣಿ. ಪಿಟೀಲು. ೧೨.೩೦ ಮತ್ತು ೧-೫೦ ಹಯಗ್ರೀವಾಚಾರ್ ಹಿಂದೂಸ್ಥಾನಿ ಗಾತ್ರ ಸಂಗೀತ ೧ ಗಾನ ಮಂಜರಿ ೧-೩೦ ರೆಕಾರ್ಡ ೩-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೬-೧೦ ಜಾನಪದ ಗೀತೆ ೬-೩೦ ಕನ್ನಡ ಭಾಷಣ ೮ ಗೀತಾ ಗುಚ್ಛ-ಅ ಘು ನಿ ಕ ಕನ್ನಡ ಗೀತೆ ೮-೩೦ ತಾಳವಾದ್ಯ ಕಛೇರಿ ೯-೧೫ ಈ ಬೆಂಗಳೂರು ನಗರ : ಭಾಷಣ ೯-೩೦ ವಾರ್ತಾ ಚಿತ್ರ ೧೦ ಸುಗಮ ಸಂಗೀತ. ೧೦-೩೦ ಟಿ ರುಕ್ಮಿಣಿ ಪಿಟೀಲು

ಎಲ್ಲಾ ಸಂಸ್ಥಾನಗಳಲ್ಲೂ ರೈಲು ಸೇತುವೆ ರಕ್ಷಣೆಗಾಗಿ ಸಮಿತಿ

ಪ್ರವಾಹ ಮತ್ತು ವಿಪರೀತ ಮಳೆಯಿಂದ ರೈಲು ಮಾರ್ಗ ಮತ್ತು ಸೇತುವೆಗಳಿಗೆ ತಗಲುವ ಧಕ್ಕೆ ಬಗ್ಗೆ ಪದೇಪದೇ ಪರಿಶೀಲನೆ ನಡೆಸಲು ಪ್ರತಿ ಸಂಸ್ಥಾನದಲ್ಲೂ ಇಂಜನಿಯರುಗಳ ಒಂದೊಂದು ಸಮಿತಿಯನ್ನು ರಚಿಸುವಂತೆ ಪ್ರಾಂತ ಸರ್ಕಾರಗಳಿಗೆ ರೈಲ್ವೆ ಬೋರ್ಡಿನವರು ಸಲಹೆ ಮಾಡಿರುತ್ತಾರೆ. ಭಾರಿ ಮಳೆ, ಗಾಳಿ ಮುಂತಾದುವುಗಳ ಬಗ್ಗೆ ಮುನ್ಸೂಚನೆ, ಎಚ್ಚರಿಕೆ ಮುಂತಾದುವನ್ನು ಸಮಿತಿಗಳು ಇಲಾಖೆಗಳಿಗೆ ಕೊಡುವುದಲ್ಲದೆ ಸಾರ್ವಜನಿಕರ ಸಹಕಾರವನ್ನು ಪಡೆಯುವುದಕ್ಕೂ ಯತ್ನಿಸುವುವು.

ಸಾಯಿಬಾಬಾರವರ ಗುರುಪೂರ್ಣಿಮಾ ಮಹೋತ್ಸವ

ನಗರದ ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ನಾಳೆಯಿಂದ ೧೫ನೇ ತಾರೀಕಿನವರೆಗೆ ಸದ್ಗುರು ಸಾಯಿಬಾಬಾರವರ ೪೧ನೇ ವರ್ಷದ ಗುರು ಪೂರ್ಣಿಮಾ ಮಹೋತ್ಸವವು ನಡೆಯುವುದು. ಅದರ ಅಂಗವಾಗಿ ನಾಳೆ ಬೆಳಗ್ಗೆ ೭॥ ಗಂಟೆಗೆ ಅಭಿಷೇಕ, ನಂತರ ಲಕ್ಷಾರ್ಚನೆ, ಸಂಜೆ ೬ ಗಂಟೆಗೆ ಸಾಮೂಹಿಕ ಪ್ರಾರ್ಥನೆಗಳು ಜರುಗುವುವು. ಶ್ರೀ ಎಂ ಸಿ ಮಹದೇವಸ್ವಾಮಿ ಮತ್ತು ಆ॥ ವಿ॥ ನಂಜುಂಡಾರಾಧ್ಯರಿಂದ ಹರಿಶ್ಚಂದ್ರ ಕಾವ್ಯವಾಚನವು ಜರುಗುವುದು. ಕುರಾನನ್ನು ಕನ್ನಡಕ್ಕೆ ತರ್ಜುಮೆ ಮಾಡಿರುವ ಮೌಲ್ವಿ ಸೈಯದ್ ಖಾಸಿಂ ಸಾಹೇಬರ ಭಾಷಣವು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಸಮ್ಮುಖದಲ್ಲಿ ನಡೆಯುವುದು. ಸಮಾಜ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪ, ವಿದ್ಯಾ ಮಂತ್ರಿ ಶ್ರೀ ಎ ವೆಂಕಟಪ್ಪ ಮತ್ತು ಬೆಂಗಳೂರಿನ ಜನಾರ್ಧನ ದೇವಿದಾಸ್‌ರವರುಗಳು ಮುಂದಿನ ದಿನಗಳ ಸಮಾರಂಭದಲ್ಲಿ ಭಾಗವಹಿಸುವರು.

ಇಲವಾಲದ ರಸ್ತೆಯಲ್ಲಿರುವ ಶ್ರೀ ಪಾಂಡವ ನಿಲಯದಲ್ಲಿ ನಾಳೆ ಗುರುಪೂರ್ಣಿಮಾ ಪ್ರಯುಕ್ತ ಶ್ರೀ ಸಾಯಿ ನಾಥರವರಿಗೆ ದಿವ್ಯಾಲಂಕಾರ ಮಾಡಲಾಗುವುದು. ಸಂಜೆ ೬॥ ಗಂಟೆಗೆ ವಿ॥ ಅಂಜನಪ್ಪನವರಿಂದ ಪಾಂಡುರಂಗ ಕಥೆಯಿದೆ. ೭॥ ಗಂಟೆಗೆ ವಿ॥ ನಾಗಪ್ಪನವರ ಆರ್ಕೆಸ್ಟ್ರಾ ವಾದನವು ನಡೆಯುವುದು.

CAR FOR SALE

Christ the King Convent
Viceroy Road,
MYSORE

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ,
ಮೈಸೂರು

ಶ್ರೇಷ್ಠತರವಾದ ಅಗರಬತ್ತಿ, ಗಂಧದ ಬಿಲ್ಲೆ, ಕಾಶ್ಮೀರದ ಕೇಸರಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ಇಂದೇ ಭೇಟಿ ಕೊಡಿ

ಹಣದ ದಸ್ತಿಗಾಗಿ ಅಧಿಕಾರಿಗಳಿಬ್ಬರ ಬಂಧನ

ಸರ್ಕಾರಿ ಹಣದ ದುರುಪಯೋಗದ ಆಪಾದನೆಗಾಗಿ ರಾಜಸ್ಥಾನದ ಮುಂಚಿನ ಇಲಾಖಾ ವಿಶೇಷಾಧಿಕಾರಿ ಶ್ರೀ ಸಿ ಸಕ್ಸೇನಾ ಮತ್ತು ಎಕ್ಸಿಕ್ಯುಟಿವ್ ಇಂಜನಿಯರ್ ಪಿ. ಎಸ್ ದುದೇಜ ಅವರನ್ನು ಪೋಲೀಸರು ದಸ್ತಗಿರಿ ಮಾಡಿ ಜಯಪುರ ಸೆಷನ್ಸ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತಾರೆ

ಲಂಚ ತೆಗೆದುಕೊಳ್ಳುವವರ ಮುಂದೆ ಪ್ರಜಾ ಸಮಾಜವಾದಿಗಳ ಸತ್ಯಾಗ್ರಹ

ಲಂಚದ ಆಪಾದನೆಗಳಿರುವ ಸರ್ಕಾರಿ ಅಧಿಕಾರಿಗಳ ಪಟ್ಟಿ ತಯಾರಿಸಿ, ಅವರ ಮನೆ ಮತ್ತು ಕಛೇರಿಗಳ ಮುಂದೆ ಸತ್ಯಾಗ್ರಹ ನಡೆಸಲು ಉತ್ತರ ಪ್ರದೇಶದ ಪ್ರಜಾ ಸಮಾಜವಾದಿ ಪಕ್ಷದವರು ಆಲೋಚಿಸಿರುತ್ತಾರೆ. ಕೋರ್ಟು ಕಛೇರಿಗಳಲ್ಲಿ ಲಂಚವು ತಾಂಡವವಾಡುತ್ತಿರುವುದರ ವಿರುದ್ಧವಾಗಿ ಅವರು ಮೊದಲಿನ ಹಂತದಲ್ಲಿ ಈ ಕ್ರಮ ಕೈಗೊಳ್ಳಲಿರುವರು

ಪಿ. ಮಹದೇವಯ್ಯನವರ ನಿಧನಕ್ಕಾಗಿ ಸಂತಾಪ ಸೂಚನೆ

ವಿಧಾನ ಸಭಾ ಸದಸ್ಯರಾದ ಶ್ರೀ ಪಿ ಮಹದೇವಯ್ಯನವರು ನಿಧನ ಹೊಂದಿದುದಕ್ಕಾಗಿ ನಂಜನಗೂಡಿನ ಹಿಂದಿ ಪ್ರಚಾರ ಸಭೆಯವರು ದುಃಖವನ್ನು ವ್ಯಕ್ತಪಡಿಸಿ ಬಂಧುಮಿತ್ರರಿಗೆ ಅನುತಾಪವನ್ನು ಸೂಚಿಸಿರುತ್ತಾರೆ. ಶ್ರೀಯುತರು ಜನಾನುರಾಗಿಗಳಾಗಿದ್ದರೆಂದೂ, ಜನರ ಸೇವೆಗಾಗಿ ದುಡಿಯುತ್ತಿದ್ದರೆಂದೂ ಸಭೆಯವರು ತಿಳಿಸಿರುತ್ತಾರೆ.

SREE GAYATHRI
On 10-7-57
TRUE FRIENDS
With attractive side reels

ಲಿವರ್ ಕ್ಯೂರ್
ಮಕ್ಕಳ ಲಿವರಿಗೆ ಶಾಸ್ತ್ರೀಯ ಔಷಧ-
ನಿರೋಧಕ, ನಿವಾರಕ ಸಲಹೆಗಳಿಗೆ :-
'ಲಿವರ್ ಹೌಸ್', ಚಾಮರಾಜಪುರಂ,
ಮೈಸೂರು (ಸುಕ್ರೂರು ಡಾಕ್ಟರ್ ಹತ್ತಿರ)

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

Edited, Printed and Published by A R Nagarajan at Sadhvi Press, D. Subbiah Road Mysore

THE CHAMPION METROPOLITAN COLLEGE OF COMMERCE
Co operators' Home, 100' Road, Mysore
78 per cent-100 per cent GOOD RESULTS IN several subjects & Grades

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE Diploma in Stenography, COST & WORKS ACCOUNTANCY Banking, Shorthand, Type-writing etc.

Estd. 1917 — Fully qualified full-time staff — Educational atmosphere — Fine building and up-to-date equipment — Decent Library and Reading Room — Western Business education in the East — Good results — College Own Diploma also.

M S PUTTANNA, B Sc., N D. Com., F I.B. Vice-Principal,

P SUBBARAYA SASTRY M.A, M A (Com), F I.B Principal

ಟೆಲಿಫೋನ್ ನಂ. 541 — ಟೆಲಿಗ್ರಾಂ : ಅಶೋಕ್
ನ್ಯೂ ಚಾಮುಂಡೇಶ್ವರಿ ಕೆಫೆ,
ಇಲವಾಲ ರಸ್ತೆ, ಮೈಸೂರು
ತಾ॥ 10-7-1957 ರಿಂದ ರಿಯಾಯಿತಿ ದರ
ವಿದ್ಯಾರ್ಥಿಗಳಿಗೂ ಖಾಯಂ ಬೋರ್ಡರುಗಳಿಗೂ ಊಟದ 30 ಟಿಕೆಟ್ಟುಗಳ ಪುಸ್ತಕಕ್ಕೆ ರೂ 16-8-0 ಮಾತ್ರ
ಪ್ರೊ॥ ಸಿ ಬಿ ಎಂ ಚಂದ್ರಯ್ಯ.

ಅಂದಿನ ಪತ್ರಿಕೆ ೪ ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ **ಸಾಧ್ವಿ ದಿನ ಪತ್ರಿಕೆಗೆ** ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೧೫] SADHVI : THURSDAY 11—7—1957 ಮೈಸೂರು : ಗುರುವಾರ ೧೧—೭—೧೯೫೭ : [ಸಂಚಿಕೆ : ೬೬೫

ದಕ್ಷಿಣ ಭಾರತದ ಆಳ ರಾಜ್ಯಗಳಿಗೆ ಅಕ್ಕಿ ವಲಯದ ಸ್ಥಾಪನೆ

ಸಚಿವರುಗಳಿಂದ ಮಾನ ಪತ್ರಗಳ ಸ್ವೀಕಾರವಿಲ್ಲ

ಬೆಂಗಳೂರು ೧೧

ಸಚಿವರುಗಳು ಪ್ರವಾಸ ಮಾಡುವ ಕಾಲದಲ್ಲಿ ಸಾರ್ವಜನಿಕರು ಮುದ್ರಿತವಾದ ಮಾನಪತ್ರ ಮತ್ತು ಅರಿಕೆಗಳನ್ನು ಸಲ್ಲಿಸುವುದು ತಪ್ಪಬೇಕೆಂದು ಸಂಸ್ಥಾನದ ಮಂತ್ರಿಮಂಡಲವು ಸೂಚಿಸಿದೆ. ಆಡಂಬರ ಮತ್ತು ಅನಾವಶ್ಯಕವಾದ ವೆಚ್ಚವನ್ನು ತಪ್ಪಿಸುವ ಉದ್ದೇಶದಿಂದ ಈ ರೀತಿ ನಿರ್ಧರಿಸಲಾಗಿದೆ. ಈ ಬಗ್ಗೆ ಅಧಿಕಾರಿಗಳಿಗೆ ತಿಳುವಳಿಕೆ ಕೊಡಲಾಗಿದೆ

ವಿಧಾನಸಭಾ ಸದಸ್ಯ ಸಿಂಗ್ರಿಗೌಡರ ನಿಧನ

ಮಾಗಡಿ ಕ್ಷೇತ್ರದಿಂದ ವಿಧಾನ ಸಭೆಗೆ ಆರಿಸಿ ಬಂದಿರುವ ಶ್ರೀ ಬಿ ಸಿಂಗ್ರಿಗೌಡರು ನೆನ್ನೆ ರಾತ್ರಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಮಿದುಳಿನ ರಕ್ತಸ್ರಾವದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಹಿಂದೆ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು

ಸಂಸ್ಥಾನದಲ್ಲೂ ನೂತನ ಕ್ಯಾಲೆಂಡರಿನ ಜಾರಿ

ಮೈಸೂರು ಸರ್ಕಾರದವರು ಪ್ರಕಟಿಸುವ ಗೆಜೆಟ್ಟು ಮತ್ತು ಇತರ ಅಧಿಕೃತ ಪ್ರಕಟಣೆಗಳಲ್ಲಿ ರಾಷ್ಟ್ರೀಯ ಕ್ಯಾಲೆಂಡರನ್ನು ಮುದ್ರಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಈ ಬಗ್ಗೆ ಭಾರತ ಸರ್ಕಾರದವರನ್ನು ಮೈಸೂರಿನವರೂ ಅನುಸರಿಸುವರು

ಗವರ್ನರರ ಸ್ವಾಗತದ ವೆಚ್ಚಕ್ಕೆ ಸರ್ಕಾರದ ನಿರಾಕರಣೆ

ಆಂಧ್ರದ ಪೌರಸಭೆಯೊಂದು ಅಲ್ಲಿನ ಗವರ್ನರರ ಸ್ವಾಗತಕ್ಕಾಗಿ ೫,೫೦೦ ರೂ ವೆಚ್ಚ ಮಾಡಿರುವುದನ್ನು ಸರ್ಕಾರದವರು ತಿರಸ್ಕರಿಸಿರುತ್ತಾರೆ. ಅಲ್ಲಿನ ಮುಖ್ಯಮಂತ್ರಿಯವರಿಗೆ ಬೇರೊಂದು ಪೌರಸಭೆಯು ೨೫೦ ರೂ ವೆಚ್ಚಮಾಡಿರುವುದನ್ನೂ ಸರ್ಕಾರದವರು ಅಂಗೀಕರಿಸಿಲ್ಲ. ಈ ಎರಡು ಸಮಾರಂಭಗಳಿಗಾಗಿ ೫೦ ರೂ ಗಿಂತ ಹೆಚ್ಚಾಗಿ ಸ್ಥಳೀಯ ಸಂಸ್ಥೆಗಳು ವೆಚ್ಚ ಮಾಡಲು ಸರ್ಕಾರದವರು ಅವಕಾಶವಿತ್ತಿಲ್ಲ

ಪೂರ್ವ-ಪಶ್ಚಿಮಗಳೊಡನೆ ಉತ್ತಮ ಬಾಂಧವ್ಯಕ್ಕೆ ಅವಕಾಶ

ರಷ್ಯದಲ್ಲಿನ ಬದಲಾವಣೆ ಬಗ್ಗೆ ನೆಹರೂರವರ ಅಭಿಪ್ರಾಯ

ರಷ್ಯದಲ್ಲಿ ಇತ್ತೀಚೆಗೆ ಆದ ಘಟನೆಗಳನ್ನು ಕುರಿತು ನೆಹರೂರವರು ಹೇಗ್ ನಗರದಲ್ಲಿ ಮಾತನಾಡಿ, ಅದರಿಂದ ಪೂರ್ವ-ಪಶ್ಚಿಮ ರಾಷ್ಟ್ರಗಳ ಬಾಂಧವ್ಯವು ಉತ್ತಮಗೊಳ್ಳಲೂ, ಅಂತರ್ಜಾತೀಯ ಸ್ವತಂತ್ರಾಭಿಪ್ರಾಯವು ಮೂಡಲೂ ಅವಕಾಶವಾಗುವುದೆಂದು ಸೂಚಿಸಿರುತ್ತಾರೆ. ರಷ್ಯದಲ್ಲಿ ಸ್ವತಂತ್ರ ವಾತಾವರಣ ಹರಡಲು ಕ್ರಮವು ಕೈಗೊಳ್ಳಲ್ಪಡುತ್ತಿದ್ದು ಈಚೆಗೆ ಹಂಗೇರಿ ಘಟನೆಯಿಂದ ವ್ಯಕ್ತವಾಗಿತ್ತೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಅಲ್ಜೀರಿಯಾ ವಿಷಯವನ್ನು ಪ್ರಸ್ತಾಪಿಸಿ ವಸಾಹತುಶಾಹಿಯು ಕೊನೆಗಾಣಬೇಕೆಂದೂ, ಅದಕ್ಕಾಗಿ ಹೋರಾಟ ನಡೆಯದೆ ಶಾಂತಿಯುತವಾಗಿ ಸಮಸ್ಯೆಯು ಇತ್ಯರ್ಥವಾಗಬೇಕೆಂದೂ ಅವರು ತಿಳಿಸಿರುವರು

ವ್ಯಾಸಿಂಗ್ ಕಾರ್ಖಾನೆ ಕಾರ್ಮಿಕರ ಮುಷ್ಕರ ಮುಕ್ತಾಯ

ಮೈಸೂರು ೧೧

ಕಳೆದ ತಿಂಗಳು ೨೨ ನೇ ತಾರೀಕಿನಿಂದಲೂ ಮುಷ್ಕರ ನಡೆಸುತ್ತಿದ್ದ ನಗರದ ವ್ಯಾಸಿಂಗ್ ಕಾರ್ಖಾನೆ ಕಾರ್ಮಿಕರು ತಮ್ಮ ಬೇಡಿಕೆಗಳ ಬಗ್ಗೆ ಆಡಳಿತ ವರ್ಗದವರೊಡನೆ ನೆನ್ನೆ ಒಪ್ಪಂದ ಮಾಡಿಕೊಂಡು ಇಂದಿನಿಂದ ಮುಷ್ಕರವನ್ನು ನಿಲ್ಲಿಸಲು ನಿರ್ಧರಿಸಿದರು. ಒಪ್ಪಂದದ ಪ್ರಕಾರ ಇನ್ನುಮುಂದೆ ಆರು ಹೆತ್ತು ದಿನಗೂಲಿ ಕೊಡಲಾಗುವುದು. ಈಗಿನ ೧೫ ದಿನಗಳಲ್ಲದೆ ಇನ್ನೂ ೩ ದಿನಗಳ ವೇತನ ರಜಾ ಸೌಲಭ್ಯವನ್ನೂ ಮತ್ತು ಇನ್ನುಮುಂದೆ ವಾರಕ್ಕೆ ಅರ್ಧ ದಿನಗಳ ಬದಲು ೭ ದಿನಗಳ ಕೂಲಿಯನ್ನೂ ಆಡಳಿತ ವರ್ಗದವರು ಕೊಡುವರು. ಪ್ರಾವಿಡೆಂಟ್ ನಿಧಿ ಏರ್ಪಡಿಸಲಾಗುವುದು. ಕಟ್ಟ ನಾಲಿಸ್ವೆಂಬ ಕಾರಣಕ್ಕಾಗಿ ಕೆಲಸದಿಂದ ತೆಗೆದ ೭ ಮಂದಿಗೆ ಸೂಕ್ತ ಪರಿಹಾರ ನೀಡಿ ಅವರನ್ನು ಮತ್ತೆ ತೆಗೆದುಕೊಳ್ಳಲಾಗುವುದು

ಬಿಡಾರಂ ಕೃಷ್ಣಪ್ಪನವರ ಆರಾಧನೆ

ಬಿಡಾರಂ ಕೃಷ್ಣಪ್ಪನವರ ೩೬ ನೇ ಆರಾಧನೆಯು ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಈ ಸಂಜೆ ೬॥ ಗಂಟೆಗೆ ನೆರವೇರುವುದು. ಆದರ ಅಂಗವಾಗಿ ಶಿಷ್ಯಮಂಡಲಿಯವರ ಸಂಗೀತವೂ ನಡೆಯುವುದು. ಸರ್ವರೂ ಭಾಗವಹಿಸಬಹುದು

ಲಾರಿಯಿಂದ ಮೂಟೆ ಉರುಳಿದರೂ ಕೆಳಗೆ ಬಿದ್ದ ಗುಮಾಸ್ತರ ಪಾರು

ನಗರದ ಬನುಮಯ್ಯ ಚೌಕದಿಂದ ಸಯ್ಯಾಜಿರಾವ್ ರಸ್ತೆಯ ಕಡೆಗೆ ನೆನ್ನೆ ಸಂಜೆ ಸರ್ಕಾರಿ ಡಿಪೋ ಅಕ್ಕಿ ಮೂಟೆಗಳಿಂದ ತುಂಬಿದ್ದ ಲಾರಿಯೊಂದು ತಿರುಗುತ್ತಿದ್ದಾಗ ೬ ಮೂಟೆಗಳು ಕಳಚಿಕೊಂಡು ಅದರ ಮೇಲೆ ಕುಳಿತಿದ್ದ ಗುಮಾಸ್ತರೊಬ್ಬರು ಅವುಗಳೊಡನೆ ಕೆಳಕ್ಕೆ ಉರುಳಿದರೆಂದೂ, ಅನಂತರ ಮೇಲಿನಿಂದ ಮತ್ತೆರಡು ಮೂಟೆಗಳು ಉರುಳಿ ಅವರ ಪಕ್ಕದಲ್ಲಿ ಬಿದ್ದುವೆಂದೂ, ಅವರು ಅಪಘಾತದಿಂದ ಪಾರಾದರೆಂದೂ ತಿಳಿದುಬಂದಿದೆ

ಸಂಸ್ಥಾನದ ರಸ್ತೆ ಸಂಚಾರ ಸಂಸ್ಥೆ ಸ್ಥಾಪನೆಗೆ ಕೇಂದ್ರದ ಅನುಮತಿ

ಬೆಂಗಳೂರು ೧೧

ಸಂಸ್ಥಾನದಲ್ಲಿ ರಸ್ತೆ ಸಂಚಾರ ಸಂಸ್ಥೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ಅನುಮತಿ ಯಿತ್ತಿರುವುದಾಗಿ ವರದಿಯಾಗಿದೆ. ಸಂಸ್ಥೆಯ ಸ್ಥಾಪನೆ ವಿವರಗಳನ್ನು ಸಂಸ್ಥಾನ ಸರ್ಕಾರದವರು ಸಿದ್ಧಗೊಳಿಸುತ್ತಿರುವರು. ಸದ್ಯದಲ್ಲೇ ಈ ಬಗ್ಗೆ ಅಧಿಕೃತ ಪ್ರಕಟಣೆಯಾಗಲಿದೆ. ಸಂಸ್ಥಾನದ ರಸ್ತೆ ಸಂಚಾರ ಇಲಾಖೆಯವರು ೧,೨೦೦ ಬಸ್ಸುಗಳನ್ನು ನಡೆಸುತ್ತಿರುವರು.

ಗಿರಿಜಾಕಲ್ಯಾಣದ ಸಂಗೀತ

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಗಿರಿಜಾಕಲ್ಯಾಣದ ಪ್ರಯುಕ್ತ ಇಂದು ಸಂಜೆ ೬ ಗಂಟೆಗೆ ತಿಪ್ಪದಲ್ಲಿ ಆರ್. ಶೇಷಗಿರಿರಾಯರಿಂದ ಸಂಗೀತವು ನಡೆಯುವುದು. ರಾತ್ರಿ ೯ಕ್ಕೆ ದೇವಸ್ಥಾನದಲ್ಲಿ ವಿ॥ ಗೌರಿ ಕುಪ್ಪಸ್ವಾಮಿಯವರ ಸಂಗೀತವಿದೆ

ಗವರ್ನರರ ಕೈಯಿಂದ ನೋಟನ್ನು ಕಿತ್ತುಕೊಂಡ ಅರ್ಚಕ

ಪುರಿಯ ಜಗನ್ನಾಥ ದೇವಾಲಯದಲ್ಲಿ ದೇವತಾ ಪಾದದ ಬಳಿ ಗವರ್ನರ್ ಲಾಲಾ ಭೀಮಸೇನ ಸಚರ್‌ರವರು ೧೦ ರೂ ನೋಟನ್ನು ಇಡಲು ಪ್ರಯತ್ನಿಸಿದಾಗ ಅರ್ಚಕನೊಬ್ಬನು ಅದನ್ನು ಕಿತ್ತುಕೊಂಡು ಪರಾರಿಯಾದನೆಂದೂ, ಅವನನ್ನು ಹುಡುಕಲಾಗುತ್ತಿದೆಯೆಂದೂ ವರದಿಯಾಗಿದೆ. ಅಲ್ಲಿಯ ಪದ್ಧತಿ ಪ್ರಕಾರ ದೇವರ ಪಾದದಲ್ಲಿ ದುಡ್ಡನ್ನು ಇಟ್ಟರೆ ಅದು ದೇವಸ್ಥಾನಕ್ಕೆ ಸೇರುವುದೆಂದೂ, ಅರ್ಚಕನ ಕೈಗೆ ಸಿಕ್ಕಿದರೆ ಅದು ಅವನದಾಗುವುದೆಂದೂ ಗೊತ್ತಾಗಿದೆ. ದೇವರ ಸನ್ನಿಧಿಯಲ್ಲೂ ನಡೆಯುತ್ತಿರುವ ಈ ವರ್ತನೆಯ ಕಡೆಗೆ ಗವರ್ನರರು ಅಧಿಕಾರಿಗಳ ಗಮನ ಸೆಳೆದರು. ದೇವಸ್ಥಾನದ ಇತರ ಅರ್ಚಕರು ಘಟನೆಗಾಗಿ ಕ್ಷಮಾಪಣೆ ಕೇಳಿದರು

ಕ್ರುಶ್ಚೇವರ ಉಚ್ಚಾಟನೆಗೆ ಮೊಲಟೊ ಗುಂಪಿನ ವಿಫಲಯತ್ನ

ತಮ್ಮ ಸ್ಥಾನಗಳ ... ಗೆ ನಿಯುಕ್ತವಾಗಿ ಮಾಲೆಂಕಾವ್, ಮೊಲಟೋವ್ ಮತ್ತು ಕಗಾನೊವಿಚ್—ಈ ಮೂವರು ರಷ್ಯಾ ನಾಯಕರು ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿ ಕ್ರುಶ್ಚೇವರನ್ನು ಪಕ್ಷದ ಅಧಿಕಾರದಿಂದ ಓಡಿಸಲು ಹವಣಿಸಿದ್ದರೆಂದೂ, ಆದರೆ ಕ್ರುಶ್ಚೇವರಿಗೆ ಕೇಂದ್ರ ಸಮಿತಿಯ ಬೆಂಬಲವೀಯಲಾಗಿ ಅದು ಸಾಧ್ಯವಾಗದೇ, ಅವರೇ ಸ್ಥಾನಭ್ರಷ್ಟರಾದರೆಂದೂ ವರದಿಯಾಗಿದೆ

ರಷ್ಯಕ್ಕೆ ಡಾ॥ ಮೋದಿಯವರ ಭೇಟಿ

ವಡ್ಡಶ್ರೀ ಡಾ॥ ಎಂ ಸಿ ಮೋದಿಯವರು ಈ ತಿಂಗಳು ಮಧ್ಯಭಾಗದಲ್ಲಿ ಮಾಸ್ಕೋವಿಗೆ ಹೋಗುವರು. ಅಲ್ಲಿ ಸೇರುವ ವಿಶ್ವದ ಆರನೇ ಯುವಜನ ಹಬ್ಬದಲ್ಲಿ ಅವರು ಭಾಗವಹಿಸುವರು. ರಷ್ಯದಲ್ಲಿರುವ ಪ್ರಮುಖ ಕಣ್ಣಾಸ್ಪತ್ರೆಗಳಿಗೆ ಅವರು ಭೇಟಿ ಕೊಡುವರು.

ಪೂರ್ವ ಯೂರೋಪಿನಲ್ಲಿ ಗುರುಪಾದಸ್ವಾಮಿಯವರ ಪ್ರವಾಸ

ಲೋಕಸಭೆಯ ಮಾಜಿ ಸದಸ್ಯ ಶ್ರೀ ಎಂ. ಎಸ್ ಗುರುಪಾದಸ್ವಾಮಿಯವರು ಈ ತಿಂಗಳು ೨೦ರಿಂದ ಪೂರ್ವ ಯೂರೋಪಿನ ರಾಷ್ಟ್ರಗಳಲ್ಲಿ ಆರು ವಾರ ಕಾಲ ಪ್ರವಾಸ ಮಾಡುವರು. ೨೦ ನೇ ತಾರೀಕು ದೆಹಲಿಯಿಂದ ಮಾಸ್ಕೋವಿಗೆ ವಿಮಾನದಲ್ಲಿ ತೆರಳುವರು. ಅವರ ಪ್ರವಾಸಕ್ಕೆ ಸಮಾಜವಾದಿ ಪಕ್ಷಗಳು ಪ್ರೋತ್ಸಾಹ ಮತ್ತು ಧನ ಸಹಾಯ ನೀಡುವುವು

ಹೆಬ್ಬಾಳಿನಲ್ಲಿ ಪಶು ವೈದ್ಯ ಕಾಲೇಜಿನ ಸ್ಥಾಪನೆ

ಬೆಂಗಳೂರು ಬಳಿ ಇರುವ ಹೆಬ್ಬಾಳಿನಲ್ಲಿ ೩೦ ಲಕ್ಷ ರೂ. ವೆಚ್ಚದಿಂದ ಪಶುವೈದ್ಯ ಕಾಲೇಜನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಈ ವೆಚ್ಚದಲ್ಲಿ ಶೇಕಡ ೭೦ ರಷ್ಟನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವರು. ಈ ವರ್ಷದಿಂದಲೇ ಕಾಲೇಜನ್ನು ಆರಂಭಿಸಲು ಪ್ರಯತ್ನಿಸಲಾಗುತ್ತಿದೆ

ದಕ್ಷಿಣ ಅಕ್ಕಿ ವಲಯದ ರಚನೆ

ಮೈಸೂರು, ಕೇರಳ ಮತ್ತು ಮದ್ರಾಸುಗಳಿಗೆ ಆಂಧ್ರದ ಅಕ್ಕಿ

ಮೈಸೂರು, ಮದ್ರಾಸು, ಕೇರಳ ಮತ್ತು ಆಂಧ್ರ ಸಂಸ್ಥಾನಗಳುಳ್ಳ ದಕ್ಷಿಣ ಅಕ್ಕಿ ವಲಯವನ್ನು ಭಾರತ ಸರ್ಕಾರದವರು ಏರ್ಪಡಿಸಿರುತ್ತಾರೆ. ಈ ಪ್ರದೇಶದಲ್ಲಿ ಎಲ್ಲಿಬೇಕಾದರೂ ಅಕ್ಕಿಯನ್ನು ಯಾವ ಅಡ್ಡಿಯೂ ಇಲ್ಲದೆ ಸ್ವತಂತ್ರವಾಗಿ ಸಾಗಿಸಬಹುದು. ಆಂಧ್ರದಲ್ಲಿ ೬ ಲಕ್ಷ ಟನ್ ಹೆಚ್ಚುವರಿ ಅಕ್ಕಿ ಇರುವುದೆಂದೂ, ಇತರ ಮೂರು ಪ್ರಾಂತಗಳಲ್ಲಿ ಅಕ್ಕಿ ಕೊರತೆಯ ಪ್ರಮಾಣವು ಒಟ್ಟು ೪ ಲಕ್ಷ ಟನ್ ಆಗುವುದೆಂದೂ ಅಂದಾಜಾಗಿ ಇನ್ನೂ ೨ ಲಕ್ಷ ಟನ್ ಉಳಿಯುವುದು. ದಕ್ಷಿಣ ವಲಯದಿಂದ ಅಕ್ಕಿಯ ರಫ್ತಾಗಲೀ, ಅಥವಾ ಹೊರಗಿನಿಂದ ಆಮದಾಗಲೀ ಅವಕಾಶವನ್ನು ನಿರ್ಬಂಧಿಸಲಾಗಿದೆ. ಆಂಧ್ರದಿಂದ ಬೊಂಬಾಯಿ ಮತ್ತು ಪಶ್ಚಿಮ ಬಂಗಾಳದ ಅಕ್ಕಿ ಬಳಸುವ ಪ್ರದೇಶಗಳಿಗೆ ಉತ್ತಮ ರಕಂ ಅಕ್ಕಿ ರವಾನೆಗೆ ವ್ಯವಸ್ಥೆ ಮಾಡಲಾಗುವುದು. ಕೇರಳಕ್ಕೆ ಆಂಧ್ರ ಮತ್ತು ತಂಜಾವೂರಿನ ಕುಚುಲು ಅಕ್ಕಿ ಸರಬರಾಜಾಗುವುದು

ದೆಹಲಿ ವರ್ತಕರ ಹರತಾಳ

ಅಂತರ ಪ್ರಾಂತ ಮಾರಾಟ ತೆರಿಗೆಯ ವಿಧಾಯಕವನ್ನು ಪ್ರತಿಭಟಿಸಿ ನೆನ್ನೆ ದೆಹಲಿಯ ವರ್ತಕರು ಹರತಾಳವನ್ನಾಚರಿಸಿದರು. ಒಟ್ಟು ವ್ಯಾಪಾರದ ಮಾರ್ಕೆಟ್ಟುಗಳು ಮತ್ತು ಚಾಂದ್ನಿ ಚೌಕ್, ಸದರ್ ಬಜಾರ್ ಮುಂತಾದ ಕಡೆಗಳಲ್ಲಿ ಅನೇಕ ಸಣ್ಣ ಅಂಗಡಿಗಳೂ ಮುಚ್ಚಿದ್ದುವು. ಜವಳಿ, ಯಂತ್ರ, ಕಬ್ಬಿಣ ಕಾಗದ, ಸೈಕಲ್ ಮೋಟಾರು ಭಾಗ, ವಿದ್ಯುಚ್ಛಕ್ತಿ, ಮರ, ಚಿನ್ನ ಬೆಳ್ಳಿ, ಮತ್ತು ಆಹಾರ ದಿನಸಿ ಒಟ್ಟು ವ್ಯಾಪಾರಿಗಳು ಅದರಲ್ಲಿ ಸೇರಿದ್ದರು

ಅಂಜಾರಿನಲ್ಲಿ ಮತ್ತೆ ಭೂಕಂಪ

ಕಚ್ ಪ್ರದೇಶದಲ್ಲಿರುವ ಅಂಜಾರಿನಲ್ಲಿ ನೆನ್ನೆ ಮುಂಜಾನೆ ಭೂಕಂಪವಾಯಿತು. ಸಾವುನೋವುಗಳಾಗಿಲ್ಲ. ಆಸ್ತಿಪಾಸ್ತಿಗೆ ನಷ್ಟದ ವರದಿಯೂ ಆಗಿಲ್ಲ. ಕಳೆದ ವರ್ಷ ಇದೇ ತಿಂಗಳಲ್ಲಿ ಅಲ್ಲಿ ಆದ ಭೂಕಂಪದಿಂದ ೧೫೦ ಮಂದಿ ಮೃತಪಟ್ಟಿದ್ದರು

ಗುರುಪೂರ್ಣಿಮಾ ಉತ್ಸವದ ಕಾರ್ಯಕ್ರಮ

ತ್ಯಾಗರಾಜ ರಸ್ತೆಯಲ್ಲಿರುವ ಪ್ರಸನ್ನ ಸಾಯಿ ಮಂದಿರದಲ್ಲಿ ಗುರುಪೂರ್ಣಿಮೆ ಪ್ರಯುಕ್ತ ನಾಳೆ ಬೆಳಿಗ್ಗೆ ೯॥ ಗಂಟೆಗೆ ಗಣಪತಿ ಹೋಮ ನವಗ್ರಹ ಹೋಮ, ಏಕಾದಶರುದ್ರ ಸ್ವಾಹಾಕಾರ ಹೋಮ ಮತ್ತು ಪೂರ್ಣಾಹುತಿಯೂ, ಸಂಜೆ ೬ ಗಂಟೆಗೆ ಸಾಮೂಹಿಕ ಪ್ರಾರ್ಥನೆಯೂ ನಡೆಯುತ್ತವೆ. ೭ ಕ್ಕೆ ಸಹೋದರರಾದ ಪ್ರೊಫೆಸರು ಬಿ. ಎಸ್. ಎಸ್ ಕೌಶಿಕ್ ಮತ್ತು ... ವ್ಯಾಖ್ಯಾನವರಿಂದ ರಾಮಾಯಣ ವಾಚನ, ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು ವಾದನವೂ ಸಂ॥ ರತ್ನ॥ ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗ ಮತ್ತು ವಿ॥ ಗುರುರಾಜಪ್ಪನವರ ಪಿಟೀಲು ಸಮೇತ ಜರುಗುವುವು. ಮಾಜಿ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಭಾಗವಹಿಸುವರು.

ಬಸ್ ತೆರಿಗೆ ಸೀಟಿಗೆ ೩೦ರಿಂದ ೨೦ ರೂ.ಗೆ ಇಳಿಸಬೇಕು

ಜಿಲ್ಲಾ ಬಸ್ಸು ಮಾಲೀಕರ ಮನವಿ

ಮೈಸೂರು ೧೧

ಮೈಸೂರು ಜಿಲ್ಲಾ ಬಸ್ಸು ಮಾಲೀಕರ ಸಂಘದ ೨ನೇ ವಾರ್ಷಿಕ ಸಭೆಯು ಕಳೆದ ೮ನೇ ತಾರೀಕು ಶ್ರೀ ಜಿ ಆರ್. ಜೋಸೆಫ್‌ರವರ ಅಧ್ಯಕ್ಷತೆಯಲ್ಲಿ ನಡೆದು, ೧೦೦ ಮೈಲಿಗಿಂತಲೂ ಕಡಿಮೆ ದೂರ ಓಡುವ ಬಸ್ಸು ಸರ್ವೀಸ್ಸುಗಳ ಮೇಲೆ ತೆರಿಗೆಯನ್ನು ಪ್ರತಿ ಸೀಟಿಗೆ ೩೦ ರೂ. ವಿಧಿಸಲಿರುವುದು ದುಬಾರಿಯೆಂದೂ, ಅದನ್ನು ೨೦ ರೂ ಗೆ ಇಳಿಸಬಹುದೆಂದೂ ಸರ್ಕಾರಕ್ಕೆ ಸೂಚಿಸಲಾಯಿತು. ಜಿಲ್ಲಾ ಸಂಘವನ್ನು ಮೈಸೂರು ಪ್ರಾದೇಶಿಕ ಬಸ್ಸಿನವರ ಸಂಘವೆಂದು ಪರಿವರ್ತನೆ ಮಾಡಿ, ಮೈಸೂರು ಪ್ರಾದೇಶಿಕ ರಸ್ತೆ ಸಂಚಾರದ ಇತರಜಿಲ್ಲೆಗಳ ಬಸ್ಸು ಮಾಲೀಕರೂ ಅದರಲ್ಲಿ ಸೇರುವಂತೆ ಅವಕಾಶ ಕಲ್ಪಿಸಲು ವಿಶೇಷ ತೀರ್ಮಾನ ಮಾಡಲಾಯಿತು ಸಂಘದ ರಜತೋತ್ಸವವನ್ನು ಬೇಗನೆ ನಡೆಸಲೂ ತೀರ್ಮಾನಿಸಲಾಯಿತು.

ನೂತನ ಅಧಿಕಾರ ವರ್ಗದ ಚುನಾವಣೆಯು ನಡೆದು, ಶ್ರೀ ಜಿ ಆರ್. ಜೋಸೆಫ್‌ರವರು ಪುನಃ ಅಧ್ಯಕ್ಷರಾಗಿಯೂ, ಶ್ರೀಗಳಾದ ಸಿ ಪಿ ಸ್ವಾಮಿಶೆಟ್ಟಿ ಮತ್ತು ಕೆ ನಾರಾಯಣರಾಯರು ಉಪಾಧ್ಯಕ್ಷರುಗಳಾಗಿಯೂ, ಶ್ರೀಗಳಾದ ನರಸಿಂಹಯ್ಯಂಗಾರ್ ಮತ್ತು ಎಂ ಎಸ್ ಶಿವಶಂಕರ್‌ರವರು ಗೌರವ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಶ್ರೀ ಕೆ ವಿ ನಾಗರಾಜಶೆಟ್ಟರು ಖಜಾಂಚಿಗಳಾಗಿ ಚುನಾಯಿತರಾದರು ಶ್ರೀಗಳಾದ ಸಿ. ಡಿ. ನಾರಾಯಣರಾವ್, ಎಸ್ ಸಂಗಯ್ಯ, ಟಿ. ಆರ್. ರಾಮಯ್ಯ, ವಿ. ನಂಜುಂಡಯ್ಯ, ಎಸ್ ಎ ಶರೀಫ, ಸಿ ಕೃಷ್ಣಯ್ಯಂಗಾರ್, ಕೆ. ವೆಂಕಟನರಸಯ್ಯ, ಡಿ. ಲಿಂಗಯ್ಯ, ಆರ್. ಮುನಿಸ್ವಾಮಿನಾಯ್ಡು, ಎಸ್. ವಿ. ಶಾಮಣ್ಣ, ಎಂ. ವಿ ವೆಂಕಟಪ್ಪ ಮತ್ತು ಮಾಡರ್ನ್ ಮೋಟಾರು ಸರ್ವಿಸ್ಸಿನ ಮ್ಯಾನೇಜರು ಸದಸ್ಯರುಗಳಾಗಿ ನೇಮಿಸಲ್ಪಟ್ಟರು ಮೊದಲು ಕಾರ್ಯದರ್ಶಿ ಶ್ರೀ ಎ ಆರ್. ನರಸಿಂಹಯ್ಯಂಗಾರ್ಯರು ವರದಿ ಮತ್ತು ಲೆಕ್ಕ ಪತ್ರಗಳನ್ನು ಒಪ್ಪಿಸಿದರು

Edited, Printed and Published by A. R Nagarajan at Sadhvi Press, D. Subbiah Road Mysore

ಗ್ರಾಮದ ಮುಖಂಡನ ಕೊಲೆ ಸಂಬಂಧದಲ್ಲಿ ವಕೀಲರ ಬಂಧನ

ಅನಂತಪುರ ಜಿಲ್ಲಾ ಭಾರತ ಸೇವಕ ಸಮಾಜದ ಸದಸ್ಯರೂ, ಚಿಪ್ಪಗಿರಿ ಗ್ರಾಮದ ಒಂದು ಗುಂಪಿನ ಮುಖಂಡರೂ ಆದ ವಿರೂಪಾಕ್ಷ ರೆಡ್ಡಿ ಎಂಬಾತನ ಕೊಲೆ ಸಂಬಂಧವಾಗಿ ಕರ್ನೂಲಿನ ಅಡ್ವೋಕೇಟ್ ನಾರಾಯಣಪ್ಪ ಮತ್ತು ಅವರ ಸಹೋದರ ಲಕ್ಷ್ಮಣ್ಣನವರನ್ನು ಬಂಧಿಸಲಾಗಿದೆ ಆವರ ಗುಂಪಿನವರಿಗೂ, ಮೃತರಾದ ರೆಡ್ಡಿಯ ಗುಂಪಿನವರಿಗೂ ೫೦ ವರ್ಷಗಳಿಂದಲೂ ವೈರವಿತ್ತೆಂದು ಹೇಳಲಾಗಿದೆ ಒಂದು ಗ್ರಾಮದ ಭಾರತ ಸೇವಕ ಸಮಾಜದ ಸಭೆಯಲ್ಲಿ ರೆಡ್ಡಿಯವರು ಭಾಗವಹಿಸಿ ಜೀಪು ಕಾರಿನಲ್ಲಿ ಹಿಂದಿರುಗುತ್ತಿದ್ದಾಗ ಆಪಾದಿತರು ತಮ್ಮ ವಾಹನವನ್ನು ರಿವೇರಿನ ಸಹದಲ್ಲಿ ದಾರಿಗೆ ಅಡ್ಡಲಾಗಿ ನಿಲ್ಲಿಸಿ ಅವಿತುಕೊಂಡಿದ್ದರೆಂದೂ, ನಂತರ ಅವರು ವಿರೂಪಾಕ್ಷ ರೆಡ್ಡಿಯವರನ್ನು ಈಚೆಗೆ ಎಳೆದು ಕೊಡಲಿ ಭರ್ಜಿ ಮುಂತಾದುವುಗಳಿಂದ ೩೩ ಕಡೆ ಗಾಯಗೊಳಿಸಿ ಅವನಿಗೆ ಮರಣವನ್ನುಂಟುಮಾಡಿದರೆಂದೂ ಹೇಳಲಾಗಿದೆ.

ಶಾರದಾವಿಲಾಸ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘ

ಮೈಸೂರು

ಮೇಲ್ಕಂಡ ಸಂಘದ ನಾಲ್ಕನೇ ಜನರಲ್ ಬಾಡಿ ಸಭೆಯು ಇದೇ 14-7-57 ನೇ ಭಾನುವಾರ ಬೆಳಗ್ಗೆ 9 ಘಂಟೆಗೆ ಕಾಲೇಜಿನಲ್ಲಿ ನಡೆಯುವುದು. ಎಲ್ಲ ಸದಸ್ಯರೂ ದಯಮಾಡಿಸಬೇಕಾಗಿ ವಿನಂತಿ

ಹಿಂದೆ ಸದಸ್ಯರಾಗಿದ್ದವರು ತಮ್ಮ ಈಗಿನ ಚಂದಾವನ್ನು ಪಾವತಿ ಮಾಡಬೇಕಾಗಿ ಪ್ರಾರ್ಥನೆ

—ಕಾರ್ಯದರ್ಶಿ

VIDYA TUTORIAL COLLEGE

(Dalvoy High School Buildings)

MYSORE

H.E.L. & C.B.Z.

Classes Commenced in full swing

JOIN AT ONCE

Enquiries :- 9-30 to 10-30 A.M. and 5-30 to 7-30 P.M.

ಜಿಲ್ಲಾ ಕಾಂಗ್ರೆಸ್ ಅಧಿಕಾರ ವರ್ಗದವರ ಸಮ್ಮೇಳನ

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಜಿಲ್ಲಾ ಸಮಿತಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರ ಜಂಟಿ ಸಭೆಯು ಈ ತಿಂಗಳು ಕಡೆಯ ವಾರದಲ್ಲಿ ಬೆಂಗಳೂರಿನಲ್ಲಿ ಸೇರುವುದು. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ. ಪಿ. ಮಾಧವನ್ ನಾಯರ್‌ರವರು ಭಾಗವಹಿಸುವರು.

WANTED

A Dark Room Assistant Apply in person to:-

PHOTO FLASH,

Gayathri Bhavan, Mysore

SREE GAYATHRI TALKIES

Last Day of the

RUSSIAN FESTIVAL WEEK

ADMIRAL USHAKOV

From 12-7-57 For 4 days

Daily 3 Shows

FATE OF TWO QUEENS

(In Technicolor)

With - Hedy Lamarr

ಮಹಾಜನರಲ್ಲಿ ವಿನಂತಿ

ನಾನು ಅನೇಕ ದಿನಗಳಿಂದ ಹಲವು ಡೈರಿ ಫಾರಂಗಳವರ ಮೂಲಕ ಮರುಳಾಗಿ ಪೌಂಡು ಒಂದಕ್ಕೆ 0-4-0 ಮತ್ತು 0-3-9ಯಂತೆ ಹಾಲನ್ನು ಕೊಂಡು, ಬಹಳ ನಷ್ಟವನ್ನೂ, ಕಷ್ಟವನ್ನೂ ಅನುಭವಿಸಿರುತ್ತೇನೆ ಹಾಲಿನ ಬೆಲೆಯು ಹೆಚ್ಚಾಗಿದ್ದುದು ಮಾತ್ರವಲ್ಲದೆ, ಒಳ್ಳೆಯ ಹಾಲೂ ಸಹ ಸಿಕ್ಕುತ್ತಿರಲಿಲ್ಲ ಕಡೆಗೆ ವಿಚಾರಿಸಿದಮೇಲೆ ಒಳ್ಳೆಯ ಹಸುವಿನ ಹಾಲು ಪೌಂಡು 1ಕ್ಕೆ 0-3-3ಯಂತೆ ಕಾಲೇಜು ರಸ್ತೆಯಲ್ಲಿರುವ ಸ್ಟಾಂಡರ್ಡ್ ಮಿಲ್ಕ್ ಡೈರಿ ಮತ್ತು ನೂರಡಿ ರಸ್ತೆ ಕ್ರಾಸಿನಲ್ಲಿರುವ ಭಾರತ್ ಮಿಲ್ಕ್ ಡೈರಿಯಲ್ಲಿ ದೊರೆಯುವಂತೆ ತಿಳಿದುಬಂದಿತು ಮಹಾಜನರು ಪ್ರತಿಯೊಂದು ಕಡೆಯಲ್ಲಿಯೂ ಸರಿಯಾಗಿ ವಿಚಾರಿಸಿ ಮೋಸ ಹೋಗದೆ ಒಳ್ಳೆಯ ಹಾಲನ್ನು ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ

—ಅನಂತನಾರಾಯಣ

CAR FOR SALE

Christ the King Convent

Viceroy Road, MYSORE.

ಲಕ್ಷ್ಮಿ ★ 11-7-57ನೇ ಗುರುವಾರ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

2-45, 6-30 ಮತ್ತು ರಾತ್ರಿ 10ಕ್ಕೆ

ವಿಜಯಾರವರ ತಮಿಳು ಚಿತ್ರ

ಮಿಸ್ಸಿಯಮ್ಮ (ಹೊಸ ಕಾಪಿ)

ಭೂಮಿಕೆ: ಜೆಮಿನಿ ಗಣೇಶನ್, ಸಾವಿತ್ರಿ, ಜಮುನಾ, ಮುಕ್ಕಾಮಲ ಚಂದ್ರಬಾಬು, ತಂಗವೇಲು, ಸಾರಂಗಪಾಣಿ, ಕರುಣಾನಿಧಿ ಮುಂತಾದವರು

The Cauvery Valley Paper Mills Ltd.,

(In Liquidation)

Statue Square, Mysore

6th July 57

SALE NOTICE

Offers are invited for the purchase of the following materials from the intending buyers upto 2 P.M. on 25th July 1957. Inspection of the materials may be had between 3 P M & 5 P.M. on 23.7.'57 and 24-7-57 Earnest deposit will have to be made in cash only. Please contact the undersigned for further particulars.

Pumps, pipe bushes, china clay, fire-clay, 100 K V. A. Transformer, Asbestos packing rope, M S & G I scrap, grease cups, fire extinguishers, barbed wire, gate valves, jute felt, Furniture (Steel, Rose wood T W tables, almirahs, chairs etc.

S SANJEEVIAH, B A., B Com., B L.,

Y S. LINGAIAH, B.A., B L.,

Official Liquidators,

Central Food Technological Research Institute, MYSORE

Applications stating age, qualifications and experience supported by copies of testimonials are invited for the post of LABORATORY BEARER (SKILLED) in the Central Food Technological Research Institute, Mysore, on Rs. 35-1-50 plus Dearness Pay, Dearness Allowance and House Rent Allowance as admissible to Central Government servants.

QUALIFICATIONS AND EXPERIENCE :— The candidate should have passed the Middle School standard examination with experience in handling fumigants and insecticides for about three years in a Government or a private laboratory. Educational qualifications may be relaxed in exceptional cases of candidates with large experience in the above field.

Applications should reach the undersigned by designation at the Central Food Technological Research Institute, V. V. Mohalla (P O.) Mysore, on or before 20th July, 1957. Candidates already in Government or Semi-Government service should apply through proper channel. Canvassing in any form is a disqualification. Interim enquiries from the candidates will not be attended to.

R. K. MITAL,

Administrative Officer

ಚಾಮುಂಡೇಶ್ವರಿ ಟಾಕೀಸ್

12—7—57 ರಿಂದ : ಒಂದು ವಾರ ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಚಕ್ರವರ್ತಿ ತಿರುಮಗಳ್ (ತಮಿಳು)

ಭೂಮಿಕೆ :- ಎಂ ಜಿ ರಾಮಚಂದ್ರನ್, ಅಂಜಲಿದೇವಿ, ತಂಗವೇಲು, ಎನ್ ಎಸ್ ಕೃಷ್ಣನ್, ಟಿ. ಎ ಮಧುರಂ ಮುಂತಾದವರು

ಮುಂದಿನ ಬವಲಾವಣೆ:— ಜೆಮಿನಿ ಗಣೇಶನ್ ಮತ್ತು ಸಾವಿತ್ರಿ ಪಾತ್ರವಹಿಸಿರುವ ತಮಿಳು ಚಿತ್ರ **ಯಾರಪ್ಪೈಯರ್**

ಒಲಂಪಿಯಾ ಟಾಕೀಸ್ 12-7-57 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು : 3-30, 6-30 ಮತ್ತು 9-15ಕ್ಕೆ

ರಜಪೂತರ ಮತ್ತು ಮೊಗಲರ ವೈಭವದ ಹಿನ್ನೆಲೆಯಿಂದ ಕೂಡಿದ,

ದಿನೇಶ್ ಫಿಲಂಸ್‌ರವರ ಅಮೋಘ ಚಾರಿತ್ರಿಕ ಚಿತ್ರ

ಅಮರ ಸಿಂಹ ರಾಠೋಡ್

(AMAR SINGH RATHAUR)

(ಮೊಗಲ್ ಸಾಮ್ರಾಜ್ಯವನ್ನೇ ನಡುಗಿಸಿದ ಧೀರ)

ಪಾತ್ರ :- ನಿರೂಪರಾಯ್, ಜೈರಾಜ್, ಆರ್ ನಾಸಿರ್, ಯಶೋಧರಾ ಖಟ್ಟು, ಹೆಲೆನ್, ವೀಣಾ ಮತ್ತಿತರರು

ಉತ್ತರ ಇಂಡಿಯಾದಲ್ಲಿ ನಾಗಿನ್, ಝನಕ್ ಝನಕ್ ಪಾಯಲ್ ಬಾಜೆ, ಪ್ಯಾಸಾ ಚಿತ್ರಗಳ ರಿಕಾರ್ಡನ್ನು ಮೀರಿಸಿ ಪ್ರಖ್ಯಾತಗಳಿಸಿದೆ

ರಣಜಿತ್ ★ 12-7-57 ರಿಂದ ಜಯಭೇರಿ ೩ನೇ ವಾರ ಪ್ರತಿದಿನ ಮೂರು ಪ್ರದರ್ಶನಗಳು : ನಿಮ್ಮನ್ನು ನಕ್ಕುನಲಿಸುವ ಹಾಸ್ಯ ಮತ್ತು ಕೆ. ಪಿ. ನಯ್ಯಾರ್‌ರವರ ಸಂಗೀತಗಳಿಂದ ಕೂಡಿದ

ನಾದಿರ್‌ರವರ ಹಿಂದಿ ಕಲಾಕೃತಿ ★ **ದುನಿಯಾ ರಂಗ್ ರಂಗೇಲಿ** ★

ಪಾತ್ರ ವರ್ಗ :—ಶ್ಯಾಮಾ, ಚಾಂದ್ ಉಸ್ಮಾನಿ, ರಾಜೇಂದ್ರ ಕುಮಾರ್, ಹೆಲೆನ್ ಮುಂತಾದವರು — ದಿಗ್ದರ್ಶನ : ನಾದಿರ್

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ಚಂದಾದಾರರಾಗಿ ಸೇರಿರಿ

ಸಾಧ್ವಿ

ಬಿಡಿ ಪ್ರತಿ 2 ನಯೆ ಪೈಸೆ

OWN YOUR AUTO!
(50 monthly Instalments)
Apply for prospectus etc with Re 1 stamps
AUTOMOBILE ASSOCIATION OF INDIA
New Statue Circle,
MYSORE

ಸಂಪುಟ : ೧೫] SADHVI : FRIDAY 12—7—1957 ಮೈಸೂರು : ಶುಕ್ರವಾರ ೧೨—೭—೧೯೫೭ : [ಸಂಚಿಕೆ : ೧೬೬

ಅಂಚೆ ಮತ್ತು ರೇವು ಕಾರ್ಮಿಕರಿಗೆ ಕೇಂದ್ರ ಮಂತ್ರಿ ಎಚ್ಚರಿಕೆ

ಕ್ರೇನು ಬಿದ್ದು ಟೆಲಿಫೋನ್ ಕಾರ್ಖಾನೆ ಇಂಜನಿಯರರ ಮರಣ

ಬೆಂಗಳೂರು ೧೧

ಇಲ್ಲಿನ ದೂರವಾಣಿ ನಗರದಲ್ಲಿ ನೆನ್ನೆ ಟೆಲಿಫೋನ್ ಕಾರ್ಖಾನೆಯ ರೈಲ್ವೆ ಸೈಡಿಂಗಿನಲ್ಲಿ ಸಾಮಾನು ಎತ್ತುವ ೩॥ ಟನ್ ತೂಕದ ಭಾರಿ ಕಬ್ಬಿಣದ ಯಂತ್ರವು (ಕ್ರೇನ್) ಅಕಸ್ಮಾತ್ ಕಳಚಿ ಬಿದ್ದು ಕಾರ್ಖಾನೆ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಸಂತಾನ್ ಅಯ್ಯಂಗಾರ್ಯರು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೪೩ ವರ್ಷ ವಯಸ್ಸು.

ಉಕ್ಕಿನ ಪಟಗಳನ್ನು ಇಳಿಸುತ್ತಿದ್ದಾಗ ಘಟನೆಯು ಜರುಗಿತು. ಅವರ ಪತ್ನಿಯು ಯಂತ್ರದ ಕೆಳಗೆ ಬಿದ್ದಿದ್ದ ಗಂಡನ ಶವದ ಬಳಿ ಪ್ರಜ್ಞೆ ತಪ್ಪಿ ಬಿದ್ದರು. ದಿವಂಗತರು ಉಕ್ಕಲಗೆರೆ ತೋಟಿದಾರ್ ಶ್ರೀ ರಾಜಗೋಪಾಲಅಯ್ಯಂಗಾರ್ಯರ ಅಳಿಯಂದಿರು. ಮೃತರಿಗೆ ಐವರು ಮಕ್ಕಳಿರುವರು.

ಸಂಧಾನಕ್ಕಾಗಿ ಅಂಚೆ ಮತ್ತು ತಂತಿ ನೌಕರರಿಗೆ ಆಹ್ವಾನ

ಮುಷ್ಕರದ ಬೆದರಿಕೆಯಿದ್ದರೂ ಕೇಂದ್ರ ಮಂತ್ರಿಗಳ ಕ್ರಮ

ಕೇಂದ್ರ ಮಾರ್ಗಾನುಕೂಲ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು, ಮುಷ್ಕರ ಹೂಡುವುದಾಗಿ ತಿಳಿಸಿರುವ ಅಂಚೆ ಮತ್ತು ತಂತಿ ನೌಕರರ ನಾಯಕರನ್ನು ಮಾತುಕತೆಗಾಗಿ ನೆನ್ನೆ ಆಹ್ವಾನಿಸಿದರು.

ಅಂಚೆ ಮತ್ತು ತಂತಿ ನೌಕರರ ಸಂಘದವರ ಬೇಡಿಕೆಗಳನ್ನು ಕೇಂದ್ರ ಮಂತ್ರಿ ಶಾಸ್ತ್ರಿಯವರು ಪ್ರಸ್ತಾಪಿಸಿ ಬೇಡಿಕೆಗಳಲ್ಲಿ ಇತ್ಯರ್ಥವಾಗದೆ ಇರುವುವುಗಳನ್ನು ಕುರಿತು ಚರ್ಚಿಸಬಹುದೆಂದು ಹೇಳಿದರು. ಆದರೆ ದ್ವಿತೀಯ ಸಂಬಳ ಸಮಿತಿಯ ನೇಮಕದ ವಿಚಾರವು ಕೇಂದ್ರ ನೌಕರರುಗಳಿಗೆಲ್ಲಾ ಅನ್ವಯಿಸುವುದರಿಂದ ಅಂಚೆ ನೌಕರರ ಮಟ್ಟಿನ ಸಮಿತಿ ನೇಮಕದ ವಿಚಾರವನ್ನು ಪರಿಶೀಲಿಸುವಂತಿಲ್ಲವೆಂದು ಸೂಚಿಸಿದರು.

೧೧೦ ವರ್ಷದ ಮುದುಕಿ ಮರಣ

ಹರಿಜನ ಕೋಮಿಗೆ ಸೇರಿದ ಚಿಕ್ಕಮ್ಮ ಎಂಬ ಸುಮಾರು ೧೧೦ ವರ್ಷದ ಮಹಿಳೆಯು ನೆನ್ನೆ ರಾತ್ರಿ ಅಲಸೂರಿಯಲ್ಲಿ ನಿಧನ ಹೊಂದಿದರು. ಅವರಿಗೆ ೪ ಜನ ಗಂಡು ಮಕ್ಕಳೂ, ೬ ಹೆಣ್ಣು ಮಕ್ಕಳೂ ಮತ್ತು ೧೪ ಮಂದಿ ಮೊಮ್ಮಕ್ಕಳೂ, ಮರಿಮಕ್ಕಳೂ ಇರುವರು. ನಿವೃತ್ತ ಪೊಲೀಸು ದಫೇದಾರ್ ಶ್ರೀ ಹನುಮಯ್ಯನವರು ಅವರ ಪುತ್ರರು.

ಇನ್ನೂ ೩ ವಾರ ಕಾಲ ಶ್ರೇಷ್ಠ ನ್ಯಾಯಾಧೀಶರ ನೇಮಕ ಇಲ್ಲ

ಸ್ವಂ.ಸು. ತಂತಿ] ಬೆಂಗಳೂರು ೧೧

ಹೈಕೋರ್ಟಿನ ನೂತನ ಶ್ರೇಷ್ಠ ನ್ಯಾಯಾಧೀಶರ ನೇಮಕವು ಇನ್ನೂ ಎರಡು ವಾರಗಳ ಕಾಲ ಆಗುವಂತಿಲ್ಲವೆಂದೂ, ಅದ್ದರಿಂದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಸ್ವಲ್ಪ ಕಾಲ ಶ್ರೇಷ್ಠ ನ್ಯಾಯಾಧೀಶರ ಕೆಲಸ ನಿರ್ವಹಿಸುವರೆಂದೂ ಗೊತ್ತಾಗಿದೆ.

ಅಗಾ ಖಾನರ ನಿಧನ

ಮಹಮದ್ ಪೈಗಂಬರರ ವಂಶಜರು

ಇಸ್ಮೇಲಿ ಮುಸ್ಲಿಮರ ಧಾರ್ಮಿಕ ಗುರುಗಳೂ ಮತ್ತು ಮಹಮದ್ ಪೈಗಂಬರ್‌ರವರ ನೇರ ವಂಶಜರೂ ಆದ ಆಗಾಖಾನ್ ಸುಲ್ತಾನ್ ಮಹಮದ್ ಷಹಾರವರು ತಮ್ಮ ೮೦ನೇ ವಯಸ್ಸಿನಲ್ಲಿ ನೆನ್ನೆ ಜನೀವಾದಲ್ಲಿ ದೀರ್ಘಕಾಲದ ವ್ಯಾಧಿಯ ಪರಿಣಾಮವಾಗಿ ನಿಧನ ಹೊಂದಿದರು. ಅವರಿಗೆ ಪಿರೋಜ್ಷ ಪತ್ನಿ ಮತ್ತು, ಅಲಿಖಾನ್ ಮತ್ತು ಸದ್ರುದ್ದೀನ್ ಎಂಬ ಇಬ್ಬರು ಮಕ್ಕಳೂ ಇರುವರು. ದಿವಂಗತರು ಹತ್ತು ವರ್ಷಗಳಿಂದಲೂ ರೋಗಗ್ರಸ್ತರಾಗಿದ್ದರು.

ಆಗಾ ಖಾನರು ಕರಾಚಿಯಲ್ಲಿ ಜನಿಸಿದರು. ಅವರು ಪರ್ಷಿಯಾ ರಾಜವಂಶಕ್ಕೆ ಸೇರಿದ್ದು, ಕಳೆದ ಶತಮಾನದಲ್ಲಿ ಅಲ್ಲಿ ಕ್ರಾಂತಿಯಾದಾಗ ಅವರ ಪೂರ್ವಿಕರು ಆಗಿನ ಭಾರತಕ್ಕೆ ಓಡಿಬಂದು ನೆಲೆಸಿದರು. ಪ್ರಥಮ ಮಹಾ ಯುದ್ಧದಲ್ಲಿ ಅವರು ಬ್ರಿಟಿಷರಿಗೆ ನೆರವಾಗಲಾಗಿ ಅವರಿಗೆ ಹಿಸ್ ಹೈನೆಸ್ ಎಂಬ ಬಿರುದು ಬಂದಿತು. ೧೯೩೧ರಲ್ಲಿ ಲಂಡನ್ನಿನಲ್ಲಿ ಆದ ರೌಂಡ್ ಟೇಬಲ್ ಸಮ್ಮೇಳನದಲ್ಲಿ ಗಾಂಧೀಜಿಯವರೊಡನೆ ಅವರೂ ಭಾಗವಹಿಸಿದ್ದರು. ಅವರು ಪ್ರೀವಿ ಕೌನ್ಸಿಲ್ ಮತ್ತು ಲೀಗ್ ಆಫ್ ನೇಷನ್ಸಿನ ಅಧ್ಯಕ್ಷರಾಗಿದ್ದರು.

ಅವರಿಗೆ ಭಾರತ, ಆಗ್ನೇಯ ಏಷ್ಯಾ, ಅರೇಬಿಯಾ, ಪೂರ್ವ ಆಫ್ರಿಕಗಳಲ್ಲಿ ಒಟ್ಟು ೩ ಕೋಟಿ ಮುಸ್ಲಿಮರು ಶಿಷ್ಯರಾಗಿರುವರು. ಅವರು ನಾಲ್ಕು ಸಲ ವಿವಾಹವಾಗಿದ್ದರು. ಅವರ ಕಳೇಬರಕ್ಕೆ ಈಜಿಪ್ಟಿನ ಅಸ್ವಾನ್ ಬಳಿ ಗೋರಿ ಕೊಡಲಾಗುವುದು.

ಅವರ ಹಿರಿಯ ಮಗ ಅಲಿಖಾನರು ಅವರ ಸ್ಥಾನಕ್ಕೆ ಬರಲಿರುವರು. ಆಗಾ ಖಾನರು ಹಲವು ಸಾರಿ ತುಲಾಭಾರಗಳನ್ನು ಮಾಡಿಸಿಕೊಂಡಿರುತ್ತಾರೆ.

ವಿವಾಹಕ್ಕೆ ಒಪ್ಪದಿದ್ದ ತರುಣಿಯ ಕೊಲೆ; ಇಬ್ಬರ ಬಂಧನ

ಗೌರಿಬಿದನೂರು ತಾಲ್ಲೂಕಿನ ಬೆಲ್ಲವಳ್ಳಹಳ್ಳಿಯ ವೆಂಕಟರಮಣ ಎಂಬಾತನು ತನ್ನನ್ನು ವಿವಾಹವಾಗಲು ಒಪ್ಪದಿದ್ದ ಅದೇ ಹಳ್ಳಿಯ ಲಿಂಗಮ್ಮ ಎಂಬ ೧೭ ವರ್ಷದ ತರುಣಿಯನ್ನು ಕಾಡಿನಲ್ಲಿ ಕತ್ತು ಹಿಸುಕಿ ಕೊಲೆ ಮಾಡಿದ ಕಾರಣಕ್ಕಾಗಿ ಬಂಧಿಸಲ್ಪಟ್ಟಿರುತ್ತಾನೆ. ನಾರಾಯಣಪ್ಪ ಎಂಬುವನೂ ಬಂಧಿಸಲ್ಪಟ್ಟಿರುವನು. ಹುಡುಗಿಯ ಮೇಲೆ ಮೋಹಗೊಂಡು ತನ್ನನ್ನು ವಿವಾಹವಾಗುವಂತೆ ವೆಂಕಟರಮಣನು ಎಷ್ಟು ಪ್ರೇರೇಪಿಸಿದರೂ ಆಕೆ ಒಪ್ಪಲಿಲ್ಲ. ಕಳೆದ ಶುಕ್ರವಾರ ಪಕ್ಕದ ಕಾಡಿನಲ್ಲಿ ಹೊಂಗೆ ಎಲೆಯನ್ನು ತರುವುದಕ್ಕಾಗಿ ನಾರಾಯಣಪ್ಪ ಅವಳನ್ನು ಕರೆದೊಯ್ದನೆಂದೂ, ಎಷ್ಟು ಹೊತ್ತಾದರೂ ಆಕೆಯು ಹಿಂದಿರುಗದೆ ಇದ್ದು ತಂತರ ಶೋಧನೆ ನಡೆಸಲಾಗಿ ಸೋಮವಾರ ಸಬ್ಬೇನಹಳ್ಳಿ ಕೈತರೊಬ್ಬರ ಹೊಲದ ಬಾವಿಯಲ್ಲಿ ಶವವು ತೇಲುತ್ತಿದ್ದುದು ಪತ್ತೆಯಾಯಿತೆಂದೂ ಹೇಳಲಾಗಿದೆ. ಪೊಲೀಸರು ಮೊದಲು ನಾರಾಯಣಪ್ಪನನ್ನು ಬಂಧಿಸಿ ಅವನ ಮೂಲಕ ಕೊಲೆ ವಿಚಾರವನ್ನು ತಿಳಿದು ವೆಂಕಟರಮಣನನ್ನೂ ದಸ್ತಗಿರಿ ಮಾಡಿರುವರು.

ಸೋಮನಾಥಯ್ಯರ್, ಮಲ್ಲಿಮಠ ರವರಿಂದ ಪ್ರಮಾಣ ವಚನ

ಬೆಂಗಳೂರು ೧೧

ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಆರ್. ವೆಂಕಟರಾಮಯ್ಯನವರ ಸಮ್ಮುಖದಲ್ಲಿ ನೆನ್ನೆ ಶ್ರೀ ಎ. ಆರ್. ಸೋಮನಾಥಯ್ಯರ್ ಮತ್ತು ಎಸ್. ಎಸ್. ಮಲ್ಲಿಮಠ್‌ರವರು ನ್ಯಾಯಾಧೀಶರುಗಳಾಗಿ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರವನ್ನು ವಹಿಸಿಕೊಂಡರು. ಕೋರ್ಟು ಹಾಲಿನಲ್ಲಿ ನೂತನ ನ್ಯಾಯಾಧೀಶರುಗಳು ಶ್ರೇಷ್ಠ ನ್ಯಾಯಾಧೀಶರೊಡನೆ ಆಸನಾರೂಢರಾದಾಗ ಅವರುಗಳನ್ನು ಅಡ್ವೊಕೇಟ್ ಜನರಲ್ ಶ್ರೀ ಯತಿರಾಜುಲು ನಾಯ್ಡುರವರು ವಕೀಲ ವೃಂದದ ಪರವಾಗಿ ಸ್ವಾಗತಿಸಿದರು. ನೂತನ ನ್ಯಾಯಾಧೀಶರುಗಳು ಕೃತಜ್ಞತೆಯನ್ನು ಸೂಚಿಸಿ, ನ್ಯಾಯ ನಿರ್ವಹಣೆಯಲ್ಲಿ ವಕೀಲರುಗಳ ಸಹಕಾರವನ್ನು ಕೋರಿದರು.

ಮೈಸೂರು ಹೈಕೋರ್ಟಿಗೆ ಇನ್ನಿಬ್ಬರು ನ್ಯಾಯಾಧೀಶರು

ಕೇಂದ್ರ ಗೃಹ ಮಂತ್ರಿ ಪಂಡಿತ ಪಂತ್‌ರವರು ಮೈಸೂರು ಹೈಕೋರ್ಟಿಗೆ ಇತ್ತೀಚೆಗೆ ನೇಮಿಸಲಾದ ಇಬ್ಬರಲ್ಲದೆ, ಇನ್ನೂ ಇಬ್ಬರನ್ನು ನ್ಯಾಯಾಧೀಶರಾಗಿ ನೇಮಿಸಲಾಗುವುದೆಂದು ತಿಳಿಸಿರುತ್ತಾರೆ. ಈ ನೇಮಕಗಳಾದರೆ ಮೈಸೂರು ಹೈಕೋರ್ಟಿನಲ್ಲಿ ಒಟ್ಟು ೭ ಜನ ನ್ಯಾಯಾಧೀಶರಾಗುವರು.

ವಿವಾಹ ಮಹೋತ್ಸವ

ಅಶೋಕಾ ರಸ್ತೆಯಲ್ಲಿರುವ ಕೆ. ಎಸ್. ಲಕ್ಷ್ಮಣ ಅಯ್ಯಂಗಾರ್ ಮತ್ತು ಸನ್ಸ್ ಗಡಿಯಾರದ ಅಂಗಡಿ ಮಾಲೀಕರಾದ ಶ್ರೀ ಕೆ. ಎಲ್. ಸುಬ್ರಹ್ಮಣ್ಯ ಅಯ್ಯಂಗಾರ್‌ರವರು ತಮ್ಮ ಕುಮಾರಿ ಸೌ॥ ಶಂಗಮಣಿಯನ್ನು ಕೊಯಮತ್ತೂರಿನ ಶ್ರೀ ಕೆ. ಆರ್. ಕೃಷ್ಣಸ್ವಾಮಿ ಅಯ್ಯಂಗಾರ್‌ರವರ ಕುಮಾರರಾದ ಶ್ರೀ ಕೆ. ಕೆ. ರಾಮಸ್ವಾಮಿಯವರಿಗೆ ಕೊಟ್ಟು ನರಸಿಂಹರಾಜ ಮೊಹಲ್ಲಾದಲ್ಲಿರುವ ತಮ್ಮ ನಿವಾಸದಲ್ಲಿ ಈ ದಿನ ವಿವಾಹವನ್ನು ನೆರವೇರಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಂಗೀತ ೭-೧೫ ಮತ್ತು ೮-೧೫ ಎಸ್. ಸರಸ್ವತಿ-ದೇವರ ನಾಮ. ೭-೩೦ ರಿಕಾರ್ಡ್ ಮಧ್ಯಾಹ್ನ ೧೨ ಜಿ. ಚನ್ನಮ್ಮ-ಸಂಗೀತ. ೧೨-೩೦ ಬಾಲಜಗತ್ ೧-೨೦ ರಿಕಾರ್ಡ್. ೧-೫೦ ಸಂಗೀತ. ಸಂಜೆ ೬-೧೦ ಮತ್ತು ೮-೧೫ ಜಿ. ಚನ್ನಮ್ಮ-ಸಂಗೀತ. ೭-೩೦ ಪ್ರಸಂಗ. ೮ ವಿಧಾನ ಮಂಡಲದಲ್ಲಿ. ೮-೩೦ ರೇಡಿಯೋ ನ್ಯೂಸ್ ರೀಲ್ ೮-೪೦ ಪ್ರಸಾರ ಗೀತೆ. ೮-೪೫ ಸಂಗೀತ ೯-೧೫ ಕಿರುಗತೆ. ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಶಿವಕಥೆ

ಕಾಳಮ್ಮನಗುಡಿ ಬೀದಿಯಲ್ಲಿರುವ ಜ್ಯೋತಿರ್ಲಿಂಗೇಶ್ವರ ದೇವಸ್ಥಾನದಲ್ಲಿ ಈ ಸಂಜೆ ೭ ಗಂಟೆಗೆ ಅಡಿ ಶುಕ್ರವಾರದ ಪ್ರಯುಕ್ತ ಭದ್ರಾವತಿ ವೆಂಕಟೇಶದಾಸರಿಂದ ಅಕ್ಕಮಹಾದೇವಿ ಎಂಬ ಕಥೆಯು ಇದೆ.

ಉಪ ಮಂತ್ರಿಗಳ ಪ್ರಮಾಣ ವಚನದ ಶಾಸನ ಬದ್ಧತೆ

ವಿಧಾನ ಸಭೆಯಲ್ಲಿ ಹಕ್ಕುಬಾಧ್ಯತೆ ನಿರ್ಣಯದ ತಿರಸ್ಕಾರ

ಸ್ವಂ. ಸು. ತಂತಿ] ಬೆಂಗಳೂರು ೧೧

ಈ ದಿನ ಪುನಃ ಸೇರಿದ ವಿಧಾನ ಸಭೆಯಲ್ಲಿ ಶ್ರೀ ಸಿ. ಜೆ. ಮುಕ್ಕಣ್ಣಪ್ಪನವರು ಹಕ್ಕು ಬಾಧ್ಯತಾ ನಿರ್ಣಯವೊಂದನ್ನು ಸೂಚಿಸಿ, ಉಪ ಮಂತ್ರಿಗಳು ಮುಖ್ಯ ಮಂತ್ರಿಯವರ ಮುಂದೆ ಪ್ರಮಾಣ ವಚನವನ್ನು ಕೈಗೊಂಡಿರುವುದರಿಂದ ಸಭೆಯಲ್ಲಿ ಭಾಗವಹಿಸುವಂತಿಲ್ಲವೆಂದೂ, ಅವರು ರಾಜ್ಯಪಾಲರ ಸಮ್ಮುಖದಲ್ಲಿ ಪ್ರಮಾಣ ವಚನ ತೆಗೆದುಕೊಳ್ಳದೆ ಅಧಿಕಾರ ವಹಿಸಿರುವುದು ರಾಜ್ಯಾಂಗಕ್ಕೆ ವಿರೋಧವೆಂದೂ ತಿಳಿಸಿದರು. ಅಧ್ಯಕ್ಷರು ಅದನ್ನು ತಳ್ಳಿಹಾಕಿ ಉಪ ಮಂತ್ರಿಗಳು ಸಭೆಗೆ ಚುನಾಯಿತರಾಗಿ ಬಂದಿರುವುದರಿಂದ ಅವರು ಕುಳಿತುಕೊಳ್ಳಬಹುದೆಂದೂ, ಅವರು ಮಂತ್ರಿ ಮಂಡಲದ ಸದಸ್ಯರಲ್ಲವೆಂದೂ, ಆದ್ದರಿಂದ ಮುಖ್ಯ ಮಂತ್ರಿಯವರ ಮುಂದೆ ಪ್ರಮಾಣ ವಚನವನ್ನು ತೆಗೆದುಕೊಳ್ಳಬಹುದೆಂದೂ ಸೂಚಿಸಿದರು.

ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕರಿಂದ ೬೧ ಕೋಟಿ ರೂ ಸಾಲ

ವಿಧಾನ ಸಭೆಯಲ್ಲಿ ಈ ದಿನ ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಮಾತನಾಡಿ, ಸಂಸ್ಥಾನ ಸರ್ಕಾರದವರು ಇದುವರೆಗೆ ಕೇಂದ್ರದವರಿಂದ ೪೮ ಕೋಟಿ ರೂ. ಮತ್ತು ಸಾರ್ವಜನಿಕರಿಂದ ೩೩ ಕೋಟಿ ರೂ ಸಾಲ ಪಡೆದಿರುವರೆಂದು ತಿಳಿಸಿದರು.

ಅಂಚೆ ಮತ್ತು ರೇವು ಕೆಲಸಗಾರರ ಮುಷ್ಕರದ ಬೆದರಿಕೆ

ನೌಕರರಿಗೆ ಕೇಂದ್ರ ಮಂತ್ರಿ ನಂದಾರವರ ಎಚ್ಚರಿಕೆ

ಕಾರ್ಮಿಕ ಮತ್ತು ಉದ್ಯೋಗ ಮಂತ್ರಿ ಗುಲ್ಜಾರಿಲಾಲ್ ನಂದಾರವರು ದೆಹಲಿಯಲ್ಲಿ ನೆನ್ನೆ ಸಂಸ್ಥಾನ ಮಂತ್ರಿಗಳು, ಕೈಗಾರಿಕಾ ಮಾಲೀಕರು ಮತ್ತು ಕಾರ್ಮಿಕ ಪ್ರತಿನಿಧಿಗಳ ಸಮ್ಮೇಳನವನ್ನು ಆರಂಭಗೊಳಿಸುತ್ತಾ ಭಾಷಣ ಮಾಡಿ, ಮುಷ್ಕರ ಹೂಡಲಿರುವ ಅಂಚೆ ಮತ್ತು ತಂತಿ ಇಲಾಖೆ ನೌಕರರು ಮತ್ತು ರೇವು ಕೆಲಸಗಾರರಿಗೆ ಎಚ್ಚರಿಕೆಯಿತ್ತು, ಅವರುಗಳು ಕೆಲಸವನ್ನು ನಿಲ್ಲಿಸುವುದಾದರೆ ರಾಷ್ಟ್ರದ ಜೀವನಕ್ಕೆ ಬಲವಾದ ಪೆಟ್ಟುಬಿದ್ದು, ತೀವ್ರವಾದ ಪರಿಣಾಮಗಳುಂಟಾಗುವುವೆಂದು ಸೂಚಿಸಿದರು. ಈ ಘಟನೆಗಳಿಗೆ ಜವಾಬ್ದಾರರಾಗುವವರು ರಾಷ್ಟ್ರಕ್ಕೆ ಉತ್ತರವಾದಿಗಳಾಗಬೇಕಾಗುವುದೆಂದೂ, ಅವರು ರಾಷ್ಟ್ರದ ಸಹಾನುಭೂತಿಯನ್ನು ಕಳೆದುಕೊಳ್ಳುವರೆಂದೂ ಹೇಳಿದರು. ನೌಕರರ ವೇತನವು ಈಗಿರುವಂತೆಯೇ ಇರಬೇಕೆಂಬುದು ಸರ್ಕಾರದ ನೀತಿಯಲ್ಲವಾದರೂ, ಸಾರ್ವತ್ರಿಕವಾಗಿ ವೇತನ ಹೆಚ್ಚಿಸುವುದು ಹಲವು ಪರಿಸ್ಥಿತಿಗಳಲ್ಲಿ ಸರಿಹೋಗಿಲ್ಲವೆಂದು ಅವರು ಅಭಿಪ್ರಾಯಪಟ್ಟರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಸುಗಂಧಕಾರಿಗಳ ಸನ್ಮಾನ

ಮೈಸೂರು ೧೧

ನಗರದ ಅಗರಬತ್ತಿ ತಯಾರಕರು ಮತ್ತು ಸುಗಂಧಕಾರಿಗಳ ಸಹಕಾರ ಸಂಘದವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರನ್ನು ಗೌರವಿಸಲು ನೆನ್ನೆ ಇಂದ್ರಭವನದಲ್ಲಿ ಸಮಾರಂಭವೊಂದನ್ನು ಏರ್ಪಡಿಸಿದ್ದರು

ಶ್ರೀ ಸಂಪತ್ಕುಮಾರರವರಿಂದ ಪ್ರಾರ್ಥನೆ ನೆರವಾದನಂತರ, ಸಂಘದ ಅಧ್ಯಕ್ಷ ಶ್ರೀ ಟಿ ಎಲ್. ಎಸ್ ಉಪಾಧ್ಯಾಯರು ಸ್ವಾಗತ ಭಾಷಣ ಮಾಡಿದರು ಶ್ರೀಗಳಾದ ಎಂ ಆರ್. ಚಿಟ್ಟಪ್ಪ, ಲಕ್ಷ್ಮೀನರಸಿಂಹಯ್ಯ, ನಂಜಪ್ಪಯ್ಯ, ನಾರಾಯಣಾಚಾರ್ ಮತ್ತು ಎಸ್ ಎಸ್ ಶಾಸ್ತ್ರಿಗಳವರು ಭಾಷಣ ಮಾಡಿ ಶ್ರೀ ಚನ್ನಯ್ಯನವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ಸುಗಂಧ ದ್ರವ್ಯಗಳ ಮೇಲೆ ಮಾರಾಟ ತೆರಿಗೆ ವಿನಾಯಿತಿ ಮುಟ್ಟ ಹೆಚ್ಚಬೇಕೆಂದೂ, ಆ ಕಾರ್ಖಾನೆಯರ ಕಛೇರಿಯವರಿಂದ ಕಿರುಕುಳಗಳು ತಪ್ಪಬೇಕೆಂದೂ ಶ್ರೀ ಎಸ್ ಎಸ್ ಶಾಸ್ತ್ರಿಯವರು ಕೋರಿದರು

ಶ್ರೀ ಚನ್ನಯ್ಯನವರು ಉತ್ತರವಿತ್ತು, ಸರ್ಕಾರಕ್ಕೆ ವರಮಾನ ಬರುವುದರಲ್ಲಿ ಮೋಸ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದೂ, ವರ್ತಕರಿಗೆ ಅಧಿಕಾರಿಗಳಿಂದ ಆಗಬಹುದಾದ ತೊಂದರೆಗಳನ್ನು ತಪ್ಪಿಸಲು ತಾವು ಪ್ರಯತ್ನಪಡುವುದಾಗಿಯೂ ನುಡಿದರು

ಕಾಂಗ್ರೆಸ್ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯಗಳಿರುವುದು ಸಹಜವಾದರೂ, ಎಂದೂ ವಿರಸಕ್ಕೆ ಅವಕಾಶ ಕೊಡುವುದಿಲ್ಲವೆಂದು ಅವರು ಸೂಚಿಸಿದರು. ಸಂಸ್ಥೆಯಲ್ಲಿ ನಿಯಮಗಳನ್ನು ಈಗ ಬಿಗಿಪಡಿಸಲಾಗುತ್ತಿರುವುದೆಂದೂ, ಪ್ರತಿ ತಿಂಗಳೂ ಪ್ರದೇಶ ಕಾಂಗ್ರೆಸ್ಸು ಎ ಐ ಸಿ ಸಿ ಗೆ ಸಂಸ್ಥೆ ಮತ್ತು ಸರ್ಕಾರಗಳ ನಡುವೆ ನಡೆದಿರುವ ಸಾಮಾನ್ಯ ನೀತಿಯ ಸಮಾಲೋಚನೆ ಬಗ್ಗೆ ವರದಿಯನ್ನು ಕಳುಹಿಸಬೇಕಾಗಿರುವುದೆಂದೂ ಅವರು ಹೊರಗೆಡಹಿದರು

ಕೋತಿಗಳ ರಫ್ತು ತಪ್ಪಿಸಲು ನೆಹರೂರವರಿಗೆ ಪಾಶ್ಚಾತ್ಯರ ಕರೆ

ಪ್ರಧಾನಿ ನೆಹರೂರವರು ಭಾರತದಿಂದ ಕೋತಿಗಳ ರಫ್ತನ್ನು ತಪ್ಪಿಸಬೇಕೆಂದು ಪ್ರಾಣಿಗಳ ವಧೆಯ ವಿರೋಧದ ವಿಶ್ವ ಮಂಡಲಿಯೊಂದು ಪ್ರಾರ್ಥಿಸಿದೆ ಭಾರತದಿಂದ ಕಳೆದ ೧೮ ತಿಂಗಳಲ್ಲಿ ೧,೫೮,೦೦೦ ಕೋತಿಗಳನ್ನು ರವಾನಿಸಲಾಗಿರುವುದೆಂದೂ, ಅವುಗಳಲ್ಲಿ ಅನೇಕವನ್ನು ಕೊಲ್ಲಲಾಗಿರುವುದೆಂದೂ ಸೂಚಿಸಲಾಗಿದೆ

ದಲ್ಲೈ ಲಾಮಾರವರ ಪ್ರಾಣಾಪಹಾರ ಪ್ರಯತ್ನ

ಟಿಬೆಟ್ಟಿನ ಗುರು ಮತ್ತು ಅಧಿಪತಿಗಳಾದ ದಲೈಲಾಮಾರವರ ಪ್ರಾಣಾಪಹರಣ ಪ್ರಯತ್ನವು ನಡೆದುದಾಗಿ ಬಿಟ್ಟಿಂಡುವಿನ ಒಂದು ಪತ್ರಿಕೆ ವರದಿ ಮಾಡಿದೆ. ಲಾಮಾರವರು ಹೊಸ ಪೇಸಿಗೆ ನಿವಾಸವನ್ನು ಪ್ರವೇಶಿಸುತ್ತಿದ್ದಾಗ ಯಾವನೋ ಒಬ್ಬನು ಅವರ ಮೇಲೆ ದೊಡ್ಡ ಚೆಂಡಿನಂತಹ ಪದಾರ್ಥವನ್ನು ಎಸೆದನೆಂದೂ, ಅದು ಅವರಿಗೆ ತಗಲಲಿಲ್ಲವೆಂದೂ ಹೇಳಲಾಗಿದೆ ಅಪರಾಧಿಯ ಬಂಧನವಾಗಿದೆ ಲಾಮಾ ಸರಕಾರದಿಂದ ತನಗೆ ನ್ಯಾಯ ದೊರೆಯಲಿಲ್ಲವೆಂದೂ, ಲಾಮಾರವರಿಗೆ ಈ ವಿಚಾರವನ್ನು ಅರಿಕೆ ಮಾಡಿದ್ದರೂ ಅದಕ್ಕೆ ಗಮನ ಕೊಡಲಿಲ್ಲವೆಂದೂ ದಸ್ತಗಿರಿಯಾದವನು ತಿಳಿಸಿರುತ್ತಾನೆ

ಶ್ರೀಕಂಠೇಶ್ವರ ದೇವಾಲಯದ ವಾರ್ಷಿಕೋತ್ಸವ

ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಬಿ ಸಿ ಚನ್ನರಾಜ ಅರಸ್‌ರವರ ನೇತೃತ್ವದಲ್ಲಿ ನಾಳೆ ವಾರ್ಷಿಕೋತ್ಸವವೂ ಮತ್ತು ಮಂಟಪೋತ್ಸವವೂ ನಡೆಯುವುವು

ಮಡಕೇರಿ ಕಾಲೇಜು ವಿದ್ಯಾರ್ಥಿಗಳಿಗೆ ಸೌಲಭ್ಯ

ಸಂಸ್ಥಾನದ ನಾನಾ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಇನ್ನು ಮುಂದೆ ಮಡಿಕೇರಿ ಕಾಲೇಜು ವಿದ್ಯಾರ್ಥಿಗಳಿಗೆ ಮೈಸೂರು ವಿದ್ಯಾರ್ಥಿಗಳಂತೆಯೇ ಪ್ರವೇಶ ಸೌಲಭ್ಯ ಮುಂತಾದುವುಗಳನ್ನು ನೀಡಲು ಮೈಸೂರು ವಿಶ್ವವಿದ್ಯಾಲಯದವರು ತೀರ್ಮಾನಿಸಿರುವರು

CITY TUTORIAL COLLEGE
The long awaited chance to appear by Private Study
AJMER INTERMEDIATE
Classes Commenced
MADRAS MATRICULATION
Classes in full swing
Join before 20.7 57
C. T. C. Old Agrahar, Mysore

VIDYA TUTORIAL COLLEGE
(Dalvoy High School Buildings)
MYSORE
H. E. L. & C. B. Z.
Classes Commenced in full swing
JOIN AT ONCE
Enquiries - 9-30 to 10-30 A.M. and 5-30 to 7-30 P.M.

ಕೇರಳದ ಮಂತ್ರಿಗೆ ಕೊಲೆ ಬೆದರಿಕೆ

ಕೇರಳದ ಮಂತ್ರಿ ಜೋಸೆಫ್ ಮುಂಡಸ್ಸೇರಿಯವರಿಗೆ ಅನೇಕ ಬೆದರಿಕೆ ಪತ್ರಗಳು ಬಂದಿವೆ ಆ ವ್ಯಕ್ತಿ ಹಲವು ಅವರ ಪ್ರಾಣ ತೆಗೆಯಲಾಗುವುದೆಂದು ಸೂಚಿಸಿವೆ. ಅಲ್ಲಿನ ಸಹಾಯ ಪಡೆಯುವ ಶಾಲೆಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಲಾಗುವುದೆಂದು ಸಚಿವರು ಹೇಳಿರುವುದರ ಬಗ್ಗೆ ಈ ರೀತಿ ಬೆದರಿಕೆ ಹಾಕಲಾಗಿರುವುದೆಂದು ಹೇಳಲಾಗಿದೆ.

ಪರ್ಷಿಯದಲ್ಲಿ ಭೂಕಂಪ ಮತ್ತು ಇನ್‌ಫ್ಲುಯೆಂಜಾ ಹಾವಳಿ

ಪರ್ಷಿಯದ ಉತ್ತರ ಭಾಗದಲ್ಲಿ ನೆನ್ನೆ ಪುನಃ ಪದೇಪದೇ ಭೂಕಂಪಗಳಾದುವು. ಕಳೆದ ವಾರ ಅಲ್ಲಿ ಆಗಿದ್ದ ಭೂಕಂಪದಲ್ಲಿ ೨,೦೦೦ ಜನರು ಮೃತಪಟ್ಟರು. ಅಷ್ಟೇ ಅಲ್ಲದೆ ಆ ಪ್ರದೇಶದಲ್ಲಿ ಇನ್‌ಫ್ಲುಯೆಂಜಾ ಮತ್ತು ವಿಷಮಶೀತ ಜ್ವರಗಳೂ ಈಗ ಜನರನ್ನು ಕಾಡಿಸುತ್ತಿವೆ

ಗುರು ಪೂರ್ಣಿಮೆ ಕಾರ್ಯಕ್ರಮ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ಗುರು ಪೂರ್ಣಿಮೆ ಪ್ರಯುಕ್ತ ನಾಳೆ ಬೆಳಿಗ್ಗೆ ಮಹಾಭಿಷೇಕ ಮತ್ತು ಸಂಜೆ ೬ ಗಂಟೆಗೆ ಸಾಮೂಹಿಕ ಪ್ರಾರ್ಥನೆಗಳು ವೆ ಪಿ ಗೌರಮ್ಮ ಪಾಂಡುರಂಗರವರಿಂದ ಕಾವ್ಯ ವಾಚನವಿದೆ. ಕನ್ನಡ ವಿಶ್ವಕೋಶದ ವಿಶೇಷಾಧಿಕಾರಿ ಶ್ರೀ ಕೆ ಎಸ್ ಧರಣೇಂದ್ರಯ್ಯನವರು ಸರ್ವ ಧರ್ಮ ಸಮನ್ವಯ ಎಂಬ ವಿಚಾರವಾಗಿ ಭಾಷಣ ಮಾಡುವರು ವಿದ್ಯಾ ಮಂತ್ರಿ ಶ್ರೀ ಎ. ವೆಂಕಟಪ್ಪನವರು ಭಾಗವಹಿಸುವರು

WANTED
A Dark Room Assistant with good experience in photography. Apply in person to:-
PHOTO FLASH,
Gayathri Bhavan, Mysore

ಸತ್ಯಮೇವ ಜಯತೇ........

ಬೆಳ್ಳಗಿರುವುದೆಲ್ಲ ಹಾಲೆಂದು ಮಾರಿ ಜನ ಸಂಪಾದಿಸುವವರ ಗುಟ್ಟು ಎಂದಾದರೂ ಬಯಲಾಗುತ್ತದೆ ಹಾಲಿನ ಗುಣವೇ ಅದರ ಹೆಸರನ್ನು ಉಳಿಸುತ್ತದೆ ಅಪ್ಪಟ ಹಸುವಿನ ಹಾಲು ಕ್ಷೀರ ಕೇಂದ್ರ, 94 ತ್ಯಾಗರಾಜ ರಸ್ತೆ ಬ್ರಾಂಚ್-ಇವರಿಂದ ನಿಮ್ಮ ಮನೆ ಬಾಗಿಲಿಗೇ ಯಾವ ಹೆಚ್ಚಿನ ಛಾರ್ಜೂ ಇಲ್ಲದೆ ತಲುಪುತ್ತದೆ ವಿವರಗಳಿಗೆ ವಿಚಾರಿಸಿ, ಅಥವಾ ಲೋಕಲ್ ಪೋಸ್ಟ್ ಕಾರ್ಡು ಬರೆಯಿರಿ.

Edited Printed and Published by A. R Nagarajan at Sadhvi Press, D Subbiah Road Mysore

ವನವಾಸಕ್ಕಾಗಿ ಮಂತ್ರಿಗಳಿಗೆ ಕರೆ

ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರುಗಳು ಮಾಡುತ್ತಿದ್ದಂತೆ ಮಂತ್ರಿಗಳು ಆರು ತಿಂಗಳ ಕಾಲ ವನವಾಸ ಮಾಡಿ ಅರಣ್ಯಗಳನ್ನು ಅಭಿವೃದ್ಧಿಪಡಿಸಬೇಕೆಂದು ಮದ್ರಾಸು ವಿಧಾನ ಸಭೆಯಲ್ಲಿ ಕಾಂಗ್ರೆಸ್ ಸುಧಾರಣೆ ಪಕ್ಷದ ಸದಸ್ಯರೊಬ್ಬರು ಸಲಹೆ ಮಾಡಿರುತ್ತಾರೆ.

THE BANK OF MYSORE, LTD.
MYSORE

The normal working hours of the Clearing Banks IN MYSORE CITY will be restored FROM MONDAY THE 15TH JULY 1957 as under:-
Week Days ·
10.30 A.M. to 2.30 p.m.
Saturdays.
10.30 A.M. to 12.30 noon

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಒಂಟಿಕೊಪ್ಪಲು ಗ್ರಾಮದ ಲ್ಲಿದ್ದ, ನನ್ನ ತಂದೆಯವರಾದ ಕಾಡಯ್ಯನವರು ಕಾಲವಾದಮೇಲೆ ಅವರ ವಾರಸುದಾರರಾಗಿ, ನನ್ನ ತಾಯಿ ಸಣ್ಣಮ್ಮ, ತಮ್ಮಂದಿರುಗಳಾದ ಕೆ. ವಿಷಕಂಠ ಮತ್ತು ಕೆ ಶಿವನಂಜಪ್ಪ, ತಂಗಿ ಲಕ್ಷ್ಮಮ್ಮ ಮತ್ತು ನಾನು, ನಮ್ಮಗಳ ಒಟ್ಟು ಕುಟುಂಬಕ್ಕೆ ಸೇರಿದ ಪೆಟ್ಯಾಲ್ ಸೊತ್ತುಗಳ ಹಕ್ಕುದಾರರುಗಳಾಗಿರುತ್ತೇವೆ ಹಾಲಿ ನನ್ನನ್ನು ಒಟ್ಟು ಕುಟುಂಬದಿಂದ ಓಡಿಸಿ ಒಟ್ಟು ಕುಟುಂಬದ ಸೊತ್ತುಗಳೆಲ್ಲವನ್ನೂ ತಾವೇ ಅನುಭವಿಸುವುದಲ್ಲದೆ, ನನಗೆ ಕಾನೂನು ರೀತ್ಯ ಸೇರಬೇಕಾದ ಭಾಗವನ್ನು ಕಡದೆ ಮಾಡಿದ್ದಾಗ್ಯೂ ಕೊಡದೆ, ವೃಥಾ ತೊಂದರೆ ಕೊಡುವ ದೃಷ್ಟಿಯಿಂದ ಪೆಟ್ಯಾಲ್ ಸ್ವತ್ತುಗಳನ್ನು ಪರಭಾರೆ ಮಾಡುವ ಏರ್ಪಾಡು ನಡೆಸುತ್ತಿರುತ್ತಾರೆ ಆ ರೀತಿ, ಪೆಟ್ಯಾಲ್ ಸ್ವತ್ತುಗಳನ್ನು ಯಾರಾದರೂ ಅಧಾರ, ಭೋಗ್ಯ, ಕ್ರಯ ವಗೈರೆ ಮಾಡಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ ಮತ್ತು ಎಷ್ಟು ಮಾತ್ರಕ್ಕೂ ನನ್ನ ಹಕ್ಕನ್ನು ಬಂಧಿಸುವುದಿಲ್ಲವೆಂದು ಈ ಮೂಲಕ ತಿಳಿಸುತ್ತೇನೆ

ಷೆಡ್ಯೂಲ್ :- 1) ಮೈಸೂರು ಸಿಟಿ ಒಂಟಿಕೊಪ್ಪಲಿನಲ್ಲಿರುವ D. No 2588ನೇ ನಂಬರು ಮನೆಗೆ ಉತ್ತರಾಧಕ್ಕೆ ಚಾಕಪುರ-ಪೂರ್ಣ ರಸ್ತೆ, ಪಶ್ಚಿ ರಸ್ತೆ, ದಕ್ಷಿ ವೆಂಕಟಪ್ಪನವರ ಮನೆ, ಉತ್ತರಕ್ಕೆ ಬೋಂತಯ್ಯನವರ ಖಾಲಿ ಜಾಗ. 2) ಡಿಟೋ ಗ್ರಾಮದಲ್ಲಿ ಇರುವ D ನಂ. 2619/1ಕ್ಕೆ ಚಾಕಪುರ-ಪೂರ್ಣ ರಸ್ತೆ, ಪಶ್ಚಿ ಕಾಡಬಸವೇಗೌಡರ ಪಂಚಮ್ಮನವರ ಮನೆ, ಈ ಮಧ್ಯೆ ಇರುವ ಹೊಸದಾಗಿ ಕಟ್ಟಿಸಿರುವ ಮನೆ.

ಕೆ. ಕಾಳಯ್ಯ

ಅಬೀದ್‌ರವರ ಹರಾಜು ಮಾರಾಟ

14—7—57 ನೇ : ಭಾನುವಾರ ಬೆಳಿಗ್ಗೆ 10 ಘಂಟೆಗೆ : ಷೋ ರೂಂ ಬಳಿ

ರೆಮಿಂಗ್ಟನ್ ಟೈಪ್‌ರೈಟರ್. ಎಚ್ ಎಂ ವಿ ರೇಡಿಯೊ ಮತ್ತು ಗ್ರಾಮಾಫೋನ್, ಒಲೆ ಸಮೇತ ಇರುವ ಸ್ಟೀಮೆಯಿಲ್ಲ ಕುಕ್ಕರ್, ಕೌಂಟರುಗಳು, ಷೋ ಕೇಸುಗಳು, ಮಂಚಗಳು, ಮರದ ರ್‍ಯಾಕುಗಳು, ಸ್ಟಾಂಡಿಗೆ ಜೋಡಿಸಿರುವ ಕಬ್ಬಿಣದ ತೊಟ್ಟಿಲು, ವಾಲ್ ಸೇಫ್, ಬೊಂಬಿನ ಉತ್ತಮ ಫರ್ನಿಚರುಗಳು ಮತ್ತು ಇತರ ಉಪಯುಕ್ತ ವಸ್ತುಗಳು

13ನೇ ತಾರೀಕು ಶನಿವಾರ ಸಂಜೆ 4 ರಿಂದ 6 ಘಂಟೆವರೆಗೆ ಪದಾರ್ಥಗಳನ್ನು ಅಣಿಮಾಡಿ ತೋರಿಸಲಾಗುವುದು ನಗದು ವ್ಯಾಪಾರ.

ಅಬೀದ್ಸ್,

ಫೋನ್ 473 . ಸ್ಯಾಂಚ್ಯ ಚೌಕ : ಮೈಸೂರು

ಟೆಲಿಫೋನ್ ನಂ. 541 — — ಟೆಲಿಗ್ರಾಂ : ಅಲಾಸ್

ನ್ಯೂ ಚಾಮುಂಡೇಶ್ವರಿ ಕೆಫೆ,

ಇರ್ವಿನ್ ರಸ್ತೆ, ಮೈಸೂರು.

ತಾ॥ 10-7-1957 ರಿಂದ ರಿಯಾಯಿತಿ ದರ

ವಿದ್ಯಾರ್ಥಿಗಳಿಗೂ ಮತ್ತು ಬೋರ್ಡರುಗಳಿಗೂ ಊಟದ 30 ಟಿಕೆಟ್ಟುಗಳು ಪುಸ್ತಕಕ್ಕೆ ರೂ. 16-8-0 ಮಾತ್ರ ಪ್ರೊ॥ ಸಿ ಬಿ. ಎಂ. ಚಂದ್ರಯ್ಯ.

ಚಾಮುಂಡೇಶ್ವರಿ ಟಾಕೀಸ್

12—7—57 ರಿಂದ ಒಂದು ವಾರ ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಚಕ್ರವರ್ತಿ ತಿರುಮಗಳ್ (ತಮಿಳು)

ಭೂಮಿಕೆ :- ಎಂ ಜಿ ರಾಮಚಂದ್ರನ್, ಅಂಜಲಿದೇವಿ, ತಂಗವೇಲು, ಎ ಎಸ್. ಕೃಷ್ಣನ್, ಟಿ. ಎ. ಮಧುರಂ ಮುಂತಾದವರು

ಮುಂದಿನ ಬದಲಾವಣೆ:— ಜೆಮಿನಿ ಗಣೇಶ ಮತ್ತು ಸಾವಿತ್ರಿ ಪಾತ್ರವಹಿಸಿರುವ ತಮಿಳು ಚಿತ್ರ **ಯಾರ ಪೈಯನ್**

Morning Shows On 13th & 14th only at 10-30 A M
ON THE CIRCUS ARENA

ಒಲಂಪಿಯಾ ಟಾಕೀಸ್

12-7-57 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು : 3-30, 6-30 ಮತ್ತು 9-45ಕ್ಕೆ

ರಜಪೂತರ ಮತ್ತು ಮೊಗಲರ ವೈಭವದ ಹಿನ್ನೆಲೆಯಿಂದ ಕೂಡಿದ, ದಿನೇಶ್ ಫಿಲಂಸ್‌ರವರ ಅಮೋಘ ಚಾರಿತ್ರಿಕ ಚಿತ್ರ

ಅಮರ ಸಿಂಹ ರಾಠೋಡ್

(AMAR SINGH RATHAUR)

(ಮೊಗಲ್ ಸಾಮ್ರಾಜ್ಯವನ್ನೇ ನಡುಗಿಸಿದ ಧೀರ)

ಪಾತ್ರ :- ಪಿರೂಪರಾಣಿ, ಜೈರಾಜ್, ಅರ್ ನಾಗರ್, ಯಶೋಧರಾ ಖಟ್ಟು, ಹೆಲೆನ್, ವೀಣಾ ಮತ್ತಿತರರು

ಉತ್ತರ ಇಂಡಿಯಾದಲ್ಲಿ ನಾಗಿನ್, ಝನಕ್ ಝನಕ್ ಪಾಯಲ್ ಬಾಜೆ, ಪ್ಯಾಸಾ ಚಿತ್ರಗಳ ದಾಖಲೆಯನ್ನು ಮೀರಿ ಖ್ಯಾತಿಗಳಿಸಿದೆ

ರಿಜಿಸ್ಟರ್ಡ್ ನಂ 192

OWN YOUR AUTO!
(50 monthly Instalments)

Apply for prospectus etc with Re 1 stamps

AUTOMOBILE ASSOCIATION OF INDIA
New Statue Circle,
MYSORE



ಅಂದಿನ ಪತ್ರಿಕೆ 2 ನಯಾ ಪೈಸ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೧೫] SADHVI : SATURDAY 13—7—1957 ಮೈಸೂರು : ಶನಿವಾರ ೧೩—೭—೧೯೫೭ : [ಸಂಚಿಕೆ : ೩೩೫

ಪಾಕಿಸ್ತಾನಕ್ಕೆ ಬಾಂಬರ್ ರವಾನೆಗೆ ಅಮೆರಿಕದ ತಿರಸ್ಕಾರ

ಪಾಕಿಸ್ತಾನಕ್ಕೆ ಬಾಂಬರ್ ವಿಮಾನ ಕೊಡಲು ಅಮೆರಿಕದ ನಿರಾಕರಣೆ

ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯದ ಪ್ರಮಾಣವನ್ನು ಹೆಚ್ಚಿಸಲೂ ಮತ್ತು ಈಗ ಒದಗಿಸಲಾಗುತ್ತಿರುವ ಸೈನ್ಯ ಸಾಧನಗಳ ಸಂಖ್ಯೆಯನ್ನು ಏರಿಸಲೂ ಅಮೆರಿಕವು ಒಪ್ಪಿರುವುದಾದರೂ, ಬಾಂಬರು ವಿಮಾನಗಳನ್ನು ಕೊಡಬೇಕೆಂದು ಪಾಕಿಸ್ತಾನವು ಮಾಡಿರುವ ಬೇಡಿಕೆಯನ್ನು ಅದು ನಿರಾಕರಿಸಿರುವುದೆಂದು ವರದಿಯಾಗಿದೆ. ಬಾಂಬರುಗಳನ್ನು ಒದಗಿಸಿದರೆ ಅದರಿಂದ ಭಾರತದಲ್ಲಿ ಪ್ರತಿಕೂಲವಾದ ಮನೋಭಾವವುಂಟಾಗುವುದೆಂದು ಅಮೆರಿಕವು ಭೀತಿಪಟ್ಟಿರುವುದೆಂದು ತಿಳಿದುಬಂದಿದೆ. ಪಾಕಿಸ್ತಾನದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಸಂಭವಿಸಬಹುದಾದ ಕ್ಷಾಮಗಳನ್ನು ತಡೆಗಟ್ಟಲು ಅಲ್ಲಿನ ಪ್ರಧಾನಿ ಸುಹ್ರಾವರ್ದಿಯವರು ಬೇಡಿರುವ ೩೦ ಲಕ್ಷ ಟನ್ ಧಾನ್ಯವನ್ನು ಪಡೆಯಲು ವಿಫಲರಾಗಿರುವರೆಂದೂ ಹೇಳಲಾಗಿದೆ

ಅಫ್ಘಾನಿಸ್ತಾನದ ದೊರೆ ಮತ್ತು ಪ್ರಧಾನಿ ಕೊಲೆಗೆ ಸಂಚು ?

ಅಫ್ಘಾನಿಸ್ತಾನದ ದೊರೆ ಜಾಹಿರ್ ಷಾ ಮತ್ತು ಪ್ರಧಾನಿ ದಾವೂದ್ ಖಾನರವರನ್ನು ಕೊಲೆ ಮಾಡುವ ಬಗ್ಗೆ ಕಾಬೂಲಿನಲ್ಲಿ ಒಳಸಂಚೊಂದು ನಡೆದಿದ್ದು ಅದು ಪತ್ತೆಯಾಗಿರುವುದೆಂದು ನವ ಟೈಮ್ಸ್ ವಾರ್ತಾ ಸಂಸ್ಥೆಯು ತಿಳಿಸಿದೆ. ಮಾಜಿ ಹಣಕಾಸಿನ ಮಂತ್ರಿ ಅಬ್ದುಲ್ ಮಲಿಕ್ ಮತ್ತು ಅವರ ಸಹೋದರರೊಬ್ಬರು ಇದಕ್ಕೆ ಪ್ರೇರಕರಾಗಿರುವರೆಂದೂ, ಸಂಚಿನ ಬಗ್ಗೆ ತನಿಖೆ ಮಾಡಲು ಎರಡು ಸಮಿತಿಗಳನ್ನು ನೇಮಿಸಲಾಗಿರುವುದೆಂದೂ ವರದಿಯಾಗಿದೆ.

ಆಗಾಖಾನರ ಉತ್ತರಾಧಿಕಾರಿ

ಅಲಿಖಾನರ ಪ್ರಥಮ ಪತ್ನಿಯವರ ಹೊಟ್ಟೆಯಲ್ಲಿ ಹುಟ್ಟಿದ ರಾಜಕುಮಾರ ಕರೀಂರವರು ಆಗಾಖಾನರ ಉತ್ತರಾಧಿಕಾರಿಯಾಗಿದ್ದಾರೆ

ಪೊಲೀಸು ಅಧಿಕಾರಿಯ ಕೊಲೆಗಾಗಿ ಮರಣದಂಡನೆ

ಬಂಗಾರಪೇಟೆಯ ಕಾಮಸಮುದ್ರದ ಪೊಲೀಸು ಸಬ್ ಇನ್ಸ್‌ಪೆಕ್ಟರ್ ಶ್ರೀ ಮಾಧವಾಚಾರ ಎಂಬುವರನ್ನು ಕಳೆದ ಮಾರ್ಚಿಯಲ್ಲಿ ಪೊಲೀಸು ಠಾಣೆಯಲ್ಲಿ ಚಾಕುವಿನಿಂದ ಇರಿದು ಕೊಲೆ ಮಾಡಿದುದಕ್ಕಾಗಿ ರಾಮುಡು ಎಂಬುವನಿಗೆ ಕೋಲಾರದ ಸೆಷನ್ಸ್ ನ್ಯಾಯಾಧೀಶರು ಮರಣದಂಡನೆಯನ್ನು ವಿಧಿಸಿದ್ದಾರೆ

ಎಂ. ಡಿ. ಶಿವನಂಜಪ್ಪನವರಿಗೆ ಕೇಂದ್ರ ಸರ್ಕಾರದ ಹುದ್ದೆ

ಸಿಂಲಾದಲ್ಲಿ ಐ ಎ ಎಸ್ ಸಿಬ್ಬಂದಿ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿರುವ ಮೈಸೂರಿನ ಅಧಿಕಾರಿಗಳಾದ ಶ್ರೀ ಎಂ. ಡಿ. ಶಿವನಂಜಪ್ಪನವರ ತರಪೇತು ಮುಗಿದನಂತರ ಅವರನ್ನು ಅಂಚೆ ಮತ್ತು ತಂತಿ ಇಲಾಖೆಯ ಡೈರೆಕ್ಟರ್ ಜನರಲ್ ಆಫೀಸಿನಲ್ಲಿ ದೂರುಗಳ ಪರಿಶೀಲನಾ ಡೈರೆಕ್ಟರಾಗಿ ನೇಮಿಸಲಾಗುವುದು

ವಿನೋಬಾ ಭಾವೆಯವರ ಸ್ವಾಗತಕ್ಕೆ ವ್ಯವಸ್ಥೆ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯ ರಚನೆ

ಮೈಸೂರು ೧೨

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ಜಿಲ್ಲಾ ಭೂದಾನ ಕಾರ್ಯಕರ್ತರು ಮತ್ತು ಸರ್ವ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯು ನಡೆದು, ಬರುವ ಸಪ್ಟೆಂಬರ್ ತಿಂಗಳು ಜಿಲ್ಲೆಯಲ್ಲಿ ಆಚಾರ್ಯ ವಿನೋಬಾ ಭಾವೆಯವರ ಪ್ರವಾಸದ ವ್ಯವಸ್ಥೆ ಮಾಡಲು ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷರಾಗಿಯೂ ಮತ್ತು ಶ್ರೀಗಳಾದ ಎಸ್ ವಿ. ಮಂಜುನಾಥ್ ಮತ್ತು ಎಸ್ ಎಸ್ ಶಾಸ್ತ್ರಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

ಜಿಲ್ಲೆಯಲ್ಲಿ ಅಖಿಲ ಭಾರತ ಭೂದಾನ ಕಾರ್ಯಕರ್ತರ ಶಿಬಿರ ಮತ್ತು ಸರ್ವ ಪಕ್ಷಗಳ ಮುಖಂಡರ ಸಮ್ಮೇಳನವನ್ನು ಸೇರಿಸುವಂತೆ ವಿನೋಬಾಜಿಯವರನ್ನು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು. ಅಧ್ಯಕ್ಷರು ಭಾಷಣ ಮಾಡಿ ಭೂದಾನ ಚಳುವಳಿಗೆ ಎಲ್ಲ ಪಕ್ಷಗಳ ಸಹಕಾರವು ಬೇಕೆಂದೂ, ಆಚಾರ್ಯರಿಗೆ ವೈಭವದ ಸ್ವಾಗತವೀಯಬೇಕೆಂದೂ ಸೂಚಿಸಿದರು.

ಗುರು ಪೂರ್ಣಿಮಾ ಕಾರ್ಯಕ್ರಮ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯೀ ಮಂದಿರದಲ್ಲಿ ಗುರು ಪೂರ್ಣಿಮೆಯ ಪ್ರಯುಕ್ತ, ನಾಳೆ ಬೆಳಗ್ಗೆ ಅಭಿಷೇಕ ಮತ್ತು ೧೧॥ ಗಂಟೆಗೆ ಸರ್ವ ಸದಸ್ಯರ ಸಭೆ ಮತ್ತು ಸಂಜೆ ೬ ಗಂಟೆಗೆ ಸಾಮೂಹಿಕ ಪ್ರಾರ್ಥನೆಗಳೂ, ನಂತರ ವಿ॥ ಕೊಣನೂರು ಸೀತಾರಾಮಶಾಸ್ತ್ರಿಗಳವರಿಂದ ಹರಿಕಥಾ ಕಾಲಕ್ಷೇಪವೂ ಇವೆ. ಬೆಂಗಳೂರು ಮೇಯರ್ ಶ್ರೀ ಜಿನಾಭಾಯಿ ದೇವಿದಾಸ್‌ರವರ ಸಮ್ಮುಖದಲ್ಲಿ ಶ್ರೀ ಎಂ ಯಾಮುನಾಚಾರ್ಯರು ಮಹಾತ್ಮರು ತೋರಿಸಿದ ಭಕ್ತಿ ಮಾರ್ಗ ಎಂಬ ವಿಚಾರವಾಗಿ ಭಾಷಣ ಮಾಡುವರು

ಉಪನ್ಯಾಸ

ರಾಜಧಾನಿಯ ಜಯನಗರದ ಬಡಾವಣೆಯಲ್ಲಿರುವ ಪೌರಾಣಿಕ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಯಿಂದ ೬ರವರೆಗೆ "ಲಿಪಿ ಮತ್ತು ಅಕ್ಷರಗಳ ಸ್ವರೂಪ ಮಹಿಮೆ'' ಎಂಬ ವಿಷಯವಾಗಿ ನಿವೃತ್ತ ಸೂಪರಿಂಟೆಂಡಿಂಗ್ ಎಂಜಿನಿಯರ್ ಶ್ರೀ ಎಂ ಆರ್ ಕೃಷ್ಣಮೂರ್ತಿರಾಯರು ಉಪನ್ಯಾಸ ಮಾಡುವರು

ಸಟ್ಟಾ ಜೂಜಾಟಕ್ಕಾಗಿ ದಂಡ

ರೈಲ್ವೆ ವರ್ಕ್‌ಷಾಪ್ ಬಳಿ ಮೊನ್ನೆ ಮದನಗೋಪಾಲರಾವ್, ಜಿಪೋಜಿರಾವ್ ಮತ್ತು ಬಾಬೂಸಾಬ್‌ರವರು ನ್ಯೂಯಾರ್ಕ್ ಹತ್ತಿ ಸಟ್ಟಾ ಜೂಜಾಡುತ್ತಿದ್ದರೆಂದು ಲಕ್ಷ್ಮೀಪುರಂ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಆಪಾದಿತರಿಗೆ ನೆನ್ನೆ ತಲಾ ೨೫ ರೂ ದಂಡ ವಿಧಿಸಲಾಯಿತು.

ವಿಧಾನ ಸಭೆಯಲ್ಲಿ "ಸದಾರಮೆ ನಾಟಕ"ದ ಪ್ರಸ್ತಾಪ

ವಿಧಾನ ಸಭಾಧ್ಯಕ್ಷರಿಂದ ರೂಲಿಂಗ್

ಬೆಂಗಳೂರು ೧೨

ನೆನ್ನೆ ವಿಧಾನ ಸಭೆಯು ಚರ್ಚೆ ಸಮಯದಲ್ಲಿ ಸಚಿವ ಶ್ರೀ ಪೂಣಚ್ಚರವರು ವಿಶಾಲ ಮೈಸೂರಿನ ಐದು ಭಾಗಗಳಿಗೂ ಒಪ್ಪಿತವಾದ ಆಯವ್ಯಯ ಪಟ್ಟಿ ತಯಾರಿಕೆಯು ಕಷ್ಟಕರವಾದ ವಿಷಯವೆಂದೂ, ಆ ಬಗ್ಗೆ ಟೀಕಿಸುವುದು ಸುಲಭವೆಂದೂ ಹೇಳಿದಾಗ, ವಿರೋಧ ಪಕ್ಷದ ಶ್ರೀ ಬಿ ಕೆ ಪುಟ್ಟರಾಮಯ್ಯನವರು "ಕಷ್ಟವಾದರೆ ಬಿಟ್ಟುಬಿಡಲಿ, ನಾವು ಮಾಡಿಕೊಂಡು ಹೋಗುತ್ತೇವೆ" ಎಂದು ತಿಳಿಸಿದರು. ಸಚಿವರು ಉತ್ತರವಿತ್ತು "ತಮ್ಮ ಕೈಲಿ ಜವಾಬ್ದಾರಿ ವಹಿಸಿದರೆ ಸದಾರಮೆ ನಾಟಕವಾದೀತು" ಎಂದರು. (ಸಭೆಯಲ್ಲಿ ನಗು)

ಶ್ರೀ ಪುಟ್ಟರಾಮಯ್ಯನವರು ಮಾತನಾಡಿ ಸದಾರಮೆ ನಾಟಕದಲ್ಲಿ ಕಳ್ಳರು ಕೂಡ ಬರುವರೆಂದೂ, ವಿರೋಧ ಪಕ್ಷವನ್ನು ಆ ನಾಟಕಕ್ಕೆ ಹೋಲಿಸುವುದು ಸರಿಯೇ ಎಂಬುವರ ಬಗ್ಗೆ ರೂಲಿಂಗ್ ಆಗಬೇಕೆಂದೂ ಬೇಡಿದರು. "ಸದಾರಮೆ" ಪದವು "ಅನ್‌ಪಾರ್ಲಿಮೆಂಟರಿ" ಅಲ್ಲವೆಂದು ಅಧ್ಯಕ್ಷರು ತಿಳಿಸಿದರು

ಕೇಂದ್ರ ಸರ್ಕಾರದ ೫ ಲಕ್ಷ ನೌಕರರಿಂದ ಮುಷ್ಕರ

ಆಗಸ್ಟ್ ೯ ರಿಂದ ಆರಂಭಕ್ಕೆ ಕರೆ

ಕೇಂದ್ರ ಸರ್ಕಾರದ ನಾಲಾ ಇಲಾಖೆಗಳ ನೌಕರರ ೧೪ ಸಂಘಗಳ ೧೪೦ ಮಂದಿ ಪ್ರತಿನಿಧಿಗಳು ನೆನ್ನೆ ಸೇರಿದ್ದ ಸಭೆಯಲ್ಲಿ, ಬರುವ ತಿಂಗಳು ೮-೯ರ ಮಧ್ಯ ರಾತ್ರಿಯಿಂದ ಕೇಂದ್ರದ ಕೆಳದರ್ಜೆ ನೌಕರರು ಮುಷ್ಕರ ಹೂಡುವುದಕ್ಕೆ ಕರೆಯಿತ್ತಿತು. ಸಂಸ್ಥೆಯು ಒಟ್ಟು ೫ ಲಕ್ಷ ಮಂದಿ ನೌಕರರಿಗೆ ಈ ಬಗ್ಗೆ ಸೂಚನೆಯಿತ್ತಿತು. ಅಂಚೆ ಮತ್ತು ತಂತಿ ಇಲಾಖೆ, ನಾಗರಿಕ ವಿಮಾನ ಹಾರಾಟ, ಹವಮಾನ ತಿಳಿಗೆ, ಕೇಂದ್ರ ಅಬ್ಕಾರಿ ಸುಂಕ ಮತ್ತು ಸಿವಿಲ್ ಮತ್ತು ಆಡಿಟ್ ಇಲಾಖೆಗಳ ನೌಕರರ ಸಂಘದವರು ಈಗಾಗಲೇ ಮುಷ್ಕರದ ಪರವಾಗಿ ಅಭಿಮತವಿತ್ತಿರುವರು.

ದ್ವಿತೀಯ ಸಂಬಳದ ಸಮಿತಿ ರಚನೆಗಾಗಿಯೂ, ಹೆಚ್ಚಿನ ತುಟ್ಟಿಭತ್ಯ ಮತ್ತು ಸಂಬಳದಲ್ಲಿ ತುಟ್ಟಿಭತ್ಯದ ವಿಲೀನಕ್ಕಾಗಿಯೂ, ಅವರುಗಳು ಬೇಡಿಕೆಯಿಟ್ಟಿರುವರು.

ರೇವು ಕೆಲಸಗಾರರ ಮುಷ್ಕರವಿಲ್ಲ

ಬೊಂಬಾಯಿಯ ೩೦ ಸಾವಿರ ರೇವು ಕೆಲಸಗಾರರು ನೆನ್ನೆ ಮಧ್ಯ ರಾತ್ರಿಯಿಂದ ನಡೆಸಬೇಕಾಗಿದ್ದ ಮುಷ್ಕರವನ್ನು ನಡೆಸದೆ ನಿಲ್ಲಿಸಿದ್ದಾರೆ. ಕೇಂದ್ರ ಮಂತ್ರಿಗಳಾದ ಲಾಲ್‌ಬಹದ್ದೂರ್ ಶಾಸ್ತ್ರಿ ಮತ್ತು ರಾಜಬಹದ್ದೂರ್‌ರವರುಗಳಿಗೂ, ಕೆಲಸಗಾರರ ಪ್ರತಿನಿಧಿಗಳಿಗೂ ನೆನ್ನೆ ದೆಹಲಿಯಲ್ಲಿ ಚರ್ಚೆಯಾಗಿ ಒಪ್ಪಂದಕ್ಕೆ ಬರಲಾಯಿತು

○ ಖಾಂಡೂರಿನ ಆಸ್ಪತ್ರೆಯನ್ನು ವಿಸ್ತರಿಸಲು ಅಲ್ಲಿನ ಮಾಜಿ ರಾಜರು ೨೫,೦೦೦ ರೂ. ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ ಸರ್ಕಾರದವರೂ ಸಹ ಅಷ್ಟೇ ಹಣವನ್ನು ಕೊಟ್ಟು, ಆಸ್ಪತ್ರೆಯನ್ನು ವಿಸ್ತರಿಸಬೇಕೆಂದು ಅವರು ಕೋರಿರುತ್ತಾರೆ

ಶಾಸನಸಭಾ ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗದ ಆಯ್ಕೆ

ನಿಜಲಿಂಗಪ್ಪನವರು ನಾಯಕರು

ಸ್ವಂ ಸು. ಫೋ] ಬೆಂಗಳೂರು ೧೨

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗದ ಚುನಾವಣೆಯು ಈ ದಿನ ನಡೆದು, ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಾಯಕರಾಗಿಯೂ, ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಉಪ ನಾಯಕರಾಗಿಯೂ ಆರಿಸಲ್ಪಟ್ಟರು ಶ್ರೀ ಎ ವಿ ನರಸಿಂಹರೆಡ್ಡಿಯವರು ಕಾರ್ಯದರ್ಶಿ ಮತ್ತು ಶ್ರೀ ಎಲ್ ಎಸ್ ವೆಂಕಾಜಿರಾಯರು ಖಜಾಂಚಿಯಾಗಿ ಚುನಾಯಿತರಾದರು ಶ್ರೀ ಮತಿ ಬಸವರಾಜೇಶ್ವರಿ ಮತ್ತು ಶ್ರೀ ಟಿ ವೆಂಕಟರಮಣಯ್ಯನವರು ಜಂಟಿ ಕಾರ್ಯದರ್ಶಿಗಳಾಗಿಯೂ, ಶ್ರೀ ಎಚ್ ಹುಚ್ಚಮಾಸ್ತಿಗೌಡರು ವ್ಹಿಪ್ ಆಗಿಯೂ ನೇಮಿಸಲ್ಪಟ್ಟರು. ಶ್ರೀಗಳಾದ ಕಡಿದಾಳ್ ಮಂಜಪ್ಪನವರೂ ಸೇರಿ ೯ ಜನರು ಕಾರ್ಯ ಸಮಿತಿ ಸದಸ್ಯರಾದರು

ಎಚ್. ಎಸ್. ಹಿರಣ್ಣಯ್ಯನವರು ರೆವಿನ್ಯೂ ಬೋರ್ಡಿನ ಅಧ್ಯಕ್ಷರು

ಗುಲ್ಬರ್ಗಾ ಕಮಿಷನರಾಗಿ ಜಿ ಎಚ್ ನಾಗರಾಜರಾಯರ ನೇಮಕ

ಬೆಂಗಳೂರು ೧೨

ಶ್ರೀ ಎಚ್ ಎಸ್ ಹಿರಣ್ಣಯ್ಯನವರ ರಜಾ ಮುಗಿದನಂತರ ಸಂಸ್ಥಾನದ ರೆವಿನ್ಯೂ ಬೋರ್ಡಿನ ಅಧ್ಯಕ್ಷರಾಗುವಂತೆ ಅವರನ್ನು ನೇಮಿಸಲಾಗಿದೆ. ಬೆಂಗಳೂರು ಡಿವಿಜನ್ನಿನ ಕಮಿಷನರ್ ಶ್ರೀ ಜಿ. ಎಚ್ ನಾಗರಾಜರಾಯರನ್ನು ಗುಲ್ಬರ್ಗ ಡಿವಿಜನ್ನಿನ ಕಮಿಷನರನ್ನಾಗಿಯೂ, ರೆವಿನ್ಯೂ ಬೋರ್ಡಿನ ಸದಸ್ಯ ಶ್ರೀ ಆರ್ ಜೆ ರೇಗೋರವರನ್ನು ಶ್ರೀ ನಾಗರಾಜರಾಯರ ಸ್ಥಾನಕ್ಕೂ ನೇಮಿಸಲಾಗಿದೆ.

ಉಪಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಭಾಗವಹಿಸುವಂತಿಲ್ಲ

ವಿಧಾನ ಸಭಾಧ್ಯಕ್ಷರ ರೂಲಿಂಗ್

ಬೆಂಗಳೂರು ೧೨

ನೆನ್ನೆ ವಿಧಾನ ಸಭೆಯಲ್ಲಿ ಅಧ್ಯಕ್ಷ ಶ್ರೀ ಶಂಕರಯ್ಯನವರು ರೂಲಿಂಗ್ ಇತ್ತು ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಉಪ ಮಂತ್ರಿಗಳು ಕೂತಬಾರದೆಂದೂ ಮತ್ತು ಸರ್ಕಾರದ ಪರವಾಗಿ ಭಾಗವಹಿಸಕೂಡದೆಂದೂ ಸೂಚಿಸಿದರು ನೆನ್ನೆ ಶ್ರೀ ಸಿ. ಜೆ ಮುಕ್ಕಣ್ಣಪ್ಪನವರು ಸಭೆಯಲ್ಲಿ ಎತ್ತಿದ ಕ್ರಮಬದ್ಧತಾ ಸೂಚನೆ ಸಂಬಂಧವಾಗಿ ಅಧ್ಯಕ್ಷರು ಮಾತನಾಡಿ, ಕೇಂದ್ರ ಸರ್ಕಾರದಿಂದ ಈ ಬಗ್ಗೆ ವಿವರಣೆಯೊಂದು ಬಂದಿರುವುದೆಂದೂ, ಮಂತ್ರಿ ಮಂಡಲದ ಸದಸ್ಯರ ಸ್ಥಾನವಿಲ್ಲದಿದ್ದರೂ ಉಪ ಮಂತ್ರಿಗಳು ವಿಧಾನ ಸಭೆಯಲ್ಲಿ ಭಾಗವಹಿಸಬಹುದೆಂದೂ, ಆದರೆ ಮೇಲ್ಮನೆಯಲ್ಲಿ ಭಾಗವಹಿಸಕೂಡದೆಂದೂ ತಿಳಿಸಿದರು,

○ ಬರುವ ಸೆಪ್ಟೆಂಬರ್ ತಿಂಗಳು ಆರಂಭದಲ್ಲಿ ನಡೆಯಬೇಕಾಗಿದ್ದ ಇಂಟರ್‌ಮೀಡಿಯೆಟ್ ಪರೀಕ್ಷೆಗಳನ್ನು ಅದೇ ತಿಂಗಳು ೧೬ಕ್ಕೆ ಮುಂದುವರಿಸಲಾಗಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಸುಗಂಧಕಾರಿಗಳ ಸನ್ಮಾನ

ಮೈಸೂರು ೧೧

ನಗರದ ಅಗರಬತ್ತಿ ತಯಾರಕರು ಮತ್ತು ಸುಗಂಧಕಾರಿಗಳ ಸಹಕಾರ ಸಂಘದವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚೆನ್ನಯ್ಯನವರನ್ನು ಗೌರವಿಸಲು ನೆನ್ನೆ ಇಂದ್ರಭವನದಲ್ಲಿ ಸಮಾರಂಭವೊಂದನ್ನು ಏರ್ಪಡಿಸಿದ್ದರು.

ಶ್ರೀ ಸಂಪತ್ಕುಮಾರರವರಿಂದ ಪ್ರಾರ್ಥನೆ ನೆರವೇರಿದನಂತರ, ಸಂಘದ ಅಧ್ಯಕ್ಷ ಶ್ರೀ ಟಿ ಎಲ್. ಎಸ್. ಉಪಾಧ್ಯಾಯರು ಸ್ವಾಗತ ಭಾಷಣ ಮಾಡಿದರು ಶ್ರೀಗಳಾದ ಎಂ ಆರ್. ಚೆಟ್ಟಪ್ಪ, ಲಕ್ಷ್ಮೀನರಸಿಂಹಯ್ಯ, ನಂಜಪ್ಪಯ್ಯ, ನಾರಾಯಣರಾವ್ ಮತ್ತು ಎಸ್ ಎಸ್. ಶಾಸ್ತ್ರಿಗಳವರು ಭಾಷಣ ಮಾಡಿ ಶ್ರೀ ಚೆನ್ನಯ್ಯನವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ಸುಗಂಧ ದ್ರವ್ಯಗಳ ಮೇಲೆ ಮಾರಾಟ ತೆರಿಗೆ ವಿನಾಯಿತಿ ಮಟ್ಟ ಹೆಚ್ಚಬೇಕೆಂದೂ, ಆ ಕ್ಸೈಜ್ ಕಛೇರಿಯವರಿಂದ ಕಿರುಕುಳಗಳು ತಪ್ಪಬೇಕೆಂದೂ ಶ್ರೀ ಎಸ್ ಎಸ್ ಶಾಸ್ತ್ರಿಯವರು ಕೋರಿದರು.

ಶ್ರೀ ಚೆನ್ನಯ್ಯನವರು ಉತ್ತರವಿತ್ತು, ಸರಕಾರಕ್ಕೆ ವರಮಾನ ಬರುವುದರಲ್ಲಿ ಮೋಸ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದೂ, ವರ್ತಕರಿಗೆ ಅಧಿಕಾರಿಗಳಿಂದ ಆಗಬಹುದಾದ ತೊಂದರೆಗಳನ್ನು ತಪ್ಪಿಸಲು ತಾವು ಪ್ರಯತ್ನಪಡುವುದಾಗಿಯೂ ನುಡಿದರು.

ಕಾಂಗ್ರೆಸ್ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯಗಳಿರುವುದು ಸಹಜವಾದರೂ, ಅಂದೂ ವಿರಸಕ್ಕೆ ಅವಕಾಶ ಕೊಡುವುದಿಲ್ಲವೆಂದು ಅವರು ಸೂಚಿಸಿದರು. ಸಂಸ್ಥೆಯಲ್ಲಿ ನಿಯಮಗಳನ್ನು ಈಗ ಬಿಗಿಪಡಿಸಲಾಗುತ್ತಿರುವುದೆಂದೂ, ಪ್ರತಿ ತಿಂಗಳೂ ಪ್ರದೇಶ ಕಾಂಗ್ರೆಸ್ಸು ಎ. ಐ. ಸಿ. ಸಿ. ಗೆ ಸಂಸ್ಥೆ ಮತ್ತು ಸರ್ಕಾರಗಳ ನಡುವೆ ನಡೆದಿರುವ ಸಾಮಾನ್ಯ ನೀತಿಯ ಸಮಾಲೋಚನೆ ಬಗ್ಗೆ ವರದಿಯನ್ನು ಕಳುಹಿಸಬೇಕಾಗಿರುವುದೆಂದೂ ಅವರು ಹೊರಗೆಡಹಿದರು

ಕೋತಿಗಳ ರಫ್ತು ತಪ್ಪಿಸಲು ನೆಹರೂರವರಿಗೆ ಪಾಶ್ಚಾತ್ಯರ ಕರೆ

ಪ್ರಧಾನಿ ನೆಹರೂರವರು ಭಾರತದಿಂದ ಕೋತಿಗಳ ರಫ್ತನ್ನು ತಪ್ಪಿಸಬೇಕೆಂದು ಪ್ರಾಣಿಗಳ ವಧೆಯ ವಿರೋಧದ ವಿಶ್ವ ಮಂಡಲಿಯೊಂದು ಪ್ರಾರ್ಥಿಸಿದೆ ಭಾರತದಿಂದ ಕಳೆದ ೧೨ ತಿಂಗಳಲ್ಲಿ ೧,೫೫,೦೦೦ ಕೋತಿಗಳನ್ನು ರಫ್ತುಮಾಡಲಾಗಿರುವುದೆಂದೂ, ಅವುಗಳಲ್ಲಿ ಅನೇಕವನ್ನು ಕೊಲ್ಲಲಾಗಿರುವುದೆಂದೂ ಸೂಚಿಸಲಾಗಿದೆ

ದಲೈ ಲಾಮಾರವರ ಪ್ರಾಣಾಪಹಾರ ಪ್ರಯತ್ನ

ಟಿಬೆಟ್ಟಿನ ಗುರು ಮತ್ತು ಅಧಿಪತಿಗಳಾದ ದಲೈಲಾಮಾರವರ ಪ್ರಾಣಾಪಹರಣ ಪ್ರಯತ್ನವೊಂದು ನಡೆದುದಾಗಿ ಖಟ್ಮಂಡುವಿನ ಒಂದು ಪತ್ರಿಕೆ ವರದಿ ಮಾಡಿದೆ. ಲಾಮಾರವರು ತಮ್ಮ ಹೊಸ ಬೇಸಿಗೆ ನಿವಾಸವನ್ನು ಪ್ರವೇಶಿಸುತ್ತಿದ್ದಾಗ ಯಾವನೋ ಒಬ್ಬನು ಅವರ ಮೇಲೆ ದೊಡ್ಡ ಬೆಂಕಿಯಂತಹ ಪದಾರ್ಥವನ್ನು ಎಸೆದನೆಂದೂ, ಅದು ಅವರಿಗೆ ತಗಲಲಿಲ್ಲವೆಂದೂ ಹೇಳಲಾಗಿದೆ ಆಕ್ರಮಕಾರನ ಬಂಧನವಾಗಿದೆ ಲಾಮಾ ಕಡೆಯವರಿಂದ ತನಗೆ ನ್ಯಾಯ ದೊರೆಯಲಿಲ್ಲವೆಂದೂ, ಲಾಮಾರವರಿಗೆ ಈ ವಿಚಾರವನ್ನು ಅರಿಕೆ ಮಾಡಿದ್ದರೂ ಅದಕ್ಕೆ ಗಮನ ಕೊಡಲಿಲ್ಲವೆಂದೂ ದಸ್ತಗಿರಿಯಾದವನು ತಿಳಿಸಿರುತ್ತಾನೆ

ಶ್ರೀಕಂಠೇಶ್ವರ ದೇವಾಲಯದ ವಾರ್ಷಿಕೋತ್ಸವ

ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಬಿ ಸಿ. ಚೆನ್ನರಾಜ ಅರಸ್‌ರವರ ನೇತೃತ್ವದಲ್ಲಿ ನಾಳೆ ವಾರ್ಷಿಕೋತ್ಸವವೂ ಮತ್ತು ಮಂಟಪೋತ್ಸವವೂ ನಡೆಯುವುವು

ಮಡಕೇರಿ ಕಾಲೇಜು ವಿದ್ಯಾರ್ಥಿಗಳಿಗೆ ಸೌಲಭ್ಯ

ಸಂಸ್ಥಾನದ ನಾನಾ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಇನ್ನು ಮುಂದೆ ಮಡಿಕೇರಿ ಕಾಲೇಜು ವಿದ್ಯಾರ್ಥಿಗಳಿಗೆ ಮೈಸೂರು ವಿದ್ಯಾರ್ಥಿಗಳಂತೆಯೇ ಪ್ರವೇಶ ಸೌಲಭ್ಯ ಮುಂತಾದುವುಗಳನ್ನು ನೀಡಲು ಮೈಸೂರು ವಿಶ್ವವಿದ್ಯಾಲಯದವರು ತೀರ್ಮಾನಿಸಿರುವರು

CITY TUTORIAL COLLEGE

The long awaited chance to appear by Private Study

AJMER INTERMEDIATE

Classes Commenced

MADRAS MATRICULATION

Classes in full swing

Join before 20.7.57

C. T. C. Old Agrahar, Mysore

VIDYA TUTORIAL COLLEGE

(*Dalvoy High School Buildings*)

MYSORE

H. E. L. & C. B. Z.

Classes Commenced in full swing

JOIN AT ONCE

Enquiries :- 9-30 to 10-30 A.M. and 5-30 to 7-30 P.M.

ಕೇರಳದ ಮಂತ್ರಿಗೆ ಕೊಲೆ ಬೆದರಿಕೆ

ಕೇರಳದ ಮಂತ್ರಿ ಜೋಸೆಫ್ ಮುಂಡಶ್ಶೇರಿಯವರಿಗೆ ಅನೇಕ ಬೆದರಿಕೆ ಪತ್ರಗಳು ಬಂದಿವೆ ಆ ಪತ್ರಗಳು ಅವರ ಪ್ರಾಣ ತೆಗೆಯಲಾಗುವುದೆಂದು ಸೂಚಿಸಿವೆ. ಆ ಫ್ಲಿ ನ ಸಹಾಯ ಪಡೆಯುವ ಶಾಲೆಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಲಾಗುವುದೆಂದು ಸಚಿವರು ಹೇಳಿರುವುದರ ಬಗ್ಗೆ ಈ ರೀತಿ ಬೆದರಿಕೆ ಹಾಕಲಾಗಿರುವುದೆಂದು ಹೇಳಲಾಗಿದೆ.

ಪರ್ಷಿಯದಲ್ಲಿ ಭೂಕಂಪ ಮತ್ತು ಇನ್‌ಫ್ಲುಯೆಂಜಾ ಹಾವಳಿ

ಪರ್ಷಿಯದ ಉತ್ತರ ಭಾಗದಲ್ಲಿ ಮೊನ್ನೆ ಪುನಃ ಪದೇಪದೇ ಭೂಕಂಪಗಳಾದುವು ಕಳೆದ ವಾರ ಅಲ್ಲಿ ಆಗಿದ್ದ ಭೂಕಂಪದಲ್ಲಿ ೨,೦೦೦ ಜನರು ಮೃತಪಟ್ಟರು. ಅಷ್ಟೇ ಅಲ್ಲದೆ ಆ ಪ್ರದೇಶದಲ್ಲಿ ಇನ್‌ಫ್ಲುಯೆಂಜಾ ಮತ್ತು ವಿಷಮಶೀತ ಜ್ವರಗಳೂ ಈಗ ಜನರನ್ನು ಕಾಡಿಸುತ್ತಿವೆ

ಗುರು ಪೂರ್ಣಿಮಾ ಕಾರ್ಯಕ್ರಮ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ಗುರು ಪೂರ್ಣಿಮಾ ಪ್ರಯುಕ್ತ ನಾಳೆ ಬೆಳಗ್ಗೆ ಮಹಾಭಿಷೇಕ ಮತ್ತು ಸಂಜೆ ೬ ಗಂಟೆಗೆ ಸಾಮೂಹಿಕ ಪ್ರಾರ್ಥನೆಗಳವೆ ವಿ|| ಗೌರಮ್ಮ, ನಾಗರಾಜ್‌ರವರಿಂದ ಕಾವ್ಯ ವಾಚನವಿದೆ. ಕನ್ನಡ ವಿಶ್ವಕೋಶದ ವಿಶೇಷಾಧಿಕಾರಿ ಶ್ರೀ ಕೆ ಎಸ್ ಧರಣೇಂದ್ರಯ್ಯನವರು ಸರ್ವ ಧರ್ಮ ಸಮನ್ವಯ ಎಂಬ ವಿಚಾರವಾಗಿ ಭಾಷಣ ಮಾಡುವರು ವಿದ್ಯಾ ಮಂತ್ರಿ ಶ್ರೀ ಎ. ವೆಂಕಟಪ್ಪನವರು ಭಾಗವಹಿಸುವರು

WANTED

A Dark Room Assistant with good experience in photography. Apply in person to:-

PHOTO FLASH,

Gayathri Bhavan, Mysore

ಸತ್ಯಮೇವ ಜಯ........

ಬೆಳ್ಳಗಿರುವುದನ್ನೇ ಹಾಲೆಂದು ಮಾರಿ ಹಣ ಸಂಪಾದಿಸುವವನ ಗುಟ್ಟು ಎಂದಾದರೂ ಬಯಲಾಗುತ್ತದೆ ಹಾಲಿನ ಗುಣವೇ ಅತನ ಹೆಸರನ್ನು ಉಳಿಸುತ್ತದೆ ಅಪ್ಪಟ ಹಸುವಿನ ಹಾಲು ಕ್ಷೀರ ಕೇಂದ್ರ, 94 ತ್ಯಾಗರಾಜ ರಸ್ತೆ ಕ್ರಾಸ್-ಇವರಿಂದ ನಿಮ್ಮ ಮನೆ ಬಾಗಿಲಿಗೇ ಯಾವ ಹೆಚ್ಚಿನ ಛಾರ್ಜೂ ಇಲ್ಲದೆ ತಲುಪುತ್ತದೆ ವಿವರಗಳಿಗೆ ವಿಚಾರಿಸಿ, ಅಥವಾ ಲೋಕಲ್ ಪೋಸ್ಟ್ ಕಾರ್ಡ್ ಬರೆಯಿರಿ.

Edited, Printed and Published by A. R Nagarajan at Sadhvi Press, D Subbiah Road Mysore

ವನವಾಸಕ್ಕಾಗಿ ಮಂತ್ರಿಗಳಿಗೆ ಕರೆ

ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರುಗಳು ಮಾಡುತ್ತಿದ್ದಂತೆ ಮಂತ್ರಿಗಳು ಆರು ತಿಂಗಳ ಕಾಲ ವನವಾಸ ಮಾಡಿ ಅರಣ್ಯಗಳನ್ನು ಅಭಿವೃದ್ಧಿಪಡಿಸಬೇಕೆಂದು ಮದ್ರಾಸು ವಿಧಾನ ಸಭೆಯಲ್ಲಿ ಕಾಂಗ್ರೆಸ್ ಸುಧಾರಣೆ ಪಕ್ಷದ ಸದಸ್ಯ ಆಗನ್ನಾಥರವರು ಸಲಹೆ ಮಾಡಿರುತ್ತಾರೆ.

THE BANK OF MYSORE, LTD.

MYSORE

The normal working hours of the Clearing Banks IN MYSORE CITY will be restored FROM MONDAY THE 15TH JULY 1957 as under:-

Week Days :

10-30 A.M. to 2-30 p.m.

Saturdays:

10-30 A.M. to 12-30 noon

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಒಂಟಿಕೊಪ್ಪಲು ಗ್ರಾಮದ ಕ್ಲಿಷ್ಟ, ನನ್ನ ತಂದೆಯವರಾದ ಕಾಡಯ್ಯನವರು ಕಾಲವಾದಮೇಲೆ ಅವರ ವಾರಸುದಾರರಾಗಿ, ನನ್ನ ತಾಯಿ ಸಣ್ಣಮ್ಮ, ತಮ್ಮಂದಿರುಗಳಾದ ಕೆ. ವಿಷಕಂಠ ಮತ್ತು ಕೆ ಶಿವನಂಜಪ್ಪ, ತಂಗಿ ಲಕ್ಷ್ಮಮ್ಮ ಮತ್ತು ನಾನು, ನಮ್ಮಗಳ ಒಟ್ಟು ಕುಟುಂಬಕ್ಕೆ ಸೇರಿದ ಷೆಡ್ಯೂಲ್ ಸೊತ್ತುಗಳ ಹಕ್ಕುದಾರರುಗಳಾಗಿರುತ್ತೇವೆ ಹಾಲಿ ನನ್ನನ್ನು ಒಟ್ಟು ಕುಟುಂಬದಿಂದ ಓಡಿಸಿ ಒಟ್ಟು ಕುಟುಂಬದ ಸೊತ್ತುಗಳೆಲ್ಲವನ್ನೂ ತಾವೇ ಅನುಭವಿಸುತ್ತಿದ್ದಾರೆ, ನನಗೆ ನ್ಯಾಯ ರೀತ್ಯ ಸೇರಬೇಕಾದ ಭಾಗವನ್ನು ಕಗಾದೆ ಮಾಡಿದಾಗ್ಯೂ ಕೊಡದೆ, ವೃಥಾ ತೊಂದರೆ ಕೊಡುವ ದೃಷ್ಟಿಯಿಂದ ಷೆಡ್ಯೂಲ್ ಸ್ವತ್ತುಗಳನ್ನು ಪರಭಾರೆ ಮಾಡುವ ಏರ್ಪಾಡು ನಡೆಸುತ್ತಿರುತ್ತಾರೆ ಆ ರೀತಿ, ಷೆಡ್ಯೂಲ್ ಸ್ವತ್ತುಗಳನ್ನು ಯಾರಾದರೂ ಆಧಾರ, ಭೋಗ್ಯ, ಕ್ರಯ ವಗ್ಗೈರೆ ಮಾಡಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ ಮತ್ತು ಎಷ್ಟು ಮಾತ್ರಕ್ಕೂ ನನ್ನ ಹಕ್ಕನ್ನು ಬಂಧಿಸುವುದಿಲ್ಲವೆಂದು ಈ ಮೂಲಕ ತಿಳಿಸುತ್ತೇನೆ

ಷೆಡ್ಯೂಲ್ :- 1) ಮೈಸೂರು ಸಿಟಿ ಒಂಟಿಕೊಪ್ಪಲಿನಲ್ಲಿರುವ D. No 2588ನೇ ನಂಬರು ಮನೆಯ ಉತ್ತರಾಭಿಮುಖ ಚೆಕ್ಕುಬಂದಿ-ಪೂ|| ರಸ್ತೆ, ಪ|| ರಸ್ತೆ, ದ|| ವೆಂಕಟಪ್ಪನವರ ಮನೆ, ಉತ್ತರಕ್ಕೆ ಬೊಂತಯ್ಯನವರ ಖಾಲಿ ಜಾಗ. 2) ಡಿಟೋ ಗ್ರಾಮದಲ್ಲಿ ಇರುವ D. ನಂ. 2619/1ಕ್ಕೆ ಚೆಕ್ಕುಬಂದಿ-ಪೂ|| ಕೆರೆ ಸರವೆಬ್ಬ, ಉತ್ತರಕ್ಕೆ ರಸ್ತೆ, ಪ|| ಕಾಡಬಸವೇಗೌಡರ ತಂಜಯ್ಯನವರ ಮನೆ, ಈ ಮಧ್ಯೆ ಇರುವ ಹೆಂಚಿನಿಂದ ಕಟ್ಟಿಸಿರುವ ಮನೆ.

ಕೆ. ಕಾಡಯ್ಯ

ಅಬೀದ್‌ರವರ ಹರಾಜು ಮಾರಾಟ

14—7—57 ನೇ : ಭಾನುವಾರ ಬೆಳಿಗ್ಗೆ 10 ಘಂಟೆಗೆ ; ಶೋರೂಂ ಬಳಿ

ರೆಮಿಂಗ್ಟನ್ ಟೈಪ್‌ರೈಟರ್, ಎಚ್. ಎಂ ವಿ ರೇಡಿಯೊ ಮತ್ತು ಗ್ರಾಮಾಫೋನ್, ಒಲೆ ಸಮೇತ ಇರುವ ಸ್ಟೀಮಿಯೆಟ್ ಕುಕ್ಕರ್, ಕೌಂಟರುಗಳು, ಷೋ ಕೇಸುಗಳು, ಮಂಚಗಳು, ಮರದ ರ್‍ಯಾಕುಗಳು, ಸ್ಟ್ಯಾಂಡಿಗೆ ಜೋಡಿಸಿರುವ ಕಬ್ಬಿಣದ ತೊಟ್ಟಿಲು, ವಾಲ್ ಸೇಫ್, ಬೊಂಬಾಯಿ ಉತ್ತಮ ಪೀಠೋಪಕರಣಗಳು ಮತ್ತು ಇತರ ಉಪಯುಕ್ತ ವಸ್ತುಗಳು.

13ನೇ ತಾರೀಖು ಶನಿವಾರ ಸಂಜೆ 4 ರಿಂದ 6 ಘಂಟೆವರೆಗೆ ಪದಾರ್ಥಗಳನ್ನು ಅಬೀದ್ಸ್ ಮಾರಬಹುದು ನಗದು ವ್ಯಾಪಾರ

ಅಬೀದ್ಸ್,

ಫೋನ್ 473 : ಸ್ಯಾಂಕ್ಕಿ ಬೌಕ : ಮೈಸೂರು

ಚಾಮುಂಡೇಶ್ವರಿ ಟಾಕೀಸ್

12—7—57 ರಿಂದ : ಒಂದು ವಾರ ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಚಕ್ರವರ್ತಿ ತಿರುಮಗಳ್ (ತಮಿಳು)

ಭೂಮಿಕೆ :- ಎಂ ಜಿ ರಾಮಚಂದ್ರನ್, ಅಂಜಲಿದೇವಿ, ತಂಗವೇಲು, ಎಸ್. ಎಸ್. ಕೃಷ್ಣನ್, ಟಿ. ಎ. ಮಧುರಂ ಮುಂತಾದವರು

ಮುಂದಿನ ಬದಲಾವಣೆ.— ಜೆಮಿನಿ ಗಣೇಶ ಮತ್ತು ಸಾವಿತ್ರಿ ಪಾತ್ರವಹಿಸಿರುವ ತಮಿಳು ಚಿತ್ರ **ಯಾರ ಪೈಯನ್**

Morning Shows On 13th & 14th only at 10-30 A.M

ON THE CIRCUS ARENA

ಟೆಲಿಫೋನ್ ನಂ. 541 — — ಟೆಲಿಗ್ರಾಂ : ಅಭಿರುಚಿ

ನ್ಯೂ ಚಾಮುಂಡೇಶ್ವರಿ ಕೆಫೆ,

ಇರ್ವಿನ್ ರಸ್ತೆ, ಮೈಸೂರು.

ತಾ 10-7-1957 ರಿಂದ ರಿಯಾಯಿತಿ ದರ

ವಿದ್ಯಾರ್ಥಿಗಳಿಗೂ ಬಾಯಿಂ ಬೋರ್ಡರುಗಳಿಗೂ ಊಟದ 30 ಟಿಕೆಟ್ಟುಗಳು ಒಂದಕ್ಕೆ ರೂ. 16-8-0 ಮಾತ್ರ. ಪ್ರೊ|| ಸಿ. ಬಿ. ಎಂ. ಚಂದ್ರಯ್ಯ.

ಒಲಂಪಿಯಾ ಟಾಕೀಸ್ 12-7-57 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3. ಪ್ರದರ್ಶನಗಳು : 3-30, 6-30 ಮತ್ತು 9-45ಕ್ಕೆ

ರಜಪೂತರ ಮತ್ತು ಮೊಗಲರ ವೈಭವದ ಹಿನ್ನೆಲೆಯಿಂದ ಕೂಡಿದ, ದಿನೇಶ್ ಫಿಲಂಸ್‌ರವರ ಅಮೋಘ ಚಾರಿತ್ರಿಕ ಚಿತ್ರ

ಅಮರ ಸಿಂಹ ರಾಠೋಡ್

(AMAR SINGH RATHAUR)

(ಮೊಗಲ್ ಸಾಮ್ರಾಜ್ಯವನ್ನೇ ನಡುಗಿಸಿದ ಧೀರ)

ಪಾತ್ರ :- ನಿರೂಪರಾಯ್, ಜೈರಾಜ್, ಅರ್ ನಾಸಿರ್, ಯಶೋಧರಾ ಕಟ್ಜು, ಹೀರೋ, ವೀಣಾ ಮತ್ತಿತರರು

ಉತ್ತರ ಇಂಡಿಯಾದಲ್ಲಿ ಖ್ಯಾತಿ, ಝಿಕಲ್ ಝಿನ್ನಕ್ ಪಾಯಲ್ ಬಾಜೆ, ಖ್ಯಾತಿ ಚಿತ್ರಗಳ ನಿರ್ಮಾಪಕರು ನಿರ್ಮಿಸಿ ಪ್ರಸ್ತುತಪಡಿಸಿದೆ

ಅಂಚೆ ನೋಂ. ನಂ 792

OWN YOUR AUTO!
(50 monthly Instalments)
Apply for prospectus etc with Re 1 stamps
AUTOMOBILE ASSOCIATION OF INDIA
New Statue Circle,
MYSORE



ಇಂದಿನ ಪತ್ರಿಕೆ 2 ನಯಾ ಪೈಸೆ

ಗಾಡಿ ಬೆಳ್ಳಿ ಕೂಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಆರ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸರ್ದಾರ್ ಪಟೇಲ್ ರಸ್ತೆ,
ಮೈಸೂರು

ಸಂಪುಟ : ೧೫] SADHVI । SATURDAY 13—7—1957 ಮೈಸೂರು । ಶನಿವಾರ ೧೩—೭—೧೯೫೭ । [ಸಂಚಿಕೆ : ೩೩೪

ಪಾಕಿಸ್ತಾನಕ್ಕೆ ಬಾಂಬರ್ ರವಾನೆಗೆ ಅಮೆರಿಕದ ತಿರಸ್ಕಾರ

ಪಾಕಿಸ್ತಾನಕ್ಕೆ ಬಾಂಬರ್ ವಿಮಾನ ಕೊಡಲು ಅಮೆರಿಕದ ನಿರಾಕರಣೆ

ಪಾಕಿಸ್ತಾನಕ್ಕೆ ಬಾಂಬರು ಸಹಾಯದ ಪ್ರಮಾಣವನ್ನು ಹೆಚ್ಚಿಸಲೂ ಮತ್ತು ಈಗ ಒದಗಿಸಲಾಗುತ್ತಿರುವ ಸೈನ್ಯ ಸಾಧನಗಳ ಸಂಖ್ಯೆಯನ್ನು ಏರಿಸಲೂ ಅಮೆರಿಕವು ಒಪ್ಪಿರುವುದಾದರೂ, ಬಾಂಬರು ವಿಮಾನಗಳನ್ನು ಕೊಡಬೇಕೆಂದು ಪಾಕಿಸ್ತಾನವು ಮಾಡಿರುವ ಬೇಡಿಕೆಯನ್ನು ಅದು ನಿರಾಕರಿಸಿರುವುದೆಂದು ವರದಿಯಾಗಿದೆ. ಬಾಂಬರುಗಳನ್ನು ಒದಗಿಸಿದರೆ ಅದರಿಂದ ಭಾರತದಲ್ಲಿ ಪ್ರತಿಕೂಲವಾದ ಮನೋಭಾವವುಂಟಾಗುವುದೆಂದು ಅಮೆರಿಕವು ಭೀತಿಪಟ್ಟಿರುವುದೆಂದು ತಿಳಿದುಬಂದಿದೆ. ಪಾಕಿಸ್ತಾನದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಸಂಭವಿಸಬಹುದಾದ ಕ್ಷಾಮಗಳನ್ನು ತಡೆಗಟ್ಟಲು ಅಲ್ಲಿನ ಪ್ರಧಾನಿ ಸುಹ್ರಾವರ್ದಿಯವರು ಬೇಡಿರುವ ೩೦ ಲಕ್ಷ ಟನ್ ಧಾನ್ಯವನ್ನು ಪಡೆಯಲು ವಿಫಲರಾಗಿರುವರೆಂದೂ ಹೇಳಲಾಗಿದೆ

ಅಫ್ಘಾನಿಸ್ತಾನದ ದೊರೆ ಮತ್ತು ಪ್ರಧಾನಿ ಕೊಲೆಗೆ ಸಂಚು ?

ಅಫ್ಘಾನಿಸ್ತಾನದ ದೊರೆ ಜಾಹಿರ್ ಷಾ ಹಾಗೂ ಮತ್ತು ಪ್ರಧಾನಿ ದಾವೂದ್ ಖಾನರವರನ್ನು ಕೊಲೆ ಮಾಡುವ ಬಗ್ಗೆ ಕಾಬೂಲಿನಲ್ಲಿ ಒಳಸಂಚೊಂದು ನಡೆದಿದ್ದಾಗಿ ಪತ್ತೆಯಾಗಿರುವುದೆಂದು ನವ ದೆಹಲಿ ವಾರ್ತಾ ಸಂಸ್ಥೆಯು ತಿಳಿಸಿದೆ ಮಾಜಿ ಹಣಕಾಸಿನ ಮಂತ್ರಿ ಅಬ್ದುಲ್ ಮಲಿಕ್ ಮತ್ತು ಅವರ ಸಹೋದರರೊಬ್ಬರು ಇದಕ್ಕೆ ಪ್ರೇರೇಪಕರಾಗಿರುವರೆಂದೂ, ಸಂಚಿನ ಬಗ್ಗೆ ತನಿಖೆಗಾಗಿ ಎರಡು ಸಮಿತಿಗಳನ್ನು ನೇಮಿಸಲಾಗಿರುವುದೆಂದೂ ವರದಿಯಾಗಿದೆ.

ಆಗಾಖಾನರ ಉತ್ತರಾಧಿಕಾರಿ

ಅಲಿಖಾನರ ಪ್ರಥಮ ಪತ್ನಿಯವರ ಹೊಟ್ಟೆಯಲ್ಲಿ ಹುಟ್ಟಿದ ರಾಜಕುಮಾರ ಕರೀಂರವರು ಆಗಾಖಾನರ ಉತ್ತರಾಧಿಕಾರಿಯಾಗಿದ್ದಾರೆ

ಪೋಲೀಸು ಅಧಿಕಾರಿಯ ಕೊಲೆಗಾಗಿ ಮರಣದಂಡನೆ

ಬಂಗಾರಪೇಟೆಯ ರಾಮಸಮುದ್ರದ ಪೋಲೀಸು ಸಬ್ ಇನ್ಸ್‌ಪೆಕ್ಟರ್ ಶ್ರೀ ಮಾಯಾಚಾರ ಎಂಬುವರನ್ನು ಕಳೆದ ಮಾರ್ಚಿಯಲ್ಲಿ ಪೋಲೀಸು ಠಾಣೆಯಲ್ಲಿ ಚಾಕುವಿನಿಂದ ಇರಿದು ಕೊಲೆ ಮಾಡಿದುದಕ್ಕಾಗಿ ರಾಮುಡು ಎಂಬುವನಿಗೆ ಕೋಲಾರದ ಸೆಷನ್ಸ್ ನ್ಯಾಯಾಧೀಶರು ಮರಣ ದಂಡನೆಯನ್ನು ವಿಧಿಸಿರುತ್ತಾರೆ

ಎಂ. ಡಿ. ಶಿವನಂಜಪ್ಪನವರಿಗೆ ಕೇಂದ್ರ ಸರ್ಕಾರದ ಹುದ್ದೆ

ಸಿಂಲಾದಲ್ಲಿ ಐ ಎ. ಎಸ್ ಸಿಬ್ಬಂದಿ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿರುವ ಮೈಸೂರಿನ ಅಧಿಕಾರಿಗಳಾದ ಶ್ರೀ ಎಂ. ಡಿ ಶಿವನಂಜಪ್ಪನವರ ತರಪೇತು ಮುಗಿದನಂತರ ಅವರನ್ನು ಅಂಚೆ ಮತ್ತು ತಂತಿ ಇಲಾಖೆಯ ಡೈರೆಕ್ಟರ್ ಜನರಲ್ ಕಛೇರಿಯಲ್ಲಿ ದೂರುಗಳ ಪರಿಶೀಲನಾ ಡೈರೆಕ್ಟರಾಗಿ ನೇಮಿಸಲಾಗುವುದು

ವಿನೋಬಾ ಭಾವೆಯವರ ಸ್ವಾಗತಕ್ಕೆ ವ್ಯವಸ್ಥೆ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯ ರಚನೆ

ಮೈಸೂರು ೧೨

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ಜಿಲ್ಲಾ ಭೂದಾನ ಕಾರ್ಯಕರ್ತರು ಮತ್ತು ಸವ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯು ನಡೆದು, ಬರುವ ಸೆಪ್ಟೆಂಬರ್ ತಿಂಗಳು ಜಿಲ್ಲೆಯಲ್ಲಿ ಆಚಾರ್ಯ ವಿನೋಬಾ ಭಾವೆಯವರ ಪ್ರವಾಸದ ವ್ಯವಸ್ಥೆ ಮಾಡಲು ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಎಸ್ ಚೆನ್ನಯ್ಯನವರು ಅಧ್ಯಕ್ಷರಾಗಿಯೂ ಮತ್ತು ಶ್ರೀಗಳಾದ ಎಸ್ ವಿ. ಮಂಜುನಾಥ್ ಮತ್ತು ಎಸ್ ಎಸ್ ಶಾಸ್ತ್ರಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

ಜಿಲ್ಲೆಯಲ್ಲಿ ಅಖಿಲ ಭಾರತ ಭೂದಾನ ಕಾರ್ಯಕರ್ತರ ಶಿಬಿರ ಮತ್ತು ಸರ್ವ ಪಕ್ಷಗಳ ಮುಖಂಡರ ಸಮ್ಮೇಳನವನ್ನು ಸೇರಿಸುವಂತೆ ವಿನೋಬಾಜಿಯವರನ್ನು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು ಅಧ್ಯಕ್ಷರು ಭಾಷಣ ಮಾಡಿ ಭೂದಾನ ಚಳುವಳಿಗೆ ಎಲ್ಲ ಪಕ್ಷಗಳ ಸಹಕಾರವು ಬೇಕೆಂದೂ, ಆಚಾರ್ಯರಿಗೆ ವೈಭವದ ಸ್ವಾಗತವೀಯಬೇಕೆಂದೂ ಸೂಚಿಸಿದರು.

ಗುರು ಪೂರ್ಣಿಮೆ ಕಾರ್ಯಕ್ರಮ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ಗುರು ಪೂರ್ಣಿಮೆ ಪ್ರಯುಕ್ತ, ನಾಳೆ ಬೆಳಗ್ಗೆ ಅಭಿಷೇಕ ಮತ್ತು ೧೦॥ ಗಂಟೆಗೆ ಸರ್ವ ಸದಸ್ಯರ ಸಭೆ ಮತ್ತು ಸಂಜೆ ೬ ಗಂಟೆಗೆ ಸಾಮೂಹಿಕ ಪ್ರಾರ್ಥನೆಗಳೂ, ನಂತರ ೭॥ ಕೊಣನೂರು ಸೀತಾರಾಮಶಾಸ್ತ್ರಿಗಳವರಿಂದ ಹರಿಕಥಾ ಕಾಲಕ್ಷೇಪವೂ ಇವೆ. ಬೆಂಗಳೂರು ಮೇಯರ್ ಶ್ರೀ ಜನಾಭಾಯಿ ದೇವಿದಾಸ್‌ರವರ ಸಮ್ಮುಖದಲ್ಲಿ ಶ್ರೀ ಎಂ ಯಾಮುನಾಚಾರ್ಯರು ಮಹಾತ್ಮರು ತೋರಿಸಿದ ಭಕ್ತಿ ಮಾರ್ಗ ಎಂಬ ವಿಚಾರವಾಗಿ ಭಾಷಣ ಮಾಡುವರು.

ಉಪನ್ಯಾಸ

ರಾಜಧಾನಿಯ ಜಯನಗರದ ಬಡಾವಣೆಯಲ್ಲಿರುವ ಪೌರಾಣಿಕ ಸಾಲಿಗ್ರಾಮದ ಶ್ರೀಕಂಠ ಶಾಸ್ತ್ರಿಗಳ ಮನೆಯಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಯಿಂದ ೬ರವರೆಗೆ "ಲಿಪಿ ಮತ್ತು ಅಕ್ಷರಗಳ ಸ್ವರೂಪ ಮಹಿಮೆ'' ಎಂಬ ವಿಷಯವಾಗಿ ನಿವೃತ್ತ ಸೂಪರಿಂಟೆಂಡಿಂಗ್ ಎಂಜಿನಿಯರ್ ಶ್ರೀ ಎಂ ಆರ್ ಕೃಷ್ಣಮೂರ್ತಿರಾಯರು ಉಪನ್ಯಾಸ ಮಾಡುವರು.

ಸಟ್ಟಾ ಜೂಜಾಟಕ್ಕಾಗಿ ದಂಡ

ರೈಲ್ವೆ ವರ್ಕ್‌ಷಾಪ್ ಬಳಿ ಮೊನ್ನೆ ಮದನಗೋಪಾಲರಾವ್, ಜೀವೋಜಿರಾವ್ ಮತ್ತು ಬಾಬೂಸಾಬ್‌ರವರು ನ್ಯೂಯಾರ್ಕ್ ಹತ್ತಿ ಸಟ್ಟಾ ಜೂಜಾಡುತ್ತಿದ್ದರೆಂದು ಲಕ್ಷ್ಮೀಪುರಂ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಪಾದಿತರಿಗೆ ನೆನ್ನೆ ತಲಾ ೨೫ ರೂ ದಂಡ ವಿಧಿಸಲಾಯಿತು.

ವಿಧಾನ ಸಭೆಯಲ್ಲಿ "ಸದಾರಮೆ ನಾಟಕ"ದ ಪ್ರಸ್ತಾಪ

ವಿಧಾನ ಸಭಾಧ್ಯಕ್ಷರಿಂದ ರೂಲಿಂಗ್

ಬೆಂಗಳೂರು ೧೨

ನೆನ್ನೆ ವಿಧಾನ ಸಭೆಯ ಚರ್ಚೆ ಸಮಯದಲ್ಲಿ ಸಚಿವ ಶ್ರೀ ಪ್ರೂಣಚ್ಚರವರು ವಿಸ್ತೃತ ಮೈಸೂರಿನ ಐದು ಭಾಗಗಳಿಗೂ ಒಪ್ಪಿತವಾದ ಆಯವ್ಯಯ ಪಟ್ಟಿ ತಯಾರಿಕೆಯು ಕಷ್ಟಕರವಾದ ವಿಷಯವೆಂದೂ, ಆ ಬಗ್ಗೆ ಟೀಕಿಸುವುದು ಸುಲಭವೆಂದೂ ಹೇಳಿದಾಗ, ವಿರೋಧ ಪಕ್ಷದ ಶ್ರೀ ಬಿ.ಕೆ ಪುಟ್ಟರಾಮಯ್ಯನವರು "ಕಷ್ಟವಾದರೆ ಬಿಟ್ಟುಬಿಡಲಿ, ನಾವು ಮಾಡಿಕೊಂಡು ಹೋಗುತ್ತೇವೆ" ಎಂದು ತಿಳಿಸಿದರು ಸಚಿವರು ಉತ್ತರವಿತ್ತು 'ತಮ್ಮ ಕೈಲಿ ಜವಾಬ್ದಾರಿ ವಹಿಸಿದರೆ ಸದಾರಮೆ ನಾಟಕವಾದೀತು" ಎಂದರು. (ಸಭೆಯಲ್ಲಿ ನಗು)

ಶ್ರೀ ಪುಟ್ಟರಾಮಯ್ಯನವರು ಮಾತನಾಡಿ ಸದಾರಮೆ ನಾಟಕದಲ್ಲಿ ಕಳ್ಳರು ಕೂಡ ಬರುವರೆಂದೂ, ವಿರೋಧ ಪಕ್ಷವನ್ನು ಆ ನಾಟಕಕ್ಕೆ ಹೋಲಿಸುವುದು ಸರಿಯೇ ಎಂಬುವರ ಬಗ್ಗೆ ರೂಲಿಂಗ್ ಆಗಬೇಕೆಂದೂ ಬೇಡಿದರು. "ಸದಾರಮೆ" ಪದವು "ಅನ್‌ಪಾರ್ಲಿಮೆಂಟರಿ" ಅಲ್ಲವೆಂದು ಅಧ್ಯಕ್ಷರು ತಿಳಿಸಿದರು

ಕೇಂದ್ರ ಸರ್ಕಾರದ ೫ ಲಕ್ಷ ನೌಕರರಿಂದ ಮುಷ್ಕರ

ಆಗಸ್ಟ್ ೯ ರಿಂದ ಆರಂಭಕ್ಕೆ ಕರೆ

ಕೇಂದ್ರ ಸರ್ಕಾರದ ನಾನಾ ಇಲಾಖೆಗಳ ನೌಕರರ ೧೪ ಸಂಘಗಳ ೧೫೦ ಮಂದಿ ಪ್ರತಿನಿಧಿಗಳು ನೆನ್ನೆ ಸೇರಿದ್ದ ಸಭೆಯಲ್ಲಿ, ಬರುವ ತಿಂಗಳು ೮-೯ರ ಮಧ್ಯ ರಾತ್ರಿಯಿಂದ ಕೇಂದ್ರದ ಕೆಳದರ್ಜೆ ನೌಕರರು ಮುಷ್ಕರ ಹೂಡುವುದಕ್ಕೆ ಕರೆಯಿತ್ತಿತು ಸಂಸ್ಥೆಯು ಒಟ್ಟು ೫ ಲಕ್ಷ ಮಂದಿ ನೌಕರರಿಗೆ ಈ ಬಗ್ಗೆ ಸೂಚನೆಯಿತ್ತಿತು. ಅಂಚೆ ಮತ್ತು ತಂತಿ ಇಲಾಖೆ, ನಾಗರಿಕ ವಿಮಾನ ಹಾರಾಟ, ವರಮಾನ ತೆರಿಗೆ, ಕೇಂದ್ರ ಅಬ್ಕಾರಿ ಸುಂಕ ಮತ್ತು ಸಿವಿಲ್ ಮತ್ತು ಆಡಿಟ್ ಇಲಾಖೆಗಳ ನೌಕರರ ಸಂಘದವರು ಈಗಾಗಲೇ ಮುಷ್ಕರದ ಪರವಾಗಿ ಅಭಿಮತವಿತ್ತಿರುವರು.

ದ್ವಿತೀಯ ಸಂಬಳದ ಸಮಿತಿ ರಚನೆಗಾಗಿಯೂ, ಹೆಚ್ಚಿನ ತುಟ್ಟಿಭತ್ಯ ಮತ್ತು ಸಂಬಳದಲ್ಲಿ ತುಟ್ಟಿಭತ್ಯದ ವಿಲೀನಕ್ಕಾಗಿಯೂ,ಅವರುಗಳು ಬೇಡಿಕೆಯಿಟ್ಟಿರುವರು.

ರೇವು ಕೆಲಸಗಾರರ ಮುಷ್ಕರವಿಲ್ಲ

ಬೊಂಬಾಯಿಯ ೩೦ ಸಾವಿರ ರೇವು ಕೆಲಸಗಾರರು ನೆನ್ನೆ ಮಧ್ಯ ರಾತ್ರಿಯಿಂದ ನಡೆಸಬೇಕಾಗಿದ್ದ ಮುಷ್ಕರವನ್ನು ನಡೆಸದೆ ನಿಲ್ಲಿಸಿರುತ್ತಾರೆ ಕೇಂದ್ರ ಮಂತ್ರಿಗಳಾದ ಲಾಲ್‌ಬಹದ್ದೂರ್ ಶಾಸ್ತ್ರಿ ಮತ್ತು ರಾಜಬಹದ್ದೂರ್‌ರವರುಗಳಿಗೂ, ಕೆಲಸಗಾರರ ಪ್ರತಿನಿಧಿಗಳಿಗೂ ನೆನ್ನೆ ದೆಹಲಿಯಲ್ಲಿ ಚರ್ಚೆಯಾಗಿ ಒಪ್ಪಂದಕ್ಕೆ ಬರಲಾಯಿತು.

○ ನಾಂದೂರಿನ ಆಸ್ಪತ್ರೆಯನ್ನು ವಿಸ್ತರಿಸಲು ಅಲ್ಲಿನ ಮಾಜಿ ರಾಜರು ೨೫,೦೦೦ ರೂ. ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ ಸರ್ಕಾರದವರೂ ಸಹ ಅಷ್ಟೇ ಹಣವನ್ನು ಕೊಟ್ಟು, ಆಸ್ಪತ್ರೆಯನ್ನು ವಿಸ್ತರಿಸಬೇಕೆಂದು ಅವರು ಕೋರಿರುತ್ತಾರೆ

ಶಾಸನಸಭಾ ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗದ ಆಯ್ಕೆ

ನಿಜಲಿಂಗಪ್ಪನವರು ನಾಯಕರು

ಸ್ವಂ. ಸು. ಪ್ರೋ] ಬೆಂಗಳೂರು ೧೨

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗದ ಚುನಾವಣೆಯು ಈ ದಿನ ನಡೆದು, ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಾಯಕರಾಗಿಯೂ, ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಉಪ ನಾಯಕರಾಗಿಯೂ ಆರಿಸಲ್ಪಟ್ಟರು ಶ್ರೀ ಎ ವಿ ನರಸಿಂಹರೆಡ್ಡಿಯವರು ಕಾರ್ಯದರ್ಶಿ ಮತ್ತು ಶ್ರೀ ಎಲ್. ಎಸ್ ವೆಂಕಾಜಿರಾಯರು ಖಜಾಂಚಿಯಾಗಿ ಚುನಾಯಿತರಾದರು. ಶ್ರೀಮತಿ ಬಸವರಾಜೇಶ್ವರಿ ಮತ್ತು ಶ್ರೀ ಟಿ ವೆಂಕಟರಮಣಯ್ಯನವರು ಜಂಟಿ ಕಾರ್ಯದರ್ಶಿಗಳಾಗಿಯೂ, ಶ್ರೀ ಎ. ಹುಚ್ಚಮಾಸ್ತಿಗೌಡರು ವ್ಹಿಪ್ ಆಗಿಯೂ ನೇಮಿಸಲ್ಪಟ್ಟರು. ಶ್ರೀಗಳಾದ ಕಡಿದಾಳ್ ಮಂಜಪ್ಪನವರೂ ಸೇರಿ ೯ ಜನರು ಕಾರ್ಯ ಸಮಿತಿ ಸದಸ್ಯರಾದರು

ಎಂ. ಎಸ್. ಹಿರಣ್ಣಯ್ಯನವರು ರೆವಿನ್ಯೂ ಬೋರ್ಡಿನ ಅಧ್ಯಕ್ಷರು

ಗುಲ್ಬರ್ಗಾ ಕಮಿಷನರಾಗಿ ಜೆ ಎಂ ನಾಗರಾಜಾಚಾರ್ಯರ ನೇಮಕ

ಬೆಂಗಳೂರು ೧೨

ಶ್ರೀ ಎಂ ಎಸ್ ಹಿರಣ್ಣಯ್ಯನವರ ರಜಾ ಮುಗಿದನಂತರ ಸಂಸ್ಥಾನದ ರೆವಿನ್ಯೂ ಬೋರ್ಡಿನ ಅಧ್ಯಕ್ಷರಾಗುವಂತೆ ಅವರನ್ನು ನೇಮಿಸಲಾಗಿದೆ ಬೆಂಗಳೂರು ಡಿವಿಜನ್ನಿನ ಕಮಿಷನರ್ ಶ್ರೀ ಜೆ. ಎಂ ನಾಗರಾಜಾಚಾರ್ಯರನ್ನು ಗುಲ್ಬರ್ಗಾ ಡಿವಿಜನ್ನಿನ ಕಮಿಷನರನ್ನಾಗಿಯೂ, ರೆವಿನ್ಯೂ ಬೋರ್ಡಿನ ಸದಸ್ಯ ಶ್ರೀ ಆರ್ ಜೆ ರೇಗೋರವರನ್ನು ಶ್ರೀ ನಾಗರಾಜಾಚಾರ್ಯರ ಸ್ಥಾನಕ್ಕೂ ನೇಮಿಸಲಾಗಿದೆ.

ಉಪಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಭಾಗವಹಿಸುವಂತಿಲ್ಲ

ವಿಧಾನ ಸಭಾಧ್ಯಕ್ಷರ ರೂಲಿಂಗ್

ಬೆಂಗಳೂರು ೧೨

ನೆನ್ನೆ ವಿಧಾನ ಸಭೆಯಲ್ಲಿ ಅಧ್ಯಕ್ಷ ಶ್ರೀ ಕಂಠಿಯವರು ರೂಲಿಂಗ್ ಇತ್ತು ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಉಪ ಮಂತ್ರಿಗಳು ಕೂತಬಾರದೆಂದೂ ಮತ್ತು ಸರ್ಕಾರದ ಪರವಾಗಿ ಭಾಗವಹಿಸಕೂಡದೆಂದೂ ಸೂಚಿಸಿದರು ನೆನ್ನೆ ಶ್ರೀ ಸಿ. ಜೆ ಮುಕ್ಕಣ್ಣಪ್ಪನವರು ಸಭೆಯಲ್ಲಿ ಎತ್ತಿದ ಪ್ರಶ್ನಾಬಾಧ್ಯತಾ ಸೂಚನೆ ಸಂಬಂಧವಾಗಿ ಅಧ್ಯಕ್ಷರು ಮಾತನಾಡಿ, ಕೇಂದ್ರ ಸರ್ಕಾರದಿಂದ ಈ ಬಗ್ಗೆ ವಿವರಣೆಯೊಂದು ಬಂದಿರುವುದೆಂದೂ, ಮಂತ್ರಿ ಮಂಡಲದ ಸದಸ್ಯರ ಸ್ಥಾನವಿಲ್ಲದಿದ್ದರೂ ಉಪ ಮಂತ್ರಿಗಳು ವಿಧಾನ ಸಭೆಯಲ್ಲಿ ಭಾಗವಹಿಸಬಹುದೆಂದೂ, ಆದರೆ ಮೇಲ್ಮನೆಯಲ್ಲಿ ಭಾಗವಹಿಸಕೂಡದೆಂದೂ ತಿಳಿಸಿದರು.

○ ಬರುವ ಸೆಪ್ಟೆಂಬರ್ ತಿಂಗಳು ನಡೆಯಬೇಕಾಗಿದ್ದ ಇಂಜನಿಯರಿಂಗ್ ಪರೀಕ್ಷೆಗಳನ್ನು ಅದೇ ತಿಂಗಳು ೧೬ಕ್ಕೆ ಮುಂದುವರಿಸಲಾಗಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಸುಗಂಧಕಾರಿಗಳ ಸನ್ಮಾನ

ಮೈಸೂರು ೧೧

ನಗರದ ಅಗರಬತ್ತಿ ತಯಾರಕರು ಮತ್ತು ಸುಗಂಧಕಾರಿಗಳ ಸಹಕಾರ ಸಂಘದವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರನ್ನು ಗೌರವಿಸಲು ನೆನ್ನೆ ಇಂದ್ರಭವನದಲ್ಲಿ ಸಮಾರಂಭವೊಂದನ್ನು ಏರ್ಪಡಿಸಿದ್ದರು

ಶ್ರೀ ಸಂಪತ್ಕುಮಾರಾಚಾರವರಿಂದ ಪ್ರಾರ್ಥನೆ ನೆರವೇರಿದನಂತರ ಸಂಘದ ಅಧ್ಯಕ್ಷ ಶ್ರೀ ಟಿ ಎಲ್ ಎಸ್ ಉಪಾಧ್ಯಾಯರು ಸ್ವಾಗತ ಭಾಷಣ ಮಾಡಿದರು ಶ್ರೀಗಳಾದ ಎಂ ಆರ್. ಚಿಟ್ಟಪ್ಪ, ಲಕ್ಷ್ಮೀನರಸಿಂಹಯ್ಯ, ನಂಜಪ್ಪಯ್ಯ, ನಾರಾಯಣಾಚಾರ್ ಮತ್ತು ಎಸ್ ಎಸ್ ಶಾಸ್ತ್ರಿಗಳವರು ಭಾಷಣ ಮಾಡಿ ಶ್ರೀ ಚನ್ನಯ್ಯನವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ಸುಗಂಧ ದ್ರವ್ಯಗಳ ಮೇಲೆ ಮಾರಾಟ ತೆರಿಗೆ ವಿನಾಯಿತಿ ಮಟ್ಟ ಹೆಚ್ಚಬೇಕೆಂದೂ, ಆ ಕಸ್ಟಮ್ಸ್ ಕಛೇರಿಯವರಿಂದ ಕಿರುಕುಳಗಳು ತಪ್ಪಬೇಕೆಂದೂ ಶ್ರೀ ಎಸ್ ಎಸ್ ಶಾಸ್ತ್ರಿಯವರು ಕೋರಿದರು

ಶ್ರೀ ಚನ್ನಯ್ಯನವರು ಉತ್ತರವಿತ್ತು, ಸರ್ಕಾರಕ್ಕೆ ವರಮಾನ ಬರುವುದರಲ್ಲಿ ಮೋಸ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದೂ, ವರ್ತಕರಿಗೆ ಅಧಿಕಾರಿಗಳಿಂದ ಆಗಬಹುದಾದ ತೊಂದರೆಗಳನ್ನು ತಪ್ಪಿಸಲು ತಾವು ಪ್ರಯತ್ನಪಡುವುದಾಗಿಯೂ ನುಡಿದರು

ಕಾಂಗ್ರೆಸ್ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯಗಳಿರುವುದು ಸಹಜವಾದರೂ,ಎಂದೂ ವಿರಸಕ್ಕೆ ಅವಕಾಶ ಕೊಡುವುದಿಲ್ಲವೆಂದು ಅವರು ಸೂಚಿಸಿದರು. ಸಂಸ್ಥೆಯಲ್ಲಿ ಭಿನ್ನ ಮತಗಳನ್ನು ಈಗ ಬಗೆಹರಿಸಲಾಗುತ್ತಿರುವುದೆಂದೂ, ಪ್ರತಿ ತಿಂಗಳೂ ಪ್ರದೇಶ ಕಾಂಗ್ರೆಸ್ಸು ಎ ಐ ಸಿ ಸಿ ಗೆ ಸಂಸ್ಥೆ ಮತ್ತು ಸರ್ಕಾರಗಳ ನಡುವೆ ನಡೆದಿರುವ ಸಾಮಾನ್ಯ ರೀತಿಯ ಸಮಾಲೋಚನೆ ಬಗ್ಗೆ ವರದಿಯನ್ನು ಕಳುಹಿಸಬೇಕಾಗಿರುವುದೆಂದೂ ಅವರು ಹೊರಗೆಡಹಿದರು

ಕೋತಿಗಳ ರಫ್ತು ತಪ್ಪಿಸಲು ನೆಹರೂರವರಿಗೆ ಪಾಶ್ಚಾತ್ಯರ ಕರೆ

ಪ್ರಧಾನಿ ನೆಹರೂರವರು ಭಾರತದಿಂದ ಕೋತಿಗಳ ರಫ್ತನ್ನು ತಪ್ಪಿಸಬೇಕೆಂದು ಪ್ರಾಣಿಗಳ ವಧೆಯ ವಿರೋಧದ ವಿಶ್ವ ಮಂಡಲಿಯೊಂದು ಪ್ರಾರ್ಥಿಸಿದೆ ಭಾರತದಿಂದ ಕಳೆದ ೧೭ ತಿಂಗಳಲ್ಲಿ ೧,೫೫,೦೦೦ ಕೋತಿಗಳನ್ನು ರವಾನಿಸಲಾಗಿರುವುದೆಂದೂ, ಅವುಗಳಲ್ಲಿ ಅನೇಕವನ್ನು ಕೊಲ್ಲಲಾಗಿರುವುದೆಂದೂ ಸೂಚಿಸಲಾಗಿದೆ

ದಲೈ ಲಾಮಾರವರ ಪ್ರಾಣಾಪಹಾರ ಪ್ರಯತ್ನ

ಟಿಬೆಟ್ಟಿನ ಗುರು ಮತ್ತು ಅಧಿಕಾರಿಗಳಾದ ದಲೈಲಾಮಾರವರ ಪ್ರಾಣಾಪಹರಣ ಪ್ರಯತ್ನವೊಂದು ನಡೆದುದಾಗಿ ಖಟ್ಮಂಡುವಿನ ಒಂದು ಪತ್ರಿಕೆ ವರದಿ ಮಾಡಿದೆ. ಲಾಮಾರವರು ತಮ್ಮ ಹೊಸ ಬೇಸಿಗೆ ನಿವಾಸವನ್ನು ಪ್ರವೇಶಿಸುತ್ತಿದ್ದಾಗ ಯಾವನೋ ಒಬ್ಬನು ಅವರ ಮೇಲೆ ದೊಡ್ಡ ಚೆಂಡಿನಂತಹ ಪದಾರ್ಥವನ್ನು ಎಸೆದನೆಂದೂ, ಅದು ಅವರಿಗೆ ತಗಲಲಿಲ್ಲವೆಂದೂ ಹೇಳಲಾಗಿದೆ ಅಪರಾಧಿಯ ಬಂಧನವಾಗಿದೆ ಲಾಮಾ ಆಡಳಿತದವರಿಂದ ತನಗೆ ನ್ಯಾಯ ದೊರೆಯಲಿಲ್ಲವೆಂದೂ,ಲಾಮಾರವರಿಗೆ ಈ ವಿಚಾರವನ್ನು ಅರಿಕೆ ಮಾಡಿದ್ದರೂ ಅದಕ್ಕೆ ಗಮನ ಕೊಡಲಿಲ್ಲವೆಂದೂ ದಸ್ತಗಿರಿಯಾದವನು ತಿಳಿಸಿರುತ್ತಾನೆ

ಶ್ರೀಕಂಠೇಶ್ವರ ದೇವಾಲಯದ ವಾರ್ಷಿಕೋತ್ಸವ

ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಬಿ ಸಿ ಚನ್ನರಾಜ ಅರಸ್‌ರವರ ನೇತೃತ್ವದಲ್ಲಿ ನಾಳೆ ವಾರ್ಷಿಕೋತ್ಸವವೂ ಮತ್ತು ಮಂಟಪೋತ್ಸವವೂ ನಡೆಯುವುವು

ಮಡಕೇರಿ ಕಾಲೇಜು ವಿದ್ಯಾರ್ಥಿಗಳಿಗೆ ಸೌಲಭ್ಯ

ಸಂಸ್ಥಾನದ ನಾನಾ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಇನ್ನು ಮುಂದೆ ಮಡಿಕೇರಿ ಕಾಲೇಜು ವಿದ್ಯಾರ್ಥಿಗಳಿಗೆ ಮೈಸೂರು ವಿದ್ಯಾರ್ಥಿಗಳಂತೆಯೇ ಪ್ರವೇಶ ಸೌಲಭ್ಯ ಮುಂತಾದುವುಗಳನ್ನು ನೀಡಲು ಮೈಸೂರು ವಿಶ್ವವಿದ್ಯಾಲಯದವರು ತೀರ್ಮಾನಿಸಿರುವರು

CITY TUTORIAL COLLEGE

The long awaited chance to appear by Private Study

AJMER INTERMEDIATE

Classes Commenced

MADRAS MATRICULATION

Classes in full swing

Join before 20.7.57

C. T. C Old Agrahar, Mysore

VIDYA TUTORIAL COLLEGE

(Dalvoy High School Buildings)

MYSORE

H. E. L. & C. B. Z.

Classes Commenced in full swing

JOIN AT ONCE

Enquiries - 9-30 to 10 30 A.M. and 5-30 to 7-30 P.M.

ಕೇರಳದ ಮಂತ್ರಿಗೆ ಕೊಲೆ ಬೆದರಿಕೆ

ಕೇರಳದ ಮಂತ್ರಿ ಜೋಸೆಫ್ ಮುಂಡಸ್ಸೇರಿಯವರಿಗೆ ಅನೇಕ ಬೆದರಿಕೆ ಪತ್ರಗಳು ಬಂದಿವೆ ಆ ಪೈಕಿ ಹಲವು ಅವರ ಪ್ರಾಣ ತೆಗೆಯಲಾಗುವುದೆಂದು ಸೂಚಿಸಿವೆ. ಅಲ್ಲಿನ ಸಹಾಯ ಪಡೆಯುವ ಶಾಲೆಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಲಾಗುವುದೆಂದು ಸಚಿವರು ಹೇಳಿರುವುದರ ಬಗ್ಗೆ ಈ ರೀತಿ ಬೆದರಿಕೆ ಹಾಕಲಾಗಿರುವುದೆಂದು ಹೇಳಲಾಗಿದೆ.

ಪರ್ಷಿಯದಲ್ಲಿ ಭೂಕಂಪ ಮತ್ತು ಇನ್‌ಫ್ಲುಯೆಂಜಾ ಹಾವಳಿ

ಪರ್ಷಿಯದ ಉತ್ತರ ಭಾಗದಲ್ಲಿ ಮೊನ್ನೆ ಪುನಃ ಪದೇ ಪದೇ ಭೂಕಂಪಗಳಾದುವು ಕಳೆದ ವಾರ ಅಲ್ಲಿ ಆಗಿದ್ದ ಭೂಕಂಪದಲ್ಲಿ ೩,೦೦೦ ಜನರು ಮೃತಪಟ್ಟರು ಅಷ್ಟೇ ಅಲ್ಲದೆ ಆ ಪ್ರದೇಶದಲ್ಲಿ ಇನ್‌ಫ್ಲುಯೆಂಜಾ ಮತ್ತು ವಿಷಮಶೀತ ಜ್ವರಗಳೂ ಈಗ ಜನರನ್ನು ಕಾಡಿಸುತ್ತಿವೆ

ಗುರು ಪೂರ್ಣಿಮ ಕಾರ್ಯಕ್ರಮ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ಗುರು ಪೂರ್ಣಿಮ ಪ್ರಯುಕ್ತ ನಾಳೆ ಬೆಳಗ್ಗೆ ಮಹಾಭಿಷೇಕ ಮತ್ತು ಸಂಜೆ ೬ ಗಂಟೆಗೆ ಸಾಮೂಹಿಕ ಪ್ರಾರ್ಥನೆಗಳು, ವಿ ಎಲ್ ಗೌರಮ್ಮ, ತ್ಯಾಗರಾಜ್‌ರವರಿಂದ ಕಾವ್ಯವಾಚನವಿದೆ. ಕನ್ನಡ ವಿಶ್ವಕೋಶದ ಪ್ರಧಾನ ಸಂಪಾದಕರಾದ ಶ್ರೀ ಕೆ ಎಸ್ ಧರಣೇಂದ್ರಯ್ಯನವರು ಸರ್ವ ಧರ್ಮ ಸಮನ್ವಯ ಎಂಬ ವಿಚಾರವಾಗಿ ಭಾಷಣ ಮಾಡುವರು ವಿದ್ಯಾಮಂತ್ರಿ ಶ್ರೀ ವಿ. ವೆಂಕಟಪ್ಪನವರು ಭಾಗವಹಿಸುವರು

WANTED

A Dark Room Assistant with good experience in photography. Apply in person to:-

PHOTO FLASH,

Gayathri Bhavan, Mysore

ಸತ್ಯವೇ ಜಯ........

ಬೆಳ್ಳಗಿರುವುದನ್ನೇ ಹಾಲೆಂದು ಮಾರಿ ಹಣ ಸಂಪಾದಿಸುವವನ ಗುಟ್ಟು ಎಂದಾದರೂ ಬಯಲಾಗುತ್ತದೆ ಹಾಲಿನ ಗುಣವೇ ಅತನ ಹೆಸರನ್ನು ಉಳಿಸುತ್ತದೆ ಅಪ್ಪಟ ಹಸುವಿನ ಹಾಲು ಕ್ಷೀರ ಕೇಂದ್ರ 94. ತ್ಯಾಗರಾಜ ರಸ್ತೆ ಕ್ರಾಸ್‌ನವರಿಂದ ನಿಮ್ಮ ಮನೆ ಬಾಗಿಲಿಗೇ ಯಾವ ಹೆಚ್ಚಿನ ಬಾಬ್ತೂ ಇಲ್ಲದೆ ತಲುಪುತ್ತದೆ ವಿವರಗಳಿಗೆ ವಿಚಾರಿಸಿ, ಅಥವಾ ಲೋಕಲ್ ಪೋಸ್ಟ್ ಕಾರ್ಡ್ ಬರೆಯಿರಿ

Edited Printed and Published by A. R Nagarajan at Sadhvi Press, D Subbiah Road Mysore

ವನವಾಸಕ್ಕಾಗಿ ಮಂತ್ರಿಗಳಿಗೆ ಕರೆ

ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರುಗಳು ಮಾಡುತ್ತಿದ್ದಂತೆ ಮಂತ್ರಿಗಳು ಆರು ತಿಂಗಳ ಕಾಲ ವನವಾಸ ಮಾಡಿ ಅರಣ್ಯಗಳನ್ನು ಅಭಿವೃದ್ಧಿಪಡಿಸಬೇಕೆಂದು ಮದ್ರಾಸು ವಿಧಾನ ಸಭೆಯಲ್ಲಿ ಕಾಂಗ್ರೆಸ್ ಸುಧಾರಣೆ ಪಕ್ಷದ ಸದಸ್ಯ ಆಗಸ್ತ್ಯರವರು ಸಲಹೆ ಮಾಡಿರುತ್ತಾರೆ.

THE BANK OF MYSORE, LTD.

MYSORE

The normal working hours of the Clearing Banks IN MYSORE CITY will be restored FROM MONDAY THE 15TH JULY 1957 as under:-

Week Days:

10.30 A M. to 2.30 p.m.

Saturdays.

10.30 A.M. to 12.30 noon

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಒಂಟಿಕೊಪ್ಪಲು ಗ್ರಾಮದ ಲಿಂಗಪ್ಪ, ನನ್ನ ತಂದೆಯವರಾದ ರಾಚಯ್ಯನವರು ಕಾಲವಾದಮೇಲೆ ಅವರ ವಾರಸುದಾರರಾಗಿ, ನನ್ನ ತಾಯಿ ಸಣ್ಣಮ್ಮ, ತಮ್ಮಂದಿರುಗಳಾದ ಕೆ ವಿಷಕಂಠ ಮತ್ತು ಕೆ ಶಿವನಂಜಪ್ಪ, ತಂಗಿ ಲಕ್ಷ್ಮಮ್ಮ ಮತ್ತು ನಾನು, ತಮ್ಮಗಳ ಒಟ್ಟು ಕುಟುಂಬಕ್ಕೆ ಸೇರಿದ ಷೆಡ್ಯೂಲ್ ಸೊತ್ತುಗಳ ಹಕ್ಕುದಾರರುಗಳಾಗಿರುತ್ತೇವೆ ಹಾಲಿ ನನ್ನನ್ನು ಒಟ್ಟು ಕುಟುಂಬದಿಂದ ಓಡಿಸಿ ಒಟ್ಟು ಕುಟುಂಬದ ಸೊತ್ತುಗಳೆಲ್ಲವನ್ನೂ ತಾವೇ ಅನುಭವಿಸುತ್ತಿದ್ದಲ್ಲದೆ, ನನಗೆ ನ್ಯಾಯವಾಗಿ ಸೇರಬೇಕಾದ ಭಾಗವನ್ನು ಕಡಾದೆ ಮಾಡಿದ್ದಾಗ್ಯೂ ಕೊಡದೆ, ವೃಥಾ ತೊಂದರೆ ಕೊಡುವ ದೃಷ್ಟಿಯಿಂದ ಷೆಡ್ಯೂಲ್ ಸ್ವತ್ತುಗಳನ್ನು ಪರಭಾರೆ ಮಾಡುವ ಏರ್ಪಾಡು ನಡೆಸುತ್ತಿರುತ್ತಾರೆ ಆ ರೀತಿ, ಷೆಡ್ಯೂಲ್ ಸ್ವತ್ತುಗಳನ್ನು ಯಾರಾದರೂ ಆಧಾರ, ಭೋಗ್ಯ, ಕ್ರಯ ವಗೈರೆ ಮಾಡಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ ಮತ್ತು ಎಷ್ಟು ಮಾತ್ರಕ್ಕೂ ನನ್ನ ಹಕ್ಕನ್ನು ಬಂಧಿಸುವುದಿಲ್ಲವೆಂದು ಈ ಮೂಲಕ ತಿಳಿಸಿರುತ್ತೇನೆ

ಷೆಡ್ಯೂಲ್ :- 1) ಮೈಸೂರು ಸಿಟಿ ಒಂಟಿಕೊಪ್ಪಲಿನಲ್ಲಿರುವ D No 2588ನೇ ನಂಬರು ಮನೆಯ ಉತ್ತರಾಧಿಕ್ಕೆ ಚೌಕಪುರ-ಪೂ॥ ರಸ್ತೆ, ಪ॥ ರಸ್ತೆ, ದ॥ ವೆಂಕಟಪ್ಪನವರ ಮನೆ, ಉತ್ತರಕ್ಕೆ ಬೋಳಯ್ಯನವರ ಖಾಲಿ ಜಾಗ 2) ಡಿಟೋ ಗ್ರಾಮದಲ್ಲಿ ಇರುವ D ನಂ. 2619/1ಕ್ಕೆ ಚೌಕಪುರ-ಪೂ॥ ಕೇಶವರ್‌ಪ್ಪನವರ ಮನೆ, ಉತ್ತರಕ್ಕೆ ರಸ್ತೆ, ಪ॥ ಕಾಡಪ್ಪನವರ ಗೋಡೆ ಸಣ್ಣಮ್ಮನವರ ಮನೆ, ಈ ಮಧ್ಯೆ ಇರುವ ಹೆಂಚಿನ ಮನೆ ಕಟ್ಟಿಸಿರುವ ಮನೆ

ಕೆ. ಲಿಂಗಯ್ಯ

ಅಬೀದ್‌ರವರ ಹರಾಜು ಮಾರಾಟ

14—7—57 ನೇ ಭಾನುವಾರ ಬೆಳಗ್ಗೆ 10 ಘಂಟೆಗೆ ತೋರೂ ಬಳಿ

ರೆಮಿಂಗ್ಟನ್ ಟೈಪ್‌ರೈಟರ್, ಎಚ್ ಎಂ ವಿ ರೇಡಿಯೊ ಮತ್ತು ಗ್ರಾಮಫೋನ್, ಒಲೆ ಸಮೇತ ಇರುವ ಸ್ಟೀಮ್ ಕುಕ್ಕರ್, ಕೌಂಟರುಗಳು, ಮೇಜ ಕೇಸುಗಳು, ಮಂಚಗಳು, ಮರದ ರ್‍ಯಾಕುಗಳು, ಸ್ಟ್ಯಾಂಡಿಗೆ ಜೋಡಿಸಿರುವ ಕಬ್ಬಿಣದ ತೊಟ್ಟಿಲು, ವಿಲ್ಸ್ ಸೇಫ್, ಹೊಸದಾದ ಉತ್ತಮ ಫರ್ನಿಚರುಗಳು ಮತ್ತು ಇತರ ಉಪಯುಕ್ತ ವಸ್ತುಗಳು.

13ನೇ ತಾರೀಖು ಶನಿವಾರ ಸಂಜೆ 4ರಿಂದ 6 ಘಂಟೆವರೆಗೆ ಪದಾರ್ಥಗಳನ್ನು ಪರಿಶೀಲಿಸಬಹುದು ನಗದು ವ್ಯಾಪಾರ

ಅಬೀದ್ಸ್,

ಫೋನ್ 473 ಸ್ವಾಮಿಚೌಕ : ಮೈಸೂರು

ಚಾಮುಂಡೇಶ್ವರಿ ಟಾಕೀಸ್

12—7—57 ರಿಂದ ಒಂದು ವಾರ ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಚಕ್ರವರ್ತಿ ತಿರುಮಗಳ್ (ತಮಿಳು)

ಭೂಮಿಕೆ :- ಎಂ ಜಿ ರಾಮಚಂದ್ರನ್, ಅಂಜಲಿದೇವಿ, ತಂಗವೇಲು, ಎಲ್ ಎಸ್ ಕೃಷ್ಣನ್, ಟಿ. ಎ ಮಧುರಂ ಮುಂತಾದವರು

ಮುಂದಿನ ಬದಲಾವಣೆ:— ಜೆಮಿನಿ ಗಣೇಶನ್ ಮತ್ತು ಸಾವಿತ್ರಿ ಪಾತ್ರವಹಿಸಿರುವ ತಮಿಳು ಚಿತ್ರ **ಯಾರ್ ಪೈಯನ್**

Morning Shows On 13th & 14th only at 10-30 A M

ON THE CIRCUS ARENA

ಟೆಲಿಫೋನ್ ನಂ 541 — — ಟೆಲಿಗ್ರಾಂ: ಅರಮನೆ

ನ್ಯೂ ಚಾಮುಂಡೇಶ್ವರಿ ಕೆಫೆ,

ಅರಮನೆ ರಸ್ತೆ, ಮೈಸೂರು.

ತಾ॥ 10-7-1957 ರಿಂದ ರಿಯಾಯಿತಿ ದರ

ವಿದ್ಯಾರ್ಥಿಗಳಿಗೂ ಮತ್ತು ಉದ್ಯೋಗಸ್ಥರುಗಳಿಗೂ ಊಟದ 30 ಟಿಕೆಟ್ಟುಗಳ ಪುಸ್ತಕಕ್ಕೆ ರೂ. 16-8-0 ಮಾತ್ರ ಪ್ರೊ॥ ಸಿ ಬಿ ಎಂ ಚಂದ್ರಯ್ಯ

ಒಲಂಪಿಯಾ ಟಾಕೀಸ್ 12-7-57 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು : 3-30, 6-30 ಮತ್ತು 9-45ಕ್ಕೆ

ರಜಪೂತರ ಮತ್ತು ಮೊಗಲರ ವೈಭವದ ಹಿನ್ನೆಲೆಯಿಂದ ಕೂಡಿದ, ದಿನೇಶ್ ಫಿಲಂಸ್‌ರವರ ಅಮೋಘ ಐತಿಹಾಸಿಕ ಚಿತ್ರ

ಅಮರ ಸಿಂಹ ರಾಠೋಡ್

(AMAR SINGH RATHAUR)

(ಮೊಗಲ್ ಸಾಮ್ರಾಜ್ಯವನ್ನೇ ನಡುಗಿಸಿದ ಧೀರ)

ಪಾತ್ರ - ನಿರೂಪಾರಾಯ್, ಜೈರಾಜ್, ಅರ್ ನಾಸಿರ್, ಯಶೋಧರಾ ಖತ್ತು, ಹೆಲೆನ್, ಮೀನಾ ಮುಂತಾದವರು

ಉತ್ತರ ಇಂಡಿಯಾದಲ್ಲಿ ಜಾಗಿಂಗ್, ರಜತ್ ಜುಬಿಲಿ ಡಾಯಲ್ ಜಾಕಿ, ಸ್ವಾಮಾ ಚಿತ್ರಗಳ ದಾಖಲೆಗಳನ್ನು ಮೀರಿಸಿ ಪ್ರಾಶಸ್ತ್ಯಗಳಿಸಿದೆ

ರಿಜಿಸ್ಟರ್ಡ್ ನಂ 192

ಇಂದಿನ ಪತ್ರಿಕೆ 2

OWN YOUR AUTO!
(50 monthly instalments)

Apply for prospectus etc with Re. 1 stamps

AUTOMOBILE ASSOCIATION OF INDIA
New Statue Circle,
MYSORE

ಸಾಧ್ವಿ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೧೫] SADHVI : SATURDAY 13—7—1957 ಮೈಸೂರು : ಶನಿವಾರ ೧೩—೭—೧೯೫೭ : [ಸಂಚಿಕೆ : ೩೩೩

ಪಾಕಿಸ್ತಾನಕ್ಕೆ ಬಾಂಬರ್ ರವಾನೆಗೆ ಅಮೆರಿಕದ ತಿರಸ್ಕಾರ

ಪಾಕಿಸ್ತಾನಕ್ಕೆ ಬಾಂಬರ್ ವಿಮಾನ ಕೊಡಲು ಅಮೆರಿಕದ ನಿರಾಕರಣೆ

ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯದ ಪ್ರಮಾಣವನ್ನು ಹೆಚ್ಚಿಸಲೂ ಮತ್ತು ಈಗ ಒದಗಿಸಲಾಗುತ್ತಿರುವ ಸೈನ್ಯ ಸಾಧನಗಳ ಸಂಖ್ಯೆಯನ್ನು ಏರಿಸಲೂ ಅಮೆರಿಕವು ಒಪ್ಪಿರುವುದಾದರೂ, ಬಾಂಬರು ವಿಮಾನಗಳನ್ನು ಕೊಡಬೇಕೆಂದು ಪಾಕಿಸ್ತಾನವು ಮಾಡಿರುವ ಬೇಡಿಕೆಯನ್ನು ಅದು ನಿರಾಕರಿಸಿರುವುದೆಂದು ವರದಿಯಾಗಿದೆ ಬಾಂಬರುಗಳನ್ನು ಒದಗಿಸಿದರೆ ಅದರಿಂದ ಭಾರತದಲ್ಲಿ ಪ್ರತಿಕೂಲವಾದ ಮನೋಭಾವವುಂಟಾಗುವುದೆಂದು ಅಮೆರಿಕವು ಭೀತಿಪಟ್ಟಿರುವುದೆಂದು ತಿಳಿದುಬಂದಿದೆ ಪಾಕಿಸ್ತಾನದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಸಂಭವಿಸಬಹುದಾದ ಕ್ಷಾಮಗಳನ್ನು ತಡೆಗಟ್ಟಲು ಅಲ್ಲಿನ ಪ್ರಧಾನಿ ಸುಹ್ರಾವರ್ದಿಯವರು ಬೇಡಿರುವ ೩೦ ಲಕ್ಷ ಟನ್ ಧಾನ್ಯವನ್ನು ಪಡೆಯಲು ವಿಫಲರಾಗಿರುವರೆಂದೂ ಹೇಳಲಾಗಿದೆ

ಅಫ್ಘಾನಿಸ್ತಾನದ ದೊರೆ ಮತ್ತು ಪ್ರಧಾನಿ ಕೊಲೆಗೆ ಸಂಚು ?

ಅಫ್ಘಾನಿಸ್ತಾನದ ದೊರೆ ಜಾಹಿರ್ ಷಾ ಮತ್ತು ಪ್ರಧಾನಿ ದಾವುದ್ ಖಾನರವರನ್ನು ಕೊಲೆ ಮಾಡುವ ಬಗ್ಗೆ ಕಾಬೂಲಿನಲ್ಲಿ ಒಳಸಂಚೊಂದು ನಡೆದಿದ್ದು ಅದು ಪತ್ತೆಯಾಗಿರುವುದೆಂದು ನವ ಚೀನಾ ವಾರ್ತಾ ಸಂಸ್ಥೆಯು ತಿಳಿಸಿದೆ ಮಾಜಿ ಹಣಕಾಸಿನ ಮಂತ್ರಿ ಅಬ್ದುಲ್ ಮಲಿಕ್ ಮತ್ತು ಅವರ ಸಹೋದರರೊಬ್ಬರು ಇದಕ್ಕೆ ಪ್ರೇರೇಪಕರಾಗಿರುವರೆಂದೂ, ಸಂಚಿನ ಬಗ್ಗೆ ತನಿಖೆಗಾಗಿ ಎರಡು ಸಮಿತಿಗಳನ್ನು ನೇಮಿಸಲಾಗಿರುವುದೆಂದೂ ವರದಿಯಾಗಿದೆ

ಅಗಾಖಾನರ ಉತ್ತರಾಧಿಕಾರಿ

ಅಲಿಖಾನರ ಪ್ರಥಮ ಪತ್ನಿಯವರ ಹೊಟ್ಟೆಯಲ್ಲಿ ಹುಟ್ಟಿದ ರಾಜಕುಮಾರ ಕರೀಂರವರು ಅಗಾಖಾನರ ಉತ್ತರಾಧಿಕಾರಿಯಾಗಿದ್ದಾರೆ

ಪೊಲೀಸು ಅಧಿಕಾರಿಯ ಕೊಲೆಗಾಗಿ ಮರಣದಂಡನೆ

ಬಂಗಾರಪೇಟೆಯ ಸಂಮುಸಮುದ್ರದ ಪೊಲೀಸು ಸಬ್ ಇನ್ಸ್‌ಪೆಕ್ಟರ್ ಶ್ರೀ ಮಹಮ್ಮಾಚಾರ ಎಂಬುವರನ್ನು ಕಳೆದ ಮಾರ್ಚಿಯಲ್ಲಿ ಪೊಲೀಸು ಠಾಣೆಯಲ್ಲಿ ಚಾಕುವಿನಿಂದ ಇರಿದು ಕೊಲೆ ಮಾಡಿದುದಕ್ಕಾಗಿ ರಾಮುಡು ಎಂಬುವನಿಗೆ ಕೋಲಾರದ ಸೆಷನ್ಸ್ ನ್ಯಾಯಾಧೀಶರು ಮರಣದಂಡನೆಯನ್ನು ವಿಧಿಸಿದ್ದಾರೆ

ಎಂ. ಡಿ. ಶಿವನಂಜಪ್ಪನವರಿಗೆ ಕೇಂದ್ರ ಸರ್ಕಾರದ ಹುದ್ದೆ

ಸಿಂಲಾದಲ್ಲಿ ಐ ಎ ಎಸ್ ಸಿಬ್ಬಂದಿ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿರುವ ಮೈಸೂರಿನ ಅಧಿಕಾರಿಗಳಾದ ಶ್ರೀ ಎಂ. ಡಿ ಶಿವನಂಜಪ್ಪನವರ ತರಪೇತು ಮುಗಿದನಂತರ ಅವರನ್ನು ಅಂಚೆ ಮತ್ತು ತಂತಿ ಇಲಾಖೆಯ ಡೈರೆಕ್ಟರ್ ಜನರಲ್ ಕಛೇರಿಯಲ್ಲಿ ದೂರುಗಳ ಪರಿಶೀಲನಾ ಡೈರೆಕ್ಟರಾಗಿ ನೇಮಿಸಲಾಗುವುದು

ವಿನೋಬಾ ಭಾವೆಯವರ ಸ್ವಾಗತಕ್ಕೆ ವ್ಯವಸ್ಥೆ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯ ರಚನೆ

ಮೈಸೂರು ೧೩.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ಜಿಲ್ಲಾ ಭೂದಾನ ಕಾರ್ಯಕರ್ತರು ಮತ್ತು ಸಮಾಜ ಸೇವಾ ಪಕ್ಷಗಳ ಪ್ರತಿನಿಧಿಗಳ ಸಭೆಯು ನಡೆದು, ಬರುವ ಸೆಪ್ಟೆಂಬರ್ ತಿಂಗಳು ಜಿಲ್ಲೆಯಲ್ಲಿ ಆಚಾರ್ಯ ವಿನೋಬಾ ಭಾವೆಯವರ ಪ್ರವಾಸದ ವ್ಯವಸ್ಥೆ ಮಾಡಲು ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷರಾಗಿಯೂ ಮತ್ತು ಶ್ರೀಗಳಾದ ಎಸ್ ವಿ. ಮಂಜುನಾಥ್ ಮತ್ತು ಎಸ್ ಎಸ್ ಶಾಸ್ತ್ರಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

ಜಿಲ್ಲೆಯಲ್ಲಿ ಅಖಿಲ ಭಾರತ ಭೂದಾನ ಕಾರ್ಯಕರ್ತರ ಶಿಬಿರ ಮತ್ತು ಸರ್ವ ಪಕ್ಷಗಳ ಮುಖಂಡರ ಸಮ್ಮೇಳನವನ್ನು ಸೇರಿಸುವಂತೆ ವಿನೋಬಾಜಿಯವರನ್ನು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು ಅಧ್ಯಕ್ಷರು ಭಾಷಣ ಮಾಡಿ ಭೂದಾನ ಚಳುವಳಿಗೆ ಎಲ್ಲ ಪಕ್ಷಗಳ ಸಹಕಾರವು ಬೇಕೆಂದೂ ಆಚಾರ್ಯರಿಗೆ ವೈಭವದ ಸ್ವಾಗತವೀಯಬೇಕೆಂದೂ ಸೂಚಿಸಿದರು.

ಗುರು ಪೂರ್ಣಿಮೆ ಕಾರ್ಯಕ್ರಮ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯೀ ಮಂದಿರದಲ್ಲಿ ಗುರು ಪೂರ್ಣಿಮೆ ಪ್ರಯುಕ್ತ, ನಾಳೆ ಬೆಳಿಗ್ಗೆ ಅಭಿಷೇಕ ಮತ್ತು ೧೦ ಗಂಟೆಗೆ ಸರ್ವ ಸದಸ್ಯರ ಸಭೆ ಮತ್ತು ಸಂಜೆ ೬ ಗಂಟೆಗೆ ಸಾಮೂಹಿಕ ಪ್ರಾರ್ಥನೆಗಳೂ, ನಂತರ ವಿ. ಕೋಣನೂರು ಸೀತಾರಾಮಶಾಸ್ತ್ರಿಗಳವರಿಂದ ಹರಿಕಥಾ ಕಾಲಕ್ಷೇಪವೂ ಇವೆ. ಬೆಂಗಳೂರು ಮೇಯರ್ ಶ್ರೀ ಜನಾಬಾಯಿ ದೇವಿದಾಸ್‌ರವರ ಸಮ್ಮುಖದಲ್ಲಿ ಶ್ರೀ ಎಂ ಯಾಮುನಾಚಾರ್ಯರು ಮಹಾತ್ಮರು ತೋರಿಸಿದ ಭಕ್ತಿಮಾರ್ಗ ಎಂಬ ವಿಚಾರವಾಗಿ ಭಾಷಣ ಮಾಡುವರು

ಉಪನ್ಯಾಸ

ರಾಜಧಾನಿಯ ಜಯನಗರದ ಬಡಾವಣೆಯಲ್ಲಿರುವ ಪೌರಾಣಿಕ ಸಾಲಿಗ್ರಾಮದ ಶ್ರೀಕಂಠ ಶಾಸ್ತ್ರಿಗಳ ಮನೆಯಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಯಿಂದ ೬ ರವರೆಗೆ "ಲಿಪಿ ಮತ್ತು ಅಕ್ಷರಗಳ ಸ್ವರೂಪ ಮಹಿಮೆ'' ಎಂಬ ವಿಷಯವಾಗಿ ನಿವೃತ್ತ ಸೂಪರಿಂಟೆಂಡಿಂಗ್ ಎಂಜನಿಯರ್ ಶ್ರೀ ಎಂ ಆರ್ ಕೃಷ್ಣಮೂರ್ತಿರಾಯರು ಉಪನ್ಯಾಸ ಮಾಡುವರು

ಸಟ್ಟಾ ಜೂಜಾಟಕ್ಕಾಗಿ ದಂಡ

ಶೈಲ್ಟಿ ವರ್ಕ್‌ಷಾಪ್ ಬಳಿ ಮೊನ್ನೆ ಮದನಗೋಪಾಲರಾವ್, ಜೀವೋಜಿರಾವ್ ಮತ್ತು ಬಾಬೂಸಾಬ್‌ರವರು ನ್ಯೂಯಾರ್ಕ್ ಹತ್ತಿ ಸಟ್ಟಾ ಜೂಜಾಡುತ್ತಿದ್ದರೆಂದು ಲಕ್ಷ್ಮೀಪುರಂ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಪಾದಿತರಿಗೆ ನೆನ್ನೆ ತಲಾ ೨೫ ರೂ ದಂಡ ವಿಧಿಸಲಾಯಿತು.

ವಿಧಾನ ಸಭೆಯಲ್ಲಿ "ಸದಾರಮೆ ನಾಟಕ"ದ ಪ್ರಸ್ತಾಪ

ವಿಧಾನ ಸಭಾಧ್ಯಕ್ಷರಿಂದ ರೂಲಿಂಗ್

ಬೆಂಗಳೂರು ೧೩.

ನೆನ್ನೆ ವಿಧಾನ ಸಭೆಯ ಚರ್ಚೆ ಸಮಯದಲ್ಲಿ ಸಚಿವ ಶ್ರೀ ಪೂಣಚ್ಚರವರು ವಿಸ್ತೃತ ಮೈಸೂರಿನ ಐದು ಭಾಗಗಳಿಗೂ ಒಪ್ಪಿತವಾದ ಆಯವ್ಯಯ ಪಟ್ಟಿ ತಯಾರಿಕೆಯು ಕಷ್ಟಕರವಾದ ವಿಷಯವೆಂದೂ, ಆ ಬಗ್ಗೆ ಟೀಕಿಸುವುದು ಸುಲಭವೆಂದೂ ಹೇಳಿದಾಗ, ವಿರೋಧ ಪಕ್ಷದ ಶ್ರೀ ಬಿ.ಕೆ ಪುಟ್ಟರಾಮಯ್ಯನವರು 'ಕಷ್ಟವಾದರೆ ಬಿಟ್ಟುಬಿಡಲಿ, ನಾವು ಮಾಡಿಕೊಂಡು ಹೋಗುತ್ತೇವೆ" ಎಂದು ತಿಳಿಸಿದರು ಸಚಿವರು ಉತ್ತರವಿತ್ತು 'ತಮ್ಮ ಕೈಲಿ ಜವಾಬ್ದಾರಿ ವಹಿಸಿದರೆ ಸದಾರಮೆ ನಾಟಕವಾದೀತು." ಎಂದರು (ಸಭೆಯಲ್ಲಿ ನಗು)

ಶ್ರೀ ಪುಟ್ಟರಾಮಯ್ಯನವರು ಮಾತನಾಡಿ ಸದಾರಮೆ ನಾಟಕದಲ್ಲಿ ಕಳ್ಳರು ಕೂಡ ಬರುವರೆಂದೂ, ವಿರೋಧ ಪಕ್ಷವನ್ನು ಆ ನಾಟಕಕ್ಕೆ ಹೋಲಿಸುವುದು ಸರಿಯೇ ಎಂಬುದರ ಬಗ್ಗೆ ರೂಲಿಂಗ್ ಆಗಬೇಕೆಂದೂ ಬೇಡಿದರು 'ಸದಾರಮೆ" ಪದವು "ಅನ್‌ಪಾರ್ಲಿಮೆಂಟರಿ" ಅಲ್ಲವೆಂದು ಅಧ್ಯಕ್ಷರು ತಿಳಿಸಿದರು

ಕೇಂದ್ರ ಸರ್ಕಾರದ ೫ ಲಕ್ಷ ನೌಕರರಿಂದ ಮುಷ್ಕರ

ಆಗಸ್ಟ್ ೯ ರಿಂದ ಆರಂಭಕ್ಕೆ ಕರೆ

ಕೇಂದ್ರ ಸರ್ಕಾರದ ನಾನಾ ಇಲಾಖೆಗಳ ನೌಕರರ ೧೪ ಸಂಘಗಳ ೧೪೦ ಮಂದಿ ಪ್ರತಿನಿಧಿಗಳು ನೆನ್ನೆ ಸೇರಿದ್ದ ಸಭೆಯಲ್ಲಿ, ಬರುವ ತಿಂಗಳು ೮-೯ರ ಮಧ್ಯ ರಾತ್ರಿಯಿಂದ ಕೇಂದ್ರದ ಕೆಳದರ್ಜೆ ನೌಕರರು ಮುಷ್ಕರ ಹೂಡುವುದಕ್ಕೆ ಕರೆ ಕೊಟ್ಟಿತು ಸಂಸ್ಥೆಯು ಒಟ್ಟು ೫ ಲಕ್ಷ ಮಂದಿ ನೌಕರರಿಗೆ ಈ ಬಗ್ಗೆ ಸೂಚನೆಯಿತ್ತಿತು ಅಂಚೆ ಮತ್ತು ತಂತಿ ಇಲಾಖೆ, ನಾಗರಿಕ ವಿಮಾನ ಹಾರಾಟ, ವರಮಾನ ತೆರಿಗೆ, ಕೇಂದ್ರ ಅಬ್ಕಾರಿ ಸುಂಕ ಮತ್ತು ಸಿವಿಲ್ ಮತ್ತು ಆಡಿಟ್ ಇಲಾಖೆಗಳ ನೌಕರರ ಸಂಘದವರು ಈಗಾಗಲೇ ಮುಷ್ಕರದ ಪರವಾಗಿ ಅಭಿಮತವಿತ್ತಿರುವರು.

ದ್ವಿತೀಯ ಸಂಬಳದ ಸಮಿತಿ ರಚನೆಗಾಗಿಯೂ, ಹೆಚ್ಚಿನ ತುಟ್ಟಿಭತ್ಯ ಮತ್ತು ಸಂಬಳದಲ್ಲಿ ತುಟ್ಟಿಭತ್ಯದ ಐಕ್ಯಕ್ಕಾಗಿಯೂ, ಇವರುಗಳು ಬೇಡಿಕೆಯಿಟ್ಟಿರುವರು

ರೇವು ಕೆಲಸಗಾರರ ಮುಷ್ಕರವಿಲ್ಲ

ಬೊಂಬಾಯಿಯ ೩೦ ಸಾವಿರ ರೇವು ಕೆಲಸಗಾರರು ನೆನ್ನೆ ಮಧ್ಯರಾತ್ರಿಯಿಂದ ನಡೆಸಬೇಕಾಗಿದ್ದ ಮುಷ್ಕರವನ್ನು ನಡೆಸದೆ ನಿಲ್ಲಿಸಿದ್ದಾರೆ ಕೇಂದ್ರ ಮಂತ್ರಿಗಳಾದ ಲಾಲ್‌ಬಹದ್ದೂರ್ ಶಾಸ್ತ್ರಿ ಮತ್ತು ರಾಜಬಹದ್ದೂರ್‌ರವರುಗಳಿಗೂ, ಕೆಲಸಗಾರರ ಪ್ರತಿನಿಧಿಗಳಿಗೂ ನೆನ್ನೆ ದೆಹಲಿಯಲ್ಲಿ ಚರ್ಚೆಯಾಗಿ ಒಪ್ಪಂದಕ್ಕೆ ಬರಲಾಯಿತು

◯ ಸಾಂಡೂರಿನ ಆಸ್ಪತ್ರೆಯನ್ನು ವಿಸ್ತರಿಸಲು ಅಲ್ಲಿನ ಮಹಾಜನರು ೩೫,೦೦೦ ರೂ- ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ ಸರ್ಕಾರದವರೂ ಸಹ ಅಷ್ಟೇ ಹಣವನ್ನು ಕೊಟ್ಟು, ಆಸ್ಪತ್ರೆಯನ್ನು ವಿಸ್ತರಿಸಬೇಕೆಂದು ಅವರು ಕೋರಿರುತ್ತಾರೆ

ಶಾಸನಸಭಾ ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗದ ಆಯ್ಕೆ

ನಿಜಲಿಂಗಪ್ಪನವರು ನಾಯಕರು

ಸ್ವಂ ಸು. ಪ್ರೋ] ಬೆಂಗಳೂರು ೧೩.

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗದ ಚುನಾವಣೆಯು ಈ ದಿನ ನಡೆದು, ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಾಯಕರಾಗಿಯೂ, ವಿದ್ಯಾ ಮಂತ್ರಿ ಶ್ರೀ ಎ ವಿ ವೆಂಕಟಪ್ಪನವರು ಉಪ ನಾಯಕರಾಗಿಯೂ ಆರಿಸಲ್ಪಟ್ಟರು ಶ್ರೀ ಎ ವಿ ನರಸಿಂಹರೆಡ್ಡಿಯವರು ಕಾರ್ಯದರ್ಶಿ ಮತ್ತು ಶ್ರೀ ಎಲ್ ಎಸ್ ವೆಂಕಾಜಿರಾಯರು ಖಜಾಂಚಿಯಾಗಿ ಚುನಾಯಿತರಾದರು ಶ್ರೀ ಮತಿ ಬಸವರಾಜೇಶ್ವರಿ ಮತ್ತು ಶ್ರೀ ಟಿ ವೆಂಕಟರಮಣಯ್ಯನವರು ಜಂಟಿ ಕಾರ್ಯದರ್ಶಿಗಳಾಗಿಯೂ, ಶ್ರೀ ಎನ್ ಹುಚ್ಚಮಾಸ್ತಿಗೌಡರು ವ್ಹಿಪ್ ಆಗಿಯೂ ನೇಮಿಸಲ್ಪಟ್ಟರು. ಶ್ರೀಗಳಾದ ಕಡಿದಾಳ್ ಮಂಜಪ್ಪನವರೂ ಸೇರಿ ೯ ಜನರು ಕಾರ್ಯ ಸಮಿತಿ ಸದಸ್ಯರಾದರು

ಎನ್. ಎಸ್. ಹಿರಣ್ಣಯ್ಯನವರು ರೆವಿನ್ಯೂ ಬೋರ್ಡಿನ ಅಧ್ಯಕ್ಷರು

ಗುಲ್ಬರ್ಗಾ ಕಮೀಷನರಾಗಿ ಜಿ ಎನ್ ನಾಗರಾಜರಾಯರ ನೇಮಕ

ಬೆಂಗಳೂರು ೧೩.

ಶ್ರೀ ಎನ್ ಎಸ್ ಹಿರಣ್ಣಯ್ಯನವರ ರಜಾ ಮುಗಿದನಂತರ ಸಂಸ್ಥಾನದ ರೆವಿನ್ಯೂ ಬೋರ್ಡಿನ ಅಧ್ಯಕ್ಷರಾಗುವಂತೆ ಅವರನ್ನು ನೇಮಿಸಲಾಗಿದೆ ಬೆಂಗಳೂರು ಡಿವಿಜನ್ನಿನ ಕಮೀಷನರ್ ಶ್ರೀ ಜಿ ಎನ್ ನಾಗರಾಜರಾಯರನ್ನು ಗುಲ್ಬರ್ಗಾ ಡಿವಿಜನ್ನಿನ ಕಮೀಷನರನ್ನಾಗಿಯೂ, ರೆವಿನ್ಯೂ ಬೋರ್ಡಿನ ಸದಸ್ಯ ಶ್ರೀ ಆರ್ ಜೆ ರೇಗೋರವರನ್ನು ಶ್ರೀ ನಾಗರಾಜರಾಯರ ಸ್ಥಾನಕ್ಕೂ ನೇಮಿಸಲಾಗಿದೆ.

ಉಪಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಭಾಗವಹಿಸುವಂತಿಲ್ಲ

ವಿಧಾನ ಸಭಾಧ್ಯಕ್ಷರ ರೂಲಿಂಗ್

ಬೆಂಗಳೂರು ೧೩.

ನೆನ್ನೆ ವಿಧಾನ ಸಭೆಯಲ್ಲಿ ಅಧ್ಯಕ್ಷ ಶ್ರೀ ಕಂಠಿಯವರು ರೂಲಿಂಗ್ ಇತ್ತು ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಉಪ ಮಂತ್ರಿಗಳು ಕೂತಬಾರದೆಂದೂ ಮತ್ತು ಸರ್ಕಾರದ ಪರವಾಗಿ ಭಾಗವಹಿಸಕೂಡದೆಂದೂ ಸೂಚಿಸಿದರು ನೆನ್ನೆ ಶ್ರೀ ಸಿ. ಜೆ ಮುಕ್ಕಣ್ಣಪ್ಪನವರು ಸಭೆಯಲ್ಲಿ ಎತ್ತಿದ ಹಕ್ಕುಬಾಧ್ಯತಾ ಸೂಚನೆ ಸಂಬಂಧವಾಗಿ ಅಧ್ಯಕ್ಷರು ಮಾತನಾಡಿ, ಕೇಂದ್ರ ಸರ್ಕಾರದಿಂದ ಈ ಬಗ್ಗೆ ವಿವರಣೆಯೊಂದು ಬಂದಿರುವುದೆಂದೂ ಮಂತ್ರಿ ಮಂಡಲದ ಸದಸ್ಯರ ಸ್ಥಾನವಿಲ್ಲದಿದ್ದರೂ ಉಪ ಮಂತ್ರಿಗಳು ವಿಧಾನ ಸಭೆಯಲ್ಲಿ ಭಾಗವಹಿಸಬಹುದೆಂದೂ, ಆದರೆ ಮೇಲ್ಮನೆಯಲ್ಲಿ ಭಾಗವಹಿಸಕೂಡದೆಂದೂ ತಿಳಿಸಿದರು.

◯ ಬರುವ ಸೆಪ್ಟೆಂಬರ್ ತಿಂಗಳು ನಡೆಯಬೇಕಾಗಿದ್ದ ಇಂಜನಿಯರಿಂಗ್ ಪರೀಕ್ಷೆಗಳನ್ನು ಅದೇ ತಿಂಗಳು ೧೬ಕ್ಕೆ ಮುಂದುವರಿಸಲಾಗಿದೆ.

ದಕ್ಷಿಣ ವಲಯ ನಿರ್ಮಾಣದಿಂದ ದಕ್ಷಿಣ ಪ್ರದೇಶಕ್ಕೆ ಬುನಾದಿ ಇಲ್ಲ

ಗೋವಿಂದ ವಲ್ಲಭ ಪಂತರ ಹೇಳಿಕೆ

ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್‌ರವರು ಮೊನ್ನೆ ಆಂಧ್ರ ಪ್ರದೇಶ, ಮದ್ರಾಸು ಮತ್ತು ಕೇರಳಗಳುಳ್ಳ ದಕ್ಷಿಣ ವಲಯದ ಆರಂಭೋತ್ಸವದ ಸಭೆಯ ಅಧ್ಯಕ್ಷತೆ ವಹಿಸಿ ಭಾಷಣ ಮಾಡಿ, ದಕ್ಷಿಣ ವಲಯದ ೪ ಸ್ಥಾನಗಳೂ ವಿಷ್ಣು ವೈ ... ರದ ಉ ತ್ಪಾದನೆಗೆ ಹೆಚ್ಚಿನ ಪ್ರಾಮುಖ್ಯತೆ ಸನ್ನೀಯಬೇಕೆಂದು ಸೂಚಿಸಿದರು ಬೆಲೆ ವಿಲ... ಅವಕಾಶವಿತ್ತರೆ, ರಾಷ್ಟ್ರದ ಅಭಿವೃದ್ಧಿ ಕಾರ್ಯಗಳೆಲ್ಲವು ಕುಂಠಿತವಾಗುತ್ತದೆಂದು ಅವರು ಎಚ್ಚರಿಸಿ ... ರ ಅಂಶಗಳ ಸಭಾ ... ರ್ಯಕ್ರಮವನ್ನು ಅವರು ವಿವರಿಸಿ, ಒಂದು ತೊಟ್ಟು ನೀರನ್ನೂ ವ್ಯರ್ಥ ಮಾಡಬಾರದೆಂದೂ ... ವ್ಯವಸಾಯ ಜಮೀನನ್ನು ... ಬಿಡಬಾರದೆಂದೂ ಸೂಚಿಸಿದರು ಪಂಡಿತ ಪಂತರು ... ವಲಯದಲ್ಲಿ ಮೈಸೂರು ಸೇರದಿರ ... ಗೆ ಉತ್ತರವಿತ್ತು ಸಭೆ ... ಮೈಸೂರು ... ಸಬಾರದೆಂಬ ಉದ್ದೇಶವೇನೂ ಇಲ್ಲವೆಂ ... ದರು ದಕ್ಷಿಣ ವಲಯದ ನಿರ್ಮಾಣ ... ದಕ್ಷಿಣ ಪ್ರದೇಶದ ... ವೆಂದೂ ಅವರು ಹೇಳಿದರು

ಸಭೆಯಲ್ಲಿ ಮೂರು ಪ್ರ ... ರಗಳ ... ಮಂತ್ರಿಗಳೂ, ಇತರ ... ರಲ್ಲದೆ ವಿಶೇಷ ಆಹ್ವಾನಿತರಾಗಿ ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೂ ಇದ್ದರು ದಕ್ಷಿಣ ವಲಯದ ಸಭೆಗಳಿಗೆ ... ಮೈಸೂರಿಗೂ ಆಹ್ವಾನವೀಯಬೇಕೆಂದು ... ರಿಸಲಾಯಿತು ಮೈಸೂರು ಈಗ ಬೊಂ ... ಯೊಡನೆ ಪಶ್ಚಿಮ ವಲಯದಲ್ಲಿ ಸೇರಿದೆ

ಚುನಾವಣೆ ತಕರಾರು ಮೊಕದ್ದಮೆ ನ್ಯಾಯಾಧೀಶರುಗಳು

ವಿಧಾನ ಸಭೆಗೆ ಆರಿಸಲ್ಪಟ್ಟವರ ವಿರೋಧವ ಸಲ್ಲಿಸಲಾಗಿರುವ ತಕರಾರು ಅರ್ಜಿಗಳನ್ನು ಕೆಳಕಂಡ ನ್ಯಾಯಾಧೀಶರುಗಳು ವಿಚಾರಿಸು ವ — ಚಾಮರಾಜನಗರದ ತಾಲ್ಲೂಕಿನ ಶ್ರೀ ... ರಾಚಯ್ಯನವರ ಚುನಾವಣೆ ಬಗ್ಗೆ ಶ್ರೀ ಬಿ ಸವಯ್ಯನವರ ಅರ್ಜಿ ... ವಣೆ ಶ್ರೀ ಎ ಎ ... ಜೇಂದ್ರರವರಿಂದ ... ಶ್ರೀಮ ರುಕ್ಮಿಣಿಯಮ್ಮನವರ ವಿ ... ಶ್ರೀ ಹೆಚ್ ... ಜಯ್ಯನವರ ಅರ್ಜಿ ಸ ... ಶ್ರೀ ಕೆ ಬ್ಬಯ್ಯನವರಿಂದ, ... ಶ್ರೀ ಗಂಗಿರೆಡ್ಡಿಯವರ ವಿರುದ್ಧ ಶ್ರೀ ಎಂ ... ಜನೇಯರೆಡ್ಡಿಯವರ ಅರ್ಜಿ ಶ್ರೀ ... ನ್ನಯ್ಯನವರಿಂದ ಜಮಖಂಡಿ ಕ್ಷೇತ್ರದ ಶ್ರೀ ಬಿ. ಡಿ ಜತ್ತಿಯವರ ವಿರುದ್ಧ ಶ್ರೀ ಎಸ್ ಮಂಡಗೋಪಾಲರವರ ಅರ್ಜಿ ... ಶ್ರೀ ಟಿ ಕೆ ತುಕೋಳರಿಂದ

ಕೊಕ್ಕೊ ಆಟದ ತರಪೇತು

ನಗರದ ಪಯೊನೀರ್ಸ್ ಸ್ಪೋರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಇದೇ ಮಾಹೆ ೧೮ನೇ ತಾರೀಖಿನ ಮಹಾರಾಜಾ ಕಾಲೇಜಿನ ಮೈದಾನದಲ್ಲಿ ೦ ದಿನಗಳ ಕೊಕ್ಕೊ ತರಪೇತನ್ನು ಕೊಡಲಾಗುವುದು ಶ್ರೀಗಳಾದ ಎಂ ಎಸ್. ಲಕ್ಷ್ಮಣ ... ಹೆಚ್ ವೀರರಾಜೇ ಅರಸ್ ಮತ್ತು ಟಿ ... ರ್ ರಂಗನಾಥರಾಯರು ಶಿಕ್ಷಣ ಕೊಡಲಿದ್ದಾರೆ ಕಲಿಯಲಿಚ್ಛಿಸುವವರು ... ಶಾಲೆಗಳ ... ಪ್ರವೇಶ ಧನದೊಡನೆ ಕ್ಲಬ್ಬಿನ ಕಾರ್ಯದರ್ಶಿಗಳನ್ನು ಭೇಟಿ ಮಾಡಬಹುದು.

ಸತ್ಯಮೇವ ಜಯತೆ.......

ಬೆಳ್ಳಿಯದೆಲ್ಲವನ್ನೇ ಹಾಲೆಂದು ಮಾರಿ ಹಣ ಸಂಪಾದಿಸುವವನ ಗುಟ್ಟು ಎಂದಾದರೂ ಬಯಲಾಗುತ್ತದೆ ಹಾಲಿನ ಗುಣವೇ ಆತನ ಹೆಸರು ಉಳಿಸುತ್ತದೆ ಅಪ್ಪಟ ಹಸುವಿನ ಹಾಲು ... ರ ಕೇಂದ್ರ, 94 ತ್ಯಾಗರಾಜ ರಸ್ತೆ ಕ್ರಾಸ್ ... ವರಿಂದ ... ಮನೆ ಬಾಗಿಲಿಗೇ ಯಾವ ... ಕ್ಕಿನ ಭಾರವೂ ಇಲ್ಲದೆ ತಲುಪುತ್ತದೆ ವಿವರಗಳಿಗೆ ವಿಚಾರಿಸಿ, ಇದನ್ನು ಲೋಕಲ್ ಫೋನ್ ... ಡರ್ ಬರೆಯಿರಿ.

ಸಂಗೀತ ನಾಟಕ ಸಂಸ್ಥೆಗಳಿಗೆ ಕೇಂದ್ರ ಅಕ್ಯಾಡೆಮಿ ಸಹಾಯ

ಹೊಸ ದೆಹಲಿಯ ಸಂಗೀತ ನಾಟಕ ಅಕಾಡೆಮಿಯ ಮನ್ನಣೆ ಪಡೆದ ವಿವಿಧ ಸಾಂಸ್ಕೃತಿಕ ಸಂಸ್ಥೆಗಳು ಧನ ಸಹಾಯದ ಸಲುವಾಗಿ ... ಗಳನ್ನು ಅಕಾಡೆಮಿ ... ಸ್ಥಳೀಯ ಸಂಸ್ಥಾನ ... ಮೂಲಕ ಆಗಸ್ಟ್ ... ರೊಳಗಾಗಿ ಕಳುಹಿಸಬೇಕು ಅರ್ಜಿ ಮನ ಪ್ರತಿಯೊಂದನ್ನು ಮುಂಚಿತವಾಗಿ ದೆಹಲಿ ಅಕಾಡೆಮಿ ಕಾರ್ಯಾಲಯಕ್ಕೆ ನೇರವಾಗಿ ಕಳು ... ಮನ್ನಣೆ ಪಡೆಯದ ಸಂಸ್ಥೆಗಳ ... ಮನ್ನಣೆ ಪಡೆಯಲು ... ದೆಹಲಿ ಅಕಾಡೆಮಿಗೆ ಅರ್ಜಿಗಳನ್ನು ಕಳುಹಿಸಬೇಕು ಧನ ಸಹಾಯ ... ಅರ್ಜಿಯ ನಮೂನೆಗಳನ್ನೂ ಮತ್ತು ಮನ್ನಣೆ ... ನಿಬಂಧನೆಗಳ ಪ್ರತಿಗಳನ್ನೂ ದೆಹಲಿ ಕಾರ್ಯಾಲಯದಿಂದ ಪಡೆಯಬಹುದು

ವಿ ಕೆ ಆರ್. ವಿ. ರಾಯರು ದೆಹಲಿ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರ್

ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಡೈರೆಕ್ಟರಾದ ಡಾ॥ ವಿ ಕೆ ಆರ್ ವಿ ರಾವ್ ... ದೆಹಲಿ ವಿಶ್ವವಿದ್ಯಾಲಯದ ವೈಸ್ ಛಾನ್ಸೆಲರಾಗಿ ನೇಮಿಸಲಾಗಿದೆ ಶ್ರೀಯುತರು ಕನ್ನಡಿಗರು

ಫಲಪುಷ್ಪ ಪ್ರದರ್ಶನಕ್ಕೆ ಸಸಿಗಳು

ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಯಲಿರುವ ಫಲಪುಷ್ಪ ಪ್ರದರ್ಶನಕ್ಕೆ ಬೇಕಾಗುವ ಹೂವಿನ ಜಾತಿ ... ಸಸಿಗಳನ್ನು ಮೈಸೂರು ಹಾರ್ಟಿಕಲ್ಚರಲ್ ಸೊಸೈಟಿ ಸದಸ್ಯರಿಗೆ ನಜರ್‌ಬಾದಿನಲ್ಲಿರುವ ಕೇಂದ್ರ ಉದ್ಯಾನದಿಂದ ಒದಗಿಸಲಾಗುವುದೆಂದು ಸಂಘದ ಗೌರವ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಕಂತಿನ ಸಾಲದ ಮೇರೆ ಟ್ರಾಕ್ಟರ್ ಸರಬರಾಜು

ಈ ವರ್ಷ ಕಂತಿನ ಸಾಲದ ಆಧಾರದ ಮೇಲೆ ಹೊಸ ಟ್ರಾಕ್ಟರುಗಳನ್ನು ವ್ಯವಸಾಯಗಾರರಿಗೆ ... ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ ಬೇಕಾದವರು ಸಂಬಂಧಪಟ್ಟ ... ಉತ್ಪತ್ತಿ ಕಮಾಡಿನವರಿಗೆ ಬರೆದುಕೊಳ್ಳಬೇಕು.

ಮೈಸೂರು ಪೇಟೆ ಧಾರಣೆ

[illegible]		
[illegible]	೩೧ ೧೨	೩೩ ೦೮
ರತ್ನಜೋಳ	೩೨ ೨೫	೩೩ ೨೫
[illegible]	೩೧ ೫೦	೩೩ ೬
ಬಾಗಾರತಿ	೨೮ ೭೫	೩೦ ೫೦
ಕಾರ್ ಸಣ್ಣ	೨೫ ೭೫	೨೬ ೬೦
ರಾಗಿ	೩೩ ೬೨	೩೫ ೦೭
ಎಳ್ಳು	೮೧ ೨೫	೮೨ ೦೦
ಕಡಲೆಕಾಯಿ	೧೦ ೦೦	೨೦ ೧೨
ತೊಗರಿ	೩೩ ೫೦	೩೭ ೨೫
ಹೆಸರು	೩೭ ೮೭	೪೨ ೮೭
ಹಲಸಂದೆ	೩೮ ೦೦	೩೨ ೩೭
ಉದ್ದು	೩೩ ೦೦	
ಹುಣಿಸೇಹಣ್ಣು	೩ ೦೦	೩ ೪೪
ಹುಣಿಸಿನಕಾಯಿ	೧೬ ೨೨	
ತೆಂಗಿನಕಾಯಿ	೧೦೯ ೫೦	೨೪೪ ೦೦

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ,

ಮೈಸೂರು

ಶ್ರೇಷ್ಠತರವಾದ ಅಗರಬತ್ತಿ, ಗಂಧದ ಬತ್ತಿ ಕಾಶ್ಮೀರದ ಕೇಸರಿ ಮತ್ತು ಇತರೆ ಸುಗಂಧ ದ್ರವ್ಯಗಳಿಗೆ ಇಂದೇ ಭೇಟಿ ಕೊಡಿ.

WANTED a full-time P C M. Graduate capable of teaching S S. L C Classes. Experienced persons preferred Salary according to qualification & experience

CITY TUTORIAL COLLEGE, Old Agrahar, Mysore

ಅಣು ಯುದ್ಧಕ್ಕೆ ರಷ್ಯದಿಂದ ಸಾಕಷ್ಟು ಸಾಮಗ್ರಿ ಶೇಖರಣೆ

ಅಣು ಶಸ್ತ್ರ ಯುದ್ಧವನ್ನು ನಡೆಸಲು ರಷ್ಯದ ಸೈನ್ಯವೊಂದೇ ಪೂರ್ಣ ಸನ್ನದ್ಧವಾಗಿರುವುದೆಂದು ಅಮೆರಿಕಾ ಸೈನ್ಯ ಖಾತೆಯ ವಾರ್ತಾ ಪ್ರಕಟಣೆಯು ತಿಳಿಸಿದೆ ರಷ್ಯವು ಅಣು ಶಸ್ತ್ರಗಳಿಂದಲಾಗಲಿ ಅಥವಾ ಇತರ ಶಸ್ತ್ರಗಳಿಂದಲಾಗಲೀ ಎಂತಹ ಯುದ್ಧವನ್ನಾದರೂ ಮಾಡಲು ಸಿದ್ಧವಾಗಿರುವುದೆಂದೂ, ಅಲ್ಲಿ ೧೭೦ ಬಂದೂಕದ ತಂಡಗಳು, ೬೫ ಯಾಂತ್ರಿಕ ಸಜ್ಜಿತ ಪಡೆಗಳು ಮತ್ತು ೩೦ ಟ್ಯಾಂಕು ತಂಡಗಳೂ ಇರುವುದಾಗಿ ಗೊತ್ತಾಗಿದೆ.

ಭಾರತದ ರೈಲ್ವೆಗೆ ವಿಶ್ವಬ್ಯಾಂಕಿನಿಂದ ೯ ಕೋಟಿ ಡಾಲರ್ ಸಾಲ

ಭಾರತದ ರೈಲ್ವೆ ವಿಸ್ತರಣೆಗಾಗಿ ವಿಶ್ವ ಬ್ಯಾಂಕಿನವರು ೯ ಕೋಟಿ ಡಾಲರ್ ಹಣವನ್ನು ಸಾಲವಾಗಿ ಕೊಡಲಿರುವರು

ಚಂದಗಾಲಿನಲ್ಲಿ ವಿದ್ಯುಚ್ಛಕ್ತಿ ಆರಂಭೋತ್ಸವ

ಕೃಷ್ಣರಾಜನಗರ ತಾಲ್ಲೂಕು ಚಂದಗಾಲು ಗ್ರಾಮದಲ್ಲಿ ಕಳೆದ ಬುಧವಾರ ವಿದ್ಯುಚ್ಛಕ್ತಿ ಆರಂಭೋತ್ಸವನ್ನು ಮೈಸೂರಿನ ವಿದ್ಯುಚ್ಛಕ್ತಿ ಸೂಪರಿಂಟೆಂಡೆಂಟರಾದ ಶ್ರೀ ಡಿ ಎಸ್ ಶ್ರೀಕಂಠಯ್ಯನವರು ನೆರವೇರಿಸಿದರು ಅಮಲ್ದಾರ್ ಶ್ರೀ ಸಿ ಎಂ. ಗುರುಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಭಜಗೋವಿಂದ ದಾಸರಿಂದ ಪ್ರಾರ್ಥನೆ, ವಿ॥ ಸಿ. ಕೆ ಪುಟ್ಟಣ್ಣಯ್ಯನವರಿಂದ ಸ್ವಾಗತ ಗೀತೆಗಳಾದನಂತರ ಪಂಚಾಯಿತಿ ಅಧ್ಯಕ್ಷ ಶ್ರೀ ಮುದ್ದಪ್ಪನವರು ಗ್ರಾಮದ ಕುಂದುಕೊರತೆಗಳನ್ನು ಅರಿಕೆ ಮಾಡಿದರು ವಿದ್ಯುಚ್ಛಕ್ತಿ ಇಲಾಖೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಶ್ರೀ ಸ್ವಾಮಿಯವರು ವಿದ್ಯುಚ್ಛಕ್ತಿಯ ಬಳಕೆಯಿಂದ ಆಗುವ ಉಪಯೋಗ ಮತ್ತು ಅದರಿಂದ ಆಗಬಹುದಾದ ಅಪಾಯಗಳನ್ನು ವಿವರಿಸಿದರು ಶ್ರೀ ಸಿ. ಎ ಕರಿಗೌಡರಿಂದ ವಂದನಾರ್ಪಣೆಯಾಯಿತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ನಾಗಸ್ವರ ೭-೧೫ ಮತ್ತು ಮಧ್ಯಾಹ್ನ ೧೨ ಆರ್. ಚಾಕ್ಕಣ್ಣ ವಿ-ಸಂಗೀತ ೨ ೧೫ ರೆಕಾರ್ಡು ೮ ೩೦ ಟಿ ಎಸ್ ರಾಮಚಂದ್ರ ಸಂಗೀತ ೯-೩೦ ಬಾಲಜಗತ್ ಮಧ್ಯಾಹ್ನ ೧೨-೩೦ ವಾರ್ತೆಗಳು ೧ ರೆಕಾರ್ಡು ೧-೫೦ ಮತ್ತು ರಾತ್ರಿ ೧೦ ಎ ಎಸ್ ಚಂದ್ರಶೇಖರಯ್ಯ-ವೀಣೆ ೨ ೧೫ ನಿಮ್ಮ ಮೆಚ್ಚಿನ ಗೀತಗಳು ಸಂಜೆ ೬-೧೦ ಭಕ್ತಿಗೀತೆ. ೭-೩೦ ಕನ್ನಡಗೀತೆ ೮-೩೦ ಪ್ರಚಲಿತ ವಿಷಯಗಳು-ಭಾಷಣ ೮-೪೫ ಸಂಗೀತ ೯-೧೫ ಚಿತ್ರ ಸಂಗೀತ ೯-३೦ ಮದನ ಪರಾಜಯ-ನಾಟಕ ೧೦-೩೦ ಲಕ್ಷ್ಮೀ ಶ್ರೀನಿವಾಸ-ಸಂಗೀತ.

ಪೋರ್ಚುಗೀಸ್ ಸೈನಿಕರಿಗೆ ೩ ತಿಂಗಳಿಂದ ಸಂಬಳ ಪಾವತಿ ಇಲ್ಲ

ಗಡಿಯನ್ನು ದಾಟಿಬಂದ ನಾಲ್ವರು ಪೋರ್ಚುಗೀಸ್ ಸಿಪಾಯಿಗಳು ಭಾರತದ ಪೋಲೀಸರಿಗೆ ಶರಣಾಗತರಾಗಿರುವರು ಅವರ ಹೇಳಿಕೆ ಪ್ರಕಾರ ಅವರುಗಳಿಗೆ ೩ ತಿಂಗಳಿಂದ ಸಂಬಳವನ್ನು ಪಾವತಿ ಮಾಡಿಲ್ಲವೆಂದು ಗೊತ್ತಾಗಿದೆ ಅಲ್ಲದೆ ಅವರನ್ನು ಸರಿಯಾಗಿ ಕಾಣುತ್ತಿರಲಿಲ್ಲವೆಂದೂ ಹೇಳಲಾಗಿದೆ

ಮಾಜಿ ಮಂತ್ರಿ ಮಾಲೆಂಕೊವರಿಗೆ ಮ್ಯಾನೇಜರ್ ಹುದ್ದೆ

ರಷ್ಯದ ಮಾಜಿ ಪ್ರಧಾನಿಯೂ ಮತ್ತು ಇತ್ತೀಚೆಗೆ ಉಪ ಪ್ರಧಾನಿ ಸ್ಥಾನದಿಂದ ಪದಚ್ಯುತಿಗೊಳಿಸಲ್ಪಟ್ಟವರೂ ಆದ ಜಾರ್ಜ್ ಮಾಲೆಂಕೊವರಿಗೆ ಪೂರ್ವ ಕಜಾಕ್‌ಸ್ತಾನದಲ್ಲಿರುವ ನೀರಾವರಿ-ವಿದ್ಯುಚ್ಛಕ್ತಿ ಕೇಂದ್ರದ ಮ್ಯಾನೇಜರ್ ಹುದ್ದೆಯನ್ನು ಕೊಡಲಾಗಿದೆ ಉಚ್ಚಾಟನೆಯಾದವರನ್ನು ಹಿಂಸೆಪಡಿಸುವ ಉದ್ದೇಶವೇನೂ ಸರ್ಕಾರಕ್ಕಿಲ್ಲವೆಂದೂ, ಅವರುಗಳನ್ನು ಬೇರೆ ಕೆಲಸಗಳಿಗೆ ವರ್ಗ ಮಾಡಲಾಗಿರುವುದೆಂದೂ ಮಾಸ್ಕೋ ರೇಡಿಯೊವು ತಿಳಿಸಿದೆ

ಪರಕಾಲ ಸ್ವಾಮಿಗಳವರ ಚಾತುರ್ಮಾಸ್ಯ ಸಂಕಲ್ಪ

ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರು ಮೊನ್ನೆ ತಮ್ಮ ೩೦ನೇ ಚಾತುರ್ಮಾಸ್ಯ ಸಂಕಲ್ಪವನ್ನು ಬೆಳೆಸಿದರು ಈ ಸಂಬಂಧವಾದ ಶಾಸ್ತ್ರೋಕ್ತ ಕರ್ಮಗಳು ಶ್ರೀಗಳವರ ಅಪೇಕ್ಷೆಯಂತೆ ನಿರಾಡಂಬರವಾಗಿ ನಡೆದುವು

ಹರಿಕಥೆ

ನರಸಿಂಹರಾಜ ಮೊಹಲ್ಲಾ ಶ್ರೀ ಶ್ರೀನಿವಾಸ ಸ್ವಾಮಿ ದೇವಸ್ಥಾನದಲ್ಲಿ ನಾಳೆ ಸಾಯಂಕಾಲ ೬ ೩೦ ಘಂಟೆಗೆ ಭಕ್ತ ಸಿಂಗ್‌ಜಿ ರಾವರಿಂದ ಭಕ್ತ ಕಬೀರ್ ಜನ್ಮ ಎಂಬ ಹರಿಕಥೆ ನಡೆಯುವುದು

ಸಂತಾಪ ಸೂಚನೆ

ಸಾರ್ವಜನಿಕ ವಿದ್ಯಾರ್ಥಿ ನಿಲಯದ ಕಾರ್ಯಕಾರಿ ಸಮಿತಿಯು ಮೊನ್ನೆ ಸಭೆ ಸೇರಿ ನಿಲಯದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ನಂಜನಗೂಡಿನ ಶ್ರೀ ಪಿ ಮಹದೇವಯ್ಯನವರು ಅಕಾಲ ಮರಣ ಹೊಂದಿರುದರಿಂದಾಗಿ ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಒಂದು ನಿಮಿಷ ಮೌನವನ್ನು ಆಚರಿಸಲಾಯಿತು ನಂಜನಗೂಡಿನ ಹೊಸ ಪ್ರಾಥಮಿಕ ಬಾಲಕರ ಶಾಲೆಯ ಉಪಾಧ್ಯಾಯರುಗಳು ಮೊನ್ನೆ ಸಭೆ ಸೇರಿ ಶ್ರೀ ಪಿ ಮಹದೇವಯ್ಯನವರ ನಿಧನಕ್ಕಾಗಿ ಸಂತಾಪ ಸೂಚಕ ನಿರ್ಣಯವನ್ನು ಮಾಡಿ ಬಂಧುಮಿತ್ರರಿಗೆ ಅನುತಾಪವನ್ನು ಸೂಚಿಸಿದರು

Edited, Printed and Published by A R Nagarajan at Sadhvi Press, D Subbiah Road Mysore

ಸ್ಟಾಂಡರ್ಡ್ ಮಿಲ್ಕ್ ಡೈರಿ

ಶಾಲೇ ಜು ರಸ್ತೆ, ಮೈಸೂರು

ಅಪ್ಪಟ ಹಸುವಿನ ಹಾಲನ್ನು ಎದುರಿಗೆ ಕರೆದು ಕೊಡಲಾಗುತ್ತೆ

ಬೆಲೆ ಪೌಂಡಿಗೆ ಮೂರು ಆಣೆ

ಆರ್ಡರುಗಳು ಸದಾ ಬರಮಾಡಿಕೊಳ್ಳುತ್ತವೆ

THE CHAMPION METROPOLITAN COLLEGE OF COMMERCE

Co-operators' Home 100 Road Mysore

78 per cent.100 per cent GOOD RESULTS IN several subjects & Grades

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE, Diploma in Stenography COST & WORKS ACCOUNTANCY Banking, Shorthand, Type-writing etc,

Estd 1917 Fully qualified full-time staff - Educational atmosphere - Fine building and up-to-date equipment — Decent Library and Reading Room — Western Business education in the East — Good results — College's Own Diploma also.

M S PUTTANNA, B Sc, N D Com., F I.B. *Vice-Principal.*

P SUBBARAYA SASTRY, M A, M A (Com), F.I.B *Principal*

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
[illegible]

ಇಂದಿನ ಪತ್ರಿಕೆ ೭ ನಯೆ ಪೈ

OWN YOUR AUTO!
(50 monthly instalments)
Apply for prospectus etc with Re 1 stamps
AUTOMOBILE ASSOCIATION OF INDIA
New Statue Circle, MYSORE

ಸಂಪುಟ : ೧೫] SADHVI । SUNDAY 14—7—1957 ಮೈಸೂರು । ಭಾನುವಾರ ೧೪—೭—೧೯೫೭ । [ಸಂಚಿಕೆ : ೬೩೬

ಕಾಶ್ಮೀರದಲ್ಲಿ ಪಾಕಿಸ್ತಾನದ ವಿನಾಶಕೃತ್ಯ ತಂಡದ ಬಂಧನ

ಕಾಶ್ಮೀರದಲ್ಲಿ ಪಾಕಿಸ್ತಾನದ ವಿನಾಶ ಕೃತ್ಯಕಾರರ ಬಂಧನ

ಭಾರಿ ಪ್ರಮಾಣದ ಸಿಡಿತದ ವಸ್ತುಗಳ ಪತ್ತೆ

ಕಾಶ್ಮೀರದಲ್ಲಿ ಮೊನ್ನೆ ವಿನಾಶಕೃತ್ಯ ನಡೆಸುವ ತಂಡವೊಂದನ್ನು ಬಂಧಿಸಲಾಯಿತು. ಈ ಸಂಬಂಧವಾಗಿ ಪಾಕಿಸ್ತಾನದಿಂದ ಕಾಶ್ಮೀರಕ್ಕೆ ಸಾಗಿಸಲಾಗಿರುವ ಭಾರಿ ಪ್ರಮಾಣದ ಸಿಡಿತದ ವಸ್ತುಗಳು ಮತ್ತು ಜಮ್ಮು ಮತ್ತು ಶ್ರೀನಗರಗಳಲ್ಲಿ ಇತ್ತೀಚೆಗೆ ಆದ ಸಿಡಿತಗಳಿಗೆ ಸಂಬಂಧಪಟ್ಟ ದಾಖಲೆಗಳು ಕಾಶ್ಮೀರದ ಪೊಲೀಸರಿಗೆ ದೊರೆತುವೆಂದು ಹೇಳಲಾಗಿದೆ. ಬಂಧಿಸಲ್ಪಟ್ಟವರಲ್ಲಿ ಪಾಕಿಸ್ತಾನದ ಇಬ್ಬರು ಮಾಜಿ ಸೈನಿಕರು ಮತ್ತು ಕಳೆದ ತಿಂಗಳು ಕಾಶ್ಮೀರಕ್ಕೆ ಆಗಮಿಸಿದ ಅವರ ಏಜೆಂಟರುಗಳಿರುವರು. ಅವರು ಕೊಟ್ಟ ವಿವರಣೆಯಿಂದ ಶ್ರೀನಗರದಲ್ಲಿ ಒಂದು ಕಡೆ ಹೂತಿಡಲಾಗಿದ್ದ ಬಾಂಬನ್ನು ಪತ್ತೆ ಮಾಡಲಾಯಿತು. ಕಳೆದ ವರ್ಷ ಇದೇ ಸಮಯದಲ್ಲಿ ದೆಹಲಿಯಲ್ಲಾದ ಬಾಂಬು ಸ್ಫೋಟನೆಗಳಿಗೆ ಈ ತಂಡವೇ ಕಾರಣವೆಂದು ಪೊಲೀಸರು ಭಾವಿಸಿರುವರು. ಅವರುಗಳ ಮುಖ್ಯ ಕೇಂದ್ರವು ಆಜಾದ್ ಕಾಶ್ಮೀರದಲ್ಲಿದ್ದು, ಕರಾಚಿಯಿಂದ ಅದಕ್ಕೆ ಸೂಚನೆಗಳು ಬರುತ್ತಿರುವುದಾಗಿಯೂ ಗೊತ್ತಾಗಿದೆ. ಕಾಶ್ಮೀರದಲ್ಲಿ ಶಾಂತಿ ಕಲಕುವುದೇ ಇವರ ಮೂಲ ಉದ್ದೇಶವೆಂದು ಹೇಳಲಾಗಿದೆ.

ಹಸಿದ ಹೊಟ್ಟೆಯಿಂದ ಆಂಧ್ರ ಸರ್ಕಾರದ ನೌಕರರಿಂದ ಕೆಲಸ

ಆಂಧ್ರ ಸರ್ಕಾರದ ನಾನ್ ಗೆಜೆಟೆಡ್ ನೌಕರರು ಕಳೆದ ೬ನೇ ತಾರೀಕಿನಿಂದ "ಸಾಹಸ್ರಯದ ಬಿಲ್ಲೆ" ಯನ್ನು ಧರಿಸಿ, ಊಟ ಮಾಡದೆ ಉದ್ಯೋಗಗಳಿಗೆ ಹೋಗುತ್ತಿರುವರೆಂದು ವರದಿಯಾಗಿದೆ. ಕಛೇರಿಗಳಲ್ಲಿರುವ ಕ್ಯಾಂಟೀನುಗಳಿಗೆ ಯಾವ ನೌಕರರೂ ಹೋಗುತ್ತಿಲ್ಲ. ಸರ್ಕಾರಿ ಕೆಲಸಗಳು ನಿಧಾನವಾಗಿ ನಡೆಯುತ್ತಿದ್ದರೂ ಕೆಲಸ ನಿಂತಿಲ್ಲ. ನಾನಾ ಕಡೆಗಳಲ್ಲಿ ಬಿಲ್ಲೆ ಧರಿಸಿದ ನೌಕರರುಗಳು ಮೆರವಣಿಗೆ ನಡೆಸುತ್ತಾರೆ. ಅನಂತಪುರದಲ್ಲಿ ೧,೨೦೦ ನೌಕರರು, ಮಚಲಿಪಟ್ಟಣದಲ್ಲಿ ೬೦೦ ಜನರು ಭಾಗವಹಿಸಿದ್ದರು. ಭೀಮಾವರ, ಶ್ರೀಕಾಕುಳ ಮತ್ತು ಆದವಾನಿಗಳಲ್ಲೂ ಮೆರವಣಿಗೆಗಳು ಆದುವು.

ಉಪಾಧ್ಯಾಯರ ವರ್ಗಕ್ಕಾಗಿ ವಿದ್ಯಾರ್ಥಿಗಳ ಮುಷ್ಕರ

ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರನ್ನು ವರ್ಗ ಮಾಡುವಂತೆ ಒತ್ತಾಯಪಡಿಸಲು ಅಲ್ಲಿನ ವಿದ್ಯಾರ್ಥಿಗಳು ಮೊನ್ನೆ ಮುಷ್ಕರ ಹೂಡಿ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಅಂತರ ಸಂಸ್ಥಾನ ಜಂಗಳನ ಬಂಧನ

ಬೆಂಗಳೂರು ಬಳಿ ಕೃಷ್ಣರಾಜಪುರದಲ್ಲಿ ಪೊಲೀಸರು ಸೌರಾಷ್ಟ್ರದ ಬದ್ರುದ್ದೀನ್ ವಿಶ್ವಂಭರಲಾಲ್ ಎಂಬುವನನ್ನು ಅನುಮಾನದ ಮೇಲೆ ಬಂಧಿಸಿರುತ್ತಾರೆ. ಆತನು ಭಾರತವಿದ್ಯದ ಕಲ್ಪತ್ತದಲ್ಲಿ ಹಲವಾರು ಮೋಸದ ಕೃತ್ಯಗಳ ಸಂಬಂಧವಾಗಿ ಆತನನ್ನು ಬಂಧಿಸಲಾಗಿದೆ.

ಸಂಸ್ಥಾನದಲ್ಲಿ ರೇಷ್ಮೆ ತಯಾರಿಕೆ ಶಿಕ್ಷಣ ಕೇಂದ್ರ

ಬೆಂಗಳೂರು ೧೪

ಸಂಸ್ಥಾನದ ರೇಷ್ಮೆ ಇಲಾಖೆಯ ಅಂಕಿಅಂಶಗಳ ವಿಭಾಗವನ್ನು ಇನ್ನೂ ಮುಂದುವರಿಸಿಕೊಂಡು ಬರಲಾಗುವುದೆಂದೂ, ಅದಕ್ಕಾಗಿ ಕೇಂದ್ರ ಸರ್ಕಾರದವರು ೩,೦೦೦ ರೂ.ಗಳನ್ನು ಮಂಜೂರು ಮಾಡಿರುವರೆಂದೂ ಭಾರತ ಸರ್ಕಾರದ ಪ್ರಕಟನೆ ತಿಳಿಸಿದೆ. ಸಂಸ್ಥಾನದಲ್ಲಿ ರೇಷ್ಮೆ ತಯಾರಿಕೆ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಯೋಜನೆಯನ್ನು ತಯಾರಿಸಿರುತ್ತಾರೆ. ರೇಷ್ಮೆ ಹುಳುಗಳ ಔಷ್ಟ್ರಕಾಹಾರದ ಬಗ್ಗೆ ಸಂಶೋಧನೆಯನ್ನು ಮುಂದುವರಿಸಲಾಗುವುದು. ದೇಶದ ಒಟ್ಟು ಮೂರು ಸಂಸ್ಥಾನಗಳಲ್ಲಿ ರೇಷ್ಮೆ ಸಂಶೋಧನೆಗಾಗಿ ಕೇಂದ್ರದವರು ಒದಗಿಸಲಿರುವ ೩೦,೦೦೦ ರೂ. ಪೈಕಿ ಮೈಸೂರಿಗೂ ಒಂದು ಭಾಗವು ಸಿಗುವುದು.

ಪಾರಿಭಾಷಿಕ ಶಾಲೆಗಳಲ್ಲಿ ಹೆಚ್ಚು ಸ್ಥಾನಕ್ಕೆ ಅನುಮತಿ

ಬೆಂಗಳೂರು ಜಯಚಾಮರಾಜೇಂದ್ರ ಔದ್ಯೋಗಿಕ ಶಿಕ್ಷಣ ಶಾಲೆ ಮತ್ತು ಮಂಗಳೂರಿನ ಪಾಲಿಟೆಕ್ನಿಕ್ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರದವರು ಅನುಮತಿಯಿತ್ತಿರುವರು. ಅದರ ಪರಿಣಾಮವಾಗಿ ಬೆಂಗಳೂರು ಶಾಲೆಯಲ್ಲಿ ೭೦ ಮತ್ತು ಮಂಗಳೂರು ಶಾಲೆಯಲ್ಲಿ ೯೧ ಮಂದಿ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಾಗುವುದು.

ರೈಲ್ವೆ ಟಿಕೆಟ್ ಎಕ್ಸಾಮಿನರು, ಮೇಸ್ತ್ರಿಗಳಿಗೆ ಹೆಚ್ಚು ದರ್ಜೆ

ರೈಲ್ವೆ ಬೋರ್ಡಿನವರೊಡನೆ ನೌಕರರ ಸಂಘದ ರಾಷ್ಟ್ರೀಯ ಸಂಸ್ಥೆಯ ಪ್ರತಿನಿಧಿಗಳು ನಡೆಸಿರುವ ಮಾತುಕತೆಗಳ ಪರಿಣಾಮವಾಗಿ ಟಿಕೆಟ್ ಚೆಕ್ಕಿಂಗ್ ಸಿಬ್ಬಂದಿ, ಫೋರ್‌ಮೆನ್, ಮೇಸ್ತ್ರಿಗಳು ಮತ್ತು ಸಿಗ್ನಲರುಗಳ ದರ್ಜೆಯು ಹೆಚ್ಚಿರುತ್ತದೆ. ಒಟ್ಟು ನೌಕರರಲ್ಲಿ ದರ್ಜೆಗಳನ್ನು ಪುನರ್‌ವಿಂಗಡಣೆ ಮಾಡಬೇಕಾಗಿರುವ ಇನ್ನೂ ೪೮೦ ವರ್ಗದವರು ಇರುವರು. ಅವರ ವಿಷಯವನ್ನು ಮುಂದಿನ ತಿಂಗಳು ಪರಿಶೀಲಿಸಲಾಗುವುದು.

[illegible] ಸಮಿತಿಗೆ

[illegible] ಮೈಸೂರು ಮಾಲಾಡಳಿತ ಸಂಸ್ಥಾನದ ವಿಧಾನ ಸಭೆಯ ನಾಯಕ ಸಮಿತಿಗೆ ಒಪ್ಪಿಸಿದೆ. ಹಣಕಾಸಿನ ಮಂತ್ರಿಯವರು ಅದರ ಅಧ್ಯಕ್ಷರು. ನ್ಯಾಯಾಂಗ ಮಂತ್ರಿ ಶ್ರೀ ಬಾಳಗಾರವರೂ, ಶ್ರೀಗಳಾದ ಕಡಿದಾಳ್ ಮಂಜಪ್ಪ, ಎ. ಭೀಮಪ್ಪನಾಯಕ್, ಕೆ. ಪುಟ್ಟಸ್ವಾಮಿ, ಎ. ವಿ. ನರಸಿಂಹರೆಡ್ಡಿ, ಕೆ. ಪುಟ್ಟಸ್ವಾಮಿ, ಎ. ರಾಜಯ್ಯ, ಎಲ್. ಎಸ್. ವೆಂಕಾಜಿರಾವ್, ಕೆ. ಎಫ್. ಪಾಟೀಲ್, ಅಣ್ಣಾರಾವ್ ಗಣಮುಖಿ, ಕೆ. ಲಿಂಗಪ್ಪ, ಆರ್. ನಾಗನಗೌಡ, ಬಿ. ಕೆ. ಪುಟ್ಟರಾಮಯ್ಯ, ಜಿ. ಎಂ. ಪುಟ್ಟಣ್ಣ ಮುಂತಾದವರೂ ಸದಸ್ಯರಾಗಿರುವರು. ೧ ವಾರದಲ್ಲಿ ಸಮಿತಿಯು ವರದಿಯನ್ನು ಒಪ್ಪಿಸಬೇಕು.

ಕೇಂದ್ರದ ಸಾಲದಲ್ಲಿ ಅರ್ಧದ ಮನ್ನಾಕ್ಕೆ ಮನವಿ

ಹಣಕಾಸಿನ ಸಮಿತಿಗೆ ಮೈಸೂರಿನ ಕೋರಿಕೆ

ಬೆಂಗಳೂರು ೧೪

ನೆನ್ನೆ ವಿಧಾನ ಸಭೆಯಲ್ಲಿ ಹಣಕಾಸಿನ ಮಂತ್ರಿ ಶ್ರೀ ಮರಿಯಪ್ಪನವರು ಆಯವ್ಯಯ ಚರ್ಚೆಗೆ ಉತ್ತರವಿತ್ತು, ಕೇಂದ್ರದಿಂದ ಪಡೆದಿರುವ ಸಾಲ (೪೮ ಕೋಟಿ ರೂ.) ದಲ್ಲಿ ಅರ್ಧವನ್ನು ಮನ್ನಾ ಮಾಡುವಂತೆ ಕೇಂದ್ರ ಹಣಕಾಸಿನ ಸಮಿತಿಯನ್ನು ಮೈಸೂರು ಸರ್ಕಾರದವರು ಕೋರಿರುವರೆಂದು ತಿಳಿಸಿದರು.

ಹಣಕಾಸಿನ ಪರಿಸ್ಥಿತಿಯಿಂದ, ಖಾಸಗಿ ವಿದ್ಯಾ ಸಂಸ್ಥೆಗಳನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳಲು ಈಗ ಸಿದ್ಧವಾಗಿಲ್ಲವೆಂದೂ, ಇಡೀ ಸಂಸ್ಥಾನದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನೂ ಜಾರಿಗೆ ತರಲು ಸಾಧ್ಯವಿಲ್ಲವೆಂದೂ ಅವರು ಹೇಳಿದರು. ಕೇಂದ್ರದಿಂದ ಬಂದ ಹಣವನ್ನು ಅಧಿಕಾರಿಗಳ ಸಂಬಳವನ್ನು ಕೊಡಲು ಉಪಯೋಗಿಸಿಲ್ಲವೆಂದು ಹೇಳಿದರು. ಮಾರಾಟ ತೆರಿಗೆಯ ಇಡಿ ಪದ್ಧತಿಯನ್ನು ಪುನರ್ವ್ಯವಸ್ಥೆಗೊಳಿಸಿ, ತೆರಿಗೆದಾರರಿಗೆ ಕಿರುಕುಳವನ್ನು ತಪ್ಪಿಸಲಾಗುವುದೆಂದು ಅವರು ಸೂಚಿಸಿದರು.

ಕೇರಳ ಶಾಸನ ಸಭೆ ಬಳಿ ಪ್ರಜಾ ಸಮಾಜವಾದಿಗಳ ಪ್ರದರ್ಶನ

ಕೇರಳದಲ್ಲಿ ಆಹಾರ ಧಾನ್ಯದ ಬೆಲೆ ತಗ್ಗಿಸಲು ಒತ್ತಾಯಪಡಿಸುವುದಕ್ಕಾಗಿ ಅಲ್ಲಿನ ವಿಧಾನ ಸಭೆ ನಡೆಯುತ್ತಿದ್ದಾಗ ನೆನ್ನೆ ಸುಮಾರು ೨೦೦ ಮಂದಿ ಪ್ರಜಾ ಸಮಾಜವಾದಿ ಪ್ರದರ್ಶನಕಾರರು ಅಲ್ಲಿಗೆ ನುಗ್ಗಲು ಪ್ರಯತ್ನಪಟ್ಟರು. ಕೂಡಲೇ ಸಭಾ ಭವನದ ಬಾಗಿಲುಗಳನ್ನು ಹಾಕಿಸಿ, ಪ್ರದರ್ಶನಕಾರರು ಸಭೆಗೆ ಪ್ರವೇಶಿಸದಂತೆ ತಡೆಯಲು ಪೊಲೀಸರನ್ನು ಕರೆಸಲಾಯಿತು. ಪ್ರದರ್ಶನಕಾರರು ಮುಖ್ಯ ಮಂತ್ರಿ ನಂಬೂದಿರಿಪಾದ್ ಮತ್ತು ಆಹಾರ ಮಂತ್ರಿ ಕೆ. ಸಿ. ಜಾರ್ಜ್‌ರವರನ್ನು ಭೇಟಿ ಮಾಡಲು ಪೊಲೀಸರ ತಡೆಯನ್ನು ಲೆಕ್ಕಿಸದೆ ಮುಂದೆ ನುಗ್ಗಿದರು. ಹೊರಗಡೆ ಗಲಾಟೆ ಪರಿಣಾಮವಾಗಿ ಸ್ವಲ್ಪ ಹೊತ್ತು ಸಭಾ ಕಾರ್ಯಕ್ರಮವು ನಿಂತಿತು. ಸಭಾ ಸದಸ್ಯರಾದ ಪ್ರಜಾ ಸಮಾಜವಾದಿ ಮುಖಂಡ ಪಟ್ಟಂ ತಾನು ಪಿಳ್ಳೆಯವರು ಪ್ರದರ್ಶನಕಾರರನ್ನು ಕಂಡು ಶಾಂತಿಯಿಂದ ವರ್ತಿಸುವಂತೆ ಹೇಳಿದರಲ್ಲದೆ, ಸಭಾ ಭವನದಿಂದ ಹೊರಕ್ಕೆ ಕರೆದುಕೊಂಡು ಹೋದರು. ಅವರುಗಳ ನಾಯಕರು ಅಕ್ಕಿ ಬೆಲೆಯನ್ನು ತಗ್ಗಿಸುವಂತೆ ಕೋರುವ ಮನವಿ ಪತ್ರವನ್ನು ಮುಖ್ಯ ಮಂತ್ರಿಗಳಿಗೆ ಅರ್ಪಿಸಿದರು. ಗಲಾಟೆಯಲ್ಲಿ ಒಬ್ಬ ಪ್ರದರ್ಶನಕಾರನು ಪ್ರಜ್ಞೆ ತಪ್ಪಿದನು.

ರೈಲು-ಲಾರಿ ಡಿಕ್ಕಿಯಿಂದ ಡ್ರೈವರನ ಸಾವು

ದಾವಣಗೆರೆಯ ರೆಗ್ಯುಲೇಟೆಡ್ ಮಾರ್ಕೆಟ್ ಬಳಿ ಲೆವೆಲ್ ಕ್ರಾಸಿಂಗ್‌ನಲ್ಲಿ ಎಣ್ಣೆ ಕಂಪೆನಿಯೊಂದಕ್ಕೆ ಸೇರಿದ ಲಾರಿಯೊಂದು ನೆನ್ನೆ ಸಂಜೆ ಹುಬ್ಬಳ್ಳಿ-ಅರಸೀಕೆರೆ ರೈಲಿಗೆ ಡಿಕ್ಕಿ ಹೊಡೆದು ರಾಜಪ್ಪ ಎಂಬ ಲಾರಿ ಡ್ರೈವರನು ಮಡಿದನು.

ಬೊಂಬಾಯಿ ಪೌರಸಭೆಯ ೩೦,೦೦೦ ನೌಕರರ ಮುಷ್ಕರ

ಬೊಂಬಾಯಿ ಪೌರಸಭೆಯ ೩೦,೦೦೦ ಮಂದಿ ನೌಕರರು ನೆನ್ನೆ ಪರಾತ್ರನೆ ಮುಷ್ಕರ ನಡೆಸಿದರು. ಪೌರಸಭೆ ಮತ್ತು ನೌಕರರ ಪ್ರತಿನಿಧಿಗಳ ನಡುವೆ ಆದ ತಾತ್ಕಾಲಿಕ ಒಪ್ಪಂದವನ್ನು ವಾಪಸು ಪಡೆಯಲು ಮೇಯರ್ ಮತ್ತು ಕಮೀಷನರು ಪ್ರಯತ್ನಿಸಿದುದೇ ಮುಷ್ಕರಕ್ಕೆ ಕಾರಣವೆಂದು ಹೇಳಲಾಗಿದೆ. ಎಲ್ಲ ವರ್ಗಗಳ ನೌಕರರೂ ಮುಷ್ಕರದಲ್ಲಿ ಭಾಗವಹಿಸಿದ್ದರೆಂದು ತಿಳಿದುಬಂದಿದೆ.

ಜಪಾನಿನಲ್ಲಿ ವಿಚಾರಣೆಗಾಗಿ ಅಮೆರಿಕಾ ಪ್ರಜೆಯು ವಶ

ಅಮೆರಿಕಾ ಸುಪ್ರೀಂ ಕೋರ್ಟಿನ ಆಜ್ಞೆ

ಜಪಾನಿನಲ್ಲಿ ಕೊಲೆಯೊಂದರ ವಿಚಾರಣೆಗೆ ಗುರಿಪಡಿಸಲು ಅಮೆರಿಕಾ ಸೈನ್ಯದ ಪ್ರವೀಣ ವಿಲಿಯಂ ಗಿರಾರ್ಡ್ ಎಂಬುವನನ್ನು ಜಪಾನಿನ ಸರ್ಕಾರಕ್ಕೆ ಒಪ್ಪಿಸುವಂತೆ ಅಮೆರಿಕದ ಸುಪ್ರೀಂ ಕೋರ್ಟ್ ಆಜ್ಞಾಪಿಸಿದೆ. ಪ್ರವೀಣನು ಈ ತಿಂಗಳು ಜಪಾನಿನ ಯುವತಿಯೊಬ್ಬಳನ್ನು ವಿವಾಹವಾಗಿದ್ದನು. ಆತನು ಉದ್ದಿಶ್ಯಪೂರ್ವಕವಾಗಿಯೇ ಜಪಾನಿನ ಬೇರೊಬ್ಬ ಮಹಿಳೆಯನ್ನು ಗುಂಡು ಹೊಡೆದು ಕೊಂದನೆಂದು ಹೇಳಲಾಗಿದೆ.

೧೦೫ ವರ್ಷದ ವೃದ್ಧರ ಮರಣ

ಗುಂಡ್ಲುಪೇಟೆಯ ಜಮೀನುದಾರರೂ ಮತ್ತು ಊರಿನ ಅತ್ಯಂತ ಹಿರಿಯರೂ ಆಗಿರುವ ಶ್ರೀ. ೮೦ ವೆಂಕಟಶೆಟ್ಟರು ಮೊನ್ನೆ ದಿನ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಮರಣ ಪರ್ಯಂತವೂ ಆರೋಗ್ಯವುಳ್ಳವರಾಗಿಯೇ ಇದ್ದರು. ಇವರಿಗೆ ಮರುಹಬ್ಬ ಸಹಾ ಹುಟ್ಟಿದ್ದುವು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧು ಮಿತ್ರರಿಗೆ ಹೃತ್ಪೂರ್ವಕ ಅನುತಾಪವನ್ನು ಸೂಚಿಸುತ್ತೇವೆ.

ಅಪೀಲಿನಲ್ಲಿ ಕಳ್ಳತನದ ಬಗ್ಗೆ ಸಜಾ ಆದ ಮಹಿಳೆಯ ಖುಲಾಸೆ

ಬೆಂಗಳೂರು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಜಿ. ನಟರಾಜನ್‌ರವರು ಕಳ್ಳತನದ ಮೊಕದ್ದಮೆಯಲ್ಲಿ ೨ ವರ್ಷ ಕಠಿಣ ಸಜಾಕ್ಕೆ ಗುರಿಯಾಗಿದ್ದ ವಿಮಲ ಎಂಬಾಕೆಯನ್ನು ಖುಲಾಸೆ ಮಾಡಿರುತ್ತಾರೆ. ಬೆಂಗಳೂರಿನಲ್ಲಿ ಸಿದ್ದಣ್ಣಗೌಡ ಎಂಬುವರು ರೈಲ್ವೆ ನಿಲ್ದಾಣದಲ್ಲಿದ್ದಾಗ ಅವರ ೨೦೦ ರೂ.ಗಳ ಅಪಹಾರ ಸಂಬಂಧದಲ್ಲಿ ಆಕೆ, ಆಕೆಯ ಗಂಡ ಹರಿಪ್ರಸಾದ್, ರಾಮಲಾಲ್ ಮತ್ತು ಜಗದೀಶ್ ಪ್ರಸಾದ್‌ರವರಿಗೆ ಅದೇ ರೀತಿ ಶಿಕ್ಷೆಯಾಗಿತ್ತು. ಹೆಂಗಸು ಅಪರಾಧ ಮಾಡಿದಳೆಂಬುದಕ್ಕೆ ರುಜುವಾತಿಲ್ಲವೆಂದೂ ಕರ್ತವ್ಯವಂತೆಯಾದ ಹಿಂದೂ ಮಹಿಳೆಯಾದ ಆಕೆಯು ತನ್ನ ಗಂಡನು ಕಳ್ಳನೆಂದು ಗೊತ್ತಿದ್ದರೂ ಅವನನ್ನು ಹಿಂಬಾಲಿಸಿ ಮದ್ರಾಸಿಗೆ ಹಿಡಿಹೋದಳೆಂದೂ, ಆತನ ಕೃತ್ಯ ಸುಖಗಳಲ್ಲಿ ಆಕೆಯು ಪಾಲುದಾರಳಾಗಿರುವಳೆಂದೂ ನ್ಯಾಯಾಧೀಶರು ತಿಳಿಸಿ ಗಂಡನ ಅಪರಾಧಕ್ಕೆ ಹೆಂಡತಿಯನ್ನು ಶಿಕ್ಷಿಸುವುದು ಸರಿಯಲ್ಲವೆಂದೂ ಸೂಚಿಸುತ್ತಾರೆ. ಆಕೆಯ ಶಿಕ್ಷೆಯನ್ನು ಖುಲಾಸೆ ಮಾಡಲಾಗಿದೆ.

ವಾರ ಭವಿಷ್ಯ

ತಾ॥ ೧೪ ೭ ೫೭ರಿಂದ ೨೦ ೭ ೫೭ರ ವರೆಗೆ

ಮೇಷ:—ಬಂಧುಮಿತ್ರರ ಸಹಾಯ, ಆರೋಗ್ಯ ಉತ್ತಮ, ವ್ಯಾಪಾರಾದಿಗಳಲ್ಲಿ ಲಾಭ, ನೌಕರರ ಅಭೀಷ್ಟ ಸಿದ್ಧಿ ವಸ್ತ್ರ ಒಡವೆ ನೂತನ ಸಖ್ಯ, ಶುಭ ಕಾರ್ಯಗಳಿಗೆ ಧನವ್ಯಯ

ವೃಷಭ—ಹೊಸ ಉದ್ಯಮ ಕೈಗೊಳ್ಳಬೇಡಿ. ಶತ್ರು ಕಾಟ, ಮನೋಚಿಂತೆ, ಋಣ ಸರಿಯಾಗ. ಮಿತ್ರರಿಂದ ನಿರಾಶೆ, ಧನಾಗಮ

ಮಿಥುನ:—ಮಿಶ್ರ ಫಲ, ಆರ್ಥಿಕ ಮುಗ್ಗಟ್ಟು, ಅನಾರೋಗ್ಯ, ಅಶಾಂತಿ, ಅಪಘಾತಗಳ ಸಂಭವ, ವ್ಯಾಪಾರಾದಿಗಳಲ್ಲಿ ಸಾಧ್ಯಮ ಫಲ, ನೌಕರರಿಗೆ ಅನುಕೂಲ.

ಕಟಕ:—ಮಾನಸಿಕ ಅಶಾಂತಿ. ಅನಾರೋಗ್ಯ, ಜಗಳ, ವ್ಯರ್ಥ ಖರ್ಚು, ಅಪವಾದ ... ತನದ ಸಂಭವ, ನೌಕರಿಯಲ್ಲಿ ಜಗಪ್ಪೆ, ಪಿತ್ರಾರ್ಜಿತವಿಂದ ಧನಾಗಮ

ಸಿಂಹ:—ವ್ಯಾಪಾರವ್ಯವಹಾರಗಳಲ್ಲಿ ಲಾಭ ಆರೋಗ್ಯ ನೆಟ್ಟಗೆ, ನೌಕರಿಯಲ್ಲಿ ಸಮಾಧಾನ ಸ್ಥಿತಿ, ಪ್ರವಾಸದಲ್ಲಿ ಲಾಭ, ನೌಕರರಿಗೆ ಮೇಲಧಿಕಾರಿಗಳಿಂದ ಸನ್ಮಾನ

ಕನ್ಯಾ—ಕಾರ್ಯ ಸಿದ್ಧಿ ಸಂತುಷ್ಟಿ, ಆರೋಗ್ಯ ನೆಟ್ಟಗೆ ಆರ್ಥಿಕ ಸ್ಥಿತಿ ಸಮಾಧಾನಕರ, ಬಂಧುಮಿತ್ರರ ಸಹಾಯ, ವ್ಯಾಪಾರವ್ಯವಹಾರ ಮತ್ತು ಉದ್ಯೋಗಗಳಲ್ಲಿ ಲಾಭ

ತುಲಾ:—ಮುನ್ನುಗ್ಗಿ ಕೆಲಸ ಮಾಡಿದರೆ ಯೋಗ್ಯ ಪುರಸ್ಕಾರ, ಉಚಿತ ಕಾರ್ಯ ವ್ಯಾಪಾರವ್ಯವಹಾರಗಳಲ್ಲಿ ತೃಪ್ತಿಕರ ಸ್ಥಿತಿ, ನೌಕರರಿಗೆ ವಿಶ್ವಾಸ.

ವೃಶ್ಚಿಕ:—ಆರ್ಥಿಕ ಮುಗ್ಗಟ್ಟು, ಅನಾರೋಗ್ಯ, ವೃಥಾ ಅಲೆದಾಟ, ಆರೋಗ್ಯ ಉತ್ತಮ, ಕಾರ್ಯ ಸಿದ್ಧಿ, ಮಿತ್ರ ಸಹಾಯ, ನೌಕರರಿಗೆ ಅನುಕೂಲ ಸನ್ನಿವೇಶ ಧನಲಾಭ.

ಧನುಸ್ಸು—ತಾಳ್ಮೆಯಿದ್ದಷ್ಟೂ ಅನುಕೂಲ ಆರ್ಥಿಕ ಸ್ಥಿತಿ ತೃಪ್ತಿಕರ, ಆರೋಗ್ಯ ಉತ್ತಮ. ಕಾರ್ಯ ಸಿದ್ಧಿ, ಶುಭ ಕಾರ್ಯ, ಧನ ಲಾಭ ಶುಭ ವಾರ್ತೆ

ಮಕರ:—ಆರೋಗ್ಯ, ಆರ್ಥಿಕ, ಸಾಮಾಜಿಕ ಸ್ಥಿತಿ ಮಧ್ಯಮ, ಹೊಸ ವ್ಯವಹಾರ ಬೇಡ ಪ್ರವಾಸ ರದ್ದು ಮಾಡಿ, ನೌಕರರಿಗೆ ಸಾಧಾರಣ ಅನಾರೋಗ್ಯ, ಅಲೆದಾಟ.

ಕುಂಭ—ಯಾವ ಹೊಸ ವ್ಯವಹಾರಕ್ಕೂ ಕೈ ಹಾಕಬೇಡಿ, ಎಚ್ಚರಿಕೆಯಿಂದ ವರ್ತಿಸಿ, ಆರೋಗ್ಯ ಕೆಡುವ ಸಂಭವ, ಅಪವಾದ, ವ್ಯಾಪಾರವ್ಯವಹಾರಗಳಲ್ಲಿ ಲಾಭ, ಉದ್ಯೋಗಿಗಳಿಗೆ ಮಿಶ್ರ ಫಲ

ಮೀನ—ಮನೋಭೀಷ್ಟ ಸಿದ್ಧಿ, ಸಾಂಪತ್ತಿಕ ಸ್ಥಿತಿ ಉತ್ತಮ, ಆರೋಗ್ಯ ನೆಟ್ಟಗೆ, ಬಂಧುಮಿತ್ರರಲ್ಲಿ ಗೌರವ, ವ್ಯಾಪಾರವ್ಯವಹಾರಗಳಲ್ಲಿ ಲಾಭ, ಉದ್ಯೋಗಿಗಳಿಗೆ ಬಡ್ತಿ, ಮೇಲಧಿಕಾರಿಗಳನ್ನು ನೋಡಲು ಶುಭ ದಿನ

ವಿವಾಹ ಮಹೋತ್ಸವ

ಕೃಷ್ಣರಾಜ ಮೊಹಲ್ಲಾ ಸೀನಿಯಾಕಟ್ಟೆ ಬೀದಿಯಲ್ಲಿರುವ ಶ್ರೀ ಹೆಚ್. ನಾರಾಯಣಪ್ಪನವರು ತಮ್ಮ ಕುಮಾರಿ ಸೌಭಾಗ್ಯವತಿ ಲೀಲಾಂಬನನ್ನು ನಂಜನಗೂಡಿನ ಕಂಟ್ರಾಕ್ಟರ್ ಶ್ರೀ ಎ. ಪಿ. ಚಂದ್ರಶೇಖರಯ್ಯನವರ ಮಗ ಶ್ರೀ ಸಿ. ಸುಬ್ರಹ್ಮಣ್ಯರವರಿಗೆ ಕೊಟ್ಟು ನಗರದ ಕಲ್ಯಾಣಭವನದಲ್ಲಿ ವಿವಾಹವನ್ನು ಈ ದಿನ ನೆರವೇರಿಸಿದರು

ವಿವಿಧ ಅಪರಾಧಗಳಿಗಾಗಿ ದಂಡ

ಮೈಸೂರು ೧೪

ಮೊನ್ನೆ ದಿನ ಮಂಡಿ ಮೊಹಲ್ಲಾವಲ್ಲಿ ಸಟ್ಟಾ ಜೂಜಾಡುತ್ತಿದ್ದವರನ್ನು ಪೋಲೀಸರು ಹಿಡಿದ್ದ ನೊಕದ್ದಮೆಯಲ್ಲಿ ನೆನ್ನೆ ಖಲೀಲ್‌ಪಾಷಾ ಮೊದಲಾದ ೫ ಜನರಿಗೆ ತಲಾ ೩೫ ರೂ ದಂಡ, ತಪ್ಪಿದರೆ ೧ ವಾರ ಸಾದಾ ಸಜವನ್ನು ವಿಧಿಸಲಾಯಿತು. ... ಶೆಟ್ಟಿ ಗೋವಿಂದಸ್ವಾಮಿ ಎಂಬುವನು ಜುಲ್ಮಾನೆ ಕಟ್ಟದೆ ಜೈಲಿಗೆ ಹೋದನು

... ಮೊಹಲ್ಲಾದಲ್ಲಿ ಇಬ್ರಾಹಿಂ, ಅ... ಖಾನ್ ಆಲವಿ ಮತ್ತು ಹನುಮಯ್ಯ ಎಂಬುವರು ಸಟ್ಟಾ ಆಡುತ್ತಿದ್ದುದಕ್ಕಾಗಿ ಅವರಿಗೆ ತಲಾ ... ರೂ. ದಂಡ ಬಿತ್ತು.

ಅಬ್ದುಲ್ ಕರೀಂ ಅಬ್ದುಲ್‌ಪಾಷಾ ಮತ್ತು ಇಬ್ಬರು ರಾಜಕಾಲು ಜೂಜಾಟವಾಡುತ್ತಿದ್ದುದಕ್ಕಾಗಿ ಅವರಿಗೆ ತಲಾ ೧೦ ರೂ. ದಂಡ ವಿಧಿಸಲಾಯಿತು

ಪಳನಿಸ್ವಾಮಿ ಎಂಬುವನು ಶ್ರೀರಾಂಪೇಟೆಯ ಮೈಸೂರು ಆನಂದಭವನ ಹೋಟೇಲಿನಲ್ಲಿ ಮಹದೇವಿಯೊಡನೆ ಅನೀತಿ ವ್ಯಾಪಾರ ನಡೆಸುತ್ತಿದ್ದನೆಂದು ಅತನಿಗೆ ೩೫ ರೂ ಜುಲ್ಮಾನೆಯಾಯಿತು. ಪೊನ್ನಸ್ವಾಮಿಗೌಂಡರ್, ಮಹಮದ್ ಫಜಲುಲ್ಲಾ, ... ಲ್ ಖುದೂಸ್‌ರವರು ... ಕಟ್ಟೆಗೆ ಮಿಶನಿನಲ್ಲಿ ಸರೋಜಾ, ... ಮತ್ತು ನರಸಿಯವರೊಡನೆ ಅನೀತಿ ವ್ಯಾಪಾರ ನಡೆಸಿದರೆಂದು ಅವರುಗಳಿಗೆ ತಲಾ ... ರೂ ದಂಡವಾಯಿತು.

ನರಸಿ, ಮಹದೇವಿ ಸರೋಜಾ ಮತ್ತು ... ಇವರುಗಳಿಗೆ ಅದೇ ಕಾರಣಕ್ಕಾಗಿ ತಲಾ ... ರೂ ದಂಡ ಹಾಕಲಾಯಿತು

ಅರಮನೆ ಕೆಳ ದರ್ಜೆ ನೌಕರರಿಗೆ ತಿರುಳು

ಅರಮನೆ ನೌಕರರ ಸಂಘದ ಆಡಳಿತ ಸಮಿತಿ ... ರಾದ ಶ್ರೀ ಚಂದ್ರಶೇಖರಯ್ಯ ಮತ್ತು ಶ್ರೀ ದೊಡ್ಡಯ್ಯನವರನ್ನು ಬೆಂಗಳೂರು ಮತ್ತು ... ... [illegible]

... [illegible] ... ಬೇಕೆಂದು ... ಕೋರಿದ್ದಾರೆ

ಶಾರದಾ ಪೂಜಾ ಉತ್ಸವ

ಶ್ರೀ ಪ್ರಸನ್ನ ಶಾರದಾ ಮಂದಿರದಲ್ಲಿ ಗುರುಪೂರ್ಣಿಮ ಪ್ರಯುಕ್ತ ನಾಳೆ ಬೆಳಿಗ್ಗೆ ಅಭಿಷೇಕ ಮತ್ತು ಸಂಜೆ ೭ ಗಂಟೆಗೆ ಬೀದಿಗಳಲ್ಲಿ ಉತ್ಸವವು ಜರುಗುವುದು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್,

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ್ ರಸ್ತೆ, ಮೈಸೂರು (Estd 1911)

ನೌಕರರಿಗೆ ಕನಿಷ್ಠಾಂಶದ ವೇತನ ಅಗತ್ಯ

ಭಾರತದ ಕಾರ್ಮಿಕ ಸಮ್ಮೇಳನದ ಶಿಫಾರಸು

ಭಾರತ ಸರ್ಕಾರ, ಮಾಲಿಕರು ಮತ್ತು ಕಾರ್ಮಿಕರ ಪ್ರತಿನಿಧಿಗಳ ಸಮ್ಮೇಳನವು ದೆಹಲಿಯಲ್ಲಿ ಸೇರಿ ಶಕ್ತಿಯುಳ್ಳ ಕೈಗಾರಿಕೆಗಳು ತಮ್ಮ ನೌಕರರುಗಳಿಗೆ ನ್ಯಾಯಯುವಾದ ಮತ್ತು ಜೀವನ ನಡೆಸಬಹುದಾದ ವೇತನಗಳನ್ನು ಕೊಡುವುದು ಅಗತ್ಯವೆಂದು ಸೂಚಿಸಿತು. ದ್ವಿತೀಯ ಯೋಜನೆ ಅವಧಿಯಲ್ಲಿ ಕನಿಷ್ಠಾಂಶ ವೇತನವನ್ನು ಗೊತ್ತುಪಡಿಸುವುದು ಅಗತ್ಯವೆಂದು ಸಮ್ಮೇಳನವು ತಿಳಿಸಿತು

ರಾಜರುಗಳ ಆಸ್ತಿ ಬಗ್ಗೆ ಪಟ್ಟಿ

ಭಾರತ ಸರ್ಕಾರದವರಿಂದ ರಾಜಧನ ಸ್ವೀಕರಿಸುತ್ತಿರುವ ರಾಜರುಗಳ ಆಸ್ತಿ ಬಗ್ಗೆ ವಿವರಣೆಯನ್ನು ಶೇಖರಿಸಲು ಭಾರತ ಸರ್ಕಾರದವರು ಪ್ರಯತ್ನಿಸುತ್ತಿರುವರು. ಆಸ್ತಿ ಮತ್ತು ವೆಚ್ಚದ ತೆರಿಗೆಯು ಅವರಿಗೂ ಅನ್ವಯಿಸುವ ಸಂಬಂಧವಾಗಿ ಈ ಕ್ರಮ ಕೈಗೊಳ್ಳಲಾಗುವುದೆಂದು ಹೇಳಲಾಗಿದೆ

ಲೋಹಿಯಾ-ಜಯಪ್ರಕಾಶ್ ಸಮಾಗಮ

ಸಮಾಜವಾದಿ ಪಕ್ಷದ ನಾಯಕರಾದ ರಾಮ ಮನೋಹರ ಲೋಹಿಯಾರವರು ನಾಳೆ ಲಕ್ನೋವಿನಲ್ಲಿ ಜಯಪ್ರಕಾಶ ನಾರಾಯಣ್‌ರವರ ಆಹ್ವಾನದ ಮೇಲೆ ಅವರನ್ನು ಭೇಟಿ ಮಾಡುವರು ಪ್ರಜಾ ಸಮಾಜವಾದಿ ಮತ್ತು ಸಮಾಜವಾದಿ ಪಕ್ಷಗಳ ಐಕ್ಯದ ಸಾಧ್ಯತೆಯು ನಡೆಯುವುದೆ ಎಂಬುದರ ಬಗ್ಗೆ ಬಂದಿರುವ ವರದಿಯ ಮೇಲೆ ವ್ಯಾಖ್ಯಾನ ಮಾಡಲು ಲೋಹಿಯಾರವರು ಇಚ್ಛಿಸಲಿಲ್ಲ

ಬಸವನ ಕೊಲೆ ಮತ್ತು ಆತ್ಮಹತ್ಯೆ

... ಟ್ರಂಟೂ ಎಂಬಲ್ಲಿ ಕಳೆದ ವಾರ ಬಾಪಿಯಾಪೊ ಹಾಲ್ಲಾಮಲಿ ಎಂಬಾತನು ೪ ಜನರನ್ನು ಗುಂಡು ಹೊಡೆದು ಕೊಂದು, ಐವರನ್ನು ... ಗೊಳಿಸಿ ನಂತರ ತಾನೂ ಆತ್ಮಹತ್ಯೆ ಮಾಡಿಕೊಂಡನೆಂದು ವರದಿಯಾಗಿದೆ ವಿಚಿತ್ರವೆಂದರೆ ಅವನ ಮತಿಗೆಟ್ಟು ಆತ್ಮಹತ್ಯೆಗೆ ಕಾರಣವಾದನೆಂದು ಹೇಳಲಾಗಿದೆ

ಸಹಾಯಾರ್ಥ ವಿವಿಧ ವಿನೋದಾವಳಿ

ಶರವರ್ತೀ ಪ್ರಸನ್ನ ಶ್ರೀರಾಮ ಮಂದಿರದ ಕಟ್ಟಡದ ನಿಧಿಗಾಗಿ ಈ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿದೆ

ನ ಳಿ ನ್ಸ್

603, ಕಾಲೇಜ್ ರಸ್ತೆ, ಮೈಸೂರು

ನಮ್ಮಲ್ಲಿ ಉತ್ತಮವಾದ

ಫರ್ನಿಚರುಗಳು ಬಾಡಿಗೆಗೆ

ದೊರೆಯುತ್ತವೆ ವಿದ್ಯಾರ್ಥಿಗಳಿಗೆ ರಿಯಾಯಿತಿಯುಂಟು ವಿವರಗಳಿಗೆ ವಿಚಾರಿಸಿರಿ

ಸಣ್ಣ ಕೈಗಾರಿಕೆಗಳಿಗಾಗಿ ಕೇಂದ್ರದಿಂದ ೧೧ ಲಕ್ಷ ರೂ.

ರಾಜಸ್ಥಾನ, ಮೈಸೂರು, ತ್ರಿಪುರ ಮತ್ತು ಆಂಧ್ರ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗಾಗಿ ಕೇಂದ್ರ ಸರ್ಕಾರದವರು ೧೧ ಲಕ್ಷ ರೂ. ಅನ್ನು ಮಂಜೂರು ಮಾಡಿರುತ್ತಾರೆ. ಮೈಸೂರಿನಲ್ಲಿ ವೆಲ್ಡ್ ಪೈಪ್ಪುಗಳನ್ನು ಕೈಯಿಂದ ಮಾಡಬಹುದಾದ ಫಿಟ್ಟಿಂಗ್ ಯಂತ್ರಗಳಿಂದ ತಯಾರಿಸುವ ಬಗ್ಗೆ ಸರ್ಕಾರದವರು ಯೋಜನೆಯೊಂದನ್ನು ಸಿದ್ಧಗೊಳಿಸಿರುತ್ತಾರೆ. ಅದನ್ನು ನಡೆಸಲು ಕೇಂದ್ರದವರು ೫೦,೦೦೦ ರೂ ಗಳನ್ನು ಕೊಟ್ಟಿರುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕ್ಲಾರಿಯೋನೆಟ್. ೭-೧೫ ಬಿ. ಎಸ್ ವಿಜಯರಾಘವ-ದೇವರ ನಾಮಗಳು. ೮-೧೫ ಗಾನವಿಹಾರ ಮಧ್ಯಾಹ್ನ ೧೨ ಮತ್ತು ರಾತ್ರಿ ೧೧ ಬಿ. ಎಸ್ ವಿಜಯರಾಘವ-ಗಾಯನ ೧೨-೩೦ ಬಿ. ಎಸ್. ಸುಬ್ರಹ್ಮಣ್ಯ ಮತ್ತು ಬಿ ಎಸ್ ರಾಮಸ್ವಾಮಿ ವೀಣೆ ಮತ್ತು ಬಿ. ಎಸ್. ಚಂದ್ರಶೇಖರಯ್ಯ-ಪಿಟೀಲು. ೧ ಹಿಂದಿ ಗೀತೆ ೧ ೩೦ ಹಿಂದಿ ಭಜನೆ. ೧-೫೦ ಕ್ಲಾರಿಯೋನೆಟ್ ೨-೧೫ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಸಂಜೆ ೬-೧೦ ಚಾಪವಡ ಗೀತೆಗಳು. ೬ ೩೦ ಗ್ರಾಮಸ್ಥರಿಗಾಗಿ. ೭-೩೦ ಹಿಂದಿ ಗೀತೆ. ೮ ಮಂಗಳ ಗಾನ: ವಾದ್ಯಗೋಷ್ಠಿ ೮-೧೫ ನಿಮ್ಮ ಉತ್ತರಗಳಿಗೆ ಜವಾಬು ೮-೩೦ ಗಾಯನ. ೮-೪೫ ವಾದ್ಯಗೋಷ್ಠಿ ದೆಹಲಿ ರಿಲೇ ೯-೧೫ ಡಾ॥ ಎಸ್. ಆ ಚೊಂಡಾಡೆ-ಗಾಯನ ೯ ೩೦ ಎಲ್ ಲಕ್ಷ್ಮೀಪತಿ-ಕಥಾ ಕಾಲಕ್ಷೇಪ.

ಮೈ ಸೂ ರಿ ನ ಕ ರೆ

ಹೃದಯ ವ್ಯಾಧಿ ನರಗಳ ದೌರ್ಬಲ್ಯ, ಅಜೀರ್ಣ ರೋಗಗಳು, ರಕ್ತದೋಷ ಬುದ್ಧಿ ಭ್ರಮಣೆ, ಸಿಹಿ ಮೂತ್ರ, ಹಿಸ್ಟೀರಿಯಾ, ಮೂಲವ್ಯಾಧಿ ಮತ್ತು ಅನ್ಯ ರೋಗಗಳಿಗೆ

ವೈದ್ಯ ವಾಚಸ್ಪತಿ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ

ರವರ ಸಲಹೆ ಪಡೆಯಿರಿ. ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರಭವನದಲ್ಲಿ

ಪ್ರತಿ ತಿಂಗಳು 17 ನೇ ತಾರೀಖು

(ಬೆಳಿಗ್ಗೆ 7-30 ರಿಂದ ಸಂಜೆ 5ರ ವರೆಗೆ ಭೇಟಿ ಮಾಡಬಹುದು)

ಫೋನ್ ನಂ. 590

ಪ್ರವಾಸ ಕೈಗಳ ವಿಳಾಸ ಮತ್ತು ಇತರ ವಿವರಗಳಿಗೆ ಬರೆಯಿರಿ:—

NAVRATNA KALPA PHARMACY,

JULLUNDUR CITY (India)

Edited, Printed and Published by A R Nagarajan at Sadhvi Press, D Subbiah Road Mysore



ನವೀನ ಮಾದರಿ ಗಡಿಯಾರಗಳಿಗೆ

ಫೇವರ್ ಲ್ಯೂಬಾ, ವೆಸ್ಟೆಂಡ್, ಸೈಮಾ, ರೋಮರ್

ಇತ್ಯಾದಿ, ಇತ್ಯಾದಿ

ರಾಂ ಸತಂಗ ಕಂಪೆನಿ,

ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

ಒಲಂಪಿಯಾ ಟಾಕೀಸ್

12-7-57 ರಿಂದ ಅನೋಖ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು 3-30 6-30 ಮತ್ತು 9-45ಕ್ಕೆ

ರಜಪೂತರ ಮತ್ತು ಮೊಗಲರ ವೈಭವದ ಹಿನ್ನೆಲೆಯಿಂದ ಕೂಡಿದ,

ದಿನೇಶ್ ಫಿಲಂಸ್‌ರವರ ಅನೋಖ ಚಾರಿತ್ರಿಕ ಚಿತ್ರ

ಅಮರ ಸಿಂಹ ರಾಠೋಡ್

(AMAR SINGH RATHAUR)

(ಮೊಗಲ್ ಸಾಮ್ರಾಜ್ಯವನ್ನೇ ನಡುಗಿಸಿದ ಧೀರ)

ಪಾತ್ರ:- ನಿರೂಪರಾಯ್, ಜೈರಾಜ್, ಅಲ್ ನಾಸಿರ್, ಯಶೋಧರ, ಖಟ್ಟು ಹೆಲೆನ್, ಮೀನಾ ಮತ್ತಿತರರು

ಉತ್ತರ ಇಂಡಿಯಾದಲ್ಲಿ ನಾಗಿನ್, ಝನಕ್ ಝನಕ್ ಪಾಯಲ್ ಬಾಜೆ, ಪ್ಯಾಸಾ ಚಿತ್ರಗಳ ರಿಕಾರ್ಡನ್ನು ಮುರಿದು ಖ್ಯಾತಿಗಳಿಸಿದೆ

ಪ್ರಭು ದೇವಾ ಥಿಯೇಟರ್

(ಪದ್ಮಾ ಟಾಕೀಸ್)

14—7—57ನೇ : ಭಾನುವಾರದಿಂದ : ಅನೋಖ 2 ನೇ ವಾರ

★ ಜಯಸಿಂಹ ★

ಎನ್. ಟಿ ರಾಮರಾವ್, ಅಂಜಲೀದೇವಿ, ಎಸ್ ವಿ ರಂಗರಾವ್, ರೇಲಂಗಿ, ಸುಬ್ರಮಣ್ಯಶ್ವರೀ, ರಾಜಸುಲೋಚನ ಮುಂತಾದವರು ನಟಿಸಿರುವ ತಮಿಳು ಚಿತ್ರ

ರಿಜಿಸ್ಟರ್ಡ್ ನಂ. 792

OWN YOUR AUTO!!
(50 monthly Instalments)
Apply for prospectus etc.
with Re. 1 stamps
AUTOMOBILE ASSOCIATION
OF INDIA
New Statue Circle,
MYSORE

ಸಾಧ್ವಿ

ಇಂದಿನ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ

ಸಂಪುಟ : ೧೩] SADHVI : MONDAY 15—7—1957 ಮೈಸೂರು : ಸೋಮವಾರ ೧೫—೭—೧೯೫೭ : [ಸಂಚಿಕೆ : ೨೩೭

ಕಾಲುವೆ ನೀರಿನ ಬಗ್ಗೆ ಪಾಕಿಸ್ತಾನ ಪ್ರಧಾನಿಯ ಬೆದರಿಕೆ

ಬೆಂಗಳೂರು ಮೇಯರರಿಗೆ ಪೌರ ಸತ್ಕಾರ

ಮೈಸೂರು ೧೪

ನಗರದ ಪೌರಸಭೆಯವರು ನೆನ್ನೆ ಬೆಂಗಳೂರು ಮೇಯರ್ ಶ್ರೀ ಚಿಣಾಭಾಯಿ ದೇವಿದಾಸ್ ರವರ ಗೌರವಾರ್ಥವಾಗಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ಮೇಯರರನ್ನು ಸ್ವಾಗತಿಸಿ ನಗರದ ಪೌರಸಭೆಯವರು ನಡೆಸುತ್ತಿರುವ ನಾನಾ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿದರು. ಶ್ರೀ ದೇವಿದಾಸರು ಕೃತಜ್ಞತೆಯನ್ನು ಸೂಚಿಸಿ ತಮಗೆ ಸಂದ ಗೌರವವು ನಗರಕ್ಕೆ ಸಲ್ಲಬೇಕಾದುದೆಂದು ತಿಳಿಸಿದರು.

ಖಾಸಗೀ ಜನರಿಗೂ ಸಂಸ್ಥೆಗಳಿಗೂ ಹಾಕುತ್ತಿರುವ ದರವನ್ನೇ ವಿದ್ಯುಚ್ಛಕ್ತಿ ಇಲಾಖೆಯವರು ಸ್ಥಳೀಯ ಸಂಸ್ಥೆಗಳಿಗೂ ಹಾಕುತ್ತಿರುವುದು ಸರಿಯಲ್ಲವೆಂಬ ಬಗ್ಗೆ ತಾವು ವಿದ್ಯುಚ್ಛಕ್ತಿ ಮಂತ್ರಿಗಳೊಡನೆ ಮಾತುಕತೆ ನಡೆಸಲಾಗಿ ದರಗಳನ್ನು ಕಡಿಮೆ ಮಾಡಲು ಅವರು ಒಪ್ಪಲಿಲ್ಲವೆಂದೂ, ಸಧ್ಯದಲ್ಲಿಯೇ ರಚಿತವಾಗಲಿರುವ ವಿದ್ಯುಚ್ಛಕ್ತಿ ಸಮಿತಿಯವರು ದರಗಳನ್ನು ಇನ್ನೂ ಹೆಚ್ಚಿಸಲಿರುವುದಾಗಿ ಸಚಿವರು ಸೂಚಿಸಿದರೆಂದೂ ಶ್ರೀ ದೇವಿದಾಸ್‌ರವರು ತಿಳಿಸಿದರು. ತಮ್ಮ ಕಟ್ಟಡಗಳಿಗಾಗಿಯೂ, ರಸ್ತೆಗಳ ರಿಪೇರಿಗಾಗಿಯೂ ಸರ್ಕಾರದಿಂದ ಪೌರಸಭೆಗಳಿಗೆ ಸ್ವಲ್ಪವೂ ಸಹಾಯ ದೊರೆಯುತ್ತಿಲ್ಲವೆಂದೂ, ಆದರೂ ಸಹಾ ಪೌರಸಭೆಗಳಿಂದ ಆಗುವ ಪ್ರಯೋಜನಗಳನ್ನು ಮಾತ್ರ ಸರ್ಕಾರದವರು ಪಡೆಯುತ್ತಿರುವರೆಂದೂ ಅವರು ಹೇಳಿ, ಸರ್ಕಾರದಿಂದ ಇವುಗಳ ಬಗ್ಗೆ ಸೂಕ್ತ ಪರಿಹಾರ ದೊರೆಯಬೇಕೆಂದು ನುಡಿದರು. ಬೆಂಗಳೂರು ಪೌರಸಭೆಯವರು ಜನರ ಹಿತಕ್ಕಾಗಿ ಕೈಗೊಂಡಿರುವ ಕಾರ್ಯಗಳನ್ನೂ ಸಹ ಅವರು ವಿವರಿಸಿದರು

ರೈಲಿಗೆ ಸಿಕ್ಕಿ ಯುವಕನ ಮರಣ

ನಗರದ ರೈಲ್ವೆ ಸ್ಟೇಷನ್ನಿನಿಂದ ನೆನ್ನೆ ಸಂಜೆ ಹೊರಟ ರೈಲಿಗೆ ಯಾದವಗಿರಿ ಪ್ರದೇಶದಲ್ಲಿ ಒಬ್ಬ ಯುವಕನು ಸಿಕ್ಕಿ ಮೃತಪಟ್ಟನು. ಅವನು ಯಾರೆಂಬುದು ಗೊತ್ತಿಲ್ಲ. ಸುಮಾರು ೨೫ ವರ್ಷ ವಯಸ್ಸು.

ಸಂಸ್ಥಾನದಲ್ಲಿ ರೇಷ್ಮೆ ತಯಾರಿಕೆ ಮತ್ತು ಸಂಶೋಧನೆಗೆ ೨ ಲಕ್ಷ ರೂ.

ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ತಯಾರಿಕೆ ಮತ್ತು ಸಂಶೋಧನೆ ಯೋಜನೆಗಳನ್ನು ಜಾರಿಗೆ ತರಲು ಭಾರತ ಸರ್ಕಾರದವರು ೨ ಲಕ್ಷ ರೂ. ದ್ರವ್ಯ ಸಹಾಯವನ್ನು ಮಂಜೂರು ಮಾಡಿರುತ್ತಾರೆ.

ಯೆಮೆನ್ ರಾಜ್ಯಕ್ಕೆ ಕಮ್ಯೂನಿಸ್ಟ್ ರಾಜ್ಯಗಳಿಂದ ಶಸ್ತ್ರಾಸ್ತ್ರ

ಯೆಮೆನ್ ರಾಜ್ಯಕ್ಕೆ ರಷ್ಯ ಮತ್ತು ಇತರ ಕಮ್ಯೂನಿಸ್ಟ್ ರಾಜ್ಯಗಳಿಂದ ಟ್ಯಾಂಕುಗಳೂ ಮತ್ತು ಶಸ್ತ್ರಾಸ್ತ್ರಗಳೂ ಸರಬರಾಜಾಗುತ್ತಿವೆಯೆಂದು ಅಡನ್ನಿನ ವಾರ್ತೆಯು ತಿಳಿಸಿದೆ. ಕಳೆದ ೨ ತಿಂಗಳಿಂದ ಅಲ್ಲಿಗೆ ರಷ್ಯದ ಹನ್ನೆರಡು ಟ್ಯಾಂಕುಗಳು ಬಂದಿವೆ.

ಪ್ರೊಬೇಷನರುಗಳ ನೇಮಕ ಸಧ್ಯಕ್ಕೆ ಇಲ್ಲ

ವಿಧಾನ ಸಭೆಯಲ್ಲಿ ಹಣಕಾಸಿನ ಸಚಿವರ ಹೇಳಿಕೆ

ಬೆಂಗಳೂರು ೧೪

ವಿಸ್ತೃತ ಮೈಸೂರಿನ ಪ್ರತಿ ಇಲಾಖೆಯಲ್ಲೂ ಎಷ್ಟೆಷ್ಟು ಮಂದಿ ನೌಕರರು ಇರುವರು, ಎಷ್ಟು ಜನರು ಬೇಕಾಗಬಹುದು ಮುಂತಾದ ವಿಚಾರಗಳನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ, ನಂತರ ಪ್ರೊಬೇಷನರುಗಳನ್ನು ಹೊಸದಾಗಿ ತೆಗೆದುಕೊಳ್ಳುವ ವಿಷಯವನ್ನು ಪರಿಶೀಲಿಸಬೇಕಾಗುವುದೆಂದೂ ವಿಧಾನ ಸಭೆಯಲ್ಲಿ ನೆನ್ನೆ ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ತಿಳಿಸಿದರು

ಉತ್ತರ ಪ್ರದೇಶದಲ್ಲಿ ಸರ್ಕಾರಿ ವಾಹನಗಳ ಬಳಕೆಗೆ ನಿರ್ಬಂಧ

ಉತ್ತರ ಪ್ರದೇಶ ಸರ್ಕಾರದ ಸಿಬ್ಬಂದಿಯವರಿಗೆ ಒದಗಿಸಲಾಗಿರುವ ಎಲ್ಲ ಕಾರುಗಳನ್ನೂ ವಾಪಸು ತೆಗೆದುಕೊಂಡು ರಸ್ತೆ ಸಂಚಾರ ಇಲಾಖೆಗೆ ಒಪ್ಪಿಸಲು ಅಲ್ಲಿನ ಮಂತ್ರಿಮಂಡಲವು ನಿರ್ಧರಿಸಿದೆ. ಅವುಗಳನ್ನು ಹರಾಜು ಹಾಕಲಾಗುವುದು, ಅಥವಾ ಟ್ಯಾಕ್ಸಿಗಳಾಗಿ ಪರಿವರ್ತಿಸಲಾಗುವುದು. ಅವನ್ನು ಬಳಸುತ್ತಿರುವ ಅಧಿಕಾರಿಗಳು ಅವನ್ನು ಕೊಳ್ಳಲು ಅವಕಾಶವಿದೆ. ಪೊಲೀಸು ವಾಹನ, ಅಂಬುಲೆನ್ಸ್ ವಾಹನ ಮುಂತಾದವುಗಳಿಗೂ ಮತ್ತು ಸಚಿವರು ಉಪಸಚಿವರುಗಳ ವಾಹನಗಳಿಗೂ ಇದು ಅನ್ವಯಿಸುವುದಿಲ್ಲ. ಐ. ಜಿ. ಪಿ. ಯವರು ಜೊತೆಗೆ ಪ್ರವಾಸ ಹೊರಟಾಗ ಮಾತ್ರ ಸರ್ಕಾರಿ ಕಾರನ್ನು ಬಳಸಬಹುದು. ಹಾಗೆಯೇ ಜಿಲ್ಲಾ ಮ್ಯಾಜಿಸ್ಟ್ರೇಟರೂ ಜರೂರು ಸಮಯದಲ್ಲಿ ಸರ್ಕಾರಿ ವಾಹನವನ್ನು ಉಪಯೋಗಿಸಬಹುದು. ಮಂತ್ರಿಮಂಡಲದ ಈ ನಿರ್ಧಾರದಿಂದ ಸರ್ಕಾರಕ್ಕೆ ಗಣನೀಯವಾಗಿ ಹಣದ ಉಳಿತಾಯವಾಗುವುದೆಂದು ಹೇಳಲಾಗಿದೆ

ಪ್ರವಾಸದಿಂದ ನೆಹರೂರವರು ವಾಪಸು

ಪ್ರಧಾನಿ ನೆಹರೂರವರು ನೆನ್ನೆ ಕೈರೋವಿನಿಂದ ಜಾಂ ನಗರಕ್ಕೆ ವಿಮಾನದಲ್ಲಿ ಹಿಂದಿರುಗಿದರು. ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಿದ್ದರು. ಅವರು ಮಾರ್ಗದಲ್ಲಿ ಸಿರಿಯಾ, ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಹಾಲೆಂಡ್, ಈಜಿಪ್ಟ್ ಮತ್ತು ಸುಡಾನುಗಳಿಗೆ ಭೇಟಿಯಿತ್ತರು.

ಬೊಂಬಾಯಿಯಲ್ಲಿ ಮಳೆಯಿಂದ ೩ ಜನರ ಮರಣ

ಬೊಂಬಾಯಿಯಲ್ಲಿ ಎರಡು ದಿನಗಳಿಂದ ಆದ ಭಾರಿ ಮಳೆಯ ಪರಿಣಾಮವಾಗಿ ಒಂದು ಮನೆಯು ಉರುಳಿ ಇಬ್ಬರು ಹೆಂಗಸರು ಮತ್ತು ಒಬ್ಬ ಗಂಡಸು ಮೃತಪಟ್ಟರು. ಇಬ್ಬರಿಗೆ ಗಾಯವಾಗಿದೆ. ಉರುಳಿದ ಮನೆಯ ಉಪ್ಪರಿಗೆಯಲ್ಲಿ ೧೦೦ ಜನರು ಸಿಕ್ಕಿಕೊಂಡು ಫೈರ್ ಬ್ರಿಗೇಡಿನವರು ಅವರನ್ನು ಪಾರು ಮಾಡಿರುತ್ತಾರೆ. ಸಮುದ್ರಕ್ಕೆ ಯಾವ ಹಡಗೂ ಹೋಗಬಾರದೆಂದು ಎಚ್ಚರಿಕೆ ಕೊಡಲಾಗಿದೆ

ನೇಪಾಳದಲ್ಲಿ ಸರ್ಕಾರ ರಚಿಸಲು ಕೆ. ಐ. ಸಿಂಗರಿಗೆ ದೊರೆ ಆಹ್ವಾನ

ನೇಪಾಳದ ಸಂಯುಕ್ತ ಪ್ರಜಾ ಪಕ್ಷದ ನಾಯಕರಾದ ಡಾ|| ಕೆ. ಐ. ಸಿಂಗ್‌ರವರಿಗೆ ಅಲ್ಲಿನ ದೊರೆ ಮಹೇಂದ್ರ ವಿಕ್ರಮ ಷಹಾರವರು ಆಹ್ವಾನವಿತ್ತು, ಮಂತ್ರಿಮಂಡಲವನ್ನು ರಚಿಸುವಂತೆ ಸೂಚಿಸಿರುತ್ತಾರೆ. ಟಂಕಾ ಪ್ರಸಾದ ಆಚಾರ್ಯರವರ ರಾಜೀನಾಮೆಯನ್ನು ಅವರು ಅಂಗೀಕರಿಸಿರುವರು. ಅಲ್ಲಿ ಇನ್ನೂ ಎರಡು ವಾರ ಕಾಲ ರಾಜರೇ ನೇರವಾದ ಆಡಳಿತ ನಡೆಸುವರು. ಡಾ|| ಸಿಂಗ್‌ರವರು ಕೆಲವು ವರ್ಷಗಳ ಹಿಂದೆ ದಸ್ತಗಿರಿಯನ್ನು ತಪ್ಪಿಸಿಕೊಳ್ಳಲು ಚೀಣಕ್ಕೆ ಓಡಿಹೋಗಿದ್ದರು

ಪಶ್ಚಿಮ ಪಾಕಿಸ್ಥಾನದಲ್ಲಿ ಅಧ್ಯಕ್ಷರ ಆಳ್ವಿಕೆ ಮುಕ್ತಾಯ

ಕಳೆದ ಮಾರ್ಚಿ ೨೧ರಿಂದಲೂ ಪಶ್ಚಿಮ ಪಾಕಿಸ್ತಾನದಲ್ಲಿ ಇದ್ದ ಅಧ್ಯಕ್ಷರ ಆಳ್ವಿಕೆಯನ್ನು ಮುಕ್ತಾಯಗೊಳಿಸಿ ಅಲ್ಲಿನ ರಿಪಬ್ಲಿಕನ್ ಪಕ್ಷವನ್ನು ಪುನಃ ಅಧಿಕಾರಕ್ಕೆ ತರಲು ಪಾಕಿಸ್ತಾನದ ಮಂತ್ರಿಮಂಡಲವು ನಿರ್ಧರಿಸಿದೆ. ಈ ದಿನ ಈ ಬಗ್ಗೆ ಅಧ್ಯಕ್ಷರ ಘೋಷಣೆಯನ್ನು ಹೊರಡಿಸಲಾಗುವುದು.

ಬಂಧಿತ ಸಮಾಜವಾದಿಗಳಿಂದ ಉಪವಾಸ ಮುಷ್ಕರ

ಭೋಪಾಲಿನಲ್ಲಿ ಪ್ರದರ್ಶನ ನಡೆಸಿದ ಸಂದರ್ಭವೊಂದರಲ್ಲಿ ದಸ್ತಗಿರಿಯಾದ ೧೩ ಮಂದಿ ಸಮಾಜವಾದಿಗಳು ರಾಜಕೀಯ ಖೈದಿಗಳ ಬಗ್ಗೆ ಅನಾದರಣೆಗಾಗಿ ಪ್ರತಿಭಟಿಸಲು ನೆನ್ನೆ ಜೈಲಿನಲ್ಲಿ ಉಪವಾಸ ಮುಷ್ಕರವನ್ನು ನಡೆಸಿದರು. ಕಳೆದ ೩ನೇ ತಾರೀಖು ಅವರುಗಳು ಅಲ್ಲಿನ ಶಾಸನ ಸಭಾ ಭವನಕ್ಕೆ ಮೆರವಣಿಗೆಯಲ್ಲಿ ಹೋಗಿ ರೈತರುಗಳ ಕುಂದುಕೊರತೆ ಬಗ್ಗೆ ಮನವಿ ಪತ್ರ ಅರ್ಪಿಸಲು ಪ್ರಯತ್ನಪಟ್ಟಾಗ ಅವರನ್ನು ಬಂಧಿಸಲಾಯಿತು.

ಖೈರ್‌ಗಡ ಅರಸರಿಂದ ರಾಜಧನದ ಮೋಕಾ

ಖೈರಗಡ ಸಂಸ್ಥಾನದ ಮಾಜಿ ಅರಸರಾದ ರಾಜಾ ವೀರೇಂದ್ರ ಬಹದ್ದೂರ್ ಸಿಂಗ್‌ರವರು ತಮಗೆ ಭಾರತ ಸರ್ಕಾರದಿಂದ ಸಲ್ಲುತ್ತಿರುವ ರಾಜಧನದಲ್ಲಿ ಶೇಕಡ ೭೫ ರಷ್ಟು ಮೋಕಾ ಮಾಡಿಕೊಂಡಿರುತ್ತಾರೆ. ಇತರ ರಾಜರುಗಳೂ ಅದೇ ರೀತಿ ತಮ್ಮ ಧನದಲ್ಲಿ ಮೋಕಾ ಮಾಡಿಕೊಂಡು ಕೇಂದ್ರ ಸರ್ಕಾರದ ಮಿತವ್ಯಯದ ಕ್ರಮದಲ್ಲಿ ಸಹಕರಿಸುವಂತೆ ಅವರು ಮನವಿ ಮಾಡಿಕೊಂಡಿರುವರು.

ನೆಹರೂರವರಿಗೆ ಖಾರ್ಟೂಂ ನಗರದ ಗೌರವ ಪ್ರಶಸ್ತಿ

ಪ್ರಧಾನಿ ನೆಹರೂರವರು ನೆನ್ನೆ ಸುಡಾನಿನ ರಾಜಧಾನಿ ಖಾರ್ಟೂಮಿಗೆ ಭೇಟಿಯಿತ್ತಾಗ ಅವರಿಗೆ ಅಲ್ಲಿನ ಮೇಯರರು ಮತ್ತು ಪೌರಸಭೆಯವರು ನಗರದ ಸ್ವಾತಂತ್ರ್ಯವೆಂಬ ಅತ್ಯಂತ ದೊಡ್ಡ ಪ್ರಶಸ್ತಿಯನ್ನಿತ್ತು ಗೌರವಿಸಿದರು

ಪಾಕಿಸ್ತಾನಕ್ಕೆ ಕಾಲುವೆ ನೀರು ತಪ್ಪಿಸಲು ಭಾರತದ ಪ್ರಯತ್ನ ?

ಪಾಕಿಸ್ತಾನ ಪ್ರಧಾನಿಯ ಆಪಾದನೆ

ಭಾರತವು ತನ್ನ ಜಮೀನುಗಳಿಗೆ ನೀರನ್ನು ಒದಗಿಸಲು ಭಾರಿ ಅಣೆಕಟ್ಟೊಂದನ್ನು ನಿರ್ಮಿಸಿ, ಸಿಂಧೂ ನದಿಯ ಮೂರು ಉಪನದಿಗಳ ನೀರನ್ನು ಪಾಕಿಸ್ತಾನಕ್ಕೆ ಒದಗಿಸಬಾರದೆಂದು ಹವಣಿಸುತ್ತಿರುವುದೆಂದೂ, ಇಂತಹ ಪರಿಸ್ಥಿತಿಯಲ್ಲಿ ಪಾಕಿಸ್ತಾನದ ಜನರು ನೀರಡಿಕೆಯಿಂದ ಸಾಯುವುದರ ಬದಲು ಹೋರಾಡಿಯೇ ಮಡಿಯುವರೆಂದೂ ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ನೆನ್ನೆ ವಾಷಿಂಗ್ಟನ್ನಿನ ಟೆಲಿವಿಷನ್ ಭೇಟಿಯಲ್ಲಿ ತಿಳಿಸಿದರು. ನದಿಗಳ ನೀರಿಗೆ ತಡೆ ಹಾಕಿದರೆ ಪಾಕಿಸ್ತಾನದವರು ಸಾಯುವುದು ಖಂಡಿತವೆಂದೂ ಅವರು ಹೇಳಿ ಇಂತಹ ಪರಿಸ್ಥಿತಿ ಬರುವ ಮುಂಚೆ ಇತರ ರಾಷ್ಟ್ರಗಳು ಮಧ್ಯೆ ಪ್ರವೇಶಿಸಬಹುದೆಂದು ಆಶಿಸಿದರು.

ಕೇರಳದಲ್ಲಿ ಮಳೆಯ ಹಾವಳಿ

ಕೇರಳದಲ್ಲಿ ಮೊನ್ನೆ ಭಾರಿ ಮಳೆಯಾಗಿ ಕುಟ್ಟನಾಡು ಪ್ರದೇಶದಲ್ಲಿ ನೂರು ಮನೆಗಳು ಬಿದ್ದುಹೋಗಿವೆ. ಸಾವಿರ ಮನೆಗಳಿಗೆ ನೀರು ನುಗ್ಗಿದೆ. ಕೇರಳದ ಕಣಜವೆಂದು ಪ್ರಖ್ಯಾತವಾಗಿರುವ ಈ ಪ್ರದೇಶದಲ್ಲಿ ೬೦೦ ಚದುರಮೈಲಿಯಲ್ಲಿ ನೀರು ತುಂಬಿ ಭಾರಿ ಸರೋವರವಾಗಿ ಪರಿಣಮಿಸಿದೆ

ಆಗಾಖಾನರ ಗೃಹದಲ್ಲಿ ಮೂವರ ಬಂಧನ

ಆಗಾಖಾನರ ಜಿನೀವಾದಲ್ಲಿನ ಮನೆಗೆ ಅವರ ಮರಣ ಕಾಲದಲ್ಲಿ ಮೂವರು ಅತಿಕ್ರಮ ಪ್ರವೇಶ ಮಾಡಿದ್ದವರನ್ನು ಬಂಧಿಸಲಾಗಿದೆ. ಖಾನರು ಮರಣ ಹೊಂದಿದ ಸಮಯದಲ್ಲಿ ಅವರ ಮನೆಯವರು ಶೋಕದಲ್ಲಿದ್ದಾಗ ಬೆಲೆಯುಳ್ಳ ಸಾಮಾನುಗಳನ್ನು ಅಪಹರಿಸಲು ಅವರು ಬಂದಿದ್ದರೆಂದು ಹೇಳಲಾಗಿದೆ. ಅದಕ್ಕಾಗಿ ಕತ್ತಲು ಹೊತ್ತಿನಲ್ಲಿ ಅವರು ಮನೆಯೊಳಗೆ ಪ್ರವೇಶಿಸಿದ್ದರೆಂದೂ ವರದಿಯಾಗಿದೆ.

ನಾಳೆ ಶ್ರೇಷ್ಠ ನ್ಯಾಯಾಧೀಶ ವೆಂಕಟರಾಮಯ್ಯನವರ ನಿವೃತ್ತಿ

ಹೈಕೋರ್ಟಿನಲ್ಲಿ ಸೇವಾ ಪ್ರಶಂಸೆ

ಸ್ವಂ ಸು ತಂ] ಬೆಂಗಳೂರು ೧೪

ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯನವರು ನಾಳೆ ನಿವೃತ್ತರಾಗುವರು.

ಇಂದು ಹೈಕೋರ್ಟಿನಲ್ಲಿ ನ್ಯಾಯಾಂಗ ಅಧಿಕಾರಿಗಳು, ವಕೀಲರು ಸೇರಿದ್ದಾಗ ಶ್ರೇಷ್ಠ ನ್ಯಾಯಾಧೀಶರ ಪ್ರಶಂಸೆ ನಡೆಯಿತು. ವಕೀಲರ ವೃಂದದ ಪರವಾಗಿ ಶ್ರೀ ಯತಿರಾಜುಲುರವರು ಅವರನ್ನು ಅಭಿನಂದಿಸಿದರು. ಅವರು ಸೂಕ್ತ ರೀತಿಯಲ್ಲಿ ಉತ್ತರವಿತ್ತರು. ಅವರ ಸ್ಥಾನಕ್ಕೆ ಯಾರು ಬರಬೇಕೆಂಬುದು ಇನ್ನೂ ಗೊತ್ತಾಗಿಲ್ಲ. ಸ್ವಲ್ಪ ಕಾಲದವರೆಗೆ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಅವರ ಸ್ಥಾನದಲ್ಲಿ ಆಫಿಷಿಯೇಟ್ ಮಾಡುವರು. ಈ ಬಗ್ಗೆ ಈ ಮಧ್ಯೆ ರಾತ್ರಿ ಪ್ರಕಟಣೆ ಹೊರಡಲಿದೆ.

ಕನ್ನಂಬಾಡಿಕಟ್ಟೆ ನೀರಿನ ಮಟ್ಟ

ಕನ್ನಂಬಾಡಿಕಟ್ಟೆಯಲ್ಲಿ ನೀರು ಭ[illegible]ದು, ಈ ದಿನ ೧೦೪·೧೦ ಅಡಿ ಇದ್ದಿತು

ನಿಮ್ನ ವರ್ಗದವರಿಗೆ ಐ.ಎ.ಎಸ್. ಹುದ್ದೆಗಳು

ಬೆಂಗಳೂರು ೧೫

ಸಂಸ್ಥಾನದಲ್ಲಿ ೮೦ ಮಂದಿ ಐ. ಎ. ಎಸ್ ಮತ್ತು ೪೧ ಮಂದಿ ಐ ಪಿ ಎಸ್ ಅಧಿಕಾರಿಗಳುವರೆಂದೂ ಅರ್ಹತೆ ಮತ್ತು ಸೀನಿಯಾರಿಟಿ ಮೇಲೆ ಅಧಿಕಾರಿಗಳ ಪಟ್ಟಿ ಮಾಡಲಾಗಿದೆಯೆಂದೂ ಮೊನ್ನೆ ವಿಧಾನ ಸಭೆಯಲ್ಲಿ ಸರ್ಕಾರದವರು ತಿಳಿಸಿದರು ಎರಡು ವರ್ಷಗಳ ಹಿಂದೆ ಹೊರಡಿಸಲಾದ ಸರ್ಕಾರಿ ಪ್ರಕಟಣೆಯಂತೆ ಎಲ್ಲಾ ವರ್ಗಗಳ ನೌಕರಿಯಲ್ಲೂ ನಿಮ್ನ ವರ್ಗದವರಿಗೆ ಶೇಕಡ ೧೮ರಷ್ಟು ಸ್ಥಾನಗಳನ್ನು ಕೊಡಲಾಗುವುದೆಂದೂ ಸೂಚಿಸಲಾಯಿತು ಅಸಿಸ್ಟೆಂಟ್ ಕಮಿಷನರು ಮತ್ತು ಡಿ ಎಸ್ ಪಿ ಹುದ್ದೆಗಳಿಗೆ ತಕ್ಕ ನಿಮ್ನ ವರ್ಗದವರನ್ನು ನೇರವಾಗಿ ತೆಗೆದುಕೊಳ್ಳಲು ಪರಿಶೀಲನೆ ನಡೆಸಲಾಗುವುದೆಂದು ತಿಳಿಸಲಾಯಿತು ಅರ್ಹರಾದ ನಿಮ್ನ ವರ್ಗದವರು ಸಿಗದಿದ್ದರೆ ಸ್ಥಾನಗಳನ್ನು ಅನಿರ್ದಿಷ್ಟವಾಗಿ ಖಾಲಿ ಬಿಡುವುದಿಲ್ಲವೆಂದೂ ಇತರ ಉಮೇದುವಾರರನ್ನು ಅದಕ್ಕೆ ತೆಗೆದುಕೊಳ್ಳಲಾಗುವುದೆಂದೂ ಸೂಚಿಸಲಾಯಿತು.

ವಿವಾಹ ಮಹೋತ್ಸವ

ಬೆಂಗಳೂರಿನ ಮುದ್ರಣ ಪ್ರಕಟಣ ಸಂಸ್ಥೆಯ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಟಿ ಕೆ ಬಾಲಕೃಷ್ಣಯ್ಯಂಗಾರ್‌ರವರು ತಮ್ಮ ಕುಮಾರಿ ಸೌ॥ ಶಾಂತಳನ್ನು ಶ್ರೀ ಕೆ ಎಲ್ ಲಕ್ಷ್ಮಣಾಚಾರ್ಯಂಗಾರ್‌ರವರ ಪುತ್ರ ಶ್ರೀ ಕೆ ಎಲ್ ನಟರಾಜನ್‌ರವರಿಗೆ ಕೊಟ್ಟು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಗೂಡ್ಸ್ ಗಾಡಿಗೆ ಸಿಕ್ಕಿ ಮಹಿಳೆಯ ಮರಣ

ಬೆಂಗಳೂರಿನ ಶೇಷಾದ್ರಿಪುರದ ಲೆವೆಲ್ ಕ್ರಾಸಿಂಗ್ ಬಳಿ ನೆನ್ನೆ ಮಧ್ಯಾಹ್ನ ೫೦ ವರ್ಷದ ಮಹಿಳೆಯೊಬ್ಬರು ಗೂಡ್ಸ್ ರೈಲಿಗೆ ಸಿಕ್ಕಿ ಮೃತಪಟ್ಟರು

ಕೇರಳ ಸರ್ಕಾರದಿಂದ ಬಡವರಿಗೆ ೭ ಲಕ್ಷ ಎಕರೆ ಜಮೀನು

ಕೇರಳ ಸರ್ಕಾರದವರು ಜಮೀನು ಇಲ್ಲದ ಬಡವರಿಗೆ ಅಗ್ಗದ ಬೆಲೆಗೆ ಜಮೀನುಗಳನ್ನು ಹಂಚಲಿರುವರು ಅಲ್ಲಿ ೭ ಲಕ್ಷ ಎಕರೆಯಷ್ಟು ಹಂಚಬಹುದಾದ ಜಮೀನು ಸರ್ಕಾರದ ವಶದಲ್ಲಿದೆ

ಅಣು ಶಸ್ತ್ರ ಸ್ಫೋಟನೆ ಬಗ್ಗೆ ಅಮೆರಿಕದ ಷರತ್ತಿನ ತಿರಸ್ಕಾರ

ರಷ್ಯದ ಪ್ರತಿನಿಧಿಯ ಟೀಕೆ

ಅಣು ಶಸ್ತ್ರ ಪರೀಕ್ಷೆಗಳನ್ನು ಇನ್ನು ೧೦ ತಿಂಗಳ ಕಾಲ ನಿಲ್ಲಿಸಲು ರಷ್ಯವು ಒಪ್ಪಬೇಕೆಂದೂ, ಇಲ್ಲವಾದರೆ ಪರೀಕ್ಷಾ ನಿಷೇಧದ ನಿಲುಗಡೆ ಪ್ರಶ್ನೆಯೇ ಇರುವುದಿಲ್ಲವೆಂದೂ ಶಸ್ತ್ರ ಸನ್ಯಾಸ ಸಮಿತಿಯಲ್ಲಿ ಅಮೆರಿಕಾ ಪ್ರತಿನಿಧಿ ಸ್ಟಾಸೆನ್‌ರವರು ಸೂಚಿಸಿರುವುದು ಒಂದು ಅಂತ್ಯ ಎಚ್ಚರಿಕೆಯಾಗಿರುವುದೆಂದೂ, ಆತ್ಮ ಗೌರವವುಳ್ಳ ಯಾವ ರಾಷ್ಟ್ರವೂ ಅದನ್ನು ಒಪ್ಪುವುದಿಲ್ಲವೆಂದೂ ರಷ್ಯದ ಪ್ರತಿನಿಧಿ ಜೋರಿನ್‌ರವರು ತಿಳಿಸಿರುತ್ತಾರೆ ೨ ೩ ವರ್ಷಗಳ ಕಾಲ ಅದನ್ನು ನಿಲ್ಲಿಸುವಂತೆ ರಷ್ಯವು ಸೂಚಿಸುರುವುದೆಂದೂ, ಹಾಗೆ ಮಾಡದಿದ್ದರೆ ನಿಲುಗಡೆ ಪ್ರಶ್ನೆಯೇ ಇಲ್ಲವೆಂಬುದಾಗಿ ರಷ್ಯವು ತಿಳಿಸಿಲ್ಲವಾಗಿಯೂ ಜೋರಿನ್‌ರವರು ಸೂಚಿಸಿರುವರು

ಶಾರದಾವಿಲಾಸ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಅಧಿಕಾರ ವರ್ಗ

ಶಾರದಾವಿಲಾಸ ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘದ ಸಭೆಯು ನೆನ್ನೆ ಬೆಳಗ್ಗೆ ನಡೆದು ೧೯೫೭ ಜೂನ್ ಸಾಲಿನ ಆಡಳಿತ ಸಮಿತಿಗೆ ಶ್ರೀಗಳಾದ, ಎಂ ಆರ್ ಬಾಲಸುಬ್ರಹ್ಮಣ್ಯಂರವರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ. ಪಿ ಬದರೀನಾಥ್ ಪರ್ಮಾರ್‌ರವರು ಕಾರ್ಯದರ್ಶಿಗಳಾಗಿಯೂ ಎನ್ ನಾಗರಾಜ್, ಬಿ ಆರ್ ಮದನಮೋಹನ್ ಸಿ ಕೆ ಶೇಷಾದ್ರಿ ಮತ್ತು ಎಸ್ ಕೃ ದ ರಾವ್ ಮತ್ತು ಶ್ರೀಮತಿಗಳಾದ ಜ ವಿ ಸರಸ್ವತಿ ಮತ್ತು ಹೆಚ್ ಆರ್. ಲೀಲಾವತಿ ಇವರುಗಳು ಸದಸ್ಯರುಗಳಾಗಿಯೂ ಚುನಾಯಿಸಲ್ಪಟ್ಟರು ಶ್ರೀ ವಿ ಕೆ ದೊರೆಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ವಿಶ್ವಸಂಸ್ಥೆ ತತ್ವಗಳಂತೆ ಕಾಶ್ಮೀರದ ಪ್ರಶ್ನೆ ಬಗೆಹರಿಯಲಿ

ಐಸೆನ್‌ಹೋವರ್ ಮತ್ತು ಪಾಕ್ ಪ್ರಧಾನಿ ಸುಹ್ರಾವರ್ದಿಯವರ ಜಂಟಿ ಹೇಳಿಕೆ

ಅಮೆರಿಕಕ್ಕೆ ಹೋಗಿರುವ ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ಅಧ್ಯಕ್ಷ ಐಸೆನ್‌ಹೋವರರೊಡನೆ ಮಾತುಕತೆ ನಡೆಸಿ ಹೊರಡಿಸಿರುವ ಜಂಟಿ ಹೇಳಿಕೆಯಲ್ಲಿ ವಿಶ್ವಸಂಸ್ಥೆಯ ತತ್ವಗಳ ಪ್ರಕಾರ ಕಾಶ್ಮೀರ, ಕಾಲುವೆ ನೀರು ವಿವಾದ ಮುಂತಾದ ಪ್ರಾದೇಶಿಕ ವ್ಯಾಜ್ಯಗಳು ಬೇಗನೆ, ನ್ಯಾಯಯುತವಾಗಿ ಮತ್ತು ಶಾಂತಿಯುತವಾಗಿ ಪರಿಹಾರವಾಗಬೇಕೆಂದು ಸೂಚಿಸಿರುತ್ತಾರೆ. ಇಂತಹ ವ್ಯಾಜ್ಯಗಳನ್ನು ಶಾಂತಿಯುತವಾಗಿಯೂ, ಅಂತರ ರಾಷ್ಟ್ರ ನ್ಯಾಯ ಮತ್ತು ವಿಶ್ವಸಂಸ್ಥೆ ನಿರ್ಧಾರಗಳ ಪ್ರಕಾರವೂ ಪರಿಹರಿಸಲು ಪಾಕಿಸ್ತಾನವು ಇಚ್ಛಿಸುವುದೆಂದು ಪ್ರಧಾನಿ ಸುಹ್ರಾವರ್ದಿಯವರು ತಿಳಿಸಿರುತ್ತಾರೆ

ಮೊಲಟೋವರಿಗೆ ರಾಯಭಾರಿ ಹುದ್ದೆ

ರಷ್ಯದ ಪದಚ್ಯುತ ಮಾಜಿ ಉಪ ಪ್ರಧಾನಿ ಮೊಲಟೋವರಿಗೆ ದಕ್ಷಿಣ ಅಮೆರಿಕದ ಅರ್ಜೆಂಟೈನಾದಲ್ಲಿ ರಷ್ಯದ ರಾಯಭಾರಿ ಹುದ್ದೆಯನ್ನು ಕೊಡಲಾಗುವುದೆಂದು ಪ್ಯಾರಿಸ್ ಎಂಬ ಫ್ರಾನ್ಸಿನ ಪತ್ರಿಕೆಯ ವರದಿಯಾಗಿದೆ

ವಯಸ್ಕರ ತರಗತಿ ಅಧ್ಯಾಪಕರ ಮತ್ತು ಪುಸ್ತಕ ಭಂಡಾರದ ಅಧಿಕಾರಿಗಳ ಶಿಕ್ಷಣ ಶಿಬಿರ

ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಮತ್ತು ರಾಷ್ಟ್ರೀಯ ವಿಸ್ತರಣ ಯೋಜನೆಯ ಆಶ್ರಯದಲ್ಲಿ ಕಳೆದ ೭ರಂದು ಗುಂಡ್ಲುಪೇಟೆಯಲ್ಲಿ ವಯಸ್ಕರ ಶಿಕ್ಷಣ ತರಗತಿಯ ಉಪಾಧ್ಯಾಯರುಗಳು ಮತ್ತು ಗ್ರಾಮ ಪುಸ್ತಕ ಭಂಡಾರದ ಅಧಿಕಾರಿಗಳಿಗಾಗಿ ಶಿಕ್ಷಣ ಶಿಬಿರವು ಪ್ರಾರಂಭವಾಯಿತು ತಾಲ್ಲೂಕು ಅಮಲ್ದಾರ್ ಶ್ರೀ ಎಂ ಎಸ್ ರಾಮಣ್ಣನವರು ಅಧ್ಯಕ್ಷತೆ ವಹಿಸಿದ್ದರು ತಾಲ್ಲೂಕು ವಿದ್ಯಾಧಿಕಾರಿಗಳಾದ ಶ್ರೀ ಸಿ. ಶಿವರುದ್ರಪ್ಪನವರು ಶಿಬಿರದ ಉದ್ಘಾಟನೆಯನ್ನು ನೆರವೇರಿಸಿದರು ಶ್ರೀ ಪಿ ವಿ ನಾಗೇಂದ್ರರವರಿಂದ ಪ್ರಾರ್ಥನೆ ಮತ್ತು ರಾಷ್ಟ್ರೀಯ ವಿಸ್ತರಣ ಯೋಜನೆಯ ಸಮಾಜ ಶಿಕ್ಷಣ ವ್ಯವಸ್ಥಾಪಕರಾದ ಶ್ರೀ ಗವಿರಾಯಪ್ಪನವರಿಂದ ಸ್ವಾಗತವಾದನಂತರ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ ವಿ. ಕೇಶವಯ್ಯಂಗಾರ್ಯರು ವಿದ್ಯೆಯ ಅವಶ್ಯಕತೆ ಮತ್ತು ಗ್ರಾಮಾಂತರಗಳಲ್ಲಿ ಪುಸ್ತಕ ಭಂಡಾರಗಳ ವಿಚಾರವಾಗಿ ಭಾಷಣ ಮಾಡಿದರು ವಯಸ್ಕರ ಶಿಕ್ಷಣ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಟಿ ಆರ್ ನಾಗಪ್ಪನವರು ಶಿಬಿರದ ಉದ್ದೇಶವನ್ನೂ ಮತ್ತು ಅವಶ್ಯಕತೆಯನ್ನೂ ವಿವರಿಸಿದರು ಅಧ್ಯಕ್ಷರು ಮಾತನಾಡಿ, ವಯಸ್ಕರ ವಿದ್ಯಾಭ್ಯಾಸವು ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಯಲು ಶಿಬಿರದಲ್ಲಿ ತರಪೇತು ಹೊಂದ ತಕ್ಕವರು ಶ್ರಮಿಸಬೇಕೆಂದೂ ತಿಳಿಸಿದರು. ತಾಲ್ಲೂಕು ಸಂಚಾಲಕರಾದ ಶ್ರೀ ತಾತಾಚಾರ್ಯರು ವಂದನೆಗಳನ್ನರ್ಪಿಸಿದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭–೫ ಕೊಳಲು ೭–೧೫ ಕಮಲಾ ಕುಮಾರ್–ದೇವರ ನಾಮ. ೮–೧೫ ಗಾನ ವಿಹಾರ ಮಧ್ಯಾಹ್ನ ೧೨ ಸಂಗೀತ ೧೨–೩೦ ವನಿತಾ ವಿಹಾರ ೧-೨೦ ರಿಕಾರ್ಡು. ೧–೫೦ ಕೊಳಲು ಸಂಜೆ ೬–೧೦ ಎಸ್ ಜಿ ದ್ವಾರಕಿ–ಕಾವ್ಯ ವಾಚನ ೭ ೩೦ ಸರ್ಕಾರದ ಅಭಿವೃದ್ಧಿ ಯೋಜನೆ ಬಗ್ಗೆ ಕನ್ನಡದಲ್ಲಿ ಚರ್ಚೆ ೮–೩೦ ಎ ಕೆ ಸಿ ನಟರಾಜನ್–ಕ್ಲಾರಿಯೊನೆಟ್ ೯–೧೫ ಧಾರವಾಡದಂತೆ–ಶಿವರಾಮ ರಾಮಕೃಷ್ಣ ರಾವ್. ಹಿಂದಿ ಸಂಗೀತ.

ಸತ್ಕಾರ ಕೂಟ

ಸಧ್ಯದಲ್ಲಿಯೇ ರಷ್ಯಕ್ಕೆ ತೆರಳಲಿರುವ ಮಾಜಿ ಲೋಕಸಭಾ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರ ಗೌರವಾರ್ಥವಾಗಿ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದಲ್ಲಿ ನೆನ್ನೆ ಮಧ್ಯಾಹ್ನ ಸತ್ಕಾರ ಕೂಟವೊಂದನ್ನು ಪುರಸಭಾ ಸದಸ್ಯ ಶ್ರೀ ಸಿ ಎನ್. ನಾರಾಯಣರಾಯರು ಏರ್ಪಡಿಸಿದ್ದರು

ಜಿಲ್ಲಾ ಸ್ಕೌಟ್ ಸಂಘದ ಅಧಿಕಾರ ವರ್ಗ

ಮೈಸೂರು ೧೫

ಜಿಲ್ಲಾ ಸ್ಕೌಟ್ ಮತ್ತು ಗರ್ಲ್‌ಗೈಡ್‌ಗಳ ಪುನರ್ರಚಿತವಾದ ಸಭೆಯು ಕಳೆದ ೧೦ನೇ ತಾರೀಖು ಶ್ರೀ ಎಸ್ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಸಂಜೀವಯ್ಯನವರನ್ನು ಅಧ್ಯಕ್ಷರಾಗಿಯೂ, ಶ್ರೀಗಳಾದ ಎ ವಿಶ್ವನಾಥ್, ಕೆ. ನಂದಿಬಸಪ್ಪ, ಫಾದರ್ ಅಡಿಯೊ ಮತ್ತು ಶ್ರೀಮತಿ ಲೀಲಾವತಿ ಅಂಜನಪ್ಪನವರನ್ನು ಉಪಾಧ್ಯಕ್ಷರುಗಳನ್ನಾಗಿಯೂ ಚುನಾಯಿಸಲಾಯಿತು ೨೦ ಮಂದಿಯನ್ನು ಕಾರ್ಯಕಾರಿ ಸಮಿತಿ ಸದಸ್ಯರಾಗಿ ತೆಗೆದುಕೊಳ್ಳಲಾಯಿತು

ಸಣ್ಣ ಕಥಾ ಸ್ಪರ್ಧೆ

ಮೈಸೂರಿನ ಗೆಳೆಯರ ಕೂಟದ ಆಶ್ರಯದಲ್ಲಿ "ವಿಶಾಲ ಮೈಸೂರು ಕನ್ನಡ ಕಥಾಸ್ಪರ್ಧೆ" ಯನ್ನು ಏರ್ಪಡಿಸಲಾಗಿದೆ ಲೇಖಕರು ಹತ್ತು ಪುಟಗಳಿಗೆ ಮೀರದ ಸ್ವಂತ ಕೃತಿಗಳನ್ನು ಪ್ರವೇಶ ಶುಲ್ಕ ಪ್ರತಿ ಕಥೆಗೂ ಐವತ್ತು ನಯೆ ಪೈಸೆಗಳೊಡನೆ ಆಗಸ್ಟ್ ೧೫ರೊಳಗೆ ಕಳುಹಿಸಬೇಕು ಕಥೆಗಳನ್ನು ಶ್ರೀ ಹೆಚ್.ಕೆ. ಸತ್ಯನ್ ಬಬ್ರೂರ್, ೧೧೯೮ ಚಾಮರಾಜಪುರಂ,ಮೈಸೂರು ಇವರಿಗೆ ಕಳುಹಿಸಬೇಕೆಂದು ಕೋರಲಾಗಿದೆ.

ಜಪಾನಿಗೆ ಮೈಸೂರಿನ ಅಧಿಕಾರಿ

ಮೈಸೂರು ಸರ್ಕಾರದ ಮಿಾನು ಇಲಾಖಾ ಅಧಿಕಾರಿ ಡಾ॥ ಹೆಚ್ ಡಿ ಆರ್. ಅಯ್ಯಂಗಾರ್ಯರು ಈ ದಿನ ಜಪಾನಿನ ರಾಜಧಾನಿ ಟೋಕಿಯೋವಿಗೆ ವಿಮಾನದಲ್ಲಿ ತೆರಳುವರು ಮಿಾನು ಅಭಿವೃದ್ಧಿಯು ಜಪಾನಿನಲ್ಲಿ ನಡೆಯುತ್ತಿರುವ ವಿಧಾನವನ್ನು ಅರಿತುಬರಲು ಭಾರತ ಸರ್ಕಾರದವರು ಕಳುಹಿಸುವ ತಂಡದಲ್ಲಿ ಅವರೂ ಸೇರಿರುವರು

ವಿದ್ಯುಚ್ಛಕ್ತಿ ನೌಕರರ ಸಭೆ

ನಗರದ ಸರ್ಕಾರಿ ವಿದ್ಯುಚ್ಛಕ್ತಿ ಪವರ್ ಮತ್ತು ಲೈಟ್ ವಿಭಾಗದ ನೌಕರರ ಸಭೆಯು ಸಂಘದ ಕಾರ್ಯದರ್ಶಿ ಶ್ರೀ ಕೆ ಟಿ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ೧೧ನೇ ತಾರೀಖು ಸೇರಿತ್ತು. ೫೦೦ ಮಂದಿ ನೌಕರರು ಭಾಗವಹಿಸಿದ್ದರು ಶ್ರೀ ಎಂ ಸಿ ಅಪ್ಪಚ್ಚುರವರನ್ನು ಸಂಘದ ಅಧ್ಯಕ್ಷರಾಗಿ ಆರಿಸಲಾಯಿತು ಶಿವನಸಮುದ್ರದಲ್ಲಿ ಇತ್ತೀಚೆಗೆ ಆದ ಘಟನೆಯಲ್ಲಿ ಮೃತಪಟ್ಟವರು ಮತ್ತು ಗಾಯಗೊಂಡವರ ವಿಚಾರವಾಗಿ ವ್ಯಸನ ಮತ್ತು ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು ಇಲಾಖೆಯ ಮೇಂಟನೆನ್ಸ್ ಮತ್ತು ಎಕ್ಸಿಕ್ಯೂಟಿವ್ ಸಿಬ್ಬಂದಿಗಳ ಪ್ರಶ್ನೆಯನ್ನು ಬೇಗನೆ ಇತ್ಯರ್ಥಗೊಳಿಸಬೇಕೆಂದು ಕೋರಲಾಯಿತು ಸ್ಥಳೀಯ ಸಮಿತಿಯ ಚುನಾವಣೆಯನ್ನು ಬೇಗನೆ ನಡೆಸಬೇಕೆಂದೂ ಇತ್ಯರ್ಥಪಡಿಸಲಾಯಿತು. ಕಾರ್ಯದರ್ಶಿ ಶ್ರೀ ತಿಮ್ಮಯ್ಯ ಮತ್ತು ಶ್ರೀ ಎಂ ಸಿ ಅಪ್ಪಚ್ಚುರವರು ಭಾಷಣ ಮಾಡಿ, ನೌಕರರಿಗೆ ಸಂಬಂಧಪಟ್ಟಂತೆ ಹಲವಾರು ಸಮಸ್ಯೆಗಳ ವಿಚಾರವಾಗಿ ಮಂತ್ರಿಗಳೊಡನೆ ನಡೆಸಿದ ಮಾತುಕತೆಗಳ ಬಗ್ಗೆ ವಿವರಿಸಿದರು.

ಕೇರಳದ ಕ್ಷಾಮ ಪೀಡಿತರಿಗೆ ಉಚಿತ ಪರಿಹಾರ

ಕೇರಳದ ಆಲೆಪ್ಪಿ ಮತ್ತು ಕೊಟ್ಟಾಯಮ್ ಮುಂತಾದ ತೀರದ ಭಾಗಗಳಲ್ಲಿ ಕ್ಷಾಮ ಪೀಡಿತರಾಗಿರುವ ಬಡ ಜನರಿಗೆ ಉಚಿತವಾಗಿ ಪರಿಹಾರವೀಯಲು ಸರ್ಕಾರದವರು ೧ಲಕ್ಷ ರೂ. ಅನ್ನು ಮಂಜೂರು ಮಾಡಿರುತ್ತಾರೆ.

CITY TUTORIAL COLLEGE
The long awaited chance to appear by Private Study for
AJMER INTERMEDIATE
Classes Commenced
MADRAS MATRICULATION
Classes in full swing
Join before 20.7.57
C. T. C., Old Agrahar, Mysore

Edited, Printed and Published by A R Nagarajan at Sadhvi Press, D. Subbiah Road Mysore

ಸರ್ಕಾರಿ ನೌಕರರ ಆಲಸ್ಯ ತಪ್ಪಿಸಲು ಇಂಡೊನೇಷದಲ್ಲಿ ಕ್ರಮ

ಸರ್ಕಾರದ ನೌಕರರು ಸಕಾಲದಲ್ಲಿ ಕಛೇರಿಗಳಿಗೆ ಹೋಗದೆ ಮನೆಗಳಲ್ಲಿ ಹರಟೆ ಹೊಡೆಯುತ್ತ ಕಾಲ ಕಳೆಯುವುದನ್ನು ತಪ್ಪಿಸುವ ಸಲುವಾಗಿ ಮೊನ್ನೆ ಇಂಡೊನೇಷ್ಯದ ಬೋರ್ನಿಯೊ ದ್ವೀಪದ ಬೆಂಜರ್ಮಸಿನ್ ಎಂಬಲ್ಲಿ ಮಿಲಿಟರಿ ಪೋಲೀಸರು ಎಲ್ಲಾ ನೌಕರರನ್ನೂ ಬಂಧಿಸಿ, ಅವರುಗಳ ಕಛೇರಿಗಳಿಗೆ ತಂದುಬಿಟ್ಟರು. ಪೋಲೀಸರು ಅವರ ಮನೆಗಳಿಗೆ ಹೋದಾಗ ಹಲವರು ಇನ್ನೂ ಹಾಸಿಗೆಯಿಂದಲೇ ಎದ್ದಿರಲಿಲ್ಲ ಕಛೇರಿ ಕಾಲದಲ್ಲೂ ಕಾಫಿ ಗೃಹ ಮತ್ತು ಫಲಾಹಾರ ಮಂದಿರಗಳಲ್ಲಿ ಅಲೆದಾಡುತ್ತಿದ್ದ ನೌಕರರನ್ನು ಹಿಡಿಯಲು ಕಳೆದ ವಾರ ಪೋಲೀಸರು ಹೋಗಿದ್ದರು

ಇಬ್ಬರು ಗವರ್ನರರುಗಳಿಂದ ವೇತನದ ಮೋತಾ

ರಾಜಸ್ಥಾನ ಮತ್ತು ಬಿಹಾರಿನ ಗವರ್ನರರುಗಳಾದ ಗುರುಮುಖ್ ನಿಹಾಲ್‌ಸಿಂಗ್ ಮತ್ತು ಡಾ॥ ಜಕೀರ್ ಹುಸೇನರವರು ಮಿತವ್ಯಯದ ಕಾರಣಕ್ಕಾಗಿ ತಮ್ಮ ವೇತನವನ್ನು ಶೇಕಡ ೧೦ರಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿರುತ್ತಾರೆ ಗವರ್ನರರಿಗೆ ತಿಂಗಳಿಗೆ ೫,೫೦೦ ರೂ ವೇತನ ಬರುತ್ತಿದೆ

ಸಂಸ್ಥಾನಕ್ಕೆ ರೆಡ್‌ಕ್ರಾಸ್ ಸಂಸ್ಥೆಯಿಂದ ಫ್ಲೂ ನಿವಾರಕ ಔಷಧಿ

ಭಾರತದ ರೆಡ್‌ಕ್ರಾಸ್ ಸಂಸ್ಥೆಯವರು ಮೈಸೂರು ಸಂಸ್ಥಾನಕ್ಕೆ ೧ ಲಕ್ಷ ಆಸ್ಪಿರಿನ್ ಮಾತ್ರೆಗಳು, ೨೫ ಸಾವಿರ ಸಲ್ಫಾಡಯಾಜಿನ್ ಮಾತ್ರೆ, ೧೦,೦೦೦ ಮಲ್ಟಿ ವಿಟಮಿನ್ ಗುಳಿಗೆಗಳು, ನೂರು ಸೀಸೆ ಪೆನಿಸಿಲಿನ್, ನೂರು ಪೌಂಡು ಸೋಡಾ ಬೈಕಾರ್ಬನೇಟ್ ಮತ್ತು ೨೦೦ ಪೊಟ್ಟಣ ಗ್ಲೂಕೋಸುಗಳನ್ನು 'ಫ್ಲೂ' ನಿವಾರಣೆಗಾಗಿ ಒದಗಿಸಿರುತ್ತಾರೆ

ಬಿರುಗಾಳಿಯಿಂದ ವಿಮಾನ ತಿರುಗಿದ ಪ್ರಸಂಗ

ಮದ್ರಾಸಿನಲ್ಲಿ ಕಳೆದ ಶುಕ್ರವಾರ ೧೦ ನಿಮಿಷ ಮಾತ್ರ ಬೀಸಿದ ಬಿರುಗಾಳಿಯ ಪರಿಣಾಮವಾಗಿ ಅಲ್ಲಿನ ವಿಮಾನ ನಿಲ್ದಾಣದಲ್ಲಿ ಹಲವು ವಿಮಾನಗಳಿಗೆ ಸ್ವಲ್ಪ ಜಖಂ ಆಯಿತು. ಒಂದು ಏಣಿಯು ೫೧೦ ಗಜ ಆಚೆಗೆ ಹಾರಿಬಿತ್ತು ನಿಂತಿದ್ದ ಒಂದು ವಿಮಾನವು ಒಂದುಬಾರಿ ಗಿರ್ರನೆ ಸುತ್ತು ಹಾಕಿತು ಏಣಿಯು ಬಡಿದು ಮತ್ತೊಂದು ವಿಮಾನಕ್ಕೆ ಜಖಂ ಆಯಿತು ಗಾಳಿಯ ವೇಗವು ಗಂಟೆಗೆ ೬೩ ಮೈಲಿಯಷ್ಟಿತ್ತು.

C. T. C., Old Agrahar, Mysore
The Oldest & the best
AJMER INTER &
MADRAS MATRIC
Classes in full swing
Ladies also admitted

ಮೈಸೂರಿನ ಕರೆ

ಹೃದಯ ವ್ಯಾಧಿ ನರಗಳ ದೌರ್ಬಲ್ಯ, ಅಜೀರ್ಣ ರೋಗಗಳು, ರಕ್ತದೋಷ ಬುದ್ಧಿ ಭ್ರಮಣೆ, ಸಿಹಿಮೂತ್ರ, ಹಿಸ್ಟೀರಿಯಾ, ಮೂಲವ್ಯಾಧಿ ಮತ್ತು ಅಸ್ತಮಾಗಳಿಗೆ

ವೈದ್ಯ ವಾಚಸ್ಪತಿ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ
ರವರ ಸಲಹೆ ಪಡೆಯಿರಿ.
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಆಂಧ್ರ ಭವನದಲ್ಲಿ
ಪ್ರತಿ ತಿಂಗಳು 17 ನೇ ತಾರೀಖು



(ಬೆಳಗ್ಗೆ 7 30 ರಿಂದ ಸಂಜೆ 5ರ ವರೆಗೆ ಭೇಟಿ ಮಾಡಬಹುದು)
ಫೋನ್ ನಂ. 590
ಪ್ರವಾಸ ಸ್ಥಳಗಳ ವಿಳಾಸ ಮತ್ತು ಇತರ ವಿವರಗಳಿಗೆ ಬರೆಯಿರಿ :–
NAVRATHA KALPA PHARMACY,
JULLUNDUR CITY (India)

ರಿಜಿಸ್ಟರ್ಡ್ ನಂ 192

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 2 ನಯಾ ಪೈಸೆ

OWN YOUR AUTO!
(50 monthly Instalments)
Apply for prospectus etc with Re 1 stamps
AUTOMOBILE ASSOCIATION OF INDIA
New Statue Circle,
MYSORE

ಸಂಪುಟ : ೧೫] SADHVI TUESDAY 16-7-1957 ಮೈಸೂರು ಮಂಗಳವಾರ ೧೬-೭-೧೯೫೭ [ಸಂಚಿಕೆ : ೩೩೮

ಮುಷ್ಕರದ ಬಗ್ಗೆ ಕೇಂದ್ರ ನೌಕರರಿಗೆ ಪಂತರ ಎಚ್ಚರಿಕೆ

ಕೇಂದ್ರ ಸರ್ಕಾರದ ನೌಕರರಿಂದ ಮುಷ್ಕರ

ಗೃಹ ಮಂತ್ರಿ ಪಂಡಿತ ಪಂತರ ಎಚ್ಚರಿಕೆ

ಲೋಕಸಭೆಯು ನೆನ್ನೆ ಆರಂಭವಾದಾಗ ಗೃಹ ಮಂತ್ರಿ ಪಂಡಿತ್ ಗೋವಿಂದ ವಲ್ಲಭ ಪಂತರು ಕೇಂದ್ರ ಸರ್ಕಾರಿ ನೌಕರರ ಮುಷ್ಕರದ ವಿಷಯವನ್ನು ಪ್ರಸ್ತಾಪಿಸಿ, ನೌಕರರಿಗೆ ಮುಂದೆ ಸರ್ಕಾರದವರು ಕಲ್ಪಿಸುವ ಅನುಕೂಲಗಳಿಗೆ ಮುಷ್ಕರವು ಮುಳುವಾಗುವುದೆಂದು ಎಚ್ಚರಿಕೆಯಿತ್ತರು. ನೌಕರರಿಗೆ ಸರ್ಕಾರಕ್ಕಿಂತ ಹೆಚ್ಚಿನ ಹಿತೈಷಿಗಳು ಬೇರೆಯವರು ಇಲ್ಲವೆಂದು ಹೇಳಿದರು

ಸಂಸ್ಥಾನ ಸರ್ಕಾರಗಳ ನೌಕರರಿಗೂ ಮತ್ತು ಕೇಂದ್ರ ನೌಕರರಿಗೂ ವೇತನದ ದರ್ಜೆಯಲ್ಲಿ ಭಾರಿ ಅಂತರವಿರುವುದೆಂದೂ, ತುಂಬಾ ಕಡಿಮೆ ಸಂಬಳ ಬರುವ ಸಂಸ್ಥಾನ ಸರ್ಕಾರಗಳ ನೌಕರರಿಗೆ ಕೇಂದ್ರದವರು, ತಮ್ಮ ಕೆಲಸವಲ್ಲದಿದ್ದರೂ, ಸಹಾಯ ಕೊಡಲು ಪ್ರಯತ್ನಿಸಿರುವುದಾಗಿಯೂ ಕೇಂದ್ರದ ನೌಕರರ ಜೀವನವನ್ನು ಉತ್ತಮಗೊಳಿಸಲು ಸರ್ಕಾರವು ತನ್ನ ಕೈಲಾದುದೆಲ್ಲವನ್ನೂ ಮಾಡುವುದೆಂದೂ ಸೂಚಿಸಿದರು.

ಮುಷ್ಕರಕ್ಕೆ ಸಂಬಂಧಪಟ್ಟಂತೆ ಹಲವಾರು ನಿಲುವಳಿ ಸೂಚನೆಗಳು ಬಂದಿದ್ದುವು. ದೆಹಲಿ ವರ್ಕರ ಹರತಾಳ, ಅಂಚೆ ಮತ್ತು ತಂತಿ ನೌಕರರ ಮುಷ್ಕರ, ರಾಷ್ಟ್ರದಲ್ಲಿ ಆಹಾರದ ದುಸ್ಥಿತಿ ಮತ್ತು ಅಸ್ಸಾಮಿನಲ್ಲಿ ಎಣ್ಣೆ ಪರಿಷ್ಕರಣ ಕೇಂದ್ರ ಸ್ಥಾಪನೆ ಬಗ್ಗೆ ಅತೃಪ್ತಿ ಮುಂತಾದ ವಿಷಯಗಳ ಬಗ್ಗೆಯೂ ನಿಲುವಳಿ ಸೂಚನೆಗಳು ಬರಲ್ಪಟ್ಟಿದ್ದುವು. ಅವುಗಳೆಲ್ಲವನ್ನೂ ಅಧ್ಯಕ್ಷರು ತಳ್ಳಿಹಾಕಿದರು.

ಎಸ್. ಆರ್. ದಾಸ್‌ಗುಪ್ತರು ಮೈಸೂರಿನ ಚೀಫ್ ಜಸ್ಟಿಸ್

ಈ ದಿನ ನಿವೃತ್ತರಾದ ಮೈಸೂರು ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯನವರ ಸ್ಥಾನದಲ್ಲಿ ಕಲ್ಕತ್ತಾ ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಸುಬೋಧ ರಂಜನ ದಾಸ್ ಗುಪ್ತರವರನ್ನು ರಾಷ್ಟ್ರಾಧ್ಯಕ್ಷರು ನೇಮಿಸಿರುವರು. ಅವರು ಅಧಿಕಾರ ವಹಿಸುವವರೆಗೆ ಜಸ್ಟಿಸ್ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಶ್ರೇಷ್ಠ ನ್ಯಾಯಾಧೀಶರಾಗಿ ಕೆಲಸ ನಿರ್ವಹಿಸುವರು

ಭಾರತದಲ್ಲಿ ೩೧೧ ಕೋಟಿ ರೂ.ನಷ್ಟು ಹುದುಗಿಸಿರುವ ಚಿನ್ನ

ಭಾರತದಲ್ಲಿ ಹುದುಗಿಸಲಾಗಿರುವ ಚಿನ್ನವು ೨೧೧ ಕೋಟಿ ಔನ್ಸು (೩೧೧ ಕೋಟಿ ತೊಲ) ಇರಬಹುದೆಂದು ಲಂಡನ್ನಿನ ಫೈನಾನ್ಷಿಯಲ್ ಟೈಮ್ಸ್ ಪತ್ರಿಕೆಯು ತಿಳಿಸಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಹಿಂದೂಸ್ತಾನ ಮತ್ತು ಪಾಕಿಸ್ತಾನವು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಭಾರತವು ೩ ಕೋಟಿ ಔನ್ಸಿನಷ್ಟು ಚಿನ್ನವನ್ನು ಆಮದು ಮಾಡಿಕೊಂಡಿತ್ತೆಂದೂ, ಆ ಸಮಯದಲ್ಲಿ ಭಾರತದಿಂದ ೨ ಕೋಟಿ ಔನ್ಸಿನಷ್ಟು ಚಿನ್ನವನ್ನು ರಫ್ತು ಮಾಡಲಾಗಿತ್ತೆಂದೂ ಅದು ಹೇಳಿದೆ. ಇದರಲ್ಲಿ ಕಳ್ಳ ಸಾಗಾಣಿ ಚಿನ್ನವು ಲೆಕ್ಕಕ್ಕೆ ಸೇರಿಲ್ಲವೆಂದೂ ಹೇಳಲಾಗಿದೆ

ಸಂಸ್ಥಾನದ ಹೈಕೋರ್ಟಿಗೆ ೧೦ ಮಂದಿ ನ್ಯಾಯಾಧೀಶರು

ಕೇಂದ್ರ ಸರ್ಕಾರಕ್ಕೆ ಸಂಸ್ಥಾನ ಸರ್ಕಾರದ ಮನವಿ

ಬೆಂಗಳೂರು ೧೫

ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಪ್ರಶ್ನೆಗಳಿಗೆ ಉತ್ತರವಿತ್ತು, ಸಂಸ್ಥಾನದ ಹೈಕೋರ್ಟ್ ನ್ಯಾಯಾಧೀಶರುಗಳ ಸಂಖ್ಯೆಯನ್ನು ೧೦ಕ್ಕೆ ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿರುವುದಾಗಿ ತಿಳಿಸಿದರು. ಈ ವಿಷಯವು ಇನ್ನೂ ಪರಿಶೀಲನೆಯಲ್ಲಿರುವುದೆಂದೂ, ಅಂತಿಮ ನಿರ್ಧಾರವನ್ನು ತೆಗೆದುಕೊಂಡಿಲ್ಲವೆಂದೂ ಸೂಚಿಸಿದರು

ಸಂಸ್ಥಾನದಲ್ಲಿ ಶಿರ್ಕಾರಿ ಗೃಹ ನಿರ್ಮಾಣಕ್ಕಾಗಿ ೫೦ ಲಕ್ಷ ರೂ. ಸಾಲ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಿರುವುದಾಗಿ ಮುಖ್ಯ ಮಂತ್ರಿಯವರು ತಿಳಿಸಿದರು

ಲೋಕಸಭೆ ಮುಂದೆ ೮,೦೦೦ ವರ್ತಕರಿಂದ ಪ್ರದರ್ಶನ

ಮಾರಾಟ ತೆರಿಗೆ ಬಗ್ಗೆ ಪ್ರತಿಭಟನೆ

ನೆನ್ನೆ ಪಾರ್ಲಿಮೆಂಟ್ ಭವನದ ಮುಂದೆ ದೆಹಲಿಯ ೮,೦೦೦ ವರ್ತಕರು ಅಂತರ ಪ್ರಾಂತ ಮಾರಾಟ ತೆರಿಗೆಯನ್ನು ವಿರೋಧಿಸಿ ಪ್ರದರ್ಶನವನ್ನು ನಡೆಸಿದರು. ವರ್ತಕರು ಕಳೆದ ೧೦ನೇ ತಾರೀಖಿನಿಂದಲೂ ತೆರಿಗೆ ವಿರುದ್ಧವಾಗಿ ಹರತಾಳವನ್ನು ನಡೆಸುತ್ತಿರುವರು. ಅವರು ನೆನ್ನೆ ಕಪ್ಪು ಬಾವುಟಗಳನ್ನು ಹಿಡಿದು "ಅಂತರ ಪ್ರಾಂತ ತೆರಿಗೆ ನಾಶವಾಗಲಿ, ದೆಹಲಿ ವ್ಯಾಪಾರವನ್ನು ನಾಶಪಡಿಸಬೇಡಿ" ಎಂದು ಕೂಗಿದರು. ಅವರನ್ನು ಉದ್ದೇಶಿಸಿ ದೆಹಲಿಯ ಇಬ್ಬರು ಲೋಕಸಭಾ ಸದಸ್ಯರು ಭಾಷಣ ಮಾಡಿದನಂತರ, ಅವರುಗಳು ಸಭೆ ನಡೆಸಿ, ಹರತಾಳವನ್ನು ಮುಂದುವರಿಸಬೇಕೆಂದು ನಿರ್ಣಯಿಸಿದರು. ನೆನ್ನೆ ನಗರದಲ್ಲಿ ಪೂರ್ಣ ಹರತಾಳವು ನಡೆಯಿತು

ಮೈಸೂರಿಗೆ ನೆಹರೂ ಭೇಟಿ

ಮೈಸೂರು ಜಿಲ್ಲೆಯಲ್ಲಿ ಸೆಪ್ಟೆಂಬರಿನಲ್ಲಿ ಸೇರಲಿರುವ ಸರ್ವ ಪಕ್ಷಗಳ ಭೂದಾನ ಸಮ್ಮೇಳನದಲ್ಲಿ ಪ್ರಧಾನಿ ನೆಹರೂರವರೂ ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರೂ ಭಾಷಣ ಮಾಡುವರು. ಆಚಾರ್ಯ ವಿನೋಬಾ ಭಾವೆಯವರು ಅಧ್ಯಕ್ಷತೆ ವಹಿಸುವರು. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರೂ ಅದರಲ್ಲಿ ಭಾಗವಹಿಸುವಂತೆ ಕೋರಿ ಸರ್ವ ಸೇವಾ ಸಂಘದವರು ಆಹ್ವಾನವನ್ನಿತ್ತಿರುವರು

ತುಮಕೂರು ಹಳ್ಳಿಗೆ ವಿನೋಬಾ ಭಾವೆ ಹೆಸರು

ತುಮಕೂರು ಜಿಲ್ಲಾ ಸಿರಾ ತಾಲ್ಲೂಕಿನ ಪರಿಹಳ್ಳಿ ಗ್ರಾಮಕ್ಕೆ ಆಚಾರ್ಯ ವಿನೋಬಾ ಭಾವೆಯವರ ಹೆಸರನ್ನಿಡಲಾಗಿದೆ. ಅಲ್ಲಿ ರೈತರುಗಳು ೨೧೦ ಎಕರೆ ಮತ್ತು ವಿಧಾನ ಸಭಾ ಸದಸ್ಯ ಶ್ರೀ ಬಿ ತಿಮ್ಮೇಗೌಡ ಮತ್ತು ಅವರ ಇಬ್ಬರು ಸಹೋದರರು ೪೫ ಎಕರೆ ಉತ್ತಮ ಹತ್ತಿ ಬೆಳೆಯುವ ಕಪ್ಪು ಮತ್ತು ಕೆಂಪು ಜಮೀನನ್ನು ಭೂದಾನಕ್ಕೆ ಕೊಟ್ಟಿರುತ್ತಾರೆ

ವ್ಯವಸಾಯ ವರಮಾನ ತೆರಿಗೆ ಮಸೂದೆ ಚುನಾಯಿತ ಸಮಿತಿಗೆ

ಬೆಂಗಳೂರು ೧೫

ವಿಧಾನ ಸಭೆಯು ನೆನ್ನೆ ದಿನ ವ್ಯವಸಾಯ ವರಮಾನ ತೆರಿಗೆ ಮಸೂದೆಯನ್ನು ೨೮ ಜನ ಸದಸ್ಯರುಳ್ಳ ಚುನಾಯಿತ ಸಮಿತಿ ಪರಿಶೀಲನೆಗಾಗಿ ಒಪ್ಪಿಸಿತು. ೧ ವಾರದಲ್ಲಿ ಸಮಿತಿಯವರು ತಮ್ಮ ವರದಿಯನ್ನು ಒಪ್ಪಿಸಬೇಕಾಗಿದೆ. ಮಸೂದೆಗೆ ಸಾಮಾನ್ಯ ರೀತಿಯ ಬೆಂಬಲವು ದೊರೆಯಿತು. ತೆರಿಗೆ ವಿನಾಯಿತಿ ಮಟ್ಟವನ್ನು ೫,೦೦೦ ರೂ ಗೆ ಹೆಚ್ಚಿಸುವಂತೆ ಸದಸ್ಯರು ಕೋರಿದರು

ಹಣಕಾಸಿನ ಸಚಿವ ಶ್ರೀ ಟಿ ಮರಿಯಪ್ಪನವರು ಮಾತನಾಡಿ, ವಿನಾಯಿತಿ ಮಿತಿಯು ಈಗ ೩,೫೦೦ ರೂ ಇರುವುದೆಂದೂ, ಹೆಚ್ಚು ವರಮಾನವುಳ್ಳವರಿಗೆ ೧,೫೦೦ ರೂ ವರೆಗೂ ವಿನಾಯಿತಿ ದೊರೆಯುವುದೆಂದೂ, ನಿವ್ವಳ ವರಮಾನದ ಮೇಲೆ ಮಾತ್ರ ತೆರಿಗೆ ವಿಧಿಸಲಾಗುವುದೆಂದೂ ತಿಳಿಸಿದರು. ಬೊಂಬಾಯಿ ಕರ್ನಾಟಕದವರಿಗೆ ತೆರಿಗೆಯು ಹೊಸದೆಂಬ ಕಾರಣ ಮಸೂದೆಯನ್ನು ವಾಪಸು ತೆಗೆದುಕೊಳ್ಳುವುದು ಸಾಧುವಲ್ಲವೆಂದು ಅವರು ಸೂಚಿಸಿದರು

ಹಳೇ ಮೈಸೂರಿನಲ್ಲಿ ತೆರಿಗೆಯ ವಿನಾಯಿತಿ ಮಟ್ಟವನ್ನು ೪,೨೦೦ ರೂ ಗೆ ಗೊತ್ತುಪಡಿಸಿದೆ. ಚುನಾಯಿತ ಸಮಿತಿಯಲ್ಲಿ ಹಣಕಾಸು ಮತ್ತು ನ್ಯಾಯಾಂಗ ಸಚಿವರುಗಳು, ಶ್ರೀಗಳಾದ ಹೆಚ್ ಎಂ ಚನ್ನಬಸಪ್ಪ, ಎಂ ರಾಜಶೇಖರಮೂರ್ತಿ, ಜಿ ಎಸ್ ಬೊಮ್ಮೇಗೌಡ, ಬಿ ಎಸ್ ಬೋರಣ್ಣಗೌಡ ಮುಂತಾದವರು ಇರುವರು.

ಹುಕ್ಕೇರಿ ಬಳಿ ದರೋಡೆಕಾರರಿಂದ ಗುಂಡಿನೇಟು

ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನಿಡಸೋಸಿ ಹಟ್ಟಿ ಎಂಬ ಗ್ರಾಮದಲ್ಲಿ ಶಿವಮೂರ್ತಿಪ್ಪ ಮಜ್ಜಿಗೆ ಎಂಬುವರ ಮನೆಗೆ ಕಳೆದ ಗುರುವಾರ ೧೫ ಜನ ದರೋಡೆಕಾರರು ಕೊಡಲಿ, ಭರ್ಜಿ ಮತ್ತು ಬಂದೂಕಗಳ ಸಮೇತ ನುಗ್ಗಿದ್ದರೆಂದೂ, ಅವರ ಪೈಕಿ ೪ ಜನರು ಹೊರಗಡೆ ಇದ್ದಾಗ, ನೆರೆಹೊರೆಯವರು ಶ್ರೀ ಮೂರ್ತೆಪ್ಪನವರ ಸಹಾಯಕ್ಕಾಗಿ ಬರಲಾಗಿ ಅವರ ಮೇಲೆ ದರೋಡೆಕಾರರು ಕಲ್ಲು ತೂರಿ, ಕೊಡಲಿಯ ಪ್ರಹಾರ ಮಾಡಿ, ಗುಂಡನ್ನು ಹಾರಿಸಿದರೆಂದೂ, ಇಬ್ಬರಿಗೆ ತೀವ್ರವಾದ ಗುಂಡಿನ ಪೆಟ್ಟು ಬಿದ್ದಿರುವುದೆಂದೂ ವರದಿಯಾಗಿದೆ. ಹೆಚ್ಚು ಮಂದಿ ಹಳ್ಳಿಗರು ಸೇರಲಾಗಿ ದರೋಡೆಕಾರರು ಪರಾರಿಯಾದರು

ನಗರದಲ್ಲಿ ಇನ್‌ಫ್ಲುಯೆಂಜಾ ಇಳಿಮುಖ

ನಗರದ ಆರೋಗ್ಯ ಇಲಾಖಾಧಿಕಾರಿಗಳು ಹೊರಡಿಸಿರುವ ಪಾಕ್ಷಿಕ ವರದಿಯಲ್ಲಿ, ಕಳೆದ ೩೦ನೇ ತಾರೀಕಿಗೆ ಅಂತ್ಯವಾದ ೧೫ ದಿನಗಳಲ್ಲಿ ೧೬೨೧ ಮಂದಿಗೆ ಇನ್‌ಫ್ಲುಯೆಂಜಾವು ತಗಲಿತ್ತೆಂದೂ, ಒಟ್ಟು ಸಂಖ್ಯೆಯು ೨,೦೩೩ ಆಗಿತ್ತೆಂದೂ ಗೊತ್ತಾಗಿದೆ. ಇನ್‌ಫ್ಲುಯೆಂಜಾವು ಇಳಿಮುಖವಾಗುತ್ತಿದೆಯೆಂದೂ ತಿಳಿಸಲಾಗಿದೆ

ಕಡಿಮೆ ಸಂಬಳದ ನೌಕರರ ನಿವೃತ್ತಿ ೬೦ನೇ ವಯಸ್ಸಿಗೆ

ಬೆಂಗಳೂರು ೧೫

ಜವಾನರೇ ಮುಂತಾದ ಕಡಿಮೆ ಸಂಬಳದ ನೌಕರರ ನಿವೃತ್ತಿ ವಯಸ್ಸನ್ನು ೫೫ ರಿಂದ ೬೦ಕ್ಕೆ ಏರಿಸಲು ಸರ್ಕಾರದವರು ಯೋಚಿಸಿದ್ದಾರೆಂದೂ, ಈ ಬಗ್ಗೆ ಸದ್ಯದಲ್ಲೇ ಆಜ್ಞೆಯನ್ನು ಹೊರಡಿಸಲಾಗುವುದೆಂದೂ ವರದಿಯಾಗಿದೆ. ಇತ್ತೀಚೆಗೆ ವೇತನಗಳನ್ನು ಹೆಚ್ಚಿಸಿದರೂ ಈ ದರ್ಜೆಯ ಹಲವರು, ಬರುವ ವರ್ಷಗಳಲ್ಲಿ ನಿವೃತ್ತರಾಗಬೇಕಾದಾಗ ವಿರಾಮ ವೇತನದ ಹಣವು ೬॥ ರೂ ಗಳಿಗೂ ಕಡಿಮೆಯಾಗಿ ಬರುವುದರಿಂದ ಅಂತಹವರ ನಿವೃತ್ತಿಯ ವಯಸ್ಸನ್ನು ಹೆಚ್ಚಿಸಿ, ವಿರಾಮ ವೇತನವನ್ನು ೧೬॥ ರೂ ಮಟ್ಟಕ್ಕೆ ತರುವ ಸಲುವಾಗಿ ಈ ಕ್ರಮ ಕೈಗೊಳ್ಳಲಾಗುವುದೆಂದು ಹೇಳಲಾಗಿದೆ.

ಚುನಾವಣೆಯಲ್ಲಿ ಸೋತವನಿಂದ ಲೋಕಸಭೆಯಲ್ಲಿ "ಪ್ರಮಾಣ ವಚನ"

ನೆನ್ನೆ ದಿನ ದೆಹಲಿಯ ಲೋಕಸಭೆಯಲ್ಲಿ ಹೊಸ ಸದಸ್ಯರ ನಡುವೆ, ಚುನಾವಣೆಯಲ್ಲಿ ಸೋತ ಒಬ್ಬನೂ ಸೇರಿ ಪ್ರಮಾಣ ಸ್ವೀಕರಿಸಿದ ಪ್ರಸಂಗವು ವರದಿಯಾಗಿದೆ. ಹೊಸ ಸದಸ್ಯರು ಪ್ರಮಾಣ ಸ್ವೀಕರಿಸುವಂತೆ ಅಧ್ಯಕ್ಷರು ಸೂಚಿಸಿದಾಗ ಆ ವ್ಯಕ್ತಿಯೂ ಇತರರೊಡನೆ ಹೋಗಿ ತನ್ನ ಹೆಸರು ಬೀರೇಂದ್ರ ಕುಮಾರ ಮಜುಂದಾರ್ ಎಂತಲೂ, ಪಶ್ಚಿಮ ಬಂಗಾಳದಿಂದ ತಾನು ಆರಿಸಿ ಬಂದಿರುವುದಾಗಿಯೂ ತಿಳಿಸಿದನು

ಸಭೆಯಲ್ಲಿದ್ದವರೊಬ್ಬರು ಆತನನ್ನು ಗುರ್ತಿಸಿ, ಅವನು ಚುನಾವಣೆಯಲ್ಲಿ ಸೋತಿರುವುದಾಗಿಯೂ, ಅವನಿಗೆ ಬುದ್ಧಿಭ್ರಮಣೆಯಾಗಿರುವುದೆಂದೂ ಹೇಳಿದರು. ಅವನನ್ನು ವೈದ್ಯಕೀಯ ಪರೀಕ್ಷೆಗಾಗಿ ಕಳುಹಲು ಆಜ್ಞೆ ಮಾಡಲಾಯಿತು. ಸದಸ್ಯರ ಪುಸ್ತಕದಲ್ಲಿ ಅವನು ಹಾಕಿದ ರುಜುವನ್ನೂ ಮತ್ತು ಹಾಜರಿಯನ್ನೂ ತೆಗೆದುಹಾಕಲು ಅಧ್ಯಕ್ಷರು ಸೂಚಿಸಿ, ಅವನು ಸಭೆಗೆ ಅವಮಾನ ಮಾಡಿರುವುದಾಗಿ ತಿಳಿಸಿದರು. ಅದಕ್ಕೆ ಮುಂಚೆ ಅಧ್ಯಕ್ಷರಿಗೆ ಅವನು ಹಸ್ತಲಾಘವವನ್ನೂ ಕೊಟ್ಟನು. ಇಂತಹ ಪ್ರಸಂಗವು ಲೋಕ ಸಭೆಯಲ್ಲಿ ೨ ವರ್ಷಗಳ ಹಿಂದೆ ನಡೆದಿತ್ತು

ಮುಮ್ಮಡಿ ಕೃಷ್ಣರಾಜ ಒಡೆಯರರ ೧೬೩ನೇ ಜಯಂತ್ಯುತ್ಸವ

ಕೀರ್ತಿಶೇಷರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರರ ೧೬೩ನೇ ಜಯಂತ್ಯುತ್ಸವವು ಇದೇ ೨೧ನೇ ತಾರೀಕು ಭಾನುವಾರ ಬೆಳಗ್ಗೆ ೯ ಗಂಟೆಗೆ ರಂಗಾಚಾರ್ಲು ಪುರಭವನದಲ್ಲಿ ನೆರವೇರುವುದು. ಸಂಸ್ಥಾನದ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು

○ ಲಷ್ಕರ್ ಮೊಹಲ್ಲಾ ಕುಂಬಾರಗೇರಿಯಲ್ಲಿ ನೆನ್ನೆ ದೀಪದ ಕಂಭದಿಂದ ವಿದ್ಯುಚ್ಛಕ್ತಿಯು ಹರಿದು ಒಂದು ಗಾಡಿಯ ಎತ್ತುಗಳಿಗೆ ತಗಲಿ ಅವು ಮೃತಪಟ್ಟುವು. ಗಾಡಿಯವನು ಪಾರಾದನು.

ಕೊಡಗಿನ ಅಂಚೆ ಮತ್ತು ತಂತಿ ನೌಕರರಿಗೆ ಘಟ್ಟದ ಭತ್ಯಕ್ಕೆ

ಒತ್ತಾಯ

ಕೊಡಗಿನ ಅಂಚೆ ಇಲಾಖೆಯ ಮೂರನೇ ವರ್ಗದ ನೌಕರರ ಸಂಘದ ಅಧ್ಯಕ್ಷ ಶ್ರೀ ಎ. ಎಂ ಬೆಳ್ಳಿಯಪ್ಪನವರು ಹೇಳಿಕೆಯೊಂದನ್ನು ಇತ್ತು ಈ ರೀತಿ ತಿಳಿಸಿರುತ್ತಾರೆ:—

ಕೊಡಗಿನಲ್ಲಿ ೧೯೩೭ ರವರೆಗೆ ಅಂಚೆ ನೌಕರರಿಗೆ ಗಿರಿ ಪರಿಹಾರ ಭತ್ಯವನ್ನು ಕೊಡಲಾಗುತ್ತಿತ್ತು ಅಲ್ಲಿಂದೀಚೆಗೆ ತಪ್ಪಿಸಲಾಗಿದೆ. ಕೊಡಗು ಮಲೆನಾಡಲ್ಲದೆ ಬೆಟ್ಟಗುಡ್ಡಗಳ ಪ್ರದೇಶವಾಗಿದೆ ೬ ತಿಂಗಳ ಕಾಲ ಅಲ್ಲಿ ಮಳೆ ಬೀಳುವುದು ಸರ್ವವಿದಿತವಾದ ವಿಷಯ. ಛಳಿಗಾಲದಲ್ಲಿ ದೂರದ ಎಸ್ಟೇಟುಗಳಿಗೆ ಹೋಗಬೇಕಾದರೆ ಕಾಯಿವಾದ ಬಟ್ಟೆಗಳನ್ನು ಹಾಕಿಕೊಳ್ಳಬೇಕು ಅವರಿಗೆ ಈಗ ಕೊಡುತ್ತಿರುವ ಸಂಬಳ ಮತ್ತು ಭತ್ಯವು ಇದಕ್ಕೆ ಸಾಕಾಗುವುದಿಲ್ಲ. ಅಲ್ಲದೆ ಅವರುಗಳಿಗೆ ವಾಸಸ್ಥಳದ ಅಭಾವವೂ ಇದೆ

ಈ ಕುಂದುಕೊರತೆಗಳನ್ನು ಸಂಬಂಧಪಟ್ಟವರಿಗೆ ಕಾನೂನುಬದ್ಧ ಚಳುವಳಿಯ ಮೂಲಕ ವಿವರಿಸಲಾಗಿದೆ ರಾಷ್ಟ್ರಾಧ್ಯಕ್ಷರು ಮತ್ತು ಮಾರ್ಗಾನುಕೂಲ ಮಂತ್ರಿಗಳಿಗೆ ಮನವಿಗಳನ್ನು ಕಳುಹಿಸಲಾಗಿದೆ ಕಳೆದ ಮೇ ತಿಂಗಳಲ್ಲಿ ಮಾಜಿ ಮಂತ್ರಿ ಶ್ರೀ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನೌಕರರ ಬೇಡಿಕೆಯನ್ನು ಸ್ಪಷ್ಟವಾಗಿ ತಿಳಿಸಲಾಗಿದೆ

ಈ ಮೂಲಕ ಎಲ್ಲಾ ರೀತಿಯ ಕಾನೂನು ಬದ್ಧ ನಡವಳಿಕೆಗಳಿಂದ ಸಲ್ಲಿಸಿರುವ ಬೇಡಿಕೆಗಳ ಇನ್ನೂ ಇತ್ಯರ್ಥವಾಗಿಲ್ಲ. ಆದಾಗದಿದ್ದರೆ ಆಗಸ್ಟಿನಲ್ಲಿ ಆವಂತಹ ತೊಂದರೆಯು ಇಲ್ಲಿಯೂ ಸಂಭವಿಸಬಹುದು

ಅಮೇರಿಕದಿಂದ ನೆನ್ನೆ ಮತ್ತೊಂದು ಅಣು ಬಾಂಬಿನ ಸಿಡಿತ

ಅಮೇರಿಕದ ಏಳನೇ ಅಣು ಬಾಂಬಿನ ಸಿಡಿತವು ನೆನ್ನೆ ನೆವಾಡಾದಲ್ಲಿ ನಡೆಯಿತೆಂದೂ, ದ್ವಿತೀಯ ಮಹಾ ಯುದ್ಧದಲ್ಲಿ ಜಪಾನಿನ ಮೇಲೆ ಪ್ರಯೋಗಿಸಲಾದ ಬಾಂಬಿನ ೨ರಷ್ಟು ಶಕ್ತಿಯು ಈ ಬಾಂಬಿಗೆ ಇದ್ದುದು ವ್ಯಕ್ತಪಟ್ಟಿತೆಂದೂ ವರದಿಯಾಗಿದೆ

ಉಚಿತ ನೂಲುವ ಶಿಕ್ಷಣ

ನಗರದ ವೈಸ್‌ರಾಯ್ ರಸ್ತೆಯಲ್ಲಿರುವ ಮಹಿಳಾ ಸಮಾಜದಲ್ಲಿ ಚರಕಾ ತರಗತಿಗೆ ಸೇರಬಯಸುವ ಮಹಿಳೆಯರು ಉಚಿತವಾಗಿ ಬಂದು ಸೇರಲು ಅವಕಾಶವಿದೆ ಇಲ್ಲಿ ತೆಗೆದ ನೂಲಿಗೆ ಮಜೂರಿ ಕೊಡಲಾಗುವುದು.

ನಂಜನಗೂಡಿನ ಸಹಾಯ ಪಡೆವ ಹರಿಜನ ವಿದ್ಯಾರ್ಥಿನಿಲಯ

ಶಾಲೆಗಳು ಪುನಃ ಆರಂಭವಾಗಿ ೨ ತಿಂಗಳಾದರೂ, ನಂಜನಗೂಡಿನಲ್ಲಿರುವ ಹರಿಜನರ ಪ್ರೌಢಶಾಲಾ ವಿದ್ಯಾರ್ಥಿನಿಲಯವು ತೆರೆಯಲಾಗಿಲ್ಲ ಯಾವಾಗ ತೆರೆಯಲಾಗುವುದೆಂಬುದೂ ಗೊತ್ತಾಗಿಲ್ಲ. ಅಲ್ಲಿನ ಆಡಳಿತದಲ್ಲಿ ಲೋಪದೋಷಗಳಿರುವುವೆಂದು ಕೇಳಿಬರುತ್ತದೆ ಹಾಗಿದ್ದರೆ ಅದನ್ನು ಸರಿಪಡಿಸುವುದು ಅಗತ್ಯ ಅದಕ್ಕೆ ವಿದ್ಯಾರ್ಥಿನಿಲಯವನ್ನು ತೆರೆಯದಿರುವುದು ಸರಿಯಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವರೆಂದು ನಂಬಲಾಗಿದೆ ಎಂದು ಹರಿಜನರ ಹಿತೈಷಿಯೊಬ್ಬರು ಪತ್ರ ಬರೆದಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗೋಟುವಾದ್ಯ. ೭-೧೫ ಟಿ. ವಿ ಶ್ರೀನಿವಾಸನ್ ಮತ್ತು ಬಿ ಕೆ. ಶ್ರೀನಿವಾಸನ್-ದೇವರನಾಮಗಳು. ಮಧ್ಯಾಹ್ನ ೧೨ ಮತ್ತು ೧೫೦ ಕಳಸಯ್ಯ-ನಾಗಸ್ವರ ೧೨-೩೦ ಸಂಗೀತ ೧ ಮತ್ತು ೧-೨೦ ರಿಕಾರ್ಡು ೨ ಟಿ. ವಿ ಶ್ರೀನಿವಾಸನ್ ಮತ್ತು ಬಿ. ಕೆ. ಶ್ರೀನಿವಾಸನ್-ಗಾಯನ ೨-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೬ ೧೦ ಕನ್ನಡ ಗೀತೆಗಳು ೬ ೩೦ ಗ್ರಾಮಸ್ಥರಿಗಾಗಿ ೭-೩೦ ವಾದ್ಯವೃಂದ. ೮ ಎಂ. ಎಸ್ ಸುಬ್ರಹ್ಮಣ್ಯಂ ಪಿಟೀಲು ೮ ೩೦ ರಾಷ್ಟ್ರೀಯ ಕಾರ್ಯಕ್ರಮ: ಭಾಷಣ. ೮-೫೦ ವಚನಗಾನ ೯ ೧೫ ಉರ್ದು ಗೀತೆಗಳು ೯-೩೦ ಚಿತ್ರಗೀತೆಗಳು ಮತ್ತು ನಾಟಕ-ರಿಕಾರ್ಡುಗಳು.

ಅಂಚೆ ನೌಕರರಿಂದ ಸರ್ಕಾರಕ್ಕೆ ಮುಷ್ಕರದ ನೋಟೀಸು

ಬರುವ ತಿಂಗಳು ಒಂದನೇ ತಾರೀಕಿನೊಳಗೆ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಡದಿದ್ದಲ್ಲಿ ಆಗಸ್ಟ್ ೮-೯ನೇ ತಾರೀಕು ಮಧ್ಯರಾತ್ರಿಯಿಂದ ಮುಷ್ಕರ ಹೂಡುವುದಾಗಿ ತಿಳಿಸಿ ಅಂಚೆ ಮತ್ತು ತಂತಿ ಇಲಾಖೆ ನೌಕರರ ಸಂಘ ಮತ್ತು ಅದರಲ್ಲಿ ಸೇರಿರುವ ೯ ಸಂಘಗಳು ಕೇಂದ್ರದ ಹಲವಾರು ಸ್ಥಳಗಳಲ್ಲಿ ಸರ್ಕಾರಕ್ಕೆ ನೋಟೀಸ್ ಕೊಟ್ಟಿರುವುದಾಗಿ ಗೊತ್ತಾಗಿದೆ. ಎ ಎ. ಟಿ. ಯು. ಸಿಯ ಕಾರ್ಯನಿರ್ವಾಹಕ ಸಮಿತಿ ಸಭೆಯು ನೆನ್ನೆ ಸೇರಿ, ರಾಷ್ಟ್ರದ ಹಿತದೃಷ್ಟಿಯಿಂದ ಅಂಚೆ ಮತ್ತು ತಂತಿ ಇಲಾಖೆ ನೌಕರರು ಮುಷ್ಕರ ನಡೆಸಬಾರದೆಂದೂ, ಇಂತಹ ಕ್ರಮಗಳಿಂದ ಅವರಿಗೆ ಹೆಚ್ಚು ನಷ್ಟವೇ ಸಂಭವಿಸಿ, ಜನತೆಯ ಸಹಾನುಭೂತಿಯನ್ನೂ ಕಳೆದುಕೊಳ್ಳುವರೆಂದು ತಿಳಿಸಿ ಹಿತೋಪದೇಶ ನೀಡಿ ನಿರ್ಣಯ ಮಾಡಿರುತ್ತದೆ.

ದ್ವಿತೀಯ ಯೋಜನೆಯಲ್ಲಿ ೧೦,೪೦೦ ಭಾರಿ ಸಹಕಾರ ಸಂಘಗಳ ವ್ಯವಸ್ಥೆ

ದ್ವಿತೀಯ ಯೋಜನೆ ಅವಧಿಯಲ್ಲಿ ೧೦,೪೦೦ ಭಾರಿ ಸಹಕಾರ ಸಂಘಗಳನ್ನು ವ್ಯವಸ್ಥೆ ಮಾಡಲಾಗುವುದು ಅಲ್ಲದೆ ಈಗಿರುವ ಸಣ್ಣ ಪ್ರಮಾಣದ ಸಂಘಗಳನ್ನು ಬಲಪಡಿಸಲಾಗುವುದು ಚೀಣಕ್ಕೆ ತೆರಳಿದ್ದ ಭಾರತದ ವ್ಯವಸಾಯ ನಿಯೋಗದವರ ಶಿಫಾರಸನ್ನು ಜಾರಿಗೆ ತರುವ ಸಂಬಂಧವಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಗೊತ್ತಾಗಿದೆ. ಸಹಕಾರ ಸಂಘಗಳ ಮೂಲಕ ಯೋಜನೆ ಅವಧಿಯಲ್ಲಿ ೨೦೦ ಕೋಟಿ ರೂ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಕೊಡಲೇರ್ಪಡಿಸಲಾಗುವುದು. ಈ ವರ್ಷದಲ್ಲಿಯೇ ೮೦ ಕೋಟಿ ರೂ ಅಷ್ಟು ಅದಕ್ಕೆ ಒದಗಿಸಲಾಗುವುದು. ೫೬ರ ಅಕ್ಟೋಬರಿನಿಂದ ೫೭ರ ಮಾರ್ಚಿ ವರೆಗೆ ೩೦,೦೦೦ ಹೊಸ ಸಂಘಗಳನ್ನು ಸ್ಥಾಪಿಸಲಾಯಿತಲ್ಲದೆ, ೧೭ ೮ ಲಕ್ಷ ಹೊಸ ಸದಸ್ಯರನ್ನು ಸಹಕಾರ ಚಳುವಳಿಗೆ ಸೇರಿಸಿದಂತಾಗಿದೆ

ವಿವಾಹ ಕಾಲದಲ್ಲಿ ವರನ ತಂದೆಗೆ ಇರಿತ

ಭದ್ರಾವತಿಯ ಕ್ರಿಸ್ತ ದೇವಾಲಯದಲ್ಲಿ ವಿವಾಹವೊಂದು ನಡೆಯುತ್ತಿದ್ದಾಗ ವಧುವಿನ ಕಡೆಯವನೊಬ್ಬನು ವರನ ತಂದೆಯನ್ನು ಚಾಕುವಿನಿಂದ ಇರಿದು ಗಾಯಗೊಳಿಸಿದುದಾಗಿ ವರದಿಯಾಗಿದೆ ಗಾಯಗೊಂಡವರ ಮೂಗು ಮತ್ತು ತುಟಿಗಳು ಹರಿದುಹೋಗಿವೆ ಅವರು ಆಸ್ಪತ್ರೆಯಲ್ಲಿ ಗುಣಹೊಂದುತ್ತಿರುವರು. ಪೊಲೀಸರು ತನಿಖೆ ನಡೆಸುತ್ತಿದ್ದಾರೆ

ರಷ್ಯದಿಂದ ಜಪಾನ್ ಪ್ರಜೆಗಳ ವಾಪಸು

ರಷ್ಯಕ್ಕೆ ಸೇರಿದ ಸಖಾಲಿನ್ ದ್ವೀಪದಲ್ಲಿರುವ ೨೫೮ ಜಪಾನಿ ಪ್ರಜೆಗಳನ್ನು ರಷ್ಯವು ಈ ತಿಂಗಳು ೨೮ನೇ ತಾರೀಕು ಜಪಾನಿಗೆ ಕಳುಹಿಸಲು ಒಪ್ಪಿರುತ್ತದೆ.

ಮೈಸೂರು ಪೇಟೆ ಧಾರಣೆ

ರತ್ನಚೂಡಿ	[illegible]	[illegible]
ಅಕ್ಕಿ	[illegible]	[illegible]
ಕಾರ್ ಸಣ್ಣ	[illegible]	[illegible]
ಬಂಗಾರಸಣ್ಣ	[illegible]	
ಕಾಳುಬಳ್ಳು	[illegible]	
ರಾಗಿ	[illegible]	
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆ	[illegible]	[illegible]
ಉದ್ದು	[illegible]	[illegible]
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

Edited, Printed and Published by A. R Nagarajan at Sadhvi Press, D. Subbiah Road Mysore

ಆಕಾಶವಾಣಿಯ ೨೫ನೇ ವಾರ್ಷಿಕೋತ್ಸವ

ಭಾರತದ ರೇಡಿಯೋವಿನ ೨೫ನೇ ವಾರ್ಷಿಕೋತ್ಸವವು ಈ ತಿಂಗಳು ಕಡೆಯ ವಾರದಲ್ಲಿ ನಡೆಯುವುದು. ಈ ಸಂಬಂಧವಾಗಿ ಎರಡು ದಿನಗಳು ನಡೆಯುವ ಸಂಗೀತ ಸಭೆಯ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುವುದು. ಮೈಸೂರಿನ ಕೆ ವಾಸುದೇವಾಚಾರ್ಯರಿಂದ ಪಲ್ಲವಿ ಗಾಯನವೂ ಇದೆ ಇತರ ಶ್ರೇಷ್ಠ ವರ್ಗದ ಸಂಗೀತಗಾರರ ಗಾಯನಗಳನ್ನೂ, ವಾದ್ಯ ಕಛೇರಿಗಳನ್ನೂ ಏರ್ಪಡಿಸಲಾಗುವುದು ೧೯೨೭ರ ಜುಲೈ ೨೩ರಂದು ಮಾಜಿ ವೈಸರಾಯ್ ಲಾರ್ಡ್ ಇರ್ವಿನ್ನರು ಬೊಂಬಾಯಿಯಲ್ಲಿ ಮೊಟ್ಟಮೊದಲಿನ ರೇಡಿಯೋವಿನ ಆರಂಭೋತ್ಸವವನ್ನು ನಡೆಸಿದ್ದರು

ಗುಂಡಿನ ವೇಗವನ್ನು ಮೀರಿಸಿ ಹಾರಲು ವಿಮಾನಗಳ ಪ್ರಯತ್ನ

ಲಾಸಾಂಜಲಿಸ್‌ನಿಂದ ನ್ಯೂಯಾರ್ಕ್‌ಗೆ ೨,೪೬೦ ಮೈಲಿ ದೂರವನ್ನು ಮೂರು ಗಂಟೆ ಹದಿನಾಲ್ಕು ನಿಮಿಷಗಳಲ್ಲಿ ಹಾರಿ, ಗುಂಡಿನ ವೇಗವನ್ನು ಮೀರಿಸುವ ವೇಗವನ್ನು ಸಾಧಿಸಲು ಈ ದಿನ ಅಮೇರಿಕಾ ನೌಕಾ ದಳದ ಎರಡು ಜೆಟ್ ವಿಮಾನಗಳು ಸಾಹಸ ನಡೆಸುವುವೆಂದು ಗೊತ್ತಾಗಿದೆ.

ಗಾಂಧೀಜಿಯವರ ಸಂಗಾತಿ ಪಾರಿಖ್‌ರವರ ನಿಧನ

ಮಹಾತ್ಮ ಗಾಂಧಿಯವರ ಸಂಗಾತಿಯೂ ಮತ್ತು ಹಲವಾರು ವರ್ಷ ಕಾಲ ಅವರ ಕಾರ್ಯದರ್ಶಿಯೂ ಆಗಿದ್ದ ನರಹರಿ ಪಾರಿಖ್‌ರವರು ಬರ್ಡೋಲಿಯ ಸ್ವರಾಜ್ಯ ಆಶ್ರಮದಲ್ಲಿ ನೆನ್ನೆ ಸಂಜೆ ತಮ್ಮ ೬೭ ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಅವರಿಗೆ ಪಾರ್ಶ್ವವಾಯು ತಗಲಿ ಮೂರು ವರ್ಷಗಳಿಂದಲೂ ಆಶ್ರಮದಿಂದ ಹೊರಕ್ಕೆ ಬಂದಿರಲಿಲ್ಲ. ಗಾಂಧೀಜಿಯವರ ತತ್ವದ ಬಗ್ಗೆ ಅವರು ಅನೇಕ ಗ್ರಂಥಗಳನ್ನು ಬರೆದಿರುವರು

ಬೆಂಗಳೂರಿನಲ್ಲಿ ಮಧ್ಯ ಪ್ರದೇಶದ ದರೋಡೆಕೋರನ ಬಂಧನ

ಬೆಂಗಳೂರಿನ ಪೊಲೀಸರು ಅಲಸೂರಿನ ಮಿಲಿಟರಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಮಧ್ಯಪ್ರದೇಶದ ಭಾರಿ ದರೋಡೆಕೋರನನ್ನು ನೆನ್ನೆ ಬಂಧಿಸಿದರು ಅವನು ಮಿಲಿಟರಿ ರಿಕ್ರೂಟ್ ಆಗಿ ಸೇರಿದ್ದನೆಂದು ಹೇಳಲಾಗಿದೆ

ಪಶ್ಚಿಮ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ

ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು ನೆನ್ನೆ ಘೋಷಣೆಯೊಂದರಲ್ಲಿ ಹೊರಡಿಸಿ, ಪಶ್ಚಿಮ ಪಾಕಿಸ್ತಾನದಲ್ಲಿ ಅಧ್ಯಕ್ಷರ ಆಳ್ವಿಕೆಯನ್ನು ವಾಪಸು ತೆಗೆದುಕೊಂಡು ಪ್ರಜಾಪ್ರಭುತ್ವದ ಸರ್ಕಾರವನ್ನು ಪುನಃ ಸ್ಥಾಪಿಸಲು ಆಜ್ಞೆ ಮಾಡಿರುತ್ತಾರೆ. ಅಲ್ಲಿ ರಿಪಬ್ಲಿಕ್ ಪಕ್ಷವು ಮತ್ತೆ ಆಡಳಿತ ನಡೆಸುವುದು.

ಮಹಿಳಾ ಸಮಾಜ,

ವೈಸರಾಯ್ ರಸ್ತೆ, ಮೈಸೂರು.

ಮೇಲ್ಕಂಡ ಸಮಾಜದಲ್ಲಿ ಶಿಶುವಿಹಾರಕ್ಕೆ ಒಂದು ತಿಂಗಳಿಗೆ ಮಾಡತಕ್ಕ ಶುಲ್ಕ 1 ರೂ ಮಾತ್ರ ಸಂಗೀತಕ್ಕಾಗಿ 0-8-0; ಹಿಂದಿ 1-8-0. ಹೆಚ್ಚಿನ ವಿವರವನ್ನು ಸಮಾಜದ ಕಾರ್ಯದರ್ಶಿಯಿಂದ ತಿಳಿಯಬಹುದು

ನಿಶ್ಚಯ ಬೆಲೆ

ಜನರು ಅವರ ವಿಶ್ವಾಸಗಳನ್ನು ಬಯಸುವ ಯಾವ ವ್ಯಾಪಾರ ಸಂಸ್ಥೆಯೂ, ಸುಳ್ಳಿನ ಮರೆಹೊಗುವುದಿಲ್ಲ. ಶಿಕ್ಷಾವಂತ ಸಂಸ್ಥೆಯ ಹೆಸರು ಹೆಚ್ಚು ಕ್ರಮವಿಲ್ಲದೆ ಪ್ರಸಿದ್ಧವಾಗುತ್ತದೆ. ಹಾಗೆಯೇ "ಶ್ರೀ ಕೇಂದ್ರ ಸ್ಟೋರ್ಸ್" (94, ತ್ಯಾಗರಾಜ ರಸ್ತೆ ಕ್ರಾಸ್, ಮೈಸೂರು) ಅಷ್ಟು ಜನಪ್ರಿಯ ಹಾಲು ಸರಬರಾಜಿನಲ್ಲಿ ಎತ್ತಿದ ಕೈ ಎನ್ನಿಸಿದೆ. ವಿವರಗಳಿಗೆ ವಿಚಾರಿಸಿ, ಅಥವಾ ಪೋಸ್ಟ್ ಕಾರ್ಡ್ ಬರೆಯಿರಿ

ಕೇರಳದಲ್ಲಿ ಬಡವರಿಗೆ ಉಚಿತ ವಕೀಲಿ ಸೌಲಭ್ಯ

ಕೇರಳದಲ್ಲಿ ಮಾಹೆಯಾನಾ ೧೦೦ ರೂ. ಗಿಂತ ಕಡಿಮೆ ವರಮಾನ ಬರುವ ಎಲ್ಲಾ ಜನರಿಗೂ ಕ್ರಿಮಿನಲ್ ತರೀಖಿನ ಮೊಕದ್ದಮೆಗಳಲ್ಲಿ ಸರ್ಕಾರದ ವೆಚ್ಚದಿಂದ ಉಚಿತ ವಕೀಲಿ ಸೌಲಭ್ಯವನ್ನು ಕಲ್ಪಿಸಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ. ಇಂತಹ ಸುಧಾರಣೆಯನ್ನು ನಡೆಸುತ್ತಿರುವ ಪ್ರಾಂತಗಳಲ್ಲಿ ಕೇರಳವೇ ಮೊದಲಿನದು. ಒಂದು ತಿಂಗಳಲ್ಲಿ ಸರ್ಕಾರದ ನಿರ್ಧಾರವನ್ನು ಜಾರಿಗೆ ತರಲಾಗುವುದು. ವರಮಾನದ ಮಿತಿಯು ಹರಿಜನರಿಗೆ ಮಾತ್ರ ಅನ್ವಯಿಸುವುದಿಲ್ಲ. ಎಲ್ಲಾ ಹರಿಜನರಿಗೂ ಈ ಬಗ್ಗೆ ಸೌಲಭ್ಯವನ್ನು ಕ್ರಿಮಿನಲ್ ಮತ್ತು ಸಿವಿಲ್ ಮೊಕದ್ದಮೆಗಳಲ್ಲೂ ಕಲ್ಪಿಸಲಾಗುವುದು

ಫುಟ್‌ಬಾಲ್ ಪಂದ್ಯದ ಘರ್ಷಣೆಯಲ್ಲಿ ಆರು ಮಂದಿಗೆ ಇರಿತ

ಕಲ್ಕತ್ತಾದಲ್ಲಿ ನೆನ್ನೆ ಫುಟ್‌ಬಾಲ್ ಪಂದ್ಯವೊಂದು ನಡೆಯುತ್ತಿದ್ದಾಗ ಒಂದು ಕ್ಲಬ್ಬಿನ ಬೆಂಬಲಿಗರು ಮತ್ತೊಂದರ ಬೆಂಬಲಿಗರನ್ನು ಉಪಹಾಸ್ಯ ಮಾಡಲಾಗಿ ಎರಡು ಪಕ್ಷಗಳಿಗೂ ಘರ್ಷಣೆ ನಡೆದು, ಪರಿಸ್ಥಿತಿಯನ್ನು ಹತೋಟಿಗೆ ತರಲು ಪೊಲೀಸರು ಲಾಠಿ ಪ್ರಹಾರ ಮಾಡಿದರೆಂದೂ, ಅದರಿಂದ ಅನೇಕರಿಗೆ ಗಾಯವಾಗಿ ರಕ್ತ ಸುರಿಯಿತೆಂದೂ ವರದಿಯಾಗಿದೆ. ಗಲಭೆಯು ಅಲ್ಲಿನ ಎಸ್ಪ್ಲನೇಡ್ ಬಡಾವಣೆಗೂ ಹಬ್ಬಿ, ಅಲ್ಲಿ ಆರು ಮಂದಿಗೆ ಇರಿತವಾಯಿತೆಂದೂ, ಕೆಲವು ಅಂಗಡಿಗಳನ್ನು ಲೂಟಿ ಮಾಡಲಾಯಿತೆಂದೂ ತಿಳಿದುಬಂದಿದೆ

INCOME TAX FOR THE LAYMAN

(Govt. of India) 1-2-0

REPLACEMENT VOL. for

Mysore Code. Vol. I 3-8-0

Also Law Books

ಕೃಷ್ಣಾ ಮತ್ತು ಕಂಪೆನಿ,

100 ಅಡಿ ರಸ್ತೆ, ಮೈಸೂರು.

WANTED A Clerk-cum-Typist on a pay of Rs 40 and D.A. Rs 30 per month Persons who have passed Senior Type-writing Examination may apply with one rupee Postal Order and testimonials, if any, in the form prescribed by P. S C on or before 25-7-1957 to the President, Sri Kanyakaparameswari Co-operative Society, Ltd, New Statue Circle, Mysore.

President

ಮೈಸೂರಿನ ಕರೆ

ಹೃದಯ ವ್ಯಾಧಿ ನರಗಳ ದೌರ್ಬಲ್ಯ, ಅಜೀರ್ಣ ರೋಗಗಳು, ರಕ್ತದೋಷ, ಬುದ್ಧಿ ಭ್ರಮಣೆ, ಬಹುಮೂತ್ರ, ಹಿಸ್ಟೀರಿಯಾ, ಮೂಲವ್ಯಾಧಿ ಮುಂತಾದ ಅಸ್ವಸ್ಥರಿಗೆ

ವೈದ್ಯ ವಾಚಸ್ಪತಿ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ

ನಗರ ಸಂಚಾರ ಹೊರಟರು.

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಪ್ರತಿ ತಿಂಗಳು 17 ನೇ ತಾರೀಖು

(ಬೆಳಗ್ಗೆ 7-30 ರಿಂದ ಸಂಜೆ 5ರ ವರೆಗೆ ಭೇಟಿ ಮಾಡಬಹುದು)

ಫೋನ್ ನಂ. 590

ಪ್ರವಾಸ ಸ್ಥಳಗಳ ವಿಳಾಸ ಮತ್ತು ಇತರ ವಿವರಗಳಿಗೆ ಬರೆಯಿರಿ:-

NAVRATNA KALPA PHARMACY,

JULLUNDUR CITY (India)

ರಿಜಿಸ್ಟರ್ಡ್ ನಂ. 792

OWN YOUR AUTO!
(36 monthly Instalments)

Apply for prospectus etc. with Re. 1 stamps

AUTOMOBILE ASSOCIATION OF INDIA
New Statue Circle,
MYSORE



ಕನ್ನಡ ಪತ್ರಿಕೆ 2 ನಯೆ ಪೈಸ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೧೫] SADHVI : WEDNESDAY 17—7—1957 ಮೈಸೂರು : ಬುಧವಾರ ೧೭—೭ ೧೯೫೭ : [ಸಂಚಿಕೆ : [illegible]

ಅರಬ್-ಇಸ್ರೇಲುಗಳಲ್ಲಿ ಪಾಕಿಸ್ತಾನ್ ಸಂಧಾನಕ್ಕೆ ತಿರಸ್ಕಾರ

ಸೆಪ್ಟೆಂಬರ್ ೧೫ರಿಂದ ರೈಲ್ವೆ ಸ್ಟೇಷನ್ ಮಾಸ್ಟರುಗಳ ಮುಷ್ಕರ

ಮೈಸೂರು ವಿಭಾಗದ ಸಮ್ಮೇಳನದಲ್ಲಿ ನಿರ್ಧಾರದ ಅನುಮೋದನೆ

ಬೆಂಗಳೂರು ೧೬

ಇಲ್ಲಿ ಸೇರಿದ್ದ ಮೈಸೂರು ಡಿವಿಷನ್ ರೈಲ್ವೆ ಸ್ಟೇಷನ್ ಮಾಸ್ಟರು ಮತ್ತು ಅಸಿಸ್ಟೆಂಟ್ ಮಾಸ್ಟರುಗಳ ಸಮ್ಮೇಳನವು, ಬರುವ ಸೆಪ್ಟೆಂಬರ್ ೧೫ರಿಂದ ತಮ್ಮ ಬೇಡಿಕೆಗಳ ಪೂರೈಕೆಗಾಗಿ ಅಖಿಲ ಭಾರತ ಸ್ಟೇಷನ್ ಮಾಸ್ಟರುಗಳ ಸಂಘದ ಸೂಚನೆಯಂತೆ, ಮುಷ್ಕರ ನಡೆಸಲು ನಿರ್ಧರಿಸಿತು. ಅಡ್ವೋಕೇಟ್ ಶ್ರೀ ಆರ್. ರಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳವರು ಆರಂಭೋತ್ಸವವನ್ನು ನೆರವೇರಿಸಿದರು. ಸಂಘದ ಅಧ್ಯಕ್ಷ ಶ್ರೀ ಕೆ. ಎಸ್. ಕೃಷ್ಣರಾಯರು ಸ್ವಾಗತ ಭಾಷಣ ಮಾಡಿದರು.

ಸ್ಟೇಷನ್ ಮಾಸ್ಟರುಗಳ ಸಂಘಕ್ಕೆ ಮನ್ನಣೆ ಕೊಡುವುದು; ಸ್ಟೇಷನ್ ಮಾಸ್ಟರುಗಳಿಗೆ ೨೦೦-೩೦೦ ರೂ; ಅಸಿಸ್ಟೆಂಟ್ ಮಾಸ್ಟರುಗಳಿಗೆ ೧೫೦-೩೩೫ ರೂ. ವೇತನದ ದರ್ಜೆ; ಬಡ್ತಿಗಳು; ಉಚಿತ ವಸತಿ ಸೌಕರ್ಯ; ಮಕ್ಕಳಿಗೆ ವಿದ್ಯಾಭ್ಯಾಸದ ಮುಂತಾದಾವು ಅವರ ಬೇಡಿಕೆಗಳಾಗಿವೆ

ಭಾರತ ಮತ್ತು ಪಾಕಿಸ್ತಾನಗಳಿಗೆ ಕಾಲುವೆ ನೀರಿನ ಮಾತುಕತೆ

ವಿಶ್ವ ಬ್ಯಾಂಕಿನ ಆಶ್ರಯದಲ್ಲಿ ಇದೇ ೨೦ನೇ ತಾರೀಕು ವಾಷಿಂಗ್ಟನ್ನಿನಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಪ್ರತಿನಿಧಿಗಳಿಗೆ ಕಾಲುವೆ ನೀರಿನ ವ್ಯಾಜ್ಯದ ವಿಷಯವಾಗಿ ಮಾತುಕತೆಗಳು ನಡೆಯುವುವೆಂದು ವರದಿಯಾಗಿದೆ

ಕೊಕೊ ಶಿಕ್ಷಣ ಶಿಬಿರದ ಆರಂಭೋತ್ಸವ

ನಗರದ ಹಯಸ್ಕೂಲ್ಸ್ ಸ್ಪೋರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಏರ್ಪಟ್ಟಿರುವ ಕೊಕೊ ಶಿಕ್ಷಣ ಶಿಬಿರದ ಆರಂಭೋತ್ಸವವು ನಾಳೆ ಸಂಜೆ ೪ ಗಂಟೆಗೆ ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಮಹಾರಾಜಾ ಕಾಲೇಜು ಮೈದಾನದಲ್ಲಿ ನೆರವೇರುವುದು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮುಖವೀಣೆ. ೭-೧೫ ಕನ್ನಡ ಗೀತೆಗಳು. ೭-೩೦ಮತ್ತು ೮-೧೫ ಕಡಬ ಲಕ್ಷ್ಮೀಕಾಂತ-ಶಾಸ್ತ್ರ ವಾಚನ. ಮಧ್ಯಾಹ್ನ ೧೨ ಹೆಚ್. ವಿ. ರಾಮರಾವ್ ಪಿಟೀಲು. ೧೨-೩೦ ಮತ್ತು ೧-೫೦ ಅಬ್ದುಲ್ ರಹೀಂ ಸಿತಾರ್. ೧ ರಿಕಾರ್ಡು. ೧-೩೦ ಪಿ. ಗಂ [illegible]ರಾವ್ ಮತ್ತು ಪಾರ್ಟಿ—ಗೀತೆ ೨-೧೫ ಪ್ರೌಢ ಶಾಲೆಗಳಿಗಾಗಿ. ಸಂಜೆ ೬-೧೦ ಜಾನಪದ ಗೀತೆ. ೬-೩೦ ಊರಿನ ಹೆಸರುಗಳು ೮ ಗೀತಾಗುಚ್ಛ-ಕನ್ನಡ ಗೀತೆ. ೮-೧೫ ಗ್ರಾಮ ಗೀತೆ ೯-೧೫ ಬೆಂಗಳೂರು-ಸಾಂಸ್ಕೃತಿಕ ಮತ್ತು ಕೈಗಾರಿಕಾ ಕೇಂದ್ರ : ಇಂಗ್ಲಿಷ್ ಭಾಷಣ ೯-೩೦ ಶಾಸ್ತ್ರೀಯ ಸಂಗೀತ ೧೦-೧೫ ಮಧುರೆ ಮಣಿ ಅಯ್ಯರ್-ಕಚೇರಿ. ೧೦-೩೦ ಹೆಚ್. ವಿ. ರಾಮರಾವ್-ಪಿಟೀಲು.

ಮೈಸೂರಿಗೆ ಕರ್ನಾಟಕ ಎಂಬ ನಾಮಧೇಯ

ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಮುಖ್ಯಮಂತ್ರಿಗಳ ಸೂಚನೆ

ಬೆಂಗಳೂರು ೧೬

ಮೈಸೂರು ಸಂಸ್ಥಾನವನ್ನು ಕರ್ನಾಟಕ ಎಂದು ಕರೆಯುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದೆಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ವಿಧಾನ ಸಭೆ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು. ಕನ್ನಡ ಸಾಹಿತ್ಯ ಸಮ್ಮೇಳನದವರು ಈ ವಿಚಾರವಾಗಿ ಮಾಡಿರುವ ನಿರ್ಣಯವು ಸರ್ಕಾರಕ್ಕೆ ಬಂದಿರುವುದಾಗಿಯೂ, ಕರ್ನಾಟಕ ಎಂದು ಕರೆಯುವ ವಿಷಯವು ಅಷ್ಟು ಸುಲಭವಲ್ಲವೆಂದೂ ಅವರು ಹೇಳಿದರು. ಹೆಸರನ್ನು ಬದಲಾಯಿಸಬೇಕಾದರೆ ಅದಕ್ಕೆ ಸಂಬಂಧಪಟ್ಟ ಶಾಸನವನ್ನು ತಿದ್ದುಪಡಿ ಮಾಡಲು ಪಾರ್ಲಿಮೆಂಟಿನಲ್ಲಿ [illegible] ಆಗಬೇಕೆಂದೂ ಶ್ರೀ ನಿಜಲಿಂಗಪ್ಪನವರು ತಿಳಿಸಿದರು ಹೆಸರಿನ ಬಗ್ಗೆ ಇರುವ ಭಿನ್ನಾಭಿಪ್ರಾಯವೇ ನಿರ್ಧಾರ ಕೈಗೊಳ್ಳಲು ಅಡ್ಡಿಯಾಗಿರುವುದೆಂದೂ ಅವರು ಸೂಚಿಸಿದರು

ಸ್ಕ್ಯಾಗಿನಿ ಬಳಿ ಡಚ್ ವಿಮಾನ ಮುರಿದು ೫೭ ಜನರ ಮರಣ

ಹಚ್ಚರ ನ್ಯಾಗಿನಿ ದ್ವೀಪದ ಬಳಿ ಸಮುದ್ರದಲ್ಲಿ ನೆನ್ನೆ ಹಾಲೆಂಡಿನ ವಿಮಾನವೊಂದು ಮುರಿದು ಬಿದ್ದು ಅದರಲ್ಲಿದ್ದ ೫೭ ಜನರು ಮೃತಪಟ್ಟಿರುವುದಾಗಿ ವರದಿಯಾಗಿದೆ. ಅದರಲ್ಲಿ ಒಟ್ಟು ೪೮ ಮಂದಿ ಪ್ರಯಾಣಿಕರು ಮತ್ತು ಒಂಭತ್ತು ಚಾಲಕರು ಇದ್ದರು. ೧೧ ಮಂದಿ ಪ್ರಯಾಣಿಕರು ಮತ್ತು ಒಬ್ಬ ವಿಮಾನದ ಸೇವಕಿಯೂ ಬದುಕಿದವರು ಅಪಘಾತದ ಕಾರಣ ಗೊತ್ತಾಗಿಲ್ಲ ಆ ಪ್ರದೇಶದಲ್ಲಿ ಶೋಧನಾ ಕಾರ್ಯಕ್ಕೆ ಹೆಚ್ಚು ಅನುಕೂಲವಿಲ್ಲವೆಂದೂ, ಹತ್ತಿರವಿರುವ [illegible] ಎಂಬ ದ್ವೀಪದಲ್ಲಿ ದಟ್ಟವಾಗಿ ಮಳೆಗಾದಗಳು ಬೀಳುತ್ತಿವೆಯೆಂದೂ ಹೇಳಲಾಗಿದೆ

ಅಣು ಶಕ್ತಿಯಿಂದ ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಕರೆ

ಅಣು ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ವಿಚಾರವನ್ನು ಭಾರತದ ಯೋಜನಾ ಮಂಡಲಿಯವರು ಗಮನಿಸಬೇಕೆಂದು ಭಾರತದ ಅಣು ಶಕ್ತಿ ಸಮಿತಿ ಅಧ್ಯಕ್ಷರಾದ ಡಾ॥ ಹೆಚ್ ಜೆ ಭಾಭಾರವರು ತಿಳಿಸಿರುತ್ತಾರೆ ಅವರು ವಿಶ್ವ ಅಣು ಶಕ್ತಿ ಸಮ್ಮೇಳನದಲ್ಲಿ ಭಾಗವಹಿಸಿ ಈಗ ಹಿಂದಿರುಗಿರುತ್ತಾರೆ ಬ್ರಿಟನ್ನು ಅಣು ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಪಡೆಯುತ್ತಿರುವುದೆಂದು ಅವರು ಹೇಳಿರುವರು.

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸ

ಡೆನ್ಮಾರ್ಕಿನ ರಾಜಧಾನಿ ಕೋಪನ್‌ಹೇಗನ್ನಿನ ವಿಶ್ವವಿದ್ಯಾಲಯದ ಡಾ॥ ಎಲಿ ಫಿಷರ್ ಜಾರ್ಗೆನ್‌ಸೆನ್‌ರವರು ಈ ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವಿಶ್ವವಿದ್ಯಾಲಯದ ವಿಶೇಷೋಪನ್ಯಾಸಗಳ ಅಂಗವಾಗಿ "ರೀಸೆಂಟ್ ಮೆಥೆಡ್ಸ್ ಇನ್ ಫೊನಿಟಿಕ್ಸ್" ಎಂಬ ವಿಚಾರವಾಗಿ ಉಪನ್ಯಾಸ ಮಾಡುವರು. ಪ್ರೊಫೆಸರ್ ಟಿ ಎನ್. ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುವರು.

ಅರಬ್-ಇಸ್ರೇಲ್ ವ್ಯಾಜ್ಯದಲ್ಲಿ ಪಾಕ್ ಪ್ರಧಾನಿ ಮಧ್ಯಸ್ಥಿಕೆ ಇಲ್ಲ

ಅರಬ್ ಮತ್ತು ಇಸ್ರೇಲುಗಳ ನಡುವೆ ತಾವು ಮಧ್ಯಸ್ಥಿಕೆ ವಹಿಸುವುದಾಗಿ ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ಮಾಡಿದ ಸೂಚನೆಯನ್ನು ಇಸ್ರೇಲು ತಿರಸ್ಕರಿಸಿ, ನೇರವಾದ ಸಂಧಾನವಾಗಬೇಕೆಂದೂ, ಸುಹ್ರಾವರ್ದಿಯವರು ಮಧ್ಯಸ್ಥಿಕೆ ವಹಿಸಲು ಅರ್ಹರಾಗಿಲ್ಲವೆಂದೂ ಅಭಿಪ್ರಾಯಪಟ್ಟಿದೆ

ಐಶ್ವರ್ಯದ ತೆರಿಗೆಯಲ್ಲಿ ಹೆಚ್ಚಿನ ರಿಯಾಯಿತಿ

ಕೇಂದ್ರ ಹಣಕಾಸಿನ ಮಂತ್ರಿಯವರ ಸೂಚನೆ

ಐಶ್ವರ್ಯದ ತೆರಿಗೆ ಮಸೂದೆಯನ್ನು ಚುನಾಯಿತ ಸಮಿತಿಗೆ ಒಪ್ಪಿಸಬೇಕೆಂದು ಲೋಕ ಸಭೆಯಲ್ಲಿ ನೆನ್ನೆ ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ ಕೃಷ್ಣಮಾಚಾರಿಯವರು ಸೂಚಿಸಿ, ತೆರಿಗೆಯಲ್ಲಿ ಇನ್ನೂ ಹಲವು ರಿಯಾಯಿತಿಗಳನ್ನು ತೋರಲು ಸಲಹೆ ಮಾಡಿದರು ಜಮ ಹಿಂಗಳಿಗೆ ರಿಯಾಯಿತಿಯನ್ನು ತೋರಿಸುವುದಕ್ಕಾಗುವುದಿಲ್ಲವೆಂದೂ, ಅದು ಐಶ್ವರ್ಯಕ್ಕೆ ಸೇರಿರುವುದೆಂದೂ, ಅವು ಹಲವು ಸಂದರ್ಭಗಳಲ್ಲಿ ಲಕ್ಷ ಮತ್ತು ಕೋಟಿಗಟ್ಟಲೆ ರೂ. ಗಳಷ್ಟಾಗುವುವೆಂದೂ ಅವರು ಹೇಳಿದರು.

ಹೊಸ ಕಂಪೆನಿಗಳಿಗೆ ಕೊಟ್ಟಂತೆ ೫ ವರ್ಷ ಕಾಲ ವಿನಾಯಿತಿಯನ್ನು ಹಲವು ವ್ಯಕ್ತಿಗಳಿಗೂ ತೋರಬಹುದೆಂದು ಅವರು ಹೇಳಿದರು. ಭಾರತೀಯರಲ್ಲದವರ ಆಸ್ತಿ ಬಗ್ಗೆ ರಿಯಾಯಿತಿ ತೋರಬಹುದೆಂದೂ ತಿಳಿಸಿದರು ಜಾನುವಾರು ಮುಂತಾದುವುಗಳಿಗೆ ತೆರಿಗೆಯು ಅನ್ವಯಿಸುವುದಿಲ್ಲವೆಂದೂ, ೩೫,೦೦೦ ರೂ ವರೆಗೆ ಆಸ್ತಿಯು ತೆರಿಗೆಯಿಂದ ವಿನಾಯಿತಿ ಹೊಂದಿರುವುದೆಂದೂ ಅವರು ಸೂಚಿಸಿದರು

ಪೋಲೀಸು ಇಲಾಖೆಯಲ್ಲಿ ಜೀವಕಳೆ ತುಂಬಬೇಕು

ವಿಧಾನ ಸಭೆಯಲ್ಲಿ ಸದಸ್ಯರ ಉಗ್ರ ಟೀಕೆ

ಬೆಂಗಳೂರು ೧೬

ವಿಧಾನ ಸಭೆಯಲ್ಲಿ ನೆನ್ನೆ ಸದಸ್ಯರು ಪೋಲೀಸು ಇಲಾಖೆಯ ಆಡಳಿತವನ್ನು ತೀವ್ರವಾಗಿ ಟೀಕಿಸಿ, ಇಲಾಖೆಯನ್ನು ಪುನಃ ಚೇತನಗೊಳಿಸಬೇಕೆಂದು ಸೂಚಿಸಿದರು ವಿದ್ಯಾವಂತ ಯುವಕರನ್ನೇ ಪೋಲೀಸು ಕಾನ್ಸ್ಟೇಬಲ್ಲುಗಳಾಗಿ ತೆಗೆದುಕೊಳ್ಳಬೇಕೆಂದು ಶ್ರೀ ಬಿ ಎಸ್. ಬೋರಣ್ಣಗೌಡರು ಸಲಹೆ ಮಾಡಿದರು. ಪಿ ಎಸ್ ಪಿ. ಪಕ್ಷದ ಶ್ರೀ ಶ್ರೀನಿವಾಸಶೆಟ್ಟರು ಮಾತನಾಡಿ, ಇಲಾಖೆಯಲ್ಲಿ ಲಂಚವನ್ನು ಮಟ್ಟಹಾಕಬೇಕೆಂದು ಒತ್ತಾಯಪಡಿಸಿದರು ಸ್ವತಂತ್ರದಲ್ಲಿ ಬ್ರಿಟಿಷ್ ಮಾದರಿ ಪೋಲೀಸು ಆಡಳಿತ ಬರಬೇಕೆಂದು ಅವರು ಸೂಚಿಸಿದರು ಇಲಾಖೆಯಲ್ಲಿ ಲಂಚವು 'ರಾಷ್ಟ್ರೀಕರಣ' ವಾಗಿರುವುದೆಂದು ಅವರು ಅಭಿಪ್ರಾಯಪಟ್ಟರು.

ಮಂಗಳೂರು-ಬೈಂದೂರು ರಸ್ತೆಗೆ ಕೇಂದ್ರದಿಂದ ೨ ಕೋಟಿ ರೂ.

ಬೊಂಬಾಯಿ-ಮಂಗಳೂರು ತೀರ ರಸ್ತೆ ವಿಸ್ತರಣೆಗಾಗಿ ಹಣ

ಸ್ವಂ. ಸು. ಸಂ.] ಬೆಂಗಳೂರು ೧೬

ಮಂಗಳೂರಿನಿಂದ ಬೈಂದೂರಿಗೆ ಪಶ್ಚಿಮ ಕರಾವಳಿ ರಸ್ತೆಯ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದವರು ಸಂಸ್ಥಾನಕ್ಕೆ ೨ ಕೋಟಿ ರೂ. ಗಳನ್ನು ಮಂಜೂರು ಮಾಡಿರುತ್ತಾರೆ. ಈ ರಸ್ತೆಯು ಬೊಂಬಾಯಿಯಿಂದ ಬೈಂದೂರಿಗೆ ಇರುವ ರಸ್ತೆಗೆ ಸೇರುವುದು.

ಕಲ್ಕತ್ತಾ ಸ್ವಾತಂತ್ರ್ಯ ಶತಮಾನೋತ್ಸವಕ್ಕೆ ನಿಜಲಿಂಗಪ್ಪನವರು

ಕಲ್ಕತ್ತದಲ್ಲಿ ನಡೆಯುವ, ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವದಲ್ಲಿ ಭಾಗವಹಿಸಲು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರನ್ನು ಬಂಗಾಳ ಸರ್ಕಾರದವರು ಆಹ್ವಾನಿಸಿರುವರು. ಬರುವ ತಿಂಗಳು ಆರಂಭದಲ್ಲಿ ಅವರು ಅಲ್ಲಿಗೆ ತೆರಳುವರು

ವಿಧಾನ ಸಭೆಯ ಉಪಾಧ್ಯಕ್ಷತೆ

ವಿಧಾನ ಸಭೆಯ ಉಪಾಧ್ಯಕ್ಷತೆ ವಿಷಯವನ್ನು ಕಾಂಗ್ರೆಸ್ ಪಕ್ಷವು ಈ ದಿನ ಪರಿಶೀಲಿಸಿ, ಈ ವಿಚಾರವನ್ನು ಪಕ್ಷದ ಕಾರ್ಯಕಾರಿ ಸಮಿತಿಯು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೊಡನೆ ಕಲೆತು ಚರ್ಚಿಸಬೇಕೆಂದು ನಿರ್ಧರಿಸಿತು. ಈ ಸಂಜೆ ಅವರುಗಳು ಚರ್ಚಿಸುವರು

ಸ್ಪೇನಿನಲ್ಲಿ ಪುನಃ ರಾಜತ್ವ

ಸ್ಪೇನಿನ ಮುಖ್ಯಾಧಿಕಾರಿ ಜನರಲ್ ಫ್ರಾಂಕೋರವರ ಮರಣ ಅಥವಾ ಅಧಿಕಾರ ತ್ಯಾಗದ ನಂತರ ಅಲ್ಲಿ ಪುನಃ ರಾಜತ್ವವನ್ನು ಸ್ಥಾಪಿಸಲಾಗುವುದೆಂದು ಅಲ್ಲಿನ ಪಾರ್ಲಿಮೆಂಟಿನ ಮುಂದೆ ಅಧಿಕೃತವಾಗಿ ನೆನ್ನೆ ತಿಳಿಸಲಾಯಿತು ಅಲ್ಲಿ ಪರಂಪರಾನುಗತವಾದ ಮತ್ತು ಕ್ಯಾಥೊಲಿಕ್ ಕ್ರಿಸ್ತ ರಾಜರ ಆಳ್ವಿಕೆಯು ಪುನಃ ಬರುವುದೆಂದು ಒಳಾಡಳಿತ ಮಂತ್ರಿ ಸೀನಾರ್ ಓಯಿ ಬ್ಲಾಂಕೊರವರು ತಿಳಿಸಿದರು ಅಲ್ಫನ್ಸೊ ದೊರೆಯ ಮೊಮ್ಮಗ ರಾಜಕುಮಾರ ಜುವಾನ್ ಕಾರ್ಲೋಸ್‌ರವರು ರಾಜರಾಗುವರು. ಅವರ ಮನೆತನದವರು ಪೋರ್ಚುಗಲ್ಲಿನಲ್ಲಿ ದೇಶಭ್ರಷ್ಟರಂತೆ ವಾಸಿಸುತ್ತಿರುವರು ಫ್ರಾಂಕೊರವರು ೨೦ ವರ್ಷಗಳಿಂದಲೂ ಆಡಳಿತ ನಡೆಸುತ್ತಿರುವರು

ಭಾವಿಯಲ್ಲಿ ವಿಷ ವಾಯುವಿಗೆ ತುತ್ತಾಗಿ ಮೂವರ ಮರಣ

ಕಲ್ಕತ್ತದಲ್ಲಿ ನಾರಿಕೇಳಡಂಗ ಬಸ್ತಿಯಲ್ಲಿರುವ ಒಂದು ಭಾವಿಯಲ್ಲಿ ವಿಷ ವಾಯುವಿನ ಪರಿಣಾಮವಾಗಿ ಮೂವರು ಕೆಲಸಗಾರರು ಮೃತಪಟ್ಟಿರುತ್ತಾರೆ ಭಾವಿಯನ್ನು ಶುದ್ಧಿ ಮಾಡಲು ಒಬ್ಬನನ್ನು ನಿಯೋಜಿಸಲಾಗಿ ಅವನು ಒಳಗೆ ಇಳಿದು ಹೊರಗೆ ಬರಲಿಲ್ಲವೆಂದೂ, ಅವನ ಪತ್ತೆಗಾಗಿ ಇನ್ನೊಬ್ಬನೂ, ಅನಂತರ ಮತ್ತೊಬ್ಬನೂ ಇಳಿದರೆಂದೂ, ಮೂವರೂ ಮೃತಪಟ್ಟಿರುವ ವಿಷಯ ಗೊತ್ತಾಯಿತೆಂದೂ ಹೇಳಲಾಗಿದೆ.

ರಾಷ್ಟ್ರಕ್ಕೆಲ್ಲಾ ಒಂದೇ ಸಮಾಜವಾದಿ ಪಕ್ಷ

ಲೋಹಿಯಾರವರೊಡನೆ ಜಯ ಪ್ರಕಾಶರ ಸಮಾಲೋಚನೆ

ಜಯಪ್ರಕಾಶ ನಾರಾಯಣರವರು ಮೊನ್ನೆ ಸಮಾಜವಾದಿಗಳ ನಾಯಕ ಡಾ॥ ರಾಮ ಮನೋಹರ ಲೋಹಿಯಾರವರೊಡನೆ ೩ ಗಂಟೆ ಕಾಲ, ಸಮಾಜವಾದವನ್ನು ಎತ್ತಿ ಹಿಡಿಯುವ ಒಂದೇ ಪಕ್ಷದ ವಿಚಾರವಾಗಿ ಮಾತುಕತೆ ನಡೆಸಿದರೆಂದು ವರದಿಯಾಗಿದೆ. ಇದರಿಂದ ಪಕ್ಷಗಳ ಐಕ್ಯ ಮುಂತಾದ ಬಗ್ಗೆ ಮಾತುಕತೆಗಳಾದುವೆಂದು ಜಯಪ್ರಕಾಶರು ತಿಳಿಸಿರುತ್ತಾರೆ. ಉಭಯರೂ ಮತ್ತೊಮ್ಮೆ ಸಂಧಿಸುವರು

ಕಾಶ್ಮೀರದಲ್ಲಿ ಭಾರತದ ಸೈನ್ಯ ಗೊತ್ತಾದ ಸಂಖ್ಯೆಗೂ ಕಡಿಮೆ

ಸೀಸ್‌ಫೈರ್ ಒಪ್ಪಂದದಲ್ಲಿ ಗೊತ್ತುಪಡಿಸಲ್ಪಟ್ಟಿರುವ ಸಂಖ್ಯೆಗಿಂತಲೂ ಕಾಶ್ಮೀರದಲ್ಲಿ ಭಾರತದ ಸೈನ್ಯವು ಕಡಿಮೆ ಪ್ರಮಾಣದಲ್ಲಿರುವುದಾಗಿ ಮೊನ್ನೆ ರಕ್ಷಣಾ ಮಂತ್ರಿ ವಿ ಕೆ ಕೃಷ್ಣಮೆನನ್ನರು ತಿಳಿಸಿದರು. ಅಲ್ಲಿಗೆ ಒಪ್ಪಸೈನಿಕರನ್ನು ಹೆಚ್ಚಾಗಿ ಕಳುಹಿಸಿಲ್ಲವೆಂದೂ ಅವರು ಹೇಳುತ್ತಾ, ಪಾಕಿಸ್ತಾನವು ಅಲ್ಲಿ ತನ್ನ ಸೈನ್ಯಗಳನ್ನು ಬಲಗೊಳಿಸುತ್ತಿರುವುದಾಗಿ ತಿಳಿಸಿದರು. ಕಾಶ್ಮೀರವು ಭಾರತದ ಪ್ರದೇಶವೆಂದೂ ಅದರ ಮೇಲೆ ಧಾಳಿಯಾದರೆ ಭಾರತವು ಅದರ ರಕ್ಷಣೆ ಮಾಡುತ್ತದೆಂದೂ ಅವರು ಸೂಚಿಸಿದರು. ಕಾಶ್ಮೀರದಲ್ಲಿ ಪಾಕಿಸ್ತಾನವು ಆಕ್ರಮಣ ನಡೆಸಿರುವುದೆಂದೂ ಅವರು ಹೇಳಿದರು

ಗಿರಿಜಾ ಕಲ್ಯಾಣೋತ್ಸವ

ಅರಕೆರೆ ರಸ್ತೆಯಲ್ಲಿರುವ ಶ್ರೀಮತ್ಪನ್ನಗ ಪರಮೇಶ್ವರ ಅಮ್ಮನವರ ದೇವಸ್ಥಾನದಲ್ಲಿರುವ ಶ್ರೀ ಚಂದ್ರಶೇಖರಸ್ವಾಮಿಯವರಿಗೆ ಗಿರಿಜಾ ಕಲ್ಯಾಣ ಮಹೋತ್ಸವವು ನಾಳೆ ರಾತ್ರಿ ೧೧ ಗಂಟೆಗೆ ನಡೆಯುವುದು. ಆದರ ಅ ಅಂಗವಾಗಿ ವಿವಿಧ ಉತ್ಸವಗಳು ಅನೇಕ ತಾರೀಖಿನವರೆಗೂ ನಡೆಯುವುವು ಹರಿಕಥೆಗಳನ್ನೂ ಏರ್ಪಡಿಸಲಾಗಿದೆ

ಮೈಸೂರು ಪೇಟೆ ಧಾರಣೆ

ಬಂಗಾರ ಮತ್ತು		
ಜೋಯಮುತ್ತೂರು ಸಣ್ಣ	೩೦ ೩೫	೩೫ ೫೦
ರತ್ನಚೂಡಿ	೨೮ ೦೦	೩೩ ೦೦
ಬಂಗಾರತಿ	೨೮ ೮೭	೩೬ ೫೦
ಕಾಂಟಿನೆಂಟಲ್	೨೫ ೭೫	
ಸಿಟಿಲ್ ಸಣ್ಣ	೨೮ ೫೦	
ರಾಗಿ	೨೦ ೫೦	೨೫ ೬೨
ಕಡಲೆಕಾಯಿ	೧೨ ೦೦	೨೦ ೫೦
ಎಳ್ಳು	೬೦ ೦೦	೬೨ ೨೫
ಹಿಪ್ಪೆಬೀಜ	೨೦ ೦೦	
ಹುರುಳಿ	೩೬ ೭೫	೪೦ ೬೨
ಬೆಲ್ಲ	೫೨ ೮೭	೫೬ ೦೦
ಹಲಸಂದೆ	೩೮ ೦೦	೫೨ ೦೦
ಅವರೆ	೪೫ ೬೨	
ಉದ್ದು	೬೫ ೮೭	
ಧನಿಯ	೫೦ ೮೭	೨೦ ೦೦
ಹುಣಸೇಬೀಜ	೫ ೭೫	
ಹುಣಸೇಹಣ್ಣು	೩ ೭೫	೪ ೬
ಮೆಣಸಿನಕಾಯಿ	೧೮ ೦೩	೧೮ ೩೭
ತೆಂಗಿನಕಾಯಿ	೧೭೪ ೦೦	೨೭೦ ೫೦

CITY TUTORIAL COLLEGE

The long awaited chance to appear by Private Study for

AJMER INTERMEDIATE

Classes Commenced

MADRAS MATRICULATION

Classes in full swing

Join before 20 7.57

C T C , Old Agrahar, Mysore

ಲೋಕ ಸಭೆಯಲ್ಲಿ ಅಸ್ಸಾಮಿನ ಇಬ್ಬರು ಸದಸ್ಯರ ಸಭಾತ್ಯಾಗ

ಅಸ್ಸಾಮಿನ ಎಣ್ಣೆ ಕಂಪೆನಿಯನ್ನು ಬಿಹಾರದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರದವರು ನಿರ್ಧರಿಸಿರುವುದನ್ನು ಕುರಿತು ಚರ್ಚೆ ನಡೆಸಲು ಲೋಕಸಭೆಯಲ್ಲಿ ಮೊನ್ನೆ ತರಲಾದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಲಾಗಿ, ಅಸ್ಸಾಮಿನ ಪ್ರಜಾ ಸಮಾಜವಾದಿ ಸದಸ್ಯರಿಂದ ಹೇಮ ಬರುವಾ ಮತ್ತು ಅಮ್ಜಾದ್ ಅಲಿಯವರು ಸಭಾತ್ಯಾಗ ಮಾಡಿದರು

ದುರ್ವ್ಯಾಪಾರಕ್ಕೆ ಕರೆದವನಿಗೆ ೧೦೦ ರೂ ಜುಲ್ಮಾನೆ

ಚಿಕ್ಕಮಗಳೂರಿನ ನಾಗರತ್ನ ಎಂಬ ಯುವತಿಯೂ, ವಿಂಜಪೇಟೆಯ ಸಂಜೀವರಾವ್ ಎಂಬಾತನೂ ಮಂಡಿ ಮೊಹಲ್ಲೆಯಲ್ಲಿ ಅನೀತಿ ವ್ಯಾಪಾರಕ್ಕಾಗಿ ಪರಸ್ಪರ ಕರೆದರೆಂಬ ಆಪಾದನೆ ಮೇಲೆ ನಗರದ ಪ್ರಥಮ ನ್ಯಾಯಾಧೀಶರು ಸಂಜೀವರಾಯನಿಗೆ ೧೦೦ ರೂ ಮತ್ತು ನಾಗರತ್ನಗೆ ೫೦ ರೂ ಜುಲ್ಮಾನೆಯನ್ನು ವಿಧಿಸಿ ಆಪಾದಿತಳು ಚಿಕ್ಕ ವಯಸ್ಸಿನವಳಾದ ಕಾರಣ ಅವಳನ್ನು ಬೆಂಗಳೂರಿನ ಅಬಲಾಶ್ರಮಕ್ಕೆ ಸೇರಿಸಬೇಕೆಂದ ನೆನ್ನೆ ಆಜ್ಞೆ ಮಾಡಿದರು

ಕಳ್ಳಭಟ್ಟಿ ಮದ್ಯದ ತಯಾರಿಕೆಗಾಗಿ ಶಿಕ್ಷೆ

ಎರಡು ಸಣ್ಣ ಕಳ್ಳಭಟ್ಟಿ ಮದ್ಯವನ್ನು ತಯಾರಿಸುತ್ತಿದ್ದರೆಂಬ ಆಪಾದನೆಗಾಗಿ ಮಂಜುಳ ಎಂಬಾಕೆಗೆ ೧೦೦ರೂ ಜುಲ್ಮಾನೆ ತಪ್ಪಿದರೆ ೬ ದಿನಗಳ ಸಜ ಮತ್ತು ಭೋಗಯ್ಯ ಎಂಬಾತನಿಗೆ ೩೦ ರೂ ಜುಲ್ಮಾನೆ, ತಪ್ಪಿದರೆ ೧೦ ದಿನಗಳ ಸಜವನ್ನೂ ನೆನ್ನೆ ನಗರದ ಎರಡನೇ ಮುನ್ಸಿಫ್ ಮ್ಯಾಜಿಸ್ಟ್ರೇಟರು ವಿಧಿಸಿದರು

ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಂಶೋಧನಾ ಸಭೆ

ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಬೋರ್ಡಿನ ೨೬ನೇ ವಾರ್ಷಿಕ ಸಂಶೋಧನಾ ಅಧಿವೇಶನವು ನಾಳಿದ್ದು ಸಂಜೆ ೪॥ ಗಂಟೆಗೆ ಕ್ರಾಫರ್ಡ್ ಭವನದಲ್ಲಿ ಸೇರುವುದು. ರಾಜ್ಯಪಾಲರು ಶ್ರೀ ಜಯಚಾಮರಾಜ ಒಡೆಯರವರು ಅದರ ಉದ್ಘಾಟನೆಯನ್ನು ನೆರವೇರಿಸುವರು

NALINS

Furniture on hire

Enquire – 603 College Road MYSORE

Concession to students

C T C , Old Agrahar, Mysore

The Old s & the Best

AJMER INTER &

MADRAS MATRIC

Classes in full swing

Ladies also admitted

ಮಹಿಳಾ ಸಮಾಜ,

ಸೈಸರಾಯ್ ರಸ್ತೆ, ಮೈಸೂರು

ಮೊಲ್ಲಂತ ಸಮಾಜದಲ್ಲಿ ಶಿಲಾವಿಚಾರಕ್ಕೆ ಒಂದು ತಿಂಗಳಿಗೆ ಮಾಪಿಯೂ ಶುಲ್ಕ 1 ರೂ ಮಾತ್ರ ಸೇರಿಕೆಗಾಗಿ 0 8 0, ಉಂಡಾ 1-8-0. ಹೆಚ್ಚಿನ ವಿವರಗಳನ್ನು ಸಮಾಜದ ಕಾರ್ಯದರ್ಶಿಗಳಿಂದ ತಿಳಿಯಬಹುದು

Edited, Printed and Published by A R Nagarajan at Sadhvi Press, D Subbiah Road Mysore

ವಾಟ್ಸ್ನಾದಲ್ಲಿ ಮತ್ತೊಮ್ಮೆ ಇನ್ಫ್ಲುಯೆಂಜಾ ವ್ಯಾಧಿ

ವಾಟ್ಸ್ನಾ ನಗರದಲ್ಲಿ ಎರಡನೇ ಆವರ್ತಿಯ ಇನ್ಫ್ಲುಯೆಂಜಾವು ವ್ಯಾಪಿಸಿರುವುದಾಗಿ ವರದಿಯಾಗಿದೆ ಅಲ್ಲಿ ಆರೋಗ್ಯ ಪರಿಸ್ಥಿತಿಯು ಕೆಡುತ್ತಿರುವುದು ಇನ್ಫ್ಲುಯೆಂಜಾವನ್ನು ತಡೆಗಟ್ಟಲು ಆರೋಗ್ಯ ದಳಗಳು ಕೆಲಸ ಮಾಡುತ್ತಿರುವುವೆಂದು ಗೊತ್ತಾಗಿದೆ. ಅಲ್ಲಿ ಆಮಶಂಕೆ, ಕಾಲರಾ ಮುಂತಾದ ವ್ಯಾಧಿಗಳೂ ಹರಡಿವೆ ನೊಣಗಳ ಕಾಟವು ವಿಪರೀತವಾಗಿ, ಅದರಿಂದಲೇ ಉಪದ್ರವವು ಹರಡಲು ಬಹು ಮಟ್ಟಿಗೆ ಸಹಕಾರಿಯಾಗಿರುವುದೆಂದು ಹೇಳಲಾಗಿದೆ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಶ್ರೇಷ್ಠತರವಾದ ಅಗರಬತ್ತಿ, ಗಂಧದ ಬಿಲ್ಲೆ, ಕಾಶ್ಮೀರದ ಕೇಸರಿ ಮತ್ತು ಇತರೆ ಸುಗಂಧ ದ್ರವ್ಯಗಳಿಗೆ ಇಂದೇ ಭೇಟಿ ಕೊಡಿ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್,

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 1911)

ರಾಜಕೋಟೆ ಬಳಿ ಪ್ರವಾಹದಲ್ಲಿ ೬ ಜನರ ಮರಣ

ಸೌರಾಷ್ಟ್ರದ ಪಶ್ಚಿಮ ಮತ್ತು ರಾಜಕೋಟ್ ಪ್ರದೇಶಗಳಲ್ಲಿ ಪ್ರವಾಹದ ಕಾರಣ ೬ ಜನರು ಮೃತಪಟ್ಟಿರುತ್ತಾರೆ ೧೦ ಲಕ್ಷ ರೂ ನಷ್ಟವು ಸಂಭವಿಸಿರುವುದಾಗಿ ಹೇಳಲಾಗಿದೆ.

CENTRAL INSTITUTE OF COMMERCE

Vanivilas Market Mysore

Efficient coaching for D. Com., Dip-in sten , Typewriting a n d Shorthand Fully equipped with best typewriters Classes in COST ACCOUNTS Commence on 25-7 57 Rush in at once.

ವ್ಯೆ ಸೂ ರಿ ನ ಕ ರೆ

ಹೃದಯ ವ್ಯಾಧಿ ನರಗಳ ದೌರ್ಬಲ್ಯ, ಅಜೀರ್ಣ ರೋಗಗಳು, ರಕ್ತದೋಷ ಬುದ್ಧಿ ಭ್ರಮಣೆ, ಸಿಹಿ ಮೂತ್ರ, ಹಿಸ್ಟೀರಿಯಾ, ಮೂಲವ್ಯಾಧಿ ಮುಂತಾದ ಆಸ್ಥಮಾಗಳಿಗೆ

ವೈದ್ಯ ವಾಚಸ್ಪತಿ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ

ರವರ ಸಲಹೆ ಪಡೆಯಿರಿ

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರಭವನದಲ್ಲಿ

ಪ್ರತಿ ತಿಂಗಳು 17 ನೇ ತಾರೀಖು

(ಬೆಳಿಗ್ಗೆ 7 30 ರಿಂದ ಸಂಜೆ 5ರ ವರೆಗೆ ಭೇಟಿ ಮಾಡಬಹುದು)

ಫೋನ್ ನಂ 590

ಪ್ರವಾಸ ಸ್ಥಳಗಳ ವಿಳಾಸ ಮತ್ತು ಇತರ ವಿಚಾರಗಳಿಗೆ ಬರೆಯಿರಿ –

NAVRATNA KALPA PHARMACY,

JULLUNDUR CITY (India)

ನ್ಯೂ ಅಪೇರಾ ಟಾಕೀಸ್, ಮೈಸೂರು

19 7 57ನೇ : ಶುಕ್ರವಾರದಿಂದ : ಅಮೋಘ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

ಸಿಟಿ ಫಿಲ್‌ರವರ ಅಮೋಘ ಸಂಗೀತಮಯ ಸಾಮಾಜಿಕ ತಮಿಳು ಚಿತ್ರ ★ **ಮ ಲ್ಲಿ ಕಾ**

ಭೂಮಿಕೆ — ಪದ್ಮಿನಿ ಆರ್ ಗಣೇಶನ್, ಎಂ ಎನ್ ರಾಜಂ, ತಂಗವೇಲು, ಮತ್ತು ಟಿ ಎಸ್ ಬಾಲಯ್ಯ ಮುಂತಾದವರು

ದಿಗ್ದರ್ಶನ ಜೋಸೆಫ್ ತಲ್ಯಾತ್ (ಜೂನಿಯರ್) – [FAIR FILMS RELEASE

★

★

ಪ್ರಭು ದೇ ವಾ ಥಿ ಯೇ ಟ ರ್

(ಪದ್ಮಾ ಟಾಕೀಸ್)

19—7—57ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ

ನವಯುಗ ಪಿಕ್ಚರ್ಸ್‌ರವರ ತೆಲುಗು ಚಿತ್ರ ★ **ಜ್ಯೋ ತಿ** ★

ಪಾತ್ರ.— ಜಿ ವರಲಕ್ಷ್ಮಿ, ಸಾವಿತ್ರಿ, ಶಿವರಾವ್, ಕಸ್ತೂರಿ, ನಾಗಭೂಷಣಂ ಮುಂತಾದವರು

ಚಾಮುಂಡೇಶ್ವರಿ ಟಾಕೀಸ್ ★

19—7—57ರಿಂದ : ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಜಗನ್ನಾಥ ಪಿಕ್ಚರ್ಸ್‌ರವರ ಅಮೋಘ ಕನ್ನಡ ಕಲಾಕೃತಿ ★ **ಶು ಕ್ರ ದೆ ಶೆ** ★

ನಟವರ್ಗ — ಟಿ ಕೆ. ಬಾಲಚಂದರ್, ಸೂರ್ಯಕಲಾ, ಬಾಲಕೃಷ್ಣ, ಆದವಾನಿ ಲಕ್ಷ್ಮೀದೇವಿ, ರಮಾಬಾಯಿ, ಗಣಪತಿ ಭಟ್ಟ, ರಾಮಚಂದ್ರಶಾಸ್ತ್ರಿ ಮುಂತಾದವರು

[ವಿಜಯಾ ಟಾಕೀ ಡಿಸ್ಟ್ರಿಬ್ಯೂಟರ್ಸ್ ರಿಲೀಸ್

† ವಾರಕ್ಕೊಂದು ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಫ್ರೀ ಪಾಸು ಮೊದಲಾದ ರಿಯಾಯತಿಗಳನ್ನು ಮುಕ್ತಾಯ ಮಾಡಲಾಗಿದೆ

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ

ಸಾಧ್ವಿ

ಬಿಡಿಯ ಪತ್ರಿಕೆ 2 ನಯೆ ಪೈಸೆ

OWN YOUR AUTO!
(50 monthly Instalments)
Apply for prospectus etc
with Re 1 stamps
AUTOMOBILE ASSOCIATION
OF INDIA
New Statue Circle,
MYSORE

ಸಂಪುಟ : ೧೫] SADHVI : THURSDAY 18—7—1957 ಮೈಸೂರು : ಗುರುವಾರ ೧೮—೭—೧೯೫೭ : [ಸಂಚಿಕೆ : ೩೯೦

ಮೈಸೂರು ರಾಜ್ಯಪಾಲರಿಂದ ಪೂರ್ಣ ವೇತನದ ತ್ಯಾಗ

ರಾಜ್ಯಪಾಲರಿಂದ ಪೂರ್ಣ ವೇತನದ ತ್ಯಾಗ

ಇದೀ ರಾಷ್ಟ್ರದಲ್ಲೇ ಮಿತವ್ಯಯಕ್ಕಾಗಿ ಅಪೂರ್ವ ಆದರ್ಶ

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ತಮಗೆ ಶಾಸನಬದ್ಧವಾಗಿ ಬರುವ ಗವರ್ನರರ ಪೂರ್ಣ ವೇತನವನ್ನು ತೆಗೆದುಕೊಳ್ಳದೆ ಬಿಟ್ಟುಕೊಡುವುದಾಗಿ ನಿರ್ಧರಿಸಿರುತ್ತಾರೆ ದೆಹಲಿ ರಾಷ್ಟ್ರಪತಿ ಭವನದಿಂದ ಈ ಬಗ್ಗೆ ಹೊರಟ ಪತ್ರಿಕಾ ಪ್ರಕಟಣೆ ಪ್ರಕಾರ ಅವರು ಕಳೆದ ನವೆಂಬರ್ ತಿಂಗಳು ರಾಜ್ಯಪಾಲರಾಗಿ ಅಧಿಕಾರ ವಹಿಸಿದಂದಿನಿಂದ ವೇತನವನ್ನು ಬಿಟ್ಟುಕೊಟ್ಟಿರುವರು

ಇತರ ಪ್ರಾಂತಗಳ ಗವರ್ನರರುಗಳು ತಮ್ಮ ವೇತನದಲ್ಲಿ ಶೇಕಡ ೧೦ ರಷ್ಟನ್ನು ಖೋತಾ ಮಾಡಿಕೊಂಡಿರುವರು ಮೈಸೂರಿನ ರಾಜ್ಯಪಾಲರೊಬ್ಬರೇ ಪೂರ್ಣ ಸಂಬಳದ ತ್ಯಾಗ ಮಾಡುವ ಅಸದೃಶ ಕ್ರಮವನ್ನು ಕೈಗೊಂಡಿರುವರು ಅಧಿಕ ವೆಚ್ಚದ ಮಿತವ್ಯಯದ ಸಂಬಂಧವಾಗಿ ಈ ನಿರ್ಧಾರವನ್ನು ರಾಜ್ಯಪಾಲರು ತೆಗೆದುಕೊಂಡಿರುತ್ತಾರೆ

ಬಲ್ಗೇರಿಯಾ ಕಮ್ಯೂನಿಸ್ಟ್ ಪಕ್ಷದಿಂದ ಮೂವರ ಉಚ್ಚಾಟನೆ

ಬಲ್ಗೇರಿಯದ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯಿಂದ ಜಾರ್ಜ್ ಚಂಕಾಫ್, ಡೊಬ್ರಿ ಟರ್ಪಿಶೇವ್ ಮತ್ತು ಜಂಕೊ ಪಾನಾಫ್‌ರವರುಗಳನ್ನು ಪಕ್ಷದ ವಿರುದ್ಧದ ಚಟುವಟಿಕೆಗಳಿಗಾಗಿ ಉಚ್ಚಾಟನೆ ಮಾಡಲಾಗಿದೆ. ಚಂಕಾಫ್‌ರವರು ಅಲ್ಲಿನ ಉಪ ಪ್ರಧಾನಿಯಾಗಿಯೂ, ಟರ್ಪಿಶೇಫ್‌ರವರು ಕಾರ್ಮಿಕ ಸಚಿವರಾಗಿಯೂ ಮತ್ತು ಪಾನಾಫ್‌ರವರು ಹಿಂದೆ ಸೈನ್ಯಾಧಿಕಾರಿಯಾಗಿಯೂ ಇದ್ದರು

ದುರ್ವ್ಯವಹಾರಕ್ಕಾಗಿ ೧ ತಿಂಗಳ ಕಠಿಣ ಸಜಾ

ಸಾಬು ಉರುಫ್ ಶೇಕ್ ಅಬ್ದುಲ್ ರಹಮಾನ್ ಎಂಬುವನು ಮೊನ್ನೆ ಬೆಂಗಳೂರಿನ ರಾಧಮ್ಮ ಎಂಬ ಯುವತಿಯನ್ನು ಅನೀತಿ ವ್ಯಾಪಾರಕ್ಕಾಗಿ ಕರೆದುಕೊಂಡುಹೋದನೆಂಬ ಆಪಾದನೆ ಮೇಲೆ ನಗರದ ಪ್ರಥಮ ನ್ಯಾಯಾಧೀಶರು ಆತನಿಗೆ ೧ ತಿಂಗಳ ಕಠಿಣ ಸಜಾ ಮತ್ತು ೧೦೦ ರೂ ಜುಲ್ಮಾನೆಯನ್ನೂ, ತಪ್ಪಿದರೆ ಇನ್ನೂ ೧ ತಿಂಗಳ ಕಠಿಣ ಸಜೆಯನ್ನೂ ನೆನ್ನೆ ವಿಧಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ದೇವರನಾಮ ೭.೧೫ ಗಾಂಧಿವಾಣಿ ೭-೩೦ ರೆಕಾರ್ಡ್ ೮-೧೫ ಹಿಂದಿ ಶಿಕ್ಷಣ ಮಧ್ಯಾಹ್ನ ೧.೨ ಟಿ ಗುರುರಾಜಪ್ಪ ಪಿಟೀಲು. ೩೦ ರೆಕಾರ್ಡ್ ಸಂಗೀತ ೧-೩೦ ಸಂಗೀತ ೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬.೧೦ ಸ್ವರ ಗೀತೆ ೬.೩೦ ಕನ್ನಡ ಭಾಷಣ. ೮ ಮದ್ರಾಸ್ ಸಂಜೆ-ಎಂ. ಬಾಲಮುರಳಿ-ಸಂಗೀತ ೯-೧೫ ನಾಚಾರ ದರ್ಶನ ೯.೩೦ ವೃಂದ ಗಾನ ೯.೫೦ ಹೊಸ ಕನ್ನಡ ಪಿಠಾಪುರದು ೧೦ ಉ ಗೀತೆ ೧೦.೧೫ ಟಿ ಗುರುರಾಜಪ್ಪ-ಪಿಟೀ

ಶ್ರೀ ಮನ್ಮಹಾರಾಜರ ೩೯ನೇ ವರ್ಷ ವರ್ಧಂತಿ

ಮೈಸೂರು ೧೮

ಶ್ರೀಮನ್ಮಹಾರಾಜರ ೩೯ನೇ ವರ್ಧಂತ್ಯುತ್ಸವವು ಇಂದು ಬಹಳ ಸರಳವಾಗಿ ಜರುಗಿತು ಬೆಳಗ್ಗೆ ಅರಮನೆ ಬತ್ತೇರಿಯಿಂದ ೩೯ ಕುಶಾಲತೋಪುಗಳನ್ನು ಹಾರಿಸಲಾಯಿತು ಕೋಟೆ ಮತ್ತು ಚಾಮುಂಡಿ ಬೆಟ್ಟದ ದೇವಸ್ಥಾನಗಳಲ್ಲಿ ನಾನಾ ಪೂಜಾದಿ ಸೇವೆಗಳು ನಡೆದುವು

ಶ್ರೀಮನ್ಮಹಾರಾಜರು ಬೆಳಗ್ಗೆ ಕುಲಗುರುಗಳಾದ ಶ್ರೀ ಪರಕಾಲ ಸ್ವಾಮಿಗಳ ಪಾದಪೂಜೆಯನ್ನು ನೆರವೇರಿಸಿ ಅನಂತರ ಚಾಮುಂಡಿ ಬೆಟ್ಟಕ್ಕೆ ತೆರಳಿ ದೇವರ ದರ್ಶನವನ್ನು ಪಡೆದರು ಸಂಜೆ ಅರಮನೆ ಕೋಟೆ ಮತ್ತು ಚಾಮುಂಡಿ ಬೆಟ್ಟದಲ್ಲಿ ದೇವರ ಉತ್ಸವಗಳು ಜರುಗುವುವು ಇಂದು ಶಾಲೆಗಳಿಗೂ, ಅರಮನೆ ಕಛೇರಿಗೂ ರಜಾ ಕೊಡಲಾಗಿತ್ತು.

ಗುಮಾಸ್ತರಿಗೆ ಶಿಕ್ಷಣ

ಗುಮಾಸ್ತರುಗಳಿಗೆ ಶಿಕ್ಷಣವೀಯುವ ಬಗ್ಗೆ ಸರ್ಕಾರದವರು ಹಲವು ಕಡೆಗಳಲ್ಲಿ ಒಂದು ವರ್ಷ ಅವಧಿಯ ತರಪೇತು ಕೇಂದ್ರಗಳನ್ನು ತೆರೆಯಲು ನಿರ್ಧರಿಸಿರುತ್ತಾರೆ

ಹೊಸ ಅಕ್ಕಿ ಗಿರಣಿಗಳಿಗೆ ರಹದಾರಿ ಇಲ್ಲ

ಈಗಿರುವ ಗಿರಣಿಗಳನ್ನು ರದ್ದು ಮಾಡುವುದಿಲ್ಲ

ಈಗ ದೇಶದಲ್ಲಿರುವ ಅಕ್ಕಿ ಗಿರಣಿಗಳನ್ನು ೫ ವರ್ಷಗಳೊಳಗೆ ವಜಾ ಮಾಡಬೇಕೆಂದು ಅಕ್ಕಿ ಗಿರಣಿ ಸಮಿತಿಯು ಮಾಡಿರುವ ಶಿಫಾರಸನ್ನು ಭಾರತ ಸರ್ಕಾರದವರು ತಿರಸ್ಕರಿಸಿರುತ್ತಾರೆ ಪ್ರತಿ ಸಂಸ್ಥಾನದಲ್ಲೂ ಕೊಟ್ಟದ ಅಕ್ಕಿಯ ತಯಾರಿಕೆಗೆ ವ್ಯವಸ್ಥೆ ಮಾಡಬೇಕೆಂದು ಸಮಿತಿಯವರು ಸಲಹೆ ಮಾಡಿದ್ದರು ಅನೇಕ ವರ್ಷಗಳಿಂದ ಕೆಲಸದಲ್ಲಿ ಬಂದಿರುವ ಅಕ್ಕಿ ಗಿರಣಿಗಳನ್ನು ತೆಗೆದುಹಾಕುವುದು ಸೂಕ್ತವಲ್ಲವೆಂದು ಕೇಂದ್ರ ಮತ್ತು ಪ್ರಾಂತ ಸರ್ಕಾರದವರು ಭಾವಿಸಿರುತ್ತಾರೆ ಗಿರಣಿಗಳು ಗ್ರಾಮಾಂತರ ಆರ್ಥಿಕ ವ್ಯವಸ್ಥೆಯಲ್ಲಿ ಸೇರಿದ ಭಾಗವಾಗಿರುವುದೆಂದೂ ವಿವರಿಸಲಾಗಿದೆ ಹೊಸ ಗಿರಣಿಗಳಿಗೆ ಅವಕಾಶ ಕೊಡದಿರಲು ಸರ್ಕಾರದವರು ಒಪ್ಪಿರುತ್ತಾರೆ. ಆದರೆ ಈಗಿರುವ ಗಿರಣಿಗಳ ಯಂತ್ರಗಳಿಗೆ ಭಾಗಗಳನ್ನು ಹೊಸದಾಗಿ ಜೋಡಿಸಲು ಅವಕಾಶವಿರುವುದು ಗಿರಣಿಗಳಲ್ಲಿ ಈಗಿನ ತಯಾರಿಕೆ ಉತ್ಪತ್ತಿಯನ್ನು ಹೆಚ್ಚಿಸಲು ಅವಕಾಶವಿರುವುದಿಲ್ಲ

ಅಕ್ಕಿಯ ಮೇಲಿನ ತೌಡನ್ನು ಶೇಕಡ ೫ರಷ್ಟಕ್ಕಿಂತ ಹೆಚ್ಚಾಗಿ ತೆಗೆಯಬಾರದೆಂದೂ, ಶೇಕಡ ೩ಕ್ಕಿಂತ ಕಡಿಮೆ ಪಾಲಿಷ್ ಇರಬಾರದೆಂದೂ ಕೇಂದ್ರ ಸರ್ಕಾರದವರು ಸೂಚಿಸಿರುತ್ತಾರೆ ಗಿರಣಿಗಳು ದಿನಕ್ಕೆ ಆರು ಗಂಟೆಗಳ ಕಾಲಕ್ಕಿಂತಲೂ ಹೆಚ್ಚಾಗಿ ಕೆಲಸ ಮಾಡಬಾರದೆಂದು ಸಮಿತಿಯು ಮಾಡಿರುವ ಸಲಹೆಯನ್ನು ಸರ್ಕಾರದವರು ತಿರಸ್ಕರಿಸಿರುತ್ತಾರೆ

ಕೊಟ್ಟದ ಅಕ್ಕಿ ಮೇಲೆ ಮಾರಾಟ ತೆರಿಗೆಯ ವಿನಾಯಿತಿ ವಿಷಯವನ್ನು ಸಂಸ್ಥಾನ ಸರ್ಕಾರಗಳ ನಿರ್ಧಾರಕ್ಕೆ ಬಿಡಲಾಗಿದೆ

ಹೆಚ್ಚು ರೇಷ್ಮೆ ವ್ಯವಸಾಯಕ್ಕಾಗಿ ಕೇಂದ್ರದಿಂದ ೧೮೩ ಲಕ್ಷ ರೂ.

ಬೆಂಗಳೂರು ೧೮

ಸಂಸ್ಥಾನದಲ್ಲಿ ರೇಷ್ಮೆ ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಇದಕ್ಕಾಗಿ ದ್ವಿತೀಯ ಯೋಜನೆಯಲ್ಲಿ ಒದಗಿಸಲಾಗಿರುವ ೭೭.೫ ಲಕ್ಷ ರೂ ಗಳನ್ನು ಈಗ ೧೮೩ ಲಕ್ಷಕ್ಕೆ ಹೆಚ್ಚಿಸಲಾಗಿದೆ ಈ ಬಗ್ಗೆ ಕೇಂದ್ರ ಸರ್ಕಾರದವರಿಂದ ೧೨೮ ಲಕ್ಷ ರೂ ಗಳನ್ನು ಗ್ರಾಂಟಾಗಿಯೂ, ೪೪ ಲಕ್ಷ ರೂ ಗಳನ್ನು ಸಾಲದ ರೂಪದಲ್ಲೂ ಸಂಸ್ಥಾನ ಸರ್ಕಾರದವರು ನಿರೀಕ್ಷಿಸಿರುತ್ತಾರೆ

ನಿಜಾಮರಿಗೆ ಹಣ ಕೊಡದಂತೆ ಪಾಕಿಸ್ತಾನದ ಕೋರಿಕೆ

ಲಂಡನ್ನಿನ ಬ್ಯಾಂಕಿನಲ್ಲಿ ಪಾಕಿಸ್ತಾನದ ರಾಯಭಾರಿಯವರ ಹೆಸರಿನಲ್ಲಿಡಲ್ಪಟ್ಟಿರುವ ೧೦ ಲಕ್ಷ ಪೌಂಡು ಹಣವನ್ನು ವಾಪಸು ಕೊಡುವಂತೆ ಬ್ರಿಟನ್ನಿನ ಅಪೀಲು ಕೋರ್ಟ್ ಇತ್ತ ಆಜ್ಞೆಯ ವಿರುದ್ಧವಾಗಿ ಪಾಕಿಸ್ತಾನದ ಹೈ ಕಮಿಷನರ್ ರಹಿಮತುಲ್ಲಾರವರು ಲಾರ್ಡ್ಸ್ ಸಭೆಗೆ ಅಪೀಲು ಮಾಡಿಕೊಂಡಿರುತ್ತಾರೆ ಕೋರ್ಟಿನ ಆಜ್ಞೆಯಿಂದ ಪಾಕಿಸ್ತಾನದ ಪರಮಾಧಿಕಾರಕ್ಕೆ ಚ್ಯುತಿ ಬಂದಿರುವುದಾಗಿ ಅವರು ಸೂಚಿಸಿರುವರು

ಭಾಷಾ ಶಬ್ದೋಚ್ಚಾರಣೆಯಲ್ಲಿ ವಿಜ್ಞಾನದ ಬೆಳವಣಿಗೆ

ಡೆನ್ಮಾರ್ಕಿನ ಪ್ರೊಫೆಸರರ ಭಾಷಣ

ಮೈಸೂರು ೧೮

ಡೆನ್ಮಾರ್ಕಿನ ರಾಜಧಾನಿ ಕೋಪನ್‌ಹೇಗನ್ನಿನಲ್ಲಿರುವ ವಿಶ್ವವಿದ್ಯಾಲಯದ ಭಾಷಾ ಶಾಸ್ತ್ರದ ಉಪ ಪ್ರಾಧ್ಯಾಪಕರಾಗಿರುವ ಮಿಸ್ ಎಲಿ ಫಿಷರ್ ಯಾರ್ಗೆನ್‌ಸನ್‌ರವರು ನೆನ್ನೆ ಮಹಾರಾಜಾ ಕಾಲೇಜಿನಲ್ಲಿ ವಿಶ್ವವಿದ್ಯಾಲಯದ ಉಪನ್ಯಾಸ ಮಾಲೆಯ ಅಂಗವಾಗಿ ಭಾಷಣ ಮಾಡಿ, ಪರದೇಶಗಳಲ್ಲಿ ಭಾಷಾ ಶಬ್ದೋಚ್ಚಾರಣೆಗಳನ್ನು ರಿಕಾರ್ಡ್ ಮಾಡುವುದರಲ್ಲಿ ಸಾಧಿಸಿರುವ ಪ್ರಗತಿಯನ್ನು ಮತ್ತು ಭಾಷಾ ಶಾಸ್ತ್ರದ ಬೆಳವಣಿಗೆಯನ್ನೂ ವಿವರಿಸಿದರು ಪ್ರೊ॥ ಟಿ ಎ ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀಮತಿ ಫಿಷರ್‌ರವರು ಮಹಾರಾಜಾ ಕಾಲೇಜಿನ ಉಪಾಧ್ಯಾಯರ ಸಭೆಯಲ್ಲಿ ಭಾಗವಹಿಸಿ ಭಾಷಾ ಶಾಸ್ತ್ರದ ಗೋಷ್ಠಿಯನ್ನು ಆರಂಭಗೊಳಿಸಿದರು

ಪೌರಸಭಾ ಈಜುವ ಕೊಳದ ಪುನರಾರಂಭ

ನಗರದ ಪೌರಸಭಾ ಈಜುವ ಕೊಳವು ಹಲವಾರು ತಿಂಗಳಿಂದ ರಿಪೇರಿಗಾಗಿ ಮುಚ್ಚಲ್ಪಟ್ಟಿದ್ದು ಇಂದಿನಿಂದ ಪುನಃ ಆರಂಭವಾಗಿದೆ

ವಿಯಟ್ನಾಂ ದೇಶದ ಹೋಟೇಲಿನಲ್ಲಿ ೧೭ ಜನರ ಕೊಲೆ

ವಿಯಟ್ನಾಮಿನ ಒಂದು ನಗರದ ಹೋಟೇಲಿನಲ್ಲಿ ಮೊನ್ನೆ ಶಸ್ತ್ರಸಜ್ಜಿತ ತಂಡವೊಂದು ಒಳಗೆ ನುಗ್ಗಿ, ಹೆಂಗಸರು ಮಕ್ಕಳೂ ಸೇರಿ ೧೭ ಮಂದಿಯನ್ನು ಕೊಲೆ ಮಾಡಿರುವುದಾಗಿ ವರದಿಯಾಗಿದೆ

ಚಿನ್ನದ ಗಣಿಯ ವಿನಾಶಕ್ಕೆ ಕಂಪೆನಿಯವರ ವಿಫಲ ಪ್ರಯತ್ನ

ರಾಷ್ಟ್ರೀಕರಣದ ಸಂಬಂಧದ ಘಟನೆ ಬಗ್ಗೆ ಮುಖ್ಯ ಮಂತ್ರಿಗಳ ವಿವರಣೆ

ಬೆಂಗಳೂರು ೧೮

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣಕ್ಕೆ ಸ್ವಲ್ಪ ಹಿಂದೆ ಹಲವು ಯಂತ್ರಗಳನ್ನು ನಾಶಪಡಿಸಲು ಮತ್ತು ಇತರ ವಸ್ತುಗಳನ್ನು ಹರಾಜು ಹಾಕಲು ಕಂಪೆನಿಯವರು ನಡೆಸಿದ್ದ ಕ್ರಮವನ್ನು ಸಕಾಲದಲ್ಲಿ ಸರ್ಕಾರದವರು ಪತ್ತೆ ಮಾಡಿ ತಡೆದರೆಂಬ ವಿಷಯವನ್ನು ನೆನ್ನೆ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಹೊರಗೆಡಹಿದರು ಕಂಪೆನಿಯ ಮಾಜಿ ಡೈರೆಕ್ಟರುಗಳ ಬಳಿ ಗಣಿಗಳ ಹಲವು ಯಂತ್ರಗಳಿರುವುವೇ ಎಂದು ಕೇಳಲಾಗಿ, ಇಲ್ಲವೆಂದು ಮುಖ್ಯ ಮಂತ್ರಿಗಳು ತಿಳಿಸಿದರು.

ಗವರ್ನರರ ವರ್ಧಂತಿ ದಿನ ರಜಾ ಕೊಡುವುದು ಸೂಕ್ತವಲ್ಲ

ಬೆಂಗಳೂರು ೧೮

ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿಯವರು ಮಾತನಾಡಿ, ಗವರ್ನರುಗಳ ಹುಟ್ಟು ಹಬ್ಬಗಳಿಗಾಗಿ ರಜಾ ಕೊಡುವುದು ಸರಿಯಲ್ಲವೆಂದೂ, ಹಾಗೆ ಮಾಡಿದರೆ ಎಲ್ಲಾ ಸಂಸ್ಥಾನಗಳಲ್ಲೂ ರಜಾ ಕೊಡಬೇಕಾಗುವುದೆಂದೂ, ಅಲ್ಲದೆ ಹಾಗೆ ಕೊಟ್ಟಲ್ಲಿ ರಾಜ್ಯಪಾಲರಿಗೆ ಅಸಮಾಧಾನವಾಗಬಹುದೆಂದೂ ತಿಳಿಸಿದರು. ಮೈಸೂರಿನ ರಾಜ್ಯಪಾಲರು ಕರ್ತವ್ಯ ನಿಷ್ಠರೆಂದು ಅವರು ಹೇಳಿ, ಅವರ ವರ್ಧಂತಿಗಾಗಿ ರಜಾ ಕೊಡುವುದು ಸೂಕ್ತವಲ್ಲವೆಂದು ತಿಳಿಸಿದರು. ಶ್ರೀ ಜಿ. ಎಸ್ ಬೊಮ್ಮೇಗೌಡರು ರಜಾ ಕೊಡಬೇಕೆಂದು ಸಲಹೆ ಮಾಡಿದ್ದರು

ಅಮೆರಿಕದಲ್ಲಿ ಶಸ್ತ್ರಸಜ್ಜಿತ ಸೈನ್ಯ ಪ್ರಮಾಣದ ಖೋತಾ

ಅಮೆರಿಕದ ಶಸ್ತ್ರ ಸಜ್ಜಿತ ಸೇನಾ ತಂಡಗಳಲ್ಲಿ ಬರುವ ಆರು ತಿಂಗಳೊಳಗೆ ೧ ಲಕ್ಷ ಮಂದಿಯನ್ನು ಖೋತಾ ಮಾಡುವುದಕ್ಕೆ ಅಧ್ಯಕ್ಷ ಐಸೆನ್‌ಹೋವರರು ಒಪ್ಪಿರುತ್ತಾರೆ ಈ ಬಗ್ಗೆ ಹೊರಡಿಸಿರುವ ಆಜ್ಞೆಯಿಂದ ೫೦ ಕೋಟಿ ಡಾಲರಿನ ಖರ್ಚು ಕಡಿಮೆಯಾಗುವುದು ಇದರಿಂದ ಭೂ ಸೈನ್ಯದಲ್ಲಿ ಅರ್ಧದಷ್ಟು ಕಡಿಮೆಯಾದಂತಾಗುವುದು. ಅಲ್ಲಿ ೨೭ ಲಕ್ಷ ಶಸ್ತ್ರಸಜ್ಜಿತ ಸೈನಿಕರಿರುವರು

ಪ್ರವಾಹದಿಂದ ೨೦೦ ಮರಣ

ಫಿಲಿಪೈನಿನ ಲುಜಾನ್ ದ್ವೀಪದಲ್ಲಿ ಭಾರಿ ಪ್ರವಾಹ ಬಂದು ಏಳು ಹಳ್ಳಿಗಳು ಮುಳುಗಿದ ಪರಿಣಾಮವಾಗಿ ೨೦೦ ಜನರು ಕೊಚ್ಚಿಹೋಗಿರುತ್ತಾರೆ ೫೦೦ ಮಂದಿ ಪತ್ತೆಯಿಲ್ಲ

○ದಕ್ಷಿಣ ರೈಲ್ವೆಯ ಎರಡು ನೌಕರರ ಸಂಘಗಳು ಐಕ್ಯವಾಗಿ ದಕ್ಷಿಣ ರೈಲ್ವೆ ನೌಕರರ ಸಂಘವೆಂಬ ಹೆಸರಿನಲ್ಲಿ ಕೆಲಸ ಮಾಡತೊಡಗಿವೆ ಅದರ ಕೇಂದ್ರ ಕಛೇರಿಯು ಪೆರಂಬೂರಿನಲ್ಲಿರುವುದು ಹೊಸ ಸಂಘದ ಅಧ್ಯಕ್ಷರಾಗಿ ಶ್ರೀ ಟಿ ಪಿ ಆನಂದರವರು ಆರಿಸಲ್ಪಟ್ಟಿರುವರು

ಇನ್‌ಫ್ಲುಯೆಂಜಾದಿಂದ ೫೧೧ ಜನರ ಮರಣ

೬ ರತದಲ್ಲಿ ಇನ್‌ಫ್ಲುಯೆಂಜಾ ಪ್ರಾರಂಭವಾದಂದಿನಿಂದ ಕಳೆದ ೭ನೇ ತಾರೀಖಿನವರೆಗೆ ೫೧೧ ಜನರು ಮಡಿದಿರುವರೆಂದೂ, ೧೭ ಲಕ್ಷ ಮಂದಿಗೆ ಅದು ತಗಲಿತ್ತೆಂದೂ ಲೋಕಸಭೆಯಲ್ಲಿ ಮೊನ್ನೆ ಆರೋಗ್ಯ ಮಂತ್ರಿ ಶ್ರೀ ಡಿ. ಪಿ ಕರ್ಮಾರ್‌ಕರ್‌ರವರು ತಿಳಿಸಿದರು ಈ ಅಂಟುರೋಗ ವ್ಯಾಧಿಯು ಹರಡುವುದೆಂಬುದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲವೆಂದೂ, ಆದರೂ ಪ್ರಾಂತ ಸರ್ಕಾರಗಳು ಹೆಚ್ಚು ಔಷಧಿ ಮತ್ತು ಚಿಕಿತ್ಸೆ ಸೌಲಭ್ಯಗಳನ್ನು ಏರ್ಪಡಿಸಿಕೊಂಡಿರುವಂತೆ ಸೂಚಿಸಿರುವುದಾಗಿಯೂ ಸಚಿವರು ಹೇಳಿದರು

ಆಗುಂಬೆಯಲ್ಲಿ ೧೦ ದಿನಗಳಲ್ಲಿ ೭೪ ಅಂಗುಲ ಮಳೆ

ಮೈಸೂರಿನ ಚಿರಾಪುಂಜಿ ಎಂದು ಪ್ರಸಿದ್ಧಿ ಪಡೆದಿರುವ ಮಲೆನಾಡಿನ ಆಗುಂಬೆಯಲ್ಲಿ ಈ ತಿಂಗಳು ೧ನೇ ತಾರೀಕಿನಿಂದ ೧೦ನೇ ತಾರೀಕಿನವರೆಗೆ ಒಟ್ಟು ೭೪ ಅಂಗುಲ ಮಳೆಯಾಗಿ ಶಿವಮೊಗ್ಗದ ನದಿಗಳಲ್ಲಿ ಪ್ರವಾಹ ಬಂದು ತಗ್ಗಿನ ಪ್ರದೇಶಗಳು ನೀರಿನಿಂದ ಸುತ್ತುವರಿಯಲ್ಪಟ್ಟಿವೆಯೆಂದು ವರದಿಯಾಗಿವೆ ರಸ್ತೆಗಳಲ್ಲಿ ಸಂಚಾರಕ್ಕೆ ಅಡಚಣೆಯಾಗಿದೆ. ಆಗುಂಬೆಯಲ್ಲಿ ವರ್ಷಕ್ಕೆ ೩೫೦ ಅಂಗುಲ ಮಳೆಯಾಗುವುದು

ವಿಯಟ್ನಾಮಿಗೆ ಉಪಾಧ್ಯಕ್ಷರ ಭೇಟಿ

ಭಾರತದ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಬರುವ ಸೆಪ್ಟೆಂಬರ್ ಮಧ್ಯಭಾಗದಲ್ಲಿ ವಿಯಟ್ನಾಂ ದೇಶಕ್ಕೆ ಭೇಟಿ ಕೊಡುವರು ಅಲ್ಲಿನ ಅಧ್ಯಕ್ಷ ಹೋಚಿಮಿನ್‌ರವರು ಮುಂದಿನ ವರ್ಷ ವಸಂತ ಋತುವಿನಲ್ಲಿ ಭಾರತಕ್ಕೆ ಆಗಮಿಸುವರು.

ಮಂಡ್ಯ ಜಿಲ್ಲಾ ಬೋರ್ಡು ಸಲಹಾ ಸಮಿತಿ

ಮಂಡ್ಯ ಜಿಲ್ಲಾ ಬೋರ್ಡಿನ ಸಲಹಾ ಸಮಿತಿಯನ್ನು ವಿಶೇಷ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ ಅದರಲ್ಲಿ ಶ್ರೀಗಳಾದ ಕೆ ಎಂ ಲಿಂಗೇಗೌಡ, ಎಂ ಸಿ ದೇವಪ್ಪ, ಸಿ. ಎಸ್ ಸೇಗೌಡ, ಸಿ ರಾಮಯ್ಯ, ಟಿ ಸಿ ಸಿದ್ದೇಗೌಡ, ಜಿ. ಪುಟ್ಟಸ್ವಾಮಿ ಬಿ ಬೋರೇಗೌಡ ಹೆಚ್ ಟಿ ನಾರಾಯಣಶೆಟ್ಟಿ ಕೆ ಎಸ್ ಸುಬ್ಬೇಗೌಡ, ಟಿ ಎಂ ಬಸವಯ್ಯಗೌಡ, ಸಿ ಶ್ರೀಕಂಠಯ್ಯ, ಎ ತಮ್ಮಣ್ಣ, ಶಿವಲಿಂಗೇಗೌಡ, ಆರ್ ಎಂ ಸಿದ್ದಪ್ಪ, ಚಿಕ್ಕಮುತ್ತಯ್ಯ, ಸಿದ್ದಯ್ಯ, ಚನ್ನೇಗೌಡ ಮತ್ತು ಕೆ. ಟಿ ರಾಮಸ್ವಾಮಿಯವರು ಸದಸ್ಯರಾಗಿರುವರು

ಅಣು ಶಸ್ತ್ರಾಸ್ತ್ರ ನಿಷೇಧದ ಒಪ್ಪಂದಕ್ಕೆ ರಷ್ಯವು ಈಗಲೇ ಸಿದ್ಧ

ಅಣು ಮತ್ತು ಜಲಜನಕ ಬಾಂಬುಗಳನ್ನು ನಿಷೇಧಿಸುವ ಬಗ್ಗೆ ಒಪ್ಪಂದಕ್ಕೆ ಬರಲು ರಷ್ಯವು ಈಗಲೇ ಸಿದ್ಧವಾಗಿದೆಯೆಂದು ರಷ್ಯದ ಅಧಿನಾಯಕ ಕ್ರುಶ್ಚೇವರು ತಿಳಿಸಿರುತ್ತಾರೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವ ಮಾಡುವುದು ಮತ್ತು ಅನಂತರದಲ್ಲಿ ಶಸ್ತ್ರ ಸನ್ಯಾಸದ ಬಗ್ಗೆ ಸಾರ್ವತ್ರಿಕ ಒಪ್ಪಿಗೆಗೆ ಬರುವುದರ ಬಗ್ಗೆ ರಷ್ಯವು ಪ್ರಯತ್ನಿಸುವುದಾಗಿ ಅವರು ಸೂಚಿಸಿರುವರು.

ಮದ್ರಾಸು ಶಾಸನ ಸಭೆಯಲ್ಲಿ ಸಭಾತ್ಯಾಗ

ಮದ್ರಾಸು ಶಾಸನಸಭಾ ಅಧಿವೇಶನ ಸ್ಥಳವನ್ನು ಇದುವರೆಗೆ ಇದ್ದ ಕಡೆಯಿಂದ ಫೋರ್ಟ್ ಸೇಂಟ್ ಜಾರ್ಜ್ ಎಂಬ ಪ್ರದೇಶಕ್ಕೆ ವರ್ಗಾಯಿಸಿದ ಬಗ್ಗೆ ಸರ್ಕಾರದ ವರ್ತನೆಯನ್ನು ಪ್ರತಿಭಟಿಸಲು ಕಳೆದ ಸೋಮವಾರ ಅಲ್ಲಿನ ಶಾಸನ ಸಭೆಯ ಕಾಂಗ್ರೆಸ್ ಸುಧಾರಣಾ ಪಕ್ಷದವರು ಸಭಾತ್ಯಾಗ ಮಾಡಿದರು ಈ ಅಧಿವೇಶನದಲ್ಲಿ ಇದು ಮೊದಲನೇ ಬಾರಿ ಆದ ಸಭಾತ್ಯಾಗ ಇದರಲ್ಲಿ ಇತರ ವಿರೋಧ ಪಕ್ಷದವರು ಸೇರಿರಲಿಲ್ಲ

ಗಿರಣಿ ಅಕ್ಕಿ ಮೇಲೆ ಸುಂಕ ಹಾಕುವುದಿಲ್ಲ

ಗಿರಣಿಯಲ್ಲಿ ತಯಾರಾಗುವ ಅಕ್ಕಿಯ ಮೇಲೆ ಸುಂಕ ಹಾಕಿ ಅದರಿಂದ ಬರುವ ಹಣವನ್ನು ಕೊಟ್ಟಣದ ಅಕ್ಕಿಯ ಉತ್ತೇಜನಕ್ಕಾಗಿ ಕೊಡಬೇಕೆಂಬ ಸಲಹೆಯನ್ನು ಸರ್ಕಾರದವರು ತಿರಸ್ಕರಿಸಿರುತ್ತಾರೆ. ಆದರೆ ಕೊಟ್ಟಣದ ಅಕ್ಕಿಗೆ ಮಾರಾಟ ತೆರಿಗೆ ವಿನಾಯಿತಿಯನ್ನು ಕೊಡಲು ಆಲೋಚಿಸಲಾಗಿದೆ

ನೀರಿನ ಕಂದಾಯದ ಏರಿಕೆಗಾಗಿ ಮಂಡ್ಯದ ರೈತರ ಪ್ರತಿಭಟನೆ

ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಎಕರೆಗೆ ೨ ರೂ ನಂತೆ ನೀರು ಕಂದಾಯವನ್ನು ಹೆಚ್ಚಿಸಿರುವುದಕ್ಕಾಗಿ ಮಂಡ್ಯದಲ್ಲಿ ಕಳೆದ ಗುರುವಾರ ಸೇರಿದ್ದ ರೈತರ ಸಭೆಯು ಖಂಡನಾ ನಿರ್ಣಯ ಮಾಡಿತು. ಸಮಾಜವಾದಿ ಪಕ್ಷದ ನಾಯಕ ಶ್ರೀ ಎಸ್ ಗೋಪಾಲಗೌಡರವರು ಭಾಷಣ ಮಾಡಿ ಸರ್ಕಾರದ ನೀತಿಯನ್ನು ಟೀಕಿಸಿದರು

ಕಲ್ಕತ್ತದಲ್ಲಿ ರೇವು ನೌಕರರ ಸಾಂಕೇತಿಕ ಮುಷ್ಕರ

ಕಲ್ಕತ್ತದ ರೇವಿನ ೫,೦೦೦ ನೌಕರರು ಮೊನ್ನೆ ೬ ಗಂಟೆ ಕಾಲ ಮುಷ್ಕರ ನಡೆಸಿದರು ಅದರಿಂದ ೬೦ ಹಡಗುಗಳಿಗೆ ತೊಂದರೆಯಾಯಿತು

ಸಂಕೇಶ್ವರಕ್ಕೆ ಪ್ರವಾಹದ ನೀರು

ಬೆಳಗಾಂ ಜಿಲ್ಲೆಯ ಸಂಕೇಶ್ವರ ಹಳ್ಳಿಗೆ ಹಿರಣ್ಯಕೇಶಿ ನದಿಯ ಪ್ರವಾಹದ ನೀರು ನುಗ್ಗಿದೆ ಮತ್ತಗಳ್ಳಿ ಎಂಬಲ್ಲಿ ೪ ಅಡಿ ನೀರು ನಿಂತಿದೆ ರಸ್ತೆ ಪಕ್ಕದಲ್ಲಿರುವ ಶಂಕರಲಿಂಗ ದೇವಾಲಯವು ನೀರಿನಲ್ಲಿ ಮುಳುಗಿದೆ ೧೦-೧೫ ಮನೆಗಳು ನೆಲಸಮವಾಗಿವೆ ಅನೇಕವು ಉರುಳುವ ಸ್ಥಿತಿಯಲ್ಲಿರುವುದರಿಂದ ಜನರು ಊರನ್ನು ಖಾಲಿ ಮಾಡುತ್ತಿರುವರು

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	೩೪ ೮೭	೩೫ ೮೭
ರವ್ವ ಚೂಡಿ	೨೮ ೮೭	೩೩ ೦೦
ಬಾಗಾರತಿ	೨೮ ೫೦	೨೯ ೨೫
ಕೆಂಬೂತಿ	೨೯ ೪೭	
ರಾಗಿ	೩೫ ೩೭	
ಜೋಳ	೪೩ ೨೫	
ಕಡಲೆಕಾಯಿ	೯ ೨೫	೨೦ ೦೦
ಎಳ್ಳು	೭೫ ೦೦	೮೪ ೦೦
ಹರಳುಬೀಜ	೪೦ ೦೦	
ಹೊಂಗೆಬೀಜ	೨೯ ೭೫	೩೦ ೦೧
ಹಿಪ್ಪೆಬೀಜ	೧೭ ೫೦	
ತೊಗರಿ	೩೩ ೮೭	೩೪ ೭೫
ಹೆಸರು	೩೭ ೦೦	೬೦ ೦೦
ಹುರುಳಿ	೩೨ ೦೦	೩೪ ೦೧
ಅವರೆ	೫೪ [illegible]	೩೬ ೦೦
ಧನಿಯ	೨೧ ೬೨	
ಉದ್ದು	೪೫ ೫೦	
ಹುಣಸೇಬೀಜ	೪ ೨೫	
ಹುಣಸೇಹಣ್ಣು	೩ ೮೭	
ಮೆಣಸಿನಕಾಯಿ	೧೦ ೦೦	[illegible]
ತೆಂಗಿನಕಾಯಿ	೧೭೦ ೫೦	೨೪೪ ೫೦

ಹೈದರಾಬಾದಿಗೆ ರಾಷ್ಟ್ರಾಧ್ಯಕ್ಷರ ಭೇಟಿ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ದಕ್ಷಿಣ ಭಾರತದಲ್ಲಿ ೧ ತಿಂಗಳ ಪ್ರವಾಸಕ್ಕಾಗಿ ಮೊನ್ನೆ ದೆಹಲಿಯಿಂದ ಹೈದರಾಬಾದಿಗೆ ಹೊರಟರು. ಅವರು ಸಿಕಂದರಾಬಾದಿನ ರಾಷ್ಟ್ರಪತಿ ನಿಲಯದಲ್ಲಿ ತಂಗುವರು. ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಲು ಬರುವ ತಿಂಗಳು ಕೇರಳಕ್ಕೆ ಹೋಗುವರು

ಪಶ್ಚಿಮ ಪಾಕಿಸ್ತಾನದಲ್ಲಿ ರಷೀದ್ ಖಾನರ ಮಂತ್ರಿಮಂಡಲ

ಪಶ್ಚಿಮ ಪಾಕಿಸ್ತಾನದ ಗವರ್ನರ್ ಗುರ್ಮಾನಿಯವರು ರಿಪಬ್ಲಿಕನ್ ಪಕ್ಷದ ನೂತನ ನಾಯಕ ಸರ್ದಾರ್ ಅಬ್ದುಲ್ ರಷೀದ್ ಖಾನರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿರುತ್ತಾರೆ. ಅದಕ್ಕೆ ಮುಂಚೆ ಡಾ|| ಖಾನ್ ಸಾಹೇಬರ ರಾಜೀನಾಮೆಯನ್ನು ಅವರು ಅಂಗೀಕರಿಸಿದರು

ರಣಜಿತ್ 19 7.57ರಿಂದ ೭ನೇ ಮತ್ತು ಕಡೆಯ ವಾರ

ಸಾದಿಕ್‌ರವರ

— ದುನಿಯಾ ರಂಗ್ ರಂಗೇಲಿ —

ಪಾತ್ರ:— ಜಾನಿ ವಾಕರ್, ಶ್ಯಾಮಾ, ಕರ್ಲೆ ಚಾಂದ್ ಉಸ್ಮಾನಿ ಮುಂತಾದವರು

ಗೋಣಿ ಚೀಲಗಳು, ಟಿನ್ನುಗಳು, ಜಾಯಿಕಾಯಿ ಮರದ ಪೆಟ್ಟಿಗೆಗಳು ಮಾರಾಟಕ್ಕಿವೆ

ಸೆಕ್ರೆಟರಿ, ರೈಲ್ವೆ ಎಂಪ್ಲಾಯೀಸ್ ಕನ್ಸೂಮರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ರೈಲ್ವೆ ಕಛೇರಿಗಳ ಹಿಂಭಾಗ, ಹೊಸ ಸಂತೆಪೇಟೆ ರಸ್ತೆ ಮೈಸೂರು ಇವರಲ್ಲಿ ವಿಚಾರಿಸಿರಿ

SREE GAYATHRI TALKIES

From 19 7 57 For 3 days

THE INDIAN FIGHTER

With Kirk Douglas

(Cinemascope & Technicolor)

Morning Shows on Sat & Sun.

WITNESS TO MURDER

ಲಕ್ಷ್ಮಿ ★ 19 7-57ನೇ ಶುಕ್ರವಾರ ಅನೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ವಿಜಯಾ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ

ಗುಣಸುಂದರಿ

ಪಾತ್ರ:—ಜೆಮಿನಿ ಗಣೇಶ್, ಸಾವಿತ್ರಿ, ನಂಬಿಯಾರ್, ಎಸ್ ವಿ ರಂಗರಾವ್, ಕರುಣಾನಿಧಿ, ಮುತ್ತುಲಕ್ಷ್ಮಿ ಮುಂತಾದವರು

ಇದೇ ದಿನ "ಮಿಸ್ಸಮ್ಮ" (ತಮಿಳು)

ಮನೆಗಳು ಬಾಡಿಗೆಗಿವೆ

(ಶಾಖಾಹಾರಿಗಳಿಗೆ ಮಾತ್ರ)

ಜಯನಗರದಲ್ಲಿ—ದೀಪ, ನಲ್ಲಿ ಇರುವ ಮಹಡಿ ಮನೆ ಬಾಡಿಗೆ ರೂ. 24.

ಯಾದವಗಿರಿಯಲ್ಲಿ—ದೀಪ ನಲ್ಲಿ ಇರುವ ತಾರಸಿ ಮನೆ ಬಾಡಿಗೆ ರೂ 24

ಬಿ. ಎಸ್. ಸುಬ್ಬರಾವ್, ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

Edited Printed and Published by A R Nagarajan at Sadhvi Press, D Subbiah Road Mysore

ನ್ಯೂ ಆಪೇರಾ ಟಾಕೀಸ್, ಮೈಸೂರು

19-7-57ನೇ : ಶುಕ್ರವಾರದಿಂದ : ಅನೋಘ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

ಸಿಟಾಡೆಲ್‌ರವರ ಅನೋಘ ಸಂಗೀತಮಯ ಸಾಮಾಜಿಕ ತಮಿಳು ಚಿತ್ರ ★ ಮಲ್ಲಿಕಾ

ಭೂಮಿಕೆ.— ಪದ್ಮಿನಿ, ಆರ್. ಗಣೇಶ್, ಎಂ ಎನ್ ರಾಜಂ, ತಂಗವೇಲು, ಮತ್ತು ಟಿ. ಎಸ್. ಬಾಲಯ್ಯ ಮುಂತಾದವರು

ದಿಗ್ದರ್ಶನ: ಜೋಸೆಫ್ ತಳಿಯತ್ (ಜೂನಿಯರ್) – [FAIR FILMS RELEASE

ಟೆಲಿಫೋನ್ ನಂ. 541 — ಟೆಲಿಗ್ರಾಂ: ಆಹಾರ

ನ್ಯೂ ಚಾಮುಂಡೇಶ್ವರಿ ಕೆಫೆ,

ಇಲವಾಲ ರಸ್ತೆ, ಮೈಸೂರು.

ತಾ|| 10-7-1957 ರಿಂದ ರಿಯಾಯಿತಿ ದರ

ವಿದ್ಯಾರ್ಥಿಗಳಿಗೂ ಮತ್ತು ನೌಕರರುಗಳಿಗೂ ಊಟದ 30 ಟಿಕೆಟ್ಟುಗಳ ಪುಸ್ತಕಕ್ಕೆ ರೂ 16-8-0 ಮಾತ್ರ. ಪ್ರೊ|| ಬಿ ಎಂ ಚಂದ್ರಯ್ಯ

ಪ್ರಭುದೇವಾ ಥಿಯೇಟರ್ (ಪದ್ಮಾ ಟಾಕೀಸ್)

19—7—57ನೇ : ಶುಕ್ರವಾರದಿಂದ : ಅನೋಘ ಪ್ರಾರಂಭ

ನವಯುಗ ಪಿಕ್ಚರ್ಸ್‌ರವರ ತೆಲುಗು ಚಿತ್ರ ★ "ಜ್ಯೋತಿ ★

ಪಾತ್ರ:— ಜಿ. ವರಲಕ್ಷ್ಮಿ, ಸಾವಿತ್ರಿ, ಶಿವರಾವ್, [illegible], ನಾಗಭೂಷಣಂ ಮುಂತಾದವರು

ಚಾಮುಂಡೇಶ್ವರಿ ಟಾಕೀಸ್ ★ 19—7—57ರಿಂದ : ಅನೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಜಗನ್ನಾಥ್ ಪಿಕ್ಚರ್ಸ್‌ರವರ, ನಕ್ಕು ನಲಿಸುವ ಕನ್ನಡ ಸಾಮಾಜಿಕ ಚಿತ್ರ ★ ಶುಕ್ರದೆಸೆ ★

ಪಾತ್ರ:— ಟಿ. ಕೆ. ಬಾಲಚಂದರ್, ಸೂರ್ಯಕಲಾ, ಬಾಲಕೃಷ್ಣ, ಆದವಾನಿ ಲಕ್ಷ್ಮೀದೇವಿ, ಗಮಾಬಾಯಿ, ಗಣಪತಿ ಭಟ್ಟ, ರಾಮಚಂದ್ರಶಾಸ್ತ್ರಿ ಮುಂತಾದವರು

[ವಿಜಯಾ ಟಾಕೀ ಡಿಸ್ಟ್ರಿಬ್ಯೂಟರ್ಸ್ ರಿಲೀಸ್

ವಾರ ಶಾಲೆ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಫ್ರೀ ಪಾಸು ಮೊದಲಾದ ರಿಯಾಯಿತಿಗಳನ್ನು ಮನ್ನಾ ಮಾಡಲಾಗಿದೆ

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ಚಂದಾದಾರರಾಗಿ ಬರೆಯಿರಿ

ಬಿಡಿಪ ಪತ್ರಿಕೆ 2 ನಯಾ ಪೈಸೆ

ಚಂದಾ ದರ
—
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೧೫] SADHVI । FRIDAY 19—7—1957 ಮೈಸೂರು । ಶುಕ್ರವಾರ ೧೯—೭—೧೯೫೭ । [ಸಂಚಿಕೆ : ೩೪೧

ಶಾಸನ ಸಭೆ ವಿರೋಧ ಪಕ್ಷದ ೫೪ ಸದಸ್ಯರ ಸಭಾತ್ಯಾಗ

ಶಾಸನ ಸಭೆಯಲ್ಲಿ ವಿರೋಧ ಪಕ್ಷದವರ ಸಭಾ ಪರಿತ್ಯಾಗ

ಸ್ವತಂತ್ರ ಚುನಾಯಿತವಾದವರನ್ನು ಉಪಾಧ್ಯಕ್ಷತೆಗೆ ಚುನಾಯಿಸದಿದ್ದುದಕ್ಕೆ ಪ್ರತಿಭಟನೆ

[ಸ್ವಂ ಸು. ಸಂತಿ] ಬೆಂಗಳೂರು ೧೯

ಸ್ವತಂತ್ರ ಚುನಾಯಿತರಾದ ಶ್ರೀ ಮುತ್ತಣ್ಣಪ್ಪನವರನ್ನು ಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಆರಿಸಲು ಕಾಂಗ್ರೆಸ್ ಪಕ್ಷದವರು ಒಪ್ಪದಿದ್ದುದಕ್ಕಾಗಿ ಪ್ರತಿಭಟನೆಯನ್ನು ಸೂಚಿಸಲು ಈ ದಿನ ಶಾಸನ ಸಭೆಯ ವಿರೋಧ ಪಕ್ಷದ ೫೭ ಸದಸ್ಯರ ಪೈಕಿ ೫೪ ಜನರು ಸಭಾ ಪರಿತ್ಯಾಗ ಮಾಡಿದರು. ಶ್ರೀಮತಿ ನಾಗರತ್ನಮ್ಮ ಮತ್ತು ಶ್ರೀಗಳಾದ ಚಿನ್ನಸ್ವಾಮಿ ಮತ್ತು ಕಾರ್ಟರ್‌ರವರು ಸಭೆಯಲ್ಲಿಯೇ ಇದ್ದರು

ಅರ್ಧ ಗಂಟೆನಂತರ, ಹೊರಗೆ ಹೋಗಿದ್ದ ಸದಸ್ಯರು ಸಭೆಗೆ ಹಿಂದಿರುಗಿದರು.

ಅನಂತರ ಶ್ರೀ ತಿಮ್ಮಾರೆಡ್ಡಿಯವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು ಇದಕ್ಕೆ ಮುಂಚೆ ವಿರೋಧ ಪಕ್ಷದ ಸದಸ್ಯರೂ ಮತ್ತು ಕಮ್ಯೂನಿಸ್ಟರಾದ ನರಸಿಂಹರವರೂ ಕಾಂಗ್ರೆಸ್ ಪಕ್ಷದ ನಾಯಕರಿಗೆ ಮನವಿ ಮಾಡಿ ಈ ಚುನಾವಣೆಯಲ್ಲಿ ಉತ್ತಮ ಸಂಪ್ರದಾಯವನ್ನು ಬೆಳೆಸುವಂತೆ ಕೋರಿದ್ದರು

ಹೈಕೋರ್ಟಿಗೆ ಉರ್ದು ಬಲ್ಲ ನ್ಯಾಯಾಧೀಶರು

ಸಂಸ್ಥಾನದ ಹೈಕೋರ್ಟಿಗೆ ಉರ್ದು ಬಲ್ಲ ನ್ಯಾಯಮೂರ್ತಿಯೊಬ್ಬರನ್ನು ನೇಮಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ವಿಧಾನ ಸಭೆಯಲ್ಲಿ ಶ್ರೀ ಅಣ್ಣಾರಾವ್ ಗಣಮುಖಿಯವರ ಪ್ರಶ್ನೆಗೆ ಉತ್ತರವಿತ್ತು ತಿಳಿಸಿದರು.

ತೆರಿಗೆ ಕೊಡದೆ ತಪ್ಪಿಸಿಕೊಳ್ಳುವವರ ಮೇಲೆ ಕ್ರಮ

ಲೋಕ ಸಭೆಯಲ್ಲಿ ಸಧ್ಯದಲ್ಲೇ ಮಸೂದೆ

ತೆರಿಗೆಗಳನ್ನು ಕೊಡದೆ ತಪ್ಪಿಸಿಕೊಳ್ಳುವುದನ್ನು ತಡೆಗಟ್ಟಲು ಈಗಿರುವ ಶಾಸನಗಳ ತಿದ್ದುಪಡಿ ಮಸೂದೆಯನ್ನು ಆದಷ್ಟು ಬೇಗನೆ ಲೋಕ ಸಭೆಯ ಮುಂದೆ ತರಲಾಗುವುದೆಂದು ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ ಕೃಷ್ಣಮಾಚಾರಿಯವರು ಮೊನ್ನೆ ತಿಳಿಸಿದರು ಈಗಿರುವ ಶಾಸನವು ತೆರಿಗೆ ತಪ್ಪಿಸಿಕೊಳ್ಳುವವನಿಗೆ ಬಹಳ ಅನುಕೂಲವಾಗಿರುವುದೆಂದೂ, ಅಂತಹವರಿಗೆ ಬಲವಾದ ಶಿಕ್ಷೆ ವಿಧಿಸಬೇಕೆಂದೂ ಸಚಿವರು ನುಡಿದರು. ಅಂತಹವರ ಸಂಖ್ಯೆಯು ಬಹಳ ಹೆಚ್ಚಾಗಿರುವುದೆಂದೂ, ಹೊಸ ಶಾಸನದ ಮೂಲಕ ತೆರಿಗೆ ತಪ್ಪಿಸಿಕೊಳ್ಳುವುದನ್ನು ಬಹಳವಾಗಿ ಕಡಿಮೆ ಮಾಡಲಾಗುವುದೆಂದೂ ಅವರು ಸೂಚಿಸಿದರು.

ಸಿವಿಲ್ ಏವಿಯೇಷನ್ ನೌಕರರಿಂದಲೂ ಮುಷ್ಕರ

ವೇತನ ಸಮಿತಿಯ ರಚನೆ ಮುಂತಾದ ತಮ್ಮ ಹಲವು ಬೇಡಿಕೆಗಳನ್ನು ಆಗಸ್ಟ್ ೩ನೇ ತಾರೀಖಿನೊಳಗೆ ಈಡೇರಿಸದಿದ್ದರೆ, ಆಗಸ್ಟ್ ೮ ರಿಂದ ಮುಷ್ಕರ ಹೂಡುವುದಾಗಿ ಸಿವಿಲ್ ಏವಿಯೇಷನ್ ಇಲಾಖೆಯ ನೌಕರರು ಸರ್ಕಾರಕ್ಕೆ ಸೂಚನೆಯಿತ್ತಿದ್ದಾರೆಂದು ವರದಿಯಾಗಿದೆ.

ಅಂಚೆ ಮತ್ತು ತಂತಿ ನೌಕರರಿಗೆ ಹಲವು ರಿಯಾಯಿತಿಗಳು

ಲೋಕ ಸಭೆಯಲ್ಲಿ ಸಚಿವ ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೇಳಿಕೆ

ಅಂಚೆ ಮತ್ತು ತಂತಿ ಇಲಾಖಾ ನೌಕರರ ಮುಷ್ಕರದ ಬಗ್ಗೆ ಕೇಂದ್ರ ಸಾರಿಗೆ ಮತ್ತು ಸಂಪರ್ಕ ಶಾಖಾ ಸಚಿವ ಲಾಲ್ ಬಹದ್ದೂರ್ ಶಾಸ್ತ್ರಿಯವರು ಲೋಕ ಸಭೆಯಲ್ಲಿ ನಿನ್ನೆ ಹೇಳಿಕೆಯೊಂದನ್ನಿತ್ತು, ನೌಕರರಿಗೆ ಹಲವು ರಿಯಾಯಿತಿಗಳನ್ನು ಕೊಡುವುದಾಗಿ ತಿಳಿಸಿದರು

ಅದರ ಪ್ರಕಾರ ಅಂಚೆ ಮತ್ತು ತಂತಿ ಇಲಾಖೆಯ ಮೂರು ಮತ್ತು ನಾಲ್ಕನೆ ದರ್ಜೆಯ ನೌಕರರ ನಡುವೆ ರಜಾ ನಿಯಮ, ವೈದ್ಯಕೀಯ ಸೌಕರ್ಯ ಮತ್ತು ನಿವೃತ್ತಿ ವೇತನಗಳ ಬಗ್ಗೆ ಇರುವ ವ್ಯತ್ಯಾಸವು ರದ್ದಾಗುವುದು ರೈಲ್ವೆ ಮೆಯಿಲ್ ಮತ್ತು ಡೆಡ್ ಲೆಟರ್ ಕಛೇರಿ ನೌಕರರಿಗೆ ೬೦ ೧೭೦ರಿಂದ ೧೫೦-೨೫೦ಕ್ಕೆ; ಪ್ರಧಾನ ಅಂಚೆ ಕಛೇರಿ ನೌಕರರಿಗೆ ೧೬೦-೩೫೦ ರಿಂದ ೨೫೦-೩೫೦ಕ್ಕೆ ಸಂಬಳವನ್ನು ಏರಿಸಲಾಗುವುದು ಹಲವು ಪಟ್ಟಣಗಳಲ್ಲಿ ಇನ್ನು ಮುಂದೆ ಮನೆ ಬಾಡಿಗೆ ಭತ್ಯ ನೀಡಲಾಗುವುದು ಈಗಿನ ಭತ್ಯವನ್ನು ಹೆಚ್ಚಿಸಲಾಗುವುದು ನೌಕರರ ಹಿತ ರಕ್ಷಣಾ ಮಂಡಲಿಯೊಂದನ್ನು ಸ್ಥಾಪಿಸಲಾಗುವುದು

ವೇತನ ಸಮಿತಿಯ ರಚನೆ ಮತ್ತು ತಾತ್ಕಾಲಿಕವಾಗಿ ಸಂಬಳ ಮತ್ತು ತುಟ್ಟಿಭತ್ಯವನ್ನು ಏರಿಸಿ ಅವೆರಡನ್ನೂ ಒಟ್ಟಿಗೆ ಸೇರಿಸುವ ಪ್ರಶ್ನೆಯನ್ನು ಅಂಚೆ ಇಲಾಖಾ ನೌಕರರ ಬಗ್ಗೆ ಮಾತ್ರ ಪರಿಶೀಲಿಸಲು ಸಾಧ್ಯವಿಲ್ಲವೆಂದೂ, ಇತರ ಇಲಾಖೆಗಳವರಿಗೂ ಅನ್ವಯವಾಗುವಂತಿರಬೇಕೆಂದೂ ಸಚಿವರು ಹೇಳಿ, ಮುಷ್ಕರವನ್ನು ಕೈಗೊಳ್ಳುವುದರಿಂದ ಅನರ್ಥ ಉಂಟಾಗಬಹುದೆಂದೂ, ಆದ್ದರಿಂದ ನೌಕರರು ಆ ಕ್ರಮವನ್ನು ಕೈಗೊಳ್ಳಬಾರದೆಂದೂ ಸೂಚಿಸಿದರು

ಪಶ್ಚಿಮ ಪಾಕಿಸ್ತಾನದಲ್ಲಿ ಸರ್ಕಾರಿ ನೌಕರರಿಗೆ ಬಳುವಳಿ ಭತ್ಯ

ಪಶ್ಚಿಮ ಪಾಕಿಸ್ತಾನದಲ್ಲಿ ಅವಾಮಿ ಮುಂತಾದ ನಾಲ್ಕನೆ ದರ್ಜೆಯ ನೌಕರರು ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡುವಾಗ ಅವರಿಗೆ ತಲಾ ನೂರು ರೂ. ಗಳನ್ನು ಕೊಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ

ಮಾಸ್ಕೋವಿಗೆ ಡಾ॥ ಮೋದಿಯವರ ಪ್ರಯಾಣ

ಸಂಸ್ಥಾನದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ॥ ಎಂ. ಸಿ ಮೋದಿಯವರು ಮೊನ್ನೆ ಬೆಂಗಳೂರು ಮಾರ್ಗವಾಗಿ ಮಾಸ್ಕೋವಿಗೆ ವಿಮಾನದಲ್ಲಿ ತೆರಳಿದರು. ಅವರನ್ನು ಮಾಜಿ ಮಂತ್ರಿ ಟಿ. ಸಿದ್ದಲಿಂಗಯ್ಯ, ಮೇಯರ್ ಪಿಠಾಭಾಯಿ ದೇವರಾಜ್ ಮುಂತಾದವರು ಬೀಳ್ಕೊಟ್ಟರು ಅವರು ರಷ್ಯಾ ಸರ್ಕಾರದ ಅತಿಥಿಗಳಾಗಿರುವರು ಮಾಸ್ಕೋವಿನಲ್ಲಿ ನಡೆಯುವ ಯುವಕರ ಹಬ್ಬದಲ್ಲಿ ಅವರು ಭಾಗವಹಿಸುವರು.

ಶಸ್ತ್ರ ಚಿಕಿತ್ಸೆ ಮೂಲಕ ಸಂತಾನ ಸಂಯಮ

ಶಸ್ತ್ರ ಚಿಕಿತ್ಸೆ ಮೂಲಕ ಸಂತಾನ ಸಂಯಮವನ್ನು ಜಾರಿಗೆ ತರುವುದರಲ್ಲಿ ಖಾಸಗಿ ವೈದ್ಯರಿಗೆ ಪ್ರೋತ್ಸಾಹ ನೀಡಲು ಮದ್ರಾಸ್ ಸರ್ಕಾರದವರು ನಿರ್ಧರಿಸಿರುತ್ತಾರೆ ಪ್ರತಿ ಶಸ್ತ್ರ ಚಿಕಿತ್ಸೆಗೂ ವೈದ್ಯರಿಗೆ ೨೫ ರೂ ಕೊಡಲಾಗುವುದು ೨೦೦ ರೂ ಮತ್ತು ಕಡಿಮೆ ವರಮಾನ ಬರುವವರಿಗೆ ಚಿಕಿತ್ಸೆ ಮಾಡಿದರೆ ಈ ಸಂಭಾವನೆಯು ದೊರೆಯುವುದು. ಒಂದು ವರ್ಷ ಜಾರಿಯಲ್ಲಿರುವ ಈ ಯೋಜನೆಗಾಗಿ ೨೫,೦೦೦ ರೂ ಗಳನ್ನು ಒದಗಿಸಲಾಗುತ್ತದೆ

ಸರ್ಕಾರಕ್ಕೆ ಬಸ್ ಕೆಲಸಗಾರರ ಸಂಘದ ಮನವಿ

ಜಿಲ್ಲಾ ಬಸ್ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಶ್ರೀ ಟಿ ಎಸ್. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆದು, ಗಾಯತ್ರಿ, ಸಿದ್ಧಲಿಂಗೇಶ್ವರ, ಕಾರವಾನ್, ಸಿ. ಎ ಆರ್, ಸದಾನಂದ, ವೆಂಕಟೇಶ್ವರ, ಅಲ್ಲಮ ಮತ್ತು ಇತರ ಬಸ್ ಸರ್ವಿಸ್ಸುಗಳ ಮಾಲೀಕರು ತಮ್ಮ ಬಸ್ಸು ಲೈನುಗಳನ್ನು ಮದ್ರಾಸು ಪ್ರಾಂತದವರಿಗೆ ಮಾರಿರುವುದನ್ನು ಪರಿಶೀಲಿಸಿ ಆ ಲೈನುಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂದು ಕೋರಿತು ಅವುಗಳ ಕೆಲಸಗಾರರಿಗೆ ನಿರುದ್ಯೋಗವುಂಟಾಗುವುದನ್ನು ತಪ್ಪಿಸಬೇಕೆಂದೂ ಒತ್ತಾಯಪಡಿಸಲಾಯಿತು ಸರ್ಕಾರಿ ಬಸ್ಸುಗಳು ಓಡಾಡುವ ಲೈನುಗಳಲ್ಲಿ ಹಿಂದೆ ಇದ್ದ ಸರ್ವಿಸ್ಸುಗಳ ಬಸ್ ಕೆಲಸಗಾರರಿಗೆ ಉದ್ಯೋಗ ಕಲ್ಪಿಸಬೇಕೆಂದೂ ಮನವಿ ಮಾಡಲಾಯಿತು

ಅರ್ಜಿಗಳಿಗಾಗಿ ಅಡ್ವೊಕೇಟ್ ಜನರಲ್ಲರ ಶುಲ್ಕ ನಿಗದಿ

ರಿಟ್ ಅರ್ಜಿಗಳು, ದಾಖಲೆಗಳ ಪರಿಶೀಲನೆ ಮುಂತಾದುವುಗಳಿಗಾಗಿ ಅಡ್ವೊಕೇಟ್ ಜನರಲ್ಲರ ಶುಲ್ಕವನ್ನು ರಾಜ್ಯಪಾಲರು ಗೊತ್ತುಪಡಿಸಿರುತ್ತಾರೆ ಅದರ ಪ್ರಕಾರ ಸಿವಿಲ್ ಮತ್ತು ರಿಟ್ ಅರ್ಜಿಗಳಿಗೆ ೬೦ ರೂ ಮತ್ತು ಸಿವಿಲ್ ರಿವಿಷನ್ ಅರ್ಜಿಗಳಿಗೆ ೧೦೦ ರೂ. ಎಂದು ನಿರ್ಧರಿಸಲಾಗಿದೆ. ದಾಖಲೆಗಳ ಪರಿಶೀಲನೆ ೫೦ ಮತ್ತು ೧೦೦ ರೂ ಗಳನ್ನು ಗೊತ್ತುಮಾಡಲಾಗಿದೆ.

ಡಾ. ಜೆ. ಶ್ರೀಯವರು ಮೈಸೂರಿಗೆ ವಾಪಸು

ಶ್ರೀ॥ ಆರ್. ಎ ಶ್ರೀನಿವಾಸಮೂರ್ತಿಯವರು ತಮ್ಮ ವಿದೇಶ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿಕೊಂಡು ನಾಳೆ ಬೊಂಬಾಯಿಗೆ ಆಗಮಿಸುವರು ೩೧ನೇ ತಾ॥ ಬೆಂಗಳೂರಿಗೆ ಬಂದುಮಾರನೇ ದಿನ ಮೈಸೂರನ್ನು ತಲುಪುವರು ಬರುವ ೧ನೇ ತಾರೀಖು ಅವರು ಬರ್ಮಾಕ್ಕೆ ಹೋಗುವ ಸಂಭವವಿದೆ

ಕೇರಳದಲ್ಲಿ ಕೆಂಪು ಮಳೆ

ಮಲಬಾರಿನ ವೈನಾಡ್ ಪ್ರದೇಶದಲ್ಲಿ ಮೊನ್ನೆ ಕೆಂಪು ಬಣ್ಣದ ಮಳೆಯಾಯಿತೆಂದೂ, ಬಿದ್ದ ಸ್ವಲ್ಪ ಹೊತ್ತಿನ ಮೇಲೆ ಮಳೆಯ ನೀರು ಹಳದಿ ಬಣ್ಣಕ್ಕೆ ತಿರುಗಿತೆಂದೂ ವರದಿಯಾಗಿದೆ ಆ ಬಗ್ಗೆ ಪರೀಕ್ಷೆ ನಡೆಸಲು ಸ್ವಲ್ಪ ನೀರನ್ನು ಕೇಂದ್ರ ಸಿ ತಿರುವನಂತಪುರಕ್ಕೆ ಕಳುಹಿಸಲಾಗಿದೆ.

ಅಣು ಶಸ್ತ್ರಗಳ ಪೂರ್ಣ ನಿಷೇಧಕ್ಕೆ ಬ್ರಿಟನ್ನಿನ ವಿರೋಧ

ಅಣು ಶಸ್ತ್ರಗಳ ಮೇಲೆ ಸಂಪೂರ್ಣ ನಿಷೇಧವನ್ನು ವಿಧಿಸುವುದು ಸಾಧ್ಯವಿಲ್ಲವೆಂದು ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲ್ಲನ್ನರು ತಿಳಿಸಿರುತ್ತಾರೆ. ಅವುಗಳ ತಯಾರಿಗಾಗಿ ಬಳಸುವ ಯುರೇನಿಯಂ ವಸ್ತುವಿನ ಉತ್ಪನ್ನದ ಲೆಕ್ಕವು ಸಿಕ್ಕಿ ಅದರ ಮೇಲೆ ಹತೋಟಿ ಪಡೆಯುವವರೆಗೂ ಶಸ್ತ್ರಗಳನ್ನು ನಿಷೇಧಿಸುವುದು ಸಾಧ್ಯವಾಗಲಾರದೆಂದು ಅವರು ಹೇಳಿರುವರು

ಪಾಕಿಸ್ತಾನಿಗಳಿಂದ ಭಾರತದ ಖೋಟಾ ನೋಟುಗಳ ತಯಾರಿಕೆ

ಲಾಹೋರಿಗೆ ೪೫ ಮೈಲಿ ದೂರದಲ್ಲಿ ಭಾರತದ ಗಡಿ ಬಳಿ ಇರುವ ಕಸೂರು ಎಂಬಲ್ಲಿ ಭಾರತದ ೧೦೦ ರೂ. ಬೆಲೆಯ ಖೋಟಾ ನೋಟುಗಳನ್ನು ತಯಾರಿಸುತ್ತಿದ್ದುದನ್ನು ಅಲ್ಲಿನ ಪೋಲೀಸರು ಪತ್ತೆ ಹಚ್ಚಿ, ಅದರಲ್ಲಿ ತೊಡಗಿದ್ದ ತಂಡವೊಂದನ್ನು ಬಂಧಿಸಿ ಅವರಿಂದ ೧,೧೧,೦೦೦ ರೂ ಬೆಲೆಯ ಖೋಟಾ ನೋಟುಗಳನ್ನು ವಶಪಡಿಸಿಕೊಂಡರೆಂದು ವರದಿಯಾಗಿದೆ.

ಮುಷ್ಕರಕ್ಕಾಗಿ ರೈಲ್ವೆ ನೌಕರರ ಸಿದ್ಧತೆ

ತಮ್ಮ ಬೇಡಿಕೆಗಳು ಈಡೇರದಿದ್ದಲ್ಲಿ ಮುಷ್ಕರ ನಡೆಸಲು ತೀರ್ಮಾನಿಸಿರುವ ಅಖಿಲ ಭಾರತ ರೈಲ್ವೆ ನೌಕರರ ಫಡರೇಷನ್ನಿನವರು ಆ ಬಗ್ಗೆ ಸಿದ್ಧತೆಗಳನ್ನು ಮಾಡಿಕೊಳ್ಳಲು ಆಗಸ್ಟ್ ೧೧ ರಿಂದ ೧೩ರ ವರೆಗೆ ಪುಣೆಯಲ್ಲಿ ವಿಶೇಷ ಸಮ್ಮೇಳನವೊಂದನ್ನು ಏರ್ಪಡಿಸಲಿರುವರೆಂದು ವರದಿಯಾಗಿದೆ

ಹೈಕೋರ್ಟಿನಲ್ಲಿ ೩,೯೯೨ ಇತ್ಯರ್ಥವಾಗದ ಮೊಕದ್ದಮೆಗಳು

ಸಂಸ್ಥಾನದ ಹೈಕೋರ್ಟಿನಲ್ಲಿ ಒಟ್ಟು ೩,೯೯೨ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿವೆಯೆಂದೂ, ಅವುಗಳಲ್ಲಿ ೨,೪೧೭ ಹಳೆಯ ಮೈಸೂರಿಗೂ, ೭೭೧ ಬೊಂಬಾಯಿ ಕರ್ನಾಟಕದ ಭಾಗಕ್ಕೂ, ೫೪೬ ಹೈದರಾಬಾದ್ ಕರ್ನಾಟಕಕ್ಕೂ ಮತ್ತು ೨೫೭ ಮದ್ರಾಸ್ ಭಾಗದ ಪ್ರದೇಶಗಳಿಗೂ ಸೇರಿದುವುಗಳೆಂದೂ ಮುಖ್ಯಮಂತ್ರಿಗಳು ನೆನ್ನೆ ವಿಧಾನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು

ದೆಹಲಿಯಲ್ಲಿ ಕನ್ನಡ ಶಾಲೆ ಕಟ್ಟಲು ಸಾಂಡೂರು ರಾಜರಿಂದ ೫,೦೦೦ ರೂ.

ಸಾಂಡೂರು ಸಂಸ್ಥಾನದ ರಾಜಾ ಸಾಹೇಬರವರು, ದೆಹಲಿಯಲ್ಲಿ ಕನ್ನಡ ಶಾಲೆಯೊಂದನ್ನು ಕಟ್ಟಲು ಐದು ಸಹಸ್ರ ರೂ. ಗಳನ್ನು ನೀಡಿರುವರು

○ ಉತ್ತರ ಅಮೆರಿಕದ ವಿಸ್ಕಾನ್ಸಿನ್ ಪ್ರದೇಶದ ಲಾಕ್ರಾಸ್ ಎಂಬಲ್ಲಿ ಮಿಸ್ಸಿಸ್ಸಿಪಿ ನದಿಗೆ ಕಟ್ಟಲಾಗಿರುವ ಸೇತುವೆ ಮೇಲಿರುವ ದೀಪದ ಬೆಳಕಿನಿಂದ ಅನೇಕ ಚಿಟ್ಟೆಗಳು ತುಂಬಿ, ಸೇತುವೆಯನ್ನು ದಾಟುತ್ತಿದ್ದ ವಾಹನಗಳು ಚಿಟ್ಟೆಗಳ ಮೇಲೆ ಹರಿದು ರಸ್ತೆಯು ಜಾರುವಂತಾಗಿ ಒಂದು ಲಾರಿ ಮತ್ತು ಮೂರು ಕಾರುಗಳಿಗೆ ಅಪಘಾತ ಸಂಭವಿಸಿತೆಂದು ಹೇಳಲಾಗಿದೆ. ಈ ಕಾರಣದಿಂದಲೇ ಸೇತುವೆಯನ್ನೇ ಮುಚ್ಚಲಾಯಿತೆಂದೂ ವರದಿಯಾಗಿದೆ

ಇನ್‌ಫ್ಲ್ಯುಯೆಂಜಾದಿಂದ ೫೧೧ ಜನರ ಮರಣ

ಭಾರತದಲ್ಲಿ ಇನ್‌ಫ್ಲ್ಯುಯೆಂಜಾ ಪ್ರಾರಂಭವಾದಂದಿನಿಂದ ಕಳೆದ ೬ನೇ ತಾರೀಖಿನವರೆಗೆ ೫೧೧ ಜನರು ಮರಣ ಹೊಂದಿರುವರೆಂದೂ, ೧೧ ಲಕ್ಷ ಮಂದಿಗೆ ಅದು ತಗಲಿತ್ತೆಂದೂ ಲೋಕಸಭೆಯಲ್ಲಿ ಮೊನ್ನೆ ಆರೋಗ್ಯ ಮಂತ್ರಿ ಶ್ರೀ ಡಿ ಪಿ ಕರ್ಮಾರ್ಕರ್‌ರವರು ತಿಳಿಸಿದರು. ಇನ್ನೇ ಅವರ ಈ ವ್ಯಾಧಿಯು ಹರಡುವುದೆಂಬುದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲವೆಂದೂ ಆದರೂ ಪ್ರಾಂತ ಸರ್ಕಾರಗಳು ಹೆಚ್ಚು ಔಷಧಿ ಮತ್ತು ಚಿಕಿತ್ಸೆ ಸೌಲಭ್ಯಗಳನ್ನು ಏರ್ಪಡಿಸಿಕೊಂಡಿರುವಂತೆ ಸೂಚಿಸಿರುವುದಾಗಿಯೂ ಸಚಿವರು ಹೇಳಿದರು.

ಆಗುಂಬೆಯಲ್ಲಿ ೧೦ ದಿನಗಳಲ್ಲಿ ೭೮ ಅಂಗುಲ ಮಳೆ

ಮೈಸೂರಿನ ಚಿರಾಪುಂಜಿ ಎಂದು ಪ್ರಸಿದ್ಧಿ ಪಡೆದಿರುವ ಮಳೆನಾಡಿನ ಆಗುಂಬೆಯಲ್ಲಿ ಈ ತಿಂಗಳು ೧ನೇ ತಾರೀಖಿನಿಂದ ೧೦ನೇ ತಾರೀಖಿನವರೆಗೆ ಒಟ್ಟು ೭೮ ಅಂಗುಲ ಮಳೆಯಾಗಿ ಶಿವಮೊಗ್ಗದ ನದಿಗಳಲ್ಲಿ ಪ್ರವಾಹ ಬಂದು ತಗ್ಗಿನ ಪ್ರದೇಶಗಳು ನೀರಿನಿಂದ ಸುತ್ತುವರಿಯಲ್ಪಟ್ಟಿವೆಯೆಂದು ವರದಿಯಾಗಿದೆ. ರಸ್ತೆಗಳಲ್ಲಿ ಸಂಚಾರಕ್ಕೆ ಅಡಚಣೆಯಾಗಿದೆ. ಆಗುಂಬೆಯಲ್ಲಿ ವರ್ಷಕ್ಕೆ ೩೪೦-೩೫೦ ಅಂಗುಲ ಮಳೆಯಾಗುವುದು.

ವಿಯಟ್ನಾಮಿಗೆ ಉಪಾಧ್ಯಕ್ಷರ ಭೇಟಿ

ಭಾರತದ ಉಪಾಧ್ಯಕ್ಷ ಡಾ॥ ರಾಧಾಕೃಷ್ಣನ್‌ರವರು ಬರುವ ಸೆಪ್ಟೆಂಬರ್ ಮಧ್ಯ ಭಾಗದಲ್ಲಿ ವಿಯಟ್ನಾಂ ದೇಶಕ್ಕೆ ಭೇಟಿ ಕೊಡುವರು. ಆಲ್ಲಿನ ಅಧ್ಯಕ್ಷ ಹೋಚಿಮಿನ್‌ರವರು ಆ ದಿನ ವರ್ಷ ವಸಂತ ಋತು ದಿನದಲ್ಲಿ ಭಾರತಕ್ಕೆ ಆಗಮಿಸುವರು.

ಮಂಡ್ಯ ಜಿಲ್ಲಾ ಬೋರ್ಡ್ ಸಲಹಾ ಸಮಿತಿ

ಮಂಡ್ಯ ಜಿಲ್ಲಾ ಬೋರ್ಡಿನ ಸಲಹಾ ಸಮಿತಿಯನ್ನು ವಿಶೇಷ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಶ್ರೀಯುತರುಗಳಾದ ಕೆ ಎಂ ಲಿಂಗೇಗೌಡ ಎ ... ದೇವೇಗೌಡ ... ಸಿ ... ಸ್ವಾಮಿ ... ಸಿದ್ದೇಗೌಡ ಜಿ ಪುಟ್ಟಸ್ವಾಮಿ ಬೋರೇಗೌಡ ಹೆಚ್ ಟಿ ... ಕೆ ಎನ್ ಸಬ್ಬೇಗೌಡ ಟಿ ಎಂ ಒಸ್ಲಯ್ಯ ... ಕಂಠಯ್ಯ ಎ ... ಶಿವಲಿಂಗೇಗೌಡ ಆರ್ ಎಂ ಸಿದ್ದಪ್ಪ ಜೆ ... ಸಿದ್ದಪ್ಪ ಲಕ್ಷ್ಮೇಗೌಡ ಮತ್ತು ಕೆ ಟಿ ... ಇವರುಗಳು ಸದಸ್ಯರಾಗಿರುವರು.

ಅಣು ಶಸ್ತ್ರಾಸ್ತ್ರ ನಿಷೇಧದ ಒಪ್ಪಂದಕ್ಕೆ ರಷ್ಯವು ಈಗಲೇ ಸಿದ್ಧ

ಅಣು ಮತ್ತು ಜಲಜನಕ ಬಾಂಬುಗಳನ್ನು ನಿಷೇಧಿಸುವ ಬಗ್ಗೆ ಒಪ್ಪಂದಕ್ಕೆ ಬರಲು ರಷ್ಯವು ಈಗಲೇ ಸಿದ್ಧವಾಗಿದೆಯೆಂದು ರಷ್ಯದ ಅಧಿನಾಯಕ ಕ್ರುಶ್ಚೇವರು ತಿಳಿಸಿರುತ್ತಾರೆ. ಶಸ್ತ್ರಾಸ್ತ್ರಗಳನ್ನು ಕಡಿತ ಮಾಡುವುದು ಮತ್ತು ಅನಂತರದಲ್ಲಿ ಶಸ್ತ್ರ ಸನ್ಯಾಸದ ಬಗ್ಗೆ ಸಾರ್ವತ್ರಿಕ ಒಪ್ಪಿಗೆಗೆ ಬರುವುದರ ಕಡೆಗೆ ರಷ್ಯವು ಪ್ರಯತ್ನಿಸುವುದಾಗಿ ಅವರು ಸೂಚಿಸಿರುವರು.

ಮದ್ರಾಸು ಶಾಸನ ಸಭೆಯಲ್ಲಿ ಸಭಾತ್ಯಾಗ

ಮದ್ರಾಸು ಶಾಸನಸಭೆ ಅಧಿವೇಶನ ಸ್ಥಳವನ್ನು ಇದುವರೆಗೆ ಇದ್ದ ಕಡೆಯಿಂದ ಫೋರ್ಟ್ ಸೇಂಟ್ ಜಾರ್ಜ್ ಎಂಬ ಪ್ರದೇಶಕ್ಕೆ ವರ್ಗಾಯಿಸಿದ ಬಗ್ಗೆ ಸರ್ಕಾರದ ವರ್ತನೆಯನ್ನು ಪ್ರತಿಭಟಿಸಲು ಕಳೆದ ಸೋಮವಾರ ಅಲ್ಲಿನ ಶಾಸನ ಸಭೆಯ ಕಾಂಗ್ರೆಸ್ ಸುಧಾರಣಾ ಪಕ್ಷದವರು ಸಭಾತ್ಯಾಗ ಮಾಡಿದರು. ಈ ಅಧಿವೇಶನದಲ್ಲಿ ಇದು ಮೊದಲನೇ ಬಾರಿ ಆದ ಸಭಾತ್ಯಾಗ. ಇದರಲ್ಲಿ ಇತರ ವಿರೋಧ ಪಕ್ಷದವರು ಸೇರಿರಲಿಲ್ಲ.

ಗಿರಣಿ ಅಕ್ಕಿ ಮೇಲೆ ಸುಂಕ ಹಾಕುವುದಿಲ್ಲ

ಗಿರಣಿಯಲ್ಲಿ ತಯಾರಾಗುವ ಅಕ್ಕಿಯ ಮೇಲೆ ಸುಂಕ ಹಾಕಿ ಅದರಿಂದ ಬರುವ ಹಣವನ್ನು ಕೊಟ್ಟುದ ಅಕ್ಕಿ ... ಉತ್ತೇಜನಕ್ಕಾಗಿ ಕೊಡಬೇಕೆಂಬ ಸಲಹೆಯನ್ನು ಸರ್ಕಾರದವರು ಕೈಬಿಟ್ಟಿರುತ್ತಾರೆ. ಆದರೆ ಕೊಟ್ಟುದ ಅಕ್ಕಿಗೆ ಮಾರಾಟ ತೆರಿಗೆ ವಿನಾಯಿತಿಯನ್ನು ಕೊಡಲು ಆಲೋಚಿಸಲಾಗಿದೆ.

ನೀರಿನ ಕಂದಾಯದ ಏರಿಕೆಗಾಗಿ ಮಂಡ್ಯದ ರೈತರ ಪ್ರತಿಭಟನೆ

ಈ ವರ್ಷದ ... ಕಟ್ಟೆಯಲ್ಲಿ ... ನಂತೆ ನೀರು ಕಂದಾಯವನ್ನು ಹೆಚ್ಚಿಸಿರುವುದಕ್ಕಾಗಿ ಮಂಡ್ಯದಲ್ಲಿ ಕಳೆದ ಗುರುವಾರ ಸೇರಿದ್ದ ರೈತ ಸಭೆಯಲ್ಲಿ ಪ್ರತಿಭಟನಾ ನಿರ್ಣಯ ಮಾಡಲಾಯಿತು. ಸಮಾಜವಾದಿ ಪಕ್ಷದ ... ಶ್ರೀ ಎಸ್ ಗೋಪಾಲಗೌಡರು ... ಸರ್ಕಾರದ ನೀತಿಯನ್ನು ಟೀಕಿಸಿದರು.

ಕಲ್ಕತ್ತದಲ್ಲಿ ರೇವು ನೌಕರರ ಸಾಂಕೇತಿಕ ಮುಷ್ಕರ

ಕಲ್ಕತ್ತದ ರೇವಿನ ೫೦೦೦ ನೌಕರರು ಮೊನ್ನೆ ೬ ಗಂಟೆ ಕಾಲ ಮುಷ್ಕರ ನಡೆಸಿದರು. ಅದರಿಂದ ೬೦ ಹಡಗುಗಳಿಗೆ ತೊಂದರೆಯಾಯಿತು.

ಸಂಕೇಶ್ವರಕ್ಕೆ ಪ್ರವಾಹದ ನೀರು

ಬೆಳಗಾಂ ಜಿಲ್ಲೆಯ ಸಂಕೇಶ್ವರ ಹಳ್ಳಿಗೆ ಹಿರಣ್ಯಕೇಶಿ ನದಿಯ ಪ್ರವಾಹದ ನೀರು ನುಗ್ಗಿದೆ. ಸುತ್ತಗಳ್ಳಿ ಎಂಬಲ್ಲಿ ೬ ಅಡಿ ನೀರು ನಿಂತಿದೆ. ರಸ್ತೆ ಪಕ್ಕದಲ್ಲಿರುವ ಶಂಕರಲಿಂಗ ದೇವಾಲಯವು ನೀರಿನಲ್ಲಿ ಮುಳುಗಿದೆ. ೧೦-೧೫ ಮನೆಗಳು ನೆಲಸಮವಾಗಿವೆ. ಅನೇಕವು ಉರುಳುವ ಸ್ಥಿತಿಯಲ್ಲಿರುವುದರಿಂದ ಜನರು ಊರನ್ನು ಖಾಲಿ ಮಾಡುತ್ತಿರುವರು.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	೩೪ ೮೭	೩೩ ೮೭
ರಸ್ತುಚೂರಿ	೨೮ ೮೭	೩೩ ೦೦
ಬಂಗಾರ ೩	೨೮ ೫೦	೨೯ ೨೫
ಸಂಬಾ ೩	೨೯ ೮೭	
ರಾಗಿ	೨೪ ೩೭	
ಜೋಳ	೪೨ ೨೫	
ಕಡಲೆಕಾಯಿ	೯ ೨೫	೨೦ ೦೦
ಎಳ್ಳು	೭೫ ೦೦	೮೪ ೦೦
ಹರಳುಬೀಜ	೬೦ ೦೦	
ಹೊಂಗೆಬೀಜ	೨ ೭೫	೩೯ ೦೨
ಹುಚ್ಚೆಳ್ಳುಬೀಜ	೧೭ ೨	
ಹುರುಳಿ	೩೩ ೮೭	೩೪ ೭೫
ಹೆಸರು	೩೭ ೦೦	೬೦ ೦೦
ಹಲಸಂದೆ	೩೨ ೦೦	೩೪ ೦೨
ಅವರೆ	೫೪ ೦೦	೫೭ ೦೦
ಧನಿಯ	೨ ೬೨	
ಉದ್ದು	೪೫ ೫೦	
ಹುಣಸೆ ಬೀಜ	೫ ೫	
ಹುಣಸೇಹಣ್ಣು	೩ ೮೭	
ಮೆಣಸಿನಕಾಯಿ	೧ ೦	೧೯ ೦೨
ತೆಂಗಿನಕಾಯಿ	೧೭೫ ೫೦	೨೩೪ ೫೦

ಹೈದರಾಬಾದಿಗೆ ರಾಷ್ಟ್ರಾಧ್ಯಕ್ಷರ ಭೇಟಿ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ದಕ್ಷಿಣ ಭಾರತದಲ್ಲಿ ೧ ತಿಂಗಳ ಪ್ರವಾಸಕ್ಕಾಗಿ ಮೊನ್ನೆ ದೆಹಲಿಯಿಂದ ಹೈದರಾಬಾದಿಗೆ ಹೊರಟರು. ಅವರು ಸಿಕಂದರಾಬಾದಿನ ರಾಷ್ಟ್ರಪತಿ ನಿಲಯದಲ್ಲಿ ತಂಗುವರು. ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಲು ಬರುವ ತಿಂಗಳು ಕೇರಳಕ್ಕೆ ಹೋಗುವರು.

ಪಶ್ಚಿಮ ಪಾಕಿಸ್ತಾನದಲ್ಲಿ ರಷೀದ್ ಖಾನರ ಮಂತ್ರಿಮಂಡಲ

ಪಶ್ಚಿಮ ಪಾಕಿಸ್ತಾನದ ಗವರ್ನರ್ ಗುರ್ಮಾನಿಯವರು ರಿಪಬ್ಲಿಕನ್ ಪಕ್ಷದ ನೂತನ ನಾಯಕ ಸರದಾರ್ ಅಬ್ದುಲ್ ರಷೀದ್ ಖಾನರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿರುತ್ತಾರೆ. ಅದಕ್ಕೆ ಮುಂಚೆ ಡಾ॥ ಖಾನ್ ಸಾಹೇಬರ ರಾಜೀನಾಮೆಯನ್ನು ಅವರು ಅಂಗೀಕರಿಸಿದರು.

ಲಕ್ಷ್ಮಿ ★ 19 7 57ನೇ ಶುಕ್ರವಾರ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ವಿಜಯಾ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ

ಗುಣಸುಂದರಿ

ಪಾತ್ರ —ಜೆಮಿನಿ ಗಣೇಶ್, ಸಾವಿತ್ರಿ, ಸಂಬಿಯಾರ್, ಎಸ್ ವಿ ರಂಗರಾವ್, ಕರುಣಾನಿಧಿ, ಮುಕ್ತುಲಕ್ಷ್ಮಿ ಮುಂತಾದವರು

ಕಡೇ ದಿನ "ಮಿಸ್ಸಮ್ಮ" (ತಮಿಳು)

ಮನೆಗಳು ಬಾಡಿಗೆಗಿವೆ

(ಶಾಲೆ ಹಾಂಗಳಿಗೆ ಮಾತ್ರ)

ಜಯನಗರದಲ್ಲಿ ದೀಪ, ನಲ್ಲಿ ಇರುವ ಮನೆ ಬಾಡಿಗೆ ರೂ 24

ಯಾದವಗಿರಿಯಲ್ಲಿ ದೀಪ ನಲ್ಲಿ ಇರುವ ತಾರಸಿ ಮನೆ ಬಾಡಿಗೆ ರೂ 24

ಬಿ ಎಸ್ ಸುಬ್ಬರಾವ್,

ಜಗನ್ಮೋಹನ ಬಂಗ್ಲಾ ರೋಡ್,

ಮೈಸೂರು

Edited Printed and Published by A R Nagarajan at Sadhvi Press D Subbiah Road Mysore

SREE GAYATHRI

TALKIES

From 18 7 5 For 3 days

THE INDIAN FIGHTER

With Kirk Douglas

(Cinemascope & Technicolor)

Morning Shows Sat & Sun

WITNESS TO MURDER

ರಣಜಿತ್ 19 7 57ರಿಂದ ೩ನೇ ಮತ್ತು ಕಡೆಯ ವಾರ

ಸಾದಿಕ್‌ರವರ

— ಮುನಿಯಾ ರಂಗ್ ರಂಗೇಲಿ —

ಪಾತ್ರ — ಜಾನಿ ವಾಕರ್, ಶ್ಯಾಮಾ, ಶಕೀಲಾ ಮುಂತಾದವರು

ಗೋಣಿ ಚೀಲಗಳು, ಟಿನ್ನುಗಳು, ಜಾಯಿಂಟಾಯಿ ಮರದ ಪೆಟ್ಟಿಗೆಗಳು

ಮಾರಾಟಕ್ಕಿವೆ

ಸೆಕ್ರೆಟರಿ ರೈಲ್ವೆ ಎಂಪ್ಲಾಯೀಸ್ ಕನ್ಸೂಮರ್ಸ್ ಕೋ ಆಪರೇಟಿವ್ ಸ್ಟೋರ್ಸ್ ರೈಲ್ವೆ ಕಛೇರಿಗಳ ಹಿಂಭಾಗ ಹೊಸ ಸಂತೆಪೇಟೆ ರಸ್ತೆ ಮೈಸೂರು ಇವರಲ್ಲಿ ವಿಚಾರಿಸಿರಿ

ನ್ಯೂ ಅಪೇರಾ ಟಾಕೀಸ್, ಮೈಸೂರು

19 7 57ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವೂ ಮೂರು ಪ್ರದರ್ಶನಗಳು

ಸಿಟಾಡೆಲ್‌ರವರ ಅಮೋಘ ಸಂಗೀತಮಯ ಸಾಮಾಜಿಕ ತಮಿಳು ಚಿತ್ರ ★ ಮಲ್ಲಿಕಾ

ಭೂಮಿಕೆ — ಪದ್ಮಿನಿ ಆರ್ ಗಣೇಶ್, ಎಂ ಎನ್ ರಾಜಂ, ತಂಗವೇಲು, ಮತ್ತು ಟಿ ಎಸ್ ಬಾಲಯ್ಯ ಮುಂತಾದವರು

ದಿಗ್ದರ್ಶಕ ಜೋಸೆಫ್ ತಳಿಯತ್ (ಜೂನಿಯರ್) - [FAIR FILMS RELEASE

ಟೆಲಿಫೋನ್ ನಂ 741 — — ಟೆಲಿಗ್ರಾಂ ಆಹಾರ

ನ್ಯೂ ಚಾಮುಂಡೇಶ್ವರಿ ಕೆಫೆ,

ಇರ್ವಿನ್ ರಸ್ತೆ ಮೈಸೂರು

ತಾ॥ 10 7-1957 ರಿಂದ ರಿಯಾಯಿತಿ ದರ

ವಿದ್ಯಾರ್ಥಿಗಳಿಗೂ ಖಾಯಂ ಗಿರಾಕಿಗಳಿಗೂ ಊಟದ 30 ಟಿಕೆಟ್ಟುಗಳ ಪುಸ್ತಕಕ್ಕೆ ರೂ 16 50 ಮಾತ್ರ

ಪ್ರೊ॥ ಸಿ ಬಿ ಎಂ ಚಂದ್ರಯ್ಯ

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

19—7—57ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ನವಯುಗ ಫಿಲ್ಮ್ಸ್‌ರವರ ತೆಲುಗು ಚಿತ್ರ ★ "ಜ್ಯೋತಿ" ★

ಪಾತ್ರ — ಜಿ ವರಲಕ್ಷ್ಮಿ, ಸಾವಿತ್ರಿ, ಶಿವರಾವ್, ಕಸ್ತೂರಿ, ನಾಗಭೂಷಣಂ ಮುಂತಾದವರು

ಚಾಮುಂಡೇಶ್ವರಿ ಟಾಕೀಸ್ ★

19—7—57ರಿಂದ ಅಮೋಘ ಪ್ರಾರಂಭ ಪ್ರತಿ ದಿನ ಮೂರು ಪ್ರದರ್ಶನಗಳು

ಜಗನ್ನಾಥ್ ಪಿಕ್ಚರ್ಸ್‌ರವರ ನಕ್ಕು ನಲಿಸುವ ಕನ್ನಡ ಸಾಮಾಜಿಕ ಚಿತ್ರ

★ ಶುಕ್ರದೆಶೆ ★

ಪಾತ್ರ — ಟಿ ಕೆ ಬಾಲಚಂದರ್, ಸೂರ್ಯಕಲಾ, ಬಾಲಕೃಷ್ಣ, ಆದವಾನಿ ಲಕ್ಷ್ಮೀದೇವಿ, ಗಮಾಬಾಯಿ ಗಣಪತಿ ಭಟ್ಟ, ರಾಮಚಂದ್ರಶಾಸ್ತ್ರಿ ಮುಂತಾದವರು

[ವಿಜಯಾ ಟಾಕೀ ಡಿಸ್ಟ್ರಿಬ್ಯೂಟರ್ಸ್ ರಿಲೀಸ್

ಸಿಂಗರ್ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಫ್ರೀ ಪಾಸು ಮೊದಲಾದ ರಿಯಾಯಿತಿಗಳನ್ನು ಮನ್ನಾ ಮಾಡಲಾಗಿದೆ

ರಿಜಿಸ್ಟರ್ಡ್ ನಂ 792

ಇಂದಿನ ಪತ್ರಿಕೆ 2 ನಯಾ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೧೫] SADHVI : FRIDAY 19—7—1957 ಮೈಸೂರು : ಶುಕ್ರವಾರ ೧೯—೭—೧೯೫೭ : [ಸಂಚಿಕೆ ೬೪೧

ಶಾಸನ ಸಭೆ ವಿರೋಧ ಪಕ್ಷದ ೫೪ ಸದಸ್ಯರ ಸಭಾತ್ಯಾಗ

ಶಾಸನ ಸಭೆಯಲ್ಲಿ ವಿರೋಧ ಪಕ್ಷದವರ ಸಭಾ ಪರಿತ್ಯಾಗ

ಸ್ವತಂತ್ರ ಉಮೇದುವಾರರನ್ನು ಉಪಾಧ್ಯಕ್ಷತೆಗೆ ಚುನಾಯಿಸದಿದ್ದುದಕ್ಕೆ ಪ್ರತಿಭಟನೆ

(ಸ್ವಂ ಸು ಸಂ) ಬೆಂಗಳೂರು ೧೯

ಸ್ವತಂತ್ರ ಉಮೇದುವಾರರಾದ ಶ್ರೀ ಮುಕ್ಕಣ್ಣಪ್ಪನವರನ್ನು ಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಆರಿಸಲು ಕಾಂಗ್ರೆಸ್ ಪಕ್ಷದವರು ಒಪ್ಪದಿದ್ದುದಕ್ಕಾಗಿ ಪ್ರತಿಭಟನೆಯನ್ನು ಸೂಚಿಸಲು ಈ ದಿನ ಶಾಸನ ಸಭೆಯ ವಿರೋಧ ಪಕ್ಷದ ೫೬ ಸದಸ್ಯರ ಪೈಕಿ ೫೪ ಜನರು ಸಭಾ ಪರಿತ್ಯಾಗ ಮಾಡಿದರು. ಶ್ರೀಮತಿ ನಾಗರತ್ನಮ್ಮ ಮತ್ತು ಶ್ರೀಗಳಾದ ಚನ್ನಸ್ವಾಮಿ ಮತ್ತು ಕಾರ್ಟರ್‌ರವರು ಸಭೆಯಲ್ಲಿಯೇ ಇದ್ದರು

ಅರ್ಧ ಗಂಟೆನಂತರ, ಹೊರಗೆ ಹೋಗಿದ್ದ ಸದಸ್ಯರು ಸಭೆಗೆ ಹಿಂದಿರುಗಿದರು

ಅನಂತರ ಶ್ರೀ ತಿಮ್ಮಾರೆಡ್ಡಿಯವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು ಇದಕ್ಕೆ ಮುಂಚೆ ವಿರೋಧ ಪಕ್ಷದ ಸದಸ್ಯರೂ ಮತ್ತು ಕಮ್ಯೂನಿಸ್ಟರಾದ ನರಸಿಂಹೈರವರೂ ಕಾಂಗ್ರೆಸ್ ಪಕ್ಷದ ನಾಯಕರಿಗೆ ಮನವಿ ಮಾಡಿ ಈ ಚುನಾವಣೆಯಲ್ಲಿ ಉತ್ತಮ ಸಂಪ್ರದಾಯವನ್ನು ಬೆಳೆಸುವಂತೆ ಕೋರಿದ್ದರು

ಹೈಕೋರ್ಟಿಗೆ ಉರ್ದು ಬಲ್ಲ ನ್ಯಾಯಾಧೀಶರು

ಸಂಸ್ಥಾನದ ಹೈಕೋರ್ಟಿಗೆ ಉರ್ದು ಬಲ್ಲ ನ್ಯಾಯ ಮೂರ್ತಿಯೊಬ್ಬರನ್ನು ನೇಮಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ವಿಧಾನ ಸಭೆಯಲ್ಲಿ ಶ್ರೀ ಅಣ್ಣಾರಾವ್ ಗಣಮುಖಿಯವರ ಪ್ರಶ್ನೆಗೆ ಉತ್ತರವಿತ್ತು ತಿಳಿಸಿದರು.

ತೆರಿಗೆ ಕೊಡದೆ ತಪ್ಪಿಸಿ ಕೊಳ್ಳುವವರ ಮೇಲೆ ಕ್ರಮ

ಲೋಕ ಸಭೆಯಲ್ಲಿ ಸದ್ಯದಲ್ಲೇ ಮಸೂದೆ

ತೆರಿಗೆಗಳನ್ನು ಕೊಡದೆ ತಪ್ಪಿಸಿಕೊಳ್ಳುವುದನ್ನು ತಡೆಗಟ್ಟಲು ಈಗಿರುವ ಶಾಸನಗಳ ತಿದ್ದುಪಡಿ ಮಸೂದೆಯನ್ನು ಆದಷ್ಟು ಬೇಗನೆ ಲೋಕ ಸಭೆಯ ಮುಂದೆ ತರಲಾಗುವುದೆಂದು ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ ಕೃಷ್ಣಮಾಚಾರಿಯವರು ಮೊನ್ನೆ ತಿಳಿಸಿದರು ಈಗಿರುವ ಶಾಸನವು ತೆರಿಗೆ ತಪ್ಪಿಸಿಕೊಳ್ಳುವವರಿಗೆ ಬಹಳ ಅನುಕೂಲವಾಗಿರುವುದೆಂದೂ, ಅಂತಹವರಿಗೆ ಬಲವಾದ ಶಿಕ್ಷೆ ವಿಧಿಸಬೇಕೆಂದೂ ಸಚಿವರು ನುಡಿದರು ಅಂತಹವರ ಸಂಖ್ಯೆಯು ಬಹಳ ಹೆಚ್ಚಾಗಿರುವುದೆಂದೂ, ಹೊಸ ಶಾಸನದ ಮೂಲಕ ತೆರಿಗೆ ತಪ್ಪಿಸಿಕೊಳ್ಳುವುದನ್ನು ಬಹಳವಾಗಿ ಕಡಿಮೆ ಮಾಡಲಾಗುವುದೆಂದೂ ಅವರು ಸೂಚಿಸಿದರು.

ಸಿವಿಲ್ ಏವಿಯೇಷನ್ ನೌಕರರಿಂದಲೂ ಮುಷ್ಕರ

ವೇತನ ಸಮಿತಿಯ ರಚನೆ ಮುಂತಾದ ತಮ್ಮ ಕೆಲವು ಬೇಡಿಕೆಗಳನ್ನು ಆಗಸ್ಟ್ ೨ನೇ ತಾರೀಖಿನೊಳಗೆ ಈಡೇರಿಸದಿದ್ದರೆ, ಆಗಸ್ಟ್ ೮ ರಿಂ ಮುಷ್ಕರ ಹೂಡುವುದಾಗಿ ಸಿವಿಲ್ ಏವಿಯೇಷನ್ ಶಾಖೆಯ ನೌಕರರು ಸರ್ಕಾರಕ್ಕೆ ಸೂಚನೆಯಿತ್ತಿದ್ದಾರೆಂದು ವರದಿಯಾಗಿದೆ

ಅಂಚೆ ಮತ್ತು ತಂತಿ ನೌಕರರಿಗೆ ಹಲವು ರಿಯಾಯಿತಿಗಳು

ಲೋಕ ಸಭೆಯಲ್ಲಿ ಸಚಿವ ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೇಳಿಕೆ

ಅಂಚೆ ಮತ್ತು ತಂತಿ ಇಲಾಖಾ ನೌಕರರ ಮುಷ್ಕರದ ಬಗ್ಗೆ ಕೇಂದ್ರ ಸರ್ಕಾರಿ ಮತ್ತು ಸಂಪರ್ಕ ಶಾಖಾ ಸಚಿವ ಲಾಲ್ ಬಹದ್ದೂರ್ ಶಾಸ್ತ್ರಿಯವರು ಲೋಕ ಸಭೆಯಲ್ಲಿ ನಿನ್ನೆ ಹೇಳಿಕೆಯೊಂದನ್ನಿತ್ತು, ನೌಕರರಿಗೆ ಹಲವು ರಿಯಾಯಿತಿಗಳನ್ನು ಕೊಡುವುದಾಗಿ ತಿಳಿಸಿದರು

ಅದರ ಪ್ರಕಾರ ಅಂಚೆ ಮತ್ತು ತಂತಿ ಇಲಾಖೆಯ ಮೂರು ಮತ್ತು ನಾಲ್ಕನೆ ದರ್ಜೆಯ ನೌಕರರ ರಜಾ ನಿಯಮ, ವೈದ್ಯಕೀಯ ಸೌಕರ್ಯ ಮತ್ತು ನಿವೃತ್ತಿ ವೇತನಗಳ ಬಗ್ಗೆ ಇರುವ ವ್ಯತ್ಯಾಸವು ರದ್ದಾಗುವುದು ರೈಲ್ವೆ ಮೆಯಿಲ್ ಮತ್ತು ಡೆಡ್ ಲೆಟರ್ ಕಛೇರಿ ನೌಕರರಿಗೆ ೬೦ ೧೭೦ರಿಂದ ೧೩೦ ೨೫೦ಕ್ಕೆ ಪ್ರಧಾನ ಅಂಚೆ ಕಛೇರಿ ನೌಕರರಿಗೆ ೧೬೦ ೨೫೦ ರಿಂದ ೨೫೦-೩೮೦ಕ್ಕೆ ಸಂಬಳವನ್ನು ಏರಿಸಲಾಗುವುದು ಹಲವು ಪಟ್ಟಣಗಳಲ್ಲಿ ಇನ್ನು ಮುಂದೆ ಮನೆ ಬಾಡಿಗೆ ಭತ್ಯ ನೀಡಲಾಗುವುದು ಈಗಿನ ಭತ್ಯವನ್ನು ಹೆಚ್ಚಿಸಲಾಗುವುದು ನೌಕರರ ಹಿತ ರಕ್ಷಣಾ ಮಂಡಲಿಯೊಂದನ್ನು ಸ್ಥಾಪಿಸಲಾಗುವುದು

ವೇತನ ಸಮಿತಿಯ ರಚನೆ ಮತ್ತು ತಾತ್ಕಾಲಿಕವಾಗಿ ಸಂಬಳ ಮತ್ತು ತುಟ್ಟಿಭತ್ಯವನ್ನು ಏರಿಸಿ ಅವೆರಡನ್ನೂ ಒಟ್ಟಿಗೆ ಸೇರಿಸುವ ಪ್ರಶ್ನೆಯನ್ನು ಅಂಚೆ ಇಲಾಖಾ ನೌಕರರ ಬಗ್ಗೆ ಮಾತ್ರ ಪರಿಶೀಲಿಸಲು ಸಾಧ್ಯವಿಲ್ಲವೆಂದೂ, ಇತರ ಇಲಾಖೆಗಳವರಿಗೂ ಅನ್ವಯವಾಗುವಂತಿರಬೇಕೆಂದೂ ಸಚಿವರು ಹೇಳಿ, ಮುಷ್ಕರವನ್ನು ಕೈಗೊಳ್ಳುವುದರಿಂದ ಅನರ್ಥ ಉಂಟಾಗಬಹುದೆಂದೂ, ಆದ್ದರಿಂದ ನೌಕರರು ಆ ಕ್ರಮವನ್ನು ಕೈಗೊಳ್ಳಬಾರದೆಂದೂ ಸೂಚಿಸಿದರು

ಪಶ್ಚಿಮ ಪಾಕಿಸ್ತಾನದಲ್ಲಿ ಸರ್ಕಾರಿ ನೌಕರರಿಗೆ ಬಳುವಳಿ ಭತ್ಯ

ಪಶ್ಚಿಮ ಪಾಕಿಸ್ತಾನದಲ್ಲಿ ಜವಾನರೇ ಮುಂತಾದ ನಾಲ್ಕನೆ ದರ್ಜೆಯ ನೌಕರರು ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡುವಾಗ ಅವರಿಗೆ ಸಲಾ ನೂರು ರೂ ಗಳನ್ನು ಕೊಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ

ಮಾಸ್ಕೋವಿಗೆ ಡಾ|| ಮೋದಿಯವರ ಪ್ರಯಾಣ

ಸಂಸ್ಥಾನದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ|| ಎಂ ಸಿ ಮೋದಿಯವರು ಮೊನ್ನೆ ಶಾಬೂಲು ಮಾರ್ಗವಾಗಿ ಮಾಸ್ಕೋವಿಗೆ ವಿಮಾನದಲ್ಲಿ ತೆರಳಿದರು. ಅವರನ್ನು ಮಾಜಿ ಮಂತ್ರಿ ಟಿ ಸಿದ್ದಲಿಂಗಯ್ಯ, ಮೇಯರ್ ಚೆನ್ನಾಭಾಯಿ ದೇಸಾಯಿ ಮುಂತಾದವರು ಬೀಳ್ಕೊಟ್ಟರು ಅವರು ರಷ್ಯಾ ಸರ್ಕಾರದ ಅತಿಥಿಗಳಾಗಿರುವರು ಮಾಸ್ಕೋವಿನಲ್ಲಿ ನಡೆಯುವ ಯುವಕರ ಹಬ್ಬದಲ್ಲಿ ಅವರು ಭಾಗವಹಿಸುವರು

ಶಸ್ತ್ರ ಚಿಕಿತ್ಸೆ ಮೂಲಕ ಸಂತಾನ ಸಂಯಮ

ಶಸ್ತ್ರ ಚಿಕಿತ್ಸೆ ಮೂಲಕ ಸಂತಾನ ಸಂಯಮವನ್ನು ಜಾರಿಗೆ ತರುವುದರಲ್ಲಿ ಖಾಸಗಿ ವೈದ್ಯರಿಗೆ ಪ್ರೋತ್ಸಾಹ ನೀಡಲು ಮದ್ರಾಸ್ ಸರ್ಕಾರದವರು ನಿರ್ಧರಿಸಿರುತ್ತಾರೆ ಪ್ರತಿ ಶಸ್ತ್ರ ಚಿಕಿತ್ಸೆಗೂ ವೈದ್ಯರಿಗೆ ೨೫ ರೂ ಕೊಡಲಾಗುವುದು ೨೦೦ ರೂ ಮತ್ತು ಕಡಿಮೆ ವರಮಾನ ಬರುವವರಿಗೆ ಚಿಕಿತ್ಸೆ ಮಾಡಿದರೆ ಈ ಸಂಭಾವನೆಯು ದೊರೆಯುವುದು. ಒಂದು ವರ್ಷ ಜಾರಿಯಲ್ಲಿರುವ ಈ ಯೋಜನೆಗಾಗಿ ೨೫ ೦೦೦ ರೂ ಗಳನ್ನು ಒದಗಿಸಲಾಗುವುದು

ಸರ್ಕಾರಕ್ಕೆ ಬಸ್ ಕೆಲಸಗಾರರ ಸಂಘದ ಮನವಿ

ಜಿಲ್ಲಾ ಬಸ್ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಶ್ರೀ ಟಿ ಎಸ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆದು, ಗಾಯತ್ರಿ, ಸಿದ್ಧಲಿಂಗೇಶ್ವರ, ಕಾರವಾರ್, ಸಿ ಎ ಆರ್, ಸದಾನಂದ ವೆಂಕಟೇಶ್ವರ, ಅಲ್ಲಮ ಮತ್ತು ಇತರ ಬಸ್ ಸರ್ವಿಸ್ಸುಗಳ ಮಾಲೀಕರು ತಮ್ಮ ಬಸ್ಸು ಲೈನುಗಳನ್ನು ಮದ್ರಾಸು ಪ್ರಾಂತದವರಿಗೆ ಮಾರಿರುವುದನ್ನು ಖಂಡಿಸಿ ಆ ಲೈನುಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂದು ಕೋರಿತು ಅವುಗಳ ಕೆಲಸಗಾರರಿಗೆ ನಿರುದ್ಯೋಗವುಂಟಾಗುವುದನ್ನು ತಪ್ಪಿಸಬೇಕೆಂದೂ ಒತ್ತಾಯಪಡಿಸಲಾಯಿತು ಸರ್ಕಾರಿ ಬಸ್ಸುಗಳು ಓಡಾಡುವ ಲೈನುಗಳಲ್ಲಿ ಹಿಂದೆ ಇದ್ದ ಸರ್ವಿಸ್ಸುಗಳ ಬಸ್ ಕೆಲಸಗಾರರಿಗೆ ಉದ್ಯೋಗ ಕಲ್ಪಿಸಬೇಕೆಂದೂ ಮನವಿ ಮಾಡಲಾಯಿತು

ಅರ್ಜಿಗಳಿಗಾಗಿ ಅಡ್ವೊಕೇಟ್ ಜನರಲ್ಲರ ರುಸುಂ ನಿಗದಿ

ರಿಟ್ ಅರ್ಜಿಗಳು, ದಾಖಲೆಗಳ ಪರಿಶೀಲನೆ ಮುಂತಾದುವುಗಳಿಗಾಗಿ ಅಡ್ವೊಕೇಟ್ ಜನರಲ್ಲರ ರುಸುಂ ಅನ್ನು ರಾಜ್ಯಪಾಲರು ಗೊತ್ತುಪಡಿಸಿರುತ್ತಾರೆ ಅದರ ಪ್ರಕಾರ ಸಿವಿಲ್ ಮತ್ತು ರಿಟ್ ಅರ್ಜಿಗಳಿಗೆ ೬೦ ರೂ ಮತ್ತು ಸಿವಿಲ್ ರಿವಿಜನ್ ಅರ್ಜಿಗಳಿಗೆ ೧೦೦ ರೂ. ಎಂದು ನಿರ್ಧರಿಸಲಾಗಿದೆ ದಾಖಲೆಗಳ ಪರಿಶೀಲನೆ ೫೦ ಮತ್ತು ೧೦೦ ರೂ ಗಳನ್ನು ಗೊತ್ತುಮಾಡಲಾಗಿದೆ.

ರಾ ಜೇ ಶ್ರೀಯವರು ಮೈಸೂರಿಗೆ ವಾಪಸು

ಶ್ರೀ ಆರ್. ವಿ ಶ್ರೀನಿವಾಸಮೂರ್ತಿಯವರು ತಮ್ಮ ವಿದೇಶ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿಕೊಂಡು ನಾಳೆ ಬೊಂಬಾಯಿಗೆ ಆಗಮಿಸುವರು ೨೨ನೇ ತಾ|| ಬೆಂಗಳೂರಿಗೆ ಬಂದುಮಾರನೇ ದಿನ ಮೈಸೂರನ್ನು ತಲುಪುವರು ೨೭ನೇ ತಾರೀಖು ಅವರು ಬರ್ಮಾಕ್ಕೆ ಹೋಗುವ ಸಂಭವವಿದೆ

ಕೇರಳದಲ್ಲಿ ಕೆಂಪು ಮಳೆ

ಮಲಬಾರಿನ ಪೈನಾಡ್ ಪ್ರದೇಶದಲ್ಲಿ ಮೊನ್ನೆ ಕೆಂಪು ಬಣ್ಣದ ಮಳೆಯಾಯಿತೆಂದೂ, ಬಿದ್ದ ಸ್ವಲ್ಪ ಹೊತ್ತಿನ ಮೇಲೆ ಮಳೆಯ ನೀರು ಹಳದಿ ಬಣ್ಣಕ್ಕೆ ತಿರುಗಿತೆಂದೂ ವರದಿಯಾಗಿದೆ ಆ ಬಗ್ಗೆ ಪರೀಕ್ಷೆ ನಡೆಸಲು ಸ್ವಲ್ಪ ನೀರನ್ನು ಕೇಂದ್ರ ಸಂಶೋಧನಾ ಶಾಲೆಗೆ ಕಳುಹಿಸಲಾಗಿದೆ.

ಅಣು ಶಸ್ತ್ರಗಳ ಪೂರ್ಣ ನಿಷೇಧಕ್ಕೆ ಬ್ರಿಟನ್ನಿನ ವಿರೋಧ

ಅಣು ಶಸ್ತ್ರಗಳ ಮೇಲೆ ಸಂಪೂರ್ಣ ನಿಷೇಧವನ್ನು ವಿಧಿಸುವುದು ಸಾಧ್ಯವಿಲ್ಲವೆಂದು ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲ್ಲನ್ನರು ತಿಳಿಸಿರುತ್ತಾರೆ ಅವುಗಳ ತಯಾರಿಗಾಗಿ ಬಳಸುವ ಯುರೇನಿಯಂ ವಸ್ತುವಿನ ಉತ್ಪನ್ನದ ಲೆಕ್ಕವು ಸಿಕ್ಕಿ ಅದರ ಮೇಲೆ ಹತೋಟಿ ಪಡೆಯುವವರೆಗೂ ಶಸ್ತ್ರಗಳನ್ನು ನಿಷೇಧಿಸುವುದು ಸಾಧ್ಯವಾಗಲಾರದೆಂದು ಅವರು ಹೇಳಿರುವರು

ಪಾಕಿಸ್ತಾನಿಗಳಿಂದ ಭಾರತದ ಖೋಟಾ ನೋಟುಗಳ ತಯಾರಿಕೆ

ಲಾಹೋರಿಗೆ ೪೫ ಮೈಲಿ ದೂರದಲ್ಲಿ ಭಾರತದ ಗಡಿ ಬಳಿ ಇರುವ ಕಸೂರ್ ಎಂಬಲ್ಲಿ ಭಾರತದ ೧೦೦ ರೂ ಬೆಲೆಯ ಖೋಟಾ ನೋಟುಗಳನ್ನು ತಯಾರಿಸುತ್ತಿದ್ದುದನ್ನು ಅಲ್ಲಿನ ಪೊಲೀಸರು ಪತ್ತೆ ಹಚ್ಚಿ ಅವರಲ್ಲಿ ತೊಡಗಿದ್ದ ತಂಡವೊಂದನ್ನು ಬಂಧಿಸಿ ಅವರಿಂದ ೧೧,೦೦೦ ರೂ ಬೆಲೆಯ ಖೋಟಾ ನೋಟುಗಳನ್ನು ವಶಪಡಿಸಿಕೊಂಡರೆಂದು ವರದಿಯಾಗಿದೆ

ಮುಷ್ಕರಕ್ಕಾಗಿ ರೈಲ್ವೆ ನೌಕರರ ಸಿದ್ಧತೆ

ತಮ್ಮ ಬೇಡಿಕೆಗಳು ಈಡೇರದಿದ್ದಲ್ಲಿ ಮುಷ್ಕರ ನಡೆಸಲು ತೀರ್ಮಾನಿಸಿರುವ ಅಖಿಲ ಭಾರತ ರೈಲ್ವೆ ನೌಕರರ ಫೆಡರೇಷನ್ನಿನವರು ಆ ಬಗ್ಗೆ ಸಿದ್ಧತೆಗಳನ್ನು ಮಾಡಿಕೊಳ್ಳಲು ಆಗಸ್ಟ್ ೧೧ ರಿಂದ ೧೩ರ ವರೆಗೆ ಪೂಣೆಯಲ್ಲಿ ವಿಶೇಷ ಸಮ್ಮೇಳನವೊಂದನ್ನು ಏರ್ಪಡಿಸಲಿರುವರೆಂದು ವರದಿಯಾಗಿದೆ

ಹೈಕೋರ್ಟಿನಲ್ಲಿ ೩,೯೯೨ ಇತ್ಯರ್ಥವಾಗದ ಮೊಕದ್ದಮೆಗಳು

ಸಂಸ್ಥಾನದ ಹೈಕೋರ್ಟಿನಲ್ಲಿ ಒಟ್ಟು ೩,೯೯೨ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿವೆಯೆಂದೂ, ಅವುಗಳಲ್ಲಿ ೨ ೪೭೭ ಹಳೆಯ ಮೈಸೂರಿಗೂ, ೨೧ ಬೊಂಬಾಯಿ ಕರ್ನಾಟಕದ ಭಾಗಕ್ಕೂ, ೫೪೦ ಹೈದರಾಬಾದ್ ಕರ್ನಾಟಕಕ್ಕೂ ಮತ್ತು ೨೮೨ ಮದ್ರಾಸ್ ಭಾಗದ ಪ್ರದೇಶಗಳಿಗೂ ಸೇರಿರುವುವೆಂದೂ ಮುಖ್ಯ ಮಂತ್ರಿಗಳು ನೆನ್ನೆ ವಿಧಾನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು

ದೆಹಲಿಯಲ್ಲಿ ಕನ್ನಡ ಶಾಲೆ ಕಟ್ಟಲು ಸಂಡೂರು ರಾಜರಿಂದ ೫,೦೦೦ ರೂ

ಸಂಡೂರು ಸಂಸ್ಥಾನದ ರಾಜಾ ಸಾಹೇಬರವರು ದೆಹಲಿಯಲ್ಲಿ ಕನ್ನಡ ಶಾಲೆಯೊಂದನ್ನು ಕಟ್ಟಲು ಐದು ಸಹಸ್ರ ರೂ ಗಳನ್ನು ನೀಡಿರುವರು

ಉತ್ತರ ಅಮೆರಿಕದ ವಿಸ್ಕಾನ್ಸಿನ್ ಪ್ರದೇಶದ ಲಾಕ್ರಾಸ್ ಎಂಬಲ್ಲಿ ಮಿಸ್ಸಿಸ್ಸಿಪಿ ನದಿಗೆ ಕಟ್ಟಲಾಗಿರುವ ಸೇತುವೆ ಮೇಲಿರುವ ದೀಪದ ಬೆಳಕಿನಿಂದ ಅನೇಕ ಚಿಟ್ಟೆಗಳು ತುಂಬಿ, ಸೇತುವೆಯನ್ನು ಹಾಯ್ದು ಹೋಗುವ ವಾಹನಗಳು ಚಿಟ್ಟೆಗಳ ಮೇಲೆ ಹರಿದು ರಸ್ತೆಯು ಜಾರುವಂತಾಗಿ ಒಂದು ಲಾರಿ ಮತ್ತು ಮೂರು ಕಾರುಗಳಿಗೆ ಅಪಘಾತ ಸಂಭವಿಸಿತೆಂದು ಹೇಳಲಾಗಿದೆ ಈ ಕಾರಣದಿಂದಲೇ ಸೇತುವೆಯನ್ನೇ ಮುಚ್ಚಲಾಯಿತೆಂದೂ ವರದಿಯಾಗಿದೆ

ಗುಮಾಸ್ತರ ಹುದ್ದೆಗಳಿಗೆ ಅರ್ಹತೆ ಮತ್ತು ವಯೋಮಿತಿ

ರಾಮಸ್ವಾಮಿ ಮುದಲಿಯಾರರ ಸಮಿತಿ ಶಿಫಾರಸಿಗೆ ಒಪ್ಪಿಗೆ

ಬೆಂಗಳೂರು ೧೧

ಪ್ರಥಮ ಮಿಶ್ರ ಮತ್ತು ಕಡಿಮೆ ದರ್ಜೆಯ ಗುಮಾಸ್ತರ ಹುದ್ದೆಗಳಿಗೆ ಬರುವವರ ವಯಸ್ಸು ಮತ್ತು ವಿದ್ಯಾ ಅರ್ಹತೆ ಬಗ್ಗೆ ಎ ರಾಮಸ್ವಾಮಿ ಮುದಲಿಯಾರ್ ಸಮಿತಿಯವರ ಶಿಫಾರಸನ್ನು ಸರ್ಕಾರದವರು ಒಪ್ಪಿರುತ್ತಾರೆ. ಮೊದಲನೇ ವರ್ಗದವರಿಗೆ ಇಂಟರ್‌ಮೀಡಿಯೆಟ್ ಅಥವಾ ಪ್ರೀ-ಯೂನಿವರ್ಸಿಟಿ ಮತ್ತು ಎರಡನೆಯದಕ್ಕೆ ಎಸ್. ಎಸ್. ಎಲ್. ಸಿ. ಆಗಿರಬೇಕೆಂದು ಗೊತ್ತು ಮಾಡಲಾಗಿದೆ

೧೯೫೯ರ ಜುಲೈ ೧ ರವರೆಗೆ ಸಾರ್ವತ್ರಿಕ ಸ್ಥಾನಗಳವರ ವಯೋಮಿತಿಯು ೨೫ ಮತ್ತು ನಿಮ್ನ ವರ್ಗದವರದು ೨೮ ಇರುವುದು ಮುಂದೆ ಸ್ಕೂಲ್ ಫೈನಲ್ಲಿನಿಂದ ಮುಂದುವಂದವರಿಗೆ ೨೧ ಮತ್ತು ನಿಮ್ನ ವರ್ಗದವರಿಗೆ ೨೪ ಮತ್ತು ಹಿಂದುಳಿದವರಿಗೆ ೨೩ ವಯಸ್ಸನ್ನೂ; ಇಂಟರ್ ಆದವರಿಗೆ ೨೨, ೨೬ ಮತ್ತು ೨೪ ವಯಸ್ಸನ್ನೂ ನಿಗದಿ ಮಾಡಲಾಗಿದೆ

೮೦ ಗೋವುಗಳೊಡನೆ ಸನ್ಯಾಸಿಯ ಪ್ರವಾಸ

ಬಿಹಾರಿನ ಭಕ್ತಿಯಾರಪುರದ ಬಳಿ ಬಾಬಾ ಹರಿಹರದಾಸ್ ಎಂಬ ಪರಿವ್ರಾಜಕ ಸನ್ಯಾಸಿಯೊಬ್ಬರು ೮೦ ಹಸುಕರುಗಳೊಡನೆ ಬಿಹಾರ ಮಾಡುತಿರುವರು ಆ ಜಾನುವಾರುಗಳನ್ನು ಯಾರಾದರೂ ಕೇಳಿದರೆ ಒಂದೇ ಷರತ್ತಿನ ಮೇಲೆ ಅವರು ಕೊಡಲು ಸಿದ್ಧವಾಗಿರುವರು ತೆಗೆದುಕೊಳ್ಳುವವರಾರೂ ಅದನ್ನು ಕೊಲ್ಲಕೂಡದು, ಮಾರಲಾಗದು ಅಥವಾ ಅವುಗಳ ಹಾಲನ್ನು ಕರೆಯಬಾರದು-ಎಂಬುದೇ ಆ ಷರತ್ತು ಕರುಗಳು ಮಾತ್ರ ಹಸುವಿನ ಹಾಲನ್ನು ಸೇವಿಸಬಹುದು. ಪ್ರತಿಯೊಂದು ಹಸುವಿಗೂ ಒಂದೊಂದು ಹೆಸರನ್ನಿಡಲಾಗಿದೆ ಅವುಗಳು ಸನ್ಯಾಸಿಯ ಹಿಂದೆ ಸಾಲಾಗಿ ನಡೆಯುತ್ತವೆ. ಅವು ಕಳೆದ ೧೫ ದಿನಗಳಲ್ಲಿ ೧೦೦ ಹಳ್ಳಿಗಳಿಗೆ ಹೋಗಿದ್ದುವೆಂದು ಹೇಳಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೧೫ ಮತ್ತು ೮-೧೫ ಎಸ್ ರಾಮಚಂದ್ರರಾವ್-ದೇವರನಾಮ ೭ ೩೦ ರಿಕಾರ್ಡು ಕಾರ್ಯಕ್ರಮ ಮಧ್ಯಾಹ್ನ ೧೨ ಮತ್ತು ರಾತ್ರಿ ೮-೧೦ ಶ್ರೀಮತಿ ಡಿ ಕೆ. ಲಕ್ಷ್ಮಮ್ಮ-ಸಂಗೀತ ೧-೩೦ ಬಾಲಪ್ರಪಂಚ ೧-೨೦ ಟಿ ಆರ್ ಮಹಾಲಿಂಗಂ ಕೊಳಲು · ರಿಕಾರ್ಡು ೧-೫೦ ಸಂಗೀತ ಸಂಜೆ ೬-೧೦ ವಚನಗಾನ ೬-೩೦ ಗ್ರಾಮಸ್ಥರ ಕಾರ್ಯಕ್ರಮ. ೭ ೩೦ ಕನ್ನಡದಲ್ಲಿ ಭಾಷಣ. ೮-೩೦ ರೇಡಿಯೋ ನ್ಯೂಸ್ ರೀಲ್ ೮-೪೦ ದೆಹಲಿ ಕಾರ್ಯಕ್ರಮದ ಪುನಪ್ರಸಾರ ೯-೧೫ ಕಾವ್ಯ ಧಾರೆ ೯-೩೦ ರಾಷ್ಟ್ರೀಯ ಕಾರ್ಯಕ್ರಮ.

CENTRAL INSTITUTE OF COMMERCE

Vanivilas Market, Mysore

Efficient coaching for D Com., Dip-in stea, Typewriting and Shorthand Fully equipped with best typewriters Classes in COST ACCOUNTS Commence on 25-7-57 Rush in at once.

ಮಹಾರಾಜರ ವರ್ಧಂತ್ಯುತ್ಸವಗಳು

ಮೈಸೂರು ೧೯

ನಗರದ ಅರಸು ಮಂಡಲಿಯವರು ನೆನ್ನೆ ಕಾಶಿ ವಿಶ್ವನಾಥ ದೇವಾಲಯದಲ್ಲಿ ಶ್ರೀಮನ್ಮಹಾರಾಜರ ೩೯ನೇ ವರ್ಷದ ವರ್ಧಂತಿ ಉತ್ಸವವನ್ನು ನೆರವೇರಿಸಿದರು. ಮಾಜಿ ಹುಜೂರು ಕಾರ್ಯದರ್ಶಿ ಶ್ರೀ ಹೆಚ್ ನಿರಂಜನರಾಜ ಅರಸರು ಅಧ್ಯಕ್ಷತೆ ವಹಿಸಿದ್ದರು ದೇವರುಗಳ ಅಭಿಷೇಕ, ಪೂಜೆ ಮುಂತಾದುವುಗಳಾದನಂತರ ಮಹಾರಾಜರಿಗೂ, ರಾಜಮನೆತನದವರಿಗೂ ಶ್ರೇಯಸ್ಸನ್ನು ಕೋರುವ ನಿರ್ಣಯವನ್ನು ಮಾಡಲಾಯಿತು.

ನಗರದ ಸ್ಕೌಟ್ ಸಂಘದ ಆಶ್ರಯದಲ್ಲಿ ನೆನ್ನೆ ಸ್ಕೌಟುಗಳು ಮತ್ತು ಗರ್ಲ್‌ಗೈಡುಗಳು ಸಭೆ ಸೇರಿ ಶ್ರೀಮನ್ಮಹಾರಾಜರಿಗೆ ಅಭಿನಂದನೆಗಳನ್ನು ಸಲ್ಲಿಸಿ ಅವರಿಗೂ ರಾಜಮನೆತನಕ್ಕೂ ಆಯುರಾರೋಗ್ಯಗಳನ್ನು ಕೋರಿದರು

ನಗರದ ಗಾಯತ್ರಿ ರೇಡಿಯೊ ಕಾರ್ಪೋರೇಷನ್ನಿನವರು ನೆನ್ನೆ ತಮ್ಮ ಅಂಗಡಿಯಲ್ಲಿ ಮಹಾರಾಜರ ಭಾವಚಿತ್ರಕ್ಕೆ ಪೂಜೆಯನ್ನು ನೆರವೇರಿಸಿ ತಪ್ಪಮಿತ್ರರಿಗೆ ಸಿಹಿತಿಂಡಿ ವಿನಿಯೋಗ ಮಾಡಿದರು.

ಮಹಾರಾಜಾ ಹೈಸ್ಕೂಲಿನಲ್ಲಿ ರಾಜ್ಯಪಾಲರ ವರ್ಧಂತಿ ದಿನಾಚರಣೆಯು ನೆನ್ನೆ ಇಂಚಾರ್ಜ್ ಹೆಡ್ಮಾಸ್ಟರ್ ಶ್ರೀ ಎಂ. ಟಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಭಾರತ ಸೇವಾ ದಳದವರಿಂದ ಧ್ವಜಾರೋಹಣ, ಸ್ಕೌಟ್‌ಗಳಿಂದ ಮಾರ್ಚ್ ಪಾಸ್ಟ್ ಮುಂತಾದುವು ಆದುವು ಉಪಾಧ್ಯಾಯರಾದ ಶ್ರೀ ಶ್ರೀನಾಥ್‌ರವರು ಭಾಷಣ ಮಾಡಿ ಮಹಾರಾಜರ ಗುಣಾತಿಶಯಗಳನ್ನು ಪ್ರಶಂಸಿಸಿದರು

ರಾಜಾಜಿ, ಪಟೇಲ್ ಮತ್ತು ರಾಧಾಕೃಷ್ಣರವರ ಭಾವಚಿತ್ರಗಳ ಅನಾವರಣ

ನಗರದ ಶಾರದಾ ವಿಲಾಸ ಲಾ ಕಾಲೇಜಿನಲ್ಲಿ ನಾಳೆ ಸಂಜೆ ೫ ಗಂಟೆಗೆ ರಾಜ್ಯ ಸಭೆಯ ಉಪಾಧ್ಯಕ್ಷ ಶ್ರೀ ಎಸ್ ವಿ. ಕೃಷ್ಣಮೂರ್ತಿರಾಯರು ಸಿ. ರಾಜಗೋಪಾಲಾಚಾರಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಡಾ॥ ಎಸ್ ರಾಧಾಕೃಷ್ಣರವರ ಭಾವಚಿತ್ರಗಳ ಅನಾವರಣೋತ್ಸವವನ್ನು ನೆರವೇರಿಸುವರು ವೈಸ್ ಛಾನ್ಸೆಲರ್ ಡಾ॥ ಕೆ ವಿ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸುವರು.

ಎಂ. ಸದಾಶಿವಯ್ಯನವರಿಗೆ ಪಿತೃವಿಯೋಗ

ಮದ್ದೂರು ತಾಲ್ಲೂಕು ದೊಡ್ಡರಸಿನಕೆರೆ ಪ್ರೈಮರಿ ಹೆಲ್ತ್ ಯೂನಿಟ್ಟಿನ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಎಂ ಸದಾಶಿವಯ್ಯನವರ ತಂದೆಯವರಾದ ಜವಳಿ ಅಂಗಡಿ ಶ್ರೀ ಮರಿಲಿಂಗಯ್ಯನವರು ಮೈಸೂರು ನಗರದಲ್ಲಿ ಕಳೆದ ೨ನೇ ತಾರೀಖು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಒಂದು ವಾರದಿಂದ ರೋಗಗ್ರಸ್ತರಾಗಿದ್ದರು ಅವರಿಗೆ ೬೭ ವರ್ಷ ವಯಸ್ಸಾಗಿತ್ತು

ನಿಶ್ಚಯ ಬೆಲೆ

ಜನತೆಯ ಆದರ ವಿಶ್ವಾಸಗಳನ್ನು ಬಯಸುವ ಯಾವ ವ್ಯಾಪಾರ ಸಂಸ್ಥೆಯೂ, ಸುಳ್ಳಿನ ಮರೆಹೊಗುವುದಿಲ್ಲ ನಿಶ್ಚಯವಂತ ಸಂಸ್ಥೆಯ ಹೆಸರು ಜೆಳ್ಳು ಕ್ರಮ ವಿಲ್ಲದೆ ಪ್ರಸಿದ್ಧವಾಗುತ್ತದೆ. ಹಾಗೆಯೇ "ಶ್ರೀರ ಕೆಂಪ್ರವು" (94. ತ್ಯಾಗರಾಜ ರಸ್ತೆ ಕ್ರಾಸ್, ಮೈಸೂರು) ಅಚ್ಚಟ ಹಸುವಿನ ಹಾಲು ಸರಬರಾಜಿನಲ್ಲಿ ಎತ್ತಿದ ಕೈ ಎನಿಸಿದೆ ವಿವರಗಳಿಗೆ ವಿಚಾರಿಸಿ, ಅಥವಾ ಲೋಕಲ್ ಪೋಸ್ಟ್ ಕಾರ್ಡು ಬರೆಯಿರಿ

ವಯಸ್ಕರ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭ

ಗುಂಡ್ಲುಪೇಟೆ ೧೬

ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಏರ್ಪಟ್ಟಿದ್ದ ಉಪಾಧ್ಯಾಯರ ಮತ್ತು ಗ್ರಾಮ ಪುಸ್ತಕ ಭಂಡಾರದ ಅಧಿಕಾರಿಗಳ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭವು ಕಳೆದ ಶನಿವಾರ, ತಾಲ್ಲೂಕು ವಿದ್ಯಾಧಿಕಾರಿಗಳಾದ ಶ್ರೀ ಸಿ. ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು

ಸಮಿತಿಯ ಸಂಚಾಲಕರಾದ ಶ್ರೀ ತ. ಶಾಚಾರ್ಯರಿಂದ ಸ್ವಾಗತವಾದನಂತರ, ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಟಿ ಆರ್ ನಾಗಪ್ಪನವರು ಮುಕ್ತಾಯ ಭಾಷಣ ಮಾಡಿ ತರಪೇತು ಹೊಂದಿದ ಉಪಾಧ್ಯಾಯರುಗಳು ಗ್ರಾಮಾಂತರಗಳಲ್ಲಿ ವಯಸ್ಕರ ಶಿಕ್ಷಣ ಮತ್ತು ಪುಸ್ತಕ ಭಂಡಾರದ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಬೇಕೆಂದು ಕೋರಿದರು. ಅಧ್ಯಕ್ಷರು ಭಾಷಣ ಮಾಡಿ, ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡತಕ್ಕ ಕಾರ್ಯದಲ್ಲಿ ಉಪಾಧ್ಯಾಯರ ಪಾತ್ರ ಹೆಚ್ಚಿನದೆಂದು ತಿಳಿಸಿದರು

ಚಾಮುಂಡೇಶ್ವರಿ ಅಮ್ಮನವರಿಗೆ ಅಲಂಕಾರ

ಕಾಳಮ್ಮನ ಗುಡಿ ಬೀದಿ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಈ ಸಂಜೆ ೭ ಗಂಟೆಗೆ ಅಮ್ಮನವರಿಗೆ ರಾಜರಾಜೇಶ್ವರಿ ಅಲಂಕಾರವನ್ನು ಮಾಡಲಾಗುವುದು

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	೪೨ ೦೦	
ರತ್ನಚೂಡಿ	೪೦ ೨೫	೪೨ ೧೨
ಕಡ್ಡಿ	೨೯ ೨೫	೪೧ ೨೫
ಬಂಗಾರತಿ	೨೮ ೫೦	೨೯ ೫೦
ಕಾರ್ ಸಣ್ಣ	೨೬ ೦೦	೨೭ ೨೫
ರಾಗಿ	೪೪ ೪೬	೪೫ ೭೫
ಕಡಲೆಕಾಯಿ	೧೨ ೦೦	೨೦ ೨೫
ಹರಳುಬೀಜ	೪೬ ೦೦	
ಎಳ್ಳು	೬೮ ೫೦	೪೬ ೭೫
ಹಿಪ್ಪೆಬೀಜ	೧೯ ೮೭	
ಹುರುಳಿ	೪೩ ೫೦	೪೪ ೦೦
ಹಲಸಂಡೆ	೪೨ ೮೭	೫೬ ೭೫
ತೊಗರಿ	೪೧ ೨೫	
ಹುಣಸೇಹಣ್ಣು	೨ ೮೭	೪ ೪೭
ಸೀಗೆಕಾಯಿ	೯ ೧೨	೯ ೪೧
ಮೆಣಸಿನಕಾಯಿ	೧೨ ೬೨	೧೮ ೦೦
ತೆಂಗಿನಕಾಯಿ	೯೫ ೦೦	೨೫೭ ೦೦

ಗಡಿಯಾರ ಸಿಕ್ಕಿದೆ

ನಗರದ ದಿವಾನ್ಸ್ ರೋಡಿನಲ್ಲಿರುವ ಲಕ್ಷ್ಮೀನಾರಾಯಣ ಲಾಂಡ್ರಿಗೆ ಒಗೆಯಲು ಹಾಕಲಾಗಿದ್ದ ಬಟ್ಟೆಗಳೊಡನೆ ಈಗ್ಗೆ 4 ದಿನಗಳ ಕೆಳಗೆ ಒಂದು ಕೈ ಗಡಿಯಾರವು ಸಿಕ್ಕಿರುತ್ತೆ ಅದನ್ನು ನೆನ್ನೆ ಲಕ್ಷ್ಮೀಪುರಂ ಪೊಲೀಸ್ ಸ್ಟೇಷನ್ನಿನವರ ವಶಕ್ಕೆ ಕೊಡಲಾಗಿದೆ ಮಾಲೀಕರು ಡಿ ಸುಬ್ಬಯ್ಯಾ ರಸ್ತೆಯ ಸಾಧ್ವಿ ಪತ್ರಿಕಾಲಯದ ಹಿಂದಿನ 322ನೇ ನಂಬರು ಮನೆಯ ರೂಮಿನಲ್ಲಿರುವ ಶ್ರೀ ಎಸ್ ಭೀಮಪ್ಪನವರನ್ನು ಭೇಟಿ ಮಾಡಿ, ಸರಿಯಾದ ರುಜುವಾತು ಮತ್ತು ಈ ಪ್ರಾಹಿರಾತಿನ ರ.ಸುಮ್ಮನ್ನು ಕೊಟ್ಟು ಪಡೆಯಬಹುದು

ಎಸ್. ಭೀಮಪ್ಪ

ತೆಂಗಿನಕಾಯಿ ವರ್ತಕರ ಸಂಘದ ಅಧಿಕಾರ ವರ್ಗ

ಕಳೆದ ಬುಧವಾರ ನಗರದ ತೆಂಗಿನಕಾಯಿ ವರ್ತಕರ ಸಂಘದ ಸರ್ವ ಸದಸ್ಯರ ಸಭೆಯು ಶ್ರೀ ಆರ್. ರಂಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಪ್ರಸಕ್ತ ಸಾಲಿಗೆ ಶ್ರೀ ಎ ಶಿವನಂಜಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎ. ಮಲ್ಲಿಕಾರ್ಜುನರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ದೊಡ್ಡಯ್ಯ ಮತ್ತು ಶ್ರೀ ಎಂ ವಿ. ತಮ್ಮಯ್ಯನವರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಮತ್ತು ಶ್ರೀ ನಂಜಯ್ಯನವರನ್ನು ಕೋಶಾಧ್ಯಕ್ಷರಾಗಿ ಚುನಾಯಿಸಲಾಯಿತು ಶ್ರೀಗಳಾದ ಆರ್. ರಂಗಪ್ಪ, ಕೆ ಆರ್. ದಾರ್ ಮತ್ತು ಮೂಡ್ಲಯ್ಯ-ಇವರುಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿಯೂ ಆರಿಸಲಾಯಿತು

ಟೀಕಾಚಾರ್ಯರ ಪುಣ್ಯದಿನ

ನಗರದ ಉತ್ತರಾದಿ ಮಠದಲ್ಲಿ ನೊನ್ನೆ ದಿನ ಟೀಕಾಚಾರ್ಯರ ಪುಣ್ಯ ದಿನವನ್ನು ನೆರವೇರಿಸಲಾಯಿತು. ಬೆಳಿಗ್ಗೆ ದೇವರ ಪೂಜೆ, ಮಧ್ವವಿಜಯ ಮತ್ತು ಜಯತೀರ್ಥ ವಿಜಯಗಳ ಪಾರಾಯಣಗಳು ನಡೆದುವು. ಸಂಜೆ ವಿದ್ವಾಂಸರುಗಳಿಂದ ಶ್ರೀ ಜಯತೀರ್ಥರ ಕಥೆ ಮತ್ತು ಉಪನ್ಯಾಸಗಳು ಆದುವು

ಸಂಸ್ಥಾನದಲ್ಲಿ ಪರಿಹಾರ ಸಮಿತಿಯ ರಚನೆ

ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಂಸ್ಥಾನ ಸರ್ಕಾರದವರು ಜರೂರಾತಿ ಪರಿಹಾರ ಸಮಿತಿಯೊಂದನ್ನು ರಚಿಸಿರುತ್ತಾರೆ. ಪ್ರಕೃತಿ ವಿಪತ್ತು, ಕ್ಷಾಮಡಾಮರ, ಅಂಟು ಜಾಡ್ಯ ಮುಂತಾದುವುಗಳನ್ನು ತಡೆಗಟ್ಟುವುದೇ ಸಮಿತಿಯ ಉದ್ದೇಶ ಜಿಲ್ಲಾ ಸಮಿತಿಗಳನ್ನೂ ರಚಿಸಲಾಗುವುದು

ಮುನಿಸಿಪಲ್ ಇಂಜನಿಯರರ ಕಛೇರಿ,
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು

ಪ್ರಕಟಣೆ

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಆಡಳಿತಕ್ಕೆ ಒಳಪಟ್ಟಿರುವ ಪೀಪಲ್ಸ್ ಪಾರ್ಕಿನಲ್ಲಿ (ಹಳೇ ಉಡ್‌ಯಾರ್ಡ್ ಪಾರ್ಕ್) ಬೆಳೆಯುವ ಹುಲ್ಲನ್ನು ಕೆಲವು ನಿಬಂಧನೆಗಳ ಮೇರೆ ಕೊಯ್ದುಕೊಳ್ಳಲು, ಇದೇ ಮಾಹೆ 22ನೇ ತಾರೀಖು, ಅಥವಾ ಅದಕ್ಕೆ ಮುಂಚಿತವಾಗಿ ಕೆಳಗೆ ಕಂಡ ಆಫೀಸರ್‌ರವರಿಂದ ಸೀಲಾದ ಟೆಂಡರುಗಳನ್ನು ಸ್ವೀಕರಿಸಲಾಗುತ್ತದೆ ಇಷ್ಟಪಡುವವರು 50 ರೂ ಗಳನ್ನು ಮುನಿಸಿಪಲ್ ಟ್ರೆಜರಿಯಲ್ಲಿ ಡಿಪಾಜಿಟ್ ಮಾಡಿ ಚಲನ್ ನಂಬರನ್ನು ನಮೂದಿಸಬೇಕು ಬಾಕಿ ವಿಚಾರವನ್ನು ಆಫೀಸಿನಲ್ಲಿ ವಿಚಾರಿಸಿಕೊಳ್ಳಬಹುದು

(ರುಜು) ಹೆಚ್ ಸೀತಾರಾಮಯ್ಯ,
ಮುನಿಸಿಪಲ್ ಎಕ್ಸಿಕ್ಯೂಟಿವ್ ಇಂಜನಿಯರ್

Edited, Printed and Published by A R Nagarajan at Sadhvi Press, D Subbiah Road Mysore

ಲಕ್ಷ್ಮಿ ಚಿತ್ರ ★ 19—7—57 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ವಿಜಯಾ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ

★ ಗುಣಸುಂದರಿ ★

ಪಾತ್ರ :—ಜೆಮಿನಿ ಗಣೇಶ, ಸಾವಿತ್ರಿ, ನಂಬಿಯಾರ್, ಎಸ್ ವಿ. ರಂಗರಾವ್, ಕರುಣಾನಿಧಿ, ಮುತ್ತುಲಕ್ಷ್ಮಿ, ಪುಷ್ಪೇಂದ್ರಮಣಿ, ಏಳುಮಲೈ, ಸಹದೇವ, ನಾಗೇಶ್ವರರಾವ್, ತಂತುಲು, ಲಕ್ಷ್ಮೀಪ್ರಭಾ

ನ್ಯೂ ಅಪೇರಾ ಟಾಕೀಸ್, ಮೈಸೂರು ★ 19-7-57ನೇ : ಶುಕ್ರವಾರದಿಂದ : ಅಮೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಸಿಟಾಡೆಲ್‌ರವರ ಅಮೋಘ ಸಂಗೀತಮಯ ಸಾಮಾಜಿಕ ತಮಿಳು ಚಿತ್ರ
ಆರ್. ಗಣೇಶ, ಪದ್ಮಿನಿ, ಎಂ. ಎನ್ ರಾಜಂ, ತಂಗವೇಲು,
ಮತ್ತು ಟಿ ಎಸ್ ಬಾಲಯ್ಯ ಮುಂತಾದವರು ಪಾತ್ರವಹಿಸಿರುವ,
★ ಮಲ್ಲಿಕಾ ★
ನಿರ್ದೇಶಕ : ಜೋಸೆಫ್ ತಳ್ಯಾತ್ (ಜೂಪಿಟರ್)
{FAIR FILMS RELEASE

Spl MORNING SHOWS On 20th & 21st at 10 A. M. ★ AT SRI GAYATHRI TALKIES ★ Double Attraction
Vincent Price in Warner Bro's ★ HOUSE OF WAX ★ : Barbara Stanwyck & George Sanders in 20th Century Fox's WITNESS TO MURDER
Don't Miss this Special opportunity

ರಿಜಿಸ್ಟ್ರೇ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 2 ಪುಟ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಸ್. ಭಾಸ್ಕರ ಶೆಟ್ಟಿ
ಅಂಡ್ ಸನ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೧೫] SADHVI : SATURDAY 20-7-1957 ಮೈಸೂರು : ಶನಿವಾರ ೨೦-೭-೧೯೫೭ : [ಸಂಚಿಕೆ : ೧೪೨

ಉತ್ತರ ಪ್ರದೇಶದಲ್ಲಿ ವೃದ್ಧಾಪ್ಯದ ಪೆನ್‌ಷನ್ ವ್ಯವಸ್ಥೆ

ಮಂತ್ರಿ ಮಂಡಲದಲ್ಲಿ ಒಡಕು ಇಲ್ಲ

ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿಯವರ ಹೇಳಿಕೆ

ಬೆಂಗಳೂರು ೨೦

ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಆಯವ್ಯಯ ಚರ್ಚೆ ಟೀಕೆಗಳಿಗೆ ಉತ್ತರವಿತ್ತು, ಸಂಸ್ಥಾನದ ಸಚಿವರುಗಳಲ್ಲಿ ಒಡಕು ಇಲ್ಲವೆಂದು ತಿಳಿಸಿದರು. ೧೧ ಮಂದಿ ಸಚಿವರು ತಮ್ಮತಮ್ಮಲ್ಲಿ ಜಗಳವಾಡುತ್ತಿರುವರೆಂದು ಒಬ್ಬ ಸದಸ್ಯರು ಹೇಳಿರುವುದಾಗಿಯೂ, ತಮಗೆ ತಿಳಿದಂತೆ ಯಾವ ಮಂತ್ರಿಯೂ ವ್ಯಾಜ್ಯವಾಡಿಲ್ಲವೆಂದೂ, ಮಂತ್ರಿಮಂಡಲದಲ್ಲಿ ಒಡಕಿಲ್ಲವೆಂದೂ ಅವರು ಸೂಚಿಸಿದರು. ಸದಸ್ಯರು ಆತ್ಮತೃಪ್ತಿಗಾಗಿ ಆ ಮಾತುಗಳನ್ನು ಹೇಳಿರಬೇಕೆಂದು ಅವರು ಅಭಿಪ್ರಾಯಪಟ್ಟರು.

ಮಂತ್ರಿಮಂಡಲದಲ್ಲಿ ಹರಿಜನರ ಪ್ರಾತಿನಿಧ್ಯದ ಬಗ್ಗೆ ಟೀಕೆಗಳನ್ನು ಪ್ರಸ್ತಾಪಿಸಿ, ಮಂತ್ರಿ ಮಂಡಲಕ್ಕೆ ಹರಿಜನರೊಬ್ಬರು ಮುಖ್ಯಸ್ಥರಾಗಬೇಕೆಂದು ಹೇಳುವವರಲ್ಲಿ ತಾವೂ ಒಬ್ಬರೆಂದೂ, ಹರಿಜನರು ಅಂತಹ ಅಭಿಲಾಷೆ ಹೊಂದಿದ್ದರೆ ಅದು ತಪ್ಪಲ್ಲವೆಂದೂ ನುಡಿದರು.

ಡಿವಿಜನಲ್ ಕಮೀಷನರುಗಳ ಹುದ್ದೆ ರದ್ದಿಗಾಗಿ ಮಾಡಿರುವ ಒತ್ತಾಯವನ್ನು ಅವರು ಪ್ರಸ್ತಾಪಿಸಿ, ಆರು ತಿಂಗಳನಂತರ ಈ ವಿಚಾರವನ್ನು ಪರಿಶೀಲಿಸಿ, ನಿರ್ಧಾರ ತೆಗೆದುಕೊಳ್ಳಲಾಗುವುದೆಂದು ಸೂಚಿಸಿದರು. ಸಂಸ್ಥಾನದ ಆಡಳಿತದಲ್ಲಿ ಮಿತವ್ಯಯಕ್ಕಾಗಿ ಸಲಹೆ ನೀಡುವ ಬಗ್ಗೆ ಒಬ್ಬ ಪ್ರವೀಣರನ್ನು ನೇಮಿಸಲು ಸರ್ಕಾರದವರು ನಿರ್ಧರಿಸಿರುವರೆಂದೂ ತಿಳಿಸಿದರು.

ವಿಜಯವಾಡದಲ್ಲಿ ೩೧ ಮಂದಿ ಗ್ರಾಮಾಧಿಕಾರಿಗಳ ಉಚ್ಚಾಟನೆ

ವಿಜಯವಾಡಾ ಜಿಲ್ಲೆಯ ಮೈಲವರಂ ಫಿರ್ಕಾದಲ್ಲಿ ೩೩ ಮಂದಿ ಗ್ರಾಮಾಧಿಕಾರಿಗಳ ಪೈಕಿ ೩೧ ಜನರು ಜಮಾಬಂದಿಯಲ್ಲಿ ಹಾಜರಾಗದ ಕಾರಣ ಮೊನ್ನೆ ದಿನ ಅವರುಗಳನ್ನು ಕೆಲಸದಿಂದ ತೆಗೆದು ಆಜ್ಞೆ ಜಾರಿ ಮಾಡಲಾಯಿತು. ಜಮಾಬಂದಿಗೆ ಹಾಜರಾಗದವರಿಂದ ಸಮಜಾಯಿಷಿ ಕೇಳಲಾಗಿದೆ. ಹಲವು ಕಡೆ ಗ್ರಾಮಾಧಿಕಾರಿಗಳು ಹಾಜರಾಗದೆ ಜಮಾಬಂದಿಯನ್ನು ಮುಂದುವರಿಸಲಾಯಿತು.

ಅನಂತಪುರ ಜಿಲ್ಲೆಯಲ್ಲಿ ಕಳೆದ ಸೋಮವಾರ ಜಮಾಬಂದಿಯು ಆರಂಭವಾಗಿ ಹಲವು ಗ್ರಾಮಾಧಿಕಾರಿಗಳು ಹಾಜರಾಗಿದ್ದರು. ಅದರಲ್ಲಿ ಭಾಗವಹಿಸದ ಹಲವರ ಮೇಲೆ ತಹಸೀಲ್ದಾರರು ಹೊರಿಸಿದ ಆಪಾದನೆಗಳಿಗೆ ಅವರುಗಳು ಸಮಜಾಯಿಷಿಯಿತ್ತು, ತಮ್ಮ ಸಂಘದ ಸೂಚನೆ ಮೇರೆ ತಾವು ಜಮಾಬಂದಿಯನ್ನು ಬಹಿಷ್ಕರಿಸಿದುದಾಗಿ ತಿಳಿಸಿರುವರು.

ತಮ್ಮ ಹಲವಾರು ಬೇಡಿಕೆಗಳನ್ನು ಸರ್ಕಾರದವರು ಈಡೇರಿಸದೇ ಇರುವುದೇ ಗ್ರಾಮಾಧಿಕಾರಿಗಳು ಜಮಾಬಂದಿಗೆ ಬಹಿಷ್ಕಾರ ಹಾಕಿರುವುದಕ್ಕೆ ಕಾರಣವಾಗಿದೆ. ರಾಯಲಸೀಮೆಯ ಹಲವು ಗ್ರಾಮಾಧಿಕಾರಿಗಳು ತಮ್ಮ ಸಂಘಕ್ಕೆ ರಾಜೀನಾಮೆ ಸಲ್ಲಿಸಿರುವರು.

ದಸರಾ ಉತ್ಸವ ನಡೆಸುವುದಕ್ಕೆ ಸರ್ಕಾರದ ಸಮರ್ಥನೆ

ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿಯವರ ಹೇಳಿಕೆ

ಬೆಂಗಳೂರು ೨೦

ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿಯವರು ಮಾತನಾಡಿ, ದಸರಾ ಉತ್ಸವವನ್ನು ನಡೆಸಲು ಸರ್ಕಾರದವರು ಮಾಡಿರುವ ತೀರ್ಮಾನವನ್ನು ಸಮರ್ಥಿಸಿದರು. ಈ ರಾಷ್ಟ್ರೀಯ ಉತ್ಸವವು ಸಹಸ್ರಗಟ್ಟಲೆ ಪ್ರೇಕ್ಷಕರನ್ನು ಆಕರ್ಷಿಸುವುದೆಂದೂ, ಅದರಿಂದ ಮೈಸೂರಿನ ವ್ಯಾಪಾರಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯುವುದೆಂದೂ ಅವರು ಹೇಳಿದರು. ಆಗ ನಡೆಯುವ ಕೈಗಾರಿಕಾ ಪ್ರದರ್ಶನದಲ್ಲಿ ನವ ಮೈಸೂರಿನ ತಯಾರಿಕೆಗಳನ್ನು ಇಡಲು ಅವಕಾಶವಿರುವುದೆಂದೂ ಶ್ರೀ ನಿಜಲಿಂಗಪ್ಪನವರು ಸೂಚಿಸಿದರು.

ಮೂರು ವರ್ಷಕ್ಕೊಮ್ಮೆ ಉತ್ಸವಕ್ಕಾಗಿ ಸಲಹೆಯೇ?

ಶ್ರೀ ಎಂ ಸಿ ನರಸಿಂಹೈಯರವರು ಮಾತನಾಡಿ, ಹಣಕಾಸಿನ ತನಿಖೆ ಸಮಿತಿಯವರು ಮೂರು ವರ್ಷಗಳಿಗೊಮ್ಮೆ ದಸರಾ ಉತ್ಸವವನ್ನು ಆಚರಿಸಬೇಕೆಂದು ಸಲಹೆ ಮಾಡಿಲ್ಲವೇ ಎಂದು ಕೇಳಲಾಗಿ, ಅದು ತಮಗೆ ಗೊತ್ತಿಲ್ಲವೆಂದು ಮುಖ್ಯ ಮಂತ್ರಿಯವರು ಉತ್ತರವಿತ್ತರು.

ಹಾಗಾದರೆ ಮುಖ್ಯ ಮಂತ್ರಿಯವರು ವರದಿಯನ್ನು ಓದಿಲ್ಲವೆಂದು ಅರ್ಥವಾಗುವುದಿಲ್ಲವೇ- ಎಂದು ಸದಸ್ಯರು ಹೇಳಿದಾಗ, ಈ ವಿಚಾರವನ್ನು ತಾವು ತಿಳಿದುಕೊಳ್ಳುವುದಾಗಿ ಮುಖ್ಯ ಮಂತ್ರಿಯವರು ಸೂಚಿಸಿದರು.

ವಿಧಾನ ಸಭಾ ಸದಸ್ಯ ಜಾರ್ಜ್ ಹೂವರರಿಂದ ಸಂಬಳ ತ್ಯಾಗ

ಬೆಂಗಳೂರು ೨೦

ಬೆಂಗಳೂರು ಚಿಕ್ಕಪೇಟೆ ಕ್ಷೇತ್ರದಿಂದ ಸ್ವತಂತ್ರ ಉಮೇದುವಾರರಾಗಿ ವಿಧಾನ ಸಭೆಗೆ ಆರಿಸಿ ಬಂದಿರುವ ಶ್ರೀ ಜಾರ್ಜ್ ಹೂವರ್‌ರವರು ಸಭಾಧ್ಯಕ್ಷರಿಗೆ ಪತ್ರ ಬರೆದು, ತಾವು ಸಭಾ ಸದಸ್ಯರಾಗಿ ಪಡೆಯುವ ಸಂಬಳ ಮತ್ತು ಭತ್ಯಗಳೆಲ್ಲವನ್ನೂ, ಆಡಳಿತ ಮಿತವ್ಯಯದ ದೃಷ್ಟಿಯಿಂದ ಬಿಟ್ಟುಕೊಟ್ಟಿರುವುದಾಗಿ ತಿಳಿಸಿರುವರು. ಈ ರೀತಿ ತ್ಯಾಗ ಮಾಡಿರುವ, ಸಂಸ್ಥಾನದ ಶಾಸನ ಸಭಾ ಸದಸ್ಯರ ಪೈಕಿ ಇವರೇ ಮೊದಲಿಗರು.

ಮೈಸೂರು ರಾಜ್ಯಪಾಲರಿಗೆ ಪ್ಯಾರಿಸ್ ಸಂಸ್ಥೆಯ ಗೌರವ

ಪ್ಯಾರಿಸ್ಸಿನಲ್ಲಿರುವ ಅಂತರ ರಾಷ್ಟ್ರೀಯ ದರ್ಶನ ಶಾಸ್ತ್ರದ ಶಾಲೆಯವರು ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್ ರವರನ್ನು ತಮ್ಮ ಸಂಸ್ಥೆಯ ಸಹ ಸದಸ್ಯರಾಗಿ ನೆನ್ನೆ ತೆಗೆದುಕೊಂಡರು. ೨೦ ರಾಷ್ಟ್ರಗಳ ಒಟ್ಟು ೫೦ ಮಂದಿ ದಾರ್ಶನಿಕರು ಪ್ಯಾರಿಸ್ಸಿನಲ್ಲಿ ಸಭೆ ಸೇರಿದ್ದಾಗ ಮೈಸೂರಿನ ಪ್ರೊ॥ ಎಸ್. ಎ. ನಿಕಂಠರವರು ರಾಜ್ಯಪಾಲರನ್ನು ಸದಸ್ಯರಾಗಿ ತೆಗೆದುಕೊಳ್ಳುವಂತೆ ಸೂಚಿಸಿದರು. ಚಿಕಾಗೊವಿನ ಪ್ರೊ॥ ರಿಚರ್ಡ್ ಪಿ. ಮೆಕರಿಯಾನ್‌ರವರು ಸಮರ್ಥಿಸಿದರು.

ಉತ್ತರ ಪ್ರದೇಶದಲ್ಲಿ ವೃದ್ಧಾಪ್ಯದ ವೇತನ

೭೦ ವರ್ಷ ತುಂಬಿದ ಬಡವರಾದ ಮುದುಕರಿಗೆ ವೃದ್ಧಾಪ್ಯದ ವೇತನ ಕೊಡಲಾಗುವುದೆಂದೂ, ಈ ಬಗ್ಗೆ ವಿವರವಾದ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿರುವುದೆಂದೂ ಉತ್ತರ ಪ್ರದೇಶದ ಹಣಕಾಸಿನ ಸಚಿವರು ಅಲ್ಲಿನ ವಿಧಾನ ಸಭೆಯಲ್ಲಿ ತಿಳಿಸಿರುವರು. ಭಾರತದಲ್ಲಿ ಈ ಯೋಜನೆಯನ್ನು ತರುವುದರಲ್ಲಿ ಆ ಪ್ರಾಂತವೇ ಮೊದಲಿನದು.

ದ್ವಿತೀಯ ಸಂಬಳ ಸಮಿತಿ ರಚನೆ ಸಂಭವ

ಕೇಂದ್ರ ಹಣಕಾಸಿನ ಮಂತ್ರಿಯವರ ಸೂಚನೆ

ಕೇಂದ್ರ ಸರ್ಕಾರದ ನೌಕರರ ಸಂಬಳದ ದರವನ್ನು ಪರಿಶೀಲನೆಗಾಗಿ ಸಮಿತಿಯೊಂದನ್ನು ಸರ್ಕಾರದವರು ರಚಿಸಬಹುದೆಂದು ಹಣಕಾಸಿನ ಸಚಿವರು ನೆನ್ನೆ ಲೋಕ ಸಭೆಯಲ್ಲಿ ತಿಳಿಸಿದರು. ಆದರೆ ಈ ವಿಷಯವನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗುವುದಿಲ್ಲವೆಂದೂ, ಅದಕ್ಕೆ ಸಂಬಂಧಪಟ್ಟಂತೆ ಇನ್ನೂ ಅನೇಕ ವಿಷಯಗಳಿರುವುವೆಂದೂ ಅವರು ಹೇಳಿದರು. ರಾಷ್ಟ್ರದ ಆರ್ಥಿಕ ಸ್ಥಿತಿ, ಹಣದ ಉಬ್ಬರ, ಪಂಚ ವಾರ್ಷಿಕ ಯೋಜನೆ ಅಗತ್ಯಗಳು, ಸಂಸ್ಥಾನ ಸರ್ಕಾರಗಳ ನೌಕರರ ಮಟ್ಟ ಮುಂತಾದ ಹಲವಾರು ವಿಷಯಗಳನ್ನು ಈ ಸಂಬಂಧವಾಗಿ ಪರಿಶೀಲಿಸಬೇಕಾಗಿರುವುದೆಂದು ಅವರು ಸೂಚಿಸಿದರು.

ಚಿತ್ರ ಹಂಚಿಕೆ ಸಂಸ್ಥೆ ಮೇಲೆ ಮೊಕದ್ದಮೆ

ಚಕ್ರವರ್ತಿ ತಿರುಮಗಳ್ ಎಂಬ ಚಲನ ಚಿತ್ರವನ್ನು ಪ್ರದರ್ಶನಕ್ಕೆ ಕೊಡುವುದಾಗಿ ಬೆಂಗಳೂರಿನ ಎಮರಾಲ್ಡ್ ಪಿಕ್ಚರ್ಸಿನ ಶ್ರೀ ದ್ವಾರಕಾನಾಥ್‌ರವರು ನಗರದ ಲಕ್ಷ್ಮಿ ಥಿಯೇಟರ್ ಸಂಸ್ಥೆಯಿಂದ ೫,೦೦೦ ರೂ ಗಳನ್ನು ಪಡೆದು, ಮೋಸ ಮಾಡಲು ಯತ್ನಿಸಿದರೆಂದು ಹೂಡಲಾಗಿರುವ ಮೊಕದ್ದಮೆಯಲ್ಲಿ ನಗರದ ನ್ಯಾಯಾಧೀಶರು ಆಪಾದಿತರ ಮೇಲೆ ಮೋಸದ ಆಪಾದನೆ ಹೊರಿಸಿರುತ್ತಾರೆ.

೨೨ನೇ ತಾ॥ ಬೇಲೂರು ಕೊಲೆ ಮೊಕದ್ದಮೆ ಅಪೀಲು ವಿಚಾರಣೆ

ಬೆಂಗಳೂರು ೨೦

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಸಂಸಾರದ ಕೊಲೆ ಸಂಬಂಧದಲ್ಲಿ ಮರಣದಂಡನೆಗೆ ಗುರಿಯಾಗಿರುವ ಕೃಷ್ಣ, ಮುನಿಸ್ವಾಮಿ ಮತ್ತು ಗೋವಿಂದರೆಡ್ಡಿಯವರು ತಮ್ಮ ಶಿಕ್ಷೆ ವಿರುದ್ಧವಾಗಿ ಹೈಕೋರ್ಟಿನಲ್ಲಿ ಸಲ್ಲಿಸಿರುವ ಅಪೀಲಿನ ವಿಚಾರಣೆಯು ನಾಳಿದ್ದಿನಿಂದ ಆರಂಭವಾಗುವುದು.

ಪ್ರಮುಖ ವ್ಯಾಪಾರ ನಗರಗಳಿಗೆ ವಿಮಾನ ಸಂಪರ್ಕ

ಹುಬ್ಬಳ್ಳಿ, ಗದಗ, ತುಮಕೂರು, ದಾವಣಗೆರೆ, ಬೆಳಗಾಂ ಮತ್ತು ಬಿಜಾಪುರ ಮುಂತಾದ ಮುಖ್ಯ ಕೈಗಾರಿಕೆ ವ್ಯಾಪಾರದ ನಗರಗಳಿಗೆ ವಿಮಾನ ಸಂಪರ್ಕವನ್ನು ಏರ್ಪಡಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸುತ್ತಾರೆ.

ಮೇಕೆದಾಟು ಯೋಜನೆಯು ಕಾರ್ಯಗತ ಸಂಭವ

ವಿಧಾನ ಸಭೆಯಲ್ಲಿ ಮರಾಮತ್ತು ಸಚಿವರ ಹೇಳಿಕೆ

ಸ್ವಂ ಮು ತಂತಿ] ಬೆಂಗಳೂರು ೨೦

ವಿಧಾನ ಸಭೆಯಲ್ಲಿ ಈ ದಿನ ಮರಾಮತ್ತು ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರು ಮಾತನಾಡಿ, ಕೈ ಬಿಡಲಾಗಿದ್ದ ಮೇಕೆದಾಟು ವಿದ್ಯುದ್ಯೋಜನೆಯನ್ನು ಮದ್ರಾಸು ಸರ್ಕಾರದೊಡನೆ ಮಾತುಕತೆ ನಡೆಸಿ ಈಗ ಕಾರ್ಯಗತ ಮಾಡಲಾಗುವುದೆಂದು ತಿಳಿಸಿದರು.

ಮುಖ್ಯ ಮಂತ್ರಿಯವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು ಹೈಕೋರ್ಟಿನಲ್ಲಿ ೩೬೮ ಕ್ರಿಮಿನಲ್ ಅಪೀಲುಗಳು ಇತ್ಯರ್ಥಕ್ಕಾಗಿ ಇವೆಯೆಂದೂ, ಆ ಪೈಕಿ ೨೧ ಅಪೀಲುಗಳು ಕೊಲೆ ಮತ್ತು ಕೊಲೆ ಪ್ರಯತ್ನಕ್ಕೆ ಸಂಬಂಧಿಸಿರುವುವೆಂದೂ ತಿಳಿಸಿದರು.

ಪಾನ ನಿರೋಧ ನೀತಿಯನ್ನು ಸರ್ಕಾರದವರು ಅರೆ ಮನಸ್ಸಿನಿಂದ ಜಾರಿಗೆ ತರುತ್ತಿರುವರೆಂದು ವಿರೋಧ ಪಕ್ಷದವರು ಸಭೆಯಲ್ಲಿ ಟೀಕಿಸಿದರು.

ಗವರ್ನರರ ಎ. ಡಿ. ಸಿ. ಆಗಿ ಕೆ ಆರ್. ಕೃಷ್ಣರ ನೇಮಕ

ಎಂ. ಎ ಆರ್. ಪಿ. ಸೂಪರಿಂಟೆಂಡೆಂಟರಾದ ಶ್ರೀ ಕೆ ಆರ್ ಕೃಷ್ಣರವರನ್ನು ರಾಜ್ಯಪಾಲರ ಎ ಡಿ ಸಿ ಗಳಾಗಿ ನೇಮಿಸಲಾಗಿದೆ.

ವರ್ತಕರಿಗೆ ಮುಖ್ಯ ಮಂತ್ರಿಯವರ ಎಚ್ಚರಿಕೆ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಇಲ್ಲಿನ ವಾಣಿಜ್ಯ ಸಂಘದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ, ವರ್ತಕರು ಬಚ್ಚಿಡಲ್ಪಟ್ಟ ಧಾನ್ಯವನ್ನು ಪೇಟೆಗೆ ಸ್ವತಃ ತೆಗೆಯದಿದ್ದರೆ ಸರ್ಕಾರದವರು ಬಲ ಪ್ರಯೋಗದಿಂದ ತೆಗೆಸುವರೆಂದು ತೀವ್ರ ಎಚ್ಚರಿಕೆಯನ್ನಿತ್ತರು.

○ ಗುಲ್ಬರ್ಗಾ ಡಿವಿಜನ್ನಿನಲ್ಲಿ ಪರಿಹಾರ ಕಾರ್ಯಕ್ಕಾಗಿ ಇನ್ನೂ ೪ ಲಕ್ಷ ರೂ. ಗಳನ್ನು ಸರ್ಕಾರದವರು ಕೊಟ್ಟಿರುವರು.

ಕೇಂದ್ರ ನೌಕರರ ಮುಷ್ಕರದಲ್ಲಿ ರಾಜಕೀಯ ಮನೋಭಾವ

ಮುಷ್ಕರದ ಬೆದರಿಕೆಗೆ ಜಗ್ಗುವುದಿಲ್ಲವೆಂದು ನೆಹರೂರವರ ಹೇಳಿಕೆ

ಕೇಂದ್ರ ಸರ್ಕಾರದ ನೌಕರರ ಮುಷ್ಕರದ ಪ್ರಯತ್ನವು ಜೀವನದ ವೆಚ್ಚ ಹೆಚ್ಚುತ್ತಿರುವ ಸಮಸ್ಯೆಗಳ ಪರಿಹಾರ ಮಾರ್ಗವಾಗುವುದರ ಬದಲು ರಾಜಕೀಯ ದೃಷ್ಟಿಯಿಂದ ಕೂಡಿರುವುದಾಗಿ ತಮಗೆ ಭಾಸವಾಗುವುದೆಂದು ಪ್ರಧಾನಿ ನೆಹರೂರವರು ಹೇಳುತ್ತಾರೆ. ಅವರು ಬೆದರಿಕೆಗಳ ರೀತಿಯನ್ನು ಖಂಡಿಸಿ, ಸರ್ಕಾರ ಮತ್ತು ಪ್ರಜಾ ಸಮೂಹವನ್ನು ಹೆದರಿಸಿ ಅದರಿಂದ ಆಗದಿರುವ ಕೆಲಸಗಳನ್ನು ಮಾಡಿಸಿಕೊಳ್ಳುವ ಪ್ರಯತ್ನದ ಬಗ್ಗೆ ಎಚ್ಚರಿಕೆಯಿತ್ತಿರುವರು. ಆತ್ಮಗೌರವದಿಂದ ಕೂಡಿದ ಯಾವ ಸರ್ಕಾರವೇ ಆಗಲಿ, ಇಂತಹ ಬೆದರಿಕೆಗಳಿಗೆ ಜಗ್ಗುವುದಿಲ್ಲವೆಂದೂ ಅವರು ಹೇಳಿರುವರು.

ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ವ್ಯವಸ್ಥಿತ ಸಂಶೋಧನೆ ಅಗತ್ಯ

ಕೇಂದ್ರ ಬೋರ್ಡಿನ ಅಧಿವೇಶನದಲ್ಲಿ ಅಧ್ಯಕ್ಷರ ಭಾಷಣ

ಮೈಸೂರು ೨೦

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ನೆನ್ನೆ ಇಲ್ಲಿನ ಕ್ರಾಫರ್ಡ್ ಭವನದಲ್ಲಿ ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಬೋರ್ಡಿನ ೨೮ನೆ ವಾರ್ಷಿಕ ಸಂಶೋಧನಾ ಅಧಿವೇಶನದ ಆರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ, ಅಧಿವೇಶನದ ಮುಖ್ಯ ಸಂಶೋಧನಾ ವಿಷಯವು ನೀರಿನ ಸಮಸ್ಯೆಯೆಂದು ನುಡಿದು, ನೀರು ನಿಜವಾಗಿಯೂ ಮನುಷ್ಯನಿಗೆ ಜೀವ ಮತ್ತು ಜ್ಯೋತಿಗಳನ್ನು ಕೊಡುವ ವಸ್ತುವೆಂದೂ ತಿಳಿಸಿ ನೀರಿನಿಂದಲೇ ಉದ್ಭವವಾದ ಜೀವನಕ್ಕೆ ಅದು ಆಧಾರವಾಗಿರುವುದೆಂದು ಹೇಳಿದರು ನೀರಿನ ಉಪಯೋಗ ಮತ್ತು ಹತೋಟಿಯ ಅವಶ್ಯಕತೆಯನ್ನು ಮಾನವನು ಹಿಂದೆಯೇ ಕಂಡುಕೊಂಡಿದ್ದನೆಂದೂ, ಚೀಣ ಮತ್ತು ಭಾರತಗಳು ಮೊದಲು ಅದರ ಉಪಯೋಗವನ್ನು ಹೊಂದಲು ಶತಮಾನಗಳ ಹಿಂದೆಯೇ ಭಾರಿ ಜಲಾಶಯ ಅಣೆಕಟ್ಟು ಮತ್ತು ಕಾಲುವೆಗಳನ್ನು ನಿರ್ಮಿಸಿದುವೆಂದೂ ಅವರು ಹೇಳಿದರು

ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ತೆಗೆದುದು ಮೈಸೂರೇ ಮೊದಲೆಂದೂ, ಈಗ ನೀರೊಂದೇ ವಿದ್ಯುಚ್ಛಕ್ತಿ ತೆಗೆಯುವ ಪ್ರಧಾನ ಸಾಧನವಾಗಿರುವುದೆಂಬ ಅರಿವುಂಟಾಗುತ್ತಿರುವುದೆಂದೂ ಅವರು ಸೂಚಿಸಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗಳಲ್ಲದೆ ಪ್ರವಾಹದ ಹತೋಟಿಗೂ ಯುಕ್ತಿ ಸಬೇಕಾಗಿರುವುದೆಂದು ನುಡಿದರು ಈ ಬಗ್ಗೆ ಸಂಶೋಧನೆಯು ಅಗತ್ಯವಾಗಿರುವುದೆಂದೂ ಅವರು ಒತ್ತಿ ಹೇಳಿದರು. ಹಿಮಾಲಯದ ನದಿಗಳ ಪಾತ್ರ ಬದಲಾವಣೆ ಮೊದಲಾದ ವರ್ತನೆ ಮತ್ತು ಮಂಜಿನ ಪ್ರವಾಹಗಳ ಗತಿಯನ್ನು ಅರಿಯುವುದು ಅಗತ್ಯವೆಂದೂ, ಈ ಬಗ್ಗೆ ಇಂಜನಿಯರುಗಳು ಪರಿಶೀಲಿಸಬೇಕೆಂದೂ ಅವರು ಸೂಚಿಸಿದರು

ಸರ್ಕಾರ ಮತ್ತು ಇಲಾಖೆ ಮತ್ತು ವಿಶ್ವವಿದ್ಯಾಲಯಗಳ ನಡುವೆ ಇಂಜನಿಯರಿಂಗ್ ಸಂಶೋಧನಾ ವಿಷಯವಾಗಿ ಸಹಕಾರವು ಅಗತ್ಯವೆಂದೂ ಸಂಶೋಧನೆಯಲ್ಲಿ ಇಂತಹ ಸಹಕಾರವು ಪ್ರಗತಿಗೆ ಒಂದು ಮುಖ್ಯ ಅಂಶವಾಗಿರುವುದೆಂದೂ ಅವರು ಸೂಚಿಸಿದರು

ಅಧ್ಯಕ್ಷತೆ ವಹಿಸಿದ್ದ ಬೊಂಬಾಯಿ ಸರ್ಕಾರದ ಚೀಫ್ ಇಂಜನಿಯರ್ ಶ್ರೀ ಟಿ. ಎಸ್ ಮ. ಹಿದ್ದೇರವರು ತಮ್ಮ ಭಾಷಣದಲ್ಲಿ, ವ್ಯವಸ್ಥಾತ್ಮಕ ಸಂಶೋಧನೆಯು ಅತ್ಯಂತ ಅಗತ್ಯವಾಗಿರುವುದಲ್ಲದೆ, ಅದು ಈಗ ಸಾಧಿತವಾಗಿರುವುದೆಂದೂ ಹೇಳಿದರು ಈ ಬಗ್ಗೆ ಇಂದು ಅಖಿಲ ಭಾರತ ಸಂಯೋಜನೆಯುಂಟಾಗಿರುವುದಲ್ಲದೆ ನೀರಾವರಿ ಬೋರ್ಡಿನ ಸಂಶೋಧನಾ ವರದಿಗಳು ಇಡೀ ಜಗತ್ತಿನಲ್ಲಿ ಸಂಶೋಧನೆಗೆ ಸಹಾಯಕವಾಗಿರುವುವೆಂದು ತಿಳಿಸಿದರು. ವಿದ್ಯುಚ್ಛಕ್ತಿ ಉತ್ಪಾದನೆಯ ಸಂಶೋಧನೆಗಾಗಿ ಕೇಂದ್ರ ಸರ್ಕಾರದವರು ನೇಮಿಸಿರುವ ಡಾ॥ ಭಾಸ್ಕರ್ ಸಮಿತಿಯವರು ಭೋಪಾಲ್ ಮತ್ತು ಬೆಂಗಳೂರುಗಳಲ್ಲಿ ಅಂತಹ ಒಂದೊಂದು ಸಂಶೋಧನಾ ಕೇಂದ್ರದ ಸ್ಥಾಪನೆಗೆ ಸಲಹೆ ಮಾಡಿರುವುದಾಗಿ ಅವರು ತಿಳಿಸಿದರು ಗ್ರಾಮಾಂತರ ವಿದ್ಯುಚ್ಛಕ್ತಿ ಸರಬರಾಜು ವ್ಯವಸ್ಥಾತ್ಮಕವಾಗಿ ನಡೆಯಬೇಕೆಂದೂ ಮತ್ತು ಅದರಲ್ಲಿ ವಿಶೇಷ ಮಿತವ್ಯಯ ಮಾಡಲು ಸ್ವದೇಶೀಯವಾದ ವಿದ್ಯುದುಪಕರಣಗಳನ್ನು ತಯಾರಿಸಬೇಕೆಂದೂ ಅವರು ಹೇಳಿದರು

ಹೈಡ್ರಾಲಿಕ್ ವಿಜ್ಞಾನದ ಸಂಶೋಧನೆಯ ಅಗತ್ಯವನ್ನು ಅವರು ಒತ್ತಿಹೇಳಿ ಈ ಬಗ್ಗೆ ಇಂಜನಿಯರುಗಳ ಸಂಶೋಧನೆಗೆ ವಿಶ್ವವಿದ್ಯಾಲಯಗಳ ಮನ್ನಣೆ ಮತ್ತು ಸಹಕಾರಗಳು ದೊರೆಯಬೇಕೆಂದು ನುಡಿದರು. ಜಲಾಶಯಗಳಲ್ಲಿ ಮೆಕ್ಕಲನ್ನು ತೆಗೆಯುವುದು, ಮುಂತಾದ ವಿಚಾರವಾಗಿ ಹೆಚ್ಚು ಸಂಶೋಧನೆ ಅಗತ್ಯವೆಂದು ನುಡಿದರು

ತಿರುಪತಿಯಲ್ಲಿ ೧೦೦ ಹಾಸಿಗೆಗಳಿರುವ ಆಸ್ಪತ್ರೆ ನಿರ್ಮಾಣ

ವೆಂಕಟೇಶ್ವರನ ಭಕ್ತರೊಬ್ಬರಿಂದ ಐದು ಲಕ್ಷ ರೂ ವಾಗ್ದಾನ

ತಿರುಪತಿಯಲ್ಲಿ ೧೦೦ ಹಾಸಿಗೆಗಳುಳ್ಳ ಆಸ್ಪತ್ರೆಯೊಂದನ್ನು ಕಟ್ಟಲು ಬೊಂಬಾಯಿಯಲ್ಲಿರುವ, ವೆಂಕಟೇಶ್ವರಸ್ವಾಮಿ ಭಕ್ತರೊಬ್ಬರು ೫ ಲಕ್ಷ ರೂ. ಗಳ ವಾಗ್ದಾನ ಮಾಡಿರುವುದಾಗಿ ಗೊತ್ತಾಗಿದೆ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯವರು ಆಸ್ಪತ್ರೆಯ ವೆಚ್ಚಕ್ಕಾಗಿ ೧೫ ಲಕ್ಷ ರೂ ಕೊಡಲು ಒಪ್ಪಿರುವರಲ್ಲದೆ, ಆಸ್ಪತ್ರೆಯನ್ನು ನಿರ್ಮಿಸಿ, ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಲು ಆಂಧ್ರ ಸರ್ಕಾರದವರು ಆಲೋಚಿಸಿರುವರೆಂದೂ ವರದಿಯಾಗಿದೆ

ಪತ್ನಿಯು ಕತ್ತು ಹಿಸುಕುವುದಾಗಿ ಬೆದರಿಸಲು ಪತಿಗೆ ಹಕ್ಕು!

ಹೆಂಡತಿಯನ್ನು ಕತ್ತು ಹಿಸುಕಿ ಕೊಲ್ಲಲು ಅವಕಾಶವಿಲ್ಲದಿದ್ದರೂ, ಆ ರೀತಿ ಮಾಡುವುದಾಗಿ ಬೆದರಿಸಲು ಗಂಡನಾದವನಿಗೆ ಸಂಪೂರ್ಣವಾದ ಹಕ್ಕಿದೆಯೆಂದು ಅಮೆರಿಕದ ಬಾಲ್ಟಿಮೋರ್ ನಗರದ ನ್ಯಾಯಾಧೀಶರೊಬ್ಬರು ಮೊಕದ್ದಮೆಯೊಂದರಲ್ಲಿ ತೀರ್ಪಿತ್ತಿದ್ದಾರೆ ಥಾಮಸ್ ಮಲ್ ಹಾಲ್ ಫ್ ಎಂಬಾತನು ಮನೆಯಲ್ಲಿ ಟೆಲಿವಿಷನ್ ಪ್ರದರ್ಶನವೊಂದನ್ನು ನೋಡಿ ಆನಂದಿಸುತ್ತಿದ್ದಾಗ ಅವನ ಹೆಂಡತಿಯು ಒಂದು ಅದನ್ನು ಆರಿಸಿದ ಕಾರಣ ಅವನು ಈ ರೀತಿ ಬೆದರಿಕೆ ಹಾಕಲು ಅವಳು ಅವನ ಮೇಲೆ ಕೋರ್ಟಿಗೆ ದೂರಿತ್ತಿದ್ದಳು ನ್ಯಾಯಾಧೀಶರು ಮೇಲ್ಕಂಡಂತೆ ತೀರ್ಪಿತ್ತು, ಆತನನ್ನು ಖುಲಾಸೆ ಮಾಡಿದರು

ಪ್ರಾದೇಶಿಕ ಖೊಖೊ ಶಿಕ್ಷಣ ಶಿಬಿರದ ಆರಂಭೋತ್ಸವ

ನಗರದ ಪಯೊನೀರ್ಸ್ ಸ್ಪೋರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಸ ಸ್ಥಾನಸಜ್ಜ ಪ್ರಹಾಂತ ಏರ್ಪಡಿಸಿದ್ದ ೧೦ ದಿನದ ಪ್ರಾದೇಶಿಕ ಖೊಖೊ ಶಿಕ್ಷಣದ ಆರಂಭೋತ್ಸವವು ಪುರಸಭಾಧ್ಯಕ್ಷ ಡಿ ಎಸ್ ಸಿ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ಸಂಜೆ ನಡೆದು ಖೊಖೊ ಶಿಕ್ಷಣದ ವಿಷಯವಾಗಿ ಹಲವು ಮುಖಂಡರು ಭಾಷಣ ಮಾಡಿ ಇಂತಹ ಸಂಸ್ಥೆಗಳಿಗೆ ಸಾರ್ವಜನಿಕರೂ ಮತ್ತು ಸರ್ಕಾರದವರೂ ಸಹಾಯ ಮಾಡಬೇಕೆಂದು ತಿಳಿಸಿದ ಪ್ರಾದೇಶಿಕ ಭವನ್ನು ಸಂಘದ ಜ ಟಿ ಈ. ಸೆಕ್ರೆಟರಿ ಶ್ರೀ ಕೈಲಾಸ ಕುಮಾರ್‌ರವರು ಸ್ವಾಗತ ಭಾಷಣ ಮಾಡಿ ಶಿಕ್ಷಣ ಶಿಬಿರದ ಉದ್ದೇಶವನ್ನು ವಿವರಿಸಿ ಸಾರ್ವಜನಿಕರ ಸಹಕಾರವನ್ನು ಕೋರಿದರು ಕಡೆಯಲ್ಲಿ ಅಧ್ಯಕ್ಷರು ಭಾಷಣ ಮಾಡಿ, ಕ್ರೀಡೆಗಳ ಅಭಿವೃದ್ಧಿಗಾಗಿ ತಾವು ಶ್ರಮಿಸುವುದಾಗಿ ಭರವಸೆಯಿತ್ತು ಶಿಕ್ಷಣ ಶಿಬಿರವು ಯಶಸ್ವಿಯಾಗಿ ನಡೆಯಲೆಂದು ಹಾರೈಸಿದರು ನಂತರ, ಕಾರ್ಯದರ್ಶಿಗಳಾದ ಎಸ್ ರಾಜಾರಾವ್ ರವರು ವಂದನಾರ್ಪಣೆ ಮಾಡಿದರು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆಯ ಆರಂಭೋತ್ಸವ

ನಗರದ ಚಿತ್ರ ಕಲಾ ಸಂಸ್ಥೆಯವರ ಆಶ್ರಯದಲ್ಲಿ ಏರ್ಪಟ್ಟಿರುವ ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆಯ ಆರಂಭೋತ್ಸವವನ್ನು ಈ ಸಂಜೆ ೫॥ ಗಂಟೆಗೆ ಟೌನ್‌ಹಾಲಿನಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚೆನ್ನಯ್ಯನವರು ನೆರವೇರಿಸುವರು ನಾಳೆ ದಿನ ಕಾರ್ಯ ಕಲಾಪಗಳ ಅಧ್ಯಕ್ಷತೆಯನ್ನು ಪೌರಸಭಾಧ್ಯಕ್ಷ ಶ್ರೀ ಸಂಜೀವಯ್ಯನವರು ವಹಿಸುವರು

ಪ್ರಾಚ್ಯ ಸಂಶೋಧನಾಲಯಕ್ಕೆ ಡೆನ್ಮಾರ್ಕ್ ಪ್ರೊಫೆಸರರ ಭೇಟಿ

ಡೆನ್ಮಾರ್ಕಿನ ೦೨ ಜ ಥಾ ನಿ ಕೋಪನ್‌ಹೇಗನ್ನಿನ ವಿಶ್ವವಿದ್ಯಾಲಯದ ಪ್ರೊ॥ ಎಲಿ ಫಿಷರ್ ಯೊರ್ಗೆನ್‌ಸನ್‌ರವರು ಇಲ್ಲಿನ ಪ್ರಾಚ್ಯ ಸಂಶೋಧನಾಲಯಕ್ಕೆ ಭೇಟಿಯಿತ್ತು ಅನೇಕ ಅಪೂರ್ವ ಗ್ರಂಥಗಳನ್ನು ಆಸಕ್ತಿಯಿಂದ ಪರಿಶೀಲಿಸಿದರು ಆಲಯದ ಮುಖ್ಯಾಧಿಕಾರಿ ಶ್ರೀ ದೇವೀರಪ್ಪನವರು ಅವರಿಗೆ ಅಲ್ಲಿನ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು

೧೦ ವರ್ಷದ ಪತ್ನಿ ಮತ್ತು ೧೯ ವರ್ಷದ ಪತಿಗಳ ದಾಂಪತ್ಯ ವಿಚ್ಛೇದನ

ಉತ್ತರ ಅಮೆರಿಕದ ಮಿಸ್ಸೌರಿ ಪ್ರಾಂತ್ಯದಲ್ಲಿ ಕಳೆದ ತಿಂಗಳು ೧೮ನೇ ತಾರೀಕು ಹತ್ತು ವರ್ಷದ ಒಬ್ಬ ಕನ್ಯೆಗೂ ಮತ್ತು ೧೯ ವರ್ಷದ ಒಬ್ಬ ಯುವಕನಿಗೂ ನಡೆದಿದ್ದ ವಿವಾಹವನ್ನು ಅಲ್ಲಿನ ನ್ಯಾಯಾಧೀಶರು ಅಕ್ರಮವೆಂದು ತೀರ್ಪಿತ್ತು, ತರುಣ ದಂಪತಿಗಳು ನ್ಯಾಯಬದ್ಧವಾಗಿ ಪ್ರತ್ಯೇಕವಾಗಬೇಕೆಂದು ಸೂಚನೆಯಿತ್ತಿರುವರು ವಧೂವರರ ತಂದೆತಾಯಿಗಳ ಅನುಮತಿ ಮೇರೆ ಈ ವಿವಾಹವು ನಡೆದಿತ್ತು ದಂಪತಿಗಳನ್ನು ಪ್ರತ್ಯೇಕಿಸಿದ ನಂತರ ಕನ್ಯೆಯನ್ನು ತಂದೆ ತಾಯಿಗಳ ವಶದಲ್ಲೇ ಬೆಳೆಯಲು ಬಿಡುವುದೇ ಅಥವಾ ಅವಳ ಗಂಡನ ವಶಕ್ಕೇ ಒಪ್ಪಿಸುವುದೇ ಎಂಬ ಅಂಶವನ್ನು ಈಗ ನ್ಯಾಯಾಧೀಶರೇ ನಿರ್ಧರಿಸಬೇಕಾಗಿದೆ ೧೫ ವರ್ಷದೊಳಗಿರುವವರ ವಿವಾಹಕ್ಕೆ ನ್ಯಾಯಾಧೀಶರ ಅನುಮತಿ ಪಡೆಯಬೇಕೆಂಬ ನಿಯಮವು ಅಲ್ಲಿ ಜಾರಿಯಲ್ಲಿರುವುದರಿಂದ, ಹುಡುಗಿಯ ಗಂಡನು ಆಕೆಗೆ ೧೬ ವರ್ಷವಾಗಿರುವುದೆಂದು ಸುಳ್ಳು ಹೇಳಿ ವಿವಾಹವಾಗಿದ್ದನೆಂದು ವರದಿಯಾಗಿದೆ.

ಕೃಷ್ಣರಾಜನಗರದಲ್ಲಿ ಮಹಾರಾಜರ ವರ್ಧಂತಿ

ಕೃಷ್ಣರಾಜನಗರದ ಪ್ರಾಥಮಿಕ ಶಾಲೆಯ ಆವರಣದಲ್ಲಿ ವಿಶಾಲ ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರ ೩೯ನೇ ವರ್ಷದ ವರ್ಧಂತ್ಯುತ್ಸವವನ್ನು ಕಳೆದ ಗುರುವಾರ ಆಚರಿಸಲಾಯಿತು ಇದರ ಅಂಗವಾಗಿ ಊರಿನ ಗಣ್ಯವ್ಯಕ್ತಿಗಳೂ ಚಿಲ್ಲರೆ ಅಂಗಡಿ ಮಾಲೀಕರೂ ಆದ ಶ್ರೀ ಟಿ. ಬೋಜರಾಯರು ಮಕ್ಕಳಿಗೆ ಸಿಹಿ ತಿಂಡಿ ಹಂಚಿ ಉದಾರ ಸಹಾಯ ಮಾಡಿದರು ವಿಶೇಷ ಪ್ರಾರ್ಥನೆ ಮತ್ತು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಲಂಚಕ್ಕಾಗಿ ಆರೋಗ್ಯ ಇನ್ಸ್‌ಪೆಕ್ಟರರ ದಸ್ತಗಿರಿ

ಹಾಲಿನ ಅಂಗಡಿಗಳನ್ನು ನಡೆಸಲು ರಹದಾರಿ ಕೊಡಿಸುವುದಾಗಿ ಹೇಳಿ ಜನರಿಂದ ಲಂಚ ಪಡೆದರೆಂಬ ಕಾರಣಕ್ಕಾಗಿ ಬೆಂಗಳೂರಿನ ಆರೋಗ್ಯ ಇನ್ಸ್‌ಪೆಕ್ಟರ್ ಶ್ರೀ ಸೀತಾರಾಮಯ್ಯನವರನ್ನು ಅಲ್ಲಿನ ಪೊಲೀಸರು ನೆನ್ನೆ ಬಂಧಿಸಿದರು

ಸೆಪ್ಟೆಂಬರ್ ೨೫ರಂದು ಬಾರ್ ಕೌನ್ಸಿಲ್ ಪರೀಕ್ಷೆ

ಮೈಸೂರು ಬಾರ್ ಕೌನ್ಸಿಲಿನ ಪರೀಕ್ಷೆಗಳು ಸಪ್ಟೆಂಬರ್ ೨೫ರಂದು ನಡೆಯುವುವೆಂದು ಗೊತ್ತಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ವೇದ ೭ ೧೫ ದೇವರನಾಮ ೬-೧೫ ಟಿ ಕೃಷ್ಣಯ್ಯಂಗಾರ್-ಸಂಗೀತ ೯-೩೦ ಬಾಲಜಗತ್ ಮಧ್ಯಾಹ್ನ ೧೨ ಸಂಗೀತ. ೧೨-೩೦ ವಾದ್ಯಗೋಷ್ಠಿ ೧-೨೦ ಗೀತಾಮಂಜರಿ ೧-೫೦ ವಿ ಶ್ರೀನಿವಾಸಯ್ಯಂಗಾರ್-ಗೋಟುವಾದ್ಯ ೨ ೧೫ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೬ ೧೦ ಗೀತಾವಳಿ ೭-೩೦ ಕಾರ್ಯಕ್ರಮ ವಿವರಣೆ ೮ ಮತ್ತು ೧೦ ೩೦ ವಿ. ಎಲ್ ಅನ್ನಪೂರ್ಣೆ-ಗಾಯನ ೮-೧೫ ಚಿತ್ರ ಸಂಗೀತ ೯ ೩೦ ಸಂಗೀತ ೧೧ ವಿ. ಶ್ರೀನಿವಾಸಯ್ಯಂಗಾರ್-ಗೋಟುವಾದ್ಯ

ಪ್ಯಾರಿಸ್ಸಿನ ಜೈಲು ವಾರ್ಡರುಗಳ ಮುಷ್ಕರ

ಖೈದಿಗಳ ದಂಗೆ

ಪ್ಯಾರಿಸ್ಸಿನ ಸ್ಯಾಂಟೆ ಎಂಬ ಜೈಲಿನಲ್ಲಿ ಕಳೆದ ಮಂಗಳವಾರ ವಾರ್ಡರುಗಳು ಮುಷ್ಕರ ಹೂಡಿದಾಗ, ಅಲ್ಲಿ ಬಂಧಿಸಲ್ಪಟ್ಟಿದ್ದ ಸುಮಾರು ೨೫೦ ಮಂದಿ ಖೈದಿಗಳು ಅದೇ ಸಮಯದಲ್ಲಿ ದಂಗೆಯೆದ್ದು ಪರಸ್ಪರ ಹೊಡೆದಾಡಿ, ಜೈಲಿನ ಬಾಗಿಲು, ಮರಮುಟ್ಟುಗಳನ್ನು ಮುರಿದು, ಬೆಂಕಿ ಹಚ್ಚಿದರೆಂದು ವರದಿಯಾಗಿದೆ ಜೈಲಿನಲ್ಲಿ ಬಂಧಿತನಾಗಿದ್ದ ಅಲ್ಜೀರಿಯದ ದಂಗೆಕೋರನಾಯಕ ಬೆನ್ ಬೆಲ್ಲಾ ಎಂಬುವನನ್ನು ಖೈದಿಗಳು ಖುಲಾಸೆ ಮಾಡಿದರು ಅವರುಗಳು ಶಾಂತರಾಗಿರಬೇಕೆಂದು ಆತನು ಬುದ್ಧಿವಾದ ಹೇಳಿದನು ಜೈಲಿನ ಅಧಿಕಾರಿಯೂ, ಶಿಸ್ತಿನಿಂದ ವರ್ತಿಸುವಂತೆ ಅವರಿಗೆ ತಿಳಿಸಲಾಗಿ ಆತನನ್ನು ಇಟ್ಟಿಗೆ ಚೂರುಗಳಿಂದ ಗಾಯಗೊಳಿಸಲಾಯಿತು ೫೦೦ ಮಂದಿ ಪೊಲೀಸರು ಜೈಲಿನ ಸುತ್ತಲೂ ಕಾವಲಿಗಾಗಿ ನಿಂತಿರುವರು ಅಗ್ನಿ ಶಾಮಕದಳದವರು ಬೆಂಕಿಯನ್ನು ಆರಿಸಿದರು

ಉತ್ತರ ಮಲಬಾರಿನಲ್ಲಿ ಸರ್ಕಸ್ ಶಿಕ್ಷಣ ಶಾಲೆ

ಉತ್ತರ ಮಲಬಾರಿನ ತಲಚೇರಿ, ಅಥವಾ ಕದಿರೂರು, ಇಲ್ಲವೇ ಮಾಹೆಯಲ್ಲಿ ಒಂದು ಖಾಸಗಿ ಸರ್ಕಸ್ ಶಿಕ್ಷಣ ಶಾಲೆಯನ್ನು ತೆರೆಯಲು ಸಿದ್ಧತೆಗಳಾಗುತ್ತಿರುವುದೆಂದು ಹೇಳಲಾಗಿದೆ. ೧೨ ವರ್ಷದೊಳಗಿರುವ ಬಡವರು ಮತ್ತು ಅನಾಥ ಬಾಲಕ ಬಾಲಕಿಯರನ್ನು ಸೇರಿಸಿಕೊಂಡು ತರಪೇತು ಕೊಡಲಾಗುವುದು ಅಲ್ಲದೆ ಶಾಸ್ತ್ರೀಯ ಜನಗಳನ್ನೂ ಹೇಳಿಕೊಡಲಾಗುವುದು

ಹೊಸ ಮನೆಗಳಿಗೆ ಬಾಡಿಗೆ ಹತೋಟಿ ಶಾಸನದ ವಿನಾಯಿತಿ

ಬರುವ ತಿಂಗಳು ಒಂದನೇ ತಾರೀಕಿನ ನಂತರ ಕಟ್ಟಲಾಗುವ ಅಥವಾ ಆ ವೇಳೆಗೆ ಕಟ್ಟಿ ಪೂರೈಸುವ ಹೊಸಮನೆಗಳಿಗೆ ಸಂಸ್ಥಾನ ಸರ್ಕಾರದವರು ಬಾಡಿಗೆ ಹತೋಟಿ ಶಾಸನದ ವಿನಾಯಿತಿ ಕೊಟ್ಟಿರುವರು ಇದು ಹಳೇ ಮೈಸೂರು, ಕೊಡಗು ಮತ್ತು ಮಂಗಳೂರಿಗೆ ಅನ್ವಯಿಸುವುದು.

ನಗರದಲ್ಲಿ ಫ್ಲೂ ಪರಿಸ್ಥಿತಿ

ನಗರದಲ್ಲಿ ಮೊನ್ನೆ ದಿನ ೧೬ ಮಂದಿಗೆ ಇನ್‌ಫ್ಲುಯೆಂಜಾ ತಗಲಿತು ಒಟ್ಟು ೪ ೦೧೪ ಮಂದಿ ಈ ರೋಗದಿಂದ ಪೀಡಿತರಾಗಿದ್ದರು.

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲೆ ಬೀದಿ,
ಮೈಸೂರು

ಶ್ರೇಷ್ಠತರವಾದ ಅಗರಬತ್ತಿ, ಗಂಧದ ಬಳ್ಳಿ, ಕಾಶ್ಮೀರದ ಕೇಸರಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ಇಂದೇ ಭೇಟಿ ಕೊಡಿ

Edited, Printed and Published by A R Nagarajan at Sadhvi Press, D Subbiah Road Mysore

THE CHAMPION METROPOLITAN COLLEGE OF COMMERCE

Co operators Home 100 Road, Mysore

78 per cent-100 per cent GOOD RESULTS IN several subjects & Grades

APPLICATIONS FOR ADMISSION are now being received in the mornings and in the evenings for classes leading to DIPLOMA IN COMMERCE Diploma in Stenography COST & WORKS ACCOUNTANCY, Banking, Shorthand, Typewriting etc.

Estd. 1917 - Fully qualified full-time staff — Educational atmosphere — Fine building and up-to-date equipment — Decent Library and Reading Room — Western Business education in the East — Good results — College's Own Diploma also

M S PUTTANNA, B Sc, N D Com, F I B — *Vice-Principal.*

P. SUBBARAYA SASTRY, M A, M A (Com), F.I.B. — *Principal*

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 2 ನಯಾ ಪೈಸೆ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೧೫] SADHVI । SUNDAY 21—7—1957 ಮೈಸೂರು । ಭಾನುವಾರ ೨೧—೭—೧೯೫೭ । [ಸಂಚಿಕೆ : ೩೪

– ತೆರಿಗೆ ತಪ್ಪಿಸಿಕೊಳ್ಳುವವರನ್ನು ಶಿಕ್ಷಿಸಲು ಶಾಸನ –

ತೆರಿಗೆ ತಪ್ಪಿಸಿಕೊಳ್ಳುವವರಿಗೆ ಕಾರಾಗೃಹ ವಾಸ

ಕಾನೂನನ್ನು ಬಿಗಿಗೊಳಿಸಲು ಕೇಂದ್ರ ಸರ್ಕಾರದ ಪರ್ಯಾಲೋಚನೆ

ತೆರಿಗೆದಾರರು ತಮ್ಮ ಕಂದಾಯದ ಬಾಕಿಯ ಬಗ್ಗೆ ಅಧಿಕಾರಿಗಳ ಮುಂದೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾಗುವುದೆಂದೂ, ಅವು ಸುಳ್ಳೆಂದು ಕಂಡುಬಂದಲ್ಲಿ ಅವನ್ನು ಕೊಟ್ಟವರು ಕಾರಾಗೃಹ ವಾಸ ಮಾಡಬೇಕಾಗಬಹುದೆಂದೂ ವರದಿಯಾಗಿದೆ. ಈ ಸಂಬಂಧವಾಗಿ ಕೇಂದ್ರದವರು ತೆರಿಗೆ ಶಾಸನವನ್ನು ಬಿಗಿಗೊಳಿಸಲು ಆಲೋಚಿಸುತ್ತಿರುವರು. ತೆರಿಗೆ ತಪ್ಪಿಸಿಕೊಳ್ಳುವುದನ್ನು ತಡೆಗಟ್ಟಲು ಕೇಂದ್ರದವರು ಆಲೋಚಿಸಿರುವ ಕ್ರಮಗಳಲ್ಲಿ ಇದೊಂದು. ವರಮಾನ ತೆರಿಗೆಯನ್ನು ಕೊಡದೆ ಇರುವ ಬಗ್ಗೆ ಸರ್ಕಾರಕ್ಕೆ ಅನೇಕ ದೂರುಗಳು ಬಂದಿವೆ. ಈ ತೆರಿಗೆದಾರರು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಈಗ ಅವರಿಗೆ ದಂಡವನ್ನು ವಿಧಿಸುವ ಅವಕಾಶ ಮಾತ್ರವಿದೆ. ಪುಸ್ತಕಗಳನ್ನು ತೆರಿಗೆದಾರರು ಪರಿಶೀಲನೆಗೆ ಒಪ್ಪಿಸದಿದ್ದರೆ ಅಧಿಕಾರಿಯು ತನಗೆ ತೋರಿದಷ್ಟು ತೆರಿಗೆಯನ್ನು ವಿಧಿಸಲೂ ಅವಕಾಶವಿದೆ. ಇನ್ನು ಮುಂದೆ ತಮ್ಮ ವರಮಾನಗಳನ್ನು ಬಚ್ಚಿಟ್ಟಿಲ್ಲವೆಂಬ ಪ್ರಮಾಣ ಪತ್ರಗಳಿಗೆ ತೆರಿಗೆದಾರರು ರುಜು ಹಾಕಬೇಕಾಗುವುದು.

ಅಮೆರಿಕದಲ್ಲಿ ಇಂತಹ ಕಾನೂನು ಇದೆ. ಅಲ್ಲಿ ಅಲ್ ಕೆಪೋನ್ ಎಂಬುವನೂ ಅವನ ಗ್ಯಾಂಗಿನವರೂ ಅನೇಕ ಬಾರಿ ಹಿಂದೆ ತೆರಿಗೆ ತಪ್ಪಿಸಿಕೊಂಡಿದ್ದು ಕಡೆಗೆ ಅವರನ್ನು ಹಿಡಿದು ಜೈಲಿಗೆ ಕಳುಹಲಾಗಿತ್ತು.

ಅರೇಬಿಯದ ರಾಜ್ಯದಲ್ಲಿ ದಂಗೆ ಅಡಗಿಸಲು ಬ್ರಿಟಿಷ್ ಸೇನೆ ರವಾನೆ

ಅರೇಬಿಯದ ಆಗ್ನೇಯ ಭಾಗದಲ್ಲಿರುವ ಮಸ್ಕತ್ ಮತ್ತು ಒಮಾನ್ ರಾಜ್ಯದ ಸುಲ್ತಾನರ ವಿರುದ್ಧವಾಗಿ ಅಲ್ಲಿನ ಗುಡ್ಡಗಾಡಿನ ಜನರು ದಂಗೆಯೆದ್ದಿರುವರೆಂದೂ, ಅದನ್ನು ಅಡಗಿಸಲು ಬ್ರಿಟಿಷ್ ಸೈನ್ಯಗಳನ್ನು ವಿಮಾನಗಳ ಮೂಲಕ ಅಲ್ಲಿಗೆ ರವಾನೆ ಮಾಡಲಾಗುವುದೆಂದೂ ಗೊತ್ತಾಗಿದೆ. ಬ್ರಿಟಿಷ್ ಅಧಿಕಾರಿಗಳ ನೇತೃತ್ವದಲ್ಲಿ ಕೆಲಸ ಮಾಡುತ್ತಿರುವ ರಾಜ್ಯದ ಸೈನಿಕರು ದಂಗೆಕಾರರನ್ನು ಎದುರಿಸುತ್ತಿರುವರು. ಅಲ್ಲಲ್ಲಿ ಘರ್ಷಣೆಗಳು ಆಗುತ್ತಿರುವುವೆಂದೂ ಹೇಳಲಾಗಿದೆ. ದಂಗೆಕಾರರಿಗೆ ಸೌದಿ ಅರೇಬಿಯಾದವರ ಬೆಂಬಲವಿರುವುದೆಂದು ಕಾಣಬರುತ್ತದೆ. ತಮಗೆ ಸೈನ್ಯ ಸಹಾಯ ಒದಗಿಸುವಂತೆ ಸುಲ್ತಾನರು ಬ್ರಿಟಿಷರನ್ನು ಪ್ರಾರ್ಥಿಸಿರುತ್ತಾರೆ. ಈ ರಾಜ್ಯವು ಬ್ರಿಟಿಷರ ಆಶ್ರಿತ ಸಂಸ್ಥಾನವಾಗಿದೆ.

ಲ್ಹಾಸಾದಿಂದ ಚೀಣಾ ಸೈನಿಕರ ಪೂರ್ಣ ವಾಪಸು

ಆರು ವರ್ಷಗಳಿಂದ ಲ್ಹಾಸಾ ನಗರದಲ್ಲಿ ನೆಲಸಿದ್ದ ಚೀಣಾದ ಸೈನಿಕರ ಕಡೆಯ ಪಡೆಯೂ ಸಹ ಅಲ್ಲಿಂದ ವಾಪಸು ಹೊರಟಿದೆ. ಆ ದೇಶದಿಂದ ತಮ್ಮ ಸೈನಿಕರನ್ನು ಹಿಂದಕ್ಕೆ ಕರೆಸುವುದಾಗಿ ಚೀಣಾ ಸೈನಿಕರು ಸೂಚಿಸಿದ್ದರು.

ಪ್ರ॥ ಕಾಂಗ್ರೆಸ್ ಅಧಿಕಾರಿಗಳಾಗಿ ಲೋಕಸಭಾಸದರು ಬರುವಂತಿಲ್ಲ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯ

ಪ್ರದೇಶ ಕಾಂಗ್ರೆಸ್ ಅಥವಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮತ್ತು ಕಾರ್ಯದರ್ಶಿ ಸ್ಥಾನಗಳನ್ನೂ, ಲೋಕಸಭೆ ಮತ್ತು ರಾಜ್ಯ ಸಭೆ ಸದಸ್ಯಸ್ಥಾನಗಳನ್ನೂ ಏಕಕಾಲದಲ್ಲಿ ಕಾಂಗ್ರೆಸ್ಸಿನವರು ಹೊಂದಿರುವ ಪದ್ಧತಿಯನ್ನು ಕೊನೆಗಾಣಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ. ಇನ್ನು ಮುಂದೆ ಪಾರ್ಲಿಮೆಂಟ್ ಸದಸ್ಯರು ಆ ಸ್ಥಾನಗಳನ್ನು ಹೊಂದಿರುವಂತಿಲ್ಲ. ಈ ವರ್ಷ ನಡೆಯುವ ಕಾಂಗ್ರೆಸ್ ಸಂಸ್ಥೆಯ ಚುನಾವಣೆ ಸಮಯದಲ್ಲಿ ಈ ನಿರ್ಧಾರವು ಜಾರಿಗೆ ಬರುವುದು.

ಸಂಸ್ಥಾನ ಶಾಸನ ಸಭೆಗಳ ಸದಸ್ಯರ ಬಗ್ಗೆ ಇಷ್ಟು ಕಟ್ಟುನಿಟ್ಟಾದ ನಿಯಮವನ್ನು ಮಾಡಿಲ್ಲ. ಆದರೆ ಕಾಂಗ್ರೆಸ್ ಶಾಸನಸಭಾ ಸದಸ್ಯರೂ ಸಹಾ ಎರಡು ಸ್ಥಾನಗಳಲ್ಲಿರುವುದನ್ನು ಆದಷ್ಟು ಮಟ್ಟಿಗೆ ತಪ್ಪಿಸಬೇಕೆಂದು ಸಲಹೆ ಮಾಡಲಾಗಿದೆ. ಈಗ ಅನೇಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳು ಪಾರ್ಲಿಮೆಂಟಿನಲ್ಲಿರುತ್ತಾರೆ.

ಬರುವ ವರ್ಷದಿಂದ ಮೆಟ್ರಿಕ್ ಅಳತೆ ಮತ್ತು ತೂಕದ ಜಾರಿ

ಬರುವ ವರ್ಷ ಏಪ್ರಿಲ್ಲಿನಿಂದ ಅಳತೆ ಮತ್ತು ತೂಕದಲ್ಲಿ ಮೆಟ್ರಿಕ್ ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ಕ್ರಮ ಕೈಗೊಳ್ಳಲು ಸಿದ್ಧವಿರುವುದಾಗಿ ದೆಹಲಿಯಲ್ಲಿ ಸೇರಿರುವ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳ ಪ್ರತಿನಿಧಿಗಳ ಸಮ್ಮೇಳನದಲ್ಲಿ ಸಂಸ್ಥಾನಗಳ ಬಹು ಮಂದಿ ಪ್ರತಿನಿಧಿಗಳು ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಅಸ್ಸಾಂ ಮತ್ತು ಮದ್ರಾಸು ಸರ್ಕಾರಗಳ ಪ್ರತಿನಿಧಿಗಳು ೧೯೬೦ ರಿಂದ ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಸಲಹೆ ಮಾಡಿರುತ್ತಾರೆ. ಆ ಸಂಸ್ಥಾನಗಳಲ್ಲಿ ಈ ಕಾನೂನನ್ನು ಜಾರಿಗೆ ತರಲು ಸಾಕಾದಷ್ಟು ಸಿಬ್ಬಂದಿ ಇಲ್ಲವೆಂದು ಅವರುಗಳು ಹೇಳಿರುವರು. ಪಾರ್ಲಿಮೆಂಟಿನ ಶಾಸನದ ಪ್ರಕಾರ ೧೯೬೮ರ ಕೊನೆಯೊಳಗೆ ಈ ಪದ್ಧತಿಯು ಪೂರ್ಣವಾಗಿ ಜಾರಿಗೆ ಬಂದಿರಬೇಕು.

ಉತ್ತರ ಪ್ರದೇಶದಲ್ಲಿ "ಖೊಟ್ಟಿ ಟಂಕಸಾಲೆ" ಪತ್ತೆ

ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯ ಚುನಾರ್ ಎಂಬಲ್ಲಿ ಪೋಲೀಸರು ಖೊಟ್ಟಿ ಟಂಕಸಾಲೆಯೊಂದನ್ನು ಪತ್ತೆ ಹಚ್ಚಿ, ಹತ್ತು ರೂಗಳ ೩,೦೦೦ ನೋಟುಗಳನ್ನೂ, ಹಲವು ಸಾಮಗ್ರಿಗಳನ್ನೂ ವಶಪಡಿಸಿಕೊಂಡಿರುತ್ತಾರೆ. ಮೂವರನ್ನು ಬಂಧಿಸಿ ಕಲ್ಕತ್ತಾವಿಗೆ ಕರೆದುಕೊಂಡುಹೋಗಲಾಗಿದೆ. ಮೂವರು ಮಹಿಳೆಯರೂ ಸೇರಿ, ೨೫ ಮಂದಿಯನ್ನು ಕಲ್ಕತ್ತಾ ಬಳಿ ಇತ್ತೀಚೆಗೆ ಪೋಲೀಸರು ದಸ್ತಗಿರಿ ಮಾಡಿ ಅವರಿಂದ ಖೋಟಾ ನೋಟುಗಳನ್ನು ವಶಪಡಿಸಿಕೊಂಡಿದ್ದರು. ಈ ಜನರು ಬಂಗಾಳ, ಬಿಹಾರ್ ಮತ್ತು ಉತ್ತರ ಪ್ರದೇಶಗಳಲ್ಲಿ ಒಂದು ಕೂಟವನ್ನು ರಚಿಸಿಕೊಂಡಿದ್ದರೆಂದು ಹೇಳಲಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರರ ಜಯಂತಿ

ಮೈಸೂರು ೨೧

ಮುಮ್ಮಡಿ ಕೃಷ್ಣರಾಜ ಒಡೆಯರರ ೧೬೩ನೇ ಜಯಂತ್ಯುತ್ಸವವು ಈ ಬೆಳಗ್ಗೆ ಪುರಭವನದಲ್ಲಿ ನೆರವೇರಿತು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯಾದನಂತರ ಉತ್ಸವ ಸಮಿತಿಯ ಸಂಚಾಲಕ ಶ್ರೀ ಜಿ ಆರ್ ಜೋಸ್ಯರ್‌ರವರು ಸ್ವಾಗತ ಭಾಷಣ ಮಾಡಿ, ಮೈಸೂರಿನ ರಾಜ ಮನೆತನದ ವೈಭವದ ಸ್ಮಾರಕಗಳ ಸಂಗ್ರಹಾಲಯವನ್ನು ಏರ್ಪಡಿಸಲು ಕ್ರಮ ಕೈಗೊಳ್ಳಬೇಕೆಂದು ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡರು.

ಮುಖ್ಯ ಮಂತ್ರಿಗಳು ಭಾಷಣ ಮಾಡಿ ಇತಿಹಾಸವನ್ನು ಜನರು ಕಡೆಗಣಿಸಬಾರದೆಂದು ಹೇಳಿ, ಸರಳತೆ ಮತ್ತಿತರ ಸದ್ಗುಣಗಳಿಂದ ಕೂಡಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರರ ಆದರ್ಶವನ್ನು ಇಂದಿನ ಜನರು ಅನುಸರಿಸಬೇಕೆಂದು ಸೂಚಿಸಿದರು.

ಬಹು ಹಿಂದೆ ಮೈಸೂರಿಗೆ ಸೇರಿದ್ದು ಈಗ ಲಂಡನ್ನಿನ ವಿಂಡ್ಸರ್ ಕ್ಯಾಸಲ್ ಅರಮನೆಯಲ್ಲಿರುವ ರತ್ನಖಚಿತವಾದ ವ್ಯಾಘ್ರಾಸನವನ್ನು ವಾಪಸು ತರಿಸಿಕೊಡುವಂತೆ ತಾವು ನೆಹರೂರವರನ್ನು ಕೋರಲಿರುವುದಾಗಿಯೂ ಮುಖ್ಯ ಮಂತ್ರಿಗಳು ತಿಳಿಸಿದರು.

ಕರಾಚಿಗೆ ಅಮೆರಿಕಾ ಟ್ಯಾಂಕುಗಳ ಆಗಮನ

ಕರಾಚಿಗೆ ಅಮೆರಿಕದಿಂದ ಟ್ಯಾಂಕುಗಳನ್ನು ಹಡಗಿನಲ್ಲಿ ತಂದಿಳಿಸಲಾಗಿದೆಯೆಂದು ಪಾಕಿಸ್ತಾನ ಸರ್ಕಾರದವರು ಪ್ರಕಟಿಸಿರುತ್ತಾರೆ. ಅಮೆರಿಕವು ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯವನ್ನು ಕೊಡುವ ಸಂಬಂಧವಾಗಿ ಇಂತಹ ಸರಬರಾಜು ಇನ್ನೂ ಅನೇಕವು ಆಗಲಿವೆ. ಈಗ ಬಂದಿರುವ ಪ್ರತಿ ಟ್ಯಾಂಕಿಗೂ ೧೨೫॥ ಸಾವಿರ ಡಾಲರ್ ಬೆಲೆಯಾಗುವುದು. ಎಷ್ಟು ಟ್ಯಾಂಕುಗಳು ಬಂದಿರುವುವೆಂಬುದನ್ನು ತಿಳಿಸಿಲ್ಲ. ಅವುಗಳು ಗಂಟೆಗೆ ೩೭ ಮೈಲಿ ದೂರ ಹೋಗಬಲ್ಲುವೆಂದು ಮಾತ್ರ ತಿಳಿಸಲಾಗಿದೆ.

ಪೋಲೀಸರನ್ನು ಕೊಂದು ಲಾಕಪ್ಪಿನಿಂದ ಖೈದಿಗಳ ಪರಾರಿ

ಇಂದೂರು ಬಳಿ ರಸೋಘರ್ ಎಂಬಲ್ಲಿ ಏಳು ಜನ ವಿಚಾರಣಾ ಖೈದಿಗಳು ಕಳೆದ ಸೋಮವಾರ ಮಧ್ಯಾಹ್ನ ಲಾಕಪ್ಪಿನ ಕಾವಲಿನಲ್ಲಿದ್ದ ಮೂವರು ಪೋಲೀಸರನ್ನು ಗುಂಡು ಹೊಡೆದು ಕೊಂದು, ೯ ಬಂದೂಕಗಳು, ೪೦೦ ತೋಟಾಗಳು ಮತ್ತು ಒಂದು ಕಬ್ಬಿಣದ ಪೆಟ್ಟಿಗೆಯನ್ನೂ ತೆಗೆದುಕೊಂಡು ಪರಾರಿಯಾದರೆಂದು ವರದಿಯಾಗಿದೆ. ಖೈದಿಗಳು ಭಾರಿ ಡಕಾಯಿತ ಅಮೃತಲಾಲನ ಗುಂಪಿನವರೆಂದು ಹೇಳಲಾಗಿದೆ. ಹತ್ತಿರದ ಕಾಡಿನಲ್ಲಿ ಬರಿದಾದ ಕಬ್ಬಿಣದ ಪೆಟ್ಟಿಗೆಯು ಪೋಲೀಸರಿಗೆ ಸಿಕ್ಕಿದೆ.

ಮಿತವ್ಯಯಕ್ಕಾಗಿ ಶಾಸನ ಸಭೆಗಳ ರದ್ದಿಗೆ ಸದಸ್ಯರ ಸಲಹೆ

ಬೆಂಗಳೂರು ೨೧

ಆಡಳಿತದಲ್ಲಿ ಅಗಾಧವಾದ ವೆಚ್ಚವಾಗುತ್ತಿರುವುದನ್ನು ತಡೆಗಟ್ಟಲು ಶಾಸನ ಸಭೆಗಳನ್ನು ರದ್ದುಪಡಿಸಿ, ಗವರ್ನರರ ರಾಜ್ಯಭಾರವನ್ನು ತರಬೇಕೆಂದು ನೆನ್ನೆ ವಿಧಾನ ಸಭೆಯಲ್ಲಿ ಬೆಳಗಾಂ ಜಿಲ್ಲೆಯ ಖಾನಾಪುರ ಕ್ಷೇತ್ರದ ಸ್ವತಂತ್ರ ಸದಸ್ಯ ಶ್ರೀ ಬಿ ಜಿ ಮೋಟರ್‌ರವರು ಸಲಹೆ ಮಾಡಿದರು. ಆಡಳಿತದ ವೆಚ್ಚವಲ್ಲದೆ, ಚುನಾವಣೆಗಳನ್ನು ನಡೆಸಲು ವಿಶೇಷ ಹಣ ವ್ಯಯವಾಗುತ್ತಿರುವುದೆಂದೂ, ಅದನ್ನು ತಪ್ಪಿಸಿ ಆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಲು, ಹಲವು ದಕ್ಷರಾದ ಆಡಳಿತಗಾರರ ನೆರವಿನೊಡನೆ ಗವರ್ನರರ ರಾಜ್ಯಭಾರವು ನಡೆಯಬೇಕೆಂದೂ, ಅದು ಕೇಂದ್ರ ಸರ್ಕಾರಕ್ಕೆ ಜವಾಬುದಾರಿ ಹೊತ್ತಿರಬೇಕೆಂದೂ ಅವರು ಸೂಚಿಸಿದರು.

ಬ್ರಿಟನ್ನಿನಲ್ಲಿ ಲಕ್ಷ ಮಂದಿ ಬಸ್ ಕೆಲಸಗಾರರ ಮುಷ್ಕರ

ಲಂಡನ್ನಿನಲ್ಲಿ ಇತ್ತೀಚೆಗೆ ಬಸ್ ಕೆಲಸಗಾರರಿಗೆ ವಾರಕ್ಕೆ ಒಂದು ಪೌಂಡು ಸಂಬಳವನ್ನು ಹೆಚ್ಚಿಸಿದ ಬಗ್ಗೆ ತಮಗೂ ಅವರಿಗೂ ಇರುವ ಸಂಬಳದ ಅಂತರವನ್ನು ಕಡಿಮೆ ಮಾಡಬೇಕೆಂದೂ ಮತ್ತು ರಜಾ ಸೌಲಭ್ಯವನ್ನು ಕಲ್ಪಿಸಬೇಕೆಂದೂ ಒತ್ತಾಯಪಡಿಸಿ, ಬ್ರಿಟನ್ನಿನ ಇತರ ಭಾಗಗಳ ಸುಮಾರು ಒಂದು ಲಕ್ಷ ಮಂದಿ ಬಸ್ ಡ್ರೈವರುಗಳು, ಕಂಡಕ್ಟರುಗಳು ಮತ್ತು ಇತರ ಸಿಬ್ಬಂದಿಯವರು ನೆನ್ನೆ ಮುಷ್ಕರವನ್ನು ನಡೆಸಿದರು.

ಪೋಲೀಸರಿಂದ ಪ್ರವಾಹದಲ್ಲಿ ಮುಳುಗುತ್ತಿದ್ದ ೨೦ ಜನರ ರಕ್ಷಣೆ

ಪಟಿಯಾಲಾದಲ್ಲಿ ಇತ್ತೀಚೆಗೆ ಬಂದ ಪ್ರವಾಹದಲ್ಲಿ ಮುಳುಗಿಹೋಗುತ್ತಿದ್ದ ೨೦ ಜನರನ್ನು ಒಬ್ಬ ಪೋಲೀಸನು ಹಗ್ಗದ ಸಹಾಯದಿಂದ ರಕ್ಷಿಸಿರುವುದಾಗಿ ವರದಿಯಾಗಿದೆ. ಮುಳುಗುತ್ತಿದ್ದ ಜನರ ಆರ್ತನಾದವನ್ನು ಕೇಳಿ ಮೊದಲು ದಿಗಿಲುಬಿದ್ದ ಪೋಲೀಸನು ಧೈರ್ಯ ತಂದುಕೊಂಡು, ಅವರುಗಳು ಹಿಡಿದುಕೊಳ್ಳಲು ಒಂದು ಹಗ್ಗವನ್ನು ಎಸೆದು ಅದರ ಸಹಾಯದಿಂದ ಒಬ್ಬೊಬ್ಬರನ್ನಾಗಿ ಮೇಲಕ್ಕೆಳೆದುಕೊಂಡನೆಂದು ಹೇಳಲಾಗಿದೆ.

ನಾಸೆರ್‌ರವರ ವಿರುದ್ಧ ಈಜಿಪ್ಟಿನಲ್ಲಿ ಪಿತೂರಿ

ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರ ವಿರುದ್ಧವಾಗಿ ಕಳೆದ ಏಪ್ರಿಲ್ ತಿಂಗಳಲ್ಲಿ ಒಳಸಂಚೊಂದು ನಡೆದಿತ್ತೆಂದೂ, ಅದರಲ್ಲಿ ಇಬ್ಬರು ಮಂತ್ರಿಗಳೂ ಸೇರಿದ್ದರೆಂದೂ ನಾಸೆರ್‌ರವರು ತಿಳಿಸಿರುತ್ತಾರೆ. ಅದನ್ನು ದಮನ ಮಾಡಲಾಯಿತೆಂದೂ, ಪಿತೂರಿಗಾರರ ವಿಚಾರಣೆಗಾಗಿ ಮಿಲಿಟರಿ ಕೋರ್ಟನ್ನು ನೇಮಿಸಲಾಗಿರುವುದೆಂದೂ ಅವರು ಹೇಳಿರುತ್ತಾರೆ. ನಾಸೆರ್‌ರವರನ್ನು ಕೊಲೆ ಮಾಡಬೇಕೆಂಬ ಉದ್ದೇಶವಿದ್ದಿತೆಂದು ತಿಳಿದು ಬಂದಿದೆ.

ವಾರ ಭವಿಷ್ಯ

ತಾ॥ ೨೧-೭-೫೭ರಿಂದ ೨೭-೭-೫೭ರ ವರೆಗೆ

ಮೇಷ — ಉತ್ತಮ ಫಲ, ಆರೋಗ್ಯ ನೆಟ್ಟಗೆ, ಸಂತೋಷ ಸಮಾರಂಭ, ನಾನಾ ರೀತಿಯಲ್ಲಿ ಧನಲಾಭ, ಮಾನ ಸನ್ಮಾನ, ಪ್ರವಾಸ ಜಯಪ್ರದ, ಸ್ತ್ರೀಯರ ಸಹಕಾರ

ವೃಷಭ :—ಮನೋಶಾಂತಿ ಇಲ್ಲ, ಆರ್ಥಿಕ ಸಮಸ್ಯೆ, ವಿಚಿತ್ರ ವರ್ತನೆ, ವ್ಯಾಪಾರದಲ್ಲಿ ನಿರಾಶೆ, ಸ್ವೀಕೃತ ಕಾರ್ಯ ಕಷ್ಟದಿಂದ ಜಯಪ್ರದ ಪ್ರವಾಸದಲ್ಲಿ ಜಯವಿಲ್ಲ

ಮಿಥುನ —ಮಿಶ್ರಫಲ, ಆರ್ಥಿಕ ಸಮಸ್ಯೆಗಳಿಲ್ಲದಿದ್ದರೂ ಪ್ರಗತಿ ಸಾಧನೆ ಇಲ್ಲ ಸಹೋದರರಲ್ಲಿ ಆಸ್ತಿ ಬಗ್ಗೆ ವೈಮನಸ್ಯ, ಕೋರ್ಟು ಕಾರ್ಯದಲ್ಲಿ ಅಪಜಯ ಶುಭ ಕಾರ್ಯಕ್ಕೆ ಅಡ್ಡಿ, ಪ್ರವಾಸ ಬೇಡ

ಕಟಕ —ಕಳೆದ ವಾರಕ್ಕಿಂತ ಉತ್ತಮ ಸ್ಥಿತಿ, ಧನಲಾಭ, ತೃಪ್ತಿದಾಯಕ ಸ್ಥಿತಿ ಶುಭವಾರ್ತೆ, ಪ್ರವಾಸದಲ್ಲಿ ಸುಖ ಮತ್ತು ಫಲಪ್ರದ, ಆರೋಗ್ಯ ನೆಟ್ಟಗೆ

ಸಿಂಹ —ಪ್ರಗತಿ ಇಲ್ಲ ಕುಟುಂಬದಲ್ಲಿ ಅಶಾಂತಿ, ಆದಾಯಕ್ಕಿಂತ ವ್ಯಯಾಧಿಕ್ಯ ವ್ಯಾಪಾರವ್ಯವಹಾರದಲ್ಲಿ ಜಯವಿಲ್ಲ, ನೌಕರರಿಗೆ ಸಮಸ್ಯೆ, ಪ್ರವಾಸದಲ್ಲಿ ಕಿರುಕುಳ

ಕನ್ಯಾ —ಆರೋಗ್ಯಕ್ಕೆ ಗಮನವಿರಲಿ, ಕುಟುಂಬದಲ್ಲಿ ಅಶಾಂತಿ ಎಷ್ಟೇ ಲಾಭವಿದ್ದರೂ ಅಧಿಕ ವೆಚ್ಚ ಮತ್ತು ಅತೃಪ್ತಿ, ನೌಕರರಿಗೆ ಕಿರುಕುಳ

ತುಲಾ —ಆರ್ಥಿಕ ಸಮಸ್ಯೆ, ಆರೋಗ್ಯ ನೆಟ್ಟಗಿರದು, ಕುಟುಂಬದಲ್ಲಿ ಅಶಾಂತಿ, ಪ್ರಗತಿ ಅಡಚಣೆ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಪ್ರವಾಸದಲ್ಲಿ ಅಪಜಯ ಸ್ತ್ರೀಯರ ಅಸಹಕಾರ

ವೃಶ್ಚಿಕ —ಕಾರ್ಯಗಳಲ್ಲಿ ಸಂಶಯ ಅಗತ್ಯ, ಕುಟುಂಬದಲ್ಲಿ ಅಶಾಂತಿ ಸ್ತ್ರೀಯರ ಅಸಹಕಾರ ಆಸ್ತಿಪಾಸ್ತಿಗಳಲ್ಲಿ ವಾದವಿವಾದ, ಪ್ರವಾಸ ಕಷ್ಟಕರ, ನೌಕರರಿಗೆ ಕಿರುಕುಳ

ಧನುಸ್ಸು —ಉತ್ತಮ ಫಲ, ಆರೋಗ್ಯ ನೆಟ್ಟಗೆ, ಧನಲಾಭ ತೃಪ್ತಿದಾಯಕ ಸ್ಥಿತಿ, ಸ್ವೀಕೃತ ಕಾರ್ಯಗಳು ಸುಲಭ ಸಾಧ್ಯ ಪ್ರವಾಸ ಜಯಪ್ರದ

ಮಕರ ಹೋದವಾರಕ್ಕಿಂತ ಉತ್ತಮ ಸ್ಥಿತಿ ಆರ್ಥಿಕ ಪರಿಸ್ಥಿತಿ ಆಶಾದಾಯಕ ಆರೋಗ್ಯ ಉತ್ತಮ ವ್ಯಾಪಾರವ್ಯವಹಾರದಲ್ಲಿ ಪ್ರಗತಿ ನೌಕರರ ಪ್ರಶಂಸೆ, ಪ್ರವಾಸ ಜಯಪ್ರದ

ಕುಂಭ —ಪ್ರಗತಿ ಉತ್ತಮವಿಲ್ಲ ಆರ್ಥಿಕ ಸಮಸ್ಯೆ ಇಲ್ಲ ಕುಟುಂಬದಲ್ಲಿ ಅಶಾಂತಿ, ಆಸ್ತಿ ವಿವಾದ, ನೌಕರರಿಗೆ ನಿಚ್ಛಿನ ಫಲವಿಲ್ಲ, ಪ್ರವಾಸ ಸ್ಥಿತಿ ಮಧ್ಯಮ

ಮೀನ —ಅನಾರೋಗ್ಯ, ಅಶಾಂತಿ, ಆರ್ಥಿಕ ಸ್ಥಿತಿ ನೆಟ್ಟಗಿರದು, ಶತ್ರು ಕಾಟ, ಸ್ನೇಹಿತರ ವಿಚಿತ್ರ ವರ್ತನೆ, ವ್ಯಾಪಾರದಲ್ಲಿ ಅಭಿವೃದ್ಧಿಯಿಲ್ಲ, ನೌಕರರಿಗೆ ತೊಂದರೆ, ಪ್ರವಾಸಕ್ಕೆ ಅಡ್ಡಿ

ಆಗ್ರಾ ಬಳಿ ಹಳ್ಳಿಯ ಸಂತೆಯಲ್ಲಿ ಪೋಲೀಸರ ಲಾಠಿ ಪ್ರಹಾರ

ನೂಕುನುಗ್ಗಲಿನಲ್ಲಿ ಒಬ್ಬನ ಮರಣ

ಆಗ್ರಾ ಬಳಿ ಪ್ರಸಾಬಾದ್ ಎಂಬ ಹಳ್ಳಿಯ ದನಗಳ ಸಂತೆಯಲ್ಲಿ ಪೋಲೀಸರು ಕಳೆದ ಬುಧವಾರ ಲಾಠಿ ಪ್ರಹಾರ ಮಾಡಿದ ಪರಿಣಾಮವಾಗಿ ಒಬ್ಬನು ಸತ್ತಿದ್ದು, ಅನೇಕರಿಗೆ ಗಾಯಗಳಾದುವೆಂದು ವರದಿಯಾಗಿದೆ ಪ್ಲೇಗ್ ನಿವಾರಣೆಗಾಗಿ ಸಂತೆಯನ್ನು ನಿಷೇಧಿಸಲಾಗಿತ್ತು ಜನರನ್ನು ಚದುರಿಸಲು ಪ್ರಯತ್ನಪಟ್ಟು ವಿಫಲರಾಗಿ ಪೊಲೀಸರು ಲಾಠಿ ಪ್ರಹಾರ ಮಾಡಿದರೆಂದೂ, ಇದರಿಂದ ನೂಕುನುಗ್ಗಲುಂಟಾಗಿ ಒಬ್ಬನು ಸತ್ತನೆಂದೂ ಲೂಟಿಯೂ ನಡೆಯಿತೆಂದೂ ಹೇಳಲಾಗಿದೆ

ಅಂಬರ್ ಚರಖಾ ಪರಿಶ್ರಮಾಲಯದ ಮುಕ್ತಾಯ ಸಮಾರಂಭ

ನಂಜನಗೂಡು ತಾಲ್ಲೂಕು ಹನುಮುಂಬಳ್ಳಿಯಲ್ಲಿ ಕಳೆದ ಮೂರು ತಿಂಗಳಿಂದ ಖಾದಿ ಸಂಸ್ಥೆಯವರು ನಡೆಸುತ್ತಿದ್ದ ಅಂಬರ್ ಚರಖಾ ಪರಿಶ್ರಮಾಲಯದ ಮುಕ್ತಾಯ ಸಮಾರಂಭವು ಗ್ರಾಮಾಧಿಕಾರಿಗಳಾದ ಶ್ರೀ ದೇವರಾಜ ಅರಸರ ಅಧ್ಯಕ್ಷತೆಯಲ್ಲಿ ನಡೆಯಿತು ತಗಡೂರು ಸಂಸ್ಥೆಯ ಮ್ಯಾನೇಜರ್ ಶ್ರೀ ಜ ಸುಂದರಪ್ಪನವರು ಭಾಷಣ ಮಾಡಿ ಜಪಾನಿನ ಜನರನ್ನು ನಮ್ಮವರು ಅನುಕರಿಸಿ ಸದಾ ಉದ್ಯೋಗನಿರತರಾಗಿರಬೇಕೆಂದು ಸೂಚಿಸಿದರು ಅಧ್ಯಕ್ಷರು ಶಿಕ್ಷಣ ಪಡೆದವರಿಗೆ ಚರಖಗಳನ್ನು ಹಂಚಿದರು ಶಿಕ್ಷಕರಾದ ಶ್ರೀ ರಾಮಸ್ವಾಮಯ್ಯಂಗಾರರವರು ವಂದನಾರ್ಪಣೆ ಮಾಡಿದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೧೫ ಮತ್ತು ಮಧ್ಯಾಹ್ನ ೧೨ ಎಂ ಆರ್ ಶ್ರೀನಿವಾಸರಾಘವಾಚಾರ್ ಗಾಯನ ೨-೧೫ ಗಾನ ವಿಹಾರ ಮಧ್ಯಾಹ್ನ ೧೨-೩೦ ಎಲ್ ರಾಜಗೋಪಾಲ್ ವೀಣೆ ೧ ಹಿಂದಿ ಭಜನೆ ೧-೩೦ ವಿ ವಸಂತ-ಗಾಯನ ೧-೪೦ ಎ ಜೋಷಿ ಸಂಗೀತ ೨-೧೫ ಪ್ರಾದೇಶಿಕ ಗಳಿಗೆ ಸಂಜೆ ೬ ೧೦ ಜಾನಪದ ಗೀತೆಗಳು ೬ ೩ ಗ್ರಾಮಸ್ಥರಿಗಾಗಿ ೭ ೩೦ ಪಿ ಎಸ್ ಘೋಷ್ ಸಂಗೀತ ಲಕ್ಷ್ಮಿ ನ ಮತ್ತು ಯುಗಳಗಾನ ೮-೧೫ ನಾಟಕ ಮತ್ತು ನಮ್ಮವರು ೮ ೩೦ ನಿಲಯ ವಿದ್ವಾಂಸರು ಕನ್ನಡ ಬಳಗ ೯ ೩೦ ವಾದ್ಯವೃಂದ ಧರ್ಮವಾದಂತೆ ೯-೩೦ ಎಸ್ ಕೃಷ್ಣಯ್ಯಂಗಾರ್ ಗಾಯನ ೧೦-೩೦ ಎಲ್ ರಾಜಗೋಪಾಲ್-ವೀಣೆ

ಸವರ್ಣೀಯರು ಮತ್ತು ಹರಿಜನರ ನಡುವೆ ವಿವಾಹಕ್ಕಾಗಿ ಉತ್ತೇಜನ

ಮದರಾಸಿನಲ್ಲಿ ವ್ಯವಸ್ಥೆ ಮಾಡುವವರಿಗೆ ಚಿನ್ನದ ಪದಕಗಳ ಬಹುಮಾನ

ಮದರಾಸಿನ ವಿಧಾನ ಸಭೆಯಲ್ಲಿ ಮೊನ್ನೆ ಅಲ್ಲಿನ ಹರಿಜನಾಭಿವೃದ್ಧಿ ಸಚಿವ ಶ್ರೀ ಕಕ್ಕನ್‌ರವರು ಮಾತನಾಡುತ್ತಾ ಸಂಸ್ಥಾನದಲ್ಲಿ ಹರಿಜನರು ಮತ್ತು ಸವರ್ಣ ಹಿಂದುಗಳ ನಡುವೆ ವಿವಾಹ ಸಂಬಂಧವನ್ನು ವ್ಯವಸ್ಥೆ ಮಾಡುವ ಸಮಾಜ ಕಾರ್ಯಕರ್ತರು ಮತ್ತು ಗ್ರಾಮ ಮುಖಂಡರಿಗೆ ಸುವರ್ಣದ ಪದಕಗಳನ್ನು ಕೊಡಲು ಸರ್ಕಾರದವರು ನಿರ್ಧರಿಸಿರುವುದಾಗಿ ತಿಳಿಸಿದರು ಸಭೆಯಲ್ಲಿ ದ್ರಾವಿಡ ಮುನ್ನೇತ್ರ ಸಂಘದ ನಾಯಕ ಅಣ್ಣಾದೊರೈಯವರು ಮಾತನಾಡುತ್ತಾ, ಸರ್ಕಾರದ ಈ ನಿರ್ಧಾರವನ್ನು ಸ್ವಾಗತಿಸಿ, ಸಂಸ್ಥಾನದ ಮುಖ್ಯ ಮಂತ್ರಿ ಕಾಮರಾಜ ನಾಡಾರರು ಬ್ರಹ್ಮಚಾರಿಗಳಾಗಿರುವುದರಿಂದ ಅವರೇ ಒಬ್ಬ ಹರಿಜನ ಕನ್ಯೆಯನ್ನು ವಿವಾಹವಾಗಿ ಇತರ ಯುವಕರಿಗೆ ಮೇಲ್ಪಂಕ್ತಿ ಹಾಕಬೇಕೆಂದು ಸಲಹೆ ಮಾಡಿದರು

ಪ್ಯಾರಿಸ್ ಬಳಿ ರೈಲು ಕಂಬಿ ತಪ್ಪಿ ೧೭ ಜನರ ಮರಣ

ಫ್ರಾನ್ಸಿನ ನೈಸ್ ನಗರದಿಂದ ಪ್ಯಾರಿಸ್ಸಿಗೆ ಬರುತ್ತಿದ್ದ ರೈಲೊಂದು ಮೊನ್ನೆ ಕಂಬಿ ತಪ್ಪಲಾಗಿ ೧೭ ಜನರು ಮೃತಪಟ್ಟು ೪೧ ಮಂದಿಗೆ ಗಾಯವಾಗಿದೆ

ಸಂಸ್ಥಾನದಲ್ಲಿ ಸರ್ಕಾರಿ ವ್ಯಾಪಾರದ ಸಂಸ್ಥೆಯ ಸ್ಥಾಪನೆ

ಕೇಂದ್ರ ಸರ್ಕಾರದವರು ರಚಿಸಿರುವ ಸಂಸ್ಥಾನ ವ್ಯಾಪಾರ ಯೋಜನೆಗೆ ಸಂಬಂಧಿಸಿದಂತೆ ಸಂಸ್ಥಾನದಲ್ಲೂ ಒಂದು ಸಂಸ್ಥೆಯನ್ನು ಶೀಘ್ರದಲ್ಲೇ ಸ್ಥಾಪಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಬೆಂಗಳೂರು ವಾಣಿಜ್ಯಸಂಸ್ಥೆಯ ಸಮಾರಂಭದಲ್ಲಿ ತಿಳಿಸಿರುವರು ಸಂಸ್ಥಾನದ ಖನಿಜ ಸಂಪತ್ತನ್ನು ತೆಗೆಯಲು ಸಂಸ್ಥೆಯನ್ನು ರಚಿಸಲಾಗುವುದೆಂದೂ, ಸಾರ್ವಜನಿಕರು ಅದರಲ್ಲಿ ಒಂದು ಪಾಲನ್ನು ವಹಿಸುವರೆಂದೂ ಅವರು ಸೂಚಿಸಿದರು

ಮಹಿಳೆಗಾಗಿ ಘರ್ಷಣೆಯಲ್ಲಿ ಇಬ್ಬರ ಮರಣ

ಹಳ್ಳಿಯ ಪುರುಷರೆಲ್ಲರ ಬಂಧನ

ಕರಾಚಿ ಬಳಿ ಒಂದು ಗ್ರಾಮದಲ್ಲಿ ಒಬ್ಬ ಮಹಿಳೆಗಾಗಿ ಘರ್ಷಣೆ ನಡೆದು, ಅದರಿಂದ ಇಬ್ಬರು ಮಡಿದರೆಂದೂ, ಪೊಲೀಸರು ಊರಿನಲ್ಲಿರುವ ೪೦ ಮಂದಿ ಪುರುಷರನ್ನೂ ಈ ಸಂಬಂಧದಲ್ಲಿ ಬಂಧಿಸಿರುವರೆಂದೂ ವರದಿಯಾಗಿದೆ ಅಲ್ಲಿ ಹೆಂಗಸರು ಮಾತ್ರ ಇರುವರು ಮಹಿಳೆಯ ಸಲುವಾಗಿ ಎರಡು ಗುಂಪುಗಳು ಹುಟ್ಟಿ ವೈರವು ಬೆಳೆದಿತ್ತು

ಕೋಲಾರ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಹಾವು ಕಡಿತಕ್ಕೆ ಚಿಕಿತ್ಸೆ

ಕೋಲಾರದ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಬಿ. ಎಸ್. ರುದ್ರಪ್ಪನವರು ಕಳೆದ ೨ ತಿಂಗಳಿಂದ ೧೫ ಜನರಿಗೆ ಹಾವು ಕಡಿತದ ಔಷಧಿಯಿತ್ತು, ವಾಸಿ ಮಾಡಿರುವರು ಅವರ ಬಳಿ ಬಂದವರೆಲ್ಲರೂ ಗುಣಹೊಂದಿರುತ್ತಾರೆ. ಅವರು ಮೂಲಿಕೆಗಳನ್ನು ಪ್ರಯೋಗಿಸಿ, ನಾಗರಹಾವು ಮತ್ತು ಇತರ ವಿಷ ಸರ್ಪಗಳಿಂದ ಜನರನ್ನು ಪಾರು ಮಾಡಿರುವರು

ನಿಮಗೆ ಅಪ್ಪಟ ಹಸುವಿನ
ಹಾಲು
ಬೇಕಾದರೆ
94 ತ್ಯಾಗರಾಜಾ ರಸ್ತೆ ಕ್ರಾಸ್ ಮತ್ತು 1034 K R. ಆಸ್ಪತ್ರೆ ರಸ್ತೆ, ಮೈಸೂರು
ಇವರಲ್ಲಿ ವಿಚಾರಿಸಿ

ಟಾನಿಕ್ಕು ಏತಕ್ಕೆ?

- ★ ಆರೋಗ್ಯ ಭಾಗ್ಯವನ್ನು ಉಳಿಸಿಕೊಳ್ಳಲು
- ★ ರೋಗದಿಂದ ಪೂರ್ಣ ಗುಣಹೊಂದಲು
- ★ ಯಂತ್ರದಂತೆ ದಕ್ಷರನ್ನಾಗಿ ಮಾಡಲು

ಮಾನವ ಶರೀರವು ಕೇವಲ ಒಂದು ಯಂತ್ರ ಶರೀರಕ್ಕೆ ವಾತ, ಪಿತ್ತ, ಕಫಗಳು ಹೇಗೋ ಯಂತ್ರಕ್ಕೆ ಹಲ್ಲೆ, ಚಾಚು ಮತ್ತು ಚಿಮ್ಮುಗಳು ಹಾಗೆ ಅವುಗಳು ಕ್ರಮವಾಗಿದ್ದರೆ ಆರೋಗ್ಯ-ಜೀವನ ಅವುಗಳು ಕ್ರಮ ತಪ್ಪಿದರೆ ಅನಾರೋಗ್ಯ ಮತ್ತು

ನವರತ್ನ ಕಲ್ಪವನ್ನು

ಉಪಯೋಗಿಸಿರಿ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ
ವೈದ್ಯ ವಾಚಸ್ಪತಿಯವರಿಂದ ಕಂಡುಹಿಡಿಯಲ್ಪಟ್ಟಿದೆ
ಇದು ವಜ್ರ, ಕೆಂಪು, ಮುತ್ತು ಮುಂತಾದ ಒಂಭತ್ತು ಅಮೂಲ್ಯ ಹರಳುಗಳ ಸಂಯೋಗ

- ★ ವಾತ, ಪಿತ್ತ ಕಫಗಳನ್ನು ಸಮಸ್ಥಿತಿಯಲ್ಲಿಡಲು
- ★ ಕಳೆದುಹೋದ ಆರೋಗ್ಯವನ್ನು ಪಡೆಯಲು
- ★ ಯೌವನ ಮತ್ತು ಅದರ ಎಲ್ಲ ಪರಿಣಾಮಗಳ ಪುನರುತ್ಥಾನಕ್ಕೆ

ಇದು ಆದರ್ಶ ಪ್ರಾಯವಾದ ಟಾನಿಕ್ಕು
NAVRATNA KALPA PHARMACY,
JULLUNDUR CITY (India)
ಇವರಿಂದ ಪುಕ್ಕಟೆ ಸಾಹಿತ್ಯವನ್ನು ಪಡೆಯಬಹುದು

CENTRAL INSTITUTE OF COMMERCE
Vani Vilas Market Mysore
Efficient coaching for D Com, Dip-in sten, Typewriting and Shorthand Fully equipped with best typewriters Classes in COST ACCOUNTS Commence on 25 7 57 Rush in at once

SREE GAYATHRI
TALKIES
From 21 7 57 for 2 days
Daily 3 shows
Films Division Govt of India
Presents
GOTAMA THE BUDDHA
(Produced by Bimal Roy)

NALINS
Furniture on hire
Enquire at –
602 College Road.
MYSORE
Concession to students

Edited, Printed and Published by A R Nagarajan at Sadhvi Press, D Subbiah Road Mysore

10 ವರ್ಷಗಳ ಪ್ರಯೋಗಿಸಿದ ಪಂ॥ ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರತ್ನ ದ್ರವ್ಯಗಳು

ಸಂತಾನ ಸಿಂಧೂರ (ಸ್ತ್ರೀಯರಿಗೆ ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ ಗುಳಿಗೆ)

ಈ ಭಸ್ಮವು ಬಹಿಷ್ಟೆ ಸಂಬಂಧದ ಹೊಟ್ಟೆ ನೋವನ್ನು ನಿವಾರಿಸಿ, ಗರ್ಭಸ್ರಾವ ಗರ್ಭಪಾತ ಇತ್ಯಾದಿ ಗರ್ಭಾಶಯ ರೋಗಗಳನ್ನು ನಿವಾರಿಸಿ ಚೇತನವನ್ನು ಕೊಡುತ್ತದೆ
"ಮದನ ವಿಲಾಸ ಗುಳಿಗೆಗಳು ಅತ್ಯುತ್ತಮ ರಮಣ ವರ್ಧಕ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಶಮಾಡುತ್ತದೆ
ದಂಪತಿಗಳ 16–18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ" ಗಳಾಗಿದ್ದಾರೆ
ಪೂರ್ಣ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 4 ಆಣೆ ಸ್ಟಾಂಪು ಕಳಿಸಿ
ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (S).
628 ಸೀತಾವಿಲಾಸ ಛತ್ರ-ಶೈನ್ ಮಿಲ್ ಕ್ರಾಸ್, ನೂರಡಿ ರಸ್ತೆ, ಮೈಸೂರು



ನವೀನ ಮಾದರಿ ಗಡಿಯಾರಗಳಿಗೆ
ಫೇವರ್ ಲ್ಯೂಬಾ, ವೆಸ್ಟೆಂಡ್, ಸೈಮಾ, ರೋಮರ್ ಇತ್ಯಾದಿ, ಇತ್ಯಾದಿ
ರಾಂ ಪತಂಗೆ ಕಂಪೆನಿ,
ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು

ನ್ಯೂ ಆಪೇರಾ ಟಾಕೀಸ್, ಮೈಸೂರು ★ 19-7-57ನೇ : ಶುಕ್ರವಾರದಿಂದ : ಅಮೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಸಿಟಾಡೆಲ್‌ರವರ ಅಮೋಘ ಸಂಗೀತಮಯ ಸಾಮಾಜಿಕ ತಮಿಳು ಚಿತ್ರ
ಆರ್. ಗಣೇಶ್, ಪದ್ಮಿನಿ, ಎಂ ಎನ್ ರಾಜಂ, ತಂಗವೇಲು, ಮತ್ತು ಟಿ. ಎಸ್ ಬಾಲಯ್ಯ ಮುಂತಾದವರು ಪಾತ್ರವಹಿಸಿರುವ.
★ **ಮಲ್ಲಿಕಾ** ★
ದಿಗ್ದರ್ಶನ ಜೋಸೆಫ್ ತಳಿಯತ್(ಜೂನಿಯರ್)
[FAIR FILMS RELEASE

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 2 ನಯಾ ಪೈಸ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೧೫] SADHVI : MONDAY 22—7—1957 ಮೈಸೂರು : ಸೋಮವಾರ ೨೨—೭—೧೯೫೭ : [ಸಂಚಿಕೆ : ೭೯೪

ಕಾಶ್ಮೀರದಲ್ಲಿ ಗೊಂದಲ ಹಚ್ಚಲು ಪಾಕಿಸ್ತಾನದಲ್ಲಿ ಯತ್ನ

ಸಣ್ಣ ಉಳಿತಾಯ ಚಳುವಳಿಗೆ ಮಹಿಳೆಯರ ನೆರವಿಗಾಗಿ ಕರೆ

ಮಹಾರಾಣಿಯವರ ಮನವಿ

ಬೆಂಗಳೂರು ೨೨

ಸಂಸ್ಥಾನದ ಮಹಿಳಾ ಉಳಿತಾಯ ಚಳುವಳಿಯ ಸಂಸ್ಥಾನ ಸಲಹಾ ಸಮಿತಿಯ ದ್ವಿತೀಯ ಅಧಿವೇಶನವು ನೆನ್ನೆ ಶ್ರೀಮನ್ಮಹಾರಾಣಿ ಶ್ರೀಮತಿ ತ್ರಿಪುರಸುಂದರಮ್ಮಣ್ಣಿಯವರ ಅಧ್ಯಕ್ಷತೆಯಲ್ಲಿ ಇಲ್ಲಿ ಸೇರಿತ್ತು. ಅವರು ಸ್ವಾಗತ ಭಾಷಣ ಮಾಡಿ, ಉಳಿತಾಯದ ಚಳುವಳಿಗೆ ಸಂಸ್ಥಾನದ ಸ್ತ್ರೀಪುರುಷರೆಲ್ಲರೂ ನೆರವಾಗಬೇಕೆಂದು ಕೋರಿದರು. ಹಣವಿಲ್ಲದೆ ಯೋಜನೆಗಳನ್ನು ಕಾರ್ಯಗತ ಮಾಡಲು ಸಾಧ್ಯವಿಲ್ಲವೆಂದು ಅವರು ತಿಳಿಸಿದರು. ಭಾರತವು ದಾಸ್ಯದಲ್ಲಿದ್ದಾಗ ಹಲವು ಸ್ತ್ರೀಪುರುಷರು ಸ್ವತಂತ್ರ ಭಾರತದ ಕನಸನ್ನು ಕಾಣುತ್ತಿದ್ದರೆಂದೂ, ಅಜ್ಞಾನ ಮತ್ತು ಬಡತನದ ದೇಶವನ್ನು ಸಾಹಸಿಗಳ ರಾಷ್ಟ್ರವಾಗಿ ಮಾಡುವ ಅಭಿಲಾಷೆಯನ್ನು ಅವರು ಹೊಂದಿದ್ದರೆಂದೂ ಮಹಾರಾಣಿಯವರು ಹೇಳಿ, ಈಗ ದೇಶವು ಸ್ವತಂತ್ರವಾಗಿರುವಾಗ ಆ ಕನಸನ್ನು ಸಾಧಿಸಬೇಕಾಗಿರುವುದೆಂದೂ, ಇದರಲ್ಲಿ ಮಹಿಳೆಯರ ಪಾತ್ರವು ವಿಶೇಷವಾಗಿರುವುದೆಂದೂ ನುಡಿದರು.

ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಭಾಷಣ ಮಾಡಿ, ಉಳಿತಾಯದ ಚಳುವಳಿಗೆ ಕಾಲೇಜುಗಳ ವಿದ್ಯಾರ್ಥಿನಿಯರ ಸಹಾಯವನ್ನು ಪಡೆದು, ಮನೆಮನೆಗೂ ಈ ಚಳುವಳಿಯು ಹಬ್ಬುವಂತೆ ಮಾಡಬೇಕೆಂದು ತಿಳಿಸಿದರು. ಈ ರೀತಿ ಉಳಿತಾಯದ ಹಣವನ್ನು ಶೇಖರಿಸಲು ಒಂದು ಸಂಸ್ಥೆಯನ್ನು ಏರ್ಪಡಿಸಲಾಗುವುದೆಂದು ಅವರು ಸೂಚಿಸಿದರು.

ಮುಖ್ಯ ಮಂತ್ರಿಯವರು ಸಂದೇಶ ಕಳುಹಿಸಿ, ಸಣ್ಣ ಉಳಿತಾಯ ಚಳುವಳಿಯಿಂದ ೫ ಕೋಟಿ ರೂ. ಅನ್ನು ಶೇಖರಿಸಬೇಕೆಂದು ಸೂಚಿಸಿದ್ದರು.

ಕೇಂದ್ರ ಆಡಳಿತಗಾರರ ಸಂಸ್ಥೆಯ ವ್ಯವಸ್ಥೆ

೧೫೦ ಜನ ಅಧಿಕಾರಿಗಳುಳ್ಳ ಕೇಂದ್ರ ಆಡಳಿತಗಾರರ ಸಂಸ್ಥೆಯೊಂದನ್ನು ಏರ್ಪಡಿಸಲು ಭಾರತ ಸರ್ಕಾರದವರು ಕ್ರಮ ಕೈಗೊಳ್ಳುತ್ತಿರುವರು. ವಿಶೇಷ ತರಬೇತು ಮತ್ತು ಅನುಭವವುಳ್ಳ ಅಧಿಕಾರಿಗಳ ಮೂಲಬಲವನ್ನು ನಿರ್ಮಿಸುವುದೇ ಇದರ ಉದ್ದೇಶ. ಆಡಳಿತದ ಅನುಭವ ಜ್ಞಾನವು ಮಧ್ಯದಲ್ಲಿ ಕುಂಠಿತವಾಗದೆ ಸದಾ ಮುಂದುವರಿಯುತ್ತಿರಬೇಕೆಂಬ ದೃಷ್ಟಿಯಿಂದ ಈ ಯೋಜನೆಯನ್ನು ಕೈಗೊಳ್ಳಲಾಗುವುದು.

ಚೀನಾದಲ್ಲಿ ಪ್ರವಾಹದಿಂದ ೫೦೦ ಜನರ ಮರಣ

ಚೀನಾದ ಷಾಂಟಿಂಗ್ ಮತ್ತು ಹೋನಾನ್ ಪ್ರಾಂತಗಳಲ್ಲಿ ಪ್ರವಾಹಗಳ ಹಾವಳಿಯಿಂದ ೫೦೦ಕ್ಕಿಂತ ಹೆಚ್ಚು ಮಂದಿ ಮೃತಪಟ್ಟಿರುವರೆಂದೂ, ಸಹಸ್ರಾರು ಜನರು ಗಾಯಗೊಂಡಿರುವರಲ್ಲದೆ, ನಿರಾಶ್ರಿತರಾಗಿರುವರೆಂದೂ ವರದಿಯಾಗಿದೆ. ಪ್ರವಾಹ ಪೀಡಿತರಿಗಾಗಿ ವಿಮಾನಗಳ ಮೂಲಕ ಆಹಾರ ಮತ್ತು ವೈದ್ಯ ಸಹಾಯವನ್ನು ಒದಗಿಸಲಾಗುತ್ತಿದೆ. ಅಲ್ಲಿನ ಪ್ರಮುಖ ರೈಲು ಮಾರ್ಗದ ಸಂಚಾರಕ್ಕೆ ಅಡ್ಡಿಯಾಗಿದೆ.

ತೆಂಗಿನಕಾಯಿ ವರ್ತಕರ ಸಂಘದ ವಾರ್ಷಿಕೋತ್ಸವ

ಮೈಸೂರು ೨೨

ನಗರದ ತೆಂಗಿನಕಾಯಿ ವರ್ತಕರ ಸಂಘದ ನಾಲ್ಕನೆಯ ವಾರ್ಷಿಕೋತ್ಸವವು ನೆನ್ನೆ ಶ್ರೀರಂಗಪಟ್ಟಣದಲ್ಲಿ ನಡೆಯಿತು. ನಗರದ ಪುರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ಅಗ್ರಾಸನ ವಹಿಸಿದ್ದರು. ಬೆಳಿಗ್ಗೆ ಧ್ವಜಾರೋಹಣ ಮುಂತಾದ ಕಾರ್ಯಕ್ರಮಗಳ ನಂತರ ಸಭೆಯು ನಡೆಯಿತು. ಶ್ರೀ ಆರ್. ರಂಗಪ್ಪನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎ. ಶಿವನಂಜಪ್ಪನವರು ನಗರದ ಪುರಸಭೆಯ ಮಾಜಿ ಅಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರಿಗೆ ಒಂದು ಮಾನಪತ್ರವನ್ನು ಪೀಠಿಕೆಯೊಂದಿಗೆ ಸಮರ್ಪಿಸಿ ವರ್ತಕರಿಗೆ ಅವರಿಂದ ಆದ ಉಪಕಾರಗಳನ್ನು ಸ್ತುತಿಸಿದರು. ಸಂಘದ ಮಾಜಿ ಅಧ್ಯಕ್ಷ ಶ್ರೀ ರಂಗಪ್ಪನವರಿಗೆ ಅವರ ಸೇವೆಗಾಗಿ ಶ್ರೀ ಹುಲಿಯಪ್ಪನವರು ಒಂದು ಮಾನಪತ್ರವನ್ನೂ ಮತ್ತು ಬೆಳ್ಳಿಯ ಬಟ್ಟಲನ್ನೂ ಸಮರ್ಪಿಸಿದರು.

ಶ್ರೀ ಕೃಷ್ಣಮೂರ್ತಿರಾಯರು ಸನ್ಮಾನಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ ತಮ್ಮ ಆಡಳಿತ ಕಾಲದಲ್ಲಿ ತೆಂಗಿನಕಾಯಿ ವರ್ತಕರು ನೀಡಿದ ಸಹಕಾರಕ್ಕಾಗಿ ವಂದಿಸಿದರು. ಅಧ್ಯಕ್ಷರು ಭಾಷಣ ಮಾಡಿ ಮಾರ್ಕೆಟ್ಟಿನಲ್ಲಿ ಉಚಿತ ವಾಚನಾಲಯವನ್ನು ತೆರೆಯಬೇಕೆಂಬ ಸಂಘದವರ ಬೇಡಿಕೆಯನ್ನು ಪರಿಶೀಲಿಸುವುದಾಗಿ ಭರವಸೆಯಿತ್ತರು.

ಕಾಶ್ಮೀರದಲ್ಲಿ ಆಡಳಿತವನ್ನು "ಕುಂಠಿಸಲು" ಚಳುವಳಿ

ಪಾಕಿಸ್ತಾನದ ಮಾಜಿ ಸೈನ್ಯಾಧಿಕಾರಿಯ ಯೋಜನೆ

ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದಲ್ಲಿ ಆಡಳಿತವು "ಪೂರ್ಣವಾಗಿ ನಿಂತುಹೋಗುವಂತೆ" ಮಾಡುವುದಕ್ಕಾಗಿ ಆ ಸಂಸ್ಥಾನದಲ್ಲಿ ಆಂತರಿಕ ಚಳುವಳಿ ನಡೆಸಲು ಪಾಕಿಸ್ತಾನದ ಮಾಜಿ ಪ್ರಧಾನ ಸೈನ್ಯಾಧಿಕಾರಿ ಮೇಜರ್ ಜನರಲ್ ಅಕ್ಬರ್ ಖಾನರವರು ತಮ್ಮ ಯೋಜನೆಯನ್ನು ಹೊರಗೆಡಹಿರುತ್ತಾರೆ. ಈ ಚಳುವಳಿಯು ಕಾಶ್ಮೀರಿ ಜನರಿಂದಲೇ ಆಗಬೇಕಾಗಿರುವುದೆಂದೂ, ಕಾಶ್ಮೀರಿಗಳು ಮತ್ತು ಹಲವು ಪಾಕಿಸ್ತಾನಿಗಳು ಅದರ ಮುಖ್ಯಸ್ಥರಾಗಿರಬೇಕೆಂದೂ, ಅದಕ್ಕೆ ಸಮಗ್ರ ಪಾಕಿಸ್ತಾನಿಗಳ ಬೆಂಬಲವಿರಬೇಕೆಂದೂ ಅವರು ಸೂಚಿಸಿರುತ್ತಾರೆ.

ಮುಷ್ಕರಗಳು, ಸಾರ್ವತ್ರಿಕ ಅಸಹಕಾರ, ಸಾಮೂಹಿಕ ಕಾನೂನು ಭಂಗ ಮತ್ತು ಜನರ ದಸ್ತಗಿರಿಗಳು ಚಳುವಳಿಯ ಗುರಿಯಾಗಬೇಕೆಂದು ಅವರು ಸೂಚಿಸಿ, ಅದು ಫಲಪ್ರದವಾಗಲು, ನಿಷ್ಕ್ರಿಯತೆಯಿಂದ ಕೂಡಿದ ಎಲ್ಲ ದಮನ ಕಾರ್ಯಗಳನ್ನೂ ಕಡೆಯತನಕ ಎದುರಿಸಬೇಕೆಂದು ತಿಳಿಸಿರುತ್ತಾರೆ. ಈಗ ಕಾಶ್ಮೀರದಲ್ಲಿ ಸ್ವಾತಂತ್ರ್ಯ ಚಳುವಳಿಯು ನಡೆಯುತ್ತಿರುವುದೆಂದೂ, ಆದರೆ ಅಲ್ಲಿನ ಜನರು ಬಹಳ ದುರ್ಬಲರಾಗಿರುವರೆಂದೂ, ಅದಕ್ಕೆ ಪಾಕಿಸ್ತಾನಿಗಳ ಬೆಂಬಲವು ಅಗತ್ಯವೆಂದೂ ಅವರು ಹೇಳಿರುವರು.

ಕೇರಳದಲ್ಲಿ ಶಾಸನ ಪಾಲನೆ ಮತ್ತು ಶಿಸ್ತಿನ ಪರಿಸ್ಥಿತಿ

ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿ

‘ಕಾನೂನು ಬಾಹಿರ ಕೆಲಸ’ ದ ಆಪಾದನೆ ಬಗ್ಗೆ ಕೇರಳದ ಮುಖ್ಯ ಮಂತ್ರಿ ಹೇಳಿಕೆ

ಕೇರಳದಲ್ಲಿ ಕಾನೂನು ಮತ್ತು ಶಿಸ್ತಿನ ಪಾಲನೆ ಪರಿಸ್ಥಿತಿ ಬಗ್ಗೆ ಪರಿಶೀಲನೆ ಮಾಡಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ವರದಿಯನ್ನು ಸಲ್ಲಿಸಿ, ಆ ಸಂಸ್ಥಾನದಲ್ಲಿ ಪೋಲೀಸರು ಮತ್ತು ಸರ್ಕಾರದ ಇತರ ಸಿಬ್ಬಂದಿಯವರು ಯಾವ ರೀತಿಯಲ್ಲಿ ವರ್ತಿಸಬೇಕೆಂಬುದನ್ನು ಅರಿಯದವರಾಗಿರುತ್ತಾರೆಂದು ತಿಳಿಸಿರುತ್ತಾರೆ. ಕಾರ್ಮಿಕ ವಿವಾದಗಳಲ್ಲಿ ಪೋಲೀಸರು ಪ್ರವೇಶಿಸಬಾರದೆಂದು ಸರ್ಕಾರದವರು ಸೂಚನೆಯಿತ್ತಿರುವುದಾಗಿ ಹೇಳಲಾಗಿದೆ. ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ಗೊತ್ತಾಗಿದೆ.

ಕೇರಳದ ಮುಖ್ಯ ಮಂತ್ರಿಯವರು ಬಹಿರಂಗ ಸಭೆಯಲ್ಲಿ ಮಾತನಾಡಿ ಆ ಪ್ರಾಂತದಲ್ಲಿ ಕಾನೂನು ಬಾಹಿರ ಸ್ಥಿತಿಯ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ನ್ಯಾಯ ಸಮ್ಮತ ಚಳುವಳಿಗಳನ್ನು ದಮನ ಮಾಡಲು ಪೋಲೀಸರನ್ನು ನಿಯೋಜಿಸಬಾರದೆಂದೂ, ಅವರನ್ನು ಸಮಾಜ ಘಾತಕರ ದಮನಕ್ಕೆ ನೇಮಿಸಬೇಕೆಂದೂ ಸೂಚಿಸಿರುತ್ತಾರೆ. ಇದುವರೆಗೆ ಪೋಲೀಸ್ ಮತ್ತು ಆಡಳಿತ ಯಂತ್ರವನ್ನು ಕಾರ್ಮಿಕರು ಮತ್ತು ರೈತರ ಚಳುವಳಿಯ ದಮನಕ್ಕಾಗಿ ಹಲವು ಐಶ್ವರ್ಯವಂತರು ಉಪಯೋಗಿಸುತ್ತಿದ್ದರೆಂದೂ, ಈಗಿನ ಸರ್ಕಾರದವರು ಅದಕ್ಕೆ ಅಡ್ಡಿಹಾಕಲು ಅಪೇಕ್ಷೆ ಹೊಂದಿರುವರೆಂದೂ ಅವರು ಸೂಚಿಸಿರುವರು.

ಒಮಾನ್ ದಂಗೆಕಾರರಿಂದ ಸುಲ್ತಾನರ ಸೇನೆಗೆ ಸಾವುನೋವು

ಅರೇಬಿಯಾ ದೇಶದ ಒಮಾನ್ ಮತ್ತು ಮಸ್ಕತ್ ರಾಜ್ಯದಲ್ಲಿ ನಡೆಯುತ್ತಿರುವ ಹೋರಾಟದಲ್ಲಿ ದಂಗೆಕಾರರು ಸುಲ್ತಾನರ ಸೈನ್ಯಗಳಿಗೆ ಸಾವುನೋವುಗಳನ್ನುಂಟುಮಾಡಿರುತ್ತಾರೆ. ಒಮಾನಿನ ಒಳನಾಡು ದಂಗೆಕೋರರ ವಶದಲ್ಲಿದೆ. ಅದನ್ನು ಕಿತ್ತುಕೊಳ್ಳುವ ಬಗ್ಗೆ ಸುಲ್ತಾನರು ಭರವಸೆ ಹೊಂದಿರುತ್ತಾರೆ. ಹಿರಿಯ ಬ್ರಿಟಿಷ್ ಮಿಲಿಟರಿ ಅಧಿಕಾರಿಗಳು ವಿಮಾನದಿಂದ ಆಗಮಿಸಿ ಸುಲ್ತಾನರೊಡನೆ ಅಲ್ಲಿನ ಪರಿಸ್ಥಿತಿಯನ್ನು ಚರ್ಚಿಸುತ್ತಿರುವರು. ಬಹ್ರೇನಿನಲ್ಲಿರುವ ಬ್ರಿಟಿಷ್ ರಾಜಕೀಯ ರೆಸಿಡೆಂಟರೂ ಅಲ್ಲಿಗೆ ಹೋಗಿರುವರು. ಆ ರಾಜ್ಯಕ್ಕೆ ಬ್ರಿಟಿಷ್ ಸೈನ್ಯಗಳು ಹೋಗುತ್ತಿವೆ.

ಸಂಸ್ಥಾನದಲ್ಲಿ ನೌಕಾ ನಿರ್ಮಾಣ ಕೇಂದ್ರಕ್ಕಾಗಿ ಸ್ಥಳ ಪರಿಶೀಲನೆ

ಭಾರತದ ಎರಡನೆಯ ನೌಕಾ ನಿರ್ಮಾಣ ಕೇಂದ್ರವನ್ನು ಸ್ಥಾಪಿಸುವ ಸಂಬಂಧದಲ್ಲಿ ಸ್ಥಳವನ್ನು ಗೊತ್ತುಪಡಿಸಿ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಲು ಭಾರತಕ್ಕೆ ಆಗಮಿಸಿರುವ ಬ್ರಿಟನ್ನಿನ ಪ್ರವೀಣರ ತಂಡದವರು ಮಂಗಳೂರಿಗೆ ಆಗಮಿಸಿರುವರು. ಭಟ್ಕಳ್ ಮತ್ತು ಕಾರವಾರಗಳಲ್ಲಿ ಅವರು ಪರಿಶೀಲನೆ ನಡೆಸುವರು.

ಸಚಿವರಿಂದ ಸಣ್ಣ ಪ್ರಮಾಣದ ಉಳಿತಾಯದ ಆದರ್ಶ

ಬೆಂಗಳೂರು ೨೨

ಸಣ್ಣ ಪ್ರಮಾಣದ ಉಳಿತಾಯ ಚಳುವಳಿಗೆ ಪ್ರತಿ ತಿಂಗಳೂ ಜನರು ತಮ್ಮ ಪಾಲಿನ ಹಣವನ್ನು ಕೊಡುವ ಬಗ್ಗೆ ಸಂಸ್ಥಾನದ ಸಚಿವರುಗಳು ಮಾರ್ಗದರ್ಶನ ಮಾಡಲು ಕ್ರಮ ಕೈಗೊಳ್ಳುವುದನ್ನು ಮಂತ್ರಿಮಂಡಲವು ತೀವ್ರವಾಗಿ ಪರಿಶೀಲಿಸುತ್ತಿರುವುದೆಂದೂ, ಪ್ರತಿ ತಿಂಗಳೂ ಅದಕ್ಕಾಗಿ ಅವರು ೧೦೦ ರೂ ಗಳನ್ನು ಉಳಿತಾಯ ಮಾಡುವರೆಂದೂ ವರದಿಯಾಗಿದೆ. ವಿಧಾನ ಸಭೆಗಳ ಸದಸ್ಯರೂ ಇವನ್ನು ಅನುಸರಿಸುವರೆಂದು ನಂಬಲಾಗಿದೆ. ಬಹಿರಂಗವಾಗಿ ಸಾಲವನ್ನು ಪಡೆಯುವಂತಿಲ್ಲವಾದುದರಿಂದ ಸಂಸ್ಥಾನ ಸರ್ಕಾರದವರು ಈ ಕ್ರಮವನ್ನು ಕೈಗೊಳ್ಳಬೇಕೆಂದು ಆಲೋಚಿಸಿರುತ್ತಾರೆ. ಸಣ್ಣ ಉಳಿತಾಯದಿಂದ ೫ ಕೋಟಿ ರೂ. ಗಳನ್ನು ಶೇಖರಿಸಲಾಗುವುದು.

ಟ್ಯುನೀಷಿಯಾದಲ್ಲಿ ರಾಜತ್ವದ ರದ್ದು

ಟ್ಯುನೀಷಿಯಾದಲ್ಲಿ ಆಡಳಿತ ನಿರ್ವಹಿಸುತ್ತಿರುವ ನೂತನ ದಸ್ತೂರ್ ಪಕ್ಷದ ರಾಜಕೀಯ ಸಮಿತಿಯು ಅಲ್ಲಿ ರಾಜತ್ವವನ್ನು ರದ್ದುಗೊಳಿಸುವ ಬಗ್ಗೆ ತಕ್ಷಣವೇ ಘೋಷಣೆ ಹೊರಡಿಸಲಿರುವುದೆಂದು ವರದಿಯಾಗಿದೆ. ಅಲ್ಲಿನ ಪ್ರಧಾನಿ ಹಬೀಬ್ ಬೋರ್ಗಿಬಾರವರು ಸಮಿತಿ ಸಭೆಯ ಅಧ್ಯಕ್ಷತೆ ವಹಿಸುವರು. ಅವರೇ ಅಲ್ಲಿನ ಗಣರಾಜ್ಯದ ಅಧ್ಯಕ್ಷರಾಗಬಹುದೆಂದು ಹೇಳಲಾಗಿದೆ. ರಾಜ್ಯವು ಸ್ವತಂತ್ರವಾದಾಗಿನಿಂದ ಅವರು ಅಲ್ಲಿನ ಪ್ರಧಾನಿಯಾಗಿರುವರು.

ಬೆಳಗಾಮಿನಲ್ಲಿ ವರ್ತಕರ ಹರತಾಳ

ಬೆಳಗಾಂ ಕಂಟೋನ್ಮೆಂಟ್ ಪೌರಸಭೆಯವರು ವಿಧಿಸಬೇಕೆಂದಿರುವ ಉದ್ಯೋಗ ತೆರಿಗೆಯನ್ನು ಪ್ರತಿಭಟಿಸಲು ಅಲ್ಲಿನ ವರ್ತಕರು ನೆನ್ನೆ ಹರತಾಳವನ್ನು ಆಚರಿಸಿದರು.

ರಾಮೇಶ್ವರ ದೇವಸ್ಥಾನದ ಆನೆಗೆ ಹುಚ್ಚು ಹತ್ತಿ ಒಬ್ಬನ ಕೊಲೆ

ರಾಮೇಶ್ವರ ದೇವಸ್ಥಾನದ ಆನೆಗೆ ಮೊನ್ನೆ ಇದ್ದಕ್ಕಿದ್ದಂತೆ ಹುಚ್ಚು ಹತ್ತಿ ಅದು ಊರಿನ ಹಲವು ಗುಡಿಸಲುಗಳು ಮತ್ತು ತೋಟಗಳನ್ನು ನಾಶಪಡಿಸಿತೆಂದು ವರದಿಯಾಗಿದೆ. ಅನಂತರ ಅದು ಅಂಗಡಿ ಬೀದಿಗೆ ನುಗ್ಗಿ ಇಬ್ಬರನ್ನು ಗಾಯಗೊಳಿಸಿ, ಗಣಪತಿ ಭಟ್ಟರೆಂಬ ಒಬ್ಬರನ್ನು ಸೊಂಡಿಲಿನಿಂದ ಎತ್ತಿ ಒಂದು ಮರಕ್ಕೆ ಅಪ್ಪಳಿಸಿ, ಕಾಲಿನಿಂದ ತುಳಿದು ಸಾಯಿಸಿತೆಂದೂ ಗೊತ್ತಾಗಿದೆ. ಸುತ್ತಮುತ್ತಲ ಹಳ್ಳಿ ಜನರು ಇದರಿಂದ ಗಾಬರಿಗೊಂಡು ತಮ್ಮ ರಕ್ಷಣೆಗಾಗಿ ಬೆಂಕಿಯನ್ನು ಹತ್ತಿಸಿಕೊಂಡಿದ್ದುದಾಗಿ ಹೇಳಲಾಗಿದೆ.

○ ಪಂಜಾಬಿನಲ್ಲಿ ಹಿಂದಿ ಭಾಷೆಯನ್ನು ಶಾಲೆ ಮತ್ತು ಆಡಳಿತ ಸಂಸ್ಥೆಗಳಲ್ಲಿ ಬಳಸುವ ಬಗ್ಗೆ ಎಲ್ಲಾ ನಿರ್ಬಂಧಗಳನ್ನೂ ತೆಗೆಯುವುದಾದರೆ ಹಿಂದಿ ರಕ್ಷಾ ಚಳುವಳಿಯನ್ನು ನಿಲ್ಲಿಸುವುದಾಗಿ ಚಳುವಳಿ ನಾಯಕರಾದ ಸ್ವಾಮಿ ಆತ್ಮಾನಂದ ಸರಸ್ವತಿಯವರು ತಿಳಿಸಿರುತ್ತಾರೆ.

ನಾಯಕರುಗಳ ಭಾವಚಿತ್ರ ಅನಾವರಣ

ಮೈಸೂರು ೨೨

ರಾಜ್ಯ ಸಭೆಯ ಉಪಾಧ್ಯಕ್ಷರಾದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ನೆನ್ನೆ ಇಲ್ಲಿನ ಶಾರದಾವಿಲಾಸ ಲಾ ಕಾಲೇಜಿನಲ್ಲಿ ಸಿ. ರಾಜಗೋಪಾಲಾಚಾರಿ, ಸರ್ದಾರ್ ಪಟೇಲ್ ಮತ್ತು ಡಾ॥ ಎಸ್. ರಾಧಾಕೃಷ್ಣನ್‌ರವರ ಭಾವಚಿತ್ರಗಳ ಅನಾವರಣ ಮಾಡಿದರು. ವೈಸ್ ಛಾನ್ಸಲರಾದ ಡಾ॥ ಕೆ ವಿ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯಾದನಂತರ, ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ಯರು ಸ್ವಾಗತ ಭಾಷಣ ಮಾಡಿದರು.

ಶ್ರೀ ಕೃಷ್ಣಮೂರ್ತಿರಾಯರು ಭಾಷಣ ಮಾಡಿ, ಮೂವರು ನಾಯಕರ ಅಗಾಧ ದೇಶ ಪ್ರೇಮ, ಪಾಂಡಿತ್ಯ ಮತ್ತು ಶಕ್ತಿಗಳನ್ನು ವಿವರಿಸಿ, ಅವರುಗಳು ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿದರು. ಅಧ್ಯಕ್ಷರು ಮಾತನಾಡಿ, ಜನರು ನಾಯಕರುಗಳ ಗುಣಗಳನ್ನು ತಮ್ಮಲ್ಲಿ ಅನುಷ್ಠಾನಕ್ಕೆ ತರಬೇಕೆಂದೂ, ಅವರುಗಳಂತೆ ತಾವೂ ಆಗಬೇಕೆಂಬ ಹಂಬಲವನ್ನು ಹೊಂದಬಾರದೆಂದೂ ತಿಳಿಸಿದರು

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಯಕ್ಷಗಾನ

ನಗರದ ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ನಾಳೆ ರಾತ್ರಿ ೮ ಗಂಟೆಗೆ, ಏಕಾದಶಿ ದಿನ ಯಕ್ಷಗಾನ ಮಂಡಳಿಯ ಸ್ಥಾಪಕರಾದ ಶ್ರೀ ಸುಬ್ಬಯ್ಯ ಭಾಗವತರ ಸ್ಮಾರಕ ದಿನಾಚರಣೆಯು ಪ್ರಯುಕ್ತ ಭಕ್ತ ಸುಧನ್ವ ಎಂಬ ಚರಿತ್ರೆಯ ಯಕ್ಷಗಾನವನ್ನು ಶ್ರೀ ಚಾಮುಂಡೇಶ್ವರಿ ಯಕ್ಷಗಾನ ಕಲಾ ಮಂಡಲಿಯವರು ನಡೆಸುತ್ತಾರೆ ಸರ್ವರಿಗೂ ಸ್ವಾಗತವಿದೆ

ಕಾವ್ಯ ವಾಚನ

ಜಯನಗರದಲ್ಲಿರುವ ಪ್ರೊಫೆಸರ್ ಶ್ರೀ ನಾಳಿ ಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ನಾಳೆಯಿಂದ ಗುರುವಾರದವರೆಗೆ ನಿತ್ಯವೂ "ಶ್ರೀ ಲಕ್ಷ್ಮೀನರಸಿಂಹಾಮೃತ" ಎಂಬ ಕಾವ್ಯವನ್ನು ಶ್ರೀ ಪಿ. ಎ. ಗಿರಿಧರಮೂರ್ತಿಯವರು ವಾಚನ ಮಾಡುವರು. ಕಾವ್ಯಕಾರರಾದ ಶ್ರೀ ಎಸ್. ಲಕ್ಷ್ಮೀನರಸಿಂಹರವರು ವ್ಯಾಖ್ಯಾನ ಮಾಡುವರು

ದಕ್ಷಿಣ ಪ್ರಾಂತಗಳ ಹಿಟ್ಟಿನ ಗಿರಣಿಗಳಿಗೆ ಸೌಲಭ್ಯ

ಆಂಧ್ರ ಪ್ರದೇಶ, ಮದ್ರಾಸು, ಮೈಸೂರು ಮತ್ತು ಕೇರಳಗಳಲ್ಲಿ ಹಿಟ್ಟಿನ ಗಿರಣಿಗಳಿಗೆ ಎಲ್ಲ ವಿಧದ ಸೌಕರ್ಯಗಳನ್ನೂ ಒದಗಿಸಲು ಕೇಂದ್ರ ಸರ್ಕಾರದವರು ನಿರ್ಧರಿಸಿರುತ್ತಾರೆ. ಗೋಧಿಯನ್ನು ರವೆ ಮತ್ತು ಮೈದಾಹಿಟ್ಟನ್ನು ಸರಬರಾಜು ಮಾಡುವ ಸಂಬಂಧದಲ್ಲಿ ಈ ಸೌಕರ್ಯಗಳನ್ನು ಕಲ್ಪಿಸಲಾಗುವುದು

ಭಾರತ ಸೇವಕ ಸಮಾಜದ ಸಂಚಾಲಕರುಗಳು

ಕೇಂದ್ರ ಭಾರತ ಸೇವಕ ಸಮಾಜದ ಅಧ್ಯಕ್ಷರಾದ ಪಂಡಿತ ಜವಾಹರಲಾಲ್ ನೆಹರೂರವರು ೭ ಪ್ರಾಂತ ಸಮಿತಿಗಳ ಸಂಚಾಲಕರನ್ನು ನೇಮಿಸಿರುತ್ತಾರೆ ಕರ್ನಾಟಕಕ್ಕೆ ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್. ಎಸ್ ಹುಕ್ಕೇರಿಕರ್‌ರವರನ್ನು ನೇಮಿಸಲಾಗಿದೆ.

ವ್ಯಾಜ್ಯಕ್ಕಾಗಿ ಮನೆ ಲೂಟಿ

ಹುಕ್ಕೇರಿ ತಾಲ್ಲೂಕಿನ ಯಾಶಿಂಗ ಹಳ್ಳಿಯಲ್ಲಿರುವ ಗಣಪತಿ ಕುರಣೆ ಎಂಬುವರ ಮನೆಗೆ ಶಂಕೋಪ್ತ ೧೫-೨೦ ಜನರು ನುಗ್ಗಿ, ಗಣಪತಿಯವರ ಪತ್ನಿ ಮತ್ತು ಇತರರನ್ನು ಹೊಡೆದು ಮನೆಯಲ್ಲಿದ್ದ ಧಾನ್ಯ, ಬಟ್ಟೆ, ನಗ ಮತ್ತು ನಗದುಗಳನ್ನು ದೋಚಿರುವುದಾಗಿ ವರದಿಯಾಗಿದೆ. ಸುಮಾರು ೭,೦೦ ರೂ. ಅಪಹಾರವಾಗಿದೆ ಎರಡು ಪಕ್ಷಗಳಿಗೆ ವ್ಯಾಜ್ಯವಿದ್ದುದರ ಪರಿಣಾಮವಿದೆಂದು ಹೇಳಲಾಗಿದೆ

ಕಾಶ್ಮೀರ ಪ್ರಶ್ನೆ ಕಠಿಣವಾಗಲು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಕಾರಣ

ಆಸ್ಟ್ರೇಲಿಯಾ ಮಾಜಿ ವಿದೇಶಾಂಗ ಮಂತ್ರಿ ಎವಟ್‌ರವರ ಹೇಳಿಕೆ

ಆಸ್ಟ್ರೇಲಿಯದ ಮಾಜಿ ವಿದೇಶಾಂಗ ಮಂತ್ರಿಯೂ ಮತ್ತು ವಿರೋಧ ಪಕ್ಷದ ನಾಯಕರೂ ಆದ ಡಾ॥ ಹರ್ಬರ್ಟ್ ಎವಟ್‌ರವರು ದೆಹಲಿಯಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ, ಪಾಕಿಸ್ತಾನಕ್ಕೆ ವಿದೇಶೀ ಶಸ್ತ್ರ ಸರಬರಾಜಿನಿಂದ ಕಾಶ್ಮೀರದ ಸಮಸ್ಯೆಯು ಕಠಿಣವಾಗಲು ಅವಕಾಶವಾಯಿತೆಂದು ತಿಳಿಸಿರುತ್ತಾರೆ. ಕಾಶ್ಮೀರ ಪ್ರಶ್ನೆಯು ಶೀತಲಯುದ್ಧದ ಜೊತೆಗೆ ಬೆರೆತುಹೋಗಿದೆಯೆಂದೂ, ಹಾಗಾಗದಿದ್ದರೆ ಈ ಬಗ್ಗೆ ಇಷ್ಟೊಂದು ಚರ್ಚೆಗೆ ಆಸ್ಪದವೇ ಇರಲಿಲ್ಲವೆಂದೂ ಅವರು ಸೂಚಿಸಿರುವರು. ಈ ಸಮಸ್ಯೆಯನ್ನು ರಾಜಿ ಮತ್ತು ಮಧ್ಯಸ್ಥಿಕೆ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದೆಂದೂ ಅವರು ಅಭಿಪ್ರಾಯಪಟ್ಟಿರುವರು.

ಪೆರು ಯುವತಿಗೆ "ವಿಶ್ವಸುಂದರಿ" ಬಿರುದು

ದಕ್ಷಿಣ ಅಮೆರಿಕದ ಪೆರು ರಾಜ್ಯದ ಮುಖ್ಯ ಪಟ್ಟಣವಾದ ಲಿಮಾದ ಗ್ಲಾಡಿಸ್ ಜೆಂಡರ್ ಎಂಬ ೧೮ ವರ್ಷದ ತರುಣಿಯನ್ನು ವಿಶ್ವಸುಂದರಿಯೆಂದು ಕರೆಯಲಾಗಿದೆ ಈ ಬಗ್ಗೆ ಕ್ಯಾಲಿಫೋರ್ನಿಯಾದಲ್ಲಿ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಬ್ರೆಜಿಲ್ ಮತ್ತು ಇಂಗ್ಲೆಂಡಿನ ಯುವತಿಯರಿಬ್ಬರು ೨ ಮತ್ತು ೩ನೇ ಸ್ಥಾನ ಗಳಿಸಿರುವರು

ಅಂಚೆ ಮತ್ತು ತಂತಿ ನೌಕರರ ಮುಷ್ಕರ ಅನಿವಾರ್ಯ

ಅಂಚೆ ಮತ್ತು ತಂತಿ ಇಲಾಖೆ ನೌಕರರ ಸಂಘದ ಅಧ್ಯಕ್ಷ ವಿ. ಜಿ ದಳ್ವಿಯವರು ಬೊಂಬಾಯಿಯಲ್ಲಿ ನೌಕರರನ್ನು ಉದ್ದೇಶಿಸಿ ಮಾತನಾಡುತ್ತಾ, ನೌಕರರು ತಮ್ಮ ಬೇಡಿಕೆಗಳಿಗಾಗಿ ಮುಷ್ಕರ ಹೂಡುವುದು ಬಿಟ್ಟು ಬೇರೊಂದು ಮಾರ್ಗವಿಲ್ಲವೆಂದು ತಿಳಿಸಿರುತ್ತಾರೆ ತಾತ್ಕಾಲಿಕ ಪರಿಹಾರವಿತ್ತು ಮುಷ್ಕರವನ್ನು ನಿಲ್ಲಿಸುವಂತೆ ಮಾಡಬೇಕೆಂದು ಅವರು ಪ್ರಧಾನಿ ನೆಹರೂರವರನ್ನು ಕೋರಿರುವರು

ಕರಾಚಿಯಲ್ಲಿ ವಿಮಾನ ಧಾಳಿ ಎಚ್ಚರಿಕೆ ಕ್ರಮಕ್ಕೆ ಸಿದ್ಧತೆ !

ಕರಾಚಿಯಲ್ಲಿ ಮೂರು ದಿನಗಳ ಹಿಂದೆ ವಿಮಾನ ಧಾಳಿ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಯಿತು. ೩೬ ಗಂಟೆ ಕಾಲ ಫಿರಂಗಿಗಳು 'ಆಕ್ರಮಣಕ್ಕೆ' ಸಿದ್ಧವಾಗಿದ್ದುವು. ರಾಜ್ಯದ ವಾಯು ಮಂಡಲದ ಭದ್ರತೆಯನ್ನು ಪರೀಕ್ಷಿಸಲು ಎಚ್ಚರಿಕೆ ಕ್ರಮ ಕೈಗೊಳ್ಳಲಾಯಿತು

ಮುಖ್ಯ ಮಂತ್ರಿಗಳ ಬಳಿ ಡಿಪ್ಲೊಮಾ ಇಂಜಿನಿಯರಿಂಗ್ ವಿದ್ಯಾರ್ಥಿಗಳ ನಿಯೋಗ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಬಳಿ ನೆನ್ನೆ ನಗರದ ಇಂಜಿನಿಯರಿಂಗ್ ಡಿಪ್ಲೊಮಾ ವಿದ್ಯಾರ್ಥಿಗಳ ನಿಯೋಗವು ಹೋಗಿ ಸಪ್ಲಿಮೆಂಟರಿ ಪರೀಕ್ಷೆ ಮುಂತಾದ ವಿಷಯಗಳ ಬಗ್ಗೆ ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಂಡರು. ಹಳೇ ಮೈಸೂರಿನಲ್ಲಿ ಇದ್ದಂತೆ ಇತರ ಪ್ರದೇಶಗಳಲ್ಲಿರುವ ಸಪ್ಲಿಮೆಂಟರಿ ಪರೀಕ್ಷಾ ಪದ್ಧತಿಯು ಇಲ್ಲಿಯೂ ಜಾರಿಗೆ ಬರಬೇಕೆಂದು ಅವರು ಕೋರಿದರು. ಮುಖ್ಯ ಮಂತ್ರಿಯವರು ಈ ವಿಚಾರವನ್ನು ಪರಿಶೀಲಿಸುವುದಾಗಿ ಭರವಸೆಯಿತ್ತರೆಂದು ತಿಳಿದುಬಂದಿದೆ.

ಪ್ರದೇಶ ಮತ್ತು ಜಿಲ್ಲಾ ಕಾಂಗ್ರೆಸ್ ಅಧಿಕಾರ ವರ್ಗದವರ ಸಭೆ

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಕಾಂಗ್ರೆಸ್ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಜಂಟಿ ಸಭೆಯು ಈ ತಿಂಗಳು ೩೧ನೇ ತಾರೀಖು ಬೆಂಗಳೂರಿನಲ್ಲಿ ಸೇರುವುದು. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ನಾರಾಯಣ್ [illegible]ರವರು ಭಾಷಣ ಮಾಡುವರು ಶ್ರೀ ನಾಯರ್‌ರವರು ಅಂದು ಸಂಜೆ ಸೇರುವ ಪ್ರದೇಶ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸುವರು

ಅತ್ತಿಗೆಯ ದತ್ತು ಮಗನ ಕೊಲೆಗಾಗಿ ಮರಣದಂಡನೆ

ಧಾರವಾಡದ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಅಂಬೆಕರ್‌ರವರು ಗುರುನಾಥ ಗೋವಿಂದ ದೇಶಪಾಂಡೆ ಎಂಬುವನಿಗೆ ೧೩ ವರ್ಷದ ಬಾಲಕ ಬಲಭೀಮ ಬೆಟದೂರನ ಕೊಲೆಗಾಗಿ ಮರಣ ದಂಡನೆಯನ್ನು ವಿಧಿಸಿರುತ್ತಾರೆ ಕಳೆದ ಮಾರ್ಚಿಯಲ್ಲಿ ಹುಡುಗನನ್ನು ಇರಿದು ಕೊಲ್ಲಲಾಯಿತೆಂದು ಹೇಳಲಾಗಿದೆ. ಬಾಲಕನನ್ನು ಅಪರಾಧಿಯು ಅಣ್ಣನ ಹೆಂಡತಿಯು ದತ್ತು ತೆಗೆದುಕೊಂಡಿದ್ದಳೆಂದೂ, ಆಸ್ತಿಗಾಗಿ ಅವರಲ್ಲಿ ವ್ಯಾಜ್ಯ ನಡೆದು ಈ ಘಟನೆ ಸಂಭವಿಸಿತೆಂದೂ ಹೇಳಲಾಗಿದೆ.

ಮಾಜಿ ವೈಸರಾಯ್ ವಿಲ್ಲಿಂಗ್ಡನ್ ವಿಗ್ರಹದ ಉಚ್ಚಾಟನೆ

ಮದರಾಸಿನಲ್ಲಿ ಭಾರತದ ಮಾಜಿ ವೈಸರಾಯ್ ಲಾರ್ಡ್ ವಿಲ್ಲಿಂಗ್ಡನ್ನರ ಪ್ರತಿಮೆಯನ್ನು ಈಗಿರುವ ಸ್ಥಾನದಿಂದ ತೆಗೆದು, ಸೇಂಟ್ ಜಾರ್ಜ್ ಕೋಟೆಗೆ ರವಾನಿಸುವಂತೆ ಕೇಂದ್ರ ಸರ್ಕಾರದವರು ಸೂಚನೆಯಿತ್ತಿರುವರು. ವಿಲ್ಲಿಂಗ್ಡನ್ನರು ಮದ್ರಾಸಿನಲ್ಲಿ ಗವರ್ನರರಾಗಿಯೂ ಇದ್ದರು.

ಪಾಕಿಸ್ತಾನಕ್ಕೆ ಅಮೆರಿಕದಿಂದ ೮ ಲಕ್ಷ ಟನ್ ಧಾನ್ಯ

ಪಾಕಿಸ್ತಾನದ ಆಹಾರ ಕೊರತೆಯನ್ನು ನೀಗಲು ಈ ವರ್ಷ ಅಮೆರಿಕವು ಅಲ್ಲಿಗೆ ೮ ಲಕ್ಷ ಟನ್ ಅಕ್ಕಿ ಮತ್ತು ಗೋಧಿಯನ್ನು ಸರಬರಾಜು ಮಾಡಲಿರುವುದಾಗಿ ಪಾಕಿಸ್ತಾನದ ಹಣಕಾಸಿನ ಮಂತ್ರಿ ಅಮ್ಜದ್ ಅಲಿಯವರು ತಿಳಿಸಿರುತ್ತಾರೆ

ಸಂತಾಪ ಸೂಚನೆ

ನಗರದಲ್ಲಿರುವ ಕಣಿಯರ ಸೇವಾಸಮಾಜದ ಸಭೆಯು ಕಳೆದ ಗುರುವಾರ ಸೇರಿ ಸಮಾಜದ ಸದಸ್ಯರಾದ ಶ್ರೀಗಳು ಭದ್ರಾಚಲಯ್ಯ, ಪಿ ವೀರಭದ್ರಯ್ಯ ಮತ್ತು ಎಸ್ ರಾಜುರವರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು

ವನಮಹೋತ್ಸವ

ನಗರದ ಪೀಪಲ್ಸ್ ಪಾರ್ಕಿನಲ್ಲಿ ಇದೇ ೨೪ನೇ ತಾರೀಕು ಬೆಳಿಗ್ಗೆ ೯ ಗಂಟೆಗೆ ವನ ಮಹೋತ್ಸವವನ್ನು ನಗರದ ಪೌರಸಭೆಯವರು ಏರ್ಪಡಿಸಿರುತ್ತಾರೆ

ಬೊಂಬಾಯಿ-ಮೈಸೂರು ಐ. ಪಿ. ಎಸ್. ಅಧಿಕಾರಿಗಳ ವರ್ಗಾವರ್ಗಿ

ಮೈಸೂರು ಐ. ಪಿ ಎಸ್. ಕೇಡರಿನ ಶ್ರೀ ಎ. ಸಿ. ವಿಜಯಕುಮಾರ್‌ರವರನ್ನು ಬೊಂಬಾಯಿಗೂ, ಬೊಂಬಾಯಿನ ಶ್ರೀ ಬಿ ಎ. ಗರುಡಾಚಾರ್‌ರವರನ್ನು ಮೈಸೂರಿಗೂ ಅದೇ ಕೇಡರುಗಳ ಸ್ಥಾನಕ್ಕೆ ವರ್ಗ ಮಾಡಲಾಗಿದೆ.

ಸರ್ಕಾರಿ ಬಸ್ ಕೆಲಸಗಾರರಿಗೆ ಹೆಚ್ಚು ಸಂಬಳದ ಬೇಡಿಕೆಗಾಗಿ ನಿಯೋಗ

ಸಂಸ್ಥಾನದ ರಸ್ತೆ ಸಂಚಾರ ಇಲಾಖೆಯ ನೌಕರರ ಸಂಸ್ಥೆಯ ಅಧ್ಯಕ್ಷ ಶ್ರೀ ಗುಡ್ಲೆಪ್ಪ ಹಳ್ಳಿಕೇರಿಯವರು ಮತ್ತು ಇತರ ಪ್ರತಿನಿಧಿಗಳು ಇಲಾಖಾ ಜನರಲ್ ಮ್ಯಾನೇಜರ್ ಶ್ರೀ ಲಕ್ಷ್ಮಣರಾಯರ ಬಳಿ ಕಳೆದ ವಾರ ನಿಯೋಗ ಹೋಗಿ ಎಲ್ಲಾ ರಸ್ತೆ ಸಂಚಾರ ನೌಕರರಿಗೂ ಒಂದೇ ಸಮನಾದ ಪುನರ್ವಿಮರ್ಶಿತ ಸಂಬಳವು ದೊರೆಯಬೇಕೆಂದು ಕೋರಿದರು ಈ ಬಗ್ಗೆ ಬೇಗನೆ ನಿರ್ಧಾರ ತೆಗೆದುಕೊಳ್ಳಲಾಗುವುದೆಂದು ಜನರಲ್ ಮ್ಯಾನೇಜರರು ಭರವಸೆಯಿತ್ತರೆಂದು ಹೇಳಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕ್ಲಾರಿಯೋನೆಟ್ ೭-೧೫ ಮೈಸೂರು ಸಹೋದರರು-ದೇವರ ನಾಮ. ೮-೧೫ ಗಾಂಧಿ ವಿಚಾರ ಮಧ್ಯಾಹ್ನ ೧೨ ಮೈಸೂರು ಸಹೋದರರು-ಸಂಗೀತ ೧೨-೩೦ ಮಹಿಳಾ ವಿಹಾರ. ೧-೩೦ ಲಘು ಸಂಗೀತ. ೧-೪೦ ಕ್ಲಾರಿಯೋನೆಟ್ ೨-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೬-೧೦ ಎ ಕೆ ರಮಾಮಣಿ-ಕಾವ್ಯ ವಾಚನ ೭-೩೦ ಪ್ರಸಂಗ ೮ ಕಲಾರಂಗ-ವಿನೋದ ಕಾರ್ಯಕ್ರಮ: ಧಾರವಾಡದಿಂದ ರಿಲೇ. ೮-೩೦ ಟಿ. ಬೃಂದಾ ಮತ್ತು ಟಿ. ಮುಕ್ತಾ-ಸಂಗೀತ ೯-೧೫ ಆರ್. ಎಂ. ದೊರೆಸ್ವಾಮಿ-ವೀಣೆ.

ಮುಖ್ಯ ಮಂತ್ರಿಯವರ ಬಳಿ ಪತ್ರಿಕಾ ಕರ್ತರ ನಿಯೋಗ

ನಗರದ ವರ್ತಮಾನ, ಮೈಸೂರು ಪ್ರಭಾ ಮತ್ತು ವಿಜಯ ಪತ್ರಿಕೆಗಳ ಶ್ರೀಗಳಾದ ಎಂ. ಎಸ್. ತಿಮ್ಮಯ್ಯ, ಹ. ಲ. ಶ್ರೀಕಂಠಮೂರ್ತಿ, ಕೆ. ಎಂ. ಆರ್. ವಿ ಶಾಸ್ತ್ರಿ ಮತ್ತು ಎ ರಾಮಣ್ಣನವರು ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಬಳಿ ನಿಯೋಗ ಹೋಗಿ, ನಗರದಲ್ಲಿ ಏರ್ಪಡಾಗಿರುವ ಸರ್ಕಾರಿ ವಾರ್ತಾ ಕಛೇರಿಗೆ ಪ್ರತ್ಯೇಕ ಕಟ್ಟಡದ ವ್ಯವಸ್ಥೆ ಮಾಡಬೇಕೆಂದೂ, ಪತ್ರಿಕಾ ವ್ಯಾನು ಮತ್ತು ಇತರ ಸೌಕರ್ಯಗಳನ್ನು ಕಲ್ಪಿಸಬೇಕೆಂದೂ ಕೋರಿದರು. ಬೆಂಗಳೂರು ಮತ್ತು ಮೈಸೂರು ಪತ್ರಿಕೆಗಳಿಗೆ ಏಕ ಕಾಲದಲ್ಲಿ ವರ್ತಮಾನಗಳನ್ನು ಕೊಡುವ ವ್ಯವಸ್ಥೆಯಾಗಬೇಕೆಂದು ಅವರು ಮನವಿ ಮಾಡಿಕೊಂಡರು. ಶ್ರೀ ನಿಜಲಿಂಗಪ್ಪನವರು ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚಿಸಿ ಸೂಕ್ತ ವ್ಯವಸ್ಥೆ ಮಾಡುವುದಾಗಿ ಸೂಚಿಸಿದರು.

ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್.

ಮಾರ್ಕೆಟ್ ಬ್ರಾಂಚು, ಮೈಸೂರು

ಗಿರವಿ ನಗಗಳ ಮಾರಾಟದ ನೋಟೀಸು

ಮೈಸೂರು ಸಿಟಿ ಮಂಡಿ ಮೊಹಲ್ಲಾ ಅಕ್ಬರ್ ರೋಡಿನಲ್ಲಿರುವ ಡೋರ್ ನಂ 1862-63ನೇ ಮನೆಯಲ್ಲಿ ವಾಸವಾಗಿರುವ ಶ್ರೀ ಎಂ ನಾರಾಯಣ ಸಿಂಗ್‌ರವರು ತಾ॥ 28-6 54 ರಲ್ಲಿ ಮೈಸೂರು ನಗರದ ಮೈಸೂರು ಬ್ಯಾಂಕಿನ ಮಾರ್ಕೆಟ್ ಬ್ರಾಂಚು ಶಾಖೆಯಲ್ಲಿ ಸುಮಾರು 17 ರೂ 15 ಆಣೆ ತೂಕದ ಕೆಲವು ಚಿನ್ನದ ಒಡವೆಗಳನ್ನು 750 ರೂ ಗಳಿಗೆ ಅಡವಿಟ್ಟು ಪುನಃ 26-8-54 ರಲ್ಲಿ ಸದರಿ ಗಿರವಿಇಟ್ಟ ಆಧಾರದ ಒಡವೆಗಳ ಮೇಲೆ 125 ರೂ. ಗಳನ್ನು ಸಾಲವಾಗಿ ಪಡೆದು, ಇದುವರೆಗೂ ಸದರಿ ಗಿರವಿ ಒಡವೆಗಳನ್ನು ಬಿಡಿಸಿಕೊಂಡುಹೋಗಿರುವುದಿಲ್ಲವಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಈ ತಾರೀಕು ಲಾಗಾಯಿತು ಇನ್ನು ಹದಿನೈದು ದಿವಸಗಳೊಳಗಾಗಿ ಮೇಲ್ಕಂಡ ಶ್ರೀ ಎಂ. ನಾರಾಯಣ ಸಿಂಗ್‌ರವರು ಬ್ಯಾಂಕಿಗೆ ಬಂದು ಸರಿಯಾದ ರಶೀದಿ ಕೊಟ್ಟು, ಬ್ಯಾಂಕಿಗೆ ಸಲ್ಲಬೇಕಾದ ಅಸಲು ಮತ್ತು 30-6-1957 ರವರೆಗೆ ಬಡ್ಡಿ ಸಮೇತ ರೂ. 1031-12 ನಯೆ ಪೈಸೆ ಮತ್ತು 1 7-1957ನೇ ತಾರೀಖಿನಿಂದ ನಗಗಳ ಮಾರಾಟ ಮಾಡಲಿರುವ ತಾರೀಖಿನವರೆಗೆ ಬಡ್ಡಿ ಮತ್ತು ಇತರ ಖರ್ಚುಗಳು ವಗೈರೆ ಪಾವತಿ ಮಾಡಿ ಸದರಿ ಗಿರವಿಯ ಒಡವೆಗಳನ್ನು ಬಿಡಿಸಿಕೊಂಡುಹೋಗತಕ್ಕದ್ದು. ಇಲ್ಲವಾದಲ್ಲಿ ಮೇಲೆ ನಮೂದಿಸಿರುವ ಗಿರವಿ ಒಡವೆಗಳಲ್ಲಿ ಬ್ಯಾಂಕಿಗೆ ಸಲ್ಲಬೇಕಾದ ಬಾಕಿಗೆ ಸರಿತೂಗುವಷ್ಟು ಬೆಲೆ ಬಾಳುವ ಒಡವೆಗಳನ್ನು 1957ನೇ ಇಸವಿ ಆಗಸ್ಟ್ ತಿಂಗಳು 6ನೇ ತಾರೀಖು ಮಂಗಳವಾರ ಮೇಲ್ಕಂಡ ಬ್ಯಾಂಕಿನ ಆವರಣದಲ್ಲಿ ಹನ್ನೊಂದು ಗಂಟೆಗೆ ಸರಿಯಾಗಿ ಬಹಿರಂಗವಾಗಿ ಮಾರಾಟ ಮಾಡಿ, ಬಂದ ಹಣವನ್ನು ಮೇಲ್ಕಂಡ ಶ್ರೀ ಎಂ ನಾರಾಯಣಸಿಂಗ್‌ರವರ ಸಾಲಕ್ಕೆ ಜಮಾ ಮಾಡಿಕೊಳ್ಳಲಾಗುತ್ತೆ ಅನಂತರ ಬರತಕ್ಕ ಯಾವ ತಕರಾರನ್ನೂ ಬ್ಯಾಂಕು ಅಂಗೀಕರಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

(ರುಜು) ಡಿ. ಸುಬ್ಬರಾವ್,
ಮ್ಯಾನೇಜರ್,
ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್,
ಮಾರ್ಕೆಟ್ ಬ್ರಾಂಚ್,
ಮೈಸೂರು

ತಾ॥ 22-7-1957

Edited, Printed and Published by A. R. Nagarajan at Sadhvi Press, D.Subbiah Road Mysore

ಅಂಚೆ ರಿ. ನಂ. 192

ಇಂದಿನ ಪತ್ರಿಕೆ 2 ಪುಟ ಮಾತ್ರ

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ ೧೧] SADHVI • TUESDAY 23—7—1957 ಮೈಸೂರು • ಮಂಗಳವಾರ ೨೩—೭—೧೯೫೭ • [ಸಂಚಿಕೆ ೩೪೯

ಕಾಶ್ಮೀರದಲ್ಲಿ ಪಾಕಿಸ್ತಾನದ ಗಲಭೆ ಬಗ್ಗೆ ನೆಹರೂ ಎಚ್ಚರಿಕೆ

ಕಾಶ್ಮೀರದಲ್ಲಿ ಪಾಕಿಸ್ತಾನದಿಂದ ತೊಂದರೆ ಸಂಭವ

ದೇಶದಲ್ಲೆಲ್ಲಾ ಪೂರ್ಣ ಜಾಗರೂಕತೆಗಾಗಿ ನೆಹರೂರವರ ಸೂಚನೆ

ಪ್ರಧಾನಿ ನೆಹರೂರವರು ನೆನ್ನೆ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಮಾತನಾಡಿ, ಭಾರತ ಮತ್ತು ಪಾಕಿಸ್ತಾನಗಳ ಸಂಬಂಧವು ತೃಪ್ತಿಕರವಾಗಿಲ್ಲದಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದರೆಂದು ವರದಿಯಾಗಿದೆ. ಕಾಶ್ಮೀರದಲ್ಲಿ ಪಾಕಿಸ್ತಾನವು ಉಂಟುಮಾಡಬಹುದಾದ ಯಾವ ಸ್ಥಿತಿಯನ್ನಾದರೂ ಎದುರಿಸುವ ಸಲುವಾಗಿ ದೇಶದಲ್ಲೆಲ್ಲಾ ಪೂರ್ಣ ಎಚ್ಚರಿಕೆ ವಹಿಸುವಂತೆ ಅವರು ಒತ್ತಿ ಹೇಳಿದುದಾಗಿ ತಿಳಿದುಬಂದಿದೆ.

ಗೋವಾ ಬಗ್ಗೆ ಭಾರತವು ಮುಂದೆಯೂ ಜಾಗರೂಕತೆ ಮತ್ತು ತಾಳ್ಮೆಯಿಂದ ವರ್ತಿಸುವುದೆಂದು ನೆಹರೂರವರು ಸೂಚಿಸಿದರೆಂದೂ ಹೇಳಲಾಗಿದೆ.

ಭಾರತೀಯ ಸಂಸ್ಕೃತಿಯ ಕಾಲೇಜು

ಉತ್ತರ ಕಾಶಿಯ ಸ್ವಾಮಿ ಚಿನ್ಮಯಾನಂದಜಿಯವರು ಭಾರತೀಯ ಸಂಸ್ಕೃತಿಯ ಕಾಲೇಜೊಂದನ್ನು ಆರಂಭಗೊಳಿಸಲಿರುವರು ಅದಕ್ಕಾಗಿ ಮೈಸೂರಿನ ರಾಜ್ಯಪಾಲರು ಮೈಸೂರು ನಗರದಲ್ಲಿ ಒಂದು ಭವನವನ್ನು ದಾನವಾಗಿ ಕೊಡಲಿರುವರು. ಕಾಲೇಜನ್ನು "ಸಾಂದೀಪನಿ ಕಾಲೇಜ್ ಆಫ್ ಇಂಡಿಯನ್ ಕಲ್ಚರ್'' ಎಂದು ಕರೆಯಲಾಗುವುದು. ಇಡೀ ಭಾರತದಲ್ಲೇ ಇದು ಪ್ರಥಮ ಸಾಂಸ್ಕೃತಿಕ ಶಿಕ್ಷಣದ ಮಹಾ ಕಾಲೇಜಾಗುವುದು. ಅದರಲ್ಲಿ ೭೫ ಪುರುಷರು ಮತ್ತು ೨೫ ಮಹಿಳೆಯರಿಗೆ ೫ ವರ್ಷ ಕಾಲ ಶಿಕ್ಷಣವೀಯಲಾಗುವುದು.

ಅಲ್ಪ ದೂರದ ರೈಲು ಪ್ರಯಾಣಿಕರಿಗೆ ನಿಲ್ಲಲು ಮಾತ್ರ ಅವಕಾಶ

ರೈಲ್ವೆಗಳಲ್ಲಿ ಹೊಸ ಪ್ರಯೋಗದ ಸಂಭವ

ರೈಲು ಪ್ರಯಾಣದಲ್ಲಿ ಮಿತಿಮೀರಿ ಜನ ಸಂಚಾರವಿರುವುದರಿಂದ ಪ್ರಯಾಣಿಕರಿಗೆ ಆಗುವ ಅನಾನುಕೂಲಗಳನ್ನು ಕುರಿತು ನೆನ್ನೆ ಲೋಕ ಸಭೆಯಲ್ಲಿ ಸದಸ್ಯರು ಪ್ರಸ್ತಾಪಿಸಿದಾಗ ರೈಲ್ವೆ ಸಚಿವರು ಹೆಚ್ಚು ಜನರ ನೂಕುವನ್ನು ತಪ್ಪಿಸುವ ಸಲುವಾಗಿ ಅಲ್ಪ ದೂರದ ಪ್ರಯಾಣಿಕರಿಗೆ ನಿಂತುಹೋಗುವ ಅವಕಾಶವನ್ನು ಮಾತ್ರ ಕಲ್ಪಿಸುವ ವಿಚಾರವನ್ನು ತಾವು ಪರಿಶೀಲಿಸುವುದಾಗಿ ತಿಳಿಸಿದರು. ಈ ಪದ್ಧತಿಯು ಹಲವಾರು ದೇಶಗಳಲ್ಲಿರುವುದೆಂದೂ, ಭಾರತದ ರೈಲುಗಳಲ್ಲಿ ಅದನ್ನು ತರಲು ತಾವು ಪ್ರವೀಣರ ಅಭಿಪ್ರಾಯವನ್ನು ಪಡೆಯಲಿರುವುದಾಗಿಯೂ ಸಚಿವ ಜಗಜೀವನರಾಂರವರು ಹೇಳಿದರು.

ಯೋಜನಾ ಮಂಡಲಿಯವರು ಹೆಚ್ಚು ಹಣವನ್ನು ಮಂಜೂರು ಮಾಡಿದರೆ ಮತ್ತು ಅವಶ್ಯಕ ಸಾಮಗ್ರಿಗಳು ದೊರೆತರೆ ಹೊಸ ರಸ್ತೆಗಳನ್ನು ನಿರ್ಮಿಸುವ ಅಥವಾ ಈಗಿರುವುವನ್ನು ಹೆಚ್ಚಿಸುವ ಕಾರ್ಯವನ್ನು ಕೈಗೊಳ್ಳಬಹುದೆಂದು ಅವರು ಸೂಚಿಸಿದರು.

ಸಣ್ಣ ಉಳಿತಾಯದಿಂದ ದ್ವಿತೀಯ ಯೋಜನೆಗೆ ಹಣ

ಅರ್ಥ ಮಂತ್ರಿ ಟಿ. ಮರಿಯಪ್ಪನವರ ಸೂಚನೆ

ಬೆಂಗಳೂರು ೨೨.

ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರು ವಿಧಾನ ಸಭೆಯಲ್ಲಿ ನೆನ್ನೆ ಮಾತನಾಡಿ, ಸಂಸ್ಥಾನ ಸರ್ಕಾರದವರು ಸಾರ್ವಜನಿಕ ಸಾಲಗಳನ್ನು ಎತ್ತಬಾರದೆಂದೂ, ಸಣ್ಣ ಪ್ರಮಾಣದ ಉಳಿತಾಯದ ಕಡೆಗೆ ಹೆಚ್ಚು ಗಮನವೀಯಬೇಕೆಂದೂ ಭಾರತ ಸರ್ಕಾರದವರು ಸೂಚಿಸಿರುವುದಾಗಿ ತಿಳಿಸಿದರು ಸಣ್ಣ ಪ್ರಮಾಣದ ಉಳಿತಾಯದಲ್ಲಿ ಬರುವ ಹಣದ ಮೂರನೇ ಎರಡು ಭಾಗವನ್ನು ಸಂಸ್ಥಾನಕ್ಕೆ ಬಿಟ್ಟುಕೊಡಲಾಗುವುದೆಂದೂ ಕೇಂದ್ರದವರು ತಿಳಿಸಿರುವುದಾಗಿ ಅವರು ಹೇಳಿ, ಸಂಸ್ಥಾನ ಸರ್ಕಾರದವರು ಬಹಿರಂಗ ಸಾಲವನ್ನು ತೆಗೆಯುವುದಿಲ್ಲವೆಂದು ವ್ಯಕ್ತಪಡಿಸಿದರು. ಭಾರತ ಸರ್ಕಾರದವರು ಅವಕಾಶವಿತ್ತರೆ ಈ ವರ್ಷ ೫ ಕೋಟಿ ರೂ ಗಳನ್ನು ಉಳಿತಾಯದ ಮೂಲಕ ಪಡೆಯಲಾಗುವುದೆಂದೂ ಅವರು ಸೂಚಿಸಿ, ಈ ಯೋಜನೆಯನ್ನು ಜಾರಿಗೆ ತರುವುದು ಶಕ್ಯವೆಂದೂ ನುಡಿದರು.

ರೇಡಿಯೊ ಸಂಗೀತ ಸ್ಪರ್ಧೆ

ಭಾರತದ ರೇಡಿಯೊದವರು ಬರುವ ಅಕ್ಟೋಬರ್ ೧ನೇ ತಾರೀಕು ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತಗಳ ಸ್ಪರ್ಧೆಯನ್ನು ಏರ್ಪಡಿಸಲಿರುವರು ೧೬ರಿಂದ ೨೧ ವರ್ಷ ವಯಸ್ಸಿನ ಹೊಸ ಸಂಗೀತಗಾರರಿಗೆ ಅದರಲ್ಲಿ ಭಾಗವಹಿಸಲು ಅವಕಾಶವಿರುವುದು. ಶಾಸ್ತ್ರೀಯ, ಲಘು ಶಾಸ್ತ್ರೀಯ ಮತ್ತು ಲಘು ಸಂಗೀತಗಳಲ್ಲಿ ಸ್ಪರ್ಧೆ ನಡೆಯುವುದು. ಅಲ್ಲದೆ ವಾದ್ಯಸಂಗೀತ ಸ್ಪರ್ಧೆಯೂ ಇದೆ. ಸೇರಬಯಸುವವರು ಹತ್ತಿರದ ರೇಡಿಯೊ ಸ್ಟೇಷನ್ ಡೈರೆಕ್ಟರಿಂದ ನಮೂನೆಗಳನ್ನು ಪಡೆದುಕೊಂಡು ಆಗಸ್ಟ್ ೭ರೊಳಗೆ ಅರ್ಜಿಗಳನ್ನು ಕಳುಹಬಹುದು

ಭೂ ಮಾಲೀಕರ ಸಭೆ

ಭೂ ಶಾಸನದ ಬಗ್ಗೆ ನೇಮಕವಾಗಿರುವ ಜಂಟಿ ಸಮಿತಿಯವರು ಗೇಣಿ ವಿಷಯಗಳ ಸಂಬಂಧವಾಗಿ ಪ್ರಕಟಿಸಿರುವ ಅಂಶಗಳನ್ನು ಪರಿಶೀಲಿಸಿ ಭೂ ಮಾಲೀಕರ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಸೂಕ್ತ ಸಲಹೆಗಳನ್ನು ಕೊಡಲು ನಾಳೆ ಸಂಜೆ ೭ ಗಂಟೆಗೆ ಸಂತೇಪೇಟೆ ಧಾನ್ಯ ವರ್ತಕರ ಸಂಘದ ಕಟ್ಟಡದಲ್ಲಿ ಭೂ ಮಾಲೀಕರ ಸಭೆಯು ಸೇರುವುದು. ವಿಧಾನ ಸಭೆಯ ಮಾಜಿ ಸದಸ್ಯ ಶ್ರೀ ಬಿ. ನಾರಾಯಣಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಜಮೀನುದಾರರು ಬರಬೇಕೆಂದು ಗೌರವ ಕಾರ್ಯದರ್ಶಿಗಳಾದ ಶ್ರೀ ಚೌಡಯ್ಯ ಮತ್ತು ಬಿ. ಜಿ. ದಾಸ್‌ರವರು ಕೋರಿರುತ್ತಾರೆ.

ಕೆ. ಎಫ್. ಪಾಟೀಲರು ಪ್ರದೇಶ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ವಿಧಾನ ಸಭಾ ಸದಸ್ಯ ಶ್ರೀ ಕೆ. ಎಫ್. ಪಾಟೀಲರನ್ನು ಪ್ರದೇಶ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ ಅವರು ಧಾರವಾಡ ಜಿಲ್ಲೆಯವರು ಮುಂಬಾಯಿಯಲ್ಲಿ ಹಿಂದೆ ಉಪ ಮಂತ್ರಿಯಾಗಿದ್ದರು.

ಮೈಸೂರು ಹೈಕೋರ್ಟು ಜಡ್ಜರ ನೇಮಕದಲ್ಲಿ ಸಾವಕಾಶ

ಲೋಕ ಸಭೆಯಲ್ಲಿ ಗೃಹ ಮಂತ್ರಿ ಪಂಡಿತ ಪಂತರ ವಿವರಣೆ

ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್‌ರವರು ಲೋಕಸಭೆಯಲ್ಲಿ ನೆನ್ನೆ ಬೆಂಗಳೂರಿನ ಸದಸ್ಯ ಶ್ರೀ ಎ. ಕೇಶವರವರ ಪ್ರಶ್ನೆಗೆ ಉತ್ತರವಿತ್ತು, ಮೈಸೂರು ಹೈಕೋರ್ಟಿನ ನ್ಯಾಯಾಧೀಶರುಗಳ ನೇಮಕದಲ್ಲಿ ತಡವಾದುದಕ್ಕೆ ಸಂಸ್ಥಾನದ ಮುಖ್ಯ ಮಂತ್ರಿತ್ವದಲ್ಲಿ ಬದಲಾವಣೆಯಾದುದೂ ಕಾರಣವೆಂದು ತಿಳಿಸಿದರು. ಹೊಸ ಮುಖ್ಯ ಮಂತ್ರಿಯವರು ಅಧಿಕಾರಕ್ಕೆ ಬಂದ ಕೂಡಲೇ ನ್ಯಾಯಾಧೀಶರುಗಳ ನೇಮಕದ ಬಗ್ಗೆ ಶಿಫಾರಸು ಮಾಡುವ ಜವಾಬ್ದಾರಿ ವಹಿಸಲು ಮನಸ್ಸು ಕೊಡಲಿಲ್ಲವೆಂದು ಅವರು ಹೇಳಿದರು.

ಶ್ರೀ ಕೇಶವರವರು ಪ್ರಶ್ನೆ ಮಾಡಿ, ಮೈಸೂರು ಹೈಕೋರ್ಟಿನ ಮುಂದೆ ನೂರಾರು ಮರಣ ದಂಡನೆ ಶಿಕ್ಷೆಗಳು ಖಾಯಂ ಮಾಡುವುದು ಅಥವಾ ಬೇರೆ ರೀತಿಯಲ್ಲಿ ವಿಲೆ ಆಗಬೇಕಾಗಿರುವಲ್ಲಿ ನ್ಯಾಯಾಧೀಶರ ನೇಮಕಗಳ ಬಗ್ಗೆ ನಿಧಾನವಾದುದಕ್ಕೆ ಕಾರಣಗಳನ್ನು ಕೇಳಿದರು ಹೈಕೋರ್ಟಿನಲ್ಲಿ ನೂರಾರು ಮರಣ ದಂಡನೆಗಳು ಇತ್ಯರ್ಥಕ್ಕಾಗಿ ಇರಲಾರವೆಂದು ಪಂಡಿತ ಪಂತರು ನುಡಿದರು.

ಸಾರ್ವತ್ರಿಕ ಚುನಾವಣೆ ಮತ್ತು ಮೈಸೂರು ಆಡಳಿತಗಾರರ ಪರಿಶೀಲನೆಗಳೂ ನ್ಯಾಯಾಧೀಶರ ನೇಮಕವು ಸಾವಕಾಶವಾಗಲು ಸ್ವಲ್ಪ ಮಟ್ಟಿಗೆ ಕಾರಣವೆಂದು ಪಂತರು ಸೂಚಿಸಿದರು

ಪರಕಾಲ ಸ್ವಾಮಿಗಳವರ ತಿರು ನಕ್ಷತ್ರ ಮತ್ತು ವಿದ್ವತ್ಸಭೆ

ನಗರದಲ್ಲಿರುವ ಶ್ರೀ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರ ಮಠದಲ್ಲಿ ಇದೇ ತಿಂಗಳು ೨೬ನೇ ತಾರೀಖು ಶ್ರೀ ಅಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರ ೭೦ನೇ ತಿರು ನಕ್ಷತ್ರ ಸಮಾರಂಭವು ನೆರವೇರುವುದು. ಅಂದು ಮಧ್ಯಾಹ್ನ ೩ ಗಂಟೆಗೆ ಶ್ರೀಶ್ರೀಗಳವರು "ರಾಮಾವತಾರದಿಂದ ಲೋಕಕ್ಕೆ ಉಪಕಾರ" ಎಂಬ ವಿಚಾರವಾಗಿ ಉಪದೇಶ ಭಾಷಣವೀಯುವರು ೪ ಗಂಟೆಗೆ ವೇದಶಾಸ್ತ್ರಗಳ ೮೦ನೇ ವಿದ್ವತ್ಸಭೆಯು ಆರಂಭವಾಗುವುದು. ಈ ವರ್ಷ ಆಹ್ವಾನಿತರಾದ ವಿದ್ವಾಂಸರಿಗೆ ಮಾತ್ರ ಪ್ರವೇಶವಿದೆ.

ಪರೀಕ್ಷೆಗಳ ಸುಧಾರಣೆಗೆ ಹಲವು ಸಂಸ್ಥಾನಗಳು ಸಿದ್ಧ

ಮದ್ರಾಸು, ಬೊಂಬಾಯಿ, ಕೇರಳ, ಮೈಸೂರು, ಮಧ್ಯ ಪ್ರದೇಶ, ಅಸ್ಸಾಂ ಮತ್ತು ಉತ್ತರ ಪ್ರದೇಶ ಪ್ರಾಂತಗಳೂ; ದೆಹಲಿ ಸಂಸ್ಥಾನವೂ ಪರೀಕ್ಷಾ ಪದ್ಧತಿಯಲ್ಲಿ [illegible] ಸುಧಾರಣೆಗಳನ್ನು ತರಲು ಮುಂದೆ ಬಂದಿರುವುದಾಗಿ ಕೇಂದ್ರ ವಿದ್ಯಾ ಶಾಖಾ ಮಂತ್ರಿ ಡಾ॥ ಶ್ರೀಮಾಲಿಯವರು ತಿಳಿಸಿರುತ್ತಾರೆ.

ಭೂದಾನ-ವಿದ್ಯಾದಾನ ಚಳುವಳಿ ಇಲ್ಲ

೯೦ ಸಾವಿರ ಎಕರೆಯಲ್ಲಿ ಬೆಳೆ

ಬೆಂಗಳೂರು ೨೨.

ವಿಧಾನ ಸಭೆಯಲ್ಲಿ ನೆನ್ನೆ ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರು ಪ್ರಶ್ನೆಗಳಿಗೆ ಉತ್ತರವಿತ್ತು, ವಿದ್ಯಾದಾನ-ಭೂದಾನ ಚಳುವಳಿ ಸಂಬಂಧದಲ್ಲಿ ಬಂದ ೫೧,೩೦೬ ಎಕರೆ ಜಮೀನು ಪೈಕಿ ೯,೫೮೫ ಎಕರೆಯಲ್ಲಿ ಕಳೆದ ವರ್ಷ ವ್ಯವಸಾಯ ಮಾಡಲಾಯಿತೆಂದು ನುಡಿದರು. ಇದರಿಂದ ೧೯,೦೦೦ ರೂ ವರಮಾನ ಬಂದುದಾಗಿಯೂ, ೫೭೩ ಪಲ್ಲ ಭತ್ತ ಮತ್ತು ೧೫೫೦ ಮಣ ಆಲೂಗೆಡ್ಡೆಯನ್ನು ಬೆಳೆಯಲಾಯಿತೆಂದೂ, ವ್ಯವಸಾಯಕ್ಕಾಗಿ ೫,೦೦೦ ರೂ. ಅನ್ನು ಖರ್ಚು ಮಾಡಲಾಯಿತೆಂದೂ ಅವರು ಹೇಳಿದರು ಈ ಯೋಜನೆಯನ್ನು ಈಗ ಕಾರ್ಯಗತ ಮಾಡುತ್ತಿಲ್ಲವೆಂದು ಸಚಿವರು ಸೂಚಿಸಿ, ದಾನವಾಗಿ ಬಂದಿರುವ ಜಮೀನನ್ನು ಉಪಯೋಗಿಸಲಾಗುತ್ತಿರುವುದೆಂದೂ, ಹಲವು ಪ್ರದೇಶಗಳಲ್ಲಿ ಈ ಜಮೀನಿನಿಂದ ಶಾಲೆಗಳಿಗೆ ಉಪಯೋಗವಾಗಿರುವುದಾಗಿಯೂ ಸೂಚಿಸಿದರು ವ್ಯವಸಾಯ ಶಿಕ್ಷಣಕ್ಕಾಗಿ ಸದರಿ ಜಮೀನನ್ನು ಉಪಯೋಗಿಸಲಾಗುತ್ತಿಲ್ಲವೆಂದು ಅವರು ವ್ಯಕ್ತಪಡಿಸಿದರು

ವಿದ್ಯಾದಾನ-ಭೂದಾನಕ್ಕೆ ಬಂದಿರುವ ಹಲವು ಜಮೀನುಗಳಲ್ಲಿ ಸರ್ಕಾರಿ ಭೂಮಿಯೂ ಸೇರಿರುವುದಾಗಿ ಅವರು ನುಡಿದರು.

ಚಿತ್ರ ಕಲಾ ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆ

ಮೈಸೂರು ಚಿತ್ರಕಲಾ ಸಂಸ್ಥೆಯ ಆಶ್ರಯದಲ್ಲಿ ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆಗಳ ಆರಂಭೋತ್ಸವವನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನಗರದ ಟೌನ್ ಹಾಲಿನಲ್ಲಿ ಕಳೆದ ಶನಿವಾರ ನೆರವೇರಿಸಿದರು ಅವರು ಭಾಷಣ ಮಾಡಿ, ನಾಟಕ ಕಲೆಯು ಹಿಂದೆ ಇದ್ದ ಮಟ್ಟವನ್ನು ಈಗ ಮುಟ್ಟುವಂತಾಗಬೇಕೆಂದು ಸೂಚಿಸಿ, ಕಲೆಗಳ ಉದ್ಧಾರಕ್ಕಾಗಿ ಪ್ರಯತ್ನಿಸುತ್ತಿರುವ ಯುವಕರನ್ನು ಪ್ರೋತ್ಸಾಹಿಸುವುದು ಅಗತ್ಯವೆಂದು ಸೂಚಿಸಿದರು. ಮಾರನೇ ಸಂಜೆ ಪೌರಸಭಾಧ್ಯಕ್ಷ ಶ್ರೀ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಗಳು ನಡೆದುವು. ಕಲೆಗಳ ಉತ್ತೇಜನಕ್ಕಾಗಿ ಸ್ಪರ್ಧೆಗಳು ಅವಶ್ಯಕವೆಂದು ಅವರು ಸೂಚಿಸಿದರು.

ಬೇಲೂರು ಮೊಕದ್ದಮೆ ಅಪೀಲು ಮುಂದಕ್ಕೆ

ಬೇಲೂರು ಶ್ರೀನಿವಾಸಯ್ಯಂಗಾರ್ಯರು ಮತ್ತು ಮನೆತನದವರ ಕೊಲೆಗಾಗಿ ಮರಣದಂಡನೆ ವಿಧಿಸಲ್ಪಟ್ಟಿರುವವರ ಅಪೀಲು ವಿಚಾರಣೆಯನ್ನು ಹೈಕೋರ್ಟಿನವರು ಮುಂದಕ್ಕೆ ಹಾಕಿರುತ್ತಾರೆ.

○ ಕಾಶ್ಮೀರದಲ್ಲಿ ಜನಮತಗಣನೆ ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸಲು ಏರ್ಪಾಡಾಗಿರುವ ಸಂಸ್ಥೆಯ ಪ್ರಮುಖ ಸದಸ್ಯರಾದ ಪೀರ್ ಅಬ್ದುಲ್ ಗಫಾರ್‌ರವರು ಪಕ್ಷಕ್ಕೆ ರಾಜೀನಾಮೆಯಿತ್ತಿರುತ್ತಾರೆ ಪಕ್ಷದವರು ಸಂಸ್ಥಾನದ ವಿರುದ್ಧ ಚಟುವಟಿಕೆಗಳನ್ನು ಸ್ವಾರ್ಥಕ್ಕಾಗಿ ನಡೆಸುತ್ತಿರುವರೆಂದು ಅವರು ತಿಳಿಸಿರುತ್ತಾರೆ.

ದ್ವಿತೀಯ ಯೋಜನೆ ಅವಧಿಯಲ್ಲಿ ಸಮಾಜ ಕಲ್ಯಾಣದ ಕಾರ್ಯ

ಬೆಂಗಳೂರು ೨೨

ದ್ವಿತೀಯ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ ಇಡೀ ಸಂಸ್ಥಾನದಲ್ಲಿ ಹಿಂದುಳಿದ ವರ್ಗ, ಗಿರಿಜನರು ಮತ್ತು ಇತರ ಹಿಂದುಳಿದವರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ೬೬೬ ಲಕ್ಷ ರೂ. ವೆಚ್ಚ ಮಾಡುವ ಕಾರ್ಯಕ್ರಮ ಪಟ್ಟಿಯನ್ನು ಇಲಾಖೆಯವರು ಸಿದ್ಧಗೊಳಿಸಿರುತ್ತಾರೆ. ಹಿಂದುಳಿದ ವರ್ಗದವರಿಗೆ ೩.೭೫ ಕೋಟಿ ರೂ. ವೆಚ್ಚ ಮಾಡಲಾಗುವುದು. ಗುಡ್ಡಗಾಡಿನವರಿಗಾಗಿ ೩೫೦.೭ ಲಕ್ಷ ರೂ. ವೆಚ್ಚವಾಗುವುದು. ಈ ವರ್ಷ ಒಟ್ಟು ೩೮ ಲಕ್ಷ ರೂ. ಹಣವನ್ನು ಒದಗಿಸಲಾಗುವುದು.

ಇದರಲ್ಲಿ ಗೃಹ ವಸತಿ ಮತ್ತು ವಿದ್ಯಾಭ್ಯಾಸಗಳೇ ಮುಖ್ಯ ಕೆಲಸಗಳಾಗಿವೆ. ೧೫ ಲಕ್ಷ ರೂ. ವೆಚ್ಚದಿಂದ ೪½ ಸಾವಿರ ಮನೆಗಳನ್ನು ಕಟ್ಟಲಾಗುವುದು. ೫೦೦ ವಿದ್ಯಾರ್ಥಿಗಳಿಗಾಗಿ ೧ ಲಕ್ಷ ರೂ. ಕೊಡಲಾಗುತ್ತದೆ; ಅಲ್ಲದೆ ಹಾಸ್ಟೆಲು ಮತ್ತು ಶಾಲೆಗಳಿಗೆ ೫೦,೦೦೦ ರೂ. ದೊರೆಯುತ್ತದೆ. ೧,೦೦೦ ಶಾಲಾ ಮಕ್ಕಳಿಗೆ ಉಚಿತ ಆಹಾರ ಮತ್ತು ವಿದ್ಯಾಭ್ಯಾಸದ ಸಾಧನಗಳನ್ನು ಒದಗಿಸಲು ೬೦,೦೦೦ ರೂ. ತೆಗೆದಿಡಲಾಗುವುದು.

೮೦ ನೀರಿನ ಬಾವಿಗಳನ್ನು ತೆಗೆಯಲಾಗುವುದು. ಗೃಹ ಕೈಗಾರಿಕೆಗಳಿಗೆ ೭೫,೦೦೦ ರೂ. ಒದಗಿಸಲಾಗುವುದು. ವ್ಯವಸಾಯ ಸವಲತ್ತುಗಳಿಗಾಗಿ ೮೦,೦೦೦ ರೂ. ಕೊಡಲಾಗುವುದು.

ವೃದ್ಧಾಪ್ಯ ಪೆನ್‌ಷನ್ ಯೋಜನೆಯಿಂದ ೧½ ಲಕ್ಷ ಜನರಿಗೆ ಸೌಕರ್ಯ

ಉತ್ತರ ಪ್ರದೇಶ ಸರ್ಕಾರದವರು ಈ ವರ್ಷ ಜಾರಿಗೆ ತರಲಿರುವ ವೃದ್ಧಾಪ್ಯದ ಪೆನ್‌ಷನ್ ಯೋಜನೆಯ ಸೌಲಭ್ಯವು ೧½ ಲಕ್ಷ ಮಂದಿಗೆ ದೊರೆಯುವುದೆಂದು ಗೊತ್ತಾಗಿದೆ. ಅನಾಥರು ಇರುವ ಸ್ಥಳಗಳಲ್ಲೇ ಸೌಲಭ್ಯವನ್ನು ಕಲ್ಪಿಸಲಾಗುವುದು. ಅದಕ್ಕಾಗಿ ಈಗ ೭೫ ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ಅದು ಸಾಲದೆಂದು ಕಂಡುಬಂದರೆ ಹೆಚ್ಚು ಹಣವನ್ನು ಕೊಡಲಾಗುವುದು.

ಪ್ರತಿ ಅಧ್ಯಾಪಕನ ಗೃಹದಲ್ಲೂ ಒಂದು ಶಾಲೆ

ಆಂಧ್ರ ದೇಶದ ಜಿಲ್ಲೆಗಳಲ್ಲಿ ಪ್ರತಿ ಉಪಾಧ್ಯಾಯನ ಮನೆಯೂ ಒಂದು ಪ್ರೈವೇಟ್ ತರಗತಿಯಾಗಿರುವುದೆಂದೂ, ಅಲ್ಲಿ ಕೊಡುವ ಪ್ರಶ್ನೆಗಳನ್ನೇ ವಾರ್ಷಿಕ ಪರೀಕ್ಷೆಗಳಿಗೂ ಕೊಡಲಾಗುವುದೆಂದೂ ಅಲ್ಲಿನ ವಿದ್ಯಾ ಮಂತ್ರಿ ಪಟ್ಟಾಭಿರಾಮರಾಯರು ತಿಳಿಸಿರುತ್ತಾರೆ. ಇದು ವಿದ್ಯಾರ್ಥಿಗಳ ಸ್ವ ಪ್ರಯತ್ನಕ್ಕೆ ಅಪಾಯಕಾರಿಯಾಗುವುದೆಂದೂ, ಪರೀಕ್ಷೆಗಳಲ್ಲಿ ಪ್ರಶ್ನೆಗಳಿಗೆ ಬರುವ ಉತ್ತರವನ್ನು ನೋಡಿದರೆ, ಮೊದಲೇ ಹೇಳಿಕೊಟ್ಟ ಉತ್ತರವೆಂಬುದು ಕಾಣೆಯಾಗುವುದೆಂದೂ ಅವರು ಸೂಚಿಸಿ, ಈ ಕೆಟ್ಟ ಪದ್ಧತಿಯನ್ನು ಮೂಲೋತ್ಪಾಟನೆ ಮಾಡಲು ಸರ್ಕಾರವು ಪ್ರಯತ್ನಿಸುತ್ತಿರುವುದಾಗಿ ತಿಳಿಸಿರುವರು.

ಮಹಾರಾಜರ ವರ್ಧಂತಿ

ನಗರದ ವಿದ್ಯಾರಣ್ಯ ಪುರದಲ್ಲಿರುವ ಶ್ರೀ ಶಾರದಾ ಮಹಿಳಾ ಸಮಾಜದ ಶಿಶುವಿಹಾರದಲ್ಲಿ ಕಳೆದ ಗುರುವಾರ ಶ್ರೀಮನ್ಮಹಾರಾಜರ ವರ್ಧಂತಿ ಉತ್ಸವವು ನಡೆಯಿತು. ಮಹಾರಾಜರ ಶ್ರೇಯಃ ಪ್ರಾರ್ಥನೆ, ಮಕ್ಕಳಿಂದ ಆಟಪಾಟ, ಬಹುಮಾನ ಮತ್ತು ಸಿಹಿತಿಂಡಿ ವಿನಿಯೋಗಗಳು ಆದುವು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದೇವರ ನಾಮ. ೭-೧೫ ಜಿ. ಮುನಿವೆಂಕಟಪ್ಪ-ನಾದಸ್ವರ ೮-೧೫ ಹಿಂದಿ ವಾರ್ತೆ. ಮಧ್ಯಾಹ್ನ ೧೨ ಮತ್ತು ೩ ಇಂದಿರಾ ಶಂಕರ್-ಸಂಗೀತ ೧೨-೩೦ ಗಾಯನ ೧ ರಿಕಾರ್ಡು: ಟಿ ಚೌಡಯ್ಯನವರ ಪಿಟೀಲು ೧-೨೦ ಗಾನ ಮಂಜರಿ ೧-೫೦ ಸಂಗೀತ ೩-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ಗೀತಾವಳಿ. ೭-೩೦ ಉರ್ದು ಗೀತೆ. ೮ ಜಿ ಮುನಿವೆಂಕಟಪ್ಪ-ನಾದಸ್ವರ. ೮-೩೦ ರಾಷ್ಟ್ರೀಯ ಕಾರ್ಯಕ್ರಮದ ಬಗ್ಗೆ ಭಾಷಣ: ದೆಹಲಿ ರಿಲೆ ೮-೫೦ ವಚನ ಗಾನ ೯-೧೫ ನಾಟಕ ೯-೩೦ ದೆಹಲಿ ವಾರ್ತೆ

ಜಿಲ್ಲೆಯಲ್ಲಿ ಗ್ರಾಮದಾನ ಚಳುವಳಿ

ಸ್ವಯಂಸೇವಕರಿಗಾಗಿ ಮನವಿ

ಮೈಸೂರು ೨೨

ಆಚಾರ್ಯ ವಿನೋಬಾ ಭಾವೆಯವರು ಇದೇ ಸೆಪ್ಟೆಂಬರಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಪಾದಯಾತ್ರೆ ಕೈಗೊಳ್ಳುವಾಗ, ಅಖಿಲ ಭಾರತ ಸರ್ವ ಪಕ್ಷಗಳ ಪ್ರಮುಖರ ಸಮ್ಮೇಳನವೂ ಮತ್ತು ಅಖಿಲ ಭೂದಾನ ಕಾರ್ಯಕರ್ತರ ಶಿಬಿರವೂ ಜಿಲ್ಲೆಯಲ್ಲಿ ನಡೆಯಲಿವೆ. ಇಡೀ ಸಂಸ್ಥಾನಕ್ಕೆ ಗೌರವ ತರುವ ಇಂತಹ ಅಪೂರ್ವ ಸನ್ನಿವೇಶಕ್ಕೆ ತಕ್ಕ ವಾತಾವರಣವನ್ನು ಜಿಲ್ಲೆಯಲ್ಲಿ ಕಲ್ಪಿಸುವುದು ಎಲ್ಲರ ಕರ್ತವ್ಯವಾಗಿದೆ. ವಿನೋಬಾರವರಿಗೆ ಬೇಕಾದುದು ವೈಭವದ ಸ್ವಾಗತವಲ್ಲ; ಗ್ರಾಮದಾನದ ಕ್ರಿಯಾತ್ಮಕ ಸ್ವಾಗತ. ಸರ್ವ ಪಕ್ಷ ಸಮ್ಮೇಳನಕ್ಕೂ ಮತ್ತು ಕಾರ್ಯಕರ್ತರ ಶಿಬಿರಕ್ಕೂ ಮೈಸೂರು ಜಿಲ್ಲೆಯ ಅನೇಕ ಗ್ರಾಮಗಳು ದಾನವಾಗಿ ಬರಬೇಕು. ಇದಕ್ಕಾಗಿ ಹುಣಸೂರು, ಪಿರಿಯಾಪಟ್ಟಣ ಮುಂತಾದ ತಾಲ್ಲೂಕುಗಳಲ್ಲಿ ಗ್ರಾಮದಾನ ಕಾರ್ಯಕ್ರಮವನ್ನು ಬರುವ ೧ನೇ ತಾರೀಖಿನಿಂದ ಏರ್ಪಡಿಸಲಾಗಿದೆ.

ಅದನ್ನು ಯಶಸ್ವಿಗೊಳಿಸಲು ಬಹು ಸಂಖ್ಯೆಯ ಸ್ವಯಂಸೇವಕರ ಸೇವೆಯು ಅಗತ್ಯವಾಗಿದೆ. ರೈತರು, ಕಾರ್ಮಿಕರು, ರಚನಾತ್ಮಕ ಕಾರ್ಯಕರ್ತರು ವಿದ್ಯಾರ್ಥಿಗಳು ವಿವಿಧ ರಾಜಕೀಯ ಪಕ್ಷಗಳವರು, ಮಹಿಳೆಯರು ಮುಂತಾಗಿ ಎಲ್ಲರೂ ಏಕೀಭವಿಸಿ ಗ್ರಾಮದಾನ ಕಾರ್ಯವನ್ನು ನೆರವೇರಿಸಬೇಕಾಗಿದೆ. ಅದರಲ್ಲಿ ಅಭಿಮಾನವುಳ್ಳವರೆಲ್ಲರೂ ಜಿಲ್ಲೆಯ ಹಳ್ಳಿಹಳ್ಳಿಗೂ, ಮನೆಮನೆಗೂ ಗ್ರಾಮದಾನದ ಸಂದೇಶ ಬೀರಲು ಸಮೂಹ ಪಾದಯಾತ್ರೆ ಮಾಡುವುದಕ್ಕಾಗಿ ಮುಂದೆ ಬರಬೇಕಾಗಿದೆ.

ಸ್ವಯಂಸೇವಕರಾಗಿ ಭಾಗವಹಿಸಲು ಅಪೇಕ್ಷಿಸುವವರೆಲ್ಲರೂ ಶ್ರೀ ಎಸ್ ಪಿ ಮಂಜುನಾಥನ್, ಜಿಲ್ಲಾ ಭೂದಾನ ಸೇವಕ, ೨೭೫ ದಿವಾನ್ಸ್ ರಸ್ತೆ, ಮೈಸೂರು-೪ ವಿಳಾಸಕ್ಕೆ ಪತ್ರ ಬರೆದು ತಮ್ಮ ಹೆಸರು, ವಿಳಾಸ ಮತ್ತು ಸೇವಾ ಕಾಲದ ಪ್ರಮಾಣ ಇವುಗಳನ್ನು ಸೂಚಿಸಬೇಕೆಂದು ಕೋರಲಾಗಿದೆ.

ಮುಖ್ಯ ಮಂತ್ರಿಯವರಲ್ಲಿ ಪತ್ರಿಕಾ ಕರ್ತರ ನಿಯೋಗ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರನ್ನು ಶ್ರೀಗಳಾದ ಎಂ ಎಸ್ ತಿಮ್ಮಯ್ಯ, ಕೆ. ಎಂ ಆರ್ ವಿ ಶಾಸ್ತ್ರಿ, ಎ ರಾಮಣ್ಣ ಮತ್ತು ಹೆಚ್. ಎಲ್ ಶ್ರೀಕಂಠಮೂರ್ತಿಯವರು ಮೊನ್ನೆ ಭೇಟಿ ಮಾಡಿದರಷ್ಟೆ. ಅವರು ನಗರದ ಪತ್ರಿಕೋದ್ಯಮಿಗಳ ಸಂಘದ ಪರವಾಗಿ ನಿಯೋಗಹೋಗಿದ್ದರು

ರಷ್ಯದ ಮಿಲಿಟರಿ ಶಾಲೆಗಳಿಗೆ ಭಾರತದ ಸೇನಾನಿಯ ಭೇಟಿ

ಭಾರತದ ಸೇನಾನಿ ಜನರಲ್ ಕೆ ಎಸ್. ತಿಮ್ಮಯ್ಯನವರು ಇತರ ಭಾರತೀಯ ಮಿಲಿಟರಿ ಅಧಿಕಾರಿಗಳೊಡನೆ ರಷ್ಯದ ವೊರೋಷಿಲಾವ್ ಮಿಲಿಟರಿ ಶಾಲೆಗೆ ಮೊನ್ನೆ ಭೇಟಿಯಿತ್ತಿದ್ದರು

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	೯೩ ೦೦	೯೫ ೫೦
ರತ್ನಚೂಡಿ	೨೯ ೨೫	೩೩ ೦೩
ಬಂಗಾರಕಿ	೨೮ ೦೦	೨೯ ೧೨
ಕಾರ್ ಸಣ್ಣ	೨೫ ೦೮	೨೬ ೪೬
ರಾಗಿ	೯೨ ೭೫	೯೬ ೦೦
ಜೋಳ	೪೦ ೬೨	
ಕಡಲೇಕಾಯಿ	೧೧ ೬೨	೧೯ ೬೨
ಎಳ್ಳು	೭೭ ೪೬	೭೯ ೨೫
ಹರಳುಬೀಜ	೪೪ ೦೦	೪೮ ೫೦
ಹಿಪ್ಪೆಬೀಜ	೧೯ ೫೦	೨೦ ೦೦
ಹುರುಳಿ	೯೨ ೨೫	೯೩ ೦೨
ಹೆಸರು	೯೮ ೦೦	೫೯ ೦೨
ಉದ್ದು	೫೨ ೧೨	೬೧ ೨೫
ಹಲಸಂದೆ	೪೧ ೦೦	೬೧ ೭೫
ತೊಗರಿ	೪೨ ೭೫	
ಧನಿಯ	೧೯ ೦೦	
ಹುಣಿಸೇಬೀಜ	೦೮ ೭೫	
ಹುಣಿಸೇಹಣ್ಣು	೩ ೦೦	೦೩ ೪೬
ಮೆಣಸಿನಕಾಯಿ	೧೩ ೪೭	೧೯ ೬೭
ತೆಂಗಿನಕಾಯಿ	೧೩೫ ೦೦	೨೩೮ ೦೦

ಸರ್ಕಾರಿ ನೌಕರರಿಗೆ ಕಡ್ಡಾಯ ಹಿಂದಿ ಶಿಕ್ಷಣ ಜಾರಿಗೆ ಒತ್ತಾಯ

ಬೆಂಗಳೂರು ೨೨

ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿಯ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಇಲ್ಲಿ ನಡೆದು, ಬರುವ ತಿಂಗಳು ೧೫ ರಂದು ಸ್ವಾತಂತ್ರ್ಯೋತ್ಸವವನ್ನು ವಿಶೇಷ ರೀತಿಯಲ್ಲಿ ಆಚರಿಸಬೇಕೆಂದು ಸಮಿತಿಯ ಆಶ್ರಯದಲ್ಲಿ ನಡೆಯುತ್ತಿರುವ ಹಿಂದಿ ಶಾಲೆಗಳಿಗೆ ಸೂಚನೆಯಿತ್ತಿತು.

ಕಡ್ಡಾಯದ ಹಿಂದಿ ಪಠ್ಯ ಪುಸ್ತಕಗಳನ್ನು ಒದಗಿಸದಿರುವುದರಿಂದ ಹಿಂದಿನ ವರ್ಷದ ಪುಸ್ತಕಗಳನ್ನು ಮುಂದುವರಿಸುವಂತೆ ಕೋರಲಾಯಿತು. ವಿಶಾಲ ಮೈಸೂರಿನಲ್ಲಿ ಮಾಹೆಯಾನಾ ೧೦ ರೂ ಸಹಾಯ ದ್ರವ್ಯವಿತ್ತು, ೩ ಹೊಸ ತರಗತಿಗಳನ್ನು ತೆರೆಯಲು ನಿರ್ಧರಿಸಲಾಯಿತು.

ಸರ್ಕಾರಿ ನೌಕರರು ಹಿಂದಿ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕೆಂದು ಸೂಚಿಸಿರುವ ಆಜ್ಞೆಯನ್ನು ಜಾರಿಗೆ ತರುವಂತೆ ಮಾಡಲು ಮುಖ್ಯ ಮಂತ್ರಿಗಳ ಬಳಿ ನಿಯೋಗ ಹೋಗಬೇಕೆಂದು ತೀರ್ಮಾನಿಸಲಾಯಿತು. ಮಾಧ್ಯಮಿಕ ಶಾಲೆಗಳಲ್ಲಿರುವ ಹಿಂದಿ ಅಧ್ಯಾಪಕರ ಸಂಬಳ ಜಾರಿಗೆ ಮತ್ತು ಅವರ ನೌಕರಿ ಖಾಯಂ ಮಾಡುವ ವಿಚಾರವಾಗಿ ಮುಖ್ಯ ಮಂತ್ರಿ ಮತ್ತು ವಿದ್ಯಾ ಮಂತ್ರಿಗಳನ್ನು ಭೇಟಿ ಮಾಡಬೇಕೆಂದೂ ನಿರ್ಧರಿಸಲಾಯಿತು.

ಸರ್ಕಾರಕ್ಕೆ ಎಲ್. ಎಂ. ಪಿಗಳ ಮನವಿ

ಹಳೇ ಮೈಸೂರಿನ ಎಲ್ ಎಂ. ಪಿಗಳ ಸಂಬಳದ ದರ್ಜೆಯನ್ನು ಕೂಡಲೇ ಹೆಚ್ಚಿಸಬೇಕೆಂದು ಎಲ್ ಎಂ ಪಿ. ವೈದ್ಯರು ಮತ್ತು ಆರೋಗ್ಯ ಅಧಿಕಾರಿಗಳ ಸಂಘದವರು ಸರ್ಕಾರದವರನ್ನು ಕೋರಿರುತ್ತಾರೆ. ಇತ್ತೀಚೆಗೆ ಹೆಚ್ಚಿಸಲಾದ ಅವರುಗಳ ಸಂಬಳದ ಪ್ರಮಾಣವು ಅವರ ಸ್ಥಿತಿಯನ್ನು ಉತ್ತಮಪಡಿಸಿಲ್ಲವೆಂದೂ, ಸಂಸ್ಥಾನದ ಮದ್ರಾಸ್, ಬೊಂಬಾಯಿ ಮತ್ತು ಹೈದರಾಬಾದು ಕನ್ನಡ ಪ್ರದೇಶಗಳಲ್ಲಿ ಹಳೇ ಮೈಸೂರಿನಲ್ಲಿರುವುದರ ಎರಡರಷ್ಟು ಸಂಬಳ ಕೊಡಲಾಗುತ್ತಿರುವುದೆಂದು ಅರಿಕೆ ಮಾಡಲಾಗಿದೆ

ರೂಪಾಯಿಗೆ ಈಗ ೯ನೇ ಇಸವಿಯ ೩ ಆಣೆ ಬೆಲೆ

ಅವಶ್ಯಕ ವಸ್ತುಗಳು, ಮನೆ ಬಾಡಿಗೆ ಮುಂತಾದುವುಗಳಿಗೆ ಕಲ್ಕತ್ತದಲ್ಲಿ ಈಗ ಆಗುವ ಬೆಲೆಯು ೧೯೩೯ರಲ್ಲಿ ದ್ವಿತೀಯ ಯುದ್ಧವಾಗುವ ಮುಂಚೆ ಇದ್ದ ೩ ಆಣೆ ಬೆಲೆಗೆ ಸರಿಸಮವಾಗಿರುವುದೆಂದು ಕಲ್ಕತ್ತಾ ಪತ್ರಿಕೆಯೊಂದು ದಾಖಲೆ ಪೂರ್ವಕ ವರದಿಯೊಂದನ್ನು ಪ್ರಕಟಿಸಿದೆ. ಈಗ ೫೦೦ ರೂ ವರಮಾನ ಬರುವವನು ೧೮ ವರ್ಷಗಳ ಹಿಂದೆ ೭೦ ರೂ ಬರುವವನ ಕೊಳ್ಳುವ ಶಕ್ತಿಯನ್ನು ಪಡೆದಿರುವುದಾಗಿ ಪತ್ರಿಕೆಯು ಸೂಚಿಸಿದೆ. ಜೀವನದ ೪೧ ವಸ್ತುಗಳ ಬೆಲೆಗಳ ಹಿಂದಿನ ಮತ್ತು ಇಂದಿನ ಪ್ರಮಾಣಗಳನ್ನು ಅದರಲ್ಲಿ ಕೊಟ್ಟಿದೆ.

ಬಿಹಾರ್ ಗಾಜು ಕಾರ್ಖಾನೆಯಲ್ಲಿ ಕಾರ್ಯಾರಂಭ

ಮಟ್ಟಸಾದ ಗಾಜುಗಳ ತಯಾರಿಕೆಯಲ್ಲಿ ಇಡೀ ದೇಶದಲ್ಲೇ ಅತ್ಯಂತ ದೊಡ್ಡದಾದ ಬಿಹಾರಿನ ಕಾರ್ಖಾನೆಯಲ್ಲಿ ಕೆಲಸವು ಆರಂಭವಾಗಿದೆ. ಅಲ್ಲಿನ ಭುರ್ಕುಂಡ ಎಂಬ ಹಳ್ಳಿಯಲ್ಲಿ ಜಪಾನು ಮತ್ತು ಭಾರತಗಳ ಜಂಟಿ ಪ್ರಯತ್ನದಿಂದ ಕಾರ್ಖಾನೆಯನ್ನು ಏರ್ಪಡಿಸಲಾಗಿದೆ. ಅಲ್ಲಿ ೩೦ ಮಂದಿ ಜಪಾನೀ ಪ್ರವೀಣರು ಕೆಲಸ ಮಾಡುತ್ತಿರುವರು ಭಾರತದಲ್ಲಿ ಗಾಜುಗಳ ಅವಶ್ಯಕತೆಯನ್ನು ಈ ಕಾರ್ಖಾನೆಯು ಪೂರೈಸಲು ಸಾಧ್ಯವೆಂದು ಹೇಳಲಾಗಿದೆ

SREE GAYATHRI
TALKIES
From 23-7-57 : For 2 days
Warner's Cinemascope and Technicolor
ONE MAN MUTINY
With:- Gary Cooper and Elizabeth Montgomery

ಆಹಾರ ಧಾನ್ಯದ ಹತೋಟಿಗೆ ಗಾಡ್ಗೀಳರ ಸಲಹೆ

ದೇಶದಲ್ಲಿ ಆಹಾರ ಧಾನ್ಯಗಳ ವ್ಯಾಪಾರ ಮತ್ತು ಹಂಚಿಕೆಗಳನ್ನು ಸರ್ಕಾರದವರು ತಾವೇ ತೆಗೆದುಕೊಳ್ಳುವ ಕಾಲವು ಬಂದಿರುವುದೆಂದು ಕೇಂದ್ರದ ಮಾಜಿ ಮಂತ್ರಿ ಎನ್. ವಿ. ಗಾಡ್ಗೀಳರವರು ತಿಳಿಸಿರುತ್ತಾರೆ. ಕಳೆದ ವರ್ಷ ಮುಂಚೆಯೇ ಬೆಲೆ ಹತೋಟಿ ಕ್ರಮವನ್ನು ತೆಗೆದುಕೊಂಡಿದ್ದರೆ ಈಗ ಉಂಟಾಗಿರುವ ಆರ್ಥಿಕ ಅಶಾಂತಿಯನ್ನು ತಪ್ಪಿಸಬಹುದಾಗಿತ್ತೆಂದು ಅವರು ತಿಳಿಸಿರುವರು.

ಆಫ್ರಿಕದಲ್ಲಿ ಭಾರತದ ವ್ಯಾಪಾರಿಗಳ ಬಹಿಷ್ಕಾರಕ್ಕೆ ಕರೆ

ದಕ್ಷಿಣ ಆಫ್ರಿಕದಲ್ಲಿ ಆತಂಕ ಹಡೆಸುತ್ತಿರುವ ರಾಷ್ಟ್ರೀಯ ಪಕ್ಷದ ಅಂಗ ಸಂಸ್ಥೆಯಾದ ಟ್ರಾನ್ಸ್‌ವಾಲ್ ಯುವಕರ ರಂಗವು ನಿರ್ಣಯವೊಂದನ್ನು ಅಂಗೀಕರಿಸಿ ಆಫ್ರಿಕದ ಜನರು ಭಾರತದ ವ್ಯಾಪಾರಿಗಳಿಗೆ ಬಹಿಷ್ಕಾರ ಹಾಕಬೇಕೆಂದು ಸೂಚಿಸಿರುತ್ತಾರೆ. ಭಾರತದ ವ್ಯಾಪಾರಿಗಳು ಆಫ್ರಿಕನರಿಗೆ ಭಾರಿ ವಿಪತ್ಕಾರಕರೆಂದು ರಂಗವು ಸೂಚಿಸಿದೆ. ರಂಗದ ವ್ಯವಸ್ಥಾಪಕನೊಬ್ಬನ ಭಾಷಣ ಮಾಡಿ, ದಕ್ಷಿಣ ಆಫ್ರಿಕದಲ್ಲಿ ಭಾರತೀಯನು ವಾಸಿಸಲು ಹಕ್ಕೇ ಇರುವುದಿಲ್ಲವೆಂದು ತಿಳಿಸಿರುತ್ತಾನೆ.

ಹಲವು ಪ್ರಾಂತಗಳಲ್ಲಿ ಹಿಂದಿ ಶಿಕ್ಷಣ ಶಾಲೆಗಳಿಗೆ ವ್ಯವಸ್ಥೆ

ಹಿಂದಿ ಬಳಸದಿರುವ ಪ್ರತಿ ಸಂಸ್ಥಾನದಲ್ಲೂ ಒಂದೊಂದು ಹಿಂದಿ ಉಪಾಧ್ಯಾಯರ ತರಬೇತು ಕಾಲೇಜನ್ನು ಕೇಂದ್ರ ಸರ್ಕಾರದ ವೆಚ್ಚದಿಂದ ಸ್ಥಾಪಿಸುವ ಬಗ್ಗೆ ಭಾರತ ಸರ್ಕಾರದ ಹಿಂದಿ ಶಿಕ್ಷಣ ಸಮಿತಿಯವರು ಮಾದರಿ ಯೋಜನೆಯೊಂದನ್ನು ಮಂಜೂರು ಮಾಡಿರುತ್ತಾರೆ. ನಾನಾ ಹಿಂದಿ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪರೀಕ್ಷೆಗಳಿಗೆ ಅವು ಮನ್ನಣೆಯನ್ನು ಪಡೆಯಬೇಕಾಗಿರುವುದೆಂದು ಹೇಳಲಾಗಿದೆ.

ಭಾರತೀಯರ ಮೇಲೆ ಕರಾಚಿಯಲ್ಲಿ ರಹದಾರಿ ನಿರ್ಬಂಧ

ಕರಾಚಿಯಲ್ಲಿರುವ ಭಾರತೀಯರು ಬರುವ ತಿಂಗಳು ೨೦ರೊಳಗಾಗಿ ಅಲ್ಲಿ ವಾಸಿಸುವ ಬಗ್ಗೆ ರಹದಾರಿಗಳನ್ನು ಪಡೆಯಬೇಕೆಂದು ಕರಾಚಿ ಚೀಫ್ ಕಮಿಷನರು ಆಜ್ಞೆ ಮಾಡಿರುತ್ತಾರೆ. ರಹದಾರಿ ಪಡೆಯದವರ ಮೇಲೆ ಮೊಕದ್ದಮೆ ಹೂಡಲಾಗುವುದು.

ವಿಧಾನ ಸಭಾಧ್ಯಕ್ಷರ ಭತ್ಯದಲ್ಲಿ ಉಳಿತಾಯ

ಸಂಸ್ಥಾನದ ವಿಧಾನ ಸಭಾಧ್ಯಕ್ಷರಾದ ಶ್ರೀ ಎಸ್. ಆರ್ ಕಂಠಿಯವರು ತಮಗೆ ಬರುವ ೫,೦೦೦ ರೂ. ವಾರ್ಷಿಕ (ಸಂಪ್ಚುಯರಿ) ಒಟ್ಟು ಭತ್ಯದಲ್ಲಿ ೧೦೦೦ ರೂ. ಗಳನ್ನು ಉಳಿತಾಯ ಮಾಡಲು ನಿರ್ಧರಿಸಿರುತ್ತಾರೆ. ಅತಿಥಿಗಳು ಮತ್ತು ವಿಧಾನ ಸಭಾ ಸದಸ್ಯರ ಸತ್ಕಾರಗಳಿಗಾಗಿ ಈ ಭತ್ಯವನ್ನು ಕೊಡಲಾಗುತ್ತದೆ

ಈಗ ತಾನೇ ಬಂದಿವೆ!
ಮಿತ ದಾಸ್ತಾನು

ಮರ್ಫಿ ರೇಡಿಯೊ
ಮಾಡಲ್ 222
5 ವಾಲ್ವುಗಳು : 3 ಬ್ಯಾಂಡುಗಳು
ಬೆಲೆ ರೂ 300
ಆಬಿಡ್ಸ್
ಸ್ಟ್ಯಾಚ್ಯು ಚೌಕ, ಮೈಸೂರು

Edited, Printed and Published by A. R. Nagarajan at Sadhv Press, D.Subhiah Road Mysor

ರಿಜಿಸ್ಟ್ರೇ ನಂ 792

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಗ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೧೫] SADHVI : WEDNESDAY 24—7—1957 ಮೈಸೂರು : ಬುಧವಾರ ೨೪—೭—೧೯೫೭ : [ಸಂಚಿಕೆ : ೩೪೬

– ನಗರದ ಪೌರಸಭೆಯ ನೌಕರರಿಗೆ ಹೆಚ್ಚಿನ ವೇತನ –

ನಗರದ ಪೌರಸಭಾ ನೌಕರರಿಗೆ ಹೆಚ್ಚಿನ ವೇತನ

ಸರ್ಕಾರಿ ಪಟ್ಟಿಯ ಪ್ರಕಾರ ಕೊಡಲಾಗುವುದು

ಮೈಸೂರು ೨೩

ಸರ್ಕಾರದವರು ಹಳೇ ಮೈಸೂರು ನೌಕರರಿಗೆ ಇತ್ತೀಚೆಗೆ ಕೊಟ್ಟಂತೆ ನಗರದ ಪೌರಸಭೆಯ ನಾನ್ ಗೆಜೆಟೆಡ್ ನೌಕರರಿಗೆ ಸಂಬಳ ಮತ್ತು ಭತ್ಯವನ್ನು ಕೊಡುವ ಬಗ್ಗೆ ತಾತ್ಕಾಲಿಕವಾದ ಅಭಿಪ್ರಾಯಕ್ಕೆ ಬರಲಾಗಿದೆಯೆಂದು ಗೊತ್ತಾಗಿದೆ. ಈ ಬಗ್ಗೆ ಶೀಘ್ರದಲ್ಲೇ ಅಧ್ಯಕ್ಷರು ನಿರ್ಧಾರ ಮಾಡಲಿದ್ದಾರೆ. ಇದರಿಂದ ಸುಮಾರು ೫೦೦ ಮಂದಿ ನೌಕರರಿಗೆ ಅನುಕೂಲವಾಗುವುದೆಂದು ಹೇಳಲಾಗಿದೆ. ಪೌರಸಭೆಗೆ ಸುಮಾರು ೩,೨೦,೦೦೦ ರೂ.ಗಳು ಹೆಚ್ಚಾಗಿ ವೆಚ್ಚವಾಗುವುದೆಂದು ಅಂದಾಜಾಗಿದೆ

ಖಾಸಗಿ ಔದ್ಯೋಗಿಕ ಶಾಲೆಗಳಿಗೆ ಪ್ರವೇಶ ನಿಯಮ

ಸರ್ಕಾರಿ ಕಾಲೇಜುಗಳ ನಿಬಂಧನೆ ತರಲು ಸರ್ಕಾರದ ಪರಿಶೀಲನೆ

ಬೆಂಗಳೂರು ೨೪

ವಿಧಾನ ಸಭೆಯಲ್ಲಿ ನೆನ್ನೆ ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಮಾತನಾಡಿ, ಖಾಸಗಿ ಔದ್ಯೋಗಿಕ ಕಾಲೇಜುಗಳಿಗೆ ಪ್ರವೇಶಗಳ ಬಗ್ಗೆ ಸರ್ಕಾರಿ ಕಾಲೇಜುಗಳ ನಿಯಮವನ್ನು ಜಾರಿಗೆ ತರಲು ಆಲೋಚಿಸಲಾಗಿರುವುದೆಂದೂ, ಈ ಬಗ್ಗೆ ಬೇಗನೆ ನಿರ್ಧಾರ ಮಾಡಲಾಗುವುದೆಂದೂ ಸೂಚಿಸಿದರು.

ಖಾಸಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಕೊಡಲು ಮಾತಾಪಿತೃಗಳಿಂದ ಚಂದಾ ತೆಗೆದುಕೊಳ್ಳುವ ಪದ್ಧತಿಯನ್ನು ಹಲವು ಸಂಸ್ಥೆಗಳವರು ನಿಲ್ಲಿಸಿರುವರೆಂದೂ, ಸ್ಥಾನಗಳಿಗಾಗಿ ಕಾಳ ಸಂತೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದೂ ಅವರು ಹೇಳಿದರು ಹಲವು ಸಂಸ್ಥೆಗಳು ತಮ್ಮ ಕಟ್ಟಡಗಳ ನಿಧಿಗಾಗಿ ಚಂದಾ ತೆಗೆದುಕೊಂಡುದೆಂದು ಸಚಿವರು ಹೇಳಿದರು

ಖಾಸಗಿ ಕಾಲೇಜುಗಳಿಗೆ ಸರ್ಕಾರಿ ಕಾಲೇಜುಗಳ ಪ್ರವೇಶ ನಿಯಮದ ಜಾರಿ ಬಗ್ಗೆ ಒಂದು ಸಂಸ್ಥೆಯವರು ಮಾತ್ರ ಒಪ್ಪಿಲ್ಲವೆಂದೂ, ಈ ಬಗ್ಗೆ ಬೇಗನೆ ಒಡಂಬಡಿಕೆಗೆ ಬರಲಾಗುವುದೆಂದೂ ಅವರು ಸೂಚಿಸಿದರು.

ನಾಟಕ ನೃತ್ಯ ಸಂಗೀತ ಸ್ಪರ್ಧೆ ಬಹುಮಾನ ವಿನಿಯೋಗ

ಮೈಸೂರು ಚಿತ್ರಕಲಾ ಸಂಸ್ಥೆಯ ವಿಶಾಲ ಮೈಸೂರು ನಾಟಕ ನೃತ್ಯ ಮತ್ತು ಸಂಗೀತ ಸ್ಪರ್ಧೆಯ ಬಹುಮಾನ ವಿನಿಯೋಗ ಸಮಾರಂಭವು ಈ ರಾತ್ರಿ ೮॥ ಗಂಟೆಗೆ ವಿಧಾನ ಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು. ನಾಟ್ಯಕಲಾ ವಿಶಾರದ ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಭಾಷಣ ಮಾಡುವರು.

ಪಾಕಿಸ್ತಾನದ ಶೀತ ಯುದ್ಧದ ನಡವಳಿಕೆ ಬಗ್ಗೆ ನೆಹರೂ ಖಂಡನೆ

ಮಿಲಿಟರಿ ಕೂಟಗಳಿಂದ ಪಾಕಿಸ್ತಾನ ತಪ್ಪುಹಾದಿ ಹಿಡಿಯಲು ಪ್ರೋತ್ಸಾಹ

ಪ್ರಧಾನಿ ನೆಹರೂರವರು ನೆನ್ನೆ ಲೋಕ ಸಭೆಯಲ್ಲಿ ವಿದೇಶಾಂಗ ನೀತಿ ಚರ್ಚೆಯನ್ನು ಆರಂಭಿಸಿ, ಪಾಕಿಸ್ತಾನದ ಶೀತ ಯುದ್ಧದ ನಡವಳಿಕೆ ಮತ್ತು ಮಿಲಿಟರಿ ಕೂಟಗಳ ಸದಸ್ಯತ್ವಗಳು ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇರುವ ಅನೇಕ ಸಮಸ್ಯೆಗಳು ಇತ್ಯರ್ಥವಾಗುವುದಕ್ಕೆ ಅಡ್ಡಿಯಾಗಿರುವುವೆಂದು ತಿಳಿಸಿದರು ಮಿಲಿಟರಿ ಕೂಟಗಳಲ್ಲಿ ಪಾಕಿಸ್ತಾನದ ಸದಸ್ಯತ್ವದಿಂದ ತಪ್ಪುದಾರಿ ಹಿಡಿಯಲು ಅದಕ್ಕೆ ಪ್ರೋತ್ಸಾಹ ಕೊಡಲಾಗುತ್ತಿರುವುದೆಂದೂ ಅವರು ನುಡಿದರು

ಅಮೇರಿಕದಲ್ಲಿ ಪ್ರವಾಸ ಮಾಡುತ್ತಿರುವ ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ಮಾಡುತ್ತಿರುವ ಭಾಷಣಗಳಿಗಾಗಿ ನೆಹರೂರವರು ವಿಷಾದಪಟ್ಟರು ಭಾರತೀಯರು ಪಾಕಿಸ್ತಾನಕ್ಕೆ ನೀರನ್ನು ಕೊಡದೆ ಅಲ್ಲಿನವರನ್ನು ದಿಕ್ಕುಗೆಡಿಸಿ ಮಾಡಿ ಪಾಕಿಸ್ತಾನವನ್ನು ಮರುಭೂಮಿಯಾಗಿ ಪರಿವರ್ತಿಸುವರೆಂದು ಅವರು ಹೇಳುವುದು ಸತ್ಯಕ್ಕೆ ಬಹಳ ದೂರವಾದ ಮಾತೆಂದು ನೆಹರೂರವರು ಹೇಳಿದರು

ಮಿಲಿಟರಿ ಕೂಟಗಳು ಏರ್ಪಡದಿದ್ದಲ್ಲಿ ಏಷ್ಯದ ಪರಿಸ್ಥಿತಿಯು ಇಷ್ಟೊಂದು ಕೆಡುತ್ತಿರಲಿಲ್ಲವೆಂದೂ, ಪಶ್ಚಿಮ ಏಷ್ಯದಲ್ಲಿ ಬಿಕ್ಕಟ್ಟು ಇರುವುದಲ್ಲದೆ, ಈಗ ಶೀತ ಯುದ್ಧವನ್ನು ಭಾರತದ ಗಡಿಗೂ ತಂದುಬಿಡಲಾಗಿರುವುದೆಂದೂ ಅವರು ಸೂಚಿಸಿದರು.

ಅಕ್ಕಿ ದಾಸ್ತಾನು ವಶಪಡಿಸಿಕೊಳ್ಳಲು ಸರ್ಕಾರದ ನಿಶ್ಚಯ

ಅವಶ್ಯಕ ಸಾಮಗ್ರಿಗಳ ತಿದ್ದುಪಡಿ ಶಾಸನದ ಪ್ರಕಾರ ಭಾರತ ಸರ್ಕಾರದವರು ಅಕ್ಕಿಯ ದಾಸ್ತಾನುಗಳನ್ನು ವಶಪಡಿಸಿಕೊಂಡು, ದಾಸ್ತಾನು ಹೊರಗೆ ತರದಿರುವುದರಿಂದ ಉಂಟಾಗಿರುವ ದುಸ್ಥಿತಿಯನ್ನು ಹೋಗಲಾಡಿಸಲು ಆಲೋಚಿಸುವರೆಂದು ಕೇಂದ್ರದ ಆಹಾರ ಉಪ ಮಂತ್ರಿ ಎ. ಎಂ. ಥಾಮಸ್‌ರವರು ತಿಳಿಸಿರುತ್ತಾರೆ. ಆಂಧ್ರದಲ್ಲಿ ಅಕ್ಕಿ ದಾಸ್ತಾನನ್ನು ಹೊರಗೆ ತೆಗೆಸುವ ಬಗ್ಗೆ ಅವರು ಅಲ್ಲಿನ ಸಚಿವರುಗಳನ್ನೂ, ದಾಸ್ತಾನುಗಾರರನ್ನೂ ಭೇಟಿ ಮಾಡಿದ್ದರು ಅಕ್ಕಿಯನ್ನು ಹೊರಗೆ ತರುವಂತೆ ಮಾಡಲು ಸರ್ಕಾರದವರು ದೃಢ ನಿಶ್ಚಯ ಹೊಂದಿರುವುದಾಗಿ ಗೊತ್ತಾಗಿದೆ.

ಮೈಸೂರು ಇನಾಂ ರದ್ದಿಯಾತಿ ಕಮೀಷನರಾಗಿ ಸೈಯದ್ ಅಬ್ದುಲ್ ಘನಿ

ಚಿತ್ರದುರ್ಗ ಜಿಲ್ಲಾಧಿಕಾರಿಗಳಾದ ಸೈಯದ್ ಅಬ್ದುಲ್ ಘನಿಯವರನ್ನು ಮೈಸೂರು ಜಿಲ್ಲಾ ಇನಾಂ ರದ್ದಿಯಾತಿ ವಿಶೇಷ ಜಿಲ್ಲಾಧಿಕಾರಿಗಳಾಗಿಯೂ, ಆ ಸ್ಥಾನದಲ್ಲಿರುವ ಶ್ರೀ ಕೆ. ಗೋಪಾಲರಾಜೆ ಅರಸರನ್ನು ಲ್ಯಾಂಡ್ ರೆಕಾರ್ಡ್ಸ್ ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲಾಗಿದೆ.

ದ್ವಿತೀಯ ಯೋಜನೆ ಅವಧಿಯಲ್ಲಿ ೪,೦೦೦ ಮೂಲ ಶಿಕ್ಷಣ ಶಾಲೆ

೧೦,೦೦೦ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ತರಪೇತು

ಬೆಂಗಳೂರು ೨೪

ವಿಧಾನ ಸಭೆಯಲ್ಲಿ ನೆನ್ನೆ ವಿದ್ಯಾ ಮಂತ್ರಿ ಶ್ರೀ ವಿ. ವೆಂಕಟಪ್ಪನವರು ಮಾತನಾಡಿ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಾಗಿ ಮಹಿಳೆಯರನ್ನೇ ಮುಖ್ಯವಾಗಿ ನೇಮಿಸಬೇಕೆಂದು ಸಭಾ ಸದಸ್ಯರೊಬ್ಬರು ಮಾಡಿರುವ ಸಲಹೆಯನ್ನು ಸ್ವಾಗತಿಸಿದರು ದ್ವಿತೀಯ ಯೋಜನೆ ಅವಧಿಯಲ್ಲಿ ೧೦,೦೦೦ ಅಧ್ಯಾಪಕರುಗಳಿಗೆ ತರಪೇತು ಕೊಡಲು ಯೋಜನೆಯೊಂದು ಇರುವುದೆಂದು ಅವರು ತಿಳಿಸಿದರು

ಎಲ್ಲಾ ಜಿಲ್ಲೆಗಳಲ್ಲೂ ಪಾಲಿಟೆಕ್ನಿಕ ಶಿಕ್ಷಣ ಶಾಲೆಗಳನ್ನು ತೆರೆಯಲು ಸರ್ಕಾರದವರು ಪ್ರಯತ್ನಿಸುತ್ತಿರುವುದಾಗಿ ಅವರು ಸೂಚಿಸಿದರು ಮೈಸೂರು ನಗರದ ಮಹಿಳೆಯರ ಕಾಲೇಜಿಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಲು ಅವರು ವಾಗ್ದಾನ ಮಾಡಿದರು

ದ್ವಿತೀಯ ಯೋಜನೆಯಲ್ಲಿ ೪,೦೦೦ ಮೂಲ ಶಿಕ್ಷಣ ಶಾಲೆಗಳನ್ನು ತೆರೆಯಲು ನಿರ್ಧರಿಸಲಾಗಿದೆಯೆಂದೂ, ಅನೇಕ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲಾಗುವುದೆಂದೂ ಅವರು ಹೇಳಿದರು.

ಸಾಮಾನ್ಯವಾಗಿ ೫೦ ವರ್ಷಗಳಲ್ಲಿ ನಡೆಸಬೇಕಾದ ವಿದ್ಯಾಭ್ಯಾಸ ಪ್ರಗತಿಯನ್ನು ಸಂಸ್ಥಾನದಲ್ಲಿ ಈ ಹತ್ತು ವರ್ಷಗಳಲ್ಲಿ ಸಾಧಿಸಲಾಗುತ್ತಿದೆಂದು ಅವರು ನುಡಿದರು

ಪಿ. ವರದರಾಜುಲು ನಾಯ್ಡು ರವರ ನಿಧನ

ಮದ್ರಾಸು ಶಾಸನ ಸಭೆಯ ಮಾಜಿ ಸದಸ್ಯ ಡಾ॥ ಪಿ. ವರದರಾಜುಲು ನಾಯ್ಡುರವರು ಮೊನ್ನೆ ರಾತ್ರಿ ಮದ್ರಾಸಿನಲ್ಲಿ ಮೃತಪಟ್ಟರು. ಅವರ ಗೌರವಾರ್ಥವಾಗಿ ಅಲ್ಲಿನ ಶಾಸನ ಸಭೆಯನ್ನು ಅರ್ಧ ಗಂಟೆ ಕಾಲ ಮುಂದುವರಿಸಲಾಯಿತು. ಅವರು ಮೊದಲು ಕಾಂಗ್ರೆಸ್ಸಿನಲ್ಲಿದ್ದು, ನಂತರ ಭಾರತದ ಹಿಂದೂ ಮಹಾ ಸಭೆಗೆ ಸೇರಿ, ಅದರ ಉಪಾಧ್ಯಕ್ಷರಾಗಿದ್ದರು. ಪುನಃ ೧೯೫ ರಲ್ಲಿ ಕಾಂಗ್ರೆಸ್ಸಿಗೆ ಹಿಂತಿರುಗಿದ್ದರು.

ಪುಸ್ತಕ ಭಂಡಾರದ ಉಪಯೋಗದ ಬಗ್ಗೆ ಉಪನ್ಯಾಸ ಮತ್ತು ಚಿತ್ರಪ್ರದರ್ಶನ

ಅಮೇರಿಕದ ಪುಸ್ತಕ ಭಂಡಾರದ ಅಧಿಕಾರಿ ಮಿ॥ ಜಾರ್ಜ್ ಥೆಕರಾರವರು ನಾಳೆ ಸಂಜೆ ೬ ಗಂಟೆಗೆ ಇಲ್ಲಿನ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ "ಪುಸ್ತಕ ಭಂಡಾರದ ಸೇವೆ" ಎಂಬ ವಿಚಾರವಾಗಿ ಉಪನ್ಯಾಸ ಮಾಡುವರು. ಚಲನ ಚಿತ್ರ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ. ಸರ್ವರಿಗೂ ಆಹ್ವಾನವೆಂಟು

ಸಟ್ಟಾ ಜೂಜಾಟಕ್ಕಾಗಿ ೨೫ ರೂ. ದಂಡ

ಮಂಡಿ ಮೊಹಲ್ಲೆ ೨ ಕಾಂಸರಾಜಾ ಪಾರ್ಕಿನಲ್ಲಿ ಸಟ್ಟಾ ಜೂಜು ಆಡುತ್ತಿದ್ದುದಕ್ಕಾಗಿ ಮುನಿಸಿಪಲ್ ಮತ್ತಿತರ ೪ ಮಂದಿಗೆ ಮೊನ್ನೆ ನಗರದ ದ್ವಿತೀಯ ನ್ಯಾಯಾಧೀಶರು ತಲಾ ೨೫ ರೂ ಜುಲ್ಮಾನೆ ವಿಧಿಸಿದರು.

ನಾಳೆ ಮೈಸೂರಿನಲ್ಲಿ ನೂತನ ಚೀಫ್ ಜಸ್ಟಿಸರಿಂದ ಪ್ರಮಾಣ

ಸ್ವಂ. ಸು. ಸಂಸ್ಥೆ] ಬೆಂಗಳೂರು ೨೪

ಸಂಸ್ಥಾನದ ನೂತನ ಶ್ರೇಷ್ಠ ನ್ಯಾಯಾಧೀಶರಾಗಿ ನೇಮಿತರಾಗಿರುವ ಶ್ರೀ ಎಸ್. ಆರ್ ದಾಸ್ ಗುಪ್ತರವರು ಕಲ್ಕತ್ತದಿಂದ ನೆನ್ನೆ ಮದರಾಸಿನ ಮಾರ್ಗವಾಗಿ ರೈಲಿನಲ್ಲಿ ಇಲ್ಲಿಗೆ ಆಗಮಿಸಿದರು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ದಿನ ಬೆಳಿಗ್ಗೆ ಅವರನ್ನು ಭೇಟಿ ಮಾಡಿದ್ದರು. ದಾಸಗುಪ್ತರವರು ಹೈಕೋರ್ಟ್ ರಿಜಿಸ್ಟ್ರಾರರೊಡನೆ ಈ ಮಧ್ಯಾಹ್ನ ಮೈಸೂರಿಗೆ ತೆರಳಿ ನಾಳೆ ಬೆಳಿಗ್ಗೆ ಗವರ್ನರರ ಮುಂದೆ ಪ್ರಮಾಣ ವಚನ ಸ್ವೀಕರಿಸುವರು ಅನಂತರ ಅವರು ಇಲ್ಲಿಗೆ ಹಿಂತಿರುಗಿ ತಮ್ಮ ನೂತನ ಹುದ್ದೆಯ ಅಧಿಕಾರ ಸ್ವೀಕರಿಸುವರು. ಅಡ್ವೊಕೇಟ್ ಜನರಲ್ಲರು ಅವರಿಗೆ ವಕೀಲರ ಪರವಾಗಿ ಸ್ವಾಗತ ನೀಡುವರು.

ನುಗ್ಗುವಿನ ಆಟದಿಂದ ಮನೆ ಭಸ್ಮ

ಬೆಂಗಳೂರು ೨೪

ನೆನ್ನೆ ಇಲ್ಲಿನ ಸಿವಿಲ್ ಪ್ರದೇಶದಲ್ಲಿ ೪ ವರ್ಷದ ಮಾರ್ಟಿನ್ ಎಂಬ ಮಗುವೊಂದು ಬೆಂಕಿ ಹತ್ತಿಸಿದ ಕಾಗದದ ಸುರುಳಿಯನ್ನು ಸೀಮೆಯೆಣ್ಣೆ ಡ್ರಮ್ಮು ಮತ್ತು ಪೆಟ್ರೋಲ್ ಟಿನ್ನುಗಳ ಮೇಲೆ ಎಸೆಯಲಾಗಿ ಅದರಿಂದ ಬೆಂಕಿಯು ಹರಡಿ ಮನೆಗೂ ತಗುಲಿ ಹತ್ತಿ ಉರಿಯತೊಡಗಿತು ಮಗುವಿಗೂ, ಅದರ ತಂದೆತಾಯಿಗಳು ಮತ್ತು ಜೋಸೆಫ್ ಎಂಬ ಒಬ್ಬರಿಗೂ ಸುಟ್ಟ ಗಾಯಗಳಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು. ಮನೆಯು ಜ್ವಾಲೆಯಲ್ಲಿ ಸಿಕ್ಕಿ ಭಸ್ಮವಾಯಿತು. ಅಗ್ನಿ ಶಾಮಕ ದಳದವರು ಬಂದು ಇತರ ಮನೆಗಳಿಗೆ ಬೆಂಕಿ ಹರಡದಂತೆ ಮಾಡಿದರು ಮಗುವಿನ ತಂದೆಯು ಓಮ ಎಣ್ಣೆ ಕಂಪೆನಿಯ ನೌಕರರೆಂದು ಹೇಳಲಾಗಿದೆ. ಮನೆಯಲ್ಲಿ ಹಲವು ಪೆಟ್ರೋಲ್ ಕ್ಯಾನುಗಳು ಮತ್ತು ಎಣ್ಣೆ ಡ್ರಮ್ಮುಗಳು ಇದ್ದುವೆಂದು ಗೊತ್ತಾಗಿದೆ.

ಎಸ್. ಲಕ್ಷ್ಮಣರಾಯರ ಸ್ಥಾನಕ್ಕೆ ಪಿ. ಜೆ. ಫರ್ನಾಂಡೆಸ್

ಸಂಸ್ಥಾನದ ರಸ್ತೆ ಸಂಚಾರ ಇಲಾಖೆಯ ಜನರಲ್ ಮ್ಯಾನೇಜರಾದ ಶ್ರೀ ಎಸ್ ಲಕ್ಷ್ಮಣರಾಯರು ರಜದ ಮೇಲೆ ಹೋಗುವರು. ಅವರ ಸ್ಥಾನಕ್ಕೆ ಸಂಸ್ಥಾನದ ಹಣಕಾಸು ಡೆಪ್ಯುಟಿ ಕಾರ್ಯದರ್ಶಿ ಶ್ರೀ ಪಿ. ಜೆ. ಫರ್ನಾಂಡೆಸ್‌ರವರನ್ನು ನೇಮಕ ಮಾಡಲಾಗಿದೆ. ಹಾಸನ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ವೀರರಾಜೆ ಅರಸರನ್ನು ಡೆಪ್ಯುಟಿ ಕಾರ್ಯದರ್ಶಿಯಾಗಿಯೂ, ಶ್ರೀ ವಾಸುದೇವರಾಯರನ್ನು ಹಾಸನದ ಜಿಲ್ಲಾಧಿಕಾರಿಗಳಾಗಿಯೂ ನೇಮಿಸಲಾಗಿದೆ.

ಪಾನ ನಿರೋಧದ ಉಲ್ಲಂಘನೆಗಾಗಿ ೬೬ ಮಂದಿಯ ಬಂಧನ

ಪಾನ ನಿರೋಧದ ಆಜ್ಞೆಯ ಉಲ್ಲಂಘನೆಗಾಗಿ ಹುಬ್ಬಳ್ಳಿಯ ನಗರ ಪ್ರದೇಶದ ಪೋಲೀಸರು ೬೬ ಮಂದಿಯನ್ನು ಬಂಧಿಸಿರುತ್ತಾರೆ. ಆ ಪೈಕಿ ದಕ್ಷಿಣ ರೈಲ್ವೆ ನೌಕರರೇ ಹೆಚ್ಚೆಂದು ಹೇಳಲಾಗಿದೆ. ಅವರನ್ನು ಜಾಮೀನು ಮೇಲೆ ಬಿಡಲಾಗಿದೆ.

ಗುಂಕದ ಅಧಿಕಾರಿಗಳ ಮೇಲೆ ಗೋವಾ ಕಳ್ಳ ರವಾನೆಗಾರರ ಬಂದೂಕದ ಪ್ರಯೋಗ

ಕಾರ್ವಾರಕ್ಕೆ ೩ ಮೈಲಿ ದೂರದಲ್ಲಿ ಸಮುದ್ರ ತೀರದಲ್ಲಿ ಕೆಲವು ದಿನಗಳ ಹಿಂದೆ ಕೇಂದ್ರ ಗುಂಕದ ಅಧಿಕಾರಿಗಳು ಮತ್ತು ಗಡಿ ಪೋಲೀಸರ ಮೇಲೆ ಕಳ್ಳ ರವಾನೆಗಾರರ ಗುಂಪೊಂದು ಗುಂಡು ಹಾರಿಸಿದುದಾಗಿ ವರದಿಯಾಗಿದೆ ನಡು ರಾತ್ರಿಯಲ್ಲಿ ಪೋರ್ಚುಗೀಸರ ಅಂಜೆದಿವ ದ್ವೀಪಕ್ಕೆ ಹಲವು ಪದಾರ್ಥಗಳನ್ನು ಸಾಗಿಸಲು ಕಳ್ಳ ರವಾನೆಗಾರರು ಪ್ರಯತ್ನಪಟ್ಟಿದ್ದರೆಂದು ಹೇಳಲಾಗಿದೆ. ಗಡಿ ಪೋಲೀಸರು ಅವರುಗಳ ಮೇಲೆ ಮರು ಗುಂಡು ಹಾರಿಸಿದರು ಕಳ್ಳ ರವಾನೆಗಾರರು ಬಂದೂಕವನ್ನು ಉಪಯೋಗಿಸಿರುವುದು ಇದೇ ಮೊದಲು ದ್ವೀಪಕ್ಕೆ ದೋಣಿಯಲ್ಲಿ ಅಕ್ಕಿ, ಸೀಟಳ್ಳಿ, ನಿಂಬೆಹಣ್ಣು ಮುಂತಾದುವನ್ನು ಯಥೇಚ್ಛವಾಗಿ ಸಾಗಿಸಲಾಗುತ್ತಿತ್ತೆಂದು ಹೇಳಲಾಗಿದೆ ಅಧಿಕಾರಿಗಳು ಹಲವು ಮಾಲುಗಳನ್ನು ವಶಪಡಿಸಿಕೊಂಡಿರುತ್ತಾರೆ ಕಳ್ಳ ರವಾನೆಗಾರರು ದೋಣಿಯಲ್ಲಿ ದ್ವೀಪಕ್ಕೆ ಪರಾರಿಯಾಗಿರುವರು

ಬಿಸಿಲು ತಾಪದಿಂದ ೧೭ ಜನರ ಮರಣ

ಪೂರ್ವ ಅಮೇರಿಕದಲ್ಲಿ ಬಿಸಿಲಿನ ತಾಪದಿಂದ ೧೭ ಜನರು ಮಡಿದಿರುವರೆಂದು ವರದಿಯಾಗಿದೆ ನ್ಯೂಯಾರ್ಕ್ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಲಕ್ಷಾಂತರ ಮಂದಿ ಬೇಗೆಯನ್ನು ತಾಳಲಾರದೆ ಸಮುದ್ರ ತೀರಕ್ಕೆ ಧಾವಿಸುತ್ತಿರುವರೆಂದು ಹೇಳಲಾಗಿದೆ

ಹಿಂದಿ ಪರೀಕ್ಷಾ ಅವೇದನ ಪತ್ರಗಳು

ಬೆಂಗಳೂರಿನ ಮೈಸೂರು ಹಿಂದೀ ಸಾಹಿತ್ಯ ಪರಿಷತ್ತಿನವರು ಇದುವರೆವಿಗೂ ಅಕ್ಟೋಬರ್ ಮತ್ತು ಏಪ್ರಿಲ್ ತಿಂಗಳಲ್ಲಿ ನಡೆಸುತ್ತಿದ್ದ ಹಿಂದೀ ಪರೀಕ್ಷೆಗಳನ್ನು ಇನ್ನು ಮುಂದೆ ಆಗಸ್ಟ್ ಮತ್ತು ಫೆಬ್ರವರಿಗಳಲ್ಲಿಯೇ ನಡೆಸುವರು ಆದ್ದರಿಂದ ಇದೇ ಆಗಸ್ಟ್ ತಿಂಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ಅವೇದನ ಪತ್ರಗಳನ್ನು ಕಳುಹಿಸಲು ೩೧ನೇ ಕಡೇ ದಿನವಾಗಿರುತ್ತದೆ ವಿಳಂಬ ಶುಲ್ಕದೊಂದಿಗೆ ೫ ೮—೫೭ರ ವರೆಗೆ ಅವಕಾಶವಿದೆ

ಅವೇದನ ಪತ್ರಗಳನ್ನು ನಮ್ಮ ಶಾಲೆಯಲ್ಲಿ ಪಡೆಯಬಹುದು ಶಾಲೆಯು ಸೇವಾ ಸಂಘದ ಆಶ್ರಯದಲ್ಲಿ ಇದುವರೆಗೆ ಸಂಜೆ ೫ ೩೦ ಗಂಟೆಗೆ ನಡೆಯುತ್ತಿದ್ದ ಹಿಂದೀ ತರಗತಿಗಳು ಇನ್ನು ಮುಂದೆ ೬ ಗಂಟೆಯಿಂದ ೮ ಗಂಟೆಯವರೆಗೆ ನಡೆಯುವವು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮುಖವೀಣೆ ೭ ೧೫ ಡಿ ಎಸ್. ರಾಮಾಚಾರ್-ದೇವರ ನಾಮ ೮-೧೫ ಎಲ್ ನಾರಾಯಣಸ್ವಾಮಿ-ವಾದ್ಯ ವೃಂದ ಮಧ್ಯಾಹ್ನ ೧೨ ಮತ್ತು ೧-೫೦ ಬಿ ಶೇಷಪ್ಪ ಮೂರ್ತಿ-ಪಿಟೀಲು ೧೨-೩೦ ಡಿ ಬಿ ಹರೀಂದ್ರ-ಹಿಂದೂಸ್ಥಾನಿ ಸಂಗೀತ ೧ ರೇಡಿಯೋ ಸುಬ್ಬಲಕ್ಷ್ಮಿ ಸಂಗೀತ ೧-೨೦ ಪಿ ಕಾಳಿಂಗರಾವ್-ರೇಡಿಯೋ ೩ ೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ಜಾನಪದ ಗೀತೆ ೬-೩೦ ಪ್ರಸಂಗ: ಧಾರವಾಡದ ರಿಲೆ ೮-೧೦ ಗೀತಾ ಗುಚ್ಛ. ೮-೧೦ ಟಿ ಚೌಡಯ್ಯ-ಪಿಟೀಲು ೯-೧೫ ಮೈಸೂರು ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣ ಇಂಗ್ಲಿಷ್ ಚಟ ಎಲ್ ಶ್ರೀನಿವಾಸ ಡಿ ಎಚ್ ಚಂದ್ರಶೇಖರಯ್ಯ ಮತ್ತು ಎಂ ಪಿ ಎಲ್ ಶಾಸ್ತ್ರಿ-ಪಾತ್ರ ೯ ೩೦ ನಾಟಕ

ಭಾರತದಲ್ಲಿ ಒಟ್ಟು ೬,೫೭೦ ಪತ್ರಿಕೆಗಳು

ಮೈಸೂರಿನಲ್ಲಿ ೨೨೭

ಲೋಕ ಸಭೆಯಲ್ಲಿ ಮೊನ್ನೆ ಕೇಂದ್ರ ವಾರ್ತಾ ಮಂತ್ರಿ ಕೇಸ್ಕರ್‌ರವರು ಪ್ರೆಸ್ ರಿಜಿಸ್ಟ್ರಾರರ ಪ್ರಥಮ ವಾರ್ಷಿಕ ವರದಿಯನ್ನು ಒಪ್ಪಿಸಿರುತ್ತಾರೆ ಅದರ ಪ್ರಕಾರ ಭಾರತದಲ್ಲಿ ಒಟ್ಟು ೬,೫೭೦ ವೃತ್ತ ಪತ್ರಿಕೆಗಳಿವೆ ಅವುಗಳಲ್ಲಿ ಎರಡು ವಿಭಾಗ ಮಾಡಲಾಗಿದೆ ಮೊದಲನೆಯ ೪ ೫೭೯ ಪತ್ರಿಕೆಗಳು ರಿಜಿಸ್ಟ್ರಾರಿಗೆ ವಿವರವನ್ನು ಕೊಟ್ಟಿವೆ ಉಳಿದುವು ಕೊಟ್ಟಿಲ್ಲ ಆದರೆ ಅವುಗಳ ಅಸ್ತಿತ್ವದ ಬಗ್ಗೆ ಪ್ರಾಂತ ಸರ್ಕಾರಗಳು ಮಾಹಿತಿ ಕೊಟ್ಟಿವೆ ಇಂಗ್ಲಿಷ್ ಪತ್ರಿಕೆಗಳು ಅಧಿಕ ಪ್ರಸಾರದಲ್ಲಿವೆ ಎರಡನೆಯ ಸ್ಥಾನಗಳನ್ನು ಹಿಂದಿ ಪತ್ರಿಕೆಗಳು ಪಡೆದಿವೆ ಮೈಸೂರು ಸಂಸ್ಥಾನದಲ್ಲಿ ೨೨೭ ಪತ್ರಿಕೆಗಳಿರುವುದಾಗಿ ತಿಳಿಸಲಾಗಿದೆ.

ಕ್ರುಶ್ಚೇವರ ಕೊಲೆ ಪ್ರಯತ್ನ ?

ರಷ್ಯದ ಕಮ್ಯೂನಿಸ್ಟ್ ನಾಯಕ ಕ್ರುಶ್ಚೇವರನ್ನು ಕೊಲೆ ಮಾಡುವ ಪ್ರಯತ್ನವು ಜೆಕೊಸ್ಲೋವೇಕಿಯದ ರಾಜಧಾನಿಯಲ್ಲಿ ನಡೆದಿತ್ತೆಂದು ಹೇಳಲಾಗಿದೆ ಅವರು ಇತ್ತೀಚೆಗೆ ಅಲ್ಲಿಗೆ ಭೇಟಿಯಿತ್ತಾಗ ಪುಷ್ಪಗಳ ತುರಾಯಿಯಲ್ಲಿ ಒಂದು ಟೈಂ ಬಾಂಬ್ ಇಡಲಾಗಿತ್ತೆಂದು ಹೇಳಲಾಗಿದೆ

ನಂಜನಗೂಡು ಪ್ರೌಢಶಾಲೆಗೆ ವಿದ್ಯಾ ಸಚಿವರ ಭೇಟಿ

ನಂಜನಗೂಡಿನ ಸರ್ಕಾರಿ ಪ್ರೌಢಶಾಲೆಗೆ ಕಳೆದ ೧೯ನೇ ತಾರೀಕು ವಿದ್ಯಾ ಮಂತ್ರಿ ಶ್ರೀ ವಿ ವೆಂಕಟಪ್ಪನವರು ಭೇಟಿಯಿತ್ತರು ಅವರೊಡನೆ ಪೌರಸಭಾಧ್ಯಕ್ಷ ಶ್ರೀ ಕೆ ವೆಂಕಟಸುಬ್ಬಯ್ಯ ಮತ್ತು ಬಾಲಕಿಯರ ಪ್ರೌಢಶಾಲಾ ಸಮಿತಿ ಅಧ್ಯಕ್ಷ ಶ್ರೀ ಬಿ ವಿ ಪಂಡಿತರೂ ಇದ್ದರು ಹೈಸ್ಕೂಲಿನ ವಿಸ್ತರಣೆಗಾಗಿ ಕಟ್ಟಡದ ಕಾರ್ಯವನ್ನು ಮಂಜೂರು ಮಾಡಬೇಕೆಂದೂ ಈಗಾಗಲೇ ಅದಕ್ಕಾಗಿ ೩೦,೦೦೦ ರೂ ಅನ್ನು ಒದಗಿಸಲಾಗಿರುವುದೆಂದೂ ಪೌರಸಭಾಧ್ಯಕ್ಷರು ಅರಿಕೆ ಮಾಡಿ, ಅಲ್ಲಿ ಪ್ರೀ ಯೂನಿವರ್ಸಿಟಿ ತರಗತಿಯನ್ನು ತೆರೆಯಲು ಅವಶ್ಯಕವಾದ ಸೌಕರ್ಯವಿರುವುದೆಂದು ತಿಳಿಸಿದರು ಬಹುಬೇಗ ಶಾಲಾ ಪ್ರಾಥಮಿಕ ಶಾಲೆಗಾಗಿ ಕಟ್ಟಡ ಮತ್ತು ಉಪಾಧ್ಯಾಯರ ವಸತಿಗಾಗಿ ಕಟ್ಟಡಗಳ ನಿರ್ಮಾಣಕ್ಕೆ ಕೋರಿಕೆಗಳನ್ನು ಸಲ್ಲಿಸಲಾಯಿತು ಅವುಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಸಚಿವರು ಭರವಸೆಯಿತ್ತರು

ಮೈಸೂರು ಪೇಟೆ ಧಾರಣೆ

[illegible]	೪೨ ೭೫	೪೫ ೨೫
ರತ್ನಚೂಡಿ	೨೯ ೧೨	೪೦ ೫೦
ಬಂಗಾರತಿ	೨೯ ೧೨	
ಕಾರ್‌ಸಣ್ಣ	೨೬ ೦೦	೨೭ ೦೦
ಕಡ್ಡಿ	೪೪ ೬೦	
ರಾಗಿ	೪೪ ೦೦	೪೬ ೦೦
ಕಡಲೆಕಾಯಿ	೦೦ ೦೦	೧೯ ೪೭
ಹುಚ್ಚೆಳ್ಳು	೪೨ ೬೨	
ಎಳ್ಳು	೭೦ ೦೦	೭೯ ೫೭
ಹರಳುಬೀಜ	೪೨ ೦೦	
ಹುರುಳಿ	೪೨ ೧೨	೪೪ ೪೭
ಹೆಸರು	೪೬ ೦೦	೬೦ ೬೨
ಹಲಸಂದೆ	೪೫ ೧೨	೬೨ ೭೫
ಅವರೆ	೪೧ ೦೦	೫೪ ೪೭
ಧನಿಯ	೨೧ ೨೫	
ಕಡಲೆ	೪೬ ೦೦	೪೬ ೨೫
ಉದ್ದು	೪೫ ೦೦	
ಹುಣಿಸೇಹಣ್ಣು	೩ ೫೦	೪ ೧೨
ಸೀಗೆಕಾಯಿ	೯ ೦೦	
ಮೆಣಸಿನಕಾಯಿ	೧೫ ೭೨	೧೭ ೭೫
ತೆಂಗಿನಕಾಯಿ	೧೪೨ ೫೦	೨೬೬ ೦೦

ಸಾಗುವಳಿ ಜಮೀನಿನ ಪರಿವರ್ತನೆಗೆ ದಂಡದ ಬದಲು ಕಂದಾಯ

ಸ್ವಂ ಸು ತಂತಿ] ಬೆಂಗಳೂರು ೨೨

ಸಾಗುವಳಿ ಜಮೀನನ್ನು ವ್ಯವಸಾಯೇತರ ಕೆಲಸಗಳಿಗಾಗಿ ಪರಿವರ್ತಿಸುವ ಸಂಬಂಧದಲ್ಲಿ ದಂಡ ವಿಧಿಸುವ ಬದಲು ಕಂದಾಯ ವಸೂಲು ಮಾಡಲು ಸರ್ಕಾರದವರು ನಿರ್ಧರಿಸಿರುತ್ತಾರೆ

ರೀ ಸರ್ವೆಗೆ ಇಬ್ಬರು ವಿಶೇಷ ಜಿಲ್ಲಾಧಿಕಾರಿಗಳು

ರೀ ಸರ್ವೆ ಸಟಲ್‌ಮೆಂಟ್ ಕೆಲಸವನ್ನು ತೀವ್ರಗೊಳಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ ಅದಕ್ಕಾಗಿ ಇಬ್ಬರು ವಿಶೇಷ ಜಿಲ್ಲಾಧಿಕಾರಿಗಳನ್ನು ನೇಮಿಸಲಾಗುವುದು ಪ್ರಾಯಶಃ ಶ್ರೀ ಡಿ ಎಸ್ ರಾಮಚಂದ್ರಾಚಾರ್ ಮತ್ತು ಶ್ರೀ ವಿಜಾರಾವಿಯವರು ಆ ಸ್ಥಾನಕ್ಕೆ ಬರಬಹುದು

ಅಮೇರಿಕದ ಸುಂದರಿಗೆ ಸೌಂದರ್ಯ ಸ್ಪರ್ಧೆಯಲ್ಲಿ ಅವಕಾಶವಿಲ್ಲ

ಎರಡು ಬಾರಿ ವಿವಾಹವಾದುದೇ ಕಾರಣ

ಅಮೇರಿಕದ ಸುಂದರಿ ಎಂಬ ಪ್ರಶಸ್ತಿಯನ್ನು ಪಡೆದ ಅಲ್ಲಿನ ಲಿಯೋನ ರಾ ಜೇನ್ ಎನ್ನಿಸ್ ಎಂಬಾಕೆಯು ತಾನು ಎರಡು ಬಾರಿ ವಿವಾಹವಾಗಿರುವುದಾಗಿ ತಿಳಿಸಿದಾಗ ಆಕೆಗೆ ಕೊಡಲಾಗಿದ್ದ ಬಿರುದನ್ನು ತಪ್ಪಿಸಲಾಯಿತೆಂದು ಹೇಳಲಾಗಿದೆ ಎರಡನೆ ಮದ ವೆಯಾಗಿದ್ದುದರಿಂದ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಆಕೆಯು ಭಾಗವಹಿಸಲು ಅವಕಾಶ ಸಿಗಲಿಲ್ಲ ತಾನು ಜೀವಿಸಿರುವವರೆಗೂ ಸತ್ಯ ಹೇಳುವುದಿಲ್ಲವೆಂದು ಆಕೆಯು ಪ್ರತಿಜ್ಞೆ ಮಾಡಿರುತ್ತಾಳೆ ೪ ವರ್ಷಗಳ ಹಿಂದೆ ಯಾವುದೊ ಊರಿನಲ್ಲಿ ಆಕೆಯು ಮೊದಲು ವಿ ಜಪ ದಳು ಒಬ್ಬ ತರುಣನ ಮೇಲೆ ಆಸೆಯನ್ನು ವಿವಾಹವಾಗಿ ಅವನೊಡನೆ ಒಂದು ದಿನ ಇದ್ದು ಅನಂತರ ವಿಚ್ಛೇದನ ಹೊಂದಿ ಈಗ ಬೇರೆಯವನನ್ನು ವರಿಸಿರುವುದಾಗಿ ಆಕೆಯು ತಿಳಿಸಿರುವಳು

ಕಟಕ್ ಬಳಿ ನದಿಯಲ್ಲಿ ದೋಣಿ ಮುಳುಗಿ ೧೧ ಜನರ ಮರಣ

ಕಟಕ್ ಬಳಿ ಆ ಜಿಪಟ್ಟಣದ ಹತ್ತಿರ ಕಟಜೂರಿ ನದಿಯ ಮಧ್ಯ ಭಾಗದಲ್ಲಿ ಮೊನ್ನೆ ಬೆಳಗ್ಗೆ ಬಿರುಗಾಳಿಯಿಂದ ದೋಣಿಯೊಂದು ಮಗುಚಿಕೊಳ್ಳಲಾಗಿ ಅದರಲ್ಲಿದ್ದ ೫೫ ಜನರ ಪೈಕಿ ೧೧ ಮಂದಿ ಸೀರಿನ ಪಾಲಾದರು ೪೪ ಜನರನ್ನು ರಕ್ಷಿಸಲಾಗಿದೆ ಆ ಮೃತರಲ್ಲಿ ಮಂದಿಗೆ ಗಾಯಗಳಾಗಿವೆ

ಸ್ಥಳೀಯ ಮತ್ತು ಇಂಗ್ಲಿಷ್ ವೈದ್ಯ ಪದ್ಧತಿಗಳ ಸಮನ್ವಯ

ಭಾರತದಲ್ಲಿ ಅನೇಕ ವರ್ಷಗಳಿಂದ ನೆಲೆಸಿರುವ ಪುರಾತನ ವೈದ್ಯ ಪದ್ಧತಿ ಮತ್ತು ಆಧುನಿಕ ಪದ್ಧತಿಯನ್ನು ಒಂದುಗೂಡಿಸಿ ಅದಕ್ಕೆ ಹೊಸ ರೂಪವನ್ನೀಯುವ ವಿಚಾರವನ್ನು ಕೇಂದ್ರ ಸರ್ಕಾರದವರು ಪರ್ಯಾಲೋಚಿಸುತ್ತಿರುವುದಾಗಿ ಕೇಂದ್ರ ಹಣಕಾಸಿನ ಮಂತ್ರಿಯವರು ಕರ್ನೂಲಿನಲ್ಲಿ ತಿಳಿಸಿರುತ್ತಾರೆ. ಅಲ್ಲಿ ಅವರು ಗ್ರಾಮಾಂತರ ವೈದ್ಯ ಕಾಲೇಜನ್ನು ಮೊನ್ನೆ ತೆರೆದರು

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ,
ಮೈಸೂರು

ಶ್ರೇಷ್ಠತಮ ನಂದ ಅಗರಬತ್ತಿ ಗಂಧಗ ಬತ್ತಿ ಕಾಶ್ಮೀರದ ಕೇಸರಿ ಮತ್ತು ಇತರೆ ಸುಗಂಧ ದ್ರವ್ಯಗಳಿಗೆ ಇಂದೇ ಭೇಟಿ ಕೊಡಿ

ಜಿಲ್ಲಾ ಜಡ್ಜರಿಂದ ಅಮೀನರಿಗೆ ಸತ್ಕಾರ

ಬಳ್ಳಾರಿಯ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ ಭೀಮಯ್ಯನವರು ಶ್ರೀಗಳು ಜೆ ನಾಗೋಜಿ ಮತ್ತು ಕೆ ನಾಗೋಜಿ ಎಂಬ ಇಬ್ಬರು ಅಮೀನರುಗಳ ಗೌರವಾರ್ಥವಾಗಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿ, ಅವರನ್ನು ತನ್ನ ಪಕ್ಕದಲ್ಲಿ ಕೂರಿಸಿಕೊಂಡಿದ್ದರೆಂದು ವರದಿಯಾಗಿದೆ ಈ ಸಮಾರಂಭವು ಕೋರ್ಟು ಹಾಲಿನಲ್ಲಿ ನಡೆಯಿತು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ವಿ ಎಸ್ ರಾಮಚಂದರ್‌ರವರು ಉಭಯ ಅತಿಥಿಗಳಿಗೆ ಹೂ ಮಾಲೆಗಳನ್ನು ಅರ್ಪಿಸಿ, ಇಂತಹ ಉತ್ತಮ ಪದ್ಧತಿಯನ್ನು ಏರ್ಪಡಿಸಿದ ಬಗ್ಗೆ ಸೆಷನ್ಸ್ ಜಡ್ಜರನ್ನು ಪ್ರಶಂಸಿಸಿದರು ಸೆಷನ್ಸ್ ಜಡ್ಜರು ಕಳೆದ ವರ್ಷ ಯಲ್ಲಿ ಕೋರ್ಟಿನ ಜವಾನನೊಬ್ಬನಿಗೆ ಇದೇ ರೀತಿ ಗೌರವವನ್ನು ಸೂಚಿಸಿದ್ದರು. ಅಮೀನರುಗಳು ೩೦ ವರ್ಷ ನೌಕರಿ ಮಾಡಿ ನಿವೃತ್ತರಾಗಿರುತ್ತಾರೆ.

ಕೇರಳದ ಮಹಿಳಾ ವೈದ್ಯರಿಂದ ಮಂಡ್ಯದಲ್ಲಿ ಉಚಿತ ದಂತ ಚಿಕಿತ್ಸೆ

ಮಂಡ್ಯದಲ್ಲಿ ಕಳೆದ ೧೯ನೇ ತಾರೀಕಿನಿಂದ ಕೇರಳದ ಶ್ರೀಮತಿ ಜಚಮ ಜಾರ್ಜ್ ಎಂಬ ವೈದ್ಯರೊಬ್ಬರು ಉಚಿತ ದಂತ ಚಿಕಿತ್ಸೆ ನಡೆಸುತ್ತಿರುವರು ದಿನವಹಿ ೭೦-೮೦ ಮಂದಿಗೆ ಇದರಿಂದ ಸಹಾಯವಾಗುತ್ತಿದೆ ಸೇವೆಯಲ್ಲೂ, ನೈಪುಣ್ಯದಲ್ಲೂ ಶ್ರೀಮತಿಯವರು ಡಾ॥ ಮೋದಿಯವರನ್ನು ಹೋಲುವರು ಅವರು ಬೆಂಗಳೂರಿನಲ್ಲೂ ಚಿಕಿತ್ಸೆ ನಡೆಸುವ ನಿರೀಕ್ಷೆಯಿದೆ

BUNGALOW FOR SALE

Big up staired Bungalow in Kantharaj Urs Road, K M Puram, for immediate Sale
Enquire at —
JAYA & CO,
House Estate & Finance Agents
Ol Mysore Bank Road,
MYSORE
Phone No 520

WHEN
YOU NEED
PURE
COW MILK

at
94 Tyagaraja Road Cross,
AND
1034 K. R Hospital Road

ಈಗ ಬಂದಿವೆ !
ರಾಜರತ್ನಂರವರ
ಭಗವಾನ್ ಬುದ್ಧ
ಬೆಲೆ ರೂ 1-0-0
ಲಕ್ಷ್ಮೀಶ ವಿರಚಿತ
ಜೈಮಿನಿ ಭಾರತ
ಬೆಲೆ ರೂ 1-0-0
ಕೃಷ್ಣಾ ಕಂಪೆನಿ,
ನೂರಡಿ ರಸ್ತೆ, ಮೈಸೂರು

Edited, Printed and Published by A R Nagarajan at Sadhvi Press, D Subbiah Road Mysore

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
26—7—57ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
★ ಭಲೇ ಬಾವ ★
ಎ ಶ್ರೀ ಎಸ್ ಜಾನಕಿ, ಗಿಂಜ, ಜಗ್ಗಯ್ಯ, ರೇಲಂಗಿ, ಗುಮ್ಮಡಿ, ಸಿ ಎಸ್ ಆರ್. ಮುಂತಾದವರು

ರಿಜಿಸ್ಟರ್ಡ್ ನಂ. 792

ಇಂದಿನ ಪತ್ರಿಕೆ 2 ನಯೆ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯೆಪೈಸೆ

ಸಂಪುಟ : ೧೫] SADHVI : THURSDAY 25-7-1957 ಮೈಸೂರು : ಗುರುವಾರ ೨೫-೭-೧೯೫೭ [ಸಂಚಿಕೆ : ೪೪೭

ಒಮಾ್ನ್ ರಾಜ್ಯದ ಮೇಲೆ ಬ್ರಿಟಿಷ್ ಬಾಂಬು ಧಾಳಿ ಆರಂಭ

ನೂತನ ಶ್ರೇಷ್ಠ ನ್ಯಾಯಾಧೀಶರಿಂದ ಪ್ರಮಾಣ ವಚನ

ಗವರ್ನರರ ಸಮ್ಮುಖದಲ್ಲಿ ಸಮಾರಂಭ

ಮೈಸೂರು ೨೪

ಸಂಸ್ಥಾನದ ನೂತನ ಶ್ರೇಷ್ಠ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಿರುವ ಜಸ್ಟಿಸ್ ಸುಧೀಂದ್ರನಾಥ ದಾಸ್ ಗುಪ್ತರವರು ಈ ಬೆಳಿಗ್ಗೆ ಇಲ್ಲಿನ ಅರಮನೆಯಲ್ಲಿ ರಾಜ್ಯಪಾಲರ ಸಮ್ಮುಖದಲ್ಲಿ ಪ್ರಮಾಣ ವಚನವನ್ನು ತೆಗೆದುಕೊಂಡರು. ಅದಕ್ಕಾಗಿ ಬೆಳಿಗ್ಗೆ ೯ ಗಂಟೆಗೆ ಅವರು ಹೈಕೋರ್ಟ್ ರಿಜಿಸ್ಟ್ರಾರ್ ಶ್ರೀ ಡಿ. ರಾಮಸ್ವಾಮಿ ಅಯ್ಯಂಗಾರ್‌ರೊಡನೆ ಅರಮನೆಗೆ ತೆರಳಿದರು. ಅರಮನೆಯಲ್ಲಿ ಗವರ್ನರರ ಕಾರ್ಯದರ್ಶಿಯವರಾದ ಶ್ರೀ ಹೆಚ್. ಎಲ್. ಕಾಳೇಗೌಡರವರು ನೂತನ ಶ್ರೇಷ್ಠ ನ್ಯಾಯಾಧೀಶರನ್ನು ಸ್ವಾಗತಿಸಿ ಗವರ್ನರ್ ಶ್ರೀ ಜಯಚಾಮರಾಜ ಒಡೆಯರರ ಸಮ್ಮುಖಕ್ಕೆ ಕರೆದುಕೊಂಡುಹೋದರು. ಅಲ್ಲಿ ಗವರ್ನರರಿಗೆ ಶ್ರೀ ದಾಸ್ ಗುಪ್ತರವರ ಪರಿಚಯ ಮಾಡಲಾಯಿತು.

ಅನಂತರ ರಾಜ್ಯಪಾಲರು ಶ್ರೀ ದಾಸ್‌ಗುಪ್ತರವರಿಂದ ವಿಧ್ಯುಕ್ತ ರೀತಿಯಲ್ಲಿ ಪ್ರಮಾಣ ವಚನವನ್ನು ಮಾಡಿಸಿದರು. ಅದಾದಮೇಲೆ ಸ್ವಲ್ಪ ಹೊತ್ತು ಉಭಯರೂ ಕುಶಲ ಸಂಭಾಷಣೆ ನಡೆಸಿದರು. ಶ್ರೀ ದಾಸ್ ಗುಪ್ತರವರಿಗೆ ಗವರ್ನರರ ಪರವಾಗಿ ಹೂ ಮಾಲೆಯನ್ನು ಅರ್ಪಿಸಲಾಯಿತು.

ನೂತನ ಶ್ರೇಷ್ಠ ನ್ಯಾಯಾಧೀಶರು ಕೂಡಲೇ ಬೆಂಗಳೂರಿಗೆ ಹಿಂದಿರುಗಿ, ಮಧ್ಯಾಹ್ನ ೩ ಗಂಟೆಗೆ ಅಧಿಕಾರ ಸ್ವೀಕಾರ ಮಾಡಿದರು.

ರಾ. ವೆಂ. ಶ್ರೀಯವರಿಗೆ ಸ್ವಾಗತ

ವಯಸ್ಕರ ಶಿಕ್ಷಣದ ಬಗ್ಗೆ ವಿಶೇಷ ಅನುಭವ ಪಡೆಯಲು ಲಂಡನ್ನಿಗೆ ಹೋಗಿದ್ದ ಇಲ್ಲಿನ ವಯಸ್ಕರ ಶಿಕ್ಷಣ ಸಮಿತಿಯ ಶ್ರೀ ರಾ. ವೆಂ. ಶ್ರೀಯವರು ನೆನ್ನೆ ಸಂಜೆ ರೈಲಿನಲ್ಲಿ ನಗರಕ್ಕೆ ಆಗಮಿಸಿದರು. ನಿಲ್ದಾಣದಲ್ಲಿ ಅವರಿಗೆ ಸಂಪ್ರದಾಯದ ಸ್ವಾಗತ ನೀಡಲಾಯಿತು. ನಗರದಲ್ಲಿ ೧ ವಾರವಿದ್ದು, ನಂತರ ಅವರು ಬರ್ಮಾಕ್ಕೆ ತೆರಳಲಿರುವರು.

ಜೂಜಾಟಕ್ಕಾಗಿ ಜುಲ್ಮಾನೆ

ನಗರದ ಟೌನ್‌ಹಾಲಿನ ಬಳಿ ನಂಜುಂಡ ಮತ್ತು ಇತರ ಮೂವರು ಜೂಜಾಡುತ್ತಿದ್ದುದಕ್ಕಾಗಿ ನೆನ್ನೆ ತಲಾ ೧೦ ರೂ. ದಂಡ ವಿಧಿಸಲ್ಪಟ್ಟರು. ಅಶೋಕ ರಸ್ತೆಯಲ್ಲಿ ಸಣ್ಣಯ್ಯ ಮತ್ತು ಅಬ್ದುಲ್ ಬಷೀರ್ ಎಂಬುವರು ಮತ್ತು ಜೀವನ್ನಾರಾಯಣ ಕಟ್ಟೆಯಲ್ಲಿ ಅಬ್ದುಲ್ ಜಬ್ಬಾರ್ ಎಂಬುವನು ಜೂಜಾಡುತ್ತಿದ್ದುದಕ್ಕಾಗಿ ನೆನ್ನೆ ಅವರಿಗೆ ತಲಾ ೧೦ ರೂ ಜುಲ್ಮಾನೆ ವಿಧಿಸಿ ದೇವರಾಜ ಪೊಲೀಸರು ದ್ವಿತೀಯ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆಗಳನ್ನು ಹೂಡಿದ್ದರು.

○ ಮೈಸೂರು ವಿಭಜನೆಯ ಡೆಪ್ಯುಟಿ ರಿಜಿಸ್ಟ್ರಾರ್ ಶ್ರೀ ಜಿ. ಗಿರಿಯಪ್ಪನವರನ್ನು ಬೆಳಗಾಂ ಡೆಪ್ಯುಟಿ ರಿಜಿಸ್ಟ್ರಾರರನ್ನಾಗಿಯೂ, ಅಲ್ಲಿರುವ ಶ್ರೀ ಸಿ. ಬಿ. ಅಮಕುಂಡಿ ಮಠದವರನ್ನು ಮೈಸೂರಿಗೂ ವರ್ಗಾಯಿಸಲಾಗಿದೆ.

ಸರ್ಕಾರಕ್ಕೆ ಗವರ್ನರರಿಂದ ಮೃಗಾಲಯದ ದಾನ

ಬೆಂಗಳೂರು ೨೪

ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರರು ಮೈಸೂರಿನ ಮೃಗಾಲಯವನ್ನು ಸರ್ಕಾರಕ್ಕೆ ದಾನವಾಗಿ ಒಪ್ಪಿಸಿರುತ್ತಾರೆ. ಅದರಲ್ಲಿ ೧೨ ಲಕ್ಷ ರೂ. ಬೆಲೆಯುಳ್ಳ ಮೃಗಾಲಯ, ಕಾಡು ಮೃಗಗಳು, ಭೂಮಿ ಮತ್ತು ಕಟ್ಟಡಗಳು ಮತ್ತು ಪಾಲಿಸುವಿಕೆ "ಚಂಡಿ ಸಡಕ್" ರಸ್ತೆ ಸೇರಿರುವುದು. ಸರ್ಕಾರದವರು ಅದನ್ನು ಕೃತಜ್ಞತೆಯಿಂದ ಅಂಗೀಕರಿಸಿ, ಮೃಗಾಲಯವನ್ನು ಮುಂದೆ ಸಾರ್ವಜನಿಕವಾಗಿ ನಡೆಸಿಕೊಂಡು ಬರಲು ನಿರ್ಧರಿಸಿದ್ದಾರೆ. "ಚಂಡಿ ಸಡಕ್" ಇನ್ನುಮುಂದೆ ಸಾರ್ವಜನಿಕರ ರಸ್ತೆಯಾಗುವುದು.

ಮೃಗಾಲಯವನ್ನು ೧೯೪೮ರಲ್ಲೇ ಸರ್ಕಾರಕ್ಕೆ ಒಪ್ಪಿಸಲಾಗಿತ್ತು. ಅದನ್ನು ನಡೆಸಿಕೊಂಡು ಬಂದಿದ್ದರೆ ಮಹಾರಾಜರಿಗೆ ವಾಪಸು ಕೊಡಬೇಕೆಂದು ಆಗ ಷರತ್ತು ಹಾಕಲಾಗಿತ್ತು.

ವೀರರಾಜಪೇಟೆ ಬ್ಯಾಂಕಿನಿಂದ ಲಕ್ಷಾಂತರ ರೂ. ದಸ್ತು

ವೀರರಾಜಪೇಟೆ ಸಹಕಾರ ಬ್ಯಾಂಕಿನ ಮ್ಯಾನೇಜರ್ ಆರ್. ಜಿ. ಕಾಮತ್ ಎಂಬುವರು ಕಳೆದ ವಾರ ರಹಸ್ಯಮಯ ಸ್ಥಿತಿಯಲ್ಲಿ ಪತ್ತೆಯಿಲ್ಲದೆ ಹೋಗಿರುವರೆಂದು ವರದಿಯಾಗಿದೆ. ಅವರು ಬ್ಯಾಂಕಿನ ಲಕ್ಷಾಂತರ ರೂ. ಗಳ ದುರುಪಯೋಗದ ಬಗ್ಗೆ ಸಿಕ್ಕಿಕೊಂಡಿದ್ದರೆಂದೂ ಅವರ ತನಿಖೆಗಾಗಿ ಬ್ಯಾಂಕನ್ನು ೧೫ ದಿನಗಳ ಕಾಲ ಮುಚ್ಚಲಾಗಿದೆಯೆಂದೂ ತಿಳಿದುಬಂದಿದೆ. ಕಾಮತ್‌ರವರು ತಾವು ಸಾಲ ಕೊಟ್ಟ ಮನುಷ್ಯರುಗಳ ಹೆಸರಿನ ಪಟ್ಟಿಯನ್ನು ಬಿಟ್ಟುಹೋಗಿರುವರೆಂದೂ, ತಮ್ಮ ಒಳ್ಳೆಯತನವನ್ನು ತಮ್ಮ ಸ್ನೇಹಿತರು ದುರುಪಯೋಗಪಡಿಸಿಕೊಂಡರೆಂದು ನಮೂದಿಸಿರುವುದಾಗಿಯೂ ಹೇಳಲಾಗಿದೆ.

ಬೆಂಗಳೂರಿನಲ್ಲಿ ಷಾರ್ಟ್‌ವೇವ್ ರೇಡಿಯೋವಿಗಾಗಿ ಪ್ರಯತ್ನ

ಬೆಂಗಳೂರು ೨೪

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ವಿಧಾನ ಸಭೆಯಲ್ಲಿ ಮಾತನಾಡಿ, ಬೆಂಗಳೂರಿನಲ್ಲಿ ಷಾರ್ಟ್ ವೇವಿನ ರೇಡಿಯೋ ಕೇಂದ್ರವನ್ನು ಏರ್ಪಡಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯಪಡಿಸುವ ವಿಷಯವನ್ನು ಪರ್ಯಾಲೋಚಿಸುವುದಾಗಿ ಹೇಳಿರುತ್ತಾರೆ.

ವಿಶ್ವಸಂಸ್ಥೆ ಪಡೆಯಿಂದ ಇಂಡೋನೇಷ್ಯಾ ಸೈನ್ಯ ವಾಪಸ್

ಈಜಿಪ್ಟಿನಲ್ಲಿರುವ ವಿಶ್ವಸಂಸ್ಥೆಯ ಪಡೆಯಿಂದ ತನ್ನ ಸೈನಿಕರನ್ನೆಲ್ಲಾ ವಾಪಸು ಕರೆಸಲಾಗುವುದೆಂದು ಇಂಡೋನೇಷ್ಯ ತಿಳಿಸಿದೆ. ಮುಂದೆಯೂ ಸೈನ್ಯವನ್ನು ಒದಗಿಸಲು ತನ್ನ ಶಕ್ತಿಗೆ ಸಾಧ್ಯವಿಲ್ಲವೆಂದು ವಿಶ್ವಸಂಸ್ಥೆಗೆ ಇಂಡೋನೇಷ್ಯದ ಪ್ರತಿನಿಧಿಯು ಸೂಚಿಸಿರುತ್ತಾರೆ. ಅಲ್ಲಿ ಇಂಡೋನೇಷ್ಯದ ಐನೂರು ಸೈನಿಕರಿರುವರು.

ವನಮಹೋತ್ಸವ ಸಮಾರಂಭ

೩,೦೦೦ ಸಸಿಗಳನ್ನು ನೆಡಲಾಯಿತು

ಮೈಸೂರು ೨೪

ನಗರದ ಪೌರಸಭೆಯ ಆಶ್ರಯದಲ್ಲಿ ನೆನ್ನೆ ಸೀವರ್ಲ್ಸ್ ಪಾರ್ಕಿನಲ್ಲಿ ವನಮಹೋತ್ಸವವನ್ನು ನೆರವೇರಿಸಲಾಯಿತು. ಪೌರಸಭಾಧ್ಯಕ್ಷ ಶ್ರೀ ಸಂಜೀವಯ್ಯನವರು ಭಾಷಣಮಾಡಿ, ಮರಗಳು ಇದ್ದರೆ ಮಳೆ ಬರುವುದೆಂದೂ, ಇದು ನಾಡಿನ ಅಭ್ಯುದಯಕ್ಕೆ ಅವಶ್ಯಕವಾದುದೆಂದೂ ಹೇಳಿದರು. ನೆಟ್ಟ ಗಿಡಗಳು ಚೆನ್ನಾಗಿ ಬೆಳೆಯುವಂತೆ ಪೋಷಿಸಿಕೊಂಡು ಬರಬೇಕಾದುದು ಅಗತ್ಯವೆಂದು ಅವರು ಸೂಚಿಸಿದರು.

ಉತ್ಸವದ ಅಂಗವಾಗಿ ಸೂಯೆಜ್ ಫಾರಮ್ಮಿನಲ್ಲಿ ೧,೦೦೦ ಸಸಿಗಳನ್ನು ನೆಡಲಾಯಿತು. ಅವೂ ಸೇರಿ ಒಟ್ಟು ೩,೦೦೦ ಸಸಿಗಳು ನೆಡಲ್ಪಟ್ಟವು. ಪೌರಸಭಾ ಕಮಿಷನರ್ ಶ್ರೀ ಎ. ವಿಶ್ವನಾಥ್, ಆರೋಗ್ಯಾಧಿಕಾರಿಗಳಾದ ಶ್ರೀ ಬನಕರ್ ಮತ್ತು ಇಂಜಿನಿಯರ್ ಶ್ರೀ ಸೀತಾರಾಮಯ್ಯನವರೂ ಮತ್ತು ಪೌರಸಭಾ ಸದಸ್ಯರುಗಳೂ ಸಸಿಗಳನ್ನು ನೆಟ್ಟರು. ಆಯಾ ಗಿಡಗಳಿಗೆ ನೆಟ್ಟವರ ಹೆಸರಿನ ಹಲಗೆಗಳನ್ನು ತಗಲಿಹಾಕಲಾಗುವುದು. ಇಂಜಿನಿಯರಿಂಗ್ ಇಲಾಖೆಯವರು ಈ ಬಗ್ಗೆ ಉತ್ತಮ ವ್ಯವಸ್ಥೆ ಮಾಡಿದ್ದರು.

ಲಂಚಕ್ಕಾಗಿ ಆಂಧ್ರದ ಉನ್ನತಾಧಿಕಾರಿಯೊಬ್ಬರ ಬಂಧನ

ಮದರಾಸಿನ ಇಲಾಖಾ ಕಂಟ್ರಾಕ್ಟರೊಬ್ಬರಿಂದ ೧,೦೦೦ ರೂ. ಲಂಚ ಪಡೆದರೆಂಬ ಕಾರಣಕ್ಕಾಗಿ ಆಂಧ್ರ ಪ್ರದೇಶ ಸರ್ಕಾರದ ಡೆಪ್ಯುಟಿ ಕಾರ್ಯದರ್ಶಿ ಎಂ. ರಾಮಪ್ಪನವರನ್ನು ಅಲ್ಲಿನ ಸಿ. ಐ. ಡಿ. ಯವರು ಬಂಧಿಸಿದರು. ಸ್ವಂತ ಜಾಮೀನಿನ ಮೇಲೆ ಅವರನ್ನು ಬಿಡಲಾಗಿದೆ. ಸರ್ಕಾರದಿಂದ ತನಗೆ ಬರಬೇಕಾದ ಒಂದು ಲಕ್ಷ ರೂ. ವ್ಯವಹಾರದ ಹಣವನ್ನು ಇತ್ಯರ್ಥಪಡಿಸಿಕೊಡುವುದಾಗಿ ಅಧಿಕಾರಿಯು ಕಂಟ್ರಾಕ್ಟರಿಗೆ ಹೇಳಿದ್ದರೆಂದೂ, ಅದಕ್ಕಾಗಿ ಮೊದಲು ೧,೦೦೦ ರೂ. ಅನ್ನು ಆತನು ಕೊಟ್ಟು, ಉಳಿದ ೫,೧೦೦ ರೂ. ಗಳನ್ನು ವ್ಯವಹಾರ ಮುಗಿದನಂತರ ಕೊಡಬೇಕೆಂದು ಗೊತ್ತುಮಾಡಲಾಗಿತ್ತೆಂದೂ ಕಂಟ್ರಾಕ್ಟರು ದೂರಿತ್ತಿದ್ದನು. ಅದರ ಮೇಲೆ ಸಿ. ಐ. ಡಿ. ಯವರು ೧,೦೦೦ ರೂ. ಆಗುವ ನೋಟುಗಳ ನಂಬರುಗಳನ್ನು ಬರೆದುಕೊಂಡು ಅದಕ್ಕೆ ಮ್ಯಾಜಿಸ್ಟ್ರೇಟರ ರುಜು ಪಡೆದಿದ್ದರು. ನೊನ್ನೆ ಮಧ್ಯಾಹ್ನ ಹಣ ಸಡೆದಾಗ ಅಧಿಕಾರಿಯು ಸಿಕ್ಕಿಬಿದ್ದನು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದೇವರ ನಾಮ ೭-೧೫ ಗಾಂಧಿ ಸ್ಮೃತಿ ೭-೩೦ ಉದಯ ಸಂಗೀತ ೮-೧೫ ಬಿಂದಿವಾಳ ಮಧ್ಯಾಹ್ನ ೧೨ ಸಂಗೀತ ೧೨-೩೦ ವನಿತಾ ವಿಹಾರ ೧-೩೦ ವಿಮಾನ ಶಂಕರಶಾಸ್ತ್ರಿ ಮತ್ತು ಕೆ. ಸುಬ್ರಹ್ಮಣ್ಯಂ ವೀಣಾ ವಾದನ. ೧-೫೦ ಕೇಳಲು ೩-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ವೃತ್ತ ಗೀತೆ ೬-೩೦ ಪಿ. ಸೀತಾರಾಮಯ್ಯ—ವಿನಾ ಗೀಳಲ ನನ್ನ ಆಸೆ ಗೋಷ್ಠಿ, ಲಘು ನಾಟಕ ೮-೧೫ ಗೀತಾವಳಿ, ೯-೧೫ ಉರ್ದು ಕವನಗಳು ೯-೩೦ ಕರ್ನಾಟಕ ಸಂಗೀತ ರಾಷ್ಟ್ರೀಯ ಕಾರ್ಯಕ್ರಮ.

ಒಮಾನ್ ಮೇಲೆ ಬ್ರಿಟಿಷ್ ವಿಮಾನಗಳ ಧಾಳಿ ಆರಂಭ

ಮಸ್ಕತ್ ಸುಲ್ತಾನರ ಶಾಂತಿ ಒಪ್ಪಂದದ ಕರೆಗೆ ಇಮಾಮರ ನಿರಾಕರಣೆ

ಒಮಾನಿನ ಮಧ್ಯ ಭಾಗದಲ್ಲಿರುವ ನಿಜ್ವಾ ಮತ್ತು ಎಲ್ ಗಫಾರ್ ಪ್ರದೇಶಗಳ ಮೇಲೆ ನೆನ್ನೆ ಬ್ರಿಟಿಷ್ ವಿಮಾನಗಳು ಬಾಂಬು ಮತ್ತು ರಾಕೆಟ್ ಧಾಳಿಗಳನ್ನಾರಂಭಿಸಿರುವೆಂದು ವರದಿಯಾಗಿದೆ. ಮಸ್ಕತ್ ಸುಲ್ತಾನರ ವಿರುದ್ಧವಾಗಿ ದಂಗೆ ಎದ್ದಿರುವ ಒಮಾನಿನ ಇಮಾಮರ ಸೈನ್ಯಗಳು ಸುಲ್ತಾನರ ಸೈನ್ಯಗಳನ್ನು ಭೀಕರ ಬಂದೂಕಿನ ಕಾಳಗ ನಡೆಸಿ ಹಿಂದಕ್ಕಟ್ಟಿ, ಮೂರು ಬ್ರಿಟಿಷ್ ಸೈನ್ಯ ವಾಹನಗಳನ್ನು ವಶಪಡಿಸಿಕೊಂಡನಂತರ ಬಾಂಬು ಧಾಳಿಯಾಯಿತು.

ತಮ್ಮ ಸೈನ್ಯ ಹಿಮ್ಮೆಟ್ಟಿದ ಮೇಲೆ ಮಸ್ಕತ್ ಸುಲ್ತಾನರು ಸೂಚಿಸಿದ ಯುದ್ಧ ಶಾಂತಿ ಒಪ್ಪಂದದ ಸಲಹೆಯನ್ನು ಇಮಾಮರು ನಿರಾಕರಿಸಿರುತ್ತಾರೆ. ಹೋರಾಟ ಮುಂದುವರಿಯುತ್ತಿದೆ.

ಬ್ರಿಟಿಷ್ ಸೈನ್ಯಗಳೆಲ್ಲವೂ ವಾಪಸಾಗಬೇಕೆಂದೂ, ಮಸ್ಕತ್ ಸುಲ್ತಾನರು ಪದತ್ಯಾಗ ಮಾಡಬೇಕೆಂದೂ, ಒಮಾನ್ ರಾಜ್ಯದ ಪೂರ್ಣ ಸ್ವಾತಂತ್ರ್ಯವನ್ನು ಅಂಗೀಕರಿಸಬೇಕೆಂದೂ ಇಮಾಮರು ಸೂಚಿಸಿರುತ್ತಾರೆ. ಇಮಾಮರನ್ನು ೩ ವರ್ಷಗಳ ಹಿಂದೆ ಅವರ ದೇಶದಿಂದ ಓಡಿಸಲಾಗಿತ್ತು.

ಗೋವಾ ದೇಶಪ್ರೇಮಿಗೆ ಸಾಯುವವರೆಗೆ ಸೆರೆ

ಆಫ್ರಿಕದ ಪಶ್ಚಿಮ ತೀರದಲ್ಲಿರುವ ಪೋರ್ಚುಗೀಸರ ವಸಾಹತಾದ ಅಂಗೋಲಾದ ರೋಕಡಾಸ್ ಕೋಟೆಯಲ್ಲಿ ಬಂಧನದಲ್ಲಿಡಲ್ಪಟ್ಟಿದ್ದ ಆಲ್ ಇಂಡಿಯ ಸ್ವತಂತ್ರ ಗೋವಾ ಚಳುವಳಿ ಮುಖಂಡ ನಾರಾಯಣ ಹರಿನಾಯ್ಕರವರನ್ನು ಅಲ್ಲಿನ ಜೈಲು ಸೂಪರಿಂಟೆಂಡೆಂಟರಾದ ಜೋಸಿ ರಾಡ್ರಿಗ್ಸ್‌ರವರು ಬಲವಾಗಿ ಹೊಡೆದು ಸಾವನ್ನುಂಟುಮಾಡಿರುತ್ತಾರೆಂದು ಬೆಳಗಾವಿಯ ಆಜಾದ್ ಗೋಮಾಂತಕ ದಳಕ್ಕೆ ವರದಿ ಬಂದಿದೆ. ನಾಯ್ಕರವರ ಮುಂಡದ ಚರ್ಮ ಅನೇಕ ಕಡೆಗಳಲ್ಲಿ ಒಡೆಯಿತೆಂದು ಹೇಳಲಾಗಿದೆ. ಅವರನ್ನು ೧೯೫೭ ರಲ್ಲಿ ಬಂಧಿಸಿ, ೨೮ ವರ್ಷಗಳ ಕಾರಾಗೃಹ ವಾಸಕ್ಕೆ ಕಳುಹಲಾಗಿತ್ತು.

ನಗರಕ್ಕೆ ಹೊರಗಿನಿಂದ ಸಿಡುಬು ವ್ಯಾಪನೆ

ಕಳೆದ ೧೮ ನೇ ತಾರೀಖಿನಿಂದ ನಗರದಲ್ಲಿ ಹಲವು ಸಿಡುಬು ವ್ಯಾಧಿ ಕೇಸುಗಳು ವರದಿಯಾಗಿವೆ. ೧೮ನೇ ತಾರೀಖಿನ ವರೆಗೆ ೧೧ ಜನರಿಗೆ ಅದು ತಗಲಿತು. ನಜರ್‌ಬಾದ್ ಮತ್ತು ಕೃಷ್ಣರಾಜ ಮೊಹಲ್ಲಾಗಳ ಎರಡು ಮನೆಗಳಲ್ಲಿ ಖಾಯಿಲೆ ಮೊದಲಾಗಿತ್ತೆಂದೂ, ಬೆಂಗಳೂರು ಮತ್ತು ಪಟ್ಟಣಗಳಿಂದ ಇಲ್ಲಿಗೆ ವ್ಯಾಪಿಸಿತ್ತೆಂದೂ ತಿಳಿಸಲಾಗಿದೆ. ನಗರದ ಆರೋಗ್ಯ ಅಧಿಕಾರಿಗಳು ಕೂಡಲೇ ನಿರೋಧ ಕ್ರಮ ಕೈಗೊಂಡರು. ೩,೩೫೭ ಮಂದಿಗೆ ರೀ-ವ್ಯಾಕ್ಸಿನೇಷನ್ ಮತ್ತು ೬೫೦ ಮಂದಿಗೆ ವ್ಯಾಕ್ಸಿನೇಷನ್ ಮಾಡಲಾಗಿದೆ. ದೇವಿ ಹಾಕಿಸದ ಮಕ್ಕಳಿಗೆ ಕೂಡಲೇ ಹಾಕಿಸಬೇಕೆಂದು ಸೂಚಿಸಲಾಗಿದೆ. ಯುವಕರೂ ಮತ್ತು ದೊಡ್ಡವರೂ ಸಹ ಹಾಕಿಸಿಕೊಳ್ಳುವಂತೆಯೂ ತಿಳಿಸಲಾಗಿದೆ.

ಕಲೆಗಳಿಗೆ ವಿಶೇಷವಾದ ಪ್ರೋತ್ಸಾಹ ಅಗತ್ಯ

ವಿಧಾನ ಸಭಾಧ್ಯಕ್ಷ ಎಸ್. ಆರ್. ಕಂಠಿಯವರ ಭಾಷಣ

ಮೈಸೂರು ೨೫

ಚಿತ್ರಕಲಾ ಸಂಸ್ಥೆಯವರು ಏರ್ಪಡಿಸಿದ್ದ ನಾಟಕ, ನೃತ್ಯ ಮತ್ತು ಸಂಗೀತ ಸ್ಪರ್ಧೆಗಳ ಬಹುಮಾನ ವಿನಿಯೋಗ ಸಮಾರಂಭವು ವಿಧಾನ ಸಭಾಧ್ಯಕ್ಷರಾದ ಶ್ರೀ ಎಸ್ ಆರ್ ಕಂಠಿಯವರ ಅಧ್ಯಕ್ಷತೆಯಲ್ಲಿ ನೆನ್ನೆ ರಾತ್ರಿ ಟೌನ್ ಹಾಲಿನಲ್ಲಿ ನಡೆಯಿತು

ಶ್ರೀ ಕಂಠಿಯವರು ಮಾತನಾಡಿ ಕಲೆಗಳಿಗೆ ಈಗ ಸರ್ಕಾರದ ಪ್ರೋತ್ಸಾಹ ಸರಿಯಾಗಿ ದೊರಕುತ್ತಿಲ್ಲವೆಂಬುದನ್ನು ಕೇಳಿ ತಮಗೆ ವ್ಯಸನವಾಗಿರುವುದೆಂದೂ, ಹಿಂದೆ ರಾಜಮಹಾರಾಜರುಗಳು ಇದಕ್ಕೆ ಉತ್ತೇಜನವೀಯುತ್ತಿದ್ದರೆಂದೂ, ಮುಖ್ಯಮಂತ್ರಿಗಳನ್ನು ತಾವು ಕಂಡಾಗ ಈ ವಿಚಾರವನ್ನು ಅವರಿಗೆ ತಿಳಿಸುವುದಾಗಿಯೂ ಅವರು ತಿಳಿಸಿದರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎ ಸಿ. ಮಹದೇವಸ್ವಾಮಿಯವರು ಮೊದಲು ಭಾಷಣ ಮಾಡಿ, ಭಾರತೀಯ ಸಂಸ್ಕೃತಿಯಲ್ಲಿ ಕಲೆಗಳಿಗೆ ಪ್ರಾಧಾನ್ಯತೆ ದೊರೆತಿರುವುದೆಂದೂ, ಅದಕ್ಕೆ ಹಿಂದೆ ರಾಜರುಗಳು ಪೋಷಣೆಯೀಯುತ್ತಿದ್ದರೆಂದೂ, ಈಚೆಗೆ ಸರ್ಕಾರದವರು ಸಾಕಾದಷ್ಟು ಪ್ರೋತ್ಸಾಹವೀಯುತ್ತಿಲ್ಲವೆಂದೂ ತಿಳಿಸಿದರು. ಕಲೆಗಳ ಅಭಿವೃದ್ಧಿಗಾಗಿ ಸರ್ಕಾರದವರು ಒದಗಿಸಿರುವ ಹಣವು ಸಾಲದೆಂಬ ಅಭಿಪ್ರಾಯ ಪಟ್ಟರು. ಕಲೆಗಳಿಗೆ ಪ್ರೋತ್ಸಾಹವಿಲ್ಲದಿದ್ದರೆ ಅವು ನಶಿಸುವುವೆಂದೂ ಅವರು ಹೇಳಿ, ವಿಧಾನ ಸಭಾಧ್ಯಕ್ಷರು ಅದಕ್ಕೆ ನೆರವನ್ನು ಕೊಡಬೇಕೆಂದು ಕೋರಿದರು

ಕಂಟೀವನ ಅಧ್ಯಾಪಕರಾದ ಶ್ರೀ ಎಂ. ಅನಂತರಂಗಾಚಾರ್ಯರು ಭಾಷಣಮಾಡಿ ಕಲೆಗಳಿಗೆ ಎಲ್ಲರೂ ಬೆಂಬಲವನ್ನು ಕೊಡುವುದು ಅಗತ್ಯವೆಂದು ಸೂಚಿಸಿದರು

ನಂತರ ಅಧ್ಯಕ್ಷರು ಸುಮಾರು ೧೦೦ ಮಂದಿ ಶಿಲ್ಪ್ಸ್ ಮುಂತಾದ ಬಹುಮಾನ ಮತ್ತು ಪ್ರಶಸ್ತಿಪತ್ರಗಳನ್ನು ವಿನಿಯೋಗ ಮಾಡಿದರು. ನಾಟಕ ಅಸೋಸಿಯೇಷನ್ನಿನ ರಾಗಣ್ಣನ ರಥ ನಾಟಕದಲ್ಲಿ ಗಾಡಿ ಗುಂಡಣ್ಣನ ಪಾತ್ರವಹಿಸಿದ್ದ ಶ್ರೀ ಎಸ್ ರಾಘವೇಂದ್ರರಾಯರಿಗೂ ಒಂದು ಪ್ರಶಸ್ತಿ ಒಂದಿತು

ಮೊದಲು ಪ್ರಾರ್ಥನೆ ಮತ್ತು ಚಿತ್ರ ಕಲಾ ಸಂಸ್ಥೆಯ ವ್ಯವಸ್ಥಾಪಕರಿಂದ ಸ್ವಾಗತಗಳಾದುವು

ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು

ಘನವಾದ ಕ್ಲಾರಿಯೋನೆಟ್ ಕಛೇರಿ

27-7-57ನೇ ಶನಿವಾರ ಸಂಜೆ 5-30 ಗಂಟೆಗೆ

ನಗರದ ಚಾಮರಾಜ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ

ತಿರುಚ್ಚಿಯ, ಇಷ್ಟ ಚಚ್ಚಿನ ಜ್ಯೋತಿ

ಎ. ಕೆ. ಸಿ. ನಟರಾಜನ್

ಮತ್ತು ಪಾರ್ಟಿಯಿಂದ

ಮೆಂಬರಲ್ಲದವರಿಗೆ ಪ್ರವೇಶ ದರ 1-50

Edited, Printed and Published by A R Nagarajan at Sadhvi Press, D Subbiah Road Mysore

ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಸಮಾನ ದರ್ಜೆ

ಬೆಂಗಳೂರು ೨೫

ಮೊನ್ನೆ ವಿಧಾನ ಸಭೆಯಲ್ಲಿ ರೆವಿನ್ಯೂ ಮಂತ್ರಿ ಶ್ರೀ ಎಂ ಪಿ ಪಾಟೀಲರು ಮಾತನಾಡಿ, ಇಡೀ ಸಂಸ್ಥಾನಕ್ಕೆ ಒಂದೇ ಮಟ್ಟದ ರೆವಿನ್ಯೂ ಇನ್ಸ್‌ಪೆಕ್ಟರುಗಳ ಹುದ್ದೆಗಳನ್ನು ಏರ್ಪಡಿಸುವ ವಿಚಾರವನ್ನು ಪರಿಶೀಲಿಸಲಾಗುವುದೆಂದು ಸೂಚಿಸಿದರು ಈಗ ರೆವಿನ್ಯೂ ಇನ್ಸ್‌ಪೆಕ್ಟರು ಮತ್ತು ಸರ್ಕಲ್ ಆಫೀಸರ್ ಎಂಬ ಎರಡು ಪ್ರಭೇದಗಳಿವೆ

ಆರ್. ಎಂ ಡಿ. ಸಿ. ಬಾಕಿ

ಆರ್ ಎಂ ಡಿ ಸಿ ಸಂಸ್ಥೆಯವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ವಿಚಾರವಾಗಿ ಕೇಳಲಾದ ಪ್ರಶ್ನೆಗಳಿಗೆ, ಹಣಕಾಸಿನ ಸಚಿವರು, ವಿಷಯವು ಸಬ್ ಜೂಡಿಸ್ ಆದ ಕಾರಣ ಉತ್ತರ ಕೊಡಲು ನಿರಾಕರಿಸಿದರು

ಮೈಸೂರು ಸರ್ಕಾರಕ್ಕೆ ೧ ಲಕ್ಷ ರೂ ಅಥವಾ ಹೆಚ್ಚು ಬಾಕಿಯನ್ನು ಸಂಸ್ಥೆಯವರು ಕೊಡಬೇಕಾಗಿದೆಯೇ ಮತ್ತು ಅದರ ವಸೂಲಿಗಾಗಿ ಕೈಗೊಂಡ ಕ್ರಮವೇನು ಎಂದು ಶ್ರೀ ಪುಟ್ಟಣ್ಣನವರು ಪ್ರಶ್ನೆ ಮಾಡಿದ್ದರು ಆರ್ ಎಂ. ಡಿ ಸಿ ಯವರು ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ದಾವೆ ಹೂಡಿ ತೆರಿಗೆ ವಿಧಾಯಕ ವಸೂಲಿ ಮುಂತಾದುವುಗಳಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ಅಕ್ರಮವೆಂದು ಸಾರುವಂತೆ ಕೋರಿರುವುದಾಗಿಯೂ, ಈ ವಿಚಾರವನ್ನು ಪ್ರಸ್ತಾಪಿಸುವುದು ಸಬ್ ಜೂಡಿಸ್ ಆಗುವುದೆಂದೂ ಶ್ರೀ ನುರಿಯಪ್ಪನವರು ತಿಳಿಸಿದರು

ಎಷ್ಟು ಬಾಕಿ ಎಂದು ಮಾತ್ರ ಕೇಳುವಾಗ ಅದು ಹೇಗೆ ಸಬ್ ಜೂಡಿಸ್ ಆಗುವುದೆಂದು ಸದಸ್ಯರು ಸೂಚಿಸಲಾಗಿ, ಅದು ಕೋರ್ಟಿನ ಮುಂದಿರುವುದೆಂದು ಅಧ್ಯಕ್ಷರು ನುಡಿದರು ಹೆಚ್ಚಿನ ದುಡ್ಡು ಸಲ್ಲಬೇಕಾಗಿರುವುದೇ ಎಂದು ಮತ್ತೆ ಪ್ರಶ್ನೆ ಮಾಡಲಾಗಿ ಅಧ್ಯಕ್ಷರು ಮಧ್ಯ ಮಾತನಾಡಿ ಅವರು (ಸಚಿವರು) ಇದಕ್ಕೆ ಹೇಗೆ ಉತ್ತರ ಕೊಡಬಲ್ಲರೆಂದು ಪ್ರಶ್ನಿಸಿದರು ಅವರು ಉತ್ತರ ವಿತ್ತರೆ ಅವರಿಗೆ ತೊಂದರೆ ಉಂಟಾಗುವುದೆಂದೂ, ಸದಸ್ಯರು ತಮ್ಮನ್ನೂ ತೊಂದರೆಗೆ ಈಡು ಮಾಡುವುದಾಗಿಯೂ ಅಧ್ಯಕ್ಷರು ನುಡಿದರು

ಬೆಂಗಳೂರು ರೇಡಿಯೊ ಕಾರ್ಯಕ್ರಮ ಉತ್ತಮಗೊಳಿಸಲು ಒತ್ತಾಯ

ಮೊನ್ನೆ ವಿಧಾನ ಸಭೆಯಲ್ಲಿ ಕುಂದಾಪುರದ ಶ್ರೀ ವಿ ಶ್ರೀನಿವಾಸಶೆಟ್ಟರು ಪ್ರಶ್ನೆ ಮಾಡಿ, ಬೆಂಗಳೂರು ರೇಡಿಯೊ ಕಾರ್ಯಕ್ರಮಗಳ ಮಟ್ಟದ ಬಗ್ಗೆ ಜನರು ತಮ್ಮ ಕುಂದುಕೊರತೆಗಳನ್ನು ಅರಿಕೆ ಮಾಡಿಲ್ಲವೇ ಎಂದು ಕೇಳಿದರು ಮುಖ್ಯಮಂತ್ರಿಯವರು ಉತ್ತರವಿತ್ತು, ತಾವು ಹಲವು ದೂರುಗಳನ್ನು ಕೇಳಿರುವುದಾಗಿಯೂ, ಅಲ್ಲಿನ ಕಾರ್ಯಕ್ರಮಗಳ ಮಟ್ಟವನ್ನು ಉತ್ತಮಗೊಳಿಸಲು ತಾವು ಕೇಂದ್ರ ಸರ್ಕಾರವನ್ನು ಪ್ರಾರ್ಥಿಸುವುದಾಗಿಯೂ ಹೇಳಿದರು ಕಾರ್ಯಕ್ರಮದಲ್ಲಿ ಮರಾಠಿಯನ್ನು ಸೇರಿಸಲು ಯೋಚಿಸಲಾಗುತ್ತದೆಂದು ತಿಳಿಸಲಾಯಿತು.

ಮೈಸೂರು ಪೇಟೆ ಧಾರಣೆ

ಬಂಗಾರ ಮುತ್ತು ಕೊಯಮುತ್ತೂರು ಸಣ್ಣ	[illegible]	[illegible]
ರತ್ನಚೂಡಿ	[illegible]	[illegible]
ಕಾರ್‌ಸಣ್ಣ	[illegible]	[illegible]
ರಾಗಿ	[illegible]	[illegible]
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹಿಪ್ಪೆಬೀಜ	[illegible]	
ಹಿಪ್ಪೆ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆಬೇಳೆ	[illegible]	[illegible]
ಅವರೆ	[illegible]	[illegible]
ಧನಿಯ	[illegible]	
ಉದ್ದು	[illegible]	[illegible]
ಹುಣಸೇಹಣ್ಣು	[illegible]	[illegible]
ಒಣಮೆಣಸಿನಕಾಯಿ	[illegible]	
ತೆಂಗಿನಕಾಯಿ	[illegible]	[illegible]

WANTED

A Clerk on Rs 40+15 (D A) Qualifications-S S L C and Junior Typewriting Preference will be given to Rashtra bhasha passed candidates Apply before 31 7 57 to Hon Secretary, Hindi Prachara Sabha, New Sayyaji Rao Road, Mysore

SREE GAYATHRI TALKIES

From 25-7-57 For 2 days

PLEASE MURDER ME

With - Angela Lansbury, Raymond Burr

— NEXT CHANGE —

HELEN OF TROY

Morning Shows on Sat. & Sun

HIGH NOON

ರಣಜಿತ್ ★ 26-7-57ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಪ್ರದರ್ಶನಗಳು

ಸುರೇಶ್ ಚಿತ್ರಾ, ನಿಶಿ, ಹೆಲೆನ್, ಶ್ಯಾಂಕುಮಾರ್ ಪಾತ್ರವಹಿಸಿರುವ ಹಿಂದಿ ಚಿತ್ರ

★ ನಿಲೋಫರ್

ಸಂಗೀತ: ಬಸಂತ್ ಪ್ರಕಾಶ್

ಟೆಲಿಫೋನ್ ನಂ 541 ಟೆಲಿಗ್ರಾಂ: ಅಶೋಕ್

ನ್ಯೂ ಚಾಮುಂಡೇಶ್ವರಿ ಕೆಫೆ,

ಇರ್ವಿನ್ ರಸ್ತೆ, ಮೈಸೂರು

ತಾ|| 10-7-1957 ರಿಂದ ರಿಯಾಯಿತಿ ದರ

ವಿದ್ಯಾರ್ಥಿಗಳಿಗೂ ಹಾಗೂ ಬೋರ್ಡರುಗಳಿಗೂ ಊಟದ 30 ಟಿಕೆಟ್ಟುಗಳ ಪುಸ್ತಕಕ್ಕೆ ರೂ 16-8-0 ಮಾತ್ರ

ಪ್ರೊ|| ಸಿ ಬಿ ಎಂ ಚಂದ್ರಯ್ಯ.

ಚಾಮುಂಡೇಶ್ವರಿ ಟಾಕೀಸ್

26 7—57ರಿಂದ : : ಅಮೋಘ 2ನೇ ವಾರ

ಜಗನ್ನಾಥ್ ಪಿಕ್ಚರ್ಸ್‌ರವರ, ನಕ್ಕುನಲಿಸುವ ಕನ್ನಡ ಸಾಮಾಜಿಕ ಚಿತ್ರ

★ ಶುಕ್ರದೆಶೆ ★

ನಟವರ್ಗ — ಟಿ ಕೆ. ಬಾಲಚಂದರ್, ಸೂರ್ಯಕಲಾ, ಬಾಲಕೃಷ್ಣ, ಆದವಾನಿ ಲಕ್ಷ್ಮೀದೇವಿ, ರಮಾಬಾಯಿ, ಗಣಪತಿ ಭಟ್ಟ, ರಾಮಚಂದ್ರಶಾಸ್ತ್ರಿ ಮುಂತಾದವರು

[ವಿಜಯಾ ಟಾಕೀ ಡಿಸ್ಟ್ರಿಬ್ಯೂಟರ್ಸ್ ರಿಲೀಸ್

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

26-7-57ನೇ ಶುಕ್ರವಾರದಿಂದ

ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಭಲೇ-ಬಾವ

ಪಾತ್ರ: ಎಸ್ ಜಾನಕಿ, ಗಿರಿಜ, ಜಗ್ಗಯ್ಯ, ರೇಲಂಗಿ, ಗುಮ್ಮಡಿ, ಸಿ ಎಸ್. ಆರ್. ಮುಂತಾದವರು

ನ್ಯೂ ಅಪೇರಾ ಟಾಕೀಸ್, ಮೈಸೂರು ★ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ

26-7-57ರಿಂದ ಅಮೋಘ 2 ನೇ ವಾರ

ಜೆಮಿನಿ ಗಣೇಶ್, ಪದ್ಮಿನಿ, ಎಂ ಎನ್ ರಾಜಂ, ತಂಗವೇಲು, ಮತ್ತು ಟಿ. ಎಸ್ ಬಾಲಯ್ಯ ಮುಂತಾದವರು ಪಾತ್ರವಹಿಸಿರುವ,

ಪಿ.ಟಿ. ಡೆಲ್‌ರವರ ಅತ್ಯುತ್ತಮ ಸಂಗೀತ, ನೃತ್ಯ, ಹಾಸ್ಯಭರಿತ ತಮಿಳು ಚಿತ್ರ

ಮಲ್ಲಿಕಾ ★ ದಿಗ್ದರ್ಶನ ಜೋಸೆಫ್ ತಳ್ಯಾತ್ (ಜೂನಿಯರ್)

[FAIR FILMS RELEASE

ಪ್ರಭಾತ್ ಲ್ಯಾಂಡ್ಸ್ ★ 26—7—57ರಿಂದ : ಜನಭರಿತ 6ನೇ ವಾರ : ಪ್ರತಿ ದಿನ 3 ಪ್ರದರ್ಶನಗಳು

ಜುಪಿಟರ್ ಪಿಕ್ಚರ್ಸ್‌ರವರ ತಮಿಳು ಚಿತ್ರ

ಪಾತ್ರವರ್ಗ — ಜೆಮಿನಿ ಗಣೇಶ್, ಸಾವಿತ್ರಿ, ನಂಬಿಯಾರ್, ತಂಗವೇಲು, ಜಿ ವರಲಕ್ಷ್ಮಿ, ಎಂ ಕೆ ರಾಧಾ ಮುಂತಾದವರು

★ ಕರ್ಪೂರಕ್ಕರಸಿ ★

[ಶ್ರೀ ರಾಘವೇಂದ್ರಾ ರಿಲೀಸ್

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರದಿಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 2 ಪುಟ ಕ್ಕಸ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ 2 ನಯಾಪೈಸೆ

ಸಂಪುಟ : ೧೫] SADHVI : FRIDAY 26-7-1957 ಮೈಸೂರು : ಶುಕ್ರವಾರ ೨೬-೭-೧೯೫೭ : [ಸಂಚಿಕೆ : ೩೪೮

ವಿಧಾನ ಸಭೆಯಲ್ಲಿ ಎರಡು ಬಾರಿ ಸಭಾತ್ಯಾಗ ಪ್ರಕರಣ

ಹತ್ತು ವರ್ಷಗಳ ಹಿಂದಿನ ಧಾಳಿ ಮತ್ತೆ ಆದರೆ ತೀವ್ರ ಪ್ರತೀಕಾರ

ಪಾಕಿಸ್ತಾನಕ್ಕೆ ರಕ್ಷಣಾ ಮಂತ್ರಿ ವಿ. ಕೆ. ಕೃಷ್ಣಮೆನನ್ನರ ಎಚ್ಚರಿಕೆ

ಲೋಕ ಸಭೆಯಲ್ಲಿ ನೆನ್ನೆ ಕೇಂದ್ರ ರಕ್ಷಣಾ ಮಂತ್ರಿ ವಿ. ಕೆ. ಕೃಷ್ಣಮೆನನ್ನರು ಮಾತನಾಡಿ ಪಾಕಿಸ್ತಾನದೊಡನೆ ಸದಾ ಶಸ್ತ್ರಸಜ್ಜಿತ ಸನ್ನದ್ಧತೆಯಿಂದ ಕೂಡಿರುವುದು ಭಾರತ ಸರ್ಕಾರದ ನೀತಿಯಲ್ಲವೆಂದು ಹೇಳಿದರು. ಆದರೆ ೧೯೪೭ರಲ್ಲಿ ಭಾರತದ ಮೇಲೆ ಆದಂತೆ ಪುನಃ ಆಕ್ರಮಣ ನಡೆದರೆ, ಆಕ್ರಮಣಕಾರನು ಕೊಡಬಲ್ಲ ಪೆಟ್ಟಿಗಿಂತ ಬಲವಾದ ಪೆಟ್ಟನ್ನು ಭಾರತವು ಕೊಡುವುದೆಂದು ತಿಳಿಸಿದರು. ಅಮೇರಿಕದ ಸಹಾಯದಿಂದ ಪಾಕಿಸ್ತಾನದ ವಿಮಾನ ಮತ್ತು ಮಿಲಿಟರಿ ಶಕ್ತಿಯು ವಿಪರೀತವಾಗಿರುವುದೆಂದು ಹೇಳಿದರು. ಭಾರತದ ಎಲ್ಲೆಯಲ್ಲಿ ಕಾಶ್ಮೀರವೂ ಸೇರಿರುವುದಾಗಿ ಸೂಚಿಸಿ, ಅದರ ಮೇಲೆ ಆಕ್ರಮಣವಾದರೆ ವಿಶಿಷ್ಟ ಸೈನ್ಯ ಶಕ್ತಿಯಲ್ಲದೆ ಸಮಸ್ತ ಜನಶಕ್ತಿಯ ಸಹಾಯದಿಂದಲೂ ಹೋರಾಟ ನಡೆಸಲಾಗುವುದೆಂದು ಅವರು ಸ್ಪಷ್ಟಪಡಿಸಿದರು.

ಗ್ರಾಮಾಂತರದಲ್ಲಿ ಆಯುರ್ವೇದ ಮತ್ತು ಹೋಮಿಯೋಪತಿ ವೈದ್ಯ

ವಿಧಾನ ಸಭೆಯಲ್ಲಿ ಆರೋಗ್ಯ ಮಂತ್ರಿಯವರ ಹೇಳಿಕೆ

ಬೆಂಗಳೂರು ೨೬

ವಿಧಾನ ಸಭೆಯಲ್ಲಿ ಮೊನ್ನೆ ಆಯುರ್ವೇದ ಪದ್ಧತಿಯ ವೈದ್ಯ ವಿಭಾಗದ ಬೇಡಿಕೆ ಚರ್ಚೆಗೆ ಆರೋಗ್ಯ ಮಂತ್ರಿ ಶ್ರೀ ಎಂ ಪಿ ಪಾಟೀಲರು ಉತ್ತರ ನೀಡುತ್ತಾ, ಇಂಗ್ಲಿಷ್ ಪದ್ಧತಿಯನ್ನು ಅನುಸರಿಸುವ ವೈದ್ಯರು ಗ್ರಾಮಾಂತರದಲ್ಲಿ ಕೆಲಸ ಮಾಡಲು ಇಚ್ಛಿಸುತ್ತಿಲ್ಲವೆಂದೂ, ಇದರಿಂದ ಆ ಪ್ರದೇಶದಲ್ಲಿ ವೈದ್ಯರ ಅಭಾವವನ್ನು ತಪ್ಪಿಸಲು ಆಯುರ್ವೇದ ಮತ್ತು ಹೋಮಿಯೋಪತಿ ಪದ್ಧತಿಯ ವೈದ್ಯರುಗಳಿಗೆ ಉತ್ತೇಜನವೀಯಲಾಗುವುದೆಂದೂ, ಸರ್ಕಾರದವರು ಈ ಪದ್ಧತಿಗಳನ್ನು ವ್ಯವಸ್ಥೆಗೊಳಿಸಲಿರುವರೆಂದೂ ತಿಳಿಸಿದರು. ಕುಷ್ಠ ರೋಗ ಮತ್ತು ಮೋಸಗಾರಿಕೆ ವೈದ್ಯ ಪದ್ಧತಿ ಇದ್ದಿನ ಸಮಸ್ಯೆಗಳ ಬಗ್ಗೆ ಸರ್ಕಾರದವರು ಪರ್ಯಾಲೋಚಿಸುತ್ತಿರುವರೆಂದೂ ಅವರು ಹೇಳಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಗೋಟುವಾದ್ಯ ೭-೧೫ ಮತ್ತು ೮ ೧೫ ಆರ್ ಶಾಂತಿನಾಥ ದೇವರ ನಾಮ. ೭-೩೦ ಟಿ ಆರ್ ಮಹಾಲಿಂಗಂ–ಕೊಳಲು ಮಧ್ಯಾಹ್ನ ೧೨ ಎಂ ಜಿ ಸರೋಜಾ ಮತ್ತು ಎಂ. ಜಿ ಇಂದಿರಾ–ಸಂಗೀತ ಮತ್ತು ಪಿ ಟಿ ೯ ಲು ೧೨-೩೦ ಬಾಲ ಜಗತ್ ೧-೧೦ ರಿಕಾರ್ಡು. ೧-೫೦ ವೀಣೆ ಸಂಜೆ ೬-೧೦ ಮತ್ತು ೮-೧೫ ಎಂ. ಜಿ ಸರೋಜಾ ಮತ್ತು ಎಂ ಜಿ ಇಂದಿರ. ಸಂಗೀತ ಮತ್ತು ಪಿಟೀಲು ೭-೩೦ ಕನ್ನಡ ವಾರ್ತೆ. ೮ ವಿಧಾನ ಮಂಡಲದಲ್ಲಿ ೮-೩೦ ರೇಡಿಯೊ ನ್ಯೂಸ್ ರೀಲ್. ೮-೪೦ ಪ್ರಸಾರ ಗೀತೆ ೯-೧೫ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ.

ಬ್ರಿಟಿಷ್ ವಿಮಾನಗಳಿಂದ ಒಮಾರ್ ಕೋಟೆಯ ಧ್ವಂಸ

ಒಮಾನಿನ ಇಮಾಮರ ಮುಖ್ಯ ಕೇಂದ್ರವಾದ ನಿಜ್ವಾ ನಗರದ ಧಾರ್ ಕೋಟೆಯ ಮೇಲೆ ಬ್ರಿಟಿಷ್ ಜೆಟ್ ವಿಮಾನಗಳು ಧಾಳಿ ನಡೆಸಿ, ಧ್ವಂಸ ಮಾಡಿರುವುದಾಗಿ ವರದಿಯಾಗಿದೆ. ರಾಕೆಟ್ಟುಗಳನ್ನು ಸಿಡಿಸಿ ಕೋಟೆಯನ್ನು ನಿರ್ನಾಮಗೊಳಿಸಿ, ಧಾಳಿಯಲ್ಲಿ ಉಪಯೋಗಿಸಿದ ಬಗ್ಗೆ ಹೇಳಲಾಗಿದೆ. ಮಸ್ಕತ್ತಿನ ಸುಲ್ತಾನರು ಸೇನೆ ಪ್ರಾರಂಭಿಸಿದ ಸಹಾಯವನ್ನು ಕೋರಿದ್ದರೆಂಬ ವರ್ತಮಾನವನ್ನು ಬ್ರಿಟಿಷ್ ವಿದೇಶಾಂಗ ಇಲಾಖೆಯು ಸಿದ್ಧಪಡಿಸಿರುತ್ತಾರೆ.

ಬ್ರಿಟನ್ನು ವಿಮಾನ ಧಾಳಿ ನಡೆಸಿದ ಕುರಿತು ಅಮೇರಿಕವು ಸೂಚಿಸಿರುವಂತೆ, ಅರಬ್ ರಾಷ್ಟ್ರಗಳು ಮೊದಲೇ ಈ ವಿಷಯದ ಬಗ್ಗೆ ಹೆಚ್ಚಿನ ಕಾತ್ರ ಮುಖ್ಯತೆಯಿತ್ತಿವೆ... ಅವೆಲ್ಲ ಇದು ಅಧಿಕ ಪ್ರಯೋಜನ ತೀರಿಸುತ್ತಾರೆ.

ಇತಿ ಪೌರಸಭಾ ನೌಕರರ ಗ್ಯಾಂಗ್ ಮನ್ನಗಳಿಗೆ ಪರಿಹಾರ

ಮೈಸೂರು ೨೬

ನಗರದ ಪೌರಸಭಾ ಅಧಿಕಾರಿಗಳಿಗೂ, ಪಕ್ಕೆಯ ನೌಕರರ ಸಂಘದ ಪ್ರತಿನಿಧಿಗಳಿಗೂ ನೆನ್ನೆ ಅಸಿಸ್ಟೆಂಟ್ ಲೇಬರ್ ಕಮೀಷನರ ಸಮ್ಮುಖದಲ್ಲಿ ಪಂಚಾಯಿತಿ ನಡೆದು, ಕೆಲಸದಿಂದ ತೆಗೆದು ಹಾಕಲ್ಪಟ್ಟ ೩೩ ಮಂದಿ ಗ್ಯಾಂಗ್ ಮನ್ನಗಳಿಗೆ ಪರಿಹಾರವೀಯುವುದಾಗಿ ಪೌರಸಭಾಧಿಕಾರಿಗಳು ಒಪ್ಪಿರುವುದಾಗಿ ಗೊತ್ತಾಗಿದೆ. ಕೆಲಸಗಾರರಿಗೆ ಹೆಚ್ಚಿನ ಸಂಬಳವೀಯುವ ಬಗ್ಗೆ ಒಡಂಬಡಿಕೆಯಾಗಲಿಲ್ಲವಾದ ಪ್ರಯುಕ್ತ ಮುಂದಿನ ಕ್ರಮ ಜರುಗಿಸಲು ನೌಕರರ ಸಂಘದವರು ಆಲೋಚಿಸುತ್ತಿರುತ್ತಾರೆ.

ದುಡ್ಡಿನ ಹಂಚಿಕೆ ವ್ಯಾಜ್ಯದಲ್ಲಿ ನಾಸಿಕ ಛೇದನ

ಕೃಷ್ಣರಾಜ ಮೊಹಲ್ಲಾ ಗಾಡಿ ಚೌಕದ ಬಳಿ ಮೊನ್ನೆ ರಾತ್ರಿ ಲಾಡಿ ಆಟದಲ್ಲಿ ಗಳಿಸಿದ ಹಣದ ಹಂಚಿಕೆ ಬಗ್ಗೆ ವ್ಯಾಜ್ಯವುಂಟಾಗಿ ಗುಲಾಂ ಹುಸೇನ್ ಎಂಬಾತನು ಲಾಡಿ ಪುಟ್ಟ ಎಂಬಾತನ ಮೂಗನ್ನು ಕುಯ್ದನೆಂದು ವರದಿಯಾಗಿದೆ. ಗುಲಾಂ ಹುಸೇನನನ್ನು ಬಂಧಿಸಲಾಗಿದೆ. ಪುಟ್ಟನನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಇಬ್ಬರೂ ಕೇಡಿಗಳೆಂದು ಹೇಳಲಾಗಿದೆ.

ಮೈಸೂರು ಜಿಲ್ಲಾ ಬೋರ್ಡಿಗೆ ಸಲಹಾ ಸಮಿತಿಯ ನೇಮಕ

ಮೈಸೂರು ಜಿಲ್ಲಾ ಬೋರ್ಡಿಗೆ ೨೭ ಜನ ಸದಸ್ಯರುಳ್ಳ ಸಲಹಾ ಸಮಿತಿಯೊಂದನ್ನು ಸರ್ಕಾರದವರು ರಚಿಸಿರುತ್ತಾರೆ. ಬೋರ್ಡಿನ ವಿಶೇಷಾಧಿಕಾರಿಗಳು ಸಮಿತಿ ಅಧ್ಯಕ್ಷರಾಗಿರುವರು. ಜಿಲ್ಲಾ ವಿದ್ಯಾ ಮತ್ತು ವೈದ್ಯಾಧಿಕಾರಿಗಳು ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರರು ಸದಸ್ಯರಾಗಿರುವರು. ಬೋರ್ಡಿನ ಚೀಫ್ ಎಕ್ಸಿಕ್ಯೂಟಿವ್ ಅಧಿಕಾರಿಗಳು ಸಮಿತಿಯ ಕಾರ್ಯದರ್ಶಿಗಳಾಗಿರುವರು.

ಸಣ್ಣ ಪ್ರಮಾಣದ ಉಳಿತಾಯದ ಬಗ್ಗೆ ಮಂತ್ರಿಗಳ ಚಂದಾ

ಸ್ವಂ ಸು ಫೋ] ಬೆಂಗಳೂರು ೨೬

ಸಣ್ಣ ಪ್ರಮಾಣದ ಉಳಿತಾಯ ಯೋಜನೆಗೆ ಸಕಲರೂ ಬೆಂಬಲ ನೀಡಬೇಕೆಂದು ಮುಖ್ಯ ಮಂತ್ರಿಯವರು ಈ ದಿನ ಮನವಿಯೊಂದನ್ನು ಹೊರಡಿಸಿ, ಸಚಿವರುಗಳು ಈ ಬಗ್ಗೆ ಚಂದಾ ನೀಡಬೇಕೆಂದು ಸೂಚಿಸಿರುತ್ತಾರೆ.

ತಿಂಗಳಿಗೆ ಸಚಿವರು ೧೦೦ ರೂ, ಉಪಸಚಿವರು ೫೦ ರೂ, ಶಾಸನ ಸಭಾಸದಸ್ಯರು ೧೦ ರೂ. ೮೦೦ ರೂ ಗಿಂತ ಹೆಚ್ಚು ಸಂಬಳದ ಅಧಿಕಾರಿಗಳು ೩೦, ೫೦೦–೮೦೦ ರೂ ಬರುವವರು ೧೫ ೩೦೦-೫೦೦ ರೂ ವರೆಗೆ ೧೦ ರೂ, ೧೦೦ ೩೦೦ ರೂ ವರೆಗೆ ೫ ಮತ್ತು ೫೦-೧೦೦ ರವರೆಗೆ ೨, ಅದಕ್ಕೆ ಕಡಿಮೆ ಇರುವವರು ೧ ರೂ ನಂತೆ ಕೊಡಬೇಕೆಂದು ಅವರು ತಿಳಿಸಿರುತ್ತಾರೆ.

ವಿದ್ಯಾವಂತರ ನಿರುದ್ಯೋಗ ಪರಿಹಾರಕ್ಕೆ ಅಗ್ರ ಸ್ಥಾನ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಹೇಳಿಕೆ

ಬೆಂಗಳೂರು ೨೬

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಮೊನ್ನೆ ವಿಧಾನ ಸಭೆಯಲ್ಲಿ ಮಾತನಾಡಿ, ಸಂಸ್ಥಾನದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾದ ಸಕಲ ಪ್ರಯತ್ನಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು. ಈ ಸಮಸ್ಯೆಯ ಪರಿಹಾರಕ್ಕೆ ಅಗ್ರ ಸ್ಥಾನವೀಯಲಾಗುವುದೆಂದು ಅವರು ಸೂಚಿಸಿದರು. ಹಲವರು ರಾಜಕೀಯ ಕಾರಣಗಳಿಗಾಗಿ ವಿದ್ಯಾವಂತರ ನಿರುದ್ಯೋಗ ಸಮಸ್ಯೆಯನ್ನು ಉಪಯೋಗಿಸುತ್ತಿರುವರೆಂದು ಅವರು ಸೂಚಿಸಿದರು. ಎಷ್ಟು ಜನ ವಿದ್ಯಾವಂತರ ನಿರುದ್ಯೋಗಿಗಳಿರುವರೆಂಬುದು ನಿಖರವಾಗಿ ಸರ್ಕಾರಕ್ಕಾಗಲಿ, ರಾಷ್ಟ್ರಕ್ಕಾಗಲಿ ತಿಳಿದಿಲ್ಲವೆಂದು ಸೂಚಿಸಿದರು.

ಚರ್ಚೆ ಸಮಯದಲ್ಲಿ ಶ್ರೀ ಎಂ ಸಿ ನರಸಿಂಹನವರು ಮಾತನಾಡಿ ದೇಶದಲ್ಲಿ ವರ್ಷಕ್ಕೆ ೮೦ ಸಾವಿರ ಮಂದಿ ವಿದ್ಯಾವಂತ ನಿರುದ್ಯೋಗಿಗಳು ಹೆಚ್ಚುತ್ತಿರುವರೆಂದು ಹೇಳಿ, ಈ ಬಗ್ಗೆ ಅಂಕಿ ಅಂಶವನ್ನು ಸಂಗ್ರಹಿಸಬೇಕೆಂದು ಸೂಚಿಸಿದರು. ಭತ್ತವನ್ನು ಸರ್ಕಾರಕ್ಕೆ ಕೊಡುವುದಾದರೆ

ರೈತರಿಗೆ ಗೊಬ್ಬರದ ಹಂಚಿಕೆ

ಸರ್ಕಾರದಿಂದ ಪಡೆಯುವ ಗೊಬ್ಬರಕ್ಕೆ ಪ್ರತಿಯಾಗಿ ಅಕ್ಕಿ ಅಥವಾ ಭತ್ತವನ್ನು ಕೊಡಬೇಕೆಂಬ ಷರತ್ತನ್ನು ಹಾಕಲು ಸರ್ಕಾರದವರು ನಿರ್ಧರಿಸಿರುತ್ತಾರೆ.

ಪ್ರವಾಸ ಕಾಲದಲ್ಲಿ ಸಚಿವರಿಗೆ ಗೌರವ ರಕ್ಷೆ, ಹೂ ಮಾಲೆ ಇಲ್ಲ

ಬೆಂಗಳೂರು ೨೬

ಪ್ರವಾಸ ಕಾಲದಲ್ಲಿ ಸಚಿವರುಗಳಿಗೆ ಪೋಲೀಸರಿಂದ ಗೌರವ ರಕ್ಷೆಯಾಗಲೀ ಅಥವಾ ಪುಷ್ಪ ಮಾಲೆಗಳ ಅರ್ಪಣೆಯಾಗಲೀ ಕೂಡದೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ. ಸ್ವಾಗತ ಮಂಟಪ, ತೋರಣ, ಅಧಿಕಾರಿಗಳಿಂದ ಸತ್ಕಾರ ಮತ್ತು ಭೋಜನ ಕೂಟಗಳಾಗಲೀ ಕೂಡದೆಂದು ಸೂಚಿಸಲಾಗಿದೆ.

ವಿಧಾನ ಸಭೆಯಲ್ಲಿ ಇಂದು ಎರಡು ಬಾರಿ ಸಭಾತ್ಯಾಗ

ವಿರೋಧ ಪಕ್ಷದವರ ಬಗ್ಗೆ ಸಭಾಧ್ಯಕ್ಷ ಕಂಠಿಯವರ ಟೀಕೆ

ಸ್ವಂ ಸು. ಫೋ] ಬೆಂಗಳೂರು ೨೬

ವಿಧಾನ ಸಭೆಯಲ್ಲಿ ಈ ಬೆಳಿಗ್ಗೆ ಮಹಾರಾಷ್ಟ್ರ ಪ್ರದೇಶದ ಸದಸ್ಯರಿಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಸಿಗಲಿಲ್ಲವೆಂದು ಮಹಾರಾಷ್ಟ್ರದ ೪ ಮಂದಿ ಸದಸ್ಯರು ಸಭಾತ್ಯಾಗ ಮಾಡಿದರು.

ಮಧ್ಯಾಹ್ನದ ಮೇಲೆ ಶ್ರೀಮತಿ ನಾಗರತ್ನಮ್ಮ ಮತ್ತು ಇನ್ನೊಬ್ಬರು ಬಿಟ್ಟು, ವಿರೋಧ ಪಂಗಡದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು. ಸಚಿವರುಗಳು ಶ್ರೀ ಆರ್ ಚನ್ನಿಗರಾಮಯ್ಯ ಮತ್ತು ಶ್ರೀ ಹೆಚ್. ಎಸ್. ರುದ್ರಪ್ಪನವರು ಚರ್ಚೆಗೆ ಉತ್ತರ ಕೊಡುತ್ತಾಗ, ನಿಮ್ಮ ವರ್ಗದವರಿಗೆ ನಾವು ಅಷ್ಟು ಹಣವನ್ನು ಒದಗಿಸಲಿಲ್ಲವೆಂದು ಕಾರಣ ಸೂಚಿಸಿ ಸಭಾತ್ಯಾಗ ಮಾಡಲಾಯಿತು.

ಅಧ್ಯಕ್ಷರು ಮಾತನಾಡಿ, ವಿರೋಧ ಪಂಗಡದವರ ಸಭಾತ್ಯಾಗದ ಬಗ್ಗೆ ತಾವು ಆಕ್ಷೇಪಿಸುವುದಿಲ್ಲವಾದರೂ ಅವರು ಈ ವಿಚಾರವಾಗಿ ಮುಂಚೆಯೇ ನೋಟೀಸು ಕೊಡಬೇಕೆಂದು ಹೇಳಿದರು.

ಸಂಸ್ಥಾನದ ಹೈಕೋರ್ಟಿನ ಕೀರ್ತಿ ಹೆಚ್ಚಿಸಲು ಪ್ರಯತ್ನ

ನೂತನ ಶ್ರೇಷ್ಠ ನ್ಯಾಯಾಧೀಶರ ಭರವಸೆ

ಬೆಂಗಳೂರು ೨೬

ವ್ಯಕ್ತಿವ್ಯಕ್ತಿಗಳ ವ್ಯವಹಾರದಲ್ಲಿ ಮಾತ್ರವಲ್ಲದೆ ಸರ್ಕಾರ ಮತ್ತು ವ್ಯಕ್ತಿಗಳ ನಡುವಿನ ವ್ಯವಹಾರದಲ್ಲೂ ನ್ಯಾಯ ದೊರಕಿಸಿಕೊಡಲು ತಾವು ಶ್ರಮಿಸುವುದಲ್ಲದೆ, ನ್ಯಾಯಾಧೀಶರುಗಳ ಮತ್ತು ಇಲಾಖೆಯ ಇತರ ನೌಕರರ ಬಡ್ತಿ ಮೊದಲಾದುವುಗಳ ಬಗ್ಗೆಯೂ ನ್ಯಾಯ ದೊರಕಿಸಿಕೊಡಲು ತಾವು ಶಕ್ತಿಲಾದ ಮಟ್ಟಿಗೂ ಶ್ರಮಿಸುವುದಾಗಿ ನೂತನ ಶ್ರೇಷ್ಠ ನ್ಯಾಯಾಧೀಶ ಶ್ರೀ ಎಸ್. ಆರ್ ದಾಸ್ ಗುಪ್ತರವರು ನೆನ್ನೆ ಭರವಸೆ ನೀಡಿದರು. ಹೈಕೋರ್ಟಿನಲ್ಲಿ ಅವರ ಬಗ್ಗೆ ಮಾಡಲಾದ ಅಭಿನಂದನೆಗಳಿಗೆ ಉತ್ತರವೀಯುತ್ತಾ ಮೈಸೂರು ಹೈಕೋರ್ಟು ತನ್ನ ನ್ಯಾಯಾಧೀಶರ ಸತ್ಯಪ್ರಿಯತೆ ಮತ್ತು ಸಚ್ಚಾರಿತ್ರ್ಯದಿಂದ ಇತರ ಪ್ರದೇಶಗಳಿಗೆ ಮಾದರಿಯಾಗುವ ಕನಸನ್ನು ತಾವು ಕಾಣುತ್ತಿರುವುದಾಗಿಯೂ, ಅದು ನನಸಾಗಲು ಎಲ್ಲರೂ ತಮ್ಮೊಡನೆ ಸಹಕರಿಸಬೇಕೆಂದೂ ಅವರು ಸೂಚಿಸಿದರು.

ಮೈಸೂರಿನಿಂದ ನೆನ್ನೆ ಇಲ್ಲಿಗೆ ಹಿಂದಿರುಗಿದ ನಂತರ ಅವರು ಅಧಿಕಾರವನ್ನು ವಹಿಸಿದರು. ಕೋರ್ಟಿನಲ್ಲಿ ಅವರನ್ನು ವಕೀಲರ ಪರವಾಗಿ ಶ್ರೀ ಯತಿರಾಜುಲುರವರು ಸ್ವಾಗತಿಸಿ, ನೂತನವಾಗಿ ರಚಿತವಾದ ಪ್ರಾಂತದ ಹೈಕೋರ್ಟಿನ ಮುಖ್ಯರಾಗಿ ಅವರು ಬಂದಿರುವುದನ್ನು ಪ್ರಶಂಸಿಸಿದರು.

ಬ್ರಿಟಿಷ್ ಸೈನ್ಯದಲ್ಲಿ ಅರ್ಧದಷ್ಟು ಕಡಿತ

ಬರುವ ೫ ವರ್ಷಗಳೊಳಗೆ ಬ್ರಿಟನ್ನಿನ ಸೈನ್ಯ ಪ್ರಮಾಣವನ್ನು ಅರ್ಧದಷ್ಟು ಇಳಿಸಲಾಗುವುದು

ಅಣು ಶಕ್ತಿ ಉತ್ಪನ್ನದಲ್ಲಿ ಭಾರತದ ಪ್ರಗತಿ

ಅಣು ಶಕ್ತಿ ಉತ್ಪನ್ನದಲ್ಲಿ ಭಾರತವು ಬಹಳ ಮುಂದುವರಿದಿದೆಯೆಂದು ಪ್ರಧಾನಿ ನೆಹರೂರವರು ತಿಳಿಸಿ, ಈ ಬಗ್ಗೆ ಡೆನ್ಮಾರ್ಕಿನ ಪ್ರೊ॥ ನೀಲ್ಸ್ ಭೋರ್‌ರವರೇ ಮೊದಲಾದ ವಿಖ್ಯಾತ ವಿಜ್ಞಾನಿಗಳು ಬಹಳವಾಗಿ ಪ್ರಶಂಸಿಸಿರುವರೆಂದೂ ಹೇಳಿರುತ್ತಾರೆ. ಭಾರತದಲ್ಲಿ ಅಣು ಶಕ್ತಿಯನ್ನು ಶಾಂತಿ ಕೆಲಸಗಳಿಗಾಗಿಯೇ ಉತ್ಪಾದನೆ ಮಾಡಲಾಗುವುದೆಂದೂ ಅವರು ಸೂಚಿಸಿರುವರು ೫೪ರಲ್ಲಿ ಅಣು ಶಕ್ತಿ ಉತ್ಪನ್ನಕ್ಕಾಗಿ ೧ ಕೋಟಿ ರೂ. ವೆಚ್ಚ ಮಾಡಲಾಗಿತ್ತೆಂದೂ, ಈ ವರ್ಷ ೧೨ ಕೋಟಿ ರೂ ವೆಚ್ಚ ಮಾಡಲಾಗುವುದೆಂದೂ ನೆಹರೂರವರು ನುಡಿದಿರುವರು

ಸುಹ್ರಾವರ್ದಿಯವರ ಪ್ರವಾಸ ಕಾರ್ಯಕ್ರಮ ಹಠಾತ್ತನೆ ರದ್ದು

ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ಈ ತಿಂಗಳ ಕಡೆಯಲ್ಲಿ ಇಟ್ಟುಕೊಂಡಿದ್ದ ಚೀನಾ ದೇಶದ ಪ್ರವಾಸ ಕಾರ್ಯಕ್ರಮವನ್ನು ರದ್ದುಗೊಳಿಸಿರುತ್ತಾರೆ. ಕೂಡಲೇ ಸ್ವದೇಶಕ್ಕೆ ಹಿಂದಿರುಗುವಂತೆ ಮಂತ್ರಿಮಂಡಲದ ಸದಸ್ಯರು ಜರೂರಾಗಿ ಕರೆಯುತ್ತಿದ್ದರಿಂದ ಸುಹ್ರಾವರ್ದಿಯವರು ಆಗಸ್ಟ್ ಒಂದು ಕರಾಚಿಗೆ ವಾಪಸು ಬರುವರು ಪಾಕಿಸ್ತಾನದಲ್ಲಿ ರಾಜಕೀಯ ಸ್ಥಿತಿಯು ಬಿಕ್ಕಟ್ಟಿನ ರೂಪ ತಾಳುತ್ತಿರುವುದೆಂದೂ ಅದಕ್ಕಾಗಿಯೇ ಅವರನ್ನು ವಾಪಸು ಕರೆಯಲಾಗಿದೆಯೆಂದೂ ಹೇಳಲಾಗಿದೆ.

ಕಾಲೇಜು ವಿದ್ಯಾರ್ಥಿವೇತನಗಳನ್ನು ಕಲ್ಪಿಸಲು ಕೆನರಾ ಬ್ಯಾಂಕಿನ ವ್ಯವಸ್ಥೆ

ಕೆನರಾ ಬ್ಯಾಂಕಿನ ಜೂಬಿಲಿ ಉತ್ಸವದ ವಿದ್ಯಾನಿಧಿಯ ಆಡಳಿತ ಸಮಿತಿಯವರು ಈ ವರ್ಷ ಒಟ್ಟು ೧೨,೪೫೦ ರೂ. ಗಳ ಕಾಲೇಜು ವಿದ್ಯಾರ್ಥಿ ವೇತನಗಳನ್ನು ಕಲ್ಪಿಸಲಿರುವರು ವಾರಿಶ್ರಮಿಕ ಶಿಕ್ಷಣ ಪಡೆಯಲು ೯೭ ಮಂದಿ ಹೊಸ ವಿದ್ಯಾರ್ಥಿಗಳಿಗೆ ಅದನ್ನು ಕೊಡಲಾಗುವುದು ಕಳೆದ ವರ್ಷ ಕೊಡಲಾದ ಇಂತಹ ವೇತನವನ್ನು ಈ ವರ್ಷವೂ ಮುಂದುವರಿಸಲಾಗಿದೆ ಆಂಧ್ರ ಮತ್ತು ಕೇರಳಗಳಲ್ಲಿ ತಲಾ ಇಬ್ಬರಿಗೂ, ಮದ್ರಾಸು ಮತ್ತು ಬೊಂಬಾಯಿಗಳಲ್ಲಿ ತಲಾ ಮೂವರಿಗೂ ಮತ್ತು ಮೈಸೂರಿನಲ್ಲಿ ಏಳು ಮಂದಿಗೂ ಈ ಸೌಲಭ್ಯವನ್ನು ಕಲ್ಪಿಸಲಾಗುವುದು.

ಅಂಗಡಿ ಕಾನೂನಿನ ಉಲ್ಲಂಘನೆಗಾಗಿ ದಂಡ

ಅಂಗಡಿ ಕಾನೂನಿನ ಉಲ್ಲಂಘನೆಗಾಗಿ ಇನ್‌ಸ್ಪೆಕ್ಟರ್ ಶ್ರೀ ರತನ್‌ಸಿಂಗ್‌ರವರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಈ ಕೆಳಗಿನಂತೆ ಶಿಕ್ಷೆ ವಿಧಿಸಿರುತ್ತಾರೆ:—ಹಳೇ ಬ್ಯಾಂಕ್ ರಸ್ತೆಯ ಪ್ರಕಾಶ್ ಕ್ಲಾತ್ ಎಂಪೋರಿಯಮ್ಮಿನ ಶ್ರೀ ಪಿ. ಜೆ. ಶೇಷಗಿರಿರಾವ್, ಚಿಂಕಿ ಪವಾಬರ ಬೀದಿಯ ಲಿಬರ್ಟಿ ಕ್ಲಾತ್ ಎಂಪೋರಿಯಮ್ಮಿನ ಶ್ರೀ ಕೃಷ್ಣದಾಸ್, ಮಹಾತ್ಮಾಜಿ ಚೌಕದ ಗುಜರಿ ಗಲ್ಲಿಯ ಧನಲಕ್ಷ್ಮಿ ಕ್ಲಾತ್‌ಹಾಲಿನ ಶ್ರೀ ಪಿ.ಕೆ ಗಂಗಾರಾಮರಾವ್, ಅದೇ ಬೀದಿಯ ಬಟ್ಟೆ ಅಂಗಡಿಗಳ ಶ್ರೀ ಎಸ್. ಆರ್. ಆರ್ಮುಗಂ ಮತ್ತು ಶ್ರೀ ಹನುಮಾನ್‌ದಾಸ್ ಮತ್ತು ಮಹಾತ್ಮಾಜಿ ಚೌಕದ ಬಟ್ಟೆ ಅಂಗಡಿಯ ಶ್ರೀ ಡಿ ಎ ದೊರೆಸ್ವಾಮಿಯವರಿಗೆ ತಲಾ ೫ ರೂ ದಂಡ

ಜಮೀನುದಾರರ ಸಭೆ

ನಗರದ ಭೂ ಮಾಲೀಕರ ಸಭೆಯು ಮೊನ್ನೆ ಪೌರಸಭಾಧ್ಯಕ್ಷ ಶ್ರೀ ಎಸ್ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಹೊಸ ಭೂ ಶಾಸನದ ವಿಚಾರವನ್ನು ಪರಿಶೀಲಿಸಲಾಯಿತು ಜಮೀನುದಾರರ ಕುಂದುಕೊರತೆಗಳನ್ನು ಕುರಿತು ಮನವಿಯನ್ನು ಸಲ್ಲಿಸಲು ಸಮಿತಿಯೊಂದನ್ನು ರಚಿಸಲಾಯಿತು ಪೌರಸಭಾಧ್ಯಕ್ಷ ಶ್ರೀ ಎಸ್. ಸಂಜೀವಯ್ಯನವರು ಸಂಚಾಲಕರಾಗಿರುವರು. ಶ್ರೀಗಳಾದ ಎಂ ರಾಮಸ್ವಾಮಿ, ಬಿ. ಜಿ ದಾಸ್ ಎಂ ಎಸ್. ರಾಮಲಿಂಗಂ, ಜಿ ಎಸ್. ರಾಮಕೃಷ್ಣಯ್ಯ, ವಿ. ಕೆ ಶ್ರೀನಿವಾಸನ್ ಎ ಎಸ್ ಅನಂತರಾಂ ಮತ್ತು ಕೆ. ಶ್ರೀನಿವಾಸಯ್ಯಂಗಾರ್ಯರು ಸದಸ್ಯರಾಗಿರುವರು

ಕೊಲೆಗಾಗಿ ಜೀವಾವಧಿ ಸಜಾ

ಮೈಸೂರು ೨೫

ಯಳಂದೂರು ತಾಲ್ಲೂಕು ಯರಿಯೂರು ಗ್ರಾಮದ ರಾಮನಾಯಕನು ತನ್ನ ಸಹೋದರ ಮಾದನಾಯಕನನ್ನು ಕಳೆದ ವರ್ಷ ನವೆಂಬರಿನಲ್ಲಿ ಕೊಲೆ ಮಾಡಿದನೆಂದು ಅವನಿಗೆ ಜೀವಾವಧಿ ಸಜಾವನ್ನು ಸೆಷನ್ಸ್ ನ್ಯಾಯಾಧೀಶರು ವಿಧಿಸಿರುತ್ತಾರೆ.

ದೇವಪ್ಪ ಶಾಸ್ತ್ರಿಗಳಿಗೆ ಶೃಂಗೇರಿ ಸ್ವಾಮಿಗಳವರ ಬಹುಮಾನ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಜ್ಯೋತಿಷ್ಯ ವಿದ್ವಾಂಸರಾದ ಶ್ರೀ ಕೆ ವಿ ದೇವಪ್ಪ ಶಾಸ್ತ್ರಿಗಳವರಿಗೆ ಕುಣಿಗಲ್ಲಿನಲ್ಲಿ ತಂಗಿರುವ ಶೃಂಗೇರಿ ಜಗದ್ಗುರುಗಳು ಶ್ರೀ ಶಾಲು ಜರಿ ಪತಾಕೆಯೂ ಬೆಳ್ಳಿ ಪದಕವನ್ನು ಮಂತ್ರಾಕ್ಷತೆಯೊಡನೆ ಆಶೀರ್ವಾದ ಪೂರ್ವಕವಾಗಿ ದಯಪಾಲಿಸಿರುತ್ತಾರೆ. ಶ್ರೀ ಶಾಸ್ತ್ರಿಗಳು ಶ್ರೀ ಶ್ರೀಗಳವರ ಜನ್ಮ ಕುಂಡಲಿ, ಸನ್ಯಾಸ ಮತ್ತು ಪಟ್ಟಾಭಿಷೇಕದ ಕಾಲದ ಕುಂಡಲಿಗಳನ್ನು ಗುರುಗಳ ಸನ್ನಿಧಿಗೆ ಅರ್ಪಿಸಿದ್ದರು

ಹರಿಕಥೆ ಮತ್ತು ದೇವರಿಗೆ ಅಲಂಕಾರ

ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಆಷಾಢ ಶುಕ್ರವಾರದ ಪ್ರಯುಕ್ತ ಈ ಸಂಜೆ ೭ ಗಂಟೆಗೆ ಭದ್ರಾವತಿಯ ಶ್ರೀ ವೆಂಕಟೇಶದಾಸರಿಂದ 'ಭಕ್ತ ಮೀರಾಬಾಯಿ' ಎಂಬ ಹರಿಕಥೆ ನಡೆಯುವುದು ಅಮ್ಮನವರಿಗೆ ಚಾಮುಂಡೇಶ್ವರಿ ಅಲಂಕಾರವಿದೆ. ನಾಳೆ ಸಂಜೆ ಅದೇ ಶ್ರೀ ದಾಸರಿಂದ ಚಂದ್ರಹಾಸ ಎಂಬ ಹರಿಕಥೆ ಇದೆ ಅಮ್ಮನವರಿಗೆ ಕಾಳಿ ಅಲಂಕಾರ ಹಾಕಲಾಗುವುದು

ಕೇಸರಿ ಬಣ್ಣದ ಬೇಳೆ ಬಳಕೆಯಿಂದ ತೊಂದರೆ

ಕೇಸರಿ ವರ್ಣದ ತೊಗರಿಬೇಳೆಯನ್ನು ಉಪಯೋಗಿಸುವುದರಿಂದ ಲಾಥಿರಿಸಂ ಎಂಬ ಒಂದು ವಿಧದ ವ್ಯಾಧಿಯು ತಗಲುವುದೆಂದು ಸಂಸ್ಥಾನದ ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ ಈ ವ್ಯಾಧಿಯಿಂದ ಮಾಂಸಖಂಡಗಳಲ್ಲಿ ಬಿರುಕುಗಳು ಬಿಡುವುವೆಂದೂ ಅದರಿಂದ ಕ್ರಮಕ್ರಮವಾಗಿ ನಡೆಯಲು ನಿಶ್ಶಕ್ತಿಯುಂಟಾಗುವುದೆಂದೂ ತಿಳಿಸಲಾಗಿದೆ ದಿನವೆಲ್ಲಾ ಕಷ್ಟಪಟ್ಟು ಕೆಲಸ ಮಾಡಿ ಮನುಷ್ಯನು ರಾತ್ರಿ ನಿದ್ದೆ ಹೋದರೆ ಬೆಳಗಿನ ಹೊತ್ತಿಗೆ ಅವನ ಶರೀರವು ಗಡುಸಾಗಿ, ನಿಶ್ಶಕ್ತಿ ಅಧಿಕವಾಗಿ ಕಾಣುವುದೆಂದೂ, ಕಾಲುಗಳು ನಡುಗುವುವೆಂದೂ ಹೇಳಲಾಗಿದೆ ೧೦ ದಿನಗಳಾದನಂತರ ಕೈಯಲ್ಲಿ ಕೋಲಿಲ್ಲದೆ ಮನುಷ್ಯನು ನಡೆಯಲು ಸಾಧ್ಯವಾಗುವುದಿಲ್ಲವೆಂದೂ ಸೂಚಿಸಲಾಗಿದೆ

ಭಾರತ ಸರ್ಕಾರದಿಂದ ೧೦೦ ಕೋಟಿ ರೂ. ಸಾಲ

ಭಾರತ ಸರ್ಕಾರದವರು ೧೯೬೭ ಮತ್ತು ೭೨ ರಲ್ಲಿ ತೀರ್ಮಾನವಾಗುವ ಶೇಕಡ ೩॥। ಮತ್ತು ೪ರ ಒಟ್ಟು ೧೦೦ ಕೋಟಿ ರೂ.ಗಳ ಎರಡು ಸಾಲಗಳನ್ನು ಎತ್ತಲಿರುವರೆಂದು ಪ್ರಕಟಿಸಲಾಗಿದೆ ಮೊದಲಿನದಕ್ಕೆ ಕೊಡುವ ಹಣವು ಪ್ರತಿ ನೂರು ರೂ ಗೆ ೯೯–೫ ರೂ ಮತ್ತು ಎರಡನೆಯದಕ್ಕೆ ನೂರಕ್ಕೆ ನೂರು ರೂ.

ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು

ಘನವಾದ ಕ್ಲಾರಿಯೊನೆಟ್ ಕಛೇರಿ

27-7-57ನೇ ಶನಿವಾರ

ಸಂಜೆ 5-30 ಗಂಟೆಗೆ

ನಗರದ ಚಾಮುರಾಜ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ

ದಕ್ಷಿಣ ಭಾರತದ ಸಂಗೀತ ಪ್ರಪಂಚದಲ್ಲಿ ಖ್ಯಾತಿಪಡೆದಿರುವ

ತಿರುಚ್ಚಿಯ, ಅಸ್ಥಾನ ವಿದ್ವಾನ್ ಜ್ಯೋತಿ

ಎ. ಕೆ. ಸಿ. ನಟರಾಜನ್

ಮತ್ತು ಪಾರ್ಟಿಯಿಂದ

ಮೆಂಬರಲ್ಲದವರಿಗೆ ಪ್ರವೇಶ ದರ 1-8 0

ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ

Edited, Printed and Published by A. R. Nagarajan at Sadhvi Press, D.Subbiah Road Mysore

ನಂಜನಗೂಡು ವಿದ್ಯಾಪೀಠಕ್ಕೆ ಅಮೆರಿಕದ ಪ್ರವೀಣರ ಭೇಟಿ

ನಂಜನಗೂಡು ೨೫

ನೇಪಾಳದಲ್ಲಿರುವ ಅಮೆರಿಕಾ ವಿದ್ಯಾ ಪ್ರವೀಣರಾದ ಮಿ॥ ಎಡ್ವರ್ಡ್ ಡಬ್ಲ್ಯೂ ಬ್ರೈಸ್ ಮತ್ತು ಮಿ॥ ಹೆರಾಲ್ಡ್ ಎಲ್. ಡ್ಯೂಸೆಂಬೆರಿಯವರು ಕಳೆದ ಸೋಮವಾರ ಇಲ್ಲಿನ ವಿದ್ಯಾ ಪೀಠಕ್ಕೆ ಭೇಟಿಯಿತ್ತರು ಅವರೊಡನೆ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ ಶ್ರೀ ಎ ಭದ್ರಯ್ಯ ಮತ್ತು ಡೆಪ್ಯುಟಿ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಶ್ರೀ ಬಿ. ವಿ ಸತ್ಯನಾರಾಯಣರವರು ಭೇಟಿಯಿತ್ತರು ಅವರುಗಳಿಗೆ ಶಾಲಾ ಕಾರ್ಯ ಚಟುವಟಿಕೆಗಳ ಪರಿಚಯ ಮಾಡಲಾಯಿತು ವಿದ್ಯಾ ಪೀಠದ ವಿದ್ಯಾರ್ಥಿಗಳು ಅವರ ಸಮ್ಮುಖದಲ್ಲಿ ಕೋಲಾಟವನ್ನು ಆಡಿದರು. ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ನೆಲಸಿ ಕೆಲಸ ಮಾಡಬೇಕೆಂದು ಅತಿಥಿಗಳು ತಿಳಿಸಿದರು. ಮಿ॥ ಡ್ಯೂಸೆಂಬೆರಿಯವರು ಹಿಂದಿನ ೫೦ ವರ್ಷಗಳ ಕೆಳಗೆ ತಮ್ಮ ದೇಶದ ಜನರಲ್ಲಿ ಉಂಟಾದ ಬದಲಾವಣೆಯನ್ನು ವಿವರಿಸಿ, ಈಗ ಎಲ್ಲೆಲ್ಲೂ ಮುಖ್ಯವಾಗಿ ಭಾರತ ಮತ್ತು ಆಫ್ರಿಕಗಳಲ್ಲಿ ಜೀವನದಲ್ಲಿ ಬದಲಾವಣೆಯಾಗುತ್ತಿರುವುದಾಗಿ ಸೂಚಿಸಿದರು

ಮಿ॥ ಬ್ರೈಸ್‌ರವರು ಮಾತನಾಡಿ ಮಹಿಳೆಯರ ವಿದ್ಯಾಭ್ಯಾಸ ಹೆಚ್ಚಬೇಕೆಂದೂ, ಒಬ್ಬ ಹೆಂಗಸನ್ನು ವಿದ್ಯಾವಂತಳನ್ನಾಗಿ ಮಾಡಿದರೆ ಇಡೀ ಮನೆತನಕ್ಕೆ ವಿದ್ಯಾಭ್ಯಾಸ ಮಾಡಿಸಿದಂತಾಗುವುದೆಂದೂ ಸೂಚಿಸಿದರು

ಒಲಂಪಿಯಾ 26 7-57ರಿಂದ ಪ್ರತಿದಿನ 3 ಆಟಗಳು

ಅಮರಸಿಂಗ್ ರಾಥೂರ್

ಪಾತ್ರ.—ಜಯರಾಜ್, ನಿರೂಪರಾಯ್, ಅಲ್ಹಾಸಿರ್, ವೀಣಾ ಮತ್ತು ಸುಂದರ್

ಲಕ್ಷ್ಮಿ ★ 26—7—57ನೇ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು

ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ (ತಮಿಳು)

ಪಾತ್ರ:—ಎ. ನಾಗೇಶ್ವರರಾವ್, ಅಂಜಲಿ, ಎಸ್. ವಿ. ರಂಗರಾವ್, ತಂಗವೇಲು, ಟಿ. ಎಸ್. ಬಾಲಯ್ಯ ಮುಂತಾದವರು

ಗೋವಾ-ಡಾಮನ್-ಡಯೂ ವಿಮಾನ ಸಂಚಾರ ಪುನಃ ಆರಂಭ

ಭಾರತದ ಪೋರ್ಚುಗೀಸ್ ವಸಾಹತುಗಳಾದ ಗೋವಾ-ಡಾಮನ್-ಡಯೂ ಪ್ರದೇಶಗಳ ನಡುವೆ ಪುನಃ ವಿಮಾನ ಸಂಚಾರವನ್ನು ಆರಂಭಿಸಲಾಗುವುದೆಂದು ಗೋವಾ ರೇಡಿಯೋ ತಿಳಿಸಿದೆ. ಭಾರತದ ವಾಯು ಮಂಡಲದ ಉಲ್ಲಂಘನೆಯ ಗುತ್ತಿದೆಯೆಂಬ ದೂರಿನ ಮೇಲೆ ಹಲವು ತಿಂಗಳ ಹಿಂದೆ ಸಂಚಾರವನ್ನು ನಿಲ್ಲಿಸಲಾಗಿತ್ತು

ವನ ಮಹೋತ್ಸವ

ವನ ಮಹೋತ್ಸವದ ಅಂಗವಾಗಿ ಮೈಸೂರು ನಗರದಲ್ಲಿ ೩,೦೦೦ ಗಿಡಗಳನ್ನು ನಾಟಬೇಕೆಂದು ಪೌರಸಭೆಯವರು ನಿರ್ಧರಿಸಿ ಹೊಸ್ತ ನಗರದ ಪೀಪಲ್ಸ್ ಪಾರ್ಕ್ (ಪ್ರೂಡೆನ್ಸ್ ಪಾರ್ಕ್) ನಲ್ಲಿ ನಲವತ್ತು ಗಿಡಗಳನ್ನು ನೆಟ್ಟಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಬಂಗಾರ ಮುತ್ತು		
ಕೊಯಮುತ್ತೂರು ಹತ್ತಿ	[illegible]	[illegible]
ರಸ್ತುಹೂವಿ	[illegible]	[illegible]
ಕಾರ್ಲಹತ್ತಿ	[illegible]	[illegible]
ಕಡ್ಲೆ	[illegible]	
ರಾಗಿ	[illegible]	[illegible]
ಕಡಲೆಕಾಯಿ	[illegible]	[illegible]
ಹರಳುಬೀಜ	[illegible]	[illegible]
ಹುಚ್ಚೆಳ್ಳು	[illegible]	
ಹಿಪ್ಪೆ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	
ಹಲಸಂದಿ	[illegible]	[illegible]
ಅವರೆ	[illegible]	
ಧನಿಯ	[illegible]	[illegible]
ಉದ್ದು	[illegible]	[illegible]
ಹುಣಿಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

C. T. C PUBLICATIONS

B A , B Sc., ತರಗತಿಗಳ ಪಠ್ಯಪುಸ್ತಕಗಳು

(1958ನೇ ಸಾಲಿಗೆ)

ಅಂಕಿಗೊನೆ

ಎಂಬ ಗ್ರಂಥದ ಭಾವಾನುವಾದ ಪಾತ್ರಪರಿಚಯ, ಟಿಪ್ಪಣಿ ಮತ್ತು ಪ್ರಶ್ನೋತ್ತರಗಳು

ಬೆಲೆ : ೧–೨೫

— Publishers :—

CITY TUTORIAL COLLEGE, MYSORE

BUNGALOW FOR SALE

Big up-staired Bungalow in Kantharaj Urs Road, K. M. Puram, for immediate Sale.

Enquire at :

JAYA & CO.,

House, Estate & Finance Agents Old Mysore Bank Road, MYSORE

Phone No. 520

ಪ್ರಭು ದೇವಾ ಥಿಯೇಟರ್ (ಹವಾ ಟಾಕೀಸ್)

26-7-57ನೇ ಶುಕ್ರವಾರದಿಂದ

ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಭಲೇ-ಬಾವ

ಪಾತ್ರ: ಎನ್ ಟಿ. ರಾಮರಾವ್, ಗಿರಿಜ, ಜಗ್ಗಯ್ಯ, ರೇಲಂಗಿ, ಸುಬ್ಬಮ್ಮ, ಸಿ. ಎಸ್. ಆರ್. ಮುಂತಾದವರು

ರಿಜಿಸ್ಟರ್ ನಂ. 794

ಇಂದಿನ ಪತ್ರಿಕೆ 2 ಪುಟ ಮಾತ್ರ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದೇ ಭೇಟಿ ಕೊಡಿ
ಎಲ್ಲಾ ತರಹ
ಚಿನ್ನ ಬೆಳ್ಳಿ ಒಡವೆಗಳಿಗೆ
ಖಾತ್ರಿಯಾದ ಅಂಗಡಿ
ಎ. ಎಗ್. ಭಾಸ್ಕರ ಶೆಟ್ಟಿ
ಅಂಡ್ ಸನ್ಸ್
ಸಯ್ಯಾಜಿ ರಾವ್ ರಸ್ತೆ,
ಮೈಸೂರು

ಸಂಪುಟ : ೧೫] SADHVI : SATURDAY 27—7—1957 ಮೈಸೂರು : ಶನಿವಾರ ೨೭—೭—೧೯೫೭ : [ಸಂಚಿಕೆ : ...

ಅಂಚೆ ನೌಕರರ ಮುಷ್ಕರ ತಪ್ಪಿಸುವ ಸಂಧಾನ ವಿಫಲ

ನಗರದಲ್ಲಿ ೯ನೇ ತಾರೀಕಿನಿಂದ ಅಂಚೆ ನೌಕರರ ಮುಷ್ಕರ

ಯಶಸ್ವಿಯಾಗಿ ನಡೆಸಲು ಸಿದ್ಧತೆ

ಮೈಸೂರು ೨೭

ನಗರದ ಅಂಚೆ ಮತ್ತು ತಂತಿ ನೌಕರರ ಪ್ರತಿನಿಧಿಗಳ ಸಭೆಯು ನೆನ್ನೆ ನಡೆದು, ಬರುವ ತಿಂಗಳು ೮ನೇ ತಾರೀಕಿನ ಮಧ್ಯರಾತ್ರಿಯಿಂದ ಸಾರ್ವತ್ರಿಕ ಮುಷ್ಕರ ನಡೆಸಲು ಪೂರ್ಣ ಅಧಿಕಾರವುಳ್ಳ ೯ ಜನರ ಸದಸ್ಯರ ಜಂಟಿ ಸಮಿತಿಯೊಂದನ್ನು ರಚಿಸಲಾಯಿತು. ಮುಷ್ಕರಕ್ಕೆ ಬೆಂಬಲ ಪಡೆಯಲು ಸಾರ್ವಜನಿಕರು ಮತ್ತು ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಮತ್ತು ವಕೀಲರಿಂದ ಕೂಡಿದ ಲೀಗಲ್ ಏಡ್ ಸಮಿತಿಗಳನ್ನು ರಚಿಸಲು ನಿರ್ಧರಿಸಲಾಯಿತು. ಬಹಳ ದಕ್ಷತೆ ಮತ್ತು ಶಾಂತಿಯುತವಾಗಿ ಮುಷ್ಕರವನ್ನು ನಡೆಸಲು ೧೦೦ಕ್ಕಿಂತ ಹೆಚ್ಚು ಜನ ಅಂಚೆ ಮತ್ತು ತಂತಿ ನೌಕರರುಳ್ಳ ಸ್ವಯಂಸೇವಕರ ದಳಗಳನ್ನು ಏರ್ಪಡಿಸಲಾಗುವುದು

ಜಿಲ್ಲಾ ಬೋರ್ಡ್ ಸಲಹಾ ಸಮಿತಿ ಸದಸ್ಯರು

ಮೈಸೂರು ಜಿಲ್ಲಾ ಬೋರ್ಡಿನ ಸಲಹಾ ಸಮಿತಿ ಸದಸ್ಯರಾಗಿ ಕೆಳಗೆ ಕಂಡವರನ್ನು ನೇಮಿಸಲಾಗಿದೆ:- ಶ್ರೀಗಳಾದ ಕೆ ಪಿ ಕರಿಯಪ್ಪ, ಹೆಚ್. ಸಿ ವಿಶ್ವನಾಥ್, ಹೆಚ್. ಎ ರಾಮಸ್ವಾಮಿ, ಹೆಚ್ ಎಲ್. ತಿಮ್ಮೇಗೌಡ, ಸೀತಾರಾಂ, ಎ ಚಿನ್ನಸ್ವಾಮಿ, ಡಿ ಜಯದೇವರಾಜ ಅರಸ್, ಎಂ. ಚಂದ್ರಶೇಖರ್, ಎಸ್ ಪುಟ್ಟಸ್ವಾಮಿ, ಕೆ ಪುಟ್ಟರಂಗನಾಯಕ್, ಸಿದ್ದಯ್ಯ, ಬಿ ಎಂ ಮಲ್ಲಯ್ಯ, ಎ. ಮಹದೇವಶೆಟ್ಟಿ, ನಾಟಕದ ಬಸವಯ್ಯ, ಹೆಚ್. ಕೆ. ಶ್ರೀನಿವಾಸ್, ಶಿವಪ್ಪಾಜಿ, ಎಗ್ ರಾಚಯ್ಯ, ಎಂ. ಬಿ ಚನ್ನಮಲ್ಲಪ್ಪ, ಎಂ ಮರಿಗೌಡ, ಪುಟ್ಟಮಲ್ಲಪ್ಪ, ಡಿ ಸೂರ್ಯನಾರಾಯಣ,ಸಿ. ನಾಗರಾಜಪ್ಪ, ಹೆಚ್.ಕೆ. ಶಿವರುದ್ರಪ್ಪ, ಬಿ. ಚಿಕ್ಕಣ್ಣ, ರಹಮತುಲ್ಲಾ ಖಾನ್, ಎಸ್ ಹೆಚ್. ತಮ್ಮಯ್ಯ ಮತ್ತು ವೈ. ಎಗ್. ನಂಜುಂಡಪ್ಪ.

ಜಪಾನಿನಲ್ಲಿ ಭೀಕರ ಮಳೆ ಮತ್ತು ಪ್ರವಾಹದ ಹಾವಳಿ

೩೦೦ ಮರಣ ಮತ್ತು ೧॥ ಲಕ್ಷ ಸಂಸಾರಗಳಿಗೆ ನಿರಾಶ್ರಯ

ಜಪಾನಿನ ದಕ್ಷಿಣ ದ್ವೀಪವಾದ ಕಿಯುಷುವಿನಲ್ಲಿ ವಿಪರೀತ ಮಳೆ ಮತ್ತು ಪ್ರವಾಹಗಳಿಂದ ೩೦೦ ಕ್ಕೂ ಹೆಚ್ಚು ಜನರು ಮಡಿದು,೩೦೦ ಮಂದಿ ನಾಪತ್ತೆಯಾಗಿರುವರೆಂದು ವರದಿಯಾಗಿದೆ ಜಪಾನಿನ ಚರಿತ್ರೆಯಲ್ಲೇ ಇಂತಹ ಭಾರಿ ಅನಾಹುತವಾಗಿರಲಿಲ್ಲ. ಸಹಸ್ರಾರು ಮಂದಿ ಸತ್ತಿರುವರೆಂದು ಅನಧಿಕೃತವಾಗಿ ಹೇಳಲಾಗುತ್ತಿದೆ ನಗರ ಮತ್ತು ಊರುಗಳಿಗೆ ಪ್ರವಾಹದ ನೀರು ೫-೧೫ ಅಡಿ ಮಟ್ಟಕ್ಕೆ ಬಂದಿದೆ ೧॥ ಲಕ್ಷ ಸಂಸಾರಗಳು ಮನೆ ಮಠಗಳನ್ನು ಕಳೆದುಕೊಂಡಿರುವುದಾಗಿಯೂ, ೫೦೦ ಕಡೆ ಭೂಪಾತಗಳಾಗಿ, ೫೦,೦೦೦ ಮನೆಗಳು ನಾಶವಾಗಿರುವುವೆಂದೂ ಹೇಳಲಾಗಿದೆ

ಅಂಚೆ ನೌಕರರ ಮುಷ್ಕರ ನಿಲ್ಲಿಸುವ ಪ್ರಯತ್ನ ವಿಫಲ

ಸಂಧಾನದ ಮಾತುಕತೆ ಮುರಿದುಬಿತ್ತು

ಅಂಚೆ ಮತ್ತು ತಂತಿ ನೌಕರರ ಮುಷ್ಕರವನ್ನು ತಡೆಯಲು ಪ್ರಧಾನಿ ನೆಹರೂ ಮತ್ತು ಕಾರ್ಮಿಕ ಮಂತ್ರಿ ಗುಲ್ಜಾರಿಲಾಲ್ ನಂದಾರವರು ಮಾಡಿರುವ ಇತ್ತೀಚಿನ ಪ್ರಯತ್ನವೂ ವಿಫಲವಾಗಿರುವುದೆಂದು ವರದಿಯಾಗಿದೆ ನೌಕರರ ಪ್ರತಿನಿಧಿಗಳು ನೆಹರೂರವರೊಂದಿಗೆ ೭೦ ನಿಮಿಷ ಕಾಲ ಸಂಧಾನ ನಡೆಸಿದನಂತರ ಮುಷ್ಕರದ ನಿರ್ಧಾರವು ಬದಲಾವಣೆಯಾಗಿಲ್ಲವೆಂದು ತಿಳಿಸಿದ್ದಾರೆ

ಕೇಂದ್ರ ನೌಕರರ ಸಂಬಳದ ಸಮಿತಿಯನ್ನು ಮುಂದಲವೆಂದು ಕರೆಯಲು ಸರ್ಕಾರವು ಅಂಗೀಕರಿಸಿದರೆಂದೂ, ಜೀವನ ವೆಚ್ಚದ ತುಟ್ಟಿ ಭತ್ಯದ ಬೇಡಿಕೆಯನ್ನು ಪೂರೈಸಲೂ, ಮೂಲ ಸಂಬಳದಲ್ಲಿ ತುಟ್ಟಿ ಭತ್ಯವನ್ನು ವಿಲೀನಗೊಳಿಸಲೂ ಅವರು ಮನಸ್ಸು ಮಾಡಲಿಲ್ಲವೆಂದೂ ನೌಕರರ ಸಂಘದ ಪ್ರತಿನಿಧಿ ಘೋಷ್‌ರವರು ಸೂಚಿಸಿರುತ್ತಾರೆ ತಾತ್ಕಾಲಿಕ ಪರಿಹಾರದ ವಿಷಯವನ್ನು ಸಂಬಳದ ಸಮಿತಿಗೆ ಒಪ್ಪಿಸಲು ನೌಕರರ ಸಂಘದ ಪ್ರತಿನಿಧಿಗಳು ಅಂಗೀಕರಿಸಲಿಲ್ಲವೆಂದು ಹೇಳಲಾಗಿದೆ ಆದ್ದರಿಂದ ಮುಷ್ಕರವು ಆಗಸ್ಟ್ ೮ ರ ಮಧ್ಯರಾತ್ರಿಯಿಂದ ಆರಂಭವಾಗಲಿರುವುದಾಗಿ ಗೊತ್ತಾಗಿದೆ.

ನೋಟುಗಳ ಕಳ್ಳರವಾನೆಗಾಗಿ ೫೦ ಲಕ್ಷ ರೂ. ದಂಡ

೮॥ ಲಕ್ಷ ರೂ ನೋಟು ಮತ್ತು ೧೦ ಸಾವಿರ ಅಮೇರಿಕದ ಡಾಲರುಗಳನ್ನು ಭಾರತದಿಂದ ಹೊರಕ್ಕೆ ಕಳ್ಳ ರವಾನೆ ಮಾಡಲೆತ್ನಿಸಿದುದಕ್ಕಾಗಿ ಅಮೇರಿಕದ ಸ್ಟಾಕ್‌ಬ್ರೋಕರ್ ಲಿಯೊ ರಾಫ್ ಶ್ರೆ ಮತ್ತು ಬ್ರಸೆಲ್ಸಿನಲ್ಲಿರುವ ಕ್ಯೂಬಾ ರಾಯಭಾರಿಯ ಕಾರ್ಯದರ್ಶಿ ಥಾಮಸ್ ಡಾನಾರವರಿಗೆ ತಲಾ ೨೫ ಲಕ್ಷ ರೂ ದಂಡವನ್ನು ದೆಹಲಿ ನ್ಯಾಯಾಧೀಶರು ವಿಧಿಸಿರುತ್ತಾರೆ. ಅಮೃತಸರದಿಂದ ಪಾಕಿಸ್ತಾನಕ್ಕೆ ಮೋಟಾರಿನಲ್ಲಿ ಹಣವನ್ನು ಕಳೆದ ತಿಂಗಳು ೨೩ ರಂದು ಕದ್ದು ಸಾಗಿಸುತ್ತಿದ್ದಾಗ ಅವರನ್ನು ಬಂಧಿಸಲಾಗಿತ್ತು. ಇದೊಂದು ಬುದ್ಧಿಪೂರ್ವಕ ಪಿತೂರಿಯೆಂದೂ, ತೀವ್ರವಾದ ಶಿಕ್ಷೆಯನ್ನು ಅದಕ್ಕೆ ವಿಧಿಸಬೇಕೆಂದೂ ನ್ಯಾಯಾಧೀಶರು ಸೂಚಿಸಿರುತ್ತಾರೆ

ಬಿಳಿಗಿರಿರಂಗನ ಬೆಟ್ಟದ ಬಳಿ ಹುಲಿಗೆ ಒಬ್ಬನ ಆಹುತಿ

ಚಾಮರಾಜನಗರ ೨೬

ಬಿಳಿಗಿರಿರಂಗನ ಬೆಟ್ಟದ ತಪ್ಪಲಿನ ಬನ್ನಿಸೀಗೆ-ಪುರಾಣಪುರದ ಬಳಿ ಕಾಡಿನಲ್ಲಿ ಕಳೆದ ೧೯ನೇ ತಾರೀಕು ದನ ಕಾಯುತ್ತಿದ್ದವನೊಬ್ಬನನ್ನು ಹೆಣ್ಣು ಹುಲಿಯು ಕೊಂದು ತಿಂದಿದೆ ಒಂದು ತಿಂಗಳ ಹಿಂದೆ ಬೆಟ್ಟದ ಪುರಾಣಿ ಕಾಡಿನಲ್ಲಿ ಒಬ್ಬಾತನನ್ನು ಅದೇ ಹುಲಿಯು ತಿಂದುಹಾಕಿತ್ತು ಆದು ಬೆಟ್ಟ ಮತ್ತು ಕೊಳ್ಳೇಗಾಲದ ಕಾಡಿನ ಭಾಗಗಳಲ್ಲಿ ಸಂಚರಿಸುತ್ತಿರುವುದು. ಮನುಷ್ಯನನ್ನು ತಿನ್ನುವ ಹುಲಿ ಕಾಟ ಈ ಪ್ರದೇಶದಲ್ಲಿ ೨ ವರ್ಷಗಳಿಂದ ಇದೆ. ಇದರಿಂದ ಜನರಿಗೆ ಭೀತಿಯಾಗಿದೆ. ಈ ಹುಲಿಯ ಶಿಕಾರಿಯು ಅಗತ್ಯವಾಗಿದೆ

ಸಂಸ್ಥಾನದಲ್ಲಿ ಜನವರಿ ೨೬ ರಿಂದ ಸಮಾಜವಾದಿಗಳ ಸತ್ಯಾಗ್ರಹವೇ

ಬೆಂಗಳೂರು ೨೭

ಪ್ರಜೆಗಳ ಅಭ್ಯುದಯದ ಪ್ರಣಾಳಿಕೆ ಆಧಾರದ ಮೇಲೆ ಸಂಸ್ಥಾನದಲ್ಲಿ ಬರುವ ಜನವರಿ ೨೬ನೇ ತಾರೀಕಿನಿಂದ ಕಾನೂನು ಭಂಗ ಚಳುವಳಿಯನ್ನು ನಡೆಸಲು ಸಂಸ್ಥಾನದ ಸಮಾಜವಾದಿ ಪಕ್ಷದವರು ನಿರ್ಧರಿಸಿರುತ್ತಾರೆ ಅದಕ್ಕಾಗಿ ಶ್ರೀಗಳಾದ ಕೆ. ಚನ್ನ[illegible],ಎಸ್ ವೆಂಕಟರಾಮಯ್ಯರುಳ್ಳ ಸಮಿತಿಯೊಂದನ್ನು ಪ್ರಣಾಳಿಕೆಯ ಪರಿಶೀಲನೆಗಾಗಿ ರಚಿಸಲಾಗಿದೆ ಚಳುವಳಿ ನಿರ್ಧಾರವು ರಾಷ್ಟ್ರೀಯ ಸಮಿತಿಯ ಅನುಮೋದನೆ ಪಡೆಯಬೇಕಾಗಿದೆ ಪ್ರಣಾಳಿಕೆಗೆ ೫ ಲಕ್ಷ ಜನರ ಸಹಿ ಪಡೆಯಲೂ, ಸಾವಿರ ಸತ್ಯಾಗ್ರಹಿಗಳನ್ನು ಸೇರಿಸಿಕೊಳ್ಳಲೂ ತೀರ್ಮಾನಿಸಲಾಗಿದೆ

ಒಮಾನಿನಲ್ಲಿ ಬ್ರಿಟಿಷ್ ಧಾಳಿಯು ಮುಕ್ತಾಯ ?

ಮಸ್ಕತ್ ಸುಲ್ತಾನರ ವಿರುದ್ಧವಾಗಿ ಒಮಾನಿನಲ್ಲಿ ನಡೆದಿರುವ ದಂಗೆಯನ್ನು ಮಟ್ಟಹಾಕಲು ನಡೆಯುತ್ತಿದ್ದ ಬ್ರಿಟಿಷ್ ವಿಮಾನ ಧಾಳಿಯು ಈಗ ನಿಲ್ಲಿಸಲ್ಪಟ್ಟಿರುವುದೆಂದು ವರದಿಯಾಗಿದೆ ಒಮಾನಿನ ಇಮಾಮರ ನಿಜ್ವಾ ಮತ್ತು ಇಜ್ಕಿ ನಗರಗಳನ್ನು ಬಾಂಬು ಧಾಳಿಯಿಂದ ಪೂರ್ಣವಾಗಿ ನಾಶಗೊಳಿಸಲಾಗಿದೆ

ಸಿಂಹಳದಲ್ಲಿ ತಮಿಳರ ಸತ್ಯಾಗ್ರಹವಿಲ್ಲ

ಸಿಂಹಳದ ತಮಿಳು ಪಕ್ಷದವರು ಬರುವ ತಿಂಗಳು ೧ ರಿಂದ ನಡೆಸಬೇಕೆಂದಿದ್ದ ಸತ್ಯಾಗ್ರಹವನ್ನು ನಿಲ್ಲಿಸಿರುತ್ತಾರೆ ತಮಿಳು ಭಾಷಾ ಜನರ ಹಕ್ಕುಬಾಧ್ಯತೆ ರಕ್ಷಣೆಗಾಗಿ ಸತ್ಯಾಗ್ರಹ ಹೂಡಲು ನಿರ್ಧರಿಸಲಾಗಿತ್ತು. ಪಕ್ಷದ ಮುಖಂಡರಿಗೂ ಪ್ರಧಾನಿ ಬಂಡಾರನಾಯಿಕೆಯವರಿಗೂ,ತಮಿಳು ಭಾಷೆಗೆ ಪೂರ್ವಸಿಂಹಳದಲ್ಲಿ ಹೆಚ್ಚಿನ ಸ್ಥಾನ ಕಲ್ಪಿಸುವ ಬಗ್ಗೆ ಒಪ್ಪಂದವಾಗಿದೆ.

ನೇಪಾಳದಲ್ಲಿ ೧೧ ಜನರ ಮಂತ್ರಿಮಂಡಲ

ನೇಪಾಳದ ಸಂಯುಕ್ತ ಪ್ರಜಾ ಸತ್ತಾತ್ಮಕ ಪಕ್ಷದ ನಾಯಕ ಕೆ. ಐ. ಸಿಂಗರು ೧೧ ಜನ ಸದಸ್ಯರುಳ್ಳ ಮಂತ್ರಿಮಂಡಲವನ್ನು ರಚಿಸಿರುತ್ತಾರೆ ಈ ಮಂತ್ರಿಮಂಡಲವು ಕಳೆದ ಏಳು ವರ್ಷಗಳಲ್ಲಿ ಆರನೆಯದಾಗಿದೆ.

ಹೆಸರಘಟ್ಟದ ಕೃಷಿ ಕ್ಷೇತ್ರ ಕೇಂದ್ರದವರ ವಶಕ್ಕೆ

ಹೆಸರಘಟ್ಟದಲ್ಲಿ ನಡೆಸುತ್ತಿರುವ ಕೃಷಿ ಪ್ರಯೋಗದ ಕ್ಷೇತ್ರವನ್ನು ಕೇಂದ್ರ ಸರ್ಕಾರದ ಅಪೇಕ್ಷೆಯಂತೆ ಅವರಿಗೆ ಒಪ್ಪಿಸಲು ಸಂಸ್ಥಾನ ಸರ್ಕಾರದವರು ನಿರ್ಧರಿಸಿರುತ್ತಾರೆ. ಇದರಿಂದ ಯಾವ ಕೊರತೆಯೂ ಆಗುವುದಿಲ್ಲವೆಂದು ವ್ಯವಸಾಯ ಸಚಿವರು ವಿಧಾನ ಸಭೆಯಲ್ಲಿ ತಿಳಿಸಿರುತ್ತಾರೆ ವ್ಯವಸಾಯಕ್ಕೆ ಬೇಕಾಗುವ ಮುಖ್ಯ ಮಟ್ಟುಗಳನ್ನು ಮಾರಲು ಪ್ರತಿ ತಾಲ್ಲೂಕಿನಮುಖ್ಯ ಸ್ಥಳಗಳಲ್ಲಿ ಡಿಪೋಗಳನ್ನು ತೆರೆಯಲಾಗುವುದೆಂದು ಅವರು ಸೂಚಿಸಿರುವರು.

ಕಾಂಗ್ರೆಸ್ ಪ್ರಮುಖರ ಸಭೆ

ಬೆಂಗಳೂರು .

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರುಗಳ ಜಂಟಿ ಸಭೆಯು ನೆನ್ನೆ ಇಲ್ಲಿ ಸೇರಿತ್ತು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಪಿ ಮಾಧವನ್ ನಾಯರ್ ... ರು ಭಾಷಣ ಮಾಡಿ ಕಾಂಗ್ರೆಸ್ ಪಕ್ಷಕ್ಕೆ ಸದಸ್ಯರನ್ನು ಸೇರಿಸುವ ನಿಯಮಗಳನ್ನು ಇನ್ನೂ ವಿ... ಲಗೊಳಿಸಬೇಕೆಂದೂ, ಖಾದಿಯನ್ನು ಹಾಕಬೇಕೆಂಬ ನಿಯಮವನ್ನು ಸಡಿಲಿಸಬಹುದೆಂ... ಸೂಚಿಸಿದರು

ಅವರು ಪ್ರದೇಶ ಕಾಂಗ್ರೆಸ್ ಕಾರ್ಯಕಾ... ಸಮಿತಿ ಸಭೆಯಲ್ಲಿ ಮಾತನಾಡಿ, ಕಾಂಗ್ರೆಸ್ಸಿ... ರು ತಮ್ಮ ಲೋಪದೋಷಗಳಿಂದ ಮೈಸೂ... ಲ್ಲೂ ಕೇರಳದ ಸ್ಥಿತಿಯನ್ನು ತಂದೊಡ್ಡಬ... ದೆಂದು ಎಚ್ಚರಿಕೆಯಿತ್ತರು.

ಶ್ರೀಗಳಾದ ಎಸ್. ಚನ್ನಯ್ಯ, ಅಬ್ದುರಾ... ಗಣಮುಖಿ, ಮಂಗಳೂರಿನ ಭೋಜರಾ... ಎಗ್. ಸಿ ನಾಗಪ್ಪಶೆಟ್ಟಿ ಮತ್ತು ಮುಂದೆ ... ಮಿಸಲಾಗುವ ಸದಸ್ಯರೊಬ್ಬರಿಂದ ಕೂಡಿದ ಶಿ... ನ ಕ್ರಮದ ಸಮಿತಿಯನ್ನು ರಚಿಸಲಾಯಿತು.

ಸಹಪಂಕ್ತಿ ಭೋಜನ ಪದ್ಧತಿ ರದ್ದು

ಬೆಂಗಳೂರು .

ವಿಧಾನ ಸಭೆಯಲ್ಲಿ ನೆನ್ನೆ ಸಚಿವ ಶ್ರೀ ಆರ್ ಚೆನ್ನಿಗರಾಮಯ್ಯನವರು ಮಾತನಾಡಿ, ನಿ... ವರ್ಗ ಮತ್ತು ಸವರ್ಣೀಯರಲ್ಲಿ ಹೆಚ್ಚು ಸಂಪ... ವನ್ನುಂಟುಮಾಡಲು ಸರ್ಕಾರದ ವೆಚ್ಚದಲ್ಲಿ ನ... ಸಲಾಗುತ್ತಿದ್ದ ಸಹಪಂಕ್ತಿ ಭೋಜನಗಳನ್ನು ... ನ್ನು ಮುಂದೆ ನಿಲ್ಲಿಸಲಾಗುವುದೆಂದು ತಿಳಿಸಿ... ತ್ತಾರೆ. ಈ ಭೋಜನ ಕೂಟಗಳಿಗೆ ಬಂದವ... ಬರುತ್ತಿರುವರೆಂದೂ, ಹೊಸಬರಾರೂ ಬರು... ದಿಲ್ಲವೆಂದೂ, ಒಟ್ಟಿಗೆ ಕುಳಿತು ಊಟ ಮಾ... ವಂತೆ ಯಾರನ್ನೂ ಕಡ್ಡಾಯ ಮಾಡುವಂತಿ... ವೆಂದೂ ಸಚಿವರು ಹೇಳಿದರು

ಮದ್ರಾಸಿನ ಐ. ಜಿ. ಪಿ. ನಡತೆ ಬಗ್ಗೆ ವಿಚಾರಣೆ

ಮದ್ರಾಸಿನ ಪೋಲೀಸು ಇನ್ಸ್‌ಪೆಕ್ಟರ್ ಜನರ... ರ ಮೇಲಿನ ದುರ್ನಡತೆ ಆಪಾದನೆಗಳ ತನಿ... ಗಾಗಿ ಅಲ್ಲಿನ ಹೈಕೋರ್ಟು ನ್ಯಾಯಾಧೀಶ... ನ್ನು ನೇಮಿಸಲಾಗಿದೆ

ರಾಜ್ಯಪಾಲರೊಡನೆ ಪ್ರಮುಖರ ಭೇಟಿ

ಸಂಗೀತ ರತ್ನ ಟಿ. ಚೌಡಯ್ಯನವರ ... ಸನ್ಮಾನ ಸಮಾರಂಭದ ಸಮಿತಿ ಸದಸ್ಯರಾದ ಶ್ರೀ... ಗಳು ಎ ಕೃಷ್ಣಮೂರ್ತಿರಾವ್, ಕೆ ಪುಟ್ಟೂರಾ... ವ್, ಎಂ.ಆರ್. ಸಿ ಬಸಪ್ಪ, ಪುರಸಭಾ ಸದ... ಚೌಡಯ್ಯ, ಎಂ ಎಸ್ ಚಂದ್ರಶೇಖರ ಜೋ... ಯಿಸ್, ಅಬ್ದುಲ್ ಜಬ್ಬಾರ್ ಖಾನ್, ಆರ್ ... ಮಸ್ವಾಮಿ ಮತ್ತು ಎಂ. ಎ ನಾಗಪ್ಪನವರು... ನಿಯೋಗಕ್ಕೆ ಈ ದಿನ ಗವರ್ನರರು ಭೇಟಿಯಿ... ದ್ದರು ಸಮಾರಂಭದ ಅಧ್ಯಕ್ಷತೆ ವಹಿಸುವಂತೆ ... ಯೋಗದವರು ಗವರ್ನರರನ್ನು ಕೇಳಿದುದ... ಗೊತ್ತಾಗಿದೆ

ಸಣ್ಣ ಪ್ರಮಾಣದ ಉಳಿತಾಯ ಮತ್ತು ವನಮಹೋತ್ಸವ

ಮೈಸೂರು ೨

ಈ ತಾಲ್ಲೂಕಿನ ವರುಣ ಹೋಬಳಿಯ ಸೋಮೇಶ್ವರಪುರ ಕೂಡನಹಳ್ಳಿ ಮತ್ತು ದೇವಲಾಪುರಗಳಲ್ಲಿ ಮೊನ್ನೆ ಸಣ್ಣ ಪ್ರಮಾಣದ ಉಳಿತಾಯ ಯೋಜನೆ ಮತ್ತು ವನಮಹೋತ್ಸವ ಸಮಾರಂಭಗಳನ್ನು ಅಮಲ್ದಾರ್ ಶ್ರೀ ಸಿ ರಾಮಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ಶ್ರೀಗಳಾದ ಸ ಬ್ಬರಾವ್ ಮಲ್ಲಪ್ಪ ಮತ್ತು ನಿಂಗಪ್ಪನವರು ಭಾಷಣಮಾಡಿ ಸರ್ಕಾರದ ದೇಶಾಭ್ಯುದಯ ಕಾರ್ಯಗಳಿಗೆ ಬೆಂಬಲ ನೀಡಬೇಕೆಂದು ಕೋರಿದರು ಅಮಲ್ದಾರರು ಮಾತನಾಡಿ ವನಮಹೋತ್ಸವ ನಡೆಸುವುದರಿಂದ ಆಗುವ ಪ್ರಯೋಜನ ಮತ್ತು ಉಳಿತಾಯದ ಯೋಜನೆ ಮಹತ್ವಗಳನ್ನು ವಿವರಿಸಿದರು

ಸಭೆಯಲ್ಲಿ ಭಾಗವಹಿಸಿದ್ದವರೆಲ್ಲರೂ ತಮ್ಮ ವರಮಾನಗಳಲ್ಲಿ ಆದಷ್ಟು ಉಳಿತಾಯ ಮಾಡಿ ಯೋಜನೆಗಳಿಗೆ ಒಪ್ಪಿಸುವುದಾಗಿ ಸೂಚಿಸಿದರು ವನಮಹೋತ್ಸವದ ಅಂಗವಾಗಿ ೨೦ ಸಸಿಗಳನ್ನು ನೆಡಲಾಯಿತು ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಪಂಚಾಕ್ಷರಿಯವರು ವಂದನಾರ್ಪಣೆ ಮಾಡಿದರು

ಭಕ್ತಿ ಯೋಗದ ಮೇಲೆ ಉಪನ್ಯಾಸ

ನಗರದ ಗೀತಾಪ್ರಚಾರಿಣಿ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಗೀತಾ ಸದನದಲ್ಲಿ ಪೂನಾದ ಡಾ॥ ಯೋಗಿ ಜೆ ರಾಜಮಧ್ಯ ಸೂದರೆನವರು ಹಿಂದಿ ಮಹಾರಾಷ್ಟ್ರ ಮತ್ತು ಗುಜರಾತಿಗಳಲ್ಲಿ ಭಜನೆ ಸಪ್ತ ಭಗವದ್ಗೀತಾ ಭಕ್ತಿ ಯೋಗದ ವಿಚಾರವಾಗಿ ಉಪನ್ಯಾಸ ಮಾಡುವರು ಆಸ್ತಿಕ ಮಹಾಶಯರಿಗೆ ಆಹ್ವಾನವಿದೆ

ಟ್ಯುನೀಷಿಯದಲ್ಲಿ ರಾಜತ್ವದ ರದ್ದು

ಟ್ಯುನೀಷಿಯದ ರಾಜ್ಯಾಂಗ ಸಭೆಯು ಅಲ್ಲಿನ ೨೫೦ ವರ್ಷದ ರಾಜ ಪ್ರಭುತ್ವವನ್ನು ರದ್ದುಗೊಳಿಸಿರುತ್ತದೆ ರಾಜ್ಯವನ್ನು ರಿಪಬ್ಲಿಕ್ ಎಂದು ಘೋಷಿಸಲಾಗುವುದು ಅದರ ಮೊದಲನೇ ಅಧ್ಯಕ್ಷರಾಗಿ ಪ್ರಧಾನಿ ಹಬೀಬ್ ಬೋರ್ಗಿಬಾರವನ್ನು ಸಭೆಯು ನೇಮಿಸಿತು ಅಲ್ಲಿನ ರಾಜರಾದ ಸಿಡಿಲಾಮಿನರವರಿಗೆ ಈಗ ೭೫ ವರ್ಷ ವಯಸ್ಸು

ಜನತಾ ಪಕ್ಷವಾಗಿ ಕಮ್ಯೂನಿಸ್ಟ್ ಪಕ್ಷದ ಪರಿವರ್ತನ

ಭಾರತದ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ರಾಜಕೀಯ ಸಮಿತಿಯು ತಮ್ಮ ಪಕ್ಷವನ್ನು ಜನತಾ ಪಕ್ಷವಾಗಿ ಪರಿವರ್ತಿಸುವ ವಿಷಯವನ್ನು ಕುರಿತು ಪರಿಶೀಲನೆ ನಡೆಸಿ, ಈ ಬಗ್ಗೆ ಪಕ್ಷದ ನಿಯಮಾವಳಿಯನ್ನು ಬದಲಾಯಿಸಲು ಪಕ್ಷದ ರಾಷ್ಟ್ರಮಟ್ಟಕ್ಕೆ ಶಿಫಾರಸು ಮಾಡಲಿದೆ ಕಮ್ಯೂನಿಸ್ಟ್ ತತ್ವವನ್ನು ಒಪ್ಪುವವರೆಲ್ಲರನ್ನೂ ಪಕ್ಷಕ್ಕೆ ಸೇರಿಸಿಕೊಳ್ಳಲು ಅವರು ಆಲೋಚಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	[illegible]	
ರಜ್ಜು ಚೂರಿ	[illegible]	[illegible]
ಕಾರ್ ಸಣ್ಣ	[illegible]	[illegible]
ಕಡ್ಡಿ	[illegible]	
ಬಂಗಾರ ಸಣ್ಣ	[illegible]	[illegible]
ರಾಗಿ	[illegible]	[illegible]
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ರಾಜ್ಜು ಕಳ್ಳು	[illegible]	
ಹಿಟ್ಟು	[illegible]	
ಹುರುಳಿ	[illegible]	[illegible]
ಹಲಸಂದೆ	[illegible]	[illegible]
ಉಪ್ಪು	[illegible]	
ಧನಿಯ	[illegible]	
ಮೆಣಸಿನಕಾಯಿ	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ	[illegible]	[illegible]

Edited Printed and Published by A R Nagarajan at Sadhvi Press D Subbiah Road Mysore

ಪಾಕಿಸ್ತಾನದಲ್ಲಿ ಮತ್ತೊಂದು ರಾಜಕೀಯ ಪಕ್ಷದ ಸ್ಥಾಪನೆ

ರಾಷ್ಟ್ರೀಯ ಅವಾಮಿ ಪಕ್ಷ ಎಂಬ ಹೆಸರಿನಲ್ಲಿ ಇದೀಗ ಪಕ್ಷದ ಹೊಸ ಪಕ್ಷವೊಂದನ್ನು ಪೂರ್ವ ಪಾಕಿಸ್ತಾನದ ಮುಖ್ಯ ನಗರವಾದ ಢಾಕಾದಲ್ಲಿ ಮೊನ್ನೆ ಸ್ಥಾಪಿಸಲಾಯಿತು ಪಾಕಿಸ್ತಾನದ ಪ್ರಜಾಸತ್ತಾತ್ಮಕ ಕಾರ್ಯಕರ್ತರ ಕೂಟವೊಂದು ಸೇರಿದ್ದಾಗ ಅದರ ಬಗ್ಗೆ ನಿರ್ಧಾರವಾಯಿತು ಪೂರ್ವ ಪಾಕಿಸ್ತಾನದ ಅವಾಮಿ ಲೀಗ್ ಪಕ್ಷದ ಮೌಲಾನಾ ಭಾಷಾನಿ ಗುಂಪು ಪಶ್ಚಿಮ ಪಾಕಿಸ್ತಾನದ ರಾಷ್ಟ್ರೀಯ ಪಕ್ಷ ಮತ್ತು ಪೂರ್ವ ಪಾಕಿಸ್ತಾನದ ಗಣತಂತ್ರ ದಳಗಳು ಹೊಸ ಪಕ್ಷದಲ್ಲಿ ಐಕ್ಯವಾದುವು ಕೂಟವು ಸೇರಿದ ಸ್ವಲ್ಪ ಹೊತ್ತಿನಲ್ಲಿ ಹಲವು ಪ್ರದರ್ಶನಕಾರರು ಜೀಪು ಕಾರಿನಲ್ಲಿ ಬಂದು ಪಾಕಿಸ್ತಾನದ ಘಾತಕರು ಮುಂತಾಗಿ ಕೂಗಿದವರ ವಿರುದ್ಧವಾಗಿ ಕೂಗಿ ಪುಂಡಾಟನೆ ನಡೆಸಿದರು ನಂತರ ಅವರುಗಳು ಅಧಿವೇಶನಕ್ಕೆ ಬರುವವರನ್ನು ಹೊಡೆದರು ಇಫ್ತಿಕರ್ ಉದ್ದೀನ್ ಅಬ್ದುಲ್ ರಬ್ ನಿಶ್ತಾರ್ ಬಾದ್ ಮುಂತಾದ ನಾಯಕರಿಗೆ ಪೆಟ್ಟು ಬಿದ್ದಿತೆಂದು ಹೇಳಲಾಗಿದೆ

೧ ದಿವಸದಲ್ಲಿ ೩ ರೈಲು ಅಪಘಾತ

ಪಶ್ಚಿಮ ರೈಲ್ವೆಯ ಅಹಮದಾಬಾದ್ ಬೋಟಾಡ್ ವಿಭಾಗದಲ್ಲಿ ಗೂಡ್ಸ್ ಗಾಡಿಯೊಂದಕ್ಕೆ ಚಾಲಕನಿಲ್ಲದ ರೈಲು ಇಂಜನೊಂದು ಮೊನ್ನೆ ಡಿಕ್ಕಿ ಹೊಡೆದು ಗೂಡ್ಸ್ ಗಾಡಿಯ ಡ್ರೈವರ್ ಮತ್ತು ಫೈರ್‌ಮನ್ನುಗಳು ಗಾಯವಾಯಿತು ಅದೇ ರೈಲು ಮಾರ್ಗದಲ್ಲಿ ಬೇರೆ ಕಡೆ ಮತ್ತೊಂದು ರೈಲು ಕಂಬಿ ತಪ್ಪಿತು ಅದೇ ದಿನ ಸಿಂಲಾ ಕಾಲ್ಕಾ ರಸ್ತೆಯಲ್ಲಿ ವಿಪರೀತ ಗಾಳಿಯಿಂದ ಗೂಡ್ಸ್ ಗಾಡಿ ಕಂಬಿ ತಪ್ಪಿತು

ಎಸ್ ವೈ ಕೃಷ್ಣಸ್ವಾಮಿಯವರಿಗೆ ಪುನಃ ಉದ್ಯೋಗ

ಪಂಜಾಬು ಹೈಕೋರ್ಟಿನವರು ಖುಲಾಸೆ ಮಾಡಿದ ಏಪ್ರಿಲ್ ೧೧ನೇ ತಾರೀಖಿನಿಂದ ಐ ಸಿ ಎಸ್ ಅಧಿಕಾರಿಗಳಾದ ಎಸ್ ವೈ ಕೃಷ್ಣಸ್ವಾಮಿಯವರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ ಅದೇ ದಿನದಿಂದ ಅವರಿಗೆ ನಿವೃತ್ತಿ ಪೂರ್ವದ ರಜಾ ಕೊಡಲಾಗಿದೆ

ಅಳತೆ ಮತ್ತು ತೂಕದ ಇನ್ಸ್‌ಪೆಕ್ಟರರಿಗೆ ಸಜಾ

ಚಿಂತಾಮಣಿ ತಾಲ್ಲೂಕಿನ ತೂಕ ಮತ್ತು ಅಳತೆ ಇನ್ಸ್‌ಪೆಕ್ಟರ್ ಅಹಮದುಲ್ಲಾಖಾನರು ತಮಗೆ ವಹಿಸಿದ ರೂ ೧೦೨-೭-೩ ಬೆಲೆಯ ಬಟ್ಟು ಮತ್ತು ಸೇರು ಮುಂತಾದುವನ್ನು ಮಾರಿ ಹಣವನ್ನು ಖಜಾನೆಗೆ ಕಟ್ಟದೆ ದುರುಪಯೋಗಪಡಿಸಿದರೆಂದು ಅವರಿಗೆ ಕೋಲಾರದ ಜಿಲ್ಲಾ ಮ್ಯಾಜಿಸ್ಟ್ರೇಟರು ೪ ತಿಂಗಳ ಸಾದಾ ಸಜಾ ವಿಧಿಸಿರುತ್ತಾರೆ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲೆ ಬೀದಿ,

ಮೈಸೂರು

ಶ್ರೇಷ್ಠತರವಾದ ಅಗರಬತ್ತಿ ಗಂಧದ ಬತ್ತಿ ಕಾಶ್ಮೀರದ ಕೇಸರಿ ಮತ್ತು ಇತರೆ ಸುಗಂಧ ದ್ರವ್ಯಗಳಿಗೆ ಇಂದೇ ಭೇಟಿ ಕೊಡಿ

SREE GAYATHRI TALKIES

From 27 7 57 For 5 days

HELEN OF TROY

Most powerful picture in Cinemascope & Technicolor

With Rosanna Podesta, Jack Sernas

Story of History's most famous Run-away Lovers

— Morning show on Sun'—

HIGH NOON

ಭಾರತಕ್ಕೆ ಪ್ರೊ॥ ಹಾಲ್ಡೇನರ ಆಗಮನ

ಬ್ರಿಟನ್ನಿನ ಪ್ರಖ್ಯಾತ ಜೀವ ಶಾಸ್ತ್ರದ ವಿದ್ವಾಂಸರಾದ ಪ್ರೊಫೆಸರ್ ಜೆ ಬಿ ಎಸ್ ಹಾಲ್ಡೇನರು ತಮ್ಮ ಪತ್ನಿಯೊಡನೆ ಭಾರತದಲ್ಲಿ ಖಾಯಂ ಆಗಿ ನೆಲೆಸಲು ನಿರ್ಧರಿಸಿ ಮೊನ್ನೆ ಕಲ್ಕತ್ತಾಗೆ ಆಗಮಿಸಿದರು ತಮ್ಮ ರಾಜ್ಯ (ಬ್ರಿಟನ್)ದಲ್ಲಿ ವಿದೇಶೀ (ಅಮೆರಿಕ) ಸೈನ್ಯಗಳು ಇರುವುದನ್ನು ಅವರು ಒಪ್ಪುತ್ತಿಲ್ಲ. ಆದ್ದರಿಂದ ಸ್ವತಂತ್ರ ರಾಷ್ಟ್ರವಾದ ಭಾರತದಲ್ಲಿ ಇರಲು ಅವರು ನಿರ್ಧರಿಸಿರುವರು ಕಲ್ಕತ್ತದಲ್ಲಿ ಅವರು ಭಾರತೀಯ ಅಂಕಿ ಅಂಶಗಳ ಸಂಸ್ಥೆಯಲ್ಲಿ ಕೆಲಸ ಮಾಡುವರು ಅವರಿಗೆ ೬೪ ವಯಸ್ಸು

೧೦೫ ವರ್ಷದ ಮುದುಕಿಯ ನಿಧನ

ನಗರದ ಸ್ಟೂಡೆಂಟ್ಸ್ ಹಾಲಿನ ಶ್ರೀ ಬಿ ನರಸಿಂಗರಾಯರ ಮಾತೋಶ್ರೀಯವರು ನೆನ್ನೆ ದಿವಸ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೧೦೫ ವರ್ಷವಾಗಿತ್ತು ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದು ಕೋರಿ, ಬಂಧುಗಳಿಗೆ ಅನುತಾಪವನ್ನು ಸೂಚಿಸುತ್ತೇವೆ

ಮೂಗ ಹುಡುಗ ತಪ್ಪಿಸಿಕೊಂಡಿದ್ದಾನೆ

ಕುರುಡ ಮೂಗರ ಪಾಠಶಾಲೆಯ ವಿದ್ಯಾರ್ಥಿ ಬಸವರಾಜು (ಮೂಗ) ೨ ದಿನದಿಂದ ತಪ್ಪಿಸಿಕೊಂಡಿದ್ದಾನೆ ಹುಡುಗನ ವಯಸ್ಸು ಸುಮಾರು ೮ ವರುಷ ತಿಳ್ಳಗೆ ಸಾದಾ ಕಪ್ಪು ಬಣ್ಣ ಷರ್ಟ್ ನಿಕ್ಕರ್ ಹಾಕಿಕೊಂಡಿರುವನು ಯಾರಿಗಾದರೂ ಸಿಕ್ಕಿದರೆ ಶಾಲೆಯ ಸೂಪರಿಂಟೆಂಡೆಂಟರಿಗೆ ತಿಳಿಸಬೇಕೆಂದು ಪ್ರಾರ್ಥಿಸುತ್ತಾರೆ

City Municipal Council, Mysore Dated 15th July 1957

ABSTRACT TENDER NOTIFICATION

Re Tender for stitching Uniforms to the Executive and Menial staff of the Municipality

Notice is hereby given that sealed tenders will be received by the undersigned at the Municipal offices upto 4 P M on 9th August 1957 for "stitching uniforms" to the above

1 Each tender must be accompanied by a certified chellan for having deposited Rs 100 in cash to the Municipal Treasury as earnest money

2 Different kinds of uniforms to be stitched are detailed in the margin Further particulars and the form in which the tender should be submitted may be had at the office on all working days

3. The work should be undertaken in the premises of Municipality or where the Municipal Commissioner directs

1 Officers Pattern coat with open collar and flapped pockets and trousers
2 Ordinary pattern coat with closed collar and four pockets with flaps and trousers
3. Ordinary pattern coat with closed collar with three open pockets and trousers

(Sd) A VISWANATH,
Municipal Commissioner

ಭೂದಾನಕ್ಕೆ ಸಮಾಜವಾದಿ ನಾಯಕರ ವಿರೋಧ

ಭೂದಾನ ಚಳುವಳಿಗೆ ತಾವು ಬೆಂಬಲ ಕೊಡುವುದಿಲ್ಲವೆಂದು ಸಮಾಜವಾದಿ ಪಕ್ಷದ ನಾಯಕ ಡಾ॥ ರಾಮ ಮನೋಹರ ಲೋಹಿಯಾರವರು ತಿಳಿಸಿರುತ್ತಾರೆ ಭೂದಾನ ಕಾರ್ಯವು ಇವಿಷಾದ ದಾನ ಮತ್ತು ವ್ಯವಸಾಯ ಸುಧಾರಣೆಗಳಿಗೆ ಮಾತ್ರ ಸಂಬಂಧಪಟ್ಟದ್ದು, ರಾಜಕೀಯದಲ್ಲೂ ಬೆರೆತುಹೋಗಿರುವುದೆಂದು ಅವರು ಹೇಳುತ್ತಾರೆ ಈ ಚಳುವಳಿಯು ಸರ್ವ ಪಕ್ಷಗಳ ವಿಚಾರವೆಂದು ಹೇಳಲಾಗುತ್ತಿದೆಯೆಂದೂ, ಹಾಗಿದ್ದರೆ ಈ ಚಳುವಳಿಯವರು ಜನತೆಗಾಗಿ ಕೆಲಸ ಮಾಡುವ ಸಮಾಜವಾದಿ ಪಕ್ಷ ಮುಂತಾದ ಪಕ್ಷಗಳಿಗೆ ಬೆಂಬಲ ನೀಡಬೇಕೆಂದೂ ಲೋಹಿಯಾರವರು ಸೂಚಿಸಿರುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ನಾದಸ್ವರ ೭ ೧೫ ವಸುಮತಿ ರಾಮಚಂದರ್ ದೇವರ ನಾಮ ೮ ೧೫ ರಿಕಾರ್ಡ್ ಸಂಗೀತ ೮.೩೦ ಎ ಚೊಕ್ಕಮ್ಮ ವೀಣೆ ಮಧ್ಯಾಹ್ನ ೧೨ ವಸುಮತಿ ರಾಮಚಂದರ್-ಸಂಗೀತ ೧೨ ೩೦ ವಾದ್ಯ ಗೋಷ್ಠಿ ೧ ರಿಕಾರ್ಡ್ ೧ ೨೦ ಗೀತಾ ಮಂಜರಿ ೧-೫೦ ಅನಿಂ-ಧಭೂತಿ-ನಾಟಕ ಸಂಜೆ ೬ ೧೦ ಭಕ್ತಿ ಗೀತಾವಳಿ ೭-೩೦ ಗೀತಾವಳಿ ೮ ಮತ್ತು ೯ ೧೫ ಆರ್. ಎಸ್ ಕೇಶವಮೂರ್ತಿ ವೀಣೆ ೮.೩೦ ದೇಶಭಕ್ತಿ ೯ ೩೦ ಸುಗಮ ಸಂಗೀತ

City Municipality, Mysore Dated 15-7-1957

ABSTRACT TENDER NOTIFICATION

Re Tender for stitching of Uniforms to the Sweepers of the Municipality

Notice is hereby given that sealed tenders will be received by the undersigned at the Municipal Offices upto 4 00 P M. on or before 8th August 1957 for stitching uniforms to the sweepers of the Municipality

I Each tender must be accompanied by a chellan for having deposited Rs 100 in cash to the Municipal Treasury as earnest money

2. Kinds of uniforms to be stitched are detailed below Further particulars required may be had at the office on all working days

I (a) One set of uniforms consisting of one half shirt and a shirt with a cap (Male uniforms)
(b) One pair of jackets (female) out of K R. Mill long cloth

II Probable number of uniforms to be stitched are -
a) Male uniforms 1,200 Sets
b) Female do 800 jackets

III The required cloth will be supplied by the Municipality

IV The work should be undertaken in the premises of Municipality or where the Municipal Commissioner directs

A. VISWANATH.
Municipal Commissioner

ಟೆಲಿಫೋನ್ ನಂ. 792

ಇಂದಿನ ಪತ್ರಿಕೆ 2 ಪುಟ ಪೈಸೆ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ 2 ನಯಾಪೈಸೆ

ಸಂಪುಟ : ೧೫] SADHVI । SUNDAY 28—7—1957 ಮೈಸೂರು । ಭಾನುವಾರ ೨೮—೭—೧೯೫೭ । [ಸಂಚಿಕೆ : ೪೩೦

ಗ್ವಾಟೆಮಾಲಾ ದೇಶದ ಅಧ್ಯಕ್ಷ ಆರ್ಮಾಸ್‌ರವರ ಕೊಲೆ

ಕೇಂದ್ರ ಸರ್ಕಾರದ ೫ ಲಕ್ಷ ನೌಕರರ ಮುಷ್ಕರದ ಸಿದ್ಧತೆ

ಮುಷ್ಕರ 'ಆರ್ಥಿಕ ಹೋರಾಟ'ವೆಂದು ಸಂಘದವರ ಪರಿಗಣನೆ

ಕೇಂದ್ರ ಸರ್ಕಾರದ ೫ ಲಕ್ಷ ನೌಕರರ ಮುಷ್ಕರವನ್ನು ನಡೆಸಲು ವಿವಿಧ ಶಾಖೆಗಳ ನೌಕರರ ಸಂಘಗಳ ಜಂಟಿ ಸಂಯೋಜಿತ ಸಮಿತಿಯೊಂದನ್ನು ರಚಿಸಲಾಗಿದೆ. ಪ್ರತಿ ವಿಭಾಗದ ಪ್ರತಿನಿಧಿಗಳೂ ಸಮಿತಿಯಲ್ಲಿರುವರು. ಕೇಂದ್ರ ನೌಕರರ ಸಂಘಗಳ ಕೂಟದ ಪ್ರಧಾನ ಕಾರ್ಯದರ್ಶಿ ಎಸ್. ಮಧುಸೂದನರವರು ಇದರ ಸಂಚಾಲಕರಾಗಿರುವರು.

ಹಣಕಾಸಿನ ಸಚಿವರು ಮುಷ್ಕರದ ಬಗ್ಗೆ ಆಡಿರುವ ಮಾತುಗಳಿಗಾಗಿ ಕೂಟದ ರಾಷ್ಟ್ರೀಯ ಸಮಿತಿಯು ಬಲವಾದ ಆಕ್ಷೇಪಣೆ ತೆಗೆದುಕೊಂಡು, ಮುಖ್ಯವಾಗಿ ಆರ್ಥಿಕ ಹೋರಾಟವಾಗಿರುವ ಮುಷ್ಕರಕ್ಕೆ ರಾಜಕೀಯದ ಬಣ್ಣವನ್ನು ಕಟ್ಟುತ್ತಿರುವುದು ಸರಿಯಲ್ಲವೆಂದು ತಿಳಿಸಿದೆ.

ಇದುವರೆಗೆ ಅಂಚೆ ಮತ್ತು ತಂತಿ, ನಾಗರಿಕ ವಿಮಾನ ಹಾರಾಟ, ವರಮಾನ ತೆರಿಗೆ, ಆಡಿಟ್ ಮತ್ತು ಅಕೌಂಟ್ಸ್, ಅಖಿಲ ಭಾರತ ಮೆಡಿಕಲ್ ಸರ್ವೀಸ್, ಕೇಂದ್ರದ ಸುಂಕ, ಸ್ಟೇಷನರಿ ಕಛೇರಿ, ಭಾರತ ಸ್ಟೋರ್ಸ್ ಮತ್ತು ಟಂಕಸಾಲೆಗೆ ಸಂಬಂಧಪಟ್ಟ ನಾನ್ ಗೆಜೆಟೆಡ್ ನೌಕರರ ಸಂಘದವರು ಮುಷ್ಕರದ ನೋಟೀಸು ಕೊಟ್ಟಿರುವರು. ಆಗಸ್ಟ್ ೮-೯ ರ ಮಧ್ಯರಾತ್ರಿಯಿಂದ ಇದು ಆರಂಭವಾಗುವುದು. ಕೇಂದ್ರ ನೌಕರರ ಮುಷ್ಕರಕ್ಕೆ ಇತರ ಕಾರ್ಮಿಕ ಸಂಘಗಳ ಬೆಂಬಲವನ್ನು ಕೋರಲಾಗಿದೆ.

ಹುಕ್ಕೇರಿಯಲ್ಲಿ ಡಕಾಯಿತರ ತಂಡದ ಬಂಧನ

ಹುಕ್ಕೇರಿ ತಾಲ್ಲೂಕಿನಲ್ಲಿ ಮೊನ್ನೆ ವಿಶೇಷ ಪೋಲೀಸು ಪಡೆಯವರು ವ್ಯವಸ್ಥಿತವಾದ ಡಕಾಯಿತರ ಗುಂಪಿನ ೮ ಜನರನ್ನು ಬಂಧಿಸಿದರು. ಕಳೆದ ತಿಂಗಳು ಹುಕ್ಕೇರಿಯಲ್ಲಿ ಆದ ದರೋಡೆ ಸಂಬಂಧವಾಗಿ ದಸ್ತಗಿರಿಗಳಾಗಿವೆ. ಹೋದ ವಾರ ಕೊಟಬಾಗಿಯಲ್ಲಿ ನಡೆದ ಡಕಾಯಿತಿಯಲ್ಲೂ ಅವರುಗಳು ಸೇರಿದ್ದರೆಂದು ಹೇಳಲಾಗಿದೆ. ಎರಡು ಪಿಸ್ತೂಲು, ೫ ತೋಟಾ ಮತ್ತು ಹಲವು ಕಳುವಿನ ಸಾಮಾನುಗಳನ್ನು ದಸ್ತಗಿರಿಯಾದವರ ಪೈಕಿ ದಾದಪ್ಪಗೌಡ ಮತ್ತು ರುಸ್ತುಂಪುರಿ ಎಂಬುವರಿಂದ ವಶಪಡಿಸಿಕೊಳ್ಳಲಾಗಿದೆ. ದಾದಪ್ಪಗೌಡನು ದರೋಡೆಗಾಗಿ ಕೊಣ್ಣೂರು ಮತ್ತು ಪಾಚ್ಚಾಪುರಗಳಿಂದ ಜನರನ್ನು ಸೇರಿಸಿದ್ದನೆಂದು ಹೇಳಲಾಗಿದೆ. ಇತರ ಡಕಾಯಿತಿಗಳ ತನಿಖೆಗಾಗಿ ವಿಶೇಷ ಪೋಲೀಸು ಪಡೆಯು ಅಲ್ಲಿ ಖಾಯಂ ಆಗಿ ಇರುವುದು.

ಡೈನಾಮೈಟ್ ಸಿಡಿತದಿಂದ ಇಬ್ಬರಿಗೆ ಗಾಯ

ಟಿ. ನರಸೀಪುರ ತಾಲ್ಲೂಕು ಬೊಮ್ಮನಾಯಕನ ಹಳ್ಳಿಯಲ್ಲಿ ಡೈನಮೈಟ್ ಸಿಡಿತದಿಂದ ರಾಮಯ್ಯ ಮತ್ತು ಲಕ್ಷ್ಮಣ ಎಂಬ ಇಬ್ಬರು ಬಲವಾಗಿ ಗಾಯಗಳಾಗಿ ಅವರನ್ನು ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ. ಒಬ್ಬರ ಸ್ಥಿತಿ ತೀವ್ರವಾಗಿದೆ.

ಬೆಂಗಳೂರು ಔದ್ಯೋಗಿಕ ಶಿಕ್ಷಣ ಶಾಲೆಯಲ್ಲಿ ೧,೫೦೦ ಸ್ಥಾನಗಳು

ಬೆಂಗಳೂರು ೨೭

ಇಲ್ಲಿರುವ ಔದ್ಯೋಗಿಕ ಶಿಕ್ಷಣ ಶಾಲೆಯಲ್ಲಿ ಶಿಕ್ಷಣ ವಿಭಾಗಗಳ ವ್ಯಾಪ್ತಿ ಮತ್ತು ಸಂಖ್ಯೆಯನ್ನು ಮೂರರಷ್ಟು ವಿಸ್ತರಿಸಲು ಸರ್ಕಾರದವರು ಆಲೋಚಿಸುತ್ತಾರೆ. ಈಗ ಹೊಸದಾಗಿ ತೆಗೆದುಕೊಳ್ಳಲಾಗುತ್ತಿರುವ ೫೦೦ ವಿದ್ಯಾರ್ಥಿಗಳ ಬದಲು ೧೫೦೦ ಮಂದಿಗೆ ಪ್ರವೇಶ ಕೊಡಲು ಯೋಜನೆಯೊಂದನ್ನು ಸಿದ್ಧಗೊಳಿಸಲಾಗುತ್ತಿರುವುದೆಂದು ಕಾರ್ಮಿಕ ಮಂತ್ರಿ ಶ್ರೀ ವೈಕುಂಠ ಬಾಳಿಗರವರು ತಿಳಿಸುತ್ತಾರೆ.

ಡ್ರಾಫ್ಟ್ಸ್‌ಮನ್, ಎಲೆಕ್ಟ್ರೀಷಿಯನ್ಸ್, ಫಿಟ್ಟರ್ಸ್ ಮುಂತಾದ ಹೊಸ ಡಿಪ್ಲೊಮಾ ತರಗತಿಗಳನ್ನು ಅಲ್ಲಿ ತೆರೆಯಲಾಗುವುದೆಂದೂ, ಯೋಜನೆಯು ಯುವಕರ ಭಾವನೆಯಲ್ಲೇ ಕ್ರಾಂತಿಯನ್ನುಂಟುಮಾಡಲಿರುವುದೆಂದೂ ಸಚಿವರು ಹೇಳಿರುತ್ತಾರೆ.

ಸದ್ಯದಲ್ಲೇ ಕೇಂದ್ರ ನೌಕರರ ಸಂಬಳದ ಸಮಿತಿ ರಚನೆ

ಬರುವ ವಾರದೊಳಗೆ ಭಾರತ ಸರ್ಕಾರದವರು ಕೇಂದ್ರ ನೌಕರರ ಸಂಬಳ, ಭತ್ಯ ಮುಂತಾದವುಗಳ ಪರಿಶೀಲನಾ ಸಮಿತಿಯನ್ನು ರಚಿಸಲಿರುವರು. ಇದರಲ್ಲಿ ನ್ಯಾಯಾಧೀಶರು, ಆರ್ಥಿಕ ಪ್ರವೀಣರು ಮತ್ತು ಕೇಂದ್ರ ಮತ್ತು ಪ್ರಾಂತ ಆಡಳಿತದ ಅನುಭವವುಳ್ಳ ಅಧಿಕಾರಿಯೊಬ್ಬರು ಇರುವರೆಂದು ಹೇಳಲಾಗಿದೆ. ಸಮಿತಿಯು ಪರಿಶೀಲಿಸುವ ಅಂಶಗಳನ್ನು ಆಗ ಸೂಚಿಸಲಾಗುವುದು.

ವ್ಯವಸಾಯ ಡಿಪ್ಲೊಮಾ ತರಗತಿ ರದ್ದು

ಹೆಬ್ಬಾಳದ ವ್ಯವಸಾಯ ಶಾಲೆಯಲ್ಲಿ ನಡೆಯುತ್ತಿದ್ದ ಎಲ್. ಎಜಿ. ಡಿಪ್ಲೊಮಾ ತರಗತಿಯನ್ನು ಈ ವರ್ಷದಿಂದ ನಿಲ್ಲಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಪ್ರಥಮ ಮತ್ತು ದ್ವಿತೀಯ ತರಗತಿಗಳಲ್ಲಿ ಉತ್ತೀರ್ಣರಾಗಿರುವವರು ತಮ್ಮ ವಿದ್ಯಾಭ್ಯಾಸವನ್ನು ಪೂರೈಸಲು ಅವಕಾಶ ನೀಡಲಾಗುವುದು. ಸಂಸ್ಥಾನದಲ್ಲೆಲ್ಲಾ ಮೂರು ವ್ಯವಸಾಯ ಶಿಕ್ಷಣ ಶಾಲೆಗಳನ್ನು ತೆರೆಯಲಾಗುವುದರಿಂದಲೂ, ವ್ಯವಸಾಯ ಪದವೀಧರರು ಹೆಚ್ಚಾಗಿರುವುದರಿಂದಲೂ ಡಿಪ್ಲೊಮಾ ತರಗತಿಯನ್ನು ಮುಂದುವರಿಸುವ ಅವಶ್ಯಕತೆಯಿಲ್ಲವೆಂದು ಸರ್ಕಾರದವರು ಅಭಿಪ್ರಾಯಪಟ್ಟಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕ್ಲಾರಿಯೊನೆಟ್ ೭.೧೫ ವೇದಗಾಯನ ೮-೧೫ ಗಾನ ವಿಹಾರ ಮಧ್ಯಾಹ್ನ ೧೨ ಸಂಗೀತ ೧೨.೩೦ ಎ. ಎಸ್. ಪದ್ಮ ವೀಣೆ ೧-೩೦ ಅಬ್ದುಲ್ ಗಫೂರ್ ಹಿಂದಿ ಭಜನೆ. ೧.೫೦ ಕ್ಲಾರಿಯೊನೆಟ್ ೩.೧೫ ಪ್ರೌಢಶಾಲೆಗಳಿಗಾಗಿ ಸಂಜೆ ೬-೧೦ ಜಾನಪದಗೀತೆ ೭.೩೦ ಹಿಂದಿ ಗೀತೆ ೮ ವೃಂದ ಮತ್ತು ಯುಗಳ ಗಾನ ೮-೧೫ ನಾಟಕ ಮತ್ತು ನಮ್ಮವರು ೮-೩೦ ಗೀತಾವಳಿ ೮.೪೫ ವಾದ್ಯಗೋಷ್ಠಿ ೯.೧೫ ಅಂಬರ್ ಚರಕಾ ಬಗ್ಗೆ ಭಾಷಣ ೯-೩೦ ಕೆ. ಗುಂಡೂರಾಯರಿಂದ ಕಥಾ ಕಾಲಕ್ಷೇಪ ೧೦-೩೦ ಎ. ಎಸ್. ಪದ್ಮ ವೀಣೆ.

ಚಾಮರಾಜನಗರ-ಸತ್ಯಮಂಗಲ ರೈಲು ರಸ್ತೆ ನಿರ್ಮಾಣಕ್ಕೆ ಒತ್ತಾಯ

ಲೋಕ ಸಭೆಯಲ್ಲಿ ಇಮಾಮರ ಭಾಷಣ

ಲೋಕ ಸಭೆಯಲ್ಲಿ ಪಿ. ಎಸ್. ಪಿ. ಪಕ್ಷದ ಜೆ. ಎಂ. ಇಮಾಮರು ಮಾತನಾಡಿ, ಚಾಮರಾಜನಗರ ಸತ್ಯಮಂಗಲ ರೈಲು ರಸ್ತೆ ನಿರ್ಮಾಣಕ್ಕಾಗಿ ಒತ್ತಾಯಪಡಿಸಿರುತ್ತಾರೆ. ಈ ರೈಲು ಸಂಪರ್ಕದ ವಿಚಾರವನ್ನು ರೈಲ್ವೆ ಸಚಿವರು ನಿರಾಕರಿಸಿದುದಕ್ಕೆ ಅವರು ವಿಷಾದಿಸಿ, ತಾವು ಹಿಂದೆ ಮೈಸೂರು ಸರ್ಕಾರದ ಮಂತ್ರಿಯಾಗಿದ್ದಾಗ, ಈ ರೈಲು ರಸ್ತೆಯ ನಿರ್ಮಾಣದ ಯೋಜನೆಯನ್ನು ಸಿದ್ಧಗೊಳಿಸಿದ್ದುದಾಗಿಯೂ ಸರ್ವೆ ಮತ್ತು ಅಂದಾಜುಗಳು ಆಗಿದ್ದುವೆಂದೂ, ಸರ್ಕಾರದ ಬಳಿ ಸಾಕಾದಷ್ಟು ಹಣವೂ ಸಹ ಇದ್ದಿತೆಂದೂ, ಆದರೆ ದಕ್ಷಿಣ ರೈಲ್ವೆಯವರು ಮಾತ್ರ ಅದಕ್ಕೆ ಅಡ್ಡಿಯಾಗಿದ್ದರೆಂದೂ ಅಂದು ನುಡಿದಂತೆ ರೈಲ್ವೆಯು ಐಕ್ಯವಾಗದಿದ್ದರೆ, ಈ ವೇಳೆಗೆ ಈ ರಸ್ತೆಯ ನಿರ್ಮಾಣವು ಪೂರೈಸಿರುತ್ತಿತ್ತೆಂದು ಅವರು ಸೂಚಿಸಿರುವರು.

ಪಾಟಿಯಾಲಾ ರಾಜರಿಂದ ರಾಜಧನದಲ್ಲಿ ಶೇ॥ ೧೦ರಷ್ಟು ಕೋತಾ

ಪಾಟಿಯಾಲಾದ ಮಹಾರಾಜರು ತಮ್ಮ ರಾಜಧನದಲ್ಲಿ ಶೇಕಡ ೧೦ರಷ್ಟು ಕೋತಾ ಮಾಡಿಕೊಳ್ಳುವುದಾಗಿ ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ. ನೆಹರೂರವರು ರಾಜರ ಔದಾರ್ಯಕ್ಕಾಗಿ ಪ್ರಶಂಸೆ ಮಾಡಿರುತ್ತಾರೆ. ಅವರ ರಾಜಧನದ ಕೋತಾದಿಂದ ಕೇಂದ್ರ ಸರ್ಕಾರಕ್ಕೆ ವರ್ಷಂಪ್ರತಿ ೧,೨೦,೦೦೦ ರೂ. ಉಳಿಯುವುದು.

ನವೆಂಬರ್ ಆದಿ ಭಾಗದಲ್ಲಿ ವಿಧಾನಸಭಾ ಉಪ ಚುನಾವಣೆ

ಸ್ವಂ. ಟ. ಫೋ.] ನಂಜನಗೂಡು ೨೮

ಶ್ರೀ ಪಿ. ಮಹದೇವಯ್ಯನವರ ನಿಧನದಿಂದ ತೆರವಾದ ವಿಧಾನ ಸಭಾ ಸ್ಥಾನಕ್ಕೆ ಬರುವ ನವೆಂಬರ್ ಮೊದಲನೇ ವಾರದಲ್ಲಿ ಉಪ ಚುನಾವಣೆ ನಡೆಯುವುದೆಂದು ಗೊತ್ತಾಗಿದೆ.

ನಂಜನಗೂಡಿಗೆ ಡಿ. ಐ. ಜಿ. ಕಛೇರಿ ವರ್ಗಾಯಿಸಲು ಸಲಹೆ

ಮೈಸೂರು ಡಿ. ಐ. ಜಿ. ಯವರಾದ ಶ್ರೀ ಖಾದರ್ ಅಲಿಯವರು ಇಲ್ಲಿನ ವಿಜಿಲೆನ್ಸ್ ಸಮಿತಿ ಸಭೆಯಲ್ಲಿ ಭಾಷಣ ಮಾಡಿ ಪೋಲೀಸು ಅಧಿಕಾರಿಗಳಿಗೆ ಪುರ ಪ್ರಮುಖರು ಸಹಕಾರ ನೀಡಬೇಕೆಂದು ತಿಳಿಸಿದರು.

ಪೌರಸಭಾಧ್ಯಕ್ಷ ಶ್ರೀ ಕೆ. ವೆಂಕಟಸುಬ್ಬರವರು ಮಾತನಾಡಿ, ಡಿ. ಐ. ಜಿ. ಯವರ ಕಛೇರಿಯನ್ನು ಇಲ್ಲಿಗೆ ವರ್ಗಾಯಿಸಬೇಕೆಂದು ಕೋರಿದರು. ಎರಡು ವರ್ಷಗಳ ಹಿಂದೆ ಪೋಲೀಸು ಠಾಣೆಯ ನಿರ್ಮಾಣಕ್ಕಾಗಿ ಮಂಜೂರಾದ ೨॥ ಲಕ್ಷ ರೂ ಗಳನ್ನು ಉಪಯೋಗಿಸಿ ಕೆಲಸ ನಡೆಸಬೇಕೆಂದೂ ಅವರು ಸಲಹೆ ಮಾಡಿದರು.

ವಕೀಲರ ಪುಸ್ತಕ ಭಂಡಾರಕ್ಕೆ ದಾನ

ಇಲ್ಲಿನ ವಕೀಲರಾದ ಶ್ರೀ ಎಂ. ತಿಪ್ಪಯ್ಯನವರು ವಕೀಲರ ಪುಸ್ತಕ ಭಂಡಾರಕ್ಕೆ ೧,೦೦೦ ರೂ. ದಾನ ಮಾಡಿದ್ದಾರೆ.

ಗ್ವಾಟೆಮಾಲಾ ಅಧ್ಯಕ್ಷರ ಕೊಲೆ

ಹಂತಕನ ಆತ್ಮಹತ್ಯೆ, ಮಾರ್ಷಲ್ ಲಾ ಜಾರಿ

ಮಧ್ಯ ಅಮೆರಿಕದ ಗ್ವಾಟೆಮಾಲಾ ರಾಷ್ಟ್ರದ ಅಧ್ಯಕ್ಷ ಕಾರ್ಲೋಸ್ ಕಾಸ್ಟಿಲೊ ಆರ್ಮಾಸ್‌ರವರನ್ನು ರೊಮೆರೋ ಸಾಂಚೆಜ್ ಎಂಬ ಅರಮನೆ ರಕ್ಷಕನೊಬ್ಬನು ಮೊನ್ನೆ ರಾತ್ರಿ ಗ್ವಾಟೆಮಾಲಾ ನಗರದಲ್ಲಿ ಎರಡು ಬಾರಿ ಬೆನ್ನಿನ ಮೇಲೆ ಗುಂಡು ಹಾರಿಸಿ ಕೊಂದನೆಂದು ವರದಿಯಾಗಿದೆ. ಆಗ ಆ ವ್ಯಕ್ತಿಯು ಭೋಜನಕ್ಕಾಗಿ ಪತ್ನಿಯೊಡನೆ ಊಟದ ಮನೆಗೆ ಹೋಗುತ್ತಿದ್ದರು.

ನಂತರ ರಕ್ಷಕನು ಗುಂಡು ಹಾರಿಸಿ ಆತ್ಮಹತ್ಯೆ ಮಾಡಿಕೊಂಡನು. ಅಧ್ಯಕ್ಷರಿಗೆ ರಕ್ಷಕನಿರುವನೆಂಬ ಅರಿವೂ ಇರಲಿಲ್ಲ.

ಶಾಸನ ಸಭೆಯ ಅಧ್ಯಕ್ಷರಾಗಿದ್ದ ಡಾ॥ ಲೂಯಿ ಗಾಂಜಾಲೆಸ್‌ರವರು ಸೇನಾಬಲದ ಸಹಾಯದಿಂದ ಅಧ್ಯಕ್ಷರ ಅಧಿಕಾರ ವಹಿಸಿಕೊಂಡಿರುವರೆಂದೂ, ಅಲ್ಲಿ (ಮುತ್ತಿಗೆ ಪರಿಸ್ಥಿತಿ) ಸುಧಾರಿತ ಮಾರ್ಷಲ್ ಲಾವನ್ನು ಜಾರಿ ಮಾಡಲಾಗಿರುವುದೆಂದೂ ಹೇಳಲಾಗಿದೆ. ಪರಿಸ್ಥಿತಿಯು ಶಾಂತವಾಗಿದೆ. ದಂಗೆಯಾಗುವ ಸೂಚನೆಗಳೇನೂ ಇಲ್ಲವೆಂದು ತಿಳಿದುಬಂದಿದೆ.

ಬುಲ್ಗಾನಿನ್ನರ ರಾಜೀನಾಮೆಯೇ?

ರಷ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ನರು ಅಧಿಕಾರ ಬಿಟ್ಟುಕೊಡಬಹುದೆಂದೂ, ಕ್ರುಶ್ಚೇವರ ಆಪ್ತರಾದ ಅಲ್ಲಿನ ರಕ್ಷಣಾ ಮಂತ್ರಿ ಝುಕೋವ್‌ರವರು ನೂತನ ಪ್ರಧಾನಿಯಾಗಬಹುದೆಂದೂ ನ್ಯೂಯಾರ್ಕಿನ ರಾಜತಾಂತ್ರಿಕ ವೃತ್ತಗಳಲ್ಲಿ ಹೇಳಲಾಗುತ್ತಿದೆ.

ಕಾಶ್ಮೀರದಿಂದ ಪಾಕಿಸ್ತಾನ ಕಾಲ್ತೆಗೆಯಲು ವಿಶ್ವದ ಒತ್ತಾಯ ಅಗತ್ಯ

ಕಾಶ್ಮೀರದ ಅಧಿಪತಿ ಕರಣಸಿಂಗ್‌ರವರು ಶಾಂತಿ ಮತ್ತು ಅಂತರ ರಾಷ್ಟ್ರ ಸೌಹಾರ್ದಕ್ಕಾಗಿ, ಎಲ್ಲೆಲ್ಲಿ ಆಕ್ರಮಣಗಳು ನಡೆದಿರುವುವೋ ಅಲ್ಲೆಲ್ಲಾ ತನಿಖೆ ನಡೆಸಿ ಖಂಡಿಸಬೇಕೆಂದು ಕಾಶ್ಮೀರದ ಜಂಟಿ ಶಾಸನ ಸಭೆಗಳಲ್ಲಿ ಭಾಷಣ ಮಾಡಿ ತಿಳಿಸಿರುತ್ತಾರೆ. ಕಾಶ್ಮೀರದಿಂದ ಆಕ್ರಮಣಕಾರನು ಹೋಗುವಂತೆ ವಿಶ್ವದ ಅಭಿಪ್ರಾಯವು ರೂಢಮೂಲವಾಗಬೇಕೆಂದೂ ಅವರು ಸೂಚಿಸಿರುತ್ತಾರೆ. ಹಿಂಸೆ ಮತ್ತು ಯುದ್ಧದ ವಿಧಾನಗಳನ್ನು ಬಿಟ್ಟರೆ ನೆರೆ ರಾಷ್ಟ್ರಗಳ ಹೋರಾಟ ತಿಕ್ಕಾಟಗಳು ಕಡಿಮೆಯಾಗುವುವೆಂದೂ ಅವರು ಸೂಚಿಸಿರುತ್ತಾರೆ.

ಲಾಲ್‌ಬಾಗಿನ ಶತಮಾನೋತ್ಸವ

ಬೆಂಗಳೂರು ಲಾಲ್‌ಬಾಗ್ ಉದ್ಯಾನದ ಶತಮಾನೋತ್ಸವವು ಬರುವ ೧ನೇ ತಾರೀಖಿನಿಂದ ೧೧ರ ವರೆಗೂ, ಫಲಪುಷ್ಪ ಪ್ರದರ್ಶನವು ೧೦ರಿಂದ ೧೫ರ ವರೆಗೂ ನಡೆಯುವುವು. ಆ ಸಂದರ್ಭದಲ್ಲಿ ಪ್ರಖ್ಯಾತ ಕಲಾವಿದರಿಂದ ಸಂಗೀತ ಮತ್ತು ನೃತ್ಯಗಳ ಏರ್ಪಾಡಾಗಿದೆ. ೧ರಿಂದ ೯ರ ವರೆಗೆ ಪ್ರತಿನಿತ್ಯವೂ ಸಂಜೆ ಉಪನ್ಯಾಸಗಳಿವೆ. ೨ನೇ ತಾರೀಖು ಔಷಧಿ ಮೂಲಿಕೆಗಳ ಬಗ್ಗೆ ಭಾಷಣವನ್ನೇರ್ಪಡಿಸಲಾಗಿದೆ.

ವಾರ ಭವಿಷ್ಯ

[illegible]

ಮೇಷ :—[illegible] ವ್ಯಾಪಾರ, ಉದ್ಯೋಗ, [illegible] ಸಂಸಾರ [illegible] ಪ್ರವಾಸದಲ್ಲಿ ವಾಹನಾದಿಗಳಿಂದ [illegible]

ವೃಷಭ :—[illegible] ಅರ್ಥಕ್ಕೆ [illegible]

ಮಿಥುನ :— ಆರೋಗ್ಯ ನೆಟ್ಟಗೆ [illegible] ಉದ್ಯೋಗದಲ್ಲಿ [illegible]

ಕಟಕ :— [illegible]

ಸಿಂಹ :— [illegible]

ಕನ್ಯಾ :—[illegible]

ತುಲಾ :— [illegible]

ವೃಶ್ಚಿಕ :— [illegible]

ಧನು :— [illegible]

ಮಕರ :—[illegible] ಪ್ರವಾಸ, ಸಂಸಾರ ಸ್ಥಿತಿ [illegible], ವ್ಯಾಪಾರ, ಉದ್ಯೋಗದಲ್ಲಿ ಧನಿಕರ ಪ್ರೋತ್ಸಾಹ, ಪ್ರವಾಸ ಹಿತಕರ, ಆರೋಗ್ಯ ನೆಟ್ಟಗೆ.

ಕುಂಭ :—ಆರೋಗ್ಯ ನೆಟ್ಟಗೆ, ಕಾರ್ಯ ನಿರ್ವಹಣೆ, ಸಜ್ಜನರ ಸಹವಾಸ, ಬಂಧುಗಳ ಭೇಟಿ, ಪ್ರವಾಸ ನಿರ್ವಿಘ್ನಕರ.

ಮೀನ : ಮನಸ್ಸಿನ ಆತಂಕ ಪರಿಹಾರ, ಆಪ್ತರ ಭೇಟಿ. ವ್ಯಾಪಾರ, ಉದ್ಯೋಗಗಳಲ್ಲಿ ಸುಧಾರಣೆ, ದ್ರವ್ಯಾನುಕೂಲ, ಪ್ರವಾಸವುಂಟು

ಹೊಸ ಪಕ್ಷಕ್ಕೆ ಸೇರಿದುದಕ್ಕಾಗಿ ಮಂತ್ರಿ ಪದವಿ ನಷ್ಟ

ಪೂರ್ವ ಪಾಕಿಸ್ತಾನದ ಮಂತ್ರಿ ಮಹಮುದ್ ಅಲಿಯವರನ್ನು ಅಲ್ಲಿನ ಗವರ್ನರರು ಮುಖ್ಯ ಮಂತ್ರಿ ಅತಾವುರ್ ರಹಮಾನ್ ಖಾನರ ಸಲಹೆಯ ಪ್ರಕಾರ ವಜಾ ಮಾಡಿರುತ್ತಾರೆ. ಅಲಿಯವರು ಹೊಸದಾಗಿ ರಚಿತವಾಗಿರುವ ರಾಷ್ಟ್ರೀಯ ಜಾವಿ ಪಕ್ಷಕ್ಕೆ ಸೇರಿದುದೇ ಇದಕ್ಕೆ ಕಾರಣ.

ಭಾರತದಲ್ಲಿ ಟೆಲಿವಿಷನ್ ವ್ಯವಸ್ಥೆ ಮುಂದೆ ಹೋಯಿತು

ವಿದೇಶೀ ವಿನಿಮಯದ ಕೊರತೆ ಮತ್ತು ಪ್ರಕಾಶನ ಅಭಾವದಿಂದ ಬೊಂಬಾಯಿಯ ಟೆಲಿವಿಷನ್ ವ್ಯವಸ್ಥೆಯನ್ನು ಮುಂದೆ ಹಾಕಲಾಗಿರುವುದಾಗಿ ಕೇಂದ್ರ ಮಂತ್ರಿ ರಂಜಟಹದ್ದೂರ್‌ರವರು ತಿಳಿಸಿರುತ್ತಾರೆ

ಶ್ರೀ ರಾಮಾವತಾರ ಮಹಿಮೆ

ಶ್ರೀ ಪರಕಾಲ ಸ್ವಾಮಿಗಳವರ ಉಪದೇಶ

ಮೈಸೂರು ೨೫

ಶ್ರೀ ಪರಕಾಲ ಮಠದಲ್ಲಿ ಶ್ರೀ ಮದಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರು ತಮ್ಮ ೭೪ನೆಯ ತಿರುನಕ್ಷತ್ರದ ಅಂಗವಾಗಿ ಮೊನ್ನೆ ಭಾಷಣ ಮಾಡಿ ಈ ರೀತಿ ತಿಳಿಸಿದರು:-

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಪರಮಾತ್ಮನನ್ನು ರಾಜನೆಂದೂ ಮತ್ತು ಎಲ್ಲಾ ಪ್ರಜೆಗಳ [illegible] ಅವನಲ್ಲಿ ಸಮರ್ಪಿತರಾಗಿದ್ದಾರೆಂದೂ ಹೇಳಿರುತ್ತದೆ. ಜ್ಞಾನ ಸಂಕೋಚವೇ ಪ್ರಳಯ ಜ್ಞಾನ ವಿಕಾಸವೇ ಸೃಷ್ಟಿ ಎಂಬ ಉಪನಿಷತ್ತಿನ ರಹಸ್ಯ ಸುಷುಪ್ತಿ ಕಾಲದಲ್ಲಿ ರಾಜನಾದವನಿಗೂ, ಬಡವನಾದವನಿಗೂ ಒಂದೇ ವಿಧವಾದ ಸುಖಾನುಭವ ಉಂಟಾಗುತ್ತದೆ, ತಾರತಮ್ಯವಿಲ್ಲ. ಇದು ನಿರ್ಹೇತುಕವಾದ ಭಗವಂತನ ಕೃಪೆ ಸೃಷ್ಟಿ ಕಾಲದಲ್ಲಿ ಜೀವನ ಕರ್ಮಕ್ಕನುಗುಣವಾಗಿ ಫಲಗಳು ಲಭಿಸುತ್ತವೆ.

ನಿಖಿಲ ಚೇತನರ ಉಜ್ಜೀವನವೇ ರಾಮಾವತಾರದ ಉದ್ದೇಶ ಪರಮಾತ್ಮನು ತನ್ನ ಪರತ್ವವನ್ನು ಬದಿಗಿಟ್ಟು ಸೌಶೀಲ್ಯದಿಂದ ಸಜಾತೀಯನಾದ ಮಾನುಷ ರೂಪದಲ್ಲಿ ಅವತರಿಸಿದನು [illegible] ಮತ್ತು ಇತರರೊಡನೆ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತಾನು ಅನುಷ್ಠಾನ ಮಾಡಿ ತೋರಿಸಿದ್ದಾನೆ [illegible] ಎಂಬ ಪ್ರಶ್ನೆ [illegible] ನಿರ್ಣಯವಾಗಿದೆ.

[illegible] ಅವತಾರಕ್ಕೆ [illegible]

[illegible]

[illegible] ರಾಮಾಯಣದಲ್ಲಿ [illegible] ಸೀತಾದೇವಿಯು ತನಗೆ ತೋರಿಯದನ್ನು ಹೇಳುವಾಗ "ಸ್ನೇಹದಿಂದ ಅಭಿಮಾನದಿಂದ ಹೀಗೆ ಹೇಳುತ್ತಿದ್ದೇನೆ ಅಯ್ಯನೆ! ನಿನಗೆ ಬೋಧಿಸಲು ಹೊರಟಿಲ್ಲ" ಎನ್ನುತ್ತಾಳೆ ಭಗವಂತನಾದ ಶ್ರೀ ರಾಮನು ಮತ್ತೊಬ್ಬರ ಮನಸ್ಸನ್ನು ನೋಯಿಸದೆ ಅವರನ್ನು ತನ್ನ ದಾರಿಗೆ ತಿರುಗಿಸಿಕೊಂಡಿದ್ದಾನೆ. ವಿಭವಾವತಾರದ ಉದ್ದೇಶ ಇದೇ ಎಂದು ಶ್ರೀಗಳು ಅಪ್ಪಣೆ ಕೊಡಿಸಿದರು

ಭಾರತದ ಆನೇ ರೈಲ್ವೆ ವಲಯ

ಈಶಾನ್ಯ ರೈಲು ವಿಭಾಗದ ಹಲವು ಪ್ರದೇಶಗಳನ್ನು ಆನೇ ರೈಲ್ವೆ ವಲಯವಾಗಿ ಪರಿವರ್ತಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ. ಆಸ್ಸಾಮಿನ ಪಾಂಡು ಎಂಬಲ್ಲಿ ಅದರ ಕೇಂದ್ರ ಕಛೇರಿಯಿರುವುದು.

ಸಂಸ್ಥಾನದ ಪೊಲೀಸು ಅಧಿಕಾರಿಗಳ ಹುದ್ದೆಗಳಿಗೆ ಹೊಸ ಹೆಸರು

ಇಂಡಿಯನ್ ಪೋಲೀಸು ಸರ್ವಿಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಆ ದರ್ಜೆಗೆ ಸೇರುವ ಜೂನಿಯರ್ ಅಧಿಕಾರಿಗಳನ್ನು ಅಸಿಸ್ಟೆಂಟ್ ಪೊಲೀಸು ಸೂಪರಿಂಟೆಂಡೆಂಟರೆಂದೂ, ಸಂಸ್ಥಾನದ ಪೊಲೀಸು ಸರ್ವಿಸ್ಸಿಗೆ ನೇರವಾಗಿ ತೆಗೆದುಕೊಳ್ಳುವ ಅಥವಾ ಬಡ್ತಿಮೂಲಕ ಸೇರುವ ಪೊಲೀಸ್ ಇನ್ಸ್‌ಪೆಕ್ಟರುಗಳನ್ನು ಡೆಪ್ಯುಟಿ ಪೊಲೀಸು ಸೂಪರಿಂಟೆಂಡೆಂಟರೆಂದೂ ಮುಂದೆ ಕರೆಯಲಾಗುವುದು

ರೇಡಿಯೊ ಕಣಗಳ ಭೀತಿಯಿಂದಲೇ ಅರ್ಧದಷ್ಟು ಮಾನವರಿಗೆ ಹುಚ್ಚು ?

ರೇಡಿಯೊ ಕಣಗಳ ಪ್ರಸರಣದ ಭೀತಿಯಿಂದಲೇ ಅರ್ಧದಷ್ಟು ಮಾನವ ಕುಲಕ್ಕೆ ಮತಿ ಭ್ರಾಂತಿಯಾಗುವುದೆಂದು ಬ್ರಿಟನ್ನಿನ ವೈದ್ಯ ಸಂಘದ ಪತ್ರಿಕೆಯೊಂದು ವರದಿ ಮಾಡಿದೆ ಪತ್ರಿಕೆಯಲ್ಲಿ ಡಾ॥ ರೋಜರ್ ಪಿಲ್ಕಿಂಗ್‌ಟನ್ ಎಂಬ ಪ್ರಾಣಿ ಶಾಸ್ತ್ರ ಮತ್ತು ಜೀವೋತ್ಪತ್ತಿ ಶಾಸ್ತ್ರಗಳ ಪ್ರವೀಣರೊಬ್ಬರು ರೇಡಿಯೊ ಪ್ರಸರಣದಬಗ್ಗೆ ಪರೀಕ್ಷೆ ನಡೆಸುವುದು ಅಗತ್ಯವೆಂದು ಸೂಚಿಸಿರುತ್ತಾರೆ

ದಕ್ಷಿಣ ಆಫ್ರಿಕದಲ್ಲಿ ಮಹಿಳೆಯರಿಂದ ಪ್ರದರ್ಶನ

ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲಿನ ಪೀಟರ್ಸ್‌ಬರ್ಗ್ ನಗರದಲ್ಲಿ ಮೊನ್ನೆ ೩,೦೦೦ ಮಂದಿ ಮಹಿಳೆಯರು ಗುರುತಿನ ಚೀಟಿಗಳನ್ನು ತನ್ನ ಬಳಿ ಇಟ್ಟುಕೊಂಡಿರಬೇಕೆಂಬ ಆಜ್ಞೆಯ ವಿರುದ್ಧವಾಗಿ ಪ್ರತಿಭಟಿಸಿದರು. ಅಲ್ಲಿ ಎಲ್ಲ ಗಂಡಸರು ಹೆಂಗಸರೂ ಅದನ್ನು ತಮ್ಮ ಬಳಿ ಹೊಂದಿರಬೇಕೆಂದು ವಿಧಾಯಕವಾಗಿದೆ ನೂರೊಂದು ಕಡೆ ಅವುಗಳನ್ನು ಇಟ್ಟುಕೊಳ್ಳದಿದ್ದ ೧೦೧ ಮಹಿಳೆಯರ ಮೇಲೆ ಮೊಕದ್ದಮೆ ಹೂಡಲಾಯಿತು

ಬ್ರಿಟನ್ನಿನಲ್ಲಿ ನಡೆಯುತ್ತಿದ್ದ ೧ ಲಕ್ಷ ಬಸ್ ಕೆಲಸಗಾರರ ಮುಷ್ಕರವು ಇಂದಿನಿಂದ ಮುಕ್ತಾಯವಾಗುವುದು ಅವರ ವ್ಯಾಜ್ಯವನ್ನು ಕೈಗಾರಿಕಾ ನ್ಯಾಯಾಲಯಕ್ಕೆ ಒಪ್ಪಿಸಲಿರುವುದೇ ಇದಕ್ಕೆ ಕಾರಣ

WHEN YOU NEED PURE COW MILK

Contact

94 Tyagaraja Road Cross,

AND

1834 K. R Hospital Road

ಉತ್ತರ ಪ್ರದೇಶದಲ್ಲಿ ಹಸಿವಿನಿಂದ ಮರಣ

ಉತ್ತರ ಪ್ರದೇಶ ಪ್ರಾಂತದ ಜಿಯೂಲಿ ಎಂಬ ಗ್ರಾಮದಲ್ಲಿ ೭ ವರ್ಷದ ಹರಿಜನ ಬಾಲಕನೊಬ್ಬರು ಹಸಿವಿನಿಂದ ಮೃತಪಟ್ಟಿರುವುದಾಗಿ ವರದಿಯಾಗಿದೆ. ಅಲ್ಲಿನ ತಹಸೀಲುದಾರರು ಅವನ ಮನೆಗೆ ಭೇಟಿ ಕೊಟ್ಟಾಗ ಅವನ ತಾಯಿಯ ಹತ್ತಿರ ಬೇರೆಯಾವ ತಿನ್ನುವ ಪದಾರ್ಥಗಳೂ ಇಲ್ಲದೆ ಸ್ವಲ್ಪ ಹಿಪ್ಪೆ ಹೂಗಳಿದ್ದುವೆಂದು ಹೇಳಲಾಗಿದೆ, ಆಕೆಯ ಇತರ ಮಕ್ಕಳೂ ಹಸಿವಿನಿಂದ ಕೊಳಲುತ್ತಿವೆ

ಬೆಂಗಳೂರಿಯಿಂದ ನಗರಕ್ಕೆ ನೆನ್ನೆ ಬರುತ್ತಿದ್ದ ಲಾರಿಯು ನಗರದ ಹೊರಭಾಗದಲ್ಲಿ ೨೨ ವರ್ಷದ ಯುವಕನೊಬ್ಬನಿಗೆ ಢಿಕ್ಕಿ ಹೊಡೆದು ಅವನನ್ನು ಕೆ. ಆರ್. ಆಸ್ಪತ್ರೆಗೆ ಸೇರಿಸುವಾಗ ಮೃತಪಟ್ಟನು.

BUNGALOW FOR SALE

Big up staired Bungalow in Kantharaj Urs Road, K. M. Puram, for immediate Sale

Enquire at :

JAYA & CO.

House, Estate & Finance Agents.

Old Mysore Bank Road,

MYSORE

Phone No 520

C. T C PUBLICATIONS

B.A., B.Sc., ತರಗತಿಗಳ ಪಠ್ಯಪುಸ್ತಕವಾದ

(1958ನೇ ಪರೀಕ್ಷೆ)

ಅಂತಿಗೊನೆ

ಎಂಬ ಗ್ರಂಥದ ಭಾವಾನುವಾದ ಪಾತ್ರಪರಿಚಯ, ಟಿಪ್ಪಣಿ ಮತ್ತು ಪ್ರಶ್ನೋತ್ತರಗಳು

ಬೆಲೆ : ೧—೮೦

– Publishers :–

CITY TUTORIAL COLLEGE, MYSORE

Edited, Printed and Published by A. R Nagarajan at Sadhvi Press, D.Subbiah Road, Mysore



ನವೀನ ಮಾದರಿ ಗಡಿಯಾರಗಳಿಗೆ

ಫೇವರ್ ಲ್ಯೂಬಾ, ವೆಸ್ಟೆಂಡ್,

ಸೈಮಾ, ರೋಮರ್

ಇತ್ಯಾದಿ, ಇತ್ಯಾದಿ

ರಾಂ ಪತಂಗೆ ಕಂಪೆನಿ,

ಪ್ರಭಾ ಟಾಕೀಸ್ ಬಿಲ್ಡಿಂಗ್ಸ್, ಮೈಸೂರು,

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ,

ಲಿಮಿಟೆಡ್, ಮೈಸೂರು

ಹಳೆಯ ಮಾಲುಗಳ ಮಾರಾಟ

ಕೆಳಗೆ ಕಂಡ ಸಾಮಾನುಗಳನ್ನು ಕೊಳ್ಳುವುದಕ್ಕಾಗಿ ಮೊಹರಾದ ಟೆಂಡರುಗಳನ್ನು ಕರೆಯಲಾಗಿದೆ :-

1.	40 x 45 ಗ್ಯಾಲನ್ನು ಹಿಡಿಸುವ ಹಳೆಯ ಖಾಲಿ ಕಬ್ಬಿಣದ ಡ್ರಮ್ಮುಗಳು	150
2	ವಿವಿಧ ಬಗೆಯ ಮತ್ತು ಸೈಜಿನಾದ ಉಪಯೋಗಿಸಿದ ಹಳೆಯ ಖಾಲಿ ಗೋಣಿ ಚೀಲಗಳು	ಸುಮಾರು 4,000

—: ಷರತ್ತುಗಳು :—

1. "ಹಳೆಯ ಖಾಲಿ ಡ್ರಮ್ಮುಗಳು ಮತ್ತು ಖಾಲಿ ಚೀಲಗಳನ್ನು ಕೊಳ್ಳಲು ಟೆಂಡರುಗಳು" ಎಂದು ಬರೆದ ಮೊಹರಾದ ಟೆಂಡರುಗಳು 1957ನೇ ಆಗಸ್ಟ್ 8ನೇ ತಾರೀಖು ಮಧ್ಯಾಹ್ನ 1 ಗಂಟೆ ಅಥವಾ ಅದಕ್ಕೆ ಮುಂಚಿತವಾಗಿ ಕೆಳಗೆ ಸಹಿ ಹಾಕಿರುವವರಿಗೆ ಸೇರಬೇಕು.
2. ಟೆಂಡರಿನ ಜೊತೆಯಲ್ಲಿ 100 ರೂ ಠೇವಣಿ ಹಣವನ್ನು ಕೊಡತಕ್ಕದ್ದು
3. ಟೆಂಡರುದಾರರು ಎರಡು ಸಾಮಾನುಗಳಿಗಾಗಲೀ ಅಥವಾ ಒಂದಕ್ಕಾಗಲೀ ಟೆಂಡರನ್ನು ಕೊಡಬಹುದು
4. ಕೆಲಸದ ದಿನಗಳಲ್ಲಿ ಬೆಳಿಗ್ಗೆ 9 ರಿಂದ 12 ಮತ್ತು ಮಧ್ಯಾಹ್ನ 3 ರಿಂದ 5ರ ವರೆಗೆ ಟೆಂಡರುದಾರರು ಮಾಲುಗಳನ್ನು ಅಜಮಾಯಿಷಿ ಮಾಡಬಹುದು
5. ಅಂಗೀಕರಿಸಲ್ಪಡುವ ಟೆಂಡರುದಾರರು ತಿಳವಳಿಕೆ ಕೊಟ್ಟ 7 ದಿನಗಳೊಳಗೆ ಸಾಮಾನುಗಳ ಪೂರ್ಣ ಬೆಲೆ ಕೊಟ್ಟು ಅವನ್ನು ಕಾರ್ಖಾನೆಯಿಂದ ತೆಗೆದುಕೊಂಡುಹೋಗಬೇಕು
6. ಕಾರಣ ಕೊಡದೆ ಯಾವ ಟೆಂಡರನ್ನಾಗಲೀ ಒಪ್ಪಲು ಅಥವಾ ನಿರಾಕರಿಸಲು ಅಡಿಸಹಿದಾರರು ಅಧಿಕಾರವಿಟ್ಟುಕೊಂಡಿರುವರು

ಮೈಸೂರು (ರುಜು) ಎಂ. ಕೆ. ರಂಗರಾವ್,

ತಾ॥ 25-7-1957 ಜನರಲ್ ಮ್ಯಾನೇಜರ್ ಮತ್ತು ಕಾರ್ಯದರ್ಶಿ

ರಿಜಿ ನಂ 794

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 2 ನಯೆ ಪೈಸೆ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 2 ನಯೆಪೈಸೆ

ಸಂಪುಟ : ೧೫] SADHVI : MONDAY 29—7—1957 ಮೈಸೂರು : ಸೋಮವಾರ ೨೯—೭—೧೯೫೭ : [ಸಂಚಿಕೆ : ೩೩೦

ಮೆಕ್ಸಿಕೊವಿನಲ್ಲಿ ಭೂಕಂಪದಿಂದ ೨೦೦ ಜನರ ಮರಣ

ಗ್ರಾಮದಾನ ಪ್ರಚಾರಕ್ಕಾಗಿ ಸಂಸ್ಥಾನಕ್ಕೆ ಶಂಕರರಾವ್ ದೇವ್

ಮೈಸೂರು ೨೮

ಆಗಸ್ಟ್ ೧೧ರಿಂದ ಸಂಸ್ಥಾನದಲ್ಲಿ ಶ್ರೀ ಶಂಕರ ರಾವ್ ದೇವ್‌ರವರು ವಿನೋಬಾರವರ ಪಾದ ಯಾತ್ರೆಗೆ ಪೂರ್ವಭಾವಿಯಾದ ಪ್ರಚಾರವನ್ನು ಕೈಗೊಳ್ಳಲಿದ್ದಾರೆ ಅವರು ಮಠಕೇರಿಗೆ ಭೇಟಿ ಕೊಟ್ಟು, ಆಗಸ್ಟ್ ೩ನೇ ತಾರೀಖು ಶನಿವಾರ ಬೆಳಿಗ್ಗೆ ೯ರಿಂದ ಮಧ್ಯಾಹ್ನ ೩ರ ವರೆವಿಗೆ ಹುಣಸೂರು ತಾಲ್ಲೂಕು ಕಲ್ಲಹಳ್ಳಿಯಲ್ಲಿಯೂ, ಅದೇ ದಿನ ಸಂಜೆ ೪ ಗಂಟೆ ಮೇಲೆ ಉದ್ದೂರು ಗ್ರಾಮದಲ್ಲಿಯೂ ಇರುವರು. ಅವರ ನೇತೃತ್ವದಲ್ಲಿ ೮ ಹಳ್ಳಿಗಳಲ್ಲಿ ಗ್ರಾಮದಾನ ಪ್ರಚಾರ ಕಾರ್ಯಕ್ರಮ ಏರ್ಪಟ್ಟಿದೆ. ಸ್ವಯಂಸೇವಕರೂ ಅಭಿಮಾನಿಗಳೂ ೩ನೇ ತಾರೀಖು ಶನಿವಾರ ಕಲ್ಲಹಳ್ಳಿಗಾಗಲೀ, ಉದ್ದೂರಿಗಾಗಲೀ ಬಂದು ಯಾತ್ರಾ ತಂಡವನ್ನು ಸೇರಬೇಕೆಂದು ಕೋರಲಾಗಿದೆ

ಕಲ್ಲಹಳ್ಳಿಯು ಮೈಸೂರು-ಪಿರಿಯಾಪಟ್ಟಣ ಬಸ್ ರಸ್ತೆಯಲ್ಲಿ ಹುಣಸೂರಿನಿಂದ ೫ ಮೈಲಿ ಆಚೆಗೂ, ಉದ್ದೂರು ೨ ಮೈಲಿ ಈಚೆಗೂ ಇವೆ

ಅಸ್ಸಾಂ ಮುಖ್ಯ ಮಂತ್ರಿ ಮೇಲೆ ಕಲ್ಲೆಸೆತ

ಅಸ್ಸಾಮಿನಲ್ಲಿ ಎಣ್ಣೆ ಪರಿಷ್ಕರಣ ಕೇಂದ್ರದ ಸ್ಥಾಪನೆ ಬಗ್ಗೆ ತಾವು ನಡೆಸಿರುವ ಪ್ರಯತ್ನವನ್ನು ಅಸ್ಸಾಮಿನ ಮುಖ್ಯ ಮಂತ್ರಿ ವಿಷ್ಣುರಾಂ ಮೇಧಿ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಚಾಲಿಹರವರು ೫,೦೦೦ ಜನರಿದ್ದ ಸಭೆಯಲ್ಲಿ ನೆನ್ನೆ ವಿವರಿಸುತ್ತಿದ್ದಾಗ ಅವರುಗಳ ಮೇಲೆ ಕಲ್ಲುಗಳನ್ನು ಬೀರಲಾಯಿತೆಂದು ಹೇಳಲಾಗಿದೆ ಅಸ್ಸಾಮಿನಲ್ಲಿ ಕೇಂದ್ರವನ್ನು ಸ್ಥಾಪಿಸುವಂತೆ ಕೋರಲು ಭಾರತ ಸರ್ಕಾರದ ಬಳಿ ಹೋಗಿದ್ದ ನಿಯೋಗದ ಕಾರ್ಯವು ಯಶಸ್ವಿಯಾಗಿರುವುದೆಂದು ಮುಖ್ಯ ಮಂತ್ರಿಯವರು ತಿಳಿಸಿದರು. ಕೇಂದ್ರವನ್ನು ಅಸ್ಸಾಮಿನಲ್ಲಿ ಸ್ಥಾಪಿಸುವ ಬಗ್ಗೆ ನಿರ್ದಿಷ್ಟವಾದ ಹೇಳಿಕೆಯನ್ನು ಭಾರತ ಸರ್ಕಾರವು ಕೊಡದಿರುವುದಕ್ಕಾಗಿ ಈ ದಿನ ಸಂಸ್ಥಾನಾದ್ಯಂತ ಹರತಾಳ ನಡೆಯುವುದು.

ಆಗಸ್ಟ್ ೨೪ರಿಂದ ವಿನೋಬಾರವರ ಕರ್ನಾಟಕ ಪ್ರವಾಸ

ಆಚಾರ್ಯ ವಿನೋಬಾ ಭಾವೆಯವರು ಬರುವ ತಿಂಗಳು ೨೪ ರಿಂದ ಕರ್ನಾಟಕದಲ್ಲಿ ಪ್ರವಾಸ ನಡೆಸುವರು. ಅವರು ಅಂದು ಮಂಗಳೂರು ಜಿಲ್ಲೆಯ ಉಳ್ಳಾಲಿಗೆ ಬರುವರು ಸೆಪ್ಟೆಂಬರ್ ೨೦ ರಂದು ಕೊಡಗಿನ ಮೂಲಕ ಮೈಸೂರಿಗೆ ಆಗಮಿಸುವರು

ವಿಜಯನಗರದ ರಾಜಕುಮಾರರಿಂದ ಶಾಸನಸಭಾ ವೇತನ ತ್ಯಾಗ

ಉತ್ತರ ಪ್ರದೇಶದ ವಿಧಾನ ಪರಿಷತ್ತಿನ ಸದಸ್ಯರಾಗಿರುವ ವಿಜಯನಗರದ ಮಹಾರಾಜಕುಮಾರರಾದ ಡಾ॥ ವಿಜಯರವರು, ಶಾಸನಸಭಾ ಸದಸ್ಯರಾಗಿ ತಾವು ಮಾಹೆಯಾನಾ ಪಡೆಯುವ ೨೨೦ ರೂ. ಸಂಬಳವನ್ನು, ಇದೇ ತಿಂಗಳಿಂದ ಒಂದು ವರ್ಷ ಕಾಲ ಬಿಟ್ಟುಕೊಟ್ಟಿರುವರು.

ಕವರುಗಳ ಗೈರುಹಾಜರಿ ಬಗ್ಗೆ ಅಂಚೆ ನೌಕರನ ಬಂಧನ

ಬೆಂಗಳೂರು ೨೮

ಇಲ್ಲಿನ ಆರ್.ಎಂ.ಎಸ್. ಕಛೇರಿಯಲ್ಲಿ ಹಲವಾರು ಮೊಹರಾದ ಲಕೋಟೆಗಳ ಕಳುವಿನ ಸಂಬಂಧದಲ್ಲಿ ಪೋಲೀಸರು ನೆನ್ನೆ ಸಾರ್ಟರ್ ಖಾದರ್ ಹುಸೇನ್ ಎಂಬುವನನ್ನು ದಸ್ತಗಿರಿ ಮಾಡಿ, ಮುಂದಿನ ತನಿಖೆ ಕ್ರಮ ನಡೆಸುತ್ತಿರುವರು. ಅವನ ಬಳಿ ಸುಮಾರು ನೂರು ಡಜನ್ ಲಕೋಟೆಗಳು ಸಿಕ್ಕಿದುವೆಂದೂ, ಅವುಗಳಲ್ಲಿ ನೋಟುಗಳು ದೊರೆಯುವುವೆಂಬ ಆಸೆಯಿಂದ ಅವನ್ನು ಅಪಹರಿಸಿದ್ದನೆಂದೂ ಹೇಳಲಾಗಿದೆ ಖಾದರ್ ಹುಸೇನನಿಗೆ ೨೫ ವರ್ಷ ಸರ್ವಿಸ್ ಆಗಿದೆ

ಕಾಶ್ಮೀರದ ಮಂತ್ರಿಗಳಿಂದ ಶೇ॥ ೨೦ ರಷ್ಟು ಸಂಬಳ ಖೋತಾ

ಕಾಶ್ಮೀರದಲ್ಲಿ ಚುನಾವಣೆಯಾದನಂತರ ಹೊಸ ಮಂತ್ರಿಮಂಡಲವು ಏರ್ಪಟ್ಟು ನೆನ್ನೆ ಬಕ್ಷಿ ಗುಲಾಂ ಮಹಮದ್ ಮತ್ತು ಇತರೆ ೪ ಜನ ಮಂತ್ರಿಗಳು ಸದರ್-ಇ-ರಿಯಾಸತ್ ಕರಣಸಿಂಗರ ಮುಂದೆ ಪ್ರಮಾಣ ವಚನ ಸ್ವೀಕರಿಸಿದರು. ಡೆಪ್ಯುಟಿ ಮಂತ್ರಿಗಳಾಗಿದ್ದ ಲಡಕ್ಕಿನ ಮುಖ್ಯ ಲಾಮಾರವರು ಅಲ್ಲಿನ ರಾಜ್ಯ ಮಂತ್ರಿಯಾಗಿರುವರು. ನೂತನ ಮಂತ್ರಿಮಂಡಲದ ಸದಸ್ಯರಲ್ಲಿ ಶಾಮಲಾಲ್ ಸರಾಫರನ್ನು ಬಿಟ್ಟರೆ, ಮಿಕ್ಕವರೆಲ್ಲರೂ ಹೊಸಬರು ಸಚಿವರುಗಳು ತಮ್ಮ ಸಂಬಳದಲ್ಲಿ ಶೇಕಡ ೨೦ ರಷ್ಟು ಖೋತಾ ಮಾಡಿಕೊಂಡಿರುವರು

ಶಸ್ತ್ರ ಸನ್ಯಾಸದ ಸಂಧಾನದಲ್ಲಿ ಬಿಕ್ಕಟ್ಟಿನ ತಡೆಗೆ ಡಲ್ಲೆಸರ ಕ್ರಮ

ಶಸ್ತ್ರ ಸನ್ಯಾಸದ ಬಗ್ಗೆ ಲಂಡನ್ನಿನ ಸಂಧಾನಗಳಲ್ಲಿ ಬಿಕ್ಕಟ್ಟು ಪ್ರಾಪ್ತಿಯಾಗದಂತೆ ಮಾಡಲು ಅಮೇರಿಕದ ಅಧ್ಯಕ್ಷ ಐಸೆನ್‌ಹೋವರರ ಸೂಚನೆಯಂತೆ ಅಲ್ಲಿನ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು ಲಂಡನ್ನಿಗೆ ಬಂದು ಮುಂದಿನ ಕ್ರಮ ಜರುಗಿಸುವರೆಂದು ಹೇಳಲಾಗಿದೆ. ಅವರು ತಮ್ಮ ಪ್ರತಿನಿಧಿ ಸ್ಟಾಸೆನ್‌ರವರನ್ನು ಭೇಟಿ ಮಾಡುವರು. ಅಲ್ಲದೆ ಬ್ರಿಟಿಷ್ ಮಂತ್ರಿಗಳನ್ನೂ ಕಾಣುವರು ವಿವಿಧ ರಾಷ್ಟ್ರಗಳಲ್ಲಿ ವಿಮಾನ ಪರಿಶೀಲನಾ ವಲಯಗಳ ನ್ನೇರ್ಪಡಿಸುವ ಬಗ್ಗೆ ಅವರು ಪಶ್ಚಿಮ ರಾಷ್ಟ್ರಗಳಲ್ಲಿ ಒಮ್ಮತ ಮೂಡಿಸಲು ಮುಖ್ಯ ಉದ್ದೇಶ ಹೊಂದಿರುವರೆಂದು ಹೇಳಲಾಗಿದೆ. ಇದಕ್ಕೆ ಪ್ರತಿಯಾಗಿ ರಷ್ಯಾ ಸರ್ಕಾರದವರು ತಮ್ಮ ವಿದೇಶಾಂಗ ಮಂತ್ರಿ, ಗ್ರಾಮಿಕೊರವರನ್ನು ಲಂಡನ್ನಿಗೆ ಕಳುಹಬಹುದು.

ಪಾಕಿಸ್ತಾನದ ಕೈಗಾರಿಕಾಭಿವೃದ್ಧಿಗೆ ವಿಶ್ವಬ್ಯಾಂಕಿನ ನೆರವಿಲ್ಲ

ಪಾಕಿಸ್ತಾನದ ಕೈಗಾರಿಕೆಗಳ ಅಭಿವೃದ್ಧಿಗೆ ಹಣಕಾಸಿನ ಸಹಾಯವೀಯಲು ವಿಶ್ವ ಬ್ಯಾಂಕು ಸಿದ್ಧವಾಗಿಲ್ಲವೆಂದು ಪಾಕಿಸ್ತಾನದ ಕೈಗಾರಿಕಾ ಅಭಿವೃದ್ಧಿ ಕಾರ್ಪೊರೇಷನ್ನಿನ ಅಧ್ಯಕ್ಷರಾದ ಗುಲಾಂ ಫರೂಕಿಯವರು ತಿಳಿಸಿರುತ್ತಾರೆ. ಪಾಕಿಸ್ತಾನ ಸರ್ಕಾರದವರು ಸೆಣಬು ಕಾರ್ಖಾನೆಗಳನ್ನು ನಿರ್ಮಿಸಬಾರದೆಂದು ಬ್ಯಾಂಕಿನವರು ಸಲಹೆ ಮಾಡಿರುವುದಾಗಿ ಗೊತ್ತಾಗಿದೆ.

ಮೆಕ್ಸಿಕೊ ಭೂಕಂಪದಲ್ಲಿ ೨೦೦ ಜನರ ಮರಣ

ಮೆಕ್ಸಿಕೊ ನಗರದಲ್ಲಿ ನೆನ್ನೆ ಮುಂಜಾನೆ ಭೂಕಂಪವಾಗಿ ೨೦೦ ಜನಕ್ಕೂ ಹೆಚ್ಚು ಮಂದಿ ಮೃತಪಟ್ಟು, ಇನ್ನೂರು ಮಂದಿಗೆ ಗಾಯವಾದುದಾಗಿ ವರದಿಯಾಗಿದೆ ಅಲ್ಲಿ ೫ ವರ್ಷಗಳಿಂದ ಇಂತಹ ಭಾರಿ ಭೂಕಂಪವು ಆಗಿರಲಿಲ್ಲ. ಇದರಿಂದ ಅನೇಕ ಭವನಗಳು ಉರುಳಿದುವು. ಭೂಮಿಯು ಗುಡುಗಿದಾಗ ೧೨ ಅಂತಸ್ತಿನ ಒಂದು ಭವನವು ಕುಸಿದುಬಿದ್ದು, ಅದರಲ್ಲಿ ವಾಸಿಸುತ್ತಿದ್ದ ೧೨ ಸಂಸಾರದವರೂ ಹೂತುಹೋದರು. ಮರಣದ ಸಂಖ್ಯೆಯು ಇನ್ನೂ ಹೆಚ್ಚುತ್ತಿರುವುದಾಗಿ ವರದಿಯಾಗಿದೆ ಗಾಯಗೊಂಡವರಲ್ಲಿ ಅನೇಕರು ಬದುಕುವ ಸಂಭವವಿಲ್ಲವೆಂದು ಹೇಳಲಾಗಿದೆ ಮೆಕ್ಸಿಕೊ ನಗರದ ಬಳಿ ಇರುವ ಅಕಾಪುಲ್ಕೊ ಎಂಬ ಊರಿನಲ್ಲಿಯೂ ಸಹ ಭೂಕಂಪದಿಂದ ಉಂಟಾದ ಸಾವುನೋವುಗಳು ಮೆಕ್ಸಿಕೊ ನಗರದಷ್ಟೇ ಇರುವುದಾಗಿ ವರದಿಯಾಗಿದೆ

ಜಪಾನಿನಲ್ಲಿ ಪ್ರವಾಹದಿಂದ ೪,೦೦೦ ಸಾವುನೋವುಗಳು

ದಕ್ಷಿಣ ಜಪಾನಿನ ಕಿಯುಸು ದ್ವೀಪದಲ್ಲಿ ಮೂರು ದಿನಗಳ ಮಳೆಯು ಪ್ರಯುಕ್ತ ವಿಪರೀತ ಪ್ರವಾಹದಿಂದ ೪,೦೦೦ ಮಂದಿ ಪ್ರಾಣ ಬಿಟ್ಟಿರುತ್ತಾರೆ, ಅಥವಾ ಗಾಯಗೊಂಡು ಇಲ್ಲವೆ ನಾಪತ್ತೆಯಾಗಿರುತ್ತಾರೆ ೨॥ ಲಕ್ಷ ಜನರು ಮನೆಮಾರುಗಳನ್ನು ಕಳೆದುಕೊಂಡಿರುವರು ಸಾವಿರಾರು ಸಂಸಾರಗಳವರು ಬೆಟ್ಟಗಳ ಮೇಲೆ ಓಡಿಹೋಗಿ ಆಶ್ರಯ ಪಡೆದಿರುವರು. ಸಮುದ್ರದಲ್ಲಿ ಅನೇಕ ಮಕ್ಕಳ ಶವಗಳು ತೇಲುತ್ತಿವೆ.

ಪಾಕಿಸ್ತಾನಕ್ಕೆ ಆರು ರಾಷ್ಟ್ರಗಳ ಪ್ರತಿಭಟನೆ

ಅಮೇರಿಕದಲ್ಲಿ ಸುಹ್ರಾವರ್ದಿಯವರ ಭಾಷಣಗಳಿಗಾಗಿ

ಅಮೇರಿಕದಲ್ಲಿ ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ಮಾಡುತ್ತಿರುವ ಭಾಷಣಗಳ ಬಗ್ಗೆ ಪಾಕಿಸ್ತಾನ ಸರ್ಕಾರಕ್ಕೆ ಭಾರತ, ರಷ್ಯಾ, ಚೀಣ ಮತ್ತು ಅಫ್ಘಾನಿಸ್ತಾನಗಳು ಪ್ರತಿಭಟಿಸಿರುವುದಾಗಿಯೂ, ಇಂಡೊನೇಷ್ಯಾ ಮತ್ತು ಸಿರಿಯಗಳು ಆಕ್ಷೇಪಿಸಿರುವುದಾಗಿಯೂ ವರದಿಯಾಗಿದೆ

ಐ. ಎನ್. ಟಿ. ಯು. ಸಿ. ಅಧ್ಯಕ್ಷರಿಗೆ ಅಂಚೆ ಸಂಘದವರ ಮನವಿ

ಅಂಚೆ ಮತ್ತು ತಂತಿ ಇಲಾಖೆಗಳ ನೌಕರರ ರಾಷ್ಟ್ರೀಯ ಸಂಸ್ಥೆಯ ಕೌನ್ಸಿಲ್ಲಿನವರು ಭಾರತದ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಎಸ್. ಆರ್. ವಾಸವದರವರಿಗೆ ಮನವಿಯೊಂದನ್ನು ಸಲ್ಲಿಸಿ ಅಂಚೆ ಮತ್ತು ತಂತಿ ನೌಕರರ ಬೇಡಿಕೆಗಳನ್ನು ಸರ್ಕಾರದವರು ಸಲ್ಲಿಸಬೇಕೆಂದು ಶ್ರೀ ವಾಸವದರವರು ತಮ್ಮ ಪ್ರಭಾವವನ್ನು ಬೀರುವಂತೆ ಕೋರಿರುತ್ತಾರೆ. ಇಲ್ಲವಾದರೆ ರೈಲ್ವೆ ಮತ್ತು ರಕ್ಷಣಾ ಸಿಬ್ಬಂದಿಯವರನ್ನು ತಮ್ಮ ಹೋರಾಟಕ್ಕೆ ಸೇರಿಸಬೇಕೆಂದೂ ಅವರು ಕರೆಯುತ್ತಿರುವರು

ಅರಮನೆ ನೌಕರರು ಸರ್ಕಾರಕ್ಕೆ ಸೇರಿದವರಲ್ಲ

ವಿಧಾನ ಸಭೆಯಲ್ಲಿ ಕಾರ್ಮಿಕ ಸಚಿವರ ಹೇಳಿಕೆ

ಬೆಂಗಳೂರು ೨೮

ವಿಧಾನ ಸಭೆಯಲ್ಲಿ ನೆನ್ನೆ ಕಾರ್ಮಿಕ ಮಂತ್ರಿ ಶ್ರೀ ಬಾಳಗಾರವರು ಮಾತನಾಡಿ. ಅರಮನೆ ನೌಕರರು ಸರ್ಕಾರಕ್ಕೆ ಸೇರಿದವರಲ್ಲವೆಂದು ತಿಳಿಸಿದರು ಮೊದಲು ಶ್ರೀ ಕೆ. ಕೆಂಚಪ್ಪನವರು ಖೋತಾ ಆದ ೫೦೦ ಮಂದಿ ಅರಮನೆ ನೌಕರರ ವಿಷಯವನ್ನು ಪ್ರಸ್ತಾಪಿಸಿ, ಅವರುಗಳು ಖೋತಾ ಬಗ್ಗೆ ಪ್ರತಿಭಟಿಸುತ್ತಿಲ್ಲವೆಂದೂ, ಬೇರೆ ಉದ್ಯೋಗಗಳನ್ನು ಕೇಳಿರುವರೆಂದೂ, ಅದನ್ನೊದಗಿಸುವುದು ಸರ್ಕಾರದ ಕರ್ತವ್ಯವೆಂದೂ ತಿಳಿಸಿದರು.

ಅವರುಗಳು ಕಾರ್ಮಿಕರೆಂದೂ, ಆ ಕಾನೂನಿನ ಪ್ರಕಾರ ಸೌಲಭ್ಯ ಕೇಳಲು ಅವರಿಗೆ ಹಕ್ಕಿರುವುದೆಂದೂ ಸೂಚಿಸಲಾಗಿ, ಅದನ್ನು ರೆವಿನ್ಯೂ ಬೇಡಿಕೆ ಚರ್ಚೆಯಲ್ಲಿ ಪರಿಗಣಿಸಲಾಗುವುದೆಂದು ಸಚಿವ ಶ್ರೀ ಚನ್ನಿಗರಾಮಯ್ಯನವರು ಸೂಚಿಸಿದರು.

ವ್ಯವಸಾಯ ಯೋಗ್ಯ ಜಮೀನಿನ ಸರ್ವೆ

ವಿಧಾನ ಸಭೆಯಲ್ಲಿ ನೆನ್ನೆ ರೆವಿನ್ಯೂ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಮಾತನಾಡಿ, ಎಲ್ಲಾ ಸರ್ಕಾರಿ ಬಂಜರು ಜಮೀನು ಮತ್ತು ಅಮೃತ ಮಹಲ್ ಕಾವಲುಗಳಲ್ಲಿ ಸರ್ವೆ ನಡೆಸಿ, ವ್ಯವಸಾಯ ಯೋಗ್ಯವಾದ ಜಮೀನನ್ನು ಗೊತ್ತುಪಡಿಸಲಾಗುವುದೆಂದು ತಿಳಿಸಿದರು.

ರಸ್ತೆ ಸಂಚಾರ ಇಲಾಖೆಯವರಿಂದ ೧೧೦೦ನೇ ಬಸ್ಸು ತಯಾರಿ

ಸಂಸ್ಥಾನದ ರಸ್ತೆ ಸಂಚಾರ ಇಲಾಖೆಯವರು ತಮ್ಮ ೧೧೦೦ನೇ ಬಸ್ಸನ್ನು ತಯಾರಿಸಿರುತ್ತಾರೆ. ನೆನ್ನೆ ಬಸ್ಸನ್ನು ಹೊರಕ್ಕೆ ಬಿಡುವ ಸಮಾರಂಭವೊಂದು ನಡೆದು, ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಅದನ್ನು ನೆರವೇರಿಸಿದರು. ರಸ್ತೆ ಸಂಚಾರ ಇಲಾಖೆಯವರು ಐದು ವರ್ಷಗಳಿಂದ ಬಸ್ಸು ಬಾಡಿ ಕಟ್ಟುತ್ತಿರುವರು.

ಫುಟ್‌ಬಾಲ್ ಸಂಸ್ಥೆ ಅಧಿಕಾರ ವರ್ಗ

ಮೈಸೂರು ೨೮

ಮೈಸೂರು ಡಿವಿಜನ್ ಫುಟ್‌ಬಾಲ್ ಸಂಘದ ೧೧ನೇ ವಾರ್ಷಿಕ ಸಭೆಯು ನೆನ್ನೆ ನಡೆಯಿತು. ಶ್ರೀ ಬಿ. ಟಿ. ಶ್ರೀನಿವಾಸಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ಅಂಗೀಕಾರವಾದಮೇಲೆ ಅಧಿಕಾರ ವರ್ಗದ ಚುನಾವಣೆಯು ನಡೆದು, ಶ್ರೀ ಬಿ. ವಿ. ನಂಜುಂಡಯ್ಯನವರು ಉಪಾಧ್ಯಕ್ಷರು, ಶ್ರೀ ಬಿ. ಟಿ. ಶ್ರೀನಿವಾಸಯ್ಯಂಗಾರ್ ಛೇರ್ಮನ್ ಮತ್ತು ಶ್ರೀ ಬಿ. ಶ್ರೀನಿವಾಸಯ್ಯಂಗಾರ್ಯರು ಗೌ॥ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಚುನಾಯಿತರಾದರು ಶ್ರೀಗಳಾದ ಎ. ಎಂ. ಮುಜೀಬ್, ಎಂ. ಜಯಗೋಪಾಲ್, ಎಂ. ವಿ. ಗೋಪಾಲ್, ಕೆ. ನರಸಿಂಹಮೂರ್ತಿ, ಎಂ. ಗೋಪಾಲರಾಜೆ ಅರಸ್, ಬಿ. ಸಿ. ಆರ್. ವಿಠಲ್ ಮತ್ತು ಆನಂದರಾಯರು ಸದಸ್ಯರಾಗಿ ಆರಿಸಲ್ಪಟ್ಟರು.

ಸಧ್ಯದಲ್ಲೇ ಆಂಧ್ರ ಗ್ರಾಮಾಧಿಕಾರಿಗಳ ಮುಷ್ಕರ ಮುಕ್ತಾಯ

ಆಂಧ್ರದ ಗ್ರಾಮಾಧಿಕಾರಿಗಳ ಕುಂದುಕೊರತೆಗಳನ್ನು ಪರಿಶೀಲಿಸಲು ನೇಮಕವಾಗಿರುವ ಸಮಿತಿಯವರು ತನಿಖೆ ನಡೆಸಿ ವರದಿಯನ್ನು ಒಪ್ಪಿಸುವವರೆಗೆ ಅಲ್ಲಿನ ಸರ್ಕಾರದವರು ಗ್ರಾಮಾಧಿಕಾರಿಗಳಿಗೆ ತಾತ್ಕಾಲಿಕ ಪರಿಹಾರವನ್ನು ನೀಡಿ ಪ್ರಕಟಣೆ ಹೊರಡಿಸಲಿರುವರೆಂದೂ, ಇದರ ಪರಿಣಾಮವಾಗಿ, ಅವರುಗಳು ಕೈಗೊಂಡಿರುವ ಮುಷ್ಕರವು ಸಧ್ಯದಲ್ಲೇ ಮುಕ್ತಾಯವಾಗಲಿರುವುದೆಂದೂ ವರದಿಯಾಗಿದೆ.

ಅನಂತಪುರ ಜಿಲ್ಲೆಯ ಇಲ್ಲೂರು ಎಂಬ ಹಳ್ಳಿಯ ಬರಾವರ್ದಾ ಗ್ರಾಮ ಮುನ್ಸಿಫರಾದ ಆಂಧ್ರದ ಮುಖ್ಯ ಮಂತ್ರಿ ಸಂಜೀವರೆಡ್ಡಿಯವರ ತರಫಿನಲ್ಲಿ ಕೆಲಸ ನೋಡುತ್ತಿದ್ದ ಗ್ರಾಮಾಧಿಕಾರಿಯು ಜಮಾಬಂದಿಗೆ ಹಾಜರಾಗದ ಕಾರಣ ಅಲ್ಲಿನ ಪದ್ಧತಿಯಂತೆ ಮೂಲ ಬರಾವರ್ದಾದಾರರಿಗೆ ನೋಟೀಸು ಜಾರಿ ಮಾಡಿ ಸಮಜಾಯಿಷಿ ಕೇಳುವ ಬಗ್ಗೆ ಅನಂತಪುರ ಜಿಲ್ಲೆಯ ರೆವಿನ್ಯೂ ಅಧಿಕಾರಿಗಳಿಗೆ ಆತಂಕವುಂಟಾಗಿರುವುದೆಂದು ವರದಿಯಾಗಿದೆ.

ರಾಜಕೀಯ ಸಂತ್ರಸ್ತರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ

ಮದ್ರಾಸಿನಲ್ಲಿ ರಾಜಕೀಯ ಸಂತ್ರಸ್ತರ ಮಕ್ಕಳಿಗೆ ಎಲ್ಲ ಘಟ್ಟಗಳ ವಿದ್ಯಾಭ್ಯಾಸದಲ್ಲೂ ಉಚಿತ ಶಿಕ್ಷಣ ಕೊಡಬೇಕೆಂದು ಸರ್ಕಾರದವರು ನಿರ್ಧರಿಸಿರುತ್ತಾರೆ. ಈ ವಿಷಯವನ್ನು ಕುರಿತು ಅಲ್ಲಿನ ವಿದ್ಯಾ ಮಂತ್ರಿಯವರು ಶಾಸನಸಭೆಯಲ್ಲಿ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅನೇಕ "ತ್ಯಾಗಿ"ಗಳ ಕಷ್ಟ ಸ್ಥಿತಿಯನ್ನು ವರ್ಣಿಸಿದರು. ಕೆಲವು ವರ್ಷಗಳ ಹಿಂದೆ ಅಂತಹವರಿಗೆ ಜಮೀನು ಕೊಡಬೇಕೆಂದು ಯೋಜನೆ ಹಾಕಲಾಗಿತ್ತೆಂದೂ, ಆದರೆ ಅದು ಯಶಸ್ವಿಯಾಗಿ ನಡೆಯಲಿಲ್ಲವೆಂದೂ, ಈಗ ಸರ್ಕಾರದವರು ಉಚಿತ ಶಿಕ್ಷಣ ಕೊಡಲು ನಿರ್ಧರಿಸಿರುವರೆಂದೂ ಅವರು ಹೇಳಿರುತ್ತಾರೆ. ಬಡವರಿಗೆ ಮಾತ್ರ ಇದು ಅನ್ವಯಿಸುವುದು.

ಕೊಕ್ಕೋ ಕ್ರೀಡಾ ಶಿಕ್ಷಣದ ಮುಕ್ತಾಯ ಸಮಾರಂಭ

ನಗರದ ಪಯೊನೀರ್ಸ್ ಸ್ಪೋರ್ಟ್ಸ್ ಕ್ಲಬ್ಬಿನವರ ಆಶ್ರಯದಲ್ಲಿ ಕಳೆದ ೧೦ ದಿನಗಳಿಂದಲೂ ಬಾಲಕ ಹೈಸ್ಕೂಲುಗಳ ವಿದ್ಯಾರ್ಥಿಗಳಿಗಾಗಿ ನಡೆಯುತ್ತಿದ್ದ ಕೊಕ್ಕೋ ಕ್ರೀಡಾ ಶಿಕ್ಷಣವು ನೆನ್ನೆ ಮುಗಿಯಿತು. ನೆನ್ನೆ ಸಂಜೆ ನಡೆದ ಸಮಾರಂಭದಲ್ಲಿ ಡಿವಿಜನಲ್ ಕಮಿಷನರ್ ಶ್ರೀ ಕೆ. ಶೇಷಗಿರಿರಾಯರು ಶಿಕ್ಷಣ ಪಡೆದ ೩೧ ಜನ ವಿದ್ಯಾರ್ಥಿಗಳಿಗೂ ಪ್ರಶಸ್ತಿ ಪತ್ರಗಳನ್ನು ವಿನಿಯೋಗ ಮಾಡಿದರು. ಅವರು ಭಾಷಣ ಮಾಡಿ, ಹಳ್ಳಿ ದಿಳ್ಳಿಗಳೆನ್ನದೆ ದೇಶಾದ್ಯಂತ ಒಂದೇ ಸಮನಾಗಿ ಹೊಂದಬಲ್ಲ ಸ್ವದೇಶಿ ಕ್ರೀಡೆಗಳನ್ನು ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸುವುದು ಅತ್ಯವಶ್ಯಕವೆಂದು ಹೇಳಿ, ಆ ಬಗ್ಗೆ ತಮ್ಮ ಕೈಲಾದ ಸಹಾಯವನ್ನು ಮಾಡುವುದಾಗಿ ಭರವಸೆಯಿತ್ತರು. ಪ್ರಾರಂಭದಲ್ಲಿ ಕ್ಲಬ್ಬಿನ ಸಹ ಕಾರ್ಯದರ್ಶಿ ಶ್ರೀ ಕೈಲಾಸಕುಮಾರ್‌ರವರು ಸ್ವಾಗತ ಭಾಷಣ ಮಾಡಿ ವರದಿಯನ್ನೊಪ್ಪಿಸಿದರು. ಕ್ರೀಡಾ ಶಿಕ್ಷಕರಾದ ಶ್ರೀಗಳಾದ ಲಕ್ಷ್ಮೀಶಪ್ಪ, ವೀರಭಾಜೆ ಅರಸ್ ಮತ್ತು ರಂಗನಾಥರಾಯರಿಗೆ ಪದಕಗಳನ್ನು ನೀಡಲಾಯಿತು. ಕಾರ್ಯದರ್ಶಿ ಶ್ರೀ ರಾಜಾರಾಯರು ವಂದನಾರ್ಪಣೆ ಮಾಡಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕೊಳಲು. ೭-೧೫ ಕೆ. ಆರ್. ಲೀಲಾವತಿ-ದೇವರ ನಾಮ ೮-೧೫ ಗಾಥ ವಿಹಾರ ಮಧ್ಯಾಹ್ನ ೧೨ ಕೆ. ಆರ್. ಲೀಲಾವತಿ-ದೇವರ ನಾಮ. ೧೨-೩೦ ವನಿತಾ ವಿಹಾರ ೧-೨೦ ರೆಕಾರ್ಡ್ ೧ ೫೦ ಕೊಳಲು ೫-೧೫ ವಿದ್ಯಾರ್ಥಿಗಳಿಗಾಗಿ. ಸಂಜೆ ೬ ೧೦ ಕಾವ್ಯವಾಚನ ೭-೩೦ ಪ್ರಸಂಗ. ೮ ವಿನೋದ ಕಾರ್ಯಕ್ರಮ ೯ ೮-೩೦ ರೆಕಾರ್ಡ್ ೯-೧೫ ಸಂಗೀತ: ಧಾರವಾಡದ ಕಲೆ.

ಕಲಾವಿದರಿಗೆ ಸತ್ಕಾರ

ಮೈಸೂರು ೨೯.

ಕಳೆದ ವಾರ ಚಿತ್ರಕಲಾ ಸಂಸ್ಥೆಯ ಆಶ್ರಯದಲ್ಲಿ ನಡೆದ ನಾಟಕ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಮಾತಾ ಕಲಾವಿದರ ಸಂಘದ ಸ್ಥಾಪಕ ಶ್ರೀ ಬಿ. ಎಸ್. ಮಲ್ಯಂ ಮತ್ತು ಉತ್ತಮ ನಟ ಶ್ರೀ ಕೆ. ವಿ ರಾಮರ್ತವರುಗಳ ಗೌರವಾರ್ಥವಾಗಿ ನೆನ್ನೆ ಇಂದ್ರ ಕೆಫೆಯಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಸುಪ್ರಸಿದ್ಧ ಸಾಹಿತಿ ಶ್ರೀ ತ. ರಾ. ಸುಬ್ಬರಾಯರು, ಚಲನ ಚಿತ್ರ ನಟರಾದ ಉದಯಕುಮಾರ್ ಮತ್ತು ಡಿಕ್ಕಿ ಮಾಧವರಾಯರೂ ಆಗಮಿಸಿದ್ದರು.

ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಸುಬ್ಬರಾಯರು ಭಾಷಣ ಮಾಡಿ ಕಲಾವಿದರು ತಮ್ಮ ವೈಮನಸ್ಯಗಳನ್ನು ತೊರೆದು, ಕಲೆಯನ್ನು ಜೀವಂತಗೊಳಿಸಲು ಶ್ರಮಿಸಬೇಕೆಂದೂ, ಕೇವಲ ವಿಡಂಬನಾತ್ಮಕ ನಾಟಕಗಳು ಈಗ ರಚಿತವಾಗುತ್ತಿರುವುದು ತಪ್ಪಿ ಜೀವನದ ನಿಜ ಸ್ವರೂಪವನ್ನು ಚಿತ್ರಿಸುವ ಕೃತಿಗಳು ಬರಬೇಕೆಂದೂ, ಕಲಾಭಿವೃದ್ಧಿಗಾಗಿ ಪುರಸಭೆಯವರು ಟೌನ್‌ಹಾಲಿನಲ್ಲಿ ನಾಟಕ ಸಂಸ್ಥೆಗಳಿಗೆ ಉಚಿತವಾಗಿ ಪ್ರದರ್ಶನ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದೂ ನುಡಿದರು.

ಶ್ರೀ ವೈ. ಎಂ. ಶಂಕರರವರಿಂದ ಸಿತಾರ್ ವಾದನವೂ, ಜೂನಿಯರ್ ಘಂಟಸಾಲ ಎಂಬುದಾಗಿ ಪ್ರಖ್ಯಾತರಾಗಿರುವ ಬಾಗೆಪಲ್ಲಿಯ ಶ್ರೀ ಸುಬ್ರಹ್ಮಣ್ಯಂರವರ ಗಾಯನವೂ ಆದುವು. ಸನ್ಮಾನಿತರು ಈ ಗೌರವಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು.

ಅಖಿಲ ಭಾರತ ವೀರಶೈವ ಮಹಾ ಸಭಾ

ಅಖಿಲ ಭಾರತ ವೀರಶೈವ ಮಹಾ ಸಭೆಯ ಅಧಿವೇಶನವನ್ನು ಮೈಸೂರು ನಗರದಲ್ಲಿ ನಡೆಸಲು ಒಂದು ಸ್ವಾಗತ ಸಮಿತಿಯನ್ನು ರಚಿಸಲು ಬರುವ ತಿಂಗಳು ೪ನೇ ತಾರೀಕು ಭಾನುವಾರ ಮಧ್ಯಾಹ್ನ ೩ ಗಂಟೆಗೆ ಮೈಸೂರು ನಗರದಲ್ಲಿರುವ ಲ್ಯಾತನಹಳ್ಳಿ ಸಾಹುಕಾರ್ ಸಿದ್ದಲಿಂಗಯ್ಯನವರ ಸಂಸ್ಕೃತ ಪಾಠಶಾಲಾ ಕಟ್ಟಡದಲ್ಲಿ ಸಭೆಯನ್ನು ಏರ್ಪಡಿಸಿರುತ್ತೆ. ಮತಬಾಂಧವರೆಲ್ಲರೂ ಕಾಲಕ್ಕೆ ದಯಮಾಡಿಸಿ ಸಹಾಯ ಸಹಕಾರಗಳನ್ನು ನೀಡಬೇಕೆಂದು ಕಾರ್ಯ ನಿರ್ವಹಣ ಸಮಿತಿ ಅಧ್ಯಕ್ಷ ಶ್ರೀ ಎಂ. ಎಸ್. ಮಹಂತದೇವರವರು ಕೋರಿರುತ್ತಾರೆ.

ಅಧಿಕ ಶಿಕ್ಷಣ ಶುಲ್ಕದ ಬಗ್ಗೆ ವಿದ್ಯಾರ್ಥಿಗಳ ಪ್ರತಿಭಟನೆ

ಜಯಪುರದಲ್ಲಿ ಪೋಲೀಸರಿಂದ ಪ್ರದರ್ಶನಕಾರರ ಮೇಲೆ ಲಾಠಿ ಪ್ರಹಾರ

ಶಿಕ್ಷಣ ಶುಲ್ಕವನ್ನು ಹೆಚ್ಚಿಸಿರುವುದನ್ನು ವಿರೋಧಿಸಲು ಜಯಪುರದ ವಿದ್ಯಾರ್ಥಿಗಳು ನೆನ್ನೆ ಅಲ್ಲಿನ ಸರ್ಕಾರಿ ಭವನದ ಮುಂದೆ ಪ್ರದರ್ಶನ ನಡೆಸಲಾಗಿ ಅವರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಪೋಲೀಸರ ಮೇಲೆ ಕಲ್ಲು ಬೀರಲಾಯಿತು. ೨೫ ಮಂದಿ ಪೋಲೀಸರಿಗೂ, ೧೫ ಮಂದಿ ವಿದ್ಯಾರ್ಥಿಗಳಿಗೂ ಪೆಟ್ಟು ಬಿದ್ದಿದೆ.

ಬೌದ್ಧ ಮತಕ್ಕೆ ಸೇರಿದ ನಿಮ್ನ ವರ್ಗದವರಿಗೆ ಸೌಲಭ್ಯಗಳಿಲ್ಲ

ರಾಜ್ಯಾಂಗದ ಪ್ರಕಾರ ನಿಮ್ನ ವರ್ಗದವರಿಗಾಗಿ ಕೊಡಲಾಗುವ ವಿಶೇಷ ಸೌಲಭ್ಯಗಳು ಬೌದ್ಧ ಮತಕ್ಕೆ ಸೇರಿದ ಆ ಪಂಗಡದವರಿಗೆ ದೊರೆಯುವುದಿಲ್ಲವೆಂದು ಲೋಕ ಸಭೆಯಲ್ಲಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತ್‌ರವರು ತಿಳಿಸಿರುತ್ತಾರೆ. ಹಿಂದೂ ಅಥವಾ ಸಿಖ್ ಪಂಗಡದಲ್ಲಿಲ್ಲದವರಾರೂ ನಿಮ್ನ ವರ್ಗದವರೆಂದು ಪರಿಗಣಿಸಕೂಡದೆಂದು ರಾಜ್ಯಾಂಗಕ್ಕೆ ಬದಲಾವಣೆ ಮಾಡಲಾಗಿರುವುದೆಂದು ಪಂತರು ಹೇಳಿದರು.

ಒಮಾನಿನ ದಂಗೆಕಾರರಿಗೆ ಚೀಣಾದ ಸಹಾಯ

ಚೀಣಾದ ಅಧಿಕಾರಿಯೊಬ್ಬರು ಒಮಾನಿನ ದಂಗೆಕಾರರಿಗೆ ಚೀಣಾದ ಪರವಾಗಿ ನೆರವು ನೀಡಲು ಮುಂದೆ ಬಂದಿರುವುದಾಗಿ ಒಮಾನಿನ ಇಮಾಮರ ಕಡೆ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ.

ಮಜ್ಜಿಗೆ ಕೇಳಿದವರ ಬಳಿ ೧,೦೦೦ ರೂ. ನೋಟು ಪತ್ತೆ

ಬೊಂಬಾಯಿಯ ಮಹಂ ಬೌರಿ ಪ್ರದೇಶದಲ್ಲಿ ಕಳೆದ ಶುಕ್ರವಾರ ರಾತ್ರಿ ಒಂದು ಹಾಲಿನ ಅಂಗಡಿಗೆ ಹೋದ ಇಬ್ಬರು ಮಜ್ಜಿಗೆ ಕುಡಿದು, ಅದರ ಬೆಲೆ ಕೊಡಲು ಸಾವಿರ ರೂಗಳ ನೋಟುಗಳನ್ನು ತೋರಿಸಿ ಚಿಲ್ಲರೆ ಕೇಳಿದರೆಂದೂ, ಆಗ ಹತ್ತಿರದಲ್ಲೇ ಗಸ್ತು ತಿರುಗುತ್ತಿದ್ದ ಪೋಲೀಸು ಅಧಿಕಾರಿಯೊಬ್ಬರು ಕೊಳಕು ಬಟ್ಟೆ ಉಟ್ಟವರಿಬ್ಬರ ಬಳಿ ಸಾವಿರ ರೂ ನೋಟು ಬಂದ ಬಗ್ಗೆ ಆಶ್ಚರ್ಯ ಪಟ್ಟು, ಅವರನ್ನು ಪೋಲೀಸು ಠಾಣೆಗೆ ಒಯ್ದರೆಂದೂ ವರದಿಯಾಗಿದೆ. ಅವರ ಬಳಿ ಇದ್ದ ಈ ನೋಟುಗಳು ಐದು ದಿನಗಳ ಹಿಂದೆ ಪಂಜಾಬು ನ್ಯಾಷನಲ್ ಬ್ಯಾಂಕಿನ ಝವೇರಿ ಬಜಾರ್ ಶಾಖೆಯಲ್ಲಿ ಒಬ್ಬ ವರ್ತಕನ ಜೇಬಿನಿಂದ ಕಳುವಾದ ೧೪,೦೦೦ ರೂ ನೋಟುಗಳಿಗೆ ಸಂಬಂಧಪಟ್ಟದ್ದೆಂದು ಗೊತ್ತಾಗಿದೆ. ಇತರ ಹಲವು ಸಾವಿರ ರೂ- ನೋಟುಗಳನ್ನು ಚಿಲ್ಲರೆ ಮಾಡಿ ಇಟ್ಟುಕೊಂಡಿದ್ದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಪಿಕ್ ಪಾಕೆಟ್ ಮಾಡಿದ ಮತ್ತೊಬ್ಬನು ತಪ್ಪಿಸಿಕೊಂಡಿರುತ್ತಾನೆ.

ಎಲ್ಲ ವೈದ್ಯ ಪದ್ಧತಿಗಳಿಂದಲೂ ಪ್ರಯೋಜನ

ರಾಷ್ಟ್ರದಲ್ಲಿರುವ ಎಲ್ಲಾ ವಿಧವಾದ ವೈದ್ಯಪದ್ಧತಿಗಳಿಂದಲೂ ಪ್ರಯೋಜನ ಹೊಂದಲು ಸರ್ಕಾರದವರು ಅಪೇಕ್ಷೆ ಪಟ್ಟಿರುವುದಾಗಿ ಲೋಕ ಸಭೆಯಲ್ಲಿ ಆರೋಗ್ಯ ಮಂತ್ರಿ ಡಿ. ಪಿ. ಕರ್ಮಾರ್ಕರ್‌ರವರು ತಿಳಿಸಿರುತ್ತಾರೆ. ಸ್ಥಳೀಯ ವೈದ್ಯ ಪದ್ಧತಿ ಬಗ್ಗೆ ಸರ್ಕಾರಕ್ಕೆ ಉಪೇಕ್ಷೆಯೇನೂ ಇಲ್ಲವೆಂದು ಅವರು ಸೂಚಿಸಿರುವರು.

ಎರಡು ಜರ್ಮನಿಗಳ ಒಕ್ಕೂಟ

ಪೂರ್ವ ರಾಜ್ಯದ ಕರೆಗೆ ಪಶ್ಚಿಮ ಜರ್ಮನಿಯ ತಿರಸ್ಕಾರ

ಜರ್ಮನಿಯನ್ನು ಪುನಃ ಐಕ್ಯಗೊಳಿಸುವ ಸಂಬಂಧವಾಗಿ ಪ್ರಥಮ ಹೆಜ್ಜೆಯಲ್ಲಿ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳ ಒಕ್ಕೂಟ (ಕಾನ್ಫೆಡರೇಷನ್)ವನ್ನು ರಚಿಸುವುದಕ್ಕೆ ಪೂರ್ವ ನಾಡು ಕರೆಯಿತ್ತಿದೆ. ಈ ಬಗ್ಗೆ ಪೂರ್ವ ಜರ್ಮನಿ ಪ್ರಧಾನಿಯು ಸಲಹೆಯನ್ನು ಮಾಡಿರುತ್ತಾರೆ. ಅದನ್ನು ಪಶ್ಚಿಮ ಜರ್ಮನಿಯ ಸರ್ಕಾರದ ಅಧಿಕಾರಿಗಳು ನಿರಾಕರಿಸಿರುತ್ತಾರೆ. ಕಾನ್ಫೆಡರೇಷನ್ ಎಂಬುದು ಒಂದೇ ರಾಜಕೀಯ ಪದ್ಧತಿಯ ರಾಜ್ಯಗಳ ಕೂಟಕ್ಕೆ ಅನ್ವಯಿಸುವುದೆಂದೂ, ಭಯೋತ್ಪಾದನೆ ಆಳ್ವಿಕೆ ಮತ್ತು ಪ್ರಜಾ ಶಕ್ತಿಗಳ ಕೂಟವು ಕಾನ್ಫೆಡರೇಷನ್ ಆಗುವುದಿಲ್ಲವೆಂದೂ ವ್ಯಾಖ್ಯಾನ ಮಾಡಲಾಗಿದೆ.

ಮದುವೆ ಮನೆ ಕುಸಿದು ವಧು ಮತ್ತು ೩೯ ಜನರ ಮರಣ

ಈಜಿಪ್ಟಿನ ರಾಜಧಾನಿ ಕೈರೊ ನಗರದಲ್ಲಿ ಕಳೆದ ಗುರುವಾರ, ಐದು ಅಂತಸ್ತಿನ ಭವನವೊಂದರಲ್ಲಿ ವಿವಾಹ ಸಮಾರಂಭದ ಅಂಗವಾಗಿ ನೃತ್ಯವು ನಡೆಯುತ್ತಿದ್ದಾಗ ಭವನದ ಎರಡು ಅಂತಸ್ತುಗಳು ಕುಸಿದುಬಿದ್ದು, ವಧುವೂ ಮತ್ತು ಇತರ ೩೯ ಜನರೂ ಮೃತಪಟ್ಟರೆಂದು ವರದಿಯಾಗಿದೆ. ಮದವಣಿಗನೂ ಸೇರಿ, ೪೫ ಮಂದಿ ಗಾಯಗೊಂಡಿರುವರು. ಸಮಾರಂಭಕ್ಕಾಗಿ ಬಂದಿದ್ದ ವಾದ್ಯ ಗೋಷ್ಠಿಯವರ ಪೈಕಿ ಮೃದಂಗದವನು ವಿನಹ ಉಳಿದವರೆಲ್ಲರೂ ಮೃತಪಟ್ಟಿರುವರು.

ಈಗ ತಾನೆ ಬಂದಿವೆ !
ರಾಜರತ್ನಂರವರ
ಭಗವಾನ್ ಬುದ್ಧ
ಬೆಲೆ ರೂ. 1-0-0
ಲಕ್ಷ್ಮೀಶ ವಿರಚಿತ
ಜೈಮಿನಿ ಭಾರತ
ಬೆಲೆ ರೂ. 1-0-0
ಕೃಷ್ಣಾ ಕಂಪೆನಿ,
ನೂರಡಿ ರಸ್ತೆ, ಮೈಸೂರು.

Edited, Printed and Published by A. R. Nagarajan at Sadhvi Press, D.Subbiah Road, Mysore

೧೭೯ ಸಹಕಾರ ಸಂಘಗಳಲ್ಲಿ ಹಣದ ದುರುಪಯೋಗ

ಬೆಂಗಳೂರು ೨೯

ಸಂಸ್ಥಾನದಲ್ಲಿ ೧೭೯ ವಿವಿಧ ಸಹಕಾರ ಸಂಘಗಳಲ್ಲಿ ೮ ಲಕ್ಷ ರೂ. ನಷ್ಟ, ಹಣ ದುರುಪಯೋಗದ ಪ್ರಸಂಗಗಳು ನಡೆದಿರುವುದಾಗಿಯೂ, ೧ ಲಕ್ಷ ರೂ ಅನ್ನು ವಸೂಲು ಮಾಡಲಾಗಿರುವುದೆಂದೂ, ಉಳಿದ ಹಣದ ವಸೂಲಾತಿ ಕ್ರಮಗಳನ್ನು ಕೈಗೊಳ್ಳಲಾಗಿರುವುದೆಂದೂ ನೆನ್ನೆ ಸಚಿವ ಶ್ರೀ ಚನ್ನಿಗರಾಮಯ್ಯನವರು ವಿಧಾನ ಸಭೆಯಲ್ಲಿ ತಿಳಿಸಿದರು.

ಹಡಗನ್ನು ಬಂಧಿಸಲು ಹೈಕೋರ್ಟಿನ ಆಜ್ಞೆ

ಕಲ್ಕತ್ತಾ ಹೈಕೋರ್ಟಿನ ಆಜ್ಞೆಯ ಪರಿಣಾಮವಾಗಿ ಮದ್ರಾಸಿನಲ್ಲಿ ಕಳೆದ ಶುಕ್ರವಾರ ಎಸ್ಸೆಸ್ ಮರಿನರ್ ಎಂಬ ಹಡಗೊಂದನ್ನು ಬಂಧಿಸಲಾಯಿತು. ಹಡಗಿನಲ್ಲಿರುವ ಕಬ್ಬಿಣದ ಅದಿರನ್ನು ಪಡೆಯಿಸಿಕೊಳ್ಳಲು ಆಜ್ಞಾಪಿಸಲಾಗಿದೆ. ಅದಿರನ್ನು ವಶಪಡಿಸಿಕೊಳ್ಳುವವರೆಗೂ ಹಡಗನ್ನು ನಿರ್ಬಂಧದಲ್ಲಿಡಲಾಗುವುದು. ಒಂದು ಕಂಪೆನಿಯವರ ಅರ್ಜಿ ಮೇಲೆ ಹೈಕೋರ್ಟ್ ಜಡ್ಜರು ಈ ರೀತಿ ಸೂಚನೆಯಿತ್ತಿರುವರು. ಕಂಪೆನಿಯವರು ೪ ಲಕ್ಷ ರೂ ತಮಗೆ ಬರಬೇಕೆಂದು ಅರ್ಜಿಯಲ್ಲಿ ಸೂಚಿಸಿದ್ದರು. ಅದಿರು ಯುಗೋಸ್ಲೇವಿಯಕ್ಕೆ ಹೋಗುವುದಿದೆ. ಜುಲೈ ೧೦ರೊಳಗೆ ಹಡಗಿಗೆ ಅದಿರನ್ನು ತುಂಬುವುದು ಮುಗಿಯದಿದ್ದ ಪ್ರಯುಕ್ತ ಹಣವನ್ನು ಕೊಡದಂತೆ ಯುಗೋಸ್ಲಾವಿಯಾ ಸಂಸ್ಥೆಯವರು ತಮ್ಮ ಕಲ್ಕತ್ತಾ ಬ್ಯಾಂಕುಗಳಿಗೆ ಸೂಚಿಸಿದ್ದ ಸಂಬಂಧವಾಗಿ ಕೋರ್ಟಿನಲ್ಲಿ ವ್ಯವಹಾರ ಹೂಡಲಾಗಿರುವುದು.

ಬಡ ವಿದ್ಯಾರ್ಥಿಗಳಿಗಾಗಿ ಸಿನಿಮಾ ನಟರ ಔದಾರ್ಯ

ಬಡ ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನಗಳನ್ನು ಏರ್ಪಡಿಸುವ ಸಲುವಾಗಿ ಆಂಧ್ರ ವಿಶ್ವವಿದ್ಯಾಲಯಕ್ಕೆ ಆಂಧ್ರದ ಸಿನಿಮಾ ನಟರಾದ ಎ. ನಾಗೇಶ್ವರರಾಯರು ೨೫,೦೦೦ ರೂ. ದಾನ ಮಾಡಿರುವರು. ಈ ಬಗ್ಗೆ ನಡೆದ ದಾನದ ಸಮಾರಂಭದಲ್ಲಿ ಮುಖ್ಯ ಮಂತ್ರಿ ಸಂಜೀವರೆಡ್ಡಿಯವರು ಸಿನಿಮಾ ನಟರ ಔದಾರ್ಯವನ್ನು ಪ್ರಶಂಸಿಸಿದರು.

ಬದರಿನಾಥಯಾತ್ರೆ ತೀರ್ಥ ಪ್ರಸಾದ ವಿನಿಯೋಗ

ಇತ್ತೀಚೆಗೆ ಬದರೀನಾಥ, ಕೇದಾರನಾಥ ಮತ್ತು ಹರಿದ್ವಾರ ಪುಣ್ಯ ಕ್ಷೇತ್ರಗಳ ತೀರ್ಥಯಾತ್ರೆ ಮಾಡಿದ ನಗರದ ಸೌಭಾಗ್ಯ ಸ್ಟೋರ್ಸ್ ಮಾಲೀಕರಾದ ಶ್ರೀ ಎಸ್ ಗೋಪಾಲರಾಯರು ನೆನ್ನೆ ವಾಸಸ್ಥಳದಲ್ಲಿ ಸುಮಾರು ೮೦೦ ಮಂದಿ ಬಂಧುಮಿತ್ರರನ್ನು ಆಹ್ವಾನಿಸಿ ತೀರ್ಥ ಪ್ರಸಾದ ವಿನಿಯೋಗ ಮತ್ತು ಸಂತರ್ಪಣೆಯನ್ನು ನಡೆಸಿದರು.

"ಮೋಮ್ಮಿ ಸಿಲ್ಕ್ ಹೌಸ್" ಆರಂಭ

ಒಲಂಪಿಯಾ ಚಿತ್ರ ಮಂದಿರದ ಎದುರಿನಲ್ಲಿ ಶ್ರೀ ಆರ್. ಬಿ. ಅಂಡ್ ಕಂಪೆನಿಯವರು ನೆನ್ನೆ ಮೋಮ್ಮಿ ಸಿಲ್ಕ್ ಹೌಸ್ ಅಂಗಡಿಯ ಆರಂಭೋತ್ಸವವನ್ನು ನೆರವೇರಿಸಿದರು.

ಸರ್ವೋದಯ-ಭೂದಾನ ಸಾಹಿತ್ಯ
ಆಚಾರ್ಯ ವಿನೋಬಾರವರ
ಗೀತಾ ಪ್ರವಚನ
ಬೆಲೆ ೧-೦-೦
ಮತ್ತು ಇತರ ಗ್ರಂಥಗಳು
★
ಶ್ರೀ ರಾಜಾಜಿಯವರ
ರಾಮಾಯಣ
(ಇಂಗ್ಲಿಷ್)
ಬೆಲೆ ೨-೦-೦
ಚೇತನ ಪುಸ್ತಕಾಲಯ,
ಮೈಸೂರು

ಆರ್. ಸೌ. ನಂ. 792

ಅಂಚೆ ರಿಯಾಯಿತಿ 2 ನೇ ಕ್ಲಾಸ್

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ವರದಿಗಾಗಿ ಬರೆಯಿರಿ

ಚಂದಾ ದರ
—
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ 2 ನಯಾಪೈಸೆ

ಸಂಪುಟ : ೧೫] SADHVI : TUESDAY 30—7—1957 ಮೈಸೂರು : ಮಂಗಳವಾರ ೩೦—೭—೧೯೫೭ : [ಸಂಚಿಕೆ : ೩೩

ಕೇಂದ್ರ ನೌಕರರಿಗೆ ತತ್ಕಾಲ ಪರಿಹಾರಕ್ಕಾಗಿ ಪರಿಶೀಲನೆ

ಕೇಂದ್ರ ಸರ್ಕಾರದ ನೌಕರರಿಗೆ ತಾತ್ಕಾಲಿಕ ಪರಿಹಾರ

ಸಂಬಳದ ಸಮಿತಿಯಿಂದ ಪರಿಶೀಲನೆ

ಕೇಂದ್ರ ಸರ್ಕಾರದ ನೌಕರರ ಸಂಬಳದ ಮಟ್ಟವನ್ನು ಪರಿಶೀಲಿಸಲು ನೇಮಿಸಲಾಗುವ ಸಂಬಳ ಸಮಿತಿಯು ತಾತ್ಕಾಲಿಕ ಪರಿಹಾರದ ವಿಷಯವನ್ನೂ ಪರಿಶೀಲಿಸಬಹುದೆಂದು ವರದಿಯಾಗಿದೆ. ಸಮಿತಿಯ ಸದಸ್ಯರು ಮತ್ತು ಪರಿಶೀಲನಾ ವಿಷಯಗಳನ್ನು ಕುರಿತು ಈ ವಾರದಲ್ಲಿ ಪ್ರಕಟಿಸಲಾಗುವುದು. ಅಂಚೆ ಮತ್ತು ತಂತಿ ನೌಕರರೊಡನೆ ನಡೆದ ಸಂಧಾನವು ವಿಫಲವಾದ ಬಗ್ಗೆ ಕೇಂದ್ರ ಮಂತ್ರಿಮಂಡಲವು ನೆನ್ನೆ ಪರಿಶೀಲನೆ ನಡೆಸಿತು.

ತಿದ್ದಾಯ್ ಸ್ಮಾರಕ ವ್ಯವಸಾಯ ಸಂಶೋಧನಾ ಬಹುಮಾನ

ವ್ಯವಸಾಯ ಶಾಸ್ತ್ರ, ವ್ಯವಸಾಯದಲ್ಲಿ ಇಂಜನಿಯರಿಂಗ್, ರಸಾಯನ ಶಾಸ್ತ್ರ, ಸಸ್ಯ ಶಾಸ್ತ್ರ, ಪ್ರಾಣಿ ಶಾಸ್ತ್ರ, ಫಲಪುಷ್ಪ, ಪ್ರಾಣಿಗಳ ಸಾಕುವಿಕೆ, ಪ್ರಾಣಿಗಳ ಪೌಷ್ಟಿಕಾಹಾರ, ಪ್ರಾಣಿಗಳ ರೋಗಾದಿಗಳು, ಹಾಲು ಮೊಸರು ವ್ಯವಸಾಯ ಮತ್ತು ಪಶುಪಾಲನೆಯಲ್ಲಿ ಅರ್ಥ ಶಾಸ್ತ್ರ ಮತ್ತು ಅಂಕಿಅಂಶಗಳು ಈ ಹನ್ನೊಂದು ವಿಷಯಗಳಲ್ಲಿ ಪ್ರಬುದ್ಧ ರೀತಿಯ ಸಂಶೋಧನೆ ನಡೆಸಿದವರಿಗೆ ವರ್ಷಂಪ್ರತಿ ೫,೦೦೦ ರೂ ಬೆಲೆಯ ಒಂದೊಂದು ಬಹುಮಾನಗಳನ್ನು ತಿದ್ದಾಯರ ಸ್ಮಾರಕಾರ್ಥವಾಗಿ ಕೊಡಲು ಭಾರತೀಯ ವ್ಯವಸಾಯ ಸಂಶೋಧನೆ ಸಮಿತಿಯವರು ನಿರ್ಧರಿಸಿರುತ್ತಾರೆ. ಈ ಬಗ್ಗೆ ಸಂಶೋಧನೆಗೆ ಉತ್ತೇಜನವೀಯುವುದೇ ಇದರ ಮುಖ್ಯ ಉದ್ದೇಶ

ಕೇರಳದ ವಿದ್ಯಾಭ್ಯಾಸ ಮಸೂದೆ ವಿರುದ್ಧ ೧೦,೦೦೦ ಜನರ ಪ್ರದರ್ಶನ

ಕೇರಳ ಸರ್ಕಾರದವರು ಶಾಸನ ಸಭೆ ಮುಂದೆ ತಂದಿರುವ ವಿದ್ಯಾಭ್ಯಾಸ ಮಸೂದೆಯ ವಿರುದ್ಧವಾಗಿ ನೆನ್ನೆ ಆಲೆಪ್ಪಿಯಲ್ಲಿ ೧೦,೦೦೦ ಮಂದಿ ಪ್ರದರ್ಶನ ನಡೆಸಿದರು. ಕಪ್ಪು ಧ್ವಜಗಳನ್ನಿಡಿದು ಕೂಗುಗಳನ್ನು ಹಾಕುತ್ತಾ ಪ್ರದರ್ಶಕರು ಊರಿನ ಮುಖ್ಯ ಬೀದಿಗಳಲ್ಲಿ ಹೋದರು. ನಂತರ ಲಕ್ಷ ಜನರ ಸಭೆಯೊಂದು ನಡೆದು ಮಸೂದೆಯು ಸರ್ವಾಧಿಕಾರದ ಮನೋಭಾವದಿಂದ ಬಂದುದೆಂದು ಖಂಡಿಸಲಾಯಿತು.

ಅಸ್ಸಾಮಿನಲ್ಲಿ ಹರತಾಳ

ಅಸ್ಸಾಮಿನಲ್ಲಿ ಎಣ್ಣೆ ಸಂಸ್ಕರಣ ಕೇಂದ್ರದ ಸ್ಥಾಪನೆ ವಿಷಯವಾಗಿ ನೆನ್ನೆ ಸಂಸ್ಥಾನದಲ್ಲೆಲ್ಲಾ ಹರತಾಳವು ನಡೆಯಿತು. ಹಲವು ಸಣ್ಣ ಸಣ್ಣ ಘಟನೆಗಳು ವಿನಹ, ಹರತಾಳವು ಶಾಂತಿಯುತವಾಗಿತ್ತು. ಶಿಲ್ಲಾಂಗಿನಲ್ಲಿ ಅದು ಪೂರ್ಣವಾಗಿತ್ತು. ಸಂಜೆ ಭಾರಿ ಸಭೆ ಜರುಗಿ ಎಣ್ಣೆ ಕೇಂದ್ರವನ್ನು ಅಸ್ಸಾಮಿನಲ್ಲಿ ಸ್ಥಾಪಿಸಬೇಕೆಂದು ಕೋರಲಾಯಿತು. ಗೌಹಾತಿಯಲ್ಲಿ ವಾಹನ ಸಂಚಾರವೆಲ್ಲಾ ನಿಂತುಹೋಗಿತ್ತು. ರೈಲು ಸಂಚಾರವೂ ನಿಂತಿತು. ಅಂಚೆ ಇಲಾಖೆಯ ೬೦೦ ನೌಕರರ ಪೈಕಿ ಹಲವರು ಮಾತ್ರ ಕೆಲಸಕ್ಕೆ ಹೋಗಿದ್ದರು. ರೈಲ್ವೆ ಸ್ಟೇಷನ್ನಿನಲ್ಲಿರುವ ೩೫೦ ಮಂದಿ ಪೈಕಿ ಒಬ್ಬರೂ ಹಾಜರಿರಲಿಲ್ಲ.

ಕೇಂದ್ರ ನೌಕರರು ಮುಷ್ಕರ ಹೂಡಬಾರದು

ಐ. ಎನ್. ಟಿ. ಯು. ಸಿ. ಅಧ್ಯಕ್ಷರ ಮನವಿ

ಭಾರತದ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷ ಎಸ್. ಆರ್. ವಾಸವದರವರು ಅಂಚೆ ಮತ್ತು ತಂತಿ ನೌಕರರ ಮುಖಂಡರಿಗೆ ಮನವಿ ಮಾಡಿ, ಆಗಸ್ಟ್ ೮ ರಿಂದ ನೌಕರರು ಮುಷ್ಕರ ಹೂಡಬಾರದೆಂದು ಕೋರುವಂತೆ ಸೂಚಿಸಿರುತ್ತಾರೆ. ಅವರುಗಳ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ಸರ್ಕಾರದವರು ಸ್ಥಾಪಿಸಲಿರುವ ಸಮಿತಿಯ ಮೂಲಕ ಪ್ರಯತ್ನಿಸಬಹುದೆಂದೂ ಅವರು ತಿಳಿಸಿರುತ್ತಾರೆ. ಈ ಸಮಯದಲ್ಲಿ ಮುಷ್ಕರವು ಸರ್ಕಾರ ಮತ್ತು ಪ್ರಜೆಗಳಿಗಲ್ಲದೆ ನೌಕರರಿಗೂ ತೀವ್ರವಾದ ಪರಿಣಾಮವುಂಟುಮಾಡುವುದೆಂದು ಅವರು ಹೇಳಿರುವರು

ಹಂಗೆರಿಯಲ್ಲಿ ಸಹಸ್ರಾರು ಜನರ ಬಂಧನ

ಹಂಗೆರಿಯು ಅತ್ಯಂತ ಸಹಸ್ರಗಟ್ಟಲೆ ಜನರನ್ನು ಬಂಧಿಸಲಾಗುತ್ತಿರುವುದೆಂದು ವರದಿಯಾಗಿದೆ. ಕಳೆದ ವರ್ಷ ಅಕ್ಟೋಬರಿನಲ್ಲಿ ಆದ ದಂಗೆಯಂತಹದೊಂದು ಪುನಃ ಬರುವ ಅಕ್ಟೋಬರಿನಲ್ಲಿ ಆಗುವುದೆಂಬ ಭೀತಿಗಾಗಿ ಈ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ೫,೦೦೦ ಕ್ಕೂ ಹೆಚ್ಚು ಜನರು ಬಂಧಿತರಾಗಿರುವರೆಂದು ಹೇಳಲಾಗಿದೆ. ಅವರ ಪೈಕಿ ಬಹು ಹಿಂದೆ ರೀಜೆಂಟರಾಗಿದ್ದ ಅಡ್ಮಿರಲ್ ಹಾರ್ಥಿಯವರ ಬೆಂಬಲಿಗರೂ ಇರುವರು

ಮೋಟೂರಿ ಸತ್ಯನಾರಾಯಣರವರಿಗೆ ಗೌರವ

ಲೋಕ ಸಭಾ ಸದಸ್ಯರೂ, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಕಾರ್ಯದರ್ಶಿಯೂ ಆದ ಮೋಟೂರಿ ಸತ್ಯನಾರಾಯಣರವರಿಗೆ ನೆನ್ನೆ ರಾಷ್ಟ್ರಾಧ್ಯಕ್ಷರು ಸಮಾರಂಭವೊಂದರ ಅಧ್ಯಕ್ಷತೆ ವಹಿಸಿ ಗ್ರಂಥವನ್ನು ಸಮರ್ಪಿಸಿದರು. ದಕ್ಷಿಣ ಭಾರತದಲ್ಲಿ ಹಿಂದಿ ಶಿಕ್ಷಣಕ್ಕೆ ೩೩ ವರ್ಷಗಳಿಂದ ಅವರು ಸಲ್ಲಿಸಿದ ಸೇವೆಗಾಗಿ ಈ ಗ್ರಂಥವನ್ನು ಸಮರ್ಪಿಸಲಾಯಿತು.

ಮದ್ಯದ ಸೀಸೆಗಳನ್ನು ಹೊಂದಿದ್ದ ಮಾಜಿ ಶಾಸನಸಭಾಸದರ ಬಂಧನ

ವಿಧಾನ ಸಭೆಯ ಹಿಮ್ಮ ವರ್ಗದ ಮಾಜಿ ಸದಸ್ಯರಾದ ಚಿಕ್ಕಮಗಳೂರಿನ ಪುಟ್ಟಸ್ವಾಮಿಯವರನ್ನು ಕಡೂರು ರೈಲ್ವೆ ಪೋಲೀಸರು ಕಳೆದ ಭಾನುವಾರ ಪಾನ ನಿರೋಧ ಶಾಸನದ ರೀತ್ಯಾ ದಸ್ತಗಿರಿ ಮಾಡಿರುವುದಾಗಿ ವರದಿಯಾಗಿದೆ. ಅವರು ಕಡೂರಿಗೆ ಪ್ರಯಾಣ ಮಾಡುತ್ತಾ, ೨೪ ಬ್ರಾಂದಿ ಸೀಸೆಗಳನ್ನು ಸಾಗಿಸುತ್ತಿದ್ದರೆಂಬುದೇ ಇದಕ್ಕೆ ಕಾರಣ.

ಶ್ರೀಮದ್ರಾಮಾಯಣ ಹರಿಕಥೆ

ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮರ ದೇವಸ್ಥಾನದಲ್ಲಿ ನಾಳೆ ಶ್ರೀ ಹೆಚ್. ಟಿ. ರಾಮಣ್ಣನವರಿಂದ "ಶ್ರೀಮದ್ರಾಮಾಯಣ" ಹರಿಕಥಾ ಪ್ರಾರಂಭವಾಗುತ್ತದೆ. ಪ್ರತಿದಿನ ಸಂಜೆ ೫-೩೦ರಿಂದ ೭ ಗಂಟೆ ವರೆವಿಗೆ ಹರಿಕಥೆ ನಡೆಯುತ್ತದೆ

ಇಂಜಿನಿಯರಿಂಗ್ ಶಿಕ್ಷಣಕ್ಕಾಗಿ ಹೊಸ ಸಂಸ್ಥೆ

ಮೈಸೂರು ೨೯

ಈಗಿರುವ ಇಂಜನಿಯರಿಂಗ್ ಕಾಲೇಜುಗಳಲ್ಲಿ ನೂರಾರು ಜನರಿಗೆ ಸೀಟು ಸಿಕ್ಕದೆ ವ್ಯಥೆಪಡುತ್ತಿರುವುದರಿಂದ ಕೆಲವರ ಕೋರಿಕೆ ಮೇರೆಗೆ "ಸರ್ ಎಂ ವಿಶ್ವೇಶ್ವರಯ್ಯ ಇಂಜನಿಯರಿಂಗ್ ಇನ್ಸ್ಟಿಟ್ಯೂಟ್" ಎಂಬ ಹೆಸರಿನಿಂದ ಒಂದು ಹೊಸ ವಿದ್ಯಾ ಸಂಸ್ಥೆಯನ್ನು ಕೂಡಲೇ ತೆರೆದು, ಪ್ರಾರಂಭ್ಯದ ಪರೀಕ್ಷೆಗೆ ತರಪೇತು ಮಾಡಲು ಪ್ರಯತ್ನಿಸಿದೆ. ಅಗತ್ಯವಿರುವವರು ಮೈಸೂರು ನೂರಡಿ ರಸ್ತೆಯಲ್ಲಿರುವ "ಬ್ಯಾಕ್‌ಸನಲಿಸ್ಟ್" ಕಟ್ಟಡದಲ್ಲಿ ಶ್ರೀ ಜಿ ಆರ್ ಜೋಸ್ಯರ್‌ರವರನ್ನು ಕಾಣಬಹುದು.

ಸಂಸ್ಥಾನದ ವಿದ್ಯುಚ್ಛಕ್ತಿ ಇನ್ಸ್‌ಪೆಕ್ಟರ್

ಮೈಸೂರು ಪ್ರದೇಶದ ವಿದ್ಯುಚ್ಛಕ್ತಿ ಇನ್ಸ್‌ಪೆಕ್ಟರಾದ ಶ್ರೀ ಬಿ ಸಿ. ಅಳ್ವರವರನ್ನು ಸಂಸ್ಥಾನದ ವಿದ್ಯುಚ್ಛಕ್ತಿ ಇನ್ಸ್‌ಪೆಕ್ಟರಾಗಿ ನೇಮಿಸಲಾಗಿದೆ.

ಮದ್ರಾಸ್ ಐ. ಜಿ. ಪಿ. ಯವರ ವಿಚಾರಣೆಗೆ ನ್ಯಾಯಾಧೀಶರು

ಮದ್ರಾಸ್ ಹೈಕೋರ್ಟಿನ ನ್ಯಾಯಾಧೀಶರಾದ ಪಿ ಎನ್ ರಾಮಸ್ವಾಮಿಯವರನ್ನು ಅಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಎ. ಆರ್ ರಾಜರತ್ನಂರವರ ವಿರುದ್ಧವಾಗಿ ಬಂದಿರುವ ಆಪಾದನೆಗಳನ್ನು ವಿಚಾರಣೆ ಮಾಡಲು ನೇಮಿಸಲಾಗಿದೆ

ರಾಜಿ ಮಾತುಕತೆಗೆ ಅಂಚೆ ನೌಕರರ ವಿಮುಖ

ಕಳೆದ ೧೫ನೇ ತಾರೀಖು ಅಂಚೆ ನೌಕರರ ಪರವಾಗಿ ಮುಷ್ಕರದ ನೋಟೀಸನ್ನು ಕೊಟ್ಟ ಮೇಲೆ ಮುಖ್ಯ ಕಾರ್ಮಿಕ ಕಮಿಷನರು ಏರ್ಪಡಿಸಿದ್ದ ರಾಜೀ ಮಾತುಕತೆಯಿಂದ ಅಂಚೆ ಮತ್ತು ತಂತಿ ನೌಕರರ ಸಂಘವು ವಾಪಸು ಬಂದಿದೆ.

ಒಮಾನಿಗೆ ಬ್ರಿಟನ್ನಿನ ಸೈನ್ಯಗಳು

ಬ್ರಿಟಿಷ್ ವಿಮಾನಗಳು ನೆನ್ನೆ ಪುನಃ ಒಮಾನಿನ ಇಮಾಮರ ದಂಗೆಕಾರರ ಮೇಲೆ ಮೊದಲಿಗಿಂತ ಎರಡರಷ್ಟು ತೀವ್ರವಾದ ಧಾಳಿಯನ್ನು ನಡೆಸಿದುವು. ನೆರೆಯ ಬ್ರಿಟಿಷ್ ಆಫ್ರಿಕ ಪ್ರದೇಶಗಳಲ್ಲಿರುವ ಬ್ರಿಟಿಷ್ ಸೈನ್ಯಗಳು ಒಮಾನಿನ ಕಡೆಗೆ ಬರುತ್ತಿವೆಯೆಂದು ವರದಿಯಾಗಿದೆ. ದಂಗೆಕಾರರನ್ನು ಹುತ್ತುವರಿಯುವ ಕಾರ್ಯವನ್ನು ಬಿಗಿಗೊಳಿಸಲಾಗುವುದೆಂದು ಹೇಳಲಾಗಿದೆ.

ವಿರಾಮ ವೇತನದವರಿಂದ ಮುಖ್ಯ ಮಂತ್ರಿಯವರಿಗೆ ಮನವಿ

ಜೀವನದ ಮಟ್ಟವು ಹೆಚ್ಚುತ್ತಿರುವುದರಿಂದ ವಿರಾಮ ವೇತನದ ಪುನರ್ವಿಮರ್ಶೆ ಮಾಡಬೇಕೆಂದೂ ಮತ್ತು ತುಟ್ಟಿ ಭತ್ಯಗಳನ್ನು ಎಲ್ಲಾ ಪಟ್ಟಣಗಳ ಪೆನ್ಷನುದಾರರಿಗೂ ಕೊಡಬೇಕೆಂದೂ ಮತ್ತು ನಿವೇಶನಗಳನ್ನೂ, ಮನೆಗಳನ್ನೂ ಕಟ್ಟಿಸಿಕೊಡಬೇಕೆಂದೂ ಪೆನ್ಷನುದಾರರ ಸಂಘದವರು ಮುಖ್ಯ ಮಂತ್ರಿಯವರಿಗೂ, ಇತರ ಮಂತ್ರಿಗಳಿಗೂ ಮನವಿಗಳನ್ನು ಅರ್ಪಿಸಿರುತ್ತಾರೆ.

ಸ್ವಾತಂತ್ರ್ಯೋತ್ಸವದಲ್ಲಿ ೧೦೧ ತೋಪುಗಳು

ಬೆಂಗಳೂರು ೩೦

ಬರುವ ತಿಂಗಳು ೧೫ ನೇ ತಾರೀಖು ಮತ್ತು ೧೬ ರಂದು ನಡೆಯುವ ಸ್ವಾತಂತ್ರ್ಯೋತ್ಸವ ಮತ್ತು ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವದ ಅಂಗವಾಗಿ ೧೦೧ ಕುಶಾಲ ತೋಪುಗಳನ್ನು ಧ್ವಜಾರೋಹಣದ ಸಮಯದಲ್ಲಿ ಹಾರಿಸಲಾಗುವುದು. ಪ್ರಭಾತಫೇರಿ, ಆಟಪಾಟಗಳು, ಮಕ್ಕಳಿಗೆ ಸಿಹಿತಿಂಡಿ ವಿನಿಯೋಗ ಮುಂತಾದುವು ನಡೆಯುತ್ತವೆ.

೩೩೩ ದಿನ ಹಾಜರಾಗದಿದ್ದ ಲೋಕಸಭಾಸದರ ಸ್ಥಾನ ತೆರವು

ಲೋಕ ಸಭೆಯ ಸದಸ್ಯರಾದ ಒರಿಸ್ಸದ ಶಿವನಾರಾಯಣಸಿಂಗ್ ಮಹಾಪಾತ್ರರವರು ಸಭೆಗೆ ೩೩೩ ದಿನಗಳ ಕಾಲ ಹಾಜರಾಗಲಿಲ್ಲವೆಂಬ ಕಾರಣಕ್ಕಾಗಿ ಅವರ ಸದಸ್ಯ ಸ್ಥಾನವು ತೆರವಾಗಿರುವುದೆಂದು ಘೋಷಿಸಲಾಗಿದೆ. ಅಧ್ಯಕ್ಷರ ಅನುಮತಿ ಪಡೆಯದೆ ೬೦ ದಿನಗಳ ಕಾಲ ಹಾಜರಾಗದಿರುವ ಪಾರ್ಲಿಮೆಂಟ್ ಸದಸ್ಯರ ಸ್ಥಾನಗಳನ್ನು ತೆರವು ಮಾಡಲಾಗುವುದೆಂದು ಘೋಷಿಸಲಾಗುವುದು. ಸಭೆಗೆ ಹಾಜರಾಗದೆ ಇರುವ ಸದಸ್ಯರ ಸಂಬಂಧವಾದ ಸಮಿತಿಯನ್ನು ಕಳೆದ ೩೦ನೇ ತಾರೀಖು ಲೋಕಸಭಾಧ್ಯಕ್ಷರು ಉದ್ಘಾಟನೆ ಮಾಡಿದರು

ಗೂಡ್ಸ್ ರೈಲು ಡಿಕ್ಕಿ

ಪೌರಿ ಬಳಿ ಲಿಲುವಾ ಸಿಲ್ದಾ ಇವರಲ್ಲಿ ನಿಂತಿದ್ದ ಗೂಡ್ಸ್ ಗಾಡಿಗೆ ಮತ್ತೊಂದು ಗೂಡ್ಸ್ ಗಾಡಿಯು ಡಿಕ್ಕಿ ಹೊಡೆದು ಒಬ್ಬನು ಸಾವಿಗೀಡಾಗಿ ಇನ್ನಿಬ್ಬರಿಗೆ ಗಾಯಗಳಾದುವು. ಗಾಯಗೊಂಡವನೊಬ್ಬನು ಆಸ್ಪತ್ರೆಯಲ್ಲಿ ಮೃತಪಟ್ಟನು. ನಿಂತಿದ್ದರೈಲಿನ ಗಾರ್ಡ್ ಗಾಡಿಯು ಪುಡಿಪುಡಿಯಾಯಿತು.

ಜರ್ಮನಿಯ ಐಕ್ಯದ ಚರ್ಚೆಗಾಗಿ ಪಶ್ಚಿಮ ರಾಷ್ಟ್ರಗಳ ಸೂಚನೆ

ಎರಡು ಜರ್ಮನಿಗಳ ಐಕ್ಯಕ್ಕಾಗಿಯೂ ಮತ್ತು ಯೂರೋಪಿನ ಭದ್ರತಾ ಒಪ್ಪಂದವನ್ನು ಮಾಡಿಕೊಳ್ಳುವ ಬಗ್ಗೆಯೂ ರಷ್ಯದೊಡನೆ ಚರ್ಚೆ ನಡೆಸಲು ಸಿದ್ಧವಾಗಿರುವುದಾಗಿ ಬ್ರಿಟನ್, ಫ್ರಾನ್ಸ್, ಅಮೆರಿಕ ಮತ್ತು ಪಶ್ಚಿಮ ಜರ್ಮನಿಗಳು ತಿಳಿಸಿವೆ.

ಕ್ರಿಕೆಟ್ ಪಂದ್ಯ

ಪ್ರೊ॥ ಆರ್. ಗುರುರಾಜರವರ ನೇತೃತ್ವದಲ್ಲಿ ಶಾರದಾವಿಲಾಸ ಲಾ ಕಾಲೇಜಿನ ಎಫ್.ಎಲ್. ತರಗತಿಯವರು ಅದೇ ಕಾಲೇಜಿನ ಬಿ ಎಲ್. ತರಗತಿಯವರನ್ನು ನೆನ್ನೆ ಕ್ರಿಕೆಟ್ ಪಂದ್ಯದಲ್ಲಿ ಸೋಲಿಸಿದರು ಸ್ಕೋರುಗಳು: ಬಿ ಎಲ್. ೯೫ ಮತ್ತು ಎಫ್. ಎಲ್. ೯೮.

ಸೂಚನೆ

ಗರುಡ ಪಂಚಮಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ನಗರದ ಉತ್ತರ ಭಾಗದ

ಎಕ್ಸ್ಟೆನ್ಷನ್ನಲ್ಲಿ ಸರ್ವಿಸ್ ಸ್ಟ್ಯಾಂಡ್

ನಗರಾಭಿವೃದ್ಧಿ ಸಮಿತಿ ಸಲಹೆಗೆ ಪುರಸಭೆಯ ಅಂಗೀಕಾರ

ಮೈಸೂರು ೩.

ನಿನ್ನೆ ನಗರದ ಉತ್ತರಭಾಗದ ಸಿವಿಲ್ ಪಾರ್ಕಿನಲ್ಲಿ ಸರ್ಕಾರಿ ವಿಸ್ತರಣೆ ಸಿದ್ಧವನ್ನು ನಿರ್ಮಿಸುವಂತೆ ಕೇಳಿ ಸಂಚಾರಿ ಇಲಾಖೆ ... ಜನರಲ್ ಮ್ಯಾನೇಜರ್ ... ಕಳುಹಿಸಿದ್ದ ಪತ್ರದಂತೆ ... ಸ್ಥಾನ ನಿರ್ಮಿಸಬಹುದು ... ನಗರಾಭಿವೃದ್ಧಿ ಸಮಿತಿ ... ತಯಾರಿಸಿದ ... ನಿನ್ನೆ ನಡೆದ ನಗರ ಪುರಸಭೆಯ ಸಭೆಯಲ್ಲಿ ಪರಿಶೀಲನೆಗೆ ಬಂದ ... ಅದರಂತೆ ನಿಲ್ದಾಣವನ್ನು ಅಲ್ಲಿ ನಿರ್ಮಿಸಬಹುದೆಂದು ತೀರ್ಮಾನಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಸ್. ಸಂಜೀವಯ್ಯನವರು ವಹಿಸಿದ್ದರು.

ಪ್ರಾರಂಭದಲ್ಲಿ ನಗರದ ವೃತ್ತಿ ಶಿಕ್ಷಣ ಶಾಲೆಗಳ ವಿದ್ಯಾರ್ಥಿಗಳಿಗೆ ... ವನ್ನು ... ನೀಡಬೇಕೆಂದೂ ... ಸಂಬಂಧಪಟ್ಟ ಅಧಿಕಾರಿಗಳಿಗೆ ಪುರಸಭೆಯವರು ಬರೆಯಬೇಕೆಂದೂ ಶ್ರೀ ಸಿ. ಎನ್. ನಾರಾಯಣ ... ಕೋರಿದರು.

ಗೋಹತ್ಯೆಯ ನಿರೋಧದ ಬಗ್ಗೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲವೆಂದೂ, ... ಮಾಡಿದವರಿಗೆ ... ದಷ್ಟು ... ದಂಡ ... ಇತ್ತೀಚೆಗೆ ... ಗಳು ... ತಡೆಗಟ್ಟಲು ... ಕ್ರಮ ಕೈಗೊಳ್ಳಬೇಕೆಂದೂ ಶ್ರೀ ಬಿ. ಜಿ. ದಾಸ ... ಕೋರಿದರು.

... ಗೆ ವಿದ್ಯುಚ್ಛಕ್ತಿ ... ತಗಳು ... ನಗರದ ... ಭಾಗ ... ವಾರು ... ವಿದ್ಯುಚ್ಛಕ್ತಿ ... ಇದರ ಬಗ್ಗೆ ಅಧಿಕಾರಿಗಳು ... ತಿಳಿಯಬೇಕೆಂದೂ ಶ್ರೀ ದೊಡ್ಡ ... ಯ್ಯನವರು ಕೋರಿದರು.

ಪುರಸಭೆಯ ... ಜನರನ್ನು ... ಅಭಿವೃದ್ಧಿ ... ಡಿಪ್ಲೋ ... ಸರ್ಕಾರ ... ಸದಸ್ಯರ ... ಬಗ್ಗೆ ಪರಿಶೀಲನೆ ನಡೆಸಿ ಪುರಸಭೆ ಸದಸ್ಯರಿಗೆ ಅವರು ತಿಳಿಸಬೇಕೆಂದು ಶ್ರೀ ದೊಡ್ಡವೆಂಕಟಯ್ಯನವರು ನುಡಿದು ... ಸದಸ್ಯರು ಸೂಕ್ತ ... ಯಾದ ... ಪರಿಶೀಲಿಸಿ ಪುರಸಭೆಯ ... ಸದಸ್ಯರು ಟೀಕಿಸಿ ಅವನ್ನು ಸರಿಪಡಿಸಲು ಸಲಹೆಗಳನ್ನಿತ್ತರು.

ಪ್ರಶ್ನೋತ್ತರ ಕಾಲದಲ್ಲಿ, ಪುರಸಭೆಯವರು ಹಿಂದೆ ನಗರದಲ್ಲಿ ... ಯನ್ನು ಸರಬರಾಜು ಮಾಡಿದ ವಿಷಯ ಪ್ರಸ್ತಾಪಿಸಲ್ಪಟ್ಟಿತು. ... ಕಾರ್ಯವು ... ರಿಂದ ... ವರೆಗೂ ನಡೆಯಿತೆಂದೂ, ಅದರಿಂದ ಪುರಸಭೆಗೆ ... ರೂ ನಿವ್ವಳ ಆದಾಯವು ಬಂದಿತೆಂದೂ ಶ್ರೀ ಶ್ರೀಕಂಠಶರ್ಮರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು. ಈ ಕೆಲಸಕ್ಕಾಗಿ ... ಗಳನ್ನು ಉಪಯೋಗಿಸಲಾಯಿತೆಂದೂ ಈ ಯೋಜನೆಯನ್ನು ನಿಲ್ಲಿಸಿದನಂತರ ಸರ್ಕಾರದಿಂದ ಇದಕ್ಕಾಗಿ ಹಿಂದೆಯೇ ಎರವಲು ಪಡೆದಿದ್ದ ನಾಲ್ಕು ... ಗಳನ್ನು ... ಮೂಲಕ ... ಗಳಿಗೆ ಮಾರಲಾಯಿತೆಂದೂ ತಿಳಿಸಲಾಯಿತು.

ನಗರದಲ್ಲಿ ತಯಾರಾಗುತ್ತಿರುವ ವನಸ್ಪತಿ ಮತ್ತು ವೆಜಿಟಬಲ್ ... ಮತ್ತಿತರ ಅಡಿಗೆ ಸಾಧನ ... ಕಟ್ಟು ... ಗುತ್ತಿರುವುದರಿಂದ ಅವುಗಳ ತಯಾರಿ ಮತ್ತು ಮಾರಾಟವನ್ನು ನಿಷೇಧಿಸಬೇಕೆಂದು ... ವನ್ನು ಡಾ|| ಬಿ. ಜಿ. ದಾ... ಮಂಡಿಸಿ ... ಅವುಗಳ ತಯಾರಿಯಲ್ಲಿ ... ಉಪಯೋಗದ ಕೆಡಕುಗಳನ್ನು ವಿವರಿಸಿದರು. ಈ ಬಗ್ಗೆ ಪ್ರಖ್ಯಾತ ವ್ಯಕ್ತಿಗಳ ಅಭಿಪ್ರಾಯಗಳನ್ನು ಉದಹರಿಸಿದ ಶ್ರೀ ದಾಸರು ತಮ್ಮ ... ಸಮರ್ಥನೆಗೆ ... ಹೌಂಡು ತುಪ್ಪವನ್ನು ತಂದು ಸದಸ್ಯರ ಪರಿಶೀಲನೆಗಾಗಿ ಹಂಚಿದರು.

ಪುರಸಭೆಯು ಈಗಿನ ಬೈಲಾಗಳಿಂದ ನಿರ್ಣಯವನ್ನು ಕಾರ್ಯಗತ ಮಾಡಲು ಸಾಧ್ಯವಿಲ್ಲವೆಂದೂ, ಅದ್ದರಿಂದ ಆ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳನ್ನು ನಿರ್ಧರಿಸಲು ನಿರ್ಣಯವನ್ನು ಆರೋಗ್ಯ ಸಮಿತಿಯ ಪರಿಶೀಲನೆಗೆ ಬಿಡಬೇಕೆಂದೂ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಸೂಚಿಸಿದರು. ಅದರಂತೆ ಮಾಡಲಾಯಿತು.

ನಾಪತ್ತೆಯಾಗಿದ್ದ ಮಾಜಿ ಬರ್ಮಾ ಮಂತ್ರಿಯ ಬಂಧನ

ಬರ್ಮಾದ ಮಾಜಿ ಮಂತ್ರಿ ಕೋಕೋ ಗೈಯವ ... ಲಕ್ಷ ರೂ ಗಳಷ್ಟು ಸರ್ಕಾರಿ ಹಣವನ್ನು ನಷ್ಟಪಡಿಸುದ್ದದಕ್ಕಾಗಿ ಬಂಧಿಸಲಾಗಿದೆ. ಅವರು ಒಂಭತ್ತು ವರ್ಷಗಳಿಂದಲೂ ಪತ್ತೆಯಿಲ್ಲವಾಗಿದ್ದರು. ಅವರ ಕಾಲದಲ್ಲಿ ಆಮದು ಕಂಟ್ರಾಕ್ಟರು ... ತರಿಸಲಾದ ಸಾಮಗ್ರಿಗಳು ಬಹಳ ದಿನಗಳವರೆಗೆ ಸರ್ಕಾರಿ ಗಡಂಗುಗಳಲ್ಲಿ ಬಿದ್ದಿದ್ದಾಗ ಅವರು ದಂಡವನ್ನು ವಿನಾಯಿತಿಮಾಡಿ ... ಮಾಡಿ ಸರ್ಕಾರಕ್ಕೆ ನಷ್ಟಪಡಿಸಿದ್ದರೆಂದು ಹೇಳಲಾಗಿದೆ.

ಒಮಾನಿನಲ್ಲಿ ಹೋರಾಟ

ಮಸ್ಕತ್ ಸುಲ್ತಾನರ ವಿರುದ್ಧವಾಗಿ ದಂಗೆಯೆದ್ದಿರುವ ಒಮಾನಿನ ಇಮಾಮರ ಹೋರಾಟವು ಶಕ್ತಿಗುಂದಿರುವುದೆಂದು ಬಹ್ರೇನಿನಲ್ಲಿರುವ ಬ್ರಿಟಿಷ್ ರೆಸಿಡೆಂಟ್ ಬರ್ನಾರ್ಡ್ ಬರೋಸ್ ರವರು ತಿಳಿಸಿರುತ್ತಾರೆ. ಆದರೆ ಕೈರೋವಿನಲ್ಲಿರುವ ಇಮಾಮರ ಅಧಿಕಾರಿಗಳು ಹೇಳುವ ಪ್ರಕಾರ ಅವರ ಸೈನ್ಯಗಳು ಬ್ರಿಟಿಷ್ ಸೈನ್ಯ ಮತ್ತು ಕಾರ್ಯಕರನ್ನು ಸುತ್ತುವರಿದಿವೆಯೆಂದೂ ಅಲ್ಲದೆ ಬ್ರಿಟಿಷ್ ವಿಮಾನಗಳು ಧಾಳಿ ನಡೆಸುತ್ತಿರುವುದಾಗಿಯೂ ಗೊತ್ತಾಗಿದೆ. ಮೊನ್ನೆ ವಿಮಾನ ಚಟುವಟಿಕೆಗಳು ನಡೆಯಲಿಲ್ಲವೆಂದು ಬ್ರಿಟಿಷರು ತಿಳಿಸಿದರು. ಬ್ರಿಟಿಷರು ಸುದ್ದಿಗಳಿಗೆ ತಾತ್ಕಾಲಿಕ ನಿರ್ಬಂಧವನ್ನು ಹಾಕಿರುವರು.

ಜೂಜಾಟಕ್ಕಾಗಿ ದಂಡ

ಇಟ್ಟಿಗೆಗೂಡಿನಲ್ಲಿ ಜೂಜಾಡುತ್ತಿದ್ದ ವೇಣು ವೀರಭದ್ರ ಚಲುವರಾಜು ಎಂಬುವರ ಮೇಲೆ ನಜರ್ ಬಾದ್ ಪೋಲೀಸರು ಹೂಡಿದ ಮೊಕದ್ದಮೆಯಲ್ಲಿ ನಗರದ ದ್ವಿತೀಯ ನ್ಯಾಯಾಧೀಶರು ನಿನ್ನೆ ತಲಾ ೧೦ ರೂ ದಂಡ ವಿಧಿಸಿದರು.

ಜನರೊಡನೆ ಘರ್ಷಣೆಯಲ್ಲಿ ಸಬ್ ಇನ್ಸ್ಪೆಕ್ಟರರ ಕೊಲೆ

ಫಿಲಿಬಿತ್ ಬಳಿ ದಿಯೊರಿಯಾ ಎಂಬಲ್ಲಿ ಜನರ ಗುಂಪಿಗೂ ಪೋಲೀಸಿನವರಿಗೂ ಮೊನ್ನೆ ಆದ ಘರ್ಷಣೆಯಲ್ಲಿ ಒಬ್ಬ ಸಬ್ ಇನ್ಸ್ಪೆಕ್ಟರರೂ, ಇಬ್ಬರು ಹಳ್ಳಿಗರೂ ಮೃತಪಟ್ಟಿರುತ್ತಾರೆ. ಗ್ರಾಮದಲ್ಲಿ ಕಳ್ಳತನದ ಸಂಬಂಧವಾಗಿ ಪೋಲೀಸಿನವರು ಒಬ್ಬನನ್ನು ಬಂಧಿಸಿದರೆಂದೂ, ೫೦ ಜನರು ಗುಂಪುಗೂಡಿ ಅವನನ್ನು ಬಿಡಿಸಿದರೆಂದೂ, ನಂತರ ಘರ್ಷಣೆಯಾಯಿತೆಂದೂ ಹೇಳಲಾಗಿದೆ.

೨೦೦ ರೂ. ಗೆ ಪತ್ನಿಯ ಮಾರಾಟ

ಅಸ್ಸಾಮಿನ ಅತ್ ಗಾವ್ ಸಾಲಿಬಿತ್ ಹಳ್ಳಿಯಲ್ಲಿ ಕಳೆದ ವಾರ ಒಬ್ಬ ಯುವತಿಯನ್ನು ಆಕೆಯ ಗಂಡನು ೨೦೦ ರೂ ಗಳಿಗೆ ನೆರೆಯವನಿಗೆ ಮಾರಿದುದಾಗಿ ವರದಿಯಾಗಿದೆ. ಈ ಬಗ್ಗೆ ಪಂಚಾಯಿತಿ ನಡೆದು, ಇಬ್ಬರು ಗಂಡಸರಿಗೂ ತಲಾ ೩೦ ರೂ ದಂಡವನ್ನು ವಿಧಿಸಲಾಯಿತು. ಹೆಂಡತಿಯನ್ನು ಗಂಡನ ವಶಕ್ಕೆ ಒಪ್ಪಿಸಲಾಯಿತು.

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ದ್ರವ್ಯ ಸಹಾಯಕ್ಕಾಗಿ ಮನವಿ

ಸರ್ಕಾರದವರು ಹರಿಜನ ವಿದ್ಯಾರ್ಥಿಗಳಿಗೋಸ್ಕರ ಅನೇಕ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಅಲ್ಲಿನ ವಿದ್ಯಾರ್ಥಿಗಳಿಗೆ ತಲಾ ಹನ್ನೆರಡು ರೂ ಸಹಾಯ ಧನವನ್ನು ಕೊಡುತ್ತಿರುವರು. ಇತರೆ ವಿದ್ಯಾರ್ಥಿ ನಿಲಯಗಳಲ್ಲಿ ಹರಿಜನ ವಿದ್ಯಾರ್ಥಿಗಳಿರಲು ಅವಕಾಶವಿದ್ದು, ಅವರನ್ನು ಇತರರಂತೆ ಕಂಡುಕೊಂಡು ಅಡಿಗೆ ಮನೆ ಪ್ರವೇಶ ಮತ್ತಿತರ ವಿಚಾರಗಳಲ್ಲಿ ಯಾವ ನಿರ್ಬಂಧವಿಲ್ಲದಂತೆ ನೋಡಿಕೊಳ್ಳುವ ವಿದ್ಯಾರ್ಥಿ ನಿಲಯ... ಮಾತ್ರ ಈ ರೀತಿ ಸಹಾಯವನ್ನು ಸರ್ಕಾರದವರು ಕೊಡುವುದು ಅತ್ಯವಶ್ಯಕವಾಗಿದೆ. ಇಂತಹ ವಿದ್ಯಾರ್ಥಿ ನಿಲಯಗಳಿಗೆ ಸಹಾಯ ಧನವನ್ನು ಕೊಡುವಾಗ ಸಹೋದರ ಭಾವನೆಯನ್ನು ಪ್ರಚೋದಿಸುವ ನಿಯಮವನ್ನು ಪಾಲಿಸಿದಂತೆ ಕಟ್ಟುನಿಟ್ಟು ಮಾಡಿ ಅಸ್ಪೃಶ್ಯತಾ ನಿವಾರಣೆಯನ್ನು ಬದ್ಧವಾದ ಬುನಾದಿಯ ಮೇಲೆ ನಿಲ್ಲಿಸುವುದು ಅನಿವಾರ್ಯವಾಗಿದೆ. ಮೈಸೂರಿನ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ... ನೆ ... ಯಿಂದಲೂ ಹರಿಜನ ವಿದ್ಯಾರ್ಥಿಗಳನ್ನು ಇದೇ ರೀತಿ ಕಂಡುಕೊಂಡು ಯಾವ ವಿಧವಾದ ಭೇದವನ್ನೂ ಮಾಡಿಲ್ಲದೆ ಇರುವ ಈ ನಿಲಯ ... ಕ್ಕೆ ಇದನ್ನು ಕೇಳಿ ಎಂದು ಅನೇಕ ಸಲ ಕೇಳಿ ... ಸರ್ಕಾರದವರ ಗಮನ ... ವಿಷಯವನ್ನು ... ಲಾದರೂ ಈ ... ಗಮನ ಕೊಟ್ಟು, ಹರಿಜನ ವಿದ್ಯಾರ್ಥಿಗಳಿಗೆ ತಲಾ ೧೨ ರೂ ಹಣವೆಯೂ ಮತ್ತು ಇತರೆ ವಿದ್ಯಾರ್ಥಿಗಳಿಗೆ ೬ ರೂ ನಂತೆಯೂ ವಿಶೇಷ ಗ್ರಾಂಟನ್ನು ಕೊಡುವುದು ಅತ್ಯಂತ ಜರೂರಾದ ಕಾರ್ಯವಾಗಿದೆ—ಎಂಬುದಾಗಿ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಶ್ರೀ ಟಿ. ಎಸ್. ಸುಬ್ಬಣ್ಣನವರು ತಿಳಿಸುತ್ತಾರೆ.

ನಾಗಪುರ ಅಂಚೆ ಅಧಿಕಾರಿಗಳ ಎಚ್ಚರಿಕೆ ಕ್ರಮ

ಬರುವ ತಿಂಗಳು ೮-೯ ರಿಂದ ಆರಂಭವಾಗುವ ಅಂಚೆ ನೌಕರರ ಮುಷ್ಕರದ ಬಗ್ಗೆ ಮುನ್ನೆಚ್ಚರಿಕೆ ಕೊಡಲು ನಾಗಪುರದ ಅಂಚೆ ಅಧಿಕಾರಿಗಳು ಅಂಚೆ ಪೆಟ್ಟಿಗೆಗಳ ಮೇಲೆ 'ಈ ಪೆಟ್ಟಿಗೆಯಲ್ಲಿ ಕಾಗದಗಳನ್ನು ಹಾಕಬೇಡಿ" ಎಂದು ಸೂಚಿಸುವ ನೋಟೀಸುಗಳನ್ನು ಅಂಟಿಸಿರುತ್ತಾರೆ. ಮುಷ್ಕರ ನಡೆಯುವಾಗ ಆ ಸ್ಥಳಗಳಿಂದ ಕಾಗದಪತ್ರಗಳನ್ನು ರವಾನಿಸಲು ಸಾಧ್ಯವಾಗದಿರಬಹುದೆಂದೂ ತಿಳಿಸಲಾಗಿದೆ.

ಪುರಾಣ ಪ್ರವಚನ

ವಾಣಿವಿಲಾಸ ರಸ್ತೆಯಲ್ಲಿರುವ ಶ್ರೀ ಶಿವರಾತ್ರೀಶ್ವರ ಗುರುಕುಲದಲ್ಲಿರುವ ಸಾಧಕ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕವಿ ವಿರೂಪಾಕ್ಷ ಪಂಡಿತಾರಾಧ್ಯರ 'ಚನ್ನಬಸವ ಪುರಾಣದ' ಪ್ರವಚನವನ್ನು ಮೊನ್ನೆಯಿಂದ ನಡೆಸಲಾಗುತ್ತಿದೆ. ನಿತ್ಯವೂ ಸಂಜೆ ೫|| ಗಂಟೆಗೆ ಗಮಕ ವಿದ್ವಾನ್ ಕೆ. ವೆಂಕಟಸುಬ್ಬಯ್ಯನವರಿಂದ ವಾಚನ ಮತ್ತು ಆ|| ವಿ|| ಎಂ. ಜಿ. ನಂಜುಂಡಾರಾಧ್ಯರಿಂದ ವ್ಯಾಖ್ಯಾನವಿದೆ. ಸರ್ವರಿಗೂ ಸ್ವಾಗತವುಂಟು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೫ ದೇವರ ನಾಮ ೭ ೧೫ ಎಸ್ ಸಣ್ಣಪ್ಪ-ನಾದಸ್ವರ ೮-೧೫ ಹಿಂದಿ ಪಾಠ ಮಧ್ಯಾಹ್ನ ೧೨ ಮತ್ತು ೨ ಕೆ ಅನಂತಮ್ಮಣ್ಣಿ-ವೀಣೆ ೧೨ ೩೦ ಪಿ. ಇಂದಿರ ಸಂಗೀತ ೨ ೧ ಕಾರ್ಮಿಕರ ೧ ೨೦ ಗಾನ ಮಂಜರಿ ೧ ೫೦ ಗಾಯನ ಸಂಜೆ ೬ ೧೦ ಗೀತಾವಳಿ ೬ ೩೦ ವಚನಗಾನ ೮ ಎಸ್ ಸಣ್ಣಪ್ಪ-ನಾದಸ್ವರ ೮ ೩೦ ರಾಷ್ಟ್ರೀಯ ಕಾರ್ಯಕ್ರಮ ೮-೫೦ ವಾದ್ಯವೃಂದ ೯ ೧೫ ಉರ್ದು ಪ್ರಸಂಗ ೯ ೩೦ ಬಿ ಎಸ್ ರಾಜಯ್ಯಂಗಾರ್ ಸಂಗೀತ

SREE GAYATHRI

TALKIES

LAST TWO DAYS

HELEN OF TROY

From 1-8-57 For 3 days

The suspense Picture

THE KILLER IS LOOSE

With Joseph Cotten and Rhonda Fleming

The Cauvery Valley Paper Mills Ltd.,

(In Liquidation)

St... Square, Mysore, 27-7 57

SALE NOTICE

Offers are invited for the purchase of following materials from the intending purchasers upto 12 noon of 14th August 1957. Inspection of the materials may be had between 3 & 5 P M on 12th and 13th August 1957. Earnest amount will have to be made in cash only. Please contact the undersigned for further particulars

"C I Scrap, Air Compressor Asbestos packing rope fire extinguishers barbed wire jute felt, gate valves Furniture (Rose wood and teak-wood) China clay Fire clay etc."

S SANJEEVIAH,
B A, B Com, B L

Y S LINGAIAH,
B A, B L,

Official Liquidators

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ,

ಮೈಸೂರು

ಪ್ರಖ್ಯಾತವಾದ ಅಗರಬತ್ತಿ, ಗಂಧದ ಬಿಲ್ಲೆ ಕಾಶ್ಮೀರದ ಕೇಸರಿ ಮತ್ತು ಇತರೆ ಸುಗಂಧ ದ್ರವ್ಯಗಳಿಗಾಗಿ ಬೇಟಿ ಕೊಡಿ

ಈಗ ... ಬಂದಿದೆ !

ರಾಜಗೋಪಾಲ ... ವರ

ಭಗವಾನ್ ಬುದ್ಧ

ಬೆಲೆ ರೂ 1-0-0

... ವಿರಚಿತ

ಜೈ ಮಿಸಿ ಭಾರತ

ಬೆಲೆ ರೂ 1 0-

ಕೃಷ್ಣಾ ಕಂಪೆನಿ,

ನಾರಾಯಣ ... ಮೈಸೂರು

ಪರಾಜು ಕಾರಿಕನ್ನು ನಿರೀಕ್ಷಿಸಿರಿ!

ಮೈಸೂರು ಸ್ವಾಮಿ ಚೌಕದಲ್ಲಿರುವ

ಆಬಿಡ್ಸ್ ರವರಲ್ಲಿ

ಅಮೋಘ ಹರಾಜು ಮಾರಾಟ

Edited, Printed and Published by A R Nagarajan at Sadhvi Press, D Subbiah Road, Mysore